
ಸಂಗಾತಿ

ಡಾ॥ ಜಿ. ರಾಮಕೃಷ್ಣ ಅಭಿನಂದನ ಗ್ರಂಥ



• ಸಂಪಾದಕರು

ಡಾ॥ ಕೆ. ಮರುಳಸಿದ್ದಪ್ಪ

ಡಾ॥ ಎನ್. ಗಾಯತ್ರಿ

ರಾಮಲಿಂಗಪ್ಪ ಟಿ. ಬೇಗೂರು

ಸಂಗತಿ

ಡಾ॥ ಜಿ. ರಾಮಕೃಷ್ಣ ಅಭಿನಂದನ ಗ್ರಂಥ

ಸಂಪಾದಕರು

ಡಾ॥ ಕೆ. ಮರುಳಸಿದ್ದಪ್ಪ

ಡಾ॥ ಎನ್. ಗಾಯತ್ರಿ

ರಾಮಲಿಂಗಪ್ಪ ಟಿ. ಬೇಗೂರು

ಡಾ॥ ಜಿ. ರಾಮಕೃಷ್ಣ (ಜಿ.ಆರ್.) ಅಭಿನಂದನಾ ಸಮಿತಿ
ಬೆಂಗಳೂರು.

'SANGĀTI' - A Felicitation Volume presented to Dr. G. Ramakrishna. Published by : Dr. G.R. Felicitation Committee. No, 334, 12th B Cross, 4th A Main, West of Chord Road, Rajajinagar II Stage, Bangalore - 560086, Ph.: 3491306. Edited by : Dr. K. Marulasiddappa, Dr. N. Gayathri, and Ramalingappa T. Begur.

First Impression : 2003

Price : Rs. 200/-

p.p : viii + viii + 390

ಪ್ರಥಮ ಮುದ್ರಣ : 2003

ಬೆಲೆ : ರೂ. 200/-

ಸಹಕಾರ :
ಪ್ರೊ. ಎ. ಎಬನೆಜರ್
ಡಾ. ಎಚ್. ಎಸ್. ನಾಗರಾಜ್
ಡಾ. ಟಿ.ಎನ್. ಚಂದ್ರಕಾಂತ್

ಡಿ.ಟಿ.ಪಿ
ಇಳಾ ಮುದ್ರಣ
ಬೆಂಗಳೂರು - 560 026
✆ : 6757159

ಮುದ್ರಕರು
ನವಕರ್ನಾಟಕ ಪ್ರಿಂಟರ್ಸ್
ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು- 560058

ಸಂಪಾದಕರ ಮಾತು

ಕರ್ನಾಟಕದ ಸಮಕಾಲೀನ ವಿಚಾರವಾದಿ ಚಿಂತಕರಲ್ಲಿ ಡಾ. ಜಿ. ರಾಮಕೃಷ್ಣ ಅವರ ವಿಶಿಷ್ಟತೆ ಅಪೂರ್ವವಾದುದು. ಕಳೆದ ನಾಲ್ಕು ದಶಕಗಳಿಂದ ನಮ್ಮ ಎಲ್ಲಾ ಜನಪರ ಚಳವಳಿಗಳಲ್ಲಿಯೂ ಭಾಗವಹಿಸಿ, ಅವುಗಳನ್ನು ಸರಿದಾರಿಯಲ್ಲಿ ಮುನ್ನಡೆಸಿದ ಅವರು ಪ್ರಚಾರ, ಪ್ರಶಂಸೆ, ಸನ್ಮಾನಗಳನ್ನು ಸಂದೇಹದಿಂದ ನೋಡಿದವರು. ಪುಸ್ತಕಗಳಿಗೆ ಬಂದ ಬಹುಮಾನಗಳನ್ನು ಬಿಟ್ಟರೆ, ಉಳಿದ ಪ್ರಶಸ್ತಿಗಳನ್ನು ಒಪ್ಪಿಕೊಳ್ಳದವರು. ಅಧ್ಯಾಪಕರ ಸಂಘವೇ ಮುಂತಾದ ಸಂಘಟನೆಗಳಿಗೆ ಪ್ರಜಾಪ್ರಭುತ್ವ ಕ್ರಮದಲ್ಲಿ ಆಯ್ಕೆಯಾದ ಸಂದರ್ಭಗಳನ್ನು ಹೊರತುಪಡಿಸಿ, ಉಳಿದೆಲ್ಲ ಬಗೆಯ ಅಧಿಕಾರಗಳಿಂದ ದೂರವಿದ್ದವರು. ಸರಳವಾದ ಬದುಕು ನೇರ ನಡೆನುಡಿಗೆ ಹೆಸರಾದವರು. ಅಪಾರ ಸಂಖ್ಯೆಯ ವಿದ್ಯಾರ್ಥಿಗಳು, ಸಹೋದ್ಯೋಗಿಗಳು, ಗೆಳೆಯರು ಮತ್ತು ಅಭಿಮಾನಿ ಬಳಗದ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರೂ ಧೀಮಂತನೊಬ್ಬನಿಗೆ ಅಗತ್ಯವಾದ ನಿರ್ಲಿಪ್ತತೆ ಹಾಗೂ ವೈಚಾರಿಕ ಸ್ಪಷ್ಟತೆಯನ್ನು ತಮ್ಮ ವ್ಯಕ್ತಿತ್ವದಲ್ಲಿ ಶ್ರದ್ಧೆಯಿಂದ ಕಾಪಾಡಿಕೊಂಡು ಬಂದವರು. ಸಂಶೋಧಕರಾಗಿ, ಅಧ್ಯಾಪಕರಾಗಿ ದೀರ್ಘಕಾಲ ಕೆಲಸ ಮಾಡಿ ಹತ್ತು ವರ್ಷಗಳ ಹಿಂದೆ ನಿವೃತ್ತರಾಗಿರುವ ಅವರು ವೇತನ ತರುವ ಉದ್ಯೋಗದಿಂದ ನಿವೃತ್ತರಾಗಿದ್ದರೂ ಸಾಮಾಜಿಕ ಕಾರ್ಯಚಟುವಟಿಕೆಗಳಿಂದ ವಿಮುಖರಾಗಿಲ್ಲ. 'ಹೊಸತು' ಮಾಸಿಕದ ಸಂಪಾದಕರಾಗಿ ಕನ್ನಡ ನಾಡಿನ ವೈಚಾರಿಕ ಜಾಗೃತಿಗೆ ದುಡಿಯುತ್ತಿರುವುದಲ್ಲದೆ, ಹಿಂದಿನಂತೆ ಎಲ್ಲ ಪ್ರಗತಿಪರ ಚಳವಳಿ ಹಾಗೂ ಸಂಘಟನೆಗಳೊಂದಿಗೆ ಕ್ರಿಯಾಶೀಲವಾಗಿ ಹೆಜ್ಜೆಯಿಡುತ್ತಿದ್ದಾರೆ. ಮದುವೆಯಾಗದೆ ಒಂಟಿಯಾಗಿಯೇ ಉಳಿದು ವಿಶ್ವಕುಟುಂಬಿಯಾಗಿರುವ ಈ ನಿಸ್ವಾರ್ಥಜೀವಿಯ ಸಮಾಜಸೇವೆಯನ್ನು ಗೌರವಿಸಿ ಕೃತಜ್ಞತೆ ಸಲ್ಲಿಸಲು ಅವರ ಗೆಳೆಯರ ಬಳಗ ನಿರ್ಧರಿಸಿತು. ಜಿ.ಆರ್. ಅವರನ್ನು ಈ ಗೌರವ ಸ್ವೀಕರಿಸಲು ಒಪ್ಪಿಸುವುದೇ ದುಸ್ತರವಾದ ಕೆಲಸವಾಯಿತಾದರೂ ಆತ್ಮೀಯರ ಪ್ರೀತಿಪೂರ್ವಕ ಒತ್ತಾಯಕ್ಕೆ ಸಮ್ಮತಿಸೂಚಕವಾಗಿ ಮೌನವಹಿಸುವುದು ಅವರಿಗೆ ಅನಿವಾರ್ಯವಾಯಿತು. ಈ ಗೌರವ ಸಮರ್ಪಣೆಯ ಒಂದು ಭಾಗವಾಗಿ 'ಅಭಿನಂದನ ಗ್ರಂಥ'ವನ್ನು ಸಂಪಾದಿಸಿಕೊಡುವ ಹೊಣೆ ನಮ್ಮ ಪಾಲಿಗೆ ಬಂದಿತು.

ಕನ್ನಡ ನವೋದಯದ ಆಚಾರ್ಯ ಪುರುಷರಾದ ಬಿ.ಎಂ.ಶ್ರೀ. ಮತ್ತು ಟಿ.ಎಸ್. ವೆಂಕಣ್ಣಯ್ಯನವರಿಗೆ ಅರ್ಪಿಸಿದ 'ಅಭಿನಂದನ ಗ್ರಂಥ'ಗಳಿಂದ ಮೊದಲುಗೊಂಡು ಇಂದಿನವರೆಗೆ ಕನ್ನಡದಲ್ಲಿ ಹಲವಾರು ಈ ಮಾದರಿಯ ಉತ್ತಮ ಕೃತಿಗಳು ಪ್ರಕಟವಾಗಿವೆಯಾದರೂ ಇತ್ತೀಚೆಗೆ

ವಿಷಾದಕರ ಬೆಳವಣಿಗೆಯೊಂದನ್ನು ಕಾಣುತ್ತಿದ್ದೇವೆ. ಕೆಲವರು ತಮಗೆ ತಾವೇ ಅಭಿನಂದನ ಗ್ರಂಥಗಳನ್ನು ಸಮರ್ಪಿಸಿಕೊಳ್ಳಲು ನಿರ್ಧರಿಸಿ, ಹಣ ಹೂಡಿ, ಲೇಖನ ಬರೆಸಿ, ಹೆಸರಿಗೊಬ್ಬ ಸಂಪಾದಕರನ್ನು ನಿಯೋಜಿಸಿ ಸನ್ಮಾನ ಮಾಡಿಸಿಕೊಳ್ಳುತ್ತಿರುವ ನಿದರ್ಶನಗಳು ಹೆಚ್ಚಾಗುತ್ತಿವೆ. ಶ್ರೇಷ್ಠ ಸೃಜನಶೀಲ ಕಲಾವಿದ ಲೇಖಕರೂ ಈ ದುರಾಸೆಗೆ ಬಲಿಯಾಗುತ್ತಿರುವುದರಿಂದ ಸತ್ಸಂಪ್ರದಾಯವೊಂದಕ್ಕಿರುವ ಪ್ರಸ್ತುತತೆಯೇ ಅರ್ಥ ಕಳೆದುಕೊಳ್ಳುತ್ತಿದೆ. ಇಂತಹ ಅವನತಿಯ ಕಾಲದಲ್ಲಿ ಯಥಾರ್ಥವಾದ ಅಪ್ಪಟ ಅಭಿನಂದನ ಗ್ರಂಥವಾಗಿ 'ಸಂಗಾತಿ' ಪ್ರಕಟವಾಗುತ್ತಿದೆ. ಈ ಬಗೆಯ ಪ್ರಯತ್ನ ನಡೆಯುತ್ತಿದೆ ಎಂಬುದನ್ನು ಕುರಿತು ಅಸ್ಪಷ್ಟ ಅರಿವಿರುವುದನ್ನು ಬಿಟ್ಟರೆ, ಜಿ.ಆರ್. ಸಂಪೂರ್ಣ ನಿರಾಸಕ್ತಿ ವಹಿಸಿದ್ದಾರೆ. ವಿದ್ಯಾರ್ಥಿಗಳು, ಗೆಳೆಯರು ಮತ್ತು ಸಹೋದ್ಯೋಗಿಗಳಿಗೆ ಬದುಕಿನುದ್ದಕ್ಕೂ ಪ್ರೀತಿಯ ಸಂಗಾತಿಯಾಗಿರುವ ಜಿ.ಆರ್. ಅಭಿನಂದನ ಗ್ರಂಥಕ್ಕೆ ಸಂಪಾದಕನಾಗುವುದು ವೈಯಕ್ತಿಕವಾಗಿ ನನಗೆ ಅತ್ಯಂತ ಸಂತೋಷದ ವಿಚಾರವಾಗಿದೆ. ಎಲ್ಲ ಕೆಲಸಗಳನ್ನೂ ಅಚ್ಚುಕಟ್ಟಾಗಿ ನಿರ್ವಹಿಸಿ ಸಲಹೆ, ಸೂಚನೆಗಳ ಮಟ್ಟಿಗೆ ನನ್ನನ್ನು ಆಶ್ರಯಿಸಿದ ಉಳಿದ ಇಬ್ಬರು ಸಂಪಾದಕರುಗಳಾದ ಡಾ. ಎನ್. ಗಾಯತ್ರಿ ಮತ್ತು ರಾಮಲಿಂಗಪ್ಪ ಬೇಗೂರು ಅವರೇ ನಿಜವಾಗಿ ಈ ಗ್ರಂಥದ ಕಾರ್ಯನಿರ್ವಾಹಕರೆಂಬುದನ್ನು ನಾನು ಮರೆತಿಲ್ಲ.

ಜಿ.ಆರ್. ಅವರದು ಬಹುಮುಖೀ ವ್ಯಕ್ತಿತ್ವ. ಸಂಸ್ಕೃತದಲ್ಲಿ ಎಂ.ಎ., ಪಿಎಚ್.ಡಿ. ಪದವಿ ಪಡೆದು, ಸಾಕಷ್ಟು ಕಾಲ ಈ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿ, ಇಂಗ್ಲಿಷ್ ಎಂ.ಎ. ಪದವಿ ಮುಗಿಸಿ, ಆಂಗ್ಲ ಸಾಹಿತ್ಯದ ಅಧ್ಯಾಪಕರಾದರು. ನಿವೃತ್ತರಾದ ಮೇಲೆ ಮಾಸಿಕವೊಂದರ ಸಂಪಾದಕರಾಗಿ ಪತ್ರಿಕೋದ್ಯಮಿಯಾದರು. ಮಾರ್ಕ್ಸ್‌ವಾದಿ ಚಿಂತಕರಾಗಿ ರಾಜಕೀಯ ಕ್ಷೇತ್ರದಲ್ಲಿ ಮಾರ್ಗದರ್ಶನ ನೀಡುತ್ತಿದ್ದಾರೆ. ಯೋಗ, ತತ್ವಶಾಸ್ತ್ರ, ಪಾಲಿ-ಪ್ರಾಕೃತಗಳಲ್ಲಿಯೂ ಪಾಂಡಿತ್ಯವಿರುವ ಅವರು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಹತ್ತಾರು ವೈಚಾರಿಕ ಕೃತಿಗಳನ್ನು ನಿರ್ವಹಿಸಿದ್ದಾರೆ. ಕಾಲೇಜು ಮತ್ತು ವಿಶ್ವವಿದ್ಯಾಲಯ ಅಧ್ಯಾಪಕರ ಸಂಘಟನೆ ಮತ್ತು ಚಳವಳಿಗಳಲ್ಲಿ ಪ್ರಮುಖ ಪಾತ್ರ ವಹಿಸಿ, ವಿಶ್ವವಿದ್ಯಾಲಯದ ಅಕೆಡೆಮಿಕ್ ಕೌನ್ಸಿಲ್, ಸೆನೆಟ್ ಮುಂತಾದ ಸಭೆಗಳಿಗೆ ಪ್ರತಿನಿಧಿಯಾಗಿ ಆಯ್ಕೆಯಾಗಿ ಹತ್ತಾರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಈ ಎಲ್ಲ ಕಾಳಜಿಗಳನ್ನೂ ಪ್ರಾತಿನಿಧಿಕವಾಗಿ ಒಳಗೊಳ್ಳುವಂತಹ 'ಅಭಿನಂದನ ಗ್ರಂಥ' ಅವರಿಗೆ ಸಲ್ಲಬೇಕಾಗುತ್ತದೆ. ಆದರೆ ಅಭಿನಂದನಾ ಸಮಿತಿಯವರು ಗೊತ್ತುಪಡಿಸಿದ ಕಾಲಮಿತಿಯೊಳಗೆ ಅದನ್ನು ಸಾಧಿಸುವುದು ಸುಲಭವಲ್ಲವೆಂಬ ಅರಿವು ನಮಗಿತ್ತು. ಮೂರು, ನಾಲ್ಕು ತಿಂಗಳಿನಲ್ಲಿ ಕೃತಿಯ ಸ್ವರೂಪವನ್ನು ನಿರ್ಧರಿಸಿ, ಲೇಖಕರನ್ನು ಸಂಪರ್ಕಿಸಿ, ಲೇಖನಗಳನ್ನು ಒಗ್ಗೂಡಿಸಿ, ಅಚ್ಚಿಗೆ ತ್ವರಿತವಾಗಿ ಸಿದ್ಧಪಡಿಸಲಾಗಿದೆಯಾದರೂ ಗುಣಮಟ್ಟಕ್ಕೆ ಚ್ಯುತಿಯುಂಟಾಗಿಲ್ಲವೆಂಬುದು ನಮಗೆ ನೆಮ್ಮದಿ ತಂದಿರುವ ಸಂಗತಿ.

ನಾವು ಕೇಳಿದ ಅವಧಿಯೊಳಗೆ ಲೇಖನ ಬರೆದುಕೊಟ್ಟವರನ್ನು ಮತ್ತು ಈಗಾಗಲೇ ಪ್ರಕಟವಾಗಿದ್ದ ಕೆಲವು ಲೇಖನಗಳನ್ನು ಇಲ್ಲಿ ಸೇರಿಸಿಕೊಳ್ಳಲು ಅನುಮತಿ ನೀಡಿದವರನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯವಾಗಿದೆ.

ಜಿ.ಆರ್. ಅವರ ಬದುಕು, ವ್ಯಕ್ತಿತ್ವ ಹಾಗೂ ಕಾಳಜಿಗಳ ಸಂಕ್ಷಿಪ್ತ ನೋಟವಿರುವ ಸಂವಾದವೊಂದನ್ನು ಈ ಗ್ರಂಥದಲ್ಲಿ ಪ್ರಕಟಿಸಿದ್ದೇವೆ. ಈ ದೀರ್ಘ ಸಂವಾದದ ಸಕಲ ವ್ಯವಸ್ಥೆಯನ್ನು ಅತ್ಯಂತ ಮುತುವರ್ಜಿಯಿಂದ ನಿರ್ವಹಿಸಿರುವವರು ಶ್ರೀ ರಘುನಂದನ್. ಜಿ.ಆರ್. ಅವರೊಡನೆ ಸಂವಾದದಲ್ಲಿ ಅವರ ಜೊತೆಗೆ ಡಾ. ವಿಜಯಾ ಮತ್ತು ಶ್ರೀ ರಂಜಾನ್‌ದರ್ಗಾ ಕೂಡ ಭಾಗವಹಿಸಿದ್ದಾರೆ. ಈ ಎಲ್ಲರ ಭಾಗವಹಿಸುವಿಕೆಯಿಂದ ಏಳು ಕ್ಯಾಸೆಟ್‌ಗಳಿಗೂ ಮೀರಿದ ಸಂದರ್ಶನವೊಂದು ತಯಾರಾಗಿದ್ದು ಅದನ್ನು ಬರಹಕ್ಕಿಳಿಸುವಲ್ಲಿ ಶ್ರೀಯುತರಾದ ಶ್ರೀ ಕೆ.ಎಸ್. ಮಧುಸೂದನ್, ಶ್ರೀ ಟಿ. ಶ್ರೀನಿವಾಸಮೂರ್ತಿ, ಡಾ. ಕೆ. ಸುಂದರರಾಜ್, ವನಿತಾ, ಲತಾ, ಮಹೇಶ್ ಎಸ್. ನ್ಯಾಮತಿ ಮುಂತಾದವರೆಲ್ಲ ಸಹಕರಿಸಿದ್ದಾರೆ. ಅವರ ಸಹಕಾರವನ್ನು ಇಲ್ಲಿ ಕೃತಜ್ಞತೆಯಿಂದ ನೆನೆಯುತ್ತೇವೆ. ಜಿ.ಆರ್. ಅವರ ಎಲ್ಲ ಕೃತಿಗಳ ಪರಿಚಯ ಹಾಗೂ ವಿಮರ್ಶೆಯಾಗಿ ಈ ಗ್ರಂಥದಲ್ಲಿ ಪ್ರಕಟವಾಗಿರುವ ಲೇಖನಗಳು ಒಂದು ನೆಲೆಗೆ ಸೇರಿದರೆ, ಅವರ ಜನಪರ ಕಾಳಜಿ, ಸಂಸ್ಕೃತಿ ಚಿಂತನೆ, ಸಂಘಟನಾ ಕಾರ್ಯವನ್ನು ಪ್ರತಿನಿಧಿಸುವ ಮಾದರಿಯ ಲೇಖನಗಳು ಮತ್ತೊಂದು ನೆಲೆಗೆ ಸೇರುತ್ತವೆ. ಹೀಗೆ ಒಟ್ಟಾರೆ ಈ 'ಅಭಿನಂದನ ಗ್ರಂಥ'ದ ಸ್ವರೂಪ ಜಿ.ಆರ್. ವ್ಯಕ್ತಿತ್ವದ ಭಿನ್ನ ನೆಲೆಗಳ ತಾತ್ವಿಕತೆಯನ್ನು ಒಳಗೊಂಡಿರಬೇಕೆಂಬ ಆಶಯವನ್ನು ಸಾಧಿಸಲು ನಾವು ಪ್ರಯತ್ನಿಸಿದ್ದೇವೆ. ಅಭಿನಂದನಾ ಸಮಿತಿ ವಹಿಸಿದ ಜವಾಬ್ದಾರಿಯನ್ನು ಸಾಕಷ್ಟು ಯಶಸ್ವಿಯಾಗಿ ನಿರ್ವಹಿಸಿದ ತೃಪ್ತಿ ನಮಗಿದೆ.

'ಸಂಗಾತಿ'ಯ ಪ್ರಕಟನೆಯಲ್ಲಿ ಪಾಲ್ಗೊಂಡ ನೆರವು ನೀಡಿದ ಹಲವರಲ್ಲಿ ಕೆಲವರನ್ನಾದರೂ ಇಲ್ಲಿ ಹೆಸರಿಸಿ ಸ್ಮರಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಈ ಗ್ರಂಥದಲ್ಲಿ ಬಳಸಿಕೊಳ್ಳಲು ಜಿ.ಆರ್. ಅವರ ಸುಂದರ ಭಾವಚಿತ್ರಗಳನ್ನು ತೆಗೆದುಕೊಟ್ಟ ಶ್ರೀ ಎಂ. ಶ್ರೀಧರಮೂರ್ತಿಯವರಿಗೆ, ಪುಸ್ತಕದ ಕರಡಚ್ಚನ್ನು ಸ್ವತಃ ಮುತುವರ್ಜಿಯಿಂದ ನೋಡಿ ಸಂಪಾದಕರ ಶ್ರಮವನ್ನು ಕಡಿಮೆ ಮಾಡಿದ ಶ್ರೀ ಬಿ.ಜಿ. ಮಳಲಿ ಗೌಡರು ಹಾಗೂ ಡಾ. ವಿಜಯಾರವರಿಗೆ, ಈ ಪುಸ್ತಕದ ಅಂದವಾದ ಡಿ.ಟಿ.ಪಿ.ಗೆ ಕಾರಣರಾದ ಇಳಾ ಮುದ್ರಣದ ಶ್ರೀ ಬಿ. ಗುರುಮೂರ್ತಿ ಮತ್ತು ಅವರ ಸಿಬ್ಬಂದಿಗಳಿಗೆ ಹಾಗೂ ಇದನ್ನು ಉಚಿತವಾಗಿ ಮುದ್ರಿಸಿಕೊಟ್ಟಿರುವ ನವಕರ್ನಾಟಕ ಪ್ರಕಾಶನದ ಶ್ರೀ ಆರ್.ಎಸ್. ರಾಜಾರಾಂ ಮತ್ತು ಅವರ ಸಿಬ್ಬಂದಿ ವರ್ಗದವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಸಂಪಾದಕರ ಪರವಾಗಿ,

22 ಆಗಸ್ಟ್ 2003 — ***ಕೆ. ಮರುಳಸಿದ್ದಪ್ಪ***

ಬೆಂಗಳೂರು

ಒಳಪುಟಗಳಲ್ಲಿ.....

2003 ನೇ ಸೆಪ್ಟೆಂಬರ್ 5 ರಂದು ಜ್ಞಾನಜ್ಯೋತಿ ಸಭಾಂಗಣದಲ್ಲಿ
ನಡೆದ ಸಮಾರಂಭದಲ್ಲಿ
ಡಾ॥ ಜಿ. ರಾಮಕೃಷ್ಣ ಅವರಿಗೆ ಸಮರ್ಪಿಸಿದ ಅಭಿನಂದನ ಗ್ರಂಥ

ಸಂಗಾತಿ

ಸಂಪಾದಕರು
ಡಾ॥ ಕೆ. ಮರುಳಸಿದ್ದಪ್ಪ
ಡಾ॥ ಎಸ್. ಗಾಯತ್ರಿ
ರಾಮಲಿಂಗಪ್ಪ ಟಿ. ಬೇಗೂರು

ಡಾ॥ ಜಿ. ರಾಮಕೃಷ್ಣ (ಜಿ.ಆರ್.) ಅಭಿನಂದನಾ ಸಮಿತಿ

ಪೋಷಕರು
ಶ್ರೀ ಕೆ.ಎಚ್. ರಂಗನಾಥ್

ಅಧ್ಯಕ್ಷರು
ಡಾ॥ ಎಂ.ಎಸ್. ತಿಮ್ಮಪ್ಪ

ಉಪಾಧ್ಯಕ್ಷರು
ಡಾ॥ ಕೆ. ಮರುಳಸಿದ್ದಪ್ಪ
ಶ್ರೀಮತಿ ಎಸ್.ಜಿ. ಸುಶೀಲಮ್ಮ
ಪ್ರೊ॥ ಜೆ.ಪಿ. ರುದ್ರಮುನಿ

ಪ್ರಧಾನ ಕಾರ್ಯದರ್ಶಿ
ಡಾ॥ ಕೆ.ಜಿ. ಶ್ರೀನಿವಾಸಮೂರ್ತಿ

ಕಾರ್ಯದರ್ಶಿ
ಡಾ॥ ಎಸ್. ಚಂದ್ರಶೇಖರ್
ಶ್ರೀ ಕೆ.ಎಸ್. ಪಾರ್ಥಸಾರಥಿ

ಜಂಟಿ ಕಾರ್ಯದರ್ಶಿಗಳು
ಡಾ॥ ವಿಜಯಾ
ಡಾ॥ ಟಿ.ವಿ. ನರಸಿಂಹರಾವ್
ಪ್ರೊ॥ ಟಿ. ವೆಂಕಟೇಶಮೂರ್ತಿ
ಶ್ರೀ ಎಸ್. ಸುರೇಂದ್ರ

ಖಜಾಂಚಿ
ಶ್ರೀ ಆರ್. ಶಿವಪ್ಪ

ಭಾಗ ಒಂದು

ನುಡಿ ಚಿಂತನೆ

(ಡಾ. ಜಿ. ರಾಮಕೃಷ್ಣ ಅವರೊಂದಿಗೆ ಸಂವಾದ)

ಸಂವಾದಕರು

ರಘುನಂದನ್, ರಂಜಾನ್ ದರ್ಗಾ, ವಿಜಯಾ

ಸ್ವಾತಂತ್ರ್ಯ ಎಂದರೆ ಅಗತ್ಯದರಿವು

ಜಿಆರ್ ಅವರ ಒಂದು ಸಂದರ್ಶನ

ಸಂಗಾತಿಗಾಗಿ ಜಿಆರ್ ಅವರ ಸಂದರ್ಶನವಾಗಬೇಕೆಂಬ ತೀರ್ಮಾನವಾದ ಮೇಲೆ ಆ ಕುರಿತು ಅವರನ್ನು ನಾವು ಸಂಪರ್ಕಿಸಿದೆವು. ಮೊದಲಿಗೆ 'ಅಯ್ಯೋ ಅದೆಲ್ಲ ಯಾಕೆ, ಬೇಡ ರೀ' ಅಂದ ಜಿಆರ್ ಕಡೆಗೂ ನಮ್ಮ ಒತ್ತಾಯಕ್ಕೆ ಮಣಿದರು. ಅವರ ಪ್ರೀತಿಯ ಆಹ್ವಾನದ ಮೇರೆಗೆ ಈ ಸಂದರ್ಶನ-ಸಂವಾದ ಅವರ ಕಾವೇರಿನಗರದ ಪುಟ್ಟ ಫ್ಲ್ಯಾಟ್‌ನಲ್ಲಿಯೇ ನಡೆಯಿತು. ಬನಶಂಕರಿ ಮೂರನೆಯ ಹಂತದ ವಿನಾಯಕ ದೇವಸ್ಥಾನದಿಂದ ಕೆಳಕ್ಕೆ, ಪ್ರಶಾಂತವಾದ ಒಂದು ಕುರುಡುಗಲ್ಲಿಯ ಮೂಲೆಯಲ್ಲಿದೆ ಅವರಿರುವ ಫ್ಲ್ಯಾಟ್‌ಗಳ ಸಮುಚ್ಚಯ.

ಜಿಆರ್ ಅವರ ಅಧ್ಯಯನಶೀಲ ಜೀವನಕ್ಕೆ ಹೇಳಿ ಮಾಡಿಸಿದ ಹಾಗಿದೆ ಸಮುಚ್ಚಯದ ಎರಡನೇ ಮಹಡಿಯಲ್ಲಿರುವ ಅವರ ಮನೆ. ಅಲ್ಲಿ ಅವರೊಂದಿಗೆ ನಡೆಸಿದ ಹನ್ನೆರಡು ಗಂಟೆಗಳ ಮಾತುಕತೆಯನ್ನು ಪ್ರಸ್ತುತ ಸಂಪುಟದ ಮಿತಿಯಲ್ಲಿ ಮುದ್ರಿಸುವುದು ಅಸಾಧ್ಯವಾದ್ದರಿಂದ ಅದರ ಸಂಪಾದಿತ ಆವೃತ್ತಿಯನ್ನು ಕೊಟ್ಟಿದೆ.

ಸಂದರ್ಶನ ಮಾಡಿದವರು : ರಘುನಂದನ, ಡಾ. ವಿಜಯಾ, **ರಂಜಾನ್ ದರ್ಗಾ.**

- **ಸರ್ ನಿಮ್ಮ ಹೆಸರಲ್ಲಿ ಜಿ. ರಾಮಕೃಷ್ಣ, ಅಂದರೆ ಗಂಪಲಹಳ್ಳಿ ರಾಮಕೃಷ್ಣ ಅಂತ ಇದೆಯಲ್ಲ, ಆ ಊರು ನಿಮ್ಮ ಹಿರಿಯರು ಇದ್ದ ಊರಾ?**

  ಹೂಂ. ಗಂಪಲಹಳ್ಳಿ ಮಧುಗಿರಿ ತಾಲ್ಲೂಕಿನಲ್ಲಿದೆ, ನಮ್ಮ ತಾತನ ತಂದೆ ಬಹುಶಃ ಆ ಊರಿನಲ್ಲಿದ್ರು ಅಂತ ಕಾಣುತ್ತೆ. ನಮ್ಮಪ್ಪ ಆವೂರಲ್ಲಿ ಯಾವಾಗ್ಲೂ ವಾಸ ಇರ್ಲಿಲ್ಲ. ಯಾಕಂದ್ರೆ ಅವರು ಮೇಷ್ಟ್ರಾಗಿದ್ದಿದ್ರಿಂದ ಬೇರೆ ಬೇರೆ ಊರುಗಳಲ್ಲಿದ್ರು. ನಮ್ಮ ತಾತ ಕೂಡ ಅಲ್ಲಿದ್ರೋ ಏನೋ ಗೊತ್ತಿಲ್ಲ.

- **ಅಂದ್ರೆ ನೀವು ಆವೂರಲ್ಲಿ ಎಂದೂ ಇದ್ದಿದ್ದಿಲ್ಲ ಅಲ್ಲ?**

  ಇಲ್ಲ ಇಲ್ಲ ಆವೂರಲ್ಲಿ ಇರಲಿಲ್ಲ. ನನಗೆ ಗೊತ್ತಿರೋ ಊರು ಕೆಂಪಸಾಗರ ಅಂತ. ಮಾಗಡಿ ಹತ್ರ. ಇಲ್ಲಿಂದ ಮೂವತ್ತೈದು ಮೈಲಿ ಅಷ್ಟೆ. ಈಗ್ಲೂ ನಿಮ್ಮೂರು ಯಾವುದು ಅಂತ ಕೇಳಿದ್ರೆ ನಾವು ಕೆಂಪಸಾಗ್ರ ಅಂತ್ಲೆ ಹೇಳೋದು. ಈಗ್ಲೂ ಕೆಂಪಸಾಗ್ರಕ್ಕೇ ಹೋದ್ರೆ ಆ ಊರ್ನೋರೆಲ್ಲ ಮಾತಾಡುಸ್ತಾರೆ. ಅಲ್ಲಿ ನಮ್ದು ಅನ್ನೋದೇನೂ ಆಸ್ತಿ ಇಲ್ದೆ ಇದ್ರೂ. ಊ... ನಮ್ತಂದೆ ಆವೂರಲ್ಲಿ ಸುಮಾರು ಇಪ್ಪತ್ತು ವರ್ಷಕ್ಕೂ ಜಾಸ್ತಿ ಇದ್ರು. ಅವ್ರು ಟ್ರಾನ್ಸ್‌ಫರ್ ಆದ್ರೂ ನಾವೆಲ್ಲ ಅದೇ ಊರಲ್ಲಿ ಇರ್ತಾ ಇದ್ವಿ.

- **ಮತ್ತೆ ಎಷ್ಟನೇ ವಯಸ್ಸಿನ ತನಕ ಇದ್ರಿ ಅಲ್ಲಿ?**

  ಊಂ. ನಾನು ಎಂ.ಎ. ಪಾಸಾದ್ರೂ ಇನ್ನೂ ನಮ್ಮಪ್ಪ ಕೆಂಪಸಾಗ್ರದಲ್ಲೇ ಇದ್ರು. ಅಂದ್ರೆ, 59ನೇ ಇಸ್ವಿ.

- **ಅವ್ರು ಅಲ್ಲಿ ಪ್ರೈಮರಿ ಸ್ಕೂಲ್ ಟೀಚರ್ ಆಗಿದ್ರಾ?**

  ಹೂಂ. ಪ್ರೈಮರಿ ಸ್ಕೂಲ್ ಟೀಚರ್ರು.

- **ಏನು ಹೆಸರು?**

  ಸುಬ್ರಹ್ಮಣ್ಯಂ ಅಂತ. ನಮಗೇನಾದ್ರೂ ಹಳ್ಳಿ ಅನ್ನೋದು ಜ್ಞಾಪಕ ಇದ್ರೆ ಅದು ಕೆಂಪಸಾಗ್ರ. ಅಲ್ಲಿ ಕೂಗಿನಕಲ್ಲು ಅಂತ ಒಂದು ಇದೆ, ಬಂಡೆ. ಅಲ್ಲೆ ದೊಡ್ಡ ಕೆರೆ ಇದೆ. ಆ ಕೆರೆ ಅಂಗಳದಲ್ಲಿ ನಿಂತ್ಕೊಂಡು ಕೂಗಿದ್ರೆ, ಭಾಳ ಚೆನ್ನಾಗಿ ಪ್ರತಿಧ್ವನಿಸತ್ತೆ. ಅದಕ್ಕೋಸ್ಕರ ಅದನ್ ಕೂಗಿನಕಲ್ಲು ಅಂತ ಕರೀತಾರೆ. ಕೆಂಪೇಗೌಡ ಕಟ್ಸಿದ್ದಿದ್ದು ಆ ಕೆರೆ. ಈಗ್ಲೂ ಇದೆ ಅದು. ಡಾ. ಚಿದಾನಂದ ಮೂರ್ತಿಯವರು ಪಾಲ್ಕುರಿಕೆ ಸೋಮನಾಥ ಇದ್ದ ಕಲ್ಯ ಅಂತ ಬರ್ದಿದಾರಲ್ಲ, ಆ ಕಲ್ಯಕ್ಕೆ ಎರಡು ಮೈಲಿ ಅಷ್ಟೆ. ಆ ಕೂಗಿನ ಕಲ್ಲು ಹತ್ತಿದ್ರೆ ಆ ಕಡೆ ಕಲ್ಯ ಕಾಣತ್ತೆ, ಈ ಕಡೆ ಕೆಂಪಸಾಗ್ರ ಕಾಣತ್ತೆ.

- **ನೀವು ನಿಮ್ಮ ಬಾಲ್ಯದ ಬಗ್ಗೆ, ಏನನ್ನು ಸುಲಭವಾಗಿ ಮಾತಾಡ್ಕೊಳ್ಳೋ ಅಂಥದ್ದು?**

  ಏನಿಲ್ಲ, ನಾವೆಲ್ಲ ಚೆನ್ನಾಗಿ ಓಡಾಡ್ಕೊಂಡು ಇದ್ದಿದ್ದು, ಬೇಕಾದ ಕಡೆ ಮರ ಹತ್ತತಾ ಇದ್ದದ್ದು, ಕುಣಿಯೋದು, ಜಿಗಿಯೋದು, ಹಹ (ನಗು). ಇಂಥದೆಲ್ಲ ಕೆಂಪಸಾಗರದಲ್ಲಿ ಮಾಡಿದ್ದು. ಯಾವುದಾದ್ರು ಮಾವಿನ ಮರ ಇದ್ರೆ ಹೋಗಿ ಅವರಿಗೆ ಗೊತ್ತಿದ್ದೋ, ಗೊತ್ತಿಲ್ದೇನೋ ಆ ಮಾವಿನ ಮರಕ್ಕೆ ಕಲ್ಲು ಹೊಡೆಯೋದು, ಹಹ (ನಗು). ನಾನು ಒಳ್ಳೆ

ಗುರಿಕಾರ, ಗುರಿಕಟ್ಟಿ ಮಾವಿನಕಾಯಿ ಉದ್ರುಸ್ತಾ ಇದ್ವೆ. ಹೈಸ್ಕೂಲಿಗೆ ನಾನು ಮಾಗಡಿತನಕ ನಡಕೊಂಡು ಹೋಗಿ ಬರ್‍ತಾ ಇದ್ವೆ. ಹೈಸ್ಕೂಲಿನಲ್ಲಿ ಏಳೂವರೆಯಿಂದ ಹತ್ತೂವರೆ-ಹನ್ನೊಂದು ಗಂಟೆವರೆಗೆ ಕ್ಲಾಸು ನಡೆಯೋದು. ನಾವು ಏಳೂವರೆ ಹೊತ್ಗೆ ನಾಲಕ್ ಮೈಲಿ ನಡ್ಕೊಂಡು ಹೋಗಬೇಕು. ಎಲ್ಲಾರು ಗುಂಪು ಕಟ್ಕೊಂಡು ನಿಧಾನವಾಗಿ ವಾಪಸ್ಸು ಬರುವಾಗ ಆಟಗಳಾಡ್ತಿದ್ವಿ. ಅದೇ ಈಗಲೂ ಚೆನ್ನಾಗಿ ನೆನಪು.

ನಾವು ಮೇಷ್ಟ್ರ ಮಕ್ಕಳಾದ್ದರಿಂದ ಎಲ್ಲಾ ಕಡೆಗೂ ಆದರ, ಸತ್ಕಾರ ಇರ್‍ತಿತ್ತು. ಆಲೆಮನೆಗೆ ಹೋದ್ರೆ ಹಾಲು ಬೇಕಾ, ಬಿಸಿಬೆಲ್ಲ ಬೇಕ, ಕಬ್ಬು ಬೇಕಾ ಹೀಗ್ ಕೇಳೋರು. ಅಂತಹ ಆಲೆಮನೆಗ್ಹೋಗ್ತಿದ್ದಾಗ ಅಲ್ಲೊಂದು ಕಲ್ಯಾಣಿ ಇತ್ತು. ಅದರ ತುದೀಲಿದ್ದ ಕಲ್ಲು ಅಲ್ಲಾಡಸ್ತ ಅಲ್ಲಾಡಸ್ತ ಒಳಕ್ಕೆ ಬಿದ್ದುಬಿಟ್ಟೆ. ಈಜು ಬರ್‍ತಿರಲಿಲ್ಲ. ಅವಾಗಿನ್ನು ನಾನು ಭಾಳ ಚಿಕ್ಕೋನು. ಮಿಡ್ಲ್ ಸ್ಕೂಲಿರಬೇಕು. ನಮ್ಮಣ್ಣ ಇದ್ದ ನನ್ಜೊತೆ. ಅವ್ನು ಬಾಯಿ ಬಡ್ಕೊಳೋಕ್ ಶುರು ಮಾಡ್ದ. ಆಲೆಮನೇಲಿದ್ದೋರು ಓಡಿ ಬಂದ್ರು. ಏನಪ್ಪಾ ಅಂದ್ರು. ಅವಾಗ ನನಗೆ ಜುಟ್ಟು ಇತ್ತು. ಅದನ್ನ ಹಿಡ್ಕೊಂಡು ಎತ್‌ದ್ರು ಒಬ್ಬರು, ಕೆಂಪಲಿಂಗಯ್ಯ ಅಂತ ಅವ್ರ ಹೆಸ್ರು. ಈಗ್ಲೂ ನಮಗೆ ಆ ಊರಲ್ಲಿ ಕೆಂಪಲಿಂಗಯ್ಯ ಅಂದ್ರೆ ಭಾಳ ಇಷ್ಟ.

- **ಈಗ್ಲೂ ಇದಾರ ಅವ್ರು?**

ಓ... ಇದಾರೆ. ಅವರಿಗೆ ಒಂದೆಪ್ಪತ್ತೈದು ಎಪ್ಪತ್ತೆಂಟು ವರ್ಷ ಇರಬೌದು.

- **ಇದೆಲ್ಲ ಆದದ್ದು ಸುಮಾರು ನಲವತ್ತರ ದಶಕದ ಕಡೆ ಕಡೇಗಾ?**

ಹಾ ಕಡೆಗೇನೆ. ನಾನು 53ರಲ್ಲಿ ಎಸ್.ಎಸ್.ಎಲ್.ಸಿ. ಪಾಸು ಮಾಡಿದ್ದು.

- **ನಿಮ್ಮ ಮನೆ ಮಾತು ತೆಲುಗು ಅಲ್ವಾ ಸಾರ್?**

ಮನೇಲಿ ಈಗ್ಲೂ ಕೆಲವರು ತೆಲುಗು ಮಾತ್ನಾಡ್ತಾರೆ. ನನ್ನನ್ಬಿಟ್ಬಿಬ್ಬನ್ ಬಿಟ್ಟು. ಈಗಿನ... ನನ್ನ ಮುಂದಿನ ಪೀಳಿಗೆಯವರು ಯಾರೂ ತೆಲುಗು ಮಾತ್ನಾಡಲ್ಲ.

- **ಅಂದ್ರೆ ನಿಮ್ದು ಮುಲಕನಾಡ ಸಾರ್?**

ಹೌದು. ಆ ಮುಲುಕನಾಡಿಂದು ಒಂದು ಪುಸ್ತಕ ಒಂದು ಬಂದಿದೆ ನೋಡಿದೀರಾ? ಡಾ. ವೆಂಕಟಾಚಲ ಶಾಸ್ತ್ರಿಗಳದು. ಅದರಲ್ಲಿ ನನ್ನ ಹೆಸರೂ ಇದೆ. ಅವ್ರಿಗೆ ಬೇಡ್ರಿ ಬೇಡ್ರಿ ನನ್ನನ್ಯಾಕೆ ಇಲ್ಲೆಲ್ಲ ಸೇರಿಸ್ತೀರಿ ಅಂದ್ರೆ, ಅವ್ರು ಇಲ್ಲ ಇಲ್ಲ ಸೇರಿಸ್ಲೇ ಬೇಕು ಅಂತ ಸೇರಿಸಿದ್ದಾರೆ.

- **ನಿಮ್ಮ ಮನೆದೇವ್ರು ಯಾರು ಸರ್, ಆವಾಗ?**

ಆಗ್ಲೇನು ಈಗ್ಲೂನು ನಮ್ಮ ಪರಂಪರೆ ಪ್ರಕಾರ ಸುಬ್ರಹ್ಮಣ್ಯಸ್ವಾಮಿ ನಮ್ಮ ದೇವ್ರು.

- **ಅಂದ್ರೆ ಯಾವೂರು, ಯಾವ ದೇವಸ್ಥಾನ?**

ಗಂಪಲಹಳ್ಳಿ ಅಂತ ಹೇಳಿದ್ನಲ್ಲ, ಅದರ ಹತ್ರ ರತ್ನಗಿರಿ ಅಂತ ಒಂದು ಊರು ಇದೆ. ಅಲ್ಲಿ ರತ್ನಗಿರಿ ಸುಬ್ಬಾಶಾಸ್ತ್ರಿಗಳು ಅಂದ್ರೆ ಭಾಳ ಪ್ರಸಿದ್ಧರು. ವಾಯಲನಿಸ್ಟ್. ಇಲ್ಲಿ ಆನೂರು

ರಾಮಕೃಷ್ಣ ಅವರ ಜೊತೇಲಿ ನುಡಿಸುತ್ತಿದ್ದರು. ರತ್ನಗಿರೀಲಿ ಒಂದು ದೇವಸ್ಥಾನ ಇದೆಯಂತೆ. ಅಲ್ಲಿಯ ದೇವರೇ ಇರಬೇಕು.

- **ಯಾವ ತಾಲ್ಲೂಕು ಬರ್‍ತದೆ ಸರ್ ಅದು?**
ಮಡಕಶಿರಾ ತಾಲ್ಲೂಕಲ್ಲಿ ಬರುತ್ತೆ. ಅದು ಆಂಧ್ರಕ್ಕೆ ಸೇರತ್ತೆ. ಗಂಪಲಹಳ್ಳಿಯಿಂದ ಎರಡು ಮೈಲಿ ಹೋದ್ರೆ ರಾಜ್ಯದ ಎಲ್ಲೆ.

- **ಗಾಂಧಿ ಹತ್ಯೆ ಆಗೋ ಹೊತ್ಗೆ ಒಂಬತ್ತು ವರ್ಷ ಅಲ್ವಾ? ಆ ಹೊತ್ಗೆ ನೀವು ತುಂಬಾ ಚಿಕ್ಕವ್ರು ಬಿಡಿ. ಆದ್ರೂ ಆ ಸ್ವಾತಂತ್ರ್ಯ ಬಂದಿದ್ದ ಕಾಲದ್ದು, ಆ ದಿನ ನೆನಪಿದ್ಯ ನಿಮ್ಗೆ.**
ನೋಡಿ ಈ ಊರಲ್ಲಿ ಕಸ್ತೂರಯ್ಯ ಅಂತ ಒಬ್ರು ಇದಾರೆ ಈಗ್ಲು. ಅವ್ರು ನನಗೆ ಆರನೇ ಕ್ಲಾಸಲ್ಲಿ ಮೇಸ್ಟ್ರಾಗಿದ್ದರು. ಅವರೊಬ್ರು ಇದನ್ನೆಲ್ಲ ಹೇಳೋರು. ಕ್ಲಾಸ್ನಲ್ಲು ಹೇಳೋರು, ಹೊರಗಡೇನೂ ಹೇಳೋರು. ಸುಭಾಶ್‌ಚಂದ್ರ ಬೋಸರ ಫೋಟೋ ತಂದು ತೋರ್‍ಸೋರು. ಇನ್ನೊಬ್ಬರು ರಾಜಶೇಖರಯ್ಯ ಅಂತ. ಅವ್ರು ಹೈಸ್ಕೂಲ್ ಹೆಡ್ ಮಾಸ್ಟರ್ ಆಗಿ ರಿಟೈರ್ ಆಗಿದ್ದಾರೆ. ಅವರೂ ನಮ್ಮಪ್ಪನ ವಿದ್ಯಾರ್ಥಿಯೇ, ಅವರು ಗಾಂಧಿ ಬಗ್ಗೆ ಹೇಳೋರು. ಅವ್ರು ಮೊದಲ್ನಿಂದ ಖಾದಿ ಹಾಕ್ಕೋಳವ್ರು. ರಾಜಶೇಖರಯ್ಯ, ಕಸ್ತೂರಯ್ಯ ಇಬ್ರನ್ನ ಬಿಟ್ಟು ಮಿಡ್ಲ್‌ಸ್ಕೂಲಲ್ಲಿ ಈ ಥರದ ವಿಷ್ಯ ಯಾರೂ ಹೇಳ್ತಿರಲಿಲ್ಲ. ಟೆಕ್ಸ್ಟ್ ಬುಕ್‌ನಲ್ಲೂ ಏನೂ ಇರ್‍ಲಿಲ್ಲ. ಹೈಸ್ಕೂಲಲ್ಲಿ ಡಿ. ನರಸಿಂಹಯ್ಯ, ದೊಡ್ಡತಿಮ್ಮಯ್ಯ ಇವರಿಬ್ರನ್ನ ಬಿಟ್ರೆ ಇನ್ ಮಿಕ್ಕನಾದೋರೆಲ್ಲಾ ಬ್ರಾಹ್ಮಣ ಮೇಸ್ಟ್ರುಗಳೇ. ದೊಡ್ಡತಿಮ್ಮಯ್ಯ ಹೊಲೆಯರಿರಬೇಕು. ಅವರು ಸ್ವಾರಸ್ಯದ ವ್ಯಕ್ತಿ. ಅವ್ರು ಹೈಸ್ಕೂಲ್ ಮೇಸ್ಟ್ರಾಗಿದ್ದರು. ಅವ್ರು ಕೋಲಾರದ ಕಡೆಯವ್ರು. ಆಮೇಲಿಂದ ಪ್ರಧಾನಮಂತ್ರಿಗಳ ಕಾರ್ಯದರ್ಶಿಯಾಗಿದ್ದರು. ಪಾರ್ಲಿಮೆಂಟ್ ಮೆಂಬರಾದೋರು. ನಾವು ಹೈಸ್ಕೂಲ್ನಲ್ಲಿದ್ದಾಗ ಆತ ನಮ್ಗೊಂದು ರೀತಿ ಹೀರೊ.

- **ನಿಮ್ಮ ಸ್ಕೂಲಿನ ದಿನಗಳ ವಿಷಯ ಇನ್ನು ಸ್ವಲ್ಪ ಹೇಳಿ ಸಾರ್.**
ಅವ್ರು ಏನ್ ಮಾಡದ್ರು ಅಂದ್ರೆ, ನಾನು ಆವಾಗ ಹೈಸ್ಕೂಲ್ ಸೆಕೆಂಡ್ ಇಯರ್. ಆ ಹೈಸ್ಕೂಲ್ ಎದ್ರುಗಡೆ ಹೋಟ್ಲಿದೆ. ಅಲ್ಲಿ ಮೇಷ್ಟ್ರುಗಳಿಗೆಲ್ಲ ಒಳಗಡೆ ಒಂದು ರೂಮು ಮಾಡಿದ್ರು. ಮೇಸ್ಟ್ರುಗಳು ಮಾತ್ರ ಹೋಗೋದು ಅಲ್ಲಿ. ದೊಡ್ಡತಿಮ್ಮಯ್ಯಾನು ಹೈಸ್ಕೂಲ್ ಮೇಸ್ಟ್ರು. ಎಲ್ಲಾ ಮೇಸ್ಟ್ರುಗಳ ಜೊತೆ ಅವರೂ ಹೋದ್ರು. ಆ ರೂಮಲ್ಲೆ ಈ ಮೇಸ್ಟ್ರುಗಳು ಗಲಾಟೆ ಮಾಡಿದ್ರು, ಆ ಮಾಲಿಕನೂ ಗಲಾಟೆ ಮಾಡ್ದ. ದೊಡ್ಡತಿಮ್ಮಯ್ಯ, ನಾನು ಹಾಗಾದ್ರೆ ಈ ಹೋಟೆಲ್ಲಿಗೇ ಬರೋದಿಲ್ಲ. ಹುಡುಗರ್‍ನ ಕರ್‍ಕಂಡುಬಂದು ಗಲಾಟೆ ಮಾಡಿಸ್ತೀನಿ ಅಂತೆಲ್ಲ ಮಾತ್ನಾಡಿ ಬಂದಿದಾರೆ. ಆಗ ಭೀಮರಾಯ ಅಂತ ಒಬ್ರು ಮೇಸ್ಟ್ರು ಇದ್ರು. ನಾನು ಅವರ ಮನೆಗೆ ನೀರು ತರೋಕೆ ಹೋಗ್ತಾ ಇದ್ದೆ. ಕುಡಿಯೋ ನೀರನ್ನ ದೂರದಿಂದ ಅವರಿಗೆ ತಂದ್ಕೊಡಬೇಕಾಗಿತ್ತು. ತಂದುಕೊಟ್ರೆ ಅದೇನೋ ಬಾಳೆ ಹಣ್ಣು ಕೊಡೋರು. ಅವ್ರ ಮನೆಗೆ ಹೋದಾಗ ಅವ್ರು ಹೇಳಿದ್ರು..... "ನೋಡ್ದೇನೋ ಆ ದೊಡ್ಡತಿಮ್ಮಯ್ಯ ಏನು ಮಾಡ್ದ, ಹೀಗೀಗ್ ಮಾಡ್ದ......" ಅಂತಂದ್ರು. 'ಒಳ್ಳೆ ಕೆಲ್ಸ ಮಾಡ್ದ ಬಿಡಿ ಸಾರ್' ಅಂತ ನಾನು

ಮನಸ್ನಲ್ಲಿ ಅಂದ್ಕೊಂಡೆ. ಮೇಸ್ಟ್ರು ತಾನೆ, ಜೋರಾಗಿ ಹೇಳೋ ಹಾಗಿಲ್ಲ. ಆಮೇಲಿಂದ ಮಾರನೇ ದಿನ ದೊಡ್ಡತಿಮ್ಮಯ್ಯನೋರ ಹತ್ರ ಹೋಗಿ ನಾವು ಒಂದ್ ಮೂರ್ನಾಲ್ಕು ಜನ ಮಾತ್ನಾಡಿಸಿದ್ವಿ 'ಸಾರ್ ಒಳ್ಳೆ ಕೆಲ್ಸ ಮಾಡಿದ್ರಿ ಸಾರ್ ಅಂದ್ವಿ.'

ಇನ್ನು ರಾಜಶೇಖರಯ್ಯನೋರು ನನಗೆ ಮಿಡ್ಲ್ ಸ್ಕೂಲಲ್ಲಿದ್ದಾಗ ಮೊಟ್ಟಮೊದಲು ಮಾರ್ಕ್ಸ್, ಲೆನಿನ್ ಬಗ್ಗೆ ಹೇಳಿದ್ದು. ಅವ್ರ ವಿಚಾರ ಹೇಗೆ, ಏನು ಅಂತ ಗೊತ್ತಿಲ್ಲ. ಆದರೆ ಮೊದಲ ಬಾರಿ ಈ ಹೆಸರು ಕೇಳಿದ್ದು ಅವರ ಬಾಯಲ್ಲಿ. ಇದಲ್ಲದೆ ಅವರು ಕುವೆಂಪು ಬಗ್ಗೆ, ಸ್ವಾತಂತ್ರ್ಯದ ಬಗ್ಗೆ ಎಲ್ಲಾ ಹೇಳ್ತಿದ್ರು. ಬೈಬಲ್ ಬಗ್ಗೆಯೂ ಹೇಳ್ತಿದ್ರು.

ನಾವು ಮಧ್ಯಾಹ್ನದ ಹೊತ್ತು ಸ್ಕೂಲಿನಿಂದ ಒಂದು ಗಂಟೆಗೆಲ್ಲ ವಾಪಸ್ಸು ಊರಿಗೆ ಬಂದುಬಿಟ್ರೆ ಆಮೇಲೆ ದನಕಾಯೋಕೆ ಹೋಗೋದು, ಕುರಿ ಕಾಯೋಕೆ ಹೋಗೋದು. ನಮ್ದೇ ಹೊಲ ಅಂತ ಏನೂ ಇಲ್ದೆ ಇದ್ರು ಎಲ್ರ ಜೊತೇನೂ ಹೋಗ್ತಾ ಇದ್ವಿ. ನಮ್ದು ಒಂದು ಹಸು ಇತ್ತು. ಇವ್ರ ಹೊಲದಲ್ಲಿ ಒಂದಿನ ಮೇಯಿಸೋದು, ಅವ್ರ ಹೊಲದಲ್ಲಿ ಒಂದುದಿನ ಮೇಯ್ಸೋದು ಮಾಡ್ತಾ ಇದ್ವಿ. ಸಂಜೆ ಹೊತ್ತಿನಲ್ಲಿ ಈ ರಾಜಶೇಖರಯ್ಯನವರು ಏನೇನಾದ್ರೂ ಈ ಥರದ್ದು ಹೇಳೋರು. ಸ್ವಾತಂತ್ರ್ಯ ಹೋರಾಟದ ಬಗ್ಗೆ, ನೇತಾಜಿ ಸುಭಾಶ್‌ಚಂದ್ರ ಬೋಸ್ ಬಗ್ಗೆ; ಮಾರ್ಕ್ಸ್, ಏಂಗಲ್ಸ್, ಲೆನಿನ್ ಅವರ ಹೆಸರು ಹೇಳಿದ್ದು ನನಗೆ ಚೆನ್ನಾಗಿ ನೆನಪಿದೆ. ಆದರೆ ಕ್ಲಾಸ್ನಲ್ಲಿ ಏನು ಹೇಳಿದ್ರು ಅಂತ ನೆನಪಿಲ್ಲ. ಬೈಬಲ್‌ದು ಯಾವುದಾದ್ರು ಒಂದು ಕತೆ ಹೇಳಿಬಿಡೋರು. ಆದರೆ ಇಂಥದನ್ನು ಹೈಸ್ಕೂಲ್ ಮೇಷ್ಟರುಗಳು ಯಾರೂ ಮಾಡ್ಲಿಲ್ಲ.

- **ಸ್ವಾತಂತ್ರ್ಯ ಬರೊ ಅಷ್ಟು ಹೊತ್ತಿಗಾಗ್ಲೆ ಅಂಬೇಡ್ಕರ್ ತುಂಬಾ ಪ್ರಚಾರದಲ್ಲಿ ಇದ್ರಲ್ವ ಅದು ಇನ್ನೂ ನಿಮ್ಮ ಹಳ್ಳಿ ತಲ್ಪೇ ಇರ್ಲಿಲ್ವ?**

ಇಲ್ಲ ನಮ್ಮೂರಲ್ಲಿ ಯಾರೂ ನಮಗೆ ಅಂಬೇಡ್ಕರ್ ಹೆಸರು ಹೇಳಿರ್ಲಿಲ್ಲ. ಐವತ್ತೈದರಲ್ಲಿ ಅಂಬೇಡ್ಕರ್ ಕೋಲಾರಕ್ಕೆ ಬಂದಿದ್ದಲ್ವ. ಆಗ ಅದು ನಮಗೆ ದೊಡ್ಡ ಸಮಾಚಾರ ಆಯ್ತು. ಆದರೆ ಹೈಸ್ಕೂಲಿನಲ್ಲಂತೂ ನಾವು ಅಂಬೇಡ್ಕರ್ ಹೆಸ್ರು ಕೇಳೇ ಇರ್ಲಿಲ್ಲ.

- **ಸಾರ್ ಹೈಸ್ಕೂಲ್ನಲ್ಲಿ ಶಾಲೆ ಪಠ್ಯಪುಸ್ತಕಗಳು ಬಿಟ್ರೆ ನಿಮ್ಮ ಓದು ಯಾವ ಥರದ್ದು ಇತ್ತು? ಯಾವಯಾವ ಪುಸ್ತಕ ಓದ್ತಾ ಇದ್ರಿ?**

ಅಲ್ಲಿ ಮರಿಗಂಗಣ್ಣ ಅಂತ ಒಬ್ರು ಇದ್ರು. ಸೇವಾದಳದ ನಾಯಕರು ಅವ್ರು. ಕಾಂಗ್ರೆಸ್ ಕಾರ್ಯಕರ್ತ. ಆ ಮೇಲಿಂದ ಮಾಗಡಿ ಮುನ್ಸಿಪಲ್ ಪ್ರೆಸಿಡೆಂಟ್ ಕೂಡ ಆಗಿದ್ರು. ಅವರದ್ದು ಒಂದು ಲೈಬ್ರರಿ ಇತ್ತು. ಮಾಗಡೀಲಿ ಕುರುಹಿನ ಶೆಟ್ಟಿ ಯುವಜನಸಂಘ ಅಂತ್ಹೇಳಿ. ಈ ಮರಿಗಂಗಣ್ಣ ಅಲ್ಲಿ ಪುಸ್ತಕ ಕೊಡ್ತಾ ಇದ್ರು. ಜಯಪ್ರಕಾಶ್ ನಾರಾಯಣ್‌ದು 'ಸಮಾಜ ವಾದವೇ ಏಕೆ' ಅಂತ್ಹೇಳಿ ಒಂದು ಪುಸ್ತಕ ಇತ್ತು. ಕನ್ನಡದಲ್ಲಿ ಅನುವಾದ ಆಗಿತ್ತು. ಮರಿಗಂಗಣ್ಣಾವ್ರು 'ಏಯ್, ಇದು ತಗೊಂಡ್ಹೋಗಿ ಓದೋ' ಅಂತ್ಹೇಳಿ ಕೊಟ್ರು.

ಮರಿಗಂಗಣ್ಣಾವ್ರು, ನಮಗಿಂತ್ಲು ಏನು ಒಂದು ಹತ್ತು ವರ್ಷ ದೊಡ್ಡೋರು ಇರಬಹುದು ಅಷ್ಟೆ.

- **ಈ ಶರತ್‌ಚಂದ್ರ, ಅ.ನ.ಕೃ. ಹಾಗೂ ಕಾರಂತರ ಪುಸ್ತಕಗಳನ್ನು ಯಾವಾಗ ಓದೋಕೆ ಶುರುಮಾಡಿದ್ರಿ?**

ನನಗೆ ಆ ಪುಸ್ತಕಗಳು ಪರಿಚಯವೇ ಆಗಿರ್ಲಿಲ್ಲ. ನಮಗೆ ಇಟ್ಟಿದ್ದಿದ್ದ ಪುಸ್ತಕಗಳು ಯಾವ್ದೋ ಅದನ್ನಷ್ಟು ಓದ್ಕೊಂಡ್ವಿ ಅಷ್ಟೇ. ಅದನ್ನೂ ಸರಿಯಾಗಿ ಓದ್ಕೋತಾ ಇರಲಿಲ್ಲ ಬಿಡಿ. ಎಲ್ಲಾ ಥರ್ಡ್ ಕ್ಲಾಸಲ್ಲಿ ಪಾಸ್ ಮಾಡ್ತಾ ಇದ್ವಿ.

- **ಹಾಗಾದ್ರೆ ನಿಮಗೆ ಓದೋ ಗೀಳು ಹತ್ತಿದ್ದು ಯಾವಾಗ ಸರ್?**

ನನಗನ್ನೋದು, ಬಹುಶಃ ಇಂಟರ್‌ಮೀಡಿಯೆಟ್ ಆದ್ಮೇಲೆ-ಮೈಸೂರಿಗೆ ಹೋದ ಮೇಲೇನೇ ನಾನು ಓದೋಕೆ ಶುರುಮಾಡಿದ್ದು.

- **ನೀವು ಇಂಟರ್‌ಮೀಡಿಯೆಟ್ ಓದಿದ್ದು ಮೈಸೂರಲ್ಲಾ!**

ಇಲ್ಲ ಇಂಟರ್‌ಮೀಡಿಯೆಟ್ ಓದಿದ್ದು ತುಮಕೂರ್ನಲ್ಲಿ.

- **ಅಲ್ಲೇನು ಹಾಸ್ಟಲಲ್ಲಿ ಇದ್ರಾ?**

ಒಂದು ಚನ್ನಪ್ಪಯ್ಯನ ಛತ್ರ ಅಂತಿದೆ. ಆ ಚನ್ನಪ್ಪಯ್ಯ ಅನ್ನೋವರದು ಒಂದು ದೊಡ್ಡ ಕಾಂಪೌಂಡ್. ಅವರು ಹುಡುಗರಿಗೆ ಐದು ರೂಮು ಪುಕಸಟ್ಟೆ ಕೊಟ್‌ಬಿಡತಿದ್ರು.

- **ಊಟ ಸಾರ್, ಊಟ?**

ನಾನೇನ್ ಮಾಡ್ತಾ ಇದ್ದೆ ಅಂದ್ರೆ, ಇಂಟರ್‌ಮೀಡಿಯೆಟ್‌ನಲ್ಲಿ ಭಿಕ್ಷಾನ್ನ ಮಾಡ್ತಾ ಇದ್ದೆ.

- **ಅಂದ್ರೆ ವಾರಾನ್ನಾನಾ ಸಾರ್?**

ಅಲ್ಲ, ಭಿಕ್ಷಾನ್ನ. ಅಂದ್ರೆ ಒಂದು ಪಾತ್ರೆ ತಗೋಳ್ಳೋದು, ಬೆಳಗ್ಗೆ ಒಂದು ಹತ್ತು ಮನೆಗೆ ಹೋಗೋದು. ಭವತಿ ಭಿಕ್ಷಾಂದೇಹಿ ಅಂದ್ರೆ ಒಂದಿಷ್ಟು ಅನ್ನ, ಒಂದಿಷ್ಟು ಸಾರು ತಂದು ಹಾಕ್ತಾರೆ. ಎಷ್ಟೋ ಜನ 'ಏ ಮಗೂ ಸ್ವಲ್ಪ ತೊವ್ವೆ ಇದೆ ಹಾಕ್ಲೇನೋ?' ಅಂದ್ರೆ, 'ಹಾಕಿ ಎಲ್ಲಾ ಇದಕ್ಕೇ ಹಾಕಿ' ಅನ್ನೋದು.... 'ಪಾಯಸ ಇದೆ ಏನು ಮಾಡೋದು?' ಅಂತಂದ್ರೆ, 'ಹಾಕಿ ಇದಕ್ಕೇನೆ ಹಾಕಿ ಅನ್ನೋದು. ಪಾಯಸ ನಮಗೆಲ್ಲಿ ಸಿಗತ್ತೆ.

- **ಅಲ್ಲಿ ನೀವು ಹೋಗುತ್ತಿದ್ದುದು ಬ್ರಾಹ್ಮಣರ ಮನೆಗೇನೋ ಅಥವಾ....**

ಇಲ್ಲ, ಬ್ರಾಹ್ಮಣರ ಮನೇಗೇ ಅಷ್ಟೆ. ಒಂದ್ಸಲ ನಾನು ಯಾವ್ದೊ ಲಿಂಗಾಯತರ ಮನೆಗೆ ಹೋಗ್ಬಿಟ್ಟಿದ್ದೀನಿ, ನನಗ್ಗೊತ್ತಿಲ್ಲ. ಪಾಪ ಅವ್ರು ಅಕ್ಕಿ ತಗೊಂಬಂದ್ರು. ಇಲ್ಲಿ ಅಕ್ಕಿ ಹಾಕ್ಕೊಳಕ್ಕಾಗಲ್ಲ ಅಂದೆ. ಅದನ್ನ ನಮ್ಮಣ್ಣಂಗೆ ಹೇಳಿದಾಗ, 'ಏಯ್ ಅದು ಲಿಂಗಾಯತರ ಮನೆ ಕಣೊ. ಅವರ ಪಕ್ಕದ ಮನೆಗೆ ಹೋಗು ಅಂತಂದ್ರೆ ನೀನು ಅವರ ಮನೆಗೆ ಹೋಗಿಬಿಟ್ಟಿದ್ದೀಯಾ' ಅಂತಂದ್ರು. ಇನ್ನೊಬ್ಬರು ಸೂಪರಿಂಟೆಂಡೆಂಟ್ ಆಫ್ ಪೊಲೀಸ್,

ಸಾಬರು ಇದ್ದರು. ಅವರ ಮಗ ನಮ್ಮ ಕ್ಲಾಸು. ನನ್ನ ಪಕ್ಕದಲ್ಲೇ ಕೂರುತ್ತಿದ್ದ. ಅವ್ನು ನಾನು ಭಿಕ್ಷಾನ್ನಕ್ಕೆ ಹೋಗೋದು ನೋಡೋನು. ಆ ಏರಿಯಾದಲ್ಲೆ ಹೋಗ್ತಾ ಇದ್ದೆ ನಾನು. ಏಯ್ ಸುಮ್ನೆ ಅಲ್ಲೆಲ್ಲ ಏಕೆ ಹೋಗ್ತಿಯ? ನಮ್ಮಮ್ಮನಿಗೆ ಹೇಳ್ತೀನಿ, ಸುಮ್ನೆ ನಮ್ಮ ಮನೆಗೆ ಬಂದು ಬಿಡು ಅಂತಿದ್ದ. ಹಹ... ಹಹ (ಎಲ್ಲರೂ ನಗು) ಹಾಗೆ ಹೋಗೋ ಹಾಗಿರಲಿಲ್ಲ. ಹೋಗಿದ್ರೆ ನಮ್ಮಣ್ಣ ಬಿಡ್ತಾ ಇದ್ರ. ಮತ್ತೆ, ನಮ್ಮ ಕ್ಲಾಸ್‌ಮೇಟೊಬ್ಬಳು ಶಾಂತ ಅಂತ ಇದ್ಳು. ಕಡಪ ಗರುಡಾಚಾರ್ ಅಂತ, ಲಾಯರ್ರು. ಅವರ ಮಗಳು. ಬಹಳ ಪ್ರಸಿದ್ಧರು. ಆವಾಗ್ಗೆ ಅವರ ಮನೇಗೂ ಭಿಕ್ಷಾನ್ನಕ್ಕೆ ಹೋಗುತ್ತಿದ್ದೆ.

ಈ ತುಮಕೂರ್ನಲ್ಲಿ ನೋಡಿ, ನಮ್ಮಪ್ಪ ಸ್ವಲ್ಪ ಲಿಬರಲ್ಲಾಗಿ ಇದ್ದು, ಇವತ್ತಿನ ಥರ ಜನರ ಪರಿಚಯ ಇದ್ದಿದ್ದರೆ ಸಿದ್ಧಗಂಗಾ ಮಠಕ್ಕೆ ಹೋಗಿಬಿಡಬಹುದಾಗಿತ್ತು. ಸಿದ್ಧಗಂಗಾ ಮಠದಲ್ಲಿ ಯಾರ್ಗೂ ಇಲ್ಲ ಅಂತಿರಲಿಲ್ಲ. ಎಲ್ಲರಿಗೂ ಕೊಡ್ತಾ ಇದ್ರು. ನಮಗೆ ಸಿದ್ಧಗಂಗಾ ಮಠಕ್ಕೋಗಿ ಕೇಳಬಹುದು ಅಂತ ಯಾರೂ ಹೇಳ್ಲೂ ಇಲ್ಲ, ನಮ್ಮಷ್ಟಕ್ಕೆ ನಾವು ತಿಳ್ಕೊಂಡು ಹೋಗ್ಲೂ ಇಲ್ಲ.

ನಾನು ಸೆಕೆಂಡ್ ಇಯರ್‌ಗೆ ಬರೋ ಹೊತ್ಗೆ ನಮ್ಮಣ್ಣ ಓದು ಮುಗಿಸಿದ್ದರಲ್ಲಾ, ಆಗ ನಾನು ಅವರು ಹೋಗುತ್ತಿದ್ದ ನಮ್ಮ ಸಂಸ್ಕೃತದ ಮೇಷ್ಟು ಎಂ.ಎ. ಕೃಷ್ಣಸ್ವಾಮಿ ಅವರ ಮನೆಗೆ ಹೋಗುತ್ತಿದ್ದೆ. ಅವ್ರು ಈಗಿಲ್ಲ. ಅವರ ಹೆಂಡತಿ ಡಾ. ಜಯಮ್ಮ ಅಂತ ಇದಾರೆ. ಇನ್ನೊಬ್ರು ನಂಜುಂಡಯ್ಯನೋರು ಅಂತ ಎಕನಾಮಿಕ್ಸ್ ಮೇಷ್ಟು ಇದ್ರು. ಅವ್ರ ಮನೆಗೆ ಊಟಕ್ಕೆ ಹೋಗುತ್ತಿದ್ದೆ. ಮತ್ತೊಬ್ಬರು ಭೋಗಾದಿ ಗುಂಡಣ್ಣ ಅಂತ ಅಡ್ವೋಕೇಟ್ ಇದ್ರು. ಅವ್ರ ಮನೆಗೂ ಊಟಕ್ಕೆ ಹೋಗ್ತಾ ಇದ್ದೆ.

- **ಟೆಕ್ಸ್ಟ್ ಬುಕ್ಸ್, ನೋಟ್ ಬುಕ್ಸ್‌ಗಳಿಗೆಲ್ಲಾ ಏನು ಮಾಡ್ತಿದ್ರಿ?**

ಟೆಕ್ಸ್ಟ್ ಬುಕ್ಕುಗಳು ನಾವೆಲ್ಲ ಕೊಂಡುಕೊಳ್ಳಲೇ ಇಲ್ಲ. ಎಲ್ಲ ಹಳೇವು ಇರ್‍ತಿದ್ವಲ್ಲ, ಬೇರೆ ಹುಡುಗರದು. ಆದರೆ ನಮಗೆ ಒಳ್ಳೆ ಸ್ನೇಹಿತರು ಇರ್‍ತಾ ಇದ್ರು. ಬಾಲಸುಬ್ರಹ್ಮಣ್ಯ ಅಂತ. ಅವನು ದೊಡ್ಡ ಎಕಾನಮಿಸ್ಟ್. ಅವನು ಲೆಸ್ಟರ್ ಯೂನಿವರ್ಸಿಟೀಲಿ ಪ್ರೊಫೆಸರೋ ಏನೋ ಆಗಿರಬೇಕು. ಅವನು ನನ್ನ ಕ್ಲಾಸಲ್ಲಿದ್ದ. ಅವನ ಹತ್ರ ಎಲ್ಲಾ ಪುಸ್ತಕಗಳೂ ಇರ್‍ತಾ ಇತ್ತು. ಅವನು ನಮ್ಮ ಚನ್ನಪ್ಪಯ್ಯನ ಛತ್ರಕ್ಕೆ ಬರೋನು. ಬೇಕಾದ ಪುಸ್ತಕಾನೆಲ್ಲ ಅವನು ಕೊಡೋನು. ಹಂ.ಪ. ನಾಗರಾಜಯ್ಯ, ಕಮಲಮ್ಮ, ಶಂಕರಯ್ಯ ಎಲ್ಲಾ ನಮ್‌ಜೊತೆ ತುಮಕೂರಲ್ಲೇ ಓದ್ದೋರು.

- **ಆವಾಗ್ಲೂನು ಈ ಆರೆಸ್ಸೆಸ್, ಸೇವಾದಳ ಇತ್ತಾ?**

ಆರೆಸ್ಸೆಸ್ ಇತ್ತು. ಈ ಎಂ.ಸಿ. ಜಯದೇವ್ ಇದಾರಲ್ಲ-ಅವರು ಈಗಲೂ ಆರೆಸ್ಸೆಸ್ ಲೀಡರ್-ಅವ್ರು ಚನ್ನಪ್ಪಯ್ಯನ ಛತ್ರದಲ್ಲಿ ಬಾಡಿಗೆಗೆ ಇದ್ರು. ನಾವು ಈ ಜಯದೇವನ್ನ ನೋಡೋಕೆ ಹೋಗ್ತಿದ್ವಿ.

- **ಸರ್ ನಿಮಗೆ ಆವಾಗ ಆರೆಸ್ಸೆಸ್ ವಿರುದ್ಧವಾಗಿ ವಿಶೇಷವಾದ ಅನಿಸಿಕೆಗಳೇನೂ ಇರ್ಲಿಲ್ಲ?**

ಇಲ್ಲ ವಿರೋಧವಾಗೂ ಇರ್ಲಿಲ್ಲ, ಪರವಾಗೂ ಇರ್ಲಿಲ್ಲ.

- **ನೀವು ಖಾಕಿ ಚಡ್ಡಿ ಹಾಕ್ಕೊಂಡು ಹೋಗ್ತಾ ಇದ್ರ.**

ಇಲ್ಲ. ನಮಗೆ ಖಾಕಿ ಬಟ್ಟೆ ಯಾವಾಗ ಬೇಕಾಗೋದು ಅಂದ್ರೆ ವಾರಕ್ಕೊಂದು ಸಾರಿ ಡ್ರಿಲ್ ಇರ್‍ತಾ ಇತ್ತು ಕಾಲೇಜಲ್ಲಿ.... ಮಾಗಡಿಯಲ್ಲಿ ಸೇವಾದಳಾನೂ ಇರ್‍ತಿತ್ತು. ಮರಿಗಂಗಣ್ಣ ಇದ್ದಿದ್ರಿಂದ ನಾವು ಸೇವಾದಳಕ್ಕೂ ಹೋಗ್ತಾ ಇದ್ವಿ. ಆ ಮರಿಗಂಗಣ್ಣ ತುಂಬ ಒಳ್ಳೆ ಮನುಷ್ಯ. ಅವರಿಗೋಸ್ಕರ ಹೋಗ್ತಾ ಇದ್ವಿ. ಭಜನೆ ಹೇಳ್ಕೊಡೋದು, ಏನೇನೋ ಮಾಡೋರು. ತುಮಕೂರಿನಲ್ಲಿ ಸೇವಾದಳ ಇತ್ತೋ ಇಲ್ಲವೋ ಗೊತ್ತಿಲ್ಲ.

- **ಸರ್ ನೀವು ಓದೋ ಗೀಳು ಅನ್ನೋದನ್ನು ಅಲ್ಲಿಂದಲೇ ಶುರು ಮಾಡ್ಕೊಂಡ್ರ?**

ನಾವು ಇಂಟರ್‌ಮೀಡಿಯೆಟ್‌ನಲ್ಲಿಯೂ ಟೆಕ್ಸ್ಟ್‌ಬುಕ್‌ಗಳನ್ನೂ ಸರಿಯಾಗಿ ಓದ್ಲಿಲ್ಲ. ನಿಜ ಹೇಳ್ಬೇಕೆಂದರೆ ನಾನು ಇಂಟರ್‌ಮೀಡಿಯೆಟ್ ಪಾಸಾಗಿದ್ದೇ ಒಂದು ದೊಡ್ಡ ಮಿರಾಕಲ್.

- **ನೀವು ಮೈಸೂರಿಗೆ ಓದೋಕೆ ಬಂದದ್ದು ಹೇಗೆ?**

ನನಗೆ ಇಂಟರ್‌ಮೀಡಿಯೆಟ್ ಆದಮೇಲೆ ಸಂಸ್ಕೃತಾನೇ ಓದೋಣ ಅಂತ ಐಡಿಯಾ ಇತ್ತು. ಹರಸಾಹಸ ಮಾಡಿ ಮೈಸೂರಿನ ಮಹಾರಾಜ ಕಾಲೇಜಲ್ಲಿ ಸಂಸ್ಕೃತ ಆನರ್ಸ್‌ಗೆ ಸೇರಿಕೊಂಡೆ. ನಮ್ಮಪ್ಪನೂ ಮೈಸೂರಿಗೆ ಬಂದು ನನ್ನೊತೆ ಫ್ರೀ ಹಾಸ್ಟೆಲ್‌ಗಾಗಿ ಅಲೆದಾಡಿದರು. ಕೊನೆಗೆ ಸಿಕ್ಕಿದ್ದು ಅನಾಥಾಲಯದಲ್ಲಿ. ಅದೂ ಪೂರ್ತಿಯಲ್ಲ, ಏನೋ ಒಂಥರಾ ಅರೇಂಜ್‌ಮೆಂಟ್. ಮೊದಲು ರೂಮು ಕೊಡ್ತೀವಿ, ಇದ್ಕೋ; ಹೊರಗೆಲ್ಲಾದರೂ ಊಟ ಮಾಡಿಕೋ ಅಂದರು. ಆಮೇಲೆ ಒಂದು ಮೂರು ದಿನ ಅನಾಥಾಲಯದಲ್ಲಿ ಊಟ ಮಾಡ್ಕೋ ಅಂತಾನು ಪರ್ಮಿಶನ್ ಕೊಟ್ಟರು. ಇರೋಕೆ ಜಾಗ ಸಿಕ್ಕಿದ್ರೆ ಆಮೇಲಿಂದ ಏನಾದರೂ ಆಗತ್ತೆ ಅಂತ ಸೇರ್‍ಕೊಂಡು, ವಾರಾನ್ನ ಗೀರಾನ್ನ ಮಾಡೊಂಡಿದ್ದೆ, ಒಂದು ವರ್ಷ. ಮಾರನೆಯ ವರ್ಷದ ಹೊತ್ತಿಗೆ ಅನಾಥಾಲಯದಲ್ಲಿ ನಾನಾಗ್ಲೆ ಭಾಳ ಪ್ರಸಿದ್ಧಿ ಆಗಿಬಿಟ್ಟಿದ್ದೆ!

- **ಯಾವ ಥರ?**

ಯಾವ ಥರ ಅಂದ್ರೆ ಹುಡುಗರೆಲ್ಲ ಸೇರ್‍ಕೊಂಡು ಸಾಹಿತ್ಯ ಸಂಘದಲ್ಲಿ ಏನೋ ಮಾಡೋದು. ಬೇರೆ ಹುಡುಗರಿಗಿಂತ ಹೆಚ್ಚಾಗಿ ಓಡಾಡೋದು, ಜಗಳಾ ಮಾಡೋದು. ಉದಾಹರಣೆಗೆ, ಯಾರೋ ವಾರ್ಡನ್ ಬಂದು ಇವತ್ತು ಯಾರೋ ಕಸ ಗುಡಿಸಿಲ್ಲ ಅಂತ ಬೈಯ್ತಾರೆ. ನಾವು ಆಗ 'ಇರ್ಲಿ ಬಿಡಿ ಸಾರ್, ಇವತ್ತೊಂದು ದಿನ ಗುಡಿಸದೆ ಇದ್ರೆ ಏನೂ ಆಗಲ್ಲ' ಅಂತೇನೋ ಹೇಳೋದು. ಬೇರೆಯವ್ರು ಹೇಳ್ತಿರಲಿಲ್ಲ. ನಾನು ಹೇಳ್ತಿದ್ದೆ ಅಷ್ಟೆ.

- **ಆನರ್ಸ್‌ನಲ್ಲಿ ನಿಮಗೆ ಇಷ್ಟವಾದ ಮೇಷ್ಟ್ರು ಯಾರಾಗಿದ್ರು?**

ಇಷ್ಟವಾದ ಮೇಷ್ಟ್ರು ನನಗೆ ಫಸ್ಟ್ ಆನರ್ಸಿನಲ್ಲಿ ಒಬ್ಬರು ತಿರುನಾರಾಯಣ ಅಯ್ಯಂಗಾರ್ ಅಂತ. ಬಹಳ ಒಳ್ಳೇ ಮೇಷ್ಟ್ರು.

- **ಏನು ಪಾಠ ಮಾಡ್ತಿದ್ರು?**
ಅವರು ನಮ್ಗೆ ಪಾಲಿ, ಪ್ರಾಕೃತ ಹೇಳ್ಕೊಡ್ತಿದ್ರು. ಅವರ್ಗೆ ಪಾಲಿ ಅಷ್ಟೊಂದು ಚೆನ್ನಾಗಿ ಬರ್ತಿರಲಿಲ್ಲ. ಲೇವಡಿ ಮಾಡೋರು. ಸಂಸ್ಕೃತಾನ ತಪ್ಪುತಪ್ಪು ಮಾತಾಡಿದ್ರೆ ಅದೇ ಪಾಲಿ ಕಣಯ್ಯ ಅನ್ನೋರು.

- **ಆ ಸಂದರ್ಭದಲ್ಲಿನ ಆಸಕ್ತಿಗಳೇನು ?**
ನಾವು ಆಗ ಪಾಠಗಳನ್ನೇ ಸರಿಯಾಗಿ ಕೇಳ್ತಿರಲಿಲ್ಲ. ನಾವೆಲ್ಲ ಎಂಥ ಹುಡುಗ್ರು ಅಂದ್ರೆ, ಕಾಲೇಜಿಗೆ ಚಕ್ಕರ್ ಹಾಕ್ತಾ ಇದ್ವಿ. ಆವಾಗ ಕಾಲೇಜಿಗೆ ಚಕ್ಕರ್ ಹೊಡೆಯೋದು ಭಾಳ ಸುಲಭ ಇತ್ತು.

- **ಏನ್ ಮಾಡ್ತಾ ಇದ್ರಿ ಚಕ್ಕರ್ ಹೊಡೆದು?**
ಏನಿಲ್ಲ, ಮೈಸೂರೆಲ್ಲ ಅಲೀತಾ ಇದ್ವಿ. ಚಾಮುಂಡಿ ಬೆಟ್ಟಕ್ಕೆ ಹೋಗ್ತಾ ಇದ್ವಿ. ಅನಂತಕೃಷ್ಣಮಾಚಾರ್ರು ನಮ್ಮ ಜೊತೇನೇ ಇದ್ರು. ನಾವು, ಅವ್ರು ಎಲ್ಲಾ ಹೋಗ್ತಾ ಇದ್ವಿ.

- **ಆಮೇಲೆ ಸಿನಿಮಾಗಿನಿಮಾಗೆ ಹೋಗ್ತಿದ್ರ?**
ಇಲ್ಲ, ಸಿನಿಮಾಕ್ಕೆ ಹೋಗಬೇಕಾದ್ರೆ ದುಡ್ಡು ಬೇಕಲ್ಲ. ಬೇರೆಯವರು ಕೆಲವು ಸಾರಿ ಕರ್ಕೊಂಡು ಹೋಗಿದಾರೆ. ರಾಮರಾವ್ ಅಂತ ಒಬ್ರು ಇದ್ದರು. ಅವರು ಕರ್ಕೊಂಡು ಹೋಗೋರು.

- **ಯಾವ ಯಾವ ಸಿನಿಮಾ ನೋಡಿದ್ರಿ, ಏನಾದ್ರೂ ನೆನಪಿದೆಯೇ?**
ಇಲ್ಲ, ಅಷ್ಟೊಂದು ನೆನಪಿಲ್ಲ. 'ದೋ ಆಂಖೆ ಬಾರಾ ಹಾತ್' ಬೆಂಗಳೂರಲ್ಲಿ A.G.'s ಆಪೀಸಿನಲ್ಲಿ ಕೆಲಸದಲ್ಲಿದ್ದಾಗ ನೋಡಿದ್ದು ಜ್ಞಾಪಕ ಇದೆ. 'ಆವಾರ' ನೋಡಿದ್ದು ಜ್ಞಾಪಕ ಇಲ್ಲ. 'ಝುನಕ್ ಝುನಕ್ ಪಾಯಲ್ ಬಾಜೆ' 'ಬೈಜೂ ಬಾವರಾ' - ಎಲ್ಲಾ ನೋಡಿದ್ದು ನೆನಪಿದೆ. ಆಮೇಲೆ ಈ 'ದೋ ಬಿಘಾ ಜಮೀನ್' ಮೈಸೂರಲ್ಲಿ ನೋಡಿದ್ದೀನಿ.

- **ನಿಮ್ಮ ಕಾಸ್ಟ್ಯೂಮ್ಸ್ ಏನಿತ್ತು ಸಾರ್ ಆವಾಗ?**
ಏನಿಲ್ಲ. ಇದೇ ಪಂಚೆ, ಶರಟು. ಈಗ ಸ್ವಲ್ಪ ಒಗೆದಿರೋದು ಹಾಕ್ಕೋತೀನಿ, ಆಗ ಸ್ವಲ್ಪ ಕೊಳೆಯಾಗಿರೋದು ಹಾಕ್ಕೊಳ್ತಿದ್ದೆ.

- **ಮತ್ತೆ ಈ ಚಡ್ಡಿ ಎಲ್ಲ, ಡ್ರಿಲ್‌ಗೆಲ್ಲ ಬೇಕಾಗಿತ್ತಲ್ಲ..?**
ನಮ್ಮಣ್ಣನ ಚಡ್ಡೀನೆ ನಾನೂ ಹಾಕ್ಕೋತಿದ್ದೆ. ನಮ್ಮ ಡ್ರಿಲ್ ಮೇಷ್ಟ್ರು ಮಲ್ಲೇಶಪ್ಪ 'ಏಯ್ ಯಾರದ್ದೋ ಇದು ಚಡ್ಡಿ' ಅಂತಂದ್ರೆ, ಸುಮ್ನಿರಿ ಸಾರ್ ವಾರಕ್ಕೆ ಎರಡು ದಿನ ಯಾವ್ದಾದ್ರೆ ಏನು ಅಂತಿದ್ದೆ.

- **ಸರ್ ಆಗ ಕಂಪ್ನಿ ನಾಟಕ ಇರ್ತಿತ್ತಲ್ಲ, ಏನಾದ್ರೂ ನೋಡಿದ್ರಾ?**
ನೋಡಿದ್ದೀನಿ ನೋಡಿದ್ದೀನಿ. ಗುಬ್ಬಿ ಕಂಪ್ನಿ ಇತ್ತು. ತುಮಕೂರ್ನಲ್ಲಿ ಕಂಪ್ನಿ ಯಜಮಾನನ್ನ ನೋಡಿ 'ಸರ್ ನಮ್ಮ ಹತ್ರ ದುಡ್ಡಿಲ್ಲ' ಅಂದ್ರೆ, 'ಏಯ್ ಹೋಗ್ರೋ, ಒಳಗೆ ಕುತ್ಕೊಳ್ರೋ

ಅನ್ನೋರು'. ಆಗ ನಾನು ಸದಾರಾಮೆ ನೋಡಿದ್ದೀನಿ. ಮೈಸೂರ್ನಲ್ಲಿ ನಮ್ ಸುಬ್ರಹ್ಮಣ್ಯ ನಾನು ಎಲ್ಲ ಬೇಕಾದಷ್ಟು ನಾಟಕ ನೋಡಿದ್ವಿ. ಗುಬ್ಬಿ ಕಂಪ್ನಿ ಇತ್ತು, ಯೋಗಾನಂದ ಕಂಪ್ನಿ ಇತ್ತು. ಆಗ ಹಿರಣ್ಣಯ್ಯನ ಕಂಪ್ನಿ ಶುರುವಾಗಿತ್ತು.

- **ನೀವು ಎರಡನೇ ಆನರ್ಸ್‌ಗೆ ಬರೋ ಹೊತ್ಗೆ ನಿಮ್ಮ ಆಸಕ್ತಿಗಳೆಲ್ಲ ಕುದ್ರರೋಕೆ ಶುರುವಾಯ್ತು ಅನ್ನಿ.**

ಹಾಂ. ನಾವು ಸೆಕೆಂಡ್ ಆನರ್ಸ್‌ಗೆ ಬರೋ ಹೊತ್ಗೆ ನಮ್ಮ ಆಸಕ್ತಿಗಳು ಕುದುರೋಕೆ ಶುರುವಾಯ್ತು. ಮೈಸೂರ್ಲ್ಲೂ ಸ್ವಲ್ಪ ಒಗ್ಗಿಕೊಂಡ್ವಿ. ಕಾಲೇಜ್ನಲ್ಲಿ ಅಷ್ಟು ಗೊತ್ತಿಲ್ದೆ ಇದ್ರೂನು, ನಮ್ಮ ಮೇಷ್ಟ್ರುಗಳಿಗೆ ಗೊತ್ತಿದ್ವಿ.

- **ಮೈಸೂರಲ್ಲಿ ನಿಮ್ಮ ಆಸಕ್ತಿಗಳು ಆ ಕಡೆ ಹೋಗೋದಕ್ಕೆ ಏನೆಲ್ಲಾ ಕಾರಣಾ ಆಗಿತ್ತು?**

ನಮ್ಮ ಹಾಸ್ಟೆಲ್‌ನಲ್ಲಿ ಒಂದು ಸಾಹಿತ್ಯಸಂಘ ಇತ್ತು. ಎಸ್.ಎಲ್. ಭೈರಪ್ಪ ಕೂಡಾ ನಮ್ಮ ಹಾಸ್ಟೆಲ್‌ನಲ್ಲಿ ಇದ್ದರು. ಅವರು ನಮಗಿಂತ ಒಂದು ವರ್ಷ ಸೀನಿಯರ್. ಕೃಷ್ಣಮೂರ್ತಿ ರಾವ್ ಅಂತಾ ಒಬ್ಬರಿದ್ದರು. ಸಿ.ಎನ್. ರಾಮಚಂದ್ರನ್ ಅವರು ಶೇಷಣ್ಣ ಹಾಸ್ಟೆಲ್‌ನಲ್ಲಿದ್ದರು. ನಾವೆಲ್ಲರು ಸಾಕಷ್ಟು ಪ್ರೋಗ್ರಾಮ್ಸ್ ಮಾಡುತ್ತಾ ಇದ್ದಿವಿ. ಚರ್ಚೆಗಳು ಇರ್ತಿದ್ದವು. ಹಾಗಾಗಿ ಆ ಮೂಲಕ ನಮ್ಮ ಆಸಕ್ತಿಗಳು ರ್ಯಾಷನಲ್ ಆಗಿ ಬೆಳೆದವು.

- **ಹದಿಹರೆಯ ಅನ್ನುವುದು ವಿಚಿತ್ರ ರೀತಿಯ ವಿಕ್ಷಿಪ್ತತೆ, ಸೂಕ್ಷ್ಮಜ್ಞತೆಗಳ ಕಾಲ. ಇಂಥ ಸಂದರ್ಭದಲ್ಲಿ ಮಾರ್ಕ್ಸ್‌ವಾದದ ಸೆಳೆತಕ್ಕೆ ಒಳಗಾಗುವವರು ನಿಜಕ್ಕೂ ತುಂಬಾ ಹೆಚ್ಚಿನ ಭಾವತೀವ್ರತೆಗೆ ಪಕ್ಕಾಗುವವರಾಗಿರುತ್ತಾರೆ. ಆ ಸ್ಥಿತಿಯಲ್ಲಿ ನಿಮ್ಮ ಅಂತಃಕರಣವನ್ನು ಅಲುಗಾಡಿಸಿಬಿಟ್ಟ ಯಾವುದಾದರೂ ಎಪಿಫೆನಿಕ್ ಅನುಭವ ನಿಮ್ಮನ್ನು ಮಾರ್ಕ್ಸ್‌ವಾದದ ಕಡೆಗೆ ಸೆಳೆಯಿತೇ?**

ಮೈಸೂರ್‌ನಲ್ಲಿ ಆ ತರಹದ ಅನುಭವ ಏನೂ ಆಗಲಿಲ್ಲ. ಆ ತರಹದ್ದು ಕೆಂಪಸಾಗರದಲ್ಲಿ ಆಗಿರಬಹುದು. ಉದಾಹರಣೆಗೆ, ಬಸಮ್ಮನ ಪ್ರಸಂಗ. ಬಹಳಷ್ಟು ವರ್ಷಗಳ ಕಾಲ ಅದು ಕಾಡ್ತಾ ಇತ್ತು. ನಾನು ಎಂ.ಎ. ಪಾಸ್ ಮಾಡಿದ ಮೇಲೂ ಆಕೆ ಹತ್ತಿರ ಆ ವಿಷಯ ಪ್ರಸ್ತಾಪ ಮಾಡಿದ್ದೀನಿ. ಆಯಮ್ಮಾ ಅಯ್ಯೋ ಆಗ್ಹೋಯ್ತು ಬಿಡಿ ಅಯ್ನೋರೆ. ಅದನ್ನ ಎಷ್ಟು ಸಲ ಹೇಳ್ತೀರಿ ಅಂದಿದಾಳೆ.

ಆಕೆ ಸಾಮಾನ್ಯ ಕುಟುಂಬದವಳು. ನರಸಣ್ಣನ ಹೆಂಡತಿ. ಊರಿನ ಪಟೇಲರ ಮನೆಯ ಎದುರಿನಲ್ಲೇ ಅವರ ಮನೆ. ಪಟೇಲರ ಮನೆಯಿಂದ ಮೂರನೆಯ ಮನೆ ನಮ್ಮದು. ಅದೂ ಪಟೇಲರು ನಮ್ಮ ತಂದೆಗೆ ಕೊಟ್ಟಿದ್ದದ್ದು - ಯಾವ ಬಾಡಿಗೆಯೂ ಇಲ್ಲದೆ, ಇಪ್ಪತ್ತಕ್ಕೂ ಹೆಚ್ಚು ವರ್ಷ ಕಾಲ. ಬಸಮ್ಮ ಒಂದು ದಿನ ಪಟೇಲರ ಸೊಸೆಯ ಬಗ್ಗೆ ಏನೋ ಪುಕಾರು ಹುಟ್ಟಿಸಿದ್ದರಂತೆ. ನರಸಣ್ಣ ಊರಲ್ಲಿರಲಿಲ್ಲ. ಅಂದು ದೊಡ್ಡ ರಾದ್ಧಾಂತ. ಸಂಜೆ ಪಟೇಲರು ಜಗಲಿ ಮೇಲೆ ಕೂತು ಪಂಚಾಯಿತಿ ನಡೆಸಿದರು. ಸಾಕ್ಷಿಯೂ ಇಲ್ಲ, ಎಂಥದೂ ಇಲ್ಲ. ಬಹಳ ಜನ ನೆರೆದಿದ್ದರು. ಬಸಮ್ಮನ ಪರವಾಗಿ ಒಂದೇ ಒಂದು ದನಿಯೂ

ಇಲ್ಲ. ಪಟೇಲರ ತೀರ್ಮಾನದಂತೆ ರಂಗಮ್ಮ ಎಂಬ ಮುದುಕಿ ಜನರೆಲ್ಲರ ಎದುರಿಗೆ ಬಸಮ್ಮನಿಗೆ ಪೊರಕೆ ತೆಗೆದುಕೊಂಡು ರಪ-ರಪ ಬಡಿದಳು. ತನಗೆ ಸುಸ್ತಾಗುವವರೆಗೆ, ಪಟೇಲರು ಸಾಕು ಎನ್ನುವವರೆಗೆ. ನನ್ನಂಥವರಿಗೆ ಕೋಪ, ಅಸಮಾಧಾನ. ಬಡವರ ಹೀನಾಯ ಸ್ಥಿತಿ, ಹೀಗೇಕೆ ಎಂಬ ಭಾವನೆ. ನರಸಣ್ಣ ವಾಪಸ್ಸಾದ ಮೇಲೆ ಆತನೂ ಪ್ರಶ್ನೆ ಮಾಡಲಿಲ್ಲ. ಇಂದಿಗೂ ಆ ಅನ್ಯಾಯ ನೆನೆದಾಗ ಅಸಹಾಯಕತೆಯ ಬಗ್ಗೆ ಬೇಸರ ಬರುತ್ತದೆ. ಅದೇ ಊರಲ್ಲಿ ಇನ್ನೊಂದು ಕುಟುಂಬ. ಅವನಿಗೆ ಇಬ್ಬರು ಹೆಂಡತಿಯರು. ದೊಡ್ಡವಳನ್ನು ಎತ್ತಿನ ಜೊತೆ ಹೊಲ ಉಳಲು ನೊಗಕ್ಕೆ ಕಟ್ಟಿ ಎತ್ತಿಗೆ ಬಾರುಕೋಲಿನಲ್ಲಿ ಹೊಡೆಯುವಂತೆ ಅವಳಿಗೂ ಹೊಡೆಯುತ್ತಿದ್ದ. ಚಿಕ್ಕ ಹೆಂಡತಿ ಕೂರಿಗೆ ಹಿಡಿದಿರುತ್ತಿದ್ದಳು. ಇದೇನು ಮನುಷ್ಯ ಸಂಬಂಧ ಎಂಬ ಕೌತುಕ ಬಾಧಿಸುತ್ತಿತ್ತು.

- **ಸಮಾರಂಭಗಳಿಗೆ ನೀವು ಯಾರ್ಯಾರನ್ನ ಕರೆಸ್ತಿದ್ದಿರಿ?**

ತುಂಬಾ ಜನ ಕರಸ್ತಾ ಇದ್ದಿವಿ. ಉದಾಹರಣೆಗೆ ಅ.ನ. ಕೃಷ್ಣರಾಯರನ್ನ ಕರೆಸಿದ್ದಿವಿ. ಅವರು ಒಂದು ಭಾಷಣದಲ್ಲಿ ಬೆನ್‌ಜಾನ್ಸನ್‌ನ ಯಾರ್ರೀ ಓದ್ತಾರೆ ಇವತ್ತು. ಲಿಟರೇಚರ್ ಅಂದರೆ ಶೇಕ್ಸ್‌ಪಿಯರ್ ಓದಬೇಕ್ರಿ ಅಂತ ಹೇಳಿದ್ದು ಚೆನ್ನಾಗಿ ಜ್ಞಾಪಕಾ ಇದೆ. ನಮ್ಮ ಹಾಸ್ಟೆಲ್‌ನ ಸಂಸ್ಥಾಪಕರು ತಾತಯ್ಯನವರು ಅಂತ. ಅವರ ದಿನಾಚರಣೆ ಮಾಡ್ತಾ ಇದ್ದಿವಿ. ಅದಕ್ಕೆ ಅ.ನ.ಕೃ. ಕರಿಸಿದ್ದಿವಿ.

ಒಂದು ಸಾರೆ ಅದ್ಯಾವುದಕ್ಕೋ ಮೈಸೂರಿಗೆ ವಿ.ಕೆ. ಕೃಷ್ಣ ಮೆನನ್ ಬಂದಿದ್ರು. ಆತ ಆವಾಗ ವಿದೇಶಾಂಗ ಮಂತ್ರಿ. ಆತನೂ ಕಾಲೇಜಿಗೆ ಬಂದು ಭಾಷಣ ಮಾಡಿದ್ದರು. ಆಮೇಲೆ ಆರ್ನಾಲ್ಡ್ ಟಾಯನ್ಬಿ. ಈತ ಹಿಸ್ಟಾರಿಯನ್. ಇವನ ಇಂಟೋನೇಶನ್ ನಮಗೆ ಸರಿಯಾಗಿ ತಿಳೀತಾ ಇರ್ಲಿಲ್ಲ. ಆತನೂ ಭಾಷಣ ಮಾಡಿದ. ಒಂದು ಸಾರೆ ಡಿ.ಡಿ. ಕೊಸಾಂಬಿ ಕೂಡ ಬಂದಿದ್ರು. ಅವರು ಖಂಡೋಬಾ, ಮಾರಮ್ಮ ಏನೇನೋ ಮಾತ್ನಾಡಿದ್ರು. ಅನಾಥಾಲಯಕ್ಕೆ ಯಾಮುನಾಚಾರ್ಯ, ಗಣಿತಶಾಸ್ತ್ರಜ್ಞ ಎಂ.ವಿ. ಕೃಷ್ಣರಾವ್, ರಾಜಾರಾವ್, ನರಸಿಂಹನ್, ಸುಬ್ಬರಾವ್ ಹೀಗೆ ಬಹಳ ಮಂದಿ ಬರುತ್ತಿದ್ದರು.

- **ನಿಮ್ಮ ಮೇಲೆ ಪ್ರಭಾವ ಬೀರಿದ ಸ್ನೇಹಿತರ ವಿವರ ಸ್ವಲ್ಪ ಹೇಳಿ**

ಬೇಕಾದಷ್ಟು ಜನ ಸ್ನೇಹಿತರಿದ್ರು. ಈಗಾಗಲೇ ಕೆಲವ್ರನ್ನ ಪ್ರಸ್ತಾಪ ಮಾಡಿದ್ದೀನಿ. ವಿ.ಎಸ್. ನಾಗರಾಜರಾವ್, ಅನಂತಕೃಷ್ಣಮಾಚಾರ್, ರಾಮರಾವ್, ಕೃಷ್ಣಮೂರ್ತಿ ರಾವ್, ಪಟ್ಟಾಭಿ, ಮುಂತಾದವರು. ಆಮೇಲೆ ಡಿ.ಆರ್.ಕೆ. ಪೀಪಲ್ಸ್ ಬುಕ್ ಹೌಸ್‌ನವರು. ಅವರೂ ಪುಸ್ತಕ ಕೊಡೋವ್ರು ಓದೋದಕ್ಕೆ. ಪಾರ್ಥಸಾರಥಿ, ನಾರಾಯಣ, ಚನ್ನಕೇಶವ, ಸೀತಾರಾಮು, ಸುಬ್ರಹ್ಮಣ್ಯ ಹೀಗೆ ಹತ್ತಾರು ಜನ ಸ್ನೇಹಿತರು.

- **1950ರ ಕಾಲದಲ್ಲಿ ನೆಹರೂವಾದ ಮತ್ತು ಕೈಗಾರಿಕೀಕರಣ ಹಾಗೂ ಗಾಂಧಿವಾದ ಮತ್ತು ಗ್ರಾಮಸ್ವರಾಜ್ಯಗಳ ನಡುವೆ ಸಂಘರ್ಷ ಇತ್ತಲ್ಲ ಅದು ನಿಮ್ಮ ಮೇಲೆ ಪ್ರಭಾವ ಬೀರಲಿಲ್ವಾ?**

ನಾವೆಲ್ಲರೂ ನೆಹರೂವಿಯನ್ ಧಾಟಿಯಲ್ಲೇ ಆಲೋಚನೆ ಮಾಡ್ತಾ ಇದ್ವಿ. ಅದಕ್ಕಿಂತ

ಹೆಚ್ಚಾಗಿ ಆ ವಯಸ್ಸಿನಲ್ಲಿ ಸೈದ್ಧಾಂತಿಕವಾಗಿ ನೆಹರೂವಿಯನ್ ಇಂಡಸ್ಟ್ರಿಯಲೈಜೇಶನ್ ಪಾಲಿಸಿಗೆ ಪರ್ಯಾಯವಾಗಿ ಮತ್ತೊಂದನ್ನ ಯೋಚನೆ ಮಾಡುವ ತಿಳಿವಳಿಕೆ ನಮಗೆ ಅಷ್ಟಾಗಿ ಇರಲಿಲ್ಲ. ಜೋರಾಗಿ ಚರ್ಚೆ ಅಂತೂ ಮಾಡ್ತಾ ಇದ್ವಿ. ನೆಹರೂ ಅಂದರೆ ಆವಾಗ ಯುವಕರಿಗೆ ಹೀರೋ ಇದ್ದಾಗೆ. ಮೈಸೂರಿಗೊಂದ್ಸಾರಿ ಬಂದಿದ್ರು. ಟೌನ್‌ಹಾಲ್ ಮೈದಾನದಲ್ಲಿ ಭಾಷಣ ಮಾಡಿದ್ರು. ಶಿವಮೊಗ್ಗ ಸುಬ್ಬಣ್ಣ ಹಾಡು ಹೇಳಿದ್ರು. ನಾವೆಲ್ಲ ಹೋಗಿದ್ವಿ.

- **ಅನಂತಮೂರ್ತಿ, ಜಿ.ಎಚ್. ನಾಯಕ, ಕೆ.ವಿ. ಸುಬ್ಬಣ್ಣ ಎಲ್ಲಾ ನಿಮ್ಮ ಸಮಕಾಲೀನರು ಅಲ್ವಾ?**

ಇರಬಹುದು, ಆದರೆ ಅವರ ಪರಿಚಯ ನನಗೆ ಇರಲಿಲ್ಲ. ಜಿ.ಎಚ್. ನಾಯಕ ಒಂದು ವರ್ಷ ಜೂನಿಯರ್. ಅವರು ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿದ್ರು. ನಾವು ಅನಾಥಾಲಯದಲ್ಲಿದ್ವಿ. ಅವರಿಗೂ ನಮಗೂ ಸಂಪರ್ಕ ಕಡಿಮೆ. ಅನಾಥಾಲಯದಲ್ಲಿದ್ದವ್ರಿಗೂ ಮಹಾರಾಜದಲ್ಲಿದ್ದವ್ರಿಗೂ ಸ್ವಲ್ಪ ಮೇಲುಕೀಳು ಭಾವನೆ. ಅವರೇನೂ ಹಾಗೆ ಭಾವಿಸ್ದೇ ಇದ್ರೂ ಆ ತರಹದ್ದೊಂದೇನೋ ಫೀಲಿಂಗ್ ನಮಗೆ ಇರ್ತಾ ಇತ್ತು. ಜಿ.ಎಚ್. ನಾಯಕ ಅವರೆಲ್ಲ ಒಳ್ಳೆ ಡಿಬೇಟರ್ಸ್.

- **ಯಾವ ವಿಷಯಗಳ ಬಗ್ಗೆ ಚರ್ಚೆ ಮಾಡ್ತಾ ಇದ್ರಿ?**

ಇಂಡಸ್ಟ್ರಿಯಲೈಸೇಶನ್ ಬಗ್ಗೆ, ಎಕನಾಮಿಕ್ ರೀ ಕನ್ಸ್ಟ್ರಕ್ಷನ್ ಬಗ್ಗೆ, ಫಾರಿನ್ ಪಾಲಿಸಿ ಬಗ್ಗೆ ತುಂಬಾ ಮಾತಾಡ್ತಾ ಇದ್ವಿ. ರಷ್ಯಾ ಜೊತೆ ಸ್ನೇಹ ಮಾಡಬೇಕಾ ಬೇಡವಾ? ಹಿಂದಿ ಚೀನಿ ಭಾಯಿ ಭಾಯಿ ಎಷ್ಟು ಸರಿ ಅಂತೆಲ್ಲ ಚರ್ಚೆ ಮಾಡ್ತಾ ಇದ್ವಿ.

- **ಆವಾಗ ಆರ್.ಎಸ್.ಎಸ್. ಪ್ರಭಾವ ಏನೂ ಇರ್ಲಿಲ್ವ?**

ಇಲ್ಲ ಇಲ್ಲ... ಎಂಥದ್ದೂ ಇಲ್ಲ. ಶೇಷಣ್ಣ ಹಾಸ್ಟೆಲಲ್ಲಿ ಶ್ರೀಪತಿರಾವ್ ಇದ್ದರು. ಆಮೇಲೆ ಅವರು ಪೂನಾಕ್ಕೆ ಹೋಗಿ ದೊಡ್ಡ ಆರ್.ಎಸ್.ಎಸ್. ಲೀಡರ್ ಆದ್ರು. ಆಗಿನ ಕಾಲಕ್ಕೆ ಅವನೇ ಆರೆಸ್ಸೆಸ್ ರಿಪ್ರೆಸೆಂಟೇಟಿವ್. ಬೇರೆ ಯಾರೂ ಇರ್ಲಿಲ್ಲ.

- **ಸರ್ ನೀವು ಮಾರ್ಕ್ಸ್‌ವಾದಿ ಆದದ್ದು ಯಾವಾಗ? ನಿಮ್ಮ ಆಲೋಚನೆಗಳು ಈ ವಾದಕ್ಕೆ ಹೊರಳಿಕೊಂಡ ನಿರ್ದಿಷ್ಟ ಕಾಲವನ್ನು ಹೇಳಲಾಗುತ್ತದೆಯೇ?**

ಹಾಗೆ ಮಾರ್ಕ್ಸ್‌ವಾದಕ್ಕೆ ನಾನು ಹೊರಳಿಕೊಂಡ ಕಾಲವನ್ನು ಹೇಳಲಾಗುವುದಿಲ್ಲ. ಇಂತಹ ಸಮಯದಲ್ಲಿ ನಾನು ಮಾರ್ಕ್ಸ್‌ವಾದಿಯಾದೆ ಎಂದು ಹೇಳಲು ಬರುವುದಿಲ್ಲ. ಆರಂಭದಲ್ಲಿ ನಾನು ಓದುತ್ತಿದ್ದ ಗ್ರಂಥಗಳಲ್ಲಿ ಒಂದು ನಿರ್ದಿಷ್ಟತೆ ಇರಲಿಲ್ಲ. ಟಾಲ್‌ಸ್ಟಾಯ್ ಓದಿದರೆ ಅದನ್ನೇ ಓದ್ತಾ ಇದ್ದೆ. ಡಿಕನ್ಸ್ ಶುರು ಮಾಡಿದರೆ ಅವನನ್ನೇ ಓದ್ತಾ ಇದ್ದೆ. ಮೆಥಾಡಿಕಲ್ ಆಗಿ ಇಂಥದ್ದೇ ಓದಬೇಕು ಅನ್ನುವುದು ಇರಲಿಲ್ಲ. ಮಾರ್ಕ್ಸ್‌ವಾದಿ ಪುಸ್ತಕಗಳನ್ನೇ ಓದ್ತಾ ಇದ್ದೆ ಅಂತ ಏನೂ ಅಲ್ಲ. ಸಾಹಿತ್ಯದ ಜೊತೆಗೆ ಇತಿಹಾಸಾನು ಸಾಕಷ್ಟು ಓದ್ತಾ ಇದ್ದೆ. 1957ರಿಂದ ಅಂದರೆ, ನಾನು ಸೆಕೆಂಡ್ ಆನರ್ಸ್‌ನಲ್ಲಿ ಓದುತ್ತಿದ್ದ ಕಾಲದಿಂದ 1961ರ ವರೆಗೆ ಅಂದರೆ ಎಂ.ಎ. ಮುಗಿಸಿ 'ಎಜಿ'ಸ್ ಆಫೀಸ್‌ನಲ್ಲಿ ಕೆಲಸಕ್ಕೆ ಸೇರಿ ಅನಂತರ

ಒಂದೆರಡು ವರ್ಷಗಳವರಗೆ, ಈ ಪೀರಿಯಡ್ ಏನಿದೆಯಲ್ಲ ಇಲ್ಲಿ ನನ್ನ ಆಲೋಚನೆಗಳು ಮಾರ್ಕ್ಸ್‌ವಾದದ ಕಡೆಗೆ ತಿರುಗಿರಬಹುದು. ನಾನು ಮಾರ್ಕ್ಸ್‌ವಾದಕ್ಕೆ ಸಂಬಂಧಿಸಿದ ಲಿಟರೇಚರ್ ಓದೋಕ್ಕೆ ಆರಂಭಿಸಿದ್ದು ಲೋನಾವಲಾದ ಕೈವಲ್ಯಧಾಮದಲ್ಲಿ ಕೆಲಸದಲ್ಲಿದ್ದಾಗ. ಅಲ್ಲಿ ಕುವಲಯಾನಂದರ ಲೈಬ್ರರಿಯಲ್ಲಿ ಒಳ್ಳೊಳ್ಳೆಯ ಪುಸ್ತಕಗಳಿದ್ದವು. ಲೆನಿನ್‌ನ ಸಮಗ್ರ ಕೃತಿಗಳು ಅಲ್ಲಿದ್ದವು. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿದ್ದಾಗ ಸ್ವಲ್ಪ ಓದಿಕೊಂಡೆ. ಡೇವಿಡ್ ವೈಟ್‌ನ ಲೆನಿನ್ ಜೀವನ ಚರಿತ್ರೆ, ಮಾರ್ಕ್ಸ್‌ವಾದದ ಮೂಲ ಗ್ರಂಥಗಳು, ಮೇರಿಂಗನ ಮಾರ್ಕ್ಸ್ ಜೀವನ ಚರಿತ್ರೆ ಇವನ್ನೆಲ್ಲ ಕೈವಲ್ಯಧಾಮದಲ್ಲೇ ನಾನು ಓದಿದ್ದು.

- **ನೀವು ಯೋಗ ಕಲ್ತದ್ದು ಎಲ್ಲಿ?**

ಮೈಸೂರಿನಲ್ಲಿ ಸ್ವಲ್ಪ, ಅದರಲ್ಲಿ ಶಿಸ್ತು ಇರಲಿಲ್ಲ. ಕೈವಲ್ಯಧಾಮದಲ್ಲಿ ಯೋಗದ ಬಗ್ಗೆ ಒಂದು ಡಿಪ್ಲೊಮಾ ಕೋರ್ಸ್ ಮಾಡಿದೆ. ಇದರ ಜೊತೆಗೆ ಅಲ್ಲೇ 280 ರೂಪಾಯಿ ಸಂಬಳದ ರಿಸರ್ಚ್ ಅಸಿಸ್ಟೆಂಟ್ ಕೆಲಸಾನೂ ಮಾಡ್ತಿದ್ದೆ. ಕೈವಲ್ಯಧಾಮದಲ್ಲಿ ಮೂರು ವರ್ಷ ಇದ್ದೆ. ಕುವಲಯಾನಂದರ ಸಂಪರ್ಕ ಆದದ್ದು ಅಲ್ಲೆ.

- **ಕುವಲಯಾನಂದರ ಬಗ್ಗೆ ಸ್ವಲ್ಪ ಹೇಳಿ.**

ಅವರು ಪ್ರಸಿದ್ಧ ಯೋಗ ಸಂಶೋಧಕರು. ಜೊತೆಗೆ ಸ್ವಯಂ ಉತ್ತಮ ಅಭ್ಯಾಸಿಗಳು. ಇವರು ಬೊಂಬಾಯಿ-ಲೋನಾವಲ ಎರಡೂ ಕಡೆ ಇರ್ತಾ ಇದ್ದರು. ಸಾಂಪ್ರದಾಯಿಕವಾಗಿ ಸಂನ್ಯಾಸ ಸ್ವೀಕರಿಸಿದರು. ಬೊಂಬಾಯಿಯ ಮರಿನ್‌ಡ್ರೈವ್‌ನಲ್ಲಿಇವರ್ದು ಇನ್ನೊಂದು ಸಂಸ್ಥೆ ಇತ್ತು. ಇತಿಹಾಸ, ಸಂಸ್ಕೃತ, ಜೈನಮತ, ಬೌದ್ಧಮತ ಎಲ್ಲ ತಿಳ್ಕೊಂಡಿದ್ರು. ನಾನು ಡಿ.ಡಿ. ಕೊಸಾಂಬಿನ ಭೇಟಿ ಮಾಡಿದ್ದು ಕುವಲಯಾನಂದರ ಜೊತೆಯವರಾದ ಆರ್.ಡಿ. ವಾಡೇಕರ್ ಅವರೊಡನೆ.

- **ನೀವು ಒಂದು ಕಡೆ ಯೋಗಾಭ್ಯಾಸ ಮಾಡ್ತಾ ಇದ್ರಿ. ಇದೊಂದು ವೈದಿಕ ಜ್ಞಾನದ ಸೆಳೆತ, ಇನ್ನೊಂದ್ಕಡೆ ಮಾರ್ಕ್ಸ್‌ವಾದಿ ವಿಚಾರಗಳನ್ನ ಓದ್ತಾ ಇದ್ರಿ. ಇವೆರಡಕ್ಕೂ ವೈರುಧ್ಯ ಅಂತಾ ಅನ್ನಿಸ್ತಾ ಇರಲಿಲ್ವೇ?**

ಇಲ್ಲ. ಯೋಗ ಮಾಡೋದಕ್ಕೂ ಮಾರ್ಕ್ಸ್‌ವಾದ ಓದೋದಕ್ಕೂ ಏನೂ ಸಂಬಂಧ ಇಲ್ಲ. ವೈರುಧ್ಯಾನೂ ಇಲ್ಲ. ಅಲ್ಲದೆ ನಾನಲ್ಲಿಗೆ ಹೋಗಿದ್ದದ್ದು ಸಂಬಳದ ಕೆಲಸಕ್ಕೆ. ಅಲ್ಲಿ ನನಗೆ ಯೋಗದ ಎನ್‌ಸೈಕ್ಲೋಪಿಡಿಯಾ ಮಾಡುವ ಕೆಲಸ ವಹಿಸಿದ್ರು. ಪತಂಜಲಿಯ ವ್ಯಾಸಭಾಷ್ಯ, ವಾಚಸ್ಪತಿಯ ಭಾಷ್ಯ ಇವನ್ನೆಲ್ಲಾ ಓದ್ಬೇಕಾಗಿತ್ತು. ಈ ಪಠ್ಯಗಳನ್ನು ಓದಿದ್ದರಿಂದ ನನ್ನ ವಿಚಾರಧಾರೆಗೆ ಧಕ್ಕೆಯೇನೂ ಆಗ್ಲಿಲ್ಲ. ಸಂಬಳಕ್ಕೆ ಮಾಡುವ ಕೆಲಸದ ಸಮಯ ಬಿಟ್ಟು ಬೇರೆ ವೇಳೆಯಲ್ಲಿ ನನಗೆ ಇಷ್ಟ ಬಂದದ್ದನ್ನ ನಾನು ಓದಿಕೊಳ್ತಿದ್ದೆ.

- **ನೀವು ಇಂಗ್ಲಿಷ್ ಎಂ.ಎ. ಮಾಡಿದ್ದು ಆ ಸಂದರ್ಭದಲ್ಲೇನಾ?**

ನಾನು ಎಕ್ಸ್‌ಟರ್ನಲ್ ಆಗಿ ಇಂಗ್ಲಿಷ್ ಎಂ.ಎ. ಮಾಡ್ದೆ. ಅಲ್ಲಿಗೆ ಹೋಗುವ ಹೊತ್ತಿಗೆ

ಸಂಸ್ಕೃತ ಎಂ.ಎ. ಮುಗಿಸಿ, ಪಿಎಚ್.ಡಿ. ಥೀಸಿಸ್ ಬರೆದು ಮುಗಿಸಿ, ವಿಶ್ವವಿದ್ಯಾಲಯಕ್ಕೆ ಕೊಟ್ಟಿದ್ದೆ. ಇಂಗ್ಲಿಷ್ ಸಾಹಿತ್ಯದ ಜೊತೆಗೆ ಇನ್ನೂ ಸಾಕಷ್ಟು ಅಲ್ಲಿ ಓದಿಕೊಂಡೆ.

- **ಏನೇನು ಓದಿಕೊಂಡಿರಿ?**

ಎಂ.ಎನ್.ರಾಯ್‌ದು ಹಿಸ್ಟರಿ ಆಫ್ ರಶ್ಯನ್ ರೆವೊಲ್ಯೂಶನ್, ಲೆನಿನ್ ಕೃತಿಗಳು, ನ್ಯಾಶನಲಿಸಂಗೆ ಸಂಬಂಧಪಟ್ಟ ಪುಸ್ತಕಗಳು. ಟ್ರಾಟ್‌ಸ್ಕಿಯ ಮೈ ಲೈಫ್, ಮಾರ್ಕ್ಸ್‌ದು ಕ್ರಿಟೀಕ್ ಆಫ್ ಪೊಲಿಟಿಕಲ್ ಎಕಾನಮಿ ಇತ್ಯಾದಿ ಸಾಕಷ್ಟು ಓದಿಕೊಂಡೆ. ಆಗ ಮರಾಠೆ ಅಂತ ಒಬ್ರು ರಶ್ಯನ್ ಪಾಠ ಹೇಳುವವರು ನನಗೆ ಪರಿಚಿತರಾದ್ರು. ನಾನು ಮೊದಲು ರಶ್ಯನ್ ಕಲಿತದ್ದು ಈ ಮರಾಠೆಯವರಿಂದಲೇ. ಇವರು ಇಸ್ಕಸ್ ಮೆಂಬರ್ ಆಗಿದ್ರು. ನಾನೂ ಮೆಂಬರ್ ಆಗಿದ್ದೆ. ಅಷ್ಟು ಹೊತ್ತಿಗಾಗ್ಲೆ ರಶ್ಯನ್ ಪಬ್ಲಿಕೇಶನ್ ಶುರು ಆಗಿತ್ತು. ಮರಾಠೆ 'ಸಿವಿಲ್ ವಾರ್ ಇನ್ ಫ್ರಾನ್ಸ್' ತರಹದ ಹಲವಾರು ಪುಸ್ತಕ ತರ್ತಾ ಇದ್ರು. ನನಗೆ ಓದೋದಕ್ಕೆ ಕೋಡೋವ್ರು.

- **ನಿಮಗೆ ಆಗ ಇಷ್ಟವಾಗ್ತಾ ಇದ್ದ ಇಂಗ್ಲಿಷ್ ಲೇಖಕರು ಯಾರು?**

ಮೊದಲಿಗೆ ಡಿಕನ್ಸ್, ಟಾಲ್‌ಸ್ಟಾಯ್, ಗಾರ್ಕಿ, ಶೇಕ್ಸ್‌ಪಿಯರ್, ಹಾರ್ಡಿ (ಜ್ಯೂಡ್ ದ ಆಬ್ಸ್‌ಕ್ಯೂರ್, ಮೇಯರ್ ಆಫ್ ಕಾಸ್ಟರ್ ಬ್ರಿಜ್, ಟೂ ಆನ್ ಎ ಟವರ್) ಇತ್ಯಾದಿ.

- **ನೀವು ಲೋನಾವಲ ಕೈವಲ್ಯಧಾಮದ ನಂತರ ಎಲ್ಲಿಗೆ ಹೋದ್ರಿ?**

ಮಹಾಡ್‌ಗೆ ಹೋದೆ. ಅಲ್ಲಿ ಮೇಸ್ಟ್ರಾಗಿದ್ದೆ. ಆವಾಗ ಕೋಲಾಬಾಕ ಅಂತ ಕರೀತಿದ್ರು, ಈಗ ರಾಯಗಡ ಅಂತ ಕರೀತಾರೆ. ಮಹಾಡ್ ಈ ಜಿಲ್ಲೆಯಲ್ಲಿದೆ.

- **ಮಹಾಡ್‌ನಲ್ಲಿಯ ದಿನಗಳ ಬಗ್ಗೆ ಸ್ವಲ್ಪ ಹೇಳಿ.**

ಮಹಾಡ್‌ನಲ್ಲಿ ಅಂಬೇಡ್ಕರ್ ಸ್ಮರಣೆಗೆಂದು ಒಂದು ಕಾಲೇಜು ತೆಗೆದಿದ್ರು, ಪೀಪಲ್ಸ್ ಎಜ್ಯುಕೇಶನ್ ಸೊಸೈಟಿಯವರದು. ಅಲ್ಲಿಗೆ ಇಂಗ್ಲಿಷ್ ಮೇಸ್ಟ್ರ ಕೆಲಸಕ್ಕೆ ಆಪ್ಲೈ ಮಾಡ್ದೆ. ಅಲ್ಲಿ ಪಾಲಿ ಭಾಷೆನೂ ಪಾಠ ಮಾಡಬೇಕಾಗಿತ್ತು. ನನಗೆ ಅಷ್ಟು ಹೊತ್ತಿಗೆ ಸುಮಾರಾಗಿ ಮರಾಠಿನೂ ಬರ್ತಾ ಇತ್ತು. ಇಂಗ್ಲಿಷ್ ಜೊತೆಗೆ ಮರಾಠಿ ಮೂಲಕ ಪಾಲಿನೂ ವಾರಕ್ಕೆ ನಾಲ್ಕು ಗಂಟೆ ಪಾಠ ಮಾಡೋಕೆ ಕೆಲಸಕ್ಕೆ ಅಲ್ಲಿ ಸೇರಿಕೊಂಡೆ.

ಮಹಾಡಿನದೇನು ವೈಶಿಷ್ಟ್ಯ ಅಂದ್ರೆ ಅದೊಂದು ಇಂಟೀರಿಯರ್ ತಾಲ್ಲೂಕ್. ಅಲ್ಲಿನ ಜನರಿಗೆ ಮರಾಠಿ ಬಿಟ್ರೆ ಬೇರೆ ಗೊತ್ತಿಲ್ಲ. ಅಲ್ಲಿನ ಜನರೊಂದಿಗೆ ಮಾತಾಡಬೇಕು, ಬೆರೀಬೇಕು ಅಂದ್ರೆ ಮರಾಠಿನಲ್ಲೇ ವ್ಯವಹರಿಸಬೇಕಾಗಿತ್ತು. ನಾನು ಮರಾಠಿ ಚೆನ್ನಾಗಿ ಕಲಿತುಕೊಂಡದ್ದೇ ಮಹಾಡ್‌ನಲ್ಲಿ. ಅಲ್ಲಿನ ಕಾಲೇಜು ಅಂಬೇಡ್ಕರ್ ಕಾಲೇಜಾದ್ದರಿಂದ 50% ವಿದ್ಯಾರ್ಥಿಗಳು ಎಸ್‌ಸಿ/ಎಸ್‌ಟಿಗಳು. ಅಲ್ಲಿನ ಜನಕ್ಕೆ ಅಂಬೇಡ್ಕರ್ ಅಂದ್ರೆ ದೈವ. ಅಲ್ದೆ ಅಲ್ಲಿನ ಸುಮಾರು ಜನ ಅಂಬೇಡ್ಕರ್ ಒಡನಾಡಿಗಳು. ಅಂಥಾವ್ರಲ್ಲಿ ನಾನಾ ಟಿಪ್ನಿಸ್ ಒಬ್ರು.

ಟೆಪ್ನಿಸ್ ಬ್ರಾಹ್ಮಣರು. ಅಂಬೇಡ್ಕರ್ ಒಡನಾಡಿಗಳು. ಆದ್ರೆ ಬ್ರಾಹ್ಮಣರು ಟೆಪ್ನಿಸ್‌ನ ಔಟ್‌ಕಾಸ್ಟ್ ಮಾಡಿದ್ರು. ಅವರು ನಮ್ಮ ರೂಮಿಗೆ ಬರೋರು. ಆಗ್ಗೆ ಅವರಿಗೆ 75 ವರ್ಷ ವಯಸ್ಸು. ಅವರಿಗೆ ಮಾರ್ಕ್ಸ್‌ವಾದದ ಬಗ್ಗೆನೂ ಗೊತ್ತಿತ್ತು. ಬೇಕಾದಷ್ಟು ವಿಚಾರ ನನ್ನ ಜೊತೆ ಚರ್ಚೆ ಮಾಡೋರು. ಅವರ ಜೊತೆಗಿನ ನನ್ನ ಒಡನಾಟ ತುಂಬಾ ಪ್ರಯೋಜನಕರ ವಾಗಿತ್ತು.

- **ಸರ್ ಮಹಾಡ್ ನಂತರ ನೀವು ಎಲ್ಲಿಗೆ ಹೊರಟಿರಿ?**

ಮಹಾಡ್ ನಂತರ ಬ್ರಿಟನ್ನಿಗೆ ಹೋಗೋಕೆ ಮೊದಲು ನ್ಯಾಶನಲ್ ಕಾಲೇಜಿನಲ್ಲಿ ಇಂಗ್ಲಿಷ್ ಮೇಷ್ಟ್ರಾಗಿ ಕೆಲಸಕ್ಕೆ ಸೇರ್ಕೊಂಡೆ. ಸೇರಿಕೊಂಡ ಮೂರು ತಿಂಗಳಿಗೇ ಬ್ರಿಟನ್ನಿಗೆ ಹೋದೆ. ಎಚ್. ನರಸಿಂಹಯ್ಯನವರು ಆಗ ಕಾಲೇಜಿಗೆ ಪ್ರಿನ್ಸಿಪಾಲ್ ಆಗಿದ್ದರು. ಅವರು 'ಒಳ್ಳೇದಾಗಲಿ ಹೋಗಿ ಬನ್ನಿ' ಅಂತ ರಜೆ ಕೊಟ್ಟರು.

- **ಬ್ರಿಟನ್ ಅನುಭವಗಳನ್ನ ಸ್ವಲ್ಪ ಹೇಳಿ ಸರ್?**

ನಾನು ವೇಲ್ಸ್ ಯುನಿವರ್ಸಿಟಿಲಿದ್ದೆ. ಅಲ್ಲಿ ನಾನು ಇಂಟರ್‌ನ್ಯಾಷನಲ್ ಹಾಸ್ಟೆಲ್‌ನಲ್ಲಿದ್ದೆ. 40ಕ್ಕೂ ಹೆಚ್ಚು ದೇಶಗಳ ಸುಮಾರು ಜನ ಇದ್ರು ಅಲ್ಲಿ. ನಾವು ಒಂದು ಮೂರ್ನಾಲ್ಕು ಜನ ಎಲ್ಲರ ಜೊತೇನೂ ಮಾತಾಡೋದು, ಅವರವರ ದೇಶಗಳ ವಿಚಾರ ತಿಳಕೊಳ್ಳೋದು, ಚರ್ಚೆ ಮಾಡೋದು ಮಾಡ್ತಾ ಇದ್ವಿ. ಮೀಟಿಂಗುಗಳಿಗೆ ಹೋಗ್ತಾ ಇದ್ವಿ. ನಾನು ಹೋದದ್ದು ಓದೋದಿಕ್ಕೆ ಅಂತ. ಆದರೆ ಪ್ರಗತಿಪರ ಚಿಂತನೆ ಬೆಳೆಯೋದಕ್ಕೆ ಅವಕಾಶ ಇತ್ತು. ಕಾರ್‌ಡಿಫ್‌ನಲ್ಲಿ ಕಮ್ಯುನಿಸ್ಟ್ ಪಾರ್ಟಿ ಇತ್ತು. ಅಲ್ಲೆಲ್ಲ ಡಾಕ್ ವರ್ಕರ್ಸ್ ಇದ್ರು. ಡ್ರೈ ಡಾಕ್ಸ್ ಅಂತ ಒಂದಿದೆ. ಅವರದ್ದೇನೇನೋ ಮೀಟಿಂಗ್ ಇರೋದು. ನಾನೂ ಒಮ್ಮೆ ಒಂದು ಸ್ಟ್ರೀಟ್ ಮೀಟಿಂಗಿಗೆ ಹೋಗಿದ್ದೆ.

- **ಬ್ರಿಟಿಷ್ ಕಮ್ಯುನಿಸ್ಟ್ ಪಾರ್ಟಿ ಆಗ ರಷ್ಯಾ ಪರವಾಗಿತ್ತೋ ಅಥವಾ ಚೈನಾ ಪರವಾಗಿತ್ತೊ?**

ರಷ್ಯಾ ಪರವಾಗಿತ್ತು. ಜಾರ್ಜ್ ಥಾಮ್ಸನ್ ಮತ್ತು ಇತರರು ರಷ್ಯಾ ಪರವಾಗೇ ಇದ್ದರು. ಜಾರ್ಜ್ ಥಾಮ್ಸನ್ ರಷ್ಯಾ ಪರವಾಗಿ ಇದ್ದದ್ದರಿಂದಲೇ ಕೇಂಬ್ರಿಜ್ ಯೂನಿವರ್ಸಿಟಿಯಿಂದ ಅವರನ್ನು ತೆಗೆದುಹಾಕಿದರು. ಆಮೇಲೆ ಅವರು ಬರ್ಮಿಂಗ್‌ಹ್ಯಾಮ್‌ಗೆ ಬಂದರು. ಬೆಂಜಮಿನ್ ಫ್ಯಾರಿಂಗ್ಟನ್ ಕೂಡ ಪರಿಚಯ ಆದದ್ದು ನಾನು ಬ್ರಿಟನ್‌ನಲ್ಲಿದ್ದಾಗ. ರೇಮಾಂಡ್ ವಿಲಿಯಮ್ಸ್ ಮೂರು ನಾಲ್ಕು ಬಾರಿ ಭಾಷಣ ಮಾಡಿದರು. ಅವರ ಜೊತೆ ಸ್ಟುವರ್ಟ್ ಹಾಲ್ ಕೂಡ ಇದ್ದರು. ಈತ ಸೋಶಿಯಾಲಜಿ ಪ್ರೊಫೆಸರ್.

ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರಿ ಇಂಡಿಯಾದಲ್ಲಿ ಸಾಕಷ್ಟು ಲಾಭ ಗಳಿಸ್ತಾ ಇತ್ತು. ಒಂದು ಮೀಟಿಂಗ್‌ನಲ್ಲಿ ಈ ಬಗ್ಗೆ ನಾನು ಸ್ಟುವರ್ಟ್ ಹಾಲ್ ಜೊತೆ ಚರ್ಚೆ ಮಾಡಿದ್ದೆ. ಅವರೆಲ್ಲ ಬ್ರಿಟನ್‌ನ ಕೆಟ್ಟನೀತಿಗಳ ಕಟು ವಿಮರ್ಶಕರಾಗಿದ್ದರು. ನನ್ನ ಮಾತು ಕೇಳಿ ಅವರಿಗೆ ಮೆಚ್ಚುಗೆ ಆಯಿತು.

- **ನೀವು ಇಂಟರ್‌ನ್ಯಾಷನಲ್ ಹಾಸ್ಟೆಲ್‌ನಲ್ಲಿದ್ದಾಗ ನಡೆದ ಯಾವುದಾದರೂ ಒಂದು ಮುಖ್ಯ ಘಟನೆಯ ಬಗ್ಗೆ ಹೇಳಿ.**

ನಾವು ಹಾಸ್ಟೆಲ್‌ನಲ್ಲಿ ಒಮ್ಮೆ ಇಸ್ರೇಲ್ ಬಗ್ಗೆ ಚರ್ಚೆ ನಡೆಸ್ತಾ ಇದ್ವಿ. ಆಗ ತಾನೆ ಸಿಕ್ಸ್ ಡೇ ವಾರ್ ಮುಗಿದಿತ್ತು. ನಮ್ಮ ಜೊತೆ ಪ್ಯಾಲೆಸ್ಟೈನ್‌ನ ಒಬ್ಬಳು ವಿದ್ಯಾರ್ಥಿನಿ ಕೂಡ ಇದ್ದಳು. ಬ್ರಿಟನ್ ಅಮೆರಿಕಾ ಜೊತೆಗೂಡಿ ಪ್ಯಾಲೆಸ್ಟೈನ್‌ನ ವಿರುದ್ಧವಾಗಿ ಇಸ್ರೇಲ್ ಪರವಾಗಿ ದಾಳಿ ನಡೆಸುವ ಬಗ್ಗೆ ನಾವು ತೀವ್ರವಾಗಿ ಆಕ್ಷೇಪಿಸಿ ಮಾತ್ನಾಡ್ತಾ ಇದ್ವಿ. ಹಾಸ್ಟೆಲ್‌ನ ಬಹುಪಾಲು ಜನ ನಾವಿಬ್ರೂ ಮಾತ್ನಾಡೋದನ್ನ ಜಗಳ ಅನ್ನೋ ರೀತಿ ಕೇಳ್ಳೋರು. ನಾನು ಜೋರಾಗಿ ಇಂಗ್ಲಂಡ್ ವಿರುದ್ಧವಾಗಿ ವಾದಿಸ್ತಾ ಇದ್ದೆ. ಪ್ಯಾಲಸ್ಟೈನ್ ನವಳು ಕೂಡ ನನ್ನ ಪರವಾಗಿಯೇ ಮಾತ್ನಾಡ್ತಾ ಇದ್ಳು. ಒಂದು ದಿವಸ ಹಾಸ್ಟೆಲ್‌ನ ವಾರ್ಡನ್ ನೀನು ಇಷ್ಟು ಜೋರಾಗಿ ಇಲ್ಲಿ ಮಾತ್ನಾಡ್ತೀಯಲ್ಲ ನಾನೊಂದು ಕಡೆ ನಿನ್ನನ್ನ ಕರ್ಕೊಂಡು ಹೋಗ್ತೀನಿ, ಅಲ್ಲಿ ಮಾತ್ನಾಡು ಅಂತ ಹೇಳಿ ಒಂದು ಚರ್ಚೆಗೆ ಕರೆದುಕೊಂಡು ಹೋದ. ನಾನು ಅವಳು ಇಬ್ರೂ ಹೋದ್ವಿ. ನಮ್ಮ ಯೂನಿವರ್ಸಿಟಿಯ ಸೋಶಿಯಾಲಜಿ ಪ್ರೊಫೆಸರ್ ಕೂಡ ಬಂದಿದ್ರು. ಅವರೇ ಆವತ್ತಿನ ಕಾರ್ಯಕ್ರಮದ ಅಧ್ಯಕ್ಷರು. ನಾನು ಮಾತ್ನಾಡ್ದೆ.

- **ರೇಮಂಡ್ ವಿಲಿಯಮ್ಸ್ ಕೂಡ ಡೆಮಾನ್‌ಸ್ಟ್ರೇಶನ್‌ಗಳಿಗೆ ಬರ್ತಾ ಇದ್ರಾ?**

ಹೌದು ಬರ್ತಾ ಇದ್ರು. ಇಂಪೀರಿಯಲಿಸಂ, ರೇಸಿಸಂ, ಇಕನಾಮಿಕ್ ಪಾಲಿಸಿ, ಫಾರೀನ್ ಪಾಲಿಸಿ, ಈ ಬಗ್ಗೆ ಎಲ್ಲ ವಿಲಿಯಮ್ಸ್ ಚರ್ಚೆ ಮಾಡ್ತಾ ಇದ್ರು. ಅಮೆರಿಕಾ ವಿರೋಧಿ ಅಲೆ ಕೂಡಾ ಅವರ ಮೇಡೇ ಮ್ಯಾನಿಫೆಸ್ಟೊನಲ್ಲಿ ಇತ್ತು. ವಿಯೆಟ್ನಾಮ್ ಜೊತೆ ಅಮೆರಿಕಾ ನಡೆದುಕೊಳ್ಳುತ್ತಿದ್ದ ರೀತಿ ವಿರೋಧಿಸಿ ಆಂಟಿ ಯು ಎಸ್ ಪ್ರೊಟೆಸ್ಟ್‌ಗಳನ್ನ ಸಾಕಷ್ಟು ನಡೆಸ್ತಾ ಇದ್ರು. ಗ್ರೋನರ್ಸ್ ಸ್ಕ್ವೇರ್‌ನಲ್ಲಿ ಈ ತರಹದ ಒಂದು ಪ್ರೊಟೆಸ್ಟ್ ನಡೀತು. ಅದರಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ರು.

- **ಇಷ್ಟಲ್ಲದೇ ನಿಮಗೆ ಇನ್ನೂ ಬೇರೆ ಏನೇನು ಆಸಕ್ತಿಗಳಿದ್ವು?**

ಪ್ರವಾಸ ಹೋಗ್ತಾ ಇದ್ದೆ. ರೆಗ್ಯುಲರ್ ಆಗಿ ಫುಟ್‌ಬಾಲ್ ಮ್ಯಾಚ್ ನೋಡೋದಿಕ್ಕೆ ಹೋಗ್ತಾ ಇದ್ದೆ. ಬೇರೆ ಬೇರೆ ಕಡೆ ಫುಟ್‌ಬಾಲ್ ಮ್ಯಾಚ್ ನಡೀತಾ ಇದ್ರೆ ಅಲ್ಲಿಯೂ ಕೂಡ ಹೋಗ್ತಾ ಇದ್ದೆ.

- **ಈ ಸಿಪಿಐ, ಸಿಪಿಎಂ ಜೊತೆ, ಚಳವಳಿಗಳ ಜೊತೆ, ಹೇಗೆ ಸಂಪರ್ಕ ಬಂತು?**

ಅಧ್ಯಾಪಕರ ಸಂಘದಲ್ಲಿದ್ದಾಗಲೇ ಪೇಪರಿಗೆಲ್ಲ ಅದು ಇದು ಬರೀತಾ ಇದ್ದೆ. ಈ ಸಿಪಿಐನವರಿಗೆ ಇವನ್ಯಾರೋ ಮಾರ್ಕ್ಸ್, ರಷ್ಯಾದ ಬಗ್ಗೆ ಎಲ್ಲಾ ಬರೀತಾನಲ್ಲ ಅಂತ ನನ್ನ ಬಗ್ಗೆ ಕುತೂಹಲ ಹುಟ್ಟಿರಬೇಕು.

- **ಸರ್, ಕ್ಯಾಪಿಟಲ್ಲು, ಕಮ್ಯುನಿಸ್ಟ್ ಮ್ಯಾನಿಫೆಸ್ಟೊ ಎಲ್ಲ ಅಷ್ಟೊತ್ತಿಗೆ ಓದ್ಕೊಂಡಿದ್ರಾ?**

ಹಾಗೆ ಸಂಪೂರ್ಣ ಓದಿದ್ದೆ ಅಂತ ಹೇಳ್ಲಾರೆ, ಒಂದು ತಿಳಿವಳಿಕೆ ಅಂತೂ ಇತ್ತು. ಬರ್ನಾರ್ಡ್

ಷಾ ಅನುಭವ ಗೊತ್ತಾ ನಿಮಗೆ. ಫೇಬಿಯನ್ ಸೊಸೈಟಿ ಮೆಂಬರ್ ಆದ ಮೇಲೆ ಆತ ಮೊದಲ ಮೀಟಿಂಗ್‌ಗೆ ಹೋಗ್ತಾನೆ. ಯಾರು ನೋಡಿದ್ರು ಮಾರ್ಕ್ಸ್, ಕ್ಯಾಪಿಟಲ್ಲು ಇದೇ ಮಾತಾಡ್ತಾ ಇದ್ದರು. ಅವನು ಆವತ್ತು ನಾನೇನು ಇದೆಲ್ಲ ಕೇಳೇ ಇಲ್ಲ, ಓದೇ ಇಲ್ಲ ಅಂತ ವಾಪಸ್ಸು ಹೋದವನು 6-7 ಮೀಟಿಂಗುಗಳಿಗೆ ಬರಲೇ ಇಲ್ಲ. ಅಷ್ಟು ಕಾಲ ಮನೇಲಿ ಕೂತ್ಕೊಂಡು ಡೀಟೈಲಾಗಿ ಕ್ಯಾಪಿಟಲ್ ಓದಿಕೊಂಡ. ಆಮೇಲೊಂದು ಮೀಟಿಂಗಿಗೆ ಬಂದ. ನೋಡ್ತಾನೆ ಎಲ್ಲಾ ಆವತ್ತೂ ಚರ್ಚೆ ಮಾಡ್ತಿದಾರೆ. ಆಗ ಇವನಿಗೆ ನಾನು ಯಾಕೆ ಓದಿಕೊಂಡು ಬಂದೆ ಅಂತ ಅನ್ನಿಸಿತು. ಯಾಕಂದ್ರೆ ಅಲ್ಲಿ ಜೋರಾಗಿ ಮಾತಾಡ್ತಾ ಇದ್ದವರು ಯಾರೂ ಕ್ಯಾಪಿಟಲ್ ಓದೇ ಇರಲಿಲ್ಲ!

- **ಟೀಚರ್ಸ್ ಅಸೋಸಿಯೇಶನ್‌ನಲ್ಲಿ ನಿಮ್ಮ ಪಾತ್ರದ ಬಗ್ಗೆ ಸ್ವಲ್ಪ ಹೇಳಿ.**

ಸಂಘದ ಕಾರ್ಯವೈಖರಿ, ಪಾತ್ರವಹಿಸುವಿಕೆ, ಎಲ್ಲಾ ಬದಲಾಯಿಸಿದ್ವಿ. ಹೊಸ ಪ್ರಕ್ರಿಯೆಗಳಿಗಾಗಿ ಪ್ರಯತ್ನಿಸಿದ್ವಿ. ಡಾ. ದ್ವಾರಕಾನಾಥ್, ಸೇತುರಾವ್, ನಾನು, ಪ್ರೊಫೆಸರ್ ಟಿ. ರಮೇಶನ್ ಎಲ್ಲರೂ ಒಂದಾಗಿ ಕೆಲಸ ಮಾಡ್ತಾ ಇದ್ವಿ.

- **1959ರ ಹೊತ್ತಿಗೆ ಭಾರತದಲ್ಲಿ ಕಾಂಗ್ರೆಸ್ ಪಕ್ಷ ಆಡಳಿತದಲ್ಲಿ ಬೇರು ಬಿಟ್ಟಿತ್ತು. ನೀವು ಸಿಪಿಐ ಜೊತೆ ಸಂಪೂರ್ಣವಾಗಿ ಗುರುತಿಸಿಕೊಂಡಿದ್ದಿರಾ?**

ಹಾಗೇನಿಲ್ಲ, ನಾನು ಪಕ್ಷದ ಸದಸ್ಯ ಏನೂ ಆಗಿರಲಿಲ್ಲ. ಆದರೆ ಸೈದ್ಧಾಂತಿಕವಾಗಿ ನಾನು ಆ ಪಕ್ಷದ ಜೊತೆ ಗುರುತಿಸಿಕೊಂಡಿದ್ದೆ. ಅಂದರೆ ನಾನು ಸಿಪಿಎಂ ಗಿಂತ ಸಿಪಿಐ ಜೊತೆ ಗುರುತಿಸಿಕೊಂಡಿದ್ದೆ.

ನಾನು ಬ್ರಿಟನ್‌ನಲ್ಲಿ ಇದ್ದಾಗ ಪರಿಚಿತರಾದ ಜಾರ್ಜ್ ಥಾಮ್ಸನ್ ಆಗಲಿ, ರೇಮಂಡ್ ವಿಲಿಯಂಸ್ ಆಗಲಿ ಅಥವಾ ಮೇಡೇ ಮ್ಯಾನಿಫೆಸ್ಟೋ ಅಥವಾ ಇಸ್ಕಸ್ ಜೊತೆಗಿನ ಸಂಪರ್ಕ ಇವೆಲ್ಲವೂ ನಮ್ಮಲ್ಲಿ ಸಿಪಿಐ ಮತ್ತು ಸಿಪಿಎಂ ನಡುವೆ ದೊಡ್ಡ ವ್ಯತ್ಯಾಸವನ್ನು ಗುರುತಿಸಿಕೊಳ್ಳುವುದನ್ನೇನೂ ಕಲಿಸಲಿಲ್ಲ. ನಾನು ವೈಯಕ್ತಿಕವಾಗಿ ಹಾಗೆ ಈ ಎರಡು ಪಕ್ಷಗಳ ನಡುವೆ ವಿರೋಧವಿರಬೇಕು ಅಂತೇನೂ ಭಾವಿಸುವುದಿಲ್ಲ. ಆವಾಗ ಸಿಪಿಎಂನಲ್ಲಿ ಎನ್.ಎಲ್. ಉಪಾಧ್ಯಾಯ, ಪುಟ್ಟಪ್ಪ, ಕೃಷ್ಣಪ್ಪ ಇವರೆಲ್ಲಾ ಇದ್ದರು. ಇವರು ನಾವು ಮಾಡುವ ಮೀಟಿಂಗ್‌ಗಳಿಗೂ ಬರ್ತಾ ಇದ್ದರು. ಇವರು ಸಿಪಿಐನವರು, ಇವರನ್ನು ದೂರ ಇಡಬೇಕು ಅನ್ನುವ ಭಾವನೆ ಅವರಲ್ಲಿಯೂ ಇರಲಿಲ್ಲ.

- **ಸರ್ ನೀವು ಯೋಗ ಕಲಿತು-ಕಲಿಸಿ ಅಭ್ಯಾಸ ಮಾಡ್ತಾ ಇರುವವರು, ಹಾಗೇ 'ಹೊಸತು'ನಲ್ಲಿ ಈ ಬಗ್ಗೆ ಅಂಕಣ ಕೂಡ ಬರೆದಿದ್ದೀರಿ. ಯೋಗ, ಧ್ಯಾನ ಮತ್ತು ಆಧ್ಯಾತ್ಮವಾದ ಹಾಗೂ ಮಾರ್ಕ್ಸ್‌ವಾದ, ಭೌತವಾದ ಇವುಗಳ ನಡುವೆ ನಿಮಗೆ ಯಾವ ರೀತಿಯ ಸಮತೋಲನ-ಸಂಬಂಧ ಸಾಧಿಸೋದಕ್ಕೆ ಆಯ್ತು?**

ಯೋಗದ ಅಭ್ಯಾಸ ಭೌತವಾದಕ್ಕೆ ಬಹಳ ಹತ್ತಿರವಾದದ್ದು. ಯೋಗ ಈ ಶರೀರಾನ ಹ್ಯಾಗೆ ಇಟ್ಟುಕೊಳ್ಳಬೇಕು, ಆ ಮೂಲಕ ಶಾರೀರಿಕ-ಮಾನಸಿಕ ಆರೋಗ್ಯ ಹ್ಯಾಗೆ ಕಾಪಾಡಿ

ಕೊಳ್ಳಬೇಕು ಅಂತ ಹೇಳುತ್ತೆ. ಆರೋಗ್ಯ ಕಾಪಾಡಿಕೊಳ್ಳೋಕೆ ನೂರಾರು ಕ್ರಮಗಳಿವೆ. ಅದರಲ್ಲಿ ಯೋಗ ಕೂಡ ಒಂದು ಕ್ರಮ. ಇದು ವೈಜ್ಞಾನಿಕವಾದದ್ದು, ಅತ್ಯುತ್ತಮವಾದದ್ದು ಅಂತ ಕೆಲವರು ವಾದ ಮಾಡ್ತಾರೆ. ಕೆಲವರು ಹಾಗಲ್ಲ. ಉದಾಹರಣೆಗೆ ಕುವಲಯಾನಂದರು. ಈತ ಯೋಗದ ವಸ್ತುನಿಷ್ಠ ಸಂಶೋಧಕ. ಯೋಗದ ಏನೇನೋ ಕ್ಲೈಂಸ್ ಇದೆಯಲ್ಲ ಅದನ್ನೆಲ್ಲ ಈತ ಒಪ್ತಾ ಇರಲಿಲ್ಲ. ಏ ಇದಕ್ಕೆಲ್ಲ ಆಧಾರ ಇಲ್ಲ ಬಿಡ್ರಿ ಅನ್ನೋರು.

■ **ಒಂದು ಉದಾಹರಣೆ ಹೇಳಿ ಸರ್.**

ಉದಾಹರಣೆಗೆ ನೌಲಿ - ಇದನ್ನ ಮಾಡಿದರೆ ಚಿತ್ತ ಹೀಗೆ ಹೀಗೆ ಕೇಂದ್ರೀಕೃತವಾಗತ್ತೆ ಅಂತ ಕೆಲವರು ಹೇಳೋರು. ಆದರೆ ಕುವಲಯಾನಂದರು ಅದನ್ನ ಅಭ್ಯಾಸ ಮಾಡಿ ಏ ಅದೆಲ್ಲ ಏನೂ ಇಲ್ಲ. ಇದರಿಂದ ಕರುಳು, ಹೊಟ್ಟೆ ಭಾಗದ ಮಾಂಸಖಂಡಗಳಿಗೆ ವ್ಯಾಯಾಮ ಆಗುತ್ತೆ ಅಷ್ಟೆ ಅನ್ನೋರು.

ಆಮೇಲೆ ಧ್ಯಾನಕ್ಕೂ ಭೌತವಾದಕ್ಕೂ ಕೂಡ ಅಂಥಾ ವೈರುಧ್ಯ ಏನೂ ಇಲ್ಲ. ಧ್ಯಾನ ಅಂದ್ರೆ ನಾನು ಅರ್ಥ ಮಾಡಿಕೊಳ್ಳೋದು ಹೀಗೆ: ಪರಿಮಾಣಾತ್ಮಕವಾಗಿ ನಿಮಗೆ ವಸ್ತುಗಳ ಹೆಚ್ಚಳ ಇರೋವಾಗ ಅವುಗಳ ಗ್ರಹಿಕೆ ಯಾವ ಮಟ್ಟದಲ್ಲಿ ಇರುತ್ತೆ? ಈ ಪರಿಮಾಣದಲ್ಲಿ ಕಡಿಮೆ ಮಾಡಲು ಸಾಧ್ಯವಾದಾಗ, ಗ್ರಹಿಕೆಯ ಆಳವು ಗುಣಾತ್ಮಕವಾಗಿ ಉತ್ತಮ ಗೊಂಡಿರುತ್ತದೆ.

ಗ್ರಹಣಕ್ಕೆ ಒಂದು ಮಾತ್ರ ವಸ್ತುವಿರುವಂತೆ ಮಾಡಿದರೆ, ಅಥವಾ ಇನ್ನೂ ಮುಂದೆ ಹೋಗಿ ಅದನ್ನು ಸೊನ್ನೆ ಮಾಡಿದರೆ, ಎಷ್ಟು ಅದ್ಭುತವಾಗಿರುತ್ತದೆ! ಅದರಲ್ಲಿ ದೇವರು ಅಥವಾ ಆಧ್ಯಾತ್ಮ ಬರಲೇಬೇಕು ಅಂತೇನೂ ಇಲ್ಲ. ನಿಮ್ಮ ಮನಸ್ಸಿನ ಮೇಲೆ ನೀವು ಯಾವ ರೀತಿಯ ಒಂದು ಹಿಡಿತವನ್ನ ಸಾಧಿಸಬೇಕಾಗಿದೆ ಅನ್ನೋದು ಮುಖ್ಯ.

ನೋಡಿ, ಈಗ ಉಜ್ಜಾಯಿ ಅಂತ ಒಂದು ಪ್ರಾಣಾಯಾಮ ಇದೆ - ತುಂಬಾ ಸರಳ. ಬೀದೀಲಿ ನಡಕೊಂಡು ಹೋಗೋವಾಗ್ಲು ಅದನ್ನು ಮಾಡಬಹುದು. ಒಂದು ನಿಯಂತ್ರಿತ ಉಸಿರಾಟ, ದೀರ್ಘ ಉಸಿರಾಟ, ಅಷ್ಟೆ. ಉಸಿರು ಒಳಕ್ಕೆ ತಗೋಳೋದು 5 ಸೆಕೆಂಡ್ ಆದ್ರೆ, ಹೊರಗೆ ಬಿಡೋದು 10 ಸೆಕೆಂಡ್ ಆಗಬೇಕು. ಇದನ್ನ ಮಾಡೋಕೆ ಕಿಬ್ಬೊಟ್ಟೆಯ ಮೇಲೆ ಕಂಟ್ರೋಲ್ ಬೇಕು. ನೀವು 5 ನಿಮಿಷಗಳ ಕಾಲ ಇದನ್ನ ಮಾಡಿದರೂ ಯು ವಿಲ್ ಫೀಲ್ ಸಮ್ ಸೆನ್ಸ್ ಆಫ್ ಎಕ್ಸಿಲರೇಶನ್. ಇದರಿಂದ ದೇವರು ಕಂಡುಬಿಡುತ್ತಾನೆ ಅಥವಾ ಆರೋಗ್ಯ ದಿಢೀರ್ ಇಂಪ್ರೂವ್ ಆಗಿಬಿಡತ್ತೆ ಅನ್ನೋದೆಲ್ಲ ಸುಳ್ಳು. ದೇವರಿಗೂ ಇದಕ್ಕೂ ಸಂಬಂಧವಿಲ್ಲ. ಅದು ಮನಸ್ಸಿನ ವ್ಯವಹಾರ, ಚರ್ಯೆ. ಆತ್ಮ ಇದೆಯೋ ಇಲ್ವೋ ಎಂಬುದು ಅಪ್ರಸ್ತುತ. ಆತ್ಮ ಅನ್ನೋದು ಇಲ್ದೆ ಇದ್ರೂ ಧ್ಯಾನ ಮಾಡಬಹುದು. ದೇಹ ಆದ್ರೆ ಹೇಗೆ ಬಂತು - ಹೇಗೆ ಹೋಗುತ್ತೆ ಹೇಳಬಹುದು, ಆತ್ಮ ಗೊತ್ತಿಲ್ಲ.

- **ಸಮಾಧಿ ಅಂತಾರಲ್ಲ ಅದರ ಬಗ್ಗೆ ಸ್ವಲ್ಪ ಹೇಳಿ ಸರ್.**

ದರ್ಶನಶಾಸ್ತ್ರದಲ್ಲಿ ನಾವು ತ್ರಿಪುಟಿ ಅಂತ ಒಂದು ಹೇಳ್ತೀವಿ. ಎಲ್ಲ ಕಡೆಯೂ ಈ ತ್ರಿಪುಟಿ ನ್ಯಾಯ ಅನ್ವಯಿಸಿ ಮಾತಾಡಬಹುದು. Perceiver, Perceived and the process of perception, ಜ್ಞಾತೃ, ಜ್ಞೇಯ, ಜ್ಞಾನ. ಈ ಜ್ಞಾತೃ ಮತ್ತು ಜ್ಞೇಯ ಅನ್ನೋದು ಬೇರೆ. ಯಾಕಂದ್ರೆ ಜ್ಞಾತ ಅನ್ನೋವನ Sense of perception ಇಂದ Outflow and cognition and your brain activity-so many things....

ಇವಾಗ ಸುಮ್ಮನೆ ಇಮ್ಯಾಜಿನ್ ಮಾಡ್ಕೊಳ್ಳಿ. You have withdrawn. ಜ್ಞೇಯ ಅಂತಕ್ಕಂಥಾದ್ದು ಸೊನ್ನೆ ಆಗ್ತಾ ಇದೆ. ಜ್ಞಾತೃನೆ ಜ್ಞೇಯ ಆಗ್ತಾ ಇದೆ. So your mind is no longer flowing out cognising. If anything, it is cognising itself. So ಆ ವೇವ್, ಅಂಥಾದ್ದರಲ್ಲಿ Fluctuation ಇರಲ್ಲ. ಅದೇ ಸ್ಥಿರತೆ. ಅದೇ ಸಮಾಧಿ. ಇವಾಗ ನೀವು ಟಿಂಟರ್ನ್ ಅಬೆ ಓದಿದೀರಲ್ವ. ಅಥವಾ ಅವನು ಟ್ರ್ಯಾಂಕ್ವಿಲ್ ಮೈಂಡ್ ಅಂತ ಹೇಳ್ತಾನಲ್ಲ, ಬ್ಲಿಸ್ ಆಫ್ ಸಾಲಿಟ್ಯುಡ್ ಅಂತಾನಲ್ಲ, ವ್ಹೇರ್ ದ ಪರ್ಸೀವರ್ ಅಂಡ್ ದ ಪರ್ಸೀವ್ಡ್ ಆರ್ ನೊ ಲಾಂಗರ್ ಡಿಸ್ಟಿಂಕ್ಟ್. ಏಕಾಗ್ರತೆ ಅಂದ್ರೆ ಅಷ್ಟೇನೆ. ಅದರ ನಂತರದ ಹಂತವೇ ಸಮಾಧಿ.

ಈ ಧ್ಯಾನದಲ್ಲಿ ಏನಾಗತ್ತೆ, ಏಕಾಗ್ರತೆ ಸಾಧಿಸಿದ್ದೇ ಮುಖ್ಯ. ಅಲ್ಲಿ ಏಕಾಗ್ರತೆಗೆ ಯಾವುದಾದರೂ ಒಂದು ಆಬ್ಜೆಕ್ಟ್ ಇಟ್ಕೊಂಡಿರಬೇಕು. ಆಬ್ಜೆಕ್ಟ್ ಯಾಕೆ ಬೇಕು ಅಂದ್ರೆ. To reduce the quantity of objects that you are trying to perceive at any given point of time. So you cognise yourself.

Object, ಏಕಾಗ್ರತೆ ಸಾಧಿಸೋಕೆ ಒಂದು ಸಾಧನ. Next stageನಲ್ಲಿ you don't need the object because, you are the object. Where between the perceiver and the perceived there is no distincion left any more. Deep stage of ಧ್ಯಾನ ಅಂತ ಇದನ್ನೇನು ಕರೀತಾರೆ, ಇದರಲ್ಲಿ there is no distinction at all. ಸಮಾಧಿ ಅಂದ್ರೆ ಅಂತಿಮ ಅರ್ಥದಲ್ಲಿ ಅದೇನೇ ಅನ್ನಿಸುತ್ತೆ.

- **ಯೋಗದಲ್ಲಿ ಸಮಾಧಿ ಈ ವ್ಯತ್ಯಾಸವನ್ನ ಕಳೆದುಬಿಡತ್ತೆ, ಆದರೆ ಭಕ್ತಿಮಾರ್ಗದಲ್ಲಿ ಒಂದು ಕಲ್ಲೋ, ಮೂರ್ತಿನೋ, ವ್ಯಕ್ತಿನೋ, ಶಕ್ತಿನೋ ಬೇರೊಂದು ಆಬ್ಜೆಕ್ಟ್ ಅನ್ನೋದು ಇದ್ದೇ ಇರ್ತದೆ ಅಲ್ವಾ?**

ಹೌದು. ಭಕ್ತಿ ಮಾರ್ಗದಲ್ಲಿ Your mind is still flowing out. ಅಲ್ಲಿ ಡಾನ್ಸ್ ಮಾಡಿ, ವಿಭಜನೆ ಮಾಡಿ, ಪೂಜೆ ಮಾಡಿ, ಆವಾಗ ಮೆಂಟಲ್ ಆಕ್ಟಿವಿಟಿ ಅನ್ನೋದು ಇನ್ನೂ ಹೆಚ್ಚು ವಿಗರಸ್ ಆಗಬಹುದು. ಆದ್ರೆ ಧ್ಯಾನ ಭಿನ್ನ. ಅಲ್ಲಿ ಮೆಂಟಲ್ ಆಕ್ಟಿವಿಟಿ ರಿಗ್ರೆಶನ್ ಆಗತ್ತೆ. ಅದಕ್ಕೆ ವ್ಯಾಸಯ ಪತಂಜಲಿ ಯೋಗಸೂತ್ರದ ಮೇಲೆ ಒಂದು ಮಾತು ಹೇಳ್ತಾನೆ. ಈ ಮನಸ್ಸು ಅನ್ನೋದು ನದಿ ಇದ್ದ ಹಾಗೆ. ಅದು ಯಾವ ದಿಕ್ಕಿಗೆ ಹರಿಯೋಕೆ ಆಗುತ್ತೊ

ಎಲ್ಲಾ ಕಡೆಗೂ ಹರಿಯುತ್ತೆ. ಆದರೆ ಅದನ್ನ ನಮ್ಮ ಹಿಡಿತದಲ್ಲಿ ಇಟ್ಟುಕೊಳ್ಳೋದೆ ಮುಖ್ಯ. 'ತದಾ ದ್ರಷ್ಟುಃ ಸ್ವರೂಪೇ ಅವಸ್ಥಾನಂ'. ಅದನ್ನ ಸ್ವ...ರೂಪದಲ್ಲಿ ಇಡಬೇಕು. 'ಯೋಗಃ ಚಿತ್ತವೃತ್ತಿ ನಿರೋಧಃ' ಅಂದ್ರೆ ಚಿತ್ತವೃತ್ತಿಯನ್ನು ನಿಯಂತ್ರಿಸೋದೆ ಯೋಗ.

ಅಂದ್ರೆ ಭಕ್ತಿ ಮಾರ್ಗ ಯಾಕೆ ಬೇಡ - ಯೋಗ ಮಾರ್ಗವೇ ಯಾಕೆ ಬೇಕು ಅನ್ನೋ ಪ್ರಶ್ನೆ ಸರಿಯಲ್ಲ. ಎರಡೂ ಬೇರೆ ಬೇರೆ ಮಾರ್ಗಗಳು ಅಷ್ಟೆ. ನಿಮಗೆ ಯಾವ ಮಾರ್ಗದಿಂದ ಮನಸ್ಸಿಗೆ ಸ್ವಾಸ್ಥ್ಯ ಸಿಗುತ್ತೋ ಅದನ್ನ ಹಿಡೀಬಹುದು. ಆದರೆ ಭಜನೆ-ಭಕ್ತಿಯ ಮೂಲಕ ಬರೋ ಶಾಂತತೆಗೂ ಯೋಗ - ಧ್ಯಾನದ ಮೂಲಕ ಬರೋ ಶಾಂತತೆಗೂ ವ್ಯತ್ಯಾಸ ಅಂತೂ ಇದೆ.

- **ಶರೀರಕ್ಕೂ ಧ್ಯಾನಕ್ಕೂ ಸಂಬಂಧ ಇಲ್ವಾ ಸಾರ್?**

ಖಂಡಿತಾ ಇದೆ. ನೀವು ಮನಸ್ಸನ್ನು ನಿಯಂತ್ರಣದಲ್ಲಿ ಇಡುತ್ತೀರಿ ಅಂದ್ರೆ ಅದಕ್ಕೆ ಸಾಧನವಾಗಿರೋ ಎಲ್ಲವೂ ಅದಕ್ಕೆ ತಕ್ಕ ಹಾಗೆ ಇರಬೇಕು. ಶರೀರ ಸರಿ ಇರಬೇಕು. ಯಾವ ಶರೀರದಲ್ಲಿ ಅಂದ್ರೆ ಆ ಶರೀರದಲ್ಲಿ ಒಂದೇ ರೀತಿಯ ಧ್ಯಾನ ಸಾಧ್ಯ ಆಗತ್ತಾ ಅಂದ್ರೆ ಖಂಡಿತಾ ಇಲ್ಲ. ಈಗ ಸಾತ್ವಿಕ ಆಹಾರ ತಿನ್ನಬೇಕು ಅಂತಾರೆ, ಯಾಕೆ? ಮೆಟಾಬಾಲಿಕ್ ರೇಟ್ ಕಡಿಮೆ ಆಗಲಿ ಅಂತ ಅಷ್ಟೆ. ಅದ್ರಲ್ಲಿ ಅಂಥಾ ವಿಶೇಷ ಏನೂ ಇಲ್ಲ. It is only to keep your body fit for a pursuit of this kind ಅಷ್ಟೆ. ಚೆನ್ನಾಗಿ ಊಟ ಮಾಡಿಬಿಟ್ಟು ನಾನು ಧ್ಯಾನ ಮಾಡ್ತೀನಿ ಅಂದ್ರೆ ಆಗಲ್ಲ. ನಿದ್ದೆ ಮಾಡಬಹುದು ಅಷ್ಟೆ. ಭೌತವಾದಿ ತಿಳುವಳಿಕೆಗೂ ಇದಕ್ಕೂ ಅಂಥಾ ವಿರೋಧ ಇದೆ ಅಂತ ನನಗಂತೂ ಅನ್ನಿಸಲಿಲ್ಲ.

ಕುವಲಯಾನಂದರ ಜೊತೆ ಇದ್ದಾಗ ಒಮ್ಮೆ ಶಂಕರರಾವ್ ದೇವ್ ಬಂದಿದ್ರು. ಅವರಿಬ್ರೂ ಒಳ್ಳೆ ಸ್ನೇಹಿತರು. ಈ ಶಂಕರರಾವ್ ದೇವ್ ಚೀನಾಕ್ಕೆಲ್ಲಾ ಹೋಗಿ ಬಂದಿದ್ರು. ಅವರು ಬಂದಾಗ ನೋಡಿಕೊಳ್ಳೋದಕ್ಕೆ ನನಗೆ ಹೇಳಿದ್ರು. ಅವರು ಬ್ರೇಕ್‌ಫಾಸ್ಟ್ ಏನು ಮಾಡ್ತಿದ್ರು ಗೊತ್ತಾ? ಸ್ವಲ್ಪ ಜೇನುತುಪ್ಪ, ಸ್ವಲ್ಪ ಟೊಮ್ಯಾಟೋ ರಸ, ಸ್ವಲ್ಪ ಬೆಣ್ಣೆ ಅಷ್ಟೆ. ಆದರೆ ಧ್ಯಾನ ಏನಾದರೂ ಮಾಡುತ್ತಿದ್ದರೋ ಇಲ್ಲವೋ ತಿಳಿಯದು.

- **ಸಾರ್ ಧ್ಯಾನಕ್ಕೆ ಆಬ್ಜೆಕ್ಟ್ ಏನು ಬೇಕಾದ್ರೂ ಇಟ್ಕೋಬೌದಾ?**

ಇಟ್ಕೋಬಹುದೇನೋ. ಕುವಲಯಾನಂದರು ಒಮ್ಮೆ ನನ್ನನ್ನು ಕರೆದು ನೀನು ಏನೇನೋ ಎಲ್ಲ ಓದ್ಕೊಂಡಿದ್ದೀಯಲ್ಲ, ಧ್ಯಾನ ಯೋಗ ಕೂಡ ಓದಿದ್ದೀಯಲ್ಲ, ಅಭ್ಯಾಸ ಮಾಡ್ತಿದ್ದೀಯಾ ಅಂತ ಕೇಳಿದ್ರು. ನಾನು ಮಾಡ್ತಿದ್ದೀನಿ ಅಂದೆ. ಹಾಗಾದ್ರೆ ಯಾವ ಆಬ್ಜೆಕ್ಟ್‌ನಿಂದ ಶುರು ಮಾಡ್ತೀಯಾ ಅಂದ್ರು. ನಾನು ಇಂಡಿಯಾ ಮ್ಯಾಪ್ ಇಟ್ಕೊಂಡು ಧ್ಯಾನಕ್ಕೆ ತೊಡಗ್ತೀನಿ ಅಂದೆ. ಅವರು ನಕ್ಕರು. ನಾನು ಸುಳ್ಳು ಹೇಳ್ತಾ ಇದ್ದೀನಿ ಅಂತ ಅನ್ನಿಸಿರಬೇಕು ಅವರಿಗೆ. ಸರಿ, ಆಮೇಲೆ ಅದೂ ಇದೂ ಮಾತಾಡಿದ ನಂತರ - ನನ್ನ ಬಗ್ಗೆ ಅವರಿಗೆ ತುಂಬಾ ಪ್ರೀತಿ ಇತ್ತು- ಧ್ಯಾನ ಹೇಗೆ ಮಾಡಬೇಕು ಅಂತ ಹೇಳಿಕೊಟ್ಟರು.

- **ನೀವು ಸಮಾಧಿಗೆ ಹೋಗಿದ್ದೀರಾ ಸಾರ್. ಸಾಧನೆ ಮಾಡಿದ್ದೀರಾ?**

ಇಲ್ಲ ಇಲ್ಲ. ಧ್ಯಾನ ಮಾಡಿದ್ದೀನಿ, ಪ್ರಯತ್ನ ಮಾಡಿದ್ದೀನಿ. ಹೋಗಿಲ್ಲ. ನಮ್ಮ ಲೋನಾವಲ ಇನ್‌ಸ್ಟಿಟ್ಯೂಟ್‌ನಲ್ಲಿ ಕೆಲವು ಸಾಧಕರು ಇದ್ರು. ಅವರು ಸ್ಟೂಡೆಂಟ್ಸ್ ಅಲ್ಲ, ಸ್ಟಾಫೂ ಅಲ್ಲ, ಸಾಧಕರು. ಅವರು ಎಕ್ಸ್‌ಪೆರಿಮೆಂಟ್ ಮಾಡೋರು. ನಾನು ಯೋಗ, ಪ್ರಾಣಾಯಾಮ, ಧ್ಯಾನ ಎಲ್ಲ ಮಾಡಿದ್ದೀನಿ, ಮಾಡ್ತೀನಿ. ಆದ್ರೆ ಆ ಸಾಧಕರ ಥರ ಸಾಧನೆ ಏನೂ ಮಾಡಿಲ್ಲ ನಾನು. ಪುಣ್ಯಾವತಮ್ಮ ಅಂತ ಒಬ್ರು ಇದ್ರು. ಅವರು ಐದೇ ನಿಮಿಷಗಳಲ್ಲಿ ಸಮಾಧಿಗೆ ಹೋಗಿಬಿಡೋರು. ನಿಜವಾದ ಯೋಗಿನಿ ಅವರು. ಈ ಪುಣ್ಯಾವತಮ್ಮನೋರ್ನ ನೀವು ಸಮಾಧಿಗೆ ಹೋದಾಗ ಏನು ಎಕ್ಸ್‌ಪೀರಿಯನ್ಸ್ ಆಗತ್ತೆ ಅಂದ್ರೆ ಕೋಟಿ ಸೂರ್ಯರ ಪ್ರಭೆ ಕಂಡ ಹಾಗೆ ಆಗತ್ತೆ ಅನ್ನೋರು. ನಾನು ವಿದ್ಯಾರ್ಥಿ ಆಗಿದ್ದಾಗ್ಲೆ ಅವರಿಗೆ 60 ವರ್ಷ ವಯಸ್ಸಾಗಿತ್ತು. ಕೊಳ್ಳೇಗಾಲದವ್ರು. ಬೊಂಬಾಯಲ್ಲಿ ಒಬ್ರು ಇದ್ರು, ಕರ್ವಾಟರ್ ಅಂತ. ಆತ ಎರಡೇ ನಿಮಿಷಕ್ಕೆ ಸಮಾಧಿಗೆ ಹೋಗಿ ಬಿಡೋನು. ವಾಡೇಕರ್, ವೀಣೇಕರ್ ಎಲ್ಲ ಪರೀಕ್ಷೆ ಮಾಡಿದ್ದಾರೆ. ಅವನಿಗೆ ಸೂಜಿ ಚುಚ್ಚಿದರೂ ಕೂಡ ಅವನ ಆಂಪ್ಲಿಟ್ಯುಡ್‌ನಲ್ಲಿ ಸ್ವಲ್ಪಾನೂ ವ್ಯತ್ಯಾಸ ಆಗ್ತಿರಲಿಲ್ಲ. ಅವನ ತೊಡೆ ಮೇಲೆ ಐಸ್ ಬ್ಲಾಕ್ ಇಟ್ರೂ ಕೂಡ ಅವನಿಗೆ ಗೊತ್ತೇ ಆಗ್ತಿರಲಿಲ್ಲ.

- **ಅಭಿಜಾತ ಸಂಗೀತದಲ್ಲಿ ನಿಮಗೆ ಆಸಕ್ತಿ ಹೇಗೆ ಹುಟ್ತು? ಸಂಗೀತದಲ್ಲಿ ರಾಗ ಮಾತ್ರ ಮುಖ್ಯ ಸಾಹಿತ್ಯ ಮುಖ್ಯ ಅಲ್ಲ ಅನ್ನೋ ಅಭಿಪ್ರಾಯ ಇದೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?**

ನನ್ನ ಅನುಭವದ ಮೂಲಕಾನೆ ಹೇಳೋದಾದ್ರೆ ಬೇರೆ ಎಲ್ಲಾ ಕಾರ್ಯಕ್ರಮಗಳಿಗೆ ಹೋಗೋ ಹಾಗೆ ಸಂಗೀತ ಕೇಳೋದಕ್ಕೂ ಮೈಸೂರಲ್ಲಿ ವಿದ್ಯಾರ್ಥಿ ಆಗಿದ್ದಾಗ ಹೋಗ್ತಿದ್ದೆ. ನಾನು ಸಂಗೀತ ಕೇಳೋದಕ್ಕೆ ಯಾವ ಹಿನ್ನೆಲೆಯೂ ಇರಲಿಲ್ಲ. ನನಗೆ ಸಂಗೀತದಲ್ಲಿ ಆಸಕ್ತಿ ಬೆಳೆಯೋದಕ್ಕೆ ಒಂದು ಘಟನೆ ಕಾರಣ. ಒಮ್ಮೆ ಪ್ರಸಿದ್ಧ ವೀಣಾವಾದಕ ಕಾರೈಕುಡಿ ಸಾಂಬಶಿವಯ್ಯರ್ ಮೈಸೂರಿಗೆ ಬಂದಿದ್ರು. ಆಗ ಕೋಣನೂರು ಸೀತಾರಾಮ ಶಾಸ್ತ್ರಿಗಳು ಕುಟುಂಬ ಸಮೇತ ಊರಿಗೆ ಹೋಗುವವರಿದ್ದರು. ಸಾಂಬಶಿವಯ್ಯರ್ ಇವರ ಮನೇಲಿದ್ರು. ಸುಮಾರು ಮೂರು ತಿಂಗಳು ನಾನು ಸಾಂಬಶಿವಯ್ಯರ್ ಅವರಿಗೆ ಸಹಾಯ ಮಾಡೋಕೆ ಇರಬೇಕಾಯ್ತು. ಸೀತಾರಾಮ ಶಾಸ್ತ್ರಿಗಳು ಅವರಿಗೆ ಏನು ಬೇಕೋ ಅದು, ಹಾಲು, ತರಕಾರಿ ಇಂಥದ್ದೆಲ್ಲ ತಂದುಕೊಟ್ಟುಕೊಂಡು ಇರು ಅಂತ ಹೇಳಿದ್ರು. ಸಾಂಬಶಿವಯ್ಯರ್ ಅವರನ್ನ ನೋಡೋದಕ್ಕೆ ಕರ್ನಾಟಕದ ಬಹುಪಾಲು ಸಂಗೀತ ವಿದ್ವಾಂಸರು ಬರೋರು. ಚೌಡಯ್ಯನೋರು, ದೊರೆಸ್ವಾಮಿ ಅಯ್ಯಂಗಾರ್, ಶ್ರೀಕಂಠನ್, ಆರ್.ಎಸ್. ದೊರೆಸ್ವಾಮಿ, ಆರ್.ಆರ್. ಕೇಶವಮೂರ್ತಿ ಮೊದಲಾದವರು. ಅವರೆಲ್ಲರನ್ನೂ ನೋಡೋ ಅವಕಾಶ ಸಿಕ್ತು. ಅಯ್ಯರ್ ತಾತ ಮಕ್ಕಳಿಗೂ ಹೇಳ್ಕೊಡ್ತಾ ತಾವೂ ಆಗಾಗ ನುಡಿಸ್ಕೊಳ್ತಾ ಕಛೇರೀನೂ ಮಾಡೋರು. ಹಾಗಾಗಿ ನನಗೆ ಸಂಗೀತದಲ್ಲಿ ಆಸಕ್ತಿ ಹುಟ್ತು.

ಎ.ಎನ್. ಮೂರ್ತಿರಾಯರದು ಒಂದು ಲೇಖನ ಇದೆ ನೋಡಿದ್ದೀರಾ. 'ಸಂಗೀತ ಜ್ಞಾನಮು

ಅರ್ಥವಿನಾ' ಅಂತ. ಅದು ಅಷ್ಟು ಸಂಪೂರ್ಣ ಸತ್ಯ ಅಲ್ಲ. ಆಲಾಪನೆ ಅಷ್ಟೇ ಕೇಳಿ ನಾವು ಭಾವಕ್ಕೆ ಮಾತ್ರ ಸ್ಪಂದಿಸಿ ಎದ್ದುಬಿಡೋಲ್ಲ. ಈಗ ಖರಹರಪ್ರಿಯ ನುಡಿಸ್ತಾ ಇದಾರೆ ಅಂದ್ರೆ 'ನೀ ಸಮಾನಮೆವರು' ಅಂತಾನೆ ನುಡಿಸ್ತಾ ಇರ್ತಾರೆ, ಅದರಿಂದ ನಾವು ಎಸ್ಕೇಪ್ ಆಗೋ ಹಾಗಿಲ್ಲ. ಆದರೆ ಆ ಬಗ್ಗೆ ವೈರುಧ್ಯ ಇದ್ದೇ ಇದೆ. ನಿಮಗೆ ಪೊಯೆಟ್ರಿ ಗೊತ್ತಿರೋದ್ರಿಂದ ವಿಲಿಂಗ್ ಸಸ್ಪೆನ್‌ಶನ್ ಆಫ್ ಡಿಸ್‌ಬಿಲೀಫ್ ಕೇಳಿರಬಹುದು, ಕೋಲರಿಜ್‌ದು. ಹಾಗಂದುಕೊಳ್ಳೋದು ಅಷ್ಟೆ.

- **ನಿಮಗೆ ಸಿನಿಮಾ ಹಾಡು ಕೇಳುವ ಆಸಕ್ತಿ ಇದೆಯಾ? ಸಂಗೀತ ರಾಗಗಳನ್ನೇ ಸಿನಿಮಾ ಹಾಡಿಗೆ ಅಳವಡಿಸುವ ಪದ್ಧತಿಯೂ ನಮ್ಮಲ್ಲಿದೆ. ಈ ಎರಡೂ ಕಡೆ ಕೇಳುಗನಿಗೆ ಯಾಕೆ ಒಂದೇ ಅನುಭವ ಆಗಲ್ಲ? ಸಂಗೀತದಲ್ಲೂ ಸಮಾಧಿ ಹೊಂದುವ ಬಗ್ಗೆ ಏನು ಹೇಳ್ತೀರಿ?**

ನನಗೆ ಸಿನಿಮಾ ಹಾಡು ಕೇಳೋದರಲ್ಲಿ ಅಷ್ಟು ಆಸಕ್ತಿ ಇಲ್ಲ. ಅದಕ್ಕೆ ನಿರ್ದಿಷ್ಟವಾಗಿ ಕಾರಣ ಏನೂ ನಾನು ಹೇಳಲಾರೆ. ನೀವು ಸಾಮಜವರಗಮನ ಅಂತ ಹಿಂದೋಳ ನುಡಿಸುವಾಗ ಆಗೋ ಅನುಭವಕ್ಕೂ ಅದೇ ರಾಗದಲ್ಲಿ ಒಂದು ಸಿನಿಮಾ ಹಾಡು ಕೇಳುವಾಗ ಆಗೋ ಅನುಭವಕ್ಕೂ ತಾಳೆ ಹಾಕೋಕೆ ಆಗಲ್ಲ. ಸಿನಿಮಾ ಹಾಡಲ್ಲಿರೋದೂ ಅದೇ ರಾಗ ಆದ್ರೂ ಅಲ್ಲಿ ಏನೇನೋ ಆರ್ಕೆಸ್ಟ್ರಾ ಇನ್‌ಸ್ಟ್ರುಮೆಂಟೆಲ್ಲ ಇರ್ತವೆ. ಹಾಗಾಗಿ ಸಂಗೀತದ ಹಿಂದೋಳ ಕೇಳಿದಾಗ ಆಗೋ ಅನುಭವಾನೇ ಸಿನಿಮಾ ಹಿಂದೋಳ ಕೇಳಿದಾಗ ಆಗಲ್ಲ.

- **ಅದೇ ವಾದ್ಯ, ಅದೇ ರಾಗ ಸಿನಿಮಾಕ್ಕೆ ಅಳವಡಿಸಿದಾಗ ಹೇಗೆ ಸಾರ್?**

ಆಗ ಇರಬೌದೇನೋ. ಆದ್ರೆ ಅಲ್ಲಿ ಬರಿ ರಾಗ ಅಷ್ಟೆ ಮುಖ್ಯ ಅಲ್ಲ. ಆ ರಾಗಕ್ಕೆ ಯಾವ ಸಾಮಗ್ರಿ ಬಳಸ್ತೀರಾ ಅನ್ನೋದು ಮುಖ್ಯ. ನಾನು ಒಬ್ಬ ಸಂಗೀತಗಾರರನ್ನು ಒಂದು ಪ್ರಶ್ನೆ ಕೇಳಿದ್ದೆ. ನೀವು ಸಂಗೀತದ ಕೃತಿಯಲ್ಲಿ ರಾಮನ ಸ್ತುತಿ ತೆಗೆದು ರೈತನ ಬಗ್ಗೆ ಶಬ್ದ ಸಂಯೋಜನೆ ಮಾಡಿ ಅದೇ ರಾಗ್ದಲ್ಲಿ ಹಾಡೋಕೆ ಸಾಧ್ಯಾನ ಅಂತ. ಅವರು 'ಕಂಪೋಸ್ ಮಾಡಿದರೆ ಹಾಡಬಹುದು. ಸಂಗೀತದಲ್ಲಿ ಪದ (ವರ್ಡ್ಸ್) ಯಾವುದಿದ್ದರೆ ನಮಗೇನು? ಹಾಡೋಕೆ ಸಾಧ್ಯ' ಅಂದ್ರು. ಆದರೆ ಈ ಸಂಗೀತದ ಸಂಪ್ರದಾಯಸ್ಥರು ಹಾಗೆ ಕಂಪೋಸ್ ಮಾಡಲ್ಲ ಅನ್ಸುತ್ತೆ. ಈ ರೀತಿ ಶಬ್ದಗಳನ್ನು ಬದಲಾಯಿಸಿ ಬೇರೆ ಸಾಹಿತ್ಯ ಹಾಕಿ ಕಂಪೋಸ್ ಮಾಡಿ ಅದೇ ಸಾಂಪ್ರದಾಯಿಕ ವಾದ್ಯಗಳನ್ನು ನುಡಿಸಿ ಹಾಡಿದರೆ ಕೇಳಬಹುದೇನೋ, ಆಗಲೂ ಅದೇ ಅನುಭವ ಆಗಬಹುದೇನೋ, ಆದರೆ ನನಗೆ ಈ ಥರದ ಅನುಭವ ಇಲ್ಲ.

ಈ ಸಂಗೀತದಲ್ಲಿ ಸಂಗತಿ ಇರತ್ತಲ್ಲ, ವಸ್ತು ಇಲ್ಲದೇನೇ ಡಿಸೋಸಿಯೇಟ್ ಮಾಡಿಯೂ ಹಾಡಬಹುದು. ಮತ್ತೆ ರಾಮನ ಪದ ತೆಗೆದು ರೈತನ ಪದ ಅಥವಾ ಮರವೋ, ಫ್ರಿಜ್ಜೋ ಕುರಿತು ಹಾಡಿದರೆ ಆಗ ನಿಮಗೆ ಈ ಭೂಮಾನುಭವ ಆಗದೇ ಇರಬಹುದು. ಆದರೆ ಹಾಗೆ ಆಗದೇ ಇರೋದಕ್ಕೆ ಆ ವಸ್ತುವಿನ ಬಗ್ಗೆ ನಿಮಗೆ ಭಾವನೆ- ಅನುಭವ- ಮನೋಭಾವನೆ ಏನಿರತ್ತೆ ಅನ್ನೋದರ ಮೇಲೆ ನಿಮಗಾಗುವ ಕರ್ಣಮೂಲ ಅನುಭವ ಆಧರಿಸಿರುತ್ತೆ.

ಈಗ ಉದಾಹರಣೆ ಮಯಕೊವಸ್ಕಿ ಬಸ್ಸಿಗೆ ಕಾಮ್ರೇಡ್ ಬಸ್ಸೇ ಅಂತ ಕರೀತಾನೆ. ತನ್ನ ಜನಗಳನ್ನೆಲ್ಲ ಹೊತ್ತು ಒಯ್ಯುವ ಬಸ್ಸನ್ನ ಅವನು ಕಾಮ್ರೇಡ್ ಅಂತ ಕರೀತಾನೆ ಅಂದ್ರೆ, It is what you have in your mind about an abject that will become your experience ಅಂತ.

ನೀವು ಕೇಳ್ತಾ ಇರೋ ರಾಗದ ಭಾವ ಮತ್ತು ನೀವು, ಇಷ್ಟೇ ಇರೋದು ಪ್ರಪಂಚದಲ್ಲಿ, ಇನ್ನೇನೂ ಇಲ್ಲ ಅಂತ ತಿಳ್ಕೊಳ್ಳೋದಾದ್ರೆ ಅಥವಾ through that ಮೀಡಿಯಂ ನೀವು ಆ ಸ್ಥಿತಿಗೆ ತಲುಪೋಕೆ ಆಗೋದಾದ್ರೆ ನಾವೀ ಯೋಗದಲ್ಲಿ ಸಮಾಧಿ ಅದೇನೋ ಹೇಳ್ತೀವಲ್ಲ ಆ ರೀತಿ ಒಂದು ಅನುಭವ ಆಗಬಹುದು ಆಗ.

ನಮ್ಮ ಎಸ್. ರಾಮಚಂದ್ರರಾಯರು - ನೋಡಯ್ಯ, ಬ್ರಹ್ಮಜ್ಞಾನ ಅಂತ ಏನಾದ್ರೂ ಇದ್ರೆ ನಾನು ಸಂಗೀತದ ಮುಖಾಂತರ ಮಾತ್ರ ಅದನ್ನು ಪಡೀಬಲ್ಲೆ ಅಂತ ಹೇಳೋರು. ಅದು ತಾದಾತ್ಮ್ಯದ ಪ್ರಶ್ನೆ. ಅಂದ್ರೆ ಯಾವುದರ ಜೊತೆಗೆ ನೀವು ತಾದಾತ್ಮ್ಯ ಸಾಧಿಸ್ತೀರೋ ಅದೇ ಬ್ರಹ್ಮಜ್ಞಾನ.

ನನ್ನ ಸೀಮಿತತೆಯಿಂದಾಗಿ ನನಗೆ ಸಂಗೀತದಲ್ಲಿ ಆ ರೀತಿಯ ಪ್ರವೇಶ ಇಲ್ಲ. ನಾನು ಸಂಗೀತಾನ ಕೇಳಿ ಕೇಳಿ ತಿಳಕೊಂಡಿದ್ದೇನೆಯೇ ಹೊರತು ಗಾಢವಾಗಿ ಅಭ್ಯಾಸ ಮಾಡಿ ಕಲಿತಿಲ್ಲ.

- **ಸಂಗೀತದ ಬಗ್ಗೆ ನಿಮ್ಮ ತಿಳುವಳಿಕೆ ಸ್ವಲ್ಪ ಹೇಳಿ.**

ಸಂಗೀತ ನಾನು ಹಾಡಿದವನಲ್ಲ, ಸುಮ್ಮನೇ ಗುನುಗಿರಬಹುದು. ಕೆಲವು ರಾಗಗಳನ್ನು ಗುರ್ತಿಸಬಲ್ಲೆ. ತುಂಬಾ ರೇರ್ ರಾಗ ಆದ್ರೆ ಗೊತ್ತಾಗಲ್ಲ. ಕರ್ನಾಟಕ ಜಾಸ್ತಿ ಗೊತ್ತು ಹಿಂದುಸ್ತಾನಿ ಅಷ್ಟು ಗೊತ್ತಿಲ್ಲ. ಅದನ್ನೂ ಕೇಳಿದ್ದೀನಿ. ಬೊಂಬಾಯಲ್ಲಿದ್ದಾಗ ವಲ್ಲಭಸ್ವಾಮಿಗಳ ಹಾಡುಗಾರಿಕೆ ತುಂಬಾ ಕೇಳಿದ್ದೀನಿ. ತಿರುವಯ್ಯಾರ್‌ನಲ್ಲಿ ತ್ಯಾಗರಾಜರ ಆರಾಧನೆ ಆದಾಗ ಐದೂ ದಿನ ಪೂರ್ತಿ ಅಲ್ಲೇ ಇದ್ದು ಸಂಗೀತ ಕೇಳ್ತಿದ್ದೆ. ನಾನು ತಂಜಾವೂರು, ತಿರುಚ್ಚಿಗೇನಾದ್ರೂ ಹೋದ್ರೆ at any cost ತಿರುವಯ್ಯಾರ್‌ಗೆ ಹೋಗೇ ಬರ್ತೀನಿ. ಈಗ್ಲೂ. ಅಲ್ಲಿ ಕಾವೇರಿ ಇದೆ. ನಾಗರತ್ನಮ್ಮನೋರ ಸಮಾಧಿ ಇದೆ.

ಜಾನಪದಕ್ಕೆ ಸಂಗೀತದಲ್ಲಿರೋ ಅಂತಹ ರಾಗದ ಬಿಗಿ ಚೌಕಟ್ಟು ಇರಲ್ಲ. ಜಾನಪದ ಭಾವ-ರಾಗಗಳಿಗಿಂತ ಕಥನಕ್ಕೆ ಪ್ರಾಧಾನ್ಯ ಕೊಡತ್ತೆ. ಶಾಸ್ತ್ರೀಯ ಸಂಗೀತವನ್ನ ಒಂದು ಗಂಟೆ ಕೇಳೋವಷ್ಟೆ ಆಸ್ಥೆಯಿಂದ ಜಾನಪದವನ್ನ ನಾನು ಕೇಳಲಾರೆ. ನನಗೆ ಜಾನಪದವನ್ನ ಹಾಗೆ ಕೇಳಿ ರೂಢಿ ಇಲ್ಲ. ಇದು ವೈಯಕ್ತಿಕ ಅನುಭವ. ಹಾಗಂತ ಯಾವುದು ಶ್ರೇಷ್ಠ ಯಾವುದು ಶ್ರೇಷ್ಠವಲ್ಲ ಅನ್ನೋ ಪ್ರಶ್ನೆ ಇಲ್ಲಿ ಬರಲ್ಲ. ಕಿಟಾರೊ ಅಂತ ಜಾಪನೀಸ್ ಒಬ್ಬ ಇದ್ದಾನೆ. ಗೋಡ್ಖಂಡಿ ಅವರದು ಅದೇನೋ Fusion Music ಇದೆಯಲ್ಲ, ಹಾಗೆ

ಕಿಟಾರೊ Fusion Music ಅನ್ನೋದು, It is something astounding. ನಾನು ಅಮೆರಿಕಾಕ್ಕೆ ಹೋಗಿದ್ದಾಗ ಫಿಲಡೆಲ್ಫಿಯಾದಲ್ಲಿ ಅವನ performance ಇತ್ತು. ಹೋಗಿದ್ದೆ. ಅದು ಕ್ಲಾಸಿಕಲ್ ಅಲ್ಲ. ನಮ್ಮ ವಿಜಯ್ ಕೂಡ ಬಂದಿದ್ದ. ಅದ್ಭುತವಾದ ಸಂಗೀತ. It took me to some other plane. ನನ್ನ ಅನುಭವಕ್ಕೆ absolutely new.

- **ಸರ್ ನಿಮಗೆ ಶಾಸ್ತ್ರೀಯ ಸಂಗೀತದಲ್ಲಿ ಸಿಕ್ಕೋ ಅಂತಹ ಅನುಭವ ಆ Fusion ಸಂಗೀತದಲ್ಲಿ ಸಿಕ್ತಾ?**

ಆ ರೀತಿಯದ್ದಲ್ಲ, ಖಂಡಿತವಾಗಿಯೂ ಆ ಅನುಭವ ಬೇರೆ ಥರದ್ದು. ಒಂಥರಾ ಎಲಿವೇಟೆಡ್. ನಾವು ಎಲ್ಲೋ ಹೋಗ್ತಾ ಇದ್ದೀವಿ ಅನ್ನೋ ಥರ.

- **ಬೆಂಗಳೂರಲ್ಲಿ ಎಲ್ಲೆಲ್ಲಿ ಸಂಗೀತ ಕೇಳೋಕೆ ಹೋಗ್ತಿದ್ರಿ?**

ಚಾಮರಾಜಪೇಟೆಗೆ ನಾನು ಹೋಗ್ತಾ ಇರಲಿಲ್ಲ. ಶೇಷಾದ್ರಿಪುರಂಗೆ ತಪ್ಪದೇ ಹೋಗ್ತಾ ಇದ್ದೆ. ಗಾಯನ ಸಮಾಜಕ್ಕೆ ಹೋಗ್ತಾ ಇದ್ದೆ. ನಾನು ಆರ್.ಟಿ. ನಗರ್ ಅಸೋಸಿಯೇಶನ್ ಲೈಫ್ ಮೆಂಬರ‍್ರು, ಮಲ್ಲೇಶ್ವರಂ ಅಸೋಸಿಯೇಷನ್ ಲೈಫ್ ಮೆಂಬರ‍್ರು. ಈಗ ಅವೆಲ್ಲ ದೂರ, ಹೋಗೊಕ್ಕಾಗಲ್ಲ.

- **ಸರ್ ಈಗಿನ ಹಾಡುಗಾರರಲ್ಲಿ ಯಾರು ಚೆನ್ನಾಗಿ ಹಾಡ್ತಾರೆ ಅನ್ಸತ್ತೆ?**

ನನಗೆ ಮೈಸೂರ್ ಎಂ. ನಾಗರಾಜ್, ರಮಣಿ, ಸತ್ಯವತಿ, ಹಳಬರಲ್ಲಿ ಚೆಂಬೈ, ಅರಿಯಾಕುಡಿ, ಎಂ.ಡಿ. ರಾಮನಾಥನ್ ಇವರನ್ನೆಲ್ಲ ಕೇಳಿದ್ದೀನಿ. ಆದ್ರೆ ನನ್ನ Level of understanding and responding ಇನ್ನಿತರ ಪಳಗಿದವರಷ್ಟು ಇರ್ತಿರಲಿಲ್ಲವೇನೋ. ನನಗೆ ಅರ್ಥಮೆಟಿಕ್ಸ್ ಆಫ್ ಮ್ಯೂಸಿಕ್ ಬೇಕಾಗೂ ಇಲ್ಲ.

- **ಸೋವಿಯತ್ ಯೂನಿಯನ್ ಕುಸಿದು ಬಿದ್ದ ನಂತರ?**

ಅದರ ಬಗ್ಗೆ ಆವತ್ತು ಬರೆದಾಗ, ಆಂತರಿಕ ಸನ್ನಿವೇಶ, ಆವತ್ತಿನ ಕಮ್ಯುನಿಸ್ಟ್ ಪಾರ್ಟಿಯಲ್ಲಿದ್ದಂತಹ ಲೋಪ ದೋಷಗಳು. ಅಧಿಕಾರಶಾಹಿಯ ಹಿಡಿತ, ಅದೆಲ್ಲವೂ ಖಂಡಿತ Positive aspects contributing to this kind of act. ಈವಾಗ the fact that Gorbachev emerge from the communist party itself is an indication of the rot that was setting in the party. ಆ ಕಾಲಕ್ಕೆ ಲೆನಿನ್‌ಗ್ರಾಡ್‌ನಲ್ಲಿ ಇದ್ದಳಲ್ಲ ಆಕೇನ ಎಲ್ಲೂ ಬೈಯೋರು. ಅವಳ ಹೆಸರೇನೋ ಮರೆತು ಹೋಗಿದೆ. ಅವಳ ಲೇಖನವನ್ನೇ ಪ್ರಕಟಿಸಲಿಲ್ಲ ಅವರು. ಆಕೇನ ಸ್ಟಾಲಿನಿಸ್ಟ್ ಅಂತ ಹೇಳಿ ಕೆಲಸದಿಂದಾನೆ ಡಿಸ್‌ಮಿಸ್ ಮಾಡಿಬಿಟ್ರು. ಅವಳು ಇದೇನು ನಾನ್‌ಸೆನ್ಸ್ ಮಾಡ್ತಾ ಇದೀರಯ್ಯ ನೀವು ಅನ್ನೋಳು. 'ದ ಗಾರ್ಬಚೇವ್ ಫಿನಾಮಿನನ್' ಅನ್ನೋ ಪುಸ್ತಕದಲ್ಲಿ ಅವಳ ಹೆಸರನ್ನ ಸಾಕಷ್ಟು ಸಾರಿ ಕೋಟ್ ಮಾಡಿದ್ದೀನಿ. ಈಗ ಅವಳ ಹೆಸರು ನೆನಪಿಗೆ ಬರ್ತಾ ಇಲ್ಲ. ಪೆರೆಸ್ಟ್ರೊಯಿಕಾದಲ್ಲಿ ಅವರೆಲ್ಲ ನಾವು ತುಂಬಾ ಓಪನ್ ಅಂತ ಹೇಳ್ಕೋತಾ ಇದ್ರೂ ನಮಗೆ ಈ ಸಂದರ್ಭದಲ್ಲಿ

ಆಕೆ ಏನು ಹೇಳ್ತಿದಾಳೆ ಅಂತಾನೆ ಗೊತ್ತಾಗ್ಲಿಲ್ಲ. ಅವಳ ಕ್ರಿಟಿಕಲ್ ಆರ್ಗ್ಯುಮೆಂಟ್ಸ್ ಆಮೇಲೆ ಬೇರೆ ಮೂಲಗಳಿಂದ ಗೊತ್ತಾಯ್ತು.

- **ಅವಳು ಏನು ಹೇಳ್ತಾ ಇದ್ಲು ಸಾರ್?**

ಇನ್ನೇನಿಲ್ಲ, ನೀವು ಮಾಡ್ತಾ ಇರೋದೆಲ್ಲ ತಪ್ಪು. ನಿಜವಾಗಿಯೂ ಮಾರ್ಕ್ಸ್‌ವಾದಿ ಪರ್‌ಸ್ಪೆಕ್ಟಿವ್ ಬೇರೇನೇ ಇದೆ ಅಂತ ಹೇಳಿದ್ಲು. ಆಮೇಲೆ ಅವಳ ಆರ್ಟಿಕಲ್ಸ್ ಪಬ್ಲಿಕ್ ಆದ್ಮೇಲೆ ಓದಿದೆ. ನನಗೆ ಅವಳು ಸ್ಟಾಲಿನಿಸ್ಟ್ ಅಂದಾಗ ಬರೋ ಕಲ್ಪನೆಗಳೇನೂ ಅವಳ ಆರ್ಟಿಕಲ್ ಓದಿದಾಗ ಬರಲಿಲ್ಲ. ಅವಳು ತಪ್ಪು ಹೇಳ್ತಾ ಇದ್ದಾಳೆ ಅಂತಾನು ಅನ್ನಿಸಲಿಲ್ಲ.

ಕಮ್ಯುನಿಸ್ಟ್ ವಿರೋಧಿ ಅಲೆ ಇಷ್ಟೆಲ್ಲಾ ರಷ್ಯಾದ ತುಂಬಾ ಇರೋವಾಗ ನೀವು ಆಫೀಸಿನಲ್ಲಿ ಕೂತ್ಕೊಂಡು ಕಮ್ಯುನಿಸ್ಟ್ ಪರ ಜನ ಇದಾರ ಅಂತ ನೋಡಿ. ವಿರೋಧಿಗಳ ಮಾತುಗಳಿಗೆ ಉತ್ತರ ಕೊಡಿ. ಕಮ್ಯುನಿಸ್ಟ್ ಆಡಳಿತವೇ ಯಾಕೆ ಬೇಕಾಗಿದೆ ಅಂತ ಸಮರ್ಥನೆ ನೀಡಿ. ನೀವು ಜನದಿಂದ ದೂರವಾಗಿ ಯಾವ ಆಡಳಿತಾನೂ ನಡೆಸೋಕಾಗಲ್ಲ, ಅಂತ ಹೇಳಿದಾಳೆ. ಇದರಲ್ಲಿ ತಪ್ಪೇನಿದೆ?

ರಷ್ಯಾದಲ್ಲಿ ಕಮ್ಯುನಿಸಂ ಕುಸಿದುಬೀಳೋಕೆ ಬರೀ ಸಿ ಐ ಎ ಕೈವಾಡಾನೆ ಕಾರಣ ಅನ್ನೋದನ್ನ ನಾನಂತೂ ಒಪ್ಪೊಲ್ಲ. ಸಿ ಐ ಎ ಯಾವಾಗ ಆಪರೇಟ್ ಮಾಡೋದಕ್ಕೆ ಸಾಧ್ಯ ಆಗುತ್ತೆ? ನಾನು ಅವರ ಏಜೆಂಟ್ ಆಗೋದಕ್ಕೆ ಸಿದ್ಧ ಇದ್ದೀನಿ ಅಂದಾಗ. ರಷ್ಯಾದಲ್ಲಿ ಆಂತರಿಕ ಅಧಿಕಾರಶಾಹಿ ಜಾಸ್ತಿ ಆಗಿತ್ತು. ಇದಕ್ಕೆ ಎರಡು ಉದಾಹರಣೆ ಹೇಳ್ತೀನಿ. ಒಂದನ್ನ ಈಗಾಗ್ಲೆ ಅನಂತಮೂರ್ತಿ ಹೇಳಿದ್ದಾರೆ. ರೆಸ್ಟೋರೆಂಟ್‌ಗೆ ಹೋದಾಗ ಒಂದು ಹುಡುಗಿ ಅಳೋಕೆ ಶುರು ಮಾಡಿದ್ಲು. ಯಾಕೆ ಅಂತ ಕೇಳಿದ್ರೆ ನನಗೆ ಬೇಕಾದ ತಿಂಡಿಯನ್ನು ನಾನು ತಿನ್ನೋಕೆ ಕೊಡಲ್ಲ. ಆದ್ರೆ ಬೇರೆ ಕ್ಲಾಸಿನ ಜನ ಬಂದ್ರೆ ಕೊಡ್ತಾರೆ ಅಂತ. ಇನ್ನೊಂದು, ಒಂದ್ಸಾರಿ ಬಲ್ಶೊಯ್ ಥಿಯೇಟರ್ ಇಂದ ಹೊರಗಡೆ ಬರ್ತಾ ಇದ್ವಿ. ಒಂದು ಕ್ಲಾಸಿನ ಜನಕ್ಕೆ ಹೊರಗಡೆ ಹೋಗೋದಕ್ಕೆ ದಾರಿ ಬಿಟ್ರು. ಬಾಲ್ಕನೀಲಿ ಇದ್ದವರಿಗೆಲ್ಲ ಅಡ್ಡಗಟ್ಟೆ ಹಾಕಿಬಿಟ್ರು. ನಾವೆಲ್ಲ ಹೋಗೊವರೆಗೆ ಅವರ್ಯಾರೂ ಹೋಗೋ ಹಂಗಿಲ್ಲ. ನಿಂತೇ ಇರ್ಬೇಕು. ನನ್ನ ಜೊತೆ ಇದ್ದ ಇಂಟರ್‌ಪ್ರಿಟರ್‌ನೇ ಕೇಳಿದೆ: ಏನು ನಾನ್‌ಸೆನ್ಸ್‌ರಿ ಇದು ಅವರನ್ಯಾಕೆ ಬಿಟ್ಟಿಲ್ಲ, ನಮ್ಮನ್ಯಾಕೆ ಪ್ರತ್ಯೇಕ ಮಾಡಿ ಬಿಡ್ತಿದ್ದೀರಿ, ಅಂದೆ. ಅದಕ್ಕಾತ, ಅಲ್ಲ ಅದು ಥ್ರಾಂಗ್ ಆಗಿಬಿಡತ್ತೆ. ನನಗೆ ರೇಗ್ತು. This was a clear indication of some kind of internal stratification. ಆರ್ವೆಲ್ಸ್ ಥಿಯರಿ all are equal but some people are more equal ಅಂತಾರಲ್ಲ ಹಾಗೆ.

- **ಸರ್ ಈಗ ಈ ಪ್ರಶ್ನೇನ ಸ್ವಲ್ಪ ಹ್ಯುಮನ್ ನೇಚರ್ ಕಡೆಗೆ ತಿರುಗಿಸ್ತೀನಿ. ಗಾರ್ಬಚೆವ್‌ಗೆ ಮೊದಲು ಜನರಲ್ ಸೆಕ್ರೆಟರಿ ಆಗಿದ್ರಲ್ಲ ಆಂದ್ರೊಪೋವ್ ಮತ್ತೆ ಚೆರ್ನೆಂಕೋ ಇಬ್ಬರೂ ಕೆ.ಜಿ.ಬಿ. ಚೀಫ್ ಆಗಿದ್ದವರು. ಪುಟಿನ್ ಕೂಡ ಕೆಜಿಬಿ ಚೀಫ್, ಆಮೇಲೆ ಜಾರ್ಜ್ ಬುಷ್ ಅಪ್ಪ ಜಾರ್ಜ್ ಸೀನಿಯರ್ ಕೂಡ ಸಿಐಎ ಚೀಫಾಗಿದ್ದವನು. ಈ ದೊಡ್ಡ ದೊಡ್ಡ ಲೀಡರ್ಸ್**

ಎಲ್ಲಾ ಗೂಢಚರ್ಯೆಯ ಹಿನ್ನೆಲೆ ಉಳ್ಳವರೇ ಆಗಿದ್ದಾರಲ್ಲ ಯಾಕೆ? ಅಧಿಕಾರ ಗೂಢಚರ್ಯೆಯ ಸಂಬಂಧ ಹ್ಯುಮನ್ ನೇಚರ್‌ನಲ್ಲೇ ಅಡಗಿದೆಯಾ?

ನೋಡಿ ಹ್ಯುಮನ್ ನೇಚರ್ ಅನ್ನೋದು ಬಹಳ ಸಂಕೀರ್ಣವಾದ ವಿಚಾರ. ಅದನ್ನ ಒಂದು ಸೀಮಿತ ಚೌಕಟ್ಟಿನಲ್ಲಿ ಸರಳವಾಗಿ ಚರ್ಚೆ ಮಾಡೋಕೆ ಆಗಲ್ಲ. ನೀವು ಇತಿಹಾಸಾನ ನೋಡಿದ್ರೆ ಹ್ಯೂಮನ್ ನೇಚರ್ ಅನ್ನೋದು ನೀವು ಹೇಳಿದ ಹಾಗೆ ಅಷ್ಟೊಂದು ಸ್ಟ್ಯಾಟಿಕ್ ಆಗಿ ಇಲ್ಲ. ಮನುಷ್ಯ ಸ್ವಭಾವ ಅನ್ನೋದು ಕೇವಲ ಸಂಸ್ಕಾರದಿಂದ ಬರಲ್ಲ. ಈಗ ಯಾರಾದ್ರೂ ಭ್ರಷ್ಟರು ಆಗಿದಾರೆ ಅಂದ್ರೆ ಅದಕ್ಕೆ ಅವರ ಸ್ವಭಾವ ಅಷ್ಟೆ ಕಾರಣ ಅಲ್ಲ, ಅದಕ್ಕೆ ಸನ್ನಿವೇಶವೂ ಕಾರಣ ಆಗತ್ತೆ. ಆ ಸಂದರ್ಭವನ್ನು ಮನುಷ್ಯ ಬಳಸಿಕೊಳ್ತಾನೆ. ಕೆಲವು ವ್ಯಕ್ತಿಗಳ ವಿಚಾರದಲ್ಲಿ ಇದು ನಿಜ ಅಲ್ಲದಿರಬಹುದು. ಈಗ ಉದಾಹರಣೆಗೆ ಗಾಂಧಿಯಂಥವರು. ಇಂಥವರನ್ನ ಯಾವುದೇ ವಾತಾವರಣದಲ್ಲಿಡಿ, ಆತ ತನ್ನ ರೀತೀನೆ ಇರ್ತಾನೆ. ಇದು ಎಲ್ಲರಿಗೂ ಸಾಧ್ಯ ಆಗಲ್ಲ. Irrespective of the conditions ಗಾಂಧಿ had a certain sense of integrity. ಆದರೆ ಸಾಧಾರಣವಾಗಿ ಮನುಷ್ಯ ಸ್ವಭಾವ ಅನ್ನೋದು ಸನ್ನಿವೇಶಗಳಿಂದ ರೂಪಿತವಾಗತ್ತೆ. ಈಗ ಅಪ್‌ಬ್ರಿಂಗಿಂಗ್‌ಗೆ ನಾವು ಆರ್ಟ್, ಎಜುಕೇಶನ್ ಇತ್ಯಾದಿ ಏನೇ ಬಳಸಬಹುದು. ಮನುಷ್ಯನ ಸ್ವಭಾವ ಈ ಯಾವುದರಿಂದಲೂ ಹೀಗೇ ಇರತ್ತೆ ಅಂತ ಹೇಳೋಕೆ ಬರಲ್ಲ. ಅದು ಸನ್ನಿವೇಶದ ಕೈಗೂಸು. ಸಮಯ ಸನ್ನಿವೇಶ ಹೇಗೆ ಒದಗುತ್ತೋ ಹಾಗೆ ನಡಕೊಳ್ಳುತ್ತೆ. ಆದ್ರೆ ಕೆಲವೊಮ್ಮೆ ಫೋರ್ಸ್ ಅಪ್ಲೈ ಮಾಡೋದ್ರಿಂದ ಬದಲಾವಣೆ ತರಬಹುದು.

- **ಯಾರು ಸರ್ ಫೋರ್ಸ್ ಅಪ್ಲೈ ಮಾಡೋರು?**

ಇನ್ಯಾರು? Those who think that they are above board. ಆವಾಗ ಯಾರಾದ್ರೂ ಕೇಳ್ತಾರೆ : Who are you to think that you are above board? ಅವಗೇನಾಗತ್ತೆ ಅಂದ್ರೆ, ಈ ಕ್ಲಾಸ್ ಅನ್ನೋ ಪ್ರಶ್ನೆ ಬರುತ್ತೆ. ಕ್ಲಾಸ್ ಅನ್ನೋದು ಒಂದು ಎಂಟಿಟಿ ಆದ್ರೆ somebody has the right to be a representative of the class. By virtue of what does he become representative is a larger issue. Class ಅನ್ನೋದನ್ನ ನೀವು ಒಪ್ಕೊಂಡ್ರೇ ಅಂದ್ರೆ ಪ್ರಾತಿನಿಧ್ಯಾನು ಒಪ್ಕೋಬೇಕು. ಅವರ ವರ್ತನೇನೂ ಒಪ್ಕೋಬೇಕು.

ಈ ಹ್ಯುಮನ್ ನೇಚರ್ ಅನ್ನೋದರ ವೇರಿಯೇಶನ್ಸ್‌ನ್ನ ಈ ಹಿನ್ನೆಲೇಲಿ ನೋಡಬೇಕು. ಅದರಲ್ಲಿ ಎಷ್ಟು ಅಬೆರೇಶನ್ ಇರಲು ಸಾಧ್ಯ? ನನಗೆ ಛಾನ್ಸ್ ಸಿಕ್ಕಿದೆ. ಈ ಸನ್ನಿವೇಶದಲ್ಲಿ ನನ್ನನ್ನ ತಡೆಯುವ ಒತ್ತಡಗಳಿಲ್ಲ. ಆದ್ದರಿಂದ ಸ್ವೇಚ್ಛೆಯಿಂದ ವರ್ತಿಸುತ್ತೇನೆ!

- **ಈಗ ಒಂದಿಪ್ಪತ್ತು ವರ್ಷದ ಹಿಂದೆ ಸೋವಿಯೆಟ್ ಯೂನಿಯನ್‌ನ ಸೋಶಿಯಲ್ ಸೈನ್ಸ್ ಅಥವಾ ಫಿಸಿಕಲ್ ಸೈನ್ಸ್‌ನ ಸಾಕಷ್ಟು ಜರ್ನಲ್ಸ್‌ನ ನೆನಸಿಕೊಂಡ್ರೆ ಎಲ್ಲ ಕಡೆಗೂ ಲೆನಿನ್‌ನ ಕೋಟು ಮಾಡೋರು. ಒಬ್ಬ ಸೋಶಿಯಲ್ ಸೈಂಟಿಸ್ಟ್ ಆದ್ರೂ 'ಆಸ್ ಲೆನಿನ್ ಸೆಡ್'**

ಅಂತ ಹೇಳೋದು, ಒಬ್ಬ ನ್ಯೂಕ್ಲಿಯರ್ ಫಿಸಿಸಿಸ್ಟ್ ಆದ್ರೂ 'ಲೆನಿನ್' ಕೋಟ್ ಮಾಡೋದು, ಎಲ್ಲಕ್ಕೂ ಅವನೇ ಮದ್ದು ಅಂತ.

ಈಗ ಅಬೆರೇಶನ್ಸ್‌ನ್ನ ಕಾಯ್ದುಕೊಳ್ಳಬೇಕಾದವರು ಯಾರು? ನಮ್ಮ ಭಾಗವಹಿಸುವಿಕೆ ಇರಬೇಕು. ನಾನೊಬ್ಬ ರಿಪ್ರೆಸೆಂಟೇಟಿವ್ ಆಗಿ ಏನು ಮಾಡ್ತೀನೋ ಅದಕ್ಕೆ ನಿಮ್ದೂ ಕಾಣಿಕೆ ಇರತ್ತೆ. ರೆವಲ್ಯೂಶನ್ ಮಾಡಿದ್ದಂತಹ ಜನರ ಆಂಬಿಶನ್ಸ್, ಇಂಟೆಗ್ರಿಟಿ, ಸ್ಟ್ರೆಂಗ್ತ್‌ಗಳನ್ನೆಲ್ಲ ನಾವು ಅಂಡರ್ ಎಸ್ಟಿಮೇಟ್ ಮಾಡಕ್ಕಾಗಲ್ಲ. ಆದ್ರೆ ಅವರು ಕ್ರಾಂತಿಯ ನಂತರವೂ ಕನ್‌ಸ್ಟ್ರಕ್ಷನ್‌ನಲ್ಲಿ ಸಕ್ರಿಯವಾಗಿ ಭಾಗವಹಿಸದೇ ಹೋದರೆ - ಅಥವಾ ಅದಕ್ಕೆ ಅವಕಾಶ ಆಗದೇ ಹೋದ್ರೆ ಹೀಗಾಗತ್ತೆ. ನಾವು ಇಷ್ಟೆಲ್ಲಾ ಮಾಡಿದ್ದೀವಿ, ಇನ್ನು ಸಾಕಪ್ಪಾ ಅಂದು ಬಿಟ್ರೂ ತೊಂದ್ರೇನೆ.

■ **ಇದನ್ನೇ ಮನುಷ್ಯನ ದೌರ್ಬಲ್ಯಗಳು, ಹ್ಯುಮನ್ ನೇಚರ್, ಅನ್ನೋದು ಅಲ್ವಾ ಸರ್?**

ಹೌದು. ಆದರೆ ಈ ಮಾನವ ದೌರ್ಬಲ್ಯಗಳನ್ನ ಯಾವುದೋ ನಿಗದಿತ ಸಮಯದಲ್ಲಿ, ಒಂದು ದಶಕದಲ್ಲಿ, ಸರಿಪಡಿಸಿಬಿಡೋಕಾಗಲ್ಲ. ಈಗ ನಮ್ಮಲ್ಲಿ ಶಿಕ್ಷಣ ಎಷ್ಟೋ ವರ್ಷಗಳಿಂದ ಇದೆ. ಎಷ್ಟೋ ತಲೆಮಾರುಗಳು ಕಳೆದಿವೆ. ಆದರೆ ನಮ್ಮ ವ್ಯಕ್ತಿತ್ವದ ಸುಧಾರಣೆ ಸಾಕಷ್ಟು ಆಗಿದೆಯಾ? ಇಲ್ಲ, ನಾವಿನ್ನೂ ತುಂಬಾ ಹಿಂದುಳಿದಿದ್ದೀವಿ. ಈ ಹ್ಯುಮನ್ ನೇಚರ್ ಅನ್ನೋದನ್ನ ಅಷ್ಟೊಂದು ಸುಲಭವಾಗಿ ಕೆಲಕಾಲದ ಉದಾಹರಣೆಗಳಿಂದ ವರ್ಗೀಕರಿಸಿಬಿಡೋಕಾಗಲ್ಲ. ನೋಡಿ, ಈ ವರ್ತನೆಗಳು ಮತ್ತೆ ಆಕಾರ ಪಡೆಯೋದು ಸನ್ನಿವೇಶಗಳಿಂದಾನೆ. ಯಾವನೋ ಒಬ್ಬ, ಜೋಡಿದಾರ ಆಗೋದಕ್ಕೆ ಇವತ್ತು ಅವಕಾಶ ಇರೋದಾದ್ರೆ ಖಂಡಿತಾ ಅವನು ಆಗಿಬಿಡಬಹುದು. ಆದ್ರೆ ನಾವು ಇವತ್ತು ಸಾಮೂಹಿಕವಾಗಿ ಅದನ್ನ ಆಗೋದಕ್ಕೆ ಬಿಡೋದಿಲ್ಲ. ಆದ್ದರಿಂದ ಎಲ್ಲಿ ಕಲೆಕ್ಟಿವ್ ಪಾರ್ಟಿಸಿಪೇಶನ್ ಇರತ್ತೋ ಅಲ್ಲಿ ದಬ್ಬಾಳಿಕೆ ತಲೆ ಎತ್ತೋಕೆ ಆಗಲ್ಲ, ಅಷ್ಟು ಸುಲಭವಾಗಿ. When participation gets reduced or when participation is not encouraged ಆಗ ಯಾರಾದ್ರೂ ತಮ್ಮನ್ನ ತಾವು ಅಧಿಕಾರಶಾಹಿಯಾಗಿ ಎಸ್ಟ್ಯಾಬ್ಲಿಶ್ ಮಾಡ್ಕೊಳ್ಳಿಕ್ಕೆ ಹೊರಡ್ತಾರೆ. ಇನ್ನೊಂದೇನಾಗತ್ತೆ ಅಂದ್ರೆ ಯಾವುದೇ ಒಬ್ಬ ನಾಯಕ ಕೆಲವು ಒಳ್ಳೆ ಕೆಲಸಗಳನ್ನ ಮಾಡ್ತಾ ಮಾಡ್ತ ಇನ್ನೂ ಕೆಲವು ಕೆಟ್ಟ ಕೆಲಸಗಳನ್ನ ಮಾಡ್ತಾ ಇದ್ರೆ ಜನ ಅಯ್ಯೋ ಹೋಗ್ಲಿ ಬಿಡು, ಅಷ್ಟಾದ್ರೂ ಒಳ್ಳೇದು ಮಾಡ್ತಾ ಇದಾನಲ್ಲ ಅಂತ ಸುಮ್ಮನಿದ್ದುಬಿಡ್ತಾರೆ. ಅವನ ಕೆಟ್ಟತನಾನ ಅಪೋಸ್ ಮಾಡಲ್ಲ, ತಿದ್ದಲ್ಲ. ಆಗ ನಾಯಕ ಏನು ಮಾಡ್ತಾನೆ? ಸನ್ನಿವೇಶಾನ ಯುಟಿಲೈಸ್ ಮಾಡ್ಕೋತಾನೆ. ಇಂಥ ಕಡೆ ತಪ್ಪು ಅವನೊಬ್ಬನದೇ ಆಗಿರಲ್ಲ. ಇಂಥ ಕಡೆಗಳಲ್ಲಿ ಇಂಟರ್ನಲ್ ಡೆಮಾಕ್ರಸಿ ಈಸ್ ಮೋಸ್ಟ್ ಇಂಪಾರ್ಟೆಂಟ್. ಅದು ಒಂದು ಸಮಾಜದಲ್ಲಾಗಿರಬಹುದು, ಒಂದು ಪಾರ್ಟಿಯಲ್ಲಿ ಆಗಿರಬಹುದು. ಅಂಡ್ ಇವನ್ ಅಟ್ ದಿ ಲೆವೆಲ್ ಆಫ್ ದಿ ಇಂಡಿವಿಝುಯೆಲ್ ಇಂಟರ್ನಲ್ ಡೆಮಾಕ್ರಸಿ ಈಸ್ ವೆರಿ ಇಂಪಾರ್ಟೆಂಟ್.

- **ಸರ್ ನೀವು ಈ ಇಂಟರ್ನಲ್ ಡೆಮಾಕ್ರಸಿ ಅನ್ನೋದನ್ನ ಹೆಚ್ಚು ಪಕ್ಷಗಳು ಇದ್ದಾಗ ಇರುವ ವಿಚಾರ ಅಂತ ಹೇಳ್ತಾ ಇದ್ದೀರಾ? ಅಂದ್ರೆ ಸೋವಿಯಟ್ ಯೂನಿಯನ್, ನಾರ್ತ್ ಕೊರಿಯಾ ಅಥವಾ ಕಮ್ಯುನಿಸ್ಟ್ ಚೈನಾ ಅಥವಾ ಪೋಲೆಂಡ್ ಇದೆಲ್ಲವೂ ಒನ್ ಪಾರ್ಟಿ ವ್ಯವಸ್ಥೆ ಆಗಿದ್ದು. ಇದಕ್ಕೂ ಸರ್ವಾಧಿಕಾರಕ್ಕೂ ಸಂಬಂಧ ಇದೆ ಅಂತೀರಾ? ಅಂದ್ರೆ ಮಲ್ಟಿಪಾರ್ಟಿ ಸಿಸ್ಟಮ್ ಇರಬೇಕು ಅಂತ ನಿಮ್ಮ ಅಭಿಪ್ರಾಯಾನ?**

ನೋಡಿ, ನಂಬರ್ ಆಫ್ ಪೊಲಿಟಿಕಲ್ ಪಾರ್ಟೀಸ್ ಹೆಚ್ಚಿದ್ದಷ್ಟು ದಿ ಕ್ವಾಲಿಟಿ ಆಫ್ ದಿ ಪಾಲಿಟಿಕ್ಸ್ ಅನ್ನೋದು ಹೆಚ್ಚಿಗೆ ಇರತ್ತೆ ಅನ್ನೋದು ತಪ್ಪು. ಕ್ಲಾಸ್ ಈಕ್ವೇಶನ್ಸ್ ಇರೋದೆ ಪ್ರಧಾನ. ಒಂದೇ ಕ್ಲಾಸ್‌ನವರು ಮೂರು ಪಾರ್ಟಿ ಮಾಡಿಕೋಬಹುದು. ಇನ್ನೊಂದು ಕ್ಲಾಸಿನವರಿಗೆ ಪಾರ್ಟಿ ರಚಿಸಿಕೊಳ್ಳೋದಕ್ಕೆ ಅವಕಾಶಾನೇ ಇರದೇ ಹೋಗಬಹುದು. ಅಮೆರಿಕಾ ಉದಾಹರಣೆ ನೋಡಿ.

ಈಗ ನೋಡಿ ನಾಳೆ ಅಡ್ವಾನೀನೇ ಭಾರತದ ಪ್ರಧಾನಿ ಆಗಬಹುದು. ಅದಕ್ಕೆ ಅಂಗ ಪಕ್ಷಗಳು ಬೆಂಬಲಾನೂ ಕೊಡಬಹುದು. ಮಲ್ಟಿಪಾರ್ಟಿ ಸಿಸ್ಟಮ್‌ನಲ್ಲೇ ಒಮ್ಮತಾಭಿಪ್ರಾಯಾನೂ ಬರಬಹುದು. It does not mean that there is democracy.

- **ಇದಕ್ಕೆ ಪರಿಹಾರ ಏನು ಸಾರ್?**

ಏನಪ್ಪಾ ಅಂದ್ರೆ, ವರ್ಗದ ಆಧಾರದ ಮೇಲೆ ಆರ್ಗನೈಸ್ ಆಗತಕ್ಕಂಥದ್ದು. ಈಗ ಬೇರೊಂದು ದೃಷ್ಟಿಕೋನದ ಭಿನ್ನವರ್ಗ ಒಂದಿದೆ ಅನ್ಕೊಳ್ಳಿ. ಅವರು ಆಗ ತಮ್ಮ ಅಭಿಪ್ರಾಯಾನ ಆರ್ಟಿಕ್ಯುಲೇಟ್ ಮಾಡೋಕೆ ಯತ್ನಿಸ್ತಾರೆ ಅನ್ಕೊಳ್ಳಿ. ಆಗ ಸನ್ನಿವೇಶ ಭಿನ್ನವಾಗಬಹುದು. ಲೆನಿನ್ ಕಾಲದಲ್ಲಿ ಭಿನ್ನರೆಲ್ಲಾ ದೇಶ ಬಿಟ್ಟು ಓಡಿಬಿಟ್ಟಿದ್ದರಿಂದ ಭಿನ್ನವರ್ಗಗಳು ಪಕ್ಷ ರಚಿಸಿಕೊಳ್ಳೋವಂಥ ಸನ್ನಿವೇಶ ಇರಲಿಲ್ಲ. ಆಮೇಲೆ ಸ್ವಲ್ಪ ಕಾಲದ ನಂತರ ದೊಡ್ಡ ಜಮೀನ್ದಾರರ ವರ್ಗ ಒಂದು ಸ್ವಲ್ಪ ಕಾಣಿಸಿಕೊಳ್ತು. ಸ್ಟಾಲಿನ್ ಅಂಥವರು ಏನು ಮಾಡಿದ್ರು? ನಾನು ವರ್ಕಿಂಗ್ ಕ್ಲಾಸಿನವನು, so I will put you down. ಇದೆಲ್ಲ ವಾದ ಮಾಡೋ ಮೂಲಕ ಅಲ್ಲ, ಅಧಿಕಾರಶಕ್ತಿಯ ಮೂಲಕ ಆಯ್ತು. So this is where the schism starts,. On the other hand, suppose ನೀನು ಒಂದು ಕ್ಲಾಸು, ನನ್ನ class formation schemeನಲ್ಲಿ you have no role to play. You will not be the ruling class. ನಾನು Ruling class ಅಥವಾ working class. ನಿಮ್ಮನ್ನ ಸದೆ ಬಡಿದುಬಿಟ್ಟು oppositionನಲ್ಲಿ ಇಟ್ಟಿರ್ತೀನಾ ಅಥವಾ have a diologue with you, allow you to articulate your opinion? Ensure that your following is gradually reduced? This is the process. ಆದ್ರೆ communist ದೇಶಗಳವರು ಏನು ಮಾಡಿದಾರೆ? There is no articulation for the other class opinion. It is not that there is no other class. There is another class.

- **ಆ ಕ್ಲಾಸಿನವರು ಯಾರು ಅಂತೀರಿ?**
ಅವರು ಓನರ್‌ಶಿಪ್ ಇರೋವಂಥವರು. ಆಮೇಲಿಂದ ಆಸ್ಪಿರೇಶನ್ ಫಾರ್ ಓನರ್ಶಿಪ್ ಇರೋವಂಥವರು. ಅಂದ್ರೆ ಹಳೇ ಪದ್ಧತಿಯಲ್ಲಿ ಇನ್ನೂ ನಂಬಿಕೆ ಉಳ್ಳವರು.

- **ಅಂದ್ರೆ ಅಂಥವರಿಗೂ ಪಕ್ಷ ರಚನೆಗೆ - ರಾಜಕಾರಣಕ್ಕೆ ಅವಕಾಶ ಇರಬೇಕು ಅಂತೀರಾ?**
ಇರಬೇಕು, and you have to enter into a dialogue with them, you have to go to their constituency. ನೋಡಿ, ನೀವು, ನಿಮ್ಮ ನಾಯಕರು ಈ ರೀತಿ ಹೇಳ್ತಾ ಇದ್ದೀರಿ. ಆದ್ರೆ ನಾನು ಇದಕ್ಕೆ ಈ ಆಲ್ಟರ್ನೇಟಿವ್ ಹೇಳ್ತೀನಿ ಅನ್ಬೇಕು. ಈ ಬೇಸಿಸ್ ಮೇಲೇನೇ ವರ್ಕ್ ಮಾಡಬೇಕು.

- **ಅಂದ್ರೆ ಎದುರು ಪಕ್ಷದವರನ್ನ ಸದಾ ಸಂವಾದಕ್ಕೆ ಎಳೀತಾ ಅವರಿಗಿರೋ ಬೆಂಬಲವನ್ನು ಕಡಿಮೆ ಮಾಡಿ, ನಮ್ಮ ಕಡೆಗೆ ಜನ ಬೆಂಬಲ ಪಡಕೋಬೇಕು ಅಂತೀರಿ. ಆದರೆ ಇದೇ ಕೆಲಸವನ್ನ ಅವನೂ ಮಾಡಿ ನಿಮ್ಮನ್ನು ಕೆಳಗುರುಳಿಸಬಹುದಲ್ವಾ. ಹೀಗೆ ಮಾಡಿ ಸಕ್ಸೆಸ್ ಆಗೋಕೆ ಆಗತ್ತಾ ಅಂತ?**
Yes, may be, ಕ್ಲಾಸ್ ರಚನೆ ಆಗಬೇಕಾಗಿರೋದೆ ಹಾಗೆ.

- **ಹಾಗಾಗತ್ತಾ ಅಂತ?**
ಅಲ್ಲ, ಆಗತ್ತಾ ಅಂದ್ರೆ - ಚರಿತ್ರೇಲಿ ಇದುವರೆಗೆ ಆಗಿಲ್ಲ. ಉತ್ತರ ಕೊರಿಯಾ ಉದಾಹರಣೆ ಕೊಡೋದಾದ್ರೆ ಅದೊಂದು ಫ್ಯೂಡಲ್ ವ್ಯವಸ್ಥೆ. ಅಂದ್ರೆ ಕಮ್ಯುನಿಸ್ಟ್ ಪಾರ್ಟಿಯ ಸ್ಟೈಲ್ ಆಫ್ ಫಂಕ್ಷನಿಂಗ್ ಯಾವತ್ತಾದ್ರೂ ಇತ್ತಾ ಉತ್ತರ ಕೊರಿಯಾದಲ್ಲಿ? ಇಲ್ಲ.

- **ಹೂಂ ಆ ಗ್ರೇಟ್ ಜೂಚೆಂಗ್ ಐಡಿಯಾ....**
ಕಿಮಿಲ್ ಸುಂಗ್ ಯಾವುದಾದರೂ ಒಂದು ಫ್ಯಾಕ್ಟರಿಗೆ ಸಿಗರೇಟು ಸೇದ್ತಾ ವಿಸಿಟ್ ಮಾಡಿದ್ರೆ, ಅವನ ಸಿಗರೇಟಿನ ಬೂದಿ ನೆಲಕ್ಕೆ ಬಿದ್ರೆ, ಆ ಬೂದೀನ ಎತ್ತಿ ಒಂದು ಟ್ರೇನಲ್ಲಿಟ್ಟು ಎಕ್ಸಿಬಿಟ್ ಮಾಡೋರು. Oh, the great leader Kimil Sung came to our factory on such and such a day, ಅವನು smoke ಮಾಡ್ತಾ ಇದ್ದಾಗ ಬಿದ್ದ ಬೂದಿ ಇದು. ಇದೇನ್ ಪಿಂಡ ಮಾಡೋದು ಅದನ್ನ? But this has happened in North Korea. ಇದ್ಯಾವ ಕಮ್ಯುನಿಸಮ್? But I don't know it is still happening. But ಕಿಮಿಲ್ ಸುಂಗ್ ಕಾಲದಲ್ಲಿ ಅವನು ಈ ಜೂಷ್ ಅನ್ನೋ ಏನೋ idea ಕೊಟ್ಟ. It is an aberration of the worst kind....

ಕ್ಯೂಬಾದಲ್ಲಿ ಕ್ಯಾಸ್ಟ್ರೋ ಬದಲು ರಷ್ಯನ್ ನಾಯಕರಂತಹವರು ಯಾರಾದ್ರೂ ಇದ್ದಿದ್ರೆ, ಖಂಡಿತ ಅವರಿಗೆ ಅಲ್ಲಿನ ಒತ್ತಡಗಳನ್ನ ತಡಕೊಳ್ಳೋಕೆ ಆಗ್ತಾ ಇರ್ಲಿಲ್ಲ. ಯಾವತ್ತೋ ಮಣ್ಣು ಮುಕ್ಕಿಬಿಡುತ್ತಿದ್ದರು. ಕ್ಯಾಸ್ಟ್ರೋಗೆ ಎಂಥಾ ಸಾವಧಾನ ಇದೆ ಅಂದ್ರೆ, internationally and internally ಅದೆಷ್ಟು ಸಹಿಸಿಕೊಳ್ತಾನೆ ಅಂದ್ರೆ, ಅವನಿನ್ನೂ ರಿಪ್ರೆಸಿವ್

ಆಗಿಲ್ಲ ಅನ್ನೋದೆ ಆಶ್ಚರ್ಯ ನನಗೆ. ಅದೊಂದು ಶಕ್ತಿ. ಅವನ ನಂತರ ಕ್ಯೂಬಾದಲ್ಲಿ ಏನಾಗುತ್ತೆ ಅನ್ನೋದು ಇನ್ನೂ ಚರ್ಚೆ ಆಗ್ಬೇಕು.

- **ಸರ್, ನೀವು class enemy ಅಲ್ವೇ ಇದ್ರೂ (ಉನ್ನತ ಜಾತಿಯವರಾದ್ರಿಂದ) ನಿಮ್ಮನ್ನ ಹಾಗಂದ್ರೆ ಏನನ್ನಿಸುತ್ತೆ ನಿಮಗೆ?**

ಇದಕ್ಕೆ ನನ್ನದು ಎರಡು ಅನುಭವಗಳು ಮತ್ತು ಒಂದು ಕಾಮೆಂಟು - ಈ ಮೂರನ್ನೂ ಹೇಳ್ತೀನಿ. ಒಮ್ಮೆ ತಂಜಾವೂರ್ನಲ್ಲಿ ನಾನು ಕ್ಲಾಸ್ ಮಾಡೋಕೆ ಹೋಗಿದ್ದೆ. Historical materialism ಮತ್ತು dialectical materialism ಬಗ್ಗೆ. ಕ್ಲಾಸ್ ಮುಗಿಸಿ ಬಸ್ ಸ್ಟಾಪಲ್ಲಿ ನಿಂತಿದ್ದೆ. ನನ್ನ ಸುತ್ತ ಇದ್ದವರೆಲ್ಲ ನನ್ನ ಭಾಷಣ ಕೇಳಿದ ವಿದ್ಯಾವಂತರು, ಯುವಕರೂ ಆಗಿದ್ದರು. ಮಾತಾಡ್ತಾ ಮಾತಾಡ್ತಾ ಅವರಿಗೆ ನಾನು ತಿರುವಯ್ಯಾರಿಗೆ ಹೋಗ್ಬೇಕಯ್ಯ ಅಂತ ಅಂದೆ. ಒಬ್ಬ ಅಲ್ಲಿದ್ದವನು ತಿರುವಯ್ಯಾರಿಗೆ ಹೋಗ್ಬೇಕಾ? ಅದು ಎಲೀಟಿಸ್ಟ್ ಅಂದ. ಅವನ ಮಾತಿನಲ್ಲಿ ಕಾಸ್ಟ್-ಈಕ್ವೇಷನ್ ಇತ್ತು. ಆದರೆ ಅದು ಸರಿಯಲ್ಲ. ಏಕೆಂದರೆ ನಾದಸ್ವರ ನುಡಿಸೋರು ಯಾವ ಜಾತಿಯವರು?

ನೋಡಿ ಯಾರಿಗಾದ್ರೂ ದಲಿತ ಚಳವಳಿ ಹಾಗೆ ಹೋಗಬಾರದು, ಹೀಗೆ ಹೋಗಬೇಕು ಅಂತಂದ್ರೆ ಅದನ್ನ ಬ್ರಾಹ್ಮನಿಕಲ್ ಮೈಂಡ್ ಅಂತಾರೆ. ನನ್ನ ಕಾಮೆಂಟ್ ಏನಪ್ಪಾ ಅಂದ್ರೆ, ನೀವು 'ಕ್ಲಾಸ್' ಎನ್ನುವುದನ್ನ ಹೇಗೇ ಡಿಫೈನ್ ಮಾಡಿ, ಅದು 'ಡಿಸ್ ಇನ್‌ಹೆರಿಟಿಂಗ್ ಯುವರ್ ಲೆಗಸಿ' ಆಗಬೇಕಿಲ್ಲ. ಇದು ಯಾವುದೇ ಮಾರ್ಕ್ಸ್‌ವಾದಿ ಚಿಂತಕ ಮನಸ್ಸಿನಲ್ಲಿಟ್ಟು ಕೊಳ್ಳಬೇಕಾದ ಮುಖ್ಯ ವಿಚಾರ. ಸಂಸ್ಕೃತಿ ಬಗ್ಗೆ ಮಾತನಾಡುವಾಗ ಲೆನಿನ್ - ಏಂಗಲ್ಸ್ ಬೇಕಾದಷ್ಟು ಸಲ 'you are standing on the shoulders of your previous generations' ಅಂತ ಹೇಳಿದ್ದಾರೆ. ಇಂಥ ಸಂದರ್ಭದಲ್ಲಿ ನಾವು ನೆನಪಿಟ್ಟುಕೋಬೇಕಾದ್ದು - We are not the first generation of revolution aries. Hopefully we are not the last generation either. ಚರಿತ್ರೆಯಲ್ಲಿ ನೀವು ಯಾವ ಕಾಲಕ್ಕೆ ಹೋದ್ರೂ ಇಂತಹ ಸಂಘರ್ಷಗಳನ್ನು ಕಾಣಬಹುದು.

- **ಸರ್ ಕಲಾವಿದರನ್ನ, ಸೃಜನಶೀಲ ಲೇಖಕರನ್ನು ಬಹಿಷ್ಕರಿಸೋದು ಇತಿಹಾಸದಲ್ಲಿ ನಡೆದಿದೆ. ಈ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಆಕ್ರಮಣ ಕುರಿತಂತೆ ಏನು ಹೇಳ್ತೀರಾ?**

ನೋಡಿ, ಇದು ಎಲ್ಲ ಕಾಲದಲ್ಲೂ ಇರೋದೆ. How shall we outgrow this ಅನ್ನೋದು ಮುಖ್ಯ.

- **ಆದರೆ, ಆಡಳಿತಕ್ಕೆ ಏನು ಬರೀತಾನೆ, ಅನ್ನೋದೆ ಮುಖ್ಯ. ಆದ್ರೆ ಈ ತಲೆ ತೆಗಿಯೋದು, ಗುಂಡಿಕ್ಕೋದು, ಗಡೀಪಾರು ಮಾಡೋದು ಎಷ್ಟು ಸರಿ?**

ನೋಡಿ, ಇದು ಬರೀ ಸಾಹಿತಿಗಾಗಿಲ್ಲ. ಸೈಂಟಿಸ್ಟಿಗೂ ಆಗಿದೆ, ಪೆಸೆಂಟ್‌ಗೂ ಆಗಿದೆ, ವರ್ಕರ್ಸ್‌ಗೂ ಆಗಿದೆ, ಪೊಲಿಟಿಕಲ್ ಲೀಡರ್‌ಗೂ ಆಗಿದೆ. ಧೂರ್ತತೆ ಅನ್ನೋದು ಎಲ್ಲ ಕಡೆ ಇರತ್ತೆ. ಅದನ್ನ ನಿಯಂತ್ರಣ ಮಾಡೋ ಕಡೆ ಚಿಂತಿಸಬೇಕು. ಸಮಾಜದ ಹುಳುಕು,

ಅನಾಚಾರಗಳನ್ನು ತೆರೆದು ತೋರಿಸುವ ಅವಕಾಶ, ಸ್ವಾತಂತ್ರ್ಯ ಇರಬೇಕು. ಅಭಿವ್ಯಕ್ತಿ ಸ್ವಾತಂತ್ರ್ಯ ಇರಬೇಕು. 'ಸ್ವಾತಂತ್ರ್ಯ' ಅನ್ನುವುದು ಏಂಗಲ್ಸ್ ಹೇಳುವಂತೆ "ಅಪ್ರಿಸಿಯೇಷನ್ ಆಫ್ ನೆಸೆಸಿಟಿ" ಅಂತ ತಿಳೀಬೇಕು. ಇವೆಲ್ಲ ನಮಗೆ ಒಂದಷ್ಟು ಮಿತಿಯನ್ನು ಒಡ್ಡುತ್ತೆ. ನಿಸರ್ಗ ನಮ್ಮ ಮೇಲೆ ಮಿತಿಯನ್ನ ಒಡ್ಡೋಲ್ವ ಹಾಗೆ. ಈ ಅಪ್ರಿಸಿಯೇಷನ್ ಆಫ್ ನೆಸೆಸಿಟಿ ಅನ್ನೋದು ಕಾನ್‌ಸ್ಟೆಂಟ್ ಅಲ್ಲ, ವೇರಿಯಬಲ್.

ಇನ್ನೊಂದು ನನ್ನ ಅನುಭವ ಹೇಳ್ತೀನಿ. ಯಾವ ರೀತಿ ಬರೆಯಬೇಕು ಅನ್ನೋದಷ್ಟೇ ಅಲ್ಲ, ಒಂದು ಕೃತಿಯನ್ನು ಯಾವ ರೀತಿ ಓದಬೇಕು ಅನ್ನೋದಕ್ಕೂ ನಿರ್ಬಂಧಗಳನ್ನು ಹೇರಬಹುದು, ಅನ್ನೋದಕ್ಕೆ. ಈಗ ನನ್ನ "ಭಾರತೀಯ ವಿಜ್ಞಾನದ ಹಾದಿ" ಪುಸ್ತಕದ ಬಗ್ಗೆ ಸಾಕಷ್ಟು ಜನ ವಿಮರ್ಶೆ ಮಾಡಿದ್ರು, ಬೈದ್ರು. ಅದರ ಬಗ್ಗೆ ಕೆಲವರಿಗೆ ಅತ್ಯಂತ ತೀವ್ರವಾದ ಅಸಮಾಧಾನ ಏನಿದೆ ಅಂದ್ರೆ, ಇವನು ಎಲ್ಲಾನೂ (ಸಾಂಪ್ರದಾಯಿಕ ಜ್ಞಾನವನ್ನು) ನೆಗೆಟೀವಾಗೇ ನೋಡ್ತಾನೆ ಅನ್ನೋದು. ಅದು ಸರಿಯಲ್ಲ. 'ಭಾರತೀಯ ವಿಜ್ಞಾನದ ಹಾದಿಯಲ್ಲಿ' ಎಲ್ಲವನ್ನೂ ನೆಗೆಟೀವ್ ಆಗಿ ನೋಡಿಲ್ಲ.

ನೋಡಿ, ನಮ್ಮ ಪರಂಪರೆಯನ್ನು ಹೀಗೇ ತಿಳೀಬೇಕು ಅಂತ ಮಿತಿ ಹೇರೋರು ನಮ್ಮಲ್ಲಿದ್ದಾರೆ. ಉದಾಹರಣೆಗೆ ಉಪನಿಷತ್ತಿಗೆ ಏಕಾರ್ಥತೆ ಇದೆ ಅನ್ನೋದು ಡಿಬೇಟಬಲ್. ಎರಡೇ ಮಾತಲ್ಲಿ ಹೇಳೋದಾದ್ರೆ, ಉಪನಿಷತ್ತಿಗೆ ಒಂದೇ ಅರ್ಥ ಇರುವುದಾದರೆ ಅದನ್ನು ಹದಿಮೂರು ರೂಪದಲ್ಲಿ ಏಕೆ ಬರೀತಿದ್ರು? ನಾವು ಸ್ವಲ್ಪ ಗಮನವಿಟ್ಟು ನೋಡಿದರೂ ಇವನ್ನ ಯಾವುದೇ ಒಂದು ಕಾಲದಲ್ಲಿ ಬರ್ದಿದ್ದಲ್ಲ ಅನ್ನೋದು ತಿಳಿಯುತ್ತೆ. ಆದರೆ ಸಾವಿರಾರು ಮೈಲಿಗಳಲ್ಲಿ ಹರಡಿ, ನಾನೂರು ಐನೂರು ವರ್ಷಗಳ ಕಾಲದ ಅವಧಿಯಲ್ಲಿ ಅನೇಕ ಜನ ಬರೆದಿರುವಂತಹುದು. Text ನೋಡಿದರೆ ತಿಳಿಯತ್ತೆ. ಆದ್ರೆ ಏಕಾರ್ಥ ಅನ್ನೋದು ನಮ್ಮ ಜನಕ್ಕೆ predetermined. ನಾವು ಅದು ಸರಿಯಿಲ್ಲ ಅಂತ ಹೇಳಿದ್ರೆ, ಇವನು ಹೇಳ್ತಾ ಇರೋದೆಲ್ಲ ಸರಿಯಲ್ಲ ಅಂತಂದುಬಿಡೋದು.

- **ಜೀವನದಲ್ಲಿ ಆಸ್ತಿಕ ಧಾರ್ಮಿಕತೆಯ ಪಾತ್ರವೇನು? ಅದನ್ನು ಸಾರಾಸಗಟಾಗಿ ಮೂಢನಂಬಿಕೆ ಎಂದೂ ಅವೈಚಾರಿಕ ಎಂದೂ ಮೂಢಾತ್ಮರಾದ ಬಹುಜನರ ಅಫೀಮು ಎಂದೂ ನಿರಾಕರಿಸಿಬಿಡುವುದು ಸರಿಯೇ? ಆಸ್ತಿಕ ಧಾರ್ಮಿಕತೆಯ ಸ್ವರೂಪ, ವ್ಯಾಪ್ತಿ ಇಂದು ಏನಾಗಿದೆ?**

ಆಸ್ತಿಕನಾಗಲಿ ನಾಸ್ತಿಕನಾಗಲಿ ವಿಶ್ವದ ವಿಸ್ಮಯವನ್ನು ಗಾಢವಾಗಿ ಅನುಭವಿಸುತ್ತಾನೆ ಮತ್ತು ಅದನ್ನು ವಿಶ್ಲೇಷಿಸಿ ಅರ್ಥೈಸಿಕೊಳ್ಳಲು ತವಕಿಸುತ್ತಾನೆ. ಋಗ್ವೇದದ ಕವಿಗಳ ದಟ್ಟ ಅನುಭವ ಇದಕ್ಕೊಂದು ನಿದರ್ಶನ. ಹೀಗೆ ಮೂಕವಿಸ್ಮಿತನಾಗುವುದು ಬೇರೆ, ದೇವಾನುದೇವತೆಗಳನ್ನು ಪೂಜಿಸಿ ಅವರಿಂದ ಏನೇನನ್ನೋ ಪಡೆಯಬೇಕೆಂಬ ಕಾತುರತೆ ಬೇರೆ. ಧಾರ್ಮಿಕತೆಯ ಅಭಿವ್ಯಕ್ತಿ ಬಹಳ ವೇಳೆ ಯಾಂತ್ರಿಕ ಕ್ರಿಯೆಗಳ ರೂಪದಲ್ಲಿ ತೋರುತ್ತದೆ. ತೀರ್ಥಯಾತ್ರೆ, ಕೇಶಮುಂಡನ, ಗಣೇಶೋತ್ಸವ, ರಾಮಭಜನೆ, ಇಂತಹ ಪ್ರಕಾರಗಳಲ್ಲಿ ವಿಶ್ವವನ್ನು ನೋಡಿ

ಚಕಿತನಾಗಿರುವುದರ ಪ್ರತಿಫಲನೆ ತೀರಾ ನಗಣ್ಯ. ಆಸ್ತಿಕ ಧಾರ್ಮಿಕತೆಯ ಹುರುಳಿರುವುದು ವ್ಯಕ್ತಿತ್ವದ ಸೊಬಗಿನಲ್ಲಿ. ಅದನ್ನು ಮೇಳೈಸಿಕೊಂಡಿರುವ ವ್ಯಕ್ತಿಯಲ್ಲಿ ಅನನ್ಯವಾದ ಪ್ರೀತಿ, ಭ್ರಾತೃತ್ವ ಮತ್ತು ಇತರರೊಡನೆ ಸಮೀಕರಿಸಿಕೊಳ್ಳುವ ಸ್ವಭಾವ ಇರುತ್ತದೆಂದು ತಿಳಿಯಬಹುದು. ಪರಕೀಯರೆಂದು ಯಾರನ್ನಾದರೂ ಎಣಿಸುವುದು, ಅವರನ್ನು ತುಚ್ಛವಾಗಿ ಕಾಣುವುದು, ದ್ವೇಷಿಸುವುದು, ಹಿಂಸಿಸುವುದು, ಕೊಲ್ಲುವುದು, ಇವೆಲ್ಲಾ ಧಾರ್ಮಿಕತೆಯ ಲಕ್ಷಣಗಳಾಗಲು ಸಾಧ್ಯವಿಲ್ಲ. ತನ್ನಂತೆ ಇನ್ನೊಬ್ಬನೂ ಇದ್ದಾನೆ (ಅಸ್ತಿ) ಎಂಬುದು ಆಸ್ತಿಕತೆಯ ಪ್ರಾಥಮಿಕ ಲಕ್ಷಣವೆಂದು ವ್ಯಾಖ್ಯಾನಿಸಬಹುದು. ಆ ಲಕ್ಷಣವನ್ನು ಹೊಂದಿದವರಿಗೆ ದೇವರು ಮೂರ್ತರೂಪದಲ್ಲಿ ಕಾಣುವುದಕ್ಕಿಂತ ಭಾವನೆಯ ರೂಪದಲ್ಲಿ ಪ್ರತ್ಯಕ್ಷನಾಗಬೇಕು. ಚೈತನ್ಯ ಮಹಾಪ್ರಭು ಒಬ್ಬ ದೊಡ್ಡ ಆಸ್ತಿಕ. ಅದು ಪ್ರಕಟಗೊಂಡದ್ದು ಸುಮ್ಮನೆ ಕಲ್ಲು ದೇವರಿಗೆ ನೈವೇದ್ಯ ಉಣಿಸುವ ರೀತಿಯಲ್ಲಲ್ಲ. ಅವರು ರೈತಾಪಿ ಜನರೊಡನೆ ಸಮೀಕರಿಸಿಕೊಂಡು ಭೂಮಾಲೀಕರಿಗೆ ಸವಾಲೆಸೆದರು. ಕಡೆಗೆ ಪುರಿಯ ಜಗನ್ನಾಥನಲ್ಲಿ ಲೀನವಾಗಿ ಹೋದರು ಎಂಬ ಐತಿಹ್ಯ ಇಂದಿಗೂ ಪ್ರಚಲಿತ. ಅಂದರೆ, ಚೈತನ್ಯರ ಧಾರ್ಮಿಕತೆಯು ಜನರನ್ನು ಜೊತೆಗೂಡಿಸಲು ಸಾಧನವಾಯಿತು, ಒಡೆಯಲು ಅಲ್ಲ. ಅವರಿಗೆ ವಿಶ್ವದ ವಿಸ್ಮಯ ಕಾಡಲಿಲ್ಲವೆಂದೇನೂ ಅಲ್ಲ. ಪುರಿಯಲ್ಲಿ ಸಮುದ್ರ ನೋಡುತ್ತಾ ಅದರ ವೈಭವದಲ್ಲಿ ಮುಳುಗಿಹೋದರೆಂದು ಹೇಳುತ್ತಾರೆ. ಹಾಗೆ ಪುಲಕಿತರಾಗಿ ಒಂದು ರೀತಿಯ ಪ್ರಜ್ಞಾಶೂನ್ಯತೆಯನ್ನು ಅನುಭವಿಸುತ್ತಾ ಸಮುದ್ರದೊಳಕ್ಕೆ ನಡೆದೇ ಹೋಗಿಬಿಟ್ಟರಂತೆ! ಇದು ಅವರ ಬಗೆಗಿನ ಇನ್ನೊಂದು ಐತಿಹ್ಯ-ನೈಜವಾದ ಆಸ್ತಿಕ ಧಾರ್ಮಿಕತೆಯ ಪರಿಚಯ ಪಡೆಯಲು ಇಂಥವರನ್ನು, ಜರ್ಮನಿಯ ಥಾಮಸ್ ಮುನ್ಸರ್ ಅಂಥವರನ್ನು, ನೆನೆಯಬಹುದು. ಆಸ್ತಿಕತೆಯ ಅಂತರಾಳವನ್ನು ಹೊಗದವರಿಗೆ ಸಹ, ಅಂದರೆ ಕೇವಲ ಯಾಂತ್ರಿಕ ಆಚರಣೆಗಳನ್ನು ಮಾತ್ರ ತಿಳಿದವರು ಕೂಡ, ಸ್ವಲ್ಪಮಟ್ಟಿಗೆ ಧಾರ್ಮಿಕತೆಯ ಪ್ರಯೋಜನ ಪಡೆಯಲು ಸಾಧ್ಯ. ಇಲ್ಲಿಯ ದುಃಖ-ದುಮ್ಮಾನಗಳಿಗೆ ಅದೊಂದು ಸಿದ್ಧೌಷಧಿಯಾಗಿ ಕೆಲಸ ಮಾಡಬಹುದು. ಪೂರ್ಣಪ್ರಮಾಣದ ಪರಿಹಾರ ನೀಡುವುದರಿಂದಲ್ಲ, ಆದರೆ ಅದನ್ನು ಸಹಿಸಲು ಒಂದು ಮನೋಭೂಮಿಕೆ ರಚಿಸುವ ಮೂಲಕ. ನಿರ್ಹೃದಯೀ ಸನ್ನಿವೇಶವೊಂದರಲ್ಲಿ ಹೃದಯವಂತಿಕೆಯನ್ನು ತುಂಬಿಕೊಡುವುದು ಧರ್ಮ ಎಂದು ಮಾರ್ಕ್ಸ್ ಹೇಳುವುದು ಈ ಅರ್ಥದಲ್ಲಿ. ಆಸ್ತಿಕ ಧಾರ್ಮಿಕತೆಯಲ್ಲಿ ಮೂಢನಂಬಿಕೆಯ ನಂಜು ಖಂಡಿತವಾಗಿಯೂ ಇದೆ, ಆದರೆ ಅದಷ್ಟೇ ಅದರ ಸಾಮಗ್ರಿಯಲ್ಲ. ಕ್ರಿಯಾತ್ಮಕ ಮಧ್ಯಪ್ರವೇಶದಿಂದ ಬದಲಾವಣೆಯ ಹರಿಕಾರನಾಗಲು ಸಾಧ್ಯವಿಲ್ಲದಿರುವಾಗ ಈ ಊರುಗೋಲೂ ಇಲ್ಲದಿದ್ದರೆ ಅದಿನ್ನೆಷ್ಟು ಘೋರವಾಗಿ ಪರಿಣಮಿಸಬಹುದು! ತಾತ್ಕಾಲಿಕವಾಗಿ ಅಫೀಮು ಉಲ್ಲಾಸ ತರಬಹುದು, ಮರೆವನ್ನು ಉಂಟುಮಾಡಬಹುದು, ಬಾಧೆ ಇಲ್ಲವಾಗಬಹುದು; ಆದರೆ ಅಫೀಮನ್ನೇ ಆಹಾರ ಮಾಡಿಕೊಳ್ಳಲು ಸಾಧ್ಯವೇ? ಅದು ಉಚಿತವೆ? ಈಚಿನ ದಿನಗಳಲ್ಲಿ ಆಸ್ತಿಕ ಧಾರ್ಮಿಕತೆಯು ಪ್ರದರ್ಶನಕ್ಕಿಟ್ಟ ವಸ್ತುವಾಗುತ್ತಿದೆ, ತೋರಿಕೆಯ ಒತ್ತಡ ಹೆಚ್ಚುತ್ತಿದೆ. ಒಂದೊಂದು ವ್ರತ ಅಥವಾ

ಪೂಜೆಯೂ ದೂರದರ್ಶನಕ್ಕೆ ಗ್ರಾಸ ಒದಗಿಸಬೇಕಾಗಿದೆ. ಇದು ಸ್ವಸ್ಥ ಮನಸ್ಸಿನ ದ್ಯೋತಕವಲ್ಲ-ಧಾರ್ಮಿಕತೆಯು ಸರಕಾಗುವ ಹಂತ ಮುಟ್ಟಿದ್ದೇವೆ. ಅದರಿಂದಲೇ ಪೈಪೋಟಿ, ಪರಮತ ದ್ವೇಷ, ಅಸಹಿಷ್ಣುತೆ. ಇದಕ್ಕೂ ವಿಶ್ವದ ವಿಸ್ಮಯದ ಹಿನ್ನೆಲೆಯಲ್ಲಿ ಉದಾತ್ತ ಮೌಲಿಕ ಪ್ರಜ್ಞೆ ಮೂಡಿಸಬೇಕಾದ ಆಸ್ತಿಕ ಧಾರ್ಮಿಕತೆಗೂ ಎಲ್ಲಿಯ ಸಂಬಂಧ!

- **ನೀವು ದೇಶದ ಉದ್ದಗಲಕ್ಕೂ ಓಡಾಡಿದ್ದೀರಿ, ವಿದೇಶ ಪ್ರವಾಸವನ್ನೂ ಮಾಡಿದ್ದೀರಿ. ನಿಮಗೆ ತೋರುವ ಹಾಗೆ ಪ್ರಪಂಚದ ಬೇರೆ ಸಂಸ್ಕೃತಿಗಳಿಗೆ ಹೋಲಿಸಿದಂತೆ ಭಾರತೀಯ ಸಂಸ್ಕೃತಿಗೆ ಅತಿ ಮುಖ್ಯವಾಗಿ ತೋರುವ ವೈಶಿಷ್ಟ್ಯವೇನು? ಅದರಲ್ಲಿ ನಿಮಗೆ ಇಷ್ಟವಾಗುವ ವೈಶಿಷ್ಟ್ಯ ಯಾವುದು?**

ನಮ್ಮಲ್ಲಿ ಬೇರೆಯವರನ್ನು ಸಾಮೀಪ್ಯಕ್ಕೆ ಬಿಟ್ಟುಕೊಳ್ಳೋವಂಥ ಆತ್ಮೀಯತೆ ಇದೆಯಲ್ಲ, ಅದು ಬೇರೆಯವರಲ್ಲಿ ಕಾಣದ ವೈಶಿಷ್ಟ್ಯತೆ. ಅಂದರೆ, ಯಾವ ಲಾಭದ ಅಪೇಕ್ಷೆಯೂ ಇಲ್ಲದೆ ಬೇರೆಯವರನ್ನು ಹತ್ತಿರಕ್ಕೆ ಬಿಟ್ಟುಕೊಳ್ಳುವುದು ಮತ್ತು ಆತ್ಮೀಯತೆಯಿಂದ ಕಾಣುವ ಗುಣ ಇದೆಯಲ್ಲ, ಇದು ನಮ್ಮ ವೈಶಿಷ್ಟ್ಯತೆ ಅಂತ ಅನ್ನಿಸತ್ತೆ. ಹಿಂದೆ ವರ್ಣವ್ಯವಸ್ಥೆ ಇದ್ದಿದ್ದರಿಂದ ಯಾರನ್ನು ಹತ್ತಿರ ಸೇರಿಸಬೇಕು, ಸೇರಿಸಬಾರದು ಎನ್ನುವುದು ಸಮಸ್ಯೆಯಾಗಿರ ಬಹುದು. ಆದರೂ ಅವರವರ ಮಿತಿಯೊಳಗೆ ಜನರನ್ನು ಹತ್ತಿರ ಸೇರಿಸುವ ಆತ್ಮೀಯತೆ ಇದೆ. ಆದರೆ ಬೇರೆ ದೇಶಗಳಲ್ಲಿ ಪರಕೀಯರನ್ನು ಅಷ್ಟು ಹತ್ತಿರಕ್ಕೇ ಸೇರಿಸುವುದಿಲ್ಲ.

- **ಬೇರೆ ಯಾವ ರೀತಿಯ ವೈಶಿಷ್ಟ್ಯ ಕಾಣುವಿರಿ?**

ಬಹುಶಃ ಲೋಕಾಯತವಾದದಲ್ಲಿ ಇರುವ ವೈಶಿಷ್ಟ್ಯಕ್ಕೆ ಸಮನಾದುದು ಬೇರೆ ಯಾವ ದೇಶದಲ್ಲೂ ಇಲ್ಲ ಎನಿಸುತ್ತದೆ. ಎಷ್ಟು ಪ್ರಬಲವಾದ ವಿರೋಧ ಆ ದೃಷ್ಟಿಕೋನಕ್ಕೆ ಇತ್ತೆಂದರೆ, ಉಪಾಯವಾಗಿ ಅದನ್ನು ಸಂಪ್ರದಾಯಸ್ಥರಿಗೆ ನೋವಾಗದ ರೀತಿಯಲ್ಲಿ ಅವರೂ ಸಂತೃಪ್ತರಾಗುವಂತೆ ಹೇಳಬೇಕಾದ್ದನ್ನು ಹೇಳಿ ಒಪ್ಪಿಸುವುದು. ಲೋಕಾಯತ ತತ್ವದ ಪ್ರತಿಪಾದನೆಗೆ ಒಂದೇ ಒಂದು ಗ್ರಂಥವೂ ಇಲ್ಲ; ನಮ್ಮಲ್ಲಿ ಇರುವುದೆಲ್ಲ ಅದರ ಖಂಡನೆಯಷ್ಟೆ. ಈಗ ಅದ್ವೈತ ಎಂದರೆ ಕೆಲವು ಗ್ರಂಥಗಳನ್ನು ಹೇಳಬಹುದು. ಆದರೆ ಲೋಕಾಯತಕ್ಕಾಗಿ ಗ್ರಂಥಗಳೇ ಇಲ್ಲ. ಇದು ಜನಸಾಮಾನ್ಯರ ದರ್ಶನ. ಆದ್ದರಿಂದ ಉಳಿದುಕೊಂಡೇ ಬಂದಿದೆ; ಉಳಿಸಿಕೊಂಡು ಬಂದಿದ್ದಾರೆ. ಶಿಷ್ಟರ ತಾತ್ವಿಕ, ದಾರ್ಶನಿಕ ಗ್ರಂಥಗಳಲ್ಲೂ ಕೂಡ ಅದು ಉಳಿಯುವಷ್ಟು ಪ್ರಾಬಲ್ಯ ತೋರಿದೆಯಲ್ಲ!

- **ಒಟ್ಟು ಭಾರತೀಯ ತತ್ವಜಿಜ್ಞಾಸೆಯಲ್ಲಿ, ಪರಂಪರೆಯಲ್ಲಿ ನಿಮಗೆ ಬಹಳ ದೊಡ್ಡ ಹೆಸರುಳ್ಳವರೆಂಬುವರು ಮತ್ತು ಪ್ರಮುಖರಾದವರ ಬಗೆಗೆ ಹೇಳಿ.**

ತತ್ವಶಾಸ್ತ್ರದ ಗ್ರಂಥಗಳ ರಚನೆ ಮಾಡಿರುವವರ ಪೈಕಿ ಯಾವ ಸಂಶಯವೂ ಇಲ್ಲದೆ ಶಂಕರಾಚಾರ್ಯರೇ ಅಗ್ರಗಣ್ಯರು ಎಂದು ನನ್ನ ನಂಬಿಕೆ. ಏಕೆಂದರೆ ಶಂಕರಾಚಾರ್ಯರ ಭಾಷ್ಯದ ಸೊಗಸು, ಗದ್ಯದ ಸೊಗಸಿಗೇ ಓದಬೇಕೆನಿಸುತ್ತದೆ. ಮತ್ತೊಬ್ಬ ಉದಯನಾಚಾರ್ಯ

ನೆಂಬುವನ "ನ್ಯಾಯ ಕುಸುಮಾಂಜಲಿ" ಎಂಬ ಗ್ರಂಥ, ಅದರ ಮೊನಚಿಗೆ ಅದನ್ನು ಓದಲೇಬೇಕು.

- **ದರ್ಶನದ ಮತದಲ್ಲಿ ಬಹಾಯಿಯನ್ನೂ ಒಳಗೊಂಡಂತೆ ನೀವು ಹೇಳಿದ ದರ್ಶನಕ್ಕೆ ಹತ್ತಿರ ಬರುವಂತೆ ಇರುವ ಪರಂಪರೆ, ತತ್ವಜಿಜ್ಞಾಸಕರ ಬಗ್ಗೆ, ಉದ್ದಾಲಕ ಆರುಣಿ ಬಗ್ಗೆ ಹೇಳಿ.**

  ಉದ್ದಾಲಕ ಆರುಣಿಯ ಜಿಜ್ಞಾಸಾ ಪದ್ಧತಿಯನ್ನೇ ರೂಢಿಸಿಕೊಂಡು ಪಾಲಿಸಿಕೊಂಡು ಬಂದಿದ್ದರೆ, ನಮ್ಮ ಚರಿತ್ರೆಯಲ್ಲಿ ಅಸಾಂಗತ್ಯ ಎಂದು ಕರೆಯುವುದು ಕಡಿಮೆಯಾಗುತ್ತಿತ್ತು. ಏಕೆಂದರೆ ಪ್ರಯೋಗಶೀಲತೆಯಿಂದ ಮಾತ್ರವೇ ಒಂದು ವಿಷಯದ ಬಗ್ಗೆ ತೀರ್ಮಾನ ಕೈಗೊಳ್ಳಬೇಕು ಅನ್ನುವುದು ಅದರಲ್ಲಿ ಮುಖ್ಯವಾಗಿದೆ. ಆ ದೃಷ್ಟಿಯಿಂದ ಇಡೀ ಉಪನಿಷತ್ತುಗಳ ವಿಚಾರ, ವಿಧಾನಗಳನ್ನು ಬೇರೆಯವರು ಮುಂದುವರೆಸಿಕೊಂಡು ಹೋಗಬೇಕಿತ್ತು. ವೈದ್ಯಕೀಯ ಗ್ರಂಥಗಳಲ್ಲಿ ಉದ್ದಾಲಕ ಆರುಣಿಯ ಪರಂಪರೆಯನ್ನೇ ಮುಂದುವರಿಸಿಕೊಂಡು ಬಂದಿರುವುದು, ಅದು ಬೇರೆ ಕ್ಷೇತ್ರಗಳಿಗೂ ಹರಡಿದೆ. ಉದಾಹರಣೆಗೆ, ನಮ್ಮ ರಸಾಯನಶಾಸ್ತ್ರದ ಗ್ರಂಥಗಳಲ್ಲೂ ಇದನ್ನು ಕಾಣಬಹುದು.

- **ನಿಮಗೆ ಇಷ್ಟವಾದ ಲೇಖಕ, ಲೇಖಕಿಯರ ಬಗ್ಗೆ ಸ್ವಲ್ಪ ಹೇಳಿರಿ. ಕಾನ್‌ರಾಡ್‌ನ Heart of Darknessನ್ನು ಕುರಿತು ಮಾತನಾಡುವಾಗ ನಿಮ್ಮ ಧ್ವನಿಯೇ ಬೇರೆಯಾಗಿತ್ತು.**

  ರಸೆಲ್‌ನ ಆತ್ಮಚರಿತ್ರೆ ಓದುವುದಕ್ಕೆ ಮುಂಚೆಯೇ Heart of Darkness ಓದಿದ್ದೆ. ಇದು ಬಹಳ ಉತ್ತಮವಾದ ಸಾಹಿತ್ಯ ಮತ್ತು ಮನಸ್ಸಿನ ಮೇಲೆ ಪರಿಣಾಮ ಬೀರುವಂಥದ್ದು. ಅದರ ಆಯಾಮ ವಿಸ್ತಾರವಾದುದು. ಯಾವ ದೃಷ್ಟಿಯಿಂದ ವಿಮರ್ಶೆ ಮಾಡಹೊರಟರೂ ಅದರಲ್ಲಿ ಬೇಕಾದಷ್ಟು ವಿಷಯ ದೊರೆಯುತ್ತದೆ. ಜನಾಂಗೀಯ ಪ್ರಶ್ನೆ, ಆಧ್ಯಾತ್ಮ, ಇಡೀ ಜೀವನದ ಪರಿಪ್ರೇಕ್ಷ್ಯ, ಅದರ ಬಗ್ಗೆ ಆಳವಾದ ದೃಷ್ಟಿ ಈ ಕಾದಂಬರಿಯಲ್ಲಿ ದೊರೆಯುತ್ತದೆ. ಸಂಸ್ಕತದಲ್ಲಿ ಮುದ್ರಾರಾಕ್ಷಸ, ಮೃಚ್ಛಕಟಿಕ, ಇವೆಲ್ಲವನ್ನೂ ಇಷ್ಟಪಟ್ಟು ಓದಿದ್ದೇನೆ. ಟಾಲ್‌ಸ್ಟಾಯ್‌ನ ಎಲ್ಲ ಕಾದಂಬರಿಗಳನ್ನೂ ಓದಿದ್ದೇನೆ. 'ವಾರ್ ಅಂಡ್ ಪೀಸ್' ಹಲವು ಬಾರಿ ಓದಿದ್ದೇನೆ. Resurrection ಬಹಳ ಪ್ರಭಾವಶಾಲಿ ಕಾದಂಬರಿ. ವಾಲ್ಮೀಕಿಯನ್ನು ಪದೇ ಪದೇ ಓದಬೇಕೆನಿಸುತ್ತಿರುತ್ತದೆ.

- **ಪಾಶ್ಚಾತ್ಯೀಕರಣಗೊಂಡವರ ಪ್ರಕಾರ ರಾಮಾಯಣದಲ್ಲಿ ಪುರುಷಪ್ರಧಾನ ಸಮಾಜದಲ್ಲಿನ ಮೌಲ್ಯವನ್ನು ಸ್ಥಾಪಿಸುವುದು ಎನ್ನುವ ಅಭಿಪ್ರಾಯ ಇದೆ. ಆರ್ಯಮೌಲ್ಯ, ಜೀವನ ಪದ್ಧತಿಯನ್ನು ಭರತ ಖಂಡದಲ್ಲಿ ಸ್ಥಾಪಿಸುವ, ಹೇರುವ ದಿಗ್ವಿಜಯದ ಕಥೆ ಎಂಬ ಅಭಿಪ್ರಾಯ ಇದೆ. ಇದರ ಬಗ್ಗೆ ನೀವು ಏನು ಹೇಳುತ್ತೀರಾ?**

  ಕಾವ್ಯದೃಷ್ಟಿಯಿಂದ ನೋಡಿದಾಗ ಕವಿ ಅವನ ಕಾಲದಲ್ಲಿನ ಕೆಲವು ಭಾವನೆಗಳನ್ನು ರೂಢಿಸಿಕೊಂಡಿರುತ್ತಾನೆ. ಅದನ್ನು ನಾವು ಈಗ ಅವನ ಮೇಲೆ ಆಪಾದನೆ ಹೊರಿಸೋಕೆ ಬಳಸೋದಲ್ಲ. ಶೇಕ್ಸ್‌ಪಿಯರ್ ಬಗ್ಗೆ ಮಾತಾಡುವಾಗ ಎಲಿಜಬೆತ್ ಕಾಲದಲ್ಲಿ ಒಂದು ಪರಿಸ್ಥಿತಿ

ಇತ್ತೆಂದು ಒಪ್ಪಿಕೊಳ್ಳಬೇಕಷ್ಟೆ. ವಾಲ್ಮೀಕಿಯ ದೃಷ್ಟಿಗೆ ಆರ್ಯ, ದ್ರಾವಿಡ ಎಂಬ ಭಾವನೆ ಬರಲು ಸಾಧ್ಯವಿರಲಿಲ್ಲ. ಅವನ ಸೀಮಿತ ವಲಯದಲ್ಲಿ ಎಷ್ಟು ಪ್ರಬುದ್ಧವಾದದ್ದನ್ನು ಕೊಟ್ಟಿದ್ದಾನೆಂಬುದು ಪ್ರಮುಖವಾಗುತ್ತದೆಯೇ ಹೊರತು ಅವನ ಮೇಲೆ ನಮಗೆ ತೋರುವ ಗ್ರಹಿಕೆಗಳನ್ನು ಆರೋಪಿಸಬಾರದು. ವಾಲ್ಮೀಕಿಯು ಪುರುಷಪ್ರಧಾನ ಸಮಾಜದಲ್ಲಿದ್ದು ಕೊಂಡು ಅದನ್ನು ಪ್ರಶ್ನಿಸಬಹುದಿತ್ತು. ಆದರೆ ಅವನು ಹಾಗೆ ಮಾಡಿಲ್ಲ,.

- **ಕೊನೆಯ ಪ್ರಶ್ನೆ : ನಿಮಗೆ ಇಷ್ಟವಾದ ತಿಂಡಿ ಯಾವುದು ?**

  ನಾನು ಸಾಮಾನ್ಯವಾಗಿ ಸಸ್ಯಹಾರಕ್ಕೆ ಸಂಬಂಧಪಟ್ಟ ಎಲ್ಲವನ್ನು ತಿನ್ನುತ್ತೇನೆ. ಆದರೂ ತುಂಬ ಇಷ್ಟವಾದದ್ದು ಅಂದರೆ ಹಬೆಯಲ್ಲಿ ಬೆಂದ ಕಡುಬು ಮತ್ತು ಶ್ರೀಖಂಡ ಎಂದು ಹೇಳಬಹುದು.

ಸರ್, ಇಷ್ಟು ಸುದೀರ್ಘವಾದ ಸಂವಾದದಲ್ಲಿ ನಮ್ಮೊಡನೆ ನಿಮ್ಮ ವಿಚಾರಗಳನ್ನು ಹಂಚಿಕೊಂಡಿದ್ದೀರಿ. ತುಂಬ ವಂದನೆಗಳು.

❑

ಭಾಗ ಎರಡು

ಕೃತಿ ಚಿಂತನೆ

(ಡಾ. ಜಿ. ರಾಮಕೃಷ್ಣ ಅವರ ಕೃತಿಗಳ ಅವಲೋಕನ)

ಜಿ.ಆರ್. - ಮುನ್ನೋಟ

ಡಾ. ಜಿ. ಶ್ರೀನಿವಾಸಮೂರ್ತಿ

ಜಿ.ಆರ್. ಮೊದಲಿಗೆ ಸಂಸ್ಕೃತವನ್ನು ಅಧ್ಯಯನ ಮಾಡಿ ಮುಂದೆ ಇಂಗ್ಲಿಷ್ ಅಧ್ಯಾಪಕರಾದವರು. ಸಂಸ್ಕೃತದಲ್ಲಿಯೂ ಸಾಹಿತ್ಯವಲ್ಲದೆ ವೇದ, ವೇದಾಂತ ಮತ್ತು ಯೋಗಶಾಸ್ತ್ರಗಳನ್ನು ಅಭ್ಯಾಸಮಾಡಿದವರು. ಸಂಸ್ಕೃತದಲ್ಲಿ ಆನರ್ಸ್ ಮತ್ತು ಎಂ.ಎ. ಮಾಡಿ ಪ್ರೊ. ಎಸ್. ರಾಮಚಂದ್ರ ರಾಯರಲ್ಲಿ ಋಗ್ವೇದದಲ್ಲಿನ ಋತದ ಕಲ್ಪನೆ ಕುರಿತು ಪಿಎಚ್.ಡಿ. ಮಾಡಿದರು. ಲೋಣಾವಲದಲ್ಲಿ ಸ್ವಾಮಿ ಕುವಲಯಾನಂದರಲ್ಲಿ ಯೋಗಾಭ್ಯಾಸ ಮಾಡಿದರು. ಸ್ವಂತ ಆಸಕ್ತಿಯಿಂದ ಈಗೊಂದು ಇಪ್ಪತ್ತು ವರ್ಷಗಳ ಹಿಂದೆ ಶಂಕರ ಮಠದ ಕೃಷ್ಣಜೋಯಿಸರಂತಹ ವಿದ್ವಾಂಸರಲ್ಲಿ ವೇದಾಂತದ ಅಧ್ಯಯನ ಮಾಡಿದರು. ಹೀಗೆ ಆಧುನಿಕ ಮತ್ತು ಪರಂಪರಾಗತ ಮಾದರಿಗಳಲ್ಲಿ ಶಾಸ್ತ್ರಾಧ್ಯಯನ ಮಾಡಿದಾಗ್ಯೂ ಆ ಅಧ್ಯಾಪಕರ ಬಗ್ಗೆ ತುಂಬು ಗೌರವವಿಟ್ಟುಕೊಂಡೇ ಆ ಅಧ್ಯಾಪಕರು ಹೇಳಿದ್ದನ್ನು ಪ್ರಶ್ನಿಸಿ, ವಿಮರ್ಶಿಸಿ ನಮಗೂ ಹಾಗೆ ವಿಮರ್ಶಿಸುವದನ್ನು ಪ್ರೋತ್ಸಾಹಿಸಿದವರು. ಆದರೆ ಇವರಿಗೆ ದೇವೀಪ್ರಸಾದ ಚಟ್ಟೋಪಾಧ್ಯಾಯರು ಆರಾಧ್ಯರು. ಎಚ್.ಎಸ್. ರಾಘವೇಂದ್ರರಾವ್ ಕಲಕತ್ತೆಯಲ್ಲಿ ಕೇಳಿಸಿಕೊಂಡದ್ದು 'ಭಕ್ತೊ ರಾಮಕೃಷ್ಣೋ ದೇಬೀಪ್ರಸಾದ ಭಕ್ತೋ' ಎಂದಂತೆ. ನಮ್ಮ ಸಾಮಾನ್ಯ ಗ್ರಹಿಕೆಯಂತೆ ಸಂಸ್ಕೃತ ಅಧ್ಯಯನ ಮಾಡಿದವರು ಹಳೆಯದರ ಹಳಹಳಿಕೆಯಲ್ಲಿ ಕಳೆದುಹೋದವರು. ವೇದಾಧ್ಯಯನ ಮಾಡಿದವರು ಕುತೂಹಲವನ್ನೆ ಕಳೆದುಕೊಂಡ ಜಡರು. (ವೇದಾಭ್ಯಾಸ ಜಡಃ ವಿಷಯ ವ್ಯಾವರ್ತಕೌತೂಹಲಃ - ಎಂದು ಕಾಳಿದಾಸನೆ ಬ್ರಹ್ಮನನ್ನು ಜರೆದ). ಇನ್ನು ಆಂಗ್ಲ ಅಧ್ಯಾಪಕರು ಓರಿಯಂಟಲಿಸ್ಟ್‌ರು ಇಂಡಾಲಜಿಸ್ಟ್‌ರು ಹೇಳಿದ್ದನ್ನೇ

ವೇದವಾಕ್ಯ ಎಂದು ತಿಳಿದ, ಮೂಲವನ್ನು ಮೂಸಿಯೂ ನೋಡದೆ ಮೂದಲಿಸುವ ಧೀರರು. ಈ ಎರಡು ಅತಿರೇಕಗಳಿಂದ ತಪ್ಪಿಸಿಕೊಂಡು ಆದರೆ ಎರಡೂ ಓದಿನ ಸಾರ್ಥಕ ಬೆಸುಗೆ ಹೊಂದಿರುವ ಕೆಲವೇ ವ್ಯಕ್ತಿಗಳಲ್ಲಿ ಜಿ.ಆರ್. ಒಬ್ಬರು. ಜತೆಗೆ ಸಾಹಿತ್ಯ-ಸಂಸ್ಕೃತಿಗಳ ಅಧ್ಯಯನ ಕೇವಲ ಶೈಕ್ಷಣಿಕ ಆಸಕ್ತಿಯಲ್ಲದೆ ಸಾಮಾಜಿಕ ಚಟುವಟಿಕೆಯ, ಬದ್ಧತೆಯಿಂದ ಕೂಡಿದ ಚಳವಳಿಗಳ ಮತ್ತು ತಮ್ಮ ಕ್ರಿಯಾಶೀಲತೆಯ ಸೈದ್ಧಾಂತಿಕ ಚೌಕಟ್ಟಿನ ಪ್ರಮುಖ ಮೂಲ ಸೆಲೆಯಾಗಿ- ನೆಲೆಯಾಗಿ ಜಿ.ಆರ್. ಅವರ ಅಧ್ಯಯನ ನಡೆದಿದೆ. ಮಾರ್ಕ್ಸ್, ಏಂಗಲ್ಸ್ ಮತ್ತು ಲೆನಿನ್‌ರ ಸೈದ್ಧಾಂತಿಕ ಚೌಕಟ್ಟಿನಲ್ಲಿ ಎಂದರೆ ಕ್ಲಾಸಿಕಲ್ ಮಾರ್ಕ್ಸ್‌ವಾದೀ ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ರೂಪಿಸಿಕೊಂಡಿರುವುದನ್ನು ಅವರೇ ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. ಡಿ.ಡಿ. ಕೊಸಾಂಬಿ, ದೇವೀಪ್ರಸಾದ ಚಟ್ಟೋಪಾಧ್ಯಾಯರ ಕೆಲಸವನ್ನು ಜಿ.ಆರ್. ಮುಂದುವರೆಸಿದರು.

ಕೆಂಬಾವುಟ, ಅರುಣ ಮುಂತಾದ ಎಡಪಂಥೀಯ ಪತ್ರಿಕೆಗಳಿಗೆ ಬರೆದ ಲೇಖನಗಳನ್ನೂ ವಿಶ್ವವಿದ್ಯಾನಿಲಯಗಳಲ್ಲಿ ಮಂಡಿಸಿದ ಪ್ರಬಂಧಗಳನ್ನೂ 1980ರಲ್ಲಿ ಮಾ-ಲೆ ಪ್ರಕಾಶನದಡಿ ತಾವೆ ಪ್ರಕಟಿಸಿದರು. 'ಏನು ಮಾಲೆ ಸಾರ್ ಇದು' ಎಂದು ಕೇಳಿದಾಗ ಮದುವೆಯಾಗದ ಜಿ.ಆರ್. 'ಒಂಥರಾ ಸಂಬಂಧಮಾಲೆ - ಮಾರ್ಕ್ಸ್ - ಲೆನಿನ್' ಎಂದಿದ್ದರು. ಹೀಗೆ ಅವರೇ ಪ್ರಕಟಿಸಿಕೊಂಡ ಮೊದಲ ಲೇಖನಗಳ ಸಂಗ್ರಹ 'ಮುನ್ನೋಟ'. ಇದು ಅವರ 'ಆಯತನ', 'ಭಾರತೀಯ ವಿಜ್ಞಾನದ ಹಾದಿ'ಯಂತಹ ಮುಂದಿನ ಕೃತಿಗಳ ಮುನ್ನೋಟವೂ ಹೌದು. ಭಾರತೀಯ ಸಂಸ್ಕೃತಿ ಸಾಹಿತ್ಯ ಚಿಂತನೆಗಳಿಂದ ನಮ್ಮ ಜೀವನದ ಮುನ್ನೋಟವೂ ಹೌದು. ಜಿ.ಆರ್. ಅವರ ವಿಚಾರ ಸಾಹಿತ್ಯದ ಕೃತಿ ಆ ಪ್ರಕಾರದಲ್ಲಿ ಶೈಕ್ಷಣಿಕ-ಜನಪ್ರಿಯ ಬರವಣಿಗೆಗಳ ಸಂಮೇಳ. ಮುನ್ನೋಟ ದಲ್ಲಿ 232 ಪುಟಗಳಲ್ಲಿ 4 ವಿಭಾಗಗಳಲ್ಲಿ 23 ಲೇಖನಗಳಿವೆ.

ಮುನ್ನೋಟದ ಮೊದಲ ವಿಭಾಗ 'ಭಾರತೀಯ ಸಂಸ್ಕೃತಿ ಇಣುಕುನೋಟ'. ಮೊದಲ ಲೇಖನ - 'ವೈದಿಕ ಸಾಹಿತ್ಯದಲ್ಲಿ ಋತದ ಕಲ್ಪನೆ'. ಇದು ಅವರ ಪಿಎಚ್.ಡಿ. ಮಹಾಪ್ರಬಂಧದ ಸಾರಲೇಖದಂತಿದೆ. ಋತದ ಮಹತ್ವ ಮತ್ತು ಅದರ ವಿವಿಧ ಮುಖಗಳನ್ನು ಆರೇಳು ಉದ್ಧರಣಗಳ ಮೂಲಕ ನೀಡಿ 'ಋತ'ವು ಪ್ರಾಚೀನ ವೈದಿಕರು ಕಂಡುಕೊಂಡ ಪ್ರಕೃತಿಯ ವ್ಯವಸ್ಥೆಯೂ ಹೌದು, ಸಾಮಾಜಿಕವಾಗಿ ಗಣತಂತ್ರದ ನೈತಿಕ ವ್ಯವಸ್ಥೆಯೂ ಹೌದು. ಕೊನೆಗದು ಯಜ್ಞನಿಯಮವೆಂದೂ ಆಯಿತು. ಸಮಷ್ಟಿಜೀವನ ಮರೆಯಾದಾಗಿನ ನೆನಪು ಮರುಕಳಿಸಿ ವೈದಿಕ ಕವಿಗಳು ಖಿನ್ನರಾಗಿದ್ದೂ ಉಂಟು. ಋಗ್ವೇದದ ಸರಳ, ಸುಂದರ ಮತ್ತು ಆರಂಭಿಕ ಅಮೂರ್ತೀಕರಣದ ಮಾತುಗಳನ್ನು ಹಿಗ್ಗಿಸಿ ಹಿಂಜಿ ಜಟಿಲವಾದ ಆಧ್ಯಾತ್ಮಿಕತೆಯನ್ನು ಅದಕ್ಕೆ ಆರೋಪಿಸುವ ಪುನರುತ್ಥಾನವಾದಿಗಳನ್ನು ಆಕ್ಷೇಪಿಸುತ್ತ ಲೇಖನ ಆರಂಭವಾಗುತ್ತದೆ. ಕೊನೆಯಲ್ಲಿ ಋತವನ್ನು ಅವೆಸ್ತನ್‌ನ ಅಶ, ಚೀನಾದ ತಾವೋ ಕಲ್ಪನೆಗಳಿಗೆ ಹೋಲಿಸಿ ಅವೆಲ್ಲವೂ ಮೂಲತಃ ಲೆನಿನ್ ಹೇಳುವ 'ಪ್ರಾಚೀನ ಕುಲೀನ ಸಮಾಜದ ಸರಳ ನೈತಿಕ ಗಾಂಭೀರ್ಯ' ಎಂದು ಮುಗಿಸುತ್ತಾರೆ.

'ಭಾರತೀಯ ತತ್ತ್ವಶಾಸ್ತ್ರದಲ್ಲಿ ಬಂಧನ ಮತ್ತು ಬಿಡುಗಡೆಯ ನೆಲೆಗಳು' ಎನ್ನುವ ಲೇಖನ 'What is living and what is dead in Indian philosophy' ಎಂಬ ದೇವೀಪ್ರಸಾದರ

ಪುಸ್ತಕದ ಆಶಯವನ್ನು ಪರಿಚಯಿಸುತ್ತದೆ. ವಾಲ್ಟರ್ ರೂಬೆನ್ ಎನ್ನುವ (ಪೂರ್ವ) ಜರ್ಮನಿಯ ಇಂಡಾಲಜಿಸ್ಟ್ ಉಪನಿಷತ್ತುಗಳಲ್ಲಿಯೇ ಉದ್ಧಾಲಕ-ಆರುಣಿ ಮತ್ತು ಯಾಜ್ಞವಲ್ಕ್ಯರಲ್ಲಿ ಭೌತವಾದ ಮತ್ತು ಭಾವನಾಮೂಲವಾದಗಳ ಎರಡು ಮಾದರಿಗಳಿವೆಯೆಂದು ಪ್ರತಿಪಾದಿಸಿದ್ದನ್ನು ಮುಂದುವರೆಸಿ ವೇದಾಂತದ ಪ್ರಸಿದ್ಧವಾದ ಬ್ರಹ್ಮವಾದವನ್ನು ತಿರಸ್ಕರಿಸಿ, ಸಂಸಾರವನ್ನು ಹೇಯವೆನ್ನುವ ಭಾವನಾವಾದವೇ ಸಮಾಜಕ್ಕೆ ಬಂಧಕ, ವೈಜ್ಞಾನಿಕ ತಿಳಿವಳಿಕೆ ಮತ್ತು ಅದರಿಂದ ಬರುವ ನಿಶ್ಚಿತ ಕಾರ್ಯತಂತ್ರಕ್ಕೆ ಕಾರಣವಾದ ಭೌತವಾದ ಬಿಡುಗಡೆಗೆ ಕಾರಣ. ಈ ಎರಡೂ ಧಾರೆಗಳು ನಮ್ಮ ಪರಂಪರೆಯಲ್ಲಿವೆ. ರಾಜಮರ್ಯಾದೆ ಪಡೆದ ಭಾವನಾವಾದ ಧಾರ್ಮಿಕತೆ ಮತ್ತು ಧರ್ಮಶಾಸ್ತ್ರಗಳ ಮುಖಾಂತರ ಭೌತಮೂಲವಾದದ ಆಯುರ್ವೇದದಂತಹ ವಿಜ್ಞಾನದ ಮೇಲೆ ಹತೋಟಿ ಸಾಧಿಸಿತು ಎನ್ನುವುದು 'ಪ್ರಾಚೀನ ಭಾರತದಲ್ಲಿ ವಿಜ್ಞಾನ ಮತ್ತು ಸಮಾಜ' ಎಂಬ ಲೇಖನದ ಮುಖ್ಯ ವಾದ. ಬೌದ್ಧಿಕ ಮಟ್ಟದಲ್ಲಿ ಆದದ್ದೆ ಸಾಮಾಜಿಕ ಮಟ್ಟದಲ್ಲೂ ಜಾತಿ-ವರ್ಣಗಳ ಹೆಸರಿನಲ್ಲಿ ದುಡಿಯುವ ವರ್ಗ-ಶೂದ್ರರ ಶೋಷಣೆಯಾಗಿದೆ ಮತ್ತು ದುಡಿಮೆಗಾರರು ಯಾಂತ್ರಿಕವಾಗಿ ದುಡಿಯುವಂತೆ ವಿದ್ಯಾಭ್ಯಾಸದಿಂದ ವಂಚಿತರಾಗಿದ್ದಾರೆ. ಧರ್ಮಸೂತ್ರಕಾರರ ಕೆಲಸಕ್ಕೆ ಗೀತೆಯಲ್ಲಿ ಸಿಕ್ಕ ಸಮರ್ಥಿಸಾಯಿಷಿಗಳೇ ಈಗಲೂ ಆಳ್ವಿಕೆಯಲ್ಲಿನ ಭಾವನಾಮೂಲವಾದಿಗಳಲ್ಲಿ ಮುಂದುವರೆದಿದೆ ಎಂದು 'ಭಾರತೀಯ ಸಮಾಜದಲ್ಲಿ ವರ್ಣ ಮತ್ತು ಜಾತಿ' ಎಂಬ ಲೇಖನ ಪ್ರತಿಪಾದಿಸುತ್ತದೆ.

ಎರಡನೆಯ ಭಾಗ ಸಾಹಿತ್ಯಮೀಮಾಂಸೆ ಎಂದಿದ್ದರೂ ವಾಮಪಂಥೀಯ ಸಾಹಿತ್ಯಕ ಚಿಂತನೆಯೊಡನೆ ವಾಮಪಂಥೀಯ ಲೇಖಕರಾದ ಬಂಗಾಲದ ಶರತ್‌ಚಂದ್ರ, ಹಿಂದಿಯ ಪ್ರೇಮ ಚಂದರನ್ನು ಕುರಿತು ಮತ್ತು ವಿಶ್ವಸಾಹಿತಿ ಲಿಯೊ ಟಾಲ್‌ಸ್ಟಾಯ್ ಕುರಿತು ವಿಮರ್ಶಾತ್ಮಕ ಪರಿಚಯಗಳಿವೆ. ಕಲೆಗಾಗಿ ಕಲೆ ಎನ್ನುವುದನ್ನು ಲೇವಡಿ ಮಾಡಿ ಮಾನವನಿಗಾಗಿ ಕಲೆ, ಜೀವನ ಸೌಂದರ್ಯಕ್ಕಾಗಿ ಕಲೆ ಎನ್ನುವುದನ್ನು ಪ್ರತಿಪಾದಿಸುವುದೆ ಈ ವಿಭಾಗದ ಗುರಿ. ಆದ್ದರಿಂದ ಆಧುನಿಕ ಸಾಹಿತ್ಯವಾಗಿರಲಿ ಪ್ರಾಚೀನ ಸಾಹಿತ್ಯವಾಗಿರಲಿ ಅದು ನಮಗೆ ಎಷ್ಟು ಪ್ರಸ್ತುತ ಎನ್ನುವುದೇ ಅಳತೆಗೋಲು. ಸಾಮಾಜಿಕ ಕಳಕಳಿ ಮತ್ತು ಬದ್ಧತೆಗಳು ಕೇವಲ ಘೋಷಿತ ಉದ್ದೇಶಗಳಾಗಿರದೆ ಒಟ್ಟು ಸಾಹಿತ್ಯ ಕೃತಿಯಿಂದ ಹೊಮ್ಮುವ ಅರ್ಥವಾಗಿರಬೇಕು ಹಾಗು ಸಾಹಿತ್ಯಿಕ ಸೌಂದರ್ಯವು ಸಫಲವಾಗುವುದು ತನ್ನ ಸಾಮಾಜಿಕ ಕಳಕಳಿಯಿಂದಲೇ. ಸಾಮಾಜಿಕ ವಾಸ್ತವವಾದವು ಇವರ ಸಾಹಿತ್ಯ ಮೀಮಾಂಸೆಯ ಮುಖ್ಯ ನೆಲೆ. ಮೂವರು ಕಾದಂಬರಿಕಾರರನ್ನು ಇವರು ವಿಮರ್ಶಿಸಿರುವುದು ಇದೇ ನೆಲೆಗಟ್ಟಿನಿಂದ. ಸಾಹಿತಿಯ ಸ್ವಾತಂತ್ರ್ಯ ಅಥವಾ ಪತ್ರಿಕಾ ಲೇಖಕರ ಸ್ವಾತಂತ್ರ್ಯವನ್ನು ಪರಿಗಣಿಸಬೇಕು, ಅಭಿವ್ಯಕ್ತಿ ಕ್ರಮ ಬಹುಪಾಲು ವ್ಯಕ್ತಿಗತವಾಗಿರಬಹುದು ಆಶಯಗಳು ಸಾಮಾಜಿಕವೇ. ಹಾಗಿಲ್ಲದಿದ್ದರೆ ಲೇಖಕ ತಿರಸ್ಕೃತನಾಗುತ್ತಾನೆ. ಯಾರ ಹಂಗಿಲ್ಲದೆ ಬರೆಯಲು ಲೇಖಕ ಸ್ವತಂತ್ರನಿದ್ದಂತೆ ಅವನನ್ನು ತಿರಸ್ಕರಿಸಲು ಬೇರೆಯವರೂ ಸ್ವತಂತ್ರರು. ಶರಚ್ಚಂದ್ರರು, ಪ್ರೇಮಚಂದ್ರರು ಎಡಪಂಥೀಯ ಒಲವಿನ ಲೇಖಕರಾದರೂ ಎಲ್ಲರೂ ಮೆಚ್ಚುವ ಲೇಖಕರು. ಟಾಲ್‌ಸ್ಟಾಯ್ ಗಟ್ಟಿಯಾಗಿ ಪ್ರತಿಭಟಿಸಿದ ಸೌಮ್ಯವಾದಿಗಳಾದರೂ ಲೆನಿನ್ ಸಹ ಮೆಚ್ಚುವ ಲೇಖಕ.

ದೀಪಧಾರಿಗಳು ಎಂಬ ಮೂರನೆಯ ಭಾಗ ಮಾರ್ಕ್ಸ್ ಮತ್ತು ಏಂಗಲ್ಸ್‌ರ ಅಪೂರ್ವ ಬಾಂಧವ್ಯ, ಗಾಂಧಿ, ಲೆನಿನ್, ಚೆಗವಾರರ ಜೀವನ ಕುರಿತ ಲೇಖನಗಳನ್ನು ಒಳಗೊಂಡಿವೆ. ಏಂಗಲ್ಸ್ ಮಾರ್ಕ್ಸ್ ಅವರಿಗೆ ಆರ್ಥಿಕವಾಗಿ ಒತ್ತಾಸೆಯಾಗಿದ್ದವರು ನಿಜ ಆದರೆ ಸ್ಪಾನ್ಸರರ್ ಹಾಗೆ ಅಲ್ಲ, ಒಬ್ಬ ಸಂಗಾತಿಯಾಗಿದ್ದರು. ತಮ್ಮ ತಮ್ಮ ವ್ಯಕ್ತಿತ್ವಗಳನ್ನು ಬಿಟ್ಟುಕೊಡದೆಯೆ ಪರಸ್ಪರ ಪ್ರಭಾವವಿದ್ದಾಗ್ಗೆ ಕೂಡ ಇನ್ನೊಬ್ಬರ ಮಹತ್ವವನ್ನೇ ಬೆಳಗಿಸುವ, ನಿಷ್ಕರ್ಷಜ್ಞಾನ ಮತ್ತು ಕ್ರಿಯಾಶೀಲತೆಗಳನ್ನು ಹೊಯ್-ಕೈಯಾಗಿಸಿ, ಹೆಗಲಿಗೆ ಹೆಗಲುಕೊಟ್ಟು ನಡೆದ ಅಪೂರ್ವ ಜೋಡಿಯ ಚಿತ್ರಣ ಮಾರ್ಮಿಕವಾಗಿದೆ. ಇನ್ನೊಂದು ಹೋರಾಟದ ಜೀವ ಲೆನಿನ್ ತಮ್ಮ ಒಟ್ಟು ಹೋರಾಟದ ಭಾಗವಾಗಿ ಶಿಕ್ಷಣದ ರೀತಿನೀತಿಗಳ ಬಗ್ಗೆ, ಸಾಮಾಜಿಕ, ಆರ್ಥಿಕ ರಾಜಕೀಯ ಹೋರಾಟಗಳಲ್ಲಿ ವಿದ್ಯಾರ್ಥಿಗಳ ಮತ್ತು ಯುವಕರ ಪಾತ್ರ ಕುರಿತ ವಿಚಾರಗಳು ನಮ್ಮ ವಿದ್ಯಾಭ್ಯಾಸವನ್ನೇ ಕುರಿತ ವಿಚಾರಗಳೂ ಆಗಿವೆ. ಇಂದಿನ ಯುವಕರು ನಾಳೆಯ ಪ್ರಜೆಗಳು ಎಂದರೆ ನಾಳೆಯ ಕೆಲಸಗಾರರು (ಪು.140) ಎನ್ನುವ ಮಾತು ಮನನೀಯ. ಕಟ್ಟಾ ಮಾರ್ಕ್ಸ್‌ವಾದಿಗಳಾಗಿ ಜಿ.ಆರ್. ಗಾಂಧೀಜಿಯ ಹೋರಾಟದಲ್ಲಿನ ಪಕ್ವವನ್ನು, ಅಸಾಧಾರಣ ಜಾಣ್ಮೆಯನ್ನು ಮೆಚ್ಚಿಕೊಳ್ಳುವವರು. 1934ರಲ್ಲಿ ಗಾಂಧಿ ಜಮೀನುದಾರರ ಪರವಹಿಸಿದ್ದನ್ನು ಆಗಿನ ವಸಾಹತು ಸಂದರ್ಭದಲ್ಲಿ ಅವರ ರಾಜಕೀಯ ಮತ್ತು ಸಂಘಟನಾ ಪ್ರಜ್ಞೆಯ ದ್ಯೋತಕವಾಗಿ ಜಿ.ಆರ್. ಕಾಣುತ್ತಾರೆ. ಗಾಂಧಿ ಅಥವಾ ಅವರ ಕಾಲದವರನ್ನು ಸುಮ್ಮನೆ ಮೂದಲಿಸಿ ತರ್ಕ ಬೆಳೆಸುವುದನ್ನು 'ಅವೈಜ್ಞಾನಿಕ'ವೆಂದು ಒತ್ತಿಹೇಳುತ್ತಾ (ಪು. 126) ತಮ್ಮ ಕಾಲದ ಸಂದರ್ಭ, ಜನತೆಯ ಪ್ರಜ್ಞಾಮಟ್ಟ, ಹೋರಾಟದಲ್ಲಿನ ಆಸ್ಥೆ, ಸಂವೇದನೆ ಇವುಗಳನ್ನಾಧರಿಸಿ ಜನರನ್ನು ಮುಂದಿನ ಮಟ್ಟಕ್ಕೆ ಒಯ್ದರೆ – ಎನ್ನುವುದನ್ನಾಧರಿಸಿ ನಾಯಕರ ಯೋಗ್ಯತೆ ಅಳೆಯುವುದು ಸೂಕ್ತ ಎಂಬ ಸೂತ್ರ ಮುಂದಿಟ್ಟು, ಗಾಂಧಿ ದಕ್ಷಿಣಾಫ್ರಿಕಾದಲ್ಲಿ ಆರಂಭಿಸಿದ ಹೋರಾಟ ಈಗಿನ ವಿಜಯಪತಾಕೆಯಡಿ ತೆಗಳುವುದು ಬಾಲಿಶತ್ವದ ಪರಮಾವಧಿ ಎನ್ನುತ್ತಾರೆ. ಇದಕ್ಕೆ ಪ್ರತಿಯಾಗಿ ಎಡಪಂಥೀಯ ಹೋರಾಟಗಾರ ಚೆಗೆವಾರನ ಜೀವನಚಿತ್ರಣದಲ್ಲಿ ಅವನ ಅದಮ್ಯ ಉತ್ಸಾಹ, ಕ್ರಿಯಾಶೀಲತೆಗಳ ಜ್ವಲಂತ ಚಿತ್ರಣ ನೀಡುತ್ತಲೆ ಚೆ ಬೊಲಿವಿಯಾ ದಲ್ಲಿ ವಿಫಲರಾದದ್ದು 'ಸಮಾಜದ - ಸಮುದಾಯದ ರಾಜಕೀಯ ಪ್ರಜ್ಞೆ ಬೆಳೆಸದೆ ಹೊರಗಿನಿಂದ ಕ್ರಾಂತಿಯನ್ನು ಹೇರುವ ಪ್ರಯತ್ನದಿಂದ, ಚಾರಿತ್ರಿಕ ತತ್ವದೃಷ್ಟಿಯ ಕೊರತೆಯಿಂದ.' ಎಂದು ವಿಶ್ಲೇಷಿಸುತ್ತಾರೆ. ಇವು ಅಫ್ಘಾನ್, ಇರಾಕ್‌ಗಳಲ್ಲಿನ ರಷ್ಯ-ಅಮೆರಿಕ ಪ್ರಯತ್ನಗಳನ್ನು ಅರ್ಥಮಾಡಿಕೊಳ್ಳಲು ಸಹ ಉಪಯುಕ್ತ. ಲೆನಿನ್, ಗಾಂಧಿ, ಚೆಗೆವಾರ ಇವರುಗಳ ನಂಬಿಕೆ, ಮಾರ್ಗಗಳು ಬೇರೆಬೇರೆ ಇರಬಹುದು, ನಮ್ಮ ಒಲವು ಒಬ್ಬರ ಕಡೆಗಿರಬಹುದು ಆದರೆ ಹೋರಾಟದ ದಾರಿಯಲ್ಲಿ ಅವರೆಲ್ಲರೂ ದೀಪಧಾರಿಗಳೇ. ಇಂತಹ ನಿಲುವು ಇಟ್ಟುಕೊಂಡಿರುವು ದರಿಂದಲೇ ಜಿ.ಆರ್. ರೈತ - ಕಾರ್ಮಿಕರ ಹೋರಾಟ, ಅಧ್ಯಾಪಕ - ವಿದ್ಯಾರ್ಥಿ ಹೋರಾಟಗಳಲ್ಲಿ ಎಡಪಂಥೀಯ ಸಂಘಟನೆಗಳೊಂದಿಗೂ ದಲಿತ ಬಂಡಾಯ ಚಳವಳಿಗಳಲ್ಲೂ ಪಾಲ್ಗೊಳ್ಳುವುದು ಹಾಗೆಯೆ ಚಿದಾನಂದಮೂರ್ತಿಗಳಂತಹವರೊಡನೆ ಕನ್ನಡ ಚಳವಳಿಯಲ್ಲೂ ಪಾಲ್ಗೊಳ್ಳುವುದು,

ಭಿನ್ನ ನೆಲೆಯ ವೇದಿಕೆಗಳಲ್ಲಿ ವಿಭಿನ್ನ ವ್ಯಕ್ತಿಗಳೊಡನೆ ಸೌಹಾರ್ದದಿಂದ ಭಾಗಿಯಾಗುವುದು ಸಾಧ್ಯವಾಗಿದೆ.

ಪ್ರಗತಿಯ ಹಾದಿಯಲ್ಲಿ ಎಂಬ ಕೊನೆಯ ಭಾಗ ವಿಜ್ಞಾನ ಮತ್ತು ಧರ್ಮ, ಇತಿಹಾಸದ ಅಧ್ಯಯನ, ಕಮ್ಯುನಿಸ್ಟ್ ಪ್ರಣಾಳಿಕೆ, ಮಾರ್ಕ್ಸ್‌ವಾದೀ ಅರ್ಥಶಾಸ್ತ್ರ, ಖಾಸಗಿ ಆಸ್ತಿ, ಕಾರ್ಮಿಕ ಚಳವಳಿ ಆರ್ಥಿಕ ಸ್ವಾವಲಂಬನೆ, ರಾಷ್ಟ್ರೀಯ ಶಿಕ್ಷಣನೀತಿಗಳ ಬಗ್ಗೆ ಲೇಖನಗಳಲ್ಲದೆ 200 ವರ್ಷಗಳ ಹಿಂದಿನ ಜೀತಪದ್ಧತಿ ಕುರಿತ ಉಲ್ಲೇಖದ ಒಂದು ಟೀಕೆಯೂ ಇದೆ.

ಕೊನೆಯ ಭಾಗ ಮಾರ್ಕ್ಸ್‌ವಾದೀ ಪ್ರಗತಿಯನ್ನು ಪ್ರತಿಪಾದಿಸುವುದು ಸ್ವಯಂ ವೇದ್ಯ. ಇದನ್ನು ಕನ್ನಡದಲ್ಲಿ ಜಿ.ಆರ್. ಮಾಡಿರುವುದೇ ವಿಶೇಷ. ವಿಜ್ಞಾನ ಮತ್ತು ಧರ್ಮ ಸಂಬಂಧ ಪಾಶ್ಚಾತ್ಯ ಪ್ರಪಂಚದ ಇತಿಹಾಸ ಆಧರಿಸಿ ಹೇಳಿದ್ದನ್ನು ಪರೋಕ್ಷವಾಗಿ ಬೇರೆಕಡೆಯೂ ಅನ್ವಯಿಸಲಾಗಿದೆ. ಇದರ ಭಾರತೀಯ ಸಂದರ್ಭದ ಹೆಚ್ಚಿನ ಚರ್ಚೆ ಜಿ.ಆರ್. ತಮ್ಮ 'ಆಯತನ' ಕೃತಿಯಲ್ಲಿ ಮಾಡಿದ್ದಾರೆ. 'ಭಾರತೀಯ ವಿಜ್ಞಾನದ ಹಾದಿ' ಇನ್ನೂ ಮುಂದುವರೆದ ಕೃತಿ. 'ಇತಿಹಾಸದ ಅಧ್ಯಯನ: ಒಂದು ಟಿಪ್ಪಣಿ' ಲೇಖನ ರೊಮಿಲ್ಲ ಥಾಪರ್ ನೇತೃತ್ವದ ಸಂಪಾದಕ ಮಂಡಲಿ ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನಲ್ ರೀಸರ್ಚ್ ಅಂಡ್ ಟ್ರೈನಿಂಗ್‌ಗೆ ತಯಾರಿಸಿದ ಪಠ್ಯಪುಸ್ತಕಗಳನ್ನು ಕುರಿತ ಚರ್ಚೆಯ/ವಾಗ್ವಾದದ ಸಂದರ್ಭದಲ್ಲಿ ಬಂದ ಲೇಖನ. ವಿಪರ್ಯಾಸವೆಂದರೆ ಈಗ ಬಿ.ಜೆ.ಪಿ. ಸರ್ಕಾರದಲ್ಲಿ ಶಿಕ್ಷಣದ ಕೇಸರೀಕರಣದ ವಿರುದ್ಧ ಇದೇ ವಾಗ್ವಾದ ಮುಂದುವರಿದಿದೆ. ಇತಿಹಾಸ ಎನ್ನುವುದು ಶೈಕ್ಷಣಿಕ ಶಿಸ್ತೂ ಹೌದು; ಚಳವಳಿಗಳ ಮಾರ್ಗದರ್ಶಿಯೂ ಹೌದು. ನ್ಯೂ ಹಿಸ್ಟೋರಿಸಿಸಮ್ ಎನ್ನುವುದೇ ಈಗ ಒಂದು ಶಿಸ್ತೂ ಆಗಿದೆ. ಇತಿಹಾಸದ ಅಧ್ಯಯನ ಕುರಿತ ಗಂಭೀರ ಚರ್ಚೆ ಕನ್ನಡದ ಮಟ್ಟಿಗಂತೂ ಇನ್ನೂ ಆಳವಾಗಿ, ವ್ಯಾಪಕವಾಗಿ ಆಗಬೇಕಿದೆ.

ಜಿ.ಆರ್. ಕೆಂಬಾವುಟದಂತಹ ಪತ್ರಿಕೆಗಳಿಗೆ ಪ್ರಚಾರದ ಧಾಟಿಯಲ್ಲಿ ಲೇಖನಗಳನ್ನು ಬರೆದಿರುವುದು ನಿಜ, ಆದರೆ ಆ ಪ್ರಚಾರ ಕೇವಲ ಒಂದು ಪ್ರಣಾಳಿಕೆಯದಲ್ಲ. ಬದಲಿಗೆ ಈ ಪ್ರಣಾಳಿಕೆಯನ್ನು ನಮ್ಮ ಅಧ್ಯಯನ, ಚಳವಳಿ, ತಿಳುವಳಿಕೆ ಕಾರ್ಯಗಳನ್ನು ದೃಢಪಡಿಸಿಕೊಳ್ಳುವ, ವಿಸ್ತರಿಸಿಕೊಳ್ಳುವ ಅನ್ವಯಿಕೆಗಾಗಿ. ಇದರಿಂದ ಜಿ.ಆರ್. ಅವರ ಭಾಷೆಯಲ್ಲಿ ಸರಳತೆಯಂತೆ, ಖಾರ, ವಗಚು, ವ್ಯಂಗ್ಯ, ಕಟಕಿಗಳು ಇದ್ದರೂ ನಮ್ರತೆ ವಿನಯಗಳೂ ಇವೆ.

ಇವರು ವಿಸ್ತಾರವಾದ ತಮ್ಮ ಕಲಿಕೆಯಲ್ಲಿ ಆಯ್ದು ಕೆಲವಂಶಗಳನ್ನು ಕೊಲಾಜ್ ಮಾಡಿ ಕೊಟ್ಟಿದ್ದಾರೆ. ಹಿಂದೆ ಲೋಣಾವಲದಲ್ಲಿ ಧ್ಯಾನಕ್ಕೆ ಭಾರತದ ಭೂಪಟವನ್ನು ಆಯ್ದುಕೊಂಡಿದ್ದರಂತೆ. ಇವರು ಕಾಣುವ ಭಾರತೀಯತೆ ಭೌಗೋಳಿಕ ವಲಯಕ್ಕೆ ಅದರಲ್ಲೂ ಅವರ ಅಭಿಜಾತ ರೂಪಗಳಿಗೆ ಸೇರಿದೆ ಎನ್ನುವುದು ಕುಚೇಷ್ಟೆಯ ಟೀಕೆಯಲ್ಲ. ಭೂಪಟವೆಂದರೇನೆ ಎಲ್ಲೆಗಳನ್ನು ಗೆರೆಗಳಿಂದ ಗುರುತಿಸುವುದಲ್ಲವೆ. ತಮ್ಮ ಅಧ್ಯಯನದ ಎಲ್ಲೆಗಳನ್ನು ಗುರುತಿಸಿಕೊಂಡ ಜಿ.ಆರ್. ಅದರ ಬಗ್ಗೆ ಶೈಕ್ಷಣಿಕ ಗೌರವವನ್ನು, ಚಳವಳಿಗಾರನ ತಕರಾರನ್ನೂ ಹೊಂದಿದ್ದಂತೆ ತಮ್ಮ ಅನುಭವದ ಕಾಣ್ಕೆಯನ್ನೂ ಕೊಟ್ಟರೆ ಚೆನ್ನ ಎನ್ನುವುದು ನಮ್ಮ ಬಯಕೆ. ಮಾರ್ಕ್ಸ್‌ವಾದದ

ಆನ್ವಯಿಕತೆ ಪ್ರಯತ್ನ ಇಲ್ಲಿದ್ದರೂ ಅದು ಕೇವಲ ಲಕ್ಷ್ಯಲಕ್ಷಣ ಸಮನ್ವಯವಲ್ಲ. ದುಡಿಯುವ ಜನರ ಇತಿಹಾಸ, ಪರಂಪರೆ, ತತ್ತ್ವಜ್ಞಾನ, ವಿಜ್ಞಾನಗಳನ್ನು ಅಭಿಜಾತ ಕೃತಿಗಳಲ್ಲಿ ಅರಸುವುದು ಮೇಲುನೋಟಕ್ಕೆ ವಿರೋಧಾಭಾಸ. ಆದರೆ ಮಹತ್ತರ ಅಂಶಗಳೊಡನೆ ನಿಕೃಷ್ಟಾಂಶಗಳು ಬೆರೆತಿದ್ದರೆ ಅದಕ್ಕೆ ತಲೆತಗ್ಗಿಸಬೇಕಿಲ್ಲವೆಂಬ ಅರಿವು ಮತ್ತು ಒಳ್ಳೆಯ ಕೆಟ್ಟದರ ಬೆರಕೆ ಬರಬರುತ್ತ ಸಂಕೀರ್ಣವಾಗುತ್ತದೆಂಬ ಅರಿವು ಯಾವುದೇ ಪರಂಪರೆಯ ಕೃತಿಯನ್ನು ಸಾರಾಸಗಟಾಗಿ ತಿರಸ್ಕರಿಸುವುದಿಲ್ಲ ಎನ್ನುವ ಎಚ್ಚರ ಮೂಡಿಸುತ್ತಾರೆ. ನಮಗೆ ಬೇಕು ಬೇಕಾದ್ದನ್ನೇ ಹಿಂದಿನ ಕೃತಿಗಳಲ್ಲಿ ಅರಸುವ ಹುಚ್ಚು ಕೆಲವರದ್ದಾದರೆ ವೈದಿಕ, ಧರ್ಮಶಾಸ್ತ್ರ ಎಂದ ಕೂಡಲೆ ತಿರಸ್ಕರಿಸುವ ತೆವಲು ಕೆಲವರಿಗೆ. ಇದಕ್ಕೆ ಬದಲು ಎಲ್ಲದರಲ್ಲಿಯ ಇತ್ಯಾತ್ಮಕ ಅಂಶಗಳನ್ನು ಒಪ್ಪಿಕೊಳ್ಳುತ್ತ, ಅವುಗಳಲ್ಲಿನ ಕೆಟ್ಟ ಅಂಶಗಳು ಹೇಗೆ ಕೆಟ್ಟ ಅಂಶಗಳಾದವು ಎಂದು ವಿವೇಚಿಸುವುದು ಸಾರ್ಥಕ ಪ್ರಯತ್ನ. ಭಾರತೀಯ ದರ್ಶನಗಳಲ್ಲಿನ ಪ್ರಕೃತಿವಾದ ಸ್ವಭಾವವಾದಗಳು, ಪುರುಷವಾದ - ವಿಧಿವಾದಗಳಿಗೆ ಪ್ರತಿಯಾಗಿದ್ದವು. ಧರ್ಮಶಾಸ್ತ್ರಗಳನ್ನು ತುಷ್ಯತು ದುರ್ಜನ ನ್ಯಾಯದಿಂದ ಸುಶ್ರುತ, ಬ್ರಹ್ಮಗುಪ್ತರು ಒಪ್ಪಿದರು ಮುಂತಾದ ಅಂಶಗಳು ಭಾರತೀಯರಲ್ಲಿನ ಜಾಣ್ಮೆಯನ್ನು ಹೇಳುತ್ತದೆ. ಎಲ್ಲವೂ ಒಂದೇ ಕಾಲದಲ್ಲಿ ಒಬ್ಬರಿಂದಲೇ ಆಗಬೇಕಿಲ್ಲವಲ್ಲ. ಒಬ್ಬ ವ್ಯಕ್ತಿ ಅಥವಾ ಪರಂಪರೆಯನ್ನು ಚರ್ಚಿಸುವುದು ನಿಂದೆ ಅಥವಾ ಸ್ತುತಿಗಳಿಗಾಗಿ ಅಲ್ಲ. ನಮ್ಮ ಇತಿಹಾಸವನ್ನು ನಾವು ತಿಳಿಯುವುದಕ್ಕೆ ಮತ್ತು ಅದರಿಂದ ನಮ್ಮ ಮುಂದಿನ ದಾರಿಯನ್ನು, ಬಾಳನ್ನು ಹಸನಾಗಿಸುವುದಕ್ಕೆ. ಆದರೆ ಇತಿಹಾಸವನ್ನು ಇಡಿಯಾಗಿ ಈಗಿನ ಆರ್ಷ ಕಾರ್ಯಗಳ ಸಂಬಂಧದಿಂದ ನೋಡಿದರೆ ಅದು ತೊಂದರೆ ಉಂಟುಮಾಡಬಹುದು. ಟಾಲ್‌ಸ್ಟಾಯ್‌ಅನ್ನು ಋಷಿಮಹರ್ಷಿಯೆಂದು ಕರೆಯುವ (ಪು. 96-97) ಜಿ.ಆರ್., ಶಿವಮೊಗ್ಗ ಜಿಲ್ಲೆಯ ಹುಲಿಮನೆ ಗ್ರಾಮದ ಶೇಷಯ್ಯ 'ವೇದಮೂರ್ತಿ' ಶೇಷಾಚಾರ್ಯರ ಮಗನಿಗೆ ಹೊಲೆಯಾಳು ಕ್ರಯಕ್ಕೆ ಕೊಟ್ಟ ದಾಖಲೆಯಲ್ಲಿನ ವೇದಮೂರ್ತಿಯನ್ನು ವ್ಯಂಗ್ಯವಾಡುವುದು ಅರ್ಥವಾಗುತ್ತದೆ *(ಪು. 208).*

ಡಾ. ಬಾಬು ಸವ್ಯಸಾಚಿ ಎಂಬ ಪಾತ್ರ ಶರತ್‌ಚಂದ್ರರ ಅಧಿಕಾರ ಕಾದಂಬರಿಯಲ್ಲಿ ಬರುತ್ತದೆ. ಅದರ ಬಗ್ಗೆ ಕೊಂಚ ವಿಸ್ತಾರವಾಗಿಯೇ ಬರೆಯುವ (ಪುಟ 85 ರಿಂದ 91) ಜಿ.ಆರ್.ಗೆ ಅವರು ಆದರ್ಶವಾಗಿ ಕಂಡಿದ್ದರೆ ಆಶ್ಚರ್ಯವಿಲ್ಲ. 'ಪರಂಪರಾಗತ ಅಂಧಶ್ರದ್ಧೆಉಳ್ಳ ಮಡಿವಂತ ಬ್ರಾಹ್ಮಣ ಅಪೂರ್ವನನ್ನು ಬರ್ಮಾದ ಕ್ರಾಂತಿಯಲ್ಲಿ ಸೇರಿಸಿಕೊಂಡು ಆತ ದುರ್ಬಲ ಕ್ಷಣದಲ್ಲಿ ನಂಬಿಕೆ ದ್ರೋಹ ಮಾಡಿದ ಪಕ್ಷದಲ್ಲಿ ಮರಣದಂಡನೆ ಶಿಕ್ಷೆ ಕೊಟ್ಟರೂ ವೈಯಕ್ತಿಕವಾಗಿ ಆ ಪಕ್ಷದ ಹಿರಿಯ ಡಾಕ್ಟರ್ ಬಾಬು ರಕ್ಷಣೆ ಕೊಡುವ, ಅಪೂರ್ವನಂತಹವರನ್ನೂ ಬದಲಿಸಿ ಅದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಭಾರತಿಗೆ ಹೇಳುವ ಮಾತು ಜಿ.ಆರ್. ಅವರ ಆಲೋಚನೆಗೆ ಹತ್ತಿರವಾದದ್ದು.

ಜಿ.ಆರ್. ತಾವು ಒಪ್ಪಿಕೊಳ್ಳದ್ದನ್ನು ಬೇರೆಯವರಲ್ಲಿ ನಿರ್ಭಿಡೆಯಾಗಿ ಹೇಳುವಂತೆ ಅವರಲ್ಲಿ ನಾವು ಒಪ್ಪದ್ದನ್ನು ಹೇಳಿದರೂ ಬೇಸರಿಸುವುದಿಲ್ಲ. ಜಾಗತಿಕ ಬದಲಾವಣೆಗಳನ್ನು ಕಂಡಮೇಲೂ

'ಇಂದಿನ ದುಡಿಯುವ ಜನತೆ ಸಂಪೂರ್ಣವಾಗಿ ವೈಜ್ಞಾನಿಕ ನಿಲುವಿನ ಮೇಲೆ ನಿಂತಿರುವ ತತ್ವಶಾಸ್ತ್ರವನ್ನು ಅಂಗೀಕರಿಸಿದೆ' (ಪು. 30) 'ಇತಿಹಾಸ ನಮ್ಮ ಕಡೆಗಿದೆ, ಯಶಸ್ಸು ನಮ್ಮದು' *(ಪು. 123)* ಮುಂತಾದ ಮಾತುಗಳು ಧಾರ್ಮಿಕ ಪ್ರಚಾರದ ಮಾತುಗಳಿಗೆ ಅವರು ಮಾಡುವ ಟೀಕೆಯನ್ನೇ ಆಹ್ವಾನಿಸುತ್ತದಲ್ಲವೇ? ಧರ್ಮವೆಂದರೆ ಮತಧರ್ಮವೇ ಆಗಿಬಿಟ್ಟಿದೆ ನಿಜ, ಆದರೂ ಮನುಷ್ಯನಲ್ಲಿ ಅಂತರ್ಗತವಾದ 'ಧಾರ್ಮಿಕ ಪ್ರಜ್ಞೆ ಅಥವಾ ಮಾನವತೆ' ಯಾರಿಗೂ ತ್ಯಾಜ್ಯವಲ್ಲ. ಅದೇ ಎಲ್ಲ ಮೌಲ್ಯಗಳ ಉಗಮ ಸ್ಥಾನ. ಧರ್ಮದ ಆ ಮೌಲ್ಯಗಳು ನಿಃಸ್ವಾರ್ಥತೆ, ತ್ಯಾಗ, ಬಲಿದಾನಗಳಾದರೆ ಭೌತವಾದದಲ್ಲಿ ಅದಕ್ಕೆ ಪ್ರೇರಕಗಳಾವುವು? ಭಾವನಾವಾದದಲ್ಲಿ ಸ್ವರ್ಗ ಮುಕ್ತಿಗಳಿದ್ದಂತೆ ಇಲ್ಲಿ ಮುಂದೊಂದು ದಿನದ ಸಮತೆಯ ಸಮಾಜ, ಅದೂ ಒಂದು ಕಲ್ಪನೆ. ಪರಿಪೂರ್ಣತೆ ಎನ್ನುವುದೇ ಅಂಥದ್ದೊಂದು ಕಲ್ಪನೆ ಅಲ್ಲವೆ? ಸಮಾಜವಾದೀ ರಾಷ್ಟ್ರಗಳ ಬರ್ಬರತೆ ಅಲ್ಲಾದ ಬದಲಾವಣೆಗಳು ಸ್ವರ್ಗ ಮುಕ್ತಿಗಳಂತೆ ಸಮಾಜವಾದದ ಕನಸನ್ನೂ ಒಡೆದಿವೆ. ಆದರೂ ಜಿ.ಆರ್. ಅಂಥವರ ಬದುಕು, ತ್ಯಾಗ, ನಿಃಸ್ವಾರ್ಥತೆಗಳು ಮುಂದಿನ ಕನಸಿನಿಂದ ಬಂದ ಸ್ವಾರ್ಥದ ಹಂಬಲವಲ್ಲ. ಇಂದಿನ ಬದುಕು ಸಾರ್ಥಕವಾದದ್ದರ ಖುಷಿ ಎಂದೂ ತೋರಿಸಿಕೊಡುತ್ತದೆ. ಜೀವನವು ವಿಚಾರಗಳಿಗಿಂತ ಹಿರಿದಾಗುವುದೇ ಹೀಗೆ. ಅದಕ್ಕಾಗಿ ಅಂತಹ ಗುರುಗಳಿಗೆ ನಮೋ ನಮಃ.

❑

ಆಯತನ :
ಒಂದು ಚಿಂತನ ಚಿಲುಮೆಯ ತಾರಾಲೋಕ

ಬಿ.ವಿ. ವೀರಭದ್ರಪ್ಪ

ಸರಳ ಜೀವನ ಮತ್ತು ಉದಾತ್ತ ವಿಚಾರಗಳ ಆಗರವಾದ ಡಾ. ಜಿ. ರಾಮಕೃಷ್ಣ ಅವರು ಕೇವಲ ವಿಚಾರಗಳ ಮೋಡಗಳ ಮೇಲೆ ಅಲೆದಾಡುವ ಆದರ್ಶವಾದಿಯಲ್ಲ; ತರ್ಕಬದ್ಧವಾದ ಸೈದ್ಧಾಂತಿಕ ಜೀವನವನ್ನು ವಾಸ್ತವದಲ್ಲಿ ಅಳವಡಿಸಿಕೊಂಡವರು. ಒಂದು ಕಡೆ ದುಡಿಯುವ ಜನರ ಸಂಗಾತಿಯಾಗಿರುವಂತೆಯೇ ಅವರು ಸಾಮಾಜಿಕ, ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ತತ್ವಮೀಮಾಂಸಕ ಚಿಂತಕರ ನಡುವೆ ಮಿಂಚುವ ಧ್ರುವತಾರೆಯಾಗಿದ್ದಾರೆ. 'ಮುನ್ನೋಟ', 'ವೈಚಾರಿಕ ಜಾಗೃತಿ' 'ಭಾರತೀಯ ವಿಜ್ಞಾನದ ಹಾದಿ'ಯಂತೆ, 'ಆಯತನ'ವೂ ಅವರ ವಿಚಾರ ಧಾರೆಗಳ ಕೈಗನ್ನಡಿಯಾಗಿದೆ.

ಜಗತ್ತಿನ ದೈನಂದಿನ ಆಗುಹೋಗುಗಳು ಹೇಗೆ ಮಾನವನ ವಿಚಾರಗಳ ಮೇಲೆ ಪರಿಣಾಮ ಬೀರುತ್ತವೆ, ಆ ವಿಚಾರಗಳು ನಿತ್ಯ ಜೀವನದಲ್ಲಿ ಹೇಗೆ ಕಾರ್ಯರೂಪಕ್ಕೆ ಬರುತ್ತವೆ ಮತ್ತು ಈ ಆಚಾರ-ವಿಚಾರಗಳ ತಾಕಲಾಟ ಹೇಗೆ ಮುಂದುವರಿಯುತ್ತಾ ಮಾನವನ ವಿಕಾಸಕ್ಕೆ ಕಾರಣವಾಗುತ್ತದೆ ಎಂಬುದನ್ನು ಜಿ.ಆರ್. ಅವರು ಚಾರಿತ್ರಿಕ ದೃಷ್ಟಾಂತಗಳ ಮೂಲಕ ಓದುಗರ ಮನಮುಟ್ಟುವಂತೆ ನಿರೂಪಿಸಿದ್ದಾರೆ. ಮಾರ್ಕ್ಸ್‌ವಾದ ಸೋವಿಯಟ್ ಒಕ್ಕೂಟದಲ್ಲಿ ಹಿಮ್ಮೆಟ್ಟಿದಂತೆ ಕಾಣುತ್ತಿರುವ ಹಿನ್ನೆಲೆಯಲ್ಲಿ ಕ್ರಿಸ್ಟೋಫರ್ ಹಿಲ್ ಎಂಬ ಇತಿಹಾಸಕಾರ ಹೇಳಿರುವ "ಅಷ್ಟೊಂದು ಬೇಗ ಮಾರ್ಕ್ಸ್‌ವಾದದ ಶೋಕಗೀತೆ ಹಾಡಿ ನಿರಾಶ ರಾಗಬೇಡಿ. ವಿಶ್ವದ ಜನತೆಯು ಸವಾಲುಗಳನ್ನು ಎದುರಿಸುವ ರೀತಿಯೇ

ಅದು. ಜನ ಪದೇ ಪದೇ ಆ ವಾದಕ್ಕೇ ಹಿಂತಿರುಗುತ್ತಾರೆ'' ಎಂಬ ಒಂದು ಮಾರ್ಮಿಕ ಮಾತನ್ನು ಅವರು ಪ್ರಸ್ತಾಪಿಸಿರುವುದು (ಪು. 120) ಗಮನಾರ್ಹವಾಗಿದೆ.

ವೇದಪೂರ್ವ ಬುಡಕಟ್ಟುಗಳಲ್ಲಿ ಒಂದು ಬಗೆಯ ಸಾಮೂಹಿಕ ಜೀವನ ರೂಢಿಯಲ್ಲಿತ್ತು. ಅವರು ಮಾಂತ್ರಿಕತೆಯ ಮೂಲಕ ತಮ್ಮ ಎಲ್ಲ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳುತ್ತಿದ್ದರು. ಮಾಂತ್ರಿಕತೆಯಿಂದ ಫಲ ದೊರೆಯುವುದಿಲ್ಲ, ನಿಜ. ಆದರೆ ಸಮೂಹದ ಭರವಸೆಯನ್ನು ಮೂಡಿಸುವುದರಲ್ಲಿ ಅದು ಯಶಸ್ವಿಯಾಗಿದೆ.

ನಂತರ ವೇದಗಳ ಯಜ್ಞಗಳಲ್ಲಿ ಪೌರೋಹಿತ್ಯವನ್ನಾಚರಿಸುವ ಬ್ರಾಹ್ಮಣ ಮತ್ತು ಯಜ್ಞವನ್ನು ನಿಭಾಯಿಸುವ ರಾಜನ ಉಗಮವಾಗುತ್ತದೆ. ಸಾಮೂಹಿಕ ಜೀವನ ಹಿಂದೆ ಸರಿದು ರಾಜ ಮತ್ತು ಪುರೋಹಿತರಿಂದ ಶೋಷಣೆಗೊಳಗಾದ ಸಮಾಜ ನಿರ್ಮಾಣವಾಗುತ್ತದೆ.

ಯಜ್ಞದ ಪೂರ್ಣಲಾಭ ಯಾರಿಗಾದರೂ ದೊರೆಯುವುದಾದರೆ ಅದು ಹೋತೃ, ಅಧ್ವರ್ಯು ಇತ್ಯಾದಿ ಬ್ರಾಹ್ಮಣರಿಗೆ. ಯಜಮಾನನಾದ ರಾಜನು ಯಜ್ಞವನ್ನು ಯೋಜಿಸಿ ಅದರ ಖರ್ಚನ್ನು ನಿರ್ವಹಿಸುತ್ತಾನಾದ್ದರಿಂದ ಯಜ್ಞದ ಫಲವೆಲ್ಲ ಅವನಿಗೆ ಕಟ್ಟಿಟ್ಟ ಬುತ್ತಿ ಎಂದು ಬ್ರಾಹ್ಮಣರು ಅವನಲ್ಲಿ ಭರವಸೆ ಮೂಡಿಸಿರುತ್ತಾರೆ. ರಾಜನಿಗೆ ಯಜ್ಞ ಮಾಡಿಸಲು ಸಂಪತ್ತು ಎಲ್ಲಿಂದ ಬರುತ್ತದೆ? ಕೃಷಿಕರು ಮತ್ತು ಅವರು ಬೆಳೆದ ಧಾನ್ಯಗಳನ್ನು ಮಾರಾಟ ಮಾಡುವ ವೈಶ್ಯರಿಂದ ಸಂಗ್ರಹಿಸಲಾಗುವ 'ಕರ' ಅಥವಾ 'ತೆರಿಗೆ'ಯಿಂದ. 'ಸಾಮೂಹಿಕತೆಯಿಂದ ಯಾಜಮಾನ್ಯದತ್ತ' ಎಂಬ ಲೇಖನದಲ್ಲಿ ಜಿ.ಆರ್. ಅವರು ಉಪನಿಷತ್ತುಗಳು ಮತ್ತು ಬ್ರಾಹ್ಮಣಗಳನ್ನು ಉದ್ಧರಿಸುತ್ತಾ ಶೋಷಣೆಯ ಉಗಮ ಹೇಗೆ ಯಜ್ಞಗಳಿಂದ ಪ್ರಾರಂಭವಾಯಿತು ಎಂಬುದನ್ನು ಸಾಬೀತುಗೊಳಿಸುತ್ತಾರೆ.

ಈಜಿಪ್ಟ್‌ನಲ್ಲಿ ಕಲಾವಿದನಿಗೆ ಸಾಂಪ್ರದಾಯಕ ಕಲೆಯಲ್ಲಿ ಹೊಸ ಪ್ರಯೋಗ ಮಾಡಲು ಅನುಮತಿ ಇರಲಿಲ್ಲ. ಅಲ್ಲಿಯ ಗಾದೆಗಳನ್ನು ಈಸೀಸ್ ದೇವತೆಯೇ ಸೃಷ್ಟಿಸಿದ್ದಳಂತೆ. ಈ ನಂಬಿಕೆಗಳ ಉದ್ದೇಶ ಹಿರಿಯರ ಆಜ್ಞೆಯನ್ನು ಶಿರಸಾವಹಿಸುವುದು ಜನಸಾಮಾನ್ಯರಿಗೆ ರೂಢಿ ಯಾಗಬೇಕೆಂಬುದಾಗಿತ್ತು. ಎಲ್ಲ ಪ್ರಾಚೀನ ದೇಶಗಳಲ್ಲೂ ದೇವತೆಗಳನ್ನು ಇಂತಹ ಉದ್ದೇಶ ಗಳಿಗಾಗಿಯೇ ಸೃಷ್ಟಿಸಲಾಗಿತ್ತು.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅದಕ್ಕೆ ಸ್ಪಷ್ಟ ನಿದರ್ಶನಗಳು ದೊರೆಯುತ್ತವೆ. ವಾಸ್ತವವಾಗಿ ಅವನಿಗೆ ಧಾರ್ಮಿಕ ನಂಬಿಕೆಗಳಲ್ಲಿ ವಿಶ್ವಾಸವಿರಲಿಲ್ಲ. ಆದರೆ ದೇಶದ ಬಾಹ್ಯ ಮತ್ತು ಆಂತರಿಕ ಹಿತಾಸಕ್ತಿಯ ದೃಷ್ಟಿಯಿಂದ ಜನರನ್ನು ಸುಲಭವಾಗಿ ಮೋಸಗೊಳಿಸಬಹುದಾದ ಮೂಢ ನಂಬಿಕೆಗಳನ್ನು ಹೇಗೆ ಬಳಸಿಕೊಳ್ಳಬೇಕೆಂಬುದನ್ನು ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಅನೇಕ ಕಡೆ ಹೇಳಿದ್ದಾನೆ. ಉದಾಹರಣೆಗೆ ರಾತ್ರಿ ವೇಳೆ ದೇವರ ವಿಗ್ರಹಗಳನ್ನು ಸ್ಥಾಪಿಸಿ ಜನರು ಅವುಗಳನ್ನು ಭಕ್ತಿಯಿಂದ ಪೂಜಿಸುವಂತೆ ಮಾಡುವುದು, ಕೆಟ್ಟ ಶಕುನವನ್ನು ಮುಂದಿಟ್ಟು ಅದರ ಶಮನಕ್ಕಾಗಿ ಪೂಜೆ ಸಲ್ಲಿಸುವಂತೆ ವ್ಯವಸ್ಥೆ ಮಾಡುವುದು ರಾಜನು ಅನುಸರಿಸಬೇಕಾದ

ವಿಧಾನವಾಗಿತ್ತು. ಈ ಪೂಜೆ ಪುನಸ್ಕಾರಗಳ ಮೂಲ ಉದ್ದೇಶ ಜನರಿಂದ ಹಣ ಸಂಗ್ರಹಣೆ ಮಾಡುವುದೇ ಆಗಿತ್ತು. ಮೌರ್ಯ ರಾಜರು ದೇವಪ್ರತಿಮೆಗಳನ್ನು ತಯಾರಿಸಿ ಮಾರಾಟ ಮಾಡುವುದರ ಮೂಲಕ ರಾಜಾದಾಯವನ್ನು ಹೆಚ್ಚಿಸಿಕೊಳ್ಳುತ್ತಿದ್ದರು.

1983ರಲ್ಲಿ ಮಾರ್ಚ್‌ನಲ್ಲಿ ವ್ಯಾಟಿಕನ್‌ನ ಪೋಪ್ ದಕ್ಷಿಣ ಅಮೆರಿಕದ ಎಂಟು ರಾಜ್ಯಗಳಲ್ಲಿ 'ಶಾಂತಿಯಾತ್ರೆ' ಕೈಗೊಂಡಾಗ ಅವರು ಅಮೆರಿಕದಿಂದ ಶೋಷಣೆಗೊಳಗಾಗಿದ್ದ ಬಡಜನತೆ ತಮ್ಮ ಆಳುವವರ ವಿರುದ್ಧ ಆಯುಧಗಳನ್ನು ಹಿಡಿಯಬೇಕೆನ್ನುವ ಆಸೆಯನ್ನು ತಡೆಹಿಡಿಯಬೇಕೆಂದು ಕರೆಯಿತ್ತರು. ಆದರೆ ತಮ್ಮ ತಾಯ್ನಾಡಾದ ಪೋಲೆಂಡಿನಲ್ಲಿ ಪ್ರಜಾಪ್ರಭುತ್ವದ ಪುನರ್ ಸ್ಥಾಪನೆಯಾಗಬೇಕೆಂದು ಕಳಕಳಿ ವ್ಯಕ್ತಪಡಿಸಿದರು. ಚಿಲಿಯಂತಹ ದೇಶಗಳಲ್ಲಿ ಫ್ಯಾಸಿಸ್ಟ್ ದಬ್ಬಾಳಿಕೆಯನ್ನು ದಮನಗೊಳಿಸಬೇಕೆಂಬ ಆಸಕ್ತಿ ಅವರಿಗೆ ಉಂಟಾಗಲಿಲ್ಲ.

ಅಂದಿನ ಲ್ಯಾಟಿನ್ ಅಮೆರಿಕ ಮತ್ತು ಉತ್ತರ ಅಮೆರಿಕಾದ ಸಂಬಂಧಗಳನ್ನು ಒಂದು ಪತ್ರಿಕೆ ತನ್ನ ವ್ಯಂಗ್ಯ ಚಿತ್ರದ ಮೂಲಕ ಹೀಗೆ ಚಿತ್ರಿಸಿತ್ತು: "ಫಲಭರಿತವಾದ ಒಂದು ಮರದ ಬೇರುಗಳು ಲ್ಯಾಟಿನ್ ಅಮೆರಿಕದಲ್ಲಿದ್ದರೆ ಅದರ ಹಣ್ಣುಗಳು ಮಾತ್ರ ಉತ್ತರ ಅಮೆರಿಕಾಕ್ಕೆ ನಿಲುಕುವಂತಿದ್ದವು. ಲ್ಯಾಟಿನ್ ಅಮೆರಿಕದ ಬಡ ರೈತನೊಬ್ಬ ಬೆವರು ಸುರಿಸಿ ಬೇರಿಗೆ ನೀರೆರೆಯುತ್ತಿದ್ದರೆ ಉತ್ತರ ಅಮೆರಿಕದ ಖಾಸಗಿ ಮಾಲಿಕನೊಬ್ಬ ಠೀವಿಯಿಂದ ಹಣ್ಣುಗಳನ್ನು ಕಿತ್ತುಕೊಳ್ಳುತ್ತಿದ್ದ ವ್ಯಂಗ್ಯಚಿತ್ರ ಅರ್ಥಪೂರ್ಣವಾಗಿತ್ತು." (ಪು. 10) ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರಭಾವಗಳ ಬಗ್ಗೆ ಭಾಷಣ ಬಿಗಿಯುವ ಅಮೆರಿಕ ಕಳೆದ 50 ವರ್ಷಗಳಲ್ಲಿ ವಿಶ್ವದ ನಾನಾ ಭಾಗಗಳಲ್ಲಿ ದಮನಕಾರಿ ಸರ್ವಾಧಿಕಾರಿಗಳನ್ನು, ಮಿಲಿಟರಿ ಆಡಳಿತಗಾರರನ್ನು ಬೆಂಬಲಿಸುತ್ತಾ ಬಂದಿದೆ.

ಗುಲ್ಬರ್ಗಾದ ಆಕಾಶವಾಣಿಯಲ್ಲಿ ಪ್ರಸಾರವಾದ ಒಂದು ಕನ್ನಡ ಕವನದಲ್ಲಿ ಹಿಂದುಗಳ ಧಾರ್ಮಿಕ ಗ್ರಂಥವಾದ ಭಗವದ್ಗೀತೆಯನ್ನು ಅವಹೇಳನಗೊಳಿಸಲಾಗಿದೆ ಎಂದು ಕೆಲವು ಪ್ರಭೃತಿಗಳು ಗುಲ್ಲೆಬ್ಬಿಸಿ ಆಕಾಶವಾಣಿಯ ನಿರ್ದೇಶಕರಿಂದ ಕ್ಷಮಾಯಾಚನೆಯನ್ನು ಪಡೆಯುವುದರಲ್ಲಿ ಯಶಸ್ವಿಯಾದರು. ಅವರ ವಾದವೇನೆಂದರೆ ಧರ್ಮಭೀರುಗಳಾದ ಒಂದು ಗುಂಪಿನ ಜನರ ಭಾವನೆಗಳಿಗೆ ನೋವುಂಟಾಯಿತು ಎಂಬುದು. ಅದೇ ರೀತಿ ಮುಲ್ಲಾ ಒಬ್ಬ ಚಂದ್ರನನ್ನು ಕಂಡ ನಂತರವೇ ಹಬ್ಬದ ದಿನವನ್ನು ಗೊತ್ತು ಪಡಿಸಬೇಕೆಂಬುದು ಅವೈಜ್ಞಾನಿಕವಲ್ಲವೆ ಎಂದೇನಾದರೂ ನೀವು ಕೇಳಿದರೆ ಅದು ಇನ್ನೊಂದು ಗುಂಪಿನ ಜನರ ಮನಸ್ಸಿಗೆ ನೋವುಂಟು ಮಾಡಿದಂತಾಗುತ್ತದೆ. ಅದಕ್ಕೆ ಕೊನೆಯೇ ಇಲ್ಲ. ಇದೇ ತರ್ಕವನ್ನೇನಾದರೂ ಮುಂದುವರೆಸುತ್ತಾ ಹೋದರೆ ಕೊನೆಗೆ ಯಾರೂ ಜಮೀನ್ದಾರಿ ಪದ್ಧತಿಯನ್ನಾಗಲಿ, ಬಹುರಾಷ್ಟ್ರೀಯ ಕಂಪನಿಗಳು ಭಾರತದ ಆರ್ಥಿಕ ರಚನೆಗೆ ಉಂಟುಮಾಡುತ್ತಿರುವ ಧಕ್ಕೆಯನ್ನಾಗಲಿ ಕುರಿತು ವಿಶ್ಲೇಷಣೆ ಮಾಡಲು ಸಾಧ್ಯವೇ ಇಲ್ಲದಂತಾಗುತ್ತದೆ. "ಏಕೆಂದರೆ ಭಾರತದ ಜನತೆಗೆ ಮೋಸ ಮಾಡುತ್ತಿರುವಂತಹ ಕೆಲವು 'ದೇಶಪ್ರೇಮಿ'ಗಳ ಮನವನ್ನು ಆಗಲೂ ಖಂಡಿತವಾಗಿ ನೋಯಿಸಿದಂತಾಗುತ್ತದೆ!" ಎಂದು ಜಿ.ಆರ್. ಚುಡಾಯಿಸುತ್ತಾರೆ.

ವೈಜ್ಞಾನಿಕ ವಿಶ್ಲೇಷಣೆಯನ್ನು ಅಲ್ಲಗಳೆಯುವ ಮತ್ತೊಂದು ಮಾರ್ಗವಿದೆ. ಈ ಜಗತ್ತು ಒಂದು ಮಾಯೆ. ನಶ್ವರ ಜಗತ್ತಿನ ಬಗ್ಗೆ ಯೋಚಿಸುವುದನ್ನು ಬಿಟ್ಟು ಇದರಾಚೆಗಿರುವ ಲೋಕದ ಬಗ್ಗೆ ಚಿಂತಿಸಬೇಕು. ಬಡವರೆಲ್ಲಾ ಸ್ವರ್ಗಲೋಕದಲ್ಲಿ ಹರಸಲ್ಪಡುತ್ತಾರೆ ಎಂದು ಬೋಧೆ ಮಾಡುವ ಕುತಂತ್ರಗಳ ಪರಿಚಯ ಯಾರಿಗಿಲ್ಲ. ಆದ್ದರಿಂದ ನಾವು ಕ್ಷುಲ್ಲಕ ವಿಷಯಗಳ ಬಗ್ಗೆ ಯೋಚಿಸಬಾರದು, ಹೋರಾಟದಲ್ಲಿ ತೊಡಗಬಾರದು ಎಂಬುದು ಎಲ್ಲ 'ದೇವಮಾನವ'ರ ಉಪದೇಶವಾಗಿದೆ. ಬಾಬಾಗಳು ಇಂದು ವಿಶ್ವವಿದ್ಯಾಲಯಗಳನ್ನೂ ನಡೆಸುತ್ತಿದ್ದಾರೆ. ಚರಿತ್ರೆ ಅವರ ಕೈಯಲ್ಲಿ ಪುರಾಣವಾಗುತ್ತದೆ. ಅರ್ಥಶಾಸ್ತ್ರ ಭಾವನಾಪರವಶ ತಂತ್ರವಾಗುತ್ತದೆ. ಭಕ್ತಿ ಪಂಥವೊಂದಕ್ಕೇ ಕೈಂಕರ್ಯ ಮಾಡುವ ದಾದಿಯಾಗುತ್ತದೆ. ವಿಜ್ಞಾನಿಗಳು ಯೋಗಿಗಳಾಗುತ್ತಾರೆ. ವಿಜ್ಞಾನವು ಹೊಸದೇನನ್ನೂ ಹೇಳಲು ಅಸಮರ್ಥವಾಗುತ್ತದೆ. ಏಕೆಂದರೆ ನಾವು ತಿಳಿದಿರುವ ಮತ್ತು ತಿಳಿಯಬೇಕಾದ ಎಲ್ಲ ಜ್ಞಾನವನ್ನು ವೈದಿಕ ಋಷಿ ಮುನಿಗಳೇ ಅರಿತಿದ್ದರು. ಆ ವೇದಕಾಲದ ಮುನಿಗಳಿಗೆ ಗೊತ್ತಿದ್ದ ಹಲವಾರು ವಿಷಯಗಳು ಹುಲುಮಾನವರಾದ ನಮಗೆ ಅರ್ಥ ವಾಗುವುದಿಲ್ಲ ಎಂದು ಕೊನೆಯಲ್ಲಿ ಸೇರಿಸುತ್ತಾರೆ. ಅವರ ಪ್ರಕಾರ ವೇದಗಳಲ್ಲಿ ಖಗೋಳ ಶಾಸ್ತ್ರ, ಗ್ರಹಗಳ ನಡುವಿನ ಯಾನ ಇತ್ಯಾದಿ ಎಲ್ಲಾ ಇದ್ದುವು. ಆ ಜ್ಞಾನವನ್ನು ಜರ್ಮನರು ನಮ್ಮಿಂದ ಅಪಹರಿಸಿಕೊಂಡು ಹೋಗಿ ವಿಮಾನ ತಯಾರಿಸುವುದನ್ನು ಕಲಿತರು! ನಮ್ಮ ಪುರಾತನ ಗ್ರಂಥಗಳಲ್ಲಿ ವಾಸ್ತವವಾಗಿ ಇರುವುದಾದರೂ ಏನು ಎಂಬುದನ್ನು ನಿಖರವಾಗಿ ಗುರುತಿಸಲಾರದ ಈ ಜನ ಆಧುನಿಕ ವಿಜ್ಞಾನವನ್ನೆಲ್ಲಾ ಅದಕ್ಕೆ ಆರೋಪಿಸಿ ಅವುಗಳ ಮೌಲ್ಯವನ್ನು ಹೆಚ್ಚಿಸಬಹುದೆಂದು ಭ್ರಮಿಸುತ್ತಾರೆ.

200 ವರ್ಷಗಳ ಹಿಂದೆ ಇಂಗ್ಲೆಂಡಿನಲ್ಲಿ ಸಣ್ಣ ರೈತರು ತಮ್ಮ ಚಿಕ್ಕ ಚಿಕ್ಕ ಭೂಮಿಗಳನ್ನು ಕಳೆದುಕೊಳ್ಳುತ್ತಾ ಹೋದರು. ಅದರ ಪರಿಣಾಮವಾಗಿ 1873ರಲ್ಲಿ ಇಡೀ ಇಂಗ್ಲೆಂಡಿನ ಅರ್ಧ ಭೂಮಿ ಕೇವಲ 2500 ಕುಟುಂಬಗಳ ಒಡೆತನಕ್ಕೆ ಸೇರಿತು. ಅಲ್ಲಿ ಪ್ರಚಲಿತವಿದ್ದ ಒಂದು ಹಾಸ್ಯ ಗೀತೆ ಹೀಗಿದೆ: "ಗೋಮಾಳದಿ ಮೇಯುವ ದನಗಳ ಕದ್ದವಗೆ ಕಾದಿದೆ ಕಾನೂನಿನ ಶಿಕ್ಷೆ; ಗೋಮಾಳವನೆ ನುಂಗುವ ಕಳ್ಳ ಖದೀಮರಿಗೆ ಲಭಿಸುವುದಣ್ಣ ಕಾನೂನಿನ ರಕ್ಷೆ". ಇಂದಿನ ಭಾರತದ ಪರಿಸ್ಥಿತಿಗೆ ಇದು ಇನ್ನಷ್ಟು ಚೆನ್ನಾಗಿ ಅನ್ವಯಿಸುತ್ತದೆ.

ಯಾವುದೇ ಸಮಸ್ಯೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ಅದಕ್ಕೆ ಪರಿಹಾರಗಳನ್ನು ರೂಪಿಸಬೇಕಾದರೆ ಅದಕ್ಕೊಂದು ಸಮಗ್ರ ವೈಜ್ಞಾನಿಕ ವಿಧಾನವನ್ನು ಅನುಸರಿಸಬೇಕಾಗುತ್ತದೆ. ನಮ್ಮಲ್ಲಿ ಅನೇಕ ಇತಿಹಾಸಕಾರರು ತಮ್ಮ ಒಲವು ನಿಲುವುಗಳಿಗೆ ಅನುಗುಣವಾಗಿ ಇತಿಹಾಸದ ಘಟನೆಗಳನ್ನು ಅರ್ಥೈಸಿ ವ್ಯಾಖ್ಯಾನಿಸುತ್ತಾರೆ. ಎನ್.ಸಿ.ಇ.ಆರ್.ಟಿ. ಪ್ರಕಟಿಸಿದ್ದ ಚರಿತ್ರೆಯ ಪುಸ್ತಕಗಳನ್ನು ಹಿಂತೆಗೆದುಕೊಳ್ಳುವ ಕ್ರಮ ಮೊರಾರ್ಜಿ ದೇಸಾಯಿಯವರ ಕಾಲದಲ್ಲೇ ಆರಂಭವಾಯಿತು. ಇಂದು ಅದು ವಿಜೃಂಭಿಸುತ್ತಿದೆ.

ಇದಕ್ಕೆಲ್ಲಾ ನಮ್ಮ ಸಮಾಜದಲ್ಲಿರುವ ಜಾತಿ ಮತ್ತು ವರ್ಗಭೇದಗಳೇ ಕಾರಣವಾಗಿವೆ. ಪ್ರಾಚೀನ ಭಾರತದ ಧರ್ಮಶಾಸ್ತ್ರಕಾರರು ಪುರೋಹಿತ ವರ್ಗಕ್ಕೆ ಸೇರಿದವರಾಗಿದ್ದು

ಪ್ರತಿಷ್ಠಿತರಾಗಿದ್ದರು. ಅವರು ವಿಜ್ಞಾನಿಗಳನ್ನು ತಮ್ಮ ತಾಳಕ್ಕೆ ತಕ್ಕಂತೆ ಕುಣಿಸುತ್ತಿದ್ದರು. ಶ್ರೇಣೀಕೃತ ಉಚ್ಚನೀಚ ಸ್ಥಾನಗಳನ್ನು ಎಲ್ಲರೂ ಒಪ್ಪಿಕೊಳ್ಳುವಂತೆ ಒತ್ತಾಯಿಸುತ್ತಿದ್ದರು. ವಿಜ್ಞಾನಿಗಳೂ ಸಹ ಆ ನಿಯಮಗಳಿಗೆ ತಲೆಬಾಗಲೇ ಬೇಕಾಗಿತ್ತು. ವೈದಿಕ ಸಮಾಜದಲ್ಲಿ ನಿಷ್ಣಾತ ವೈದ್ಯರೆನಿಸಿಕೊಂಡಿದ್ದ ಅಶ್ವಿನಿ ದೇವತೆಗಳಿಗೆ ಹವಿರ್ಭಾಗ ನೀಡಬಾರದೆಂಬ ನಿಯಮವನ್ನು ವಿಧಿಸಲಾಗಿತ್ತು. ನಾಸತ್ಯರು, ಸತ್ಯಮಾರ್ಗದಲ್ಲಿ ನಡೆಯುವವರು, ಎಂದು ಹೆಸರಾಂತ ಅಶ್ವಿನಿ ದೇವತೆಗಳು ವೈದಿಕ ಸಂಪ್ರದಾಯದಲ್ಲಿ ವಿಜ್ಞಾನಕ್ಷೇತ್ರದ ನೇತಾರರು. ಆದರೆ ಅವರು ರೋಗಿಗಳ ದೈಹಿಕ ಕಲ್ಮಷಗಳನ್ನು ಮುಟ್ಟುವವರು, ಪ್ರಯೋಗಗಳಲ್ಲಿ ತೊಡಗಿ ಕಲುಷಿತರಾಗಿರುವುದರಿಂದ ಅವರು ಹವಿರ್ಭಾಗಕ್ಕೆ ಅನರ್ಹರಾಗುತ್ತಾರೆ. ಆದರೆ ಅವರ ವೈದ್ಯಕೀಯ ಸೇವೆ ಆ ಪುರೋಹಿತರಿಗೂ ಬೇಕಲ್ಲವೆ? ಆದ್ದರಿಂದ ಅವರು ತಮ್ಮ ನಿಯಮಗಳನ್ನು ಸಡಿಲಿಸಿ ಪ್ರಾಯಶ್ಚಿತ ಮಾಡಿಕೊಂಡ ನಂತರ ಅವರಿಗೆ ಹವಿರ್ಭಾಗ ನೀಡಲಾಗುತ್ತಿತ್ತು. ಅಂದರೆ ವೈಜ್ಞಾನಿಕ ಪದ್ಧತಿಯನ್ನು ಅನುಸರಿಸುತ್ತಿದ್ದ ವೈದ್ಯರಿಗೆ ಧರ್ಮಶಾಸ್ತ್ರದಲ್ಲಿ ಎಂತಹ ಸ್ಥಾನವನ್ನು ನೀಡಲಾಗಿತ್ತು ಎಂದು ವೇದ್ಯವಾಗುತ್ತದೆ.

ಕರ್ಮಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದ ಪುರೋಹಿತಶಾಹಿಗೆ ವಿಜ್ಞಾನದ ಬೆಳವಣಿಗೆಯು ಮಾರಕವಾಗಿತ್ತು. ಆದ್ದರಿಂದ ಹೇಗಾದರೂ ಮಾಡಿ ಅದನ್ನು ದಮನ ಮಾಡಲು ಅವರು ಪ್ರಯತ್ನಿಸುತ್ತಿದ್ದರು. ಚರಕ, ಸುಶ್ರುತ, ಬ್ರಹ್ಮಗುಪ್ತರಂತಹ ವಿಜ್ಞಾನಿಗಳು ಅಂತಹ ವಾತಾವರಣದಲ್ಲಿ ತಮ್ಮ ಅನ್ವೇಷಣೆಗಳನ್ನು ಮುಂದುವರಿಸಬೇಕಾಗಿತ್ತು.

ವಿಜ್ಞಾನ ಕೇವಲ ವೈದ್ಯಕೀಯ, ತಂತ್ರಜ್ಞಾನದಂತಹ ವಿಷಯಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಅದು ನಮ್ಮ ದೈನಂದಿನ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸುವ ರಾಜಕೀಯ, ಆರ್ಥಿಕ, ಸಾಮಾಜಿಕ ವಿಷಯಗಳಿಗೂ ಅನ್ವಯಿಸುತ್ತದೆ. ಉತ್ಪಾದನಾ ಕ್ರಿಯೆಯ ಸಾಮಾಜಿಕ ಸಂದರ್ಭದಿಂದ ಒಂದು ಸೈದ್ಧಾಂತಿಕ ಪ್ರಶ್ನೆ ಉಗಮವಾಗುತ್ತದೆ. ಆ ಸಾಮಾಜಿಕ ರಚನೆಯಲ್ಲಿರುವ ಸಾಮಾಜಿಕ ಸಂಬಂಧಗಳನ್ನು ಬಲಪಡಿಸಲಾಗಲಿ ಅಥವಾ ಬದಲಾಯಿಸಲಾಗಲಿ ಆ ಸಿದ್ಧಾಂತ ಕಾರಣವಾಗುತ್ತದೆ ಎಂಬುದನ್ನು ಲೇಖಕರು 'ಸೈದ್ಧಾಂತಿಕ ನೆಲೆಯ ಸಮರ್ಥನೆ' ಎಂಬ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ.

ಮಾರ್ಕ್ಸ್, ಏಂಗಲ್ಸ್ ಮತ್ತು ಲೆನಿನ್‌ರವರ ಕೃತಿಗಳು ಮಾರ್ಕ್ಸ್‌ವಾದದ ಮೂಲ ಸ್ಫೂರ್ತಿಯಾಗಿವೆ. ಅನಂತರ ಬಂದ ಲೇಖಕರಾದ ಮ್ಯಾಕ್ಸಿಂ ಗಾರ್ಕಿ, ಕ್ರಿಸ್ಟೋಫರ್ ಕಾಡ್‌ವೆಲ್, ಲುಕಾಚ್, ಬ್ರೆಖ್ಟ್ ಮುಂತಾದವರ ಕೃತಿಗಳಿಂದ ಸಾಹಿತ್ಯಕವಾಗಿ ಮಾರ್ಕ್ಸ್‌ವಾದದ ತಿರುಳನ್ನು ಮನಗಾಣಬಹುದು. ಪ್ರಾರಂಭದಲ್ಲಿ ಸಾಹಿತ್ಯ, ತತ್ವಶಾಸ್ತ್ರಗಳ ವಿದ್ಯಾರ್ಥಿಯಾಗಿದ್ದ ಮಾರ್ಕ್ಸ್ ತಾನು ಅನ್ವಯಿಸಿದ ಅನ್ವೇಷಣಾ ಪದ್ಧತಿಯಿಂದ ಮಾರ್ಕ್ಸ್‌ವಾದದ ಪ್ರತಿಪಾದಕನಾಗಿ ಸ್ಥಾಪಿತನಾಗುತ್ತಾನೆ.

ನಾವು ಇತಿಹಾಸದ ಅರ್ಥೈಸುವಿಕೆಯಲ್ಲಿ ಎರಡು ಮುಖ್ಯ ಉದ್ದೇಶಗಳನ್ನು ಕಾಣುತ್ತೇವೆ: ಪ್ರಾಚೀನವಾದುದನ್ನು ವೈಭವೀಕರಿಸುವುದು ಅಥವಾ ಅದನ್ನು ನಮ್ಮ ಇಂದಿನ ಅಗತ್ಯಗಳಿಗೆ ತಕ್ಕಂತೆ ವ್ಯಾಖ್ಯಾನಿಸುವುದು. ನಮ್ಮ ದೇಶದ ಇತಿಹಾಸವನ್ನು ಸುವರ್ಣಯುಗವೆಂದು

ಬಣ್ಣಿಸುವಾಗ ಅಲ್ಲಿನ ಶ್ರೇಣೀಕೃತ ಜಾತಿವ್ಯವಸ್ಥೆ ಮತ್ತು ಅದರ ಪರಿಣಾಮವಾಗಿ ಬಹು ಸಂಖ್ಯಾತರನ್ನು ಶಿಕ್ಷಣದಿಂದ ದೂರವಿರಿಸಿ ಅವರನ್ನು ಮೇಲುವರ್ಗದವರ ದುಡಿಯುವ ಆಳುಗಳನ್ನಾಗಿ ರೂಪಿಸಿದ ಅಂಶ ಕಂಡುಬರುವುದೇ ಇಲ್ಲ! ಅದು ಯಾವ ದೃಷ್ಟಿಯಿಂದ ಸುವರ್ಣ ಯುಗವಾಗಿತ್ತು, ಯಾರಿಗೆ ಸುವರ್ಣಯುಗವಾಗಿತ್ತು ಎಂಬುದನ್ನು ಪ್ರಶ್ನಿಸದಿದ್ದರೆ ಅಂತಹ ಇತಿಹಾಸ ಅಪೂರ್ಣವಾಗುತ್ತದೆ.

ಪರಂಪರೆಯ ದೃಷ್ಟಿಯಿಂದ ನೋಡುವಾಗ ಋಗ್ವೇದ ಅಪೌರುಷೇಯವಾದುದು. ಅದರಲ್ಲಿ ಉದಾತ್ತ ತತ್ವಜ್ಞಾನ, ಆಧ್ಯಾತ್ಮಕತೆ ಮತ್ತು ಬ್ರಹ್ಮ ಸಾಕ್ಷಾತ್ಕಾರದ ರಹಸ್ಯ ಎಲ್ಲವೂ ಇದೆ ಎಂದು ಹೇಳಲಾಗುತ್ತಿದೆ. ಚಾರಿತ್ರಿಕ ವಸ್ತುನಿಷ್ಠ ದೃಷ್ಟಿಯಿಂದ ನೋಡಿದರೆ ಅದರಲ್ಲಿ ಜನಸಾಮಾನ್ಯರ ಜೀವನ ದಟ್ಟವಾಗಿದೆ. ಅದರಲ್ಲಿ ಒಂದು ಕಡೆ ಜೂಜುಗಾರನ ದಾರುಣವಾದ ತೊಳಲಾಟ ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ಅದನ್ನು ರಚಿಸಿದ ಕವಷ ಐಲೂಷ ಎಂಬ ಕವಿ ಅಥವಾ ಋಷಿ ಜೂಜುಗಾರರ ಒಡನಾಡಿಯಾಗಿ ಅವರ ಜೀವನವನ್ನು ಹತ್ತಿರದಿಂದ ಕಾಣದೆ ಅಂತಹ ಸೂಕ್ತಗಳನ್ನು ರಚಿಸಿರಲಾರ. ವಿಮಾನ ಎಂಬ ಪದಕ್ಕೆ ಎತ್ತರವಾದ ಗೋಪುರವೆಂಬ ಪ್ರಾಚೀನ ಅರ್ಥ ವಿತ್ತೆಂಬುದನ್ನು ಮರೆತು ವೇದಕಾಲದಲ್ಲಿ ವಿಮಾನಯಾನ, ಗ್ರಹಾಂತರ ಯಾನ ಇತ್ಯಾದಿಗಳು ಇದ್ದುವೆಂದು ವಾದಿಸುವವರ ಬಗ್ಗೆ ಏನೆನ್ನಬೇಕು!

ಇಂದು ರಾಮಜನ್ಮಭೂಮಿಗಾಗಿ ರಾಜಕೀಯ ಹೋರಾಟವೇ ಪ್ರಾರಂಭವಾಗಿದೆ. ಶ್ರೀರಾಮ ಚಂದ್ರನನ್ನು ಅಯೋಧ್ಯೆಯ ಮಂದಿರದಲ್ಲಿ ಪ್ರತಿಷ್ಠಾಪಿಸುವಲ್ಲಿ ಯಶಸ್ವಿಯಾದರೆ ತಾವು ದೆಹಲಿಯ ಸಿಂಹಾಸನದಲ್ಲಿ ನಿರಾತಂಕವಾಗಿ ನೆಲೆಗೊಳ್ಳಬಹುದು ಎಂದು ಒಂದು ರಾಜಕೀಯ ಮಸಲತ್ತು ನಡೆಸಿರುವುದು ಸ್ಪಷ್ಟವಿದೆ.

ಕೌಟಿಲ್ಯನ ಅರ್ಥಶಾಸ್ತ್ರದ ರಹಸ್ಯವನ್ನು ಒಳಹೊಕ್ಕು ನೋಡಿದರೆ ಇಂದಿನ ರಾಜಕೀಯವನ್ನು ಅರ್ಥಮಾಡಿಕೊಳ್ಳುವುದು ಸುಲಭ. ಆಧಿಪತ್ಯ ಸುಗಮವಾಗಲು ಅನುಕೂಲವಾದಂತಹ ಮಾರ್ಗಗಳನ್ನು ರಾಜನಾದವನು ನಿರಾತಂಕವಾಗಿ ಅನುಸರಿಸಬೇಕೆಂದು ಕೌಟಿಲ್ಯನು ಒತ್ತಿ ಹೇಳುತ್ತಾನೆ. ರಾಜನು ಮೂಢನಂಬಿಕೆಗಳನ್ನು ತನ್ನ ಆಡಳಿತಕ್ಕೆ ನೆರವಾಗುವಂತೆ ಹೇಗೆ ಬಳಸಿಕೊಳ್ಳಬೇಕೆಂಬುದನ್ನು ಹತ್ತಾರು ದೃಷ್ಟಾಂತಗಳ ಮೂಲಕ ಕೌಟಿಲ್ಯನು ಸೂಚಿಸಿದ್ದಾನೆ. ಧಾರ್ಮಿಕ ಆಚರಣೆಗಳಲ್ಲಿ ಸ್ವತಃ ಕೌಟಿಲ್ಯನಿಗೆ ಅಂತಹ ನಂಬಿಕೆಯೇನೂ ಇರಲಿಲ್ಲ. ಆದರೆ ರಾಜನ ಆಡಳಿತ ಭದ್ರತೆಗಾಗಿ ಮೂಢನಂಬಿಕೆಗಳನ್ನು ಬಳಸಿಕೊಳ್ಳಬೇಕೆಂದು ಅವನು ಪ್ರತಿಪಾದಿಸುತ್ತಾನೆ. ರಾತ್ರಿ ಇದ್ದಕ್ಕಿದ್ದ ಹಾಗೆ ಒಂದು ದೇವತೆಯನ್ನು ಸೃಷ್ಟಿಸಿ ಒಂದೆಡೆ ಪ್ರತಿಷ್ಠಾಪಿಸಿ ಪೂಜೆ ಪುನಸ್ಕಾರಗಳಿಗೆ ಏರ್ಪಾಟು ಮಾಡಿದರೆ ಅದರಿಂದ ರಾಜ್ಯದ ಬೊಕ್ಕಸವನ್ನು ತುಂಬಬಹುದು ಎಂದು ಅವನು ಹೇಳುತ್ತಾನೆ. ಅಲ್ಲಿ ಪೂಜಾಕಾರ್ಯಗಳು ವಿಧಿವತ್ತಾಗಿ ನೆರವೇರದಿದ್ದರೆ ಘೋರ ವಿಪತ್ತು ಸಂಭವಿಸುತ್ತದೆ ಎಂದು ಪ್ರಚುರ ಪಡಿಸಬೇಕೆಂದೂ ಹೇಳುತ್ತಾನೆ. ಮೈಮೇಲೆ ದೇವರು, ಭೂತ ಬರುವಂತೆ ಮಾಡುವುದು ಇತ್ಯಾದಿಗಳನ್ನು ಗೂಢಚರ್ಯೆಯ ಮೂಲಕ ಶತ್ರುನಾಶಕ್ಕಾಗಿ, ರಾಜ್ಯದ ಏಳಿಗೆಗಾಗಿ ಬಳಸಿಕೊಳ್ಳಬಹುದೆಂಬುದನ್ನು ಅವನು ಸೂಚಿಸುತ್ತಾನೆ.

ಮಾನವನಿಗಿಂತಲೂ ಹೆಚ್ಚು ಬಲಿಷ್ಠವಾದ ಒಂದು ಶಕ್ತಿ ಮಾನವನ ಮತ್ತು ಪ್ರಕೃತಿಯ ಆಗುಹೋಗುಗಳನ್ನು ನಿಯಂತ್ರಿಸುತ್ತದೆ ಎಂಬ ನಂಬಿಕೆಯೇ ಧರ್ಮದ ಮೂಲ. ಆ ಶಕ್ತಿಯನ್ನು ಆರಾಧಿಸಿ ತೃಪ್ತಿಪಡಿಸುವುದರಿಂದ ನಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಬಹುದು ಎಂಬ ನಂಬಿಕೆ ಧಾರ್ಮಿಕ ಆಚರಣೆಗಳಿಗೆ ಚಾಲನೆ ನೀಡುತ್ತದೆ.

ದೈವಾಧೀನಂ ಜಗತ್ಸರ್ವಂ, ದೈವಂ ಮಂತ್ರಾಧೀನಂ ತಥಾ ।
ಮಂತ್ರಂ ಬ್ರಾಹ್ಮಣಾಧೀನಂ, ಬ್ರಾಹ್ಮಣೋ ಮಮ ದೇವತಾ ॥

- ಎಂಬ ಮಂತ್ರ ಪ್ರಾಚೀನ ಕಾಲದಿಂದ ನಮ್ಮಲ್ಲಿ ಪ್ರಚುರವಿದೆ. ಆದರೆ ಇನ್ನೂ ಆಚೆಗಿನ ಅತ್ಯಂತ ಪ್ರಾಚೀನ ಸಮಾಜಗಳಲ್ಲಿ ದೇವರು, ಪ್ರಾರ್ಥನೆ, ನೈವೇದ್ಯ ಇತ್ಯಾದಿಗಳ ಕಲ್ಪನೆಯೇ ಇರಲಿಲ್ಲ ಎಂಬುದು ಸೋಜಿಗದ ಸಂಗತಿ. ಪ್ರಕೃತಿಯ ಉಪಟಳವನ್ನು ಇಂದಿಗಿಂತಲೂ ಹೆಚ್ಚು ಕರಾಳವಾಗಿ ಅವರು ಎದುರಿಸಬೇಕಾಗಿದ್ದರೂ ಅವರು ದೇವತೆಗಳಿಗೆ ಮೊರೆ ಹೋಗುವ ಪ್ರಮೇಯವಿರಲಿಲ್ಲ. ಅದಕ್ಕೆ ಬದಲಾಗಿ ಅವರು ತಮ್ಮದೇ ಆದ ಮಾಂತ್ರಿಕ ಆಚರಣೆಗಳಿಂದ ಪ್ರಕೃತಿಯ ವೈಚಿತ್ರ್ಯಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುತ್ತಿದ್ದರು (ಪು. 79).

ಉದಾಹರಣೆಗೆ ಮಳೆ ಬೇಕೆಂದಾಗ ಬುಡಕಟ್ಟು ಜನರು ಗುಂಪುಗೂಡಿ ಮೋಡಗಳು ದಟ್ಟವಾಗಿ ಕವಿದಂತೆ, ಗುಡುಗು ಮಿಂಚುಗಳು ಅಪ್ಪಳಿಸಿದಂತೆ ಮತ್ತು ಮಳೆ ಧಾರಾಕಾರವಾಗಿ ಸುರಿದಂತೆ ನೃತ್ಯ ಮಾಡುತ್ತಾರೆ. ಬಯಸಿದ ಇಷ್ಟಾರ್ಥ ವಾಸ್ತವಿಕವಾಗಿ ನೆರವೇರಿದಂತೆ ಒಂದು ಕಲ್ಪನಾತ್ಮಕ ವಸ್ತುಸ್ಥಿತಿಯನ್ನು ಅಭಿನಯಿಸುತ್ತಾರೆ. ಅಂತಿಮಘಟ್ಟದಲ್ಲಿ ಅಭಿನಯವು ಆಜ್ಞೆಯಾಗಿ ಪರಿಣಮಿಸಬಹುದು. ಅದು ಆಜ್ಞೆಯೇ ಹೊರತು ಪ್ರಾರ್ಥನೆಯಲ್ಲ ಎಂಬುದು ಗಮನಾರ್ಹ. ಅವರು ಮಾಂತ್ರಿಕತೆಯನ್ನು ಆಚರಿಸುತ್ತಾರೆಯೇ ಹೊರತು ಮಂತ್ರಗಳನ್ನು ಜಪಿಸುವುದಿಲ್ಲ.

ನಂತರದ ಯಜುರ್ವೇದ ಕಾಲದ ಯಾಜ್ಞಿಕ ವಿಧಿವಿಧಾನಗಳಿಗೆ ವಿಶೇಷ ಅರ್ಥವಿದೆ. ಮೂಲಭೂತವಾಗಿ ಯಜ್ಞವು ಹಿಂದಿನ ಮಾಂತ್ರಿಕ ವಿಧಾನಗಳ ಆಚರಣೆಯೇ ಆಗಿದೆ. ಆ ವಿಧಾನಗಳಿಗೆ ಒಂದು ಸ್ವಯಂಶಕ್ತಿ ಇದೆ. ಆ ಶಕ್ತಿಯಿಂದಲೇ ಅಪೇಕ್ಷಿತ ಫಲಗಳು ಹೊರಹೊಮ್ಮುತ್ತವೆಯೇ ವಿನಾ ಅದಕ್ಕೆ ದೇವತಾ ಪ್ರಾರ್ಥನೆ ಕಾರಣವಲ್ಲ. ಈ ಯಜ್ಞಾದಿಕ್ರಿಯೆಗಳ ಔಪಚಾರಿಕ ವಿಧಾನವನ್ನು ಸಮೀಕ್ಷಿಸುವ ಪೂರ್ವಮೀಮಾಂಸಾ ದರ್ಶನದಲ್ಲಿ ದೇವರಿಗೆ ಅಸ್ತಿತ್ವವಿಲ್ಲವೆಂದು ಒಂದು ವಾದವಿರುವುದನ್ನು ಅಲ್ಲಗಳೆಯಲಾಗದು. ಈ ಶಾಸ್ತ್ರದಲ್ಲಿ ಗಣ್ಯನೆಂದು ಗುರುತಿಸಲಾದ ಕುಮಾರಿಲಭಟ್ಟನು ದೇವರ ಕಲ್ಪನೆಯನ್ನು ಅಪಹಾಸ್ಯಕ್ಕೀಡು ಮಾಡುತ್ತಾನೆ: ಇಷ್ಟೊಂದು ಕ್ರೌರ್ಯ ಕೇಡುಗಳಿಂದ ತುಂಬಿದ ಪ್ರಪಂಚವನ್ನು ಸರ್ವಜ್ಞನೂ ಸರ್ವಶಕ್ತನೂ ಆದವನೆಂದು ಹೇಳಲಾದ ದೇವನು ಸೃಷ್ಟಿಸಿದನೆ? ಹಾಗಿದ್ದರೆ ಅವನೆಂತಹ ಸರ್ವಜ್ಞ? ಆದ್ದರಿಂದ ಇಂದ್ರ, ಅಗ್ನಿ, ಮಿತ್ರ, ವರುಣರು ದೇವತೆಗಳೇ ಅಲ್ಲ. ಅವುಗಳನ್ನು ಕುರಿತ ಮಂತ್ರಗಳ ಉಚ್ಚಾರ ಸ್ವತಃ ಶಕ್ತಿಯುಳ್ಳದ್ದಾಗಿರುವುದರಿಂದ ಯಜ್ಞವು ಫಲ ನೀಡುತ್ತದೆ ಎಂಬುದು ಅವನ ನಂಬಿಕೆಯಾಗಿತ್ತು.

ಧರ್ಮ ಎಂಬುದು ಒಳ್ಳೆಯ ನಡತೆಯನ್ನು ಸೂಚಿಸುವ ಪದವೂ ಆಗಿರುವುದರಿಂದ ಕೆಲವರು ಅದರ ಸಮರ್ಥನೆಗೆ ತೊಡಗುತ್ತಾರೆ. ಸಾಂಸ್ಥಿಕ ಧರ್ಮವನ್ನು ಸಂಪೂರ್ಣವಾಗಿ ನಿರಾಕರಿಸಿರು

ವುದಕ್ಕೂ ಒಳ್ಳೆಯ ಮೌಲ್ಯಗಳನ್ನು ಆಚರಣೆಯಲ್ಲಿ ತರುವುದಕ್ಕೂ ಪರಸ್ಪರ ವಿರೋಧಗಳಿರಬೇಕಾಗಿಲ್ಲ.

ಧರ್ಮದ ಮೂಲಕ ಸಮಾಜದಲ್ಲಿ ಶಾಂತಿ ಮತ್ತು ಐಕ್ಯತೆಯನ್ನು ತರಬಹುದೆಂಬ ನಿರೀಕ್ಷೆ ಇತಿಹಾಸದಲ್ಲಿ ಅನೇಕ ಸಾರಿ ಸುಳ್ಳಾಗಿದೆ. ಧಾರ್ಮಿಕ ಯುದ್ಧಗಳಲ್ಲಿ ಸಂಭವಿಸಿದ ರಕ್ತಪಾತ, ವಿನಾಶ ಅತ್ಯಂತ ಘೋರವಾದುದಾಗಿತ್ತು. ಇದು ಎಲ್ಲ ಧರ್ಮಗಳಿಗೂ ಅನ್ವಯಿಸುತ್ತದೆ. ಹಿಂದು ಧರ್ಮವು ಯಾವೊಬ್ಬ ವ್ಯಕ್ತಿಯಿಂದಲೂ ನಿರ್ಮಾಣವಾದುದಲ್ಲ, ಆದ್ದರಿಂದ ಅದು ಬೇರೆ ಧರ್ಮಗಳಿಗಿಂತ ಅತ್ಯುನ್ನತವಾದುದು ಎಂದು ಬೀಗುವವರು ಹಿಂದು ಧರ್ಮ ಯಾರಿಂದ, ಏಕೆ ಸ್ಥಾಪಿತವಾಯಿತು ಮತ್ತು ಏನನ್ನು ಸ್ಥಾಪಿಸಿತು ಎಂಬುದನ್ನು ಸ್ವಲ್ಪ ಹಿಂತಿರುಗಿ ನೋಡಬೇಕು. ಎಲ್ಲೋ ಕೆಲವು ಮೇಲ್ವರ್ಗದವರ ಸುಖ ಸಮೃದ್ಧಿಗಾಗಿ ಬಹು ಸಂಖ್ಯಾತರು ಪಶುಗಳಿಗಿಂತಲೂ ಹೀನಾಯವಾಗಿ ಇತಿಹಾಸದ ಉದ್ದಕ್ಕೂ ಅನುಭವಿಸುತ್ತಾ ಬಂದ ವಸ್ತುಸ್ಥಿತಿಯನ್ನು ಕಣ್ಣರಳಿಸಿ ನೋಡಬೇಕು.

ಪ್ರಾಚೀನ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ವೈಜ್ಞಾನಿಕ ಮನೋಧರ್ಮ, ಧರ್ಮಶಾಸ್ತ್ರಗಳ ಪ್ರಾಬಲ್ಯದ ನಂತರ ಹಿಮ್ಮೆಟ್ಟಿ ಮೂಢ ನಂಬಿಕೆಗಳಿಗೆ ಆಗರವಾದ ಬಗೆಯನ್ನು ಜಿ.ಆರ್. ಅವರು 'ಸಾಮಾಜಿಕ ಆಶಯವಾಗಿ ವೈಜ್ಞಾನಿಕ ಮನೋಧರ್ಮ' ಎಂಬ ಪ್ರಬಂಧದಲ್ಲಿ ಸಾಕ್ಷ್ಯಾಧಾರಗಳಿಂದ ಸ್ಪಷ್ಟಪಡಿಸಿದ್ದಾರೆ.

ಇಂದು ಕೆಲವು ಭಾರತೀಯ ಪ್ರಭೃತಿಗಳು ಆರ್ಯಪೂರ್ವಯುಗದಲ್ಲಿ ಹರಪ್ಪ-ಮೆಹೆಂಜೊದಾರೋ ಸಂಸ್ಕೃತಿ ಇತ್ತು, ಅನಂತರ ಆರ್ಯರು ಹೊರಗಿನಿಂದ ಭಾರತಕ್ಕೆ ವಲಸೆ ಬಂದರು ಎಂಬ ಐತಿಹಾಸಿಕ ಸತ್ಯಾಂಶವನ್ನೇ ನಿರಾಕರಿಸಲು ಹೊರಟಿದ್ದಾರೆ. ಏಕೆಂದರೆ ಆರ್ಯರು ಹೊರಗಿನಿಂದ ಬಂದರು, ಇಲ್ಲಿಯ ಸಿಂಧು ನಾಗರಿಕತೆಯನ್ನು ಹಾಳುಗೆಡವಿದರು ಎಂಬ ಸಿದ್ಧಾಂತವನ್ನು ಒಪ್ಪಿಕೊಂಡರೆ ಹತ್ತನೆಯ ಶತಮಾನದ ನಂತರ ವಲಸೆ ಬಂದವರಿಗೂ ಆರ್ಯರಷ್ಟೇ ಮನ್ನಣೆ ಕೊಡಬೇಕಾಗುತ್ತದೆ. ಆದ್ದರಿಂದ ಆರ್ಯರು ಹೊರಗಿನವರಲ್ಲ ಎಂಬ ವಾದವನ್ನು ಮುಂದೊಡ್ಡಲಾಗುತ್ತಿದೆ. ಆದರೆ ಹರಪ್ಪ ನಾಗರಿಕತೆಯ ಉತ್ತರಾಧಿಕಾರಿಗಳಾಗಿದ್ದ ಆರ್ಯರು ಪಶುಪಾಲಕರಾಗಿ ಏಕೆ ಮುಂದುವರಿಯಬೇಕಾಯಿತು? ಮತ್ತು ಹರಪ್ಪ ನಾಗರಿಕತೆಯ ಕಾಲದ ನಗರಗಳ ಪುನರ್ನಿರ್ಮಾಣ ಏಕೆ ಕೂಡಲೆ ಸಾಧ್ಯವಾಗದೆ ಮೌರ್ಯರ ಕಾಲದವರೆಗೆ ಕಾಯಬೇಕಾಯಿತು? ಎಂಬ ಪ್ರಶ್ನೆಗಳಿಗೆ ಅವರಿಂದ ಉತ್ತರವಿಲ್ಲ.

ಹನ್ನೊಂದನೆಯ ಶತಮಾನದಲ್ಲಿ ಭಾರತಕ್ಕೆ ಭೇಟಿ ನೀಡಿದ ಆಲ್ ಬಿರೋನಿ ಅಂದಿನ ಕಾಲದ ಭಾರತದ ವೈಜ್ಞಾನಿಕ ಸ್ಥಿತಿಗತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ, ದಾಖಲಿಸಿದ್ದಾನೆ. ಆ ವೇಳೆಗಾಗಲೇ ನಮ್ಮಲ್ಲಿ ಖಗೋಳಶಾಸ್ತ್ರ ಆರ್ಯಭಟ, ವರಾಹಮಿಹಿರ ಮತ್ತು ಬ್ರಹ್ಮಗುಪ್ತರಂತಹ ಪ್ರಾಚೀನ ವಿಜ್ಞಾನಿಗಳಿಂದ ಯಾವ ಹಂತವನ್ನು ತಲುಪಿತ್ತು ಮತ್ತು ಅವರು ತಮ್ಮ ಅನ್ವೇಷಣೆಯಲ್ಲಿ ಎದುರಿಸುತ್ತಿದ್ದ ಸಾಮಾಜಿಕ ಸಮಸ್ಯೆಗಳೇನು ಎಂಬುದನ್ನು ಸಹ ದಾಖಲಿಸಿದ್ದಾನೆ. ಬ್ರಹ್ಮಗುಪ್ತನು ಗ್ರಹಣಗಳಿಗೆ ಸಂಬಂಧಿಸಿದಂತೆ ಪರಸ್ಪರ ವಿರುದ್ಧವಾದ

ಎರಡು ರೀತಿಯ ಕಾರಣಗಳನ್ನು ನೀಡುತ್ತಾನೆ. ಸಾಂಪ್ರದಾಯಕ ನಂಬಿಕೆಯಾದ ರಾಹು-ಕೇತುಗಳು ಸೂರ್ಯಚಂದ್ರರನ್ನು ನುಂಗುವುದನ್ನು ನೀಡುವುದಲ್ಲದೆ ಆಧುನಿಕ ವಿಜ್ಞಾನಿಗಳು ಹೇಳುವ ನೆರಳಿನ ಸಿದ್ಧಾಂತವನ್ನೂ ನಿಖರವಾಗಿ ಮಂಡಿಸುತ್ತಾನೆ. ಹೀಗೇಕೆ ಎಂಬುದು ಪ್ರವಾಸಿಗನಾಗಿ ಬಂದಿದ್ದ ಆಲ್ ಬಿರೋನಿಗೆ ಅರ್ಥವಾಗುವುದಿಲ್ಲ. ಅಂದಿನ ಪರಿಸರದಲ್ಲಿ ರಾಜ ಮತ್ತು ಅವನ ಬೆಂಬಲಿಗರಾದ ಸಂಪ್ರದಾಯಸ್ಥರ ನಂಬಿಕೆಗಳಿಗೆ ವಿರುದ್ಧವಾದ ವೈಜ್ಞಾನಿಕ ಅನ್ವೇಷಣೆಗಳನ್ನು ಹೊರಗೆಡಹುವುದು ಸಾಧ್ಯವೇ ಇರಲಿಲ್ಲ. ಆದ್ದರಿಂದ ಬ್ರಹ್ಮಗುಪ್ತನು ಪ್ರಾರಂಭದಲ್ಲಿ ಸಾಂಪ್ರದಾಯಕ ನಂಬಿಕೆಗಳಾದ ರಾಹು ಕೇತುಗಳ ಕಲ್ಪನೆಯನ್ನು ನೀಡಿ ಮುಂದುವರಿದು ನಿಜವಾದ ವೈಜ್ಞಾನಿಕ ಸತ್ಯವನ್ನು ವಿವರಿಸುತ್ತಾನೆ. ಹಾಗೆ ಅವನು ಮಾಡದಿದ್ದರೆ ಅವನ ಕಾಲಾನಂತರ ಆ ಗ್ರಂಥ ಉಳಿದುಬರುವ ಸಂಭವವಿರಲಿಲ್ಲ.

ಮಧ್ಯಕಾಲೀನ ಯೂರೋಪಿನಲ್ಲಿಯೂ ಬ್ರುನೋನನ್ನು ಅವನ ವೈಜ್ಞಾನಿಕ ಪ್ರವೃತ್ತಿಗಾಗಿ ಸಾಂಪ್ರದಾಯಿಕ ಚರ್ಚ್ ಅವನನ್ನು ಬೆಂಕಿಗೆ ತಳ್ಳಿತು. 17 ವರ್ಷದ ಕುಮಾರಿ ಜೋನ್ ತನ್ನ ಚರ್ಚ್ ವಿರುದ್ಧದ ನಂಬಿಕೆಗಳಿಗಾಗಿ ಸುಟ್ಟು ಬೂದಿಯಾಗಬೇಕಾಯಿತು.

ಗ್ರೀಸಿನ ಮಹಾತತ್ವಜ್ಞಾನಿ ಪ್ಲೇಟೋ ತನ್ನ 'ಕಾನೂನುಗಳು' ಎಂಬ ಗ್ರಂಥದಲ್ಲಿ ಯುವಕರನ್ನು ಸರಿದಾರಿಯಲ್ಲಿ ನಡೆಯುವಂತೆ ಮಾಡಲು ಸುಳ್ಳು ಅಗತ್ಯವೆನ್ನುತ್ತಾನೆ. ಅವನು ಅದನ್ನು 'ಉಪಯುಕ್ತವಾದ ಸುಳ್ಳು' ಎಂದು ಸಮರ್ಥಿಸಿಕೊಳ್ಳುತ್ತಾನೆ. ಪ್ಲೇಟೋನ ಸಮಕಾಲೀನನಾದ ಐಸೋಕ್ರೇಟಿಸ್ 'ಹಿರಿಯ ಅಧಿಕಾರಿಗಳ ಆಜ್ಞೆಗಳನ್ನು ಶಿರಸಾವಹಿಸುವುದು ಸಾಮಾನ್ಯರಿಗೆ ಅಭ್ಯಾಸವಾಗಬೇಕು' ಎನ್ನುತ್ತಾನೆ.

ವಿಜ್ಞಾನ ಆಗಾಗ ಕಂಡುಹಿಡಿದ ಹೊಸ ಸತ್ಯಗಳನ್ನು ಧಾರ್ಮಿಕ ಸಂಸ್ಥೆಗಳು ನಿರಾಕರಿಸುತ್ತಲೇ ಬಂದಿವೆ. ಭೂಮಿ ಚಪ್ಪಟೆಯಾಗಿಲ್ಲ, ಅದು ಗೋಲಾಕಾರವಾಗಿದೆ ಎಂದಾಗ, ಸೂರ್ಯನು ಭೂಮಿಯ ಸುತ್ತ ತಿರುಗುವುದಿಲ್ಲ, ಅದಕ್ಕೆ ವಿರುದ್ಧವಾಗಿ ಭೂಮಿಯೇ ಸೂರ್ಯನ ಸುತ್ತ ತಿರುಗುತ್ತದೆ ಎಂದಾಗಲೂ, ಆವರೆಗೆ ಪ್ರಚಲಿತವಾಗಿದ್ದ ಧಾರ್ಮಿಕ ನಂಬಿಕೆಗಳಿಗೆ ದೊಡ್ಡ ಆಘಾತವಾಯಿತು.

ಪ್ರಫುಲ್ಲಚಂದ್ರ ರೇ ಅವರು ಪ್ರಾಚೀನ ಭಾರತದಲ್ಲಿ ವಿಜ್ಞಾನ ಬೆಳೆದು ಬಂದ ರೀತಿಯನ್ನು ವಿಶ್ಲೇಷಿಸುತ್ತಾ ತತ್ವಶಾಸ್ತ್ರದ ಪ್ರಭಾವದಿಂದ ವಿಜ್ಞಾನದ ಬೆಳವಣಿಗೆ ಕುಸಿದು ಬಿದ್ದ ಬಗೆಯನ್ನು ದಾಖಲಿಸಿದ್ದಾರೆ. ಆದರೆ ಆ ಟೀಕೆಯೇ ಆಧುನಿಕ ಸಂಪ್ರದಾಯವಾದಿಗಳಿಗೆ ಚುರುಕು ಮುಟ್ಟಿಸುವಂತಿದ್ದುದರಿಂದ ರೇ ಅವರ ಪುಸ್ತಕದ ಇತ್ತೀಚಿನ ಮರುಮುದ್ರಣಗಳಲ್ಲಿ ಆ ಭಾಗಗಳೇ ಅದೃಶ್ಯವಾಗಿವೆ.

ರೇ ಅವರು ಹೇಳುವಂತೆ ವೈಜ್ಞಾನಿಕ ಪದ್ಧತಿಗೆ ಪೂರಕವಾದ ಹಾಗೂ ಅದಕ್ಕೆ ವಿರುದ್ಧವಾದ ಎರಡು ತತ್ವಶಾಸ್ತ್ರ ದರ್ಶನಗಳು ನಮ್ಮಲ್ಲಿದ್ದವು. ವೈಶೇಷಿಕ ದರ್ಶನದ ಪರಮಾಣು ವಾದವು ಪೂರಕವಾಗಿದ್ದರೆ, ಅದ್ವೈತ ವೇದಾಂತ ದರ್ಶನದ ಮಾಯಾವಾದವು ಅದಕ್ಕೆ ವಿರುದ್ಧವಾಗಿತ್ತು

ಎಂದು ರೇ ಅವರು ವಿಶದಪಡಿಸಿದ್ದಾರೆ. ಭಾರತದಲ್ಲಿ ವಿಜ್ಞಾನವು ಹಿಂದೆ ಬೀಳಲು ಶಂಕರಾಚಾರ್ಯರ ಸಿದ್ಧಾಂತವೂ ಒಂದು ಕಾರಣವೆಂದು ಅವರು ಬಗೆಯುತ್ತಾರೆ (ಪು. 102).

ಡಾ. ಜಿ. ಆರ್. ಅವರು ಇಂಗ್ಲಿಷ್ ಸಾಹಿತ್ಯದ ಪ್ರಾಧ್ಯಾಪಕರು. ತಾತ್ವಿಕ ಚಿಂತನೆಗಳ ಜೊತೆಗೆ ಕಲೆ ಮತ್ತು ಸಾಹಿತ್ಯ ವಿಮರ್ಶೆಯಲ್ಲೂ ಅವರಿಗೆ ಪ್ರೌಢ ಪ್ರಭುತ್ವವಿರುವುದು ಅವರು ಬರೆದ ಬೋರಿಸ್ ಪಾಸ್ಟರ್‌ನಾಕ್‌ರ 'ಡಾಕ್ಟರ್ ಷಿವಾಗೊ' ಕೃತಿಯ ವಿಮರ್ಶೆಯಿಂದ ಮನದಟ್ಟಾಗುತ್ತದೆ. 1958ರಲ್ಲಿ ಒಬ್ಬ ಸೋವಿಯಟ್ ರಷ್ಯಾದ ಲೇಖಕನ ಕೃತಿಗೆ ನೋಬೆಲ್ ಪಾರಿತೋಷಕ ದೊರೆತ ಸುದ್ದಿಯನ್ನು ಓದಿ ವಿಶ್ವದಾದ್ಯಂತ ಲೇಖಕರು ಮತ್ತು ಬುದ್ಧಿಜೀವಿಗಳು ಚಕಿತರಾದರು. 'ಡಾ. ಷಿವಾಗೊ' ಬಿಟ್ಟರೆ ಪಾಸ್ಟರ್‌ನಾಕ್‌ರ ಶ್ರೇಷ್ಠ ಕಾವ್ಯದ ಪರಿಚಯ ರಷ್ಯಾದ ಹೊರಗಿನವರಿಗೆ ತಲುಪಿಯೇ ಇಲ್ಲ. ಕಲಾತ್ಮಕವಾದ ಕಾವ್ಯ ಸೃಷ್ಟಿ ಅವರದು. 'ಡಾ. ಷಿವಾಗೊ'ದಲ್ಲಿ ಅವರು ಕಲಾತ್ಮಕ ಪಾತ್ರ ಸೃಷ್ಟಿ, ಕಥಾ ಸಂಯೋಜನೆ ಮತ್ತು ಕಲಾತ್ಮಕತೆಯ ಜೊತೆಗೆ 1917ರಲ್ಲಿ ಕ್ರಾಂತಿಯ ನಂತರದ ರಷ್ಯಾದ ಸಾಮಾಜಿಕ ಕೋಲಾಹಲಗಳೆಲ್ಲ ಚಿತ್ರಿತವಾಗಿದೆ. ಇವೆಲ್ಲವೂ ಪಾಸ್ಟರ್‌ನಾಕ್‌ರನ್ನು ಹತಾಶರನ್ನಾಗಿ ಮಾಡುತ್ತವೆ. ಕ್ರಾಂತಿಯು ರಷ್ಯಾದ ಬುದ್ಧಿಜೀವಿಗಳನ್ನು ಸದೆಬಡಿದು ನಾಶಗೊಳಿಸಿತು ಎಂಬ ತರ್ಕವನ್ನು ಲೇಖಕರು ಮುಂದೊಡ್ಡುತ್ತಾರೆ. ಕಥಾನಾಯಕನಾದ ಷಿವಾಗೊನ ಕಸಿವಿಸಿಗೊಂಡ ಜೀವನ ಮತ್ತು ಮರಣಗಳು ರಷ್ಯಾದ ಬುದ್ಧಿಜೀವಿಗಳ ಜೀವನ -ಮರಣದ ದುರಂತಗಾಥೆಯೋ ಎಂಬಂತೆ ಪಾಸ್ಟರ್‌ನಾಕ್ ಇಲ್ಲಿ ಕಲಾತ್ಮಕವಾಗಿ ಚಿತ್ರಿಸಿದ್ದಾರೆ. ಎಂಬುದನ್ನು ವಿವಿಧ ಪಾತ್ರಗಳು, ಸನ್ನಿವೇಶಗಳು ಮತ್ತು ಜೀವನ ಸಂದೇಶಗಳ ಮೂಲಕ ಜಿ.ಆರ್. ಅವರು ತೆರೆದಿಟ್ಟಿದ್ದಾರೆ.

ಮೀಸಲಾತಿಯನ್ನು ಕುರಿತು ಮಾತನಾಡುತ್ತಾ ಜಿ.ಆರ್. ಅವರು ಉನ್ನತ ವ್ಯಾಸಂಗ ಹಾಗೂ ಹುದ್ದೆಗಳಲ್ಲಿ ಮೀಸಲಾತಿಯನ್ನು ಕುರಿತೇ ಎಲ್ಲರೂ ಮಾತಾಡುತ್ತಾರೆ, ಇದರಿಂದ ತುಳಿತಕ್ಕೊಳಗಾದ ಕೆಳವರ್ಗದವರಿಗೆ ಅಷ್ಟು ಉಪಯೋಗವಿಲ್ಲ. ತೀರ ಕೆಳಹಂತದ ದಲಿತರಿಗೆ ವಸತಿ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣ ದೊರೆಯುವಂತಾದರೆ ಮಾತ್ರ ನಂತರದ ಕಾಲದಲ್ಲಿ ಮೀಸಲಾತಿಯಿಂದ ಅವರಿಗೆ ಅನುಕೂಲವಾಗುತ್ತದೆ ಎಂದು ಸಲಹೆ ಮಾಡುತ್ತಾರೆ.

ಕಾರ್ಮಿಕರ ಕಾರ್ಯನಿಷ್ಠೆಯ ಬಗ್ಗೆ ಬರೆಯುತ್ತಾ 'ಬಲವಂತವಿದ್ದಾಗ ಮಾತ್ರ ತನ್ನ ದುಡಿಮೆಯನ್ನು ಯಥಾವತ್ತಾಗಿ ನೀಡುವಂತಹ ಕೆಲಸಗಾರನು ತನ್ನ ವರ್ಗದ ಹಿತಶತ್ರು' ಎಂಬುದನ್ನು ಹೇಳುತ್ತಲೇ ಲೇಖಕರು 'ಉತ್ಪಾದನೆಯು ಸಾಮೂಹಿಕ ಕ್ರಿಯೆಯಾದ ಮೇಲೆ ಅದರ ವಿತರಣೆಯೂ ಸಾಮಾಜಿಕವಾಗಿ ಬಹುಜನರ ಪಾಲಾಗಬೇಕಾಗಿತ್ತು' ಎನ್ನುತ್ತಾರೆ. ಉತ್ಪಾದನಾ ಸಾಧನಗಳೆಲ್ಲಾ ಸಾಮಾಜಿಕ ಹತೋಟಿಗೆ ಒಳಗಾಗಬೇಕು, ಅದಕ್ಕಾಗಿ ಸೆಣಸಾಡುವ ಸಮಯದಲ್ಲೇ ಕೆಲಸಗಾರರು ತಮ್ಮ ಕೌಶಲಗಳನ್ನು ವೃದ್ಧಿಪಡಿಸಿಕೊಳ್ಳಬೇಕು ಎಂಬುದು ಜಿ.ಆರ್. ಅವರ ಹಿತನುಡಿಯಾಗಿದೆ.

❑

‘ವೈಚಾರಿಕ ಜಾಗೃತಿ’ - ಒಂದು ಅವಲೋಕನ

ಡಾ. ಸಬಿಹಾ ಭೂಮಿಗೌಡ

ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಎಳೆಯ ಬಾಲಕನೋರ್ವ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರನ್ನು ‘ವಿಶ್ವದ ಮೊದಲ ವಿಜ್ಞಾನಿ ಯಾರು?’ ಎಂಬ ಪ್ರಶ್ನೆಯನ್ನು ಕೇಳಿದ. ತಕ್ಷಣ ಈ ಪ್ರಶ್ನೆಯಿಂದ ಅಪ್ರತಿಭರಾದ ಕಲಾಂ ಅವರು ಸಾಂದರ್ಭಿಕವಾಗಿ ತಮಗೆ ಹೊಳೆದ ಉತ್ತರವನ್ನು ನೀಡಿದ್ದು ಪತ್ರಿಕೆಗಳಲ್ಲೂ ವರದಿಯಾಗಿತ್ತು. ಇದು ಮುಗಿದುಹೋದ ಸಂಗತಿಯಲ್ಲ. ಬದಲಾಗಿ ಬಾಲಕನ ಪ್ರಶ್ನೆ ಹಲವರ ಮನದಲ್ಲಿ ಅನುರಣಿಸಿರುವ ಸಾಧ್ಯತೆ ಇದೆ. ಡಾ. ಜಿ. ರಾಮಕೃಷ್ಣ ಅವರ ‘ವೈಚಾರಿಕ ಜಾಗೃತಿ’ ಇಂತಹ ನಮ್ಮ ಹತ್ತು ಹಲವು ಕುತೂಹಲ ಮತ್ತು ಜಿಜ್ಞಾಸೆಗಳಿಗೆ ಆಹಾರವನ್ನು ಒದಗಿಸಿ ಕೊಡುತ್ತದೆ. ‘ವೈಚಾರಿಕ ಜಾಗೃತಿ’ (1994 ; ದ್ವಿ.ಮು.) ಕೃತಿಯು ಅದರ ಹೆಸರೇ ಸೂಚಿಸುವಂತೆ ವೈಚಾರಿಕ ದೃಷ್ಟಿಕೋನವನ್ನು ಬೆಳೆಸುವ ದೃಷ್ಟಿಯಿಂದ ರಚಿತವಾದ ಒಂಬತ್ತು ಲೇಖನಗಳ ಸಂಕಲನವಾಗಿದೆ. ಇದರಲ್ಲಿ ವೇದ, ಉಪನಿಷತ್ತು, ಆಗಮ ಮುಂತಾದ ಪ್ರಾಚೀನ ಗ್ರಂಥ ಮೂಲಗಳ ವಸ್ತುನಿಷ್ಠ ವಿಶ್ಲೇಷಣೆಯ ಮೂಲಕ ವೈಚಾರಿಕತೆಯನ್ನು ಬೆಳೆಸುವ ಆಸಕ್ತಿ ಪ್ರಧಾನವಾಗಿ ಕಂಡುಬರುತ್ತದೆ. ಹಾಗೂ ಜನರು ಆರ್ಷೇಯ, ಅಪೌರುಷೇಯವೆಂದು ಸರ್ವಜ್ಞತ್ವವನ್ನು ಆರೋಪಿಸಿರುವ ಗ್ರಂಥಗಳಲ್ಲಿರುವ ವೈಚಾರಿಕ ಮತ್ತು ಅವೈಚಾರಿಕ ನೆಲೆಗಳನ್ನು ಜಿ.ಆರ್. ಅವರು ಈ ಕೃತಿಯಲ್ಲಿ ವಿಶದಪಡಿಸಿದ್ದಾರೆ.

ಯಾವುದೇ ಒಂದು ಸಂಗತಿಯನ್ನು ತಿಳಿಸುವುದಕ್ಕೆ ಎರಡು ದಾರಿ ಗಳಿರುತ್ತವೆ. ಒಂದು, ನೇತಿ ನೇತಿ ಎನ್ನುತ್ತ ಮೂಲವನ್ನು ಗುರುತಿಸುವ ಬಗೆಯಾದರೆ, ಇನ್ನೊಂದು ಇದು ಹೀಗೆ ಹೀಗೆ ಎನ್ನುತ್ತ ವಿಶದಪಡಿಸುವ ನೆಲೆ. ಎರಡು ವಿಧಾನಗಳಿಗೂ ಅವುಗಳದೇ ಆದ ಪ್ರಯೋಜನ ಹಾಗೂ

ಮಿತಿಗಳು ಇರುತ್ತವೆ. ಜಿ.ಆರ್. ಅವರು ಇವುಗಳಲ್ಲಿ ಆರಿಸಿಕೊಳ್ಳುವುದು ಎರಡನೆಯ ಮಾರ್ಗವನ್ನು ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. ವೈಚಾರಿಕತೆ ಎಂದರೇನು? ವೈಚಾರಿಕ ಮನೋಭಾವ ಏನೆಲ್ಲವನ್ನು ಒಳಗೊಳ್ಳುತ್ತದೆ ಮತ್ತು ಒಳಗೊಳ್ಳಬೇಕು ಎಂಬುದಕ್ಕೆ ಲೇಖಕರು ಹಾಕಿಕೊಡುವ ಚೌಕಟ್ಟು ವಿಸ್ತಾರವಾಗಿದೆ. 'ಕಾರ್ಯಕಾರಣ ಸಂಬಂಧಿತ ವಿಶ್ಲೇಷಣೆಯೇ ವೈಚಾರಿಕತೆಯ ಬುನಾದಿ'; ವೈಚಾರಿಕತೆ ಎಂಬುದು 'ಬೌದ್ಧಿಕ ಪ್ರಜ್ಞೆಯಲ್ಲ. ಅದು ಕಾರ್ಯತಃ ಆಚರಣೆಗೆ ಬರಬೇಕು'. 'ಭಾವುಕತೆ ವೈಚಾರಿಕತೆಗೆ ಅಡ್ಡಿ'; ನೈಜವಾದ ಚಾರಿತ್ರಿಕ ದೃಷ್ಟಿಯು ವೈಚಾರಿಕತೆಯ ಅವಿಭಾಜ್ಯ ಮತ್ತು ಅನಿವಾರ್ಯ ಅಂಗ; 'ವೈಚಾರಿಕತೆ ಸಫಲವಾಗಬೇಕಾದರೆ ಅದಕ್ಕೆ ಪೋಷಕವಾದ ಇತರ ಅಂಶಗಳೊಂದಿಗೆ ಕಣಕ್ಕೆ ಇಳಿಯಬೇಕಾಗುತ್ತದೆ' ಮತ್ತು ವೈಚಾರಿಕ ದೃಷ್ಟಿಕೋನ ಎಲ್ಲ ವಿಷಯಗಳಿಗೂ ಅನ್ವಯವಾಗಬೇಕು. ಒಂದೆಡೆ ಬಳಸಿ, ಇನ್ನೊಂದೆಡೆ ಬಿಡುವುದು ವೈಚಾರಿಕತೆಯಾಗಲಾರದು ಎಂಬುದು ಸಂಕಲನದ ಲೇಖನಗಳಲ್ಲಿ ಮೂಡಿ ಬಂದಿರುವ ಮುಖ್ಯ ಕಾಳಜಿಯಾಗಿದೆ. ಇದರೊಂದಿಗೆ ವೈಚಾರಿಕತೆಯನ್ನು ಚಲಾಯಿಸಲು ಬೌದ್ಧಿಕ ತಿಳಿವಳಿಕೆಯೊಂದೇ ಸಾಕಾಗಲಾರದು ಎಂಬುದನ್ನು ಲೇಖಕರು ಸೋದಾಹರಣವಾಗಿ ವಿವರಿಸಿದ್ದಾರೆ. ನಿದರ್ಶನಕ್ಕೆ ಅನಾರೋಗ್ಯವಾದರೆ ಔಷಧಿ ಸೇವಿಸಬೇಕು ಎಂಬುದು ಜ್ಞಾನ. ಆದರೆ ಈ ಜ್ಞಾನವನ್ನು ಚಲಾಯಿಸಲು ಬೌದ್ಧಿಕ ಜ್ಞಾನವೊಂದೇ ಇದ್ದರೆ ಸಾಲದು. ಔಷಧಿ ಕೊಳ್ಳುವ ಸಾಮರ್ಥ್ಯವೂ ಬೇಕು. ಅದಿಲ್ಲದ ಬಡ ಕುಟುಂಬಕ್ಕೆ ಬರೆ ಹಾಕಿದರೆ ಅಥವಾ ಮಾರಮ್ಮನಿಂದ ಬೇವಿನ ಸೊಪ್ಪನ್ನು ತಂದು ತಿನ್ನಿಸಿದರೆ ಗುಣವಾಗುತ್ತದೆ ಎಂಬ ಜ್ಞಾನ ಹತ್ತಿರದ್ದಾಗುತ್ತದೆ. ಅಂತಹ ಕುಟುಂಬದ ಸದಸ್ಯರಿಗೆ ವೈಚಾರಿಕತೆಯನ್ನು ಬೋಧಿಸುವುದು ಕಂಠಶೋಷಣೆಯಾಗುತ್ತದೆ. ಮತ್ತು ಅದೇ ಕ್ರೌರ್ಯವೂ ಆಗುತ್ತದೆ ಎಂಬುದನ್ನು ಲೇಖಕರು ಪ್ರತಿಪಾದಿಸಿದ್ದಾರೆ. ಇಂತಹ ವಿಚಾರಗಳ ಹಿಂದೆ ಸಮಕಾಲೀನ ಭಾರತದ ಶೈಕ್ಷಣಿಕ, ಆರ್ಥಿಕ, ಜಾತೀಯ ತಾರತಮ್ಯಗಳು ಸೃಷ್ಟಿಸಿದ ಅನಿಷ್ಟಗಳನ್ನು ನೆನಪಿಸಿಕೊಡುವ ಉದ್ದೇಶವಿದೆ. ಹೀಗೆ ವೈಚಾರಿಕತೆಯು ಹೊಂದಿರಬೇಕಾದ ವಿಸ್ತೃತ ದೃಷ್ಟಿಕೋನದ ಅಗತ್ಯ ಮತ್ತು ಅನಿವಾರ್ಯತೆಯನ್ನು ಲೇಖನಗಳು ಸೂಚಿಸುತ್ತವೆ. ಲೇವಡಿ ಮಾಡುವುದರಿಂದ ಮೂಢನಂಬಿಕೆಗಳು ಕಡಿಮೆಯಾಗುವುದಿಲ್ಲ. ಬದಲಾಗಿ ಅವು ಹುಟ್ಟಿಕೊಳ್ಳಲು ಕಾರಣವಾದ ಸಂದರ್ಭಗಳನ್ನು ಅರಿತುಕೊಂಡಲ್ಲಿ ಲೇವಡಿಯಿಂದ ತೃಪ್ತಿ ಹೊಂದುವುದು ಕಡಿಮೆಯಾಗುತ್ತದೆ ಎಂಬ ಲೇಖಕರ ನಿಲುವು ತುಂಬ ಆರೋಗ್ಯಪೂರ್ಣವಾದುದು.

ಜಿ.ಆರ್. ಅವರ ಓದಿನ ಹರಹು ಅಗಾಧವಾದುದು. ಕೇವಲ ನೂರಿಪ್ಪತ್ತು ಪುಟಗಳಷ್ಟಿರುವ ಈ ಕೃತಿಯಲ್ಲಿ ವೇದಗಳು, ಛಾಂದೋಗ್ಯ ಉಪನಿಷತ್ತು, ಶತಪಥ ಬ್ರಾಹ್ಮಣ, ಆರಣ್ಯಕ ಗ್ರಂಥ, ಲೋಕಾಯತ, ಸಾಂಖ್ಯ, ನ್ಯಾಯ, ವೈಶೇಷಿಕ ಗ್ರಂಥಗಳು, ಚರಕ ಸಂಹಿತೆ, ಭಾರತೀಯ ತತ್ವಶಾಸ್ತ್ರ, ತರ್ಕಶಾಸ್ತ್ರ ಮುಂತಾದ ಪ್ರಾಚೀನ ಕೃತಿಗಳ ಜೊತೆ ಪಾಶ್ಚಾತ್ಯ ತತ್ವಶಾಸ್ತ್ರ ಮತ್ತು ವಿಜ್ಞಾನ ಲೋಕದ ಮಾಹಿತಿಗಳನ್ನೂ ಲೇಖಕರು ತಮ್ಮ ವಿಚಾರಗಳ ಸಮರ್ಥನೆಗೆ ಪೂರಕವಾಗಿ ತಂದಿದ್ದಾರೆ. ಮತ್ತು ಆ ಮೂಲಕ ಕೃತಿಯು ಎರಡು ಉದ್ದೇಶಗಳನ್ನು ಈಡೇರಿಸಿಕೊಂಡಿದೆ. ಅವುಗಳೆಂದರೆ, ಮೊದಲನೆಯದಾಗಿ ಪ್ರಾಚೀನ ಗ್ರಂಥಗಳನ್ನು ವಿಮರ್ಶೆಗೆ ಹಚ್ಚದೆ ಭಾವನಾತ್ಮಕ ನೆಲೆಯಿಂದ ಹೊಗಳುವ ಚಟ ಬೆಳೆಸಿಕೊಂಡಿರುವ ಇಂದಿನ ಸಂಸ್ಕೃತಿಯ ಟೊಳ್ಳುತನವನ್ನು ಬಯಲಿಗಿಡುವುದು. ಎರಡನೆಯದು ನಿರ್ದಿಷ್ಟ ಕೃತಿಯ ಉದಾತ್ತತೆಯನ್ನು ಎತ್ತಿ ಹಿಡಿಯಲು, ಇತರ ಕೃತಿಗಳನ್ನು

ತೆಗಳಬೇಕಾಗಿಲ್ಲ ಎಂಬುದಾಗಿದೆ. ಕೃತಿಯ ಲೇಖನಗಳು ಈ ಮುಖ್ಯ ಉದ್ದೇಶವನ್ನು ಸಮರ್ಥವಾಗಿ ನಿರ್ವಹಿಸಿವೆ.

ಪಾಶ್ಚಾತ್ಯ ವಿಜ್ಞಾನಿಗಳಾದ ಥೇಲಿಸ್, ಸಾಕ್ರೆಟೀಸ್, ಗೆಲಿಲಿಯೋ, ಗಿಯೋರ್ದನೋ ಬ್ರೂನೋ ಮುಂತಾದವರ ಹಾಗೂ ಭಾರತೀಯ ಸಂದರ್ಭದಲ್ಲಿ ಉದ್ದಾಲಕ, ಆರುಣಿ, ಕಣಾದ, ವರಾಹಮಿಹಿರ, ಬ್ರಹ್ಮಗುಪ್ತ ಮುಂತಾದವರು ಸ್ಥಾಪಿತಶಕ್ತಿ ಮತ್ತು ಅಜ್ಞಾನದ ವಿರುದ್ಧ ತಾವು ಕಂಡುಕೊಂಡ ಸತ್ಯವನ್ನು ಪ್ರತಿಪಾದಿಸಲು ನಡೆಸಿದ ಹೋರಾಟ, ಎದುರಿಸಿದ ಸಂಕಷ್ಟಗಳು ಮತ್ತು ಕಂಡುಕೊಂಡ ಒಳದಾರಿಗಳು ಲೇಖನಗಳಲ್ಲಿ ಮೂಡಿ ಬಂದಿವೆ. ಪ್ರಪಂಚದ ಯಾವ ಭಾಗದಲ್ಲೇ ಆಗಿರಲಿ, ಆಸ್ತಿಕತೆ ಚರಿತ್ರೆಯುದ್ದಕ್ಕೂ ಪ್ರತಿಷ್ಠಿತ ಶಕ್ತಿಗಳ ಮತ್ತು ವ್ಯವಸ್ಥೆಗಳ ಊರುಗೋಲಾಗಿ ನಿಂತ ಬಗೆಯನ್ನು ಓದುಗರಿಗೆ ತಿಳಿಸಿಕೊಡುವುದು ಲೇಖಕರ ಮುಖ್ಯ ಆಸಕ್ತಿಯಾಗಿದೆ. ಬೌದ್ಧಿಕ ದುಡಿಮೆ ಮತ್ತು ದೈಹಿಕ ದುಡಿಮೆಗಳ ನಡುವೆ ತಾರತಮ್ಯ ನಿರ್ಮಾಣವಾದ ಕಾಲ, ಸಂದರ್ಭ ಮತ್ತು ಪರಿಣಾಮಗಳನ್ನು ವೇದಗಳ ನಿದರ್ಶನಗಳ ಮೂಲಕ ಲೇಖಕರು ವಿಶದಪಡಿಸಿದ್ದಾರೆ. ಹಾಗೂ ಪ್ರಾಚೀನ ಕಾಲದಿಂದಲೂ ವೈಚಾರಿಕ ದೃಷ್ಟಿಕೋನವನ್ನು ಪ್ರತಿಪಾದಿಸುತ್ತಾ ಬಂದ ಹಾಗೂ ಪ್ರಬಲ ವಿರೋಧಿ ಪಂಗಡವನ್ನು ಚಾಣಾಕ್ಷತೆಯಿಂದ ನಿವಾರಿಸಿಕೊಳ್ಳುತ್ತ ಬಂದ ಗ್ರಂಥಗಳ ಕುರಿತೂ ಇಲ್ಲಿನ ಲೇಖನಗಳು ಬೆಳಕು ಚೆಲ್ಲುತ್ತವೆ. ಹೀಗೆ ಎಡಪಂಥೀಯ ವಿಚಾರಗಳಲ್ಲಿ ಜಿ.ಆರ್. ಅವರು ಇಟ್ಟಿರುವ ವಿಶ್ವಾಸ ಅವರ ಹಲವು ಲೇಖನಗಳ ಚೌಕಟ್ಟನ್ನು ನಿರ್ಮಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

'ವೈಚಾರಿಕ ಜಾಗೃತಿ' ಕೃತಿಯು ಹಲವು ಧನಾತ್ಮಕ ಅಂಶಗಳನ್ನು ಒಳಗೊಂಡಿದೆ ಎಂಬುದು ನಿಜವಾದರೂ, ಇದರಲ್ಲಿ ಕೆಲವು ಕೊರತೆಗಳೂ ಇವೆ. ಮುಖ್ಯವಾಗಿ ಲೇಖಕರು ವಿಚಾರವನ್ನು ಮಂಡಿಸುವ ವಿಧಾನಕ್ಕೆ ಸಂಬಂಧಿಸಿದಂತೆ ಇದು ಕಂಡುಬರುತ್ತದೆ. ನಿದರ್ಶನಕ್ಕೆ ಮೊದಲ ಲೇಖನ ಉದ್ದಾಲಕ ಆರುಣಿಯ ಬಗ್ಗೆ ಹೇಳಹೊರಟಿದ್ದರೂ, ಬಳಸು ದಾರಿಯಿಂದ ವಿಷಯ ಪ್ರವೇಶ ಮಾಡಿದಂತಿದೆ. ಕೆಲವೊಮ್ಮೆ ಲೇಖಕರು ಕೊಡುವ ಪೂರಕ ಮಾಹಿತಿಗಳು ಓದುಗರ ಗಮನವನ್ನು ಕೇಂದ್ರದಿಂದ ಬೇರೆಡೆ ಚಲಿಸುವಂತೆ ಮಾಡುತ್ತವೆ. ಹೀಗಾಗಿ ಸಾಮಾನ್ಯ ಓದುಗರಿಗೆ ಇವರ ಬರಹಗಳು ಗ್ರಹಿಸಿಕೊಳ್ಳಲು ಕಠಿಣ ಎನಿಸುತ್ತವೆ. ಕನ್ನಡದಲ್ಲಿ ವಿಚಾರ ಸಾಹಿತ್ಯಕ್ಕೆ ಕುವೆಂಪು, ಶಿವರಾಮ ಕಾರಂತ, ಎ.ಎನ್. ಮೂರ್ತಿರಾವ್, ಜಿ.ಟಿ. ನಾರಾಯಣರಾವ್ ಮುಂತಾದ ಹಲವರು ಗಮನಾರ್ಹ ಕೊಡುಗೆಯನ್ನು ನೀಡಿದ್ದಾರೆ. ಅವರ ಬರಹಗಳಲ್ಲಿ ಕಾಣುವ ಲಾಲಿತ್ಯ, ಭಾಷೆಯ ಸೊಗಸು, ವಿಷಯ ಮಂಡನೆಯಲ್ಲಿ ಕಾಣುವ ಅಚ್ಚುಕಟ್ಟುತನ ಜಿ.ಆರ್. ಅವರ ಲೇಖನಗಳಲ್ಲಿ ವಿಶೇಷವಾಗಿ ಕಂಡುಬರುವುದಿಲ್ಲ. ಇದಕ್ಕೆ ಕಾರಣಗಳನ್ನು ನಾನು ಹೀಗೆ ಗ್ರಹಿಸಿಕೊಂಡಿದ್ದೇನೆ. ಜಿ.ಆರ್. ಅವರ ಬರವಣಿಗೆ ಅನುವಾದ, ವೈಚಾರಿಕ ಮತ್ತು ವಿಮರ್ಶಾತ್ಮಕ ಸಾಹಿತ್ಯಕ್ಕೆ ವಿಶೇಷವಾಗಿ ಮೀಸಲಾಗಿದೆ. ಆದರೆ ಮೇಲೆ ಹೇಳಿದ ಲೇಖಕರು ಸಾಹಿತಿಗಳಾಗಿ ಹೆಚ್ಚು ಪ್ರಸಿದ್ಧರಾಗಿದ್ದಾರೆ. ಸಾಹಿತ್ಯ ಮತ್ತು ವೈಚಾರಿಕತೆಯ ನಿರೂಪಣೆಯ ಭಾಷಾ ನಮೂನೆಗಳು ವಿಭಿನ್ನ. ಹೀಗಾಗಿ ಇವರ ವಿಭಿನ್ನ ಕ್ಷೇತ್ರಗಳೇ ವಿಭಿನ್ನ ಶೈಲಿಗೆ ಕಾರಣವಾಗಿರಬೇಕು. ವೈಚಾರಿಕ ಜಾಗೃತಿಯನ್ನು ಬೆಳೆಸುವ ದೃಷ್ಟಿಯಿಂದ ಜಿ.ಆರ್. ಬರಹಕ್ಕೆ ಈ ಶೈಲಿ ಒಂದು ನೆಲೆಯಲ್ಲಿ ಅಡ್ಡಿಯಾಗಿದೆ ಎನಿಸುತ್ತದೆ. ❑

ಭಾರತೀಯ ವಿಜ್ಞಾನದ ಹಾದಿ

ಡಾ. ಸಿ. ಯತಿರಾಜು

ಸಾರ್ವಜನಿಕವಾಗಿ ಇತಿಹಾಸ ಇಂದು ಅತ್ಯಂತ ಹೆಚ್ಚು ವಿವಾದಾತ್ಮಕ ವಿಚಾರವಾಗಿ ಪರಿಣಮಿಸಿದೆ. ಅದನ್ನು ಮತಗಳಿಕೆಯ ಆಯುಧವಾಗಿ ಬಳಸಿ ಕೊಂಡು ಅಧಿಕಾರದ ಗದ್ದುಗೆಯನ್ನೇರುವ ಸಾಧನವನ್ನಾಗಿ ಉಪಯೋಗಿಸಿ ಕೊಳ್ಳಲಾಗುತ್ತಿದೆ. ಇತಿಹಾಸದ ಹೆಸರಿನಲ್ಲಿ ಜನರನ್ನು ಉದ್ರೇಕಿಸುವ, ದ್ವೇಷಿಸುವ, ಅವಮಾನಿಸಿ ಅಪನಂಬಿಕೆಗಳನ್ನು ಬಿತ್ತುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇತಿಹಾಸವನ್ನು ತಿರುಚಿ, ಸಾಮಾಜಿಕ ಸಾಮರಸ್ಯವನ್ನು ಹಾಳುಗೆಡವಿ ಇಡೀ ದೇಶಕ್ಕೆ ಬೆಂಕಿ ಹಚ್ಚುವ ಕೆಲಸವನ್ನು ಮಾಡಲಾಗು ತ್ತಿದೆ. ಇತಿಹಾಸವನ್ನು ತಮಗೆ ಅನುಕೂಲಕರವಾದ ನಿಲುವಿಗೆ ಅನುಸಾರ ವಾಗಿ ತಿರುಚಿ ನಿರೂಪಿಸುವ ಪ್ರಯತ್ನಗಳು ಅತ್ಯಂತ ವ್ಯಾಪಕವಾಗಿ ನಡೆಯುತ್ತಿವೆ. ಐತಿಹಾಸಿಕ ಸ್ಮಾರಕಗಳು ಮತಾಂಧರ ಧಾಳಿಗೆ ತುತ್ತಾಗಿ ವಿರೂಪಗೊಂಡು ಕುಸಿಯುತ್ತಿವೆ. ಅವುಗಳನ್ನು ಸಂರಕ್ಷಿಸುವ ಹೊಣೆ ಹೊತ್ತ ಸರ್ಕಾರಗಳು ಸಂಚನ್ನು ರೂಪಿಸಿ ಅವುಗಳನ್ನು ಕುಟ್ಟಿಕೆಡವಲು ಪರೋಕ್ಷವಾಗಿ ಬೆಂಬಲ ನೀಡುತ್ತಿವೆ. ದೇಶದ ಇತಿಹಾಸದ ನಿರೂಪಣೆ ಯಲ್ಲಿನ ದೋಷಗಳನ್ನು, ವಿಕೃತಿಗಳನ್ನು ಪೂರ್ವಾಗ್ರಹಗಳನ್ನು ಸರಿ ಪಡಿಸುವ ಘೋಷಣೆಯ ಹೆಸರಿನಲ್ಲಿ ಒಂದು ಜನಾಂಗವನ್ನು ಅತ್ಯಂತ ಶ್ರೇಷ್ಠವೆಂದು ಮತ್ತೊಂದು ಜನಾಂಗವನ್ನು ಆಕ್ರಮಣಕಾರರು, ಲೂಟಿಕಾರ ರೆಂದು ಚಿತ್ರಿಸಲು ಪ್ರಯತ್ನಿಸಲಾಗುತ್ತಿದೆ. ಇತಿಹಾಸದ ಪಠ್ಯಪುಸ್ತಕಗಳನ್ನು ವ್ಯಾಪಕವಾಗಿ ವಿಕೃತಗೊಳಿಸಿ ಎಳೆಯ ಮಕ್ಕಳ ಮನಸ್ಸಿನಲ್ಲಿ ಜನಾಂಗ ದ್ವೇಷವನ್ನು, ಹುಸಿ ಶ್ರೇಷ್ಠತೆಯ ಭಾವವನ್ನು ತುಂಬಿ ಸಾಮಾಜಿಕವಾಗಿ ವಿಷಮ ಪರಿಸ್ಥಿತಿಯನ್ನುಂಟು ಮಾಡಲು ವ್ಯಾಪಕ ಪ್ರಯತ್ನಗಳನ್ನು ಬೃಹತ್ ಪ್ರಮಾಣದಲ್ಲಿ ಮಾಡಲಾಗುತ್ತಿದೆ.

ಇತಿಹಾಸ ರಚನೆಯಲ್ಲಿ, ಇಂತಹ ವಿನಾಶಕಾರಿ ಬೆಳವಣಿಗೆಗಳಲ್ಲಿ, ಅನೇಕ ಇತಿಹಾಸತಜ್ಞರು ಅತ್ಯಂತ ಉತ್ಸಾಹದಿಂದ ತಮ್ಮನ್ನು ತಾವು ತೊಡಗಿಸಿಕೊಂಡು ವಸ್ತುನಿಷ್ಠ ಇತಿಹಾಸ ರಚನೆಯ ಪ್ರಕ್ರಿಯೆಯನ್ನೇ ಅಪಮೌಲ್ಯಗೊಳಿಸಿ, ಉನ್ನತ ಸರ್ಕಾರಿ ಕೃಪಾಪೋಷಿತ ಸಂಶೋಧನಾ ಸಂಸ್ಥೆಗಳ ಸ್ಥಾನಮಾನಗಳನ್ನು ಗಳಿಸಿಕೊಳ್ಳುವ ಮಾರ್ಗವನ್ನಾಗಿ ಮಾಡಿಕೊಂಡಿದ್ದಾರೆ. ಇಂತಹ ಆತಂಕಕಾರಿ ಬೆಳವಣಿಗಳ ಬಗ್ಗೆ ವಸ್ತುನಿಷ್ಠ ಇತಿಹಾಸ ರಚನೆಗೆ ಬದ್ಧವಾದ ಕೆಲವು ಇತಿಹಾಸಕಾರರು ತಮ್ಮ ವಿರೋಧವನ್ನು, ಸಾರ್ವಜನಿಕ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿದ್ದರೂ ಬಹುಸಂಖ್ಯಾತ ಇತಿಹಾಸಕಾರರು ಈ ಎಲ್ಲಾ ಬೆಳವಣಿಗೆಗಳ ಬಗ್ಗೆ ಅತ್ಯಂತ ನಿಸ್ಸೀಮ ನಿರ್ಲಕ್ಷ್ಯವನ್ನು ಪ್ರದರ್ಶಿಸುತ್ತಿದ್ದಾರೆ. ದೇಶಾದ್ಯಂತ ಕೋಮುಭಾವನೆಗಳನ್ನು, ಜಾತಿ ಅಸಮಾನತೆಯನ್ನು ಬಿತ್ತಿ ಬೆಳೆಸಲು ಇತಿಹಾಸವನ್ನು ರಾಜಕೀಯವಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದರೂ ಈ ಬಹುಸಂಖ್ಯಾತ ಇತಿಹಾಸಕಾರರು ಈ ಸಾರ್ವಜನಿಕ ಚರ್ಚೆಗಳಲ್ಲಿ ಮೌನವ್ರತಾಚರಣೆ ಮಾಡಿ, ಗೂಂಡಾಪಡೆಗಳಿಗೆ ಇತಿಹಾಸ ಕ್ಷೇತ್ರವನ್ನು ಮುಕ್ತವಾಗಿ ತೆರೆದಿಟ್ಟಿದ್ದಾರೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಡಾ. ಜಿ. ರಾಮಕೃಷ್ಣರವರ "ಭಾರತೀಯ ವಿಜ್ಞಾನದ ಹಾದಿ" ಒಂದು ದಿಟ್ಟ ಮತ್ತು ಪ್ರಶಂಸಾರ್ಹ ಪ್ರಯತ್ನವಾಗಿ ಇತಿಹಾಸಕಾರರ ಗಮನ ಸೆಳೆಯುತ್ತದೆ. ಸಾರ್ವತ್ರಿಕವಾದ ವಿಜ್ಞಾನಕ್ಕೆ ರಾಷ್ಟ್ರ ಜನಾಂಗ, ಜಾತಿ, ಧರ್ಮಗಳ ಕೃತಕ ಚೌಕಟ್ಟುಗಳನ್ನು ತೊಡಿಸಿ ವಿಕೃತಗೊಳಿಸು ತ್ತಿರುವ ಇಂದಿನ ದಿನಗಳಲ್ಲಿ ಈ ಪುಸ್ತಕ ಅತ್ಯಂತ ವಿಶಿಷ್ಟವಾಗಿ ಗಮನ ಸೆಳೆಯುತ್ತದೆ.

ವಿಜ್ಞಾನದ ನಕ್ಷೆಯಲ್ಲಿ ಭಾರತದ ಸ್ಥಾನ ಏನು? ಎನ್ನುವ ಪ್ರಶ್ನೆಗೆ ಉತ್ತರಗಳನ್ನು ಹುಡುಕುವ ದಾರಿಯಲ್ಲಿ ಓದುಗರನ್ನು ಈ ಪುಸ್ತಕ ಅಡ್ಡಾಡಿಸುತ್ತದೆ. ಭಾರತದ ವೈಜ್ಞಾನಿಕ ಬೇರುಗಳನ್ನು ಅತ್ಯಂತ ಸೂಕ್ಷ್ಮವಾಗಿ ಹುಡುಕುತ್ತಲೆ ಅದರ ತುಂಬಾ ಮೆತ್ತಿಕೊಂಡಿರುವ ಮೂಢನಂಬಿಕೆಗಳು ದುರಭಿಮಾನಗಳನ್ನು, ಗೊಂದಲಗಳನ್ನು ತಮ್ಮದೇ ಆದ ಅತ್ಯಂತ ಮೊನಚಾದ ವಿಡಂಬನಾತ್ಮಕ ಟೀಕೆಗೆ ಗುರಿಪಡಿಸಿದ್ದಾರೆ. ವೇದಕಾಲದಿಂದ ಹಿಡಿದು ಬ್ರಿಟಿಷರ ಆಗಮನದವರೆಗೆ ನಮ್ಮ ದೇಶದಲ್ಲಿ ನಡೆದಿದ್ದ ಶಾಸ್ತ್ರ ಚಿಂತನವನ್ನು ಇಲ್ಲಿ ಅತ್ಯಂತ ವಿವರವಾಗಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ವೈಜ್ಞಾನಿಕ ಚಿಂತನೆ ಭಾರತದಲ್ಲಿ ನಿರಂತರವಾಗಿ ವ್ಯವಸ್ಥಿತವಾಗಿ ನಡೆಯ ದಿರುವುದಕ್ಕೆ ಕಾರಣಗಳನ್ನು ಗುರುತಿಸುವ ಒಂದು ವಿಶಿಷ್ಟ ಇತಿಹಾಸ ಗ್ರಂಥವಾಗಿ ಗಮನ ಸೆಳೆಯುತ್ತದೆ. ಸಕಲ ವಿಜ್ಞಾನವೂ ಪ್ರಾಚೀನರಿಗೆ ಕರಗತವಾಗಿತ್ತು ಎಂಬ ನಿಲುವಿನಿಂದ ಹಿಡಿದು ಅವರಿಗೆ ವಿಜ್ಞಾನದ ಗಂಧವೇ ಇರಲಿಲ್ಲ ಎನ್ನುವ ನಿಲುವಿನವರೆಗೂ ತಮ್ಮ ತೀಕ್ಷ್ಣವಾದ ದೃಷ್ಟಿಹರಿಸಿ ಯಾವ ಭಾವೋದ್ವೇಗಕ್ಕೂ ಗುರಿಯಾಗದೆ ಈ ವಿಷಯವನ್ನು ಆಯಾ ಕಾಲ ಘಟ್ಟಗಳ ಚಾರಿತ್ರಿಕ ಹಿನ್ನೆಲೆಗಳಲ್ಲಿ ಕೂಲಂಕಷವಾಗಿ ಪರಿಶೀಲಿಸುವ ಪ್ರಯತ್ನವನ್ನು ಮಾಡಲಾಗಿದೆ. ಭಾರತೀಯ ವಿಜ್ಞಾನದ ಹಾದಿಯನ್ನು ಗುರುತಿಸಲು ಡಾ. ರಾಮಕೃಷ್ಣರವರು ಆಯ್ಕೆ ಮಾಡಿ ಕೊಂಡಿರುವ ವಿಧಾನ ಅತ್ಯಂತ ವಿಶಿಷ್ಟವಾಗಿದ್ದು, ವೈಜ್ಞಾನಿಕ ಬೆಳವಣಿಗೆ ಕೇವಲ ಬೌದ್ಧಿಕ ಕ್ರಿಯೆಯಲ್ಲ: ಅದು ಉಪಕರಣವನ್ನು ಪ್ರಾಯೋಗಿಕವಾಗಿ ಉತ್ಪಾದನೆಗೆ ತೊಡಗಿಸಿಕೊಂಡವ ನಿಂದಲೇ ವೃದ್ಧಿಯಾಗಬೇಕು ಎಂಬ ಖಚಿತ ನಿಲುವಿನಿಂದಾರಂಭಿಸಿ, ಅವುಗಳ ಲಿಖಿತ ಪ್ರಮಾಣ

ಗಳನ್ನು ಮಾತ್ರ ಆಧಾರವಾಗಿಟ್ಟುಕೊಳ್ಳದೆ ಉತ್ಖನನಶಾಸ್ತ್ರದಿಂದ ಲಭ್ಯವಾಗಿರುವ ದಾಖಲೆಗಳನ್ನೂ ಬಳಸಿಕೊಂಡು ಇತಿಹಾಸವನ್ನು ನಿರೂಪಿಸುವ ಪ್ರಯತ್ನವನ್ನು ಮಾಡಲಾಗಿದೆ.

ಅನೇಕ ಪ್ರಖ್ಯಾತ ವಿಜ್ಞಾನ ಇತಿಹಾಸಕಾರರ ಮಾದರಿಗಳ ಪರಿಚಯ ಮತ್ತು ಪರಾಮರ್ಶೆಗಳ ಆಧಾರದಲ್ಲಿ ತಮ್ಮ ನಿರೂಪಣೆಯನ್ನು ಕಟ್ಟುವ ಪ್ರಯತ್ನ ಮಾಡಲಾಗಿದೆ. ಜೆ.ಡಿ. ಬರ್ನಾಲ್, ಮಾಲಿನೋವಸ್ಕಿ, ಅಕರ್ನೆಕ್ಟ್, ವಿಕ್ಟರ್ ಟರ್ನರ್, ಚಾರ್ಲ್ಸ್ ಸಿಂಗರ್, ಗಾರ್ಡ್‌ನ್ ಚೈಲ್ಡ್ ಮಾರ್ಕ್ಸ್, ವಟೋರ್ಜಿಕ್ಕಿ, ಬಟ್ರ್ಂಡ್ ರಸೆಲ್, ಫಿಮಾನ್ ಡೈಸನ್, ಡೇವಿಡ್ ಬಾಮ್, ಬಿ. ಫಾರಿಂಗಟನ್, ಜೊಸೆಫ್ ನಿಡ್ಹ್ಯಾಮ್ ಮುಂತಾದ ಪ್ರಖ್ಯಾತ ಪಾಶ್ಚಿಮಾತ್ಯ ವಿಜ್ಞಾನ ಇತಿಹಾಸಕಾರರ ವಿಧಾನಗಳನ್ನು ಅತ್ಯಂತ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿ ತಮ್ಮ ನಿರೂಪಣಾ ವಿಧಾನಕ್ಕೆ ಒಂದು ರೀತಿಯ ಮೊನಚನ್ನು ನಿರ್ಮಾಣ ಮಾಡಿಕೊಳ್ಳಲಾಗಿದೆ. ತಮ್ಮ ಸೈದ್ಧಾಂತಿಕ ಮಾರ್ಗದರ್ಶಿಗಳಾದ ಶ್ರೀ ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಡಿ.ಡಿ. ಕೊಸಾಂಬಿ, ಎ. ರೆಹಮಾನ್, ಪಿ.ಸಿ.ರೇ, ಬಿ.ವಿ. ಸುಬ್ಬರಾಯಪ್ಪ, ಮೋತಿಲಾಲ್ ಬನಾರಸಿದಾಸ್, ಎನ್.ಎಲ್. ಭಟ್ಟಾಚಾರ್ಯ, ಧರ್ಮಪಾಲ್, ಕೆ.ಆರ್. ಶ್ರೀಕಂಠಮೂರ್ತಿ ಇನ್ನು ಮುಂತಾದ ಭಾರತೀಯ ವಿಜ್ಞಾನ ಇತಿಹಾಸಕಾರರ ನಿಲುವು ನಿರೂಪಣೆಗಳನ್ನು ಪರಿಚಯಿಸುತ್ತಾ ಅವರ ಅಧ್ಯಯನಗಳನ್ನು ಬಳಸಿಕೊಂಡು, ಅವುಗಳ ಮಿತಿಗಳನ್ನು ತಮಗೆ ತೋರಿದ ರೀತಿಯಲ್ಲಿ ಚರ್ಚೆಗೆ ವಿಮರ್ಶೆಗೆ ಒಳಪಡಿಸುತ್ತಲೆ ಭಾರತೀಯ ವಿಜ್ಞಾನ ವಿಕಾಸದ ಹಾದಿಯನ್ನು ಚಿತ್ರಿಸುವ ಪ್ರಯತ್ನ ಇದಾಗಿದೆ.

ವಿಜ್ಞಾನದ ಕ್ಷೇತ್ರದಲ್ಲಿ ಪರಿಪೂರ್ಣವಾದ ಜ್ಞಾನವೆಂಬುದಿಲ್ಲ: ಅದು ಸದಾ ವಿಕಾಸಶೀಲವಾದದ್ದು, ಪ್ರತಿ ತಲೆಮಾರಿನಲ್ಲೂ ಅದು ವಿನೂತನಗೊಳ್ಳುತ್ತಿರುತ್ತದೆ. ವಿಜ್ಞಾನ ಒಬ್ಬ ವ್ಯಕ್ತಿಯ ಅಥವಾ ಕೆಲವು ವ್ಯಕ್ತಿಗಳ ಖಾಸಗಿ ಜ್ಞಾನವಲ್ಲ. ಅದು ಸಮುದಾಯಕ್ಕೆ ಲಭ್ಯವಿರುವ ಸಂಚಿತ ಜ್ಞಾನ. ವಿಜ್ಞಾನದ ಪ್ರಕ್ರಿಯೆ ಸರಳವಲ್ಲ ಅದು ಅತಿ ಸಂಕೀರ್ಣವಾದ್ದು. ಭಾರತದ ಚರಿತ್ರೆಯ ಬೇರೆ ಬೇರೆ ಘಟ್ಟಗಳಲ್ಲಿ ಭಿನ್ನತೆಯಿಂದ ಕೂಡಿದ್ದ ಆರ್ಥಿಕ ಮತ್ತು ರಾಜಕೀಯ ಸನ್ನಿವೇಶಗಳಿದ್ದವು. ಆಗೆಲ್ಲಾ ಸಾಮಾಜಿಕ ರಚನೆ, ಉದ್ದೇಶಗಳು ಹಾಗೂ ಸಂಸ್ಕೃತಿ ಏಕರೂಪವಾಗಿರಲಿಲ್ಲ. ಆದ್ದರಿಂದ ವೈಜ್ಞಾನಿಕ ಸಂರಚನೆಯಲ್ಲೂ ತಂತ್ರಗಳು ಮತ್ತು ವಿಧಾನ ಬೇರೆ ಬೇರೆ ಇದ್ದಿರಬೇಕು. ಇದನ್ನೆಲ್ಲಾ ಒಟ್ಟಾಗಿ ನೋಡಿದಾಗ ಮಾತ್ರವೇ ಆಯಾ ಘಟ್ಟಗಳಲ್ಲಿ ವಿಜ್ಞಾನದ ಲಕ್ಷಣಗಳು ಏನಾಗಿದ್ದುವೆಂಬುದನ್ನು ತಿಳಿಯಲು ಸಾಧ್ಯ. ಇದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಳ್ಳದೆ ಇಂದಿನ ವೈಜ್ಞಾನಿಕ ಅಂಶಗಳನ್ನು ಹೋಲುವಂತಹ ಸಂಗತಿಗಳೇನಾದರೂ ಪ್ರಾಚೀನ ಭಾರತೀಯ ವಿಜ್ಞಾನದಲ್ಲಿ ಅಡಕವಾಗಿದೆಯೇ ಎಂದು ಹುಡುಕುವ ಪ್ರಯತ್ನ ವಿಜ್ಞಾನದ ಇತಿಹಾಸ ಕ್ರಮವನ್ನು ಬುಡಮೇಲು ಮಾಡಿದಂತೆ. ಇಂತಹ ಕ್ರಮದಿಂದಾಗಿ ಹಿಂದಿನ ಕಾಲದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆಯಲ್ಲಿ ಕಂಡುಬಂದ ಸಮಸ್ಯೆಗಳೇನು ಎಂಬುದರ ಕಡೆಗೆ ಗಮನ ಹರಿಯದೆ ಪ್ರಾಚೀನ ಆಯಾಮಗಳು ಕಣ್ಣಿಗೆ ಕಾಣದಂತಾಗಿವೆ ಎಂಬ ಕಟುವಾದ ವಿಮರ್ಶಾ ನೆಲೆಯಲ್ಲಿ ಭಾರತೀಯ ವಿಜ್ಞಾನ ವಿಕಾಸದ ಹಾದಿಯನ್ನು ರೂಪಿಸಲು ಪ್ರಯತ್ನಿಸಿದ್ದಾರೆ. ವೈಜ್ಞಾನಿಕ ವಿಧಾನ ಕೂಡ ಸ್ಥಿರವಾದದ್ದಲ್ಲ ಅದೂ ಕೂಡ ಕಾಲಮಾನಕ್ಕನುಗುಣವಾಗಿ ವಿಕಾಸವಾಗು

ವಂತಹದು. ಈ ಹಾದಿಯಲ್ಲಿ ಸೂಕ್ಷ್ಮಾವಲೋಕನಕ್ಕಿರುವಂತೆ ಸ್ಥೂಲಾವಲೋಕನಕ್ಕೂ ಸ್ಥಾನವಿದೆ, ಕಾರ್ಯಕಾರಣ ಭಾವವು ವಿಜ್ಞಾನದ ಒಂದು ಆಧಾರ ಪ್ರತಿಜ್ಞೆ ಇನ್ನು ಮುಂತಾದ ನೆಲೆಗಳಿಂದ ಭಾರತೀಯ ವಿಜ್ಞಾನ ವಿಕಾಸದ ಹಾದಿಯನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ವಿಜ್ಞಾನವೆಂದರೆ ವಿಜ್ಞಾನದ ಇತಿಹಾಸ ಎಂದರ್ಥ. ವೈಜ್ಞಾನಿಕ ಸತ್ಯವೆಂದರೆ ಸತ್ಯದ ಇತಿಹಾಸ, ಅದರ ವಿಕಾಸ ಎಂದು ಅರ್ಥೈಸಿ, ಭಾರತೀಯ ವಿಜ್ಞಾನ ವಿಕಾಸದ ಹಾದಿಯನ್ನು ಗುರುತಿಸುವ ಪ್ರಯತ್ನ ಇದಾಗಿದೆ.

ಇತ್ತೀಚೆಗೆ ಆರ್ಯರು ಹೊರಗಿನಿಂದ ಬಂದವರೆಂಬುದನ್ನು ತಿರಸ್ಕರಿಸಿ ಅವರು ಸ್ಥಳೀಯರೇ ಆಗಿದ್ದರು ಎಂಬ ಪ್ರಬಲ ವಾದವನ್ನು ತಮ್ಮದೇ ಆದ ರಾಜಕೀಯ ಕಾರಣಗಳಿಗಾಗಿ ಪ್ರತಿಪಾದನೆ ಮಾಡಲಾಗುತ್ತಿದೆ. ಇದರ ಟೊಳ್ಳುತನವನ್ನು ಬಹಿರಂಗಪಡಿಸಲು ಡಾ. ರಾಮಕೃಷ್ಣರವರು ಒಂದು ಅತ್ಯಂತ ಗಂಭೀರ ಪ್ರಶ್ನೆಯನ್ನೆತ್ತಿದ್ದಾರೆ. ಹರಪ್ಪಾ ಸಂಸ್ಕೃತಿಯ ಕಾಲದ ಕೃಷಿ ಸಂಬಂಧಿ ತಾಂತ್ರಿಕತೆಯು ಅಗಾಧವಾಗಿ ಕುಗ್ಗಿ ಋಗ್ವೇದದ ಕಾಲದಿಂದಾಚೆಗೆ ಮತ್ತೆ ಪೂರ್ಣ ರೂಪದಲ್ಲಿ ವಿಕಾಸ ಹೊಂದಬೇಕಾಯಿತೆಂಬುದು ಚಾರಿತ್ರಿಕ ಸತ್ಯ. ಹೀಗೆ ವೃದ್ಧಿ ಹೊಂದಿದ ತಾಂತ್ರಿಕತೆಯು ನಶಿಸಿ ಮತ್ತೆ ಪ್ರಾಥಮಿಕ ಹಂತದಿಂದ ಎಂಬಂತೆ ಬೆಳೆಯಬೇಕಾಗಿ ಬಂದರೆ ಹರಪ್ಪ ನಾಗರೀಕತೆಯ ಜನ ಮತ್ತು ವೈದಿಕ ಸಾಹಿತ್ಯಕ್ಕೆ ಮೂಲರಾದ ಆರ್ಯರು ಒಂದೇ ಸಂಸ್ಕೃತಿಯ ವಾರಸುದಾರರಾಗಲು ಹೇಗೆ ಸಾಧ್ಯ? ಅವರಿಬ್ಬರೂ ಒಬ್ಬರೇ ಆಗಿದ್ದರೆ ತಾವೇ ಮುಂಚೆ ರೂಢಿಸಿಕೊಂಡಿದ್ದ ಕೃಷಿಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವ ಬದಲು ಮತ್ತೆ ಹಿಂದಿನ ಪ್ರಾಥಮಿಕ ಹಂತದಿಂದ ಪ್ರಾರಂಭಿಸಬೇಕಾಗಿತ್ತೇಕೆ? ಎಂಬ ಪ್ರಶ್ನೆಗಳನ್ನೆತ್ತುತ್ತಾರೆ. ಉಚ್ಛ್ರಾಯ ಸ್ಥಿತಿಗೆ ಬಂದು ಅಜ್ಞಾತ ಕಾರಣಗಳಿಂದ ನಾಶಹೊಂದಿದ್ದ ಹರಪ್ಪ ಸಂಸ್ಕೃತಿಯ ನಂತರ ಅಸ್ತಿತ್ವಕ್ಕೆ ಬಂದ ವೈದಿಕ ಸಮಾಜ ಪಶುಸಂಗೋಪನೆ, ಕೃಷಿ ಮುಂತಾದವನ್ನು ಆಗತಾನೇ ಕ್ರಮಿಸುತ್ತಿತ್ತು. ಆ ಕಾರಣದಿಂದಾಗಿ ಒಂದರ್ಥದಲ್ಲಿ ಅದಿನ್ನೂ ಆದಿಮ ಸಮಾಜದ ಲಕ್ಷಣಗಳನ್ನು ಉಳಿಸಿಕೊಂಡಿದ್ದ ಸಮಾಜಾವಸ್ಥೆ. ಮಾಂತ್ರಿಕತೆಯ ವಿವಿಧ ಘಟ್ಟಗಳನ್ನು ನಾವಿಲ್ಲಿ ನೋಡಬಹುದು. ಇದರ ಪರಾಕಾಷ್ಠೆಯೆಂದರೆ ಪ್ರಜ್ಞಾಪೂರ್ವಕವಾಗಿ ಮಾಂತ್ರಿಕತೆಯನ್ನು ಎತ್ತಿ ಹಿಡಿದ ಯಜ್ಞದ ಪ್ರಕ್ರಿಯೆ. ಆರ್ಯರು ಮೊದಲ ಬಾರಿಗೆ ಭಾರತಕ್ಕೆ ನಾಗರೀಕತೆಯನ್ನು ತಂದುಕೊಟ್ಟರೆಂಬ ಐತಿಹ್ಯವನ್ನು ಅತ್ಯಂತ ಸಮರ್ಥವಾಗಿ ನಿರಾಕರಿಸುವ ಅನೇಕ ಉದಾಹರಣೆಗಳನ್ನು ಕೈಗೆತ್ತಿಕೊಂಡು, ಹರಪ್ಪ ಕಾಲದ ವಿಜ್ಞಾನ ತಂತ್ರಜ್ಞಾನದ ಪ್ರಗತಿ ಹಾಗೂ ಸಾಮಾಜಿಕ ವ್ಯವಸ್ಥೆ ಆರ್ಯರ ನಾಗರೀಕತೆಗಿಂತ ಸಾಕಷ್ಟು ಮುಂದುವರಿದದ್ದಾಗಿತ್ತೆಂಬುದನ್ನು ನಿರೂಪಿಸಲಾಗಿದೆ. ವ್ಯಾಪಕವಾಗಿ ಕೃಷಿಯನ್ನು ಅವಲಂಬಿಸಿದ್ದ ಹರಪ್ಪ ನಾಗರೀಕತೆ ಜನರು ಹೇಗೆ ಅನಿವಾರ್ಯವಾಗಿ ಋತುಮಾನಗಳ ಅಧ್ಯಯನ ಮಾಡುವ ಫಲವಾಗಿ ಖಗೋಳ ಶಾಸ್ತ್ರವನ್ನು ಅಭಿವೃದ್ಧಿ ಪಡಿಸಿದರು, ಅವರ ನಗರ ಯೋಜನೆ, ಸುಟ್ಟ ಇಟ್ಟಿಗೆಗಳ ವ್ಯಾಪಕ ಬಳಕೆ, ಅಳತೆಗಾಗಿ ಬಳಸಲ್ಪಟ್ಟ ಉಪಕರಣಗಳು, ಸಾಧನಗಳು, ಕೋಟೆಕೊತ್ತಲಗಳು, ಕಣಜಗಳು, ಸಾರ್ವಜನಿಕ ಸ್ನಾನದ ಕೊಳಗಳು, ರಸ್ತೆಗಳು, ಮನೆಗಳು, ಹಡಗು ರಿಪೇರಿ ಮಾಡುವ ಸೌಲಭ್ಯ ಮುಂತಾದ ಉತ್ಖನನದ ಅವಶೇಷಗಳ ಬಗ್ಗೆ ಚರ್ಚಿಸುತ್ತಾರೆ. ವಿಜ್ಞಾನದ ಒಂದು ಭಾಗವಾಗಿ ಗಣಿತಶಾಸ್ತ್ರ ಹೇಗೆ ಅಭಿವೃದ್ಧಿ ಹೊಂದಿದ್ದವೆಂಬುದನ್ನು ಚರ್ಚಿಸುತ್ತಾರೆ. ವಿಜ್ಞಾನದ ಒಂದು

ಭಾಗವಾಗಿ ಗಣಿತಶಾಸ್ತ್ರ ಭಾರತದಲ್ಲಿ ವಿಕಾಸವಾದುದಕ್ಕೂ ಇಟ್ಟಿಗೆಯನ್ನು ತಯಾರಿಸುವ ತಂತ್ರಜ್ಞಾನಕ್ಕೂ ನೇರ ಸಂಬಂಧವಿರುವುದನ್ನು ಪ್ರಸ್ತಾಪಿಸುತ್ತಾ ಶುಲ್ಬಸೂತ್ರಗಳ ಚರ್ಚೆಯನ್ನು ಕೈಗೆತ್ತಿಕೊಂಡು ಇಟ್ಟಿಗೆಗಳನ್ನು ಬಳಸಿ ನಿರ್ಮಿಸಬಹುದಾದ ಬೇರೆ ಬೇರೆ ರೀತಿಯ ನಿರ್ಮಾಣಗಳ ಹಿಂದಿನ ರೇಖಾಗಣಿತ ಜ್ಞಾನವನ್ನಾಧರಿಸಿ ಇವುಗಳು ವೈದಿಕ ಸಾಹಿತ್ಯಕ್ಕಿಂತಲೂ ಬಹಳ ಪ್ರಾಚೀನ ವಾದ ಹರಪ್ಪ ನಾಗರಿಕತೆಗಳ ಕೊಡುಗೆಗಳೆಂದು ನಿರೂಪಿಸುತ್ತಾರೆ. ಅವು ಕೇವಲ ಶುಲ್ಬಸೂತ್ರಗಳ ರಚನೆಯ ಕಾಲದ ಪ್ರಕ್ರಿಯೆಯಲ್ಲ. ಎಷ್ಟೋ ಕಾಲದಿಂದ ಪ್ರಚಲಿತವಿದ್ದ ಅಂಶಗಳನ್ನು ಒಂದು ಕಡೆ ಕ್ರೋಢೀಕರಿಸಿರುವ ಕೆಲಸವನ್ನು ಶುಲ್ಬಸೂತ್ರಗಳು ಮಾಡಿವೆ. ಅದರೆ ಅದರಲ್ಲಿ ಅಳವಡಿಸಿರುವ ಜ್ಞಾನ ಬರೆದಿಟ್ಟ ಕಾಲಕ್ಕಿಂತ ಸಾಕಷ್ಟು ಹಿಂದಿನದು. ಮೌರ್ಯರ ಕಾಲದಲ್ಲಿ ಮತ್ತು ಅದಕ್ಕೆ ಸ್ವಲ್ಪ ಮುನ್ನ ತಲೆಯೆತ್ತಿದ ಎರಡನೇ ನಗರೀಕರಣಕ್ಕಿಂತ ಹಿಂದೆಯೇ ಈ ಗ್ರಂಥಗಳು ರಚಿತವಾಗಿದ್ದವೆಂಬ ಆಧಾರಗಳನ್ನು ವಿಮರ್ಶಿಸಿ ಹರಪ್ಪಾ ಕಾಲದಿಂದ ಕ್ರಿ.ಪೂ. ಐದನೇ ಶತಮಾನದವರೆಗೆ ಈ ಜ್ಞಾನವನ್ನು ತಲೆಮಾರಿನಿಂದ ತಲೆಮಾರಿಗೆ ಹೇಗೆ ವರ್ಗಾಯಿಸುತ್ತಾ ಬರಲಾಯಿತು ಎಂಬುದನ್ನು ಮುಂದಿನ ಸಂಶೋಧನೆಗೆ ಗುರಿಪಡಿಸುವ ಅಗತ್ಯವನ್ನೂ ಪ್ರತಿಪಾದಿಸಲಾಗಿದೆ.

ವೈದಿಕ ಸಾಹಿತ್ಯವನ್ನು ವಿವರವಾಗಿ ಚರ್ಚಿಸಿ ಅದಕ್ಕೆ ಕೆಲವು ವಿದ್ವಾಂಸರು ಆರೋಪಿಸುವ ಸರ್ವಜ್ಞತ್ವ ಮತ್ತು ಸಾರ್ವಕಾಲಿಕತ್ವಗಳನ್ನು ನಿರಾಕರಿಸುತ್ತಲೆ, ಅದರಲ್ಲಿರುವುದೆಲ್ಲಾ ಕಾಗೆ ಗುಬ್ಬಚ್ಚಿಗಳ ಕತೆಗಳಂತಹ ಮೂಢನಂಬಿಕೆಗಳ ಮಹಾಮಾಲೆಯೆಂಬುದನ್ನು ತಿರಸ್ಕರಿಸಿ ಅದರಲ್ಲಿರುವ ಅರ್ಥಪೂರ್ಣವಾದ ವೈಜ್ಞಾನಿಕ ಅಂಶಗಳನ್ನು ಹೆಕ್ಕಿ ತೆಗೆಯುವ ಕೆಲಸವನ್ನು ಅತ್ಯಂತ ಸಮರ್ಥವಾಗಿ ಮಾಡಲಾಗಿದೆ. ಇದಕ್ಕೆ ಉದಾಹರಣೆಯಾಗಿ ಋಗ್ವೇದದಲ್ಲಿ ಸವಿಸ್ತಾರವಾಗಿ ಪ್ರಸ್ತಾಪಿತವಾಗಿರುವ ನೈಸರ್ಗಿಕ ನಿಯಮವಾದ "ಋತ"ದ ಪರಿಕಲ್ಪನೆಯನ್ನು ವಿವರವಾಗಿ ಚರ್ಚಿಸಲಾಗಿದೆ. ಅಂಗೀರಸರು ಅನುಸರಿಸುತ್ತಿದ್ದ ಈ "ಋತ"ವನ್ನು "ಪ್ರಕೃತಿಯ ವಿದ್ಯಮಾನಗಳನ್ನೆಲ್ಲಾ ತನ್ನಲ್ಲಿ ಅಡಕಗೊಳಿಸಿಕೊಂಡಿರುವುದು" ಎಂದು ನಿರೂಪಿಸಿಲಾಗಿದೆ ಮತ್ತು ಆ ವಿದ್ಯಮಾನಗಳನ್ನೆಲ್ಲಾ ತಿಳಿದವನು ವರುಣ, ಅದಕ್ಕಾಗಿ ಅವನನ್ನು "ಋತಸ್ಯಗೋಪಾ" ಎಂದು ಚಿತ್ರಿಸಲಾಗಿದೆ. "ಋತ"ವು ತನ್ನ ಆಂತರಿಕ ಶಕ್ತಿಯಿಂದಲೇ ಮಾನವ ಪ್ರಕೃತಿ-ವಿಶ್ವಗಳನ್ನು ನಿರ್ಬಂಧಿಸುತ್ತದೆ. ಅದಕ್ಕೆ ಹೊರಗಿನಿಂದ ಶಕ್ತಿಯನ್ನು ತುಂಬುವ ಅಗತ್ಯವಿಲ್ಲ, ಸಾಧ್ಯತೆಯೂ ಇಲ್ಲ. ಈ ನಿಯಮಕ್ಕೆ ಬೇರೊಬ್ಬ ನಿಯಾಮಕನಿಲ್ಲ. ನಿಯಾಮಕ ಶಕ್ತಿ ಮತ್ತು ಪ್ರವೃತ್ತಿಗಳು ಋತದ ಸ್ವಭಾವ. ವಿಜ್ಞಾನದ ಇತಿಹಾಸದಲ್ಲಿ ಇಂಥದೊಂದು ಕಲ್ಪನೆಯನ್ನು ಭಾರತದ ಅತ್ಯಂತ ಪ್ರಾಚೀನವಾದ ಋಗ್ವೇದ ಸಂಹಿತೆ ಬೆಳೆಸಿತೆಂಬುದು ಬಹಳ ಮಹತ್ವದ ಸಂಗತಿ. ವೈಜ್ಞಾನಿಕ ಪ್ರಕ್ರಿಯೆಗಳೆಲ್ಲಾ ಆಧುನಿಕ ಜಗತ್ತಿನ ಕೊಡುಗೆಯೆಂದು ಭ್ರಮಿಸುವವರಿಗೆ ಇದೊಂದು ಮಾರ್ಮಿಕ ಉತ್ತರ. ಋತಕ್ಕೆ ಸೃಷ್ಟಿಕರ್ತನೆಂದು ಯಾರೊಬ್ಬನೂ ಇರಲಿಲ್ಲ. ಋತದ ಕಲ್ಪನೆಯನ್ನು ಸಮೃದ್ಧವಾಗಿ ಬೆಳೆಸಿದ ಋಗ್ವೇದದ ಆರ್ಯರು ಬುಡಕಟ್ಟುಗಳಲ್ಲಿ ಜೀವಿಸುತ್ತಿದ್ದು, ಸಂಪತ್ತನ್ನು ಸಾಮೂಹಿಕವಾಗಿ ಅನುಭವಿಸುತ್ತಿದ್ದ ಘಟ್ಟವನ್ನು ಸ್ಮೃತಿಯಿಂದ ಇನ್ನೂ ಅಳಿಸಿ ಹಾಕಿರಲಿಲ್ಲ.

ಋಗ್ವೇದದಲ್ಲಿನ ಔಷಧಿ ಸೂಕ್ತಕ್ಕೆ ಚಾರಿತ್ರಿಕ ಮಹತ್ವವನ್ನು ನೀಡುತ್ತಾ ಮೊಂಡು ಪರಿಸರವಾದಿಗಳಿಗೆ ಚುರುಕು ಮುಟ್ಟಿಸುತ್ತಾರೆ. ಅಸೀಮಿತ ಅನುಭವ ಹಾಗೂ ಪ್ರಶ್ನಿಸುವ ಪದ್ಧತಿಯ ಕೂಸು "ಪ್ರಕೃತಿ ವಿಜ್ಞಾನ". ಪ್ರಕೃತಿಯ ಮೇಲೆ ಪುರೋಹಿತ ಮಂಡಳಿ ಹೇರುವ ಸ್ವಭಾವಗಳಿಂದ ಅದನ್ನು ಮುಕ್ತಗೊಳಿಸಿ ಪ್ರಕೃತಿಯ ಗತಿಯು ಸ್ವತಂತ್ರವಾಗಿ ಹೇಗಿದೆ ಎಂಬುದನ್ನು ನಿರೂಪಿಸಬೇಕಾದ್ದು ಪ್ರಕೃತಿ ವಿಜ್ಞಾನ. ಪ್ರಕೃತಿ ವಿಜ್ಞಾನವು ತಾರ್ಕಿಕ ಪದ್ಧತಿಯ ಅಧಾರದ ಮೇಲೆ ಬೆಳೆಯಲು ಮಾನವ ಮತ್ತು ಅವನ ಸುತ್ತಣ ಪ್ರಪಂಚದ ವಿಸ್ಮಯ ಭೇದಿಸುವ ಪ್ರವೃತ್ತಿ ಬೇರೂರಬೇಕು. ಪ್ರಾಚೀನ ಭಾರತದ ಸಂದರ್ಭದಲ್ಲಿ ಈ ಪ್ರವೃತ್ತಿ ಎಷ್ಟು ಆಳವಾಗಿ ಬೇರೂರಿತ್ತೆಂಬುದನ್ನು ಸಾಕಷ್ಟು ದೃಷ್ಟಾಂತಗಳ ಮೂಲಕ ವಿವರಿಸಿದ್ದಾರೆ. ಛಾಂದೋಗ್ಯ ಉಪನಿಷತ್ತಿನ ಭಾಗವೊಂದನ್ನು ಉಲ್ಲೇಖಿಸಿ ವಿಶ್ವದ ಇತಿಹಾಸದಲ್ಲಿ ಮೊಟ್ಟಮೊದಲ ಪ್ರಯೋಗವಿಜ್ಞಾನಿಯ ಸ್ಥಾನದಲ್ಲಿ "ಉದ್ದಾಲಕ ಅರುಣಿ" ಶೋಭಿಸುತ್ತಾನೆಂಬುದನ್ನು ನಿರೂಪಿಸುತ್ತಾರೆ. ದುಡಿಯುವ ಕೈಗಳು ಮತ್ತು ವಿಚಾರ ಮಾಡುವ ಮನಸ್ಸು ಜೊತೆ ಜೊತೆಯಾಗಿ ಮುನ್ನಡೆದಾಗ ತಂತ್ರಜ್ಞಾನ ಹಾಗೂ ವಿಜ್ಞಾನದ ಉಗಮವಾಗುವಂತೆ ಅವೆರಡೂ ಬೇರ್ಪಟ್ಟಾಗ ಅದಕ್ಕೆ ವಿರುದ್ಧವಾದ ಆಧಾರವಿಲ್ಲದ ಕರ್ಮ, ಅದೃಷ್ಟ ಮುಂತಾದ ಕಲ್ಪನೆಗಳು ವ್ಯಾಪಕವಾಗಿ ಬಳಕೆಗೆ ಬಂದಿರುವುದನ್ನು ನಿರೂಪಿಸಲಾಗಿದೆ. ಕೌಶಲ್ಯ ಮತ್ತು ಕುಶಲ ಕರ್ಮಗಳನ್ನು ಅನಾದರದಿಂದ ಕಾಣುವ ಹಿನ್ನೆಲೆಯಲ್ಲಿ ವೈಜ್ಞಾನಿಕ ಪ್ರಕ್ರಿಯೆಯು ಸಾರವತ್ತಾಗಿ ಮುನ್ನಡೆಯಲು ಆಗುವುದಿಲ್ಲವೆಂಬ ಪಿ.ಸಿ.ರೇ ಯವರ ವ್ಯಾಖ್ಯಾನವನ್ನು ಎತ್ತಿ ಹಿಡಿಯಲಾಗಿದೆ. ಯಾವುದನ್ನು ಪ್ರಕೃತಿ ನಿಯಮಗಳೆಂದು ವಿಜ್ಞಾನ ಕ್ಷೇತ್ರದಲ್ಲಿ ಪರಿಭಾವಿಸಲಾಗುತ್ತದೋ ಅದನ್ನು ದಾರ್ಶನಿಕರು ಸ್ವಭಾವವಾದವೆಂದು ಕರೆಯುತ್ತಾರೆ. ಪ್ರಕೃತಿ ವಿಜ್ಞಾನಕ್ಕೆ ಮೂಲಭೂತವಾದ ಈ ನಿಯಮಗಳ ಪ್ರಾಧಾನ್ಯತೆಯನ್ನು ಚರಕ ಮತ್ತು ಸುಶ್ರುತ ಸಂಹಿತೆಗಳು ಪದೇ ಪದೇ ಪ್ರತಿಪಾದನೆ ಮಾಡುತ್ತವೆ. ಉದ್ದಾಲಕ ಅರುಣಿಯ ಸಿದ್ಧಾಂತಗಳನ್ನು ಪ್ರಧಾನವಾಗಿ ವಿಶ್ಲೇಷಿಸುತ್ತಾ ಬಹುತೇಕ ವಿಜ್ಞಾನ ಇತಿಹಾಸಕಾರರಿಂದ ಕಡೆಗಣಿಸಲ್ಪಟ್ಟಿದ್ದ ವೈದಿಕ ದರ್ಶನವನ್ನು ಪ್ರಮುಖವಾಗಿ ಪರಿಗಣಿಸಿರುವುದು ಈ ಇತಿಹಾಸದ ವಿಶೇಷ. ತನ್ನ ತಿಳಿವಳಿಕೆಯನ್ನು ಪ್ರಯೋಗಗಳಿಂದ ಶ್ವೇತಕೇತುವಿಗೆ ವಿವರಿಸುವಾಗ ಉದ್ದಾಲಕ ಆರಿಸಿಕೊಂಡದ್ದು ತನ್ನ ಕಾಲದಲ್ಲಿ ತಾಂತ್ರಿಕ ಕೌಶಲ್ಯವನ್ನು ತೋರ್ಪಡಿಸಿದ್ದ ಕುಂಬಾರ, ಅಕ್ಕಸಾಲಿಗ ಮತ್ತು ಕಮ್ಮಾರರನ್ನು. ಇವರೆಲ್ಲಾ ಪ್ರಕೃತಿಯನ್ನು ಒಂದಲ್ಲಾ ಒಂದು ರೀತಿಯಲ್ಲಿ ಮಾರ್ಪಡಿಸುವ ಜನ. ಜೇಡಿಮಣ್ಣಿನಿಂದ ಮಡಿಕೆ ಮಾಡುವವನಿಗೆ ಸೈದ್ಧಾಂತಿಕವಾಗಿ ಪ್ರಕೃತಿ ನಿಯಮಗಳನ್ನು ವಿವರಿಸಲು ಸಾಧ್ಯವಿಲ್ಲದಿರಬಹುದು. ಆದರೆ ಆ ನಿಯಮಗಳಿಲ್ಲದಿದ್ದರೆ ಅವನ ಮಾರ್ಪಾಟು ಮಾಡುವ ವಿಧಾನ ಕಾರ್ಯಗತವಾಗಲಾರದು. ಅವನ ಕ್ರಿಯೆಯ ಹಿಂದೆ ಒಂದು ನಿಯಮವಿದೆ. ಆದರೆ ನಿಯಮಕ್ಕಿಂತಲೂ ಅವನಿಗೆ ಕ್ರಿಯೆ ಮುಖ್ಯ. ಉದ್ದಾಲಕನು ಆರಿಸಿಕೊಂಡ ಅವಲೋಕನಗಳು ಕೇವಲ ಮಾನಸಿಕ ತರ್ಕದ ಕ್ಷೇತ್ರಕ್ಕೆ ಸೇರುವಂತಹವಲ್ಲ. ಪ್ರಕೃತಿಯೊಡನೆ ಸೆಣಸಾಡುವ ದೈಹಿಕ ಕ್ರಿಯೆಗೆ ಅವು ಸಂಬಂಧಿಸಿವೆ. ಚಿಂತನಶೀಲ ಮನಸ್ಸಿನ ಸ್ಥಾನವನ್ನು ನಿರಾಕರಿಸದೆ ಕ್ರಿಯಾಶೀಲವಾದ ಕೈಗೆ ಹೆಚ್ಚಿನ ಪ್ರಾಧಾನ್ಯವನ್ನು ನೀಡುವ ಉದ್ದಾಲಕನ ಕ್ರಮ ಭಾರತೀಯ ವಿಜ್ಞಾನ ಇತಿಹಾಸದಲ್ಲಿ

ಅತ್ಯಂತ ಪ್ರಮುಖವಾಗಿ ಪ್ರಸ್ತಾಪವಾಗುವಂತೆ ಮಾಡುವುದು ಈ ಕೃತಿಯ ಹೆಗ್ಗಳಿಕೆ. "ಬೃಹತ್ ತ್ರಯೀ" ಎಂದೇ ಪ್ರಸಿದ್ಧವಾಗಿರುವ ಚರಕ ಸಂಹಿತೆ, ಸುಶ್ರುತ ಸಂಹಿತೆ ಮತ್ತು ಅಷ್ಟಾಂಗ ಸಂಗ್ರಹಗಳನ್ನು ಪ್ರಧಾನವಾಗಿ ಚರ್ಚಿಸಿ ವೈದ್ಯಕೀಯದ ಸಮರ್ಥನೆ ನೀಡುವಾಗ ನೇರವಾಗಿ ಕರ್ಮಫಲ, ಅದೃಷ್ಟ, ದೈವೀಶಕ್ತಿಯನ್ನು ಟೀಕಿಸಿ ನಿರಾಕರಿಸದೆ ವೈದ್ಯಕೀಯದ ಯಶಸ್ಸನ್ನು ಚರ್ಚಿಸುವಾಗ ಅವಾವುವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ರೋಗಿ, ವೈದ್ಯ, ಔಷಧಿ - ಆಹಾರಗಳು ಮತ್ತು ಶುಶ್ರೂಷಕ ಯೋಗ್ಯವಾಗಿದ್ದರೆ ವೈದ್ಯಕೀಯವು ಯಶಸ್ಸು ಹೊಂದುತ್ತದೆಂದು ಅವು ಪ್ರತಿಪಾದಿಸುತ್ತವೆ.

ತ್ರಿಮಲ್ಲಭಟ್ಟನ "ಬೃಹದ್ಯೋಗ ತರಂಗಿಣಿ" ವಲ್ಲಭಾಚಾರ್ಯನ" ವೈದ್ಯಚಿಂತಾಮಣಿ", ರಾಮಚಂದ್ರನ "ರಸೇಂದ್ರ ಚಿಂತಾಮಣಿ", ಮಾಧವಾಚಾರ್ಯನ "ಸರ್ವದರ್ಶನ ಸಂಗ್ರಹ" ಕೌಟಿಲ್ಯನ "ಅರ್ಥಶಾಸ್ತ್ರ", ಲಗಧನ "ವೇದಾಂಗ ಜೋತಿಷ್ಯ" ಜೈನ ಪರಂಪರೆಯ "ಸೂರ್ಯ ಪ್ರಜ್ಞಪ್ತಿ", ಬಕ್ಷಾಲಿಯ "ರೋಮಕ ಸಿದ್ಧಾಂತ", ವರಾಹಮಿಹಿರನ "ಸೂರ್ಯಸಿದ್ಧಾಂತ", ಆರ್ಯಭಟನ "ಬ್ರಹ್ಮಸ್ಪುಟ ಸಿದ್ಧಾಂತ", ಭಾಸ್ಕರಾಚಾರ್ಯನ "ಗಣಿತಸಾರ ಸಂಗ್ರಹ" ರಾಜಾದಿತ್ಯನ "ವ್ಯವಹಾರ ಗಣಿತಂ" ಮುಂತಾದ ಆಕರ ಗ್ರಂಥಗಳನ್ನು ವಿಮರ್ಶೆಗೆ ಗುರಿಪಡಿಸಿ ಅವುಗಳಲ್ಲಿರುವ ಅವೈಜ್ಞಾನಿಕ ಮೂಢನಂಬಿಕೆಗಳನ್ನು, ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಅವುಗಳ ಟೊಳ್ಳುತನವನ್ನು ಅನಾವರಣಗೊಳಿಸಿ, ಅವುಗಳಲ್ಲಿರುವ ಗಂಭೀರ ವಿಚಾರಗಳ ಬಗ್ಗೆ ಅತ್ಯಂತ ಗೌರವಯುತವಾಗಿ ವಿಮರ್ಶಿಸಿ, ಅವುಗಳಲ್ಲಿ ಹುದುಗಿರುವ ವೈಜ್ಞಾನಿಕ ಸತ್ಯಗಳ್ನು ಕೆದಕಿ ಕೆದಕಿ ನಿರೂಪಿಸುವ ಪ್ರಯತ್ನ ಅತಿ ವಿಶಿಷ್ಟವಾದದ್ದು. ಅಲ್‌ಬೆರೂನಿಯ ಬರಹಗಳನ್ನು ಅತ್ಯಂತ ವೈಜ್ಞಾನಿಕವಾಗಿ ಈ ಕೃತಿಯಲ್ಲಿ ನೋಡಲಾಗಿದೆ.

ಹಸ್ತ್ಯಾಯುರ್ವೇದ, ಅಶ್ವಾಯುರ್ವೇದ, ವೃಕ್ಷಾಯುರ್ವೇದ, ಸೂಪಶಾಸ್ತ್ರ, ಸಮರ ಶಾಸ್ತ್ರ, ಗಜಶಾಸ್ತ್ರ ಮುಂತಾದ ಪ್ರಾಚೀನ ಶಾಸ್ತ್ರಗಳಲ್ಲಿ ಅಡಗಿರುವ ಜೊಳ್ಳನ್ನು ನಿರ್ದಾಕ್ಷಿಣ್ಯವಾಗಿ ತೂರಿ ಗಟ್ಟಿಕಾಳುಗಳನ್ನು ಒಪ್ಪಮಾಡುವ ಕೆಲಸವನ್ನು ಡಾ. ರಾಮಕೃಷ್ಣರವರು ಈ ಗ್ರಂಥದಲ್ಲಿ ಅತ್ಯುತ್ತಮವಾಗಿ ಮಾಡಿದ್ದಾರೆ. ಇವುಗಳನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಜಹಂಗೀರನ ಪ್ರಸ್ತಾಪ ವಿಶೇಷವಾಗಿ ಗಮನ ಸೆಳೆಯುತ್ತದೆ. ಮಧ್ಯಕಾಲೀನ ಇತಿಹಾಸದ ವಿಶ್ಲೇಷಣೆಗೆ ಡಾ. ರಾಮಕೃಷ್ಣರವರು ಹೆಚ್ಚಿನ ಪ್ರಧಾನ್ಯತೆಯನ್ನು ನೀಡಿಲ್ಲದಿರುವುದು ಒಂದು ಮಿತಿ. ಆದರೂ ಜಹಂಗೀರನ ಪ್ರಾಯೋಗಿಕ ಪ್ರಾಣಿ ಮತ್ತು ಸಸ್ಯಶಾಸ್ತ್ರಗಳ ವಿಶ್ಲೇಷಣೆ ಅತ್ಯಂತ ಗಮನಾರ್ಹ ವೆಂಬುದನ್ನು ನಿರೂಪಿಸಿದ್ದಾರೆ. ಭಾರತೀಯ ವಿಜ್ಞಾನ ವಿಕಾಸದ ಹಾದಿಯಲ್ಲಿ ಮಧ್ಯಯುಗೀನ ಕಾಲಘಟ್ಟದ ಆಧಾರಗಳನ್ನು ಮತ್ತಷ್ಟು ವಿಸ್ತಾರವಾಗಿ ವಿಶ್ಲೇಷಿಸುವ ಅಗತ್ಯವಿದೆ.

ವೈಜ್ಞಾನಿಕ ಸಾಧನೆಗಳನ್ನು ಕಾಲಾನುಕ್ರಮದಲ್ಲಿ ವಿವರವಾಗಿ ನಿರೂಪಿಸುವ ಜನಪ್ರಿಯ ವಿಜ್ಞಾನ ಇತಿಹಾಸದ ಮಾದರಿಯನ್ನು, ಆಯಾ ಕಾಲಘಟ್ಟದಲ್ಲಿ ವೈಜ್ಞಾನಿಕ ವಿಧಾನ ಯಾವ ರೀತಿ ರೂಪುಗೊಳ್ಳುತ್ತಿತ್ತು, ಅದರ ವಿಕಾಸಕ್ಕೆ ಶ್ರಮಿಸುವವರು ಮತ್ತು ಅದನ್ನು ತಡೆಯಲು ಪ್ರಯತ್ನಿಸು

ವವರ ಪಾತ್ರಗಳನ್ನು ನಿರಂತರತೆಗೆ ಭಂಗಬರದ ರೀತಿಯಲ್ಲಿ ನಿರೂಪಿಸುವ ವಿಶಿಷ್ಟ ಪ್ರಯತ್ನ ಇದಾಗಿದೆ.

ಈ ಪ್ರಯತ್ನವನ್ನು ಮಾಡುತ್ತಲೆ ಈ ಕ್ಷೇತ್ರದಲ್ಲಿ ಇನ್ನೂ ನಡೆಯಬೇಕಾದ ಅಧ್ಯಯನಗಳ ಅಗತ್ಯವನ್ನು ಉತ್ತಮವಾಗಿ ಮನವರಿಕೆ ಮಾಡಿಕೊಡುತ್ತದೆ. ಭಾರತೀಯ ವೈಜ್ಞಾನಿಕ ಸಾಧನೆಗಳ ನಿಜವಾದ ಮೌಲ್ಯಮಾಪನ ಸರಿಯಾಗಿ ಆಗಿಲ್ಲದಿರುವುದರ ಕೊರತೆಯನ್ನು ಈ ಗ್ರಂಥ ನಿರೂಪಿಸಿದೆ. ಈ ಗ್ರಂಥದಲ್ಲಿ ಚರ್ಚಿತವಾಗಿರುವ ಅನೇಕ ನಿರೂಪಣೆಗಳು ಆಳವಾದ ಸಂಶೋಧನೆಯ ವಸ್ತುಗಳಾಗುವ ಅಗತ್ಯವಿದೆ. ಭಾರತೀಯ ವಿಜ್ಞಾನದ ವಿಕಾಸದ ಹಾದಿಯನ್ನು ಅತ್ಯಂತ ವಸ್ತುನಿಷ್ಠವಾಗಿ, ಸಮಕಾಲೀನ ಚರ್ಚೆಯ ವಿಕೃತಿಗಳಿಂದ ಮುಕ್ತವಾದ ನೆಲೆಯಲ್ಲಿ ಪೂರ್ವಾಗ್ರಹಗಳಿಗೆ ಒಳಗಾಗದೇ ನಿರೂಪಿಸಿರುವುದು ಈ ಕೃತಿಯ ಹೆಗ್ಗಳಿಕೆ. ಆದರೆ ಇದೇ ಸಂದರ್ಭದಲ್ಲಿ ಈ ಕ್ಷೇತ್ರದಲ್ಲಿ ಆಗಿರುವ ಸಂಶೋಧನೆಗಳ ಮಿತಿಗಳನ್ನು ಲೋಪಗಳನ್ನು ಪ್ರಸ್ತಾಪಿಸುತ್ತಲೇ ಇನ್ನೂ ಆಗಬೇಕಾದ ಆಗಾಧ ಅಧ್ಯಯನಗಳ ದಿಕ್ಕನ್ನು ಮತ್ತು ಪ್ರಾಮುಖ್ಯತೆಯನ್ನು ಈ ಕೃತಿ ಅತ್ಯಂತ ಬಲವಾಗಿ ಪ್ರತಿಪಾದಿಸುತ್ತದೆ. ಭಾರತೀಯ ವಿಜ್ಞಾನದ ಇತಿಹಾಸದ ಹಾದಿಯನ್ನು ಮತ್ತಷ್ಟು ಸ್ಪಷ್ಟವಾಗಿ ಗುರುತಿಸಲು ಈ ಕೃತಿ ಒಂದು ಉತ್ತಮ ದಿಕ್ಸೂಚಿಯಾಗಿ ಕೆಲಸ ಮಾಡುವುದೇ ಅಲ್ಲದೆ ಈ ದಾರಿಯ ಹೊಸ ಹುಡುಕಾಟಗಳಿಗೆ ಅನೇಕರನ್ನು ಪ್ರೇರೇಪಿಸುವ, ಪ್ರಚೋದಿಸುವ ಕೆಲಸವನ್ನು ಮಾಡುತ್ತದೆ.

❑

ದೇವಿಪ್ರಸಾದ್ ಮತ್ತು ಲೋಕಾಯತ ದರ್ಶನ

ಡಾ. ಕೆ.ಎಲ್. ಗೋಪಾಲಕೃಷ್ಣಯ್ಯ

ಭಾರತೀಯ ತತ್ವಶಾಸ್ತ್ರವೆಂದೊಡನೆ ಅದು 'ಬ್ರಹ್ಮಜಿಜ್ಞಾಸೆ' ಮಾತ್ರವೆಂಬ ಅಭಿಪ್ರಾಯವು ಸರ್ವೇಸಾಮಾನ್ಯವಾಗಿ ಪ್ರಚಲಿತವಿದೆಯಷ್ಟೆ. ಈ ಅಭಿಪ್ರಾಯದ ಪೊಳ್ಳುತನವನ್ನು ಅರ್ಥಮಾಡಿಕೊಳ್ಳುವ ಸಲುವಾಗಿ ಯಾದರೂ ಚಿಂತಕರು ಡಾ.ದೇವಿಪ್ರಸಾದ ಚಟ್ಟೋಪಾಧ್ಯಾಯರ, ಲೋಕಾಯತವನ್ನು ಕುರಿತ ವಿಸ್ತಾರ ಅಧ್ಯಯನವನ್ನು ಪರಿಚಯ ಮಾಡಿ ಕೊಳ್ಳುವುದು ಅಗತ್ಯ. ತಮಗೆ ಲಭ್ಯವಿದ್ದ ಪ್ರಾಚೀನ ಭಾರತೀಯರ ಗ್ರಂಥಗಳನ್ನು - ಬಹುತೇಕ ವ್ಯಾಖ್ಯಾನಗಳ ಮೂಲಕ ಅಭ್ಯಾಸ ಮಾಡಿದ ಪಾಶ್ಚಾತ್ಯ ವಿದ್ವಾಂಸರು ಭಾರತವನ್ನು ಅರಿಯುವುದೆಂದರೆ, ಇಲ್ಲಿನ 'ಆಧ್ಯಾತ್ಮಜ್ಞಾನ'ದ ಪರಿಚಯ ಮಾಡಿಕೊಳ್ಳುವುದು ಎಂಬ ತೀರ್ಮಾನಕ್ಕೆ ಬಂದರು. ಈ ಅನಿಸಿಕೆಯನ್ನು ವಸಾಹತುಶಾಹಿ ಪರ ವಕ್ತಾರರು ಭಾರತೀಯರನ್ನು ಹೊಗಳುವ ಹಾಗೂ ತೆಗಳುವ ಎರಡೂ ಉದ್ದೇಶಗಳಿಗೆ ತಕ್ಕ ಹಾಗೆ ಬಳಸಿಕೊಂಡರೆನ್ನೋಣ. "ಈ ದೇಶದ ದಾರ್ಶನಿಕರು ಸಾಮಾನ್ಯ ಜನರಿಗೂ ಬ್ರಹ್ಮಜ್ಞಾನವನ್ನು ಬೋಧಿಸಿ ದುರ್ಲಭವಾದ ಮುಕ್ತಿ ಮಾರ್ಗವನ್ನು ತೋರಿಸಿದರು" ಎಂದು ಹೊಗಳಿದರು. ಅದೇ ಸಮಯ ದಲ್ಲಿ "ಈ ದೇಶದ ಜನ ಸದಾ ಪರಲೋಕ ಚಿಂತನೆ, ಜೀವನ್ಮುಕ್ತಿ ಸಾಧನೆಯಲ್ಲಿ ತೊಡಗಿದ್ದು ಲೌಕಿಕ ಜ್ಞಾನವನ್ನು ಅಲಕ್ಷಿಸಿದರು; ಐಹಿಕ ಸಂಪತ್ತನ್ನು ವೃದ್ಧಿಸುವುದರಲ್ಲಿ ವಿಫಲರಾದರು" ಎಂದು ತೆಗಳಿದರು. ನಮ್ಮ ಪಂಡಿತೋತ್ತಮರಾದರೋ "ಅಯ್ಯಾ ಕಾಕರಾಜ ನಿನ್ನ ಧ್ವನಿ ಅದೆಷ್ಟು ಮಧುರ!" ಎಂದು ಹೊಗಳಿದ ನರಿಯ ಮಾತಿಗೆ ಮರುಳಾದ ವರಂತೆ ಇನ್ನಷ್ಟು ಮತ್ತಷ್ಟು ಉದ್ವೇಗದಿಂದ ವೇದಾಂತವನ್ನು ಹಾಡುವು

ದರಲ್ಲಿ ಸಂಭ್ರಮಿಸಿದರು. ಹೀಗೆ ಪ್ರಖ್ಯಾತ ವಿದ್ವಾಂಸರು ಅದ್ವೈತ ವೇದಾಂತವು ಸಾರ್ವಕಾಲಿಕ ಸತ್ಯವೆಂಬ ಭ್ರಮೆಯಲ್ಲಿ ಮುಳುಗಿದ್ದಾಗ ತತ್ವಚಿಂತನೆಯ ಆಗಸದಲ್ಲಿ ಧ್ರುವತಾರೆಯಂತೆ- ಕೆಲವರ ಪಾಲಿಗೆ ಧೂಮಕೇತುವಿನಂತೆಯೂ - ಕಾಣಿಸಿಕೊಂಡವರು ದೇವಿ ಪ್ರಸಾದ್. ಭಾರತದಲ್ಲಿ ಲೋಕಾಯತ ದರ್ಶನ ಅಥವಾ ಭೌತವಾದಿ ಚಿಂತನೆಯು ಎಷ್ಟು ಪ್ರಾಚೀನವಾದುದು, ಮೌಲಿಕವಾದುದು ಎಂಬುದನ್ನು ಅವರು ತೋರಿಸಿಕೊಟ್ಟರು. ಹರಪ್ಪ-ಮೆಹೆಂಜೊದಾರೊ ಸಂಸ್ಕೃತಿಯ ಕಾಲದಿಂದ ಈ ತತ್ವ ಪ್ರಣಾಲಿಯು ಕ್ರಮಾಗತವಾಗಿ ಬೆಳೆದು ಬಂದ ಬಗೆಯನ್ನು ವೈಜ್ಞಾನಿಕವಾಗಿ, ಆಧಾರಸಹಿತವಾಗಿ ವಿವರಿಸಿ ನಮ್ಮ ಇಡೀ ಇತಿಹಾಸದ ಬಗೆಗೆ ಹೊಸದೊಂದು ತಿಳಿವಳಿಕೆ ನೀಡಿದ್ದು ದೇವಿಪ್ರಸಾದರ ಸಾಧನೆ.

ವಿದ್ಯಾರ್ಥಿ ದೆಸೆಯಿಂದಲೂ ಕಮ್ಯುನಿಸ್ಟ್ ಚಳವಳಿಯ ಅತ್ಯಂತ ಸಕ್ರಿಯ ಕಾರ್ಯಕರ್ತರಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದ ದೇವಿಪ್ರಸಾದ್ ಕೆಲಕಾಲ ಮುಂಬಯಿಯ ಖಾಲ್ಸಾ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲಸಮಾಡಿದ್ದರು. ಅನಂತರ ಕಲ್ಕತ್ತೆಯ ಸಿಟಿ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದುಕೊಂಡು ಅಧ್ಯಯನ, ಸಂಶೋಧನೆ ಬರವಣಿಗೆ ಮತ್ತು ಪಕ್ಷದ ಶಿಸ್ತಿನ ಸಿಪಾಯಿಯಾಗಿ ಹಲವು ದಶಕಗಳ ಕಾಲ ಕೆಲಸ ಮಾಡಿದರು. ಒಪ್ಪತ್ತೂಟಕ್ಕೆ ಮಾತ್ರ ಸಾಕಾಗುವಷ್ಟು ಹಣದ ಕೊರತೆಯನ್ನು ಅನುಭವಿಸುತ್ತಲೇ ಲಂಡನ್ನಿನಲ್ಲಿ ಲೋಕಾಯತ ಗ್ರಂಥರಚನೆಗಾಗಿ ವಿದ್ವತ್ಪೂರ್ಣ ಅಧ್ಯಯನ ನಡೆಸಿ ಜಾರ್ಜ್ ಥಾಮ್ಸನ ಮೆಚ್ಚುಗೆ ಗಳಿಸಿದ್ದು ಇವರ ಹಿರಿಮೆ. ಆ ಮಹತ್ವಪೂರ್ಣ ಕೃತಿಯು ಮಾರ್ಕ್ಸ್‌ವಾದಿ ಅಧ್ಯಯನಗಳ ಸಾಲಿನಲ್ಲಿ ಒಂದು ಅಪೂರ್ವ ಮೈಲಿಗಲ್ಲು. ಆನಂತರ ಬಂದ ಕೃತಿಗಳಲ್ಲಿ ಭಾರತೀಯ ನಿರೀಶ್ವರವಾದ (Indian Atheism) ; ಭಾರತೀಯ ತತ್ವಶಾಸ್ತ್ರದಲ್ಲಿ ಜೀವಂತವಾಗಿರುವುದೇನು ಮೃತವಾಗಿರುವುದೇನು (What is living and what is dead in Indian philosophy); ಪ್ರಾಚೀನ ಭಾರತದಲ್ಲಿ ವಿಜ್ಞಾನ ಮತ್ತು ಸಮಾಜ (Science and Society in Ancient India); ತತ್ವಶಾಸ್ತ್ರಜ್ಞನಾಗಿ ಲೆನಿನ್ (Linin on Philosophy) ; ಪ್ರಾಚೀನ ಭಾರತದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಇತಿಹಾಸ (History of Science and Technology in Ancient India); ಮತಧರ್ಮ ಮತ್ತು ಸಮಾಜ (Religion and Society) - ಇವು ಮುಖ್ಯವಾದವು.

ಕನ್ನಡ ನಾಡಿನಲ್ಲಿ ದೇವಿಪ್ರಸಾದರ ಬಗೆಗೆ ಆಸಕ್ತಿ ತಾಳಿದ ಮೊದಲಿಗರಲ್ಲಿ ಒಬ್ಬರು ಡಾ. ಹಾ.ಮಾ.ನಾಯಕರು. ಡಾ. ನಾಯಕರ ಪ್ರಯತ್ನದಿಂದಾಗಿ ದೇವಿಪ್ರಸಾದರು ಆಗಾಗ ಬೆಂಗಳೂರು, ಮೈಸೂರಿಗೆ ಬರುವಂತಾಯಿತು. ಬೆಂಗಳೂರಿನಲ್ಲಿ ನನ್ನಂತಹ ಕೆಲವರಿಗೆ ದೇವಿಪ್ರಸಾದರ ಸಂಪರ್ಕ ಕಲ್ಪಿಸಿದವರು ಡಾ.ಜಿ. ರಾಮಕೃಷ್ಣ. ಡಾ. ಜಿ.ಆರ್. ಅವರ ಹಾಗೆ, ದೇವಿಪ್ರಸಾದ್‌ರ ಶಿಷ್ಯತ್ವ ಸಂಪಾದಿಸಿ ಅವರ ನಿಕಟವರ್ತಿಯಾಗದಿದ್ದರೂ ಆ ಮಹಾನ್ ವಿದ್ವಾಂಸರನ್ನು ಒಂದೆರಡು ಬಾರಿ ಭೇಟಿಯಾಗಿ ಲೋಕಾಯತದ ಬಗ್ಗೆ ಅವರೊಡನೆ ಮಾತಾಡುವ ಅವಕಾಶ ನನಗೆ ದೊರೆತಿತ್ತು. ನನ್ನ ಪಾಲಿಗೆ ಅದೇ ಒಂದು ಹೆಮ್ಮೆಯ ಸಂಗತಿ. ಪ್ರಸ್ತುತ ಲೇಖನದಲ್ಲಿ ತೊಡಗಲು ನನ್ನ ಸ್ವಸಾಮರ್ಥ್ಯಕ್ಕಿಂತ ಹೆಚ್ಚಾಗಿ ದೇವಿಪ್ರಸಾದರು ಮತ್ತು ಡಾ. ಜಿ.ಆರ್. ಇಬ್ಬರ ಬಗೆಗೂ ನನಗಿರುವ ಗೌರವವೇ ಪ್ರೇರಣೆಯೆಂದು ಹೇಳಿದರೆ ಅದೇನೂ ಅತಿ ವಿನಯದ ಮಾತಾಗಲಿಕ್ಕಿಲ್ಲ.

ಪಶ್ಚಿಮ ಬಂಗಾಳದಲ್ಲಿ ವೈಜ್ಞಾನಿಕ ಮನೋಭಾವವನ್ನು ಜನರಲ್ಲಿ ಬೆಳೆಸುವ ಚಳವಳಿಗೆ ತನ್ನನ್ನು ತಾನು ತೊಡಗಿಸಿಕೊಂಡಿರುವ 'ಗಣದರ್ಪಣ'ವೆಂಬ ಸಂಸ್ಥೆಯೊಂದಿದೆ. ಈ ಸಂಸ್ಥೆಯು ಪ್ರತಿವರ್ಷವೂ 'ಜೆ.ಬಿ.ಎಸ್. ಹಾಲ್ಡೇನ್ ಸ್ಮಾರಕ ಉಪನ್ಯಾಸ' ಕಾರ್ಯಕ್ರಮವನ್ನು ಏರ್ಪಡಿಸುತ್ತ ಬಂದಿದೆ; 1993ರ ವಾರ್ಷಿಕ ಉಪನ್ಯಾಸ ನೀಡಿದವರು ಡಾ. ಜಿ. ರಾಮಕೃಷ್ಣ. ಅಂದಿನ ಉಪನ್ಯಾಸದ ವಿಷಯ 'ದೇವಿಪ್ರಸಾದ್ ಮತ್ತು ಲೋಕಾಯತ ದರ್ಶನ' ಎಂಬುದು. ಅದೇ ವರ್ಷ ಮೇ 8ರಂದು ದೇವಿಪ್ರಸಾದರು ತೀರಿಕೊಂಡು, ವರ್ಷ ತುಂಬುವುದರೊಳಗೆ ಡಾ. ಜಿ.ಆರ್. ಅವರು ಬರೆದ ಕಿರುಹೊತ್ತಿಗೆಯ ಶೀರ್ಷಿಕೆಯೂ 'ದೇವಿಪ್ರಸಾದ್ ಮತ್ತು ಲೋಕಾಯತ ದರ್ಶನ' (ದೇ.ಮ.ಲೋ) ಎಂದೇ ಇದೆ. ಈ ಲೇಖನದ ಉದ್ದಕ್ಕೂ ಹಲವು ವಿವರಗಳನ್ನು ಜಿ.ಆರ್. ಅವರ ಪುಸ್ತಕದಿಂದ ಎತ್ತಿಕೊಳ್ಳಲಾಗಿದೆಯೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೆ.

ಲೋಕಾಯತ ಅಥವಾ ಚಾರ್ವಾಕ ಎಂಬ ತತ್ತ್ವ ಪ್ರಣಾಳಿಕೆಯ ಬಗ್ಗೆ ಅತಿ ಲಘುವಾದ ಟೀಕೆಗಳ ಸುರಿಮಳೆಯ ಮಧ್ಯೆ ಚೇತೋಹಾರಿಯಾದ ಸಮಗ್ರ ಅಧ್ಯಯನಗಳ ಸಹಾಯದಿಂದ ಟೀಕಾಕಾರರಿಗೆ ಸರಿಯಾದ ಉತ್ತರ ನೀಡಿದ ಅದಮ್ಯ ದಾರ್ಶನಿಕರು ದೇವಿಪ್ರಸಾದರು. ಭಾರತೀಯ ಪರಂಪರೆಯಲ್ಲಿ ವಿಜ್ಞಾನ, ತಾಂತ್ರಿಕ ಕೌಶಲ್ಯ, ತಾತ್ತ್ವಿಕ ಚಿಂತನೆ, ವೈದ್ಯಕೀಯ ಇತ್ಯಾದಿಗಳು ಹೇಗೆ ವಿಕಾಸವಾದವು ಮತ್ತು ಅದಕ್ಕೆ ಅಡಚಣೆ ಎಲ್ಲಿಂದ ಬಂತು ಎಂಬುದನ್ನು ಯಾರೂ ಪ್ರಶ್ನಿಸಲಾಗದಂತಹ ಶುದ್ಧ ಸಂಶೋಧನೆಯಿಂದ ತೆರೆದಿಟ್ಟ ನಿಗರ್ವಿ ಸಂಗಾತಿ ದೇವಿಪ್ರಸಾದರು. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರ್ಕ್ಸ್‌ವಾದದ ಚಿಂತನೆಗೆ ಬೃಹತ್ತಾದ ಕಾಣಿಕೆ ನೀಡಿರುವ ಶ್ರೇಷ್ಠ ದಾರ್ಶನಿಕರು ಸಂಗಾತಿ ದೇವಿಪ್ರಸಾದ್. ಇವರನ್ನು "ವೈಯಕ್ತಿಕವಾಗಿ ಸರಳ ಸರಸ ಮೃದುಭಾಷಿ" - ಎನ್ನುತ್ತಾರೆ. ಡಾ. ಜಿ.ಆರ್. (ದೇ.ಮ.ಲೋ-ಪು -8)

ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದ ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾಗ ದೇವಿಪ್ರಸಾದರಿಗೆ ಡಾ. ಎಸ್.ಎನ್. ದಾಸಗುಪ್ತ ಮತ್ತು ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ಇಬ್ಬರೂ ಗುರುಗಳು.

ಲೋಕಾಯತ ಗ್ರಂಥದ ಮುನ್ನುಡಿಯಲ್ಲಿ ಲೇಖಕರು ಈ ಇಬ್ಬರು ವಿಖ್ಯಾತ ವಿದ್ವಾಂಸರನ್ನೂ ಕೃತಜ್ಞತೆಯಿಂದ ಸ್ಮರಿಸಿದ್ದಾರೆ; ಹಾಗೆಂದ ಮಾತ್ರಕ್ಕೆ ಆ ಹಿರಿಯ ವಿದ್ವಾಂಸರ ಅಭಿಪ್ರಾಯಗಳನ್ನೆಲ್ಲ ದೇವಿಪ್ರಸಾದ್ ಪ್ರಶ್ನಿಸದೆ ಒಪ್ಪಿಕೊಳ್ಳುತ್ತಾರೆಂದಲ್ಲ. ಗುರುಗಳ ಪಾದಧೂಳಿಯಿಂದ ತನ್ನ ಕಣ್ಣು ಮಂಜಾಗಲು ಶಿಷ್ಯನು ಅವಕಾಶ ಕೊಡುವುದಿಲ್ಲ. ವೇದಾಂತವಾದಿ ತತ್ತ್ವಜ್ಞಾನಿಗಳ - ಅದರಲ್ಲೂ ಡಾ. ಎಸ್. ರಾಧಾಕೃಷ್ಣನ್ ಅವರ ನಿಲುವನ್ನು ದೇವಿಪ್ರಸಾದ್ ವಿರೋಧಿಸಿರುವುದೇ ಹೆಚ್ಚು; ಹಾಗೆ ಮಾಡುವಾಗ ಪೂರ್ವ ಸೂರಿಗಳ ನಿಲುವನ್ನು ಸ್ವಯಂ ಖಂಡಿಸುವ ಅವಿನಯವನ್ನು ಅವರು ತೋರುವುದಿಲ್ಲ. ಅದಕ್ಕೆ ಬದಲಾಗಿ ಆ ವಿದ್ವಾಂಸರ (ಹೆಚ್ಚಾಗಿ ಡಾ.ಎಸ್. ರಾಧಾಕೃಷ್ಣನ್ ಅವರ) ಗ್ರಂಥಗಳಿಂದ ಉದ್ಧರಣಗಳನ್ನು ವಿಪುಲವಾಗಿ ಎತ್ತಿಕೊಟ್ಟು, ಅವುಗಳಲ್ಲಿ ಇಂಗಿತವಾಗಿರುವ ಪರಸ್ಪರ ವೈರುಧ್ಯವು ಓದುಗರ ಗಮನಕ್ಕೆ ಬರುವಂತೆ ಮಾಡುತ್ತಾರೆ. ಇದು ದೇವಿಪ್ರಸಾದರ ಬರವಣಿಗೆಯ ರೀತಿ. ಹಲವು ಭಾಷೆಗಳ ಪ್ರಾಚೀನ, ಅರ್ವಾಚೀನ ಗ್ರಂಥಗಳಿಂದ ಆರಿಸಿಕೊಡುವ

ಉದ್ಧರಣಗಳು ದೇವಿಪ್ರಸಾದರ ವಿಸ್ತಾರವಾದ ಅಧ್ಯಯನ, ವಿದ್ವತ್ತು ಮತ್ತು ಸ್ಮರಣಶಕ್ತಿಗಳಿಗೆ ಸಾಕ್ಷಿಯಾಗಿವೆ.

ಲೋಕಾಯತ ಎಂಬ ಹೆಸರೇ ಸೂಚಿಸುವಂತೆ ಇದು ಇಹಲೋಕದ ನಿಯಮಗಳನ್ನು ವಿಶ್ಲೇಷಿಸುವಂತಹ ಒಂದು ತತ್ವ ಪ್ರಣಾಲಿ. ಜನಸಾಮ್ಯಾನರ ಕಾಣ್ಕೆ, ನಂಬಿಕೆ, ಆಚರಣೆ ಇತ್ಯಾದಿಗಳನ್ನು ಒಳಗೊಳ್ಳುವಂತಹದು ಎಂದು ಕೂಡ ವಿವರಿಸಬಹುದು. ಪ್ರಾಚೀನ ಗ್ರಂಥಗಳಲ್ಲಿ ಇದನ್ನು 'ಚಾರ್ವಾಕ ದರ್ಶನ'ವೆಂದೂ ಇದರ ಪ್ರತಿಪಾದಕರನ್ನು 'ಚಾರ್ವಾಕ'ರೆಂದೂ ಕರೆದಿರುವುದುಂಟು. ಲೋಕಾಯತ ಅನುಯಾಯಿಗಳು ಕರ್ಮ, ಮೋಕ್ಷ, ವಿಧಿ, ಯಜ್ಞಯಾಗಾದಿಗಳು, ಶ್ರಾದ್ಧ, ಪಿಂಡಪ್ರದಾನ ಇತ್ಯಾದಿ ಸಾಂಪ್ರದಾಯಕ ನಂಬಿಕೆಗಳನ್ನು ಒಪ್ಪುವುದಿಲ್ಲ. ಈ ವಿಶ್ವವು ಕೆಲವೊಂದು ಭೌತಶಕ್ತಿಗಳ ವಿಶಿಷ್ಟ ಪ್ರಕ್ರಿಯೆಯಿಂದಾಗಿ ಅಸ್ತಿತ್ವಕ್ಕೆ ಬಂದಿದೆ; ಭೌತ ನಿಯಮಗಳಿಗೆ ಅನುಸಾರವಾಗಿ ವರ್ತಿಸುತ್ತದೆ. ಆದ್ದರಿಂದ ಮನುಷ್ಯನು ಭೌತನಿಯಮಗಳ ಅರಿವನ್ನು ಪಡೆದು, ಸುತ್ತಣ ವಿಶ್ವದೊಡನೆ ಪ್ರತಿಕ್ರಿಯಿಸಿ, ತನ್ನ ಮತ್ತು ತನ್ನ ಸಹಜೀವಿಗಳ ಹಿತಕ್ಕಾಗಿ ಮಧ್ಯೆ ಪ್ರವೇಶ ಮಾಡಬಲ್ಲನೆಂಬುದು ಲೋಕಾಯತ ಚಿಂತನೆಯ ಸಾರ. ವಿಶ್ವದ ಸೃಷ್ಟಿಗೆ ಅಸ್ತಿತ್ವಕ್ಕೆ ಮತ್ತು ಚಾಲನೆಗೆ ಒಬ್ಬ ಕರ್ತ, ಒಂದು ಸಂಕಲ್ಪ ಮೊದಲಾದವುಗಳನ್ನು ಒಪ್ಪದೆ ಭೌತ ನಿಯಮಗಳಿಗೆ ಅನುಸಾರವಾಗಿ ಎಲ್ಲವೂ ನಡೆಯುತ್ತದೆ ಎಂದು ಪ್ರತಿಪಾದಿಸುವುದರಿಂದ ಇಲ್ಲಿ 'ವೈಜ್ಞಾನಿಕ ಮನೋಭಾವ'ವನ್ನು ಸ್ಪಷ್ಟವಾಗಿ ಗುರುತಿಸಬಹುದು. ಅಂದರೆ ಲೋಕಾಯತ ಅಥವಾ ಚಾರ್ವಾಕ ಸಿದ್ಧಾಂತವು ಪ್ರಾಚೀನ ಭೌತವಿಜ್ಞಾನವೇ ಸರಿ.

ಹಾಗೆ ನೋಡಿದರೆ, ಮಾನವ ಕುಲದ ಆದಿಮ ಹಂತಗಳಲ್ಲಿ ಪ್ರಪಂಚದ ಯಾವುದೇ ಭಾಗದ ಜನರು ವಿಶ್ವದ ವಾಸ್ತವತೆಯನ್ನು ನಿರಾಕರಿಸುವ ಪ್ರಶ್ನೆಯೇ ಇಲ್ಲ; ಅಂದರೆ, ಇಂದ್ರಿಯ ಗೋಚರವಾದ ಅನುಭವಗಳನ್ನು ಅಲ್ಲಗಳೆದು ಅಮೂರ್ತವಾಗಿ ಚಿಂತಿಸುವ ಸಾಧ್ಯತೆಯಿಲ್ಲ. ದೇವಿಪ್ರಸಾದರ ಲೋಕಾಯತದಲ್ಲಿ ಅತ್ಯಂತ ಪ್ರಾಚೀನ ಕಾಲದ ಭಾರತದಲ್ಲಿ ಭೌತವಾದಿ ನಂಬಿಕೆಗಳು ಹೇಗೆ ಪ್ರಕಟಗೊಂಡವು ಮತ್ತು ಹೇಗೆ ವಿಕಾಸಗೊಂಡವು ಎಂಬುದನ್ನು ವಿಶದವಾಗಿ ಚರ್ಚಿಸಲಾಗಿದೆ. ಅಂಥ ನಂಬಿಕೆಗಳಿಗೆ ಆತುಕೊಂಡಂತೆ ಯಾವ ಆಚರಣೆಗಳು, ಪೂಜಾಪದ್ಧತಿಗಳು ಬೆಳೆದು ಬಂದವೆಂಬುದನ್ನೂ ವಿವರಿಸಲಾಗಿದೆ. ಭೌತವಾದವು ಒಂದು ಸಿದ್ಧಾಂತವೆಂಬ ಅರ್ಥದಲ್ಲಿ, ಆಧುನಿಕ ಭೌತ ವಿಜ್ಞಾನದಂತೆ ಅಷ್ಟು ಪ್ರಬುದ್ಧವಾಗಿ ಬೆಳೆದಿರಲಾರದೆಂಬುದು ನಿಜ. ಆದರೂ ಆದಿಮ ಭೌತವಾದವು ಆಧುನಿಕ ಭೌತವಿಜ್ಞಾನಕ್ಕೆ ಅಂಕುರಪ್ರಾಯವಾಗಿತ್ತೆಂದು ತಿಳಿಯಲಡ್ಡಿಯಿಲ್ಲ. ದೇವಿಪ್ರಸಾದ್ ಹೇಳುವಂತೆ ಆದ್ಯ-ಭೌತವಾದದ ಹಿನ್ನೆಲೆಯಲ್ಲಿ ಆದಿಮ ಸಮಾಜಗಳನ್ನು ವಿಶ್ಲೇಷಿಸುವುದರಿಂದ ಆಧುನಿಕ ಸಮಾಜಗಳ ಸ್ವರೂಪದ ಅಧ್ಯಯನಕ್ಕೆ ತುಂಬ ಸಹಾಯವಾಗುತ್ತದೆ. ಈ ದೃಷ್ಟಿಯಿಂದಲೂ ಲೋಕಾಯತದ ಅಧ್ಯಯನಕ್ಕೆ ವಿಶೇಷ ಮಹತ್ವವಿದೆ.

ಲೋಕಾಯತದ ಆಕರಗಳು

ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಆಡಳಿತ ಸೂತ್ರ ವಹಿಸಲಿರುವ ರಾಜನು ಪಾರಂಗತನಾಗಬೇಕಾದ ತತ್ವಶಾಸ್ತ್ರ ಪ್ರಣಾಲಿಕೆಗಳ ಸಾಲಿನಲ್ಲಿ ಲೋಕಾಯತವನ್ನೂ ಹೆಸರಿಸಿದ್ದಾನೆ.

ಮಹಾಭಾರತದ ದ್ರುಪದನು ಲೋಕಾಯತದಲ್ಲಿ ನಿಷ್ಣಾತರಾದ ಬ್ರಾಹ್ಮಣರನ್ನು ಅರಮನೆಗೆ ಕರೆಸಿಕೊಂಡು ಆ ತತ್ತ್ವಶಾಸ್ತ್ರದ ಸಾರವನ್ನು ಅವರಿಂದ ಕೇಳುತ್ತಿದ್ದನೆಂದು ಹೇಳಲಾಗಿದೆ. ಅಂತಹ ಸಂದರ್ಭಗಳಲ್ಲಿ ದ್ರುಪದನ ಮಗಳು ದ್ರೌಪದಿ ಕೂಡ ಅಪ್ಪನ ತೊಡೆಯ ಮೇಲೆ ಕುಳಿತಿರುತ್ತಿದ್ದಳಂತೆ. (ಇದರ ಪರಿಣಾಮವಾಗಿಯೆ ಆಮೇಲೆ ಅವಳು ಐದು ಮಂದಿಯನ್ನು ಮದುವೆಯಾದಳೆಂದು ಯಾರೂ ಕುಹಕವಾಡಿಲ್ಲ - ಎಂದು ತಮಾಷೆ ಮಾಡುತ್ತಾರೆ. ಜಿ.ಆರ್. ದೇ.ಮ.ಲೋ.ಪು. 23) ಬುದ್ಧನನ್ನು ಕಾಣಲು ಬಂದ ಪ್ರಬುದ್ಧ ಬ್ರಾಹ್ಮಣರ ಪೈಕಿ ಲೋಕಾಯತದಲ್ಲಿ ನಿಷ್ಣಾತನಾದವನೂ ಒಬ್ಬನಿದ್ದನೆಂದು ಬೌದ್ಧಮೂಲಗಳಿಂದ ತಿಳಿದುಬರುತ್ತದೆ. ಕುರುಕ್ಷೇತ್ರ ಯುದ್ಧದಲ್ಲಿ ಜಯಶೀಲನಾದ ಯುಧಿಷ್ಠಿರನು ತಮ್ಮಂದಿರೊಡಗೂಡಿ ಹಸ್ತಿನಾಪುರವನ್ನು ಪ್ರವೇಶ ಮಾಡಿದ ಸಂದರ್ಭದ ಒಂದು ಪ್ರಸಂಗ:

ಯುಧಿಷ್ಠಿರನನ್ನು ಎದುರುಗೊಂಡು ನಗರಕ್ಕೆ ಸ್ವಾಗತಿಸಲು ಸೇರಿದ್ದ ಜನಸ್ತೋಮದಲ್ಲಿ ಒಬ್ಬಾತ ದಿಟ್ಟ ಸ್ವರದಲ್ಲಿ ರಾಜನನ್ನು ಛೇಡಿಸುತ್ತಾನೆ "ನಿನ್ನ ಸಂಬಂಧಿಕರನ್ನು ಮತ್ತು ಸಹೋದರರನ್ನು ಕೊಂದು ನೀನು ಈ ರಾಜ್ಯವನ್ನು ಪಡೆದಿದ್ದೀಯೆ, ಅದಕ್ಕೆ ಧಿಕ್ಕಾರವಿರಲಿ! ಹೀಗೆ ರಾಜ್ಯ ಪಡೆಯುವುದಕ್ಕಿಂತ ನಾಚಿ ಸಾಯುವುದೇ ಉತ್ತಮವಾಗಿರುತ್ತಿತ್ತು!" -ಎಂದು. ಅವನು ಒಬ್ಬ ಚಾರ್ವಾಕನಂತೆ! ಅವನ ಮಾತನ್ನು ಕೇಳಿ ಯುಧಿಷ್ಠಿರ ಅವಾಕ್ಕಾದ ಅಷ್ಟರಲ್ಲಿ ವೇದಾಂತವನ್ನು ಬಲ್ಲ ಬ್ರಾಹ್ಮಣರು ಮಧ್ಯೆ ಪ್ರವೇಶಿಸಿ ಚಾರ್ವಾಕನ ಮಾತುಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿಲ್ಲವೆಂದೂ ಅವನೊಬ್ಬ ಮಾನವರೂಪಿ ರಾಕ್ಷಸನೆಂದೂ ವಿವರಿಸಿದರು. ಬಂಧು ಬಾಂಧವರ ಹತ್ಯೆಯಿಂದ ಉಂಟಾದ ಪಾಪವನ್ನು ಅಶ್ವಮೇಧವೇ ಮೊದಲಾದ ಯಜ್ಞ ಯಾಗಾದಿಗಳಿಂದ ಪರಿಹರಿಸಿಕೊಳ್ಳಬಹುದೆಂದೂ ಪುರೋಹಿತ ಬ್ರಾಹ್ಮಣರಿಗೆ ಭೂರಿದಾನ ದಕ್ಷಿಣೆಗಳನ್ನು ಕೊಡುವ ಮೂಲಕ ಸ್ವರ್ಗಾಪವರ್ಗಗಳನ್ನು ಪಡೆಯಬಹುದೆಂದೂ ಉಪದೇಶ ಮಾಡಿ ಯುಧಿಷ್ಠಿರನನ್ನು ಸಾಂತ್ವನಗೊಳಿಸಿದರು. ಮಾತ್ರವಲ್ಲದೆ, ಆ ಚಾರ್ವಾಕನನ್ನು ಹಿಡಿದು ಸುಟ್ಟು ಬೂದಿ ಮಾಡಿದರಂತೆ!

ಲೋಕಾಯತ ದರ್ಶನವನ್ನು ಪ್ರತಿಪಾದಿಸುವ ಆಕರ ಗ್ರಂಥಗಳಾವುವೂ ನಮಗೆ ಲಭ್ಯವಿಲ್ಲ. ಈಗ ದೊರೆಯುವುದೇನಿದ್ದರೂ ಲೋಕಾಯತರ ನಿಲುವನ್ನು ಖಂಡಿಸುವುದಕ್ಕಾಗಿ ಅವರ ವಿರೋಧಿಗಳು ಉದಾಹರಿಸುವ ಕೆಲ ಕೆಲವು ವಾಕ್ಯಗಳು ಮಾತ್ರ. ಇವುಗಳಲ್ಲಿ ಯಾವುದು ನೈಜ ಉದ್ಧರಣ. ಯಾವುದು ವಾದ ಪ್ರವೀಣರು ತಮ್ಮ ಅನುಕೂಲಕ್ಕೆ ತಕ್ಕಂತೆ ತಿದ್ದಿಕೊಂಡ ಪೂರ್ವ ಪಕ್ಷದ ಮಾತಿನ ತುಣುಕು ಎಂದು ನಿರ್ಧರಿಸುವುದು ಕೂಡ ಕಷ್ಟ. ಇಷ್ಟಾದ ಮೇಲೆ ಆಧ್ಯಾತ್ಮವಾದಿಗಳು ಲೋಕಾಯತರನ್ನು ವಿರೋಧಿಸಿದರೂ ಅವರನ್ನು ಸಂಪೂರ್ಣವಾಗಿ ಅಲಕ್ಷಿಸಲಿಲ್ಲವೆಂಬುದು ಇದ್ದುದರಲ್ಲಿ ಸಮಾಧಾನ ತರುವ ಸಂಗತಿ.

ಶಾಂತರಕ್ಷಿತನ 'ತತ್ವಸಂಗ್ರಹ' ಎಂಬ ಮಹತ್ವದ ತತ್ವಶಾಸ್ತ್ರ ಗ್ರಂಥಕ್ಕೆ ವ್ಯಾಖ್ಯಾನ ಬರೆದ ಕಮಲಶೀಲನು ಪುರಂದರನೆಂಬುವವನು ಲೋಕಾಯತ ದರ್ಶನದ ಕೃತಿಯೊಂದನ್ನು ಬರೆದಿರುವುದಾಗಿ ಹೇಳಿದ್ದಾನೆ. ಕಮಲಶೀಲನು ಪುರಂದರನ ನಿಲುವನ್ನು ತಿರಸ್ಕರಿಸುತ್ತಾನೆಂಬುದ ನಿಜ.

ಆದರೆ ಲೋಕಾಯತ ದರ್ಶನವನ್ನು ಲೇವಡಿ ಮಾಡುವ ಉದ್ದೇಶವಂತು ಅವನಿಗಿರಲಿಲ್ಲವೆಂದು ಹೇಳಬಹುದು. ಹಾಗೆ ನೋಡಿದರೆ ಲೋಕಾಯತರ ನಿಲುವನ್ನು ಖಂಡತುಂಡವಾಗಿ ವಿರೋಧಿಸಿದ್ದು ಮಾತ್ರವಲ್ಲದೆ ಲೋಕಾಯತರನ್ನು ಅಪಹಾಸ್ಯಕ್ಕೆ ಗುರಿಮಾಡಿ ಲೇವಡಿ ಎಬ್ಬಿಸಿದವರಲ್ಲಿ ಮಾಧವಾಚಾರ್ಯ (ಸರ್ವದರ್ಶನ ಸಂಗ್ರಹ) ಮತ್ತು ಶಂಕರಾಚಾರ್ಯ (ಬ್ರಹ್ಮಸೂತ್ರದ ಮೇಲಿನ ಭಾಷ್ಯ. ಇದನ್ನೇ ವೇದಾಂತ ಭಾಷ್ಯ ಎಂದು ಕರೆಯುವುದೂ ಉಂಟು) ಇವರೇ ಪ್ರಮುಖರು. ಈ ಆಚಾರ್ಯ ಪುರುಷರು ಲೋಕಾಯತ ದರ್ಶನವನ್ನು ಲೇವಡಿ ಮಾಡುವುದರಲ್ಲಿ ತಾತ್ವಿಕ ಭಿನ್ನಾಭಿಪ್ರಾಯಕ್ಕಿಂತ ಹೆಚ್ಚಾಗಿ ಪಟ್ಟಭದ್ರಹಿತ (Vested interest) ರಕ್ಷಣೆಯ ಯೋಜಿತ ಪ್ರಯತ್ನವನ್ನೇ ಕಾಣುತ್ತೇವೆಂದರೆ ತಪ್ಪಾಗಲಿಕ್ಕಿಲ್ಲ. ಅಂದರೆ ಈ ಆಚಾರ್ಯ ಪುರುಷರು ಸಮಾಜದ ಯಾವ ವರ್ಗ-ವರ್ಣಗಳ ಪರವಾಗಿದ್ದರೋ ಅವುಗಳ ಹಿತರಕ್ಷಣೆಗೆ ಅಗತ್ಯವಾದ ನಿಲುವನ್ನು ತತ್ವಶಾಸ್ತ್ರದಲ್ಲಿ ನಿರೂಪಿಸಿದರು ಎಂದು ಅರ್ಥಮಾಡಿಕೊಳ್ಳಬಹುದು.

ಲೋಕಾಯತರ ಲೇವಡಿ ಮತ್ತು ವಿರೋಧ

ಲೋಕಾಯತವನ್ನು ಟೀಕೆ ಮಾಡುವವರು ಆ ತತ್ವ ಪ್ರಣಾಲಿಯನ್ನು ಚಾರ್ವಾಕವಾದವೆಂದೂ ಅದರ ಪ್ರತಿಪಾದಕರನ್ನು ಚಾರ್ವಾಕರೆಂದೂ ಸಂಬೋಧಿಸುವುದೇ ಹೆಚ್ಚು. ಚಾರ್ವಾಕರು ಸುಖೈಕ ಪಕ್ಷಪಾತಿಗಳು; ಅವರು ಪ್ರತ್ಯಕ್ಷ ಪ್ರಮಾಣವನ್ನು ಮಾತ್ರ ಒಪ್ಪುತ್ತಾರೆ; ವೇದ ಪ್ರಾಮಾಣ್ಯ ವನ್ನಾಗಲಿ ಸ್ಮೃತಿ (ಧರ್ಮಶಾಸ್ತ್ರ) ಗಳ ಆದೇಶಗಳನ್ನಾಗಲಿ ಒಪ್ಪುವುದಿಲ್ಲ; ಅವರು ದೇಹ ಭಿನ್ನವಾದ ಆತ್ಮದ ಅಸ್ತಿತ್ವವನ್ನು ಅಂಗೀಕರಿಸುವುದಿಲ- ಇವು ಆಧ್ಯಾತ್ಮವಾದಿಗಳು (ಭಾವನಾವಾದಿ ಗಳು- Spiritualists) ಲೋಕಾಯತರ (Materialists) ಮೇಲೆ ಹೊರಿಸುವ ಕೆಲವು ಪ್ರಮುಖ ಆರೋಪಗಳು.

ಲೋಕಾಯತ ಸಿದ್ಧಾಂತವನ್ನು ತಾರ್ಕಿಕವಾಗಿ ವಿರೋಧಿಸಲಾಗದ ಆಧ್ಯಾತ್ಮವಾದಿಗಳು ಅವರನ್ನು ಲೇವಡಿ ಮಾಡುವುದು ಸುಲಭವೆಂದು ಭಾವಿಸಿದರು. 'ಚಾರ್ವಾಕ' ಪದದ ನಿಷ್ಪತ್ತಿ ಹೇಳುವಾಗ ಇವರು ಸಿಹಿಯಾಗಿ ಮಾತಾಡುವವರು (ಚಾರು+ವಾಕ್) ಎಂದು ಹಂಗಿಸುವುದು; ಇವರು ಯಾವಾಗಲೂ ತಿನ್ನುವುದರಲ್ಲಿ, ಕುಡಿಯುವುದರಲ್ಲಿ ಆಸಕ್ತರಾದವರು (ಚರ್ವ್-ತಿನ್ನು, ಸೇವಿಸು) ಎಂದು ಛೇಡಿಸುವುದು ಇತ್ಯಾದಿ. "ಸರ್ವದರ್ಶನ" ಸಂಗ್ರಹದಲ್ಲಿ –

> **ಯಾವಜ್ಜೀವೇತ್ ಸುಖಂ ಜೀವೇತ್ ಋಣಂಕೃತ್ವಾ ಘೃತಂ ಪಿವೇತ್**
> **ಭಸ್ಮೀ ಭೂತಸ್ಯ ದೇಹಸ್ಯ ಪುನರಾಗಮನಂಕುತಃ**

(ಸುಟ್ಟು, ಬೂದಿಯಾದ ಮೇಲೆ ದೇಹ ಮತ್ತೆಲ್ಲಿ ಹಿಂತಿರುಗಿ ಬಂದೀತು? ಆದ್ದರಿಂದ ಜೀವಂತವಾಗಿರುವಾಗ ಸುಖವಾಗಿ ಬದುಕು; ಸಾಲ ಮಾಡಿಯಾದರೂ ಸರಿ, ತುಪ್ಪ ತಿನ್ನುತ್ತಿರು) ಎಂಬ ವಾಕ್ಯವನ್ನು ಉದಾಹರಿಸಿ, ಇದೇ ಚಾರ್ವಾಕ ಸಿದ್ಧಾಂತದ ಸಾರಾಂಶ ಎಂಬಂತೆ ಮೂದಲಿಸಲಾಗಿದೆ. ಈ ವಾಕ್ಯದ ಆಕರ ಯಾವುದೂ ಗೊತ್ತಿಲ್ಲ. ಆದರೂ ಚಾರ್ವಾಕರು ಸಾಲ ಮಾಡಿಯಾದರೂ ನೀನು ತುಪ್ಪ ಊಟಮಾಡು ಎಂದು ಹೇಳುವಷ್ಟು ಬೇಜವಾಬ್ದಾರಿಯವರೆಂದು ನಂಬಲಾಗುವುದಿಲ್ಲ. ಇಷ್ಟಾದ ಮೇಲೆ, ಎಲ್ಲರೂ ಸಾಲಮಾಡಲು ತೊಡಗಿದರೆ ಸಾಲ ಕೊಡುವವ

ರಾದರೂ ಯಾರು? ವಾಸ್ತವವಾಗಿ, ಸಾವಿನ ಅನಂತರ ಸ್ವರ್ಗಪ್ರಾಪ್ತಿಯನ್ನಾಗಲಿ, ಪುನರ್ಜನ್ಮವನ್ನಾಗಲಿ ಒಪ್ಪದ ಚಾರ್ವಾಕ ಸಿದ್ಧಾಂತವು ಇರುವಷ್ಟು ಕಾಲ ಚೆನ್ನಾಗಿ ಬದುಕು ಎಂದು ಬೋಧಿಸಿದರೆ ಅದರಲ್ಲಿ ಕುಚೋದ್ಯ ಮಾಡುವಂತಹದೇನಿದೆ?

ಲೋಕಾಯತರಿಗೆ ಪ್ರತ್ಯಕ್ಷ ಪ್ರಮಾಣವು (ಇಂದ್ರಿಯಾನುಭವಗಳಿಂದ ಉಂಟಾದ) ಅತ್ಯಂತ ಪ್ರಕರ್ಷಕವಾದ ಜ್ಞಾನ ಸಾಧನವೆಂಬುದು ನಿಜ; ಹಾಗೆಂದು ಅವರಿಗೆ ಅನುಮಾನ ಪ್ರಮಾಣವು ನಿಷಿದ್ಧವಲ್ಲ. ಈಗಾಗಲೆ ತಿಳಿದಿರುವ ಒಂದಂಶದಿಂದ ಇನ್ನೊಂದು ತಿಳಿವಳಿಕೆಯನ್ನು ಪಡೆಯುವ ವಿಧಾನವನ್ನು "ಅನುಮಾನ" (Conollary) ಎನ್ನಲಾಗುತ್ತದೆ. (ಅನುಮಾನ ಎಂಬುದನ್ನು ಸಂಶಯ ಎಂಬರ್ಥದಲ್ಲಿ ಬಳಸುವುದಕ್ಕೆ ಇಲ್ಲಿ ಅನ್ವಯವಿಲ್ಲ). ಅನುಮಾನ ಪ್ರಮಾಣದ ಹಿಂದೆ ಪ್ರತ್ಯಕ್ಷಾನುಭವದ ಸಮರ್ಥನೆಯೊಂದಿದ್ದರೆ ಅದನ್ನು ಒಪ್ಪಬಹುದು. 'ಹೊಗೆಯಿದ್ದಲ್ಲಿ ಬೆಂಕಿಯಿರಬೇಕು' ಎಂಬ 'ಅನುಮಾನ' ಒಪ್ಪಬಹುದು. ಇನ್ನು ಯಜ್ಞಯಾಗಾದಿಗಳನ್ನು ನಂಬುವ ಸಂಪ್ರದಾಯ ವಾದಿಗಳನ್ನು ಛೇಡಿಸಲು ಲೋಕಾಯತರು ಒಂದು 'ಜನಪ್ರಿಯ ಗಾಥೆ'ಯನ್ನು ಬಳಸುವುದುಂಟು.

'ಜ್ಯೋತಿಷ್ಟೋಮ ಯಾಗದಲ್ಲಿ ಕೊಲ್ಲಲ್ಪಡುವ ಬಲಿಪಶುವು ಸ್ವರ್ಗಕ್ಕೆ ಹೋಗುವುದೆಂದು ಹೇಳುತ್ತೀರಷ್ಟೆ. ಹಾಗಿದ್ದಲ್ಲಿ ನಿಮ್ಮಪ್ಪನನ್ನೇ ಬಲಿಪಶುವನ್ನಾಗಿಸಿ ಅವನನ್ನೇಕೆ ನೇರವಾಗಿ ಸ್ವರ್ಗಕ್ಕೆ ರವಾನಿಸಬಾರದು?' - (ಎಂದವರು ಕೇಳಿದರೆ ತಪ್ಪೆ?)

ಲೋಕಾಯತವು ವೇದ ಪ್ರಾಮಾಣ್ಯವನ್ನು ಸ್ವೀಕರಿಸುವುದಿಲ್ಲವೆಂಬ ಆರೋಪವನ್ನು ನೋಡೋಣ; ವೇದ ಪ್ರಾಮಾಣ್ಯವನ್ನು ಒಪ್ಪುವುದು ಅಥವಾ ಬಿಡುವುದು ಒಂದು ಸಂಪ್ರದಾಯದ, ಸಾಮಾಜಿಕ ಚೌಕಟ್ಟಿನ ನಿಯಮಗಳನ್ನು ಪಾಲಿಸುವುದು, ಯಜ್ಞಯಾಗಾದಿಗಳ ಬಗೆಗಿನ ನಂಬಿಕೆ - ಅಪನಂಬಿಕೆಗಳನ್ನು ಸೂಚಿಸಬಹುದೇ ಹೊರತು ಒಂದು ದಾರ್ಶನಿಕ ತಿಳಿವಳಿಕೆಯ ಅಳತೆಗೋಲಾಗಲಾರದು. ಆರಂಭಕಾಲದ ಬೌದ್ಧಧರ್ಮ, ಜೈನಧರ್ಮ, ಕರ್ನಾಟಕ ದಲ್ಲಿ ಬಸವಣ್ಣನವರು ಸ್ಥಾಪಿಸಿದ ಲಿಂಗಾಯಿತಧರ್ಮ ಇವುಗಳು ಕೂಡ ವೇದ ಪ್ರಾಮಾಣ್ಯವನ್ನು ಒಪ್ಪುವುದಿಲ್ಲ. ಆದರೆ ವಿಶ್ವಸೃಷ್ಟಿ ಮತ್ತು ಮಾನವನ ಅಸ್ತಿತ್ವ ಮೊದಲಾದವುಗಳ ಬಗೆಗೆ ಆ ಮತಧರ್ಮಗಳ ಚಿಂತನೆಯನ್ನು ದಾರ್ಶನಿಕ ದೃಷ್ಟಿಯಿಂದ ಅಲ್ಲಗಳೆಯಲು ಸಾಧ್ಯವಿಲ್ಲ. ಮತ್ತೊಂದು ವಿಚಾರವೆಂದರೆ ಶ್ರುತಿ ವಾಕ್ಯಗಳಿಗೆ (ವೇದಗಳಿಗೆ) ಮನ್ನಣೆ ನೀಡುವ ಆಧ್ಯಾತ್ಮ ಸಂಪ್ರದಾಯವಾದಿಗಳು ಸ್ಮೃತಿ (ಧರ್ಮಶಾಸ್ತ್ರ)ಗೂ ಅಷ್ಟೇ ಮಹತ್ವ ನೀಡುತ್ತಾರೆ. ಉದಾ. ಶಂಕರಾಚಾರ್ಯರಂತಹ ವೇದಾಂತಿಗಳು ಕೂಡ ಮನುಧರ್ಮಶಾಸ್ತ್ರದಲ್ಲಿ ಹೇಳಿರುವ ವರ್ಣವ್ಯವಸ್ಥೆ, ಶೂದ್ರತನ ಮೊದಲಾದವುಗಳಿಗೆ ಮನ್ನಣೆ ನೀಡುವುದು ತತ್ತ್ವಶಾಸ್ತ್ರದ ಮೂಲ ಆಶಯಕ್ಕೇ ಭಂಗ ತರುತ್ತದೆ.

ದೇಹ ಮತ್ತು ಆತ್ಮ

ದೇಹ ಮತ್ತು ಆತ್ಮಗಳ ಪೃಥಕ್ಕರಣದ ವಿಚಾರದಲ್ಲಿ ಲೋಕಾಯತರಿಗೂ ವೇದಾಂತಿಗಳಿಗೂ ಇರುವ ಮೂಲಭೂತ ಭಿನ್ನಾಭಿಪ್ರಾಯವನ್ನು ಕೊಂಚ ವಿಶದವಾಗಿಯೆ ತಿಳಿಯುವುದಗತ್ಯ. ವಿಶ್ವದ

ಬೇರೆ ಬೇರೆ ತತ್ವಶಾಸ್ತ್ರಗಳಲ್ಲಿರುವಂತೆ ಭಾರತೀಯ ದರ್ಶನ ಪ್ರಪಂಚದಲ್ಲೂ ಭೌತವಸ್ತು ಮತ್ತು ಪ್ರಜ್ಞೆ (Mind and Matter) ನಡುವಿನ ಪಾರಸ್ಪರಿಕ ಸಂಬಂಧವನ್ನು ಕುರಿತ ಜಿಜ್ಞಾಸೆಯ ಆಧಾರದ ಮೇಲೆ ದರ್ಶನಗಳ ವಿಂಗಡಣೆಯು ಸಾಧ್ಯ ಹಾಗೂ ಸೂಕ್ತವೆಂಬುದನ್ನು ದೇವಿಪ್ರಸಾದ್ ನಮಗೆ ತೋರಿಸಿಕೊಟ್ಟಿದ್ದಾರೆ. 'ಇದನ್ನು ಮಾಡಿದವರಲ್ಲಿ ಅವರೇ ಆದ್ಯರು' ಈ ಮೊದಲೇ ಹೇಳಿದಂತೆ ಲೋಕಾಯತವು ಎರಡು ಮೂಲಭೂತ ತತ್ವಗಳನ್ನು ಪ್ರತಿಪಾದಿಸುತ್ತದೆ. ಅವುಗಳಲ್ಲಿ ಮೊದಲನೆಯದು ಭೂತದ್ರವ್ಯವೇ ಆಗಿದೆ. (ಇಂಗ್ಲಿಷ್‌ನಲ್ಲಿ ಇದನ್ನು 'ರಿಯಾಲಿಟಿ' ಎನ್ನಬಹುದು - ಜಿ.ಆರ್., ದೇ.ಮ.ಲೋ - ಪುಟ 62) ಎರಡನೆಯ ಮೂಲ ತತ್ವವು ಈ 'ಸತ್' ಎಂಬುದರ ಜ್ಞಾನ ಪಡೆಯಲು ಇರುವ ಸಾಧನಕ್ಕೆ ಸಂಬಂಧಿಸಿದುದು ಪ್ರಜ್ಞೆ. ಲೋಕಾಯತದ ಪ್ರಕಾರ ಭೂತ ದ್ರವ್ಯಗಳಿಂದಾದ ಶರೀರ ಮತ್ತು ಪ್ರಜ್ಞೆ ಒಟ್ಟಾಗಿಯೇ ಇರುವಂತಹವು. (ದೇಹ ಮತ್ತು ಮನಸ್ಸು ಅಥವಾ ಆತ್ಮಗಳು ಕೂಡಿಯೇ ಒಂದು ಜೀವಂತ ಘಟಕ). ಇದನ್ನು 'ಭೂತ ಚೈತನ್ಯವಾದ' ಅಥವಾ 'ದೇಹಾತ್ಮವಾದ' ಎಂದು ಹೆಸರಿಸುವುದೂ ಉಂಟು. ಚೈತನ್ಯ ಅಥವಾ ಪ್ರಜ್ಞೆ ಎಂಬುದು ಭೂತದ್ರವ್ಯಗಳ ಒಂದು ವಿಶಿಷ್ಟ ಪ್ರಕಾರದ ಸಂಯೋಜನೆಯ ಸಂದರ್ಭದಲ್ಲಿ ತೋರಿಬರುವ ಗುಣವೇ ಹೊರತು ಭೂತವಸ್ತುಗಳಿಂದ ತೀರ ಭಿನ್ನವಾದ ಸ್ವತಂತ್ರ ವಸ್ತುವಲ್ಲವೆಂಬುದು 'ಭೂತಚೈತನ್ಯವಾದ'ವೆಂಬುದರ ಸಂಕ್ಷಿಪ್ತವಾದ ಅರ್ಥ, ಲೋಕಾಯತರು 'ಆತ್ಮ' ಶಬ್ದವನ್ನು ಬಳಸಿದರೆ ಅದು 'ಪ್ರಜ್ಞಾಗುಣಪೂರಿತವಾದ ದೇಹ' ಎಂಬುದಷ್ಟನ್ನೇ ಸಂಕೇತಿಸುತ್ತದೆ. ದೇಹದ ಅಭಾವದಲ್ಲಿ ಕೂಡ ಅಸ್ತಿತ್ವದಲ್ಲಿದ್ದು ಕರ್ಮಫಲ, ಮೋಕ್ಷ ಇಲ್ಲವೆ ಪುನರ್ಜನ್ಮಗಳನ್ನೂ ಅನುಭವಿಸುವ ಪ್ರತ್ಯೇಕವಾದ 'ಆತ್ಮ'ದ ಕಲ್ಪನೆಯು ಲೋಕಾಯತಕ್ಕೆ ಅಂಗೀಕಾರಾರ್ಹವಲ್ಲ. ಮಾನವ ದೇಹವೂ ಸೇರಿದಂತೆ ಸಮಸ್ತ ವಿಶ್ವವೂ ಭೂತದ್ರವ್ಯಗಳ ವಿಶಿಷ್ಟ ಸಂಯೋಜನೆಯಿಂದ ಅಸ್ತಿತ್ವಕ್ಕೆ ಬಂದಿದೆಯಾಗಿ ಆತ್ಮವೆಂಬ ಪ್ರತ್ಯೇಕ ವಸ್ತುವೊಂದಿಲ್ಲ. ಇದು ಲೋಕಾಯತರ ಖಚಿತ ನಿಲುವು.

ಪ್ರಜ್ಞೆಯು ಕೂಡ ಭೌತವಸ್ತುವಿನ ಗುಣವೆಂದು ಹೇಳಿದರೆ ಪ್ರಜ್ಞಾರಹಿತ ಭೌತದ್ರವ್ಯ (ಜಡವಸ್ತು)ದಿಂದ ಪ್ರಜ್ಞಾಸಹಿತ ಜೀವೋತ್ಪತ್ತಿಯಾಗುವುದು ಹೇಗೆಂಬ ಪ್ರಶ್ನೆ ಏಳುವುದು ಸಹಜ. ಬ್ರಹ್ಮಸೂತ್ರದ ಮೇಲಿನ ಭಾಷ್ಯದಲ್ಲಿ (2-1-6-ದೃಶ್ಯತೇ ತಂ.....) ಆಚಾರ್ಯ ಶಂಕರರು ಕೂಡ ಇದನ್ನು ಗಮನಿಸಿ ತಮ್ಮದೇ ಆದ ವಿವರಣೆಯನ್ನು ನೀಡಿದ್ದಾರೆ. ಚೇತನ ವಸ್ತುವೊಂದರಿಂದ ಅಚೇತನ ವಸ್ತುವಿನ ಉತ್ಪತ್ತಿ (ಮಾನವ ಶರೀರದಲ್ಲಿ ಉಗುರು, ಕೂದಲು ಇತ್ಯಾದಿಗಳ ಉತ್ಪತ್ತಿ) ಮತ್ತು ಅಚೇತನ ವಸ್ತುವಿನಿಂದ ಚೇತನ ವಸ್ತುಗಳ ಉತ್ಪತ್ತಿ (ಸೆಗಣಿಯಿಂದ ಕೀಟಗಳ ಉತ್ಪತ್ತಿ) ಸಹಜವೆಂಬ ನಿದರ್ಶನವನ್ನು ನೀಡುತ್ತಾರೆ, ಇಷ್ಟು ಮಾತ್ರವಲ್ಲದೆ ಪ್ರಜ್ಞೆಯ ವಿಚಾರದಲ್ಲಿ ಕೂಡ ಶಂಕರರು ಲೋಕಾಯತರ ತರ್ಕವನ್ನೂ ಅಲ್ಲಗಳೆಯುವುದಿಲ್ಲ. ಉದಾಹರಣೆಗೆ, ಮಾದಕ ಪಾನೀಯವನ್ನು ತಯಾರಿಸಲು ಉಪಯೋಗಿಸುವ ಭೌತ ಪದಾರ್ಥಗಳಾವುದರಲ್ಲೂ ಮಾದಕ ಗುಣವಿಲ್ಲ; ಆದರೆ ಅವುಗಳ ಪ್ರಮಾಣಬದ್ಧ ಸಂಯೋಗದಿಂದ ವಿಶಿಷ್ಟ ಪರಿಣಾಮವುಂಟಾಗಿ ಪಾನೀಯದಲ್ಲಿ ಮಾದಕವೂ ಆವಿರ್ಭಾವವಾಗುತ್ತದೆ. ಇದಕ್ಕೆ ಸಮನಾದದ್ದು ಪ್ರಜ್ಞಾಗುಣ ರಹಿತವಾದ ಭೌತದ್ರವ್ಯಗಳ ಸಂಯೋಜನೆಯಿಂದ ವಿಶಿಷ್ಟ ಪರಿಣಾಮವುಂಟಾಗಿ ಮಾನವ

ದೇಹದಲ್ಲಿ ಪ್ರಜ್ಞಾಗುಣ ಆವಿರ್ಭಾವವಾಗುವುದು. ಶಂಕರರು ಈ ತರ್ಕವನ್ನು 'ಏಕ ಆತ್ಮನಃ ಶರೀರೇ ಭವಾತ್.....' (ಬ್ರಹ್ಮಸೂತ್ರ 3-3-53, ಉದ್ಧರಣ, ಜಿ.ಆರ್., ದೇ.ಮ.ಲೋ.ಪು - 70) ಎಂಬುದರ ಮೇಲಿನ ತಮ್ಮ ಭಾಷ್ಯದಲ್ಲಿ ಸೂಚಿಸಿದ್ದಾರೆ. ಆದರೆ ಮಾನವಪ್ರಜ್ಞೆಯು ಶರೀರದ ಗುಣವಾಗಲಾರದು ಎಂಬುದಕ್ಕೆ ಶಂಕರರು ಕೊಡುವ ನಿದರ್ಶನವು ಮಾತ್ರ ಹಾಸ್ಯಾಸ್ಪದವಾಗಿದೆ. ಪ್ರಜ್ಞೆಯು ಶರೀರದ ಗುಣವಾಗಲಾರದು, ಏಕೆಂದರೆ ಸತ್ತವನ ಶರೀರದಲ್ಲಿ ಪ್ರಜ್ಞೆ ಇರುವುದಿಲ್ಲ ಎನ್ನುತ್ತಾರವರು. ಇಲ್ಲಿ ಜೀವವಿರುವ ಶರೀರಕ್ಕೂ ಮೃತಶರೀರಕ್ಕೂ ವ್ಯತ್ಯಾಸವನ್ನೇ ಕಾಣದಿರುವುದು ವಿಚಿತ್ರ. ಇದು ಅಜ್ಞಾನ ಇಲ್ಲವೆ ಮೊಂಡುವಾದವಲ್ಲದೆ ಬೇರಲ್ಲ. ಭೌತದ್ರವ್ಯಗಳ ವಿಶಿಷ್ಟ ಸಂಘಟನೆ (Composition)ಯಿಂದ ಜೀವದ ಅಸ್ತಿತ್ವ; ಮೂಲ ಭೌತದ್ರವ್ಯಗಳ ವಿಘಟನೆ (Decomposition)ಯಿಂದ ಜೀವನಾಶ ಎಂದು ಸಂಕ್ಷೇಪದಲ್ಲಿ ಹೇಳಿದರೆ ಎಲ್ಲವನ್ನೂ ಹೇಳಿದಂತಾಯಿತು; ಪುನಃ ಮರುಕಳಿಸದಂತೆ ಪ್ರಜ್ಞೆಯು ಲಯವಾಗುವುದೇ ಖಚಿತವಾದ ಸಾವು (Brain death) ಎನ್ನುತ್ತದೆ ಆಧುನಿಕ ವೈದ್ಯಶಾಸ್ತ್ರ.

ದೇಹಾತ್ಮವಾದವೆಂಬ ಲೋಕಾಯತರ ಸಿದ್ಧಾಂತವು ಅತ್ಯಂತ ಪ್ರಾಕೃತ ಜನರು ಮಾತ್ರ ನಂಬುವಂತಹದು ಎಂದು ವಾದಿಸುವ ಶಂಕರರು ಆತ್ಮವೆಂಬ ಒಂದು ಸ್ವತಂತ್ರ ವಸ್ತುವನ್ನೇ ಆವಿಷ್ಕರಿಸಿದ್ದಾರೆ. ದೇಹಾತ್ಮವಾದದಿಂದ ತಿಳಿಯುವಂತೆ ಶರೀರದಿಂದ ಪ್ರತ್ಯೇಕವಾದ 'ಆತ್ಮ'ವೊಂದು ಇಲ್ಲದಿದ್ದರೆ ಕರ್ಮಫಲ, ಬಂಧನ, ಮೋಕ್ಷ ಅಥವಾ ಪುನರ್ಜನ್ಮಗಳನ್ನು ಯಾರಿಗೆ (ಯಾವುದಕ್ಕೆ) ಆರೋಪಿಸುವುದು? ಇದೇ ಶಂಕರಾಚಾರ್ಯರಂತಹ ಆಧ್ಯಾತ್ಮವಾದಿಗಳ ಆತಂಕ. ಹೀಗಾಗಿ, ದೇಹಭಿನ್ನವಾದ ಆತ್ಮವೊಂದನ್ನು (ಅಥವಾ ಬ್ರಹ್ಮವಸ್ತುವನ್ನು) ಪರಿಶೋಧಿಸಲಾಯಿತೆಂದು ತಿಳಿಯಬಹುದು.

ಲೋಕಾಯತದ ಕೊಡುಗೆ

ಹಿಂದಿನ ಶತಮಾನಗಳಲ್ಲಿ ಲೋಕಾಯತದ ವಿರುದ್ಧ ಹಲವು ಬಗೆಯ ಕುಚೋದ್ಯ, ತೀವ್ರತರ ದಾಳಿಗಳು ನಡೆದವು. ತತ್ವಶಾಸ್ತ್ರ ಕ್ಷೇತ್ರದಲ್ಲಿ ಲೋಕಾಯತ ಸಿದ್ಧಾಂತಕ್ಕೆ ಸಮಾನಾಂತರವಾಗಿದ್ದ ಸಾಂಖ್ಯ, ನ್ಯಾಯ, ಕಣಾದನ, ವೈಶೇಷಿಕ ದರ್ಶನಗಳಿಗಿಂತ ಹೆಚ್ಚಾಗಿ ಮಾಯಾವಾದವನ್ನು ಪ್ರತಿಪಾದಿಸಿದ್ದ ಶಾಂಕರ ವೇದಾಂತಕ್ಕೆ ಘನತೆ ನೀಡಲಾಯಿತು. ವಿಶ್ವದ ಅಸ್ತಿತ್ವವನ್ನು ಮಾಯೆಯೆಂದು ವ್ಯಾಖ್ಯಾನಿಸುವ ಘನತೆ ನೀಡಲಾಯಿತು. ವಿಶ್ವದ ಅಸ್ತಿತ್ವವನ್ನು ಮಾಯೆಯೆಂದು ವ್ಯಾಖ್ಯಾನಿಸುವ ಅದ್ವೈತವೇದಾಂತವು ವಿಜ್ಞಾನದ ಬೆಳುವಣಿಗೆಗೆ ಹೇಗೆ ಮಾರಕವಾಯಿತೆಂಬ ಮಾತನ್ನು ಆಚಾರ್ಯ ಪ್ರಫುಲ್ಲಚಂದ್ರರೇ ತಮ್ಮ 'ಹಿಂದು ರಸಾಯನ ಶಾಸ್ತ್ರದ ಚರಿತ್ರೆ'ಯಲ್ಲಿ ಬಹಳ ಹಿಂದೆಯೇ ಹೇಳಿದ್ದರು. (ಭಾವನಾವಾದದ ಬಗೆಗೆ ಈಚೆಗೂ ಸಹ -ಎಷ್ಟು ಭಾವುಕತೆಯಿದೆ ಯೆಂದರೆ ಪಿ.ಸಿ. ರೇ ಅವರ ಪುಸ್ತಕವು ಕಳೆದ ಶತಮಾನದಲ್ಲಿ ಪುನರ್ಮುದ್ರಣಗೊಂಡಾಗ ಪ್ರಕಾಶಕರು ಧೂರ್ತ ಸ್ವಾತಂತ್ರ್ಯ ವಹಿಸಿ....ಕೆಲವರಿಗೆ ಅಪಥ್ಯವೆನಿಸುವ ಭಾಗಗಳನ್ನು ಕತ್ತರಿಸಿ ಹಾಕಿದ್ದರು! ಅವರಿಗೆ ಪಿ.ಸಿ.ರೇ. ಬೇಕು; ಅವರ ಅರುಚಿಕರವೆನಿಸುವ ಅಭಿಪ್ರಾಯಗಳು ಬೇಡ, ಅವರು ವಿಶದೀಕರಿಸುವ ಭಾರತೀಯ ವಿಜ್ಞಾನದ ಇತಿಹಾಸ ಬೇಡ. ಶಂಕರರನ್ನು ತೆಗಳಿ

ಲೋಕಾಯತವನ್ನು ಎತ್ತಿ ಹಿಡಿಯುವಂತಹ ಮಾತುಗಳನ್ನು ಅವರು ಹೇಗೆ ತಾನೆ ಸಹಿಸಿಯಾರು! (ಜಿ.ಆರ್., ದೇ.ಮ.ಲೋ-ಪುಟ- 89-91) ಆಧ್ಯಾತ್ಮವಾದ, ಮಾಯಾವಾದ, ಅದ್ವೈತವೇದಾಂತ, ಬ್ರಹ್ಮಜಿಜ್ಞಾಸೆಗಳ ಕೈ ಮೇಲಾಗಲು ಕೆಲವು ಹೊರಗಿನ ಶಕ್ತಿಗಳು ಕಾರಣವಾದವು. ಆ ಹೊರಗಿನ ಶಕ್ತಿಗಳೆಂದರೆ ನಮ್ಮ ಸಮಾಜದಲ್ಲಿ ಬೆಳೆದು ಬಂದ ಸಾಮಾಜಿಕ ವಿದ್ಯಮಾನಗಳು ಮತ್ತು ಅವನ್ನು ಪೋಷಿಸಿ ಬೆಳೆಸಿದ ಪ್ರತಿಷ್ಠಿತರು.

ಇಷ್ಟೆಲ್ಲಾ ಕುಚೋದ್ಯಗಳಿಗೆ, ದಾಳಿಗಳಿಗೆ ಗುರಿಯಾದರೂ ಲೋಕಾಯತ ದರ್ಶನವು ಸತ್ಯಶೋಧಕರ ಮನಃಪಟಲದಿಂದ ಮರೆಯಾಗಲಿಲ್ಲ. ಸಂಪೂರ್ಣ ನಿರ್ನಾಮವಾಗಲಿಲ್ಲ. ಸಾಂಖ್ಯ, ನ್ಯಾಯ, ವೈಶೇಷಿಕ ಚಿಂತನೆಯಲ್ಲಿ ಮತ್ತು ಪ್ರಾಚೀನ ವೈದ್ಯಶಾಸ್ತ್ರದಲ್ಲಿ (ಉದಾ: ಚರಕ, ಸುಶ್ರುತರ) ಲೋಕಾಯತದ ಮೂಲತತ್ವಗಳನ್ನು ಒಂದಿಲ್ಲೊಂದು ರೀತಿಯಲ್ಲಿ ಬಳಸಿಕೊಳ್ಳುತ್ತಲೇ ಇದ್ದುದು ಸ್ಪಷ್ಟವಾಗಿದೆ. ಉದಾ. ಮಾನವ ಶರೀರದ ಸಮಗ್ರ ಜ್ಞಾನವನ್ನು ಪ್ರಾತ್ಯಕ್ಷಿಕೆಗಳಿಂದ ಪಡೆದು, ಆರೋಗ್ಯದಲ್ಲಿ ಏರುಪೇರುಗಳುಂಟಾದಾಗ ವೈದ್ಯನು ಮಧ್ಯೆ ಪ್ರವೇಶ ಮಾಡಿ ಏರುಪೇರುಗಳನ್ನು ಸರಿಪಡಿಸಿ ಸಮತೋಲನ ಮತ್ತೆ ನೆಲೆಸುವಂತೆ ಮಾಡಬಹುದೆಂದು ಪ್ರಾಚೀನ ವೈದ್ಯಶಾಸ್ತ್ರವು ಕೂಡ ಹೇಳುತ್ತದೆ. ಕರ್ಮಫಲ, ಹೋಮಹವನ, ಬಲಿದಾನ ಮೊದಲಾದ ನಂಬಿಕೆಗಳಿಗೆ ಇಲ್ಲಿ ಸ್ಥಾನವಿಲ್ಲ. ಭೂತದ್ರವ್ಯಗಳ ಸಂಯೋಜನೆಯನ್ನು ಗಣನೆಗೆ ತೆಗೆದುಕೊಂಡು, ಕಾರ್ಯಕಾರಣಗಳನ್ನು ವಿಶ್ಲೇಷಿಸುವುದಕ್ಕೇ ಇಲ್ಲಿ ಆದ್ಯತೆ.

ಪ್ರಾಚೀನ ಲೋಕಾಯತರ ಮೇಲೆ ನಡೆದ ಹಲ್ಲೆಯ ವಿಚಾರ ಹಾಗಿರಲಿ; ನಮ್ಮ ಈ 'ವಿಜ್ಞಾನ ಯುಗ'ದಲ್ಲಿ ದೇವೀಪ್ರಸಾದರ ಮೇಲೆ ನಡೆದ ವಾಗ್ದಾಳಿಗೇನೂ ಕಡಿಮೆಯಿಲ್ಲ. ಭಾರತೀಯ ಸಂಪ್ರದಾಯಗಳನ್ನು ಮಾರ್ಕ್ಸ್‌ವಾದ, ವೈಜ್ಞಾನಿಕ ಸಮಾಜವಾದಗಳ ಮುಖೇನ ವಿಶ್ಲೇಷಿಸು ತ್ತಿದ್ದಾರೆಂಬುದು ದೇವಿಪ್ರಸಾದರ ಮೇಲಿನ ದಾಳಿಗಳಿಗೆ ಮುಖ್ಯಕಾರಣ. "ನಮ್ಮ ರಾಷ್ಟ್ರದ ತತ್ವಶಾಸ್ತ್ರಜ್ಞರ ಒಂದು ಸಮಾವೇಶದಲ್ಲಿ ಈಗ್ಗೆ ಹತ್ತು ಹದಿನೈದು ವರ್ಷಗಳ ಹಿಂದೆ ಯಾರೋ ಒಬ್ಬ ಪ್ರಾಧ್ಯಾಪಕರು ಮಂಡಿಸಿದ್ದ ನಿರ್ಣಯ ಹೀಗಿತ್ತು: - ದೇವಿಪ್ರಸಾದರು ತಮ್ಮ ಮಾರ್ಕ್ಸ್‌ವಾದಿ ಅಧ್ಯಯನಗಳಿಂದ ನಮ್ಮ ಯುವ ಪೀಳಿಗೆಯ ಮೇಲೆ ಬಲವತ್ತರವಾದ ಪ್ರಭಾವ ಬೀರಿ ಅವರನ್ನು ಹಾದಿ ತಪ್ಪಿಸುತ್ತಿದ್ದಾರೆ. ಈ ಸಮಾವೇಶವು ಅವರನ್ನು ಖಂಡಿಸುತ್ತದೆ. ನಿರ್ಣಯ ಅಂಗೀಕಾರ ವಾಗಲಿಲ್ಲವಾದರೂ ಈ 'ಏಕೈಕ ಸೈನಿಕನ ಮಿಲಿಟರಿ ತುಕಡಿ' ಶಕ್ತಿಶಾಲಿಯಾಗಿದ್ದು ವಿರೋಧಿ ಬಣಕ್ಕೆ ಹೇಗೆ ಆಂತಕಕಾರಿಯಾಗಿತ್ತೆಂಬುದನ್ನು ತೋರಿಸುತ್ತದೆ." (ಜಿ.ಆರ್., ದೇ.ಮ.ಲೋ-ಪು-11).

ಸುದೈವದ ಸಂಗತಿಯೆಂದರೆ ನಮ್ಮ ದೇಶದ ಎಲ್ಲ ತತ್ವಶಾಸ್ತ್ರಜ್ಞರೂ, ಪ್ರಾಧ್ಯಾಪಕರೂ ಈ ನಿರ್ಣಯವನ್ನು ಮಂಡಿಸಿದ ವ್ಯಕ್ತಿಯಷ್ಟು ಸಂಕುಚಿತ ದೃಷ್ಟಿಯವರಲ್ಲವೆಂಬುದು.

ಕಲ್ಕತ್ತಾ ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ಸ್ನಾತಕೋತ್ತರ ವಿಭಾಗದಲ್ಲಿ ವಿದ್ಯಾರ್ಥಿ ಯಾಗಿದ್ದಾಗ ದೇವಿಪ್ರಸಾದರಿಗೆ ಡಾ. ಎಸ್. ರಾಧಾಕೃಷ್ಣನ್ ಅಧ್ಯಾಪಕರೆಂದು ಹೇಳಲಾಯಿತಷ್ಟೆ. ಯುವಕ ವಿದ್ಯಾರ್ಥಿಯನ್ನು ಅವರು ಆಗಾಗ್ಗೆ ಛೇಡಿಸುತ್ತಿದ್ದರಂತೆ: "ಏನಪ್ಪಾ, ನಿನ್ನ ಗುರು ಮಾರ್ಕ್ಸ್

ಈ ಬಗ್ಗೆ ಏನು ಹೇಳುತ್ತಾನೆ?'' ಎಂದು. ಅದಾದ ಮೂವತ್ತು ವರ್ಷಗಳ ನಂತರ ಸಿಮ್ಲಾದ ಉನ್ನತ ಅಧ್ಯಯನ ಸಂಸ್ಥೆಯಲ್ಲಿ ಒಂದು ವಿಚಾರಗೋಷ್ಠಿಯ ಸಂದರ್ಭದಲ್ಲಿ ಮತ್ತೆ ಇಬ್ಬರ ಭೇಟಿ, ರಾಧಾಕೃಷ್ಣನ್ ಅಂದರು: ''ಇಷ್ಟು ಶ್ರದ್ಧೆಯಿಂದ ನೀನು ಮಾರ್ಕ್ಸ್‌ನನ್ನು ಅನುಸರಿಸಿದೆ ಯೆಂದರೆ ಹೆಮ್ಮೆ ಪಡಬೇಕಾದ ವಿಷಯವೇ ಸರಿ'' (ಜಿ.ಆರ್., ದೇ.ಮ.ಲೋ-ಪು11). ಹೀಗೆ ಭಿನ್ನಾಭಿಪ್ರಾಯ ಹೊಂದಿದ್ದೂ ತಮ್ಮ ಹಿರಿಯ ಗುರುಗಳ ಶ್ಲಾಘನೆಗೆ ಪಾತ್ರರಾದದ್ದು ದೇವೀಪ್ರಸಾದರ ವಿದ್ವತ್ ನಿಷ್ಠೆ ಮತ್ತು ಪರಿಶ್ರಮಗಳ ಫಲ.

ದೇವೀಪ್ರಸಾದರ ಕೊಡುಗೆಯನ್ನು ಒಂದೇ ಮಾತಿನಲ್ಲಿ ಸಂಗ್ರಹಿಸುವುದಾದರೆ ಅದು ಬಹುಶಃ ಹೀಗಿರುತ್ತದೆ; ನಮ್ಮ ಪರಂಪರೆಯಲ್ಲಿ ಹೆಮ್ಮೆಗೆ ಪಾತ್ರವಾದ್ದು ಏನು? ಮತ್ತು ತಲೆತಗ್ಗಿಸು ವಂತಿದ್ದು, ಕೈ ಬಿಡಲು ಯೋಗ್ಯವಾದದ್ದು ಏನು? ಭಾರತೀಯ ಸಂಸ್ಕೃತಿಯೆಂದರೆ ಅನನ್ಯ ವಾದದ್ದೆಂದು ಬೀಗುವಾಗ ಆ ಸಂಸ್ಕೃತಿಯ ಯಾವ ಭಾಗವನ್ನು ನಾವು ಗಮನದಲ್ಲಿರಿಸಿ ಕೊಳ್ಳಬೇಕು? ಪರಂಪರೆಯ ಯಾವ ಭಾಗವನ್ನು ನಮ್ಮ ಆಶಯವಾಗಿ ಮಾಡಿಕೊಂಡು ಅದಕ್ಕೆ ನೀರೆರೆದು ಬೆಳೆಸಬೇಕು? ಮತ್ತು ಯಾವ ಭಾಗವನ್ನು ಹೆಣಭಾರವೆಂದು ಬಿಸುಡಬೇಕು? ಇವುಗಳಲ್ಲಿ ಒಂದರ ಆಯ್ಕೆಗೆ ಅಗತ್ಯವಾದ ಅಧ್ಯಯನ ಸಾಮಗ್ರಿಯನ್ನು ಅವರು ನಮಗೆ ಒದಗಿಸಿಕೊಟ್ಟಿದ್ದಾರೆ.

ಈ ಬರವಣಿಗೆಯನ್ನು ಡಾ. ಜಿ.ಆರ್. ಅವರ ಮಾತಿನೊಂದಿಗೆ ನಿಲ್ಲಿಸಬಹುದು: ''ಲೋಕಾಯತ ದರ್ಶನದ ಉನ್ನತ ಕೊಡುಗೆಯನ್ನು ಸವಿಸ್ತಾರವಾಗಿ ದಾಖಲೆಗಳ ಆಧಾರದ ಮೇಲೆ ಪ್ರಸ್ತುತಪಡಿಸಿದ ದೇವೀಪ್ರಸಾದರು ನಮ್ಮ ವೈಜ್ಞಾನಿಕ ಮತ್ತು ದಾರ್ಶನಿಕ ಪರಂಪರೆಗಳಿಗೆ ಮಹೋನ್ನತ ಕಾಣಿಕೆ ನೀಡಿದ್ದಾರೆ. ಅದನ್ನು ಉಳಿಸಿ ಬೆಳೆಸುವುದು ಇತರರ ಜವಾಬ್ದಾರಿ.'' (ದೇ.ಮ.ಲೋ.ಪು. 94).

❑

ಜಿ.ಆರ್. ಅವರ ಮೂರು ಅನುವಾದಗಳು

ರಾಮಲಿಂಗಪ್ಪ ಟಿ. ಬೇಗೂರು

ದರ್ಶನದ ದರ್ಶನ

ಯಾವುದೇ ಒಂದು ವಿಚಾರವನ್ನು ಸರಳವಾಗಿ ಹೇಳಬೇಕೆಂದರೆ, ಆ ವಿಚಾರದಲ್ಲಿ ಆಳವಾದ ತಿಳಿವಳಿಕೆ ಇರಬೇಕಾಗುತ್ತದೆ. ಅದರಲ್ಲೂ ತತ್ತ್ವಜ್ಞಾನದಂತಹ ವಿಚಾರವನ್ನು, ಅದೂ ಮಕ್ಕಳಿಗೆ ತಿಳಿಯುವಂತೆ ಹೇಳಬೇಕಾದರೆ ಆ ಕ್ಷೇತ್ರದಲ್ಲಿ ಅಪಾರ ಮಾಸ್ಟರಿ ಬೇಕಾಗುತ್ತದೆ. ಮಕ್ಕಳಿಗೆ ಏನಾದರೊಂದು ಮನದಟ್ಟಾಗುವಂತೆ ತಿಳಿಯ ಹೇಳಲು ಅದು ಮೊದಲಿಗೆ ನಮಗೆ ಚೆನ್ನಾಗಿ ಮನನವಾಗಿರಬೇಕಲ್ಲವೇ? ಇದಕ್ಕೆ ಸಾಕ್ಷಿ ಎಂಬಂತೆ ಬರೆಯಲ್ಪಟ್ಟಿರುವ ಕೃತಿಯೇ ದೇವಿಪ್ರಸಾದರ 'ದರ್ಶನ'. 'ತಿಳಿಯಬೇಕಾದ ವಿಷಯಗಳು' ಎಂಬ ಮಾಲಿಕೆಯಲ್ಲಿ ಮಕ್ಕಳಿಗಾಗಿಯೇ ರಚಿಸಲಾದ ಈ ಪುಸ್ತಕದಿಂದ ದೇವಿಪ್ರಸಾದರ ಆಳ ಪಾಂಡಿತ್ಯ ಮತ್ತು ಪ್ರತಿಭೆಗಳ ದರ್ಶನವೂ ಆಗುತ್ತದೆ. ಇದು ಇಂದಿನ ನಮ್ಮ ಬಹುಪಾಲು ಸೋಮಾರಿ ವಿದ್ಯಾವಂತ ವಯಸ್ಕ (ಶಿಕ್ಷಕ)ರೂ ತಪ್ಪದೇ ಓದಬೇಕಾದ ಪುಸ್ತಕ. ಎಂಥೆಂಥವೊ ತಗಡುಗಳೆಲ್ಲಾ ಪಠ್ಯಪುಸ್ತಕಗಳಾಗುವ ಇಂದಿನ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಪದವಿ ಮಟ್ಟದ ಮಕ್ಕಳಿಗೆ ಅಥವಾ ಸ್ನಾತಕೋತ್ತರ ಮಟ್ಟದ ಮಕ್ಕಳಿಗೆ ಅತ್ಯಗತ್ಯವಾಗಿ ಪಠ್ಯಪುಸ್ತಕವಾಗಿ ಗೊತ್ತುಮಾಡಬೇಕಾದಂತಹ ಕೃತಿಯಿದು. ಇಂಥಾ ಕೃತಿಯೊಂದನ್ನು ತಿಳಿಗನ್ನಡದಲ್ಲಿ ಅನುವಾದಿಸಿದ್ದಾರೆ ಡಾ. ಜಿ. ರಾಮಕೃಷ್ಣ.

ಪುಸ್ತಕವನ್ನು ಓದುತ್ತಾ ಹೋದಂತೆ ನಿಜಕ್ಕೂ ನಮ್ಮ ತಿಳಿವಳಿಕೆಯ ಎಲ್ಲೆಕಟ್ಟುಗಳು ವಿಸ್ತಾರಗೊಳ್ಳುತ್ತಾ ಹೋಗುತ್ತವೆ. ತಮ್ಮ ಸಂವಾದ ಮಾದರಿಯಿಂದ ಲೇಖಕರು ಓದುಗನನ್ನು ಸೂಜಿಗಲ್ಲಿನಂತೆ ಪಠ್ಯಲೋಕದ

ಒಳಕ್ಕೆ ಅರಿವಿಲ್ಲದಂತೆ ಸೆಳೆದುಕೊಳ್ಳುತ್ತಾರೆ. ಓದುತ್ತ ಮುಂದುವರಿ ದಂತೆಲ್ಲ ಇನ್ನಷ್ಟು, ಮತ್ತಷ್ಟು ಬೆಳಕಿಗೆ ತೆರೆದುಕೊಂಡ ಅನುಭವ ಓದುಗನಿಗೆ ಆಗುತ್ತದೆ. ಇದರಲ್ಲಿನ ವಿಚಾರ ಮಂಡನೆ ಮಕ್ಕಳಿಗೆ ತಿಳಿಯುವಂತೆ ಇರುವುದಷ್ಟೇ ಅಲ್ಲ, ಎಂಥ ಮುದಿ ಎತ್ತುಗಳಲ್ಲೂ ಇರಬಹುದಾದ ಶಿಶುತನ ವನ್ನಿದು ಎಳೆದು ತೋರುತ್ತದೆ.

ಅನುವಾದದ ಥಿಯರಿಯೊಂದನ್ನು ಕಟ್ಟಿಕೊಡುವಂತಹ ಅನುವಾದವಿದು. ಕೃತಿಕಾರನ ವಿಚಾರಗಳನ್ನು ಕನ್ನಡಿಸಿದಷ್ಟಕ್ಕೆ ಅದು ಭಾಷಾಂತರವೆನ್ನಿಸುವುದಿಲ್ಲ. ಅನುವಾದದಲ್ಲಿ ಸೋರ್ಸ್ ಪಠ್ಯದ ಆಶಯವನ್ನು ಟಾರ್ಗೆಟ್ ಪಠ್ಯದಲ್ಲಿ ಸಮರ್ಥವಾಗಿ ಕಟ್ಟಿಕೊಡುವುದು ಮುಖ್ಯ. ಈ ಕೆಲಸವನ್ನು ಜಿ.ಆರ್. ಬಹು ಸಮರ್ಥವಾಗಿ ಆಗುಮಾಡಿದ್ದಾರೆ. ಭಾಷಿಕ ತಜ್ಞತೆಯಿಂದ ಮಾತ್ರ ಈ ಸಾಮರ್ಥ್ಯ ಬರುವುದಿಲ್ಲ. ಸೋರ್ಸ್ ಪಠ್ಯದ ವಿಷಯ ಕ್ಷೇತ್ರದ ಆಳ ಜ್ಞಾನ ಕೂಡ ಇರಬೇಕು. ಈ ಎರಡೂ ನೆಲೆಯಲ್ಲಿ ಜಿ.ಆರ್. ಅವರ ಆಳ ಮತ್ತು ಛಾಪನ್ನು ಈ ಅನುವಾದದಲ್ಲಿ ಕಾಣಬಹುದು.

ದೇವಿಪ್ರಸಾದರು ಹೇಳುವ ಹಾಗೆ ಮಾನವನು ಪ್ರಕೃತಿಯನ್ನು ಅರ್ಥಮಾಡಿಕೊಳ್ಳಲು ನಡೆಸಿದ ಪ್ರಯತ್ನವೇ ತತ್ತ್ವಜ್ಞಾನವಾಗಿದೆ. ಈ ಪ್ರಯತ್ನದ ಹಾದಿಯನ್ನು ಸ್ಥೂಲವಾದ ಚಾರಿತ್ರಿಕ ನೆಲೆಯಲ್ಲಿ ತಿಳಿಸಿಕೊಡಲು ಈ ಪುಸ್ತಕದಲ್ಲಿ ಯತ್ನಿಸಲಾಗಿದೆ. ದೇವಿಪ್ರಸಾದರ ಈ ಚಾರಿತ್ರಿಕ-ದಾರ್ಶನಿಕ ತಿಳಿವಿನ ಹಿನ್ನೆಲೆಯಲ್ಲಿ ಎರಡು ಮುಖ್ಯ ಸಂಘರ್ಷಾತ್ಮಕ ನೆಲೆಗಳು ಕೆಲಸ ಮಾಡಿರುವುದನ್ನು ಗುರ್ತಿಸಬಹುದು.

ಮೊದಲನೆಯದು: ಮಾನವ ಮತ್ತು ಪ್ರಕೃತಿಯ ನಡುವಿನ ಸಂಘರ್ಷ. ಇದು ಪ್ರಕೃತಿಯ ಜೊತೆ ಸಹಜವಾಗಿ ಬಾಳ್ವೆ ನಡೆಸಲು ಮಾನವ ನಡೆಸಿದ ತಿಳಿವಳಿಕೆಯ ಹುಡುಕಾಟದ ಸಂಘರ್ಷ. ಆ ಮೇಲೆ ಇದು ಪ್ರಕೃತಿಯ ಮೇಲೆ ಪ್ರಭುತ್ವ ಸಾಧಿಸುವ ಯತ್ನಕ್ಕೂ ಬಳಕೆ ಆಗಿದೆ. ಕ್ರಮೇಣ ಇದು ಮಾನವ ಮತ್ತು ಮಾನವರ ನಡುವಿನ ಸಂಘರ್ಷವಾಗಿ ಬದಲುಗೊಂಡಿದೆ. ಈ ಮನುಷ್ಯ-ಮನುಷ್ಯರ ನಡುವಿನ ಸಂಘರ್ಷವೇ ಮೇಲು-ಕೀಳು, ಒಡೆಯ-ಆಳು ಎಂಬಂತಹ ಶೋಷಕ-ಶೋಷಿತ ವರ್ಗವಿನ್ಯಾಸಕ್ಕೆ ಹಾದಿ ಮಾಡಿಕೊಟ್ಟಿದೆ.

ಎರಡನೆಯದು: ಭೌತವಾದ ಮತ್ತು ಆಧ್ಯಾತ್ಮವಾದಗಳ ನಡುವಿನ ಸಂಘರ್ಷ. ಇದು ಪ್ರಕೃತಿಯನ್ನು ಅರ್ಥಮಾಡಿಕೊಳ್ಳುವ ಹಾದಿಯಲ್ಲಿ ಮಾನವ ಕಂಡುಕೊಂಡ ಭಿನ್ನ ವ್ಯಾಖ್ಯಾನಗಳ ಸಂಘರ್ಷ. ಇದೂ ಕೂಡ ಪ್ರಕೃತಿಯನ್ನು ವ್ಯಾಖ್ಯಾನಿಸುವುದಕ್ಕಾಗಿ ಹಾಗೂ ಅದನ್ನು ಆಳುವು ದಕ್ಕಾಗಿ ಬಳಕೆಯಾಗಿದೆ. ಕ್ರಮೇಣ ಇದು ವಿಜ್ಞಾನ ಮತ್ತು ಧರ್ಮಗಳ ನಡುವಿನ ಸಂಘರ್ಷವಾಗಿ ಬೆಳೆದಿದೆ. ವಿಜ್ಞಾನಕ್ಕೆ ಧರ್ಮದಿಂದ ಭೀತಿಯೂ ಅಡೆತಡೆಯೂ ಚರಿತ್ರೆಯಲ್ಲಿ ಬಹುಕಾಲ ಉಂಟಾಗಿದೆ. ಇದರಿಂದ ಮನುಷ್ಯ ಮನುಷ್ಯರ ನಡುವೆ ವರ್ಗ ತಾರತಮ್ಯವೂ, ಶೋಷಣೆಯೂ ಅವ್ಯಾಹತವಾಗಿ ನಡೆದಿದೆ. ಈ ಎರಡೂ ನೆಲೆಗಳು ಒಂದೇ ಗುರಿಯ ಭಿನ್ನ ಮಾರ್ಗಗಳಂತೆ ಇವೆ.

ಪ್ರಕೃತಿಯಲ್ಲಿನ ಆಗುಹೋಗುಗಳೆಲ್ಲವೂ ಅದೃಶ್ಯ ಚೇತನವೊಂದರಿಂದ ನಿಯಂತ್ರಿತ ಗೊಳ್ಳುತ್ತದೆ ಎಂದು ಹೇಳುವುದೇ ಧರ್ಮ. ಪ್ರಕೃತಿಯಲ್ಲಿನ ಆಗುಹೋಗುಗಳೆಲ್ಲವೂ ಪ್ರಕೃತಿಗೆ ಸಂಬಂಧಪಟ್ಟವೇ ಆಗಿವೆ ಎಂದು ಹೇಳುವುದೇ ವಿಜ್ಞಾನ (ಪುಟ 77) ಇಷ್ಟೇ ಸರಳ ಮತ್ತು ಖಚಿತವಾಗಿ ಕ್ರಿ.ಪೂ. 6ನೇ ಶತಮಾನದ ಗ್ರೀಸಿನ ವಿಜ್ಞಾನಿ ಥೇಲಿಸ್‌ನಿಂದ ಹಿಡಿದು ಆಧುನಿಕ ಕಾಲದ ಕಾರ್ಲ್‌ಮಾರ್ಕ್ಸ್‌ವರೆಗೆ ಲೇಖಕರು ಜಾಗತಿಕ ಚಿಂತನೆಯ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಿಕೊಟ್ಟಿದ್ದಾರೆ. ಈ ಪರಿಚಯದಲ್ಲಿ ಅಲ್ಲಲ್ಲಿ ದೊಡ್ಡದೊಡ್ಡ ನೆಗೆತಗಳೂ, ಸಂಕ್ಷೇಪೀಕರಣಗಳೂ ಇವೆ. ಕೊನೆಯಲ್ಲಿ ಎಲ್ಲ ದಾರ್ಶನಿಕತೆಯ ಶಿಖರವೆಂಬಂತೆ ಮಾರ್ಕ್ಸ್‌ನ 'ಗತಿತಾರ್ಕಿಕ ಭೌತವಾದ'ವನ್ನು ದೇವಿಪ್ರಸಾದರು ಪ್ರತಿಪಾದಿಸಿದ್ದಾರೆ. ಇಲ್ಲಿ ಆರಂಭದಿಂದ ಕೊನೆಯವರೆಗೂ ಮಾರ್ಕ್ಸ್‌ವಾದವನ್ನು ಎತ್ತಿಹಿಡಿಯಬೇಕೆಂಬ ಒಣ ಪ್ರದರ್ಶನ ಇಲ್ಲವೇ ಇಲ್ಲ. ಆದರೆ ಇವರ ಬರವಣಿಗೆಯ ತಳಪಾಯದಲ್ಲಿ ಉದ್ದಕ್ಕೂ ಮಾರ್ಕ್ಸ್‌ವಾದಿ ದೃಷ್ಟಿಕೋನ ಇರುವುದು ಮಾತ್ರ ಸೂರ್ಯ ಸ್ಪಷ್ಟ.

ವೈಜ್ಞಾನಿಕ ಮನೋಧರ್ಮವನ್ನು ಜನಮನದಲ್ಲಿ ಬಿತ್ತುವ ಕಾಳಜಿ ಇವರಲ್ಲಿ ಎದ್ದು ಕಾಣುತ್ತದೆ. ಜಾಗತಿಕ ಸಾಂಸ್ಕೃತಿಕ ರಾಜಕೀಯದ ಚರಿತ್ರೆಯನ್ನು ಸ್ಥೂಲವಾಗಿ ಬಿಡಿಸಿಡುವ ಮೂಲಕ ಇಂಥಾ ಒಂದು ತಿಳುವಳಿಕೆಯನ್ನು ದೇವಿಪ್ರಸಾದರು ಯಶಸ್ವಿಯಾಗಿ ನೀಡುತ್ತಾರೆ. ಇದು ನಮ್ಮಲ್ಲೇ, ನಮ್ಮ ಚರಿತ್ರೆಯ ಬಗೆಗಿನ ಚಿಕಿತ್ಸಕ ದೃಷ್ಟಿಯೊಂದನ್ನು ಉಂಟುಮಾಡುವ ಆಪ್ತ ಬರವಣಿಗೆ. ಇದು ಹಲವು ಜಾಗತಿಕ ಶಿಖರಗಳನ್ನು ತೌಲನಿಕವಾಗಿ ಮುಟ್ಟಿಸುತ್ತಾ ಅದರಿಂದ ಭಾರತೀಯ ದೌರ್ಬಲ್ಯಗಳನ್ನು ನಾವೇ ಕಂಡು ಎಚ್ಚರಗೊಳ್ಳುವಂತೆ ಮಾಡುತ್ತದೆ. ಇವರ ಬರವಣಿಗೆಯಲ್ಲಿ ಸದಾ ಜಾಗತಿಕ ಉಯ್ಯಾಲೆಯೊಂದು ಏರ್ಪಡುತ್ತದೆ. ಅದು ತೂಗುತ್ತ, ತೂಗುತ್ತಾ ಒಂದು ದಾರ್ಶನಿಕ ಪಕ್ಷಿನೋಟವನ್ನು ಒದಗಿಸುತ್ತದೆ. ಆಸ್ಟ್ರೇಲಿಯಾದ ಟೋಟೆಂ ಮತ್ತು ಟ್ಯಾಬೂಗಳಿಂದ ಕಲ್ಕತ್ತಾಕ್ಕೆ ಜಿಗಿಯುವ, ಈಜಿಪ್ಟಿನ ನಡಾವಳಿಯಿಂದ ಬ್ಯಾಬಿಲೋನಿಯದ ನಡಾವಳಿಗೆ ಜೀಕುವಂತಹ ಉದಾಹರಣೆಗಳಲ್ಲಿ ಈ ಪರಿಯನ್ನು ಕಾಣಬಹುದು. ಗ್ರೀಸಿನ ತತ್ತ್ವಜ್ಞಾನದಿಂದ ಭಾರತೀಯ ದರ್ಶನವನ್ನು ಪ್ರವೇಶಿಸಿ, ಆನಂತರ ಮಧ್ಯಯುಗ ಮತ್ತು ಆಧುನಿಕ ಮಾರ್ಕ್ಸ್‌ವರೆಗೆ ಹಾಯುವ ಇವರ ಹಾಸು ಬೀಸುಗಳು ಲೀಲಾಜಾಲವಾಗಿ ಈ ಕೃತಿಯಲ್ಲಿ ಒಡಮೂಡಿವೆ.

ಕನ್ನಡದ ಕುವೆಂಪು, ಕಾರಂತ, ಕೆಲಮಟ್ಟಿಗೆ ಮೂರ್ತಿರಾವ್, ಗೌರೀಶ್ ಕಾಯ್ಕಿಣಿ ಇವರು ಗಳನ್ನು ನೆನಪಿಸಿಕೊಡುವ ಖಚಿತ ವಿಚಾರವಾದಿ ನಿಲುವುಗಳು ದೇವಿಪ್ರಸಾದರಲ್ಲಿವೆ. ಆದರೆ ಕನ್ನಡದ ಈ ಯಾರಿಗೂ ಇವರಷ್ಟು ಜಾಗತಿಕ ಹಾಸುಬೀಸುಗಳು ಇದ್ದಂತೆ ಕಾಣುವುದಿಲ್ಲ. ಡಾ. ಜಿ.ಆರ್. ಕರ್ನಾಟಕದಲ್ಲಿ ಡಿ.ಡಿ. ಕೋಸಾಂಬಿಯ ಮತ್ತು ದೇವಿಪ್ರಸಾದರ ಚಿಂತನಧಾರೆಯ ಇನ್ನೊಂದು ಕವಲಂತೆ ಕಾಣುತ್ತಾರೆ. ಇವರ ಆಯತನ, ವೈಚಾರಿಕ ಜಾಗೃತಿ, ಮುನ್ನೋಟ, ದೇವಿಪ್ರಸಾದ್ ಮತ್ತು ಲೋಕಾಯತ ದರ್ಶನ, ಭಾರತೀಯ ವಿಜ್ಞಾನದ ಹಾದಿಯಲ್ಲಿ, ಏಂಗಲ್ಸ್, ಲಿವಿಂಗ್ ಮಾರ್ಕ್ಸ್ ಇತ್ಯಾದಿ ಕೃತಿಗಳನ್ನು ನೋಡಿದರೆ ಇದು ತಿಳಿಯುತ್ತದೆ. ಇವರ

ತಲೆಮಾರಿನವರೇ ಆದ ಜಿ.ಟಿ. ನಾರಾಯಣರಾವ್, ಬಿ.ವಿ. ವೀರಭದ್ರಪ್ಪ, ಕೆ.ಎಸ್. ಭಗವಾನ್ ಮೊದಲಾದವರ ಬರಹಗಳು ಸರಿಸುಮಾರು ಈ ದೃಷ್ಟಿಕೋನದವೇ ಆಗಿದ್ದರೂ ದೇವಿಪ್ರಸಾದರಷ್ಟು ಬಹುಶ್ರುತತೆ ಇವರಲ್ಲಿ ಕಾಣಲಾಗದು. ದೇವಿಪ್ರಸಾದರ ಬರಹದಲ್ಲಿ ಕವಿಸಹಜ ಕಲ್ಪನಾಶಕ್ತಿ ಮತ್ತು ಪಾಂಡಿತ್ಯಪೂರ್ಣ ತರ್ಕಶಕ್ತಿಗಳೆರಡೂ ನುಡಿಕೆಗೊಂಡು ಹುರಿಯಾಗಿವೆ. ಹೀಗೆ ಹುರಿಗೊಂಡ ಭಾಷೆಯು ಅರ್ಥದ ದೃಷ್ಟಿಯಿಂದ ಸರಳವೂ, ಸುಗಮವೂ, ಆಕರ್ಷಕವೂ ಆಗಿದೆ.

ಪ್ರಾಚೀನ ಸಮಾಜದ ವಿಕಾಸದಲ್ಲಿ ಧರ್ಮದ ಪಾತ್ರವನ್ನು ಕುರಿತು ಹೇಳುವಾಗ, ವಿಜ್ಞಾನಕ್ಕೆ ಒದಗಿದ ಅಡೆತಡೆಗಳನ್ನು ಕುರಿತು ಹೇಳುವಾಗ ದೇವಿಪ್ರಸಾದರು ಪಾಶ್ಚಾತ್ಯ ಎಂಪಿರಿಕಲ್ ಮೌಲ್ಯಗಳ ಪ್ರಭಾವದ ಅಡಿಯಲ್ಲೇ ಮಾತನಾಡುತ್ತಿರುವಂತೆ ಕಾಣುತ್ತಾರೆ. ಎಂಪಿರಿಕಲ್ ಚಿಂತನಾ ಮಾದರಿಯು ಇಂದು ರಾಚನಿಕೋತ್ತರ - ಆಧುನಿಕೋತ್ತರ ಜಿಜ್ಞಾಸುಗಳಲ್ಲಿ ಪ್ರಶ್ನಿತಗೊಳ್ಳುತ್ತಿದೆ. ಭಾರತೀಯ ಸಮಾಜಕ್ಕೆ ಪಾಶ್ಚಾತ್ಯ ಪ್ರಣೀತ ಪ್ರಯೋಗವಾದಿ-ವಿಜ್ಞಾನವಾದಿ ಚಿಂತನಾ ಧಾರೆ ಅಥವಾ ಮಾರ್ಕ್ಸ್‌ನ ಗತಿತಾರ್ಕಿಕ ಭೌತವಾದಗಳು ಪ್ರಸ್ತುತವೇ ಎಂಬ ಪ್ರಶ್ನೆ ಮರು ಪರಿಶೀಲನಾರ್ಹ. ಇಂಥ ಈ ಇವತ್ತಿನ ತಿಳಿವಳಿಕೆಯ ಹಿನ್ನೆಲೆಯಿಂದ ನೋಡಿದರೆ ದೇವಿಪ್ರಸಾದರ ಈ ಕೃತಿಯ ಆಶಯವನ್ನು ಇನ್ನಷ್ಟು ಭಿನ್ನವಾಗಿ ನೋಡಬಹುದೇನೋ.

* * *

ವಾನರನಿಂದ ಮಾನವನವರೆಗೆ

(ಮೂಲ: ಫ್ರೆಡರಿಕ್ ಏಂಗಲ್ಸ್)

ನಮ್ಮಲ್ಲಿ ಜೀವವಿಕಾಸ ಪ್ರಕ್ರಿಯೆಯ ಬಗೆಗೆ ಡಾರ್ವಿನ್ನನನ್ನು ಒಪ್ಪುವ ಜನ ಕೂಡ ದುಡಿಮೆಗಿಂತಾ ಮನಸ್ಸು ಮತ್ತು ಮೆದುಳುಗಳೇ ಜೀವಿ ವಿಕಾಸದಲ್ಲಿ ನಿರ್ಣಾಯಕ ಪಾತ್ರ ವಹಿಸಿವೆಯೆಂದು ಬಲವಾಗಿ ನಂಬುತ್ತಾರೆ. ಆದರೆ ಏಂಗಲ್ಸ್ ಈ ಮೆದುಳು ಮತ್ತು ಮನಸ್ಸುಗಳು ರೂಪಿತವಾದದ್ದೇ ದುಡಿಮೆಯಿಂದಾಗಿ ಎಂದು ವಾದಿಸುತ್ತಾರೆ. ಇದಕ್ಕೆ ಸಮರ್ಥನೆಯಾಗಿ ಏಂಗಲ್ಸ್ ಮಾನವಶಾಸ್ತ್ರೀಯ ಮತ್ತು ಜೀವಶಾಸ್ತ್ರೀಯ ವಿವರಗಳನ್ನೂ ಬಳಸಿಕೊಳ್ಳುತ್ತಾರೆ. ಇವರ ತತ್ವಮಂಡನೆಯ ಉದ್ದಕ್ಕೂ ತರ್ಕ ಮತ್ತು ಚಾರಿತ್ರಿಕ ಅನ್ವಯವಾದಗಳು ಪ್ರಧಾನ ಪಾತ್ರ ವಹಿಸಿರುವುದನ್ನು ನಾವಿಲ್ಲಿ ಕಾಣಬಹುದು.

ಈ ಪುಸ್ತಿಕೆಯನ್ನು ಎರಡು ಭಾಗಗಳನ್ನಾಗಿ ನೋಡಬಹುದು. ಮೊದಲಲ್ಲಿ ವಾನರತನದಿಂದ ಮಾನವಾವಸ್ಥೆಗೆ ಆಗಿರುವ ಪರಿವರ್ತನೆಯಲ್ಲಿ ದುಡಿಮೆಯದ್ದೇ ನಿರ್ಣಾಯಕ ಪಾತ್ರ ಎಂಬ ಸಿದ್ಧಾಂತವಿದ್ದರೆ, ಕೊನೆಯಲ್ಲಿ ಮಾನವನ ಪರಿಸರದ ದುರ್ಬಳಕೆ ಮತ್ತು ನವೀನ ಉತ್ಪಾದನಾ ವಿಧಾನಗಳ ವಿಕೃತ ಪರಿಣಾಮಗಳನ್ನು ವಿವರಿಸಲಾಗಿದೆ. ಡಾ. ಜಿ.ಆರ್. ಇದನ್ನು ಸರಳ ಸುಂದರವಾಗಿ ಅನುವಾದಿಸಿದ್ದಾರೆ. ಈ ಪುಸ್ತಿಕೆಯ ಅನುವಾದ ಗುಣದ ಬಗೆಗಾಗಲೀ ಅಥವಾ ಭಾಷಾ ಬಳಕೆಯ ಬಗೆಗಾಗಲೀ ಚಕಾರ ಎತ್ತುವ ಹಾಗಿಲ್ಲ. ಪುಸ್ತಕ ಸುಲಲಿತವಾಗಿ ಓದಿಸಿಕೊಂಡು ಹೋಗುತ್ತದೆ. ಪಾಂಡಿತ್ಯಪೂರ್ಣ ಪಾರಿಭಾಷಿಕಗಳ ಯಾವುದೇ ವೈಧ್ವಾಂಸಿಕ ಅಡೆತಡೆಗಳಿಲ್ಲದೇ ಪುಸ್ತಕ ಸುಲಲಿತವಾಗಿ ಅನುವಾದಿತವಾಗಿದೆ. ಹಾಗಾಗಿ ಅನುವಾದಕ್ಕೆ ಇದೊಂದು ಮಾದರಿ.

ಆದಿ ಕಾಲದಲ್ಲಿ ಮಾನವ ತನ್ನ ಜೀವನ ನಿರ್ವಹಣೆಗಾಗಿ ಯಾವಯಾವ ಕೆಲಸಗಳಿಗೆಲ್ಲ ತನ್ನ ಅಂಗಾಂಗಗಳನ್ನು ಕ್ರಿಯಾತ್ಮಕವಾಗಿ ಬಳಸುತ್ತಿದ್ದನೋ ಅದನ್ನೆಲ್ಲ ಏಂಗಲ್ಸ್ ದುಡಿಮೆ ಎಂದೇ ಕರೆಯುತ್ತಾರೆ. ಇವರ ಪ್ರಕಾರ ಮೊದಲಿಗೆ ಮಾನವ ನೆಲದ ಮೇಲೆ ನಡೆಯಲು ಕೈ ಮತ್ತು ಕಾಲುಗಳೆರಡನ್ನೂ ಬಳಸುವುದನ್ನು ನಿಲ್ಲಿಸಿ ಬರೀ ಕಾಲುಗಳನ್ನಷ್ಟೇ ಬಳಸಲು ತೊಡಗಿದ ಕ್ರಿಯೆಯೇ ಇವನು ವಾನರತನದಿಂದ ಪರಿವರ್ತನೆ ಹೊಂದಲು ತಾನು ಇಟ್ಟ ಮೊದಲನೇ ಹೆಜ್ಜೆಯಾಗಿದೆ. ಮಾನವ ಜೀವಿಯು ಕೈಗಳನ್ನು ತನ್ನ ವಿವಿಧ ಉಪಯೋಗಗಳಿಗಾಗಿ ಬಳಸಲು ತೊಡಗಿದ್ದರಿಂದ ಕೈಯ ರಚನೆಯು ವಿಶೇಷವಾಗಿ ಬೆಳೆದಿದೆ. ಕಲ್ಲಿನಿಂದ ಆಯುಧ ತಯಾರಿಸಲು ತೊಡಗಿದಂದಿನಿಂದ ಅವನ ಅಂಗಗಳ ಜೊತೆಗೆ ಬುದ್ಧಿಯ ವಿಕಾಸವೂ ಮೊದಲಾಗಿದೆ.

ಶಾರೀರಿಕ ಮತ್ತು ಬೌದ್ಧಿಕ ವಿಕಾಸಗಳೆರಡನ್ನೂ ಶ್ರಮದ ಮೂಲಕವೇ ಗ್ರಹಿಸುವ ಏಂಗಲ್ಸ್ ಶರೀರದ ಯಾವುದೇ ಒಂದು ಅಂಗದ ಬಳಕೆಯ ವಿಧಾನವು ನಿಸ್ಸಂಶಯವಾಗಿ ಇನ್ನಿತರ ಅಂಗಗಳ ಮೇಲೂ ಪ್ರಭಾವ ಬೀರುತ್ತದೆ ಎನ್ನುತ್ತಾರೆ. ಇಲ್ಲಿ ದುಡಿಮೆ ಎಂದರೆ ಬರೀ ಕೈ ಮಯ್ಯಿಗಳ ಬಳಕೆ ಅಷ್ಟೇ ಅಲ್ಲ. ಅದು ಮನಸ್ಸು-ಮೆದುಳುಗಳ ಬಳಕೆಯೂ ಹೌದು. ಹೀಗಾಗಿ ದುಡಿಮೆಯು ಬರೀ ಶರೀರದ ವಿಕಾಸಕ್ಕೆ ಕಾರಣವಾಗಿಲ್ಲ. ಅದು ಮೆದುಳಿನ ವಿಕಾಸಕ್ಕೂ ಕಾರಣವಾಗಿದೆ. "ಇಲ್ಲೆಲ್ಲ ಮಾನವನ ಅಂಗಾಂಗಗಳು ಬರೀ ದುಡಿಮೆಯ ಸಾಧನಗಳು ಮಾತ್ರವಲ್ಲ. ಇವು ದುಡಿಮೆಯ ಪರಿಣಾಮಗಳೂ ಹೌದು" *(ಪು. 10).*

ಆದಿಯಲ್ಲಿ ಪ್ರಕೃತಿಯನ್ನು ಕೊಳ್ಳೆ ಹೊಡೆದು ಬದುಕುತ್ತಿದ್ದ ಮಾನವ ತಾನು ಇರುವ ಜಾಗದಲ್ಲಿ ಪ್ರಾಕೃತಿಕ ಆಹಾರ ಖಾಲಿಯಾದಾಗ ವಲಸೆ ಹೋಗುತ್ತಿದ್ದ ಮತ್ತು ತನ್ನ ಆಹಾರ ವಸ್ತುಗಳನ್ನು ಬದಲಾಯಿಸಿಕೊಳ್ಳುತ್ತಲೂ ಇದ್ದ. ಸಸ್ಯದ ಬೇರೆ ಬೇರೆ ಭಾಗಗಳನ್ನು ಅಥವಾ ಬೇರೆ ಬೇರೆ ಪ್ರಭೇದಗಳನ್ನು ತಿನ್ನಲಾರಂಭಿಸಿದಾಗ ಭಿನ್ನ ಅನ್ನಾಂಶಗಳಿಂದುಂಟಾದ ರಾಸಾಯನಿಕ ಕ್ರಿಯೆಗಳೂ ಕೂಡ ಇವನು ವಾನರಾವಸ್ಥೆಯಿಂದ ಮಾನವಾವಸ್ಥೆಗೆ ಬದಲಾಗಲು ಕಾರಣವಾದವು. ಮನುಷ್ಯ ಸಸ್ಯಾಹಾರ ಮಾತ್ರ ತಿನ್ನದೆ ಮಾಂಸವನ್ನೂ ತಿನ್ನಲಾರಂಭಿಸಿದಾಗ ಅವನ ಪಚನಶಕ್ತಿ ಬೆಳೆಯಿತು ಮತ್ತು ದೈಹಿಕ ಶಕ್ತಿಯೂ ಹೆಚ್ಚಿತು - 'ಇದರಿಂದ ಮೆದುಳಿನ ಪಾಲನೆ ಮತ್ತು ಬೆಳವಣಿಗೆಗೆ ಬೇಕಾದ ಹೆಚ್ಚಿನ ಸತ್ವವೂ ದೊರೆಯಿತು' *(ಪುಟ-19).* ಏಂಗಲ್ಸ್ ಇದೇ ಮಾತು ಗಳನ್ನು ಮುಂದುವರೆಸುತ್ತಾ ಮಾನವ ಮಾಂಸಾಹಾರವಿಲ್ಲದೆಯೇ ಅಸ್ತಿತ್ವಕ್ಕೆ ಬರಲಿಲ್ಲ ಎಂಬುದು ಮಾತ್ರ ಸತ್ಯ, ಈ ಮಾಂಸಾಹಾರ ಬಳಕೆಯು ಕಾಲಾನಂತರದಲ್ಲಿ ಬೆಂಕಿಯ ಬಳಕೆ ಮತ್ತು ಪಶುಸಾಕಾಣೆಗಳಿಗೂ ಮಾನವನನ್ನು ಅಣಿಗೊಳಿಸಿತು, ಆನಂತರ ಮಾನವ ಬೇಸಾಯ ಮತ್ತಿತರ ನಾಗರಿಕ ಕೆಲಸಗಳಿಗೂ ಕೈಹಾಕಿದ ಎನ್ನುತ್ತಾರೆ.

ಇಲ್ಲಿ ಏಂಗಲ್ಸ್ ದುಡಿಮೆಯನ್ನು ಬರೀ ಮಾನವ ಜೀವವಿಕಾಸದ ಹಂತಕ್ಕೆ ಮಾತ್ರ ಸೀಮಿತಗೊಳಿಸುವುದಿಲ್ಲ. ಈ ಸಿದ್ಧಾಂತವನ್ನು ನಾಗರಿಕತೆಗಳ ವಿಕಾಸಕ್ಕೂ ಅನ್ವಯಿಸಲು ಹೊರಡುತ್ತಾರೆ. ಇಂಥಲ್ಲೆಲ್ಲ ಏಂಗಲ್ಸ್ ದುಡಿಮೆಯೇ ಮಾನವ ನಾಗರಿಕತೆಯ ವಿಕಾಸಕ್ಕೆ ಸರ್ವಾಂಗೀಣ ಕಾರಣ ಎಂದು ಕಡ್ಡಿ ಮುರಿದಂತೆ ಹೇಳದಿದ್ದರೂ, ದುಡಿಮೆಯು ಇಲ್ಲಿ ಅತ್ಯಂತ

ಪ್ರಮುಖ ಪಾತ್ರ ವಹಿಸಿದೆ ಎಂದಂತೂ ಪ್ರತಿಪಾದಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಭಾಷೆಯ ಉಗಮವನ್ನು ಕುರಿತ ಇವರ ವಾದವನ್ನೂ ನೋಡಬಹುದು.

ಮಂಗಗಳ ಹಾಗೆಯೇ ಮಾನವನೂ ಆದಿಯಲ್ಲಿ ಹಿಂಡುಹಿಂಡಾಗಿ ವಾಸಿಸುತ್ತಿದ್ದುದರಿಂದ ಸಾಮೂಹಿಕ ಕಾರ್ಯಾಚರಣೆಯನ್ನು ಆತ ರೂಢಿಸಿಕೊಂಡಿದ್ದ. ಈ ಸಮೂಹ ಬದುಕು ಮಾತನಾಡಿಕೊಳ್ಳಬೇಕಾದ ಅನಿವಾರ್ಯತೆಯನ್ನು ತಂದೊಡ್ಡಿತು. ಹೀಗಾಗಿ ಭಾಷೆಯ ಸೃಷ್ಟಿಯಾಯಿತು. ಅಂದರೆ ಇವರ ಪ್ರಕಾರ ಸಾಮೂಹಿಕ ದುಡಿಮೆಯೇ ಮಾತನಾಡುವ ಭಾಷೆಯ ಆವಿಷ್ಕಾರಕ್ಕೆ ಪ್ರಚೋದನೆ ನೀಡಿತು *(ಪುಟ 13)*. ಈ ವಾದವನ್ನೇ ಬೆಳೆಸುತ್ತಾ ಏಂಗಲ್ಸ್ ಇಂದ್ರಿಯಗಳು ಕೂಡ ದುಡಿಮೆಯಿಂದಲೇ ವಿಕಾಸಗೊಂಡವು ಎನ್ನುತ್ತಾರೆ. 'ಸ್ಪರ್ಶೇಂದ್ರಿಯವಂತೂ ಬೆಳೆದಿರುವುದು ಮನುಷ್ಯನ ಕೈಗಳ ವಿಕಾಸದೊಂದಿಗೆ ಮಾತ್ರ ಮತ್ತು ಅದು ದುಡಿಮೆಯ ಮುಖೇನವೇ ಪ್ರಾಪ್ತವಾದದ್ದು' *(ಪುಟ 15)*.

ಭಾಷೆಯ ಉಗಮದ ಬಗೆಗಾಗಲೀ, ಇಂದ್ರಿಯಗಳ ಕ್ರಿಯಾಶೀಲತೆಯ ಬಗೆಗಾಗಲೀ, ಮಾನವ ನಾಗರೀಕತೆಯ ವಿಕಾಸದ ಬಗೆಗಾಗಲೀ ಏಂಗಲ್ಸ್ ಮಂಡಿಸುವ ಈ ವಾದವು ಇವತ್ತಿನ ಜ್ಞಾನಲೋಕದ ಎದುರಿನಲ್ಲಿ ಎಷ್ಟರಮಟ್ಟಿಗೆ ಸತ್ಯವೆಂದು ಒಪ್ಪಿತವಾಗುತ್ತದೆ? ಎಂದು ಪ್ರಶ್ನಿಸುವುದಕ್ಕಿಂತ ಏಂಗಲ್ಸ್‌ರ ಈ ವಾದದ ಹಿಂದಿನ ಕಾಳಜಿ ಮತ್ತು ಆಶಯಗಳನ್ನು ಅರ್ಥ ಮಾಡಿಕೊಳ್ಳುವುದು ಹೆಚ್ಚು ಸರಿಯಾದದ್ದು ಎನಿಸುತ್ತದೆ. ಏಂಗಲ್ಸ್ ಇಲ್ಲಿ ದುಡಿಯುವ ವರ್ಗದ ಪರ ನಿಂತು ಮಾತನಾಡುತ್ತಿದ್ದಾರೆ. ಶ್ರಮ ಸಂಸ್ಕೃತಿಯನ್ನು ಎತ್ತಿಹಿಡಿಯುವ ಅದಮ್ಯ ಕಾಳಜಿ ಮತ್ತು ಉತ್ಸಾಹ ಈ ಬರವಣಿಗೆಯಲ್ಲಿದೆ - ಯಾವುದೇ ವೈಜ್ಞಾನಿಕ ಚರ್ಚೆ ಎಂದಿಗೂ ಅಂತಿಮವಲ್ಲ. ಹಾಗಾಗಿ ಏಂಗಲ್ಸ್‌ರ ವಾದದ ಎದುರಿಗೆ ಪ್ರತಿವಾದ ಮಂಡಿಸಲಿಕ್ಕೆ ನಾನಿಲ್ಲಿ ತೊಡಗುವುದಿಲ್ಲ. ಆ ಕಾಲಕ್ಕೆ ಡಾರ್ವಿನ್ನನ ವಿಕಾಸವಾದದ ಪ್ರಾಣಿಜನ್ಯ ಚಿಂತನೆಗಳ ಸಾರ್ವತ್ರಿಕ ಅನ್ವಯ ವಾದಕ್ಕೆ ಒಂದು ಬದಲಿ ವಾದವನ್ನು ಏಂಗಲ್ಸ್ ಈ ದುಡಿಮೆಯ ಸಿದ್ಧಾಂತದ ಮೂಲಕ ಹೂಡಿದರೆನ್ನುವುದೇ ಇಲ್ಲಿ ಒಂದು ವಿಶೇಷ. ಸಮಾಜವೆಂಬ ಪಿರಮಿಡ್ಡಿನ ತಳಭಾಗವಾದ ದುಡಿಯುವ ಜನರ ಏಳಿಗೆಗೊಂದು ಸೈದ್ಧಾಂತಿಕ ಬೆಂಬಲ ನೀಡಬೇಕೆಂಬ ಉತ್ಸಾಹ ಈ ಬರಹದ ಉದ್ದಕ್ಕೂ ಎದ್ದು ಕಾಣುತ್ತದೆ. ಹಾಗೇ ಏಂಗಲ್ಸ್‌ರ ದುಡಿಮೆಯ ಪಾತ್ರದ ಕುರಿತ ವಾದವನ್ನು ಯಾವುದೇ ಪ್ರತಿವಾದದಿಂದಲೂ ಸಾರಾಸಗಟಾಗಿ ತಳ್ಳಿ ಹಾಕಲಾಗುವುದಿಲ್ಲ ಎಂಬುದು ಕೂಡ ಸತ್ಯವೇ.

ತರ್ಕಬದ್ಧವಾಗಿ, ಸರಳವಾಗಿ, ಹಂತಹಂತವಾಗಿ ಒಂದೊಂದೇ ನಿದರ್ಶನಪೂರ್ವಕ ವಿವರಗಳ ಮೂಲಕ ಏಂಗಲ್ಸ್ ಚರ್ಚೆಯನ್ನು ತುಂಬಾ ಸರಳವಾದ ಮಾತುಗಳಲ್ಲಿ ಬೆಳೆಸುತ್ತಾ ಹೋಗಿದ್ದಾರೆ. ಮೊದಲಿಗೆ ದೇಹದ ಒಂದೊಂದು ಅಂಗ ಮತ್ತು ಅಂಗಾಂಗಗಳಿಂದ ಇಡೀ ದೇಹದ ಪರಿವರ್ತನೆಯನ್ನು ವಿವರಿಸುತ್ತಾರೆ. ಆನಂತರ ಮಿದುಳು - ಮನಸ್ಸು ಹೀಗೆ ದೇಹ ಮತ್ತು ಬುದ್ಧಿಗಳ ವಿಕಾಸದಲ್ಲಿ ದುಡಿಮೆಯು ನಿರ್ಣಾಯಕ ಪಾತ್ರ ವಹಿಸಿದೆ ಎನ್ನುತ್ತಾರೆ - ವಾನರತನದಿಂದ ಮಾನವಸ್ಥಿತಿಗೆ ಆಗಿರುವ ಪರಿವರ್ತನೆಯಲ್ಲಿ ದುಡಿಮೆಯ ಪಾತ್ರವನ್ನು ವಿವರಿಸುವಷ್ಟಕ್ಕೇ ನಿಲ್ಲದೆ

ಮುಂದುವರೆದು ಏಂಗಲ್ಸ್ ಸಾಂಸ್ಕೃತಿಕ ವಿಕಾಸ ಮತ್ತು ನಾಗರಿಕತೆಯ ಬೆಳವಣಿಗೆಗೂ ಇದನ್ನೇ ಅನ್ವಯಿಸುತ್ತಾರೆ. ಅಷ್ಟೇ ಅಲ್ಲ, ಹಾಗೇ ಮುಂದುವರಿದು ಮನುಷ್ಯ ಇವತ್ತು ಏನೆಲ್ಲ ಆಗಿದ್ದಾನೋ ಅದರಲ್ಲೆಲ್ಲ ದುಡಿಮೆಯ ಪಾತ್ರವೇ ಪ್ರಮುಖವಾದದ್ದು ಎನ್ನುವವರೆಗೂ ಹೋಗುತ್ತಾರೆ.

ಈ ವಾದಸರಣಿಯನ್ನು ಬೆಳೆಸುತ್ತ ಏಂಗಲ್ಸ್ 19ನೇ ಶತಮಾನದ ಸಮಾಜದಲ್ಲಿನ ಉತ್ಪಾದನ ವ್ಯವಸ್ಥೆಯಿಂದ ಉಂಟಾಗಿರುವ ಹಲವಾರು ನಾಗರಿಕ ವಿಕಾರಗಳ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತಾರೆ. ಈ ಮೂಲಕ ಜನರು ಮಾನವ ಸ್ಥಿತಿಯಿಂದ ಮತ್ತೆ ಮೃಗೀಯವಾಗುತ್ತಿದ್ದಾರೆ. ಹೀಗಾಗಿ ದುಡಿಮೆಯೇ ಇವರಲ್ಲಿ ವಿವೇಕವನ್ನು ಉಂಟುಮಾಡಬೇಕಾಗಿದೆ ಎನ್ನುತ್ತಾ ದುಡಿಮೆಗಾರರಿಂದಲೇ ಕ್ರಾಂತಿಯೂ ಆಗಬೇಕಾಗಿದೆ ಎಂಬ ನಿಲುವಿಗೂ ಏಂಗಲ್ಸ್ ತಲುಪುತ್ತಾರೆ.

ಈ ಪುಸ್ತಿಕೆಯ ಮೊದಲ ಭಾಗಕ್ಕೂ ಮತ್ತು ಕೊನೆಕೊನೆಯ ಭಾಗಕ್ಕೂ ಅಂತಹ ಸಾವಯವ ಸಂಬಂಧ ಇಲ್ಲ ಎಂದು ಮೇಲ್ನೋಟಕ್ಕೆ ಅನ್ನಿಸಿದರೂ ಇವತ್ತು ದುಡಿಮೆಯು ದುಡಿಸುವ ಮತ್ತು ದುಡಿಯುವ ಎಂದು ಎರಡು ಭಿನ್ನ ಕವಲುಗಳಾಗಿರುವುದರ ಹಿಂದಿನ ಸಂಬಂಧವನ್ನು ವಿವರಿಸುವ ಕಡೆಗೆ ಹೊರಳಿದ್ದಾರೆ. ಇಲ್ಲಿ ಮಾನವನ ಮೃಗೀಯತೆಗೆ ಅವನ ಹೊಸ ಆವಿಷ್ಕಾರಗಳು ದುಡಿಮೆಯ ಮೇಲೆ ಮಾಡಿರುವ ಧಾಳಿಯೇ ಕಾರಣ ಮತ್ತು ಮಾನವನ ಪ್ರಾಕೃತಿಕ ದಾಹ ಅವನನ್ನು ಪ್ರಕೃತಿಯ ಯಜಮಾನನನ್ನಾಗಿ ಮಾಡಿದೆ, ಅಲ್ಲದೆ ದುಡಿಮೆಯೆಂಬುದು ಕೆಲವರ ದಾಸ್ಯ ಮತ್ತು ಕೆಲವರ ಯಾಜಮಾನ್ಯದ ಸಾಧನವಾಗಿ ಪರಿಣಮಿಸಿದೆ. ಹೀಗಾಗಿ ಸಮಾಜದಲ್ಲಿ ಶೋಷಣೆಯೂ ವರ್ಗಭೇದವೂ ಉಂಟಾಗಿದೆ ಎಂಬ ವಿವರಗಳ ಕಡೆ ಹೊರಳಿದ್ದಾರೆ. ಏಂಗಲ್ಸ್ ಪ್ರಕಾರ ಇದೆಲ್ಲದರ ಆತ್ಯಂತಿಕ ಪರಿಣಾಮ ಕ್ರಾಂತಿ, ವರ್ಗರಾಹಿತ್ಯ ಸ್ಥಿತಿ ಮತ್ತು ವಿವೇಕಯುತ ಸಮಾನತೆ.

ಏಂಗಲ್ಸ್‌ರ ಪುಸ್ತಿಕೆಯಿಂದ ಎರಡು ಉದ್ಧರಣೆಗಳನ್ನಿಲ್ಲಿ ನೀಡಲೇಬೇಕು.

1. "ಬೇಸಾಯದ ಭೂಮಿಗಾಗಿ ಮೆಸಪಟೇಮಿಯ, ಗ್ರೀಸ್, ಏಷ್ಯಾಮೈನರ್ ಇತ್ಯಾದಿ ಪ್ರದೇಶಗಳಲ್ಲಿ ಕಾಡುಗಳನ್ನು ಕತ್ತರಿಸಿ ಹಾಕಿದ ಜನ ಹಾಗೆ ಮಾಡುವಾಗ ತಾವು ಆ ಪ್ರದೇಶಗಳಲ್ಲಿ ಜಲಶೇಖರಣಾ ಸ್ಥಳಗಳನ್ನು ನಿರ್ಮೂಲಗೊಳಿಸಿ ಅಲ್ಲಿ ಹತಾಶೆಗಳನ್ನು ಸೃಷ್ಟಿಸುತ್ತಿದ್ದೇವೆಂದು ಕನಸಿನಲ್ಲಿಯೂ ಎಣಿಸಿರಲಿಲ್ಲ. ಆಲ್ಪ್ಸ್ ಪರ್ವತ ಪ್ರದೇಶದ ಇಟಾಲಿಯನ್ನರು ಪರ್ವತದ ದಕ್ಷಿಣದ ಇಳಿಜಾರುಗಳಲ್ಲಿ ಬೆಳೆದಿದ್ದ ಪೀತದಾರು ವೃಕ್ಷಗಳನ್ನು ಸವರಿ ಹಾಕಿದಾಗ ಇದರಿಂದಾಗಿ ಪರ್ವತದ ನೀರಿನ ಚಿಲುಮೆಗಳು ವರ್ಷದ ಬಹುಕಾಲ ಬತ್ತಿಹೋಗುತ್ತವೆಂಬ ಕಲ್ಪನೆಯೇ ಅವರಿಗಿರಲಿಲ್ಲ. ಇದರಿಂದ ಸ್ಪಷ್ಟವಾಗುವ ಅಂಶವೆಂದರೆ ಒಬ್ಬ ಜಯಶಾಲಿಯು ವಿದೇಶವೊಂದರ ಜನರನ್ನಾಳುವಂತೆ ಪ್ರಕೃತಿಯನ್ನು ಆಳಲಾಗದು. ನಿಮ್ಮ ರಕ್ತ, ಮಾಂಸ, ಮಿದುಳು ಇವೆಲ್ಲ ಪ್ರಕೃತಿಯ ಭಾಗವೇ ಆಗಿದ್ದು, ನಮ್ಮ ಸರ್ವಸ್ವವೂ ಪ್ರಕೃತಿಯ ಮಡಿಲಿನಲ್ಲೇ ಇದೆ. "ಪ್ರಕೃತಿಯ ಮೇಲಿನ ನಮ್ಮೆಲ್ಲ ಹಕ್ಕು ಅದರ ನಿಯಮಗಳನ್ನು ತಿಳಿಯುವುದಕ್ಕೇ ಹೊರತು ತುಳಿಯುವುದಕ್ಕಲ್ಲ" *(ಪು. 26).*

2. "ಕೊಲಂಬಸನು ಅಮೆರಿಕಾವನ್ನು ಕಂಡುಹಿಡಿದಾಗ ಇಲ್ಲದಿದ್ದ ಗುಲಾಮೀ ವ್ಯಾಪಾರವನ್ನು ಆರಂಭಿಸಲು ಇವನು ಬುನಾದಿ ಹಾಕುತ್ತಿದ್ದಾನೆಂದು ಯಾರಿಗೆ ಗೊತ್ತಿತ್ತು? 17ನೇ ಶತಮಾನದಲ್ಲಿ ಆದ ಹಬೆಯಂತ್ರದ ಆವಿಷ್ಕಾರದಿಂದ ಸಂಪತ್ತೆಲ್ಲ ಕೆಲವೇ ಜನರಲ್ಲಿ ಕೇಂದ್ರೀಕೃತವಾಗಿ ಬಹು ಸಂಖ್ಯಾತರು ನಿರ್ಗತಿಕರಾಗುತ್ತಾರೆಂದು ಯಾರು ತಾನೆ ಕನಸು ಕಂಡಿದ್ದರು? .....ಪ್ರತಿಯೊಂದು ಉನ್ನತ ಮಟ್ಟದ ಉತ್ಪಾದನಾ ವಿಧಾನವೂ ಜನಸಮುದಾಯವನ್ನು ವರ್ಗಗಳನ್ನಾಗಿ ವಿಭಜಿಸಿ ಆಳುವ ವರ್ಗ ಮತ್ತು ಶೋಷಿತ ವರ್ಗಗಳ ನಡುವೆ ವಿರೋಧ ಏರ್ಪಡುವಂತೆ ಮಾಡಿವೆ. ....ಇಂದಿನ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಕ್ರಾಂತಿಯುಂಟಾಗಬೇಕಾಗಿದೆ" *(ಪು. 27-29-32).*

ಪ್ರಕೃತಿಯ ಮೇಲಿನ ಯಾಜಮಾನೀಯ ದಾಳಿ ಮತ್ತು ಉತ್ಪಾದನಾ ಮೂಲದ ಬಂಡವಾಳ ಶಾಹಿ ಶೋಷಣೆ ಈ ಎರಡೂ ತೆರನ ಮಾನವ ಅವಿವೇಕಗಳನ್ನು ಒಟ್ಟಿಗೇ ಮುಖಾಮುಖಿ ಯಾಗಿಸುತ್ತ ಏಂಗಲ್ಸ್ ಇಲ್ಲಿ ಪರಿಸರದ ಎಚ್ಚರದ ಬಳಕೆ ಮತ್ತು ವರ್ಗರಾಹಿತ್ಯ ಸ್ಥಿತಿಯ ಕಾಯ್ದುಕೊಳ್ಳುವಿಕೆ ಎರಡನ್ನೂ ಆಗುಮಾಡಬೇಕಾದ ಅನಿವಾರ್ಯತೆಯನ್ನು ವಿವರಿಸಿದ್ದಾರೆ. ಪ್ರಕೃತಿಯ ನಿಯಮಗಳ ಬಗೆಗಿನ ಮಾನವನ ತಿಳುವಳಿಕೆಯಾಗಲೀ ಅಥವಾ ಯಾವುದೇ ಹೊಸ ಆವಿಷ್ಕಾರವಾಗಲೀ ಅವು ಮಾನವನ ಕಲ್ಯಾಣಕ್ಕೆ ಬಳಕೆಯಾಗಬೇಕೇ ವಿನಾ ಮೇಲುಕೀಳು ಸೃಷ್ಟಿಸುವುದಕ್ಕಲ್ಲ. ಆದರೆ ಇಂದು ಆಗುತ್ತಿರುವುದು ಮಾತ್ರ ಹೀಗೆಯೇ. ವರ್ಗರಾಹಿತ್ಯವೆಂಬುದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೂ ಕನಸೇ ಆಗಿದೆ. ದುಡಿಯುವ ವರ್ಗವು ಬೂರ್ಶ್ವಾಗಳ ಶೋಷಣೆಗೆ ಸಿಕ್ಕಿ ನರಳುತ್ತಿದ್ದ ಕಾಲಕ್ಕೆ ರಚಿತವಾದ ಈ ಪುಸ್ತಕದ ಒಟ್ಟಾರೆ ಆಶಯವು ದುಡಿಮೆಯ/ಶ್ರಮದ ಪ್ರಾಮುಖ್ಯವನ್ನು ತಿಳಿಸುವುದಾಗಿದೆ. ದುಡಿಮೆಗೆ ಒಂದು ಗೌರವವನ್ನು ದೊರಕಿಸಿ ಕೊಡುವುದಾಗಿದೆ.

ಶ್ರಮ ಮೂಲವಾದ ಬೆವರ ವಾಸನೆಯನ್ನೇ ಅಸಹ್ಯಕರವೆಂದು ತಮ್ಮ ಜಾಹಿರಾತುಗಳ ಮೂಲಕ ಬೊಬ್ಬೆ ಹಾಕುತ್ತ ಡಿಯೋಡರಂಟುಗಳನ್ನು ಮಾರುವ ಜನರ ಈ ಸಂತೆಯಲ್ಲಿ ಏಂಗಲ್ಸ್‌ರ ಈ ದುಡಿಮೆಯ ಕುರಿತ ಹೊತ್ತಿಗೆಯು ಎಂದಿಗಿಂತಾ ಇಂದು ಹೆಚ್ಚು ಪ್ರಸ್ತುತವಾಗಿದೆ.

* * *

ಕೂಲಿಗೆಲಸ ಮತ್ತು ಬಂಡವಾಳ

(ಮೂಲ: ಕಾರ್ಲ್ ಮಾರ್ಕ್ಸ್)

ಡಾ. ಜಿ.ಆರ್. ಇದನ್ನು ಬಹು ಸಮರ್ಪಕವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಇಡೀ ಪುಸ್ತಿಕೆಯ ಅನುವಾದಿತ ಭಾಷೆಯು ಸರಳವಾಗಿಯೂ, ತರ್ಕಬದ್ಧವಾಗಿಯೂ, ಕಥನಾತ್ಮಕ ವಾಗಿಯೂ ಇದೆ. ಒಟ್ಟಾರೆಯಾಗಿ ಅನುವಾದವು ಮಾರ್ಕ್ಸ್‌ರವರ ಐಡಿಯಾಲಜಿಯನ್ನು ಸ್ಫುಟವಾಗಿ ಓದುಗರಿಗೆ ತೆರೆದಿಡುತ್ತದೆ. ಜಿ.ಆರ್. ಹಲವಾರು ಕಡೆ ನೀಡಿರುವ ಟಿಪ್ಪಣಿಗಳು ಮತ್ತು ವಿವರಣೆಗಳು ಮಾರ್ಕ್ಸ್‌ರ ಪ್ರತಿಪಾದನೆಯನ್ನು ಅರ್ಥಮಾಡಿಕೊಳ್ಳಲು ಪೂರಕ ಸಾಮಗ್ರಿಯಾಗಿ ಕೆಲಸ ಮಾಡಿವೆ. ಹೀಗಾಗಿ ಅನುವಾದವೆಂಬುದು ಇಲ್ಲಿ ಸುಲಲಿತ ಓದಿಗೆ ತೆರೆದುಕೊಳ್ಳುವ

ಒಂದು ಕ್ರಿಯೆಯಾಗಿದೆ. ಇಲ್ಲಿ ಅನುವಾದದ ಬಗ್ಗೆ ಏನನ್ನೂ ಹೇಳಬೇಕಿಲ್ಲ, ಎಲ್ಲವನ್ನೂ ಅದೇ ಹೇಳುತ್ತದೆ.

ಅನುವಾದದ ಸ್ವರೂಪವನ್ನು ಕುರಿತು ವಿಮರ್ಶಿಸುವುದಾಗಲೀ ಅಥವಾ ಮಾರ್ಕ್ಸ್‌ರ ರಾಜಕೀಯ ಅರ್ಥಶಾಸ್ತ್ರದ ಚಿಂತನೆಗಳನ್ನು ವಿಮರ್ಶಾತ್ಮಕವಾಗಿ ನೋಡುವುದಾಗಲೀ ಈ ಲೇಖನದ ಉದ್ದೇಶವಲ್ಲ. ಬದಲಿಗೆ ಈ ಪುಸ್ತಿಕೆಯಲ್ಲಿನ ಮಾರ್ಕ್ಸ್‌ರ ವಿಚಾರಧಾರೆಗಳನ್ನು ನಾನು ಅರ್ಥಮಾಡಿಕೊಂಡಿರುವ ಬಗೆಯನ್ನು ಸಂಕ್ಷಿಪ್ತವಾಗಿ ವಿವರಿಸುವುದೇ ಇಲ್ಲಿನ ಉದ್ದೇಶ. ಇದು ಪ್ರಕಟವಾದ ಕಾಲದ ಸ್ಥಿತಿಗೂ ಇವತ್ತಿನ ಆರ್ಥಿಕ ಚಿಂತನೆಗಳಲ್ಲಾಗಿರುವ ಬೆಳವಣಿಗೆಗೂ ಸಾಕಷ್ಟು ವ್ಯತ್ಯಾಸವಿದೆ. ಆದರೂ ಮಾರ್ಕ್ಸ್ ಈ ಕೃತಿಯಲ್ಲಿ ಪ್ರತಿಪಾದಿಸಿರುವ ಕೆಲ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ. ಮಾರ್ಕ್ಸ್ (ಮತ್ತು ಏಂಗಲ್ಸ್ ಪ್ರಸ್ತಾವನೆಯಲ್ಲಿ) ಹೇಳಿಕೊಂಡಿರುವಂತೆ ರಾಜಕೀಯ ಅರ್ಥಶಾಸ್ತ್ರದ ತಿಳುವಳಿಕೆಯನ್ನು ಸರಳವಾಗಿ ಕಾರ್ಮಿಕ ಬಂಧುಗಳಲ್ಲಿ ಮೂಡಿಸುವುದೇ ಈ (ಉಪನ್ಯಾಸಗಳ) ಪುಸ್ತಿಕೆಯ ಉದ್ದೇಶವಾಗಿದೆ.

ಕಾರ್ಮಿಕ ವರ್ಗವು ತಮ್ಮ ಸಂಘಟಿತ ವರ್ಗ ಬದುಕನ್ನು ರೂಪಿಸಿಕೊಳ್ಳಲಿಕ್ಕಾಗಿ ಮೊದಲಿಗೆ ತಮ್ಮ ಇರುಸ್ಥಿತಿಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವ ಅಗತ್ಯವಿದೆ ಎಂದು ಹೇಳುವ ಮಾರ್ಕ್ಸ್ ಈ ಪುಸ್ತಿಕೆಯಲ್ಲಿ ಅಧಿಕಾರ ಮತ್ತು ದಾಸ್ಯತ್ವಗಳ ನಡುವಿನ ಆರ್ಥಿಕ ಸಂಬಂಧಗಳನ್ನು ವಿವರಿಸಲು ಯತ್ನಿಸಿದ್ದಾರೆ. ಇವರ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ ಮತ್ತು ದಾಸ್ ಕ್ಯಾಪಿಟಲ್‌ಗಳಲ್ಲಿ ಪ್ರತಿಪಾದಿತವಾಗಿರುವ ಮಿಗುತಾಯ ಮೌಲ್ಯ, ಕಾರ್ಮಿಕ ಧ್ರುವೀಕರಣ, ವಿಶ್ವದೆಲ್ಲ ದುಡಿಮೆಗಾರರೂ ಒಂದೇ ಎಂಬ ಭಾವ, ವರ್ಗ ಹೋರಾಟದ ಸೈದ್ಧಾಂತಿಕತೆ, ಕ್ರಾಂತಿ ಅಥವಾ ವರ್ಗರಾಹಿತ್ಯ ಸ್ಥಿತಿಯ ನಿರ್ಮಾಣ, ದ್ವಂದ್ವಾತ್ಮಕ ಭೌತವಾದದ ಕಲ್ಪನೆ ಮತ್ತಿದರ ಐತಿಹಾಸಿಕ ಅನ್ವಯ ಈ ಎಲ್ಲದರ ಬೀಜರೂಪಗಳನ್ನು ಈ ಕೂಲಿಗೆಲಸ ಮತ್ತು ಬಂಡವಾಳ ಕಿರುಕೃತಿ ಯಲ್ಲಿ ಕಾಣಬಹುದು.

ಬಂಡವಾಳಶಾಹಿ ಮತ್ತು ದುಡಿಯುವ ವರ್ಗಗಳ ನಡುವೆ ಇರುವ ಅಸಮಾನತೆಯು ಅಳಿದು, ವರ್ಗವ್ಯತ್ಯಾಸಗಳೇ ಇಲ್ಲದ ಸಮಾನ ಸಾಮಾಜಿಕ ವ್ಯವಸ್ಥೆಯೊಂದು ಸಹಜವಾಗಿ ಉಂಟಾಗುತ್ತದೆ ಎಂಬ ಭ್ರಮೆ ಈ ಬರವಣಿಗೆಯಲ್ಲಿ ಇಲ್ಲ. ಇಲ್ಲಿ ಅಸಮಾನತೆಯ ಕಾರಣಗಳು ಮತ್ತು ಪರಿಹಾರೋಪಾಯಗಳನ್ನು ಸರಳವಾಗಿ ಸಾಮಾನ್ಯ ಕೆಲಸಗಾರರಿಗೂ ಅರ್ಥವಾಗುವಂತೆ ವಿವರಿಸಲಾಗಿದೆ. ಕಾರ್ಮಿಕ ವರ್ಗವು ಸ್ವಯಂ ಸಂಘಟಿತವಾಗಿ ಕ್ರಾಂತಿಯನ್ನು ಆಗುಮಾಡಲು ಕ್ರಿಯಾಶೀಲರಾಗುವಂತಹ ಪ್ರಜ್ಞೆಯನ್ನು ಪ್ರಚೋದಿಸುವ ಕೆಲಸವು ಈ ಬರಹದಲ್ಲಿ ಅಂತರ್ಗತವಾಗಿದೆ. ಕ್ರಾಂತಿಯೆಂಬುದು ದಿಢೀರ್ ಘಟಿಸುವ ಘಟನೆಯಲ್ಲ, ಅದೊಂದು - ಸಮರ್ಪಕ ಪೂರ್ವಸಿದ್ಧತೆಯೊಂದಿಗೆ, ಸಂಘಟಿತ ಸಮುದಾಯದ ಸಹಭಾಗಿತ್ವದೊಂದಿಗೆ ಸಾಧ್ಯವಾಗುವ ಒಂದು ಕ್ರಿಯೆ ಎಂಬ ಸ್ಪಷ್ಟ ಸೂಚನೆಗಳು ಈ ಬರಹದಲ್ಲಿವೆ. ಈ ಪುಸ್ತಿಕೆಗೆ ಬರೆದಿರುವ ಪ್ರಸ್ತಾವನೆಯ ಕೊನೆಯಲ್ಲಿ ಏಂಗೆಲ್ಸರೇ 'ನವಸಮಾಜ ಸೃಷ್ಟಿಯ ಕರ್ತೃಗಳಾಗಿ ಜನರೇ ಕ್ರಾಂತಿಯನ್ನು ಆಗುಮಾಡುತ್ತಾರೆ' ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಡೇವಿಡ್ ರಿಕಾರ್ಡೋ, ಆಡಂ ಸ್ಮಿತ್ ಇತ್ಯಾದಿ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರ ಆರ್ಥಿಕ ಸಮೀಕರಣಗಳನ್ನು ಈ ಕೃತಿಯಲ್ಲಿ ಲಘುವಾಗಿ ಗೇಲಿ ಮಾಡಲಾಗಿದೆ. ಕಾರ್ಮಿಕ ವರ್ಗಪರ ಕಾಳಜಿಯು ಇಲ್ಲಿನ ಮಾರ್ಕ್ಸ್‌ರ ಎಲ್ಲ ವ್ಯಾಖ್ಯಾನಗಳಲ್ಲಿ ಹಾಸುಹೊಕ್ಕಾಗಿದೆ. ಮಾರ್ಕ್ಸ್‌ರ ಪ್ರಕಾರ ಕೆಲಸಗಾರನ ಜೀವನ ಪೂರೈಸಲು ತಗಲುವ ವೆಚ್ಚ, ಅವನನ್ನು ಕೆಲಸಗಾರನನ್ನಾಗಿ ಬೆಳೆಸಲು ತಗಲುವ ವೆಚ್ಚ ಮತ್ತು ದುಡಿಮೆಗಾರನ ಸಂತತಿ ವೃದ್ಧಿ / ಪೋಷಣೆಗೆ ತಗಲುವ ವೆಚ್ಚಗಳ ಒಟ್ಟು ಮೊತ್ತವೇ ದುಡಿಮೆಯ ಶಕ್ತಿಯ ಉತ್ಪಾದನಾ ವೆಚ್ಚ ಅಥವಾ ಕೂಲಿ ಆಗಿರಬೇಕು. ಆದರೆ ಬಂಡವಾಳಿಗನು ಕೂಲಿಯನ್ನು ಈ ವಿಶಾಲ ನೆಲೆಯಲ್ಲಿ ನಿರ್ಧರಿಸುವುದಿಲ್ಲ. ಅವನು ತನ್ನ ಲಾಭ ಸಂಪಾದನೆಯ ದೃಷ್ಟಿಯಿಂದ ಕೂಲಿಯನ್ನು ನಿಗದಿ ಮಾಡುತ್ತಾನೆ. ಕೂಲಿ ಕಾರ್ಮಿಕ ನಾದರೂ ತನ್ನ ಜೀವನ ನಿರ್ವಹಣೆಗಾಗಿ ದುಡಿಯುತ್ತ ಬಂಡವಾಳ ವೃದ್ಧಿಯನ್ನು ಮಾಡುತ್ತಲೇ ಹೋಗುತ್ತಾನೆ.

ಬಂಡವಾಳವು ವೃದ್ಧಿಯಾದಂತೆಲ್ಲ ಉತ್ಪಾದನಾ ಸಮರ, ಮಾರಾಟ ಸಮರಗಳು ತೀವ್ರ ವಾಗುತ್ತವೆ. ಇದರಿಂದ ಬಂಡವಾಳಿಗರಲ್ಲಿ ಉತ್ಪಾದನೆಯನ್ನು ಎಷ್ಟು ಅಗ್ಗವಾಗಿ ಮಾಡಲು ಸಾಧ್ಯವೋ ಅಷ್ಟು ಅಗ್ಗವಾಗಿಸಲು ಆಸೆ ಹುಟ್ಟುತ್ತದೆ. ಇದರ ಪರಿಣಾಮವಾಗಿ ಇನ್ನಷ್ಟು ಹೊಸ ಯಂತ್ರೋಪಕರಣಗಳ ಬಳಕೆ ಮತ್ತು ಭಾರೀ ಪ್ರಮಾಣದ ಉತ್ಪಾದನೆಗಳಿಗೆ ಇವರು ಕೈ ಹಾಕುತ್ತಾರೆ. ಇದರಿಂದಾಗಿ ಆತ್ಯಂತಿಕವಾಗಿ ಹೊಡೆತ ಬೀಳುವುದು ಕಾರ್ಮಿಕರಿಗೇ. ಯಂತ್ರ ಬಳಕೆ ಮತ್ತು ದುಡಿಮೆಯ ವಿಭಜನೆಯಿಂದಾಗಿ, ಕಾರ್ಮಿಕರಲ್ಲೂ ತಮ್ಮ ದುಡಿಮೆಯನ್ನು ಅಗ್ಗದ ಬೆಲೆಗೆ ಮಾರಿಕೊಳ್ಳುವ ಪೈಪೋಟಿ ಹತ್ತುತ್ತದೆ. ಅಸಂಖ್ಯಾತ ಕಾರ್ಮಿಕರು ನಿರುದ್ಯೋಗಿ ಗಳೂ ನಿರ್ಗತಿಕರೂ ಆಗುತ್ತಾರೆ. ಯಂತ್ರಗಳಿಂದ, ಭಾರೀ ಉದ್ಯಮಗಳಿಂದ ನಿರುದ್ಯೋಗವಷ್ಟೇ ಅಲ್ಲ ಅನೇಕ ಸಣ್ಣ ಉದ್ಯಮದಾರರೂ ಬೀದಿಗೆ ಬೀಳುತ್ತಾರೆ. ಇವತ್ತು ಯಂತ್ರ ಬಳಕೆ ಮತ್ತು ಭಾರಿ ಉದ್ಯಮಗಳಿಂದ ಉಂಟಾಗುತ್ತಿರುವ ಸಂಕಷ್ಟಗಳ ಒಂದು ಮುನ್ನೋಟವನ್ನು ಮಾರ್ಕ್ಸ್ ಅಂದೇ ನೀಡಿದ್ದಾರೆ. ಇದರಿಂದ ಸಮಾಜದಲ್ಲಿ ವರ್ಗಭೇದವು ಇನ್ನಷ್ಟು ವಿಸ್ತಾರಗೊಂಡು ಕೂಲಿಕಾರ್ಮಿಕರು ಮತ್ತು ಮಾಲೀಕರೆಂಬ ಎರಡು ವರ್ಗಗಳಿಗೆ ವಿಶ್ವವು ದೃಢೀಕರಣವಾಗು ತ್ತದೆಂದು ಮಾರ್ಕ್ಸ್ ಊಹಿಸುತ್ತಾರೆ.

"ದುಡಿಮೆಯು ಎಷ್ಟು ಸರಳವಾಗಿರುತ್ತದೋ ಮತ್ತು ಅದನ್ನು ಎಷ್ಟು ಸುಲಭವಾಗಿ ಕಲಿತುಕೊಳ್ಳಬಹುದೋ ಅಷ್ಟೂ ಅದರಲ್ಲಿ ನೈಪುಣ್ಯ ಪಡೆಯಲು ತಗಲುವ ಖರ್ಚು ಕಡಿಮೆಯಾಗಿರುತ್ತದೆ ಮತ್ತು ಅಷ್ಟರಮಟ್ಟಿಗೆ ಕೂಲಿಯೂ ಇಳಿಮುಖವಾಗುತ್ತದೆ" (ಪುಟ 75) ಇಂಥಲ್ಲಿ ಕಾರ್ಮಿಕನು ದುಡಿಯುವ ವರ್ಗದ ಪ್ರತಿನಿಧಿಯಾಗಿ ತನ್ನವರೊಂದಿಗಷ್ಟೇ ಅಲ್ಲದೆ 'ತನ್ನ ವಿರುದ್ಧ ತಾನೇ ಪೈಪೋಟಿ ಹೂಡುತ್ತಾನೆ'. ದುರಂತವೆಂದರೆ ಇಲ್ಲಿ ಶ್ರಮಿಕರ ಅವಿರತ ಶ್ರಮದಿಂದ ಬಂಡವಾಳ ಹೆಚ್ಚಾದಂತೆಲ್ಲ ಕೂಲಿ ಕಡಿಮೆಯಾಗುತ್ತ ಹೋಗುತ್ತದೆ. ಬಂಡವಾಳದ ಹೂಡಿಕೆ ಹೆಚ್ಚಾದಂತೆಲ್ಲ ದುಡಿಮೆಯ ಶಕ್ತಿಯ ಬೆಲೆ (ಕೂಲಿ) ಕಡಿಮೆಯಾಗುತ್ತ ಹೋಗುವುದು ಶ್ರಮಿಕರ ಶೋಷಣೆಯಲ್ಲದೆ ಮತ್ತೇನು?

ಇಂತಹ ಪರಿಸ್ಥಿತಿಯಲ್ಲಿ ಯಂತ್ರಗಳಿಂದ ಕಾರ್ಮಿಕನ ಜ್ಞಾನ ವೃದ್ಧಿಯಾಗುವುದಕ್ಕಿಂತ ಹೆಚ್ಚಾಗಿ ಕುಶಲತೆಯ ನಾಶವೇ ಸಂಭವಿಸುತ್ತದೆ - "ಯಂತ್ರಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿ ಉದ್ಯೋಗದಲ್ಲಿರುವ ಕೆಲಸಗಾರರು ಅತ್ಯಂತ ಹೆಚ್ಚಿನ ತಾಂತ್ರಿಕತೆಯಿಂದ ಕೂಡಿದ ಯಂತ್ರಗಳೊಂದಿಗೆ ಕೆಲಸ ಮಾಡುವ ಅತ್ಯಂತ ಕಡಿಮೆ ತಾಂತ್ರಿಕತೆಯಿಂದ ಕೂಡಿದ ಯಂತ್ರಗಳಂತೆ ನಡೆದುಕೊಳ್ಳುತ್ತಾರೆ." *(ಪು. 78)* ಆರ್ಥಿಕ ಸಂಬಂಧಗಳ ಮೂಲಕ ಸಾಮಾಜಿಕ ಸಂಬಂಧಗಳನ್ನು ವಿವರಿಸುವ ಮಾರ್ಕ್ಸ್ ಇದನ್ನೇ ಇತಿಹಾಸಕ್ಕೂ ಅನ್ವಯಿಸುತ್ತಾರೆ. ಉತ್ಪಾದನಾ ಸಾಧನಗಳಲ್ಲಾಗುವ ಬದಲಾವಣೆಯು ಮಾನವನ ಸಾಮಾಜಿಕ ಸಂಬಂಧಗಳಲ್ಲೂ ಬದಲಾವಣೆಯನ್ನು ತರುತ್ತದೆ ಮತ್ತು ಮಾನವ ನಡಾವಳಿಯ ಮೇಲೂ ಅಗಾಧ ಪರಿಣಾಮ ಬೀರುತ್ತದೆ. ಮಾನವ ಜನಾಂಗದ ಭಿನ್ನ ಕಾಲಘಟ್ಟಗಳಲ್ಲಿ ಸಾಮಾಜಿಕ ಸಂಬಂಧಗಳಲ್ಲಿ ಬದಲಾವಣೆಗಳು ಉಂಟಾಗಿರುವುದೇ ಉತ್ಪಾದನಾ ಸಾಧನಗಳ ಬದಲಾವಣೆಯಿಂದಾಗಿ. "ಈ ಉತ್ಪಾದನಾ ಸಂಬಂಧಗಳ ಸಮಗ್ರ ಅವಲೋಕನದಿಂದಲೇ ನಾವು ಪ್ರಾಚೀನ ಸಮಾಜ, ಊಳಿಗಮಾನ್ಯ ಸಮಾಜ, ಬಂಡವಾಳಶಾಹಿ ಸಮಾಜ ಎಂದು ಸಮಾಜದ ಘಟ್ಟಗಳನ್ನು ಪ್ರತ್ಯೇಕಿಸುತ್ತೇವೆ" *(ಪು. 46)*. ಹೀಗಾಗಿ ಬಂಡವಾಳ ಕೂಡ ಒಂದು ಸಾಮಾಜಿಕ ಸಂಬಂಧ ನಿರ್ಧಾರಣೆಯ ಸಾಧನವೇ ಆಗಿದೆ.

ಮಾರ್ಕ್ಸ್ ಕಾರ್ಮಿಕರ ಮತ್ತು ಬಂಡವಾಳಿಗರ ನಡುವಿನ ಕೂಲಿ-ಉತ್ಪಾದನಾ ಪೈಪೋಟಿಯನ್ನು ಯುದ್ಧ ಪರಿಭಾಷೆಯಲ್ಲಿ ವಿವರಿಸುತ್ತಾರೆ. "ಈ ಯುದ್ಧಗಳಲ್ಲಿ ವಿಜಯ ಪ್ರಾಪ್ತಿಯಾಗುವುದು ಹೆಚ್ಚು ಹೆಚ್ಚು ಜನಗಳನ್ನು ಸೈನ್ಯಕ್ಕೆ ಭರ್ತಿ ಮಾಡಿಕೊಳ್ಳುವುದರಿಂದಲ್ಲ. ಆದರೆ ದುಡಿಯುವವರ ಸೈನ್ಯದಿಂದ ಹೆಚ್ಚು ಹೆಚ್ಚು ಜನರನ್ನು ವಜಾ ಮಾಡುವುದರಿಂದ. ಸೇನಾಪತಿಗಳು (ಬಂಡವಳಿಗರು) ತಮ್ಮತಮ್ಮಲ್ಲೇ ಪೈಪೋಟಿ ನಡೆಸುವುದು ಯಾರು ಯಾರಿಗಿಂತಾ ಹೆಚ್ಚು ಕೈಗಾರಿಕಾ ಸೈನಿಕರನ್ನು (ಕಾರ್ಮಿಕರನ್ನು) ವಜಾ ಮಾಡಲು ಶಕ್ತರು ಎಂಬುದರ ಬಗೆಗೆ" *(ಪು. 76)*

ಸೈನ್ಯದಲ್ಲಿ-ಯುದ್ಧಗಳಲ್ಲಿ ಬಾಣದ ಬದಲಾಗಿ ಬಂದೂಕು-ಬಾಂಬುಗಳು ಬಂದಾಗ ಸೈನ್ಯ ವ್ಯವಸ್ಥೆ-ಯುದ್ಧ ತಂತ್ರಗಳಲ್ಲಿ ಬದಲಾವಣೆ ಆಗಲಿಲ್ಲವೇ ಹಾಗೆ ಬಂಡವಾಳದಲ್ಲಿ ಭಾರೀ ಯಂತ್ರಗಳು ಕಾಣಿಸಿಕೊಂಡಾಗಲೂ ಉತ್ಪಾದನಾ ಸಮರದಲ್ಲಿ ಹೊಸ ದುಸ್ಸಾಹಸಗಳು ತಲೆದೋರಿದವು. ಹೀಗೆ ಮಾರ್ಕ್ಸ್ ತಮ್ಮ ತತ್ವ ಸಮರ್ಥನೆಗೆ ವಸ್ತು ಸ್ಥಿತಿಯ ಉದಾಹರಣೆಗಳನ್ನು ಕೊಡುವ ಜೊತೆಜೊತೆಗೇ ರೂಪಕಾತ್ಮಕ ಮತ್ತು ತರ್ಕಮೀಮಾಂಸಕ ಮಂಡನೆಗಳನ್ನು ಬಳಸುತ್ತಾರೆ. ಯಂತ್ರನಾಗರಿಕತೆ ಅಂದು ಅನೇಕ ಕರಕುಶಲ ಉದ್ಯಮಗಳನ್ನು ನಾಶಮಾಡಿದ್ದನ್ನು ಸಾಂದರ್ಭಿಕವಾಗಿ ಪ್ರಸ್ತಾಪಿಸುತ್ತಾ ಮಾರ್ಕ್ಸ್ ಇದೆಲ್ಲದರ ಪರಿಣಾಮ ಶೋಷಣೆಯ ತಾಂಡವ ಎನ್ನುತ್ತಾರೆ. ಈ ಚರ್ಚೆಯನ್ನು ಮಾರ್ಕ್ಸ್ ಎಲ್ಲಿಯವರೆಗೆ ಕೊಂಡೊಯ್ಯುತ್ತಾರೆಂದರೆ, ವಿಶ್ವ ಮಾರುಕಟ್ಟೆಯೇ ಕ್ರಮೇಣ ಸಂಕುಚಿತಗೊಳ್ಳತೊಡಗಿ, ವಿಶ್ವವ್ಯಾಪಾರದ ಹಿಡಿತಕ್ಕೆ ಮಾರುಕಟ್ಟೆಯು ಕ್ರಮೇಣವಾಗಿ ವಶವಾಗುತ್ತದೆ ಎಂಬವರೆಗೂ ಕೊಂಡೊಯ್ಯುತ್ತಾರೆ.

ಮಾನವ ಶ್ರಮ ಕೂಡ ಮಾರಾಟದ ಸರಕಾರಿ ಮಾರ್ಪಾಡಾದಾಗ, ಮಾರುಕಟ್ಟೆ ನಿಯಮಗಳೇ

ಮನುಷ್ಯನನ್ನು ಆಳತೊಡಗುತ್ತವೆ. ಮಾನವೀಯತೆಗಿಂತ ಲಾಭಕೋರತನವೇ ಮುಖ್ಯವಾಗಿ, ಹಣವು ಸಾಂಸ್ಕೃತಿಕ ಮೌಲ್ಯಗಳನ್ನು ನಿರ್ಧರಿಸತೊಡಗುತ್ತದೆ. ಈ ಕಾರಣಕ್ಕಾಗಿಯೇ ಇಂದಿನ ಬಹುತೇಕ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳಲ್ಲಿ ಸಾಮಾಜಿಕ ನ್ಯಾಯ-ಸಮಾನತೆಗಳು ಕನ್ನಡಿಯ ಗಂಟಾಗುತ್ತಿವೆ. ಹೀಗಾಗಿ ಮುಕ್ತ ಮಾರುಕಟ್ಟೆ, ಖಾಸಗೀಕರಣ, ಉದಾರೀಕರಣಗಳೆಂಬ ಮಾರಿ ನಾಲಗೆಗಳುಳ್ಳ ಗೋಳೀಕರಣ (Globalisation)ದ ಪರಿಣಾಮಗಳನ್ನೇ ಮಾರ್ಕ್ಸ್ ಇಲ್ಲಿ ತಮ್ಮದೇ ಸಮಾಜವಾದಿ ಅರ್ಥಶಾಸ್ತ್ರದ ಮಾತುಗಳಲ್ಲಿ ಹೇಳುತ್ತಿದ್ದಾರೆ ಅನ್ನಿಸುತ್ತದೆ.

ಇದೆಲ್ಲದರ ಆತ್ಯಂತಿಕ ಉದ್ದೇಶವು ಕಾರ್ಮಿಕ ಜನರಲ್ಲಿ ವಸ್ತುಸ್ಥಿತಿಯ ಅರಿವು ಮೂಡಿಸಿ ಹೋರಾಟಕ್ಕೆ ಜಾಗೃತಗೊಳ್ಳುವಂತೆ ಪ್ರೇರೇಪಿಸುವುದೇ ಆಗಿದೆ. ಬಂಡವಳಿಗರ ಸರಳ ಸಮೀಕರಣಗಳನ್ನು ಸಮಾಜದಲ್ಲಿ ತಪ್ಪಿಸಿ ಜನಕಲ್ಯಾಣದೆಡೆಗೆ ಸಾಮಾಜಿಕ ಬದಲಾವಣೆಯನ್ನು ಕೊಂಡೊಯ್ಯುವ ಮತ್ತು ವರ್ಗಭೇದವನ್ನು ಅಳಿಸಿ ಸಮಾನತೆಯ ಕ್ರಾಂತಿಗೆ ಜನರನ್ನು ಅಣಿಗೊಳಿಸುವ ಉದ್ದೇಶ ಇಲ್ಲಿದೆ. ಈ ದೃಷ್ಟಿಯಿಂದ ಅಸಮಾನ ಸಾಮಾಜಿಕ ಸಂರಚನೆಗಳಿರುವಲ್ಲಿ ಮಾರ್ಕ್ಸ್ ಚಿಂತನೆಯ ಆಶಯ ಯಾವತ್ತಿಗೂ ಪ್ರಸ್ತುತ.

❑

ಯುಗಪುರುಷ ಲೆನಿನ್

ಅಶೋಕ ಕುಮಾರ ರಂಜೇರೆ

ರಷ್ಯಾದ ಮಹಾನ್ ಕ್ರಾಂತಿಯ ಹಿಂದಿನ ಬಹುಮುಖ್ಯ ಚೇತನ ಲೆನಿನ್. ಹಾಗಾಗಿ ಲೆನಿನ್ ಜೀವನ ವಿವರಿಸುವುದು ಎಂದರೆ ರಷ್ಯಾದ ಸಮಾಜ ವಾದದ ಕ್ರಾಂತಿಯ ಇತಿಹಾಸವನ್ನು ವಿವರಿಸುವುದೇ ಆಗಿದೆ. ಏಕೆಂದರೆ ರಷ್ಯಾದ ಈ ಕ್ರಾಂತಿಯನ್ನು ಲೆನಿನ್ ಜೀವನದಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಡಾ. ಜಿ.ಆರ್. ಅವರು ಈ ಕಿರುಹೊತ್ತಿಗೆಯಲ್ಲಿ ಲೆನಿನ್ ಜೀವನ ಚಿತ್ರಣ ನೀಡುವ ಮೂಲಕ, ರಷ್ಯಾದ ಈ ಕ್ರಾಂತಿಯ ಚರಿತ್ರೆ ಯನ್ನು ಮಕ್ಕಳಿಗಾಗಿ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಈ ಹೊತ್ತಿಗೆ ಕಿರಿಯರಿ ಗಾಗಿ ರಚನೆಗೊಂಡಿರುವುದರಿಂದ ಇದಕ್ಕೆ ತನ್ನದೇ ಆದ ಮಿತಿಗಳೂ ಇವೆ. ಆ ಮಿತಿಗಳನ್ನು ಬಲ್ಲ ಜಿ.ಆರ್. ಅವರು ರಷ್ಯಾದ ಚರಿತ್ರೆಯನ್ನು ಲೆನಿನ್ ಜೀವನ ಚಿತ್ರಣದ ಮೂಲಕ ಸರಳವಾಗಿ, ಸುಂದರವಾಗಿ ಮತ್ತು ಸಂಕ್ಷಿಪ್ತ ವಾಗಿ ಮಕ್ಕಳ ಮನದಲ್ಲಿ ನಾಟುವ ಹಾಗೆ ಚಿತ್ರಿಸಿದ್ದಾರೆ.

ಮಾರ್ಕ್ಸ್ ಮತ್ತು ಏಂಗಲ್ಸ್ ಅವರು ಸಮಾಜವಾದ ಚಳವಳಿಯ ಮೂಲ ಪುರುಷರಾದರೂ ಅದರ ಪ್ರಾಯೋಗಿಕ ನೇತಾರ ಲೆನಿನ್ ಎಂದೇ ಹೇಳಬೇಕಾಗುತ್ತದೆ. ಲೆನಿನ್ ಎಂಬುದು ಬರವಣಿಗೆಗಾಗಿ ಇಟ್ಟುಕೊಂಡ ಹೆಸರು. ಲೆನಿನ್‌ನ ನಿಜವಾದ ಹೆಸರು ವ್ಲಾಡಿಮಿರ್ ಇಲ್ಯಿಚ್ ಉಲ್ಯಾ ನೋವ್ ಎಂದು. ಈತ ಹುಟ್ಟಿದ್ದು 1870ರಲ್ಲಿ. ಅಂದರೆ ಗಾಂಧೀಜಿ ಅವರು ಹುಟ್ಟಿದ ಒಂದು ವರ್ಷಕ್ಕೆ. 1894ರವರೆಗೆ ವ್ಯವಸ್ಥೆಯಲ್ಲಿನ ಅಸಮಾನತೆಯನ್ನು ಕಳವಳಗೊಂಡು ಅದರ ವಿರುದ್ಧ ಬಂಡಾಯವೆದ್ದರೂ, ಕೆಲವು ಸಲ ಆ ಹಿನ್ನೆಲೆಯಲ್ಲಿ ಕಾರ್ಯಪ್ರವೃತ್ತನಾದರೂ ನೇರವಾಗಿ ಚಳವಳಿಯಲ್ಲಿ ತೊಡಗಿಸಿಕೊಂಡಿರಲಿಲ್ಲ.

ಸಮಾನತೆಯ ನವಸಮಾಜದ ಕನಸನ್ನು ತನ್ನ ತಂದೆಯಿಂದಲೇ ಲೆನಿನ್ ರೂಢಿಸಿಕೊಂಡಿದ್ದ. ಒಂದು ಪ್ರದೇಶದ ಶಾಲಾ ಅಧಿಕಾರಿಯಾಗಿದ್ದ ಲೆನಿನ್ ತಂದೆ ದೂರದ ಹಳ್ಳಿಗಳಲ್ಲೂ ಹೊಸಹೊಸ ಶಾಲೆಗಳನ್ನು ತೆರೆದು ರೈತರ ಕೂಲಿಕಾರ್ಮಿಕರ ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸುತ್ತಿದ್ದ. ತಕ್ಕಮಟ್ಟಿಗೆ ವಿದ್ಯಾವಂತನಾದ ಲೆನಿನ್ ಅಣ್ಣ ಈ ವ್ಯವಸ್ಥೆಯಲ್ಲಿ ಕಾರ್ಮಿಕರ, ರೈತರ ಮೇಲಿನ ಜಾರ್ ದೊರೆಗಳ ದಬ್ಬಾಳಿಕೆಯನ್ನು ಕಂಡು ರೋಸಿ ಹೋಗಿದ್ದ. ಒಂದು ದಿನ ಜಾರ್ ದೊರೆಯ ಕೊಲೆಗೆ ಯತ್ನಿಸಿದ ಕೆಲವು ಪ್ರಮುಖ ಆರೋಪಿಗಳಲ್ಲಿ ಈತನೂ ಒಬ್ಬ ಎಂದು ಆತನಿಗೆ ಮರಣದಂಡನೆ ವಿಧಿಸಲಾಯ್ತು. ಇದು ಲೆನಿನ್ ವಿದ್ಯಾಭ್ಯಾಸದ ಮೇಲೂ ಗಂಭೀರ ಪರಿಣಾಮ ಬೀರಿತು. ಈ ಎಲ್ಲ ಹಿನ್ನೆಲೆಯಲ್ಲಿ ವ್ಲಾಡಿಮಿರ್ ಇಲ್ಯಿಚ್ ಉಲ್ಯಾನೋವ್ (ಲೆನಿನ್)ನಲ್ಲಿ ಹೋರಾಟದ ಮನಸ್ಸು ಮತ್ತಷ್ಟು ಜಾಗ್ರತಗೊಂಡಿತು ಎನಿಸುತ್ತದೆ. ಅದು 1894ರಲ್ಲಿ ಲೆನಿನ್ ನೇರವಾಗಿ ತನ್ನನ್ನು ಸಮಾಜವಾದಿ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಕಾರಣವಾಯಿತು.

1894ರಲ್ಲಿ ದೇಶದ ಪರಿಸ್ಥಿತಿಯನ್ನು ಗಮನಿಸಿ "ರಾಷ್ಟ್ರದ ಜನತೆಗೆ ಇರುವುದೊಂದೇ ಮಾರ್ಗ - ಅದು ಬಹಿರಂಗವಾಗಿ ರಾಜಕೀಯ ಚಳವಳಿ. ಈ ನೇರವಾದ ಮಾರ್ಗದಿಂದ ಸಮಾಜವಾದಿ ಕ್ರಾಂತಿ ಸಫಲವಾಗುತ್ತದೆ" ಎನ್ನುವ ನಿಲುವಿನೊಂದಿಗೆ ಲೆನಿನ್ ತಾನೂ ಸಂಪೂರ್ಣವಾಗಿ ರಾಷ್ಟ್ರದ ರಾಜಕೀಯ ಚಳವಳಿಯನ್ನು ಪ್ರವೇಶಿಸಿದ. ಅಂದಿನಿಂದ 1917 ನವೆಂಬರ್ 7ರ ರಷ್ಯಾದ ಮಹಾನ್ ಕ್ರಾಂತಿಯವರೆಗೆ ಸುಮಾರು 23 ವರ್ಷಗಳ ಕಾಲ ವೈಯಕ್ತಿಕ ಮತ್ತು ಕೌಟುಂಬಿಕ ಹಿತಾಸಕ್ತಿಗಳನ್ನು ಬದಿಗಿರಿಸಿ ಸಮಾನತೆಯ ನವ ಸಮಾಜದ ಸೃಷ್ಟಿಗಾಗಿ ಹಗಲಿರುಳೂ ಶ್ರಮಿಸಿದ. ತನ್ನ ಕ್ರಾಂತಿಕಾರಿ ಕೆಲಸಗಳಿಂದ ಜೈಲುವಾಸ, ದೇಶದಿಂದ ಗಡಿಪಾರು ಶಿಕ್ಷೆ ಅನುಭವಿಸಬೇಕಾಯ್ತು. ರೈತರಲ್ಲಿ, ಕಾರ್ಮಿಕರಲ್ಲಿ ಜಾಗೃತಿ ಮೂಡಿಸಲು ಅನೇಕ ಸಂಘಟನೆಗಳನ್ನು ಹುಟ್ಟುಹಾಕಿದ. ರಾಜಕೀಯವಾಗಿ ಗಟ್ಟಿಗೊಳ್ಳಲು 'ಬೋಲ್ಶೆವಿಕ್' ಪಾರ್ಟಿಯನ್ನು ಕಟ್ಟಿದ. ಕೇವಲ ಚಳವಳಿಯಿಂದ ರೈತರ, ಕಾರ್ಮಿಕರ ಹೋರಾಟ ಯಶಸ್ವಿಯಾಗುವುದಿಲ್ಲವೆಂದು ಸುಸಜ್ಜಿತವಾದ "ಕೆಂಪು ಸೈನ್ಯ"ವೊಂದನ್ನು ರಚಿಸಿದ. 1905 ಮತ್ತು 1914ರಲ್ಲಿ ಪ್ರಮುಖವಾದ ಎರಡು ಆರಂಭಿಕ ಕ್ರಾಂತಿಗಳನ್ನು ಮಾಡುವಲ್ಲಿ ಯಶಸ್ವಿಯಾದ.

ರಷ್ಯಾದ ಮಹಾನ್ ಕ್ರಾಂತಿಯ ನೇತಾರನಾದ ಲೆನಿನ್ ಜಾರ್ ದೊರೆಗಳಿಂದ ಮತ್ತು ಆಡಳಿತದ ಚುಕ್ಕಾಣಿ ಹಿಡಿದ ಬಂಡವಾಳಶಾಹಿಗಳಿಂದ ಹಳಸಿಹೋಗಿದ್ದ ಅವರ ವ್ಯವಸ್ಥೆಯನ್ನು ಕ್ರಾಂತಿಯ ಮೂಲಕ ಕಿತ್ತೊಗೆದು ಸಮಾನತೆಯ ಹೊಸ ವ್ಯವಸ್ಥೆಯೊಂದನ್ನು ಪ್ರಾರಂಭಿಸಬೇಕಿತ್ತು. 1917 ನವೆಂಬರ್ 7ರಂದು ನಡೆದ ಕ್ರಾಂತಿಯ ಮೂಲಕ ಅದು ಕೈಗೂಡಿತು. ಆ ದಿನ ಜಗತ್ತಿನ ಇತಿಹಾಸದಲ್ಲಿ ಪ್ರಮುಖ ದಿನವಾಯ್ತು.

ಸಮಾಜವಾದಿ ಚಳವಳಿಗಾರರು ಕನಸು ಕಂಡ ನವ ಸಮಾಜದ 1917ರ ಮಹಾಕ್ರಾಂತಿಯ ನಂತರ ರೈತರು, ಕಾರ್ಮಿಕರೇ ಅಧಿಕಾರಕ್ಕೆ ಬಂದರು. ಆದರೂ ಸುತ್ತಮುತ್ತಲ ದೇಶಗಳ ದಾಳಿ, ಬಂಡವಾಳಶಾಹಿಗಳ ಹೋರಾಟದಿಂದ ದೇಶದಲ್ಲಿ ಹಸಿವು, ಖಾಯಿಲೆ, ದುರಾಕ್ರಮಣ ಮತ್ತು ಅಂತರ್ಯುದ್ಧವನ್ನು ಹೊಸ ಸರ್ಕಾರ ಎದುರಿಸಬೇಕಾಯ್ತು. ಇವೆಲ್ಲವನ್ನು ಎದುರಿಸಿ

ಸಮಾಜದ ಸಮಾನತೆಗಾಗಿ ರಚನಾತ್ಮಕ ಕೆಲಸಗಳಿಗೆ ಲೆನಿನ್ ಸರ್ಕಾರ ಮುಖ್ಯ ಗಮನ ನೀಡಿತು. ಅಂದರೆ ರಾಷ್ಟ್ರದ ಸರ್ವತೋಮುಖ ಬೆಳವಣಿಗೆ ಹಿನ್ನೆಲೆಯಲ್ಲಿ ಶಾಲೆಗಳ ವಿಸ್ತರಣೆ, ಅನಕ್ಷರತೆಯ ನಿರ್ಮೂಲನೆ, ಮಹಿಳೆಯರ ಸಮಸ್ಯೆಗಳ ಪರಿಹಾರ, ಕೃಷಿ ಕೈಗಾರಿಕೆಗಳ ಅಭಿವೃದ್ಧಿ, ಸಾಂಸ್ಕೃತಿಕ ಜೀವನದಲ್ಲಿ ಎಲ್ಲರಿಗೂ ಭಾಗವಹಿಸುವ ಅವಕಾಶ, ಹೀಗೆ ಹತ್ತು ಹಲವು ದಿಕ್ಕುಗಳಲ್ಲಿ ದೇಶದ ಬೆಳವಣಿಗೆಗೆ ಹೊಸ ಸರ್ಕಾರ ಅಥವಾ ಕನಸುಗಾರ ಲೆನಿನ್ ಸರ್ಕಾರ ಕಾರ್ಯನಿರತವಾಯ್ತು.

1922ರಲ್ಲಿ "ಸೋವಿಯತ್ ಸಮಾಜವಾದಿ ಗಣರಾಜ್ಯಗಳ ಒಕ್ಕೂಟ" ರಚನೆಯಾಯ್ತು. ಇದರಿಂದ ರಷ್ಯಾ ಕೂಡ ಸೋವಿಯತ್ ಒಕ್ಕೂಟದ ಭಾಗವಾಗಿ ಪ್ರವರ್ಧಮಾನಕ್ಕೆ ಬಂತು. ಜನರು ತಮ್ಮ ನೆಚ್ಚಿನ ನಾಯಕ ಲೆನಿನ್ ಮೇಲೆ ಇಟ್ಟ ನಂಬಿಕೆ ಪ್ರೀತಿ ಬಗ್ಗೆ ತಿಳಿಯಲು ಸಮಾಜ ವಾದಿ ಪಕ್ಷದ 12ನೇ ಅಧಿವೇಶನದಲ್ಲಿ ಲೆನಿನ್‌ಗೆ ಕಳುಹಿಸಿದ ಪತ್ರವೇ ಸಾಕ್ಷಿ. "ಪಕ್ಷ ಮತ್ತು ದುಡಿಯುವ ಜನತೆ ಮತ್ತು ಅತ್ಯಂತ ಹಾರ್ದಿಕವಾದ ಶುಭಾಶಯ ಮತ್ತು ಪ್ರೇಮವನ್ನು ನೆಚ್ಚಿನ ನಾಯಕ, ದುಡಿಯುವ ಜನತೆಯ ಚಿಂತನೆ ಮತ್ತು ಕ್ರಿಯಾಶಕ್ತಿಯ ಪ್ರತಿಭಾವಂತ ನಿರೂಪಕ ಇಲ್ಯಿಚ್ ಅವರಿಗೆ ಈ ಮೂಲಕ ಕಳಿಸುತ್ತಿದೆ.... ಹಿಂದೆಂದಿಗಿಂತಲೂ ಹೆಚ್ಚಾಗಿ ಈಗ ಪಕ್ಷವು ದುಡಿಯುವ ಜನರ ಬಗ್ಗೆ ಮತ್ತು ಇತಿಹಾಸದ ಬಗ್ಗೆ ತನಗಿರುವ ಜವಾಬ್ದಾರಿಯನ್ನು ಅರಿತುಕೊಂಡಿದೆ. ಹಿಂದೆಂದಿಗಿಂತಲೂ ಈಗ ಪಕ್ಷವು ತನ್ನ ಪತಾಕೆ ಮತ್ತು ನಾಯಕರ ಆಕಾಂಕ್ಷೆಗಳಿಗೆ ಸರಿದೂಗಲು ಯತ್ನಿಸುತ್ತದೆಂಬ ಭರವಸೆಯನ್ನು ನೀಡುತ್ತದೆ." ಎನ್ನುವ ಪತ್ರದ ಮಾತುಗಳು, ಪಕ್ಷ ಲೆನಿನ್ ಮೇಲೆ ಇಟ್ಟ ಗೌರವ ಮತ್ತು ನಂಬಿಕೆಯನ್ನು ಪ್ರತಿಬಿಂಬಿಸುತ್ತವೆ.

ಈ ನಾಡಿನ ಬಹುದೊಡ್ಡ ಚಿಂತಕರೂ ಆದ ಜಿ.ಆರ್. ಅವರು ಇಂಗ್ಲಿಷ್, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದಲ್ಲಿ ಉದ್ದಾಮ ಪಾಂಡಿತ್ಯ ಉಳ್ಳವರು. ಕಮ್ಯೂನಿಸಂ ಬಗ್ಗೆ ವಿಶೇಷ ಕಾಳಜಿ ಇರುವ ಜಿ.ಆರ್. ಅವರು ಆ ಹಿನ್ನೆಲೆಯ ಹೋರಾಟಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡವರು. ಅವರು ಲೆನಿನ್ ಬಗೆಗಿನ ವಿಚಾರಗಳನ್ನು ಕಿರು ಪುಸ್ತಕದಲ್ಲಿ ಖಚಿತವಾಗಿ ಮತ್ತು ಸರಳವಾಗಿ ಮಕ್ಕಳಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದೇ ಪುಸ್ತಕ ಕನ್ನಡ ಸಾಹಿತ್ಯ ಪರಿಷತ್ತಿನಲ್ಲೂ 'ಲೆನಿನ್' ಎನ್ನುವ ಹೆಸರಿನಲ್ಲಿ ಪ್ರಕಟವಾಗಿದೆ.

❑

ಭಗತ್‌ಸಿಂಗ್: ಒಂದು ವೈಚಾರಿಕ ವಿಶ್ಲೇಷಣೆ

ಡಾ. ಎಚ್.ಎಸ್. ಗೋಪಾಲರಾವ್

ಭಾರತದ ಸ್ವಾತಂತ್ರ್ಯ ಸಂಗ್ರಾಮ ಕುರಿತು ಮಾತು ನಡೆಯುವ ಯಾವುದೇ ಸಂದರ್ಭದಲ್ಲಿ, ಮರೆಯದೆ ನೆನಪಾಗುವ ಹೆಸರು ಭಗತ್ ಸಿಂಗ್‌ನದು. ಇಂದಿನ ವಿದ್ಯಾರ್ಥಿಗಳು ಸಾಮಾನ್ಯವಾಗಿ ತಿಳಿದಿರುವ ಪ್ರಕಾರ ಭಾರತಕ್ಕೆ ಸ್ವಾತಂತ್ರ್ಯ ಬರಲು ಮಹಾತ್ಮಾ ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟವೇ ಕಾರಣ. ಇದು ಹೆಚ್ಚು ಭಾಗ ನಿಜವಾದರೂ, ಅದರ ಜೊತೆಗೆ ಇನ್ನಿತರ ಮಾದರಿಗಳ ಹೋರಾಟವೂ ನಡೆದು, ಅವೆಲ್ಲವೂ ಸ್ವಾತಂತ್ರ್ಯ ಗಳಿಕೆಯಲ್ಲಿ ತಮ್ಮ ಪಾಲನ್ನು ನಿರ್ವಂಚನೆಯಿಂದ ನೀಡಿವೆ. ಭಾರತದ ಸ್ವಾತಂತ್ರ್ಯಕ್ಕೆ ನಡೆದ ಹೋರಾಟದಲ್ಲಿ ಕ್ರಾಂತಿಕಾರಿಗಳ ಪಾತ್ರವೂ ಇತ್ತು ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಹಾಗೇನಾದರೂ ಹೋರಾಟದ ಎಲ್ಲ ಮುಖಗಳನ್ನು ಅಧ್ಯಯನ ಮಾಡದಿದ್ದರೆ, ಅಂತಹ ಅಧ್ಯಯನ ಅಪೂರ್ಣವೂ, ಅಸಮರ್ಪಕವೂ ಆಗುತ್ತದೆ.

ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆದಾಗ ವಿಭಿನ್ನ ಮನೋಭಾವದ, ವಿಭಿನ್ನ ಸೈದ್ಧಾಂತಿಕ ಹಿನ್ನೆಲೆಯ ಹೋರಾಟಗಾರರು ಒಂದೇ ಗುರಿಗಾಗಿ ಹೋರಾಡಿದ್ದಾರೆ. ಎಷ್ಟೇ ವಿರೋಧಗಳಿದ್ದರೂ, ಯಾರೂ ಗುರಿಯಿಂದ ವಿಚಲಿತರಾಗಲಿಲ್ಲ. ಸ್ವಾತಂತ್ರ್ಯಾನಂತರ ಹೋರಾಟ ಗಾರರನ್ನು ಎಲ್ಲರೂ 'ಇವ ನಮ್ಮವ, ಇವ ನಮ್ಮವ' ಎಂದು ಅಪ್ಪಿ ಕೊಂಡರು; ಒಪ್ಪಿಕೊಂಡರು. ಹಾಡಿ ಹೊಗಳಿದರು. ಹಾಗೆ ಎಲ್ಲರ ಪ್ರೀತಿಗೆ ಪಾತ್ರನಾದ ಭಗತ್‌ಸಿಂಗ್ ಒಬ್ಬ ಕ್ರಾಂತಿಕಾರಿಯೇ ಆಗಿದ್ದ.

ಹೋರಾಟದ ಅಂತಿಮ ದಿನಗಳಲ್ಲಿ ಬ್ರಿಟಿಷ್ ಸರ್ಕಾರದ ಮಾತ್ರ ವಲ್ಲದೆ, ವಿಭಿನ್ನ ಸೈದ್ಧಾಂತಿಕ ನಿಲುವಿನ ಹೋರಾಟಗಾರರ ಸಹಕಾರವನ್ನೇ

ಪಡೆಯದ ಭಗತ್‌ಸಿಂಗ್‌ನಂತಹ ಕ್ರಾಂತಿಕಾರಿಗಳ ಬಗ್ಗೆ ಪಾರದರ್ಶಕವಾಗಿ ಬರೆಯುವುದು ಸುಲಭದ ಮಾತಲ್ಲ; ಕೇವಲ 'ಸತ್ಯಂ ಬ್ರೂಯಾತ್' ಎಂಬ ನಿಲುವಿನ ಬರಹಗಾರರಿಗೆ ಇದು ಮತ್ತೂ ಕಷ್ಟದ ಕೆಲಸ. ಕೇವಲ ಪ್ರಿಯವಾದ್ದನ್ನು ಅವರು ಹೇಳಲಾರರು. ಅಂತಹವರು ಅಪ್ರಿಯವಾದರೂ ಸತ್ಯವನ್ನೇ ಹೇಳುತ್ತಾರೆ. ಅಂತಹ ವರ್ಗಕ್ಕೆ ಸೇರಿದ ಕೆಲವೇ ಬರಹಗಾರರಲ್ಲಿ ಜಿ.ಆರ್. ಒಬ್ಬರು.

ಜಿ.ಆರ್. ಅವರ 'ಭಗತ್‌ಸಿಂಗ್'ನ ಐದನೆಯ ಮುದ್ರಣವಾದದ್ದು 1997ರಲ್ಲಿ. ಈಗ (2003) ಅದರ ಆರನೆಯ ಮುದ್ರಣ ಹೊರಬರಲಿದೆ. ಮಧ್ಯೆ 1994-95ರಲ್ಲಿ 'ಭಗತ್‌ಸಿಂಗ್' ಪುಸ್ತಕ ಬೆಂಗಳೂರು ವಿಶ್ವವಿದ್ಯಾಲಯದ ಮೊದಲ ಡಿಗ್ರಿ ತರಗತಿಗಳಿಗೆ ಪಠ್ಯವಾಗಿತ್ತು ಎಂದು ತಿಳಿದಿದೆ. ಆ ಸಂಬಂಧದ ಮುದ್ರಣವನ್ನು ಹೊರತುಪಡಿಸಿದರೂ, 'ಭಗತ್‌ಸಿಂಗ್' ಕೃತಿಯು ಇಷ್ಟೊಂದು ಮುದ್ರಣ ಕಾಣಲು ಓದುಗರು ಅದನ್ನು ಇಷ್ಟಪಡುತ್ತಿದ್ದಾರೆ ಎಂಬುದೇ ಬಹುಮುಖ್ಯ ಕಾರಣ. ಜಿ.ಆರ್. ಅವರ 'ಭಗತ್‌ಸಿಂಗ್' ಕೃತಿಯು ಜನಪ್ರಿಯ ಶೈಲಿಯ, ಸರಾಗವಾಗಿ ಓದಿಸಿ ಕೊಳ್ಳುವ ಕಾದಂಬರಿಯಲ್ಲ; ಆತ್ಮಕಥೆಯಲ್ಲ; ಜೀವನ ವೃತ್ತಾಂತವಲ್ಲ. ಆರಂಭದ ಕೆಲವು ಅಧ್ಯಾಯಗಳ ಭಾಷೆ ಸಲೀಸಾದ ಓದಿಗೆ ಅವಕಾಶ ನೀಡುವುದಿಲ್ಲ. ಆದರೆ, ಐದನೆಯ ಅಧ್ಯಾಯ ಆರಂಭ ಆಗುತ್ತಿದಂತೆಯೇ ತನ್ನಷ್ಟಕ್ಕೆ ತಾನೇ ಓದಿಸಿಕೊಳ್ಳುವ 'ಭಗತ್‌ಸಿಂಗ್' ಇಪ್ಪತ್ತನೆಯ ಶತಮಾನದ ಆರಂಭದ ಮೂರೂವರೆ ದಶಕಗಳು ಭಾರತದಲ್ಲಿ ಸೃಷ್ಟಿಸಿದ ಆತಂಕ, ಭಯ, ಗೊಂದಲ ಮತ್ತು ಇವುಗಳನ್ನು ಮೆಟ್ಟಿ ನಿಲ್ಲಲು ನಡೆಯುತ್ತಿದ್ದ ವಿಭಿನ್ನ ನೆಲೆಯ ಹೋರಾಟವನ್ನು ಸಮರ್ಥವಾಗಿ ದಾಖಲಿಸಿದೆ; ವೈಚಾರಿಕವಾಗಿ ವಿಶ್ಲೇಷಿಸಿದೆ.

ಭಗತ್‌ಸಿಂಗ್‌ನಂತಹ ವ್ಯಕ್ತಿಗಳ ಬಗ್ಗೆ ಬರೆಯುವಾಗ/ಮಾತನಾಡುವಾಗ ಅತಿ ರಂಜನೆಗೆ ಅವಕಾಶಗಳು ಹೆಚ್ಚು. ಕೇವಲ ನಿರೂಪಣಾ ಪ್ರಧಾನವಾಗುವ ಸಾಧ್ಯತೆಗಳೂ ಹೆಚ್ಚು. ಭಗತ್‌ಸಿಂಗ್‌ನ ಮೂಲಕ ಆಯಾ ಸ್ಥಳ ಮತ್ತು ಕಾಲ ಹಾಗೂ ಸನ್ನಿವೇಶಗಳ ಪರಿಚಯ ಮಾಡುವಾಗ, ಭಗತ್‌ಸಿಂಗ್ ಕೇವಲ ನೆಪವಾಗುತ್ತಾನೆ. ಇಡೀ ವಸ್ತು ಮತ್ತು ಘಟನೆಗಳು ಮುಖ್ಯವಾಗುತ್ತವೆ.

ಭಗತ್‌ಸಿಂಗ್‌ನ ಹುಟ್ಟಿನೊಂದಿಗೆ ಕೃತಿ ಆರಂಭವಾಗುವುದಿಲ್ಲ. ಬದಲಿಗೆ ಹನ್ನೆರಡು ವರ್ಷದ ಭಗತ್‌ಸಿಂಗ್‌ನ ಮನಸ್ಸಿನಲ್ಲಿ ಮಣ್ಣಿನ ಬಗ್ಗೆ ಹುಟ್ಟಿದ ಪ್ರೀತಿಯೇ ಕೃತಿಗೆ ಚಾಲನೆ ನೀಡಿದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಮರೆಯಲಾಗದ ಮತ್ತು ಮರೆಯಬಾರದ ಘಟನೆ ಜಲಿಯನ್‌ವಾಲಾಬಾಗ್‌ನದು. ಎರಡು ಸಾವಿರಕ್ಕೂ ಹೆಚ್ಚು ಜನ ಪಂಜಾಬ್‌ನ ಜಲಿಯನ್‌ವಾಲಾಬಾಗ್‌ನಲ್ಲಿ 13.4.1919ರಂದು, ವಾರ್ಷಿಕ ಸಂಭ್ರಮದ ಸುಗ್ಗಿಯ ವೈಶಾಖಿ ಯನ್ನು ಆಚರಿಸುತ್ತಿದ್ದಾಗ, ಭಾಷಣಕಾರ ಹಂಸರಾಜ್ ರೌಲಟ್ ವಿಧಾಯಕವನ್ನು ಅಮಾನತ್ತಿ ನಲ್ಲಿಡಬೇಕೆಂದು ತಿಳಿಸುತ್ತಿದ್ದಾಗ, ಸಂಜೆ 5.30ರ ವೇಳೆಗೆ, ಕೇವಲ ಹತ್ತು ನಿಮಿಷಗಳ ಅವಧಿಯಲ್ಲಿ ಜನರಲ್ ಡಯರ್‌ನ ಆಜ್ಞೆಯ ಮೇರೆಗೆ ಬ್ರಿಟಿಷ್ ಸೈನಿಕರು 1650 ಸುತ್ತು ಗುಂಡು ಹಾರಿಸಿ, 1516 ಜನ ಮುಗ್ಧ ಅಮಾಯಕ ಜನರನ್ನು ಕೊಂದರು. ಆ ಸಂಬಂಧ ವಿಚಾರಣೆ

ನಡೆಸಿದ ಹಂಟರ್ ಆಯೋಗದ ಎದುರು, ತನ್ನ ಸೈನಿಕರು ಹೊಡೆದ ಎಲ್ಲ ಗುಂಡುಗಳೂ ಸಾರ್ಥಕವಾದವು ಎಂದು ಡಯರ್ ತನ್ನ ಕಾರ್ಯವನ್ನು ಸಮರ್ಥಿಸಿಕೊಂಡ. ಹಂಟರ್ ಆಯೋಗ ಅವನನ್ನು ಆರೋಪಮುಕ್ತಗೊಳಿಸಿತು. ಇಂಗ್ಲೆಂಡ್‌ನ ಜನ ಡಯರ್‌ನನ್ನು ಅಭಿನಂದಿಸಿ, ಹಣದ ಕಾಣಿಕೆ ನೀಡಿದರು. ಭಾರತದ ಜನ ಡಯರ್‌ನ ಹೇಯ ಕೃತ್ಯವನ್ನು ವಿರೋಧಿಸಿದರು. ರವೀಂದ್ರನಾಥ ಟಾಗೋರ್ ತಮಗೆ ಬ್ರಿಟಿಷ್ ಸರ್ಕಾರ ನೀಡಿದ್ದ ಬಿರುದನ್ನು ಹಿಂದಿರುಗಿಸಿದರು. ಗಾಂಧೀಜಿಯೂ ತಮಗೆ ಬ್ರಿಟಿಷ್ ಸರ್ಕಾರ ನೀಡಿದ್ದ ಬಿರುದು ಬಾವಲಿಗಳನ್ನು ವೈಸ್‌ರಾಯ್‌ಗೆ ಹಿಂದಿರುಗಿಸಿ ಪ್ರತಿಭಟನೆ ಸಲ್ಲಿಸಿದರು. ಬ್ರಿಟಿಷರನ್ನು ಭಾರತದಿಂದ ಓಡಿಸಲು ಬಂದೂಕು ಹಿಡಿಯುವುದೇ ಸೂಕ್ತ ಎಂದು ಸುಭಾಷ್ ಚಂದ್ರ ಬೋಸ್ ಗುಡುಗಿದರು. ಕೆಲವು ಬ್ರಿಟಿಷ್ ಅಧಿಕಾರಿಗಳ ಕ್ರೌರ್ಯ ಮತ್ತು ದೌರ್ಜನ್ಯಗಳಿಂದ ಭಾರತೀಯರು ನೊಂದಿದ್ದರು; ಕೋಪಗೊಂಡಿದ್ದರು. ಅಂತಹ ಒಬ್ಬ ಭಾರತೀಯನೇ 'ಭಗತ್‌ಸಿಂಗ್'. ಕೃತಿಯ ಆರಂಭದಲ್ಲೇ ಇಂತಹ ಭಗತ್‌ಸಿಂಗ್‌ನ ಚಿತ್ರವನ್ನು ಕಟ್ಟಿಕೊಡುವಲ್ಲಿ ಜಿ.ಆರ್. ಯಶಸ್ವಿಯಾಗಿದ್ದಾರೆ.

ಜಲಿಯನ್‌ವಾಲಾಬಾಗ್‌ನಲ್ಲಿ ಗುಂಡಿನ ದಾಳಿ ನಡೆದಾಗ ಸತ್ತವರಲ್ಲಿ ಒಬ್ಬನ ಹೆಂಡತಿ ರತನ್‌ದೇವಿ. ಆಕೆ ಗಂಡನ ಶವದ ಜೊತೆ, ರಾಶಿ ರಾಶಿ ಶವಗಳ ನಡುವೆ ಕಳೆದ ರಾತ್ರಿಯ, ಊಹಿಸಲೇ ಸಾಧ್ಯವಾಗದ ಚಿತ್ರವನ್ನು ಜಿ.ಆರ್. ನಿರ್ಭಾವುಕರಾಗಿ ಎದುರಿಗಿಡುತ್ತಾರೆ. ಇದರಿಂದ ಓದುಗನ ಮೈ ಕೆಲ ಹೊತ್ತಾದರೂ ಬೆಚ್ಚಗಾಗುತ್ತದೆ. ಬ್ರಿಟಿಷರ ಪೈಶಾಚಿಕ ಎನ್ನಬಹುದಾದ ಕ್ರೌರ್ಯವನ್ನು ಜಿ.ಆರ್. ದಾಖಲಿಸಿದ್ದಾರೆ.

ಭಗತ್‌ಸಿಂಗ್‌ನ ಮನೆತನವೇ ರಾಷ್ಟ್ರಪ್ರೇಮಕ್ಕೆ ಹೆಸರಾದದ್ದು ಎಂಬ ವಾಸ್ತವ ಸತ್ಯವನ್ನು ಓದುಗರಿಗೆ ಜಿ.ಆರ್. ಪರಿಚಯಿಸಿದ್ದಾರೆ. ಕಾಂಗ್ರೆಸ್ ಸಂಸ್ಥೆಯೊಡನೆ ಸಂಪರ್ಕ ಹೊಂದಿದ್ದವನು ಭಗತ್‌ಸಿಂಗ್‌ನ ತಾತ ಅರ್ಜುನ್‌ಸಿಂಗ್. ಹಲವು ಜನಹಿತ ಕಾರ್ಯಗಳನ್ನು ಮಾಡಿದ್ದ ಅವನ ಹಿರಿಯ ಮಗ ಕಿಶನ್‌ಸಿಂಗ್ ಹಲವು ಗೆಳೆಯರೊಡನೆ ಭಾರತ್‌ಮಾತಾ ಸಮಾಜ ಎಂಬ ರಾಜಕೀಯ ಪಕ್ಷ ಕಟ್ಟಿದ. ಕಿಶನ್‌ಸಿಂಗ್‌ನ ಉಳಿದಿದ್ದ ಏಳು ಮಕ್ಕಳಲ್ಲಿ ಹಿರಿಯನೇ ಭಗತ್‌ಸಿಂಗ್. ಭಗತ್‌ಸಿಂಗ್‌ಗೆ ಹೆಚ್ಚು ಪ್ರೇರಣೆಯಾಗಿದ್ದವನು ಅವನ ಚಿಕ್ಕಪ್ಪ ಅಜಿತ್‌ಸಿಂಗ್. ಜನರಲ್ಲಿ, ವಿಶೇಷವಾಗಿ ರೈತರು ಮತ್ತು ಸೈನಿಕರಲ್ಲಿ ಬಂಡೇಳುವ ಮನೋಭಾವವನ್ನು ಬೆಳೆಸುತ್ತಿದ್ದ ಅಜಿತ್‌ಸಿಂಗ್, ಸಹಜವಾಗಿಯೇ ಭಗತ್‌ಸಿಂಗ್‌ನ ಮೇಲೆ ಹೆಚ್ಚು ಪ್ರಭಾವ ಬೀರಿದ್ದ. ಮನೆತನದ ಬಳುವಳಿಯಾಗಿ ಭಗತ್‌ಸಿಂಗ್‌ಗೆ ದೇಶಪ್ರೇಮ ಹುಟ್ಟಿನಿಂದಲೇ ಬಂದಿತ್ತು. ಚಿಕ್ಕಂದಿನಲ್ಲೇ,

ರಾಷ್ಟ್ರಸೇವೆಯೆಂಬುದು ದುರ್ಗಮ, ಎಲೆ ಹೃದಯ,
ಅದ ಕುರಿತು ಮಾತನಾಡುವುದು ಸುಲಭ;
ರಾಷ್ಟ್ರಭಕ್ತಿಯ ಹಾದಿ ತುಳಿದವರು
ಸಹಿಸಿದರೈ ಅಸಂಖ್ಯ ಸಂಕಷ್ಟಗಳ:

ಎಂಬ ಮಾತಿನ ಮೂಲಕ ಅನೇಕ ಜನರ ಮನಸ್ಸಿನಲ್ಲಿ ಉಳಿದಿರುವ ಭಗತ್‌ಸಿಂಗ್, ಅವನ ತಾಯಿಯ ಪ್ರೀತಿಗೆ ಪಾತ್ರನಾದವನು.

ಭಗತ್‌ಸಿಂಗ್‌ನ ಮನೆತನದ ಹಿರಿಯರ ದೇಶಪ್ರೇಮ ಮತ್ತು ಅವರ ಬಂಧನ, ಸೆರೆವಾಸ ಇತ್ಯಾದಿಗಳ ಬಗ್ಗೆ ಸಂಗ್ರಾಹ್ಯವಾಗಿ ನಿರೂಪಿಸಿರುವ ಜಿ.ಆರ್., ಅದು ಚಿಕ್ಕಂದಿನಲ್ಲಿ ಭಗತ್ ಸಿಂಗ್‌ನ ಮೇಲೆ ಮಾಡಿದ ಪ್ರಭಾವವನ್ನು ಸೂಚಿಸುತ್ತಾರೆ. 'ರಾಷ್ಟ್ರ ಮತ್ತು ಮಾನವ ಜನಾಂಗದ ಜೀವನದ ಸಂದರ್ಭದಲ್ಲಿ ಮತೀಯ ಭಾವನೆಗಳಿಗೆ ಎಳ್ಳಷ್ಟೂ ಸ್ಥಾನವಿಲ್ಲವೆಂದು ಬಗೆದು ಅಂತೆಯೇ ನಡೆದುಕೊಂಡ ವ್ಯಕ್ತಿ ಭಗತ್‌ಸಿಂಗ್' ಎಂಬ ಮಾತುಗಳಿಂದ ಭಗತ್‌ಸಿಂಗ್‌ನ ವ್ಯಕ್ತಿತ್ವವನ್ನು ಪರಿಚಯಿಸುವ ಜಿ.ಆರ್. ಬಾಲ್ಯದಲ್ಲಿ ಮತ್ತು ಶಾಲಾ ವಿದ್ಯಾರ್ಥಿ ಜೀವನದಲ್ಲಿ ಅವನಿಗಿದ್ದ ಪುಸ್ತಕ ಪ್ರೀತಿ, ರಾಷ್ಟ್ರೀಯ ಭಾವನೆ, ಜನಪರ ಕಾಳಜಿಗಳು ಇತ್ಯಾದಿಗಳ ಬಗ್ಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ತಿಳಿಸಿ, ಅವನ ವಿಚಾರವಾಗಿ ಹೆಚ್ಚು ಹೆಚ್ಚು ತಿಳಿಯಬೇಕೆನ್ನುವ ಕುತೂಹಲವನ್ನು ಕೆರಳಿಸುತ್ತಾರೆ. ವಿದ್ಯಾರ್ಥಿಯಾಗಿದ್ದಾಗಲೇ, 1921ರ ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದ್ದ ಭಗತ್‌ಸಿಂಗ್, ಮನೆಯಲ್ಲಿ ಅವನ ಮದುವೆಯ ವಿಚಾರವಾಗಿ ಮಾತು ನಡೆದು, ಇವನ ಮೇಲೆ ಒತ್ತಡ ಹೆಚ್ಚಿದಾಗ, 'ಇದು ಮದುವೆಗೆ ಕಾಲವಲ್ಲ. ದೇಶವು ನನ್ನನ್ನು ಕರೆಯುತ್ತಿದೆ. ನನ್ನ ತನುಮನ ಧನವನ್ನೆಲ್ಲಾ ದೇಶಕ್ಕೆ ಅರ್ಪಿಸಬೇಕೆಂಬ ತೀರ್ಮಾನಕ್ಕೆ ನಾನು ಬಂದಿದ್ದೇನೆ. ಆದ್ದರಿಂದ ನನ್ನನ್ನು ಕುಟುಂಬಕ್ಕೆ ಗಂಟು ಹಾಕಬೇಡಿ. ಬದಲು ನನ್ನ ಉದ್ದೇಶಸಾಧನೆಗೆ ನಿಮ್ಮ ಹರಕೆ ನೀಡಿ' ಎಂಬ ಉತ್ತರದಿಂದ ತನ್ನ ಭವಿಷ್ಯದ ಬಗ್ಗೆ ದೃಢ ನಿರ್ಧಾರದ ಮಾತುಗಳನ್ನಾಡಿದ್ದ ಎನ್ನುವುದು ಮಹತ್ವ ಪಡೆಯುತ್ತದೆ.

1924ರ ವೇಳೆಗೆ, ಕಾನ್ಪುರದಲ್ಲಿ ಪ್ರತಾಪ್ ಪ್ರೆಸ್‌ನ ಗಣೇಶ ಶಂಕರ ವಿದ್ಯಾರ್ಥಿಯವರಿಗೆ, 'ನಮ್ಮ ದೇಶದ ವಿಮುಕ್ತಿಗಾಗಿ ಮಾಡಲು ಅಥವಾ ಮಡಿಯಲು ಶಪಥ ಮಾಡಿಯೇ ನಾನಿಲ್ಲಿಗೆ ಬಂದಿರುವುದು' ಎಂದು ಸ್ಪಷ್ಟಪಡಿಸಿದ ಭಗತ್‌ಸಿಂಗ್, ರಾಜಕೀಯವನ್ನು ಪ್ರವೇಶಿಸಿ, ಪತ್ರಿಕೋದ್ಯಮದ ನೆಪದಲ್ಲಿ ದೆಹಲಿಗೆ ಹೋಗಿ, ಅಲ್ಲಿನ ಚಟುವಟಿಕೆಗಳ ಪರಿಚಯ ಮಾಡಿಕೊಂಡು, ಕಾನ್ಪುರದಲ್ಲಿ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಕೊಂಡ ಹಾಗೂ ಕೀರ್ತಿ ಕಿಸಾನ್ ಪಕ್ಷದೊಡನೆ ಸಂಪರ್ಕ ಬೆಳೆಸಿಕೊಂಡ.

ಅಜ್ಜಿಯ ಅನಾರೋಗ್ಯದ ಕಾರಣದಿಂದ ಲಾಹೋರಿಗೆ ಹೋಗಿದ್ದ ಭಗತ್‌ಸಿಂಗ್, ಬಹುಬೇಗ ಕಾನ್ಪುರಕ್ಕೆ ಹಿಂದಿರುಗಿದ. ಯಾವುದೇ ಕೌಟುಂಬಿಕ ಸಮಸ್ಯೆಗಳು ಭಗತ್‌ಸಿಂಗ್‌ನ ದೇಶಪರವಾದ ಕೆಲಸಗಳಿಗೆ ಅಡ್ಡಿ ಬರುವಂತಿರಲಿಲ್ಲ.

1925ರಲ್ಲಿ ಆಗಸ್ಟ್ 9ರಂದು ಕಾಕೋರಿ ರೈಲು ನಿಲ್ದಾಣದಲ್ಲಿ ಸರ್ಕಾರದ ಹಣವನ್ನು ಲೂಟಿ ಮಾಡಲಾಯಿತು. ಕಾರಣಾಂತರದಿಂದ, ಆ ಯೋಜನೆಯಲ್ಲಿ ಭಗತ್‌ಸಿಂಗ್ ಪಾಲ್ಗೊಳ್ಳಲಿಲ್ಲ. ನಂತರ 1926ರ ಫೆಬ್ರುವರಿಯಲ್ಲಿ ನಡೆದ ಅಂತಹುದೇ ಯೋಜನೆಯಲ್ಲಿ ಪಾಲ್ಗೊಂಡಿದ್ದನೆಂಬ ವಿಷಯ ಗಮನ ಸೆಳೆಯುತ್ತದೆ.

1926ರ ಮಾರ್ಚ್ ವೇಳೆಗೆ, ಲಾಹೋರಿನಲ್ಲಿ ಸಂಘಟಿಸಲಾದ 'ನೌ ಜವಾನ್ ಭಾರತ್ ಸಭಾ'ದ ಕಾರ್ಯದರ್ಶಿಯಾಗಿದ್ದ ಭಗತ್‌ಸಿಂಗ್ ಸಕ್ರಿಯವಾಗಿ ಕ್ರಾಂತಿಕಾರಿ ಹೋರಾಟಗಳಲ್ಲಿ ಪಾಲ್ಗೊಂಡ. ಇಡೀ ಭಾರತದ ಶ್ರಮಿಕರು ಮತ್ತು ರೈತರನ್ನೊಳಗೊಂಡ ಸ್ವತಂತ್ರ ಗಣರಾಜ್ಯ

ಸ್ಥಾಪನೆಯ ಗುರಿಯಿಟ್ಟುಕೊಂಡ 'ನೌಜವಾನ್ ಭಾರತ್ ಸಭಾ'ಕ್ಕೆ ರಷ್ಯದ ಸಮಾಜವಾದಿ ಕ್ರಾಂತಿ ಪ್ರೇರಣೆಯಾಗಿತ್ತು ಎಂಬ ಅಂಶ ಗಮನಾರ್ಹವಾಗಿದೆ. ಬ್ರಿಟಿಷ್ ಸರ್ಕಾರವು 'ನೌ ಜವಾನ್ ಭಾರತ್' ಸಭಾವನ್ನು ಕಾನೂನು ಬಾಹಿರ ಸಂಸ್ಥೆ ಎಂದು ಘೋಷಿಸಿತು.

ಕೀರ್ತಿ ಕಿಸಾನ್ ಪಕ್ಷದ ಸೋಹನ್‌ಸಿಂಗ್ ಜೋಶ್‌ರಂತಹವರಿಂದ ಪ್ರೇರಿತನಾದ ಭಗತ್ ಸಿಂಗ್‌ಗೆ 1928ರ ಡಿಸೆಂಬರ್ 17ರಂದು ನಡೆದ ಪೊಲೀಸ್ ಅಧಿಕಾರಿ ಸಾಂಡರ್ಸ್‌ನ ಹತ್ಯೆಯ ನಂತರ ಆಶ್ರಯ ನೀಡಿದವರೇ ಜೋಶ್. ಸ್ಕಾಟ್‌ನ ಹತ್ಯೆ ಮಾಡಲು ಹೋದ ಭಗತ್‌ಸಿಂಗ್, ಸುಖದೇವ್ ಮತ್ತು ರಾಜಗುರು ಹತ್ಯೆ ಮಾಡಿದ್ದು ಸಾಂಡರ್ಸ್‌ನನ್ನು.

ಬ್ರಿಟಿಷ್ ವಸಾಹತುಶಾಹಿಯನ್ನು ಹೊಡೆದೋಡಿಸಿ, ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವುದನ್ನೇ ಗುರಿಯಾಗಿ ಹೊಂದಿದ್ದ ಕ್ರಾಂತಿಕಾರಿಗಳು 'ಹಿಂದೂಸ್ಥಾನ್ ಸಮಾಜವಾದಿ ಗಣತಂತ್ರ ಸಂಘಟನೆ'ಯನ್ನು ಸ್ಥಾಪಿಸಿದರು.

ಗಾಂಧೀಜಿಯವರು ಅಸಹಕಾರ ಚಳವಳಿಗೆ ಕರೆ ಕೊಟ್ಟಾಗ, ಭಾರತದ ಬೇರೆ ಬೇರೆ ಭಾಗಗಳಲ್ಲಿ ಕಾರ್ಯನಿರತರಾಗಿದ್ದ ಕ್ರಾಂತಿಕಾರಿಗಳ ಗುಂಪು ತಮ್ಮ ಚಟುವಟಿಕೆಗಳನ್ನು ತಾತ್ಕಾಲಿಕ ವಾಗಿ ಸ್ಥಗಿತಗೊಳಿಸಿ, ಅಹಿಂಸಾತ್ಮಕ ಚಳವಳಿಯೊಡನೆ ಬೆರೆತಿದ್ದರು. ಯಾವುದೇ ಕ್ರಾಂತಿಕಾರಿ ಹೋರಾಟವನ್ನು ಗಾಂಧೀಜಿ ಬೆಂಬಲಿಸಲಿಲ್ಲ.

ಸೈಮನ್ ಆಯೋಗ 1928ರ ಅಕ್ಟೋಬರ್ 30ರಂದು ಲಾಹೋರ್‌ಗೆ ಬಂದಾಗ ಲಾಲಾ ಲಜಪತ್ ರಾಯ್ ಮತ್ತು ಮದನ ಮೋಹನ ಮಾಳವೀಯರ ನೇತೃತ್ವದಲ್ಲಿ ಜನತೆ ಪ್ರತಿಭಟನೆ ಸಲ್ಲಿಸಿತು; ಮುಂಚೂಣಿಯಲ್ಲಿ ಭಗತ್‌ಸಿಂಗ್ ಕೂಡ ಇದ್ದ. ಮೆರವಣಿಗೆಯ ಮೇಲೆ ಪೊಲೀಸರು ಲಾಠೀ ಪ್ರಹಾರ ಮಾಡಿದರು. ಅಧಿಕಾರಿ ಸ್ಕಾಟ್ ಲಾಲಾ ಅವರ ಮೇಲೆ ಲಾಠಿ ಬೀಸಿದ. ಗಾಯಗೊಂಡ ಲಾಲಾ ಅದೇ ವರ್ಷದ ನವೆಂಬರ್ 17ರಂದು, ಅಂದರೆ ಪೆಟ್ಟು ಬಿದ್ದ 18 ದಿನಗಳಿಗೆ ಮೃತರಾದರು. ಲಾಲಾರನ್ನು ಥಳಿಸಿದ್ದ ಸ್ಕಾಟ್ ಬಗ್ಗೆ ಭಗತ್‌ಸಿಂಗ್‌ಗೆ ಸಿಟ್ಟು ಬಂದಿತ್ತು. ಲಾಲಾರ ಸಾವಿಗೆ ತಾನು ಕಾರಣ ಅಲ್ಲವೆಂದು ಬ್ರಿಟಿಷ್ ಸರ್ಕಾರ ವಾದಿಸಿತು. ಆ ಮೊಂಡುವಾದ ಹಾಗೂ ಕ್ರೌರ್ಯಗಳಿಂದ ಸಿಟ್ಟಿಗೆದ್ದ ಹಿಂದೂಸ್ಥಾನ್ ಸಮಾಜವಾದಿ ಗಣತಂತ್ರ ಸಂಘಟನೆಯ ಸದಸ್ಯರು 10-12-1928ರಂದು ಸಭೆ ಸೇರಿ ಪ್ರತೀಕಾರ ಕಾರ್ಯಕ್ರಮವೊಂದನ್ನು ರೂಪಿಸಿದರು. ಸ್ಕಾಟ್‌ನ ಹತ್ಯೆಗೆ ಸಂಚು ಸಿದ್ಧವಾಯಿತು. ಆದರೆ, ತಪ್ಪು ಸೂಚನೆಯಿಂದಾಗಿ ಸ್ಕಾಟ್‌ನ ಬದಲು ಜೆ.ಪಿ. ಸಾಂಡರ್ಸ್‌ನ ಹತ್ಯೆ ಆಯಿತು. ಮೊದಲು ರಾಜಗುರು, ನಂತರ ಭಗತ್‌ಸಿಂಗ್ ಗುಂಡು ಹಾರಿಸಿದ್ದರು. 'ಮಿಲಿಯಗಟ್ಟಲೆ ಜನರ ಗೌರವಕ್ಕೆ ಪಾತ್ರರಾಗಿದ್ದ ನಾಯಕರು ಒಬ್ಬ ಯಃಕಶ್ಚಿತ್ ಪೊಲೀಸ್ ಅಧಿಕಾರಿಯ ಕಲುಷಿತ ಕೈಗಳಿಂದ ಕೊಲ್ಲಲ್ಪಡುವುದೆಂದರೆ ಇಡೀ ರಾಷ್ಟ್ರಕ್ಕೆ ಅವಮಾನ. ಇದನ್ನು ತೊಡೆದು ಹಾಕಬೇಕಾದ್ದು ಭಾರತದ ಕರ್ತವ್ಯವಾಗಿತ್ತು' ಎಂದು ಕರಪತ್ರದ ಮೂಲಕ ಸಾಂಡರ್ಸ್ ಹತ್ಯೆಯನ್ನು ಸಮರ್ಥಿಸಿಕೊಳ್ಳಲಾಯಿತು.

ಪೊಲೀಸರ ಕೈಗೆ ಸಿಗದೆ ಓಡಾಡುತ್ತಿದ್ದ ಭಗತ್‌ಸಿಂಗ್ ಮತ್ತು ಅವನ ಗೆಳೆಯರು ಮತ್ತೊಂದು

ಸಾಹಸಕ್ಕೆ ಸಜ್ಜಾದರು. 1929ರ ಏಪ್ರಿಲ್ 8ರಂದು ಕೇಂದ್ರ ಶಾಸನ ಸಭೆಯಲ್ಲಿ ಸಾರ್ವಜನಿಕ ರಕ್ಷಣಾ ಕಾಯಿದೆ ಮತ್ತು ಕಾರ್ಮಿಕ ವಿವಾದ ಕಾಯಿದೆಗಳ ಮಂಡನೆ ಆಗಬೇಕಾಗಿದ್ದ ಸಮಯದಲ್ಲಿ, ಬುದ್ಧಿವಂತಿಕೆಯಿಂದ ಸಭೆಯೊಳಗೆ ಪ್ರವೇಶ ಪಡೆದಿದ್ದ ಭಗತ್‌ಸಿಂಗ್ ಮತ್ತು ಬಿ.ಕೆ. ದತ್ ಯಾರಿಗೂ ಹಾನಿಯಾಗದಂತೆ, ಆದರೆ ಎಲ್ಲರ ಗಮನ ಸೆಳೆಯುವಂತೆ ಸಭೆಯಲ್ಲಿ ಬಾಂಬ್ ಎಸೆದು, ನಿಂತಲ್ಲೇ ನಿಂತು 'ಇಂಕ್ವಿಲಾಬ್ ಜಿಂದಾಬಾದ್' ಮತ್ತು 'ಬ್ರಿಟಿಷ್ ಸಾಮ್ರಾಜ್ಯ ಶಾಹಿಗೆ ಧಿಕ್ಕಾರ' ಎಂಬ ಘೋಷಣೆಗಳನ್ನು ಕೂಗಿ, ಕರಪತ್ರಗಳನ್ನು ತೂರಿ, ಬಂಧನಕ್ಕೊಳಗಾದರು. 'ಕಿವುಡನೊಬ್ಬನಿಗೆ ಕೇಳಿಸುವಂತೆ ಹೇಳಬೇಕಾದರೆ ಗಟ್ಟಿಯಾಗಿ ಹೇಳಬೇಕಾಗುತ್ತದೆ' ಎಂದು ತಮ್ಮ ಕ್ರಮವನ್ನು ಸಮರ್ಥಿಸಿಕೊಂಡ ಸಂಘಟನೆಯು, ಬ್ರಿಟಿಷರ ಕ್ರೌರ್ಯ ಮತ್ತು ದೌರ್ಜನ್ಯಗಳನ್ನು ಖಂಡಿಸಿತು. ಭಗತ್‌ಸಿಂಗ್‌ನ ದಸ್ತಗಿರಿ ಆದಾಗ ಅವನ ಬಳಿ ಪಿಸ್ತೂಲು ಇತ್ತಾದರೂ ಅದನ್ನು ಅವನು ಯಾರತ್ತಲೂ ಗುರಿ ಮಾಡಿರಲಿಲ್ಲ ಎಂದು ಅವನನ್ನು ದಸ್ತಗಿರಿ ಮಾಡಿದ ಸಾರ್ಜೆಂಟ್ ಟೆರ್ರಿಯೇ ಹೇಳಿಕೆ ನೀಡಿದ್ದ.

ಬಾಂಬ್ ಪ್ರಕರಣ ಮತ್ತು ಸಾಂಡರ್ಸ್ ಹತ್ಯೆಗೆ ಸಂಬಂಧಿಸಿದ ವಿಚಾರಣೆ ನಡೆಯಿತು. ಬಿ.ಕೆ. ದತ್ ಪರವಾಗಿ ಅಸಫ್ ಅಲಿ ವಾದಿಸಿದರು. ಯಾರು ಎಷ್ಟೇ ಹೇಳಿದರೂ, ತನ್ನ ಪರ ವಾದಿಸಲು ಬೇರೆ ಯಾವ ವಕೀಲರೂ ಬೇಡವೆಂದು ಪಟ್ಟು ಹಿಡಿದ ಭಗತ್‌ಸಿಂಗ್, ತನ್ನ ಪರವಾಗಿ ತಾನೇ ವಾದಿಸಿದ. ಕಾರಾಗೃಹದಲ್ಲಿ ಭಗತ್‌ಸಿಂಗ್ ಮತ್ತು ದತ್ ಅವರ ಬದುಕಿನ ರೀತಿಯು ಅತ್ಯಂತ ಕುತೂಹಲಕಾರಿಯಾಗಿದ್ದು, ಅಷ್ಟೇ ಕುತೂಹಲಕಾರಿಯಾದದ್ದು ಅವರ ವಿಚಾರಣೆ. ಅದರಲ್ಲೂ ಭಗತ್‌ಸಿಂಗ್ ನ್ಯಾಯಾಲಯದಲ್ಲಿ ತನ್ನ ಪರವಾಗಿ ಮಂಡಿಸಿದ ವಾದವು ನೆನಪಿನಲ್ಲಿಡುವಂತಿದೆ. ಬಾಂಬ್ ಹಾಕಿದ್ದು ಏಕೆ ಮತ್ತು ಹಾಕಿದ್ದು ಎಂತಹ ಬಾಂಬುಗಳು ಎಂಬುದನ್ನು ಭಗತ್‌ಸಿಂಗ್ ವಿವರಿಸಿದ್ದಾನೆ. ತಮ್ಮ ಆಕ್ರಮಣ ವ್ಯವಸ್ಥೆಯ ಮೇಲೆ ಮಾತ್ರ, ಯಾರನ್ನೂ ಕೊಲ್ಲುವ ಉದ್ದಿಶ್ಯ ತಮಗಿರಲಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ ಭಗತ್‌ಸಿಂಗ್ ಯಾರನ್ನಾದರೂ ಕೊಲ್ಲುವ ಉದ್ದೇಶವಿದ್ದಿದ್ದರೆ, ಹೆಚ್ಚು ಶಕ್ತಿಯುತವಾದ ಬಾಂಬ್ ಬಳಸಲಾಗುತ್ತಿತ್ತು ಎಂದು ಮನವರಿಕೆ ಮಾಡಿದ. 'ನಮ್ಮ ರಾಷ್ಟ್ರದ ಇತಿಹಾಸ, ಇಂದಿನ ಪರಿಸ್ಥಿತಿ ಮತ್ತು ಹಂಬಲಗಳನ್ನು ಗಂಭೀರವಾಗಿ ಅಧ್ಯಯನ ಮಾಡುವ ವಿನಯಶೀಲ ವಿದ್ಯಾರ್ಥಿಗಳು ನಾವೆಂಬುದನ್ನು ಬಿಟ್ಟು ನಮಗೆ ಬೇರಾವ ಹಮ್ಮೂ ಇಲ್ಲ. ಠಕ್ಕುತನವನ್ನು ನಾವು ಹೀನಾಯವೆಂದೆಣಿಸುತ್ತೇವೆ. ನಮ್ಮ ಕಾರ್ಯರೂಪದ ಪ್ರತಿಭಟನೆಯು ಒಂದು ವ್ಯವಸ್ಥೆಯ ವಿರುದ್ಧ.' ಎಂದು ಸ್ಪಷ್ಟಪಡಿಸಿದ ಭಗತ್‌ಸಿಂಗ್‌ನ ವಾದವು ರಾಷ್ಟ್ರಪ್ರೇಮಿಗಳೆಲ್ಲರೂ ಇಂದಿಗೂ ಗಮನಿಸಲೇಬೇಕಾದ ರೀತಿಯಲ್ಲಿದೆ. ಬ್ರಿಟಿಷರಿಗೆ ಅರ್ಥವಾಗದ ಶಬ್ದವೇ ಕ್ರಾಂತಿ ಎಂದು ಕೆಣಕುತ್ತಾ ಆ ಪದದ ಅರ್ಥವನ್ನು ತಿಳಿಯ ಹೇಳಿದ ಭಗತ್‌ಸಿಂಗ್, 'ಕ್ರಾಂತಿ ಎಂದರೆ ಸ್ಪಷ್ಟವಾಗಿ ಅನ್ಯಾಯದ ಬುನಾದಿಯ ಮೇಲೆ ರಚಿತವಾಗಿರುವ ಇಂದಿನ ವ್ಯವಸ್ಥೆ ಬದಲಾಗಬೇಕು ಎಂದರ್ಥ' ಎಂದು ವಿವರಿಸುತ್ತಾ ಉತ್ಪಾದಕರು, ಅಥವಾ ದುಡಿಮೆಗಾರರು ಸಮಾಜದ ಅತ್ಯಂತ ಅವಶ್ಯಕ ಅಂಗವಾಗಿದ್ದಾಗ್ಯೂ ಶೋಷಕರಿಂದ ವಂಚಿಸಲ್ಪಡುತ್ತಿದ್ದಾರೆ. ಅವರ ದುಡಿಮೆಯ ಫಲ ಅವರಿಗೆ ದಕ್ಕುತ್ತಿಲ್ಲ ಇತ್ಯಾದಿ ವಾದದ ಪೂರ್ಣ ಪಾಠದ ಅನುವಾದವನ್ನು ಲೇಖಕರು ಒದಗಿಸಿ, ಅತ್ಯಮೂಲ್ಯ ವಿಚಾರಗಳತ್ತ

ಗಮನ ಸೆಳೆಯುತ್ತಾರೆ. ಜಿ.ಆರ್. ಹೇಳುವಂತೆ '1929ರ ಜೂನ್ 10ರಂದು ವಿಚಾರಣೆಯ ನಾಟಕ ಮುಗಿಯಿತು. 'ಭಗತ್‌ಸಿಂಗ್ ಮತ್ತು ದತ್ ಇಬ್ಬರಿಗೂ ನ್ಯಾಯಾಲಯ ಜೀವಾವಧಿ ಕಾಲದವರೆಗೆ ಗಡೀಪಾರು ಮಾಡಬೇಕೆಂದು ಶಿಕ್ಷೆ ವಿಧಿಸಿತು. ಒಂದು ಮೊಕದ್ದಮೆಯ ವಿಚಾರಣೆ ಮಾತ್ರ ಮುಗಿದಿತ್ತು; ತೀರ್ಪೂ ಬಂದಿತ್ತು. ಸಾಂಡರ್ಸ್ ಹತ್ಯೆಯ, ಲಾಹೋರ್ ಪಿತೂರಿ ಮೊಕದ್ದಮೆಯ ವಿಚಾರಣೆ ಆಗಬೇಕಾಗಿತ್ತು. ಈ ಮಧ್ಯೆ ಮಿಯಾನ್ ವಾಲಿಯಲ್ಲಿ ಜೈಲು ವಾಸದ ಸಂದರ್ಭ ರಾಜಕೀಯ ಕೈದಿಗಳಿಗೆ ಜೈಲುಗಳಲ್ಲಿ ನೀಡುತ್ತಿದ್ದ ಕಿರುಕುಳವನ್ನು ಪ್ರತಿಭಟಿಸಿದ ಭಗತ್‌ಸಿಂಗ್, 'ಮಾನವನಿಗೆ ತಕ್ಕುದಾದ ನಡತೆ ಬ್ರಿಟಿಷ್ ಅಧಿಕಾರಿಗಳಲ್ಲಿಲ್ಲ. ಆದ್ದರಿಂದ ಹೋರಾಟದ ಹಾದಿ ಹಿಡಿಯೋಣ..... ' ಎಂದು ಘೋಷಿಸಿ, 1929ರ ಜೂನ್ 15ರಂದು ಉಪವಾಸ ಸತ್ಯಾಗ್ರಹವನ್ನಾರಂಭಿಸಿದ. ಸ್ವಲ್ಪ ಮಟ್ಟಿನ ಸೌಲಭ್ಯಗಳು ದೊರೆತವು. ಭಗತ್‌ಸಿಂಗ್ ಪಂಜಾಬ್ ಜೈಲುಗಳ ಇನ್‌ಸ್ಪೆಕ್ಟರ್ ಜನರಲ್‌ಗೆ ಪತ್ರ ಬರೆದು ಎಲ್ಲ ರಾಜಕೀಯ ಕೈದಿಗಳಿಗೆ ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಕಾವ್ಯ, ನಾಟಕ, ಕಾದಂಬರಿ ಇತ್ಯಾದಿ ಎಲ್ಲ ಸಾಹಿತ್ಯವನ್ನು ಒದಗಿಸಲು ಅಗ್ರಹಪಡಿಸಿದ. ಜೂನ್ 25ರಂದು ಅವನನ್ನು ಲಾಹೋರ್‌ನ ಸೆಂಟ್ರಲ್ ಜೈಲಿಗೆ ವರ್ಗಾಯಿಸಲಾಯಿತು. ಆದರೆ ಉಪವಾಸ ಮಾತ್ರ ಮುಂದುವರಿಯಿತು. ಕೆಲವು ರಾಜಕೀಯ ನಾಯಕರು ಮತ್ತು ಸಾರ್ವಜನಿಕರು ಜೈಲಿನಲ್ಲಿ ನಡೆಯುತ್ತಿದ್ದ ಉಪವಾಸ ಸತ್ಯಾಗ್ರಹವನ್ನು ಬೆಂಬಲಿಸಿ 'ಯಾರಿಗಾದರೂ ಪ್ರಾಣಹಾನಿಯಾದರೆ ಅದಕ್ಕೆ ಸರ್ಕಾರವೇ ಹೊಣೆ' ಎಂಬ ಎಚ್ಚರಿಕೆ ನೀಡಿತು. ಬಲವಂತವಾಗಿ ಆಹಾರ ತಿನ್ನಿಸುವ ಪ್ರಯತ್ನಗಳಾದವು. ಅದನ್ನು ವಿಫಲಗೊಳಿಸಲು ಕೈದಿಗಳು ಹಲವು ತಂತ್ರಗಳನ್ನು ಕಂಡುಕೊಂಡಿದ್ದರು.

ಜೈಲಿನ ಆವರಣದಲ್ಲೇ ಜುಲೈ 10ರಂದು ಸಾಂಡರ್ಸ್ ಹತ್ಯೆ ಮೊಕದ್ದಮೆಯ ವಿಚಾರಣೆ ಆರಂಭವಾಯಿತು. ಕೈದಿಗಳಿಗೆ ಕೈಕೋಳ ತೊಡಿಸಿ ಕೋರ್ಟಿಗೆ ಕರೆತರುವುದನ್ನು ಪ್ರತಿಭಟಿಸಿದ ಭಗತ್‌ಸಿಂಗ್ ಪೊಲೀಸರ ವರ್ತನೆಯನ್ನು ಟೀಕಿಸಿದ. ತನಗೆ ಮತ್ತು ದತ್‌ಗೆ ಉತ್ತಮ ಆಹಾರ ಸರಬರಾಜು ಮಾಡುವ ಅಧಿಕಾರಿಗಳ ಹುನ್ನಾರವನ್ನು ವಿರೋಧಿಸಿ, ತಿರಸ್ಕರಿಸಿದ. ಜತೀನ್ ದಾಸ್ ಎಂಬ ಯುವಕ ಉಪವಾಸ ಸತ್ಯಾಗ್ರಹ ಮಾಡುತ್ತಲೇ ಸೆಪ್ಟೆಂಬರ್ 13ರಂದು ಕೊನೆಯುಸಿರೆಳೆದ. ಶವವನ್ನು ಲಾಹೋರ್‌ನಿಂದ ಕಲ್ಕತ್ತೆಗೆ ಕೊಂಡೊಯ್ಯಲಾಯಿತು. ಅಂದೇ ಕೇಂದ್ರ ಶಾಸನ ಸಭೆಯಲ್ಲಿ ಮೋತೀಲಾಲ್ ನೆಹರೂ ಜತೀನ್‌ನ ಸಾವಿನ ವಿಷಯವನ್ನು ಪ್ರಾಸ್ತಾಪಿಸಿ, ಬ್ರಿಟಿಷ್ ಸರ್ಕಾರವನ್ನು ದೂಷಿಸಿದರು.

1929ರ ಡಿಸೆಂಬರ್ 19ರಂದು, ನಿರಾಕರಣೆಯ ನಡುವೆ ಕಾಕೋರಿ ಹುತಾತ್ಮರ ಸ್ಮರಣಾರ್ಥ, ಭಗತ್‌ಸಿಂಗ್ ನ್ಯಾಯಾಲಯದಲ್ಲೇ ಪ್ರಾರ್ಥನೆ ಮಾಡಿದ. 1930ರ ಜನವರಿ 24ರಂದು ಕಂಠಕ್ಕೆ ಕೆಂಪು ವಸ್ತ್ರ ಕಟ್ಟಿಕೊಂಡು ಲೆನಿನ್ ದಿನಾಚರಣೆಯನ್ನೂ ಆಚರಿಸಿದರು. ಮಗನಿಗೆ ಗಲ್ಲು ಶಿಕ್ಷೆ ಆಗುವುದು ಖಚಿತ ಎಂದು ತಿಳಿದ ಅವನ ತಂದೆ, ಅವನನ್ನು ಅದರಿಂದ ಪಾರುಮಾಡಲು ಮಾಡಿದ ತಂತ್ರವನ್ನು ಭಗತ್‌ಸಿಂಗ್‌ನೇ ಹೇಡಿತನ ಎಂದು ಜರಿದು, ಖಂಡಿಸಿದ.

1930ರ ಅಕ್ಟೋಬರ್ 7ರಂದು ನ್ಯಾಯಾಲಯವು ಸಾಂಡರ್ಸ್ ಹತ್ಯೆಯ ಅಪರಾಧಿಗಳಿಗೆ

'ಸಾಯುವವರೆಗೂ ಕುತ್ತಿಗೆಗೆ ನೇಣು ಹಾಕಬೇಕು' ಎಂಬ ಶಿಕ್ಷೆ ವಿಧಿಸಿತು. ತೀರ್ಪಿನ ದಿನ ಭಗತ್‌ಸಿಂಗ್‌ನನ್ನು ನ್ಯಾಯಾಲಯಕ್ಕೆ ಕರೆತಂದಿರಲಿಲ್ಲ. ವಕೀಲನೇ ಭಗತ್ ಸಿಂಗ್‌ಗೆ ತೀರ್ಪನ್ನು ತಿಳಿಸಿದ. ಅದನ್ನು ಕೇಳಿ ಭಗತ್‌ಸಿಂಗ್ ವಿಚಲಿತನಾಗಲಿಲ್ಲ. ಪಂಜಾಬಿನ ಗವರ್ನರ್‌ಗೆ ಕ್ಷಮಾ ಯಾಚನೆಯ ಪತ್ರ ಬರೆದು ಮೂವರ ಪ್ರಾಣಗಳನ್ನೂ ಉಳಿಸಿಕೊಳ್ಳಲು ಹಲವರು ಹೇಳಿದರೂ, ಭಗತ್‌ಸಿಂಗ್ ತನ್ನ ಮನಸ್ಸಿಗೆ ವಿರುದ್ಧವಾದ ಏನನ್ನೂ ಮಾಡಲು ಸಿದ್ಧನಿರಲಿಲ್ಲ.

1931ರ ಮಾರ್ಚ್ 23ರಂದು ಮೂವರನ್ನೂ ಗಲ್ಲಿಗೇರಿಸಿ, 24ರ ಬೆಳಗ್ಗೆ ಸಮಾಚಾರವನ್ನು ಬಹಿರಂಗಗೊಳಿಸಲು ನ್ಯಾಯಾಲಯ ಸೂಚಿಸಿತ್ತು. ಆದರೆ ಮಾರ್ಚ್ 23ರಂದು ಸಂಜೆಯೇ 7 ಗಂಟೆ 33 ನಿಮಿಷಕ್ಕೆ ಭಗತ್‌ಸಿಂಗ್, ಸುಖದೇವ್ ಮತ್ತು ರಾಜಗುರು ಅವರನ್ನು ಗಲ್ಲಿಗೇರಿಸ ಲಾಯಿತು. ಆವರೆಗೆ ಎಂದೂ ರಾತ್ರಿಯ ವೇಳೆ ಗಲ್ಲಿಗೇರಿಸಿದ್ದ ಉದಾಹರಣೆ ಇರಲಿಲ್ಲ. ಗಲ್ಲಿ ಗೇರಿದಾಗ ಭಗತ್‌ಸಿಂಗ್‌ನ ವಯಸ್ಸು 24 ತುಂಬಿರಲಿಲ್ಲ. ಮೂವರ ಪೈಕಿ 22 ವರ್ಷ ಪ್ರಾಯದ ರಾಜಗುರುವೇ ಚಿಕ್ಕವನು. ಅಷ್ಟು ಚಿಕ್ಕವಯಸ್ಸಿಗೇ ಅಪಾರ ಎನ್ನುವಷ್ಟು ಸಾಧನೆ ಮಾಡಿ ಕ್ರಾಂತಿ, ಸ್ವಾಭಿಮಾನ ಮತ್ತು ಸ್ವಾತಂತ್ರ್ಯಗಳ ಅರ್ಥ ತಿಳಿಸಿಕೊಟ್ಟ ಧೀಮಂತರು ಈ ಮೂವರು. ಸಟ್ಲೆಜ್ ನದಿಯ ತೀರದಲ್ಲಿ ಅವರ ಶವಗಳಿಗೆ ಸಿಖ್ ಮತ್ತು ಹಿಂದೂ ಪದ್ಧತಿಗಳ ಪ್ರಕಾರ ಸಂಸ್ಕಾರ ಮಾಡಲಾಯಿತು ಎಂದು ಲಾಹೋರಿನ ಜಿಲ್ಲಾ ಮ್ಯಾಜಿಸ್ಟ್ರೇಟನೇ ಪ್ರಕಟಣೆ ಹೊರಡಿಸಿದ. ಅಲ್ಲಿಗೆ ಭಗತ್‌ಸಿಂಗ್‌ನ ಬದುಕಿನ ಒಂದು ಸುವರ್ಣ ಅಧ್ಯಾಯ ಮುಗಿಯಿತು.

ಜಿ.ಆರ್. ಇಷ್ಟೇ ಕಥೆಯನ್ನು ಹೇಳಿದ್ದಿದ್ದರೆ ಭಗತ್‌ಸಿಂಗ್ ಹತ್ತರ ಜೊತೆಗೆ ಹನ್ನೊಂದನೆ ಯವನಾಗುತ್ತಿದ್ದ ಮತ್ತು ಅವನ ಕಥೆಯೂ ಹಾಗೆಯೇ ಅಸಂಖ್ಯಾತ ಸ್ವಾತಂತ್ರ್ಯ ಯೋಧರ ಕಥೆಗಳಲ್ಲಿ ಒಂದಾಗುತ್ತಿತ್ತು. ಆದರೆ, ಭಗತ್‌ಸಿಂಗ್ ಅಂತಹ ಕ್ಲೀಷೆಯಾಗಲು ಜಿ.ಆರ್. ಅವಕಾಶ ನೀಡಿಲ್ಲ. ಅವನ ಕಥೆಯನ್ನು ಒಂದು ನೆಪವಾಗಿ ಇಟ್ಟುಕೊಂಡು, ಆ ಮೂಲಕ ಅಂದಿನ ಇಡೀ ವಿಶ್ವದ ಸಾಮಾಜಿಕ ಮತ್ತು ರಾಜಕೀಯ ವಿಚಾರಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿ, ಅದರಲ್ಲಿ ಸಫಲರಾಗಿದ್ದಾರೆ.

ಭಗತ್‌ಸಿಂಗ್‌ನ ಕಥೆ ಮತ್ತು ವಿಚಾರಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ತಿಳಿದ ವರಿಗೆಲ್ಲಾ ಗೊತ್ತಿದೆ. ಆದರೆ, ಸಂಬಂಧಿಸಿದ ಕೆಲವು ಸೂಕ್ಷ್ಮ ಹಾಗೂ ಮಹತ್ವದ ವಿಚಾರಗಳನ್ನು ಕೆಲವು ನಿರೂಪಕರು ಯಾವುದೋ ಸಿದ್ಧಾಂತ, ತತ್ವ, ಮೌಲ್ಯ ಇತ್ಯಾದಿಗಳ ಹೆಸರಿನಲ್ಲಿ ಕೈಬಿಟ್ಟಿರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಯಾರೂ ಸಂಪೂರ್ಣ ನಿಷ್ಪಕ್ಷಪಾತಿಗಳಾಗಿರಲು ಇನ್ನೂ ಸಾಧ್ಯವಾಗಿಲ್ಲ. ಭಗತ್‌ಸಿಂಗ್‌ನ ಹೋರಾಟದ ಹಾದಿಯನ್ನು ಆ ಕಾಲದಲ್ಲೇ ಅನೇಕ ಹಿರಿಯ ಹೋರಾಟಗಾರರು ಒಪ್ಪಿರಲಿಲ್ಲ. ಅದನ್ನು ಈಗ ಅಲ್ಲಗಳೆಯುವಂತಿಲ್ಲ. ಹೋರಾಟದ ಹಾದಿಯು ಒಂದೇ ಆಗಿರಲೂ ಸಾಧ್ಯವಿರಲಿಲ್ಲ. ಹೋರಾಟದ ಹಾದಿ ಯಾವುದೇ ಆದರೂ ಎಲ್ಲರ ಗುರಿ ಭಾರತದ ಸ್ವಾತಂತ್ರ್ಯವೇ ಆಗಿತ್ತು ಎಂಬ ಮಾತಿಗೆ ಬಹುತೇಕ ಈಗ ಯಾರ ಆಕ್ಷೇಪಣೆಯೂ ಇರಲಾರದು. ಆದರೆ, ಅಂದು ಅಂತಹ ಮನೋಭಾವವನ್ನು ನಿರೀಕ್ಷಿಸಲು ಸಾಧ್ಯವಿರಲಿಲ್ಲ ಎಂದು ಇತಿಹಾಸ ಬಲ್ಲ ಎಲ್ಲರಿಗೂ ತಿಳಿದಿದೆ.

ತನ್ನನ್ನು ತಾನು ನಾಸ್ತಿಕ ಎಂದು ಕರೆದುಕೊಂಡ ಭಗತ್‌ಸಿಂಗ್ ಹೋರಾಡಿದ್ದು ಸ್ವಾತಂತ್ರ್ಯಕ್ಕಾಗಿ ಮತ್ತು ಸಮಾನತೆಗಾಗಿ. ಜಿ.ಆರ್. ಅವರ ಲೇಖನಿಯ ಮೂಲಕ ಭಗತ್ ಸಿಂಗ್‌ನ ಬದುಕಿನ ಬಗ್ಗೆ ತಿಳಿದಾದ ಮೇಲೆ ಅವನ ಚಿಂತನೆ ಮತ್ತು ಕಾರ್ಯಾಚರಣೆ, ಸೈದ್ಧಾಂತಿಕ ನಿಲುವು, ಧಾರ್ಮಿಕ ನಂಬಿಕೆಗಳು, ಕ್ರಾಂತಿಯ ಪರಿಕಲ್ಪನೆ, ಭಾರತದ ಭವಿಷ್ಯ ಕುರಿತು ಅವನಿಗಿದ್ದ ಕನಸುಗಳು ಇತ್ಯಾದಿಗಳೆಲ್ಲಾ ಹೆಚ್ಚು ಸ್ಪಷ್ಟವಾಗುತ್ತವೆ.

ಮತೀಯ ವಿದ್ವೇಷಗಳನ್ನು ತೊಡೆದುಹಾಕುವುದರಲ್ಲಿ ಭಗತ್‌ಸಿಂಗ್‌ಗಿದ್ದ ನಿಷ್ಠೆಗೆ ಮನ್ನಣೆ ದೊರೆತಿದ್ದರೆ, ಬಹುತೇಕ ಇಂದು ಮತೀಯ ಕಾರಣಗಳಿಂದ ಸಂಭವಿಸುತ್ತಿರುವ ಎಷ್ಟೋ ಹಿಂಸಾಕೃತ್ಯಗಳನ್ನು ನಿವಾರಿಸಬಹುದಾಗಿತ್ತು ಎಂಬುದು ಜಿ.ಆರ್. ಅವರ ಅಭಿಪ್ರಾಯ. ಸ್ವಾತಂತ್ರ್ಯ, ರಾಜಕೀಯ, ಧರ್ಮಗಳನ್ನು ಎಂದೂ ಒಂದೇ ತಕ್ಕಡಿಯಲ್ಲಿ ತೂಗುವುದರಿಂದ ಒಳ್ಳೆಯ ಫಲ ದೊರೆಯಲಾರದು. ಭಗತ್‌ಸಿಂಗ್‌ನ ಬದುಕಿನಿಂದ ನಾವು ಮತ್ತು ನಮ್ಮ ಮುಂದಿನ ಪೀಳಿಗೆಯವರು ಕಲಿಯಬೇಕಾದ್ದು ಬಹಳ ಇದೆ ಎಂದು ಜಿ.ಆರ್. ಮನವರಿಕೆ ಮಾಡುತ್ತಾರೆ.

ಜಿ.ಆರ್. ಅವರ ಭಗತ್‌ಸಿಂಗ್ ಕೃತಿಯನ್ನು ಓದುವಾಗ ಮತ್ತು ಓದಿದ ನಂತರ, ಯಾರಿಗೇ ಆದರೂ ಭಗತ್‌ಸಿಂಗ್‌ನ ಬಗ್ಗೆ ಗೌರವ ಬಾರದಿರಲು ಸಾಧ್ಯವಿಲ್ಲ. ಜೊತೆಗೆ ಆಗಿನ ಬ್ರಿಟಿಷ್ ಸರ್ಕಾರ ಮತ್ತು ಅದರ ಕೆಲವು ಅಧಿಕಾರಿಗಳು ಹಾಗೂ ಭಾರತೀಯರೇ ಆದ ಕೆಲವು ಸ್ವಾತಂತ್ರ್ಯ ಹೋರಾಟಗಾರರ ಮನೋಭಾವಗಳ ಪರಿಚಯವಾಗಿ, ಒಂದೇ ಗುರಿಯಾದರೂ ಹೋರಾಟದ ಬೇರೆ ಬೇರೆ ಹಾದಿಗಳು ಸೃಷ್ಟಿಸುವ ಗೊಂದಲ ಮತ್ತು ಆತಂಕಗಳನ್ನು ಅರ್ಥಮಾಡಿಕೊಳ್ಳಲು ಅವಕಾಶವಾಗಿದೆ.

ಕೇವಲ ಭಗತ್‌ಸಿಂಗ್‌ನ ಜೀವನ ಕಥೆಯಾಗಿಬಿಡುವ ಎಲ್ಲಾ ಅವಕಾಶಗಳಿದ್ದ ವಸ್ತುವನ್ನು ಜಿ.ಆರ್. ಭಗತ್‌ಸಿಂಗ್‌ನ ಬದುಕನ್ನು ಒಂದು ನೆಪವಾಗಿ ಮಾಡಿಕೊಂಡು, ಇಡೀ ವ್ಯವಸ್ಥೆಯ ವಿಶ್ಲೇಷಣೆ ಮಾಡುವಲ್ಲಿ ಸಫಲರಾಗಿದ್ದಾರೆ. ಸಾಮೂಹಿಕ ಹತ್ಯೆ ನಡೆದ ಒಂದು ವಾರದ ನಂತರ, ಜಲಿಯನ್‌ವಾಲಾಬಾಗ್‌ನಲ್ಲಿ ಮಣ್ಣನ್ನು ಸಂಗ್ರಹಿಸುತ್ತಿದ್ದ 12 ವರ್ಷದ ಬಾಲಕ ಭಗತ್‌ಸಿಂಗ್‌ನ ಚಿತ್ರವನ್ನು ಕಟ್ಟಿಕೊಡುತ್ತಾ, ಆಯಾ ಸಂದರ್ಭಗಳಲ್ಲಿ ಸಂವಾದಿಯಾಗಿ ನೆನಪಿಗೆ ಬಂದ ಹಿಂದಿನ ಎಲ್ಲ ಘಟನೆಗಳನ್ನೂ ವಿಶ್ಲೇಷಿಸುತ್ತಾ, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿ ಮುಖದ ಒಂದು ಛಾಯೆಯ ಅಥವಾ ಬಹುಮುಖ್ಯಭಾಗವನ್ನು ಪರಿಚಯಿಸುವ ಜಿ.ಆರ್. ಕೆಲವು ವಿಶಿಷ್ಟ ಮತ್ತು ವಿಶೇಷ ಅಂಶಗಳನ್ನು ಓದುಗರ ಗಮನಕ್ಕೆ ತಂದಿದ್ದಾರೆ.

ಪಂಜಾಬಿನ ನೌ ಜವಾನ್ ಭಾರತ್ ಸಭಾದ ಧ್ಯೇಯೋದ್ದೇಶಗಳನ್ನು ದಾಖಲಿಸುತ್ತಾ 'ಅದರ ಕೇಂದ್ರ ಅಮೃತಸರದಲ್ಲಿ ಇರತಕ್ಕದ್ದೆಂದು ಸಮ್ಮೇಳನವು ನಿರ್ಧರಿಸಿತು. ಸೈಮನ್ ಆಯೋಗ, ರಾಷ್ಟ್ರಧ್ವಜ, ಬ್ರಿಟಿಷ್ ವಸ್ತುಗಳ ಬಹಿಷ್ಕಾರ, ಅಸ್ಪೃಶ್ಯತೆ ಇತ್ಯಾದಿ ಒಂಬತ್ತು ವಿಷಯಗಳನ್ನು ಕುರಿತಂತೆ ಸಮ್ಮೇಳನವು ನಿರ್ಣಯಗಳನ್ನು ಅಂಗೀಕರಿಸಿತು. ಶ್ರಮಿಕರ ಮತ್ತು ರೈತರ ನಾಯಕತ್ವದಲ್ಲಿ ಸಂಪೂರ್ಣವಾಗಿ, ಸ್ವತಂತ್ರವಾಗಿ ಸರ್ಕಾರವನ್ನು ಸ್ಥಾಪಿಸುವುದು ಸಭಾದ ಆದ್ಯ ಕಾರ್ಯಕ್ರಮವೆಂದೂ ಸಮ್ಮೇಳನ ಘೋಷಿಸಿತು' ಎಂದು ಜಿ.ಆರ್. ನೆನಪು ಮಾಡಿಕೊಂಡಿದ್ದಾರೆ.

ಘಟನೆಗಳನ್ನು ನಿರೂಪಿಸುವಾಗ ಸಂಬಂಧಿಸಿದ ಎಲ್ಲ ವಿವರ ಮತ್ತು ವ್ಯಕ್ತಿಗಳು ಜಿ.ಆರ್. ಅವರ ನೆನಪಿಗೆ ಬಂದಿರುವುದರಿಂದ ಕೃತಿಗೆ ಸಮಗ್ರತೆಯ ಸ್ವರೂಪ ಲಭಿಸಿದೆ. ಸಾಂಡರ್ಸ್ ಹತ್ಯೆಯ ನಂತರ, ಭಗತ್‌ಸಿಂಗ್‌ನು ದುರ್ಗಾದೇವಿ ಮತ್ತು ಅವಳ ಮಗುವಿನೊಡನೆ ಸೇವಕ ವೇಷದಲ್ಲಿ ಲಾಹೋರಿನಿಂದ ತಪ್ಪಿಸಿಕೊಂಡ ಎಂಬ ವಿಚಾರದಲ್ಲಿ ಇರುವ ಭಿನ್ನ ಹೇಳಿಕೆಗಳನ್ನು ಗಮನಿಸಿ, ಸಮಕಾಲೀನ ವಿಚಾರಗಳಲ್ಲೇ ಇದ್ದ ಗೊಂದಲಗಳನ್ನು ಗುರುತಿಸಿದ್ದಾರೆ. ಅಂತಹ ವಿಷಯಗಳ ಪ್ರಸ್ತಾಪವಾದಾಗಲೇ ಸಂಬಂಧಿಸಿದ ವ್ಯಕ್ತಿಗಳ ವಿವರಗಳನ್ನು ಒದಗಿಸುತ್ತಾರೆ. ಉದಾಹರಣೆಗೆ, ಭಗತ್‌ಸಿಂಗ್‌ನ ವಿರುದ್ಧವಾಗಿ ಸಾಕ್ಷಿ ನೀಡಲು ಮುಂದಾಗಿದ್ದ ಪಂಜಾಬಿನ ಏಕೈಕ ವಿದ್ಯಾರ್ಥಿ ಹಂಸರಾಜ್ ವೋರಾ, ನಾಲ್ಕು ದಶಕಗಳ ನಂತರ ಬೆಂಗಳೂರಿನ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗೆ ಅಮೆರಿಕಾದಿಂದ ಬಾತ್ಮೀದಾರನಾಗಿ ಕೆಲಸ ಮಾಡುತ್ತಿದ್ದ ವಿಷಯವು ಕರ್ನಾಟಕದ ಜನರಿಗೆ ಮುಖ್ಯವಾಗುತ್ತದೆ. ಸೆಂಟ್ರಲ್ ಅಸೆಂಬ್ಲಿ ಬಾಂಬ್ ಪ್ರಕರಣದ ವಿಚಾರಣೆ ಸೆಷನ್ಸ್ ಕೋರ್ಟಿನಲ್ಲಿ ನಡೆದಾಗ ಭಗತ್‌ಸಿಂಗ್ ತನ್ನಪರ ತಾನೇ ವಾದ ಮಂಡಿಸಿದ. ಆಗ ಅವನು ಮಂಡಿಸಿದ ವಿಚಾರಗಳು ಇಂದಿಗೂ ಪ್ರಸ್ತುತ ಎನಿಸುತ್ತವೆ. ಆ ಹೇಳಿಕೆಯ ಪೂರ್ಣ ಪಾಠದ ಕನ್ನಡ ಅನುವಾದವನ್ನು ಜಿ.ಆರ್. ನೀಡಿರುವುದರಿಂದ ಕೃತಿಗೆ ಹೆಚ್ಚು ಅರ್ಥ ಬಂದಿದೆ.

ಭಗತ್‌ಸಿಂಗ್‌ಗೆ ಮರಣ ದಂಡನೆಯ ಶಿಕ್ಷೆ ವಿಧಿಸಿದ್ದನ್ನು ತಿಳಿದ ಅವನ ತಂದೆ, ಹೇಗಾದರೂ ಮಗನನ್ನು ಉಳಿಸುವ ಸಲುವಾಗಿ ಸಾಂಡರ್ಸ್ ಹತ್ಯೆಯಾದ ದಿನ ಭಗತ್‌ಸಿಂಗ್ ಲಾಹೋರಿನಲ್ಲೇ ಇರಲಿಲ್ಲವೆಂದು ಪ್ರಮಾಣೀಕರಿಸಲು ನ್ಯಾಯಾಲಯಕ್ಕೆ ಅಹವಾಲು ಸಲ್ಲಿಸಿದ್ದನೆಂಬ ವಿಷಯ ತಿಳಿದ ಭಗತ್‌ಸಿಂಗ್ ತಂದೆಯ ಪ್ರಯತ್ನವನ್ನು ಖಂಡಿಸಿ ಬರೆದಿದ್ದ ಪತ್ರದ ಕೆಲವು ಭಾಗಗಳ ಉದ್ಧರಣೆಯು ಭಗತ್‌ಸಿಂಗ್‌ನ ದೇಶಭಕ್ತಿ ಮತ್ತು ಪ್ರಾಮಾಣಿಕತೆಗಳ ಬಗ್ಗೆ ಗೌರವ ಮತ್ತು ಹೆಮ್ಮೆಯನ್ನು ಹುಟ್ಟಿಸುತ್ತವೆ.

ಅಂತೆಯೇ ಪ್ರಾಣಾನುಗ್ರಹ ನೀಡಬೇಕೆಂದು ನ್ಯಾಯಾಲಯಕ್ಕೆ ಮನವಿ ಸಲ್ಲಿಸುವಂತೆ ವಕೀಲರು ಸಲಹೆ ನೀಡಿದಾಗ 'ಅದರ ಅವಶ್ಯಕತೆ ಇಲ್ಲ. ಪ್ರಯೋಜನವೂ ಇಲ್ಲ. ಈ ಸಾಮ್ರಾಜ್ಯಶಾಹಿ ನ್ಯಾಯಾಲಯಗಳಿಂದ ನಾವು ನ್ಯಾಯವನ್ನು ನಿರೀಕ್ಷಿಸುವುದಿಲ್ಲ. ಸದ್ಯದಲ್ಲಿ ಭಾರತದ ಯುವಕರನ್ನು ಬಗ್ಗುಬಡಿಯಲು ಬ್ರಿಟಿಷ್ ಸರ್ಕಾರ ತೀರ್ಮಾನಿಸಿದಂತಿದೆ. ಇನ್ನೆಲ್ಲಿಯ ಪ್ರಾಣಾನುಗ್ರಹ! ಈ ಶಿಕ್ಷೆ ಜಾರಿಯಾಗುತ್ತದೆ. ಶತ್ರುವಿನಿಂದ ರಕ್ಷೆಯನ್ನು ಬೇಡುವುದಕ್ಕಿಂತ ಧೈರ್ಯವಾಗಿ ಸಾವನ್ನಪ್ಪುವುದು ಲೇಸು, ಸ್ವಾತಂತ್ರ್ಯ ದೀವಿಗೆಯ ದೀವಟಿಗ ನಾನು' ಎಂಬ ಉತ್ತರ ಕೊಟ್ಟ ಭಗತ್‌ಸಿಂಗ್ ದೇಶಭಕ್ತಿಯ ಪ್ರತೀಕವಾಗಿದ್ದಾನೆ.

ಭಗತ್‌ಸಿಂಗ್ ಸಾವಿಗೆ ಎಳ್ಳಷ್ಟೂ ಹೆದರಿದ್ದವನಲ್ಲ ಎಂಬುದಕ್ಕೆ ಅವನ ಕೊನೆಯ ದಿನದ, ಒಂದು ಮುಖ್ಯ ಘಟನೆ ಸಾಕ್ಷಿಯಾಗುತ್ತದೆ. ಇಂತಹ ಘಟನೆಯನ್ನು ದಾಖಲಿಸಿ ಜಿ.ಆರ್. ಎಲ್ಲರೂ ಭಗತ್‌ಸಿಂಗ್‌ಗೆ ಗೌರವ ಸಲ್ಲಿಸುವ ಅವಕಾಶ ಕಲ್ಪಿಸಿದ್ದಾರೆ. ನ್ಯಾಯಾಲಯದ ತೀರ್ಪಿನ ಪ್ರಕಾರ ಭಗತ್‌ಸಿಂಗ್‌ನನ್ನು ಗಲ್ಲಿಗೇರಿಸಬೇಕಾಗಿದ್ದದ್ದು 1931ರ ಮಾರ್ಚ್ 24ರಂದು ಬೆಳಗ್ಗೆ. 'ದಿ ಟ್ರಿಬ್ಯೂನ್' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಲೆನಿನ್ ಕುರಿತ ಪುಸ್ತಕದ ಒಂದು ವಿಮರ್ಶೆಯನ್ನು

ಗಮನಿಸಿದ್ದ ಭಗತ್‌ಸಿಂಗ್ ವಿಮರ್ಶಿತ ಪುಸ್ತಕವನ್ನು ಓದುವ ಆಸೆಯಿಂದ, ಅದನ್ನು ತಂದುಕೊಡುವಂತೆ ವಕೀಲ ಮೆಹ್ತಾ ಅವರನ್ನು ಕೋರಿದ್ದ. ಮೆಹ್ತಾ ಆ ಪುಸ್ತಕವನ್ನು 23ರಂದು ಭಗತ್‌ಸಿಂಗ್‌ಗೆ ಮುಟ್ಟಿಸಿದರು. ಮಾರನೆಯ ದಿನ ಬೆಳಕು ಹರಿಯುವ ಮೊದಲು ಆ ಪುಸ್ತಕವನ್ನು ಭಗತ್‌ಸಿಂಗ್ ಓದಿ ಮುಗಿಸಬೇಕಾಗಿತ್ತು. ಮೆಹ್ತಾ ಪುಸ್ತಕ ತಂದು ಕೊಟ್ಟು ಹೋದ ಎರಡು ಗಂಟೆಗಳ ನಂತರ, ಭಗತ್‌ಸಿಂಗ್‌ನ ಮುಂದೆ ಬಂದು ನಿಂತ ಜೈಲಿನ ಅಧಿಕಾರಿ 'ಸರ್‌ದಾರ್‌ಜಿ. ನಿನ್ನನ್ನು ಗಲ್ಲಿಗೇರಿಸಬೇಕೆಂಬ ಆಜ್ಞೆ ಬಂದಿದೆ; ಕೂಡಲೇ ತಯಾರಾಗು' ಎಂದ. ಜೈಲಿನಲ್ಲಿ ಹಿಂದೆಂದೂ ಸಂಜೆಯ ವೇಳೆ ಗಲ್ಲಿಗೇರಿಸುವ ಕೆಲಸ ಆಗಿರಲಿಲ್ಲ. ಸಾಮಾನ್ಯವಾಗಿ ಬೆಳಕು ಹರಿಯುವ ವೇಳೆಗೆ ಸ್ವಲ್ಪ ಮೊದಲು ಗಲ್ಲಿಗೇರಿಸಿ, ನಂತರ ಶವವನ್ನು ಮೃತನ ಸಂಬಂಧಿಗಳಿಗೆ ನೀಡುತ್ತಿದ್ದುದು ನಡೆದು ಬಂದಿದ್ದ ಪದ್ಧತಿ. ಆದರೆ, ಭಗತ್‌ಸಿಂಗ್ ಮತ್ತು ಅವನ ಗೆಳೆಯರ ವಿಷಯದಲ್ಲಿ ಈ ಪದ್ಧತಿಯನ್ನು ಕೈಬಿಟ್ಟು, 23ರಂದು ಸಂಜೆಯೇ ಸೂರ್ಯಾಸ್ತವಾದ ಸ್ವಲ್ಪ ಹೊತ್ತಿಗೆ ಭಗತ್‌ಸಿಂಗ್ ಮತ್ತು ಅವನ ಇಬ್ಬರು ಗೆಳೆಯರನ್ನು ಗಲ್ಲಿಗೇರಿಸಲಾಯಿತು. ಗಲ್ಲಿಗೇರಿಸಲು ಜೈಲಿನ ಅಧಿಕಾರಿ ಕರೆಯಲು ಬಂದಾಗ, ಮೆಹ್ತಾ ತಂದು ಕೊಟ್ಟಿದ ಪುಸ್ತಕವನ್ನು ಇನ್ನೂ ಓದುತ್ತಿದ್ದ ಭಗತ್‌ಸಿಂಗ್ 'ಸ್ವಲ್ಪ ನಿಧಾನ ಮಾಡು. ನಾನೀಗ ಈ ಪುಸ್ತಕ ಓದುತ್ತಿದ್ದೇನೆ. ಒಬ್ಬ ಕ್ರಾಂತಿಕಾರಿಯನ್ನು ಇನ್ನೊಬ್ಬ ಕ್ರಾಂತಿಕಾರಿ ಸಂದರ್ಶಿಸುವಂತಹ ಸಂದರ್ಭ ಇದು' ಎಂದು ಸ್ವಲ್ಪ ಹೊತ್ತು ಓದಿ, ನಂತರ ಪುಸ್ತಕ ಮುಚ್ಚಿಟ್ಟು 'ನಡಿ ಹೋಗೋಣ' ಎಂದು ಅಧಿಕಾರಿಯೊಡನೆ ಹೊರಟ. ಭಗತ್‌ಸಿಂಗ್‌ನ, ಕೊನೆಯ ಗಳಿಗೆಯವರೆಗೂ ಹೊಸದನ್ನು ತಿಳಿಯಬೇಕೆಂಬ ಆಸೆ ಮತ್ತು ಇನ್ನೇನು ಸಾಯಲಿದ್ದೇನೆ ಎಂಬ ಹೊತ್ತಿನಲ್ಲೂ ಇದ್ದ ಧೈರ್ಯವನ್ನು ಯಾರೂ ಮೆಚ್ಚದಿರಲು ಸಾಧ್ಯವಿಲ್ಲ.

ಕೇವಲ ಕಥೆ ಅಥವಾ ದಂತಕಥೆ ಆಗಿಬಿಡುವ ಎಲ್ಲ ಅವಕಾಶಗಳಿದ್ದ ಭಗತ್‌ಸಿಂಗ್‌ನ ಬದುಕನ್ನು ಜಿ.ಆರ್. ವಿಶ್ಲೇಷಿಸುತ್ತಾ ವೈಚಾರಿಕ ಕೃತಿಯನ್ನಾಗಿಸಿದ್ದಾರೆ. ವೈಚಾರಿಕ ಕೃತಿಯಾಗಿ ಕೇವಲ ಕೆಲವು ವಿದ್ವಾಂಸರ ಕಣ್ಣುಗಳಿಗೆ ಮಾತ್ರ ಕಾಣಿಸಿಕೊಳ್ಳಬಹುದಾಗಿದ್ದ ಕೃತಿಯನ್ನು ಆಸಕ್ತರ ಕೈಗಳಿಗೆ ಮಾತ್ರವಲ್ಲದೆ, ಮೆದುಳಿಗೂ ತಲುಪಿಸುವ ಸಾರ್ಥಕ ಕೆಲಸವನ್ನು ಜಿ.ಆರ್. ಮಾಡಿದ್ದಾರೆ. ಈ ಕೃತಿಯ ಮಹತ್ವ ಇರುವುದೇ ಆ ಸಫಲತೆಯಲ್ಲಿ.

ಅನೇಕ ಆಕರಗಳನ್ನು ಅಧ್ಯಯನ ಮಾಡಿ, ಭಗತ್‌ಸಿಂಗ್‌ನ ಬದುಕು ಮಾತ್ರವಲ್ಲದೆ, ಆ ಕಾಲದ ರಾಜಕೀಯ ಮತ್ತು ಸಾಮಾಜಿಕ ಬದುಕನ್ನೂ, ಪ್ರಾಮಾಣಿಕವಾಗಿ ಕಟ್ಟಿಕೊಡುತ್ತಾ, ವಿದ್ವತ್ ವಲಯ ಮತ್ತು ಆಸಕ್ತ ವಲಯ ಎರಡಕ್ಕೂ ಪ್ರಿಯವಾಗುವಂತೆ 'ಭಗತ್‌ಸಿಂಗ್'ನನ್ನು ದಾಖಲಿಸಿರುವ ಜಿ.ಆರ್. ಅವರಿಗೆ ಕೃತಜ್ಞತೆಗಳು ಸಲ್ಲಲೇಬೇಕು.

❑

ಜಿ.ಆರ್. ನಿಮ್ಮ ನೆನಪಾಯಿತು. ಹಾಗೆಯೇ 'ಚೆ' ಕೂಡ.....

ಸತ್ಯಾ ಎಸ್

"ವಿಶ್ವದ ಯಾವುದೇ ಭಾಗದಲ್ಲಾದರೂ ಅನ್ಯಾಯವಾಗುತ್ತಿರುವಾಗ, ಅದರಿಂದ ಕೆರಳಿ ನೀವು ಸ್ಪಂದಿಸಬಲ್ಲಿರಾದರೆ ನಿಜಕ್ಕೂ ನಾವು ಸಂಗಾತಿಗಳು".

ನನಗೆ, ಜಗತ್ತಿನ ಹೋರಾಟಗಾರರ ಅದಮ್ಯ ಚೇತನ 'ಚೆ'ಯ ಪರಿಚಯವಾಗಿದ್ದು ಈ ಮಾತುಗಳಿಂದ. ಸಾಮಾಜಿಕ ಚಳವಳಿಗಳಲ್ಲಿ ತೊಡಗಿಸಿಕೊಂಡಿದ್ದ ಗೆಳೆಯರ ಮನೆಗಳ ಗೋಡೆಗಳ ಮೇಲೆ, ಅವರು ಬರೆದ ಕವನಗಳಲ್ಲಿ, ಓದುವ ಒಂದಿಲ್ಲೊಂದು ಪುಸ್ತಕದಲ್ಲಿ, ಹೊಟ್ಟೆಯೊಳಗಿನಿಂದ ದನಿ ತೆಗೆದು ಹಾಡುವ ಹಾಡುಗಳಲ್ಲಿ, ಮೆರವಣಿಗೆಗಳ ಘೋಷಣೆಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಂಡ ಮಾತು ಹಾಗೂ ಹೆಸರುಗಳು ಇವು.

ಚೆ ಎಂದರೆ ಬೊಲಿವಿಯಾ, ಚೆ ಅಂದೆರ ಕ್ಯೂಬಾ, ಚೆ ಎಂದರೆ ಕಾವ್ಯ, ಚೆ ಎಂದರೆ ಸಾಹಿತ್ಯ ಎನ್ನುತ್ತಿದ್ದರು. ಬೊಲಿವಿಯಾ, ಕ್ಯೂಬಾ, ಕಾವ್ಯ, ಸಾಹಿತ್ಯಗಳಿಗೆಲ್ಲ ಕೊಂಡಿಯಾಗಿದ್ದ ಚೆ, ನಿಗೂಢವಾದಷ್ಟೂ ಪ್ರಿಯನಾಗತೊಡಗಿದ್ದ. ಚೆ ಕುರಿತು ವಿಪರೀತ ಕುತೂಹಲ. ಚೆಯ ಪೋಸ್ಟ್ ಕಾರ್ಡ್, ಚೆ ಚಿತ್ರವಿರುವ ಟೀಷರ್ಟ್, ಚೆ ಪೋಸ್ಟರ್ ಇತ್ಯಾದಿ ಇತ್ಯಾದಿಗಳೆಲ್ಲ ಕನಸು ಕಾಣುವ ಹುಡುಗ-ಹುಡುಗಿಯರನ್ನು ರೋಮಾಂಚನಗೊಳಿಸಿದರೆ, ನನಗೋ ಮನದ ತುಂಬಾ ಕೌತುಕ. 'ಎದೆಯಲ್ಲಿ ಕಾವ್ಯ,

ಕೈಯಲ್ಲಿ ಖಡ್ಗ' ಹಿಡಿದು, 'ಯೋಧ ನಡೆಸುವ ದಾರಿ ಕವಿಯ ದಾರಿಯು ಕೂಡ' ಎಂದ ಪಂಪನ ಪರಂಪರೆಯ 'ಚೆ' ಅರಿತಷ್ಟೂ ನಿಗೂಢವಾದವ.

ಇಂತಹ 'ಚೆ' ಕುರಿತ ಕುತೂಹಲವನ್ನು ಒಂದಿಷ್ಟು ತಣಿಸಿದ ಪುಸ್ತಕ ಜಿ.ಆರ್. ಅವರ 'ಚೆಗೆವಾರ'.

ಚೆಗೆವಾರನನ್ನು ನನಗೆ ಪರಿಚಯಿಸಿದ ವಾಕ್ಯದಿಂದಲೇ ಆರಂಭವಾಗುವ ಈ ಕೃತಿ ಚೆಗೆವಾರನ ಆ ಮಾತಿನ ಶಕ್ತಿಗೆ, ಅರ್ಥಕ್ಕೆ, ಚೆಗೆವಾರನನ್ನು ನಾವು ಗ್ರಹಿಸುವ ದಿಕ್ಕಿಗೆ ಸೂಚಿಯಾಗಿದೆ ಎನಿಸುತ್ತದೆ.

ಅಮೆರಿಕಾದ ಎಲ್ಲ ದೌರ್ಜನ್ಯ ಕಾರ್ಯಗಳಿಗೆ ಬಲಿಯಾಗಿದ್ದ ಪುಟ್ಟದೇಶ ಕ್ಯೂಬಾದಲ್ಲಿ ಪುಸ್ತಕ ಓದುತ್ತಲೇ, ಪದ್ಯ ಹೇಳುತ್ತಲೇ, ಜನರಿಗೆ ರಾಜಕೀಯದ ಪಾಠ ಹೇಳುತ್ತಲೇ, ರೈತರಿಗೆ ಅಕ್ಷರ ಕಲಿಸುತ್ತಲೇ, ರೋಗಿಗಳಿಗೆ ಔಷಧಿ ನೀಡುತ್ತಲೇ ಕೈಯಲ್ಲಿ ಬಾಂಬ್ ಮತ್ತು ಕೋವಿ ಹಿಡಿದು ಕ್ರಾಂತಿ ಮಾಡಿದವ 'ಚೆ'. ದಕ್ಷಿಣ ಅಮೆರಿಕಾದ ಅರ್ಜೆಂಟೀನಾದಲ್ಲಿ ಹುಟ್ಟಿ-ಬೆಳೆದು, ಚಿಲಿ, ಬೊಲಿವಿಯಾ, ಪೆರು, ಕೊಲಂಬಿಯಾ, ಗ್ವಾಟೆಮಾಲಾ, ಮೆಕ್ಸಿಕೋ, ವೆನಿಜುವೆಲಾ ಮುಂತಾದ ನರಳಿಕೆಯ ರಾಷ್ಟ್ರಗಳನ್ನೆಲ್ಲಾ ಸುತ್ತಾಡಿ ಕ್ಯೂಬಾದಲ್ಲಿ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿ ನಿಂತ ಚೆ ಕುವೆಂಪು ಕನಸಿದ 'ವಿಶ್ವಮಾನವ' ಕಲ್ಪನೆಗೆ ಎರಕ ಹೊಯ್ದ ಚೇತನ. ಇಂತಹ 'ಚೆ' ನಮ್ಮ-ನಿಮ್ಮಂತೆ ಬೆಳೆದ, ಶಾಲೆ ತಪ್ಪಿಸಿದ, ಕಾಯಿಲೆ ಮಲಗಿದ, ಊರೂರು ಅಲೆದ, ಸಿಕ್ಕ ಪುಸ್ತಕವೆಲ್ಲಾ ತಡಕಿದ, ಗೆಳೆಯರೊಂದಿಗೆ ಜಗಳವಾಡಿದ, ಪ್ರೇಮಿಸಿ ಮದುವೆಯಾದ, ಮಗಳನ್ನು ಅಪ್ಪಿಕೊಂಡು, ಅಳಿಸಿ, ಮುದ್ದಾಡಿದ 'ಚೆ'ಯನ್ನು ಪರಿಚಯಿಸುತ್ತದೆ 'ಚೆಗವಾರ'. ಆ ಮೂಲಕ 'ಚೆ' ನಮಗೆ ಮತ್ತಷ್ಟು ಹತ್ತಿರವಾಗುತ್ತಾನೆ. ಶ್ವೇತಭವನದ ಏಳುಸುತ್ತಿನ ಕೋಟೆಯೊಳಗಿರುವವರನ್ನು ಎದುರುಹಾಕಿಕೊಂಡ ಚೆ, ನಮ್ಮಂತೇ ಕನಸಿದವನೆಂದರೆ ಮತ್ತಷ್ಟೂ ಹತ್ತಿರದವನಾಗುತ್ತಾನೆ. ಹೋರಾಟದ ರಂಗದಲ್ಲಿ ಅಪ್ರತಿಮರಾದ ಚೆ ಮತ್ತು ಫಿಡೆಲ್ ಕೂಡ ನಮ್ಮ - ನಿಮ್ಮಂತೇ ಜಗಳವಾಡಿದರು ಎಂದರೆ ಅವರು ನಮ್ಮವರೇ ಆಗುತ್ತಾರೆ. ಹೀಗೆ ನಮ್ಮವನೇ ಆದ 'ಚೆ'ಯನ್ನು ನಮ್ಮೊಳಗು ಮಾಡುತ್ತದೆ 'ಚೆಗೆವಾರ'

ಹಾಗೆಂದ ಮಾತ್ರಕ್ಕೆ 'ಚೆಗೆವಾರ'ನಲ್ಲಿ 'ಚೆ' ಮಾತ್ರ ಇದ್ದಾನೆಂದಲ್ಲ. ವಾಸ್ತವವಾಗಿ 'ಚೆ'ನಲ್ಲಿಯೂ 'ಚೆ' ಮಾತ್ರ ಇರಲಿಲ್ಲ. ಅವನೊಳಗಿದ್ದದ್ದು ಸಾಮ್ರಾಜ್ಯಶಾಹಿಯ ದಬ್ಬಾಳಿಕೆಗೆ ಸಿಲುಕಿ ನರಳುತ್ತಿದ್ದ ಜನರ ನಿಟ್ಟುಸಿರುಗಳು. ಈ ಉಸಿರುಗಳ ಮೇಲೆ ನರ್ತಿಸುತ್ತಿದ್ದ ಶ್ರೀಮಂತರ ಅಟ್ಟಹಾಸವನ್ನು ಕೊನೆಗೊಳಿಸುವ ತುಡಿತ. ಇದಕ್ಕಾಗಿ ನೊಂದವರ ಮನೆಬಾಗಿಲು ಬಡಿವ ಆರ್ದ್ರತೆ. ಹೀಗಾಗಿ 'ಚೆಗೆವಾರ' ಒಂದು ಕಾಲಘಟ್ಟದ ಜಾಗತಿಕ ಚರಿತ್ರೆಯನ್ನೇ ಬಿಚ್ಚಿಡುತ್ತದೆ. ನೈಸರ್ಗಿಕವಾಗಿ, ಸಾಂಸ್ಕೃತಿಕವಾಗಿ ಸಂಪದ್ಭರಿತವಾದ ದಕ್ಷಿಣ ಅಮೆರಿಕಾ, ಈ ಸಂಪತ್ತನ್ನೆಲ್ಲ ಲೂಟಿ ಮಾಡಲು ಸಜ್ಜಾಗಿ ನಿಂತ ಅಮೆರಿಕಾ, ಈ ದೊಡ್ಡಣ್ಣನ ಸೇವೆಗೆ ಎಲ್ಲ ದೇಶಗಳಲ್ಲೂ ಸಂಚು ಹೂಡುತ್ತಿದ್ದ ಶಕುನಿಗಳು, ಇವರ ದೌರ್ಜನ್ಯಕ್ಕೆ ಬಲಿಯಾದ ಬಡಜನರು, ಅವರ ಅಜ್ಞಾನ,

ರೋಗ, ನಿರುದ್ಯೋಗ, ಅಸಹಾಯಕತೆ, ಇಂತಹ ನಿಟ್ಟುಸಿರುಗಳ ನಡುವೆಯೂ ಅಲ್ಲಲ್ಲಿ ಚಿಗುರುತ್ತಿದ್ದ ಸುಂದರ ಬದುಕಿನ ಕನಸುಗಳು, ಈ ಕನಸುಗಾರರ ಕೈಗೆ ಕೈ ಬೆಸೆದವರು, ಇವರೆಲ್ಲ ಸೇರಿ ಕಟ್ಟುವ ಜನಪರ ಹೋರಾಟಗಳು....'ಚೆ' ಓಡಾಡಿದ ದಾರಿಯಲ್ಲಿ ಹೆಜ್ಜೆ ಹೆಜ್ಜೆಗೂ ಕಂಡ ದೃಶ್ಯಗಳು ಇವು ಎನ್ನುತ್ತಲೇ ಇವು 'ಇಂದಿನ' ಜಾಗತಿಕ ವಿದ್ಯಮಾನ ಕೂಡ ಎನ್ನುವುದನ್ನು ನೆನಪಿಸುತ್ತದೆ 'ಚೆಗೆವಾರ'.

ಬಾಲ್ಯದಿಂದಲೂ 'ಅಸ್ತಮಾ' ಕಾಯಿಲೆಯಿಂದ ನರಳುತ್ತಲೇ ಬೆಳೆದ 'ಚೆ', ವೃತ್ತಿಯಾಗಿ ಆಯ್ದುಕೊಂಡಿದ್ದು ವೈದ್ಯಕೀಯವನ್ನು. ಈತನ ಮಹಾನ್ ಪ್ರವೃತ್ತಿ ಸಾಹಿತ್ಯದ ಓದು. ಇವನ ಬದುಕಿನ ಕನಸು ಸ್ವಾತಂತ್ರ್ಯ ಮತ್ತು ಸಮಾಜವಾದ. 'ಚೆ' ವ್ಯಕ್ತಿತ್ವದ ಈ ಮೂರನ್ನೂ ಸುಂದರವಾಗಿ ಬೆಸೆಯುತ್ತದೆ 'ಚೆಗೆವಾರ' ಕೃತಿ. ವೈದ್ಯನಾಗಿ ಜನರ ರೋಗ-ರುಜಿನಗಳಿಗೆ ಪೌಷ್ಠಿಕ ಆಹಾರದ ಕೊರತೆಯೇ ಕಾರಣ ಎಂದು ಅರಿತುಕೊಳ್ಳುವ ಚೆ, ಕ್ರಾಂತಿಕಾರಿಯಾಗಿ ಈ ಜನತೆಗೆ ಆಹಾರದ ಹಕ್ಕಿಗಾಗಿ ಹೋರಾಡುತ್ತಾನೆ. ಸಾಹಿತ್ಯದ ಸಾಮಾಜಿಕ ಜವಾಬ್ದಾರಿಯ ಕುರಿತು ಇನ್ನೂ ಚರ್ಚೆಗಳು ನಡೆಯುತ್ತಿದ್ದರೆ, ಸಾಹಿತ್ಯ, ಓದು, ಬರವಣಿಗೆ ಹಾಗೂ ಹೋರಾಟ ಮತ್ತು ಸ್ವಾತಂತ್ರ್ಯಗಳಿಗೆ ಇರುವ ಸಂಬಂಧವನ್ನು ತೆರೆದಿಡುತ್ತದೆ 'ಚೆಗೆವಾರ'.

ಜಾಗತೀಕರಣವು ಎಲ್ಲ ದೇಶಗಳ ಹೊಸ್ತಿಲಿಗೆ ತಂದು ಸುರಿದಿರುವ ಆರ್ಥಿಕ ಸಂಕಷ್ಟಗಳ ಈ ದಿನಗಳಲ್ಲಿ 'ಚೆಗೆವಾರ' ತೆರೆದಿಡುವ ದಕ್ಷಿಣ ಅಮೆರಿಕಾ ರಾಷ್ಟ್ರಗಳ ಅಂದಿನ ಸ್ಥಿತಿಗತಿಗಳು ನಮ್ಮ ನಾಡಿನ ಸ್ಥಿತಿ-ಗತಿಗೆ ಕನ್ನಡಿ ಹಿಡಿಯುತ್ತವೆ. 'ದಕ್ಷಿಣ ಅಮೆರಿಕಾ, ರಾಷ್ಟ್ರಗಳ ಎಲ್ಲ ಸಮಸ್ಯೆಗಳಿಗೂ ಕನ್ನಡಿ ಹಿಡಿಯುವಂತಿದ್ದ ಬೊಲಿವಿಯಾ'ದ ಉದಾಹರಣೆಗಳಿಂದ ಆರ್ಥಿಕ ಸ್ಥಿತ್ಯಂತರದಲ್ಲಿರುವ ರಾಷ್ಟ್ರಗಳು ಪಾಠ ಕಲಿಯಬೇಕಿದೆ. 'ವಿದೇಶೀ ಬಂಡವಾಳಿಗರು ಬೇಕಾದಷ್ಟು ಲಾಭ ದೋಚುತ್ತಿದ್ದಾಗ ಆ ದೇಶದ ಜನ ಸೊರಗಿ ಸುಣ್ಣವಾಗಿದ್ದರು' ಎನ್ನುವ 'ಚೆಗೆವಾರ' ಸಾಮ್ರಾಜ್ಯಶಾಹಿ ಶಕ್ತಿಗಳ ಉಡದಂತಹ ಹಿಡಿತವನ್ನು, ಕೊಳ್ಳುಬಾಕತನವನ್ನು ಬಹಿರಂಗಪಡಿಸುತ್ತದೆ.

'ಚೆಗೆವಾರ' ನಮಗೆ ಕೇವಲ ವ್ಯಕ್ತಿಯೊಬ್ಬನನ್ನು ಪರಿಚಯಿಸುವುದಿಲ್ಲ. ಇಡಿಯ ದಕ್ಷಿಣ ಅಮೆರಿಕಾವನ್ನು, ಅದರ ಸಾಂಸ್ಕೃತಿಕ ವೈವಿಧ್ಯತೆಯನ್ನು, ಭೂಗೋಳವನ್ನು, ಕ್ಯೂಬಾ, ಗ್ವಾಟೆಮಾಲಾ, ಕೊಲಂಬಿಯಾನಂತಹ ಪುಟ್ಟ ಪುಟ್ಟ ರಾಷ್ಟ್ರಗಳು ತಮ್ಮ ಸ್ವಾತಂತ್ರ್ಯ ಸಾರ್ವಭೌಮತ್ವಕ್ಕಾಗಿ ಮಾಡಿದ ಧೀರ ಹೋರಾಟಗಳನ್ನು ಪರಿಚಯಿಸುತ್ತದೆ. ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳಂತೆ ಸೇರುತ್ತಿದ್ದ ಕ್ರಾಂತಿಕಾರಿಗಳನ್ನು ಪರಿಚಯಿಸುತ್ತದೆ.

ವೆನಿಜುವೆಲಾ, ಕೊಲಂಬಿಯಾ, ಕೋಸ್ಟರಿಕಾ, ಪನಾಮಾ, ನಿಕರಾಗುವಾ, ಡಾಮಿನಿಕ್, ಪೋರ್ಟರಿಕೊ, ಜಮೈಕಾ, ಮೆಕ್ಸಿಕೋ ಇವೆಲ್ಲವೂ ದಕ್ಷಿಣ ಅಮೆರಿಕಾದ ನೆತ್ತಿಯ ಮೇಲಿರುವ ಪುಟ್ಟ ರಾಷ್ಟ್ರಗಳು. ಕೆಲವಂತೂ ಪುಟ್ಟ ದ್ವೀಪ ರಾಷ್ಟ್ರಗಳು. ವಿಶ್ವ ಸೌಂದರ್ಯ ಸ್ಪರ್ಧೆಗಳ ಸಂದರ್ಭದಲ್ಲಿ ಮೇಲಿಂದ ಮೇಲೆ ಕೇಳಲ್ಪಡುವ ಈ ಹೆಸರುಗಳನ್ನು ಅಲ್ಲಿ ಮಾತ್ರ ಪ್ರತಿಧ್ವನಿಸುವುದೇಕೆ ಎನ್ನುವುದಕ್ಕೆ ಈ ಕೃತಿಯಲ್ಲಿ ಸೂಚನೆ ಸಿಗುತ್ತವೆ. ತೈಲ, ಅದಿರು, ಕಾಡು, ವನ್ಯಜೀವಿ

ಮುಂತಾದ ನೈಸರ್ಗಿಕ ಸಂಪನ್ಮೂಲಗಳಲ್ಲಿ ಶ್ರೀಮಂತವಾಗಿರುವ ಈ ರಾಷ್ಟ್ರಗಳಲ್ಲಿ ಬೆವರು ಹರಿಸಿ ದುಡಿವ ಜನರೂ ಹೇರಳವಾಗಿದ್ದಾರೆ. ಇಂತಹ ಸಿರಿವಂತಿಕೆಯನ್ನು ಪಕ್ಕದಲ್ಲೇ ಇಟ್ಟುಕೊಂಡಿರುವ ಅಮೆರಿಕಾಕ್ಕೆ ಅವರನ್ನು ಕಾಲಕೆಳಗೆ ಹಾಕಿಕೊಳ್ಳುವ ದುಷ್ಟತನ. ದಶಕ ದಶಕಗಳಿಂದ ನೇರ ಆಳ್ವಿಕೆ, ಪರೋಕ್ಷ ಆಳ್ವಿಕೆ, ಬಹುರಾಷ್ಟ್ರೀಯ ಕಂಪನಿಗಳ ಆಳ್ವಿಕೆ ಮುಂತಾದವು ಗಳ ಮೂಲಕ ಈ ನೆಲದ ಸತ್ತ್ವವನ್ನೆಲ್ಲಾ ಹೀರುತ್ತಿರುವ ಅಮೆರಿಕಾ ಈಗ ಅಲ್ಲಿನ ಮಹಿಳೆಯರನ್ನು ತನ್ನ ಮಾರಾಟದ ಸರಕು ಮಾಡಿಕೊಳ್ಳುತ್ತಿದೆ. ಕೊಳ್ಳುವ ಜನರಿರುವಲ್ಲೆಲ್ಲ ತನ್ನ ಉತ್ಪನ್ನಗಳನ್ನು ತುಂಬಲು ಹಾತೊರೆದಿರುವ ಅಮೆರಿಕಾ ಆ ವಸ್ತುಗಳ ಜಾಹಿರಾತಿಗೆ ಈ ಬಡದೇಶಗಳ ಮಹಿಳೆಯರನ್ನು ಬಳಸಿಕೊಳ್ಳುವ ಸಲುವಾಗಿ ಅವರುಗಳಿಗೆ ಧಾರಾಳವಾಗಿ ವಿಶ್ವಸುಂದರಿಯರ ಪಟ್ಟ ಕಟ್ಟುತ್ತಿದೆ. ತನ್ನ ದೇಶದ ಉತ್ಪನ್ನಗಳಿಗೆ ಅಗತ್ಯವಾದ ದೈಹಿಕ ಲಕ್ಷಣವುಳ್ಳ ಮಹಿಳೆಯರನ್ನು ತಯಾರು ಮಾಡಲು ವೆನಿಜುವೆಲ್ಲಾದಲ್ಲಿ ಬೆಡಗಿಯರ ಹಲ್ಲು, ದವಡೆ, ಮೂಗು, ಹಣೆ, ಎದೆ, ಚರ್ಮಗಳನ್ನೆಲ್ಲ ತಿದ್ದಿ ತೀಡಿ ಹೊಸ ರೂಪ ಕೊಡುವ ಸೌಂದರ್ಯವರ್ಧಕ ಉದ್ಯಮವನ್ನೇ ಆರಂಭಿಸಿದೆ. 'ಚೆ' ಕಂಡು ಮರುಗಿದ ವೆನಿಜುವೆಲಾದ ಕಥೆಯನ್ನು 'ಚೆಗೆವಾರ'ದಲ್ಲಿ ಓದುವಾಗ ಇವೆಲ್ಲ ನೆನಪಾಗುತ್ತವೆ. ಹಲ್ಲು ಕಿರಿದು, ಮೈ ತೆರೆದು ನಿಂತ ವಿಶ್ವ ಸುಂದರಿಯರ ಹಿಂದೆ ಅವರ ನಾಡಿನ ಲಕ್ಷ ಲಕ್ಷ ಜನರ ನಿಟ್ಟುಸಿರು, ನರಳಿಕೆಗಳು ನೆನಪಾಗುತ್ತವೆ.

ಈ ದೇಶದಿಂದ ಹೊರಗೆ ಎಲ್ಲಿಗಾದರೂ ಹೋಗುವುದಾದರೆ 'ಚೆ' ನಡೆದಾಡಿದ, ದಕ್ಷಿಣ ಅಮೆರಿಕಾದ ಆ ರಾಷ್ಟ್ರಗಳಿಗೆ ಹೋಗಬೇಕು. ಆಧುನಿಕ ಸಾಮ್ರಾಜ್ಯಶಾಹಿಯ ವಿರುದ್ಧ ಇಂದಿಗೂ ಹೋರಾಟದ ಬೆಳಕನ್ನು ಹೊತ್ತಿಸುತ್ತಿರುವ 'ಚೆ' ಸಂತತಿಯನ್ನು ನೋಡಬೇಕು ಎನಿಸುವಂತೆ ಮಾಡುತ್ತದೆ 'ಚೆಗೆವಾರ'.

'ಚೆ' ಹೆಜ್ಜೆ ಇಟ್ಟಲ್ಲೆಲ್ಲ ಪ್ರೀತಿಯ ಸೆಲೆ ಹರಿಸಿದವನು. ಹೋರಾಟದ ಕಾವು ಕೊಟ್ಟವನು. ಓದಿನ ಹುಚ್ಚು ಹರಡಿದವನು. ಜಿ.ಆರ್. ಹೇಳುತ್ತಾರೆ. "ಸಮಾಜದಲ್ಲಿರುವ ವೈರುಧ್ಯಗಳನ್ನು ಅಳಿಸಿಹಾಕಲು ಇನ್ನೊಬ್ಬ ಚೆ ಬರುತ್ತಾನೆ ಮತ್ತೊಬ್ಬ ಚೆ ಬರುತ್ತಾನೆ. ಬರುತ್ತಲೇ ಇರುತ್ತಾನೆ" ಕವಿ ಕನಸುತ್ತಾನೆ,

ಕತ್ತಲೆಯ ಮಧ್ಯದಲಿ ಮಾತುಗಳು ನೂರಾರು
ಒಂದೊಂದು ಮನೆಯಲ್ಲೂ ಒಬ್ಬೊಬ್ಬ 'ಚೆ'

ಕವಿ ಸು.ರಂ. ಎಕ್ಕುಂಡಿ ಹೇಳುತ್ತಿದ್ದರು : 'ಹೋರಾಟದ ಅಂಗಳಕ್ಕೆ ನೇರವಾಗಿ ಹೋಗಲಾರದ ಯೋಧ, ಸೈನಿಕರಿಗೆ ಬೇಕಾದ ಕತ್ತಿಗುರಾಣಿಗಳನ್ನು ಸಿದ್ಧಪಡಿಸಿಕೊಡುತ್ತಾನೆ.' ಜಿ.ಆರ್. ನಿಮ್ಮನ್ನು ನೆನೆದಾಗ ಈ ಮಾತು ನೆನಪಾಗುತ್ತದೆ. ಹಾಗೆಯೇ 'ಚೆ' ಕೂಡ.

❑

ಕ್ರಾಂತಿಕಾರಿ ಚೇತನದ ರೋಮಾಂಚಕ ಕಥೆ

ಎನ್. ಗಾಯತ್ರಿ

ದೇಶದ ಸ್ವಾತಂತ್ರ್ಯಕ್ಕಾಗಿ, ದುಡಿಯುವ ಜನರ ಹಿತರಕ್ಷಣೆಗಾಗಿ ಮತ್ತು ಸಮಾಜವಾದಿ ಕ್ರಾಂತಿಗಾಗಿ ತಮ್ಮ ಸರ್ವಸ್ವವನ್ನು ಸಮರ್ಪಿಸಿದ ಧೀಮಂತ ಚೇತನಗಳ ಪರಿಚಯ, ಸಾಧನೆಯನ್ನು ಕಿರುಹೊತ್ತಿಗೆಗಳ ಮೂಲಕ ತರುವ ಒಂದು ಯೋಜನೆಯನ್ನು ನವಕರ್ನಾಟಕ ಪ್ರಕಾಶನ ಸಂಸ್ಥೆಯು ತನ್ನ 25ನೇ ಹುಟ್ಟುಹಬ್ಬದ ಸವಿನೆನಪಿಗೆಂದು 1986ರಲ್ಲಿ ಹಮ್ಮಿಕೊಂಡಿತ್ತು. ಈ ಕ್ರಾಂತಿ ಕಿಡಿ ಮಾಲಿಕೆಗಾಗಿ ಜಿ.ಆರ್. ರಚಿಸಿದ ಪುಸ್ತಕ 'ಭೂಪೇಶ್ ಗುಪ್ತ'.

1914ರ ಅಕ್ಟೋಬರ್ 20ರಂದು ಈಗಿನ ಇಟ್ನಾ ಎಂಬ ಗ್ರಾಮದಲ್ಲಿ ಜಮೀನ್ದಾರ್ ಕುಟುಂಬದಲ್ಲಿ ಜನಿಸಿದ ಭೂಪೇಶ್ ಗುಪ್ತ ಮೊದಲ ಬಾರಿ ಸೆರೆಮನೆ ವಾಸ ಅನುಭವಿಸಿದ್ದು 1930ರಲ್ಲಿ. ಆಗ ಭೂಪೇಶರ ವಯಸ್ಸು ಹದಿನಾರು ವರ್ಷ. ಬಂಗಾಲದ ಅನುಶೀಲನ ಚಳವಳಿಯಲ್ಲಿ ಭಾಗವಹಿಸಿದ್ದ ಭೂಪೇಶರು ನಂತರ ಕಾನೂನು ವ್ಯಾಸಂಗ ಮಾಡಲು ಇಂಗ್ಲೆಂಡಿಗೆ ತೆರಳಿದಾಗಲೂ ಹೋರಾಟದ ಹಾದಿಯನ್ನು ಮರೆಯಲಿಲ್ಲ. ಅಲ್ಲಿಯೇ ಎನ್.ಕೆ. ಕೃಷ್ಣನ್ ಮತ್ತು ಜ್ಯೋತಿಬಸು ಅವರೊಂದಿಗೆ ಹೋರಾಟದ ಸಾಹಚರ್ಯ ಅನುಭವಿಸಿದರು. ಲಂಡನ್ನಿನಲ್ಲಿ ಕಮ್ಯೂನಿಸ್ಟ್ ಹೋರಾಟದ ಸೈದ್ಧಾಂತಿಕ ದೀಕ್ಷೆಯನ್ನು ಕೈಗೊಂಡ ಭೂಪೇಶರು ಭಾರತಕ್ಕೆ ಹಿಂತಿರುಗಿದ ಮೇಲೂ ತಮ್ಮ ಜೀವಿತದ ಎಂಬತ್ತೊಂದು ವರ್ಷಗಳ ವರೆಗೂ ಅದಕ್ಕೆ ಬದ್ಧವಾಗಿಯೇ ಉಳಿದರು; ಅಚಲವಾಗಿ ಅದರ ಬೆಳವಣಿಗೆಗಾಗಿ ಶ್ರಮಿಸಿದರು. ಇಂತಹ ನಿಸ್ವಾರ್ಥ ವ್ಯಕ್ತಿಯ ಪರಿಚಯ

ವನ್ನು ಮಾಡಿಕೊಡುವ ಸಂದರ್ಭದಲ್ಲಿ ಜಿ.ಆರ್. ಅವರು ಆ ಕಾಲದ ಸಾಮಾಜಿಕ, ರಾಜಕೀಯ ಸನ್ನಿವೇಶದ ಪರಿಚಯ ಮಾಡಿಕೊಡುತ್ತಾರೆ. ಸ್ವಾತಂತ್ರ್ಯ ಚಳವಳಿಯ ವಿವಿಧ ಛಾಯೆಗಳನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡುತ್ತ ಸ್ವಾತಂತ್ರ್ಯಪೂರ್ವ ಭಾರತದ ರಾಜಕೀಯ ಚಿತ್ರವನ್ನು ನಮ್ಮ ಮುಂದಿಡುತ್ತಾರೆ.

ಭೂಪೇಶ್‌ಗುಪ್ತ ಅವರ ಕಮ್ಯೂನಿಸ್ಟ್ ಚಳವಳಿಯ ಪ್ರವೇಶ ಮತ್ತು ಅವರು ವಹಿಸಿದ ಪಾತ್ರವನ್ನು ಕುರಿತು ಬರೆಯುವಾಗ ಜಿ.ಆರ್.ಅವರು ಅದನ್ನು ವ್ಯಕ್ತಿಯೊಬ್ಬನ ಚರಿತ್ರೆಯೆಂಬಂತೆ ಸೀಮಿತಗೊಳಿಸದೆ ಆ ಕಾಲದ ರಾಜಕೀಯ ವಿಶ್ಲೇಷಣೆಯ ಹಿನ್ನೆಲೆಯಲ್ಲಿಯೇ ನೋಡುತ್ತಾರೆ. ಅದರ ಜೊತೆಗೆ ಚರಿತ್ರೆಯ ಆ ಪ್ರಮುಖ ಘಟ್ಟದಲ್ಲಿ ಕಮ್ಯೂನಿಸ್ಟ್ ಪಕ್ಷವು ವಹಿಸಿದ ಪಾತ್ರವನ್ನು ಕುರಿತು ಇಂದಿನ ವಿದ್ವಾಂಸರು ಮಾಡಿರುವ ಆಕ್ಷೇಪಣೆಯನ್ನು ಕುರಿತೂ ವಿಶ್ಲೇಷಣೆ ನೀಡುತ್ತಾರೆ.

ರೈತ-ಕಾರ್ಮಿಕರ ಹೋರಾಟಗಳ ನಡುವಿನಲ್ಲಿ ದಿಟ್ಟ ನಾಯಕರಾಗಿ ಹೊರಹೊಮ್ಮಿದ ಭೂಪೇಶ್ ಗುಪ್ತರವರು ಭಾಗವಹಿಸಿದ 'ತೇಭಾಗ ಚಳವಳಿ'ಯ ಪರಿಚಯವನ್ನು ಈ ಹೊತ್ತಿಗೆಯಲ್ಲಿ ಮಾಡಿಕೊಟ್ಟಿದ್ದಾರೆ. 1947ರಲ್ಲಿ ಭಾರತವು ರಾಜಕೀಯ ಸ್ವಾತಂತ್ರ್ಯವನ್ನು ಪಡೆದ ನಂತರ ಪಶ್ಚಿಮ ಬಂಗಾಳದಲ್ಲಿ ಕಮ್ಯೂನಿಸ್ಟ್ ಪಕ್ಷವು ನಿಷೇಧಿಸಲ್ಪಟ್ಟಿತು. ಆ ಸಂದರ್ಭದಲ್ಲಿ ಭೂಗತರಾಗಿದ್ದ ಭೂಪೇಶ್ ಗುಪ್ತ ಭೂಗತರಾಗಿದ್ದುಕೊಂಡೇ ಪಕ್ಷವನ್ನು ಕಟ್ಟಿದ ರೀತಿ, ಬೆಳೆಸಿದ ಶ್ರಮ ಎಲ್ಲದರ ವಿವರಣೆ ಇಲ್ಲಿದೆ.

1952ರಲ್ಲಿ ಮೊದಲ ಬಾರಿಗೆ ಚುನಾಯಿತರಾಗಿ ರಾಜ್ಯಸಭೆ ಪ್ರವೇಶಿಸಿದ ಭೂಪೇಶ್ ಗುಪ್ತರು ಮೂವತ್ತು ವರ್ಷಗಳ ಕಾಲ ಅವಿಚ್ಛಿನ್ನವಾಗಿ ರಾಜ್ಯಸಭೆಗೆ ಆಯ್ಕೆಗೊಳ್ಳುತ್ತಲೇ ಬಂದರು. ಇದು ಅವರ ಒಂದು ವೈಯಕ್ತಿಕ ದಾಖಲೆ ಮತ್ತು ಅವರ ಪಾರ್ಲಿಮೆಂಟರಿ ವಾಕ್ಪಟುತ್ವಕ್ಕೇ ಒಂದು ಭಾರಿ ನಿದರ್ಶನ. ಪಾರ್ಲಿಮೆಂಟರಿ ಕ್ಷೇತ್ರವನ್ನು ವರ್ಗಸಮರ ಶಸ್ತ್ರವನ್ನಾಗಿಯೂ ಬಳಸಲು ಸಾಧ್ಯವಿದೆಯೆಂಬುದನ್ನು ತಮ್ಮ ಉನ್ನತ ಗುಣಮಟ್ಟದ ಭಾಗವಹಿಸುವಿಕೆಯಿಂದ ನಿದರ್ಶನ ಪೂರ್ವಕವಾಗಿ ಸ್ಥಾಪಿಸಿ ತೋರಿಸಿದ ಭೂಪೇಶ್ ಗುಪ್ತರವರು ಪಾರ್ಲಿಮೆಂಟಿನಲ್ಲಿ ಮಂಡಿಸಿದ ಭಾಷಣಗಳ ವಿವರಗಳನ್ನು ಸಾಧ್ಯವಾದಷ್ಟು ಉಲ್ಲೇಖಿಸಿ, ಅದರ ಸೊಗಸನ್ನು ನಮಗೆ ಜಿ.ಆರ್. ಪರಿಚಯಿಸುತ್ತಾರೆ. ಅಷ್ಟೇ ಅಲ್ಲ, ಪಾರ್ಲಿಮೆಂಟರಿ ವ್ಯವಹಾರಗಳ ಮಧ್ಯೆ ರೈತ-ಕಾರ್ಮಿಕ ಚಳವಳಿಗಳಿಂದ ಬೇರ್ಪಟ್ಟು ನಿಲ್ಲುವ ಹವ್ಯಾಸವನ್ನು ಭೂಪೇಶ್ ಎಂದೂ ಮೈಗೂಡಿಸಿಕೊಂಡಿರಲಿಲ್ಲ ಎಂಬುದನ್ನು ನಿದರ್ಶನ ಪೂರ್ವಕವಾಗಿ ಜಿ.ಆರ್. ಪ್ರಸ್ತಾಪಿಸುತ್ತಾರೆ.

ಬಂಗ್ಲಾದೇಶದ ವಿಮೋಚನೆಯಲ್ಲಿ ಭೂಪೇಶ್ ಗುಪ್ತ ವಹಿಸಿದ ಪಾತ್ರ, ತಳೆದ ನಿಲುವು ಎಲ್ಲವನ್ನೂ ಸವಿವರವಾಗಿ ಪ್ರಸ್ತಾಪಿಸಿ ಅವರ ಶಾಂತಿಪ್ರಯತ್ನಗಳನ್ನು ಮೆಚ್ಚುಗೆಯಿಂದ ದಾಖಲಿಸುತ್ತಾರೆ. 'ನ್ಯೂ ಏಜ್' ಪತ್ರಿಕೆಯ ಸಂಪಾದಕರಾಗಿ ಅವರು ತೋರಿದ ಕಾರ್ಯದಕ್ಷತೆಯನ್ನು ಕಣ್ಣಿಗೆ ಕಟ್ಟುವಂತೆ ರಚಿಸಿದ್ದಾರೆ. ವಿಶ್ವಶಾಂತಿ ಮಂಡಲಿಯ ಸದಸ್ಯರಾಗಿದ್ದ ಭೂಪೇಶ್ ಗುಪ್ತರು ಭಾರತದ ಪಾರ್ಲಿಮೆಂಟಿನ ಪ್ರತಿನಿಧಿಯಾಗಿ ಹಾಗೂ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿ

ಯಾಗಿ ಹೇಗೆ ಅಂತರರಾಷ್ಟ್ರೀಯ ವ್ಯಕ್ತಿಯಾಗಿ ಪ್ರಮುಖರಾದರು ಎಂಬುದನ್ನು ಸವಿವರವಾಗಿ ಈ ಪುಸ್ತಕದಲ್ಲಿ ಚರ್ಚಿಸಿದ್ದಾರೆ.

ಬದುಕಿನಲ್ಲಿ ಬ್ರಹ್ಮಚಾರಿಯಾಗಿ ತನ್ನದೆನ್ನುವ ಸಂಸಾರವಿಲ್ಲದಿದ್ದರೂ ಹೇಗೆ ಕಮ್ಯುನಿಸ್ಟ್ ಕುಟುಂಬಿಯಾಗಿ ಅನಂತ ಸಂಸಾರವನ್ನು ಕಟ್ಟಿಕೊಂಡು ಸರ್ವಜನಾದರಣೀಯ ವ್ಯಕ್ತಿಯಾಗಿ ಭೂಪೇಶ್ ರೂಪುಗೊಂಡರು ಎಂಬುದನ್ನು ಜೀವನಚರಿತ್ರೆಯಲ್ಲಿ ಜಿ.ಆರ್. ಸರಳವಾಗಿ ನಿರೂಪಿಸಿದ್ದಾರೆ.

❑

ಫ್ರೆಡರಿಕ್ ಏಂಗಲ್ಸ್ - ಒಂದೆರಡು ಅನಿಸಿಕೆಗಳು

ಟಿ.ಎಸ್. ವೇಣುಗೋಪಾಲ್

ಇತ್ತೀಚಿನ ದಿನಗಳಲ್ಲಿ ಯಾರಾದರೂ ಮಾರ್ಕ್ಸ್‌ವಾದದ ಬಗ್ಗೆ ಬರೆಯುತ್ತಾರೆ ಅಥವಾ ಮಾತನಾಡುತ್ತಾರೆ ಅಂದರೆ ಅದನ್ನು ಹೀಗಳೆಯುವುದಕ್ಕೆ ಮಾತನಾಡುತ್ತಿದ್ದಾರೆ ಅಂತ ಭಾವಿಸಬಹುದು. ಯಾಕೆಂದರೆ, ನಮ್ಮ ಬಹುಪಾಲು ಲೇಖಕರು ಅದರ ಕಾಲ ಮುಗಿಯಿತು ಅಂತ ತೀರ್ಮಾನಿಸಿಬಿಟ್ಟಿದ್ದಾರೆ. ಅಂತಹುದರಲ್ಲಿ ಮಾರ್ಕ್ಸ್‌ವಾದವನ್ನು ಗಂಭೀರವಾಗಿ ಓದುವವರಂತು ಸಿಗುವುದು ಕಷ್ಟ. ಪರಿಸ್ಥಿತಿ ಹೀಗಿರುವಾಗ ಯಾರಾದರೂ ಅದು ಇಂದಿಗೂ ಪ್ರಸ್ತುತ ಅಂತ ಆ ಬಗ್ಗೆ ಗಂಭೀರವಾಗಿ ಅಧ್ಯಯನ ಮಾಡಿ ಬರೆಯುತ್ತಿದ್ದಾರೆ ಅಂದರೆ ಆಶ್ಚರ್ಯವೇ ಆಗುತ್ತದೆ. ಜೊತೆಗೆ ಅಂತಹ ಪುಸ್ತಕದ ರಚನೆಯೂ ಈಗ ಕಷ್ಟದ ಕೆಲಸವೆ. ಆ ಲೇಖಕನ ಮೇಲೆ ತುಂಬಾ ಜವಾಬ್ದಾರಿ ಇರುತ್ತದೆ. ಯಾಕೆಂದರೆ ಆತ ಮಾರ್ಕ್ಸ್‌ವಾದದ ಬಗ್ಗೆ ಎದ್ದಿರುವ ಅನುಮಾನಗಳನ್ನು, ಟೀಕೆಗಳನ್ನು ಗಮನದಲ್ಲಿಟ್ಟುಕೊಂಡೇ ತನ್ನ ಕೃತಿಯನ್ನು ರಚಿಸಬೇಕಾಗುತ್ತದೆ. ಮಾರ್ಕ್ಸ್‌ವಾದದ ಅಧ್ಯಯನಕ್ಕೆ ತಮ್ಮ ಜೀವನದ ಬಹುಕಾಲವನ್ನು ಮುಡಿಪಾಗಿಟ್ಟಂತಹವರು ಈ ಸಾಹಸಕ್ಕೆ ಕೈಹಾಕಿದರಂತೂ ನಮ್ಮ ನಿರೀಕ್ಷೆ ಇಮ್ಮಡಿಯಾಗುತ್ತದೆ.

ಇಂತಹುದೇ ನಿರೀಕ್ಷೆಯನ್ನು ಜಿ.ಆರ್. ಅವರ ಪುಸ್ತಕ "ಫ್ರೆಡರಿಕ್ ಏಂಗಲ್ಸ್" ಹುಟ್ಟಿಹಾಕಿದೆ. ಯಾಕೆಂದರೆ ಅದು ಕೇವಲ ಒಂದು ಸಾಮಾನ್ಯ ಜೀವನ ಚರಿತ್ರೆಯಷ್ಟೇ ಆಗಿಬಿಟ್ಟರೆ ಅಂತಹುದು ಈಗಾಗಲೇ ಹಲವಾರು ಬಂದಿವೆ. ಹಾಗಾಗಿ ಅದು ಏಂಗಲ್ಸನ ಜೀವನಚರಿತ್ರೆಯಾಗುವುದರ ಜೊತೆಗೆ, ಮಾರ್ಕ್ಸ್‌ವಾದದ ಚರಿತ್ರೆಯೂ ಆಗಬೇಕು ಮತ್ತು ಅದು

ಮಾರ್ಕ್ಸ್‌ವಾದದ ಬಗ್ಗೆ ಎತ್ತುತ್ತಿರುವ ಹಲವಾರು ತಕರಾರನ್ನೂ ಎದುರಿಸಬೇಕಾಗುತ್ತದೆ. ಅಷ್ಟೇ ಅಲ್ಲ ಭಾರತದ ಪರಿಸ್ಥಿತಿಗೂ ಪ್ರಸ್ತುತವಾಗಬೇಕಾಗುತ್ತದೆ. ಸಂತೋಷದ ವಿಷಯವೆಂದರೆ ಇವೆಲ್ಲವನ್ನು ಜಿ.ಆರ್. ಅವರ ಪುಸ್ತಕ ಗಮನಿಸುತ್ತದೆ.

ಜಿ.ಆರ್. ಅವರು ಮೊದಲಿಗೆ, ಈ 'ಚಿರಂತನ ಯುವಕ' ಏಂಗಲ್ಸ್‌ನ ಯೌವನದ ಬದುಕನ್ನು ಚಿತ್ರಿಸುತ್ತಾರೆ. ಇದನ್ನು ಅವರು ಏಂಗಲ್ಸ್ ಅವರ ಸಮಕಾಲೀನರ ಮಾತುಗಳಲ್ಲೇ ಕಟ್ಟಿಕೊಡುತ್ತಾರೆ. ಬಹುಶಃ ಏಂಗಲ್ಸ್‌ನ ವಿಷಯಕ್ಕಂತೂ ಇದು ತುಂಬಾ ಸೂಕ್ತವಾದ ಕ್ರಮ. ಆತ ಒಬ್ಬ ಚಿಂತಕನಾಗಿ, ಕ್ರಾಂತಿಕಾರಿಯಾಗಿ ಮತ್ತು ಒಬ್ಬ ಮಾನವಜೀವಿಯಾಗಿ ತನ್ನೆಲ್ಲಾ ಸಹಚರರನ್ನು ತನ್ನ ತೆಕ್ಕೆಯಲ್ಲಿ ತೆಗೆದುಕೊಂಡ ಅಸಾಧಾರಣ ವ್ಯಕ್ತಿ. ಹಾಗಾಗಿ, ಅವನ ಬದುಕು ಅವರ ಮಾತಿನಲ್ಲಿ ಮೂಡಿಬರುವುದೇ ಒಳ್ಳೆಯದು.

ಅವನ ಬಾಲ್ಯ, ತಂದೆಯೊಂದಿಗಿನ ವಿರಸ, ಅಧ್ಯಯನ, ಮಾರ್ಕ್ಸ್ ಒಂದಿಗಿನ ಒಡನಾಟ, ಕಾವ್ಯರಚನೆಯ ಪ್ರಯತ್ನ, ಸ್ವ-ಇಚ್ಛೆಯಿಂದ ಮಿಲಿಟರಿ ಸೇವೆ ಹೀಗೆ ಏಂಗಲ್ಸ್ ಬದುಕಿನ ಒಂದೊಂದೇ ಆಯಾಮ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಇವುಗಳ ಪ್ರಭಾವ ಅವನ ಜೀವನವಿಡೀ ಆದದ್ದೂ ಕೂಡ ಪುಸ್ತಕದ ಉದ್ದಕ್ಕೂ ದಾಖಲಾಗುತ್ತದೆ.

ಜೊತೆ-ಜೊತೆಯಲ್ಲೇ ಏಂಗಲ್ಸ್‌ನ ಚಿಂತನೆ ರೂಪು ತಳೆದ ರೀತಿಯನ್ನು ದಾಖಲಿಸುತ್ತಾ ಹೋಗುತ್ತಾರೆ. ಅವನು ಜೀವನವಿಡೀ ಸಮಕಾಲೀನ ಚಿಂತಕರ ಜೊತೆಗೆ ಕಾದಾಡುತ್ತಲೇ ಬೆಳೆದವನು. ಅವರಿಂದ ಪಡೆಯಬೇಕಾದ್ದನ್ನು ಪಡೆಯುತ್ತಾ, ವಿರೋಧಿಸಬೇಕಾದ್ದನ್ನು ವಿರೋಧಿಸುತ್ತಾ ತನ್ನ ಚಿಂತನೆಯನ್ನು ರೂಪಿಸಿಕೊಂಡವನು.

ಆ ಕಾಲದಲ್ಲಿ ಪ್ರಚಂಡ ತತ್ವಜ್ಞಾನಿಯಾಗಿ ಮೆರೆದವನು. ಅವನಿಗೆ ನೂರಾರು ಅನುಯಾಯಿಗಳಿದ್ದ ಕಾಲ ಅದು. ಅವನ ಅನುಯಾಯಿಗಳಲ್ಲೇ ಎರಡು ಗುಂಪುಗಳಿದ್ದವು. ಒಂದು ಗುಂಪಿನವರು ಕಟ್ಟಾ ಧಾರ್ಮಿಕ ಪರಂಪರೆಗೆ ಜೋತುಬಿದ್ದು, ಅಂದಿನ ರಾಜಕೀಯ ವ್ಯವಸ್ಥೆಯನ್ನು ಬೆಂಬಲಿಸುತ್ತಿದ್ದರು. ಅದಕ್ಕೆ ಪ್ರತಿಯಾಗಿ ಇನ್ನೊಂದು ಗುಂಪಿನವರು, ಹೆಗೆಲ್‌ನ ಚಿಂತನೆಯನ್ನು ನಾಸ್ತಿಕತೆ ಮತ್ತು ಪ್ರಗತಿಗಾಮಿ ಆಯಾಮದಿಂದ ಅರ್ಥೈಸುತ್ತಿದ್ದವರು. ಈ ಎಡಪಂಥೀಯ "ಯುವ ಹೆಗಲಿಯನ್ನರ" ಗುಂಪಿನಲ್ಲೇ ಮಾರ್ಕ್ಸ್ ಸಹ ಇದ್ದ. ಇಲ್ಲಿಂದಲೇ ಮಾರ್ಕ್ಸ್‌ವಾದದ ದ್ವಂದ್ವಮಾನ ಗ್ರಹಿಕೆ ರೂಪು ಪಡೆದದ್ದು. "ಪ್ರತಿಯೊಂದು ವಸ್ತುವೂ ಸದಾಕಾಲ ಬದಲಾವಣೆಯಾಗುತ್ತಿರುತ್ತದೆ. ಮತ್ತು ತನ್ನ ಆಂತರಿಕ ಬೆಳವಣಿಗೆಯಿಂದಾಗಿ, ಅಸ್ತಿತ್ವದಲ್ಲಿರುವ ಪ್ರತಿಯೊಂದು ವಸ್ತುವೂ ಕ್ರಮೇಣ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಿರುತ್ತದೆ. ಮತ್ತು ಹೊಸದಾದ ಹಾಗೂ ಹೆಚ್ಚು ತರ್ಕಬದ್ಧವಾದ ಸ್ವರೂಪವನ್ನು ತಾಳುತ್ತಿರುತ್ತದೆ" - ಇದು ದ್ವಂದ್ವಮಾನ ಗ್ರಹಿಕೆ.

ಶೆಲ್ಲಿಂಗ್‌ನಂತಹ ಕೆಲ ಹೆಗಲಿಯನ್ನರು, ಹೆಗಲ್‌ನನ್ನು ಯಥಾಸ್ಥಿತಿಯನ್ನು ಸಾಧಿಸಲು ಬಳಸಿಕೊಂಡರು. ಆದರೆ, ಸ್ವತಃ ಹೆಗೆಲ್ ಸಹ ತನ್ನ ನಿರೂಪಣೆಯ ಸೂಕ್ಷ್ಮತೆಯನ್ನು

ಗ್ರಹಿಸಿರಲಿಲ್ಲವೇನೋ ಎನ್ನುವಷ್ಟರ ಮಟ್ಟಿಗೆ ಏಂಗಲ್ಸ್‌ನು ಅದಕ್ಕೆ ಕ್ರಾಂತಿಕಾರಿ ಅರ್ಥವನ್ನು ಕಲ್ಪಿಸಿಕೊಡುತ್ತಾನೆ. ಇದನ್ನು ಜಿ.ಆರ್. ಸೂಕ್ಷ್ಮವಾಗಿ ವಿವರಿಸುತ್ತಾರೆ. ಜಿ.ಆರ್. ಅವರು ಗುರುತಿಸುವಂತೆ, ಹೆಗೆಲ್ ತನ್ನ ಸಾಮಾಜಿಕ-ರಾಜಕೀಯ, ಸಾಂಪ್ರದಾಯಿಕತೆಯಿಂದಾಗಿ ಸಂಕುಚಿತ ಆಯಾಮದಲ್ಲಿ ವಿಹರಿಸಿದರೆ, ಏಂಗಲ್ಸ್ ವಿಸ್ತಾರವಾದ ಪ್ರಜಾಪ್ರಭುತ್ವದ ನೆಲೆಯಿಂದ ಅದಕ್ಕೆ ವೈಶಾಲ್ಯವನ್ನು ಕಟ್ಟಿಕೊಡುತ್ತಾರೆ.

ಈ ಕಿರುಹೊತ್ತಿಗೆಯ ಉದ್ದಕ್ಕೂ ಕಾಣುವ ಇನ್ನೊಂದು ಅಂಶವನ್ನೂ ಇಲ್ಲಿ ಗುರುತಿಸುವುದು ಒಳ್ಳೆಯದು. ಏಂಗಲ್ಸ್ ತನ್ನ ಸಮಕಾಲೀನರ ವಾದವನ್ನು ನಿರಾಕರಿಸುವುದಕ್ಕೆ ನೀಡುವ ಕಾರಣಗಳು ಮತ್ತು ಉದಾಹರಣೆಯನ್ನು ಇಲ್ಲಿ ನೀಡುವುದರ ಜೊತೆಗೇ, ಜಿ.ಆರ್. ಅವರು ಭಾರತೀಯ ತತ್ವಶಾಸ್ತ್ರ ಹಾಗೂ ಇತಿಹಾಸದಿಂದ ಹಲವಾರು ಉದಾಹರಣೆಗಳನ್ನು ನೀಡುತ್ತಾ ಹೋಗುತ್ತಾರೆ. ಈ ಕ್ಷೇತ್ರಗಳಲ್ಲಿ ಅವರು ಸಾಕಷ್ಟು ಅಧ್ಯಯನ ಮಾಡಿರುವುದರಿಂದ ಇದು ಇವರಿಗಷ್ಟೇ ಸಾಧ್ಯ. ಜೊತೆಗೆ ಅದು ಅವರ ಶೈಲಿಯೇ ಆಗಿಬಿಟ್ಟಿದೆ. ಅದು ತೀರಾ ಸ್ವಾಭಾವಿಕವಾಗಿ ಬರುತ್ತದೆ. ಉದಾಹರಣೆಗೆ ಮಾರ್ಕ್ಸ್‌ನ ಪಾಂಡಿತ್ಯವನ್ನು ವಿವರಿಸುವ ರೀತಿ ನೋಡಿ.

ಮಹಾಭಾರತದ ಯಕ್ಷ ಪ್ರಶ್ನೆಯ ಪ್ರಸಂಗದಲ್ಲಿ ಧರ್ಮರಾಯನಿಗೆ ಯಕ್ಷನ ಒಂದು ಪ್ರಶ್ನೆ - "ಪಾಂಡಿತ್ಯ ಎಂದರೇನು?" ಎಂಬುದು. ಅದಕ್ಕೆ ವ್ಯಾಸರ ಉತ್ತರ : "ಪಾಂಡಿತ್ಯವೆಂದರೆ ಪರಿಚ್ಛೇದ" ಅದನ್ನೇ ನಾವು ನಿಷ್ಪ್ರಷ್ಟತೆ ಎನ್ನುತ್ತೇವೆ. ಮಾರ್ಕ್ಸ್‌ರ ಪಾಂಡಿತ್ಯ ಅಂತಹದ್ದು. ಈ ಬಗೆಯ ವಿವರಣೆಯನ್ನು ಉದ್ದಕ್ಕೂ ಕಾಣಬಹುದು.

ಏಂಗಲ್ಸ್‌ನ ಬದುಕಿನ ಬಹು ಮುಖ್ಯ ಘಟನೆ ಮಾರ್ಕ್ಸ್‌ನ ಸಖ್ಯ. ಇದು ಈ ಪುಸ್ತಕದ ಒಂದು ಸುಂದರ ಅಧ್ಯಾಯ. ಗೆಳೆತನದಲ್ಲಿ ಏಂಗೆಲ್ಸನ ಪಾತ್ರವನ್ನು ವಿವರಿಸಲು ಅವರು ಬಳಸುವ 'ಪಕ್ಕವಾದ್ಯದವನ" ರೂಪಕವೂ ಸೂಕ್ತವಾಗಿದೆ. ಮಾರ್ಕ್ಸ್‌ರ ಉನ್ನತ ಮೇಧಾಶಕ್ತಿಯನ್ನು ಗುರುತಿಸಿದ ಏಂಗಲ್ಸ್ ತಾನೇನಿದ್ದರೂ ಪಕ್ಕವಾದ್ಯದವರಂತಿರಲು ಮಾತ್ರ ಸಾಧ್ಯವೆಂದು ತಿಳಿದಿದ್ದರು. ಹೀಗೆಂದ ತಕ್ಷಣ ಈತ ಕೇವಲ ಮಾರ್ಕ್ಸ್‌ರ ವ್ಯಾಖ್ಯಾನಕಾರ ಅಥವಾ ಸಹಾಯಕ ಎಂದು ಬಗೆಯುವಂತಿಲ್ಲ. ಇವರಿಬ್ಬರು ಜೊತೆಗೂಡಿ ಕೆಲಸ ಮಾಡಿದ್ದು ನಿಜ. ಆದರೆ ಪರಸ್ಪರ ಸಹಾಯಕರಾಗಿ ಅಲ್ಲ, ಸ್ವತಂತ್ರರಾಗಿ. ಬೌದ್ಧಿಕ ಚಟುವಟಿಕೆಗಳಲ್ಲಿ ಇಬ್ಬರದೂ ಸ್ವತಂತ್ರ ಮಾರ್ಗಗಳಿದ್ದವು, ಪ್ರಕ್ರಿಯೆಗಳಿದ್ದವು.

ಏಂಗಲ್ಸ್ ಸ್ವಯಂ ಅನುಭವಿ, ವಿದ್ವಾಂಸ, ವೈಜ್ಞಾನಿಕ ವಿಶ್ಲೇಷಕ. ತನ್ನ ಪ್ರತಿಭೆಯನ್ನು ಸ್ವತಂತ್ರ ಅಧ್ಯಯನ - ಬರವಣಿಗೆಗಳಿಗೆ ಇನ್ನೂ ಹೆಚ್ಚಾಗಿ ಮೀಸಲಿಡಬಹುದಿತ್ತು. ತನ್ನ ವಿದ್ವತ್ತನ್ನು ಮಾರ್ಕ್ಸ್‌ರ ಅಧ್ಯಯನ, ಸಂಶೋಧನೆ ಮತ್ತು ಪ್ರಕಟಣೆಗಳಿಗೆ ಪೂರಕವಾಗಿ ಮಾತ್ರ ಮಾಡದೆ, ಯಥೇಚ್ಛವಾಗಿ ತನ್ನದೇ ಆದ ಪ್ರಣಾಳಿಕೆಯನ್ನು ಬೆಳಸಬಹುದಿತ್ತು. ಆದರೆ ಅವರ ಹೆಚ್ಚಿನ ಉದ್ಗ್ರಂಥಗಳು ಒಂದರ್ಥದಲ್ಲಿ ಮಾರ್ಕ್ಸ್ ಕೃತಿಗೆ ಪೂರಕವಾಗಿ ಬಂದಿವೆ. ಸ್ವಂತ ಕೀರ್ತಿ ಐಶ್ವರ್ಯ ಅವರಿಗೆ ಮುಖ್ಯವಾಗಿರಲಿಲ್ಲ. ಅಧ್ಯಯನ ಫಲಿಸಿದರೆ ಸಾಕಿತ್ತು ಅವರಿಗೆ. ಅಷ್ಟು

ಉದಾತ್ತವಾದ ಧ್ಯೇಯಗಳಿಗಾಗಿ ಅವರಿಬ್ಬರಲ್ಲಿ ಬೆಳೆದ, ಎಂದೂ ಒಡೆಯಲಾರದಂತಹ ಬಾಂಧವ್ಯ ಇತಿಹಾಸದಲ್ಲೂ ಅಪೂರ್ವವಾಗಿದೆ.

ಈ ಇಬ್ಬರ ಅಪೂರ್ವ ಬಾಂಧವ್ಯವನ್ನು ಸೊಗಸಾಗಿ ವಿವರಿಸಿದ ನಂತರ ಜಿ.ಆರ್. ಅವರು ಇವರ ಮೇರುಕೃತಿಗಳನ್ನು ಒಂದೊಂದೇ ಪರಿಚಯಿಸುತ್ತಾರೆ.

"ಪವಿತ್ರ ಕುಟುಂಬ" ನಿಜವಾದ ಅರ್ಥದಲ್ಲಿ ಮಾರ್ಕ್ಸ್‌ವಾದದ ಮೊದಲ ಮೌಲಿಕ ಗ್ರಂಥ. ಅದರಲ್ಲಿ ಪ್ರಕಟವಾದ ವಿಚಾರಗಳು ನಂತರ ವಿಕಾಸವಾಗುತ್ತಾ ಹೋದವು. ಇದರಲ್ಲೇ ಅವರು ತಮ್ಮ ಭೌತವಾದಿ ನೆಲೆಯನ್ನು ಸ್ಪಷ್ಟವಾಗಿ ಗುರುತಿಸಿಕೊಂಡು, ಇತಿಹಾಸವು ನಡೆದುಬಂದ ದಾರಿಯನ್ನು ಸಮರ್ಥವಾಗಿ ಪ್ರತಿಪಾದಿಸುವ ವಿಧಾನವನ್ನು ವಿವರಿಸಿದ್ದಾರೆ.

ಈ ನಡುವೆ, ತಂದೆ-ಮಗನ ನಡುವೆ ಸಂಬಂಧ ಕೂಡ ಹದಗೆಟ್ಟಿತ್ತು. ಏಂಗೆಲ್ಸರ ರಾಜಕೀಯ ಚಟುವಟಿಕೆಗಳು ಅವರ ತಂದೆಗೆ ಸರ್ವಥಾ ಒಪ್ಪಿಗೆ ಇರಲಿಲ್ಲ. ಮಗ ಕಾರ್ಖಾನೆಯ ಉಸ್ತುವಾರಿಯಲ್ಲಿ ಆಸಕ್ತಿ ಬೆಳೆಸಿಕೊಳ್ಳಲಿಲ್ಲವೆಂದು ಸಿಟ್ಟಾಗಿದ್ದರು. ಬಾರ್ಮೆನ್ ಬಿಟ್ಟು ಮ್ಯಾಂಚೆಸ್ಟರ್‌ಗೆ ಬಂದಾಗ, ಏಂಗಲ್ಸ್‌ಗೆ ಅಪ್ಪನ ಬಿಗಿನೋಟ ತಪ್ಪಿದ ನೆಮ್ಮದಿ. ಎಲ್ಲದಕ್ಕಿಂತ ಹೆಚ್ಚಾಗಿ, ಅಲ್ಲಿಯ ಕಾರ್ಖಾನೆಯ ಕೆಲಸಗಾರರ ಬವಣೆಯನ್ನು ಕಂಡು, ಅದನ್ನು ಅರ್ಥಮಾಡಿಕೊಳ್ಳಲು ತೊಡಗಿದಾಗ ಏಂಗಲ್ಸ್‌ಗೆ ಹೊಸ ಪ್ರಪಂಚದ ದರ್ಶನವೇ ಆಯಿತು. ಅದರ ಫಲವೇ, ಸಮಾಜಶಾಸ್ತ್ರೀಯ ಅಧ್ಯಯನಗಳಿಗೆ ಮಾದರಿಯಾಗಬಲ್ಲ "ಇಂಗ್ಲೆಂಡಿನಲ್ಲಿ ದುಡಿಯುವ ವರ್ಗದವರ ಸ್ಥಿತಿಗತಿಗಳು" ಪುಸ್ತಕ. ಡಿಕಿನ್ಸ್, ಗ್ಯಾಟ್ ಸ್ಕೇಲ್ ಮೊದಲಾದವರು ಇಂಗ್ಲೆಂಡಿನ ದುಡಿಯುವ ಜನರ ಬವಣೆಯನ್ನು ಅದ್ಭುತವಾಗಿ ಚಿತ್ರಿಸಿದ್ದರು, ನಿಜ. ಆದರೆ ವ್ಯವಸ್ಥೆಯ ವ್ಯವಸ್ಥಿತ ಅಧ್ಯಯನ ಮಾಡಿದ ಕೀರ್ತಿ ಮಾತ್ರ ಏಂಗಲ್ಸ್‌ಗೆ ದಕ್ಕಬೇಕು. ಈ ಗ್ರಂಥದಲ್ಲಿ ಮೂಡಿಬಂದಿರುವ ಎಷ್ಟೋ ವಿಚಾರಗಳು ಇಂದಿಗೂ ಎಷ್ಟು ಪ್ರಸ್ತುತ ಎನ್ನುವುದನ್ನು ಅರಿಯಲು, ಜಿ.ಆರ್. ಅವರು ಆ ಪುಸ್ತಕದಿಂದ ಹೆಕ್ಕಿ ನೀಡಿರುವ ಕೆಲ ಟಿಪ್ಪಣಿಗಳನ್ನು ನೋಡಿದರೆ ಸ್ಪಷ್ಟವಾಗಬೇಕು. ಹಾಗಾಗಿಯೇ ಲೆನಿನ್ ಈ ಪುಸ್ತಕವನ್ನು ಕುರಿತು ಹೇಳುವ ಮಾತು "1845ರ ಮುಂಚೆಯಾಗಲಿ, ಆಮೇಲಾಗಲಿ ದುಡಿಯುವ ವರ್ಗದ ಬವಣೆಯ ಚಿತ್ರವನ್ನು ಅಷ್ಟು ನೈಜವಾಗಿ ಹಾಗೂ ಸಾರಭೂತವಾಗಿ ನೀಡುವ ಬೇರೊಂದು ಕೃತಿ ನನಗೆ ತಿಳಿದಿಲ್ಲ" ನಿಜವೆನಿಸುವುದು. ಅದನ್ನು ಜಿ.ಆರ್. ಅವರು ಸಂಕ್ಷಿಪ್ತವಾಗಿ ಆದರೆ ಅಚ್ಚುಕಟ್ಟಾಗಿ ಪರಿಚಯ ಮಾಡಿಕೊಟ್ಟಿದ್ದಾರೆ.

ತೀರಾ ಸಣ್ಣದಾದರೂ, ಇಡೀ ಜಗತ್ತನ್ನೇ ತಲ್ಲಣಗೊಳಿಸಿದ "ಕಮ್ಯೂನಿಸ್ಟ್ ಪ್ರಣಾಲಿಕೆ" ಕುರಿತ ಅಧ್ಯಾಯದಲ್ಲೂ ಜಿ.ಆರ್. ಅವರ ಇದೇ ಅಚ್ಚುಕಟ್ಟುತನವನ್ನು ಕಾಣಬಹುದು. ಈ ಪುಸ್ತಕ ರಚನೆಗೆ ಕಾರಣವಾದ ಪರಿಸ್ಥಿತಿಯನ್ನು ವಿವರಿಸುತ್ತಾ ಅದರ ಮುಖ್ಯ ತಿರುಳನ್ನು ಪರಿಚಯ ಮಾಡಿಕೊಡುತ್ತಾರೆ. "ಅನೇಕ ಸಂಪುಟಗಳಿಗೆ ಸಮಾನವಾದ, ಇಂದಿಗೂ ಸ್ಫೂರ್ತಿದಾಯಕವಾಗಿ ಉಳಿದಿರುವ, ಇಡೀ ವಿಶ್ವದ ದುಡಿಯುವ ವರ್ಗದ ಸಂಘಟಿತ ಹೋರಾಟಕ್ಕೆ ಚೈತನ್ಯದ ಚಿಲುಮೆಯಾಗಿರುವ, ಮಾರ್ಗದರ್ಶಕ ಸೂತ್ರವಾಗಿರುವ" ಈ ಕಿರು ಗ್ರಂಥ ಇಡೀ ಕಮ್ಯುನಿಸ್ಟ್

ಸಿದ್ಧಾಂತವನ್ನು ಯಾವುದೇ ಸಂದಿಗ್ಧತೆಗೂ ಅವಕಾಶವಿಲ್ಲದಂತೆ, ಸಂಗ್ರಹಿಸಿರುವುದು ಸೋಜಿಗದ ಸಂಗತಿ.

ಅದರಲ್ಲಿ ಕಂಡುಬರುವ ಜಾಗತೀಕರಣದ ಉಲ್ಲೇಖವನ್ನು ಇಟ್ಟುಕೊಂಡು ಜಿ.ಆರ್. ಅವರು ಇಂದಿನ ಜಾಗತೀಕರಣದ ಸಂದರ್ಭವನ್ನು ವಿಶ್ಲೇಷಿಸುತ್ತಾ, ಆ ಹಿನ್ನೆಲೆಯಲ್ಲಿ ಅಮೇರಿಕಾದ ಇರಾಕ್‌ನ ಮೇಲಿನ ದಾಳಿಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡುತ್ತಾರೆ.

ಏಂಗಲ್ಸ್ ಇದಾದ ನಂತರ ಮಾರ್ಕ್ಸ್ ಜೊತೆಗೂಡಿ ರಚಿಸಿದ ಮತ್ತೊಂದು ಮಹತ್ವದ ಗ್ರಂಥವನ್ನು ಜಿ.ಆರ್. ಪರಿಚಯ ಮಾಡಿಕೊಡುತ್ತಾರೆ. ಅದು ಚಾರಿತ್ರಿಕ ಭೌತವಾದದ ಪರಿಕಲ್ಪನೆಯನ್ನು ತೀರಾ ವಿಸ್ತಾರವಾಗಿ ಚರ್ಚಿಸಿರುವ ಮತ್ತು ವೈಜ್ಞಾನಿಕ ಸಮಾಜವಾದಕ್ಕೆ ದಾರ್ಶನಿಕ ಬುನಾದಿಯೆಂದು ಪರಿಗಣಿಸಿರುವ "ಜರ್ಮನಿಯ ಸೈದ್ಧಾಂತಿಕ ತತ್ತ್ವ" ಪುಸ್ತಕ. ಮಾರ್ಕ್ಸ್ ಮತ್ತು ಏಂಗಲ್ಸ್‌ರವರದು ತೀರಾ ಹರಿತವಾದ ಬರವಣಿಗೆ. ಮುಂದೆ ಅವರು ಪ್ರೊದೋನನ "ಬಡತನದ ತತ್ವ" ಗ್ರಂಥದ ಹೆಸರನ್ನೇ ತಿರುಗಿಸಿ "ತತ್ವಶಾಸ್ತ್ರದ ಬಡತನ" ಎಂದು ಆ ಬಗ್ಗೆ ಟೀಕಾ ಪ್ರಹಾರ ನಡೆಸಿದ್ದೂ ಇದೆ.

ಅವರ ಓದು ವಿಸ್ತಾರವಾದದ್ದು. ಓದದ, ಬರೆಯದ ವಿಷಯವಿಲ್ಲ. ಇವರ ಚಟುವಟಿಕೆಗಳಿಗೆ ಪೊಲೀಸರಿಂದ ನಿರ್ಬಂಧ ಬಂದಾಗ, ಅಂದಿನ ಕವಿಗಳ ವಿಮರ್ಶೆಯಲ್ಲಿ ತೊಡಗಿಸಿಕೊಂಡರು. ಈ ಸಂದರ್ಭದಲ್ಲೇ ಗಯಟೆಯನ್ನು ಕುರಿತ ವಿಮರ್ಶೆ ಪ್ರಕಟವಾಗಿದ್ದು.

ವಿಜ್ಞಾನವನ್ನು ಆಳವಾಗಿ ಓದಿಕೊಂಡು ಅಲ್ಲಿ "ಪ್ರಕೃತಿಯಲ್ಲಿ ಗತಿತಾರ್ಕಿಕತೆ" ಗ್ರಂಥ ರಚಿಸಿದರು. ಇವೆಲ್ಲಾ ಆಯಾ ಕ್ಷೇತ್ರಗಳಲ್ಲಿ ಮೇರು ಕೃತಿಗಳೇ.

ಮಿಲಿಟರಿ ವಿಜ್ಞಾನಕ್ಕೆ ಸಂಬಂಧಿಸಿದಂತೆಯು ಅವರ ಜ್ಞಾನ ಅಪಾರವಾದದ್ದು. ಆ ಕಾಲಕ್ಕೆ ಲಭ್ಯವಿರುವ ಹೆಚ್ಚುಕಮ್ಮಿ ಎಲ್ಲಾ ಗ್ರಂಥಗಳನ್ನು ಓದಿ ಮುಗಿಸಿದ್ದರು. "ದಿ ನ್ಯೂ ಅಮೆರಿಕನ್ ಎನ್‌ಸೈಕ್ಲೊಪೀಡಿಯಾ"ದ 1857ರ ಆವೃತ್ತಿಗೆ, ಮಿಲಿಟರಿ ವಿಜ್ಞಾನಕ್ಕೆ ಸಂಬಂಧಿಸಿದ ಸುಮಾರು 50ಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ.

ಇದರೊಂದಿಗೆ ಕ್ರೀಡೆಯಲ್ಲೂ ಅವರಿಗೆ ವಿಶೇಷ ಆಸಕ್ತಿ. ಕುದುರೆ ಸವಾರಿ, ದೂರದ ನಡೆತ ಇವೆಲ್ಲಾ ಅವರಿಗೆ ತುಂಬಾ ಖುಷಿ. ಹಾಗಾಗಿಯೇ ಅವರಿಗೆ, ಪ್ಯಾರಿಸ್ ಕ್ರಾಂತಿಯನ್ನು ಸರ್ಕಾರ ಹತ್ತಿಕ್ಕಿದ ಸಂದರ್ಭದಲ್ಲಿ ಕೈಯಲ್ಲಿ ಚಿಕ್ಕಾಸು ಇಲ್ಲದೆ, ಸ್ವಿಟ್ಜರ್ಲೆಂಡ್ ತನಕ ನಡೆದೆ ಹೊರಡಲು ಸಾಧ್ಯವಾಯಿತು. ದಾರಿಯುದ್ದಕ್ಕೂ ಕಂಡ ದುರಂತ ದೃಶ್ಯಗಳನ್ನು, ಬಂಡವಾಳಿಗರ ಕ್ರೌರ್ಯ, ಕಾರ್ಮಿಕರ ಮತ್ತು ರೈತರ ನಡುವಿನ ಅಂತರ ಇವೆಲ್ಲವನ್ನು ಅವರ "ಪ್ಯಾರಿಸ್ಸಿನಿಂದ ಬರ್ನ್‌ಗೆ" ಎಂಬ ಗ್ರಂಥದಲ್ಲಿ ಕಾಣಬಹುದು.

ಹೀಗೆ ಹಲವಾರು ಆಸಕ್ತಿಗಳನ್ನು ಮೈಗೂಡಿಸಿಕೊಂಡಿದ್ದ, ಜೀವನದ ಕೊನೆಯುಸಿರಿರು ವವರೆಗೂ ಸಕ್ರಿಯವಾಗಿ ಅಧ್ಯಯನ ಮಾಡುತ್ತಾ, ಹೋರಾಟಗಳನ್ನು ಸಂಘಟಿಸುತ್ತಾ, ಚಳವಳಿಗೆ

ಪೆಟ್ಟು ಬಿದ್ದ ಸಂದರ್ಭದಲ್ಲಿ ಹುರಿದುಂಬಿಸುತ್ತಾ ಸಾಗಿದ ವೈಚಾರಿಕ ದೀವಿಗೆ ನಂದಿ ಹೋಗುವವರೆಗಿನ ಎಲ್ಲಾ ವಿವರಗಳನ್ನು ಜಿ.ಆರ್. ತಮ್ಮ ಪುಸ್ತಕದಲ್ಲಿ ದಾಖಲು ಮಾಡಿದ್ದಾರೆ.

ಮಾರ್ಕ್ಸ್ ಹೇಳಿದಂತೆ, ಏಂಗಲ್ಸ್ "ನಿಜಕ್ಕೂ ಒಂದು ವಿಶ್ವಕೋಶ. ಹಗಲು ರಾತ್ರಿಯೆನ್ನದೆ ಆನಂದೋತ್ಸಾಹಗಳಿಂದ ಸದಾ ಕೆಲಸ ಮಾಡುತ್ತಲೇ ಇರುವ ಅಸಾಮಾನ್ಯ ಪ್ರತಿಭೆ. ಬರೆಯುವುದು, ಆಳವಾದ ಚಿಂತನವನ್ನು ಬರವಣಿಗೆಯಲ್ಲಿ ಮೇಳೈಸುವುದರಲ್ಲಿ ಇವರ ಚುರುಕುತನ ಅಳೆಯಲಸದಳ"

ಇಂತಹ ಮೇರು ವ್ಯಕ್ತಿಯನ್ನು ಕನ್ನಡಕ್ಕೆ ಪರಿಚಯಮಾಡಿಕೊಟ್ಟಿರುವ ಜಿ.ಆರ್. ಖಂಡಿತಾ ಅಭಿನಂದಾರ್ಹರು. ಇವರಿಂದ ಇಂತಹ ಕೃತಿಗಳು ಬರುತ್ತಲೇ ಇರಲಿ.

❑

(ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಲಿರುವ 'ಜಾಗತಿಕ ಚಿಂತಕರು' ಮಾಲಿಕೆಗಾಗಿ ಜಿ.ಆರ್.ರವರು ಬರೆದಿರುವ 'ಫ್ರೆಡರಿಕ್ ಏಂಗಲ್ಸ್' ಪುಸ್ತಕದ ಹಸ್ತಪ್ರತಿಯನ್ನು ಓದಿ ಈ ಲೇಖನವನ್ನು ಬರೆಯಲಾಗಿದೆ.)

ಜಿ.ಆರ್. ಅವರ
ಮೂರು ಕಿರುಹೊತ್ತಿಗೆಗಳ ಅವಲೋಕನ

ಡಾ. ಕೆ.ವೈ. ನಾರಾಯಣಸ್ವಾಮಿ

ಕರ್ನಾಟಕದಲ್ಲಿ ಎಡಪಂಥೀಯ ಆಲೋಚನಾಕ್ರಮವನ್ನು ಅತ್ಯಂತ ವೈಜ್ಞಾನಿಕವಾಗಿ ಬೆಳೆಸಿದವರಲ್ಲಿ ಜಿ.ಆರ್. ಪ್ರಮುಖರು. ಕಳೆದ ನಾಲ್ಕು ದಶಕಗಳಲ್ಲಿ ರೂಪುಗೊಂಡ ಜನಪರ ಹಾಗೂ ಪ್ರಗತಿಪರ ಹೋರಾಟ-ಚಳವಳಿಗಳಿಗೆ ತಾತ್ವಿಕತೆಯನ್ನು ರೂಪಿಸಿಕೊಟ್ಟವರಲ್ಲಿ ಜಿ.ಆರ್. ಒಬ್ಬರು. ಭಾರತೀಯ ತತ್ವಶಾಸ್ತ್ರ, ಇತಿಹಾಸ, ಸಾಹಿತ್ಯ ಮೀಮಾಂಸೆ ವಿಜ್ಞಾನದ ಇತಿಹಾಸ, ಎಡಪಂಥೀಯ ವೈಚಾರಿಕ ನೆಲೆ - ಹಾಗೂ ತತ್ವಗಳನ್ನು ವಿವರಿಸಿ - ವಿಶ್ಲೇಷಿಸಿ ಜಿ.ಆರ್. ಅವರು ಬರೆದಿರುವ ಪುಸ್ತಕ-ಬರೆಹಗಳು ನಾಡಿನ ಓದುಗರ ಪ್ರಜ್ಞೆಯನ್ನು ವಿಕಾಸಗೊಳಿಸಿರುವ ಬಗ್ಗೆ ವಿದ್ವತ್ ವಲಯಗಳಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಸ್ವಾತಂತ್ರ್ಯಾನಂತರ ಭಾರತೀಯ ಜೀವನಕ್ರಮಗಳಲ್ಲಿ ಉದ್ಭವವಾಗಿರುವ ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ ಸಂಘರ್ಷಗಳಿಗೆ ಜಿ.ಆರ್. ಪ್ರತಿಕ್ರಿಯಿಸುತ್ತಾ ಬಂದಿರುವ ಕ್ರಮಗಳೇ ಜಿ.ಆರ್. ಅವರನ್ನು ಇಂದು ಪ್ರಜ್ಞಾಶಕ್ತಿಯಾಗಿ, ಪ್ರತಿಭಟನಾ ಶಕ್ತಿಯಾಗಿ ಪರಿವರ್ತಿಸಿವೆ. ಶಿಕ್ಷಕರ ಹೋರಾಟ, ಕಾರ್ಮಿಕ ಹೋರಾಟಗಳ ನೇರ ನೇತೃತ್ವ ವಹಿಸಿ ದಮನಕ್ಕೆ ಹಾತೊರೆಯುವ ಎಲ್ಲಾ ಜೀವವಿರೋಧಿ ವ್ಯವಸ್ಥೆ, ಸಿದ್ಧಾಂತ ಹಾಗೂ ಹಿಂಸೆಯ ನೆಲೆಗಳನ್ನು ಬೀದಿಗಿಳಿದು ಪ್ರತಿಭಟಿಸುತ್ತಲೇ ಬೆಳೆದವರು ಜಿ.ಆರ್.

ಜಿ.ಆರ್. ಅವರ ಆಲೋಚನೆಯ ವಿನ್ಯಾಸ ಹಾಗೂ ಹರಹು ಬಹು ವಿಶಾಲವಾದದು. ಜಗತ್ತಿನ ಅನೇಕ ಜನಪರ ಮತ್ತು ಸಾಮ್ರಾಜ್ಯಶಾಹಿಗಳ

ವಿರುದ್ಧ ನಡೆದಿರುವ ಹೋರಾಟಗಳನ್ನು ಕನ್ನಡಿಗರಿಗೆ ಪರಿಚಯಿಸಿದ್ದಾರೆ. ಮತ್ತು ಈ ನಾಡಿನಲ್ಲೇ ಭೂತವರ್ತಮಾನಗಳಲ್ಲಿ ನಡೆದಿರುವ ಹಾಗೂ ನಡೆಯುತ್ತಿರುವ ಜನವಿರೋಧಿ ತತ್ತ್ವ-ಸಿದ್ಧಾಂತಗಳನ್ನು ಸಮರ್ಥ ಪುರಾವೆಗಳ ಮೂಲಕ ವಿಶ್ಲೇಷಿಸಿ, ತಮ್ಮ ಪ್ರತಿಭಟನೆಯನ್ನು ದಾಖಲಿಸುತ್ತಾ ಬಂದಿರುವುದು, ವ್ಯವಸ್ಥೆಯೊಂದಿಗೆ ಎಂದಿಗೂ ರಾಜಿಯಾಗದಿರುವುದು ಜಿ.ಆರ್. ಅವರ ಹೆಗ್ಗಳಿಕೆಯಾಗಿದೆ.

ಯು.ಎಸ್.ಎಸ್.ಆರ್. ಪತನದ ನಂತರ ಅನೇಕ ಮಾರ್ಕ್ಸ್‌ವಾದಿ ವಿಮರ್ಶಕರು, ಚಿಂತಕರು 'ಯುಗವೊಂದರ ಮುಕ್ತಾಯ' ಎಂದು ಘೋಷಿಸಿ-ಬಂಡವಾಳಶಾಹಿಗಳತ್ತ ಸುಖಭೋಗ, ಅಧಿಕಾರ ಪೀಠಗಳನ್ನರಸಿ ವಲಸೆ ಹೋಗಿದ್ದುಂಟು. ಆದರೆ ಜಿ.ಆರ್. ಅವರ ಬದ್ಧತೆ ಮತ್ತು ಯೋಚನಾ ಕ್ರಮ ಎಳ್ಳಷ್ಟು ಬದಲಾಗಲಿಲ್ಲ. ಅವರು ನಂಬಿದ ತತ್ವಗಳಲ್ಲಿನ ವಿಶ್ವಾಸ ಸ್ವಲ್ಪವೂ ಕುಂದಲಿಲ್ಲ ಎಂಬುದು ಜಿ.ಆರ್. ಅವರ ಬಗೆಗಿನ ಗೌರವವನ್ನು ಇಮ್ಮಡಿಗೊಳಿಸಿದೆ.

ಜಿ.ಆರ್. ಎಪ್ಪತ್ತರ ದಶಕದ ಅನೇಕ ಚಳವಳಿಗಳಿಗೆ ಅಗತ್ಯವಿದ್ದ ಬೌದ್ಧಿಕ ತಳಪಾಯವನ್ನು ನೇರ್ಪುಗೊಳಿಸಿಕೊಟ್ಟವರು. ಹಾಗಾಗಿಯೇ ಅವರು ಬರವಣಿಗೆಯಲ್ಲಿ ಅನೇಕ ಚಳವಳಿಗಳನ್ನು ಪರಿಚಯಿಸುವ ಮತ್ತು ಚಳವಳಿಗಳ ಹಿಂದಿನ ಚಾರಿತ್ರಿಕ ಅನಿವಾರ್ಯವನ್ನು ವಿವರಿಸುವ ಕಿರುಹೊತ್ತಿಗೆಗಳನ್ನು ಆಯಾ ಸಂದರ್ಭಗಳಲ್ಲಿ ಬರೆದುದುಂಟು. ಅಂತಹ ಮೂರು ಕಿರುಹೊತ್ತಿಗೆಗಳನ್ನು ಅವಲೋಕಿಸುವ ಕೆಲಸವನ್ನು ಈ ಲೇಖನದಲ್ಲಿ ಮಾಡಲಾಗಿದೆ.

1. ದಕ್ಷಿಣ ಆಫ್ರಿಕಾ-ರಾಷ್ಟ್ರೀಯ ವಿಮೋಚನಾ ಚಳವಳಿ

1978ರಲ್ಲಿ ದಕ್ಷಿಣ ಆಫ್ರಿಕಾ ರಾಷ್ಟ್ರೀಯ ವಿಮೋಚನಾ ಚಳವಳಿಯನ್ನು ಬೆಂಬಲಿಸಿ ಅಂತರರಾಷ್ಟ್ರೀಯ ಸಮ್ಮೇಳನವೊಂದು ದೆಹಲಿಯಲ್ಲಿ ಜರುಗಿತು. ಅದರ ಪೂರ್ವಭಾವಿಯಾಗಿ ಬೆಂಗಳೂರಿನಲ್ಲಿ ಸೆಪ್ಟೆಂಬರ್ ತಿಂಗಳಿನಲ್ಲಿ ರಾಜ್ಯ ಸಮ್ಮೇಳನವೊಂದನ್ನ ಹಮ್ಮಿಕೊಳ್ಳಲಾಗಿತ್ತು. ಆ ಸಮ್ಮೇಳನದ ಅಂಗವಾಗಿ ದಕ್ಷಿಣ ಆಫ್ರಿಕಾದಲ್ಲಿ ಸಾಮ್ರಾಜ್ಯಶಾಹಿ ರಾಕ್ಷಸರು ಶತಮಾನಗಳ ಕಾಲ ನಡೆಸುತ್ತಾ ಬಂದ ಕ್ರೌರ್ಯ-ವಸಾಹತು ಆಡಳಿತ ವರ್ಣಭೇದ ನೀತಿ - ಮೂಲ ನಿವಾಸಿಗಳನ್ನು ಪ್ರಾಣಿಗಳಂತೆ ನಡೆಸಿಕೊಂಡು ಹಿಂಸಿಸಿದ ವಿವರಗಳನ್ನು, ಮತ್ತು ಪ್ರಮುಖವಾಗಿ ಪರಕೀಯರ ವಿರುದ್ಧ ರೂಪು ತಳೆದ ರಾಷ್ಟ್ರೀಯ ವಿಮೋಚನಾ ಚಳವಳಿ ಬೆಳೆದು ಬಂದ ದಾರಿಯನ್ನು ವಿವರಿಸುವ ಕಿರು ಪುಸ್ತಕವನ್ನು ಜಿ.ಆರ್. ಬರೆದಿದ್ದಾರೆ. ಸಮ್ಮೇಳನ ಸಿದ್ಧತಾ ಸಮಿತಿ ಈ ಪುಸ್ತಕವನ್ನು ಪ್ರಕಟಮಾಡಿದೆ.

ಈ ಹೊತ್ತಿಗೆಯಲ್ಲಿ ಬ್ರಿಟನ್ ಮತ್ತು ಅಮೆರಿಕಾ ದೇಶಗಳು ದಕ್ಷಿಣ ಆಫ್ರಿಕಾದಲ್ಲಿ ಸೂರೆಗೊಂಡ ಸಂಪತ್ತಿನ ವಿವರಗಳನ್ನು - ಬಿಳಿಯರು ಮತ್ತು ಕರಿಯರ ನಡುವೆ ತೋರಿದ ತಾರತಮ್ಯದ ಸಂಗತಿಗಳನ್ನು ಸಾಕ್ಷಿ ಪುರಾವೆಗಳ ಸಹಿತ ದಾಖಲಿಸಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಅಲ್ಲದೆ ಕರಿಯರ ವಿಮೋಚನೆಗಾಗಿ ಹುಟ್ಟಿಕೊಂಡ ದೇಸಿ ಚಳವಳಿಗಳನ್ನು ವಸಾಹತುಶಾಹಿ ಆಡಳಿತ ಹೇಗೆ ಹತ್ತಿಕ್ಕಿತ್ತು ಎಂಬ ಸವಿವರ ದಾಖಲೆಯಾಗಿಯೂ ಈ ಕಿರುಹೊತ್ತಿಗೆಯನ್ನು ನೋಡಬಹುದು.

ಜಗತ್ತಿನ ಚರಿತ್ರೆಯನ್ನು ರಚಿಸಿದ ಯುರೋಪಿಯನ್ನರು ದಕ್ಷಿಣ ಆಫ್ರಿಕಾ ಖಂಡವನ್ನು ಕಗ್ಗತ್ತಲೆಯ ಖಂಡವೆಂದು ಕರೆದುದರ ಹಿಂದೆ ಕ್ರಿಯಾಶೀಲವಾಗಿದ್ದ ವಂಚನೆಯ ಜಾಲವನ್ನು ಈ ಕೃತಿ ಬಯಲು ಮಾಡಿದೆ.

ಆಫ್ರಿಕಾದ ರಾಷ್ಟ್ರೀಯ ವಿಮೋಚನೆ ಚಳವಳಿಯ ನೇತೃತ್ವ ವಹಿಸಿದ್ದ ನೆಲ್ಸನ್ ಮಂಡೇಲಾ, ವಾಲ್ಟರ್ ಸಿಸುಲು, ಗೋವಿನ್ ಅಂಬೇಕಿ, ಅಹ್ಮದ್ ಕಥ್ರಾಡ ಮುಂತಾದ ನಾಯಕರನ್ನು ಬಿಳಿಯರ ಸರ್ಕಾರ ಸೆರೆಮನೆಗೆ ತಳ್ಳಿದ, ಹಿಂಸೆಗೆ ಗುರಿಮಾಡಿದ ಅಂಶಗಳು ಓದುಗರನ್ನು ಬೆಚ್ಚಿಬೀಳಿಸು ವಂತಿವೆ. ಈ ಪುಸ್ತಕದಲ್ಲಿ ರಿವೋನಿಯ ವಿಚಾರಣೆ (1964)ಯನ್ನು ಕುರಿತಂತೆ ಜಿ.ಆರ್. ನೆಲ್ಸನ್ ಮಂಡೇಲ ಅವರು ಜೋಹನ್ಸ್‌ಬರ್ಗ್ ನ್ಯಾಯಾಲಯದಲ್ಲಿ ಸೇರಿದ್ದ ಹೇಳಿಕೆಯ ಆಯ್ದ ಭಾಗಗಳನ್ನು ಅನುವಾದಿಸಿಕೊಟ್ಟಿರುವುದು ಅನನ್ಯವಾಗಿದೆ. ಮಂಡೇಲಾ ಅವರ ಮಾತುಗಳಲ್ಲಿರುವ ನೈತಿಕತೆ ಮತ್ತು ಬದ್ಧತೆ ಬಂಡವಾಳಶಾಹಿಗಳು ಪ್ರಪಂಚದ ಯಾವುದೇ ಮೂಲೆಯಲ್ಲಿ ನಡೆಸುತ್ತಿರುವ ಆಕ್ರಮಣಗಳನ್ನು ಧಿಕ್ಕರಿಸಲು ಅಗತ್ಯವಿರುವ ಪ್ರತಿಭಟನೆಯ ಕಿಚ್ಚನ್ನು ಉತ್ಪನ್ನ ಮಾಡುವಷ್ಟು ಪರಿಣಾಮಕಾರಿಯಾಗಿವೆ. ಮುಖ್ಯವಾಗಿ ಈ ಭಾಗವು ದಕ್ಷಿಣ ಆಫ್ರಿಕಾ ರಾಷ್ಟ್ರೀಯ ಚಳವಳಿಯ ಆತ್ಮವನ್ನು ಓದುಗರ ಮುಂದೆ ತೆರೆದು ಇಟ್ಟಿದೆ. ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ದಕ್ಷಿಣ ಆಫ್ರಿಕಾ ದೇಶವನ್ನು ವಸಾಹತುವಾಗಿಸಿದ್ದು, ವರ್ಣದ್ವೇಷದ ಮೂಲಕ ಸ್ಥಳೀಯರನ್ನು ಮೂಲಭೂತ ಹಕ್ಕುಗಳಿಂದ ವಂಚಿಸಿದ್ದು, ಸ್ವಂತ ನೆಲದಲ್ಲೇ ತಬ್ಬಲಿಗಳಾಗಿಸಿದ್ದು, ಇತ್ಯಾದಿ ವಿವರಗಳನ್ನು ಮನಮುಟ್ಟುವಂತೆ ಜಿ.ಆರ್. ಈ ಕಿರುಹೊತ್ತಿಗೆಯಲ್ಲಿ ವಿವರಿಸಿದ್ದಾರೆ. ದಕ್ಷಿಣ ಆಫ್ರಿಕಾ ಹೋರಾಟಕ್ಕೆ ಭಾರತ ಮತ್ತು ಇತರ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳು ಬೆಂಬಲಿಸಲೇ ಬೇಕಾಗಿರುವ ಚಾರಿತ್ರಿಕ ಅನಿವಾರ್ಯವನ್ನು ಜಿ.ಆರ್. ವಿಶ್ಲೇಷಿಸಿದ್ದಾರೆ. ತೊಂಬತ್ತರ ದಶಕದಲ್ಲಿ ದಕ್ಷಿಣ ಆಫ್ರಿಕಾ ಸ್ವಾತಂತ್ರ್ಯ ಪಡೆದರೂ ಸಾಮ್ರಾಜ್ಯಶಾಹಿ ಆಸಕ್ತಿಗಳು ಒಂದು ಕಡೆ ಬದಿಗೆ ಸರಿಸಲ್ಪಡುತ್ತಿದ್ದಂತೆ ಮತ್ತೊಂದು ಕಡೆ ತಲೆ ಎತ್ತುವ ಅಪಾಯದ ಬಗ್ಗೆ ಹಾಗೂ ಅದು ತನ್ನ ಮಾರುಕಟ್ಟೆ, ಸಹಾಯಧನದ ಮೂಲರೂಪಗಳಿಂದ ಪ್ರಜಾಪ್ರಭುತ್ವಗಳನ್ನು ಬಲಿ ತೆಗೆದುಕೊಳ್ಳಲು ಹುನ್ನಾರಹೂಡುವ ಬಗ್ಗೆಯೂ ಜಿ.ಆರ್. ಈ ಕೃತಿಯಲ್ಲಿ ಎಚ್ಚರಿಸಿದ್ದಾರೆ. ಸಾಮ್ರಾಜ್ಯಶಾಹಿ ಗ್ಯಾಟ್ ಮತ್ತು ಗ್ಲೋಬಲೈಷನ್‌ನ ಹೆಸರಿನಲ್ಲಿ ತೃತೀಯ ಜಗತ್ತುಗಳನ್ನು ನಿರ್ನಾಮ ಮಾಡುವ ಪ್ರಯತ್ನದಲ್ಲಿರುವುದರಿಂದ ಈ ಕಿರುಹೊತ್ತಿಗೆಯ ಮರು ಓದು ಜಾಗತೀಕರಣದ ಅನೇಕ ಕುತಂತ್ರಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

2. ಆರ್‌ಎಸ್ಸೆಸ್ - ಒಂದು ವಿಷ ವೃಕ್ಷ

'ಸಮುದಾಯ' 1979ರಲ್ಲಿ ಸಂಘಟಿಸಿದ ಜಾಥಾದ ಸಂದರ್ಭದಲ್ಲಿ ಡಾ. ಜಿ.ಆರ್. ಅವರಿಂದ ಬರೆಸಿ-ಪ್ರಕಟಿಸಿದ ಕಿರುಹೊತ್ತಿಗೆ ಈ ಪುಸ್ತಕ. ಈ ಕೃತಿಯಲ್ಲಿ ಜಿ.ಆರ್. ಆರ್‌ಎಸ್ಸೆಸ್‌ನ ಅಂತರಂಗವನ್ನು ಬತ್ತಲಾಗಿಸಿದ್ದಾರೆ. ಹಿಂದುತ್ವದ ರಕ್ಷಣೆಯ ಜವಾಬ್ದಾರಿಯನ್ನು ತಾನಾಗಿಯೇ ಹೊತ್ತುಕೊಂಡಿರುವ ಈ ಸಂಘಟನೆ ಒಂದು ಮೂಲಭೂತವಾದಿ ಭಯೋತ್ಪಾದಕ ಸಂಸ್ಥೆ ಎಂಬುದನ್ನು ಜಿ.ಆರ್. ಸರಿಯಾದ ಪ್ರಮಾಣಗಳ ಮೂಲಕ ಸಾಧಿಸಿ ತೋರಿಸಿದ್ದಾರೆ. ಭಾರತ

ದಂತಹ ದೇಶದ ಬಹುಭಾಷೆ-ಬಹು ಸಂಸ್ಕೃತಿಯನ್ನು ನಾಶಪಡಿಸುವ ಯೋಜನೆಗಳನ್ನು ಈ ಸಂಘ ಹೊಂದಿದೆ ಎಂಬುದನ್ನು ಶೋಧಿಸಲಾಗಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆರ್‌ಎಸ್ಸೆಸ್‌ನ 'ಸರಸಂಘ ಚಾಲಕರು' ಅಂದಂದಿಗೆ ಹೊರಡಿಸಿರುವ ತತ್ವಗಳನ್ನು ಉದಾಹರಿಸಿ ಅದು ಮೂಲದಲ್ಲಿ ಒಂದು ಭಯೋತ್ಪಾದಕ ಸಂಸ್ಥೆಯಾಗಿರುವ ನೈಜ ರೂಪವನ್ನು ಅನಾವರಣಗೊಳಿಸಲಾಗಿದೆ. ಹುಸಿ ರಾಷ್ಟ್ರೀಯತೆಯ ಸೋಗಿನಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಸಂಘ ಹೇಗೆ ನಿರಂತರವಾಗಿ ನಿರ್ಲಕ್ಷಿಸುತ್ತಾ ಬಂದಿದೆ ಎಂಬುದನ್ನು ಬೊಟ್ಟು ಮಾಡಿ ತೋರಲಾಗಿದೆ. ಧರ್ಮದ ಅಫೀಮನ್ನು ಮುಗ್ಧ ಜನರ ಮೇಲೆ ಪ್ರಯೋಗಿಸಿ ಭಾವನಾತ್ಮಕ ವಾಗಿ 'ಬ್ಲಾಕ್‌ಮೇಲ್' ಮಾಡಿರುವ ಸತ್ಯವನ್ನು ಹೊರಗೆಳೆಯಲಾಗಿದೆ. ಏಕರೂಪಿಯಾದ, 'ಕಲ್ಪಿತ ಅಖಂಡ ಹಿಂದುತ್ವ'ವನ್ನು ಪುನರ್‌ಪ್ರತಿಷ್ಠಾಪಿಸಲು ನಡೆಸುತ್ತಿರುವ ಹುನ್ನಾರಗಳನ್ನು ಜಿ.ಆರ್. ವಿಶ್ಲೇಷಿಸಿದ್ದಾರೆ. ಈ ಹೊತ್ತಿಗೆಯಲ್ಲಿ ಅಚ್ಚರಿಯ ಸಂಗತಿಯೊಂದನ್ನು ಜಿ.ಆರ್. ಗುರುತಿಸಿದ್ದಾರೆ. ಎಪ್ಪತ್ತರ ಪೂರ್ವಾರ್ಧದಲ್ಲಿ ಸಂಘದ ಸರಸಂಘ ಚಾಲಕರಾದ ದೇವರಸ್ ಮುಂದಿನ ಹತ್ತು ಹದಿನೈದು ವರ್ಷಗಳಲ್ಲಿ ಭಾರತದ ರಾಜಕೀಯ ಅಧಿಕಾರವನ್ನು ಕೈಹಿಡಿಯುವ ಭವಿಷ್ಯವನ್ನು ಗಂಭೀರವಾಗಿ ಪರಿಗಣಿಸಿ ಜಿ.ಆರ್. ಭಾರತದ ಜಾತ್ಯಾತೀತ ರಚನೆಗೆ ಗಂಡಾಂತರ ಕಾರಿಯಾದ ಜನಸಂಘವನ್ನು ಅಧಿಕಾರದಿಂದ ದೂರವಿಡಲು ಮತದಾರರನ್ನು ಎಚ್ಚರಿಸಿದ್ದರು. ಆದರೆ ಇಂದು ದೇವರಸ್‌ನ ಕಾಲಜ್ಞಾನ ನಿಜವಾಗಿರುವುದು ಚಾರಿತ್ರಿಕ ವ್ಯಂಗ್ಯವಾಗಿದೆ. ಜಿ.ಆರ್. ಸರಿಯಾಗಿ ಊಹಿಸಿದ್ದಂತೆ ಹಿಂದುತ್ವದ ಅಮಲನ್ನು ಸಂಕ್ರಾಮಿಕದಂತೆ ಹಳ್ಳಿಹಳ್ಳಿಗಳಿಗೆ ತಲುಪಿಸುವಲ್ಲಿ ಆರ್.ಎಸ್.ಎಸ್. ಯಶಸ್ವಿಯಾಗಿದೆ. ಅದರ ಪರಿಣಾಮವಾಗಿ ದೇಶದ ಸಾಮಾಜಿಕ ಸ್ವೈರಣೆ ಮತ್ತು ಕೂಡು ಬಾಳ್ವೆಯ ಒಪ್ಪಂದಗಳನ್ನು ಭಗ್ನಗೊಳಿಸಿರುವ ಪ್ರಯತ್ನಗಳು ಇನ್ನೂ ಕ್ರಿಯಾಶೀಲವಾಗಿವೆ. ಸಂಘ ಪ್ರತಿಪಾದಿಸುವ ಧರ್ಮ, ರಾಷ್ಟ್ರೀಯತೆ ಹಿಂದುತ್ವ-ಭವ್ಯ ಸಂಸ್ಕೃತಿಯ ಕಲ್ಪನೆ ಮುಂತಾದ ಪಾರಿಭಾಷಿಕ ಪದಗಳನ್ನು ಯಥೇಚ್ಛವಾಗಿ ಬಳಸುವ ಆರ್.ಎಸ್.ಎಸ್.ನ ಮತಾಂಧತೆಯ ಜಾತಿ ಪದ್ಧತಿಯನ್ನು, ವರ್ಣಾಶ್ರಮ ಧರ್ಮವನ್ನು ಪುಷ್ಟಿಗೊಳಿಸುತ್ತಿರುವ ಪ್ರಕ್ರಿಯೆಗಳನ್ನು ಜಿ.ಆರ್. ಸಾಕ್ಷಿ ಸಮೇತವಾಗಿ ನಿರೂಪಿಸಿದ್ದಾರೆ. ಆರ್.ಎಸ್.ಎಸ್. ತನ್ನ ಶೈಶವಾವಸ್ಥೆಯಲ್ಲಿಯೇ ಗಾಂಧಿಯವರನ್ನು ಬಲಿ ಪಡೆದು ಸಮರ್ಥಿಸಿ ಕೊಂಡಿದ್ದನ್ನು ಸೂಕ್ಷ್ಮವಾಗಿ ಗುರುತಿಸುವ ಜಿ.ಆರ್. ಇಂದು ಮನುವಾದಿ ಸಂಘಟನೆಗಳಿಂದ ದೇಶದ ಸಾಮರಸ್ಯದ ನೆಲೆ ಭಗ್ನವಾಗುತ್ತಿರುವುದನ್ನು 'ವಿಷವೃಕ್ಷ' ಎಂಬ ರೂಪಕದ ಮೂಲಕ ಸಂಕೇತಿಸಲು ಯತ್ನಿಸಿದ್ದಾರೆ. ಈ ವಿಷವೃಕ್ಷ ಈಗ ಮತ್ತಷ್ಟು ಬೇರುಬಿಟ್ಟು ದೊಡ್ಡದಾಗಿದೆ. ಹಾಗಾಗಿ ಅದರ ಅಪಾಯದ ಪ್ರಮಾಣವೂ ಕೂಡ ದೊಡ್ಡದೇ ಎಂಬುದಕ್ಕೆ ಇತ್ತೀಚಿನ ಗೋಧ್ರಾ ಘಟನೆ - ಹಿಂಸೆಗಳೇ ಸಾಕ್ಷಿಯಾಗಿವೆ. ಆದ್ದರಿಂದ ಈ ಪುಸ್ತಕವನ್ನು ಎಲ್ಲಾ ಪ್ರಜ್ಞಾವಂತರು ಮತ್ತೊಮ್ಮೆ ಓದಿ ಮನನಮಾಡಿಕೊಳ್ಳುವ ಅಗತ್ಯವಿದೆ.

3. ಹಿಂದುತ್ವದ ಹಿಂದೆ-ಮುಂದೆ

ಈ ಹೊತ್ತಿಗೆಯನ್ನು 1993ರಲ್ಲಿ ನವಕರ್ನಾಟಕ ಪ್ರಕಾಶನ ಸಂಸ್ಥೆ ಪ್ರಕಟಿಸಿದೆ. 1992 ಡಿಸೆಂಬರ್‌ನಲ್ಲಿ ಬಾಬರಿ ಮಸೀದಿಯನ್ನು ಕೆಡವಿ ಸ್ವರ್ಗಕ್ಕೆ ಹಕ್ಕುಪತ್ರ ಪಡೆದವರಂತೆ ಮತಾಂಧರು

ವಿಜಯಘೋಷ ಮಾಡುತ್ತಿರುವಾಗ, ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವದ ವ್ಯವಸ್ಥೆಯ ಕುರಿತು ಇನ್ನಿಲ್ಲದಂತೆ ಸಾರ್ವಜನಿಕವಾಗಿ ಸ್ತುತಿಸಿ, ಆಂತರಿಕವಾಗಿ ಮೂಲಭೂತವಾದಿ 'ಫ್ಯಾಸಿಸ್ಟ್' ಸಂಘಟನೆಗಳಿಗೆ ಕುಮ್ಮಕ್ಕು ಕೊಟ್ಟು, ಅವರ ಆಲೋಚನೆಗಳನ್ನು ಬೆಂಬಲಿಸುತ್ತಾ ಸ್ವರ್ಗಾಪೇಕ್ಷಿಗಳಾದ ಡಾಂಭಿಕ ರಾಜಕೀಯ ನೇತಾರರು ತುಂಬಿಕೊಂಡಿರುವ ಈ ವಿಷಮ ಸನ್ನಿವೇಶದಲ್ಲಿ ಈ ಪುಸ್ತಕದ ಓದು ಅತ್ಯಂತ ಮಹತ್ವದ್ದಾಗಿ ತೋರುತ್ತದೆ.

ಹಿಂದೂ ಧರ್ಮ, ಹಿಂದೂ ಪರಂಪರೆಯನ್ನು ಭಾರತದ ಪ್ರಾಚೀನ ಪರಂಪರೆ ಹಾಗೂ ಮೂಲ ಧರ್ಮ ಎಂದು ಬಿಂಬಿಸಲು ಚರಿತ್ರೆಯನ್ನು ತಿರುಚಿ ಬರೆಸಿದ ಸರ್ಕಾರಗಳು, ಮತಾಂಧರು ಉತ್ತರಿಸಲೇಬೇಕಾದ ಪ್ರಶ್ನೆಗಳನ್ನು ಜಿ.ಆರ್. ಈ ಹೊತ್ತಿಗೆಯಲ್ಲಿ ಪ್ರಸ್ತಾಪಿಸಿದ್ದಾರೆ. ಪರಕೀಯರಾದ ಆರ್ಯರನ್ನು ಮತ್ತು ಆರ್ಯಧರ್ಮವನ್ನು ಸ್ಥಳೀಯರಾಗಿಸುವ ಪ್ರಯತ್ನವು ಯುರೋಪಿನ ವಸಾಹತು ನಿರ್ಮಾಣ ಪ್ರಕ್ರಿಯೆಯನ್ನು ಹೋಲುವಂತಿದೆ.

ಭಾರತೀಯ ಸಾಂಸ್ಕೃತಿಕ ಇತಿಹಾಸವು ಅತ್ಯಂತ ಗೊಂದಲದ ಗೂಡಾಗಿದೆ. ಅದರ ಪ್ರಯೋಜನ ಪಡೆಯಲು 'ಹಿಂದುತ್ವ' ಸೂತ್ರವನ್ನು ಮೂಲಭೂತವಾದಿ ಸಂಘಟನೆಗಳಾದ ರಾಷ್ಟ್ರೀಯ ಸ್ವಯಂ ಸೇವಕ ಸಂಘ, ವಿಶ್ವ ಹಿಂದೂ ಪರಿಷತ್, ಧರ್ಮ ಸಂಸತ್ತು, ಭಜರಂಗದಳಗಳು ಅವಿರತವಾಗಿ ಪ್ರಯತ್ನ ನಡೆಸಿವೆ. ಹಿಂದುತ್ವದ ಹಿಂದೆ-ಮುಂದೆ ಪುಸ್ತಕವು ಹಿಂದೂ ಧರ್ಮದ ಆಶಯವನ್ನು 'ಅಜೀಗರ್ತ ಸಂಸ್ಕೃತಿ' ಎಂದು ಗುರುತಿಸಿದೆ ಮತ್ತು ಐದು ಸಾವಿರ ವರ್ಷಗಳಿಂದ ಭಾರತೀಯ ಸಮಾಜವನ್ನು ಅಸಮಾನತೆ ಮತ್ತು ಅಸಹನೆಯ ಅಸ್ತ್ರಗಳಿಂದ ನಿಯಂತ್ರಿಸುತ್ತ ಬಂದಿರುವ 'ಧಾರ್ಮಿಕ ರಾಜಕಾರಣ'ದ ನೆಲೆಗಳನ್ನು ವೈದಿಕ, ಚಾರಿತ್ರಿಕ ಮಾನವಶಾಸ್ತ್ರೀಯ ಮತ್ತು ತತ್ತ್ವಶಾಸ್ತ್ರದ ಉದಾಹರಣೆಗಳನ್ನು ಬಳಸಿ, ಅಧ್ಯಯನ ನಡೆಸಿ 'ಹಿಂದುತ್ವ' ಎಂಬುದು ಒಂದು ಸಾಮೂಹಿಕ ಸನ್ನಿ ಅಥವಾ ಮನೋರೋಗ ಎಂದು ವ್ಯಾಖ್ಯಾನಿಸಿರುವುದು ಸ್ವಾಗತರ್ಹವಾದ ನಿರ್ಣಯವೇ ಆಗಿದೆ.

ಧಾರ್ಮಿಕ ಮೂಲಭೂತವಾದದ ಗುಣಲಕ್ಷಣಗಳನ್ನು ಈ ಕಿರುಹೊತ್ತಿಗೆಯಲ್ಲಿ ಸವಿವರವಾಗಿ ಚರ್ಚಿಸಿರುವುದರಿಂದ ಈ ಪುಸ್ತಕದ ಓದು ಜಾಗತೀಕರಣದ ಪ್ರಭಾವದಿಂದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕವಾಗಿ ದಿಕ್ಕು ತಪ್ಪಿಸುವ ಜನಸಮುದಾಯಗಳಿಗೆ ಅಗತ್ಯವಿರುವ ಮನೋಬಲವನ್ನು ನೀಡುವಂತಿದೆ. ಮುಖ್ಯವಾಗಿ 'ಹಿಂದುತ್ವ'ದ ಪರಿಭಾಷೆಯನ್ನು ವೈಜ್ಞಾನಿಕವಾಗಿ ಚಾರಿತ್ರಿಕ ಚೌಕಟ್ಟಿನಲ್ಲಿ ವಿವರಿಸುವುದು ಮತಾಂಧರ ಧಾರ್ಮಿಕ ಯಾಜಮಾನ್ಯವನ್ನು ಸಾರಾಸಗಟಾಗಿ ತಿರಸ್ಕರಿಸಿದೆ.

❑

ಡಾ. ಜಿ.ಆರ್. ಅವರ 'ದಿ ಲಿವಿಂಗ್ ಮಾರ್ಕ್ಸ್'

ಕೆ.ಎಸ್. ಪಾರ್ಥಸಾರಥಿ

ಜಿ.ಆರ್. ಅವರು 1976-83ರ ಅವಧಿಯಲ್ಲಿ ವಿವಿಧ ಪತ್ರಿಕೆಗಳಲ್ಲಿ ಪ್ರಕಟಿಸಿದ ಲೇಖನಗಳ ಸಂಗ್ರಹ. ಅಂದಿನ ದಿನಗಳಿಂದಲೂ ಕರ್ನಾಟಕದ, ಅದರಲ್ಲೂ ಬೆಂಗಳೂರಿನ ಸಾರ್ವಜನಿಕ ಜೀವನದಲ್ಲಿ ಅವರು ಅತ್ಯಂತ ಕ್ರಿಯಾಶೀಲ ವ್ಯಕ್ತಿಯಾಗಿರುವುದು ಅವರೊಡನೆ ಕೆಲಸ ಮಾಡಿದವರಿಗೆಲ್ಲಾ ಅನುಭವಕ್ಕೆ ಬಂದಿರುವ ವಿಷಯ. ಅವರು ಕೇವಲ ದಂತಗೋಪುರದಲ್ಲಿ ಕುಳಿತ ಶಿಕ್ಷಕ, ಬೌದ್ಧಿಕ ಚತುರ ಅಥವಾ ಒಬ್ಬ 'ಜನಪ್ರಿಯ' ಬರಹಗಾರ ಎಂದೆನಿಸಿಕೊಂಡವರೇನಲ್ಲ. ಸಾರ್ವಜನಿಕ ರಂಗದ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ಮನಃಪೂರ್ವಕವಾಗಿ ತೊಡಗಿಸಿಕೊಳ್ಳುತ್ತಲೇ ಅಲ್ಲಿಯ ಅನುಭವವನ್ನು ಹಂಚಿಕೊಳ್ಳಲೆಂದೋ, ಅಲ್ಲಿಯ ಚಳವಳಿಗೆ, ಹೋರಾಟಕ್ಕೆ, ಸಂಘಟನೆಗೆ ದಿಕ್ಸೂಚಿ ಎಂತಲೋ ತಮ್ಮ ಚಿಂತನೆಯನ್ನು ಎಲ್ಲರೊಂದಿಗೆ ಹಂಚಿಕೊಳ್ಳುವ ಪ್ರವೃತ್ತಿ ಅವರದು.

'ಲಿವಿಂಗ್ ಮಾರ್ಕ್ಸ್' ಕೃತಿಯ ಹಿಂದೆ ಆಳವಾದ, ವಿಸ್ತಾರವಾದ ಬಹುಮುಖಿ ಅಭ್ಯಾಸದಿಂದ ಪಡೆದುಕೊಂಡ ನಿಶಿದಮತಿ ಕೆಲಸ ಮಾಡಿರುವುದು ಸ್ಪಷ್ಟ. ಅದಕ್ಕೂ ಮಿಗಿಲಾಗಿ ಅವರಿಗೆ ತನ್ನ ಜನರ ಬಗೆಗಿನ ಅಪಾರ ಪ್ರೀತಿ, ಅವರ ಸಮಸ್ಯೆಗಳ ಬಗೆಗಿನ ಕಳಕಳಿಯೇ ಅವರ ಲೇಖನ ಗಳಿಗೆ ಮೂಲ ಪ್ರೇರಣೆ ಎಂದೆನಿಸುತ್ತದೆ. ಈ ಲೇಖನಗಳಲ್ಲಿ ಈ ಮೂರು ಪ್ರವೃತ್ತಿಗಳು ಒಂದಕ್ಕೊಂದು ತಳುಕು ಹಾಕಿಕೊಂಡು ಮಿನುಗುತ್ತವೆ.

ಇದರಲ್ಲಿ ಒಟ್ಟು ಹದಿನೈದು ಪ್ರಬಂಧಗಳಿವೆ. ಲೇಖಕರು ತಮ್ಮ ಸೈದ್ಧಾಂತಿಕ ಬೆಳವಣಿಗೆಗೆ ಗುರುವೆಂದು ಭಾವಿಸುವ ಪ್ರೊ. ದೇವಿಪ್ರಸಾದ್ ಚಟ್ಟೋಪಾಧ್ಯಾಯರ 'ವಾಟ್ ಈಸ್ ಲೀವಿಂಗ್ ಅಂಡ್ ವಾಟ್ ಈಸ್

ಡೆಡ್' ಮತ್ತು 'ಸೈನ್ಸ್ ಅಂಡ್ ಸೊಸೈಟಿ ಇನ್ ಏನ್ಷಿಯಂಟ್ ಇಂಡಿಯಾ' ಗ್ರಂಥಗಳ ಅವಲೋಕನಗಳಿವೆ. ಅರುಣ್ ಶೌರಿಯವರ 'ಹಿಂದೂಯಿಸಂ, ಎಸೆನ್ಸ್ ಅಂಡ್ ಕಾನ್ಸಿಕ್ವೆನ್ಸ್' ಎಂಬ ಪ್ರಸ್ಥಾನ ತ್ರಯಗಳ ಬಗೆಗಿನ ಪುಸ್ತಕವನ್ನು 'ಎಂಪ್ಟಿ ಬಾಕ್ಸಸ್ ಅಂಡ್ ಬ್ಲಾಕ್ ಬಾಕ್ಸಸ್ ಎನ್ಕ್ಲೋಸ್ಡ್' ಎಂಬ ಲೇಖನದಲ್ಲಿ ವಿಮರ್ಶಿಸಿದ್ದಾರೆ.

ಜೀವಸತ್ವದ ಪ್ರಾಕೃತಿಕ ವಿಕಾಸದ ನಡೆಯನ್ನು ಡಾರ್ವಿನ್ ಕಂಡುಹಿಡಿದು ಪ್ರತಿಪಾದಿಸಿದಂತೆ, ಮಾರ್ಕ್ಸ್ ಆ ವಿಕಾಸದ ಭಾಗವೇ ಎಂಬಂತೆ ಮಾನವ ಸಮಾಜದ ಬೆಳವಣಿಗೆಯ ಇತಿಹಾಸ ವಿಕಾಸವಾಗುವ ನಿಯಮಗಳನ್ನು ಗುರುತಿಸಿದ ಎನ್ನುತ್ತಾನೆ ಏಂಗಲ್ಸ್. ಸಮಕಾಲೀನ ಬಂಡವಾಳ ವ್ಯವಸ್ಥೆಯ ಅಂತಃಸ್ಸತ್ವ, ರಚನೆ ಅದರ ಬೆಳವಣಿಗೆಯ ನಿಯಮಗಳನ್ನು ಗುರುತಿಸಿ, ಸಮಾಜದಲ್ಲಿನ ಬಡವ-ಬಲ್ಲಿದರ ಮಧ್ಯೆ ಇರುವ ಏರುಪೇರುಗಳ ಮರ್ಮವನ್ನು ಮಾರ್ಕ್ಸ್ ಬಿಚ್ಚಿಟ್ಟಿದ್ದಾನೆ ಎನ್ನುತ್ತಾನೆ. ಮಾನವನ ಇತಿಹಾಸದುದ್ದಕ್ಕೂ ಎಲ್ಲ ಚರ್ಚೆಗಳ ಕೇಂದ್ರವಾಗಿದ್ದ ಈ ಸಮಸ್ಯೆಯ ಅಂತರಂಗವನ್ನು ಹೊರಗೆಡವಿ, ಅದರ ಮೂಲಕ ಅದರ ಪರಿಹಾರೋಪಾಯವನ್ನು ಸೂಚಿಸಲು ಮಾರ್ಕ್ಸ್‌ವಾದ ಸಮರ್ಥವಾಗುತ್ತದೆ. ಈ ಪರಿಹಾರದ ಮೇಲೆ ಮಾನವ ಸಮಾಜದ ಇತರ ಚಟುವಟಿಕೆಗಳಾದ ಕಲೆ, ಸಾಹಿತ್ಯ, ತತ್ವಶಾಸ್ತ್ರ, ಸಂಸ್ಥೆಗಳು, ಮತಧರ್ಮ, ವಿಜ್ಞಾನ, ಅಧಿಕಾರ ಅರಸುವ ರಾಜಕೀಯ ಮುಂತಾದ ವಿಭಿನ್ನ ಕ್ಷೇತ್ರಗಳಲ್ಲಿನ ಆವಿಷ್ಕಾರ ಮತ್ತು ಅವುಗಳೊಳಗೆ ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸುವ ಸಾಧ್ಯತೆಯನ್ನು ಈ ಸಿದ್ಧಾಂತ ಉಂಟು ಮಾಡಿದೆ. ಮಾನವ ಸಮಾಜದ ಬೆಳವಣಿಗೆಯನ್ನು ಹೊಂದಿಕೊಂಡೇ ಬೆಳೆಯುವ ಈ ವಾದ ನಿತ್ಯನೂತನವಾಗಿರುವುದು ಅದರ ದಾರ್ಶನಿಕ ಸ್ವಭಾವವಾಗುತ್ತದೆ. ಅಂತೆಯೆ ಅದು 'ಜೀವಂತ'. ತತ್ವಶಾಸ್ತ್ರಕ್ಕೆ ಗುಣವಾಚಕ ಇಲ್ಲಿ ಸಾರ್ಥಕವಾಗುತ್ತದೆ.

ಮಾರ್ಕ್ಸ್‌ವಾದ ಕೇವಲ ಅರ್ಥವ್ಯವಸ್ಥೆಯನ್ನು ಕೇಂದ್ರ ಬಿಂದುವಾಗಿಸಿ ಬೆಳವಣಿಗೆಯನ್ನು ಒಂದು ಸರಳರೇಖೆಯಂತೆ ಕಾಣುವ ಶುಷ್ಕವಾದವಾಗಿದೆ ಎನ್ನುವ ಆಪಾದನೆ ಮಾರ್ಕ್ಸ್-ಏಂಗಲ್ಸರ ಕಾಲದಿಂದಲೂ ಇದೆ. ಏಂಗಲ್ಸ್ ಅದಕ್ಕೆ ಪದೇ ಪದೇ ಉತ್ತರಿಸಿದ್ದಾನೆ. ಮುಂದೆ ಅನೇಕ ವಿದ್ವಾಂಸರು ಈ ಆಪಾದನೆಗೆ ಉತ್ತರವಿತ್ತಿದ್ದಾರೆ. ಜೆ.ಡಿ. ಬರ್ನಾಲರದು ಪ್ರಸಿದ್ಧವಾದ ಗತಿ ತಾರ್ಕಿಕವಾದ. ಮುಂಬರುವ ಸಂಗತಿಗಳನ್ನು ಮುಂಚೆಯೇ ಹೇಳುವ ಜ್ಯೋತಿಷ್ಯವಲ್ಲ, ಅದು ಒಂದು ಪ್ರಾಯೋಗಿಕ ವಿಧಾನ. ತಾರ್ಕಿಕವಾಗಿ ಎಲ್ಲವನ್ನು ಸಾಧಿಸಬೇಕಾದ ಅಗತ್ಯವನ್ನು ಕೈಬಿಟ್ಟ ಮಾರ್ಗವಲ್ಲ, ಅದೊಂದು ಅಪೂರ್ವ ವೈಜ್ಞಾನಿಕ ಪದ್ಧತಿ. ಅದರ ಮತ್ತೂ ಒಂದು ಮಹತ್ತರ ಕೊಡುಗೆಯೆಂದರೆ ಅನೇಕ ಹೊಸ ಬೆಳವಣಿಗೆಗಳನ್ನು ಮೈಗೂಡಿಸಿಕೊಂಡು ವಿವಿಧ ವಿಜ್ಞಾನದ ಶಿಸ್ತುಗಳ ಮಧ್ಯೆ ಪರಸ್ಪರ ಸಂಬಂಧವನ್ನು ಕಲ್ಪಿಸಿ ಕ್ರೋಡೀಕರಿಸುವ ವಿಶಿಷ್ಟ ಮಾರ್ಗ. ಅಲ್ಲದೆ ಅದಕ್ಕೆ ಹೊಂದಿಕೊಂಡ ಹೊಸ ಪ್ರಯೋಗಗಳ ಸ್ವರೂಪವನ್ನು ಮತ್ತು ಬರಲಿರುವ ಹೊಸ ಆವಿಷ್ಕಾರಗಳ ದಿಕ್ಕನ್ನು ಸೂಚಿಸಲು ಸಮರ್ಥವಾಗುತ್ತದೆ - ಇದು ವಿಜ್ಞಾನಿ ಜೆ.ಡಿ. ಬರ್ನಾಲರ ಮಾತು. ಏಂಗಲ್ಸ್ ಹೇಳುವ ಮತ್ತೊಂದು ಸ್ವಾರಸ್ಯಕರ ಮಾತು: ಆರ್ಯನ್ ಭಾಷೆಯ ವ್ಯಾಕರಣದ ತತ್ವಗಳನ್ನು ಆರ್ಥಿಕ ಬೆಳವಣಿಗೆಯ ಮೀಮಾಂಸೆಯೊಡನೆ ಬೆಸೆಯುವುದು ಕ್ಷುಲ್ಲಕ

ವಾಗಿದ್ದು, ಅದು ಮಾರ್ಕ್ಸ್‌ವಾದದ ಮಾದರಿಯಲ್ಲ. ಅಂದರೆ ಎಲ್ಲ ಕಾಲಕ್ಕೂ ಮತಧರ್ಮಗಳಂತೆ, ಅವುಗಳ ತರ್ಕಾತೀತ ಅಪೌರುಷೇಯತೆಯಂತೆ ಮಾರ್ಕ್ಸ್‌ವಾದ ಮೂಲಭೂತವಾದಿಯಾಗಿರುವುದಿಲ್ಲ; ನಿಂತ ನೀರಾಗುವುದಿಲ್ಲ. ವಿಜ್ಞಾನದಲ್ಲಿ ಹೊಸಹೊಸ ಬೆಳವಣಿಗೆಗಳಾದಂತೆ, ಅವುಗಳನ್ನು ತನ್ನೊಳಗೆ ಮೈಗೂಡಿಸಿಕೊಂಡಿರುವ ನಿರಂತರ ಊರ್ಧ್ವಮುಖಿ ಹಾಗೂ ಅಭಿವೃದ್ಧಿಶೀಲವಾಗಿದೆ ಈ ಸಿದ್ಧಾಂತ. ಇಷ್ಟೆಲ್ಲ ಅಂಶಗಳನ್ನು ಈ ಸಣ್ಣ ಲೇಖನದಲ್ಲಿ ಚರ್ಚಿಸಲಾಗಿದೆ.

'ಭಗವದ್ಗೀತೆ ಕುರಿತ ಒಂದು ಬಿಚ್ಚುಮನಸ್ಸಿನ ಚಿಂತನೆ', 'ವಿಜ್ಞಾನ ಮತ್ತು ಭಾರತದ ಪುರಾತನ ತತ್ವಶಾಸ್ತ್ರ', 'ಭಾರತೀಯ ವಿಜ್ಞಾನ ಮತ್ತು ಪ್ರತಿಗಾಮಿ ಸಂಪ್ರದಾಯದ ಪುನಶ್ಚೇತನ' - ಈ ಮೂರೂ ಲೇಖನಗಳು ಮೂರು ಪುಸ್ತಕದ ಅವಲೋಕನಗಳು. ಒಟ್ಟಾರೆಯಾಗಿ ಇವು ಭಾರತೀಯ ಸಾಂಪ್ರದಾಯಿಕ ತತ್ವಸಿದ್ಧಾಂತಗಳ ನಡುವಿನ ಸಂಘರ್ಷ ಮತ್ತು ಅವುಗಳ ಸಾಮಾಜಿಕ ಪರಿಣಾಮಗಳನ್ನು ಕುರಿತ ವಿಶ್ಲೇಷಣೆಯನ್ನು ಒದಗಿಸುತ್ತವೆ. ಭಾರತದ ಜಾತಿ ಪದ್ಧತಿಯ ಸಮಸ್ಯೆಯನ್ನು ಕುರಿತ ಲೇಖನ ಈ ಸೈದ್ಧಾಂತಿಕ ಪರಿಸ್ಥಿತಿಯ ಪರಿಣಾಮವನ್ನು ಕುರಿತ ಹಾಗೂ ಮುಂದುವರಿದ ಚರ್ಚೆಯಾಗಿದೆ. ಇವೆರಡರ ನಡುವೆ "ಇತಿಹಾಸದ ಅಭ್ಯಾಸಕ್ಕೆ ಒಂದು ಟಿಪ್ಪಣಿ" ಎಂಬ ಲೇಖನವನ್ನು ಔಚಿತ್ಯಪೂರ್ಣವಾಗಿ ಅಳವಡಿಸಲಾಗಿದೆ. 'ಆರ್ಥಿಕ ಸಂಘರ್ಷ' 'ಮಾನವ ಹಕ್ಕು ದೈನಂದಿನ ಚಿಂತನೆಗಳು', 'ನಿಶ್ಶಸ್ತ್ರೀಕರಣ, ವಿಶ್ವಶಾಂತಿ ಮತ್ತು ಶಿಕ್ಷಣ' - ಈ ಮೂರು ಲೇಖನಗಳನ್ನು ಪರಸ್ಪರ ಸಂಬಂಧಿತ ವಿಷಯಗಳ ಕುರಿತ ಚರ್ಚೆಯಾಗಿ ನೋಡಬಹುದಾಗಿದೆ.

ಬಂಡಾಯ ಸಾಹಿತ್ಯದ ಪ್ರಥಮ ಸಮ್ಮೇಳನದ ಸಂದರ್ಭದಲ್ಲಿ ರಚಿಸಿದ 'ಕನ್ನಡ ಸಾಹಿತ್ಯದಲ್ಲಿನ ಸಮಕಾಲೀನ ಬೆಳವಣಿಗೆಗಳ ಅವಲೋಕನ', 'ಜನಸಂಖ್ಯಾಸ್ಫೋಟವೆಂಬ ಸಮಸ್ಯೆಯನ್ನು ಬಳಸಿ, ಬೆಳೆಸುತ್ತಿರುವ ಅತಾರ್ಕಿಕ ನಂಬಿಕೆಗಳು' ಮತ್ತು 'ದೇವರು ಮತ್ತು ದೇವತಾ ಮನುಷ್ಯರು' - ಈ ಮೂರೂ ಬಿಡಿ ಬಿಡಿ ಲೇಖನಗಳು ಈ ಪುಸ್ತಕದ ಹೂರಣ. ಪ್ರಕಟಣೆಯ ತಾರೀಖಿನ ಪ್ರಕಾರ ಲೇಖನಗಳನ್ನು ಜೋಡಿಸಿದರೆ ವಿಷಯದ ಚರ್ಚೆಯ ತಾರ್ಕಿಕ ಮುಂದುವರಿಕೆಗೆ ಅನುವಾಗುವಂತೆ ಅವುಗಳನ್ನು ಜೋಡಿಸಲಾಗಿದೆ. ಈ ಎಲ್ಲ ಲೇಖನಗಳನ್ನು ಒಂದು ಸಾಮಾನ್ಯ ಸೂತ್ರದಲ್ಲಿ ಪೋಣಿಸಿರುವುದು ಇಲ್ಲಿಯ ವಿಚಾರ ಕ್ರಮ. ಅದೆಂತಹ ವಿಚಾರ ಕ್ರಮ ಎಂಬ ವ್ಯಾಖ್ಯೆಯೇ ಈ ಸಂಕಲನದ ಶೀರ್ಷಿಕೆಯೂ ಆಗಿರುವ ಪ್ರಥಮ ಲೇಖನ "ದಿ ಲಿವಿಂಗ್ ಮಾರ್ಕ್ಸ್". ಮಾರ್ಕ್ಸ್‌ನನ್ನು ಕುರಿತ ಅಥವಾ ಅವನ ಬರಹಗಳನ್ನು ಕುರಿತ ನೇರವಾದ ಯಾವುದೇ ಲೇಖನವಿಲ್ಲದಿದ್ದರೂ ಈ ಲೇಖನಗಳ ಒಳಹರಿವು ಮಾರ್ಕ್ಸ್‌ವಾದಿ ಚಿಂತನಾಕ್ರಮ ಎನ್ನಬಹುದು. ಅದೇ ಈ ಸಂಗ್ರಹದ ವೈಶಿಷ್ಟ್ಯ. ಇದೊಂದು ಸೃಜನಶೀಲ ವೈಜ್ಞಾನಿಕ ಮನೋಭಾವನೆಯ ಕ್ರಮ. ಆ ಮಾರ್ಗವನ್ನು ಅನುಸರಿಸಿ ಯಾವುದೇ ವಿಷಯವನ್ನು ಯಾರೇ ಶೋಧಿಸಿದರೂ ಒಂದೇ ತೀರ್ಮಾನಕ್ಕೆ ಬರುವುದು ಅನಿವಾರ್ಯವೆನಿಸುತ್ತದೆ. ಇನ್ನೊಂದು ಸ್ತರದಲ್ಲಿ 'ದಿ ಲಿವಿಂಗ್' ಎಂಬ ಪದ ಪ್ರಯೋಗದಲ್ಲಿ ಸ್ವಾರಸ್ಯವಿದೆ. ದೇವಿಪ್ರಸಾದರ 'ವಾಟ್ ಈಸ್ ಲಿವಿಂಗ್ ಅಂಡ್ ವಾಟ್ ಈಸ್ ಡೆಡ್ ಇನ್ ಇಂಡಿಯನ್ ಫಿಲಾಸಫಿ'ಯಲ್ಲಿ 'ಲಿವಿಂಗ್' ಎಂಬುದು ಯಾವ ಚಿಂತನೆಗಳು ಸಾಮಾಜಿಕ ಜೀವನಕ್ಕೆ ಜೀವದಾಯಿನಿಯಾಗಬಲ್ಲುದೋ ಅಂತಹವು. ಹಾಗೆಯೇ

ಅದಕ್ಕೆ ಪ್ರತಿಗಾಮಿಯಾಗಬಲ್ಲ ಅಂಶಗಳು 'ಡೆಡ್' ಎಂಬ ಗ್ರಹಿಕೆಗೆ ಬರುವಂತಹುದು. ಎಲ್ಲ ಸಾಮಾಜಿಕ ಪ್ರಕ್ರಿಯೆಗಳೂ ಪರಸ್ಪರ ವಿರುದ್ಧ ಪ್ರವೃತ್ತಿಗಳ ನಡುವಿನ ಸಂಘರ್ಷಕ್ಕೆ ಎಡೆಮಾಡಿಕೊಡುತ್ತದೆ. ಅಂಥ ಸಂಘರ್ಷಗಳ ಪರಿಣಾಮವಾಗಿ ಬೆಳವಣಿಗೆಗೆ ಅನುಕೂಲಕರವಾದ ಪರಿಸರ ಉಂಟಾಗುತ್ತದೆ. ಪರಿಣಾಮವಾಗಿ ಸಮಾಜ ಪ್ರಗತಿಯ ಪಥದಲ್ಲಿ ಮತ್ತೊಂದು ಹೆಜ್ಜೆ ಮುಂದೆ ಹೋಗುತ್ತದೆ. ವೈಚಾರಿಕವಾಗಿ ಸಂಘರ್ಷದ ಪರಿಣಾಮ 'ಲಿವಿಂಗ್' ಆಗುತ್ತದೆ. ಮಾರ್ಕ್ಸ್‌ವಾದ ಮೊಟ್ಟಮೊದಲಿಗೆ ಕ್ರಿಯಾಶೀಲ ಸಮಾಜದೊಳಗಿನ ಈ ನಿರಂತರ ಪ್ರವೃತ್ತಿಯನ್ನು ಗುರುತಿಸಲು ಅನುವು ಮಾಡಿಕೊಟ್ಟಿತು. ಆ ಪ್ರವೃತ್ತಿ ವೈಜ್ಞಾನಿಕವೆಂದೂ, ಅದು ಮೂಲಭೂತ ವಿಜ್ಞಾನದಲ್ಲಿನ ಕಾರ್ಯ-ಕಾರಣ ಸಂಬಂಧದಂತೆ ಮರು ಪ್ರಯೋಗದಲ್ಲೂ ಅದೇ ಪರಿಣಾಮ ಉಂಟಾಗುವಂತೆ ಗುರುತಿಸಿತು. ಸಾಮಾಜಿಕ ಬದಲಾವಣೆಯನ್ನು ಆಕಸ್ಮಿಕವೆಂದು ಭಾವಿಸದೆ, ಯೋಜನಾಬದ್ಧವಾಗಿ ಅವುಗಳ ಮುನ್ನೋಟ ಸಾಧ್ಯವೆಂಬ ತಿಳಿವು ಮೂಡಿಸಿತು. ಹಾಗಾಗಿಯೇ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ನಿರ್ಣಾಯಕವಾಗಿ, ಪ್ರಜ್ಞಾಪೂರ್ವಕವಾಗಿ ಮಧ್ಯೆ ಪ್ರವೇಶಿಸಬಲ್ಲ ಶಕ್ತಿಯನ್ನು ಅದು ದೊರಕಿಸಿಕೊಡುತ್ತದೆ.

ಈ ಪುಸ್ತಕದ ಮೊದಲ ಲೇಖನವು ನಂತರದ ಲೇಖನಗಳನ್ನು ಅರ್ಥಮಾಡಿಕೊಳ್ಳಲು ಪೀಠಿಕೆಯಾಗಿಯೂ, ಅವುಗಳ ಬಗೆಗಿನ ವ್ಯಾಖ್ಯಾನದಂತೆಯೂ ಭಾಸವಾಗುತ್ತದೆ. ಈ ಸಂಪ್ರದಾಯದ ವಿಮರ್ಶೆ ಇದೇ ಮೊದಲಲ್ಲ.

ಈ ಸಂದರ್ಭದಲ್ಲಿ ತಕ್ಷಣ ನೆನಪಿಗೆ ಬರುವುದು ಕೊಸಾಂಬಿಯವರ "ದಿ ಎಕ್ಸಾಸ್ಪರೇಟಿಂಗ್ ಎಸ್ಸೇಸ್". ಅದರಲ್ಲಿ ಭರ್ತೃಹರಿಯ ನೀತಿಶತಕದ ಕುರಿತ ಚರ್ಚೆಯಿದೆ. ಚಿಕ್ಕಂದಿನಲ್ಲಿ ಈ ನೀತಿಶತಕಗಳನ್ನು ಜೀವನಕ್ಕೆ ಅಗತ್ಯವಾದ ನೀತಿಯೆಂದು ಬಾಯಿಪಾಠ ಮಾಡಿದವರಿಗೆ ಕೊಸಾಂಬಿಯವರ ಲೇಖನಗಳನ್ನು ಓದಿದಾಗ ಆಘಾತವಾಗಬಹುದು. ನೀತಿಶತಕದ ಶ್ಲೋಕಗಳು ಹೇಗೆ ಒಬ್ಬ ಶೋಷಕ ವರ್ಗದ ಅಸ್ತ್ರಗಳಾಗಿ ಮಾರ್ಪಡಬಹುದು ಮತ್ತು ಕೆಲವೊಮ್ಮೆ ಸಾಮಾಜಿಕ ಹಿಂದುಳಿಯುವಿಕೆಗೆ ಕಾರಣವಾಗುವ ವರ್ಗನೀತಿಯಾಗಿ ಮಾರ್ಪಡಬಹುದು ಎಂಬುದರ ವಿಶ್ಲೇಷಣೆ ಇಲ್ಲಿ ದೊರೆಯುತ್ತದೆ. ಜಿ.ಆರ್. ಅವರ ಈ ಗ್ರಂಥದ ಲೇಖನಗಳು ಆ ಶ್ರೇಣಿಯನ್ನು ಸೇರಬಲ್ಲುವು. "ಬಂಡವಾಳದ ದಳ್ಳಾಳಿಗಳು, ಯಜಮಾನ ಸಂಸ್ಕೃತಿಯ ಊಳಿಗದವರೂ ಭಗವದ್ಗೀತೆಯನ್ನು ಪಠಿಸುವುದರಲ್ಲಿ ಆಶ್ಚರ್ಯವೇನಿಲ್ಲ" ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾ ಸಂಪ್ರದಾಯವಾದಿಗಳಿಗೆ ಜಿ.ಆರ್. ಚಾಟಿಏಟು ಕೊಡುತ್ತಾರೆ. ಅಲ್ಲಿನ ತೀಕ್ಷ್ಣತೆ ನಮಗೆ ದೇವಿಪ್ರಸಾದರನ್ನು ನೆನಪಿಸುತ್ತದೆ. ಅರುಣ್ ಶೌರಿಯವರ ಪುಸ್ತಕವಿಮರ್ಶೆಗೆ ಕೊಟ್ಟ ಹೆಸರೇ ಲೇಖನದ ಸಂಪೂರ್ಣ ವ್ಯಾಖ್ಯಾನವಾಗುತ್ತದೆ. 'ಖಾಲಿ ತಲೆ ಮತ್ತು ಕೆಟ್ಟ ಮನಸ್ಸಿನ ಪರಿಕರದಿಂದ ಹಿಂದೂ ಇಸಂ' ಕುರಿತ ಆ ಪುಸ್ತಕ ರಚನೆಗೆ ಶೌರಿಗಿರುವ ವಿದ್ಯಾರ್ಹತೆ ಏನೇ ಇರಲಿ ಅವರು ಮುಂದುವರಿದು ಇನ್ನೂ ಎರಡು ಪ್ರತಿಗಾಮಿ ಪುಸ್ತಕಗಳನ್ನು ರಚಿಸುತ್ತಲೇ ಬಂಡವಾಳದ ಪ್ರತಿನಿಧಿಯಾಗಿ ಈಗ ಅಧಿಕಾರ ಹಿಡಿದಿರುವ ಚಾಲಾಕಿತನದ ಸುಳಿವು ಅಂದೇ ಈ ವಿಮರ್ಶೆಯಲ್ಲಿ ಕಾಣಸಿಗುತ್ತದೆ. ಭಾರತದ ಪುರಾತನ ಸಂಪ್ರದಾಯದ ತತ್ವಶಾಸ್ತ್ರದ ಸಮ್ಮೋಹಕತೆ ಶೋಷಕರನ್ನು

ಅಂಕೆಯಲ್ಲಿಡುವ ಜೀರುಗುಣಿಕೆಯಾಗಿ ಅದು ಮಾಡಿರುವ ಸಹಸ್ರಮಾನ ಕಾಲದ ಆಘಾತಕ್ಕೆ ಇಲ್ಲಿಯ ಆರು ಲೇಖನಗಳು ಪರಿಣಾಮಕಾರಿಯಾಗಿ ಕನ್ನಡಿ ಹಿಡಿಯುತ್ತವೆ.

ದಲಿತನಿಗೆ ಪೂಜಾರಿಯಾಗಲು ಅವಕಾಶ ಕೊಟ್ಟು ಬ್ರಾಹ್ಮಣನೊಡನೆ ಸಮಾನತೆ ಕಲ್ಪಿಸಿದರೆ ಜಾತಿಸಮಸ್ಯೆ ಪರಿಹಾರವಾಗುತ್ತದೆಂಬುವವರು ಜಿ.ಆರ್. ಅವರು ಇಲ್ಲಿ ಬರೆದಿರುವ " ದಿ ಪ್ರಾಬ್ಲಂ ಆಫ್ ಕ್ಯಾಸ್ಟ್' ಲೇಖನದ ಮೊದಲ ಭಾಗವನ್ನು ಮತ್ತೊಮ್ಮೆ ಓದುವುದು ಸೂಕ್ತ. ವರ್ಗಭೇದದ ಶೋಷಣೆಯ ಸ್ವರೂಪ, ಅರ್ಥವ್ಯವಸ್ಥೆಯ ಸ್ವರೂಪಗಳನ್ನು, ಉದಾಹರಣೆಗೆ ಭೂಮಾಲೀಕತ್ವ ಸಂಬಂಧದಂತಹವುಗಳನ್ನು ತೊಡೆದುಹಾಕುವ, ಅದಕ್ಕಾಗಿ ಸಂಘಟನೆ ಬೆಸೆಯುವ ಕರ್ತವ್ಯವನ್ನು ಅಷ್ಟೇ ಮುಖ್ಯವಾದ ಜಾತಿ ಸಮಸ್ಯೆಯ ಸಾಮಾಜಿಕ ಪ್ರಕಾರಗಳನ್ನು ಧ್ವಂಸ ಮಾಡುವ ಹೋರಾಟ ಮುಗಿಯುವವರೆಗೆ ಮುಂದೂಡಬೇಕೆ? ಅವುಗಳೆರಡರ ಪರಸ್ಪರ ಪೂರಕ ಸಂಬಂಧಗಳನ್ನು ಅರಿತು ಎರಡೂ ಸಂಘಟನೆಗಳಿಗೆ ಒಟ್ಟಿಗೆ ಚಾಲನೆ ನೀಡಬೇಕೇ? ಈ ಎರಡರ ಅವಿನಾಭಾವವನ್ನು ಅರಿಯದೆ, ಎರಡನೆಯದಕ್ಕೇ ಸಂಪೂರ್ಣ ಗಮನ ಹರಿಸಬೇಕೆಂಬ ಈ ಸೈದ್ಧಾಂತಿಕ ಗೊಂದಲವನ್ನು ಪಟ್ಟಭದ್ರ ಪ್ರತಿಗಾಮಿಗಳು ಬೇಕೆಂತಲೇ ಕಾರ್ಮಿಕ-ದಲಿತರ ನಡುವೆ ಹುಟ್ಟುಹಾಕಿರುವ ಕುತಂತ್ರವನ್ನು ಈ ಲೇಖನ ಹೊರಗೆಡವುತ್ತದೆ.

ಇಂದಿರಾ ಕಾಂಗ್ರೆಸ್‌ನ 20 ಅಂಶಗಳ ಸೂತ್ರವನ್ನು ವಿಶ್ಲೇಷಿಸುತ್ತ ಅವುಗಳಲ್ಲಿ ಮೊದಲ ಹದಿನಾರರ ಸಾಧನೆಗೆ ಎಲ್ಲರೂ ಒಂದುಗೂಡಬೇಕು ಎನ್ನುವ ಜಿ.ಆರ್. ಮಧ್ಯಮ ವರ್ಗದವರಿಗೆ ಆದಾಯ ಕರ ವಿನಾಯಿತಿ ನೀಡಬೇಕೆಂಬ 17ನೆಯ ಸೂತ್ರ ಖಂಡಿತ ಕಾರ್ಯಗತವಾಗುತ್ತದೆ ಎನ್ನುತ್ತಾರೆ! ಅಶಕ್ತ ವರ್ಗಕ್ಕೆ ಬಲ ನೀಡುವ ಉದ್ಯೋಗ ತರಬೇತಿ ಮತ್ತು ವಿಸ್ತೃತ ಉದ್ಯೋಗದ ಅವಕಾಶದ ಕಾರ್ಯಕ್ರಮ ಹಾಗೂ ಭೂಸುಧಾರಣೆ ಮತ್ತು ಜೀತದ ಆಳಿನ ಬಿಡುಗಡೆಯ ಕಾರ್ಯಕ್ರಮಗಳಿಗೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸುತ್ತಾರೆ. ಈ ಕಾರ್ಯಕ್ರಮಗಳು ಆರ್ಥಿಕ ಸಂಘರ್ಷಕ್ಕೆ ಅವಕಾಶ ಕಲ್ಪಿಸುತ್ತವೆ. ಈ ಕಾರ್ಯಕ್ರಮಗಳು ಸಾರ್ಥಕವಾಗದೆ ವಿಫಲವಾದರೆ ಪರಿಣಾಮ ತೀರ ಅತಿರೇಕದ ಪ್ರತಿಕ್ರಿಯೆಗೆ ಎಡೆ ಮಾಡಿಕೊಡುತ್ತದೆ ಎಂಬ ಅವರ ಎಚ್ಚರಿಕೆಯ ಮಾತುಗಳಿವೆ. ಅದಕ್ಕೇ ಕಾಂಗ್ರೆಸ್‌ಪಕ್ಷ ಅಧಿಕಾರ ಕಳೆದುಕೊಂಡಿತೇ ಎಂಬುದು ಇಲ್ಲಿ ಚರ್ಚೆಗೆ ಅರ್ಹವಾದ ವಿಷಯ.

1977ರಲ್ಲಿ ಜನಸಂಖ್ಯಾ ಸ್ಫೋಟ ಕುರಿತ ವಿಚಾರ ಸಂಕಿರಣದಲ್ಲಿ ಜಿ.ಆರ್. ಮಂಡಿಸಿದ ಚಿಂತನೆಯೇ "ಜನಸಂಖ್ಯಾ ಸ್ಫೋಟ ಕುರಿತ ಮೂಢನಂಬಿಕೆಗಳು" ಲೇಖನ. ಶೋಷಣೆ ಬಡತನವಾಗಿ ಪರಿವರ್ತಿತವಾಗುತ್ತದೆ. ಆಗ ಬಡತನಕ್ಕೆ ಬಡತನವೇ ಕಾರಣವೆಂಬ ವಿಡಂಬನೆ ಮಾಡಲಾಗುತ್ತದೆ, ಎನ್ನುವ ಈ ಲೇಖನದ ಭಾಷಣದ ಶೈಲಿ ಸರಳವಾಗಿದೆ; ಹಾಸ್ಯ ಚಟಾಕಿಗಳಿಂದ ಕೂಡಿದೆ. ಜೊತೆಗೆ ಆರ್ಥಿಕ ಅಭಿವೃದ್ಧಿ ಮತ್ತು ನ್ಯಾಯವಾದ ಹಂಚಿಕೆಯಿಂದ ಮಾತ್ರ ಆಸ್ಫೋಟವನ್ನು ತಡೆಯಲು ಸಮರ್ಥ ಎಂಬ ವಾದಸರಣಿ ಇಲ್ಲಿದೆ. ಶಿಕ್ಷಕರ ಚಳವಳಿಯ ನೇತಾರರಾಗಿ, ಶಿಕ್ಷಕರು ವಿಶ್ವಶಾಂತಿ, ನಿಶ್ಶಸ್ತ್ರೀಕರಣ ಸಮಸ್ಯೆಗೆ ಸಂಬಂಧಪಟ್ಟಂತೆ ಹೇಗೆ ತಮ್ಮನ್ನು ತಾವು ತೊಡಗಿಸಿಕೊಳ್ಳಬಹುದು ಎಂಬುದರ ಬಗ್ಗೆ ಚರ್ಚೆಯಿದೆ. 'ದೇವತೆಗಳು ಮತ್ತು ದೇವತಾ

ಮನುಷ್ಯರು' - ಒಂದು ಸ್ವಾರಸ್ಯಮಯ ಚರ್ಚೆ. ಸಮಾಜದ ಶೋಷಣೆಯ ರಚನೆಯೊಡನೆ ಇವರುಗಳ ಹೊಕ್ಕುಳ ಸಂಬಂಧವನ್ನು ಈ ಚರ್ಚೆ ಬಿಚ್ಚಿಡುತ್ತದೆ. ವ್ಯವಸ್ಥೆ ಹೇಗೆ ಬಾಬಾಗಳನ್ನು ಅವರ ಅನುಯಾಯಿ ಬಕರಾಗಳನ್ನು ನಿರಂತರವಾಗಿ ಸೃಷ್ಟಿಸಿಕೊಳ್ಳುತ್ತಾ ಹೋಗುತ್ತದೆ ಎಂಬ ಸುಳಿವು ಇಲ್ಲಿದೆ. ಅದರಲ್ಲಿ ಭಾಗವಹಿಸುವ ವಿಜ್ಞಾನಿಗಳು ಮತ್ತು 'ಜ್ಞಾನಿ'ಗಳ ಅಜ್ಞಾನದ ಮತ್ತು ಕುತಂತ್ರದ ಬಗೆಗಿನ ಟೀಕೆ ಇಲ್ಲಿ ಪ್ರಸ್ತುತವಾಗಿದೆ. ಗೋಕಾಕರು, ಭಗವಂತಂ, ಗೋಯೆಂಕಾ, ಬಿರ್ಲಾ ಇವರುಗಳ ಬಾಬಾ ಸಮರ್ಥನೆಯನ್ನು ಬಯಲು ಮಾಡಲಾಗಿದೆ. ಜ್ಞಾನ ಬೆಳೆದಂತೆಲ್ಲ ಮನುಷ್ಯನ ಸ್ವಾತಂತ್ರ್ಯದ ಪರಿಧಿ ವಿಸ್ತೃತವಾಗುತ್ತಾ ಹೋಗುತ್ತದೆ. ಪ್ರತಿ ಯುಗದಲ್ಲಿ ಇದರ ಕೆಲಸ ಸಾಗುತ್ತಲೇ ಇರಬೇಕು. ಅದೊಂದು ಸಾಹಸ ಕ್ರೀಡೆ. ಯಾವುದೋ ಒಂದು ಸಮಸ್ಯೆಗೆ ಇಂದು ಉತ್ತರ ದೊರೆಯಲಿಲ್ಲವೆಂದ ಮಾತ್ರಕ್ಕೆ ಅದಕ್ಕೆ ಎಂದೂ ಉತ್ತರ ದೊರಕದೆಂದೋ ಅಥವಾ ಅವೈಚಾರಿಕವಾಗಿ ನಂಬಬೇಕೆಂದು ಹೇಳುವ ಮಾರ್ಗವನ್ನೋ ಹಿಡಿಯಬೇಕಾಗಿಲ್ಲ. ಕಳೆದ ಇತಿಹಾಸ ಬರಲಿರುವ ಇತಿಹಾಸದ ರೂಪುರೇಖೆಯನ್ನು ನಿರ್ಧರಿಸುತ್ತದೆ. ಮುಂದುವರೆದ ಆಧ್ಯಾತ್ಮಿಕತೆಯ ಮುಸುಕಿನಲ್ಲಿ ಅಮಾಯಕ ಜನರನ್ನು ನಂಬಿಸಿ ಅವರನ್ನು ಸುಲಿಯುವ ಈ ದೇವಮಾನವರ ತಂತ್ರಕ್ಕೆ ಕೊನೆಗಾಲ ಬಂದಿದೆ ಎಂದು, ಮಾನವನ ಭವಿಷ್ಯ ಉಜ್ವಲವಾದುದು ಎಂದು ಜಿ.ಆರ್. ವಿಶ್ವಾಸ ವ್ಯಕ್ತಪಡಿಸುತ್ತಾರೆ.

1981ರ ಪ್ರಥಮ ಬಂಡಾಯ ಸಾಹಿತ್ಯ ಸಮ್ಮೇಳನದ ಸಂದರ್ಭದ "ಕನ್ನಡ ಸಾಹಿತ್ಯದ ಸಮಕಾಲೀನ ಬೆಳವಣಿಗೆಗಳು" ಒಂದು ಸಮರ್ಥವಾದ ಲೇಖನ. ಕನ್ನಡೇತರ ಓದುಗರಿಗಾಗಿ ಇಂಗ್ಲಿಷಿನಲ್ಲಿ ನೀಡಿರುವ ರೂಪಾಂತರ ಇದು. ಅಂದಿನ ಕನ್ನಡ ಸಾಹಿತ್ಯ ಕ್ಷೇತ್ರದ ಎಲ್ಲ ಮುಖ್ಯ ವಾಹಿನಿಗಳನ್ನು, ಮುಖ್ಯ ಲೇಖಕರ ದೃಷ್ಟಿಕೋನಗಳನ್ನು ಸೆರೆಹಿಡಿದಿರುವ ಈ ಲೇಖನ ಕನ್ನಡ ಭಾಷೆಯ ಬೆಳವಣಿಗೆಯನ್ನು ಸಮರ್ಥವಾಗಿ ದಾಖಲಿಸುತ್ತದೆ. ಧರ್ಮಸ್ಥಳದಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವ ಸಂದರ್ಭದಲ್ಲಿಯೇ ಜರುಗಿದ ಈ ಸಮ್ಮೇಳನದ ಹಿನ್ನೆಲೆಗೆ ಮಹತ್ವದ ವಿವರಣೆಯಿದೆ. 'ದಲಿತರ ಸಾಹಿತ್ಯವೆಂದ ಮಾತ್ರಕ್ಕೆ ಅದನ್ನು ದಲಿತರೇ ರಚಿಸಬೇಕೆಂದಿಲ್ಲ. ಹಾಗೆಂದರೆ ಅದು ಉಚ್ಚವರ್ಗದವನೊಬ್ಬನ ಸಾಮಾಜಿಕ ಪ್ರಜ್ಞೆ ಸೃಜನಶೀಲವಾಗಿ ಬದಲಾವಣೆಯೇ ಆಗದೆಂಬ ಅವೈಜ್ಞಾನಿಕತೆಗೆ ಎಡೆಮಾಡಿಕೊಡುತ್ತದೆ' ಎಂದು ಎಚ್ಚರ ನೀಡುತ್ತದೆ. ಇಲ್ಲಿ, ಕನ್ನಡ ಸಾಹಿತ್ಯ ಹೊಸ ಜೀವಂತಿಕೆಯಿಂದ ಕಸಿಗೊಂಡು ಪುಟಿಯುತ್ತಿದೆ. ಸಾಮಾಜಿಕ ಹೋರಾಟಗಳು ಸಾಹಿತ್ಯ ಲೋಕದಲ್ಲೂ - ಅದೇ ಕಾಲದಲ್ಲಿ - ಪ್ರಭಾವ ಬೀರುತ್ತಾ ಹೋಗುವುದು ಅನಿವಾರ್ಯ.

'ದಿ ಲಿವಿಂಗ್ ಮಾರ್ಕ್ಸ್' ಲೇಖನಕ್ಕೆ ಪೂರಕವಾಗಿ 'ಇತಿಹಾಸದ ಅಭ್ಯಾಸ - ಒಂದು ಟಿಪ್ಪಣಿ' ಲೇಖನ ಹೊಂದಿಕೊಳ್ಳುತ್ತದೆ. ಇಂದಿನಂತೆ ಅಂದೂ ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನಲ್ ರೀಸರ್ಚ್ ಅಂಡ್ ಟ್ರೈನಿಂಗ್ ಚರಿತ್ರೆಯನ್ನು ವಿಕೃತಗೊಳಿಸಲು ಪ್ರಯತ್ನಿಸಿದ ಸಂದರ್ಭದಲ್ಲಿ ಬರೆದ ಈ ಪುಟ್ಟಲೇಖನ ಚರಿತ್ರೆಯನ್ನು ವೈಜ್ಞಾನಿಕವಾಗಿ ಅಭ್ಯಸಿಸುವುದು ಅಗತ್ಯವೆಂಬುದನ್ನು ಮಂಡಿಸುತ್ತದೆ. ಮನುಷ್ಯ ತನ್ನನ್ನು ಸುತ್ತುವರಿದ ಸಮಾಜದ ಒಂದು ಅಂಗವ್ಯಕ್ತಿಯಾಗಿ

ಚರಿತ್ರೆಯನ್ನು ನಿರ್ಮಿಸುತ್ತಾನೆ. ಆದರೆ ಅವನಿಗೆ ತನ್ನಿಚ್ಛೆ ಬಂದಂತೆ ಅದನ್ನು ನಿರ್ಮಿಸಲು, ಇತಿಹಾಸದ ಶಕ್ತಿಗಳಿಗೆ ಚಾಲನೆ ನೀಡಲು ಸಮರ್ಥನಲ್ಲ. ಅಂದಂದಿನ ಉತ್ಪಾದನಾ ವ್ಯವಸ್ಥೆಯ ಸಂಬಂಧಗಳು, ಅವಕ್ಕೆ ಹೊಂದಿಕೊಂಡ ಚಾಲಕಶಕ್ತಿಗಳು ಅವನಿಗೆ ಎಷ್ಟು ಸ್ವಾತಂತ್ರ್ಯ ನೀಡುತ್ತವೋ ಆ ಪರಿಧಿಯಲ್ಲಿ ಮಾತ್ರ ಅವನು ಸ್ವತಂತ್ರ. ಆದ್ದರಿಂದ ಇತಿಹಾಸ ಕೇವಲ ಚಕ್ರಾಧಿಪತಿಗಳಿಗೇ ಅಥವಾ ಅವರ ಯುದ್ಧಗಳಿಗೆ ಮೀಸಲಲ್ಲ. ಅದು ಕಾಲದ ನಡೆಯಲ್ಲಿ ಬದಲಾಗುತ್ತಾ ಮುಂದುವರಿಯುವ ಉತ್ಪಾದನಾಕ್ರಮ, ಅವುಗಳ ಆಧಾರಿತ ಸಂಬಂಧಗಳ ಚರಿತ್ರೆಯನ್ನು ಅಭ್ಯಾಸ ಮಾಡುವುದೇ ವೈಜ್ಞಾನಿಕ ಮಾರ್ಗ ಎಂದು ಜಿ.ಆರ್. ಪ್ರತಿಪಾದಿಸುತ್ತಾರೆ.

'ದಿ ಲಿವಿಂಗ್ ಮಾರ್ಕ್ಸ್' ಲೇಖನ ಮಾರ್ಕ್ಸ್ 'ಚಿಂತಿಸುವುದನ್ನು ನಿಲ್ಲಿಸಿದ' ನೂರನೆಯ ವರ್ಷದ ನೆನಪಿಗೆ ರಚಿತವಾದ ಲೇಖನವೂ ಹೌದು. ಇದರಲ್ಲಿ ಅವನ ತತ್ವ ಹೇಗೆ ವೈಜ್ಞಾನಿಕವೆಂಬ ಪ್ರತಿಪಾದನೆ ಇದೆ. ಮಾರ್ಕ್ಸ್ ಪ್ರಮುಖವಾಗಿ ತನ್ನ ಸಿದ್ಧಾಂತ ವಿಮರ್ಶೆಗೆ ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟದ ಪ್ರಸಂಗವನ್ನು ಬಳಸಿಕೊಂಡರೆಂಬುದನ್ನು ಹೇಳಿ ಆ ಕಾರಣದಿಂದ ಮಾರ್ಕ್ಸ್‌ರ ದೃಷ್ಟಿಯ ಮೂಲಕ ನಮ್ಮ ಸದ್ಯದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು, ಎನ್ನುತ್ತಾರೆ ಲೆನಿನ್. ಮಾರ್ಕ್ಸ್‌ವಾದ ಜಯಶೀಲವಾಗುತ್ತದೆ. ಏಕೆಂದರೆ ಅದು ಸತ್ಯವಾದುದು ಎಂಬ ಮಾತನ್ನು ಉದಾಹರಿಸುತ್ತಾ, ಈ ಮಾರ್ಗದಿಂದ ಮಾನವ ಸಮಾಜ ವಿಮೋಚನೆ ಹೊಂದುವುದು ಖಂಡಿತ ಎಂಬ ದೃಢವಿಶ್ವಾಸವನ್ನು ಜಿ.ಆರ್. ಒತ್ತಿ ಹೇಳುತ್ತಾರೆ. ಎರಡು ದಶಕಗಳಷ್ಟು ಹಳೆಯ ಈ ಪ್ರಕಟಣೆ ಇಂದಿಗೂ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿರುವುದಕ್ಕೆ ಕಾರಣ ಎರಡು. ಇದರಲ್ಲಿ ಚರ್ಚಿತವಾಗಿರುವ ಸಾಮಾಜಿಕ, ರಾಜಕೀಯ ವಿಷಯಗಳು ಇನ್ನೂ ಪ್ರಸ್ತುತವೆನಿಸಿ, ತಮ್ಮ ಗತಿ ತಾರ್ಕಿಕತೆಯನ್ವಯದ ಕ್ರಿಯಾಶೀಲತೆಯನ್ನು ಕಳೆದುಕೊಂಡಿಲ್ಲ. ಮತ್ತೊಂದು ಕಾರಣವೆಂದರೆ, ಅದು ಒಟ್ಟಿಗೆ ಬಿಂಬಿಸುವ ಗುಣ ಅದರ ಸಾರ್ವಕಾಲಿಕ ದಾರ್ಶನಿಕತೆಯಿಂದಾಗಿ. ಅಭಿವೃದ್ಧಿಶೀಲ ಸಾಮಾಜಿಕ ಬೆಳವಣಿಗೆಯ ಸಿದ್ಧಾಂತಗಳ ಅಳಿವು-ಉಳಿವುಗಳನ್ನು ಹಲವಾರು ಪೀಳಿಗೆಗಳ ಕಾಲವ್ಯಾಪ್ತಿಯಲ್ಲಿ ಅಳೆಯಬೇಕೇ ವಿನಃ ಕೇವಲ ದಶಕಗಳ ಅನುಭವದಲ್ಲಿ ಅಲ್ಲ. ಹೀಗಾಗಿ 'ದಿ ಲಿವಿಂಗ್ ಮಾರ್ಕ್ಸ್' ಹೆಚ್ಚು ಪ್ರಸ್ತುತವಾಗುತ್ತದೆ.

❑

ಚೀನಾ ತತ್ವಶಾಸ್ತ್ರದ ಪರಿಚಯ ಕೈಪಿಡಿ

ವಸಂತರಾಜ್

ತತ್ವಶಾಸ್ತ್ರ ಸಾಮಾನ್ಯರಿಗೆ ನಿಲುಕದ್ದು ಎಂಬುದು ಸರ್ವೇಸಾಮಾನ್ಯ ಅಭಿಪ್ರಾಯ. ಆದರೆ ಎಂಟು ಪುಸ್ತಿಕೆಗಳ ಮಾಲೆ ಮೂಲಕ ಜಗತ್ತಿನ ತತ್ವಶಾಸ್ತ್ರದ ಪರಿಚಯ ಮಾಡುವ ಸಾಹಸ ಮಾಡಿದವರು ನವಕರ್ನಾಟಕ ಪ್ರಕಾಶನದವರು. ಈ ಮಾಲೆಯಲ್ಲಿ ಎರಡನೇ ಪುಸ್ತಕದಲ್ಲಿ ಚೀನಾದ ತತ್ವಶಾಸ್ತ್ರದ ಪರಿಚಯ ಮಾಡಿದವರು ಜಿ.ಆರ್. ಅದು ಈಗಲೂ (ಪುಸ್ತಕ ಪ್ರಕಟವಾಗಿ ಹತ್ತು ವರ್ಷಗಳ ನಂತರವೂ) ಎಲ್ಲರಿಗೂ ನಿಲುಕುವ ರೀತಿಯಲ್ಲಿ ಚೀನಾದ ತತ್ವಶಾಸ್ತ್ರವನ್ನು ಪರಿಚಯಿಸುವ ಅದ್ವಿತೀಯ ಪುಸ್ತಕವಾಗಿ ಉಳಿದಿದೆ.

ಚೀನಾದ ಎಲ್ಲವನ್ನೂ ನಾವು ಪಾಶ್ಚಿಮಾತ್ಯರ ಕಣ್ಣಿಂದಲೇ ನೋಡುತ್ತೇವೆ. ಚೀನಾದ ತತ್ವಶಾಸ್ತ್ರಕ್ಕೂ ಇದು ಅನ್ವಯಿಸುತ್ತದೆ. ಕನ್‌ಫ್ಯೂಶಿಯಸ್, ತಾವೋ ಮತ್ತು ಝೆನ್ ಬೌದ್ಧವಾದ - ಇವುಗಳಲ್ಲಿ ಅವರಿಗೆ ಮಹತ್ವದ್ದು ಎನಿಸುವ ಅಂಶ, ಅವರದ್ದೇ ವ್ಯಾಖ್ಯಾನದ ಜತೆ. ಚೀನಾದ ತತ್ತ್ವಶಾಸ್ತ್ರದ ಹಲವು 'ಪಂಥ'ಗಳ ಬಗ್ಗೆ, ಅದು ಹುಟ್ಟಿ ವಿಕಾಸವಾದ ಸಾಮಾಜಿಕ-ಚಾರಿತ್ರಿಕ ಸನ್ನಿವೇಶ, ಅದರ ಮುಖ್ಯ ಕೊಡುಗೆಗಳು, ಮಹತ್ವ, ಸಾಮಾಜಿಕ ವಿಕಾಸದ ಮೇಲೆ ಅವು ಬೀರಿದ ಪರಿಣಾಮ - ಇವೆಲ್ಲದರ ಸ್ಥೂಲವಾದ ಪರಿಚಯ ಮಾಡುವ ಪುಸ್ತಕ ಇರಲಿಲ್ಲ. ಜಿ.ಆರ್.ರವರ ಪುಸ್ತಕ ಈ ಕೊರತೆ ತುಂಬಿಸಿತ್ತು. ಎಲ್ಲರಿಗೂ ನಿಲುಕುವ ರೀತಿಯಲ್ಲಿ ಚೀನಾರ ತತ್ತ್ವಶಾಸ್ತ್ರ ಪರಿಚಯಿಸುವ ಕೃತಿ. ಎಲ್ಲಿಯೂ ಸಮಗ್ರತೆಗೆ, ವಿಷಯದ ಸಂಕೀರ್ಣತೆಗೆ ಭಂಗ

ಬಂದಿಲ್ಲ. ಇದಲ್ಲದೆ ಚೀನಾದ ತತ್ವಶಾಸ್ತ್ರದ ಬೆಳವಣಿಗೆಯ ಬಗ್ಗೆ ವಿಶಿಷ್ಟ ಒಳನೋಟಗಳನ್ನು ಕೊಡುತ್ತದೆ.

ಚೀನಾ, ಭಾರತ ಮತ್ತು ಇತರ ಕೆಲವು ಪ್ರಾಚೀನ ನಾಗರಿಕತೆಗಳಂತೆ ದೀರ್ಘವಾದ ತತ್ವಶಾಸ್ತ್ರದ ಪರಂಪರೆ ಇರುವ ದೇಶ. ಚೀನಾದಲ್ಲಿ ತತ್ವಶಾಸ್ತ್ರದ ನೂರಾರು ತಂಡಗಳು ಬಂದು ಹೋಗಿವೆ. ಅವೆಲ್ಲವನ್ನೂ ಸ್ಥೂಲವಾಗಿ ಪರಿಚಯಿಸುವುದು ಸಹ ಅಸಂಭವ. ಚೀನಾದ ನೂರಾರು ಪಂಥಗಳನ್ನು ಮುಖ್ಯವಾಗಿ ಆರು ಪ್ರಮುಖ ಪಂಥಗಳನ್ನಾಗಿ ವರ್ಗೀಕರಿಸಲಾಗಿದೆ. ಕ್ರಿ.ಪೂ. ಅವಧಿಯ ಆ ಆರು ಪ್ರಮುಖ ಪಂಥಗಳೆಂದರೆ - ಕನ್‌ಫ್ಯೂಶಿಯಸ್ ವಾದ, ತಾವೋ ವಾದ, ಕಾನೂನುವಾದ, ಮೋಶಿವಾದ, ನಾಮವಾದ, ಚುನ್ ಯಾಂಗ್ ವಾದ. ಈ ಆರು ಪ್ರಮುಖ ಪಂಥಗಳಲ್ಲದೆ ಇನ್ನೂ ಮೂರು ಪಂಥಗಳ ಬಗ್ಗೆ ಪುಸ್ತಕ ಸ್ಥೂಲವಾಗಿ ಪರಿಚಯಿಸುತ್ತದೆ. ಅವೆಂದರೆ ಬೌದ್ಧವಾದ, ನವ-ಕನ್‌ಫ್ಯೂಶಿಯಸ್‌ವಾದ, ಭೌತಿಕವಾದ ಸಂದೇಶವಾದಿ ವಿಚಾರ ವಾದ. ಜಿ.ಆರ್. ಈ ಒಂಬತ್ತು ಪಂಥಗಳ ಬಗ್ಗೆ ಪ್ರತ್ಯೇಕವಾಗಿ ಪರಿಚಯ ಮಾಡಿಕೊಡುವ ಮೊದಲು, ಮೊದಲ ಅಧ್ಯಾಯದಲ್ಲಿ ಚೀನಾದ ತರ್ಕಶಾಸ್ತ್ರಗಳ ಬಗ್ಗೆ ಒಟ್ಟಾರೆಯಾಗಿ ಕೆಲವು ಒಳನೋಟಗಳನ್ನು ಕೊಡುತ್ತಾರೆ.

ಚೀನಾದ ಪ್ರಮುಖ ರಾಜಮನೆತನಗಳ ಆಳ್ವಿಕೆಯ ಅವಧಿ, ಆಗಿನ ಸಾಮಾಜಿಕ-ಆರ್ಥಿಕ ವ್ಯವಸ್ಥೆ ಹಾಗೂ ವಿವಿಧ ಪಂಥಗಳ ಹುಟ್ಟು-ವಿಕಾಸಗಳ ಬಗ್ಗೆ ಮೊದಲ ಅಧ್ಯಾಯ ಹೇಳುತ್ತದೆ. ಚೀನಾದ ತತ್ವಶಾಸ್ತ್ರಗಳ ಪಂಥಗಳಲ್ಲಿರುವ ಅಗಾಧ ವೈವಿಧ್ಯದ ಮಧ್ಯೆ ಸಾಮಾನ್ಯ ಅಂಶಗಳನ್ನು ಹುಡುಕುವುದು ಕಷ್ಟ. ಚೀನಾದ ತತ್ತ್ವಶಾಸ್ತ್ರ ಪರಲೋಕಕ್ಕಿಂತ ಹೆಚ್ಚಾಗಿ, ಇಹಲೋಕದ ಬಗ್ಗೆ ಗಮನ ಕೇಂದ್ರೀಕರಿಸುತ್ತದೆ. ಭಾರತ ಮತ್ತು ಇತರ ಕೆಲವು ದೇಶಗಳಲ್ಲಿದ್ದಂತೆ ತತ್ವಶಾಸ್ತ್ರ ಪಂಥಗಳು ಮತ್ತು ಮತ/ಧರ್ಮಗಳ ನಡುವೆ ಹೆಚ್ಚಿನ ತಳುಕು ಇಲ್ಲ. ಆಧ್ಯಾತ್ಮಿಕತೆಗಿಂತ ನೈತಿಕತೆ ಚೀನೀ ತತ್ತ್ವಶಾಸ್ತ್ರದ ಪಂಥಗಳ ಮುಖ್ಯ ಕಾಳಜಿಯಂತೆ ಕಾಣುತ್ತದೆ. ಚೀನಿ ಸಂಸ್ಕೃತಿಯ 'ಆಧ್ಯಾತ್ಮಿಕತೆ'ಯ ಆಧಾರ ಕನ್‌ಫ್ಯೂಶಿಯಸ್ ಹೇಳುವ ನೈತಿಕತೆ. ಚೀನಾದ ಸಂದರ್ಭದಲ್ಲಿ ಆದರ್ಶವಾದ ಮತ್ತು ಭೌತಿಕವಾದದ ಪಂಥಗಳಾಗಿ ತತ್ವಶಾಸ್ತ್ರದ ಪಂಥಗಳನ್ನು ವರ್ಗೀಕರಿಸುವುದು ಕಷ್ಟ. ಇದರರ್ಥ ಭೌತಿಕವಾದಿ ಪರಂಪರೆ ಚೀನಾದಲ್ಲಿ ಇರಲಿಲ್ಲವೆಂದಲ್ಲ. ಕ್ರಿ.ಪೂ. 7ನೇ ಶತಮಾನದಷ್ಟು ಹಳೆಯ ಸಂದೇಶವಾದ ವಿಚಾರವಾದಿ ಪಂಥಗಳು, ಕ್ರಿ.ಶ. 1ನೇ ಶತಮಾನದ ಹೊತ್ತಿಗೆ ಭೌತಿಕವಾದದ ಆರಂಭವಾಗಿತ್ತು. ಇವು ಜಿ.ಆರ್. ಚೀನಾದ ತತ್ವಶಾಸ್ತ್ರೀಯ ಪರಂಪರೆಯಲ್ಲಿ ಗುರುತಿಸುವ ಕೆಲವು ಸಾಮಾನ್ಯ ಅಂಶಗಳು.

ಚೀನಾದ ಸಮಾಜ ಕೃಷಿ ಪ್ರಧಾನವಾಗಿತ್ತು. ಸಾಮೂಹಿಕ ಒಡೆತನ-ವರ್ಗಗಳಲ್ಲದೆ ಆದಿ ಸಮಾಜದ ಹಂತ ಹಾದು, ಪಾಳೆಯಗಾರಿ ಪದ್ಧತಿ ಚೀನಾದಲ್ಲಿ ಬೇರೂರಿತು. ಪಾಳೆಯಗಾರಿ ಪದ್ಧತಿಯಲ್ಲೂ ಎರಡು ಸ್ಪಷ್ಟ ಹಂತಗಳನ್ನು ಗುರುತಿಸಲಾಗುತ್ತದೆ. ಒಂದು ಆದಿ ಪಾಳೆಯಗಾರಿ ಪದ್ಧತಿ. ಅಲ್ಲಿ ಭೂಮಾಲೀಕ - ರೈತರ ವರ್ಗವಿಭಜನೆಯಾಗಿದೆ ಅಷ್ಟೇ. ಎರಡನೇ ಹಂತದಲ್ಲಿ ಪಾಳೆಯಗಾರಿ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಕೇಂದ್ರೀಕೃತವಾದ ಅಧಿಕಾರಶಾಹಿ ವರ್ಗವೊಂದು

ಸಾಮ್ರಾಜ್ಯ ಅಥವಾ ರಾಜಮನೆತನದ ಪರವಾಗಿ ಆಡಳಿತ ನಡೆಸುತ್ತದೆ. 'ಅಧಿಕಾರಶಾಹಿ ಪಾಳೆಯಗಾರಿ ವ್ಯವಸ್ಥೆ' ಎಂದು ಕರೆಯಲಾಗುವ ಈ ಹಂತದಲ್ಲಿ ಭೂಮಾಲಿಕನಿಗೂ ಈ ಅಧಿಕಾರಶಾಹಿಯು ಆತನ ಅಧಿಪತ್ಯ ನಡೆಸಲು ಸಹಾಯ ಮಾಡುತ್ತದೆ. ಈ ಹಂತದಲ್ಲಿ ಪರಿಚಿತರ, ಕುಶಲಕರ್ಮಿಗಳ, ವ್ಯಾಪಾರಿಗಳ ವಿಭಾಗಗಳೂ ಬೆಳೆಯುತ್ತವೆ. ಪಂಡಿತರು ಹೆಚ್ಚಾಗಿ ಸ್ವತಃ ಭೂಮಾಲೀಕರು ಸಹ ಅಥವಾ ಅವರ ನಿಕಟ ಸಹವರ್ತಿಗಳು. ನಿರ್ದಿಷ್ಟ ಚೀನಿ ಗುಣಗಳಿದ್ದ ಈ 'ಪಾಳೆಯಗಾರಿ ಅಧಿಕಾರಶಾಹಿ' ಸುಮಾರು ಎರಡು ಸಾವಿರ ವರ್ಷಗಳ ಕಾಲ ಚಾಲ್ತಿಯಲ್ಲಿತ್ತು. ಈ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಪೂರಕವಾಗುವ, ಅದರ ಜೊತೆ ಹೊಂದಾಣಿಕೆ ಮಾಡಿಕೊಳ್ಳುವ ಕಣ್ಣೋಟ ಒಂದು ಧಾರೆಯ ತತ್ವಶಾಸ್ತ್ರ ಪಂಥಗಳನ್ನು ಹುಟ್ಟುಹಾಕಿತು. ಈ ವ್ಯವಸ್ಥೆಯನ್ನು ವಿರೋಧಿಸಿದ, ಅದಕ್ಕೆ ಪ್ರತಿರೋಧ ಒಡ್ಡುವ ವರ್ಗಗಳಿಲ್ಲದ ಆದಿ ಸಮಾಜ ಅಥವಾ ಅಧಿಕಾರಶಾಹಿ ಇಲ್ಲದಿದ್ದ ಆದಿ ಪಾಳೆಯಗಾರಿ ವ್ಯವಸ್ಥೆಗೆ ಮರಳುವ ಇನ್ನೊಂದು ಧಾರೆ. ಈ ಎರಡೂ ಧಾರೆಗಳು ಚೀನಾದ ತತ್ವಶಾಸ್ತ್ರದ ವಿವಿಧ ಪಂಥಗಳ ವಿಕಾಸದ ಒಳಸುಳಿಯಾಗಿ ಕಾಣಿಸಿಕೊಂಡಿವೆ.

ಕನ್‌ಫ್ಯೂಶಿಯಸ್‌ವಾದ ಮೊದಲ ಧಾರೆಯ ಪ್ರಮುಖ ಪಂಥ. ತಾವೋವಾದ ಎರಡನೇ ಧಾರೆಯ ಪ್ರಮುಖ ಪಂಥ. ಚೀನೀ ತತ್ವಶಾಸ್ತ್ರದ ಹೆಚ್ಚಿನ ಪಂಥಗಳ ಮೇಲೆ ಇವೆರಡೂ ಪಂಥಗಳು ಒಂದಲ್ಲ ಒಂದು ರೀತಿಯಲ್ಲಿ ಗಾಢ ಪರಿಣಾಮ ಬೀರಿವೆ. ಇವೆರಡೂ ಎರಡು ಸಾವಿರದವರೆಗೂ ಹೆಚ್ಚಿನ ಅವಧಿಯಲ್ಲಿ ಹಲವು ರೂಪ ತಾಳಿವೆ. ಒಂದರ ಮೇಲೊಂದು ಪರಿಣಾಮ ಬೀರಿವೆ. ಕ್ರಿ.ಶ. 1ನೇ ಶತಮಾನದಲ್ಲಿ ಚೀನಾ ಪ್ರವೇಶಿಸಿದ ಬೌದ್ಧವಾದ ಸಹ ಇವೆರಡೂ ಪಂಥಗಳ ಮೇಲೆ ಪ್ರಮುಖ ಪ್ರಭಾವ ಬೀರಿತು. ಚೀನಾದಲ್ಲಿ ಆಮೇಲೆ ಬೆಳೆದ ಬೌದ್ಧವಾದದ ವಿಶಿಷ್ಟ ಪಂಥ (ಚಾನ್‌ವಾದ - ಜಪಾನಿನ ಝೆನ್ ಬೌದ್ಧವಾದದ ಹೆಸರಲ್ಲಿ ಇದು ಜಗತ್ತಿನಲ್ಲಿ ಪ್ರಸಿದ್ಧವಾಗಿದೆ)ದ ಮೇಲೆ ಇವೆರಡೂ ಪಂಥಗಳು ಪ್ರಭಾವ ಬೀರಿವೆ. ಚೀನಾದ ಝೆನ್ ಬೌದ್ಧವಾದ ಇತರ ಪಂಥಗಳಿಂದ ಕೆಲವು ವಿಷಯಗಳಲ್ಲಿ ಬಹು ಭಿನ್ನವಾದ ಪಂಥ.

ಚೀನಾದ ಹಲವು ತತ್ವಶಾಸ್ತ್ರದ ಪಂಥಗಳಲ್ಲಿ ಐದು ಸಾವಿರ ವರ್ಷದ ಹಿಂದೆ ಆಳಿದರು ಎನ್ನಲಾದ (ಇದು ವಾಸ್ತವವಲ್ಲ ಪುರಾಣ ಮತ್ತು ಹಲವು ಇತಿಹಾಸಕಾರರ ಅಭಿಪ್ರಾಯ) 'ಸಂತ ಸಾಮ್ರಾಟ'ರ ಪರಿಕಲ್ಪನೆ ಬರುತ್ತದೆ. ಪ್ರತಿಯೊಬ್ಬ ಮನುಷ್ಯ 'ಒಳಗಿಂದ ಸಂತ, ಹೊರಗಿಂದ ಸಾಮ್ರಾಟನಂತೆ' ಆಳುವ ಸಾಮರ್ಥ್ಯ ಗಳಿಸುವುದು ಹಲವು ಪಂಥಗಳ ಉದ್ದೇಶ ಎನ್ನಲಾಗಿದೆ.

ಕನ್‌ಫ್ಯೂಶಿಯಸ್ ಪಂಥ

ಕ್ರಿ.ಪೂ. 6ನೇ ಶತಮಾನದಲ್ಲಿ ರಾಜಮನೆತನದಲ್ಲಿ ಹುಟ್ಟಿದ ಖುಂಗ್ ಫು ತ್ಸು ಮುಂದೆ 'ಕನ್‌ಫ್ಯೂಶಿಯಸ್' ಎಂದು ಹೆಸರಾದ ಪ್ರಸಿದ್ಧ ತತ್ವಶಾಸ್ತ್ರಜ್ಞ. ಆದರೆ ಆತನೇ ತನ್ನನ್ನು ತತ್ವಶಾಸ್ತ್ರಜ್ಞ ಅಂದುಕೊಂಡಿರಲಿಲ್ಲ. ತಾನು ಬರಿಯ ಶಿಕ್ಷಕ. ತನ್ನ ಶಿಷ್ಯರನ್ನು 'ಸುಸಂಸ್ಕೃತ'ರನ್ನಾಗಿ ಮಾಡುವುದಷ್ಟೇ ತನ್ನ ಉದ್ದೇಶ ಎಂದು ಹೇಳಿಕೊಳ್ಳುತ್ತಿದ್ದ. ಸಾಮಾಜಿಕ ನೈತಿಕತೆಯ ಸೂತ್ರಗಳನ್ನು ರಚಿಸುವುದು ಕನ್‌ಫ್ಯೂಶಿಯಸ್ ಪಂಥದ ಮುಖ್ಯ ಒತ್ತು ಆಗಿತ್ತು. ಸಮಾಜದೊಳಗೆ

ಸೌಹಾರ್ದತೆಯಿಂದ ಎಲ್ಲರೂ ಬಾಳಿ ಅದರಲ್ಲಿ ಸುಖ ಕಾಣುವುದು ಈ ನೈತಿಕತೆಯ ಮುಖ್ಯ ಅಂಶ. ಕನ್‌ಫ್ಯೂಶಿಯಸ್‌ನ ಕಾಲದಲ್ಲೂ ಪ್ರಚಲಿತವಿದ್ದ ಪಾಳೆಯಗಾರಿ ವ್ಯವಸ್ಥೆಯನ್ನು ಪ್ರಶ್ನಿಸಲಿಲ್ಲ. ಮಾತ್ರವಲ್ಲ, ಆ ವ್ಯವಸ್ಥೆಯನ್ನು ಎತ್ತಿಹಿಡಿಯುವ ಅಧಿಕಾರಶಾಹಿಗೆ ತರಬೇತಿ ಕೊಡುವುದು ಅವರನ್ನು ಸುಸಂಸ್ಕೃತರನ್ನಾಗಿ ಮಾಡುವುದು ಕನ್‌ಫ್ಯೂಶಿಯಸ್ ಪಂಥದ ಉದ್ದೇಶವಾಗಿತ್ತು. ಮನುಷ್ಯ, ಸಮಾಜ, ಪ್ರಕೃತಿ ಬಗ್ಗೆ ಮತ್ತು ಅವುಗಳ ನಡುವಣ ಸಂಬಂಧದ ಬಗ್ಗೆ ಅಥವಾ ಯಾವುದೇ ರೀತಿಯ ಜ್ಞಾನದ ಬಗ್ಗೆ ಈ ಪಂಥ ತಲೆ ಕೆಡಿಸಿಕೊಳ್ಳಲಿಲ್ಲ. 'ಪರಲೋಕ'ದ ಬಗೆಗಿನ ಆಧ್ಯಾತ್ಮಿಕ ದೃಷ್ಟಿಕೋನವನ್ನು ಈ ಪಂಥ ಹೊಂದಿರಲಿಲ್ಲ. ಈ ಪಂಥ ಬೇರೆ ಬೇರೆ ರೂಪದಲ್ಲಿ ಎರಡು ಸಾವಿರ ವರ್ಷಗಳ ಕಾಲ ಚೀನಿ ಸಮಾಜದ 'ಸುಶಿಕ್ಷಿತ'ರನ್ನು ಆವರಿಸಿತ್ತು.

ಕನ್‌ಫ್ಯೂಶಿಯಸ್ ಪಂಥದಲ್ಲಿ ಎರಡು ಪ್ರಮುಖ ಕವಲುಗಳಿದ್ದವು. ಆದರ್ಶವಾದ ಮತ್ತು ನೈಜವಾದ. ಮೆನ್ಸಿಯಸ್ ಆದರ್ಶವಾದದ ಪ್ರತಿಪಾದಕ. ನೈಜವಾದದ ಪ್ರತಿಪಾದಕ ಝುನ್ ತ್ಸು. ಈ ಎರಡು ಕವಲುಗಳಲ್ಲಿ ಭಿನ್ನಾಭಿಪ್ರಾಯವಿದ್ದದ್ದು ಮನುಷ್ಯ ಮೂಲತಃ ಒಳ್ಳೆಯ ಪ್ರವೃತ್ತಿಯವನೇ ಅಥವಾ ಅಲ್ಲವೇ ಎಂದು. ಮೆನ್ಸಿಯಸ್ ಪಂಥದವರು ಮನುಷ್ಯ ಮೂಲತಃ ಒಳ್ಳೆಯ ಪ್ರವೃತ್ತಿಯವನು ಎಂದರೆ, ನೈಜವಾದಿಗಳು ಮನುಷ್ಯ ಮೂಲತಃ ನೈತಿಕವಾಗಿ ತಟಸ್ಥ ಸ್ವಭಾವದವನು, ಉತ್ತಮ ತರಬೇತಿಯಿಂದ ಮಾತ್ರ ಉತ್ತಮನಾಗಬಲ್ಲ, ಸುಸಂಸ್ಕೃತನಾಗಬಲ್ಲ ಎಂದವು. ಎರಡೂ ಕವಲುಗಳು ಪಾಳೆಯಗಾರಿ ವ್ಯವಸ್ಥೆಯಲ್ಲಿ ಅಂತರ್ಗತವಾಗಿದ್ದ ಕ್ರೌರ್ಯ ಸಂಘರ್ಷಕ್ಕೆ 'ನೈತಿಕ' ಮಟ್ಟದಲ್ಲಿ ಪರಿಹಾರ ಹುಡುಕಲು ಪ್ರಯತ್ನಿಸಿರುವ ವ್ಯವಸ್ಥೆಯನ್ನು ಪ್ರಶ್ನಿಸದೆ, ಬದಲಿಸಲು ಯತ್ನಿಸದೆ, ವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತಾ ಸಾಮಾಜಿಕ 'ಸೌಹಾರ್ದತೆ' ತರಲು ಬೇಕಾಗುವ 'ನೈತಿಕತೆ'ಯ ಸೂತ್ರಗಳನ್ನು ಹೆಣೆದವು. ಕನ್‌ಫ್ಯೂಶಿಯಸ್ ಪಂಥದ ಪರಿಚಯ ಮಾಡಲು ಪುಸ್ತಕದಲ್ಲಿ ಇಡೀ ಅಧ್ಯಾಯ ಮೀಸಲಾಗಿದೆ.

ತಾವೋವಾದ

ತಾವೋ ಪಂಥ ಕನ್‌ಫ್ಯೂಶಿಯಸ್ ಪಂಥಕ್ಕೆ ತದ್ವಿರುದ್ಧವಾದ ಪಂಥ. ತಾವೋ ಬಹುಶಃ ಅತ್ಯಂತ ಹೆಚ್ಚಿನ ಬೇರೆ ಬೇರೆ ಅರ್ಥ ಇರುವ ಶಬ್ದವಿರಬೇಕು. ತಾವೋ ಪಂಥವಲ್ಲದೆ ಇತರ ಪಂಥಗಳೂ ತಾವೋ ಪರಿಕಲ್ಪನೆಯನ್ನು ಬಳಸುತ್ತವೆ.

ತಾವೋವನ್ನು ಅರಸುವುದು, ಪಡೆಯುವುದು ಮನುಷ್ಯನ ಪರಮೋದ್ದೇಶ ಎಂದು ಪ್ರತಿ ಪಂಥ ಹೇಳುತ್ತದೆ. ಆದರೆ ತಾವೋ ಏನು ಎಂಬುದಕ್ಕೆ ಪ್ರತಿಯೊಂದು ಪಂಥವೂ ತನ್ನದೇ ಆದ ವ್ಯಾಖ್ಯೆ ಕೊಡುತ್ತದೆ. ಒಳ ತುಡಿತ, ಜಗತ್ತು ನಡೆಯುತ್ತಿರುವ ಹಾದಿ, ಸರಿಯಾದ ಹಾದಿ - ಇವೆಲ್ಲಾ ತಾವೋ ಚೀನಾದ ತತ್ತ್ವಶಾಸ್ತ್ರದಲ್ಲಿ ಹೊಂದುವ ಅರ್ಥಗಳು. ತಾವೋ ಪಂಥದ ಪ್ರಕಾರ ತಾವೋ ಎಂದರೆ ಪ್ರಕೃತಿಯ ಮೂಲಭೂತ ಸ್ವಭಾವ ಮತ್ತು ಮಾನವ ಸಮಾಜದಲ್ಲಿ ಸರಿಯಾದ ಜೀವನಕ್ರಮ. ಪ್ರಕೃತಿಯನ್ನು ಅಧ್ಯಯನ ಮಾಡುವುದು, ಅದರ ಆಂತರಿಕ ನಿಯಮಗಳ ಬಗ್ಗೆ ತಿಳಿದುಕೊಳ್ಳುವುದು, ಸಮಾಜಕ್ಕೂ ಪ್ರಕೃತಿಗೂ ಇರುವ ಸಂಬಂಧ ತಿಳಿದುಕೊಳ್ಳುವುದು, ಪ್ರಕೃತಿಗೆ

ವಿರುದ್ಧವಾಗಿ ಹೋಗದೆ ಸಮಾಜವನ್ನು ನಡೆಸುವುದು ಹೇಗೆ - ಇವು ತಾವೋ ಪಂಥದ ಕಾಳಜಿಗಳು ಎನ್ನಬಹುದು.

ಕನ್‌ಪ್ಯೂಶಿಯಸ್ ವಾದ ಚೀನಾದ ವಿಶಿಷ್ಟ ಅಧಿಕಾರಶಾಹಿ - ಪಾಳೆಯಗಾರಿ ವ್ಯವಸ್ಥೆಯನ್ನು ಎತ್ತಿ ಹಿಡಿದರೆ, ತಾವೋ ಪಂಥ ಆ ವ್ಯವಸ್ಥೆಯ ಟೀಕೆ ಮಾಡುತ್ತಾ ಬಂದಿದೆ. ತಾವೋ ವಾದ ಪಾಳೆಯಗಾರಿ ವ್ಯವಸ್ಥೆಯ ವಿರುದ್ಧ ಹೋರಾಟದ ಸೈದ್ಧಾಂತಿಕ ಮಗ್ಗುಲು ಎನ್ನಬಹುದು. ಮೊದಲ ತಾವೋವಾದಿಗಳು ಚೀನಾದಲ್ಲಿ ನಡೆದ ಪಾಳೆಯಗಾರಿ ವ್ಯವಸ್ಥೆಯ ವಿರುದ್ಧ ಪ್ರತಿರೋಧಕ ನಾಯಕರುಗಳೂ ಆಗಿದ್ದರು. ಆದರೆ ತಾವೋವಾದಿಗಳು ಪಾಳೆಯಗಾರಿ ವ್ಯವಸ್ಥೆಯ ಬದಲಿಯಾಗಿ ತೋರಿಸುವುದು ಆದಿ-ಸಮಾಜ ಅಥವಾ ಪಾಳೆಯಗಾರಿ ವ್ಯವಸ್ಥೆಯ ಮೊದಲ ಹಂತಕ್ಕೆ ಹಿಂದಿರುಗುವುದು, ಪ್ರಕೃತಿಗೆ ಮರಳುವುದು. ಈ ಬದಲಿ ಕೆಲಸ ಮಾಡದೆ ಹೋದಾಗ ತಾವೋವಾದಿ ಧಾರ್ಮಿಕ-ಆಧ್ಯಾತ್ಮಿಕ ಮಾವೋವಾದದತ್ತ ಸರಿಯಿತು ಎನ್ನಬಹುದು. ಚೀನಾದಲ್ಲಿ ಒಂದು ಜೋಕು ಇದೆಯಂತೆ. ಅದು ಕನ್‌ಪ್ಯೂಶಿಯಸ್‌ವಾದ ಪಂಡಿತ ವರ್ಗದ ಜನಕ್ಕೆ ಅಧಿಕಾರ ಇದ್ದಾಗಿನ ಸಿದ್ಧಾಂತ, ತಾವೋವಾದ ಅಧಿಕಾರ ಕಳೆದುಕೊಂಡಾಗಿನ ಸಿದ್ಧಾಂತ ಅಂತ! ವಿಜ್ಞಾನ, ಮ್ಯಾಜಿಕ್, ಧಾರ್ಮಿಕ ಅಂಶಗಳು ಎಲ್ಲದರ ಮಿಶ್ರಣವಾಗಿ ತಾವೋವಾದ ಕ್ರಮೇಣ ರೂಪು ಗೊಂಡಿತು. ಆ ಕಾಲದ ಎಲ್ಲ ನಾಗರಿಕತೆಗಳಲ್ಲಿ ಇದು ಸಾಮಾನ್ಯ ಅಂಶವಾಗಿತ್ತು.

ಈ ಗ್ರಂಥದಲ್ಲಿ ತಾವೋವಾದದ ಮೇಲಿನ ಅಧ್ಯಾಯ ತಾವೋವಾದಿ ಧರ್ಮದ ಪರಿಚಯದ ಜತೆ ಮುಕ್ತಾಯವಾಗುತ್ತದೆ. ಕ್ರಿ.ಶ. ಎರಡನೇ ಶತಮಾನದಲ್ಲಿ ತಾವೋವಾದಿ ಧರ್ಮ ರೂಪುಗೊಂಡಿತು. ಹನ್ ರಾಜಮನೆತನವನ್ನು ಸ್ಥಾಪಿಸುವುದರಲ್ಲಿ ಸಹಾಯ ಮಾಡಿದ ಚಾಂಗ್ ಲಿಯಾಂಗ್ ಇದಕ್ಕೆ ಅಡಿಪಾಯ ಹಾಕಿದ. ಬೌದ್ಧವಾದ ಚೀನಾ ಪ್ರವೇಶಿಸಿದಾಗ ಅದರ ಪರಿಣಾಮವೂ ಬೌದ್ಧಧರ್ಮದ ಮೇಲೆ ಆಯಿತು. ತಾವೋ ಧರ್ಮ ಸಾಕಷ್ಟು ಮೂಢನಂಬಿಕೆಗಳು, ನಿಗೂಢತೆಯನ್ನು ಹೊಂದಿದೆ. ತಾವೋ ಧರ್ಮದ ಅಂಶಗಳು, ತಾವೋ ಗ್ರಂಥದ ತತ್ವಶಾಸ್ತ್ರಕ್ಕೆ ತದ್ವಿರುದ್ಧವಾಗಿರುವಂಥವು. ತಾವೋ ಪಂಥದ ವೈವಿಧ್ಯ ಕುರಿತು ಹೇಳುತ್ತಾ ನಾಲ್ಕು ರೀತಿಯ ತಾವೋವಾದ ಇದೆ ಎನ್ನಲಾಗಿದೆ. ಬಂಡಾಯಗಾರ, ಋಷಿ, ಧಾಂಡಿಗ ಮತ್ತು ಪಲಾಯನಾವಾದಿ - ಇವು ತಾವೋವಾದದ ವಿವಿಧ ಹಂತ - ಮಗ್ಗುಲುಗಳು, ಎರಡರ ಬಗೆಗೂ ಹೇಳುತ್ತದೆ.

ಕಾನೂನುವಾದ ಕ್ರಿ.ಪೂ. 4-3ನೇ ಶತಮಾನದಲ್ಲಿ ಚೀನಾದ ತತ್ವಶಾಸ್ತ್ರದಲ್ಲಿ ಇದ್ದ ಪಂಥ. ಕನ್‌ಪ್ಯೂಶಿಯಸ್‌ವಾದ ಪಾಳೆಯಗಾರ ವ್ಯವಸ್ಥೆಯನ್ನು ಸೌಮ್ಯ ವಿಧಾನ (ಆದರ್ಶವಾದ, ರೀತಿ ರಿವಾಜು)ಗಳಿಂದ ಎತ್ತಿ ಹಿಡಿದರೆ, ಕಾನೂನುವಾದ ದಮನಕಾರಿ ವಿಧಾನ. ಕಟ್ಟುನಿಟ್ಟಿನ ಕಾನೂನುಗಳಿಂದ ಇವನ್ನು ಮಾಡಲು ಬಯಸಿದರು. ಇವರು ರಾಜ ಸರ್ವಾಧಿಕಾರಿಯಾಗಿರಬೇಕು. ಆತ ಮಾಡಿದ ಕಾನೂನುಗಳನ್ನು ಪ್ರಜೆಗಳು ಚಾಚು ತಪ್ಪದೆ ಪಾಲಿಸಬೇಕು. ಮನು ಸಂಹಿತೆ, ಕೌಟಿಲ್ಯನ ಕಾನೂನುಗಳು, ವಿಧಾನಗಳನ್ನು ನೆನಪಿಸುವ ಪಂಥ ಇದು. 'ಮಹಾನ್ ಸುವರ್ಣ ಕಾಲ'ಕ್ಕೆ ಮರಳುವ ಭ್ರಮೆಯ ವಿರುದ್ಧ ಟೀಕಿಸಿದ್ದಲ್ಲದೆ, ಚರಿತ್ರೆ ಬದಲಾವಣೆಯ ಪ್ರಕ್ರಿಯೆ - ಪರಿಕಲ್ಪನೆ ಪ್ರತಿಪಾದಿಸಿದರು. ಇದು ಬಿಟ್ಟರೆ ಕಾನೂನುವಾದಗಳ ಸಕಾರಾತ್ಮಕ ಕೊಡುಗೆ ಏನಿಲ್ಲ.

ಮನುಷ್ಯ ಮೂಲತಃ ದುಷ್ಟ. ಆತನನ್ನು ಕಟ್ಟುನಿಟ್ಟಿನ ಆಚಾರ, ಕಾನೂನುಗಳಿಂದ ಮಾತ್ರ ಸರಿಪಡಿಸಬಹುದು ಎಂಬುದು ಅವರ ವಾದ. ಒಂದು ರೀತಿಯಲ್ಲಿ ತಾವೋವಾದ ಒಂದು ಕೊನೆಯಾದರೆ, ಕಾನೂನುವಾದಿಗಳು ತದ್ವಿರುದ್ಧ, ಕೊನೆ.

ಮೋಹಿವಾದವು ಕನ್‌ಫ್ಯೂಶಿಯಸ್‌ವಾದಿ ಪಂಥಕ್ಕೆ ವಿರೋಧವಾಗಿದ್ದ ಪಂಥ. ಕ್ರಿ.ಪೂ. 5 ರಿಂದ 4ನೇ ಶತಮಾನಗಳಲ್ಲಿ ಪ್ರಚಲಿತವಾಗಿತ್ತು. 'ವಿಶ್ವಪ್ರೇಮ' ಪ್ರತಿಪಾದಿಸಿದ ಮತ್ತು ಯುದ್ಧಗಳನ್ನು ವಿರೋಧಿಸಿದ ಪಂಥ ಇದು. ಇತರ ಪಂಥಗಳಂತೆ ಮೋಹಿವಾದಿಗಳು ಪಂಡಿತರ ವರ್ಗದಿಂದ ಬರಲಿಲ್ಲ. ಇದು ಸಾಮಾನ್ಯ ಜನರ ತತ್ತ್ವಶಾಸ್ತ್ರೀಯ ಪಂಥವಾಗಿತ್ತು. ಆದರೆ ಬರಿಯ ತತ್ವಶಾಸ್ತ್ರೀಯ ಪಂಥವಾಗಿರಲಿಲ್ಲ. ಸುಸಂಘಟಿತ ಸಂಘಟನೆಯಾಗಿತ್ತು. ಸಶಸ್ತ್ರ ದಳಗಳನ್ನು ಹೊಂದಿದ್ದ ಮೋಹಿವಾದಿಗಳು ಪ್ರಬಲ ರಾಜ್ಯಗಳು ದುರ್ಬಲ ರಾಜ್ಯಗಳ ಮೇಲೆ ದಾಳಿ ಮಾಡಿದಾಗ ದುರ್ಬಲ ರಾಜ್ಯಗಳ ಪರವಾಗಿ ರಣಾಂಗಣಕ್ಕೆ ಇಳಿಯುತ್ತಿರಲಿಲ್ಲ. 'ಆಕ್ರಮಿತ ಯುದ್ಧಗಳಿಗೆ ವಿರೋಧ ಬರಿಯ ಸೈದ್ಧಾಂತಿಕ ವಿರೋಧ ಮಾತ್ರವಾಗಿರಲಿಲ್ಲ. ಮೋಹಿವಾದಿಗಳು ಅವರ ಈ ಚಟುವಟಿಕೆಯಿಂದಾಗಿ ಮಿಲಿಟರಿ ವಿಜ್ಞಾನದಲ್ಲಿ ಮೂಲಭೂತ ಕೊಡುಗೆ ನೀಡಿದ್ದಾರೆ! ಪರಿಜ್ಞಾನ ಸಿದ್ಧಾಂತ ಮತ್ತು ತರ್ಕಶಾಸ್ತ್ರದ ಪರಿಕಲ್ಪನೆಗಳನ್ನು ಬೆಳೆಸಿದ್ದು ಮೋಹಿವಾದದ ಪ್ರಮುಖ ಕೊಡುಗೆಗಳಲ್ಲೊಂದು.

ನಾಮವಾದ ಒಂದು ರೀತಿಯ ಕುತರ್ಕವಾದಿ ಪಂಥಗಳಲ್ಲೊಂದು. ಇದರ ಸ್ಥಾಪಕರಲ್ಲೊಬ್ಬ 'ಕುಖ್ಯಾತ' ವಕೀಲನಂತೆ. ಒಂದು ರಾಜಮನೆತನದ ಮಂತ್ರಿಯೊಬ್ಬ ಆತನ ವಿರೋಧಿಯಂತೆ. ಆ ಮಂತ್ರಿಯ ವಿರುದ್ಧ ಯಾವುದೇ ಕೇಸು ಅವನು ಬಿಡುತ್ತಿರಲಿಲ್ಲ. ಗೆಲ್ಲುತ್ತಿದ್ದನಂತೆ! ಒಂದು ವಸ್ತುವಿನ 'ಹೆಸರಿನಲ್ಲಿ' ಮತ್ತು ಅದರ ನಿಜವಾದ ಸತ್ಯದ ಬಗ್ಗೆ ಜಿಜ್ಞಾಸೆ ಈ ಪಂಥದ ಮುಖ್ಯ ಕಾಳಜಿ. ಯಾವುದೇ ನಿರ್ದಿಷ್ಟ ವಸ್ತು ಹಲವು 'ಸಾರ್ವತ್ರಿಕ' ವಸ್ತುಗಳಿಂದ (ಅವು ಬದಲಾಗದ ವಿಶಿಷ್ಟ ಗುಣ-ಸ್ವಭಾವಗಳನ್ನು ಹೊಂದಿರುತ್ತವೆ) ಆಗಿರುತ್ತದೆ. ನಿರ್ದಿಷ್ಟ ವಸ್ತುಗಳು ಬದಲಾಗಬಹುದು, ಅವುಗಳ ಗುಣಸ್ವಭಾವಗಳು ಬದಲಾಗಬಹುದು, ಆದರೆ ಅವು ಒಳಗೊಂಡಿರುವ ಸಾರ್ವತ್ರಿಕ ವಸ್ತುಗಳು ಬದಲಾಗುವುದಿಲ್ಲ - ಇದು ನಾಮವಾದದ ತರ್ಕಗಳಲ್ಲಿ ಒಂದು. ಈ ಪಂಥ ಪ್ರಾಕೃತಿಕ ವಿಜ್ಞಾನಗಳು ಬೆಳೆಯಬಹುದಾದ ತಳಹದಿಯನ್ನು ಹಾಕಿದರು. ಅವರ ತರ್ಕ 'ಗತಿತಾರ್ಕಿಕ ತರ್ಕ'ಕ್ಕೆ ಹತ್ತಿರವಾಗಿತ್ತು. 'ಅಣು ಸಿದ್ಧಾಂತ' ಮತ್ತು 'ವಸ್ತುವಿನ ವಿನಾಶರಹಿತತೆ' ಮುಂತಾದ ವೈಜ್ಞಾನಿಕ ಪರಿಕಲ್ಪನೆಗೆ ಅವರು ಬಹಳ ಹತ್ತಿರ ಬಂದಿದ್ದರು.

ಯಿನ್-ಯಾಂಗ್ ಪಂಥ ಐದು ಮೂಲಭೂತ ದ್ರವ್ಯಗಳ ಸಿದ್ಧಾಂತಕ್ಕೆ ಪ್ರಸಿದ್ಧವಾದದ್ದು. ಮಂತ್ರ-ತಂತ್ರ ಎಲ್ಲಾ ನಾಗರಿಕತೆಗಳಲ್ಲಿ ಮೊದಲ ಹಂತಗಳಲ್ಲಿ ಸಾಮಾನ್ಯ. ಇದು ಸಾಮಾನ್ಯವಾಗಿ ಮ್ಯಾಜಿಕ್ ಮತ್ತು ವಿಜ್ಞಾನ ಎರಡರ ಮಿಶ್ರಣವಾಗಿರುತ್ತದೆ. ಕ್ರಮೇಣ ವಿಜ್ಞಾನ ಬೇರೆಯಾಗಿ ಪ್ರಾಕೃತಿಕ ಶಕ್ತಿಗಳು, ಮೂಲಭೂತ ದ್ರವ್ಯಗಳು, ಅವುಗಳು ಕೆಲಸ ಮಾಡುವ ವಿಧಾನದ ಸಾಮಾನ್ಯ ಅಧ್ಯಯನ ಸಹ ಎಲ್ಲಾ ಕಡೆ ಕಂಡುಬರುತ್ತದೆ. ಚೀನಾದ ತತ್ವಶಾಸ್ತ್ರೀಯ ಪರಂಪರೆಯಲ್ಲಿ ಈ ಕೆಲಸ ಮಾಡಿದ್ದು ಯಿನ್-ಯಾಂಗ್ ಪಂಥ. ಯಿನ್-ಯಾಂಗ್ ಗುರುತಿಸಿರುವ ಮೂಲಭೂತ

ದ್ರವ್ಯಗಳೆಂದರೆ - ನೀರು, ಬೆಂಕಿ, ಮರ, ಲೋಹ ಮತ್ತು ಭೂಮಿ. ಈ ಪಂಥದ ಪ್ರಕಾರ ಈ ಐದು ದ್ರವ್ಯಗಳು ಉಂಟಾಗುವುದು ಯಿನ್-ಯಾಂಗ್ ಎಂಬ ಎರಡು ತತ್ವಗಳ ಪರಸ್ಪರ ಕ್ರಿಯೆಯಿಂದ. ಯಿನ್-ಯಾಂಗ್ ತತ್ವದ ಬಗೆಗಿನ ವಿವಿಧ ವ್ಯಾಖ್ಯಾನಗಳು ಇವೆ. ಗಂಡು-ಹೆಣ್ಣಿನಿಂದ ಹಿಡಿದು ಆದಿ ತತ್ವದ ಎರಡು ವಿಭಾಗಗಳು - ಇವೆಲ್ಲಾ ಸೇರಿ.

ಯಿನ್-ಯಾಂಗ್ ಪ್ರಾಕೃತಿಕ ಪ್ರಕ್ರಿಯೆಗಳನ್ನು ಪ್ರಾಕೃತಿಕ ಶಕ್ತಿಗಳಿಂದ ನಿರ್ವಹಿಸುವ ಪ್ರಯತ್ನವಾಗಿ ಒಂದು ವೈಜ್ಞಾನಿಕ ಪಂಥವೆನ್ನಬಹುದು. ಆದರೆ ಯಿನ್-ಯಾಂಗ್ ಪಂಥ ಹಲವು ಕವಲುಗಳಾಗಿದ್ದು ಬರಬರುತ್ತಾ ಐದು ಮೂಲದ್ರವ್ಯಗಳು, ಯಿನ್-ಯಾಂಗ್ ತತ್ವಗಳು, ದಿಕ್ಕುಗಳು, ಋತುಗಳು, ವಿಶಿಷ್ಟ ಸಂಖ್ಯೆಗಳು - ಇವುಗಳೆಲ್ಲದರ ನಡುವೆ ನಿಗೂಢ ಸಂಬಂಧಗಳನ್ನು ಕಲ್ಪಿಸುತ್ತಾ, ಬೊಗಳೆ ನಿರ್ವಚನೆ ಕೊಡುವ ವಿಚಿತ್ರ ಪ್ರವೃತ್ತಿಯಾಗಿ ಬೆಳೆದಿದೆ. ಬಾಹ್ಯಾಕಾಶ, ಭೂಮಿ-ಪ್ರಕೃತಿ, ಮನುಷ್ಯ, ಸಮಾಜ ಎಲ್ಲವನ್ನು ಮುನ್ನಡೆಸುವ ತತ್ತ್ವಗಳು ಒಂದೇ ಎಂಬ ಯಿನ್-ಯಾಂಗ್ ಪಂಥದ ಸಿದ್ಧಾಂತ ಹಲವು ಆಸಕ್ತಿಕಾರಕ ಬೆಳವಣಿಗೆಗಳಿಗೆ ಎಡೆಕೊಟ್ಟಿತು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಯಿನ್-ಯಾಂಗ್ ಪಂಥ ಕನ್‌ಫ್ಯೂಶಿಯಸ್ ಮತ್ತು ತಾವೋ ಪಂಥಗಳ ವಿಕಾಸದ ಮೇಲೆ ಗಾಢ ಪ್ರಭಾವ ಬೀರಿತು. ಈ ಎರಡೂ ಪಂಥಗಳು ಯಿನ್-ಯಾಂಗನ ಪ್ರಭಾವದಿಂದ ಹಿಂದಿನ ಅವಕಾಶಗಳಿಂತ ಬೇರೆ ರೀತಿಯಲ್ಲಿ ವಿಕಾಸಗೊಂಡವು.

ಚೀನಾಕ್ಕೆ ಹೊರಗಿನಿಂದ ಬಂದ ತತ್ತ್ವಶಾಸ್ತ್ರೀಯ ಪಂಥಗಳಲ್ಲಿ ಬೌದ್ಧವಾದ ಮೊದಲನೆಯದು. ಬೌದ್ಧವಾದದ ಬಗ್ಗೆ ತತ್ತ್ವಶಾಸ್ತ್ರದ ಸರಣಿಯ ಇನ್ನೊಂದು ಪುಸ್ತಕ 'ಭಾರತೀಯ ತತ್ತ್ವಶಾಸ್ತ್ರ' ಪುಸ್ತಿಕೆಯಲ್ಲಿ ವಿವರವಾದ ಪರಿಚಯವಿರುವುದರಿಂದ ಈ ಅಧ್ಯಾಯದಲ್ಲಿ ಬೌದ್ಧವಾದ ಚೀನಾದಲ್ಲಿ ಪಡೆದ ವಿಸಿಷ್ಟ ರೂಪದ ಬಗ್ಗೆ ಪರಿಚಯವಿದೆ. ತಾವೋ ಪಂಥದಲ್ಲಿದ್ದಂತೆ ಬೌದ್ಧವಾದದಲ್ಲೂ ಧರ್ಮ ಮತ್ತು ತತ್ವಶಾಸ್ತ್ರ ಎರಡೂ ಪ್ರತ್ಯೇಕ ಅಸ್ತಿತ್ವ ಹೊಂದಿವೆ. ಚೀನಾದಲ್ಲಿ ಬೌದ್ಧವಾದ ತತ್ವಶಾಸ್ತ್ರದ ಪಂಥವಾಗಿ ಮಾತ್ರ ಉಳಿಯಿತು. ಬೌದ್ಧವಾದ ಮತ್ತು ತಾವೋವಾದ ಇವೆರಡೂ ಪಂಥಗಳ ತತ್ವಶಾಸ್ತ್ರೀಯ ನಿಲುವುಗಳು ಹತ್ತಿರವಿದ್ದುದರಿಂದ ಇವುಗಳ ಸಂಗಮವಾಗಿ ವಿಶಿಷ್ಟ ಬೌದ್ಧವಾದಿ ಪಂಥ ಚೀನಾದಲ್ಲಿ ಬೆಳೆಯಿತು. ಇದನ್ನು ಚಾನ್‌ವಾದ ಎಂದು ಕರೆಯಲಾಗುತ್ತದೆ.

ಕನ್‌ಫ್ಯೂಶಿಯಸ್ ವಾದದ ಅಧಿಪತ್ಯಕ್ಕೆ ಸವಾಲು ಹಾಕಿದ ಬೌದ್ಧವಾದವನ್ನು ಆ ಪಂಥದವರು ಸ್ವಾಭಾವಿಕವಾಗಿಯೇ ಬಲವಾಗಿ ವಿರೋಧಿಸಿದರು. ಹೊರಗಿಂದ ಬಂದ 'ಪಂಥ'ವೊಂದು ಹೇಗೆ ಚೀನಿಯರಿಗೆ ಪ್ರಸ್ತುತವಾಗಬಹುದು ಎಂಬುದು ಅವರ ಟೀಕೆಯಾಗಿತ್ತು. ಕನ್‌ಫ್ಯೂಶಿಯಸ್‌ವಾದ ಈ ಜಗತ್ತಿನಲ್ಲಿ ಆಗುಹೋಗುಗಳನ್ನು ನಿಯಂತ್ರಿಸಲು ಪ್ರಯತ್ನಿಸಿದರೆ, ಬೌದ್ಧವಾದಿಗಳು ಈ ಜಗತ್ತಿನಿಂದ ಪಲಾಯನ ಮಾಡುವುದು ಹೇಗೆ ಎಂಬುದರ ಬಗ್ಗೆ ಜಿಜ್ಞಾಸೆ ಮೂಡುತ್ತಾರೆ ಎಂಬುದು ಇನ್ನೊಂದು ಟೀಕೆ. ಆದರೆ ಈ ಬೇರೆಯಾದ ತತ್ವಶಾಸ್ತ್ರೀಯ ನಿಲುವೇ ಬಹುಶಃ ಸ್ವತಂತ್ರ ಪಂಥವಾಗಿ ಬೌದ್ಧವಾದ ಚೀನಾದಲ್ಲಿ ಬೇರೂರಲು ಸಹಾಯಕವಾಯಿತು. ಕ್ರಮೇಣ ಅದಕ್ಕೆ ರಾಜಾತಿಥ್ಯವೂ ಸಿಕ್ಕಿತು. ಬೌದ್ಧವಾದದ ನಿರ್ವಾಣ ಮತ್ತು ಪುನರ್ಜನ್ಮದ

ಪರಿಕಲ್ಪನೆಗಳು ಚೀನಿಯರಿಗೆ ಆಕರ್ಷಕವಾಗಿ ಕಂಡಿರಬೇಕು. ದೈನಂದಿನ ದುರ್ಭರ ಬದುಕಿನಿಂದ ಪಲಾಯನ ಮಾಡಲು ಇದು ಒಳ್ಳೆಯ ಅವಕಾಶ ಎಂದು ಅನ್ನಿಸಿರಬೇಕು. ಬುದ್ಧನೆಂಬ ವಿಶ್ವ-ಚೇತನದ ಜತೆ ಲೀನವಾಗುವುದು ಅದರ ನಿಲುವುಗಳಲ್ಲೊಂದು. 'ವಿಶ್ವಚೇತನ'ದ ಪರಿಕಲ್ಪನೆ ಚೀನಿ ತತ್ತ್ವಶಾಸ್ತ್ರಕ್ಕೆ ಬೌದ್ಧವಾದದ ಕೊಡುಗೆ ಎನ್ನಬಹುದು.

ಚೀನಿ ಬೌದ್ಧವಾದಿ ಪಂಥವಾಗಿ ಬೆಳೆದ ಚಾನ್‌ವಾದ. ಇದೀ ಜಪಾನ್‌ಗೆ ಹರಡಿ ಪ್ರಸಿದ್ಧ ಝೆನ್ ಬೌದ್ಧವಾದವಾಗಿ ರೂಪುಗೊಂಡಿತು. ಚಾನ್‌ವಾದ ಧ್ಯಾನಕ್ಕೆ ಹೆಚ್ಚಿನ ಮಹತ್ವ ನೀಡುತ್ತದೆ. ಆರನೇ ಶತಮಾನದಲ್ಲಿ ಆರಂಭವಾದ ಚಾನ್‌ವಾದಿ ಪಂಥ ಕೆಲವು ಕಾಲದ ನಂತರ ಉತ್ತರ ಮತ್ತು ದಕ್ಷಿಣದ ಪಂಥಗಳಾಗಿ ಕವಲು ಒಡೆಯಿತು. ಧ್ಯಾನದ ಮೂಲಕ ಸಾಧಿಸಬಹುದಾದ ನಿರ್ಮಾಣ ಈ ಜಗತ್ತಿನಿಂದ ಪಲಾಯನವಾಗಬೇಕಿಲ್ಲ. ಅದೊಂದು ಮನೋಸ್ಥಿತಿ. ಆ ಮನೋಸ್ಥಿತಿ ತಲುಪಿದ ಮೇಲೆ ಇಹಜಗತ್ತಿನ ಕಷ್ಟಕಾರ್ಪಣ್ಯಗಳು ಏನೂ ಮಾಡಲಾರವು. ಇಹದಲ್ಲಿ ಕಷ್ಟ-ಕಾರ್ಪಣ್ಯಗಳಲ್ಲಿ ಮುಳುಗಿರುವ ಮನುಜಮಾತ್ರರಿಗೆ ಕನಸಿನ ಮನೋಸ್ಥಿತಿ ಎಂದು ಜಿ.ಆರ್. ಅಧ್ಯಯನದ ಕೊನೆಯಲ್ಲಿ ಉದ್ಗರಿಸುತ್ತಾರೆ.

ಕನ್‌ಫ್ಯೂಶಿಯಸ್‌ವಾದಕ್ಕೆ ಪ್ರಭುತ್ವದ ಸಮಾಜದ ಬಗ್ಗೆ, ವ್ಯಕ್ತಿಯ ಜವಾಬ್ದಾರಿ ಬಗ್ಗೆ ಹೆಚ್ಚಿನ ಕಾಳಜಿ. ತಾವೋವಾದ ಮತ್ತು ಚಾನ್-ಬೌದ್ಧವಾದ ಈ ಕಾಳಜಿಯನ್ನು ಪೂರ್ಣವಾಗಿ ತಿರಸ್ಕರಿಸಿ, ಬದಲಿ ತತ್ತ್ವಶಾಸ್ತ್ರೀಯ ನಿಲುವುಗಳನ್ನು ಪ್ರತಿಪಾದಿಸಿದವು. ಈ ನಿಲುವುಗಳಿಗೆ ಸ್ಪಂದನವಾಗಿ ಬಂದದ್ದೇ ನವ-ಕನ್‌ಫ್ಯೂಶಿಯಸ್‌ವಾದ. 'ಸಂತ'ನಾಗುವುದು ಪ್ರತಿಯೊಬ್ಬನ ಉದ್ದೇಶವಾಗಿರಬೇಕೆಂಬ ನಿಲುವನ್ನು ಈ ಪಂಥ ಅನುಸರಿಸಿತು. ಸ್ವರ್ಗ ಮತ್ತು ಭೂಮಿ ಎರಡು 'ಸಾರ್ವತ್ರಿಕ ಪಾಲಕ'ರು, ಅವರ ಸೇವೆ ಮಾಡುವುದು ಪ್ರತಿಯೊಬ್ಬನ ನೈತಿಕ ಕರ್ತವ್ಯ. ಇದರಿಂದ 'ಸಂತ'ನಾಗಬಹುದು. ಇದಕ್ಕಾಗಿ ಬೌದ್ಧರು ಹೇಳುವಂತೆ ಜಗತ್ತು ಬಿಡಬೇಕಾಗಿಲ್ಲ. ಇಲ್ಲೇ ಇದ್ದು ಅದನ್ನು ಸಾಧಿಸಬಹುದು ಎಂಬುದು ಈ ಪಂಥದ ವಾದ.

ಚಾನ್-ಬೌದ್ಧವಾದ, ತಾವೋ ಧರ್ಮ, ಯಿನ್-ಯಾಂಗ್ ಈ ಪಂಥಗಳ 'ಉತ್ತಮ ಅಂಶಗಳನ್ನು ಕನ್‌ಫ್ಯೂಶಿಯಸ್ ವಾದದ ಜತೆ ಜೋಡಿಸಿ ಹೊಸದೊಂದು ಪಂಥ ಸೃಷ್ಟಿಸಲು ನವ-ಕನ್‌ಫ್ಯೂಶಿಯಸ್‌ವಾದ ಪ್ರಯತ್ನಿಸಿತು. ಈ ಪಂಥ ಒಂಬತ್ತನೇ ಶತಮಾನದಲ್ಲಿ ವಿಕಾಸವಾಗಲು ಆರಂಭವಾಗಿ, ಹನ್ನೊಂದನೇ ಶತಮಾನದಲ್ಲಿ ಅಂತಿಮ ಎಂದು ಹೇಳಬಹುದಾದ ಸ್ವರೂಪ ಪಡೆಯಿತು. ಆಮೇಲೆ ಅದು ಎರಡು ಕವಲುಗಳಾಗಿ ಒಡೆಯಿತು. ಪ್ರಕೃತಿ ನಿಯಮಗಳ ಮೇಲೆ ಮನುಷ್ಯ-ಚೇತನ ಅಥವಾ ವಿಶ್ವಚೇತನ ಪರಿಣಾಮ ಬೀರುತ್ತದೋ ಇಲ್ಲವೋ ಎಂಬ ಬಗ್ಗೆ ಭಿನ್ನ ಅಭಿಪ್ರಾಯಗಳು ಈ ಎರಡು ಕವಲುಗಳಲ್ಲಿ ಮೂಡಿದವು.

ಹಿಂದಿನ ಅಧ್ಯಾಯಗಳಲ್ಲಿ ಹೇಳಿದ ಎಲ್ಲಾ ಪಂಥಗಳು ಒಂದಲ್ಲ ಒಂದು ರೀತಿಯಲ್ಲಿ ಕೊನೆಗೆ ಆಳುವವರ-ಉಳ್ಳವರ ದಬ್ಬಾಳಿಕೆ ಜನರಿಗೆ ತಿಳಿಯದಂತೆ ಮರುಳು ಮಾಡುವ ತತ್ವಶಾಸ್ತ್ರೀಯ ಪಂಥಗಳು. ಜನತೆಗೆ ಸ್ವತಂತ್ರ ಚಿಂತನಶಕ್ತಿ ಕೊಡುವ ಪಂಥಗಳು ಕ್ರಿ.ಪೂ. ಏಳನೇ ಶತಮಾನದಷ್ಟು ಮೊದಲೇ ಚೀನಾದಲ್ಲಿ ಪ್ರಚಲಿತವಿದ್ದವು. ಚೀನಾದಲ್ಲಿ ಪ್ರಬಲವಾದ

ಪ್ರಮುಖ ತತ್ವಶಾಸ್ತ್ರೀಯ ಪಂಥದ ಜನಮರುಳು ನಿಲುವುಗಳ ವಿರುದ್ಧ ಇತರ ಪಂಥಗಳು ಹೋರಾಡುತ್ತಾ ಬಂದಿವೆ. ಹಲವಾರು ಸಂದೇಶವಾದಿ, ವಿಚಾರವಾದಿ ಮತ್ತು ಭೌತಿಕವಾದಿ ಪಂಥಗಳು ಚೀನಾದಲ್ಲಿ ಆಗಿ ಹೋಗಿವೆ. ಈ ಎಲ್ಲಾ ಪಂಥಗಳು ಚೀನಾದ ಪ್ರಮುಖ / ಪ್ರಬಲ ಪಂಥಗಳು ಹರಡುತ್ತಿದ್ದ ಆದರ್ಶವಾದಿ, ಆಧ್ಯಾತ್ಮಿಕ, ಮೂಢನಂಬಿಕೆ, ತಪ್ಪು ಪರಿಕಲ್ಪನೆಗಳನ್ನು ವಿರೋಧಿಸಿದವು. ಇವು ಅಧಿಕಾರಶಾಹಿ ಪಾಳೆಯಗಾರಿ ವ್ಯವಸ್ಥೆಯನ್ನು ಸ್ಪಷ್ಟವಾಗಿ ವಿರೋಧಿಸಿ, ಅವರನ್ನು ಬದಲಾಯಿಸುವುದು ಮನುಷ್ಯನ ವಿಮೋಚನೆಗೆ ಅಗತ್ಯ ಎಂದು ಹೇಳಿದವು. ಹೆಚ್ಚಿನ ಪಂಥಗಳು ಭೌತಿಕವಾದವನ್ನು ಅಂಗೀಕರಿಸಿದವು.

ಸ್ವಾಭಾವಿಕವಾಗಿಯೇ 19 ಮತ್ತು 20ನೇ ಶತಮಾನದಲ್ಲಿ ಚೀನಾಕ್ಕೆ ಪಾಶ್ಚಿಮಾತ್ಯ ಸೇರಿದಂತೆ ಇತರ ತತ್ವಶಾಸ್ತ್ರೀಯ ಪಂಥಗಳ ಪರಿಚಯವಾಯಿತು. 1911ರಲ್ಲಿ ರಾಜರ ಆಳ್ವಿಕೆ ಕೊನೆಗೊಳಿಸಿದ ಕ್ರಾಂತಿ, 1945ರಲ್ಲಿ ಅರೆ-ವಸಾಹತುಶಾಹಿ, ಅರೆ-ಪಾಳೆಯಗಾರಿ ವ್ಯವಸ್ಥೆಯನ್ನು ಕೊನೆಗೊಳಿಸಿ ಸಮಾಜವಾದಿ ಕ್ರಾಂತಿಯ ಹೋರಾಟದಲ್ಲಿ ಸ್ವಾಭಾವಿಕವಾಗಿಯೆ ಹೊಸ ತತ್ವಶಾಸ್ತ್ರೀಯ ಪಂಥಗಳು ಬಂದಿವೆ. ಅದರಲ್ಲಿ ಮಾರ್ಕ್ಸ್‌ವಾದವೂ ಒಂದು. ಮಾರ್ಕ್ಸ್‌ವಾದ ವನ್ನು ಚೀನಿ ಪರಿಸ್ಥಿತಿಗೆ ಅಳವಡಿಸಿ ಆ ದೃಷ್ಟಿಕೋನವನ್ನು ಬೆಳೆಸಿದ್ದರಿಂದ, ಅದು ಚೀನಾದ ಅಗಾಧ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸಿತು.

ಒಟ್ಟಾರೆಯಾಗಿ ಹೇಳುವುದಾದರೆ ಜಿ.ಆರ್.ರವರ ಈ ಕೈಪಿಡಿ ಎಲ್ಲರಿಗೂ ನಿಲುಕುವ ರೀತಿಯಲ್ಲಿ ಸಂಕ್ಷಿಪ್ತವಾಗಿ, ಆದರೆ ಸಮಗ್ರತೆಗೆ ಭಂಗ ಬರದಂತೆ ಚೀನಿ ತತ್ತ್ವಶಾಸ್ತ್ರದ ಹಲವು ಪಂಥಗಳ ಸಾರದ ಪರಿಚಯವನ್ನೂ, ಅದರ ಸಾಮಾಜಿಕ-ಚಾರಿತ್ರಿಕ ವಿಕಾಸದ ವಿಧಾನವನ್ನು ತಿಳಿಸಿಕೊಡುತ್ತದೆ. ಜಿ.ಆರ್.ಅವರು ವಿನಯದಿಂದ ಜೋಸೆಫ್ ನೀಧಾಮ್ (ಚೀನಾದ ಬಗ್ಗೆ ವಿಶ್ವಪ್ರಸಿದ್ಧ ಪರಿಣತ) ಮತ್ತು ಫುಂಗ್ ಯು-ಲಾನ್‌ರವರ ಒಳನೋಟಗಳ ಮೇಲೆ ಪುಸ್ತಕ ಆಧಾರಿತವೆಂದು ಹೇಳಿದರೂ, ಜಿ.ಆರ್. ಅವರ ಹಲವು ವಿಶಿಷ್ಟ ಒಳನೋಟಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಪುಸ್ತಕದ ಕೊನೆಯಲ್ಲಿ ಹಲವು ಪಂಥಗಳ ಮೂಲ ಬರವಣಿಗೆಗಳ ಪ್ರಮುಖ ಆಯ್ದ ಭಾಗಗಳನ್ನು ಕೊಡಲಾಗಿದ್ದು ಅದು ಆ ಬಗ್ಗೆ ಇನ್ನೂ ಆಳವಾಗಿ ತಿಳಿದುಕೊಳ್ಳಬಯಸುವವಷ್ಟು ಉಪಯುಕ್ತವಾಗಿದೆ.

❑

ಗೊರ್ಬಚೆವ್ ಫೆನಾಮೆನಾ

ಸಿ.ವಿ. ಜಯತೀರ್ಥ

ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ 1989ರ ಸೆಪ್ಟೆಂಬರ್ 26ನೇ ತಾರೀಖು ಬಂದಿದ್ದ ಒಂದು ಪತ್ರವನ್ನು ಓದಿ ಚಕಿತರಾದವರಲ್ಲಿ ನಾನೊಬ್ಬ. ಪತ್ರವನ್ನು ಬರೆದಿದ್ದವರು ನನ್ನ ಮಿತ್ರ ಡಾ.ಜಿ.ರಾಮಕೃಷ್ಣರವರೇ. ಪೆರಿಸ್ಟ್ರೋಯ್ಕ-ಗ್ಲಾಸ್ನೋಸ್ತ್‌ಗಳ ಅಧ್ವರ್ಯುವಾಗಿದ್ದ ಗೊರ್ಬಚೆವ್ ರವರು ತೊಲಗಬೇಕೆಂಬುದೇ ಪತ್ರದ ಸಾರಾಂಶ. ಈ ಪತ್ರವನ್ನೋದಿ ನನ್ನಂತೆ ಚಕಿತರಾದವರು, ಖುಷಿಪಟ್ಟವರು ಬೇಕಾದಷ್ಟು ಮಂದಿ. ಗೊರ್ಬಚೆವರ ಪುನರ್ನಿರ್ಮಾಣ-ಪಾರದರ್ಶಕತೆಗಳ ಪೊಳ್ಳುವಾದಕ್ಕೆ ಮರುಳಾಗಿದ್ದ ಹಲವರು ಈ ಪತ್ರವನ್ನು ಜಿ.ಆರ್.ರಂಥವರು ಬರೆಯ ಬಾರದಾಗಿತ್ತೆಂದು ಹೇಳುತ್ತಿದ್ದುದೂ ಉಂಟು. "ಹಾಗೂ ಅಲ್ಲ-ಹೀಗೂ ಅಲ್ಲ"ದ ಸಂದೇಹವಾದಿಗಳೂ ಇದ್ದರು.

ಅಂದಿನ ದಿನಗಳಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷವು ಗೊರ್ಬಚೆವ್‌ರ ನಯವಂಚನೆಯನ್ನರಿಯದೆ ಅವರು ನಿಜವಾಗಿಯೂ ನವನಿರ್ಮಾಣಕ್ಕಾಗಿ - ಪಾರದರ್ಶಕತೆಗಾಗಿ ಶ್ರಮಿಸುತ್ತಿರುವ ವಿಶ್ವಕಮ್ಯುನಿಸ್ಟ್ ಚಳವಳಿಯ ನಿಸ್ಸೀಮ ನಾಯಕರೆಂದು ಭ್ರಮಿಸಿತ್ತು. ಈ ಭ್ರಮೆಯೂ ಅಂತರರಾಷ್ಟ್ರೀಯ ವ್ಯಾಪ್ತಿಯುಳ್ಳದ್ದಾಗಿತ್ತು. ಅಲ್ಲೊಬ್ಬ ಇಲ್ಲೊಬ್ಬರಂತೆ ಹಲವಾರು ಕಮ್ಯುನಿಸ್ಟ್ ಮುಂದಾಳುಗಳು ಈ ಬಗ್ಗೆ ಸಂದೇಹ- ಅವಿಶ್ವಾಸಗಳನ್ನು ವ್ಯಕ್ತಪಡಿಸಿದ್ದೂ ಇತ್ತು. ಆದರೂ ಗೊರ್ಬಚೆವ್-ಯೆಲ್ಟ್ಸಿನ್ನರು ಪ್ರಗತಿಯ ಮಾತನಾಡುತ್ತಲೇ ಪಕ್ಷವನ್ನು, ಸೋವಿಯತ್ ಒಕ್ಕೂಟವನ್ನು ವಿಶ್ವದ ಪ್ರಗತಿಪರ ಕಮ್ಯುನಿಸ್ಟ್ ಚಳುವಳಿಗಳನ್ನೂ ಶಾಂತಿ ಚಳವಳಿಗಳನ್ನೂ ಅವನತಿಯ ಹಾದಿಯಲ್ಲಿ ನಡೆಸಿದರು. ಕಳೆದ 80ರ ದಶಕದ

ಆದಿಭಾಗದಿಂದಲೇ ತಮ್ಮ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿದ ಗೊರ್ಬಚೆವ್ 1983ರ ವೇಳೆಗೆ ಪಕ್ಷವನ್ನು (CPSU) ತಮ್ಮ ಹಿಡಿತಕ್ಕೆ ತೆಗೆದುಕೊಂಡು ತಮ್ಮ ದುರುಳ ದೂರಗಾಮಿ ನೀತಿ ನಿರೂಪಣೆ ಕಾರ್ಯಕ್ರಮಗಳಿಗೆ ಒಪ್ಪಿಸಿದರು. "ಆಡಂಬರದ ಪ್ರಸ್ತಾವನೆಯಲ್ಲ - ಬದಲಿಗೆ ಜಾಗರೂಕತೆಯಿಂದ ತಯಾರಾಗಿರುವ ಕಾರ್ಯಕ್ರಮ" ವೆಂದು ಕೊಚ್ಚಿಕೊಳ್ಳುತ್ತಲೇ 1985ರ ವೇಳೆಗೆ ಪಕ್ಷದ ಪ್ಲೀನಮ್‌ನಲ್ಲಿ "ಮುಕ್ತಚರ್ಚೆ" ನಡೆಸಿ ಒಪ್ಪಿಸಿದರು. 1987ರಲ್ಲಿ ಸೋವಿಯತ್ ಕಮ್ಯೂನಿಸ್ಟ್ ಪಕ್ಷವು ಪೆರಿಸ್ರೊಯ್ಕ-ಗ್ಲಾಸ್ನೋಸ್ತ್‌ಗಳನ್ನು ಅಧಿಕೃತವಾಗಿ ಸ್ವೀಕರಿಸಿತು.

ಕಮ್ಯುನಿಸ್ಟ್ ಪಕ್ಷದ (CPSU) ಸಾಮಾನ್ಯ ಸದಸ್ಯರೂ ನಾಯಕರೂ ಕಾರ್ಮಿಕ ವರ್ಗದ ನಾಯಕತ್ವದ ಸುದ್ದಿಯೇ ಇಲ್ಲದ - ಬಂಡವಾಳಶಾಹಿ ರಾಷ್ಟ್ರಗಳ ವೈಜ್ಞಾನಿಕ ಮುನ್ನಡೆಗಳನ್ನು- ಅವು ಆ ರಾಷ್ಟ್ರಗಳ ಜನಸಾಮಾನ್ಯರಿಗೆ ಲಾಭದಾಯಕವಾಗಿ ಮುಟ್ಟಿವೆಯೇ ಇಲ್ಲವೇ ಎಂಬುದನ್ನು ಗಮನಿಸದೆ ಪ್ರಶಂಸಿಸುವ ಪಾರದರ್ಶಕತೆಯನ್ನು - ಪುನರ್ನವೀಕರಣದ ಪ್ರಸ್ತಾಪವನ್ನು ಒಪ್ಪಿಕೊಂಡರು. ಒಪ್ಪಿಕೊಳ್ಳದವರು ಪಕ್ಷದಿಂದ ದೂರವಾದರು. ಶಿಕ್ಷೆಗಳಿಗೂ ತುತ್ತಾದರು.

ಯೆಲ್ಸಿನ್ನರು ಪಕ್ಷದ ನಾಯಕರಾಗಿ ತಮ್ಮ ದರ್ಬಾರನ್ನು ತೋಳೇರಿಸಿಕೊಂಡು ಮೆರೆದರು. ರಶಿಯನ್ ರಿಪಬ್ಲಿಕ್ ಹಾಗೂ ಕಾರ್ಮಿಕ ಸಮುದಾಯದ ತಿರುಳಾಗಿದ್ದ ಕಮ್ಯುನಿಸ್ಟ್ ಪಕ್ಷವನ್ನೇ ಬಹಿಷ್ಕರಿಸಿದರು. ಪಕ್ಷದ ಆಸ್ತಿ ಪಾಸ್ತಿಗಳನ್ನು ದಾಖಲೆಗಳನ್ನು ವಶಪಡಿಸಿಕೊಂಡರು. ಅನವಶ್ಯಕ ಶೋಧನೆಗಳಿಂದ - ಕಾನೂನು ಬದ್ಧತೆಯಿಲ್ಲದ ಪ್ರಶ್ನೆಗಳಿಂದ ಕಮ್ಯುನಿಸ್ಟ್ ನಾಯಕರುಗಳನ್ನು ಹಿಂಸಿಸಿದರು. ಗೊರ್ಬಚೆವರು ಈ ಕ್ರಮಗಳನ್ನೇನೂ ಖಂಡಿಸಲಿಲ್ಲ. ಅವರ "ಪಾರದರ್ಶಕ ಮೌನ ಸಮ್ಮತಿ" ಇತ್ತು. ಈ ಬಗೆಯಲ್ಲಿ ಸರ್ಕಾರವೇ ನಡೆಸಿದ ಅಧಿಕೃತ ದಂಗೆಯಿಂದ ಬಂಡವಾಳ ಶಾಹಿಯ ಹಾದಿಯಲ್ಲಿ ನಡೆಯಲು ಪ್ರಬಲ ಅಡ್ಡಿಯಾಗಿದ್ದ ಪಕ್ಷವನ್ನೇ ನಾಶಗೊಳಿಸಿದರು.

ಪಕ್ಷದ ಏಳು ಮುಖಪತ್ರಗಳು ಮೌನವಾದವು. "ಪ್ರಾವ್ದಾ" ಪತ್ರಿಕೆಯೂ ದಾಳಿಗೆ ತುತ್ತಾಯಿತು. ಹಾದಿ ಬೀದಿಗಳಲ್ಲಿ ಕಮ್ಯುನಿಸ್ಟರನ್ನು ದಸ್ತಗಿರಿ ಮಾಡಲಾಯ್ತು. ದಸ್ತಗಿರಿ ಯಾದವರ, ಗುಂಡಿಗೆ ತುತ್ತಾದವರ, ಅವರಿಗೆ ಪಕ್ಷದಲ್ಲಿದ್ದ ಸ್ಥಾನಮಾನಗಳ ವಿವರಗಳೇ ಲಭ್ಯವಾಗಲಿಲ್ಲ. ಇಂತಹ ಹೀನ ಕುತ್ಸಿತ- ಕ್ರೂರ ದಬ್ಬಾಳಿಕೆಯನ್ನು ಮೆರೆದ ಯೆಲ್ಸಿನ್ನರಿಗೆ ಗೊರ್ಬಚೆವ್ "ಸೋವಿಯೆಟ್ ಒಕ್ಕೂಟದ ವೀರ"ನೆಂಬ ಬಿರುದು ಪ್ರದಾನ ಮಾಡಿ, ಮೆಡಲನ್ನು ತೊಡಿಸಿ ಗೌರವಿಸಿದರು. ಚುನಾಯಿತ ಸರ್ಕಾರವನ್ನು ವಿಸರ್ಜಿಸಿ ಯಾವ ಚುನಾವಣೆಯೂ ಇಲ್ಲದೆ ತಾತ್ಕಾಲಿಕ ಸರ್ಕಾರವನ್ನು ವಿಶೇಷ ತುರ್ತು ಅಧಿಕಾರಗಳನ್ನಿತ್ತು ಅಸ್ತಿತ್ವಕ್ಕೆ ತಂದರು. ಅಮೆರಿಕವು ಬಯಸುತ್ತಿದ್ದ ಆದರೆ ಈವರೆಗೆ ಈಡೇರದಂತಿದ್ದ ಗುರಿಯು ಈ ದ್ರೋಹಿಗಳಿಂದ, ಅವರ ದುರುಳ ಕೂಟದಿಂದ ಅತ್ಯಂತ ಸುಲಭವಾಗಿ ಸಾಧಿತವಾಯ್ತು.

ಅಮೆರಿಕದ ಸಂಯುಕ್ತ ಸಂಸ್ಥಾನದ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಕಾಮ್ರೇಡ್ ಗಸ್‌ಹಾಲ್‌ರವರೇ ಈ ಎಲ್ಲಾ ಬೆಳವಣಿಗೆಗಳನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ (ಭಾರತ ಕಮ್ಯುನಿಸ್ಟ್ ಪಕ್ಷದ ಪಾರ್ಟಿ ಲೈಫ್ ಮಾಸಿಕ- ಅಕ್ಟೋಬರ್ 1991) "ಸೋವಿಯೆಟ್ ಆದರ್ಶವು ಸೋತಿದೆ" - "ಕಮ್ಯುನಿಸಂ ಮೃತವಾಗಿದೆ" ಎಂಬ ಗೊರ್ಬಚೆವರ ಅಭಿಪ್ರಾಯಗಳನ್ನು ಸ್ಪಷ್ಟವಾಗಿ

ನಿರಾಕರಿಸಿರುವ ಗಸ್‌ಹಾಲ್ ಪಕ್ಷವು ಪುನಃ ಶಕ್ತಿಯುತವಾಗಿ ರೂಪುಗೊಂಡು ಪ್ರಬಲವಾಗಿ ಬೆಳೆದು ಬರಲಿದೆಯೆಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ಡಾ.ಜಿ.ಆರ್.ರವರು ಗೊರ್ಬಚೆವರ ಕಳ್ಳಸಿದ್ಧಾಂತಕ ಸುಳ್ಳು ಸಾಧನೆಗಳನ್ನು ತಮ್ಮ ಪುಸ್ತಕ "ದ ಗೊರ್ಬಚೆವ್ ಫೆನಾಮೆನಾ"ದಲ್ಲಿ ಎಳೆ ಎಳೆಯಾಗಿ ಬಿಡಿಸಿ ಮುಂದಿಟ್ಟಿದ್ದಾರೆ. ಅವರ ಲೇಖನಗಳನ್ನು ಈ ಪುಸ್ತಕದಲ್ಲಿ ಒಟ್ಟುಗೂಡಿಸಿ ಪ್ರಕಾಶಿಸುವ ಮುನ್ನವೇ ಬೆಂಗಳೂರು ಜಿಲ್ಲೆಯ ಕಮ್ಯುನಿಸ್ಟ್ ಪಕ್ಷದ ರಾಜಾಜಿನಗರದ ಶಾಖೆಯು "ಪೆರಿಸ್ಟ್ರೊಯ್ಕ - ಗ್ಲಾಸ್ನೋಸ್ತ್" ಬಗ್ಗೆ ಒಂದು ವಿಚಾರ ಸಂಕಿರಣವನ್ನು ಹಮ್ಮಿಕೊಂಡಿತ್ತು. (ತಾ 8-9-1991) ಅದರಲ್ಲಿ ನಾನೂ ಭಾಗಿಯಾಗಿದ್ದೆ. ಡಾ.ಜಿ.ಆರ್. ರವರೂ ಭಾಗಿಯಾಗಬೇಕಾಗಿತ್ತು. ಆದರೆ ಅವರ ನಿಕಟ ಮಿತ್ರರೊಬ್ಬರ ಪತ್ನಿಯ ಮರಣದಿಂದ ಸಂಕಿರಣದಲ್ಲಿ ಭಾಗವಹಿಸಲಾಗಲಿಲ್ಲ. ಸಂಕಿರಣವನ್ನು ಉದ್ಘಾಟಿಸಿದ ಪಕ್ಷದ ರಾಜ್ಯಮಂಡಲಿಯ ಸೆಕ್ರೆಟೇರಿಯಟ್ ಸದಸ್ಯರಾದ ಕಾ. ಎಂ.ಸಿ. ವೆಂಕಟರಾಮುರವರು ಸೋವಿಯೆತ್ ಒಕ್ಕೂಟದಲ್ಲಿ ಆಗುತ್ತಿದ್ದ ಹೇಯ ಬೆಳವಣಿಗೆಗಳ ಬಗ್ಗೆ ತಮ್ಮ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದರು. ಈ ಬೆಳವಣಿಗೆಗಳನ್ನು ಭಾರತ ಕಮ್ಯುನಿಸ್ಟ್ ಪಕ್ಷವು ಕಟುವಾಗಿ ವಿರೋಧಿಸಬೇಕೆಂದು ಕರೆ ನೀಡಿದರು. ಸಂಕಿರಣದಲ್ಲಿ ಭಾಗವಹಿಸಿದ್ದ ಪಕ್ಷದ ಹಿರಿಯ ನೇತಾರ ಕಾ.ಸಿ.ಮುನಿರತ್ನ "ಪೆರಿಸ್ಟ್ರೊಯ್ಕ"ವು ಪೆರಿಯ (ದೊಡ್ಡ) ಸ್ಟ್ರೋಕ್ (ಹೃದಯಘಾತ) ಆಗಲಿದೆಯೆಂದು ಗಂಭೀರವಾಗಿಯೇ ಜೋಕ್ ಮಾಡಿದರು. ಕೆಲವರು ಈ ಬಗ್ಗೆ ತಮಗಿದ್ದ ಸಂದೇಹ ಗೊಂದಲಗಳನ್ನು ತೋಡಿಕೊಂಡರೆ, ಬಹುಮಂದಿ ಪೆರಿಸ್ಟ್ರೋಯ್ಕ-ಗ್ಲಾಸ್ನೋಸ್ತ್‌ಗಳು ದಿಕ್ಕುಗೇಡಿ ಕ್ರಮಗಳೆಂದೇ ಹೇಳಿದರು. ಒಬ್ಬಿಬ್ಬರು ಮಾತ್ರ ಗೊರ್ಬಚೆವರ ಪ್ರಯತ್ನಗಳನ್ನು ಹೊಗಳಿ - ಬೆಂಬಲಿಸುವ ವ್ಯರ್ಥ ಪ್ರಯತ್ನ ಮಾಡಿ ಶ್ರೋತೃಗಳು ಕೇಳಿದ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಲಾರದೆ ತೆಪ್ಪಗಾದರು. ಭಾರತ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಲಿಯು ಆವರಿಗೆ ಪೆರಿಸ್ಟ್ರೊಯ್ಕ - ಗ್ಲಾಸ್ನೋಸ್ತ್‌ಗಳಿಗೆ ಬೆಂಬಲಿಸುತ್ತಲೇ ಬಂದಿತ್ತು. ಸಂಕಿರಣಕ್ಕೆ ಒಂದು ದಿನ ಮುನ್ನವೇ ಬೆಂಗಳೂರಿಗೆ ಬಂದಿದ್ದ ಪಕ್ಷದ ಕೇಂದ್ರ ಸೆಕ್ರಟೇರಿಯಟ್ ಸದಸ್ಯರೂ ಪಾರ್ಟಿಲೈಫ್ ಮಾಸಿಕದ ಸಂಪಾದಕ ಮಂಡಲಿ ಸದಸ್ಯರೂ ಆಗಿದ್ದ ಕಾ. ಎನ್.ಇ. ಬಲರಾಮನ್‌ರವರು ಸಂಕಿರಣದಲ್ಲಿ ಮಂಡಿಸಲಾಗದಿದ್ದ ಅಭಿಪ್ರಾಯಗಳನ್ನು ತಿಳಿದು ಆಶ್ಚರ್ಯ ಚಕಿತರಾಗಿದ್ದರು. ಕೇಂದ್ರದ ನಾಯಕತ್ವವೇ ಒಪ್ಪಿದ್ದರೂ ಪಕ್ಷದ ಸಾಮಾನ್ಯ ಸದಸ್ಯರೂ ರಾಜ್ಯ ಹಾಗೂ ಜಿಲ್ಲಾ ಮಟ್ಟಗಳ ನಾಯಕರೂ ಸೋವಿಯೆಟ್ ಒಕ್ಕೂಟದ ಬೆಳವಣಿಗೆಗಳನ್ನು ವಿರೋಧಿಸುತ್ತಿರುವ ಅಂಶ ಅವರಿಗೆ ಹೊಸದಾಗಿತ್ತು. ಸಂಕಿರಣದಲ್ಲಿ ಹಾಜರಾಗಿ ತಮ್ಮ ಅಭಿಪ್ರಾಯಗಳನ್ನೇನೂ ಅವರು ಮಂಡಿಸಲಿಲ್ಲ. (ಡಾ.ಜಿ.ಆರ್.ರವರು ಬಹುಶಃ ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿರುವ ರಾಷ್ಟ್ರೀಯ ನಾಯಕರು ಇವರೇ ಇರಬಹುದು).

ಈ ಅಂಶಗಳನ್ನೆಲ್ಲಾ ಪರಿಗಣಿಸಿದರೆ ಭಾರತ ಕಮ್ಯುನಿಸ್ಟ್ ಪಕ್ಷದ ನಾಯಕತ್ವವು ತಪ್ಪು ನಿಲುಮೆ ತಳೆದಿದ್ದದ್ದು ಸ್ಪಷ್ಟ. ಡಾ. ಜಿ.ಆರ್. ಈ ಅಂಶಗಳನ್ನೆಲ್ಲಾ ತಮ್ಮ ಪುಸ್ತಕದಲ್ಲಿ ಮುಚ್ಚು ಮರೆಯಿಲ್ಲದೆ ಪ್ರಕಟಿಸಿದ್ದಾರೆ. ನವಕರ್ನಾಟಕ ಪ್ರಕಾಶನವು ಹೊರತಂದ ಗೊರ್ಬಚೆವ್ ನಿಲುಮೆ-

ಪ್ರತಿಪಾದನೆ- ಕಾರ್ಯಕ್ರಮಗಳನ್ನು ಬೆಂಬಲಿಸುವ ಪುಸ್ತಕಗಳು ನಮಗೂ ತಲೆ ಬೇನೆ ತರುತ್ತಿದ್ದ "ಬೂಸಾ" ಸಾಹಿತ್ಯವಾಗಿತ್ತು. ಮಾರ್ಕ್ಸ್‌ವಾದಕ್ಕೆ ದೂರವಾದ - ಅದಕ್ಕೆ ವಿರುದ್ಧವೂ ಆದ ನಿಲುಮೆಗಳನ್ನು ಸೋವಿಯೆಟ್ ಕಮ್ಯುನಿಸ್ಟ್ ಪಕ್ಷವು ಬೆಂಬಲಿಸಿದ್ದ ಅಂಶಗಳನ್ನು ಡಾ. ಜಿ.ಆರ್. ವಿವರಿಸಿದ್ದಾರೆ. **ತಮ್ಮ ಹಳೆಯ ನಿಲುಮೆಗಳು ತಪ್ಪೆನಿಸಿದರೆ ಅದನ್ನು ಸರಿಪಡಿಸಿಕೊಂಡು ಮುನ್ನಡೆಯಬೇಕೇ ಹೊರತು ಮಾರ್ಕೆಟ್ ಮಧ್ಯದಲ್ಲಿ ನಿಂತು ಎದೆ ಬಡಿದುಕೊಳ್ಳುತ್ತಾ ಆತ್ಮಭರ್ತ್ಸನೆಯಲ್ಲಿ ತೊಡಗುವುದು ಸರಿಯಲ್ಲ. ತಪ್ಪು ತಿದ್ದಿಕೊಳ್ಳಲು ವೈಜ್ಞಾನಿಕ-ಮಾರ್ಕ್ಸ್‌ವಾದಿ ದೃಷ್ಟಿಕೋನ ಅಗತ್ಯ. ಆತ್ಮವಿಮರ್ಶೆಯು ಆತ್ಮಭರ್ತ್ಸನೆಯಾಗಬಾರದು** ಎಂದು ಅವರು ಹೇಳಿದ್ದಾರೆ.

ಅತ್ಯಂತ ಪುರಾತನ ಕಾಲದ ಆದಿಮಾನವರ ಕಮ್ಯುನಿಸಂಗಿಂತ ಆನಂತರ ಬಂದ ದಾಸ್ಯ ಪದ್ಧತಿಯು ಚಾರಿತ್ರಿಕವಾಗಿ ಪ್ರಗತಿಪರ ಬೆಳವಣಿಗೆಯಾಗಿತ್ತೆಂಬುದು ಸತ್ಯವೇ ಹೌದು. ಇಂದಿನ ನಮಗೆ ಆ ಪದ್ಧತಿಗೆ ಮರಳುವುದು ಹಿನ್ನಡೆಯೂ ಹೌದು. ಇಂತಹ ವಾಸ್ತವಿಕ ವೈಜ್ಞಾನಿಕ ದೃಷ್ಟಿಯಿಂದ ಸ್ಟಾಲಿನ್, ಬ್ರುಶ್ಚೇವ್ ಅಥವಾ ಬ್ರೆಜ್ನೇವರ ಕಾಲದ ಸಂಸ್ಕೃತಿಯನ್ನು ವಿಮರ್ಶಿಸಿ ಸಮಾಜವಾದಿ ಹಾದಿಯಲ್ಲಿ ಮುನ್ನಡೆಯುವುದು ಸೂಕ್ತವಾಗಿತ್ತೇ ಹೊರತು ಅದನ್ನು ನಾಶಮಾಡುವುದಲ್ಲ. ಆ ದಾರಿ ಹಿಡಿದಿರುವ ಗೊರ್ಬಚೆವ್‌ಗಳನ್ನು (ಎಂದರೆ ಅವರಂಥವರನ್ನು) ವಿರೋಧಿಸಲು ಸೋವಿಯೆತ್ ಕಮ್ಯುನಿಸ್ಟ್ ಪಕ್ಷದಲ್ಲಿ (CPSU) ಉಳಿದಿರುವ, ಮಾರ್ಕ್ಸ್‌ವಾದ ದಲ್ಲಿ ನಂಬಿಕೆ ಇರುವವರೆಲ್ಲ ಮುಂದಾಗಬೇಕು ಎಂದು ಡಾ. ಜಿ.ಆರ್.ರವರು 1989ರಲ್ಲೇ ಅಭಿಪ್ರಾಯಪಟ್ಟಿದ್ದರು. ಒಂದು ಕಾಲದಲ್ಲಿ ಮಾಸ್ಕೋನ್ಯೂಸ್, ನ್ಯೂ ಟೈಮ್ಸ್ ಓಗೊನ್ಯೊಕ್ ಮುಂತಾದ ಪತ್ರಿಕೆಗಳು ಹಳಿ ತಪ್ಪಿರುವುದನ್ನು ಕಂಡು ಪರಿತಪಿಸಿದ್ದರು. ಮಾರ್ಕ್ಸವಾದವನ್ನು ತೊರೆದ ನಂತರ ಸೋವಿಯೆತ್ ಒಕ್ಕೂಟವು ನಮಗೆ ಯಾವ ಸ್ಫೂರ್ತಿ- ಆಕರ್ಷಣೆಗಳನ್ನೂ ನೀಡದು, ಇತರ ಅನೇಕ ಯುರೋಪಿಯನ್ ರಾಷ್ಟ್ರಗಳಂತೆ ಅದೂ ಒಂದಾಗಿದೆ ಅಷ್ಟೆ, ಎಂದು ಅವರು ಉದ್ಗರಿಸಿದ್ದರು.

ಆಂಡ್ರ್ಯೋಗ್ರೊಮ್ಕೋರವರ ಕಾಲದಲ್ಲಿ ಅವರ ಕ್ರಮಗಳಿಂದಲೇ ವಿಶ್ವ ಶೀತಲಯುದ್ಧವು ಪ್ರಾರಂಭವಾಗಿತ್ತೆಂದು ಗೊರ್ಬಚೆವ್ ಆಪಾದಿಸಿದರು. ಅದನ್ನು ಸಿ.ಪಿ.ಐ.ನ ಅಂದಿನ ನಾಯಕ ರಲ್ಲೊಬ್ಬರಾಗಿದ್ದ ಕಾ. ಮೋಹಿತ್‌ಸೇನರೂ ಒಪ್ಪಿದ್ದರು. ಈ ಮುನ್ನ ಈ ಮಹಾನಾಯಕರು ಈ ಬಗ್ಗೆ ಏನೂ ಹೇಳಿರಲೇ ಇಲ್ಲ. ಸೋವಿಯೆತ್ ಒಕ್ಕೂಟದ ಆಯಾಯ ಕಾಲದ ನಾಯಕರುಗಳು ಹೇಳಿದ್ದನ್ನೇ ಸ್ವೀಕರಿಸಿ ಒಪ್ಪಿಕೊಳ್ಳುವ ಮನೋಭಾವವನ್ನು ಇಂತಹ ನಾಯಕರು ರೂಪಿಸಿಕೊಂಡಿದ್ದರು. ಸಿ.ಪಿ.ಎಸ್.ಯು. (CPSU) ಮಾಡುತ್ತಿದ್ದ ತಪ್ಪುಗಳನ್ನು ಖಂಡಿಸಿ ಅವರು ಮಾರ್ಕ್ಸ್‌ವಾದದ ಸರಿದಾರಿ ಹಿಡಿಯುವಂತೆ ಮಾಡುವ ತಮ್ಮ ನೈತಿಕ ಹಕ್ಕನ್ನು ಭಾರತದ ಕಮ್ಯುನಿಸ್ಟರಲ್ಲದೆ, ಎಲ್ಲಾ ದೇಶಗಳ ಕಮ್ಯೂನಿಸ್ಟರೂ ಚಲಾಯಿಸಬೇಕೆಂದು ಗೆಳೆಯ ಜಿ.ಆರ್. ಪ್ರತಿಪಾದಿಸಿದ್ದರು. ಆದರೆ ಬಹುಮಂದಿ ಕಮ್ಯುನಿಸ್ಟ್ ನಾಯಕರು ಗೊರ್ಬಚೆವ್ ವಾದವನ್ನು ಸ್ವಾಗತಿಸಿ, ಅದರ ವಿರೋಧಿಗಳನ್ನು ದೂರದೃಷ್ಟಿಯಿಲ್ಲದ ಕುರುಡು ಸಿದ್ಧಾಂತವಾದಿಗಳೆಂದು

ಹೀಗಳೆದಿದ್ದರು. ಸ್ಟಾಲಿನ್, ಟ್ರಾಟ್‌ಸ್ಕಿಗಳ ಕಾಲದಲ್ಲಿ ವಿಶ್ವದಲ್ಲಿ ಸಮಾಜವಾದಿ ಕ್ರಾಂತಿಯು ಆಗುವ ಪರಿಸ್ಥಿತಿ ಇಲ್ಲದಿದ್ದಾಗ ರಶಿಯಾದಲ್ಲಿ ಮಾತ್ರ ಅದು ಯಶಸ್ವಿಯಾದೀತೆ ಎಂಬ ಪ್ರಶ್ನೆ ಎದ್ದಿತ್ತು. ವಿಶ್ವವು ಕ್ರಾಂತಿಗೆ ತಯಾರಾಗಿಲ್ಲವೆಂದ ಮಾತ್ರಕ್ಕೆ ಒಂದು ರಾಷ್ಟ್ರದಲ್ಲಿ ಅದು ಅಸಾಧ್ಯವೆಂದು ತಳ್ಳಿಹಾಕಲಾಗದೆಂದು ಸ್ಟಾಲಿನ್ ವಾದಿಸಿದ್ದರು: ಪರಿಸ್ಥಿತಿಯು ಪಕ್ವವಾಗಿದ್ದು ಸಮಾಜವಾದ ಸ್ವೀಕರಿಸಲು ಸಿದ್ಧವಾದ ರಾಷ್ಟ್ರವನ್ನು ಬಂಡವಾಳಶಾಹಿಗೆ ಒಪ್ಪಿಸಿ ನಮ್ಮ ಇತಿಹಾಸಿಕ ಜವಾಬ್ದಾರಿಯಿಂದ ನಾವು ನುಣುಚಿಕೊಳ್ಳಲಾಗದೆಂದು ಸ್ಟಾಲಿನ್ ಪ್ರತಿಪಾದಿಸಿದ್ದರು. ಅಂತಹ ನಾಯಕರ ದೃಢತೆಯಿಂದ ಸೋವಿಯೆತ್ ಒಕ್ಕೂಟವು ಅಸ್ತಿತ್ವಕ್ಕೆ ಬಂತು. ಸಮಸ್ತ ವಿಶ್ವದ ಸಮಾಜವಾದಿ ಶಕ್ತಿಗಳಿಗೆ ಸ್ಫೂರ್ತಿ ನೀಡಿತು. ಅನೇಕ ಇತರ ರಾಷ್ಟ್ರಗಳೂ ಸಮಾಜವಾದಿ ಹಾದಿ ಹಿಡಿದವು.

ಆದರೆ ಗೊರ್ಬಚೆವ್‌ರ ನೀತಿ-ನಿಯಮಗಳಿಂದ ಸಮಾಜವಾದದ ಬೇರುಗಳೇ ಅಲುಗಿದವು. ಮಾನವೀಯತೆಯಿಂದಲೇ ಜನಿಸಿದ ಸೋವಿಯೆತ್ ಸಮಾಜವಾದಿ ರಾಷ್ಟ್ರಕ್ಕೆ "ಮಾನವೀಯತೆ" ಯನ್ನು ತುಂಬುವ ಮುಸುಕಿನ ಮರೆಯ ಬಂಡವಾಳಶಾಹಿಯ ಪ್ರತಿಪಾದಕರಾಗಿ ಗೊರ್ಬಚೆವ್-ಎಲ್ಟ್ಸಿನ್ನರು ವಿಜೃಂಭಿಸಿದರು. ಸಮಾಜವಾದದ ನಿಜವಾದ ಪ್ರತಿಪಾದಕರನ್ನು, ಅನುಯಾಯಿಗಳನ್ನು ಹಂಗಿಸಿದರು. ಅಮೆರಿಕದ ಗುಪ್ತಚಾರ ಸಂಸ್ಥೆಯು ಸಾಧಿಸಲಾರದ ಹೀನ ಪ್ರತಿಕ್ರಾಂತಿಯನ್ನು ತಮ್ಮ ದೇಶದಲ್ಲಿ ಯಶಸ್ವಿಯಾಗಿ ಸಾಧಿಸಿ ಮಾನವೀಯ ಸಮಾಜವಾದಿ ಸೋವಿಯೆತ್ ಒಕ್ಕೂಟವನ್ನು ಹಾಳ್ಗೆಡವಿದರು.

ವಿಶ್ವಶಾಂತಿ ಮಂಡಲಿಯು ಸ್ವತಂತ್ರವಾದ ಸಾಮಾಜಿಕ ಕಳಕಳಿಯುಳ್ಳ ಸಂಸ್ಥೆ. ಅಲ್ಲಿನ ಬಹುಮಂದಿ ನಾಯಕರು ಸಮಾಜವಾದದಲ್ಲಿ ನಂಬಿಕೆಯುಳ್ಳ- ಸಾಮ್ರಾಜ್ಯಶಾಹಿ ವಿರೋಧಿಗಳೇ. ಇಂತಹ ವಿಶ್ವಶಾಂತಿ ಮಂಡಲಿಯಲ್ಲೂ ಗೊರ್ಬಚೆವರ ಸಿದ್ಧಾಂತವನ್ನು ಬಿತ್ತುವ ಹೀನ ಕಾರ್ಯವನ್ನು ವ್ಲಾಡಿಮಿರ್ ಬರೆಲ್‌ರಂಥವರು ನಡೆಸಿದರು. ಜೋಲಿಯೆಟ್ ಕ್ಯೂರಿಯವರಂತಹ ಪ್ರಜ್ಞಾವಂತ ದರ್ಶಕರು ನಾಯಕರಾಗಿದ್ದ ಈ ಸಂಸ್ಥೆಯನ್ನು ತಮ್ಮ ಆಟದ ಗೊಂಬೆಯಾಗಿ ಬಳಸಿಕೊಳ್ಳಲು ಬಯಸಿದರು.

ಭಾರತದ ಇಂಡೋ ಸೋವಿಯೆತ್ ಸಾಂಸ್ಕೃತಿಕ ಸಂಘವೂ ಮಣ್ಣು ಮುಕ್ಕಿತು. ಸೋವಿಯೆತ್ ಒಕ್ಕೂಟವೇ ಮಣ್ಣು ಮುಕ್ಕಿದ ಮೇಲೆ ಈ ಸಂಘಟನೆಗೆ ಬೆಲೆ ಏನಿದೆ? ಯೆವ್ಜಿನಿ ಯೆವ್ತುಷೆಂಕೊರವರು "ವರ್ಗದ ಮೌಲ್ಯಕ್ಕಿಂತ" ಮಾನವೀಯ ಮೌಲ್ಯ"ವು ಬಹುಮುಖ್ಯವೆಂದು ಸಂಘದ ಈ ವೇದಿಕೆಗಳಿಂದ ಘೋಷಿಸಿದರು. ಆದರೆ ಕಾರ್ಮಿಕರ "ವರ್ಗಪ್ರಜ್ಞೆ-ವರ್ಗಮೌಲ್ಯ"ದ ಒಳಗೇ ಮಾನವೀಯತೆಯು ಅಂತರ್ಗತವಾಗಿರುವುದು ಈ ಗೊರ್ಬಚೆವ್ ವಾದಿಗೆ ತಿಳಿಯದ್ದಾಯಿತೆ? ವಾಸ್ತವವಾಗಿ ಇದು ಅವರ ತಿಳಿವಳಿಕೆಯ ಪ್ರಶ್ನೆಯಲ್ಲ. ಗೊರ್ಬಚೆವರ ಪ್ರತಿಕ್ರಾಂತಿ ಪ್ರಕ್ರಿಯೆಯನ್ನು ಬೆಂಬಲಿಸುವುದು ಅವರ ಉದ್ದೇಶವಾಗಿತ್ತು ಅಷ್ಟೆ. ಲೆನಿನ್, ಠಾಕೂರ್, ಪ್ರೇಮಚಂದ್, ಗಾರ್ಕಿ ಮುಂತಾದವರ ಕನಸಿನ ನೆಲೆಯಾಗಿದ್ದ ಈ ಸಾಂಸ್ಕೃತಿಕ ಸಂಘವು ಅವನತವಾಯ್ತು.

ಗೊರ್ಬಚೆವ್ ಫೆನೊಮಿನಾದಲ್ಲಿ ಸೆಪ್ಟೆಂಬರ್ 1989ರಿಂದ ಡಿಸೆಂಬರ್ 1991ರವರೆಗೆ

ಡಾ. ಜಿ.ಆರ್.ರವರು ಬರೆದಿದ್ದ ಪತ್ರಗಳು - ಲೇಖನಗಳು ಕ್ರೋಡೀಕೃತವಾಗಿದ್ದು ನಿಷ್ಠುರ ಸತ್ಯದಿಂದ ಕಣ್ತೆರೆಸುವಂತಿವೆ. ಆಗಸ್ಟ್ 24, 1991ರಂದು ರಶಿಯಾದ ಸಮಾಜವಾದಿ ಕ್ರಾಂತಿಯ ಶವಪೆಟ್ಟಿಗೆಗೆ ಮೊಳೆ ಹೊಡೆಯುವ ಸಭೆ ಅಲ್ಲಿನ ಪಾರ್ಲಿಮೆಂಟ್ ಮುಂದೆಯೇ ನಡೆಯಿತು. 'ಅಸಂವಿಧಾನಿಕ ದಂಗೆ''ಯ ವಿರುದ್ಧ ಹೋರಾಡಿ ''ಪ್ರಜಾತಂತ್ರ''ಕ್ಕಾಗಿ ಮಡಿದವರಿಗೆ ಶ್ರದ್ಧಾಂಜಲಿಯನ್ನರ್ಪಿಸುವ ಹೆಸರಿನಲ್ಲಿ ಆ ಸಭೆ ನಡೆದಾಗ ಗೊರ್ಬಚೆವ್- ಎಲ್ಟ್ಸಿನ್ನರುಗಳು ಆ ಸಭೆಯಲ್ಲಿ ಸಂಭ್ರಮದಿಂದ ಭಾಗವಹಿಸಿದರು. ಅಮೆರಿಕದ ರಾಯಭಾರಿ ಸ್ಟ್ರಾಸ್‌ರವರೂ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಅಂದಿನ ಅಮೆರಿಕದ ಅಧ್ಯಕ್ಷ ಬುಷ್‌ರವರಿಗೆ (ಈಗಿನ ಅಧ್ಯಕ್ಷರ ಅಪ್ಪ) ಖುಷಿಯೋ ಖುಷಿಯಾಗಿತ್ತು. ಅದೇ ದಿನ ಕರ್ನಾಟಕದ ಮಣಿಪಾಲದಲ್ಲಿ ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿದ್ದವರು ''ಜಗತ್ತಿನಲ್ಲಿ ಪ್ರಜಾತಂತ್ರವು ಸಶಕ್ತವಾಗಿ ಬೆಳೆಯುತ್ತಿದೆ''ಯೆಂದು ಆನಂದದಿಂದ ಘೋಷಿಸಿದರು. ಈ ಸಂದರ್ಭದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ನಿಲುಮೆಯು ಗೊಂದಲಯವಾಗಿತ್ತು.

ತಾ 8.9.1991ರಲ್ಲಿ ಅಭಿಪ್ರಾಯಗಳು ಸತ್ಯವಾಗಿತ್ತೆಂಬುದು ಕೇವಲ 16 ದಿನಗಳಲ್ಲೇ ಸ್ಪಷ್ಟಗೊಂಡಿತು. ಭಾರತ ಕಮ್ಯುನಿಸ್ಟ್ ಪಕ್ಷವು ತನ್ನ ನಿಲುಮೆಯನ್ನು ಪ್ರಜಾತಾಂತ್ರಿಕವಾಗಿ ಸರಿಪಡಿಸಿಕೊಳ್ಳಲು ಕೆಲವು ತಿಂಗಳುಗಳೇ ಹಿಡಿದವು. ಹೈದರಾಬಾದ್‌ನಲ್ಲಿ ನಡೆದ ಪಕ್ಷದ 15ನೇ ಮಹಾ ಅಧಿವೇಶನಕ್ಕೆಂದು ತಯಾರಿಸಲಾಗಿದ್ದ ಕರಡು ರಾಜಕೀಯ ವರದಿಯನ್ನು ಬೆಂಗಳೂರಿನ ಜಿಲ್ಲಾ ಸಮ್ಮೇಳನವಾಗಲೀ, ಚಿತ್ರದುರ್ಗದಲ್ಲಿ ನಡೆದ ರಾಜ್ಯ ಸಮ್ಮೇಳನವಾಗಲೀ ಸ್ವೀಕರಿಸಲಿಲ್ಲ. ಪೆರೆಸ್ಟ್ರೊಯ್ಕ-ಗ್ಲಾಸ್ನೋಸ್ತ್-ಗೊರ್ಬಚೆವ್ ವಾದಗಳನ್ನೂ-ಅದರ ಬೆಳವಣಿಗೆಗಳನ್ನು ತಿರಸ್ಕರಿಸಿ ರಾಜಕೀಯ ವರದಿಗೆ ಪೂರ್ಣ ತಿದ್ದುಪಡಿ ಅವಶ್ಯಕವೆಂದು ಈ ಸಮ್ಮೇಳನಗಳು ಒತ್ತಾಯಿಸಿದವು. ಏಪ್ರಿಲ್ 1992ರ ವೇಳೆಗೆ ಕೇಂದ್ರದ ನಾಯಕರಿಗೂ ಭ್ರಮನಿರಸನವಾಗಿತ್ತು. ಸೋವಿಯೆತ್ ಸಮಾಜವಾದಿ ಸಮಾಜವೇ ನೆಲಕಚ್ಚಿ ಆರು ತಿಂಗಳಾಗಿತ್ತು. ಗಸ್‌ಹಾಲ್-ಫೀಡಲ್ ಕ್ಯಾಸ್ಟ್ರೋರವರಂತಹ ಕಮ್ಯೂನಿಸ್ಟ್ ನಾಯಕರ ಅಭಿಪ್ರಾಯಗಳೂ ತಮ್ಮ ಪ್ರಭಾವ ಬೀರಿದ್ದವು. ಜೊತೆಗೆ ''ವಾಷಿಂಗ್‌ಟನ್ ಪೋಸ್ಟ್'' ಪತ್ರಿಕೆಯ ಸಂಪಾದಕ ವರ್ಗದವರಲ್ಲೊಬ್ಬರಾದ ಡೇವಿಡ್ ಇಗ್ನೇಷಿಯಸ್‌ರವರು ಬರೆದಿದ್ದ ವಿಷಪೂರಿತ ಲೇಖನಗಳೂ ಪರೋಕ್ಷವಾಗಿ ಕಣ್ತೆರೆಸಿದ್ದವು. ಅಮೆರಿಕದ ಗೂಢಚಾರ ಸಂಸ್ಥೆಯು ಭ್ರಷ್ಟಾಚಾರ-ಕುಟಿಲೋಪಾಯಗಳಿಂದ ಸಾಧಿಸ ಬಯಸಿದ್ದ ಕೆಲಸವು ಸೋವಿಯತ್ ಕಮ್ಯುನಿಸ್ಟ್ ಪಕ್ಷದಿಂದಲೇ ಸುಲಭವಾಗಿ ಆಗಿದ್ದಕ್ಕೆ ಇಗ್ನೇಷಿಯಸ್ ಪರಮಾನಂದ ವ್ಯಕ್ತಪಡಿಸಿದ್ದರು; ಅವರ ಸಂತಸವು ನಮ್ಮ ನಾಯಕರ ಕಣ್ತೆರೆಸಿತು.

ಡಾ.ಜಿ.ಆರ್.ರವರು ತಮ್ಮ ಮಾನವೀಯ - ಪ್ರಾಮಾಣಿಕ ನಿಷ್ಠುರ ನಡವಳಿಕೆಗಳಿಗೆ ಹೆಸರಾದವರು. ಸಮಾಜವಾದಕ್ಕೆ ಅವರ ಬದ್ಧತೆ ಪ್ರಶ್ನಾತೀತವಾದದ್ದು. ಅವರ ಲೇಖನದಲ್ಲಿ ಉಲ್ಲೇಖಿತರಾಗಿರುವ ದಿವಂಗತ ಮೋಹಿತ್‌ಸೇನ್‌ರ ಬಗ್ಗೆ ಎರಡು ಮಾತು ಅವಶ್ಯಕ. ಅವರು ಪ್ರತಿಭಾಶಾಲಿ - ಅದ್ಭುತ ವಾಕ್ಪಟು-ವಿಚಾರಶೀಲರೆಂಬುದೆಲ್ಲ ನೂರಕ್ಕೆ ನೂರು ಪಾಲು ನಿಜ. ಆದರೆ ಸೋವಿಯೆತ್ ಒಕ್ಕೂಟದ ವಿನಾಶಕ್ಕೆ ಕಾರಣರಾದ ನಾಯಕರ ಬಗ್ಗೆ ಅವರಿಗಿದ್ದ

ನಂಬಿಕೆಯು ನಮ್ಮಂಥವರಿಗೆ ಹೇಸಿಗೆ ತರುವ ವಿಷಯವಾಗಿತ್ತು. ಕಮ್ಯುನಿಸ್ಟ್ ಪಕ್ಷವು ಅಧಿಕೃತವಾಗಿ - ಪ್ರಜಾತಾಂತ್ರಿಕವಾಗಿ ತನ್ನ ನಿಲುಮೆಯನ್ನು ತಿದ್ದಿಕೊಂಡರೂ ಅದರ ರಾಷ್ಟ್ರೀಯ ನಾಯಕರಾಗಿದ್ದ ಅವರು ತಿದ್ದಿಕೊಳ್ಳಲಿಲ್ಲ. ಪಕ್ಷವನ್ನೇ ತೊರೆದು ಕಾ.ಡಾಂಗೆ ಯವರೊಂದಿಗೆ ಹೊಸ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿದರು. ಇಬ್ಬರೂ ಮಹಾ ಮೇಧಾವಿಗಳೇ. ಆದರೆ ಹಾದಿ ತಪ್ಪಿ ನಡೆದರು. ಇಬ್ಬರೂ ಈಗಿಲ್ಲ. ಅಂತಹ ಅಪ್ರತಿಮ ನಾಯಕರ ಜೀವನದ ಕಡೆಯ ಭಾಗಗಳು ವ್ಯರ್ಥವಾದದ್ದಕ್ಕೆ ತುಂಬಾ ಬೇಸರವಾಗುತ್ತದೆ. ಡಾ. ಜಿ.ಆರ್.ರವರು ಮೋಹಿತ್ ಸೇನ್‌ರ ಬಗ್ಗೆ 'ಹೊಸತು' ತಿಂಗಳ ಪತ್ರಿಕೆಯಲ್ಲಿ ಬರೆದಿರುವ ಲೇಖನದಲ್ಲಿಯೂ ಈ ಭಾವನೆಯು ಸೂಕ್ಷ್ಮವಾಗಿ ವ್ಯಕ್ತವಾಗಿವೆ. ಮೋಹಿತ್‌ಸೇನ್‌ರು ಕಟ್ಟಿದ ಐಕ್ಯ ಕಮ್ಯುನಿಸ್ಟ್ ಪಕ್ಷವೂ ಹಿರಿಯದಾಗಿ ಬೆಳೆಯಲಿಲ್ಲ ಅದರ ತಮಿಳುನಾಡು ಘಟಕವು ಸಿ.ಪಿ.ಐ.ನೊಂದಿಗೆ ವಿಲೀನವಾಯ್ತು ಇದಕ್ಕೆ ಕಾ. ಮೋಹಿತ್ ಸೇನ್‌ರ ಸಮ್ಮತಿಯೂ ಇತ್ತು. ಆದರೆ ಅವರೇ ಪಕ್ಷಕ್ಕೆ ಮರಳಲಿಲ್ಲ. ರಾಹುಲ್ ಸಾಂಕೃತ್ಯಾಯನರು ತಮ್ಮ ಕಡೆಯ ದಿನಗಳಲ್ಲಿ "ಕಮ್ಯುನಿಸ್ಟನಾಗಿಯೇ ಸಾಯಬಯಸುತ್ತೇನೆ" ಎಂದು ಅಂದಿನ ಪಕ್ಷದ ಪ್ರಧಾನ ಕಾರ್ಯದರ್ಶಿಯವರಲ್ಲಿ ಮನವಿ ಮಾಡಿಕೊಂಡು ಪಕ್ಷಕ್ಕೆ ಮರಳಿದ್ದನ್ನು ಇಲ್ಲಿ ನೆನೆಪಿಸಿಕೊಳ್ಳಬಹುದು.

ಡಾ. ಜಿ.ಆರ್.ರವರು ತಮ್ಮ ಪುಸ್ತಕದಲ್ಲಿ ಅಮೆರಿಕದ ಗೂಢಚಾರ ಸಂಸ್ಥೆಯ ಕುಟಿಲೋಪಾಯಗಳನ್ನು ದಾಖಲೆಗಳೊಂದಿಗೆ ವಿವರಿಸಿದ್ದಾರೆ. ಅಲ್ಲಿನ ಸಾಹಿತ್ಯ ಕ್ಷೇತ್ರದಲ್ಲೂ ಪತ್ರಿಕಾ ಕ್ಷೇತ್ರದಲ್ಲೂ ನೀತಿಗೆಟ್ಟ ಅಬದ್ಧ ಲೇಖನಗಳು ಬರಲು ಆರಂಭವಾದವು. ನಮ್ಮ ಹಿರಿಯ ಕಮ್ಯುನಿಸ್ಟ್ ನೇತಾರ-ಇಸ್ಕಸ್‌ನ ನಾಯಕರಾಗಿದ್ದ ಕಾ . ಹಿರೇನ್ ಮುಖರ್ಜಿಯವರು ಅವುಗಳನ್ನು ಕಚಡ ಸಾಹಿತ್ಯವೆಂದು ಹೀಗಳೆದು ದೂರವಿಡಲು ಕರೆ ನೀಡಿದ್ದರು. ಅಮೆರಿಕದ ಕೆನಡಾದಿಂದ ಪ್ರಕಟವಾಗುತ್ತಿದ್ದ 'ನಾರ್ಥನ್ ಸೈಬರ್' ಒಂದು ಕಾಲದಲ್ಲಿ ನಮಗೆ ಸ್ಫೂರ್ತಿ - ತಿಳಿವಳಿಕೆಗಳನ್ನು ನೀಡುವ ಮಾಸಿಕವಾಗಿತ್ತು. ಆದರೆ ಅದರ ಸಂಪಾದಕ ಡೈಸನ್ ಕಾರ್ತಿಕರೂ ಗೊರ್ಬಚೆವ್ ರೋಗಕ್ಕೆ ತುತ್ತಾದರು. ಅವರ ಪತ್ರಿಕೆ ತನ್ನ ಘನತೆಯನ್ನು ಕಳೆದುಕೊಂಡಿತು.

ಈ ಎಲ್ಲ ಬೆಳವಣಿಗೆಗಳ ಹೇತುವಾದ ಗೊರ್ಬಚೆವ್‌ರಿಗೆ ನೋಬೆಲ್ ಪ್ರಶಸ್ತಿ ಬಂತು. ಇದರಿಂದ ಗೊರ್ಬಚೆವರ ಘನತೆಯೊಂದಿಗೆ ನೊಬೆಲ್ ಪ್ರಶಸ್ತಿಯ ಘನತೆಯೂ ಇಳಿಯಿತು.

ಜಗತ್ತು ಈ ಗೊರ್ಬಚೇವ್ ಸಿದ್ಧಾಂತವನ್ನು ಹೊಗಳುತ್ತಲೇ ಇರುವುದೇ? ಅದರ ಗುಲಾಮರಾಗಿ ಪ್ರಪಂಚವು ಮಾರ್ಪಡುವುದೇ? ಖಂಡಿತ ಇಲ್ಲ. ಅವರ ವಾದವು ಈಗಾಗಲೇ ಮಣ್ಣು ಸೇರಿದೆ. ಅದರ ಪ್ರಶಂಸಕರು ಈಗ ಎಲ್ಲಿದ್ದಾರೆ? ಆದರೆ ಮಾರ್ಕ್ಸ್ ಲೆನಿನ್ನರ ಸಿದ್ಧಾಂತವು ಖಂಡಿತ ಚಿರಾಯುವಾಗಿ ಉಳಿದಿದೆ. ಉಳಿದು, ಬೆಳೆಯಲಿದೆ. ಗೊರ್ಬಚೆವ್ ಸಿದ್ಧಾಂತವು ಅವರು ಬದುಕಿರುವಾಗಲೇ ನೆಗೆದುಬಿದ್ದಿದೆ. ಅವರು ಅಥವಾ ಎಲ್ಟ್ಸಿನ್ನರು ಬದುಕಿದ್ದರೂ ಅವರ ಬಗ್ಗೆ ವಿಚಾರಿಸುವ ಕಾಳಜಿ ಯಾರಿಗಿದೆ? ಅವರ ಮಿತ್ರರಿಗೇ ಇಲ್ಲ! ಶತ್ರುಗಳಿಗಂತೂ ಇಲ್ಲವೇ ಇಲ್ಲ. ಸಮಾಜವಾದೀ ಸಮಾಜವನ್ನು ಪಾಳ್ಗೆಡವಿದ ಈ ನೀಚರುಗಳು ಇತಿಹಾಸವಲ್ಲಿ ಅತ್ಯಂತ ಹೀನ-ಅಗೌರವಯುಕ್ತ ಸ್ಥಾನಕ್ಕೆ ತಳ್ಳಲ್ಪಡುವುದು ಖಂಡಿತ.

ಡಾ. ಜಿ.ಆರ್.ರವರು ಹಳಿ ತಪ್ಪಿದ ಕಮ್ಯುನಿಸ್ಟ್ ಚಳವಳಿಯನ್ನು ಕಂಡು ಹೇಸಿದ್ದಾರೆ. ಅಂತಹ ಸಂದರ್ಭದಲ್ಲಿಯೂ ವೈಜ್ಞಾನಿಕ-ಸಮಾಜವಾದಿ-ಮಾರ್ಕ್ಸ್‌ವಾದಿ ಪ್ರಜ್ಞೆಯನ್ನುಳಿಸಿ ಕೊಂಡಿದ್ದವರನ್ನು ಕಂಡು ಸಂತಸಪಟ್ಟಿದ್ದಾರೆ. ಪಕ್ಷದ ಮುಖಪತ್ರಗಳೂ ಅವರ ಪರಿವಾರದ ಪ್ರಕಾಶನ ಸಂಸ್ಥೆಗಳೂ ಗೊರ್ಬಚೆವ್ ಸಿದ್ಧಾಂತದ ಬೆಂಬಲಕ್ಕಿದ್ದ ಬಗ್ಗೆ ಪರಿತಪಿಸಿ ಸಂಕಟ ಪಟ್ಟಿದ್ದಾರೆ. ಸೋವಿಯೆತ್ ಒಕ್ಕೂಟದ ರಾಯಭಾರ ಕಚೇರಿಯು ತನ್ನ ಪ್ರಕಟಣೆಗಳನ್ನು ಉಚಿತವಾಗಿ ಕಳುಹಿಸಬಹುದಾದವರ ಪಟ್ಟಿಯನ್ನು ಕೇಳಿದಾಗ ಜಿ.ಆರ್.ರವರು ಇಂತಹ ಪ್ರಕಟಣೆಗಳ ಉಚಿತ ಸರಬರಾಜು ಅನವಶ್ಯಕವೆಂದು ತಾಳ್ಮೆಯಿಂದಲೇ ರೇಗಿದ್ದಾರೆ. ಈ ಪ್ರಕಟಣೆಗಳೆಲ್ಲ ನಿಂತೇಹೋದದ್ದು ಮುಂದಿನ ಕಥೆ.

1989-91ರ ಅವಧಿಯಲ್ಲಿದ್ದ ಪರಿಸ್ಥಿತಿಯಲ್ಲಿ ಗೊರ್ಬಚೆವರ ಪುನರ್ನವೀಕರಣ-ಪಾರದರ್ಶಕತೆಯ, ಪೊಳ್ಳು ಕ್ರಾಂತಿಯ ಪರವಾದ ನೇತೃತ್ವದ ಪ್ರಕಾಶನ ಸಂಸ್ಥೆಗಳು ಡಾ.ಜಿ.ಆರ್.ರವರ ಲೇಖನಗಳನ್ನು ಪ್ರಕಟಿಸುತ್ತಿರಲಿಲ್ಲ. ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದ ಅವರ ಪತ್ರವನ್ನು ಓದಿ ಸಂತೋಷಪಟ್ಟವರು ನಾವಾದರೂ ಅದನ್ನು ವಿರೋಧಿಸಿ ಹಾರಿಬಿದ್ದವರು ಎಷ್ಟೋ ಮಂದಿ. ಇಂತಹ ಪರಿಸ್ಥಿತಿಯಿದ್ದ ಕಾಲದಲ್ಲಿ ಗೊರ್ಬಚೆವ್ ಫೆನಾಮಿನಾವನ್ನು ತಾವೇ ಸ್ವತಂತ್ರವಾಗಿ ಪ್ರಕಾಶಿಸಿದರು. ಪ್ರಕಾಶನ ಸಂಸ್ಥೆಯ ಹೆಸರು ಮಾ.ಲೆ. ಪ್ರಕಾಶನ. 'ಮಾ' ಅಕ್ಷರವು ಮಾರ್ಕ್ಸ್-ಮಾರ್ಕ್ಸ್‌ವಾದಕ್ಕೆ 'ಲೆ' ಅಕ್ಷರವು ಲೆನಿನ್-ಲೆನಿನ್‌ವಾದಕ್ಕೆ ಸೂಚ್ಯವಾಗಿದೆ. ಮಾರ್ಕ್ಸ್-ಲೆನಿನ್ನರ ಸಿದ್ಧಾಂತಗಳಿಗೆ ತನ್ನ ಬದ್ಧತೆಯನ್ನು ಸೂಚಿಸುವ ಪ್ರಕಾಶನವು ಡಿಸೆಂಬರ್ 21, 1991ರಲ್ಲಿ ಈ ಪುಸ್ತಕವನ್ನು ಮಿತ ಸಂಖ್ಯೆಯಲ್ಲಿ ಪ್ರಕಾಶಿಸಿತು.

ಈ ಪುಸ್ತಕದಲ್ಲಿ ಹೇಳಿರುವ ಅಂಶಗಳು ಈಗ ಕಮ್ಯುನಿಸ್ಟ್ ಪಕ್ಷದಲ್ಲಿ ವಿವಾದಿತ ಅಂಶಗಳಾಗಿ ಉಳಿದಿಲ್ಲ. ಸಮಾಜವಾದಿ ರಾಷ್ಟ್ರವಾಗಿದ್ದು ಎಲ್ಲ ಅಭಿವೃದ್ಧಿಶೀಲ ರಾಷ್ಟ್ರಗಳಿಗೂ ಸ್ಫೂರ್ತಿ - ನೆರವು ನೀಡುತ್ತಿದ್ದ, ನೀಡಬಲ್ಲುದಾಗಿದ್ದ ಸೋವಿಯೆತ್ ಒಕ್ಕೂಟವು ಛಿದ್ರ ಛಿದ್ರವಾಗಿ ಒಡೆದು ಹೋಗಿದೆ. ತಾನೇ ಸ್ವಯಂ ಬಂಡವಾಳಶಾಹಿಯ ಸಕಲ ರೋಗಗಳಿಂದ ನರಳುತ್ತಿದೆ. ವಿಶ್ವದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಕೈಮೇಲಾಗಿ ವಿಶ್ವಶಾಂತಿ ಪರವಾದ ಚಳವಳಿಯು ಕುಂಠಿತ ಗೊಂಡಿದೆ.

ಹಾಗೆಂದು ನಾವು ಎದೆಗುಂದಿ ನಿರಾಶರಾಗಬೇಕಾಗಿಲ್ಲ. ಮಾರ್ಕ್ಸ್-ಲೆನಿನ್ನರ ವಾದಗಳು ಚಿರಾಯು; ವೈಜ್ಞಾನಿಕ ನೆಲೆಗಟ್ಟಿನ ಮೇಲಿರುವ ಈ ಸಿದ್ಧಾಂತಗಳು ತಾತ್ಕಾಲಿಕ ಹಿನ್ನಡೆ ಅನುಭವಿಸಿವೆಯಷ್ಟೆ. ಉಲ್ಬಣಿಸುತ್ತಿರುವ ವಿಶ್ವದ ಎಲ್ಲೆಡೆಯ ಆರ್ಥಿಕ - ಸಾಮಾಜಿಕ ಸಮಸ್ಯೆಗಳಿಗೆ ಉತ್ತರವಿರುವುದು ಈ ಸಿದ್ಧಾಂತಗಳ ಜಾರಿಯಲ್ಲೇ ಸೈ.

ಈ ಅಂಶಗಳನ್ನೆಲ್ಲಾ ಒಂದು ದಶಕದ ಹಿಂದೆಯೇ ಪ್ರತಿಪಾದಿಸಿದ್ದ ಡಾ. ಜಿ.ಆರ್.ರವರ ಈ ಪುಸ್ತಕವು ಅಮೂಲ್ಯ ಐತಿಹಾಸಿಕ ದಾಖಲೆಯಾಗಿ ಉಳಿಯಲಿದೆ.

❑

ಡಾ. ಜಿ.ಆರ್. ಅವರು ಸಂಪಾದಿಸಿದ ಆಂಗ್ಲಭಾಷಾ ಕೃತಿಗಳು

ಡಾ. ಕೆ.ಎಲ್. ಗೋಪಾಲಕೃಷ್ಣರಾವ್

ಡಾ. ಜಿ.ಆರ್. ಅವರು ಅನೇಕಾನೇಕ ಅತ್ಯಂತ ಮೌಲ್ಯಯುತ ಸ್ವತಂತ್ರ ಕೃತಿಗಳನ್ನು ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ರಚಿಸಿದ್ದಾರೆ. ಅನೇಕ ಉಪಯುಕ್ತ ಕೃತಿಗಳನ್ನು ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಇವೆಲ್ಲವುಗಳ ಜೊತೆಗೆ ಅವರು ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಹಲವಾರು ಕೃತಿಗಳ ಸಂಪಾದನ ಕಾರ್ಯವನ್ನು ಒಂಟಿಯಾಗಿಯೂ ಮತ್ತು ಇತರ ಕೆಲವರೊಂದಿಗೆ ಒಡಗೂಡಿಯೂ ನಿರ್ವಹಿಸಿದ್ದಾರೆ. ಅವರು ಸಂಪಾದಿಸಿದ ಆರು ಇಂಗ್ಲಿಷ್ ಕೃತಿಗಳ ಸ್ಥೂಲ ಪರಿಚಯ ಮಾಡಿ ಕೊಡುವುದು ಈ ಲೇಖನದ ಉದ್ದೇಶ.

ಈ ಆರು ಕೃತಿಗಳಲ್ಲೂ ಸಾಮಾನ್ಯವಾಗಿ ಎದ್ದು ಕಾಣುವಂಥ ಒಂದು ಅಂಶವೆಂದರೆ ವಿಷಯ ಗಹನತೆ. ಇವಾವುದರಲ್ಲೂ ಲಘು ಚಿಂತನೆಗೆ ಅವಕಾಶವಿಲ್ಲ. ಎಲ್ಲವೂ ವಿಚಾರ ಪ್ರಚೋದಕವಾದವು, ಪ್ರಗತಿಶೀಲ ವಾದವು. ಎರಡನೆಯದು ಅಚ್ಚುಕಟ್ಟುತನ. ಕೈಕೊಂಡ ಕೆಲಸವನ್ನು ಸಾಧ್ಯವಾದಷ್ಟೂ ಲೋಪರಹಿತವಾಗಿ ಮಾಡಿಮುಗಿಸುವುದು ಜಿ.ಆರ್. ಅವರ ಕಾರ್ಯ ವೈಶಿಷ್ಟ್ಯ. ಎಲ್ಲ ಕೃತಿಗಳಲ್ಲೂ ಅವುಗಳ ಮುಖ್ಯ ವಿಷಯಕ್ಕೆ ಸಂಬಂಧಿಸಿ ಜಿ.ಆರ್. ಅವರ ಪೀಠಿಕೆ ರೂಪದ ಲೇಖನಗಳಿವೆ.

1

ಅವರು ಸಂಪಾದಿಸಿದ ಇತ್ತೀಚೆಗಿನ ಕೃತಿಗಳಲ್ಲೊಂದು ದೇವಿಪ್ರಸಾದ ಚಟ್ಟೋಪಾಧ್ಯಾಯರ "ಮಾರ್ಕ್ಸ್‌ವಾದ ಕುರಿತು ಕೆಲವು ಚಿಂತನೆಗಳು"

(Some Thoughts on Marxism" by Debiprasad Chattopadhyaya) ಎಂಬ ಗ್ರಂಥ. ಇದನ್ನವರು ಶ್ರೀ ಸಂಜಯ್ ಕೆ.ಬಿಸ್ವಾಸ್‌ರೊಡಗೂಡಿ ಸಂಪಾದಿಸಿದ್ದಾರೆ. ಇದು 'ಮಾಲೆ ಪ್ರಕಾಶನ'ದ ಪ್ರಕಟಣೆ. ಪ್ರಕಟಣೆಯ ವರ್ಷ 2002. ಪುಟಗಳು 84, ಬೆಲೆ ರೂ. 60/- ವಿತರಕರು 'ನವಕರ್ನಾಟಕ ಪ್ರಕಾಶನ'.

ಇದರಲ್ಲಿ 'ಮಾರ್ಕ್ಸ್‌ವಾದೀ ಭೌತವಾದದ ಕೆಲವು ಸಮಸ್ಯೆಗಳು', 'ಆಧುನಿಕ ಭೌತವಾದ', 'ಮಾರ್ಕ್ಸ್ ಹಾಗೂ ಆಧುನಿಕ ವಿಜ್ಞಾನದ ದಾರ್ಶನಿಕ ಸಮಸ್ಯೆಗಳು ', 'ಯಂತ್ರ ತಂತ್ರಜ್ಞಾನ, ವಿಶ್ವಶಾಂತಿ ಹಾಗೂ ಸಮಕಾಲೀನ ಮಾರ್ಕ್ಸ್‌ವಾದ', 'ಮತಧರ್ಮ ಹಾಗೂ ತತ್ತ್ವಜ್ಞಾನದ ಮೇಲೆ ಡಾರ್ವಿನ್‌ರ ಪ್ರಭಾವ', 'ಕೋಲ್ಕತ್ತದಲ್ಲಿ ವೈಜ್ಞಾನಿಕ ಮನೋಧರ್ಮ', 'ಒಂದು ಧ್ಯೇಯಕ್ಕೆ ಸಂದ ಗೌರವ' ಎಂಬ ಏಳು ಅಧ್ಯಾಯಗಳಿವೆ. ಆರಂಭದ ಪೀಠಿಕಾರೂಪದ ಲೇಖನದಲ್ಲಿ ಸಂಪಾದಕದ್ವಯರು ಪ್ರಸಕ್ತ ಜಗತ್ತಿನಲ್ಲಿ ಅಮೆರಿಕ ಮತ್ತಿತರ ಸಾಮ್ರಾಜ್ಯಶಾಹಿ ದೇಶಗಳ ಯುದ್ಧೋನ್ಮತ್ತ ಕಾರ್ಯಕ್ರಮಗಳಿಂದಾಗಿ ಉಂಟಾಗಿರುವ ಗಂಭೀರ ಪರಿಸ್ಥಿತಿಯ ಅವಲೋಕನ ಮಾಡಿ, ಮತಧರ್ಮದ ಮೊರೆಹೋಗುವಂಥ 'ನವ' ಮಾರ್ಕ್ಸ್‌ವಾದದ ಪರಿಕಲ್ಪನೆಯನ್ನು ವಿಶ್ಲೇಷಿಸಿ, ಧಾರ್ಮಿಕ ನಾಯಕರು ಎಂಥದೇ ನಾಯಕತ್ವ ನೀಡಿದರೂ ಮಾರ್ಕ್ಸ್ ಹೇಳಿದಂತೆ ಮತಧರ್ಮವು 'ಹೃದಯ ರಹಿತ ಜಗತ್ತಿನ ಹೃದಯ'ವಾಗಿ ಜನಸಾಮಾನ್ಯರನ್ನು ಮರುಳು ಗೊಳಿಸುವ ಅಫೀಮಾಗಿ ಇದ್ದುಕೊಂಡೇ ಹೋಗುವುದೆಂಬ ನಿತ್ಯಸತ್ಯವನ್ನು ಪ್ರತಿಪಾದಿಸಿದ್ದಾರೆ. ಮಾರ್ಕ್ಸ್‌ವಾದದ ಬದ್ಧ ಅನುಯಾಯಿಗಳಾಗಿದ್ದ ದೇವಿಪ್ರಸಾದ ಚಟ್ಟೋಪಾಧ್ಯಾಯರ ಈ ಲೇಖನಗಳಲ್ಲೂ ಸಮಕಾಲೀನ ಪರಿಸ್ಥಿತಿಗಳಲ್ಲಿ ಮಾರ್ಕ್ಸ್‌ವಾದದ ಕೆಲವು ಸೈದ್ಧಾಂತಿಕ ಸಮಸ್ಯೆಗಳ ವಿಚಾರ ಮಂಥನ ನಡೆದಿರುವುದನ್ನು ಎತ್ತಿ ತೋರಿಸಿದ್ದಾರೆ.

'ಮಾರ್ಕ್ಸ್‌ವಾದಿ ಭೌತವಾದದ ಕೆಲವು ಸಮಸ್ಯೆಗಳು' ಎಂಬ ಮೊದಲ ಲೇಖನವು ದೇವಿ ಪ್ರಸಾದ ಚಟ್ಟೋಪಾಧ್ಯಾಯರು ನವದೆಹಲಿಯ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದಲ್ಲಿ ಅಖಿಲ ಭಾರತ ತತ್ತ್ವಶಾಸ್ತ್ರ ವಿಚಾರ ಸಂಕಿರಣದಲ್ಲಿ ಓದಿದ ಪ್ರಬಂಧವಾಗಿದೆ. ತತ್ತ್ವಶಾಸ್ತ್ರವು ಪುರಾತನ ಗ್ರೀಕರ ಮಧ್ಯೆ ಪ್ರಕೃತಿಯನ್ನು ಅದು ಇದ್ದಂತೆಯೇ ಕಾಣುವಂಥ ಆದಿಮ ಭೌತವಾದವಾಗಿ ಆರಂಭಗೊಂಡಿತು. ಅನಂತರ ಅದರಲ್ಲಿ ಭ್ರಾಂತಿಪೂರ್ವಕವಾದ ಆಧ್ಯಾತ್ಮಿಕ-ಭಾವನಾದಿ ಮನೋಧರ್ಮ ಬೆಳೆಯಿತು. ಈಗ ವಿಜ್ಞಾನದ ಮಹಾ ಆವಿಷ್ಕರಣೆಗಳ (ಅಂದರೆ, ಜೀವಕೋಶದ, ಶಕ್ತಿ ಪರಿವರ್ತನೆಯ ಹಾಗೂ ಡಾರ್ವಿನ್‌ರ ಜೈವವೈಜ್ಞಾನಿಕ ವಿಕಾಸದ ಆವಿಷ್ಕರಣೆಗಳ) ಫಲವಾಗಿ ಭ್ರಮಾತ್ಮಕ ಭಾವನಾವಾದಕ್ಕೆ ಪ್ರತಿಯಾಗಿ ಆಧುನಿಕ ತತ್ತ್ವಶಾಸ್ತ್ರವು ಪ್ರಕೃತಿಯನ್ನು ಮಾನವ ಸಾಮಾಜಿಕ ಸಂಬಂಧಗಳನ್ನು ಹೊಸ ಉನ್ನತ ಮಟ್ಟದಲ್ಲಿ ನೋಡುವ ಮಾರ್ಗ ಕಂಡುಕೊಂಡಿದೆ ಎಂಬ ಅಂಶವನ್ನು ದೇವಿಪ್ರಸಾದ ಚಟ್ಟೋಪಾಧ್ಯಾಯರು ಎತ್ತಿ ತೋರಿಸಿದ್ದಾರೆ.

ಕೊನೆಯ 'ಒಂದು ಧ್ಯೇಯಕ್ಕೆ ಸಂದ ಗೌರವ' ಎಂಬ ಲೇಖನವು, 1981ರಲ್ಲಿ ಸೋವಿಯೆತ್ ಒಕ್ಕೂಟದ ವಿಜ್ಞಾನಗಳ ಪರಿಷತ್ತು ನೀಡಿದ ಗೌರವ ಸದಸ್ಯತ್ವವನ್ನು ಅಂಗೀಕರಿಸುತ್ತ ದೇವಿಪ್ರಸಾದ

ಚಟ್ಟೋಪಾಧ್ಯಾಯರು ಮಾಡಿದ ಭಾಷಣವಾಗಿದೆ. ಇದು ನನಗೆ ನೀಡುತ್ತಿರುವ ಗೌರವವಾದರೂ ನಾನಿದನ್ನು ಇನ್ನೂ ಹೆಚ್ಚು ಅಪರಿಮಿತವಾಗಿ ಮುಖ್ಯವಾದುದೊಂದಕ್ಕೆ... ಮಾರ್ಕ್ಸ್‌ವಾದ-ಲೆನಿನ್ ವಾದದ ಶಕ್ತಿ ಹಾಗೂ ಅಸ್ಖಲಿತತೆಗಳಲ್ಲಿ ದೃಢವಾದ ಮನೋನಂಬಿಕೆಗೆ... ನೀಡಿದ ಗೌರವವೆಂದೇ ನಾನು ಪರಿಭಾವಿಸುತ್ತೇನೆ, ಎಂದು ದೇವಿಪ್ರಸಾದ ಚಟ್ಟೋಪಾಧ್ಯಾಯರು ಆರಂಭದಲ್ಲೇ ಘೋಷಿಸಿದ್ದಾರೆ. ಭಾಷಣದುದ್ದಕ್ಕೂ ಮಾರ್ಕ್ಸ್‌ವಾದ-ಲೆನಿನ್‌ವಾದವೇ ಅಂತಿಮವಾಗಿ ವಿಜಯಗೊಳ್ಳಲಿದೆಯೆಂಬ ಆಶಾವಾದವನ್ನು ವ್ಯಕ್ತಪಡಿಸಿದ್ದಾರೆ.

2

"ಕಾಣ್ಕೆ ಹಾಗೂ ಪ್ರಜ್ಞಾವಂತಿಕೆ" (ವಿಷನ್ ಅಂಡ್ ವಿಸ್ಡಮ್) ಎಂಬುದು ಜಿ.ಆರ್. ಅವರು ಸಂಪಾದಿಸಿರುವ ಇನ್ನೊಂದು ಗ್ರಂಥ. ಇದು ಮಹೋನ್ನತ ಯೋಗಜ್ಞಾನಿ ಸ್ವಾಮಿ ಕುವಲಯಾನಂದರಿಗೆ ಬಂದ ಹಾಗೂ ಅವರು ಬರೆದ ಪತ್ರಗಳ ಸಂಗ್ರಹ. ಸ್ವಾಮಿ ಕುವಲಯಾ ನಂದರೇ ಸಂಸ್ಥಾಪಿಸಿದ ಕೈವಲ್ಯಧಾಮದ 75ನೆಯ ವಾರ್ಷಿಕೋತ್ಸವ ಸಂದರ್ಭದಲ್ಲಿ, 1999ರಲ್ಲಿ, ಈ ಕೃತಿಯನ್ನು ಹೊರತರಲಾಗಿದೆ. ಸುಮಾರು 138 ಪತ್ರಗಳ ಜೊತೆಗೆ ಹಲವಾರು ಹೃದಯಸ್ಪರ್ಶಿ ಛಾಯಾಚಿತ್ರಗಳನ್ನೂ ಪ್ರಕಟಿಸಲಾಗಿದೆ.

ಆರಂಭದಲ್ಲಿ ಜಿ.ಆರ್. ಅವರು ಆ ಮಹಾಪುರುಷನ ಜೀವನ ಕಾರ್ಯಚಟುವಟಿಕೆಗಳನ್ನು ವಿವರಿಸುವ ಸ್ಥೂಲ ಜೀವನ ಚಿತ್ರಣ ನೀಡಿದ್ದಾರೆ. ಸ್ವತಃ ಸ್ವಾಮಿಗಳ ಮಾರ್ಗದರ್ಶನದಲ್ಲಿ ಮಹಾರಾಷ್ಟ್ರದ ಲೋನಾವ್ಲಾದಲ್ಲಿ ಯೋಗಾಭ್ಯಾಸ, ಸಂಶೋಧನೆಗಳನ್ನು ನಡೆಸುತ್ತ 1962ರಿಂದ 1965ರವರೆಗೆ ಮೂರು ವರ್ಷಗಳ ಕಾಲ ಕಳೆದ ಜಿ.ಆರ್. ಅವರು, ಅನೇಕ ವೈಯಕ್ತಿಕ ಅನುಭವಗಳನ್ನೂ ನೆನಪುಗಳನ್ನೂ ದಾಖಲಿಸುತ್ತಾ 14 ಪುಟಗಳ ಈ ಕಿರುಕಥನದಲ್ಲೇ ಆ ಆದರ್ಶ ವ್ಯಕ್ತಿಯ ಬಾಳಿನ ರೂಪುರೇಷೆಗಳನ್ನು ಮನಮುಟ್ಟುವಂತೆ ವರ್ಣಿಸಿದ್ದಾರೆ. 1883ರಲ್ಲಿ ಗುಜರಾತಿನ ದಭೋಯ್ ನಗರದಲ್ಲಿ ಜನಿಸಿದ ಜಗನ್ನಾಥ ಗಣೇಶ ಗುಣೆಯವರು 1923ರಲ್ಲಿ ಅಪ್ಪಯ್ಯ ದೀಕ್ಷಿತರ 'ಕುವಲಯಾನಂದ' ಗ್ರಂಥ ಅಧ್ಯಯನದಿಂದ ಎಷ್ಟು ಪ್ರಭಾವಿತರಾದರೆಂದರೆ ತಮ್ಮ ಹೆಸರನ್ನೇ ಕುವಲಯಾನಂದ ಎಂದು ಬದಲಿಸಿಕೊಂಡ ವಿಷಯವನ್ನು ತಮಗೆ ತಿಳಿಸಿದುದನ್ನು ಜಿ.ಆರ್. ಇಲ್ಲಿ ನಿರೂಪಿಸಿದ್ದಾರೆ. ಸಂಸ್ಕೃತ ಹಾಗೂ ತತ್ತ್ವಶಾಸ್ತ್ರಾಧ್ಯಯನದಲ್ಲಿ ನಿರತರಾಗಿದ್ದ ಗುಣೆಯವರು ಅರವಿಂದ ಘೋಷ್ ಹಾಗೂ ಬಾಲಗಂಗಾಧರ ತಿಲಕ್‌ರವರ ಪ್ರಭಾವದಡಿ ಸ್ವಾತಂತ್ರ್ಯ ಚಳವಳಿಯಲ್ಲೂ ಭಾಗವಹಿಸಿದ್ದರು. ಅನಂತರ 'ಮಿರ್ಚಿ ಬಾಬಾ' ಎಂದೇ ಪ್ರಸಿದ್ಧರಾಗಿದ್ದ ಯೋಗಿಯಿಂದ ಪ್ರಭಾವಿತರಾಗಿ ಯೋಗಾಭ್ಯಾಸದಲ್ಲಿ ಆಸಕ್ತಿ ತಳೆದರು. ಬರೋಡಾ ಬಳಿಯ ಮಲ್ಸಾರ್‌ನಲ್ಲಿ ಮಾಧವದಾಸ್‌ಜಿಯವರ ಮಾರ್ಗದರ್ಶನದಲ್ಲಿ ಯೋಗ ನೈಪುಣ್ಯತೆ ಪಡೆದರು. ತದನಂತರ ತಮ್ಮ ಇಡೀ ಬಾಳನ್ನು ಯೋಗ ಪ್ರಚಾರಕ್ಕೆ ಮೀಸಲಿಟ್ಟರು. ಯೋಗವು ಭಾರತೀಯ ದರ್ಶನ ಹಾಗೂ ಸಂಸ್ಕೃತಿಯ ಸಾರಸರ್ವಸ್ವ ಎಂದವರು ಭಾವಿಸಿದ್ದರು. 1926ರಲ್ಲಿ ಯೋಗ ಶಿಕ್ಷಣ ನೀಡಲೆಂದೇ 'ಕೈವಲ್ಯಧಾಮ'ವನ್ನು ಸಂಸ್ಥಾಪಿಸಿದರು. 'ಯೋಗ ಮೀಮಾಂಸ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಹೊರತಂದರು. ಯೋಗಾಭ್ಯಾಸದಲ್ಲಿ ವೈಜ್ಞಾನಿಕ

ಸ್ವರೂಪಕ್ಕೆ ಹೆಚ್ಚಿನ ಒತ್ತು ನೀಡಿದ್ದರು. ಪ್ರಯೋಗ ಮಾಡಿ ಖಚಿತವಾದ ಅಂಶಗಳನ್ನಷ್ಟೆ ಅವರು ಮಾನ್ಯ ಮಾಡುತ್ತಿದ್ದರು.

ಸ್ವಾಮಿ ಕುವಲಯಾನಂದರು ಯೋಗದಲ್ಲಿ ಹಾಗೂ ಅದರ ಸಹಾಯದಿಂದ ರೋಗ ಚಿಕಿತ್ಸೆ ನೀಡುವುದರಲ್ಲಿ ತನ್ಮಯರಾಗಿದ್ದರೂ ಇತರ ಸಾಮಾಜಿಕ ವಿಷಯಗಳಲ್ಲೂ ಅವರ ಆಸಕ್ತಿ ಅಪಾರವೇ ಆಗಿತ್ತು. ಅವರ ಬಳಿ ನಾನಾ ವಿಷಯಗಳಿಗೆ ಸಂಬಂಧಿಸಿದ ಭಾರಿ ಗ್ರಂಥಭಂಡಾರವೇ ಇದ್ದಿತು. ಅದರಲ್ಲಿ ಎಂ.ಎನ್. ರಾಯ್, ಸ್ಟಾಲಿನ್, ಲೆನಿನ್, ಕಾರ್ಲ್ ಮಾರ್ಕ್ಸ್ ಕುರಿತ ಗ್ರಂಥಗಳೂ ಇದ್ದವೆಂದರೆ ಅವರ ಜ್ಞಾನವೈಶಾಲ್ಯಕ್ಕೆ ಮತ್ತೇನು ಕುರುಹು ಬೇಕು ಎನ್ನುತ್ತಾರೆ ಡಾ. ಜಿ.ಆರ್.

ಇಷ್ಟೆಲ್ಲ ಜ್ಞಾನಸಂಪನ್ನರಾಗಿದ್ದರೂ ಅವರು ತಿಳಿಯಬೇಕಾದುದು ಇನ್ನೂ ಬೇಕಾದಷ್ಟಿದೆ ಎನ್ನುವಂಥ ವಿನಯಶೀಲರೂ ಆಗಿದ್ದರೆಂಬುದಕ್ಕೆ ಜಿ.ಆರ್. ಒಂದು ನಿದರ್ಶನ ನೀಡುತ್ತಾರೆ. ಒಮ್ಮೆ ಅವರು ವಿಚಾರ ಸಂಕಿರಣವೊಂದನ್ನು ಏರ್ಪಡಿಸಿ ಸ್ವಾಮೀಜಿಯವರನ್ನು ಅದರಲ್ಲಿ ಭಾಗವಹಿಸಲು ಆಹ್ವಾನಿಸಿದರಂತೆ. ವಿಚಾರ ಸಂಕೀರಣದ ವಿಷಯ "ಯೋಗ ನನಗೆ ಏನು ಕಲಿಸಿದೆ" ಎಂದಿತ್ತು. ಕೈ ತುಂಬ ಕೆಲಸವಿದ್ದರೂ ಸ್ವಾಮೀಜಿ ಸಂಕಿರಣದಲ್ಲಿ ಭಾಗವಹಿಸಲು ಒಪ್ಪಿದರಂತೆ. ಆದರೆ ವಿಷಯಕ್ಕೆ ಸಂಬಂಧಿಸಿ ಒಂದು ಬದಲಾವಣೆ ಸೂಚಿಸಿದರಂತೆ. 'ಯೋಗ ನನಗೆ ಏನು ಕಲಿಸಿದೆ' ಎನ್ನುವ ಬದಲು 'ನಾನು ಯೋಗದಿಂದ ಏನು ಕಲಿತೆ' ಎಂದು ಇಟ್ಟುಕೊಳ್ಳಿ ಎಂದು ಸೂಚಿಸಿದರಂತೆ. ಸಣ್ಣ ತಿದ್ದುಪಡಿಯಾದರೂ ಇದು ಅಪಾರ ಮಹತ್ವದ್ದೆಂದು ಜಿ.ಆರ್. ಶ್ಲಾಘಿಸಿದ್ದಾರೆ.

ಸ್ವಾಮಿ ಕುವಲಯಾನಂದರು ದೇಶದೊಳಗಷ್ಟೆ ಅಲ್ಲ ಹೊರದೇಶಗಳಲ್ಲೂ ಖ್ಯಾತನಾಮರಾಗಿದ್ದರೆಂಬುದಕ್ಕೆ ಅವರಿಗೆ ಬಂದಿರುವ ಪತ್ರಗಳ ಕಡೆಗೆ ಒಮ್ಮೆ ದೃಷ್ಟಿ ಹರಿಸಿದರೆ ಸಾಕು ತಿಳಿದುಬರುತ್ತದೆ. ದೇಶದೊಳಗೇ ಮಹಾತ್ಮಗಾಂಧಿ, ಮೋತಿಲಾಲ ನೆಹರೂ, ಮೊರಾರ್ಜಿ ದೇಸಾಯಿ, ಜವಾಹರಲಾಲ ನೆಹರೂ, ಲಾಲಬಹಾದೂರ್ ಶಾಸ್ತ್ರಿ, ಆರ್.ಆರ್. ದಿವಾಕರ್ ರವರಂಥ ಘನತೆವೆತ್ತ ವ್ಯಕ್ತಿಗಳು ಇವರೊಂದಿಗೆ ಯೋಗಾಭ್ಯಾಸ, ಯೋಗ ಚಿಕಿತ್ಸೆಗೆ ಸಂಬಂಧಿಸಿ ಪತ್ರ ವ್ಯವಹಾರ ನಡೆಸಿದ್ದಿದೆ. ಮಹಾತ್ಮ ಗಾಂಧಿಯವರಂತೂ 1927ರಲ್ಲಿ ಆರೋಗ್ಯ ಸುಧಾರಣೆಗಾಗಿ ಬೆಂಗಳೂರು ಬಳಿಯ ನಂದಿ ಬೆಟ್ಟಕ್ಕೆ ಬಂದು ತಂಗಿದ್ದಾಗ ಯೋಗಾಸನಗಳ ಕುರಿತು ಸ್ವಾಮಿ ಕುವಲಯಾನಂದರೊಂದಿಗೆ ನಡೆಸಿದ ಪತ್ರವ್ಯವಹಾರ ಅವರು ಸ್ವಾಮೀಜಿಯವರಲ್ಲಿಟ್ಟಿದ್ದ ವಿಶ್ವಾಸಗೌರವಗಳನ್ನು ಸೂಚಿಸುವುದರ ಜೊತೆಗೆ ಅವರ ಹೆಗ್ಗಳಿಕೆಗೂ ಸಾಕ್ಷಿಯಾಗಿದೆ. ಘಾನಾ, ಆಸ್ಟ್ರೇಲಿಯ, ಅಮೆರಿಕ, ಮೆಕ್ಸಿಕೋ, ಚೆಕೊಸ್ಲವಾಕಿಯಾ, ರಷ್ಯ, ನಾರ್ವೆ ಮುಂತಾದ ದೇಶಗಳಿಂದಲೂ ಸ್ವಾಮೀಜಿಯವರಿಗೆ ನೆರವು ಕೋರಿ ಪತ್ರಗಳು ಬರುತ್ತಿದ್ದವು. ಎಲ್ಲರಿಗೂ ಸ್ವಾಮಿಗಳು ತಕ್ಷಣವೇ ಸೂಕ್ತ ಉತ್ತರ ನೀಡುತ್ತಿದ್ದರು - ಪತ್ರಗಳು ಪ್ರಾಮಾಣಿಕವಾಗಿದ್ದಲ್ಲಿ, ಇಲ್ಲದಿದ್ದರೆ ಕಡೆಗಣಿಸುತ್ತಿದ್ದರು.

1948ರಲ್ಲಿ ಗಾಂಧೀಜಿಯವರ ಕೊಲೆಯಾದಾಗ ಸ್ವಾಮಿ ಕುವಲಯಾನಂದರು ಬಿ.ಜಿ.

ಖೇರ್‌ರವರಿಗೆ ಬರೆದ ಪತ್ರ ಓದಿದವರ ಕಣ್ಣಲ್ಲಿ ನೀರು ಬರಿಸದಿರದು. 'ಆ ಭಯಂಕರ ಸುದ್ದಿ ಕೇಳಿ ನಾನು ದಿಗ್ಭ್ರಾಂತನಾದೆ, ಇಡೀ ರಾತ್ರಿ ಕಣ್ಣೀರು ಸುರಿಸುತ್ತ ಪ್ರಾರ್ಥನೆಯಲ್ಲಿ ಕಳೆದೆ. ಮಹಾರಾಷ್ಟ್ರದ ಬ್ರಾಹ್ಮಣ ಯುವಕನೊಬ್ಬ ಇಂಥ ಘೋರ ಪಾತಕ ಎಸಗಿದ್ದಾನಲ್ಲ. ಮಹಾರಾಷ್ಟ್ರೀಯನಾದ ನಾನು ಹೊರ ಜಗತ್ತಿಗೆ ನನ್ನ ಮುಖ ಹೇಗೆ ತೋರಿಸಲಿ' ಎಂದು ಸ್ವಾಮೀಜಿ ತಮ್ಮ ಪತ್ರದಲ್ಲಿ ದುಃಖ ತೋಡಿಕೊಂಡಿದ್ದಾರೆ.

ಸ್ವಾಮೀಜಿಯವರ ಸಚ್ಚಾರಿತ್ರ್ಯ, ವಿದ್ವತ್ತು, ಕಾಣ್ಕೆ ಮತ್ತು ಪ್ರಜ್ಞಾವಂತಿಕೆಗಳನ್ನು ಎತ್ತಿ ತೋರಿಸುವಂತೆ ಜಿ.ಆರ್. ಅವರು ಶೇಕ್ಸ್‌ಪಿಯರನ, ಮಾತುಗಳನ್ನು ಉದ್ಧರಿಸಿರುವುದು ತುಂಬ ಉಚಿತವಾಗಿದೆ. ಅವರ ಬಾಳು ಸೌಮ್ಯವಾಗಿತ್ತು, ಅವರಲ್ಲಿ ಭೌತಶಕ್ತಿಗಳು ಹೇಗೆ ಮಿಶ್ರಣ ಗೊಂಡಿದ್ದವೆಂದರೆ ಪ್ರಕೃತಿಯೇ ಎದ್ದು ನಿಂತು ಇಡೀ ಜಗತ್ತಿಗೇ ಕೇಳುವಂತೆ ಘೋಷಿಸುತ್ತಿದ್ದಿತು - ನೋಡಿ ಇಲ್ಲಿದ್ದಾನೆ ನೈಜ ಮಾನವ!

3

'ಶೈಕ್ಷಣಿಕ ನೀತಿಯ ಪುನರ್ ನಿರೂಪಣೆ' ಎಂಬುದು ಡಾ. ಜಿ.ಆರ್. ಅವರು 1992ರಲ್ಲಿ ಸಂಪಾದಿಸಿದ ಮುನ್ನೂರು ಪುಟಗಳ ಒಂದು ಬೃಹತ್ ಗ್ರಂಥ. ಇದರಲ್ಲಿ ಸ್ವಾತಂತ್ರ್ಯಾನಂತರ ಭಾರತದಲ್ಲಿ ಕಂಡುಬಂದ ಶೈಕ್ಷಣಿಕ ಪದ್ಧತಿಯ ಬಗೆಗೆ ಹತ್ತೊಂಬತ್ತು ಮಂದಿ ಶಿಕ್ಷಣವೇತ್ತರು ಬರೆದ ವಿಚಾರಪೂರ್ಣ ಲೇಖನಗಳಿವೆ. ಎಲ್ಲವೂ 1986ರಲ್ಲಿ ಪ್ರಕಟವಾದ 'ನವ ಶೈಕ್ಷಣಿಕ ನೀತಿ' ಎಂಬ ನೀತಿಸಂಹಿತೆ ಕುರಿತ ಲೇಖನಗಳಾಗಿವೆ.

ಆರಂಭದಲ್ಲೆ ಸಂಪಾದಕ ಡಾ. ಜಿ.ಆರ್. ಅವರು ಗ್ರಂಥ ಒಳಗೊಂಡಿರುವ ಲೇಖನಗಳ ಒಳನೋಟ ನೀಡಿದ್ದಾರೆ. ಲೇಖನ ಕರ್ತೃಗಳು ಭಾರತ ಸರಕಾರದ 'ನವ ಶೈಕ್ಷಣಿಕ ನೀತಿ - 1986'ರ ವಿವಿಧ ಸ್ವರೂಪಗಳನ್ನು ವಿಶ್ಲೇಷಿಸಿರುವುದರ ಜೊತೆಗೇ ವಿದ್ಯಾಭ್ಯಾಸ ಯಾರಿಗಾಗಿ ಮತ್ತು ಯಾತಕ್ಕಾಗಿ ಎನ್ನುವಂಥ ಹೆಚ್ಚು ಮೂಲಭೂತ ನೆಲೆಗಳಿಂದ ಪ್ರಶ್ನೆಯನ್ನು ನೋಡಲು ಯತ್ನಿಸಿದ್ದಾರೆ. ಹಾಗಾಗಿ ಈ ಲೇಖನಗಳು ಕೇವಲ ತಾತ್ವಿಕ ಚಿಂತನೆಗಳಾಗಿರದೆ ಕ್ರಿಯಾತ್ಮಕವಾಗಿವೆ, ಕಾರ್ಯ ಪ್ರಚೋದಕಗಳಾಗಿವೆ, ಎಂದು ಜಿ.ಆರ್. ಅವರು ಲೇಖನಗಳ ಸಾರ್ವಕಾಲಿಕ ಪ್ರಾಮುಖ್ಯವನ್ನು ಒತ್ತಿ ತಿಳಿಸಿದ್ದಾರೆ.

'ಮಿಥ್ಯೆ, ವ್ಯಾಧಿ, ಪರಿಹಾರ ಕ್ರಮಗಳು' ಎಂಬ ಮೊದಲ ಲೇಖನದಲ್ಲಿ ಡಾ. ಜಿ.ಆರ್. ಶೈಕ್ಷಣಿಕ ನೀತಿಯನ್ನು ಸತತವಾಗಿ ಪುನರ್ರೂಪಿಸುವ ಅಗತ್ಯವನ್ನು ಒತ್ತಿ ಹೇಳಿ, ಆಧುನಿಕ 'ಡೂನ್ ಶಾಲಾ ಪದ್ಧತಿ'ಯಾಗಲೀ, ಪ್ರಾಚೀನ 'ಗುರುಕುಲ ವಿದ್ಯಾಭ್ಯಾಸ ಪದ್ಧತಿ'ಯಾಗಲೀ ಇಂದಿನ ಸಮಸ್ಯೆಗಳಿಗೆ ಪರಿಹಾರ ಒದಗಿಸವು, ಪ್ರತಿಯೊಂದು ದಶಕವೂ ಪ್ರತಿಯೊಂದು ಪೀಳಿಗೆಯೂ ತನ್ನದೇ ಸವಾಲುಗಳನ್ನು, ಪರಿಹಾರಗಳನ್ನೂ ಪಡೆದಿರುತ್ತವೆಂಬ ಅಂಶವನ್ನು ತಿಳಿಸುತ್ತಾರೆ. ಪಾರ್ಲಿಮೆಂಟು ಅನುಮೋದಿಸಿ ಅನೇಕ ಬುದ್ಧಿಜೀವಿಗಳು ಹಾಡಿ ಹೊಗಳಿದರೂ 'ನವ ಶೈಕ್ಷಣಿಕ ನೀತಿ - 1986' ಹಾಗೂ ಅದನ್ನು ಕುರಿತ ಆಚಾರ್ಯ ರಾಮಮೂರ್ತಿ ವರದಿಗಳು ಸಮಸ್ಯೆಯ ಮೇಲುಮೇಲಿನ ಅಂಶಗಳನ್ನಷ್ಟೆ.... ಅನೇಕ ಮಕ್ಕಳು ಶಾಲೆ ಸೇರುತ್ತಿಲ್ಲ, ಸೇರಿದವರೂ

ಮಧ್ಯದಲ್ಲೇ ಬಿಡುತ್ತಿದ್ದಾರೆ, ಪದವೀಧರರ ವ್ಯವಹಾರಜ್ಞಾನ ಅಪಕ್ವ, ಅವರಲ್ಲಿ ಬಹುಪಾಲು ನಿರುದ್ಯೋಗಿಗಳು ಎಂದು ಮುಂತಾದ ಸಾಮಾನ್ಯ ತಿಳಿವಳಿಕೆಯ ಅಂಶಗಳನ್ನಷ್ಟೆ... ನಮೂದಿಸಿವೆಯೇ ಹೊರತು ನಿಜವಾದ ಪರಿಹಾರಗಳನ್ನು ಸೂಚಿಸಿಲ್ಲ ಎಂದು ಜಿ.ಆರ್. ಸ್ಪಷ್ಟಪಡಿಸಿದ್ದಾರೆ.

"ನಮ್ಮ ಪ್ರಾಥಮಿಕ ಶಾಲಾ ಶಿಕ್ಷಣ : ಒಂದು ಕ್ರೂರ ನಗೆಪಾಟಲು" ಎಂಬ ಲೇಖನದಲ್ಲಿ ಪ್ರೊ. ಬಿ.ಸಿ. ರಾಮಚಂದ್ರಶರ್ಮರವರು ಪ್ರಾಥಮಿಕ ಶಾಲಾ ತರಗತಿಗಳಲ್ಲಿ ಇಪ್ಪತ್ತೈದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳಿರಬಾರದು, ಶಾಲಾಧ್ಯಾಪಕರೂ ಪೋಷಕರೂ ಪಠ್ಯ ಪುಸ್ತಕಗಳನ್ನಷ್ಟೇ ಅವಲಂಬಿಸಿರಬಾರದು, ವಾರ್ಷಿಕ ಪರೀಕ್ಷೆಗಳನ್ನು ನಡೆಸಿ ಕೆಲವರು ಉತ್ತೀರ್ಣರೆಂದೂ ಮತ್ತೆ ಕೆಲವರು ಅನುತ್ತೀರ್ಣರೆಂದೂ ಘೋಷಿಸಿ ಅನುತ್ತೀರ್ಣರಾದ ಮಕ್ಕಳನ್ನು ಮುಂದಿನ ತರಗತಿಗಳಿಗೆ ಹೋಗದಂತೆ ತಡೆಹಿಡಿಯುವ ಪದ್ಧತಿ ಅತ್ಯಂತ ಕ್ರೂರವಾದುದು. ಖಾಸಗಿ ಶಾಲೆಗಳಿಗೆ ಅನುಮತಿ ನೀಡಿ ದೇಶದಲ್ಲಿ ಉಳ್ಳವರ-ಇಲ್ಲದವರ ವಿಭಜನೆಯನ್ನು ಗಾಢಗೊಳಿಸಲಾಗಿದೆ, ಸರಕಾರವೇ ಪ್ರತಿಯೊಂದು ಗ್ರಾಮ ಹಾಗೂ ನಗರ ವಿಭಾಗಗಳಲ್ಲೂ ಶಾಲೆಗಳನ್ನು ತೆರೆದು ಮಕ್ಕಳು ಸಮೀಪದ ಶಾಲೆಗೆ ಹೋಗುವಂತೆ ವ್ಯವಸ್ಥೆಗೊಳಿಸಬೇಕು - ಎಂದು ಮುಂತಾದ ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ.

'ಶಾಲಾ ಶಿಕ್ಷಣ ಮತ್ತು ವೈಜ್ಞಾನಿಕ ಮನೋಧರ್ಮ' ಎಂಬ ಲೇಖನದಲ್ಲಿ ಪ್ರೊ. ಎಂ.ಎ. ಸೇತುರಾವ್‌ರವರು, ವೈಚಾರಿಕ ಸದ್ಭಾವ ಹಾಗೂ ಪ್ರಶ್ನೆ ಕೇಳುವ ಹಕ್ಕು ವೈಜ್ಞಾನಿಕ ಮನೋಧರ್ಮದ ಮೂಲಭೂತ ಅಂಶಗಳೆಂದು ವಿವರಿಸಿದ್ದಾರೆ. ಪ್ರಾಚೀನ ಭಾರತದಲ್ಲೂ 'ಚರಕ ಸಂಹಿತೆ'ಯಲ್ಲಿ 'ತರ್ಕವಿಲ್ಲದೆ ಪಡೆದ ಸಿದ್ಧಿ ಯಾದೃಚ್ಛಿಕ ಸಿದ್ಧಿಯಷ್ಟೆ' ಎಂದು ತಿಳಿಸಿರುವುದನ್ನು ಉಲ್ಲೇಖಿಸಿ, ಪ್ರಾಚೀನ ಭಾರತದಲ್ಲಿ ಖಗೋಳ, ಗಣಿತ, ವೈದ್ಯಕೀಯ, ಭೌತ, ರಸಾಯನ, ಲೋಹ ಶಾಸ್ತ್ರಗಳಲ್ಲಿನ ಅಮೋಘ ಸಾಧನೆಗಳಿಗೆ ತರ್ಕಬದ್ಧ ಚಿಂತನೆಯೇ ಮುಖ್ಯ ಕಾರಣವಾಗಿದ್ದಿತೆಂಬ ಅಂಶವನ್ನು ಎತ್ತಿ ತೋರಿಸಿದ್ದಾರೆ. ಶಾಲಾ ಶಿಕ್ಷಣ ನೀತಿಯಲ್ಲಿ ನಮೂದಾಗಿರುವ 'ನೈತಿಕ ಶಿಕ್ಷಣ'ದ ಅಂಶವನ್ನು ಸರಿಯಾಗಿ ಅರ್ಥೈಸದೆ, ಪ್ರಾಥಮಿಕ ಶಾಲೆಗಳಲ್ಲಿ ಧಾರ್ಮಿಕ ಹಾಗೂ ಮೂಢನಂಬಿಕೆಗಳಿಗೂ - ಪವಾಡಗಳಿಗೂ ಒತ್ತು ನೀಡಿ, ಅವೈಜ್ಞಾನಿಕ ವಿಧಾನಗಳಿಗೆ ಚಾಲನೆ ನೀಡುತ್ತಿರುವುದನ್ನು ಖಂಡಿಸಿದ್ದಾರೆ. ಪ್ರೊ. ಸೇತುರಾವ್‌ರವರು, ಶಾಲೆಗಳಲ್ಲಿ ಬೋಧಿಸಿದುದನ್ನಷ್ಟೆ ಬಾಯಿಪಾಠ ಮಾಡಿ ಬಜಾರು ನೋಟ್ಸ್‌ಗಳನ್ನಷ್ಟೆ ಅವಲಂಬಿಸಿಕೊಂಡು ಉತ್ತೀರ್ಣತೆ ಸಾಧಿಸುವ ಇಂದಿನ ಪರೀಕ್ಷಾ ಪದ್ಧತಿಯನ್ನು ಸಾರಾಸಗಟಾಗಿ ತಿರಸ್ಕರಿಸುವಂತೆ ಸಲಹೆ ಮಾಡಿದ್ದಾರೆ. ವೈಜ್ಞಾನಿಕ ಮನೋಧರ್ಮ ಮೂಡಿಸುವಲ್ಲಿ ಮಾಧ್ಯಮಗಳ ಪಾತ್ರವನ್ನೂ ಒತ್ತಿ ಹೇಳಿದ್ದಾರೆ.

ಪ್ರೊ. ಜಿ.ಕೆ. ಗೋವಿಂದರಾಯರು 'ಭಾಷೆ ಹಾಗೂ ಸಾಹಿತ್ಯದ ಅಧ್ಯಯನ' ಎಂಬ ಬಗೆಗೂ ಪ್ರೊ. ಸಿ.ಎನ್. ಮಂಗಳರವರು 'ಮಹಿಳೆಯರ ವಿದ್ಯಾಭ್ಯಾಸ'ದ ಬಗೆಗೂ ಲೇಖನಗಳನ್ನು ಬರೆದಿದ್ದಾರೆ. ಜಸ್ಟಿಸ್ ಈ.ಎಸ್. ವೆಂಕಟರಾಮಯ್ಯನವರು "ಭಾರತದಲ್ಲಿ ಉನ್ನತ ಶಿಕ್ಷಣ - ಕಾನೂನು ಹಾಗೂ ಸಾಮಾಜಿಕ ಸ್ವರೂಪಗಳು" ಎಂಬ ಲೇಖನ ಬರೆದಿದ್ದಾರೆ.

ಮುಕ್ತಾಯ ಲೇಖನದಲ್ಲಿ ಡಾ. ಜಿ.ಆರ್. ಅವರು, ಶಿಕ್ಷಣ ಪದ್ಧತಿಯು ಯಾವುದೇ ನಿರ್ದಿಷ್ಟ ವರ್ಗಕ್ಕೆ ಅನುಕೂಲವಾಗುವಂತೆ ಸೀಮಿತವಾಗಿರದೆ, ಇಡೀ ಸಮಾಜದ ಉನ್ನತಿಗೆ ಕಾರಣ ವಾಗಬೇಕು. ಅದಕ್ಕೆ ಸಾಮಾಜಿಕ ಕ್ರಾಂತಿ ಒಂದು ಅತ್ಯವಶ್ಯ ಉಪಾಧಿ ಎಂದು ತಿಳಿಸಿ, ಸಾಮಾಜಿಕ ಪರಿವರ್ತನೆ ಹಾಗೂ ಮಾನವ ಪರಿವರ್ತನೆಗಳು ದ್ವಂದ್ವಾತ್ಮಕವಾಗಿ ಅಂತರ ಸಂಬಂಧಿತವಾದವು, 'ಪ್ರಕೃತಿಯನ್ನು ಪರಿವರ್ತಿಸುವ ಮೂಲಕ, ಸಮಾಜವನ್ನು ಪರಿವರ್ತಿಸುವ ಮೂಲಕ ಮಾನವ ತನ್ನನ್ನೇ ಪರಿವರ್ತಿಸಿಕೊಳ್ಳುತ್ತಾನೆ' ಎಂಬ ಮಾರ್ಕ್ಸ್‌ರ ನುಡಿಗಳನ್ನು ಉದ್ಧರಿಸಿದ್ದಾರೆ.

4

"ಭಾರತೀಯ ಸಂಸ್ಕೃತಿ ಅಧ್ಯಯನಗಳು" ಎಂಬುದು ಡಾ. ಜಿ.ಆರ್. ಅವರ ಪ್ರಧಾನ ಸಂಪಾದಕತ್ವದಲ್ಲಿ 1986ರಲ್ಲಿ ಪ್ರಕಟವಾದ, ಸಾಹಿತ್ಯ ಶಿರೋಮಣಿ ಪ್ರೊ. ಎಸ್. ರಾಮಚಂದ್ರ ರಾವ್‌ರವರಿಗೆ ಸಮರ್ಪಿತವಾದ, 37 ಲೇಖನಗಳನ್ನುಳ್ಳ ಒಂದು ಪಾಂಡಿತ್ಯಪೂರ್ಣ ಗ್ರಂಥ. ಲೇಖನಗಳು ಸಾಹಿತ್ಯ, ಸೌಂದರ್ಯ ಮೀಮಾಂಸೆ, ಇತಿಹಾಸ, ಮತಧರ್ಮ, ತತ್ತ್ವಜ್ಞಾನ, ವ್ಯಾಕರಣ, ವಿಜ್ಞಾನ, ಪ್ರಾಕ್ತನಶಾಸ್ತ್ರ, ಸಂಗೀತ ಇವೇ ಮುಂತಾದ ನಾನಾ ಸಾಂಸ್ಕೃತಿಕ ವಿಷಯಗಳನ್ನು ಕುರಿತ ಪ್ರಗಲ್ಭ ವಿವೇಚನೆಯಿಂದ ಕೂಡಿವೆ. ಲೇಖನ ಕರ್ತೃಗಳೆಲ್ಲ ಆಯಾ ವಿಷಯದಲ್ಲಿ ಪರಿಣಿತಿ ಪಡೆದ ತಜ್ಞರಾಗಿದ್ದಾರೆ. ಭಾರತೀಯ ವಿದ್ವಾಂಸರಲ್ಲದೆ ಅಮೆರಿಕ, ಹಾಲೆಂಡ್ ಮುಂತಾದ ಅನೇಕ ಹೊರದೇಶಗಳ ವಿದ್ವಾಂಸರು ಇದರಲ್ಲಿ ಲೇಖನಗಳನ್ನು ಬರೆದಿದ್ದಾರೆ.

ಡಾ. ಕೆ. ಕೃಷ್ಣಮೂರ್ತಿಯವರ 'ಸಂಸ್ಕೃತ ಸಾಹಿತ್ಯ ಮತ್ತು ವಿಮರ್ಶೆಯಲ್ಲಿ ಭೂದೃಶ್ಯ', ನ್ಯೂಯಾರ್ಕ್ ವಿಶ್ವವಿದ್ಯಾಲಯದ ತತ್ತ್ವಶಾಸ್ತ್ರ ಪ್ರಾಧ್ಯಾಪಕ ಡೇಲ್ ರಿಯೇಪ್‌ರವರ 'ಭಾರತೀಯ ಕಲೆ ಕುರಿತ ಚಿಂತನೆಗಳು', ಡಾ. ಜಿ. ರಾಮಕೃಷ್ಣರವರ 'ಮತಧರ್ಮ, ವಿಜ್ಞಾನ ಹಾಗೂ ಸಮಾಜ', ಡಾ. ದೇವಿಪ್ರಸಾದ ಚಟ್ಟೋಪಾಧ್ಯಾಯರ 'ವೇದಗಳ ಯುಗದಲ್ಲಿ ವೈಜ್ಞಾನಿಕ ಚಿಂತನೆ', ಎಸ್.ಜಿ. ಸರ್ದೇಸಾಯಿ ಯವರ 'ಹಿಂದುತ್ವದ ವೈಲಕ್ಷಣ್ಯಗಳು' ಡಾ. ಪಿ. ನಾಗರಾಜ ರಾವ್‌ರವರ ''ಭಗವದ್ಗೀತೆಯ ಸಂದೇಶ', ಬಿ.ಕೆ. ಗುರುರಾಜರಾವ್‌ರವರ 'ಭಾರತೀಯ ಕಲೆಯಲ್ಲಿ ಭಗವಾನ್ ಬುದ್ಧ', ಎಂ.ಪಿ.ಎಲ್. ಶಾಸ್ತ್ರಿಗಳ 'ಅದ್ವೈತದಲ್ಲಿ ಸಾಧನ' ಮುಂತಾದ ಲೇಖನಗಳು ಈ ಸಂಗ್ರಹದಲ್ಲಿರುವ ವಿಷಯ ವೈವಿಧ್ಯಕ್ಕೆ ಸಾಕ್ಷಿಯಾಗಿವೆ. ಎಲ್ಲ ಲೇಖನಗಳೂ ಒಟ್ಟಿನಲ್ಲಿ ಭಾರತೀಯ ಸಂಸ್ಕೃತಿಯ ಸಮಗ್ರ ನೋಟ ಒದಗಿಸುತ್ತವೆ.

ಪ್ರಾಚೀನ ಭಾರತದಲ್ಲಿ ವೈಜ್ಞಾನಿಕ ಚಿಂತನೆ ತುಂಬ ಮುನ್ನಡೆ ಸಾಧಿಸಿದ್ದಿತೆಂದು ಹೇಳುವಾಗಲೇ, ಇಂದು ಜಗತ್ತಿನಲ್ಲಿ ವೈಜ್ಞಾನಿಕ ಕ್ಷೇತ್ರದಲ್ಲಿ ಏನೇನು ಸಾಧನೆಗಳನ್ನು ಮಾಡಲಾಗಿದೆಯೋ ಅವೆಲ್ಲ ವೇದಕಾಲದ ಮಹರ್ಷಿಗಳಿಗೆ ತಿಳಿದಿದ್ದವು ಎಂದು ಹೇಳುವುದು ಕೇವಲ ಮೌಢ್ಯತನ ಎಂದು ಹೇಳಿ ಡಾ. ದೇವಿಪ್ರಸಾದ ಚಟ್ಟೋಪಾಧ್ಯಾಯರು ತಮ್ಮ ಲೇಖನದಲ್ಲಿ, ಮಹೇಶ್ ಯೋಗಿಯವರು ಸ್ವಿಟ್ಜರ್ಲೆಂಡಿನಲ್ಲಿ 'ವೈದಿಕ ವಿಶ್ವವಿದ್ಯಾಲಯ'ವನ್ನು ಸ್ಥಾಪಿಸಿ 'ವೈದಿಕ ವಿಜ್ಞಾನ ಕುರಿತ ಪ್ರಥಮ ಐರೋಪ್ಯ ಸಮ್ಮೇಳನ'ವೊಂದನ್ನು ನಡೆಸಿದುದನ್ನು

ಒಂದು ನಗೆಪಾಟಲಿನ ಸಾಹಸ ಎಂದು ವರ್ಣಿಸಿದ್ದಾರೆ. ಭಾರತದ ಪುರಾತನ ಮಹರ್ಷಿಗಳಿಗೆ ಆಧುನಿಕ ವಿಜ್ಞಾನದ ಎಲ್ಲ ಸಾಧನೆಗಳೂ ಆಗಲೇ ತಿಳಿದಿದ್ದಲ್ಲಿ ಅವನ್ನು ಅವರೇಕೆ ಈ ಮೊದಲೇ ಬಹಿರಂಗಪಡಿಸಲಿಲ್ಲ? ಹಾಗೆ ಮಾಡಿದ್ದರೆ ಇಂದಿನ ಬಡಪಾಯಿ ವಿಜ್ಞಾನಿಗಳು ಇಷ್ಟೊಂದು ಹಣ ಹಾಗೂ ಯತ್ನ ಹಾಕಿ ಅವನ್ನು ಮತ್ತೆ ಆವಿಷ್ಕರಿಸುವ ಗೊಡವೆ ತಪ್ಪುತ್ತಿತ್ತು ಎಂದು ಶ್ರೀ ಚಟ್ಟೋಪಾಧ್ಯಾಯರು ಖ್ಯಾತ ಭೌತವಿಜ್ಞಾನಿ ಪಾರ್ಥ ಘೋಷ್‌ರವರ ಮಾತುಗಳನ್ನು ಉದ್ಧರಿಸುತ್ತಾರೆ.

ಎಸ್.ಜಿ. ಸರ್ದೇಸಾಯಿಯವರು 'ಹಿಂದುತ್ವದ ವೈಲಕ್ಷಣ್ಯಗಳು' ಎಂಬ ತಮ್ಮ ಲೇಖನದಲ್ಲಿ 'ಹಿಂದುತ್ವ' (ಹಿಂದೂಯಿಸಂ) ಎಂಬ ಪ್ರಕಲ್ಪನೆಯ ಬಗೆಗೆ ಚಿಂತನೆ ನಡೆಸಿ, ಈ ಪದ ಎಂದು ಮತ್ತು ಹೇಗೆ ಅಸ್ತಿತ್ವಕ್ಕೆ ಬಂದಿತು, ಅದರ ನಿಜವಾದ ಅರ್ಥವೇನು, ಅದರ ಸಾಧಕ ಬಾಧಕಗಳೇನು ಎಂಬುದರ ಬಗೆಗೆ ವಿವೇಚನೆ ನಡೆಸಿದ್ದಾರೆ. 'ಹಿಂದುತ್ವ'ದ ಬಗೆಗೆ ತುಂಬ ಪ್ರಚಾರ ಆಗುತ್ತಿರುವ ಇಂದು ಸರ್ದೇಸಾಯಿಯವರ ಈ ಲೇಖನ ಹಿಂದೂವಾದದ ನೈಜ ಆಂತರಿಕ ವರ್ಗ ಸ್ವರೂಪ ತಿಳಿಯಲು ಮತ್ತು ಅನೇಕ ಸಂಶಯಗಳನ್ನು ನಿವಾರಿಸಲು, ತುಂಬ ಉಪಯುಕ್ತವಾಗಿದೆ.

ಗ್ರಂಥದ ಕೊನೆಯಲ್ಲಿ 'ನಮ್ಮ ಪ್ರಾಧ್ಯಾಪಕರ ಒಂದು ನುಡಿ ಚಿತ್ರ' ಎಂಬ ಲೇಖನವು, ಡಾ. ಜಿ.ಆರ್.ರವರೂ ಇತರ ಕೆಲವು ಮಿತ್ರರೂ ಪ್ರಾಧ್ಯಾಪಕ ಎಸ್. ರಾಮಚಂದ್ರರಾವ್‌ರೊಂದಿಗೆ ನಡೆಸಿದ ಸಂವಾದದ ಸಾರಾಂಶವನ್ನೊಳಗೊಂಡಿದ್ದು, ಆ ಘನ ವಿದ್ವಾಂಸರ ಸುಸಂಸ್ಕೃತ, ಮಾನವೀಯ ಹಾಗೂ ಭವ್ಯ ವ್ಯಕ್ತಿತ್ವವನ್ನು ಚಿತ್ರಿಸುತ್ತದೆ. ಮಾನಸಿಕ ಸಂತೋಷ ನೀಡುವುದೇ ಸಂಸ್ಕೃತಿ. ಲಲಿತ ಕಲೆಗಳು, ಸಾಹಿತ್ಯ, ಪ್ರಾಚೀನ ಶ್ರೇಷ್ಠ ಗ್ರಂಥಗಳು ಇತ್ಯಾದಿಗಳಿಂದ ಅಂತಹ ಮಾನಸಿಕ ಸಂತೋಷ ಲಭಿಸುತ್ತದೆ, ಯಾವುದೇ ಸಮಾಜವೂ ಜನರಿಗೆ ಇಂತಹ ಸಂತೋಷ ನೀಡಲು ಶ್ರಮಿಸಬೇಕು, ಎಂಬ ಸಾಹಿತ್ಯ ಶಿರೋಮಣಿ ಪ್ರಾಧ್ಯಾಪಕ ರಾಮಚಂದ್ರರಾವ್‌ರವರ ಮಾತುಗಳನ್ನು ಡಾ. ಜಿ.ಆರ್. ಉದ್ಧರಿಸಿದ್ದಾರೆ.

5

"ದಕ್ಷಿಣ ಭಾರತದ ಸಾಂಸ್ಕೃತಿಕ ಜ್ಞಾನಕೋಶ" ಎಂಬುದು ಡಾ. ಜಿ.ಆರ್.ರವರು ಶ್ರೀಮತಿ ಎನ್. ಗಾಯತ್ರಿಯವರೊಡಗೂಡಿ ಹಾಗೂ ಸುಪ್ರಸಿದ್ಧ ಮಾರ್ಕ್ಸ್‌ವಾದಿ ತತ್ತ್ವಶಾಸ್ತ್ರಜ್ಞ ಪ್ರೊ. ದೇವಿಪ್ರಸಾದ ಚಟ್ಟೋಪಾಧ್ಯಾಯರ ಸಹಯೋಗದೊಂದಿಗೆ ಸಂಪಾದಿಸಿರುವ, 1983ರಲ್ಲಿ ಕೆ.ಪಿ. ಬಾಗ್ಚಿ ಅಂಡ್ ಕಂಪನಿಯವರು ಕೋಲ್ಕತದಿಂದ ಪ್ರಕಟಿಸಿರುವ, ಒಂದು ಉದ್ಗ್ರಂಥ. ಇದರಲ್ಲಿ ದಕ್ಷಿಣ ಭಾರತದ ಸಂಸ್ಕೃತಿ, ಇತಿಹಾಸ, ಕಲೆ, ಪ್ರಾಕ್ತನ ಶಾಸ್ತ್ರ, ನೃತ್ಯ, ಜಾನಪದ, ಸಾಹಿತ್ಯ, ಸಂಗೀತ, ತತ್ತ್ವಶಾಸ್ತ್ರ, ಮತಧರ್ಮ ಇತ್ಯಾದಿ ನಾನಾ ವಿಷಯಗಳಿಗೆ ಸಂಬಂಧಿಸಿ ಮೂಲ ಆಕರಗಳಿಂದಲೇ ಆಯ್ದ ಮಾಹಿತಿಗಳನ್ನು ಆಂಗ್ಲ ಭಾಷೆಯ ವರ್ಣಮಾಲಾನುಕ್ರಮವಾಗಿ ನೀಡಲಾಗಿದೆ. ಮಾಹಿತಿಗಳು ಆದಷ್ಟೂ ಪ್ರಮಾಣಪೂರಕವಾಗಿರುವಂತೆ ಮಾಡಲು ಸಂಪಾದಕರು ತುಂಬ ಶ್ರಮವಹಿಸಿದ್ದಾರೆ, ಎಚ್ಚರಿಕೆ ತೋರಿದ್ದಾರೆ.

ಇದೊಂದು ಅತ್ಯುಪಯುಕ್ತ ಪರಾಮರ್ಶನ ಗ್ರಂಥ. ದಕ್ಷಿಣ ಭಾರತದ ಕನ್ನಡ, ತೆಲುಗು,

ಮಲಯಾಳಿ ಹಾಗೂ ತಮಿಳು ಭಾಷೆಗಳ ಸಾಹಿತ್ಯಕ್ಕೆ ಮತ್ತು ಸಾಹಿತಿಗಳಿಗೆ ಸಂಬಂಧಿಸಿ ನಿಮಗೆ ವಿವರ ಬೇಕೆ? ಅವು ಇಲ್ಲಿ ಸುಲಭ ಲಭ್ಯ. ಅಂತೆಯೇ ಐತಿಹಾಸಿಕ ಘಟನೆಗಳು, ಧಾರ್ಮಿಕ ಚಳವಳಿಗಳು, ಸ್ಮರಣಾರ್ಹ ಸ್ಥಳಗಳು, ಇವೆಲ್ಲವುಗಳ ಕುರಿತೂ ಅತ್ಯಂತ ಆಸಕ್ತಿಕರವಾದ ಹಾಗೂ ಸಾಮಾನ್ಯರಿಗೆ ತಿಳಿಯದಿರುವಂಥ ಅನೇಕ ಮೌಲ್ಯಯುತ ವಿಷಯಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಹೆಸರಾಂತ ಪ್ರಾಚೀನ ಹಾಗೂ ಆಧುನಿಕ ಸಾಹಿತಿಗಳಲ್ಲದೆ ರಮಣ ಮಹರ್ಷಿ, ಶಂಕರಾಚಾರ್ಯ, ರಾಮಾನುಜ ಹಾಗೂ ಬಸವಣ್ಣನವರಿಂದ ಹಿಡಿದು ಜಿಡ್ಡು ಕೃಷ್ಣಮೂರ್ತಿ, ಇ.ಎಂ.ಎಸ್.ನಂಬೂದರಿಪಾದ್, ಇ.ವಿ. ರಾಮಸ್ವಾಮಿ ನಾಯ್ಕರ್‌ರವರೇ ಮೊದಲಾದ ತತ್ತ್ವವೇತ್ತರು, ರಾಜಕೀಯ ನೇತಾರರು ಹಾಗೂ ಅರ್ಥಶಾಸ್ತ್ರಜ್ಞರವರೆಗೆ ಎಲ್ಲ ರೀತಿಯ ಹೆಸರಾಂತ ವ್ಯಕ್ತಿಗಳ ಬಗೆಗೆ ಮಾಹಿತಿಗಳನ್ನು ನೀಡಲಾಗಿದೆ. ಕಾಂಚಿಪುರಮ್, ಕನ್ಯಾಕುಮಾರಿ, ತಿರುಮಕೂಡ್ಲು ನರಸೀಪುರ ಮುಂತಾದ ಇತಿಹಾಸ ಪ್ರಸಿದ್ಧ ಸ್ಥಳಗಳ ವಿಶಿಷ್ಟ ಲಕ್ಷಣಗಳನ್ನು ತಿಳಿಸಲಾಗಿದೆ. ಕರ್ನಾಟಕ, ತಮಿಳ, ಆಂಧ್ರ ಹಾಗೂ ಕೇರಳ ರಾಜ್ಯಗಳ ಇತಿಹಾಸವನ್ನು ಪ್ರಾಗೈತಿಹಾಸಿಕ ಕಾಲದಿಂದ ಈಚೆಗಿನವರೆಗಿನ ಅತ್ಯಂತ ಸ್ವಾರಸ್ಯಕರ ಅಂಕಿ-ಅಂಶಗಳೊಂದಿಗೆ ವಿವರಿಸಲಾಗಿದೆ. ಕರ್ನಾಟಕವನ್ನು ಒಮ್ಮೆ ಕುಂತಳ ದೇಶ ಎಂದು ಕರೆಯಲಾಗುತ್ತಿತ್ತು. ಅದು ಪುರಾತನ ಈಜಿಪ್ಟ್, ಸುಮೆರ್ ಮತ್ತು ಫಿನೀಷಿಯಾಗಳೊಂದಿಗೆ ಸಂಪರ್ಕ ಬೆಳೆಸಿದ್ದಿತು. ಸಿಂಧೂ ಕಣಿವೆ ನಾಗರಿಕತೆಯ ಅವಶೇಷಗಳಲ್ಲಿ ದೊರೆತ ಕೆಲವು ಪ್ರಶಸ್ತ ಶಿಲೆಗಳು ಮೈಸೂರು ಮತ್ತು ನೀಲಗಿರಿ ಮೂಲದವೆಂದು ಗುರುತಿಸಲಾಗಿದೆ. ಕರ್ನಾಟಕದ ನಾನ್ಯದೇವನು ಕ್ರಿ.ಶ. 889ರಲ್ಲಿ ಇಡೀ ನೇಪಾಳವನ್ನು ಗೆದ್ದು ಕೈವಶಮಾಡಿಕೊಂಡಿದ್ದನೆಂದು ನೇಪಾಳದ 'ಸ್ವಯಂಭು ಪುರಾಣ' ತಿಳಿಸುತ್ತದೆ, ಇವೇ ಮುಂತಾದ ಸ್ವಾರಸ್ಯಕರ ಅಂಶಗಳನ್ನು ಕರ್ನಾಟಕದ ಬಗೆಗೆ ನೀಡಿರುವ ವಿವರಗಳಲ್ಲಿ ಕಾಣಬಹುದಾಗಿದೆ.

ಪಂಪ ರನ್ನರಿಂದ ಹಿಡಿದು ಬಿಎಂಶ್ರೀ, ಬೇಂದ್ರೆ, ಕುವೆಂಪು, ಕಾರಂತರವರೆಗೆ ಕನ್ನಡ ಸಾಹಿತಿಗಳ ಬಗೆಗೆ, ನನ್ನಯ, ಶ್ರೀನಾಥರಿಂದ ಹಿಡಿದು ಗುರುಜಾಡ ಅಪ್ಪಾರಾವ್, ವಿಶ್ವನಾಥ, ಸತ್ಯನಾರಾಯಣ, ಶ್ರೀಶ್ರೀ, ಮಹೀಧರ ರಾಮ ಮೋಹನರಾವ್‌ರವರೆಗೆ ತೆಲುಗು ಸಾಹಿತಿಗಳ ಬಗೆಗೆ, ಸಿಲಪ್ಪದಿಕಾರಮ್ ಕರ್ತೃ ಇಳಂಗೋವಡಿ ಮತ್ತು ಕಂಬನ್‌ರಿಂದ ಹಿಡಿದು ಸುಬ್ರಮಣ್ಯ ಭಾರತಿ, ಅಖಿಲನ್, ಕಣ್ಣದಾಸನ್‌ವರೆಗೆ ತಮಿಳು ಸಾಹಿತಿಗಳ ಬಗೆಗೆ, ವಳ್ಳತ್ತೋಳ್ ಜೋಸೆಫ್ ಮುಂಡಸ್ಸೆರಿ, ಪೊಟ್ಟೆಕ್ಕಾಡ್, ಎಂ.ಟಿ. ವಾಸುದೇವನ್ ನಾಯರ್ ಮುಂತಾದ ಮಲಯಾಳಿ ಸಾಹಿತಿಗಳ ಬಗೆಗೆ ವಿಪುಲ ವಿವರಗಳನ್ನು ಇಲ್ಲಿ ಕಾಣಬಹುದು.

ಅಂತೆಯೇ ದಕ್ಷಿಣ ಭಾರತದ ವಿಶಿಷ್ಟ ಕೊಡುಗೆಯಾದ ಕರ್ನಾಟಕ ಸಂಗೀತದ ಬಗೆಗೂ, ಪುರಂದರ, ತ್ಯಾಗರಾಜ, ಮುತ್ತುಸ್ವಾಮಿ ದೀಕ್ಷಿತರ, ಶ್ಯಾಮಾಶಾಸ್ತ್ರಿ, ಎಂ.ಎಸ್. ಸುಬ್ಬುಲಕ್ಷ್ಮಿ ಮುಂತಾದ ಘನ ಸಂಗೀತ ವಿದ್ವಾಂಸರುಗಳ ಬಗೆಗೂ ಭರತನಾಟ್ಯಮ್, ಕೂಚುಪುಡಿ, ಮೋಹಿನಿ ಆಟ್ಟಮ್ ಇತ್ಯಾದಿ ನೃತ್ಯ ಪ್ರಕಾರಗಳ ಬಗೆಗೂ, ರುಕ್ಮಿಣಿದೇವಿ ಅರುಂಡೇಲ್, ವೈಜಯಂತಿಮಾಲ, ಯು.ಎಸ್. ಕೃಷ್ಣರಾವ್ ಮುಂತಾದ ನೃತ್ಯಪಟುಗಳ ಬಗೆಗೂ, ದಕ್ಷಿಣ ಭಾರತದ ವಿಶಿಷ್ಟ ಜಾನಪದ ಕಲೆ, ನೃತ್ಯ ಹಾಗೂ ಯಕ್ಷಗಾನದ ಬಗೆಗೂ ಈ ಗ್ರಂಥದಲ್ಲಿ ತುಂಬ ಉಪಯುಕ್ತ ವಿವರಗಳನ್ನು ನೀಡಲಾಗಿದೆ. ಕೆ. ವೆಂಕಟಪ್ಪ, ಕೆ.ಕೆ. ಹೆಬ್ಬಾರ್, ಆರ್.ಎಸ್. ನಾಯ್ಡು, ಸೈತಸ್ಲಾವ್ ರೇರಿಖ್,

ಅ.ನ. ಸುಬ್ಬರಾವ್, ಎಸ್.ಜಿ. ವಾಸುದೇವರೇ ಮುಂತಾದ ಚಿತ್ರಕಲಾವಿದರಲ್ಲದೆ, ಗುಬ್ಬಿ ವೀರಣ್ಣ, ಬಿ.ವಿ. ಕಾರಂತ, ಪಿ. ಕಾಳಿಂಗರಾವ್, ಎಂ. ವಿಶ್ವೇಶ್ವರಾಯ, ಕೆ.ಪಿ.ಎಸ್. ಮೆನನ್, ಡಾ.ಎ.ವಿ.ಬಾಳಿಗ ಮುಂತಾದ ಸಾರ್ವಜನಿಕ ಕ್ಷೇತ್ರದಲ್ಲಿ ಹೆಸರಾಂತ ವ್ಯಕ್ತಿಗಳ ಬಗೆಗೂ ಈ ಗ್ರಂಥದಲ್ಲಿ ವಿವರಗಳಿವೆ. ಈ ದೃಷ್ಟಿಯಿಂದ ಇದೊಂದು ವಿಶಿಷ್ಟ ಹಾಗೂ ಅಸದೃಶ ಗ್ರಂಥವಾಗಿದೆ.

6

"ವಿಚಾರಧಾರಾತ್ಮಕ ಚಿಂತನೆಗಳು" (ಮ್ಯೂಸಿಂಗ್ಸ್ ಇನ್ ಐಡಿಯಾಲಜಿ) ಎಂಬುದು ಡಾ.ಜಿ.ಆರ್.ಅವರು ಸಂಜಯ್ ಕೆ. ಬಿಸ್ವಾಸ್‌ರೊಂದಿಗೆ ಸಂಪಾದಿಸಿದ ಒಂದು ವಿಚಾರಪೂರಿತ ವಿಶ್ಲೇಷಣಾತ್ಮಕ ಗ್ರಂಥ. ಮಾರ್ಕ್ಸ್‌ವಾದಿ ತತ್ತ್ವಜ್ಞಾನಿ ದೇವಿಪ್ರಸಾದ ಚಟ್ಟೋಪಾಧ್ಯಾಯರು 1994ರಲ್ಲಿ ನಿಧನರಾದ ನಂತರ ಬಿಟ್ಟು ಹೋಗಿದ್ದ ಹಸ್ತಪ್ರತಿಗಳ ಮಹಾಭಂಡಾರವನ್ನು ಈ ಸಂಪಾದಕದ್ವಯರು ಶೋಧಿಸಿ ಆಯ್ದು ತೆಗೆದ ಕೆಲವು ಅಪ್ರಕಟಿತ ಲೇಖನಗಳ ಸಂಗ್ರಹವಿದು. ಈ ಲೇಖನಗಳು ಅಂತಹ ಅಪೂರ್ವ ವಿಷಯಗಳನ್ನೇನೂ ಒಳಗೊಂಡಿಲ್ಲವಾದರೂ ಇವು ಆ ಜ್ಞಾನಸಂಪನ್ನರ ಅಸಾಧಾರಣ ಚಿಂತನಪ್ರಕೃತಿಗೆ ಒಂದು ಇಣುಕುನೋಟ ಒದಗಿಸುವುವೆಂದು ಸಂಪಾದಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನವಕರ್ನಾಟಕ ಪ್ರಕಾಶನ 2001ರಲ್ಲಿ ಪ್ರಕಟಿಸಿರುವ 120 ಪುಟಗಳ ಈ ಗ್ರಂಥದ ಬೆಲೆ ರೂ. 90/-

ಗ್ರಂಥವು "ಭಾರತೀಯ ಸಾಂಸ್ಕೃತಿಕ ಸಂಪತ್ತಿನಲ್ಲಿ ವಾಸ್ತವಿಕ ವಿಜ್ಞಾನ", "ಪ್ರಾಚೀನ ಭಾರತದಲ್ಲಿ ಗಣಿತಶಾಸ್ತ್ರ", "ಪ್ರಾಚೀನ ಭಾರತದಲ್ಲಿ ಖಗೋಳಶಾಸ್ತ್ರ ಮತ್ತು ಗಣಿತಶಾಸ್ತ್ರ", "ಭಾರತದ ಪಾಲಿಗೆ ಬಂದ ವೈಚಾರಿಕ ಸಂಪತ್ತು, ತಾರ್ಕಿಕ ಹಾಗೂ ಅನುಭವೈಕವಾದಿ ಅಂಶಗಳು", "ಪವಾಡ ಪುರುಷರ ಕುರಿತು", "ಭಾರತದಲ್ಲಿ ಇಂದು ವಿಚಾರಧಾರಾತ್ಮಕ ಸಂಘರ್ಷ", "ಪ್ರಾಚೀನ ಭಾರತದಲ್ಲಿ ವಿಜ್ಞಾನ, ತತ್ತ್ವಜ್ಞಾನ ಹಾಗೂ ಸಮಾಜ" ಎಂಬ ಏಳು ಲೇಖನಗಳನ್ನು ಒಳಗೊಂಡಿದೆ. ಶೀರ್ಷಿಕೆಗಳಿಂದಲೇ ತಿಳಿದುಬರುವಂತೆ ಈ ಲೇಖನಗಳು ಭಾರತೀಯ ವಿಜ್ಞಾನ ಹಾಗೂ ಸಮಾಜದ ಇತಿಹಾಸದಲ್ಲಿನ ಕೆಲವು ಮುಖ್ಯ ಸಮಸ್ಯೆಗಳನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ವಿಶ್ಲೇಷಿಸಿ ಅರ್ಥಮಾಡಿಕೊಳ್ಳಲು ನೆರವಾಗುತ್ತವೆ.

ಆರಂಭದ ಲೇಖನದಲ್ಲೇ ಡಾ. ದೇವಿಪ್ರಸಾದ ಚಟ್ಟೋಪಾಧ್ಯಾಯರು, ಕ್ರಿ.ಶ. 1017 ಹಾಗೂ 1030ರಲ್ಲಿ, ಭಾರತದಲ್ಲಿ ಪ್ರವಾಸ ಕೈಗೊಂಡು ಸಂಸ್ಕೃತ ಕಲಿತು ಭಾರತೀಯ ಶಾಸ್ತ್ರ ಹಾಗೂ ಧಾರ್ಮಿಕ ಗ್ರಂಥಗಳ ಅಧ್ಯಯನ ಮಾಡಿದ್ದ ಪರ್ಷಿಯನ್ ಪ್ರವಾಸಿ ಅಲ್-ಬಿರೂನಿಯು ಭಾರತೀಯ ಖಗೋಳ ವಿಜ್ಞಾನಿ ವರಾಹಮಿಹಿರನ ಚಿಂತನೆಯಲ್ಲಿ ಕಂಡುಬಂದ ವಿರೋಧಾಭಾಸ ವನ್ನು ಎತ್ತಿ ತೋರಿಸಿದುದನ್ನು ವಿಪುಲ ಉಲ್ಲೇಖಗಳೊಂದಿಗೆ ವಿವರಿಸಿದ್ದಾರೆ. ಸೂರ್ಯ ಚಂದ್ರ ಗ್ರಹಣಗಳಿಗೆ ಚಂದ್ರ, ಭೂಮಿಗಳ ನೆರಳೇ ಕಾರಣವೆಂದು ಹೇಳುವಾಗಲೇ ವರಾಹಮಿಹಿರನು ತಲೆತಲಾಂತರಗಳಿಂದ ಜನರು ಗ್ರಹಣಗಳಿಗೆ ರಾಹುವೇ ಕಾರಣನೆಂದು ನಂಬಿದ್ದಾರೆ ಎಂದೂ ತಿಳಿಸಿರುವುದಕ್ಕೆ ಅಂದಿನ ಧಾರ್ಮಿಕ ಒತ್ತಡವೇ ಕಾರಣವಾಗಿದ್ದಿತೆಂದು ಅಲ್-ಬಿರೂನಿ ತನ್ನ ಬರಹಗಳಲ್ಲಿ ಸ್ಪಷ್ಟಪಡಿಸಿದ್ದಾನೆ.

ಇದೇ ರೀತಿ ಪ್ರಾಚೀನ ಭಾರತದ ವೈದ್ಯ ವಿಜ್ಞಾನ ಗ್ರಂಥಗಳಾದ ಚರಕ ಸಂಹಿತ ಹಾಗೂ ಸುಶ್ರುತ ಸಂಹಿತಗಳಲ್ಲಿ ಕಂಡುಬರುವ ವಿರೋಧಾಭಾಸಗಳಿಗೂ ಅಂದಿನ ಧರ್ಮಶಾಸ್ತ್ರಜ್ಞರು ಪ್ರತಿಪಾದಿಸಿ ಜನರು ನಂಬುವಂತೆ ಮಾಡಿದ್ದ ಚಾತುರ್ವರ್ಣ್ಯ ಪದ್ಧತಿ ಹಾಗೂ ಕರ್ಮ ಮತ್ತು ಅದೃಷ್ಟ ಸಿದ್ಧಾಂತಗಳೇ ಕಾರಣವಾಗಿದ್ದವೆಂದು ಪ್ರೊ. ದೇವಿಪ್ರಸಾದ ಚಟ್ಟೋಪಾಧ್ಯಾಯರು ಸ್ಪಷ್ಟಪಡಿಸುತ್ತಾರೆ. ಹಿಂದಷ್ಟೆ ಅಲ್ಲ, ಇಂದೂ, ಎಲ್ಲ ಕಾಲಗಳಲ್ಲೂ ಆಳುವ ವರ್ಗಗಳು ಜನಸಮೂಹಗಳನ್ನು ತಮ್ಮ ಅಂಕೆಯಲ್ಲಿರಿಸಿಕೊಳ್ಳಲು ಅಂಧಶ್ರದ್ಧೆಯನ್ನು ಬಳಸಿಕೊಂಡಿದ್ದಾರೆ ಮತ್ತು ಅಂಧಶ್ರದ್ಧೆಯ ವಿರುದ್ಧ ನಿಂತ ನೈಸರ್ಗಿಕ ವಿಜ್ಞಾನದ ಮುನ್ನಡೆಯನ್ನು ತಡೆಹಿಡಿಯಲು ಯತ್ನಿಸಿದ್ದಾರೆ ಎಂಬ ಅಂಶ ಈ ಲೇಖನದ ಮುಖ್ಯಾಂಶವಾಗಿದೆ.

ಎರಡನೆಯ ಲೇಖನದಲ್ಲಿ, ಪ್ರೊ. ದೇವಿಪ್ರಸಾದ ಚಟ್ಟೋಪಾಧ್ಯಾಯರು ಪ್ರಾಚೀನ ಭಾರತದ ಶುಲ್ಬ ಸೂತ್ರ ಮತ್ತಿತರ ವೇದ ಗ್ರಂಥಗಳಲ್ಲಿ ಇಟ್ಟಿಗೆಗಳಿಗೂ ನಾಗರೀಕರಣಕ್ಕೂ, ಯಜ್ಞಕುಂಡಗಳ ನಿರ್ಮಾಣಕ್ಕೂ ಇರುವ ಉಲ್ಲೇಖಗಳನ್ನು ಗುರುತಿಸಿ ಗಣಿತಶಾಸ್ತ್ರ ಅದರಲ್ಲೂ ವಿಶೇಷವಾಗಿ ರೇಖಾಗಣಿತ, ಸಿಂಧೂ ನಾಗರಿಕತೆ ಕಾಲದಲ್ಲೂ ತದನಂತರದ ವೇದ ಕಾಲದಲ್ಲೂ ಸಾಕಷ್ಟು ಪ್ರಗತಿ ಸಾಧಿಸಿತ್ತೆಂದು ತಿಳಿಸುತ್ತಾರೆ.

ಪ್ರಾಚೀನ ಭಾರತದಲ್ಲಿ ಖಗೋಳಶಾಸ್ತ್ರ ಹಾಗೂ ಗಣಿತಶಾಸ್ತ್ರ ಎಂಬ ಲೇಖನದಲ್ಲಿ ದೇವಿಪ್ರಸಾದ ಚಟ್ಟೋಪಾಧ್ಯಾಯರು ಧಾರ್ಮಿಕ ನಂಬಿಕೆಗಳು ಹೇಗೆ ಗತಕಾಲದಲ್ಲಷ್ಟೆ ಅಲ್ಲ, ಇಂದೂ ವೈಜ್ಞಾನಿಕ ಪ್ರಗತಿಗೆ ಅಡ್ಡ ನಿಂತಿವೆ ಎಂಬುದನ್ನು ಉದಾಹರಣೆಗಳ ಸಹಿತ ವಿವರಿಸಿದ್ದಾರೆ.

ಭಾರತದ ವೈಚಾರಿಕ ಸಂಪತ್ತನ್ನು ಕುರಿತ ಲೇಖನದಲ್ಲಿ ದೇವಿಪ್ರಸಾದ ಚಟ್ಟೋಪಾಧ್ಯಾಯರು ಛಾಂದೋಗ್ಯ ಉಪನಿಷತ್ತಿನಲ್ಲಿ ವ್ಯಕ್ತವಾಗಿರುವಂತೆ ಉದ್ದಾಲಕ ಆರುಣಿಯ (ಗೌತಮ) ವಿಚಾರಗಳನ್ನು ಉಲ್ಲೇಖಿಸಿ ಅವು ಭಾರತದ ಪಾಲಿಗೆ ಬಂದ ತಾರ್ಕಿಕ ಹಾಗೂ ಅನುಭವೈಕವಾದಿ ಅಂಶಗಳ ನಿಧಿ ಎಂದು ವರ್ಣಿಸಿದ್ದಾರೆ. ಇದಕ್ಕೆ ಸಮರ್ಥನೆಯಾಗಿ ಅವರು ಉದ್ದಾಲಕ ಆರುಣಿಯು ತನ್ನ ಮಗ ಶ್ವೇತಕೇತುವಿನ ಪ್ರಶ್ನೆಗಳಿಗೆ ಉತ್ತರಿಸಿ ಹೇಳಿದ ಮಾತುಗಳನ್ನು ಉದ್ಧರಿಸುತ್ತಾರೆ : ಆರಂಭದಲ್ಲಿ, ಮಗು, ಈ ಪ್ರಪಂಚವು 'ಸತ್' (ವಾಸ್ತವ ವಸ್ತು) ಆಗಿದ್ದಿತು. ನಿಜ, ಕೆಲವರು ಹೇಳುತ್ತಾರೆ, 'ಆರಂಭದಲ್ಲಿ ಈ ಪ್ರಪಂಚ 'ಅ-ಸತ್' (ಅವಾಸ್ತವ ವಸ್ತು) ಆಗಿದ್ದಿತು, ಆ ಅವಾಸ್ತವದಿಂದ ವಾಸ್ತವ ಉಂಟಾಯಿತು' ಎಂದು. ಆದರೆ, ಮಗು, ಇದು ಹೇಗೆ ಸಾಧ್ಯ? ಅವಾಸ್ತವದಿಂದ ವಾಸ್ತವ ಉಂಟಾಗುವುದು ಹೇಗೆ ಸಾಧ್ಯ? ತದ್ವಿರುದ್ಧವಾಗಿ ಮಗು, ಆರಂಭದಲ್ಲಿ ಈ ಪ್ರಪಂಚ ಕೇವಲ 'ಸತ್' (ವಾಸ್ತವ) ಆಗಿದ್ದಿತು." ಹೀಗೆ ಉದ್ದಾಲಕ ಭಾರತದ ಪ್ರಪ್ರಥಮ ಭೌತವಾದಿ ಸತ್ಯಾನ್ವೇಷಕನಾದ. ಅವನ ವಿಚಾರಗಳನ್ನಾಧರಿಸಿ ಸಾಂಖ್ಯ ತತ್ತ್ವಜ್ಞಾನ ಬೆಳೆಯಿತು. ಮಾನವನ ಮನಸ್ಸೂ ಅವನು ತಿಂದ ಅನ್ನದ ಅತ್ಯಂತ ಸೂಕ್ಷ್ಮ ಕಣಗಳಿಂದಾದುದು. ಅನ್ನದ ಒರಟಾದ ಭಾಗ ಮಲವಾಗುತ್ತದೆ, ಮಧ್ಯಸ್ಥ ಭಾಗ ಶರೀರದ ಮಾಂಸವಾಗುತ್ತದೆ, ಅತ್ಯಂತ ಸೂಕ್ಷ್ಮವಾದ ಭಾಗ ಮೇಲಕ್ಕೆ ಏರಿ ಮನಸ್ಸಾಗುತ್ತದೆ. ಅಂತೆಯೇ ನೀರನ್ನು ಕುಡಿದಾಗ ಅದರ ಒರಟು ಭಾಗ ಮೂತ್ರವಾಗುತ್ತದೆ, ಮಧ್ಯಸ್ಥ ಭಾಗ ರಕ್ತವಾಗುತ್ತದೆ, ಅತ್ಯಂತ ಸೂಕ್ಷ್ಮ ಭಾಗ

ಮೇಲಕ್ಕೆ ಏರಿ ಪ್ರಾಣವಾಗುತ್ತದೆ. ಬೆಣ್ಣೆ, ತುಪ್ಪ ಇತ್ಯಾದಿಗಳನ್ನು ಸೇವಿಸಿದಾಗ ಉಂಟಾಗುವ ಶಾಖದ ಒರಟಾದ ಭಾಗ ಮೂಳೆಯಾಗುತ್ತದೆ, ಮಧ್ಯಸ್ಥ ಭಾಗ ಮಜ್ಜೆ (ನೆಣ)ಯಾಗುತ್ತದೆ, ಅತ್ಯಂತ ಸೂಕ್ಷ್ಮ ಭಾಗ ಮೇಲಕ್ಕೆ ಏರಿ ವಾಕ್ (ಮಾತು) ಆಗುತ್ತದೆ. ಇಂಥ ಮಾತುಗಳನ್ನು ಉದ್ಧರಿಸಿ ದೇವಿಪ್ರಸಾದ ಚಟ್ಟೋಪಾಧ್ಯಾಯರು, ಕ್ರಿ.ಪೂ. ಸುಮಾರು 8ನೇ ಅಥವಾ 7ನೇ ಶತಮಾನದಲ್ಲಿ ಇದ್ದ ಉದ್ದಾಲಕನು ಈ ಜಗತ್ತಿನ ಬಗೆಗಿದ್ದ ಭಾವನಾತ್ಮಕ-ಪೌರಾಣಿಕ ಕಲ್ಪನೆಗಳನ್ನು ಅಲ್ಲಗಳೆದು ನೈಸರ್ಗಿಕ ಭೌತವಾದಿ ವಿಚಾರಗಳಿಗೆ ಅಸ್ತಿಭಾರ ಹಾಕಿಕೊಟ್ಟನೆಂದು ತಿಳಿಸುತ್ತಾರೆ.

ಪವಾಡ ಪುರುಷರ ಬಗೆಗೆ ಬರೆಯುತ್ತ ಡಾ. ದೇವಿಪ್ರಸಾದ ಚಟ್ಟೋಪಾಧ್ಯಾಯರು, ಬುದ್ಧನ ಕಾಲದ ಒಂದು ಪ್ರಸಂಗವನ್ನು ಉಲ್ಲೇಖಿಸಿ, ಪವಾಡ ಎಸಗುವುದು ಸಾಧ್ಯವೋ ಅಲ್ಲವೋ ಎಂಬುದಕ್ಕಿಂತ ಅದು ಎಷ್ಟು ನೈತಿಕ ಅನ್ನುವುದು ಬಹುಮುಖ್ಯ ಎನ್ನುವ ಅಂಶವನ್ನು ಒತ್ತಿ ತಿಳಿಸುತ್ತಾರೆ.

ಪ್ರಾಚೀನ ಭಾರತದಲ್ಲಿ ವಿಜ್ಞಾನ, ತತ್ತ್ವಜ್ಞಾನ ಹಾಗೂ ಸಮಾಜ ಎಂಬ ಲೇಖನದಲ್ಲಿ, ದೇವಿಪ್ರಸಾದ ಚಟ್ಟೋಪಾಧ್ಯಾಯರು ಆಯುರ್ವೇದದ ಕುರಿತು ಸುದೀರ್ಘ ವಿವೇಚನೆ ನಡೆಸಿದ್ದಾರೆ. ಶರೀರಶಾಸ್ತ್ರಜ್ಞರು ಮತ್ತು ಆಧ್ಯಾತ್ಮವಾದಿಗಳು ಇಬ್ಬರ ಆಸಕ್ತಿಯೂ ಒಂದೇ - 'ಪುರುಷ'. ಆದರೆ ಅವರ ಮನೋಧರ್ಮ ಬೇರೆ ಬೇರೆ. ಆಧ್ಯಾತ್ಮವಾದಿಗಳು ಪುರುಷನ ಶರೀರದ ಒಳಗಿರುವುದೆಂದು ನಂಬಿದ್ದ ಆತ್ಮನ್ ಅಥವಾ ಬ್ರಹ್ಮನ್ ಅನ್ನು ಮನಗಾಣುವುದರಲ್ಲಿ ಆಸಕ್ತರಾಗಿದ್ದರೆ, ಶರೀರಶಾಸ್ತ್ರಜ್ಞರು ಶರೀರದ ರಚನೆಯ ಅಧ್ಯಯನದಲ್ಲಿ ಆಸಕ್ತರಾಗಿರುತ್ತಾರೆ. ಅಂತೆಯೇ ಚರಕ ಸಂಹಿತೆ ಹೇಳುತ್ತದೆ : ಪುರುಷನಿಗೆ ಅಥವಾ ಮನುಷ್ಯನಿಗೆ ಸಂಬಂಧಿಸಿದುದೆಲ್ಲವೂ ಶರೀರವೇ ಆಗಿದೆ. ಸುಶ್ರುತ ಸಂಹಿತೆ ಇನ್ನೂ ಸ್ಪಷ್ಟವಾಗಿ ಹೇಳುತ್ತದೆ: ಪುರುಷ ಎಂದರೆ, ಯಾವ ವಸ್ತುಗಳಿಂದ ಪುರುಷ ಉಂಟಾಗುತ್ತದೋ ಅವು, ಅಂದರೆ ವಿಭಿನ್ನರೂಪಗಳ ವಸ್ತುಗಳು - ಚರ್ಮ, ಮಾಂಸ, ಮೂಳೆ, ರಕ್ತನಾಳ, ನರ ಇತ್ಯಾದಿ - ಎಂದಷ್ಟೆ ತೆಗೆದುಕೊಳ್ಳಬೇಕು.

ಇದು ಆರಂಭಿಕ ಅಪರಿಷ್ಕೃತ ಭೌತವಾದದಂತೆ ತೋರಬಹುದು. ಆದರೂ ಅದು ವರ್ಣಾಶ್ರಮ ಧರ್ಮದ ಬಿಗಿಮುಷ್ಟಿಗೆ ಸಿಕ್ಕಿ ನಜ್ಜುಗುಜ್ಜಾಯಿತು. ದೇವರಿಗೆ ಪರೋಕ್ಷ ಜ್ಞಾನದಲ್ಲಷ್ಟೆ ಆಸಕ್ತಿ, ಪ್ರತ್ಯಕ್ಷ ಜ್ಞಾನದಲ್ಲಲ್ಲ, ಎಂಬ ಆಧ್ಯಾತ್ಮವಾದಿಗಳ ನಂಬಿಕೆಯನ್ನುದ್ಧರಿಸಿ ಜ್ಞಾನ ಜ್ಯೋತಿಯನ್ನು ನಂದಿಸುವುದರಲ್ಲಷ್ಟೆ ಆಧ್ಯಾತ್ಮವಾದಿಗಳ ಆಸಕ್ತಿ ಎಂದು ದೇವಿಪ್ರಸಾದ ಚಟ್ಟೋಪಾಧ್ಯಾಯರು ಎಚ್ಚರಿಕೆಯ ಮಾತುಗಳನ್ನು ಹೇಳುತ್ತಾರೆ.

❑

"ಸ್ವಾತಂತ್ರ್ಯೋತ್ತರ ಭಾರತ ಅವಲೋಕನ 1947-1997" ಮಾಲಿಕೆಯ ಮುನ್ನುಡಿಗಳು

ಎನ್.ಪಿ. ಶಂಕರನಾರಾಯಣರಾವ್

ಜಿ.ಆರ್. ಎಂದು ಪ್ರಖ್ಯಾತರಾಗಿರುವ ಡಾ. ಜಿ. ರಾಮಕೃಷ್ಣ ಅವರ ಹೆಸರು ನನ್ನ ಗಮನಕ್ಕೆ ಬಂದುದು ಸುಮಾರು 20-25 ವರ್ಷಗಳ ಹಿಂದೆ, ಅವರ ವಿದ್ಯಾರ್ಥಿಯೊಬ್ಬರ ಮೂಲಕ. ಆಗ್ಗೆ ನ್ಯಾಷನಲ್ ಕಾಲೇಜಿನಲ್ಲಿ ಓದುತ್ತಿದ್ದ ಬದರಿ ನಾಥರಾವ್ ಅವರು ನನ್ನನ್ನು ಭೇಟಿಯಾದಾಗಲೆಲ್ಲ ಜಿ.ಆರ್. ಅವರ ಪ್ರಸ್ತಾಪ ಮಾಡುತ್ತಿದ್ದರು. ನಾನು ವಿದ್ಯಾರ್ಥಿಯಾಗಿದ್ದಾಗ ಯಾವ ಅಧ್ಯಾಪಕರ ಪ್ರೀತಿ, ಮೆಚ್ಚುಗೆಗಳಿಗೂ ಪಾತ್ರನಾದವನಲ್ಲ; ಇಂದಿಗೂ ನನ್ನ ಮನದಲ್ಲಿ ನಿಂತಿರುವ ಅಧ್ಯಾಪಕರು ಯಾರೂ ಇಲ್ಲ. ಹೀಗಾಗಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಪರಸ್ಪರ ಮೆಚ್ಚಿಕೊಂಡರೆ ನನಗೆ ಆ ಇಬ್ಬರಲ್ಲೂ ಆಶ್ಚರ್ಯ ಮಿಶ್ರಿತ ಕುತೂಹಲ ಹುಟ್ಟುತ್ತದೆ. ನಾನು ಜಿ.ಆರ್. ಅವರ ನೇರ ಪರಿಚಯ ಪಡೆದುದು ನವಕರ್ನಾಟಕ ಪ್ರಕಾಶನದವರ ಮೂಲಕ. ಹಂಪಿ ಕನ್ನಡ ವಿಶ್ವವಿದ್ಯಾಲಯದ "ವಿಜ್ಞಾನ" ಮಾಸ ಪತ್ರಿಕೆಯಲ್ಲಿ ಅವರು ಭಾರತದ ಪ್ರಾಚೀನ ವಿಜ್ಞಾನಿಗಳು ಹಾಗೂ ವಿಜ್ಞಾನವನ್ನು ಕುರಿತು ಬರೆಯುತ್ತಿದ್ದ ಲೇಖನ ಮಾಲೆಯು ಅವರ ವಿದ್ವತ್ತಿನ ಆಳವನ್ನು ಪರಿಚಯಿಸಿತು. ಈಚಿನ ವರ್ಷಗಳಲ್ಲಿ ಅವರು 'ಹೊಸತು' ಮಾಸ ಪತ್ರಿಕೆಯ ಸಂಪಾದಕರಾಗಿ ಬರೆಯುತ್ತಿರುವ ಸಂಪಾದಕೀಯಗಳು, ಯೋಗವನ್ನು ಕುರಿತ ಅವರ ಲೇಖನಗಳು ಹಾಗೂ ಅವೆಲ್ಲಕ್ಕಿಂತಲೂ ಮಿಗಿಲಾಗಿ ತಮ್ಮ ಗುರುಗಳಾದ ಶ್ರೀ ಕುವಲಯಾನಂದರನ್ನು ಕುರಿತು ಬರೆದ ಕೃತಿ ಇವೆಲ್ಲವೂ ಅವರು

ಶಿಷ್ಯರ ಪ್ರೀತಿ, ಮೆಚ್ಚುಗೆಗಳಿಗೆ ಪಾತ್ರರಾದ ಅಧ್ಯಾಪಕರು ಮಾತ್ರವೇ ಅಲ್ಲ, ಅವರು ಬಹುಶ್ರುತರಾದ ವಿದ್ವಾಂಸರೂ ಆಗಿದ್ದಾರೆ ಎಂಬುದನ್ನು ನನಗೆ ಮನದಟ್ಟು ಮಾಡಿದೆ.

ಅವರ ಬಹುಶ್ರುತತೆಗೆ ಇನ್ನೊಂದು ಸಾಕ್ಷಿ ಈ "ಸ್ವಾತಂತ್ರ್ಯೋತ್ತರ ಭಾರತ - ಅವಲೋಕನ 1947-1997" ಮಾಲಿಕೆಯ ಹದಿನಾಲ್ಕು ಪುಸ್ತಕಗಳಿಗೆ ಅವರು ಬರೆದಿರುವ ಮುನ್ನುಡಿಗಳು. 'ನವ ಕರ್ನಾಟಕ ಪ್ರಕಾಶನ'ದವರು ಈ ಮಾಲಿಕೆಯನ್ನು ಯೋಜಿಸಿದಾಗ 'ಜಿ.ಆರ್.' ಅವರೇ ಇಂತಹ ಒಂದು ವೈವಿಧ್ಯಮಯ ವಿಷಯ ವಸ್ತುಗಳನ್ನು ಕುರಿತಾದ, ಭಾರತದ ಸರ್ವತೋಮುಖ ಪ್ರಗತಿಯ ಏಕೈಕ ಉದ್ದೇಶದ ಪುಸ್ತಕ ಮಾಲೆಯ ಪ್ರಧಾನ ಸಂಪಾದಕರಾಗಲು ಸಮರ್ಥರು ಎಂದು ಭಾವಿಸಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ. ನಾನಾ ಕಾರಣಗಳಿಂದ ಈ ಮಾಲಿಕೆಯಲ್ಲಿ ಬರಬೇಕೆಂದು ಯೋಜಿಸಿದ್ದ ಹಲವು ಪುಸ್ತಕಗಳು ಹೊರಬರಲಾಗಲಿಲ್ಲ ಎಂಬುದು ಖೇದದ ಸಂಗತಿ.

* * *

ಇಂತಹ ಅವಲೋಕನವೊಂದರ ಅಗತ್ಯಗಳನ್ನು ಹಾಗೂ ಉದ್ದೇಶಗಳನ್ನು ಕುರಿತಂತೆ ಈ ಮುನ್ನುಡಿಗಳಲ್ಲಿ ಸ್ಪಷ್ಟವಾದ ವಿವರಣೆಗಳಿವೆ. 1997ರಲ್ಲಿ ಪ್ರಕಟವಾದ ಆರರಲ್ಲಿ ಅವು ಸಂಕ್ಷಿಪ್ತವಾಗಿದ್ದು, 1998ರ ಐದು ಹಾಗೂ 1999ರ ಒಂದು ಪ್ರಕಟಣೆಗಳಲ್ಲಿ ಅವು ಸ್ವಲ್ಪ ಹೆಚ್ಚು ವಿಸ್ತಾರವಾಗಿವೆ. ಉಳಿದ ಎರಡು ಪ್ರಕಟಣೆಗಳಲ್ಲಿ ಚುಟುಕಾಗಿವೆ.

1997ರ ಮುನ್ನುಡಿಗಳಲ್ಲಿ ಜಿ.ಆರ್. ಒಂದು ಮಹತ್ವದ ಪ್ರಶ್ನೆಯನ್ನು ಎತ್ತಿದ್ದಾರೆ. ಭಾರತವು ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿ ಐವತ್ತು ವರ್ಷಗಳು ಉರುಳಿಹೋಗಿರುವಾಗ "ಈ ದೀರ್ಘ ಕಾಲದಲ್ಲಿ ನಾವು ಸಾಧಿಸುತ್ತೇವೆಂದು ಬಗೆದದ್ದೆಷ್ಟು ಮತ್ತು ನಿಜಕ್ಕೂ ಸಾಧಿಸಿದ್ದೆಷ್ಟು?" ಎಂದು ಕೇಳಿ ಅಂತಹ ಒಂದು ಪ್ರಶ್ನೆಗೆ ಉತ್ತರವನ್ನು ಪಡೆದುಕೊಳ್ಳುವ ಸಲುವಾಗಿ ಈ ಮಾಲೆಯಲ್ಲಿ ಪ್ರಯತ್ನಿಸಲಾಗಿರುವಂತಹ ಅವಲೋಕನಗಳು ಜರುಗಬೇಕಾದುದರ ಅಗತ್ಯವನ್ನು ಮನದಟ್ಟು ಮಾಡಿಸಿದ್ದಾರೆ. ಹಲವಾರು ಕ್ಷೇತ್ರಗಳಲ್ಲಿ ಆಗಿರುವಷ್ಟು ಸಾಧನೆಯನ್ನು ಮಾನ್ಯ ಮಾಡುತ್ತಲೇ, ಏರುತ್ತಿರುವ ಭ್ರಷ್ಟಾಚಾರ, ಹಿಂಸೆ ಮುಂತಾದ ಪ್ರವೃತ್ತಿಗಳತ್ತಲೂ ನಮ್ಮ ಗಮನ ಸೆಳೆಯುತ್ತಾರೆ. ಅಸ್ಪೃಶ್ಯರ ಮೇಲೆ ದಾಳಿಗಳು, ಮತೀಯ ವೈಮನಸ್ಯಗಳು, ಕಾನೂನನ್ನು ಉಲ್ಲಂಘಿಸಿ ಪಾರಾಗುವುದು ಇಂತಹವೆಲ್ಲ ದಿನ ನಿತ್ಯದ ಸುದ್ದಿಗಳಾಗಿವೆ ಎಂದು ಹೇಳಿ ಇಂತಹವನ್ನೆಲ್ಲಾ ಭಾವುಕರಾಗದೆ ಅರ್ಥ ಮಾಡಿಕೊಳ್ಳಬೇಕಾಗುತ್ತದೆ" ಎನ್ನುತ್ತಾರೆ. ನಾನಾ ಕ್ಷೇತ್ರಗಳಲ್ಲಿನ ಸಾಧನೆ-ವೈಫಲ್ಯಗಳನ್ನು ಕುರಿತ "ಆರೋಗ್ಯಕರ ಚರ್ಚೆಗೆ ಅನುವು ಮಾಡಿ ಕೊಡುವುದು ಈ 'ಸ್ವಾತಂತ್ರ್ಯೋತ್ತರ ಅವಲೋಕನ' ಮಾಲೆಯ ಗುರಿ ಎಂದು ಹೇಳಿದ್ದಾರೆ.

ಈ ಮಾಲೆಯ ಹದಿನಾಲ್ಕು ಪುಸ್ತಕಗಳಿಗೂ ಅನ್ವಯವಾಗುವಂತಹ ಮಾತುಗಳು ಇವು.

1998ರವು ಎಂದು ಕರೆಯಬಹುದಾದ ಆರು ಮುನ್ನುಡಿಗಳಲ್ಲಿ ರಾಜಕೀಯ ಕ್ಷೇತ್ರದ ಅಪರಾಧೀಕರಣ ಪ್ರಮುಖವಾಗಿ ಪ್ರಸ್ತಾಪವಾಗಿದೆ. "ಅಪರಾಧಿಗಳೆಂದು ಘೋಷಿಸಲ್ಪಟ್ಟಿರುವವರು ರಾಜ್ಯ ಮತ್ತು ಕೇಂದ್ರಗಳಲ್ಲಿ ಮಂತ್ರಿಗಳಾಗಿರುವ ಉದಾಹರಣೆಗಳು ನಮ್ಮಲ್ಲಿವೆ. ಶಾಸಕರನ್ನು

ಸಾರಾಸಗಟಾಗಿ ಕೊಂಡು ಅವರನ್ನೆಲ್ಲಾ ಮಂತ್ರಿಗಳನ್ನಾಗಿ ಮಾಡುವ ಪ್ರಸಂಗ ಇತ್ತೀಚೆಗೆ ಮತ್ತೊಮ್ಮೆ ನೋಡಿದ್ದೇವೆ. ತಮ್ಮನ್ನು ತಾವು ಹರಾಜಿಗಿಟ್ಟುಕೊಳ್ಳುವಂತಹ ನೀಚಮಟ್ಟದ ವ್ಯಕ್ತಿಗಳು ರಾಜಕಾರಣಿಗಳಾಗಿ ಜನಸಮುದಾಯದ ಆಶೋತ್ತರಗಳ ಕಡೆ ಗಮನ ಹರಿಸುತ್ತಾರೆಂದು ನಿರೀಕ್ಷಿಸೋಣವೆ? ಸಾಂಸ್ಕೃತಿಕ ಲೋಕದ ಬುದ್ಧಿಜೀವಿಗಳು ಇತರರಿಗೆ ಮಾದರಿಗಳಾಗುತ್ತಾರೆಯೇ ಎಂದರೆ ಅವರಲ್ಲಿ ಉಚ್ಚಸ್ಥಾನದಲ್ಲಿರುವವರು ಸಾರ್ವಜನಿಕ ಆಸ್ತಿಯನ್ನು ಹೇಗಾದರೂ ಲಪಟಾಯಿಸಿ ಖಾಸಗಿಯಾಗಿ ತಮ್ಮದನ್ನಾಗಿಸಿಕೊಳ್ಳಲು ಹೇಸುವುದಿಲ್ಲ" ಈ ರೀತಿಯಲ್ಲಿ ಸಾಂಸ್ಕೃತಿಕ ಹಾಗೂ ನೈತಿಕ ಮಟ್ಟದ ಅವನತಿಯನ್ನು ಜಿ.ಆರ್. ಚಿತ್ರಿಸಿದ್ದಾರೆ. ಇವುಗಳಲ್ಲಿ ಒಂದೇ ಒಂದನ್ನಾದರೂ ನಾವು 'ಅಲ್ಲ' ಎನ್ನಲಾರೆವು.

ಈ ವಿಚಾರದಲ್ಲಿ ಒಂದು ಮಾತು ಅಪ್ರಸ್ತುತವಾಗಲಾರದು ಎಂದು ಭಾವಿಸುತ್ತೇನೆ. ಇಂತಹ ರಾಜಕಾರಣಿಗಳು ಮತ್ತು ಸಾಂಸ್ಕೃತಿಕ ಬುದ್ಧಿಜೀವಿಗಳಿಗೆ ಜಾತಿ, ಮತ, ಮಠ, ಪ್ರದೇಶ, ವ್ಯಕ್ತಿ ಮುಂತಾದ ನಾನಾ ಪರಿಗಣನೆಗಳ ಆಧಾರದ ಮೇಲೆ ಜನ ಬೆಂಬಲ ಮುಂದುವರಿಯುತ್ತದೆ ಹಾಗೂ ಮೇಲಿಂದ ಮೇಲೆ ಅವರೇ ಚುನಾಯಿತರಾಗುತ್ತ ಹೋಗುತ್ತಿದ್ದಾರೆ ಎಂಬುದು ಸಹ ಬಹುತೇಕವಾಗಿ ನಿಜವಲ್ಲವೇ? ಅದೇನೇ ಇದ್ದರೂ ಈ ಎಲ್ಲ ಮುನ್ನುಡಿಗಳ 'ಪೀಠಿಕೆ' ಅಥವಾ 'ಅಸ್ತಿಭಾರ'ದಂತಿರುವ ಈ 2 ಅಥವಾ 3 ಪುಟಗಳು ಎಲ್ಲ ಸಹೃದಯ ದೇಶಪ್ರೇಮಿಗಳ ಹೃದಯಗಳನ್ನು ಹೊಕ್ಕು "ಮುಂದೆ ದಾರಿ ಯಾವುದು?" ಎಂಬ ಪ್ರಶ್ನಾರ್ಥಕ ಚಿಂತನೆಗೆ ಅವರನ್ನು ಹಚ್ಚುವಷ್ಟು ಶಕ್ತಿಶಾಲಿಗಳಾಗಿವೆ.

ಇನ್ನು ಈ ಮುನ್ನುಡಿಗಳು ಆಯಾ ಪುಸ್ತಕಗಳು ಪ್ರಸ್ತಾಪಿಸುವ ವಿವಿಧ ಕ್ಷೇತ್ರಗಳ ಬಗ್ಗೆ ಯಾವ ರೀತಿಯಲ್ಲಿ ಬೆಳಕು ಬೀರಿವೆ ಎಂಬುದನ್ನು ಸಂಕ್ಷಿಪ್ತವಾಗಿ ಪರಿಶೀಲಿಸೋಣ.

* * *

ಸಿ.ಆರ್. ಕೃಷ್ಣರಾವ್ ಬರೆದಿರುವ 'ಅಂತರರಾಷ್ಟ್ರೀಯ ನೆಲೆಯಲ್ಲಿ ಭಾರತ'ವು ಈ ಮಾಲೆಯ ಮೊದಲ ಪುಸ್ತಕ. ಅದರ ಮುನ್ನುಡಿಯಲ್ಲಿ 1946ರಲ್ಲಿ ಇನ್ನೂ ವಿಭಜನೆಯಾಗಿರದಿದ್ದ ಭಾರತದ ತಾತ್ಕಾಲಿಕ ಸರ್ಕಾರದ ಪ್ರಧಾನಿ ಹಾಗೂ ವಿದೇಶಾಂಗ ಸಚಿವರಾಗಿದ್ದ ಜವಹರಲಾಲ್ ನೆಹರು ಪ್ರತಿಪಾದಿಸಿದ ಸ್ವತಂತ್ರ ಭಾರತದ ವಿದೇಶಾಂಗ ನೀತಿಯ ಉದ್ದೇಶ ಹಾಗೂ ಸ್ವರೂಪಗಳತ್ತ ಜಿ.ಆರ್. ಓದುಗರ ಗಮನ ಸೆಳೆದಿದ್ದಾರೆ. ಏಷ್ಯ, ಆಫ್ರಿಕಾ ಮತ್ತು ಜಗತ್ತಿನ ಇತರ ಭಾಗಗಳಲ್ಲಿ ಆಗ್ಗೆ ಅಸ್ತಿತ್ವದಲ್ಲಿದ್ದ ವಸಾಹತುಶಾಹಿಯ ಅಂತ್ಯವಾದಾಗ್ಯೂ ಅವುಗಳಲ್ಲಿ ವಸಾಹತುಶಾಹಿಯು ಮುಂದುವರಿದು ಹೇಗೆ ತನ್ನ ಅಧೀನ ರಾಷ್ಟ್ರಗಳ ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡುತ್ತದೆ ಎಂಬುದನ್ನು ವಿವರಿಸಿ "ವಸಾಹತುಶಾಹಿಯ ಕ್ರೌರ್ಯಗಳಲ್ಲೆಲ್ಲಾ ಇದು ಅತ್ಯಂತ ಭೀಕರ ವಾದದ್ದು; ಆದರೆ ಅದು ನೇರವಾಗಿ ಎಲ್ಲರ ಕಣ್ಣಿಗೂ ಯಾವಾಗಲೂ ಕಾಣಿಸುವುದಿಲ್ಲ" ಎಂದಿದ್ದಾರೆ. ಇಂತಹ ಸಂಪತ್ತಿನ ಹೀರಿಕೆಯಿಂದ ಭಾರತವನ್ನು ಮುಕ್ತಗೊಳಿಸುವುದು ನಮ್ಮ ರಾಷ್ಟ್ರೀಯ ಚಳವಳಿಯ ಆದ್ಯ ಉದ್ದೇಶಗಳಲ್ಲೊಂದು. ಇಂದು ಮರಳಿ ಭಾರತವು ಅಂತಹ ಒಂದು ಬಲೆಗೆ ಸಿಕ್ಕಿಬೀಳುತ್ತಿದೆಯೋ ಎಂಬ ಕಳವಳವನ್ನೂ ವ್ಯಕ್ತಪಡಿಸಿದ್ದಾರೆ. "ಅಂತರರಾಷ್ಟ್ರೀಯ ವಿದ್ಯಮಾನಗಳನ್ನು ವಿಶ್ಲೇಷಿಸಿ ಒಂದು ಖಚಿತವಾದ ನಿಲುವನ್ನು ತೆಗೆದುಕೊಳ್ಳುವಾಗ ಎಷ್ಟೋ

ಸಂದಿಗ್ಧಗಳನ್ನೆದುರಿಸಿದಾಗಲೂ ಭಾರತವು ತಾತ್ವಿಕವಾಗಿ ಅತಿ ಪ್ರಶಂಸನೀಯ ನಿಲುವುಗಳನ್ನು ತಳೆದಿದೆ" ಎಂದು ಭಾರತವು ಅನುಸರಿಸುತ್ತ ಬಂದಿರುವ ವಿದೇಶಾಂಗ ನೀತಿಯತ್ತ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

ಭಾರತವು ವಿಭಜನೆಯಾದುದು, ಚೀಣಾ ಕೆಲಕಾಲ ಭಾರತಕ್ಕೆ ಎದುರಾಳಿಯಾದುದು ಹಾಗೂ ಈಚೆಗೆ ಸೋವಿಯಟ್ ಒಕ್ಕೂಟವು ಕುಸಿದು ಬಿದ್ದುದು ಇವುಗಳು ಭಾರತದ ವಿದೇಶಾಂಗ ನೀತಿಯನ್ನು ಹೇಗೆ ಪ್ರಭಾವಿಸಿವೆ ಎಂಬುದರತ್ತಲೂ ಒಂದಷ್ಟು ಗಮನ ಹರಿಸಬೇಕಾಗಿತ್ತು ಎನ್ನಿಸುತ್ತದೆ.

* * *

ಬಿ.ವಿ. ಕಕ್ಕಿಲ್ಲಾಯರು ಈ ಮಾಲೆಗೆ 'ಭಾರತಕ್ಕೊಂದು ಬದಲು ದಾರಿ' ಮತ್ತು 'ಸ್ವಾತಂತ್ರ್ಯ ಸಂಗ್ರಾಮದ ಹೆಜ್ಜೆಗಳು' ಎಂಬ ಎರಡು ಪುಸ್ತಕಗಳನ್ನು ಬರೆದಿದ್ದಾರೆ. ಅವುಗಳ ಮುನ್ನುಡಿಗಳನ್ನು ಈಗ ಪರಿಶೀಲಿಸೋಣ.

ಭಾರತವು ಸ್ವತಂತ್ರವಾಗುವುದಕ್ಕೆ ಮೂರು ತಿಂಗಳುಗಳಿದ್ದಾಗ ಮಹಾತ್ಮಾ ಗಾಂಧಿಯವರು ಸೋದೇಪುರ ಆಶ್ರಮದಲ್ಲಿ ಜರುಗಿದ ಒಂದು ಪ್ರಾರ್ಥನಾ ಸಭೆಯಲ್ಲಿ ಕೇಳಲಾದ ಎರಡು ಪ್ರಶ್ನೆಗಳಿಗೆ ನೀಡಿದ ಉತ್ತರಗಳನ್ನು ಈ ಮುನ್ನುಡಿಯಲ್ಲಿ ಉಲ್ಲೇಖಿಸಲಾಗಿದೆ. ಸಂಸ್ಕೃತಿಯ ರಕ್ಷಣೆಯನ್ನು ಕುರಿತು ಗಾಂಧೀಜಿ ವಿವರಿಸಿ "ನಮ್ಮ ತಪ್ಪಿನಿಂದ ನಾವೇ ಅದನ್ನು (ನಮ್ಮ ಸಂಸ್ಕೃತಿಯನ್ನು) ಧ್ವಂಸ ಮಾಡುವುದಾದರೆ ಬೇರೆ ಯಾರೂ ಅದಕ್ಕೆ ರಕ್ಷಣೆ ಕೊಡಲಾಗುವುದಿಲ್ಲ" ಎಂದು ಹೇಳಿದ್ದಾರೆ. "ಮೇಲಿನ ಸ್ತರದವರು ಅಂದರೆ ನಾಯಕರು, ಅಧಿಕಾರಿಗಳು ಮುಂತಾದವರು ತಪ್ಪುದಾರಿಯಲ್ಲಿಯೇ ನಡೆಯುತ್ತಿದ್ದಾರೆ, ಸಾಮಾನ್ಯ ಜನರ ಒಳ್ಳೆಯತನವು ಗಟ್ಟಿಯಾಗಿ ದನಿಯೆತ್ತಿ ಮೇಲಿನವರನ್ನು ತಿದ್ದಬಹುದೇ?" ಎಂಬ ಪ್ರಶ್ನೆಗೆ ಉತ್ತರವಾಗಿ "ಮೇಲಿನವರ ತಪ್ಪುಗಳಿಗೆ ಕೆಳಸ್ತರದವರೂ ಸ್ವಲ್ಪಮಟ್ಟಿಗೆ ಹೊಣೆಗಾರರು" ಎಂದು ಉತ್ತರ ನೀಡಿ "ಸಾಮಾನ್ಯ ಜನ ಅಸಹಾಯಕತೆಯನ್ನು ಬಿಟ್ಟು, ಮೇಲಿನವರನ್ನು ಸಹಾಯಕತ್ವದಿಂದ ಕಿತ್ತುಹಾಕಬೇಕು" ಎಂಬ ಮಾರ್ಗದರ್ಶನ ನೀಡಿದ್ದಾರೆ. ಈ ಉಲ್ಲೇಖಗಳು ಈ ಮುನ್ನುಡಿಗೆ ವಿಶೇಷ ಮೆರುಗನ್ನಿತ್ತಿವೆ:

'ಸ್ವಾತಂತ್ರ್ಯ ಸಂಗ್ರಾಮದ ಹೆಜ್ಜೆಗಳು'ವಿನ ಮುನ್ನುಡಿಯಲ್ಲಿ ಇಂದು ಶಾಲಾ ಕಾಲೇಜುಗಳಲ್ಲಿ ಬೋಧಿಸುತ್ತಿರುವ ಸ್ವಾತಂತ್ರ್ಯ ಹೋರಾಟದ ಇತಿಹಾಸವು ಅಪೂರ್ಣ ಎಂದು ಗುರುತಿಸಿದ್ದಾರೆ ಜಿ.ಆರ್. ರಾಷ್ಟ್ರೀಯ ನಾಯಕರನ್ನು ಕುರಿತು ವಿಮರ್ಶೆ ಹಾಗೂ ವಿಶ್ಲೇಷಣೆಗಳಲ್ಲಿ ತೊಡಗಿದರೆ, ಅದು ಸ್ವಾತಂತ್ರ್ಯ ಹೋರಾಟಕ್ಕಾಗಲಿ, ನಾಯಕರು ಇಲ್ಲವೇ ಸಂಬಂಧಪಟ್ಟ ಹೋರಾಟಗಾರರಿಗಾಗಲಿ ಅಥವಾ ಅವರ ಘನತೆಗಾಗಲಿ ಯಾವ ಕುಂದನ್ನೂ ತರುವುದಿಲ್ಲ ಎಂದು ಹೇಳಿದ್ದಾರೆ. ಸ್ವಾತಂತ್ರ್ಯವನ್ನು ಗಳಿಸಿ ಐದಾರು ದಶಕಗಳು ಉರುಳಿದ ಮೇಲೂ 'ಅಪ್ರಿಯವಾದ' ಕೆಲ ಸತ್ಯಗಳನ್ನು ಎದುರಿಸಲು ನಾವು ಹಿಂಜರಿಯುವುದಾದರೆ ಇತಿಹಾಸದಿಂದ ನಾವು ಪಾಠ ಕಲಿಯಬೇಕು ಎಂಬ ಮಾತು ಅರ್ಥಹೀನವಾಗುವುದಿಲ್ಲವೇ? - ಎಂದಿದ್ದಾರೆ.

* * *

"ಇತಿಹಾಸದ ಅಧ್ಯಯನ ಅಂದು-ಇಂದು" ಡಾ. ಎಚ್.ಎಸ್. ಗೋಪಾಲರಾವ್ ಬರೆದಿರುವ ಪುಸ್ತಕ. ಇದರ ಮುನ್ನುಡಿಯ ಪ್ರಾರಂಭದಲ್ಲಿ ಪ್ರಸಿದ್ಧ ಇತಿಹಾಸಕಾರರಾದ ಕೆ.ಎ. ನೀಲಕಂಠ ಶಾಸ್ತ್ರಿಗಳು ಇತಿಹಾಸ ರಚನೆಯಲ್ಲಿ ಪುರಾವೆಗಳನ್ನು ಬಳಸಿಕೊಳ್ಳುವಾಗ ವಹಿಸಬೇಕಾದ ಎಚ್ಚರವನ್ನು ಕುರಿತು ಮಾಡಿದ ಭಾಷಣವನ್ನು ಉಲ್ಲೇಖಿಸಿದ್ದಾರೆ. ಇತಿಹಾಸದ ಎಲ್ಲ ಹಂತಗಳೂ ಇಡೀ ಇತಿಹಾಸಕ್ಕೆ ತಮ್ಮ ತಮ್ಮ ಕಾಣಿಕೆ ನೀಡಿವೆ ಎಂಬುದರ ಮಹತ್ವವನ್ನು ಒತ್ತಿ ಹೇಳಿ ಯಾವುದೋ ಒಂದು ಹಂತದ್ದಕ್ಕೆ ಅತಿಯಾಗಿ ಅಂಟಿಕೊಳ್ಳುವುದರ ಅಪಾಯವನ್ನು ಕುರಿತು ಎಚ್ಚರಿಸಿದ್ದಾರೆ. ಈ ಸಂಬಂಧವಾಗಿ ಸಿಂಧು ಸಂಸ್ಕೃತಿ ಹಾಗೂ ವೈದಿಕ ಸಂಸ್ಕೃತಿಗಳನ್ನು ಕುರಿತು ಚರ್ಚಿಸಿದ್ದಾರೆ. ರಾಷ್ಟ್ರೀಯ ಚಳವಳಿಯ ಕಾಲದಲ್ಲಿ ಮಿಲ್ ಮುಂತಾದ ಮಹಾಶಯರು ಪ್ರಕಟಿಸುತ್ತಿದ್ದ ಹಲವಾರು ಪೂರ್ವಗ್ರಹಪೀಡಿತ ಅಭಿಪ್ರಾಯಗಳನ್ನು ಭಾರತೀಯ ಇತಿಹಾಸಕಾರರು ಎದುರಿಸಬೇಕಾಗಿ ಬಂತು; ಅಂದು ಅವರು ತೆಗೆದುಕೊಂಡ ನಿಲುವುಗಳಿಗೆ ಅಂಟಿಕೊಂಡು ಅತಿ ಭಾವುಕರಾಗಬಾರದೆಂದು ಹೇಳಿದ್ದಾರೆ. ಒಟ್ಟಿನಲ್ಲಿ ಅಂದಿನ ಇತಿಹಾಸಕಾರರ ಕೊಡುಗೆಗಳಿಗೆ ನೀಡಬೇಕಾದಷ್ಟು ಮಹತ್ವವನ್ನು ನೀಡಿ, ಹೊಸ ಸಂಶೋಧನೆಗಳನ್ನೂ ವ್ಯಾಖ್ಯಾನಗಳನ್ನೂ ಸಮಚಿತ್ತರಾಗಿ ಸ್ವೀಕರಿಸಬೇಕು ಎಂದು ಪ್ರತಿಪಾದಿಸಿದ್ದಾರೆ.

ಈ ಮಹತ್ವದ ಮುನ್ನುಡಿಯ ಸಂಬಂಧವಾಗಿ ಒಂದೆರಡು ಮಾತುಗಳು ಅಪ್ರಸ್ತುತವಾಗಲಾರವು. ಎಲ್ಲ ಕಾಲಘಟ್ಟಗಳಲ್ಲೂ ಪ್ರಬಲವಾದ ರಾಜಕೀಯ, ಸಾಮಾಜಿಕ, ಆರ್ಥಿಕ ಗುಂಪುಗಳು ಇತಿಹಾಸವನ್ನು ತಮ್ಮತಮ್ಮ ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಂಡಿವೆ - ಈ ದೃಷ್ಟಿಯಿಂದ 'ವಸ್ತುನಿಷ್ಟ', 'ವಾಸ್ತವಿಕ', 'ನಿಷ್ಪಕ್ಷಪಾತ' ಮುಂತಾದ ಕಲ್ಪನೆಗಳು ಬಳಕೆಯಾಗುತ್ತಿವೆ. ನಾನಾ ದೃಷ್ಟಿಕೋನಗಳಿಂದ ಮಾಡುವ ವ್ಯಾಖ್ಯಾನಗಳ ನಡುವಣ ವಾದ-ವಿವಾದಗಳ ಮೂಲಕ ಮಾತ್ರವೇ ನಿಜಸ್ಥಿತಿಯ ಇಣುಕು ನೋಟಗಳನ್ನು ಪಡೆಯುವುದು ಸಾಧ್ಯ. ಶಾಸನಗಳ ಪಾಠ, ಪ್ರಾಚೀನ ಸಾಹಿತ್ಯ ಮುಂತಾದುವು ಒದಗಿಸುವ ಮಾಹಿತಿಗಳನ್ನು ವ್ಯಾಖ್ಯಾನಿಸುವಾಗ, ಮಾನವಶಾಸ್ತ್ರಜ್ಞರು ರೂಪಿಸಿರುವ 'ಟೆಕ್ಸ್ಟ್ ಅಂಡ್ ಕಾಂಟೆಕ್ಸ್ಟ್' - ಲಿಖಿತ ಪಾಠ ಹಾಗೂ ಸಂದರ್ಭ, 'ಗ್ರೇಟ್ ಟ್ರೆಡಿಷನ್ - ಲಿಟ್ಲ್ ಟ್ರೆಡಿಷನ್' - ಹಿರಿಯ ಸಂಪ್ರದಾಯ - ಕಿರಿಯ ಸಂಪ್ರದಾಯ (ಪ್ರಬಲರ ಸಂಪ್ರದಾಯ - ಸಾಮಾನ್ಯರ ಸಂಪ್ರದಾಯ) ಇಂತಹ ಕಲ್ಪನೆಗಳು ಅಪಾರವಾಗಿ ನೆರವಾಗಬಲ್ಲವು.

* * *

ಡಾ. ಆರ್ಕೆ, ಮಣಿಪಾಲ ಇವರು ಬರೆದಿರುವ 'ಸಾಮಾಜಿಕ ಚಳವಳಿಗಳು' ಎಂಬ ಪುಸ್ತಕದ ಮುನ್ನುಡಿ ಪುಟ್ಟದು. ಆದರೆ ಅದರಲ್ಲಿ ಜಿ.ಆರ್. ಹೇಳಿರುವ ಮಾತುಗಳು 'ಮತ್ಸ್ಯ ಯಂತ್ರಕ್ಕೆ ಗುರಿಯಿಟ್ಟ ಬಾಣ'ದಂತಿವೆ. ಆಗಿಂದಾಗ ವರದಿಯಾಗುವ ಜಾತಿ-ಜಾತಿಗಳ ನಡುವಣ ಗಲಭೆಗಳನ್ನು ಕುರಿತು ಹೇಳುತ್ತಾ "ಸಂವಿಧಾನದಲ್ಲಿ ಅಸ್ಪೃಶ್ಯತೆಯನ್ನು ನಿವಾರಿಸಿದ್ದೇವೆ, ಆದರೆ ನಿಜ ಜೀವನದಲ್ಲಿ ಅದು ಜೀವಂತವಾಗಿದೆ" ಎಂದು ಹೇಳಿದ್ದಾರೆ. ಅಸ್ಪೃಶ್ಯತೆಯ ಕಾರಣವಾಗಿ ಜರುಗುವ ದೌರ್ಜನ್ಯಗಳ ವಿರುದ್ಧವಾಗಿ ಅಸ್ಪೃಶ್ಯರು ಮಾತ್ರವೇ ಹೋರಾಡಬೇಕೇ ಎಂಬ ಪ್ರಶ್ನೆ ಎತ್ತಿ "ಸ್ವಾತಂತ್ರ್ಯಪೂರ್ವದಲ್ಲಿ ಇದ್ದಷ್ಟು ಸಾಮೂಹಿಕ ಕಾರ್ಯಾಚರಣೆಗಳು ಈಗಿಲ್ಲದಿದ್ದರೆ

ಅದಕ್ಕೆ ಎರಡು ಕಾರಣಗಳಿವೆ. (ಅ) ಅಸ್ಪೃಶ್ಯತೆಯ ನೆಲೆ ಸಾಕಷ್ಟು ಕುಗ್ಗಿದೆ ಮತ್ತು (ಆ) ಜಾತಿಯ ಆಧಾರದ ಗುಂಪುಗಳು (ಪ್ರಶ್ನೆ) ಹೆಚ್ಚಿರುವುದು ಸಾಮುದಾಯಿಕ ಪ್ರಶ್ನೆಯನ್ನು ಮೂಲೆಗುಂಪು ಮಾಡಿದೆ" ಎಂದಿದ್ದಾರೆ. ಹೀಗೆ ಹಲವು ಒಳನೋಟಗಳನ್ನು ನೀಡುವ ಮುನ್ನುಡಿ ಇದು.

* * *

'ಜನಾರೋಗ್ಯ'ವನ್ನು ಡಾ. ಸಿ.ಆರ್. ಚಂದ್ರಶೇಖರ್ ಮತ್ತು ಡಾ. ಎಂ.ಎಸ್. ರಾಜಣ್ಣ ಬರೆದಿದ್ದಾರೆ. ಡಾ. ಪ್ರಕಾಶ್ ಸಿ. ರಾವ್ ಔಷಧ ತಯಾರಿಕೆ ಮತ್ತು ವಿತರಣೆಯ ಬಗ್ಗೆ ಅನುಬಂಧವನ್ನು ಬರೆದಿದ್ದಾರೆ. ಇದರ ಮುನ್ನುಡಿಯಲ್ಲಿ ಪ್ರಾಚೀನ ಭಾರತದಲ್ಲಿ ವೈದ್ಯ ವಿಜ್ಞಾನದಲ್ಲಿ ಮಾಡಲಾಗಿದ್ದ ಸಾಧನೆಗಳ ಪ್ರಸ್ತಾಪವಾಗಿದೆ. ಸರ್ಕಾರಿ ವೈದ್ಯಕೀಯ ವ್ಯವಸ್ಥೆಯಲ್ಲಿ ಸಾಮಾನ್ಯ ಜನ ಆಸ್ಪತ್ರೆಗೆ ಹೋದರೆ 'ನೀನು ಬಂದೆಯಾ' ಎಂದು ರೋಗಿಯನ್ನು ಮಾತನಾಡಿಸುವ ಸೌಜನ್ಯವಿಲ್ಲದಿರುವ ಸಿಬ್ಬಂದಿ ಹಾಗೂ ವೈದ್ಯರಿರುವ ಆರೋಗ್ಯ ಕೇಂದ್ರಗಳು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ನೂರಾರಿವೆ'. "ಅಲ್ಲಿ ಉಪಚಾರಕ್ಕಿಂತಲೂ ಅಪಮಾನವೇ ಹೆಚ್ಚು" ದೊರೆಯುತ್ತದೆ. ಹೀಗಾಗಿ ಬಡ ಜನರು ಹಳೆಯ ಕಂದಾಚಾರಗಳನ್ನು ಅನುಸರಿಸಬೇಕಾಗಿದೆ ಎಂದು ಹೇಳಿದ್ದಾರೆ. ಭಾರತದ ಜನಪ್ರಿಯ ಜನಪದ ಔಷಧ ವಸ್ತುಗಳಾದ ಬೇವು, ಅರಿಶಿನ ಮುಂತಾದವನ್ನು ಅಮೆರಿಕದ ವಿಜ್ಞಾನಿಗಳು(!) ಪೇಟೆಂಟ್ ಮಾಡಿಸುತ್ತಿರುವುದರ ಕುರಿತು ಎಚ್ಚರಿಸಿದ್ದಾರೆ. ವಿದೇಶಗಳಲ್ಲಿ ಅಪಾಯಕಾರಿಯೆಂದು ಪರಿಗಣಿತವಾಗಿರುವ ಔಷಧಗಳನ್ನು ಲಾಭಬಡಕ ವ್ಯಾಪಾರಿ ಸಂಸ್ಥೆಗಳು ಭಾರತಕ್ಕೆ ರವಾನಿಸಿ ಮಾರುತ್ತಿರುವುದರತ್ತಲೂ ಗಮನ ಹರಿಸಿದ್ದಾರೆ.

ಬೇವಿನೆಲೆ, ಹರಳೆಣ್ಣೆ, ಚುಟುಕಿ ಮುಂತಾದುವನ್ನು 'ಕಂದಾಚಾರ' ಎಂದು ಒಂದೆಡೆ ಹೇಳಿದ್ದಾರೆ. ಇವು ಮಾತ್ರವೇ ಅಲ್ಲ, ಇಂತಹ ನೂರಾರು ಜನಪದ ಮದ್ದುಗಳ ಮತ್ತು ಚಿಕಿತ್ಸಾ ಕ್ರಮಗಳ ಬಗ್ಗೆ ಅಸಡ್ಡೆ ಅಥವಾ ತಿರಸ್ಕಾರವು ಸರಿಯಲ್ಲ. ಅವುಗಳ ಸನ್ನಿವೇಶದಲ್ಲಿ ಅವನ್ನು ಪ್ರಯೋಗಿಸಿ ಅಥವಾ ಈಗ ಬಳಸುತ್ತಿರುವವರ ಅಭಿಪ್ರಾಯ ತಿಳಿದು ನಿರ್ಧರಿಸಬೇಕು. ಶತಶತಮಾನಗಳ ಕಾಲ ನಮ್ಮ ಜನರ, ಮುಖ್ಯವಾಗಿ ಗ್ರಾಮೀಣ ಜನರ ಸ್ವಾಸ್ಥ್ಯವನ್ನು ಅವು ನೋಡಿಕೊಂಡಿರಲಿಲ್ಲವೇ?

* * *

"ಸ್ವಾತಂತ್ರ್ಯೋತ್ತರ ಕೃಷಿರಂಗ" 1998ರಲ್ಲಿ ಪ್ರಕಟವಾಯಿತು. ವೈ.ವಿ. ಕೃಷ್ಣರಾವ್ ಇಂಗ್ಲಿಷಿನಲ್ಲಿ ಬರೆದಿರುವ ಈ ಪುಸ್ತಕ ಪ್ರಸ್ತುತ ಸಂಗ್ರಹಾನುವಾದವನ್ನು ಕೆ.ಎಲ್. ಗೋಪಾಲಕೃಷ್ಣ ರಾವ್ ಸಿದ್ಧಪಡಿಸಿದ್ದಾರೆ. ಇದರ ಮುನ್ನುಡಿಯಲ್ಲಿ ವಿಶ್ವಬ್ಯಾಂಕ್ ಮತ್ತು ಇತರ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಭಾರತದ ಕೃಷಿರಂಗದ ಮೇಲೆ ಹಾಗೂ ಭಾರತದ ಅರ್ಥ ವ್ಯವಸ್ಥೆಯ ಮೇಲೆ ತಮ್ಮ ಪ್ರಭಾವ ಬೀರುತ್ತವೆ ಎಂಬುದನ್ನು ಸ್ಪಷ್ಟವಾಗಿ ಮನದಟ್ಟು ಮಾಡಿಕೊಡಲಾಗಿದೆ. ಆಹಾರ ಧಾನ್ಯಗಳ, ಕೃಷಿ ಮತ್ತು ವಾಣಿಜ್ಯ ಬೆಳೆಗಳ ಉತ್ಪಾದನೆ, ಇವುಗಳ ನಡುವಿನ ಪೈಪೋಟಿಯ ನಾನಾ ಆಯಾಮಗಳನ್ನು ಚರ್ಚಿಸಲಾಗಿದೆ. ರೈತ ತನ್ನ ಜಮೀನಿನಲ್ಲಿ ಲಾಭದಾಯಕ ಬೆಳೆ ಬೆಳೆಯಲು ಸ್ವತಂತ್ರನಲ್ಲವೇ, ಅವನನ್ನು ಆಹಾರಧಾನ್ಯ ಉತ್ಪಾದನೆಗೆ ದೂಡಿ ಅವನ ಜೀವನಮಟ್ಟವನ್ನು ಸ್ಥಗಿತಗೊಳಿಸಬೇಕೇ ಮುಂತಾದ ಪ್ರಶ್ನೆಗಳಿಗೆ ಉತ್ತರವಾಗಿ ಜಿ.ಆರ್. "ಇದಕ್ಕೆ ಉತ್ತರ

ವಾಣಿಜ್ಯ ಕೃಷಿಯ ಬೆಳೆಯನ್ನು ದಾಂಧಲೆಗಳಿಂದ ನಾಶಮಾಡುವುದರಲ್ಲಿ ಇಲ್ಲ, ಬದಲಾಗಿ ಕೃಷಿ ಉತ್ಪಾದನೆಯು ಯಾವುದೇ ಉದ್ಯಮದಂತೆ ಲಾಭದಾಯಕವಾಗುವಂತಾಗಬೇಕು. ಹಾಗೆ ಮಾಡಿದರೆ ಬೆಲೆ ಜಾಸ್ತಿಯಾಗಿ ಗ್ರಾಹಕನು ತತ್ತರಿಸುವುದಿಲ್ಲವೇ?...... ಕೃಷಿ ಉತ್ಪಾದನೆ, ಆಹಾರದ ಸರಬರಾಜು, ಗ್ರಾಹಕರ ಸಮಾಧಾನ ಇಷ್ಟನ್ನೂ ಏಕಕಾಲದಲ್ಲಿ ಸಾಧಿಸುವುದು ಹೇಗೆ" ಎಂದಿದ್ದಾರೆ.

* * *

"ಶತಮಾನದ ಅಂಚಿನಲ್ಲಿ ಶಿಕ್ಷಣ" 1998ರ ಇನ್ನೊಂದು ಅನುವಾದ ಕೃತಿ. ಪ್ರೊ. ಥೇಕಡತ್ ಮೂಲ ಲೇಖಕರು, ಡಾ. ಕೆ.ಎಲ್. ಗೋಪಾಲಕೃಷ್ಣಯ್ಯ ಅನುವಾದಕರು.

ಇದರ ಮುನ್ನುಡಿಯಲ್ಲಿ ಭಾರತದ ಶೈಕ್ಷಣಿಕ ಸನ್ನಿವೇಶ, ವಸಾಹತುಶಾಹಿ ಯುಗದಿಂದ ಅದು ಬೆಳೆದು ಬಂದ ಬಗೆ, ಸ್ವಾತಂತ್ರ್ಯಾನಂತರದ ಹಲವು ಸಮಿತಿಗಳು ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಸಲ್ಲಿಸಿದ ವರದಿಗಳು ಮುಂತಾದುವೆಲ್ಲ ನಿರೂಪಿತವಾಗಿವೆ. ಈಚಿನ ಕೆಲವು ಬೆಳವಣಿಗೆಗಳನ್ನು ಪ್ರಸ್ತಾಪಿಸಿ, "ಶಿಕ್ಷಣ ಕ್ಷೇತ್ರವು ತನ್ನ ಖರ್ಚನ್ನು ತಾನೇ ಭರಿಸಿಕೊಳ್ಳಬೇಕೆನ್ನುವುದು ಈಚಿನ ನಿಯಮ" ಎಂದು ಹೇಳಿ ಆ ವೇಳೆಗಾಗಲೇ ಕಾರ್ಯಗತವಾಗಿದ್ದ ಕೇರಳ, ಮಹಾರಾಷ್ಟ್ರಗಳಲ್ಲಿನ ಶುಲ್ಕ ಏರಿಕೆಯನ್ನು ಉಲ್ಲೇಖಿಸಿ, ಕರ್ನಾಟಕದಲ್ಲಿಯೂ ಅದು ದೂರವಿಲ್ಲ ಎಂದಿದ್ದಾರೆ. ಎಲ್ಲ ವಸ್ತುಗಳ ಬೆಲೆ ಏರುವಾಗ "ಶಿಕ್ಷಣದ್ದೇನು ಹೆಚ್ಚುಗಾರಿಕೆ" ಎಂಬ ಪ್ರಶ್ನೆ ಎತ್ತಿ ಸಾಮಾಜಿಕ ಹೊಣೆಗಾರಿಕೆ, ಈಚೆಗೆ ತಾನೇ ಶಿಕ್ಷಣದತ್ತ ಗಮನ ಹರಿಸಲು ಆರಂಭಿಸಿರುವ ಬಡ ಹಾಗೂ ಹಿಂದುಳಿದ ಸಮುದಾಯಗಳ ಮೇಲೆ ಇದರಿಂದ ಆಗಬಹುದಾದ ಪರಿಣಾಮಗಳನ್ನು ಚರ್ಚಿಸಿದ್ದಾರೆ. ಕಾಲೇಜುಗಳಿಗೆ ಸ್ವಾಯತ್ತತೆ ಎಂಬ ವಿಚಾರವನ್ನು ಪ್ರಸ್ತಾಪಿಸಿ "ಕಾಲೇಜುಗಳು ಸ್ವಾಯತ್ತವಾದರೆ ಸಹಜವಾಗಿಯೇ ಅವು ಉತ್ತಮವೂ ಆಗುತ್ತವೆಂಬ ಮಾತು ತಾರ್ಕಿಕವಾಗಿ ಸರಿಯೇ" ಎಂದು ಕೇಳಿದ್ದಾರೆ.

ಆದರೆ ಇಡೀ ಮುನ್ನುಡಿಯು ಶಿಕ್ಷಣ ಎಂದರೆ ಕಾಲೇಜು ಶಿಕ್ಷಣವೆಂದೇ ವ್ಯಾಖ್ಯಾನಿಸಿಕೊಂಡಿರುವಂತಿದೆ. ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಣ, ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಮಟ್ಟದ ತಾಂತ್ರಿಕ ಶಿಕ್ಷಣ, ತಾಂತ್ರಿಕ ತರಬೇತಿ, ವಯಸ್ಕ ಶಿಕ್ಷಣ ಇವು ಪ್ರಸ್ತಾಪಗೊಂಡೇ ಇಲ್ಲ. ಶಾಲಾ ಶಿಕ್ಷಣ ಮತ್ತು ಶಾಲಾ ಪೂರ್ವ ಶಿಕ್ಷಣಗಳಲ್ಲಿನ ಜ್ವಲಂತ ಸಮಸ್ಯೆಯಾದ 'ಶಿಕ್ಷಣವು ಯಾವ ಭಾಷಾ ಮಾಧ್ಯಮದಲ್ಲಿರಬೇಕು?" ಎಂಬುದು ಸಹ ಕಿಂಚಿತ್ ಗಮನವನ್ನೂ ಪಡೆದಿಲ್ಲ.

* * *

ಈ ಮಾಲಿಕೆಯ ಮೂರನೆಯ ಅನುವಾದ ಕೃತಿ "ಆರ್ಥಿಕತೆಯ ಸವಾಲುಗಳು" ಖ್ಯಾತ ಅರ್ಥಶಾಸ್ತ್ರಜ್ಞರೂ, ಪ್ರಾಧ್ಯಾಪಕರೂ ಆದ ಕಮಲನಯನ ಕಾಬ್ರ ಬರೆದಿರುವ ಈ ಪುಸ್ತಕವನ್ನು ಜಿ.ಎಂ. ಕೃಷ್ಣಮೂರ್ತಿ ಅನುವಾದಿಸಿದ್ದಾರೆ.

ಎಂ. ವಿಶ್ವೇಶ್ವರಯ್ಯನವರ ಕಾಲದಿಂದ ಆರ್ಥಿಕ ಕ್ಷೇತ್ರದಲ್ಲಿ ಯೋಜನಾಬದ್ಧ ಬೆಳವಣಿಗೆ ನಡೆದು ಬಂದಿದೆಯಾದರೂ ಈಚಿನ ವರ್ಷಗಳಲ್ಲಿ ಯೋಜನೆಗಳತ್ತ ಅನಾದರ ತೋರಿ, ಆ

ಯೋಜನೆಗಳನ್ನೇ, ಸ್ವದೇಶಿ ಹಾಗೂ ವಿದೇಶಿ ಆರ್ಥಿಕ ಹಿತಾಸಕ್ತಿಗಳ ಒಳಿತಿಗಾಗಿ ತಿರುಚಲಾಗಿದೆ. ಈಗ ಅಂತಿಮವಾಗಿ "ಸ್ವಾವಲಂಬನೆಯ ಕಲ್ಪನೆಯನ್ನು ಗಾಳಿಗೆ ತೂರಲಾಗಿದೆ." ಅದು ದೇಶಕ್ಕೆ ಮಾರಕ ಎಂದು ಜಿ.ಆರ್. ತಮ್ಮ ಚಿಕ್ಕದಾದರೂ ಚೊಕ್ಕ ಮುನ್ನುಡಿಯಲ್ಲಿ ಎಚ್ಚರಿಸಿದ್ದಾರೆ. ಈಚೆಗೆ ನಮ್ಮ ದೇಶದಲ್ಲಿ ಹಣಕಾಸು ಹೂಡಿಕೆಯ ವ್ಯವಹಾರ ಪ್ರಬಲವಾಗುತ್ತಿರುವುದನ್ನು ಪ್ರಸ್ತಾಪಿಸಿ ಹಣಕಾಸು ವ್ಯವಹಾರ ದೊಡ್ಡ ಪ್ರಮಾಣದಲ್ಲಿ ಜರುಗುತ್ತಿದ್ದ ದಕ್ಷಿಣ ಕೊರಿಯಾ, ಇಂಡೋನೇಷ್ಯಾ, ಮಲೇಷ್ಯಾ, ಥೈಲೆಂಡ್ ಮುಂತಾದ ದೇಶಗಳು ಭಾರಿ ಪ್ರಮಾಣದ ಕುಸಿತಕ್ಕೆ ಗುರಿಯಾಗಿರುವ ಉದಾಹರಣೆಯನ್ನು ನೀಡಿ, ಅಲ್ಲೆಲ್ಲ ರಾಷ್ಟ್ರೀಯ ಉತ್ಪಾದನಾಮಟ್ಟ ಉತ್ತಮವಾಗಿತ್ತಾದರೂ ಆ "ಉತ್ಪಾದನೆಯ ಪ್ರಮಾಣವನ್ನು ಮೀರಿ ಸಟ್ಟಾ ವ್ಯಾಪಾರಿಗಳು ತಮ್ಮ ಸಂಪತ್ತನ್ನು ಕ್ಷಣಾರ್ಧದಲ್ಲಿ ದ್ವಿಗುಣ ಅಥವಾ ತ್ರಿಗುಣಗೊಳಿಸಿಕೊಳ್ಳಬೇಕೆಂದು ಹವಣಿಸಿದ್ದು ಅಲ್ಲೆಲ್ಲಾ ಪ್ರಕ್ಷೋಭೆಗೆ ಕಾರಣವಾಯಿತು." ಎಂದು ಸಾಮೂಹಿಕವಾದ ಮುನ್ನೆಚ್ಚರ ನೀಡಿದ್ದಾರೆ.

* * *

"ಮಾಧ್ಯಮ ಮತ್ತು ಸ್ವಾತಂತ್ರ್ಯ"ವನ್ನು ಜಿ.ಎನ್. ಮೋಹನ್ ಬರೆದಿದ್ದಾರೆ. ಇದರ ಮುನ್ನುಡಿಯಲ್ಲಿ ಸ್ವಾತಂತ್ರ್ಯಪೂರ್ವದ ಪತ್ರಿಕೋದ್ಯಮವು ಕೆಲವು ಉನ್ನತ ಆದರ್ಶಗಳಿಗೆ ನಿಷ್ಠವಾಗಿತ್ತು ಎಂಬುದನ್ನು ಪರಿಚಯಿಸಿ, ಈಗಿನ ದಿನಗಳಲ್ಲಿ ಪತ್ರಿಕೆಗಳೂ ಹೆಚ್ಚಿನ ಅಧಿಕಾರದ ಆರಾಧನೆಯಲ್ಲಿ ತೊಡಗಿವೆ ಎಂಬುದನ್ನು ವಿವರಿಸಿದ್ದಾರೆ. ಇದಕ್ಕಿಂತಲೂ ಮೀರಿ ಅವು ಎಷ್ಟೋ ಬಾರಿ ಜನಶತ್ರುಗಳ "ಐದನೆಯ ತುಕಡಿ"ಯಂತೆ ವರ್ತಿಸುವುದುಂಟು ಎಂಬುದನ್ನು ಸ್ಪಷ್ಟ ಪಡಿಸಿದ್ದಾರೆ. ಅಂದರೆ ವಿದೇಶಿ ಮಾಧ್ಯಮಗಳಿಂದ, ವಿದೇಶಿ ಹಿತಾಸಕ್ತಿಗಳಿಗೆ ಅನುಕೂಲ ವಾಗುವಂತಹ ಅಭಿಪ್ರಾಯಗಳನ್ನು ಎರವಲು ಪಡೆದು, ಅವು ನಮ್ಮ ಹಿತವನ್ನು ಕಾಪಾಡಿಕೊಳ್ಳುವ ಮಾರ್ಗಗಳು ಎಂಬ ಭಾವನೆಯು ಓದುಗರಲ್ಲಿ ಮೂಡುವಂತೆ ಅವನ್ನು ಪ್ರಚಾರ ಮಾಡುತ್ತಿವೆ. ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳ ಪರವಾದ ಪ್ರಚಾರ ಈ ಬಗೆಯದು. ಒಂದು ಮಟ್ಟದಲ್ಲಿ ಈ ನೀತಿಗಳ ಪರವಾದ ಜನಾಭಿಪ್ರಾಯ ಮೂಡಿದೆ. ದೇಶದ ಹಿತ ಯಾವುದು ಎಂಬುದನ್ನು ಇಂತಹ ಪ್ರಚಾರ ಮರೆಮಾಚುತ್ತದೆ. ಈ ರೀತಿಯಲ್ಲಿ ಪ್ರಸಾರ (ಚಾರ) ಮಾಧ್ಯಮಗಳು ಬಳಕೆಯಾಗುವುದರತ್ತ ನಮ್ಮ ಗಮನ ಸೆಳೆದು ಸಮಯೋಚಿತವಾದ ಒಂದು ಮುನ್ನೆಚ್ಚರಿಕೆಯನ್ನು ಈ ಮುನ್ನುಡಿ ನೀಡುತ್ತದೆ.

ಟಿ.ವಿ.,ರೇಡಿಯೋ, ಚಲನಚಿತ್ರ ಮುಂತಾದ ಇತರ ಪ್ರಬಲ ಹಾಗೂ ಜನಪ್ರಿಯ ಮಾಧ್ಯಮಗಳ ಬಗ್ಗೆ ಯಾವ ಪ್ರಸ್ತಾಪವೂ ಇಲ್ಲದಿರುವುದು ಒಂದು ಕೊರತೆ. ಇಂಗ್ಲಿಷಿನ 'ಫೋರ್ತ್ ಎಸ್ಟೇಟ್' ಎಂಬ ಪದವನ್ನು 'ನಾಲ್ಕನೆಯ ಆಸ್ತಿ' ಎಂದು ಭಾಷಾಂತರಿಸಿರುವುದು ಹಿತವಾದ ಪ್ರಯೋಗವಲ್ಲ ಎನಿಸುತ್ತದೆ.

* * *

"ಸ್ವಾತಂತ್ರ್ಯಕ್ಕೆ ಐವತ್ತು ವರ್ಷ" ವ್ಯಾಸರಾಯ ಬಲ್ಲಾಳರು ಬರೆದಿರುವ ಕೃತಿ. ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಎದ್ದು

ಕಂಡುಬರುತ್ತಿರುವ ಭ್ರಷ್ಟಾಚಾರ, ರಾಷ್ಟ್ರನಿಷ್ಠೆ ಹಾಗೂ ನಾಗರಿಕಪ್ರಜ್ಞೆ ಮುಂತಾದುವುಗಳ ಕೊರತೆ ಮೊದಲಾದವನ್ನು ಈ ಪುಸ್ತಕದಲ್ಲಿ ಪರಾಮರ್ಶಿಸಲಾಗಿದೆ. ಇಂತಹ ಗಂಭೀರ ವಿಷಯಕ್ಕೆ ಸೂಕ್ತವಾದ ಜಿ.ಆರ್. ಅವರ ಮುನ್ನುಡಿಯು ಸ್ವತಂತ್ರ ಭಾರತದಲ್ಲಿ ಬೆಳೆದು ಬಂದಿರುವ ಚುನಾವಣೆಗಳ ಸ್ವರೂಪವನ್ನು ನೀಡಿದೆ. ಆ ಕ್ಷೇತ್ರಕ್ಕೆ ಹರಿದು ಬರುತ್ತಿರುವ ಹಣದ ಹೊಳೆಯ ಚಿತ್ರಣವೂ ಇದೆ. "ರಾತ್ರೋ ರಾತ್ರಿ ಶ್ರೀಮಂತರಾಗುವಂತಹವರು" "ಉದಾತ್ತ ಮೌಲ್ಯಗಳ ಪ್ರತಿಪಾದನೆ ಮಾಡುತ್ತಲೇ ಸಾರ್ವಜನಿಕ ಆಸ್ತಿಯನ್ನು ಲಪಟಾಯಿಸುವವರು" ಇಂತಹವರನ್ನು ಕುರಿತು "ಜನಸಾಮಾನ್ಯರಿಗೆ ಇನ್ನೂ ಅಸಹ್ಯ ಉಂಟಾಗಿಲ್ಲ" ಎಂಬುದನ್ನು ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ. ಹಣಕ್ಕಾಗಿ ಏನನ್ನಾದರೂ ಮಾಡಲು ಸಿದ್ಧರಾಗಿರುವವರ "ಅಜೀಗರ್ತ ಸಂಸ್ಕೃತಿ"ಯನ್ನು ವೈದಿಕ ಸಾಹಿತ್ಯದಿಂದ ಆಯ್ದ ನಿದರ್ಶನದ ಮೂಲಕ ವಿವರಿಸಿದ್ದಾರೆ. ಮಹಾತ್ಮಾ ಗಾಂಧಿಯವರ "ಸರ್ವೋದಯ" ಕಲ್ಪನೆ, ಭಗತ್‌ಸಿಂಗ್ ಹಾಗೂ ಸಮಾಜವಾದಿಗಳು ಪ್ರತಿಪಾದಿಸಿದ ಉನ್ನತ ಆದರ್ಶಗಳು - ಇವೆಲ್ಲವೂ ಸವಕಲು ನಾಣ್ಯಗಳಾಗಿವೆ ಎಂಬುದನ್ನೂ ಪ್ರಸ್ತಾಪಿಸಿದ್ದಾರೆ. 'ಒಟ್ಟಿನಲ್ಲಿ ನಮ್ಮ ಸಾರ್ವಜನಿಕ ಕ್ಷೇತ್ರದಲ್ಲಿ ಆಗಿರುವ ನೈತಿಕ ಅಧಃಪತನ'ದ ಸ್ಪಷ್ಟ ಚಿತ್ರಣ ಈ ಮುನ್ನುಡಿ.

ಎನ್. ಗಾಯತ್ರಿ ಬರೆದಿರುವ 'ಮಹಿಳಾ ಚಳುವಳಿಯ ಮಜಲುಗಳು' ಈ ಮಾಲೆಯಲ್ಲಿ ಒಬ್ಬ ಮಹಿಳೆ ಬರೆದಿರುವ ಒಂದೇ ಪುಸ್ತಕ. ಇದರ ಮುನ್ನುಡಿಯಲ್ಲಿ ಜಿ.ಆರ್. ಹಿಂದೊಮ್ಮೆ ಎಲ್ಲರೂ ತಾವು ಸಮಾಜವಾದಿಗಳೆಂದು ಹೇಳಿಕೊಳ್ಳುತ್ತಿದ್ದ ಹಾಗೆ ಈಗ 'ಸ್ತ್ರೀವಾದಿ'ಗಳು ಎಂದು ಎಲ್ಲರೂ ಕರೆದುಕೊಳ್ಳುವುದು ಒಂದು "ಫ್ಯಾಷನ್" ಆಗಿ ಹೋಗಿದೆ ಎಂದು ಹೇಳುವ ಮೂಲಕ ಮಹಿಳಾ ಸಮಸ್ಯೆಗಳ ಗಂಭೀರ ಸ್ವಭಾವವನ್ನು ಮನದಟ್ಟು ಮಾಡಿಸಿದ್ದಾರೆ. ಸ್ತ್ರೀ ಪುರುಷರ ನಡುವಣ ಭೇದಗಳು ಕೇವಲ ನೈಸರ್ಗಿಕವಲ್ಲ, ಅವು ಸಾಮಾಜಿಕವೂ ಆಗಿವೆ ಎಂದು ಹೇಳಿ, ಅವು ಕಾಲಕಾಲಕ್ಕೆ ಮಾರ್ಪಡುತ್ತ ಹೋಗಿವೆ, ಹಿಗ್ಗುತ್ತ ಕುಗ್ಗುತ್ತ ವಿಸ್ತೃತಗೊಳ್ಳುತ್ತ ಹೋಗಿವೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಮಹಿಳೆಯರ ಮೇಲ್ಮೆಗಾಗಿ ಸ್ತ್ರೀಪುರುಷರು ಒಂದುಗೂಡಿ ಹೋರಾಡಬೇಕಾದ ಸಂದರ್ಭಗಳೂ ಇವೆ, ಮಹಿಳೆಯರು ಮಾತ್ರವೇ ಹೋರಾಡಬೇಕಾದಂತಹವೂ ಇವೆ ಎಂದಿದ್ದಾರೆ. ಗೋವಾ, ಖಜುರಾಹೋ ಮುಂತಾದ ಪ್ರವಾಸಿ ತಾಣಗಳಲ್ಲಿ ಮಹಿಳೆಯು ಗುರಿಯಾಗುವಂತಹ ವಿಶಿಷ್ಟ ಶೋಷಣೆಗಳ ಸ್ವರೂಪವನ್ನು ತಿಳಿಸಿದ್ದಾರೆ. ಮಹಿಳೆಯರಲ್ಲಿಯೇ ವಿವಿಧ ವರ್ಗಗಳ ಮಹಿಳೆಯರ ಸಮಸ್ಯೆಗಳಲ್ಲಿರುವ ಭೇದಗಳತ್ತಲೂ ಗಮನ ಹರಿಸಿದ್ದಾರೆ. ಮಹಿಳಾ ಸಮಸ್ಯೆಯ ಎಲ್ಲ ಮುಖಗಳನ್ನೂ, ಆಯಾಮಗಳನ್ನೂ ಪರಿಚಯಿಸುವ ಮುನ್ನುಡಿ ಇದು.

* * *

ಜೆ.ಆರ್. ಲಕ್ಷ್ಮಣರಾವ್ ಮತ್ತು ಎಂ.ವಿ. ಸೇತುರಾವ್ "ವಿಜ್ಞಾನ ಮತ್ತು ತಂತ್ರಜ್ಞಾನ" ಎಂಬ ಶೀರ್ಷಿಕೆಯ ಅವಲೋಕನವನ್ನು ಬರೆದಿದ್ದಾರೆ. ಇದರ ಮುನ್ನುಡಿಯಲ್ಲಿ ಜಿ.ಆರ್. ಸ್ವತಂತ್ರ ಭಾರತದ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದ ನಾನಾ ಮುಖಗಳ ಸಮಗ್ರ ಪರಿಚಯವೊಂದನ್ನು ನೀಡಿದ್ದಾರೆ. ಸಂಖ್ಯೆಯ ದೃಷ್ಟಿಯಿಂದ ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿ

ಕಾರ್ಯನಿರತರಾಗಿರುವವರ ಸಂಖ್ಯೆಯಲ್ಲಿ ಭಾರತವು ಪ್ರಪಂಚದ ಮೂರನೆಯ ಸ್ಥಾನದಲ್ಲಿದೆ. ಈ ವಿಚಾರವನ್ನು ವಿವರಿಸುತ್ತಾ ಜಿ.ಆರ್. ಒಂದೆಡೆ "ಜಗತ್ತಿನ ಯಾವುದೇ ಉಚ್ಚಮಟ್ಟದ ಸಂಶೋಧನಾ ಸಂಸ್ಥೆಗಳ ಸಾಲಿನಲ್ಲಿ ನಿಲ್ಲಲು ಅರ್ಹವಾದ ವೈಜ್ಞಾನಿಕ ಸಂಶೋಧನಾ ಕೇಂದ್ರಗಳು ನಮ್ಮಲ್ಲಿವೆ. ಅವುಗಳ ಮಗ್ಗುಲಲ್ಲೇ ಅತ್ಯಂತ ಕಳಪೆಯ ಪ್ರಾಥಮಿಕ ಶಾಲೆಗಳೂ ಇವೆ" ಎಂದಿದ್ದಾರೆ. ಅಮೆರಿಕದ ಪರಿಸರ ರಕ್ಷಣೆಗೆಂದು ನಾರ್ಮನ್ ಬೋರ್ಲಾಗ್ ರೂಪಿಸಿರುವ ಸೂತ್ರದ ವಿವರಗಳನ್ನು ನೀಡಿ, ಅದನ್ನು ಟೀಕಿಸಿದ್ದಾರೆ. ಪರಿಸರ ರಕ್ಷಣೆ ಕುರಿತು "ಒಂದೆಡೆ ಅಸಮರ್ಪಕ ಅಭಿವೃದ್ಧಿಯಿಂದಾಗಿ ಮುಗ್ಗಟ್ಟುಂಟಾಗಿದ್ದರೆ, ಇನ್ನೊಂದೆಡೆ ಹದ್ದು ಮೀರಿದ ಅಭಿವೃದ್ಧಿಯಿಂದಾಗಿ ಆತಂಕದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇವೆರಡೂ ವೈಪರೀತ್ಯಗಳನ್ನು ಮೆಟ್ಟಿ ನಿಲ್ಲುವ ನೀತಿ ನಮ್ಮದಾಗಬೇಕು" ಎಂದಿದ್ದಾರೆ. ಭಾರತದ ಅಪೇಕ್ಷಣೀಯ ವಿಜ್ಞಾನ-ತಂತ್ರಜ್ಞಾನದ ಅಭಿವೃದ್ಧಿಯ ನಿರ್ದೇಶನ ಸೂತ್ರವೇ ಇಲ್ಲಿ ಚುಟುಕಿನಲ್ಲಿ ಅಡಗಿದೆ.

* * *

ಕೃಷ್ಣಮೂರ್ತಿ ಸಿರ್ಸಿ ಬರೆದಿರುವ 'ಸಂವಿಧಾನ ಮತ್ತು ಕಾನೂನು' ಈ ಮಾಲಿಕೆಯ ಕೊನೆಯ ಪುಸ್ತಕ. ಇದಕ್ಕೆ ಜಿ.ಆರ್. ಬರೆದಿರುವ 13 ಪುಟಗಳ ದೀರ್ಘ ಮುನ್ನುಡಿಯು ಪ್ರಜಾಪ್ರಭುತ್ವ, ಸಂವಿಧಾನ, ಕಾನೂನು, ನ್ಯಾಯಾಂಗ ಮೊದಲಾದ ಮೂಲಭೂತ ಸಂಸ್ಥೆಗಳ ಹಾಗೂ ಕಲ್ಪನೆಗಳ ಸಮಗ್ರ ಹಾಗೂ ಸಂಕ್ಷಿಪ್ತ ಪರಿಚಯ ನೀಡುತ್ತದೆ. ಗೋಲಕನಾಥ ಪ್ರಕರಣ, ಕೇಶವಾನಂದ ಭಾರತಿ ಪ್ರಕರಣ ಮುಂತಾದ ಹಲವು ಪ್ರಮುಖ ಪ್ರಕರಣಗಳಲ್ಲಿ ಸುಪ್ರೀಂಕೋರ್ಟು ನೀಡಿರುವ ತೀರ್ಪುಗಳನ್ನು ಕುರಿತು ಜಿಜ್ಞಾಸೆ ನಡೆಸಿದ್ದಾರೆ. ಇಡೀ ಮುನ್ನುಡಿಯ ಸಾರಾಂಶದಂತಿರುವ ಈ ವಾಕ್ಯಗಳನ್ನು ಇಲ್ಲಿ ಉಲ್ಲೇಖಿಸಬಹುದು. "ಸಾಕಷ್ಟು ಉತ್ತಮ ಸಂವಿಧಾನಗಳಿದ್ದರೂ ಭ್ರಷ್ಟಾಚಾರ, ಅಮೆರಿಕದಂತಹ ಬಲಿಷ್ಠ ರಾಷ್ಟ್ರದ ಹಸ್ತಕ್ಷೇಪ ಮುಂತಾದ ಕಾರಣಗಳಿಂದ ಪತನಗೊಂಡ ರಾಷ್ಟ್ರೀಯ ಸರ್ಕಾರಗಳು, ಸಂವಿಧಾನಗಳು ಮುಂತಾದುವುಗಳನ್ನು ವಿವರಿಸುತ್ತ "ಪ್ರಜಾಪ್ರಭುತ್ವದ ಕಲ್ಪನೆಗಳಾಗಲಿ, ಸಂವಿಧಾನವಾಗಲಿ ತಮ್ಮ ಮಹತ್ವವನ್ನು ಪಡೆಯುವುದು ಜನಸಮುದಾಯದ ಪ್ರಾಬಲ್ಯ ಹಾಗೂ ಚಳವಳಿಗಳಿಂದ, ಕೇವಲ ಸ್ವರೂಪದಿಂದ ಏನೂ ಸಿದ್ಧಿಸುವುದಿಲ್ಲ. ಆದ್ದರಿಂದ ಸಂವಿಧಾನದಲ್ಲಿರುವ ನಿಬಂಧಗಳು ತಾವೇ ತಾವಾಗಿ ಶಕ್ತಿಯುತವಾಗುವುದಿಲ್ಲ. ಅವಕ್ಕೆ ಸಾಮರ್ಥ್ಯ ಲಭಿಸುವುದು ಜನರ ಪ್ರಜ್ಞೆಯ ಉತ್ಕರ್ಷದಿಂದ."

* * *

ಈ ಎಲ್ಲ ಮುನ್ನುಡಿಗಳನ್ನು ಒಂದುಗೂಡಿಸಿ 'ಸ್ವಾತಂತ್ರ್ಯೋತ್ತರ ಭಾರತ'ದ ನಾನಾ ಮುಖಗಳ ಸಮೀಕ್ಷಾ ಲೇಖನಗಳು ಎಂಬುದಾಗಿಯೂ ನೋಡಬಹುದು. ಕಲೆ, ಸಂಗೀತ, ಸಾಹಿತ್ಯ ಮುಂತಾದ ಕ್ಷೇತ್ರಗಳನ್ನು ಅವಲೋಕಿಸುವ ಪುಸ್ತಕಗಳನ್ನು ಯೋಜಿಸಿದ್ದರೂ ಪ್ರಕಟವಾಗದಿದ್ದ ಕಾರಣ, ಅವು ಈ ಸಮಗ್ರ ಸಮೀಕ್ಷೆಯಿಂದ ಹೊರಗುಳಿದಿವೆ . ಜನಸಂಖ್ಯಾ ಸ್ಫೋಟ, ಪರಿಸರದ ಅವನತಿ - ಇಂತಹ ಕೆಲವು ಪ್ರಮುಖ ನಕಾರಾತ್ಮಕ ಬೆಳವಣಿಗೆಗಳನ್ನು ಕುರಿತು ಅವಲೋಕನ ನಡೆಯಬೇಕಾಗಿತ್ತು (ಎಂದು ಅಭಿಪ್ರಾಯಪಟ್ಟರೆ ಓದುಗ ಮಿತ್ರರು ಅನ್ಯಥಾ ಭಾವಿಸುವುದಿಲ್ಲ ಎಂದು ನಂಬಿದ್ದೇನೆ.) ❑

ನೈತಿಕ ಪ್ರಜ್ಞೆಯ ಹೋರಾಟಗಾರ ಡಾ. ಜಿ. ರಾಮಕೃಷ್ಣ

ವ್ಯಾಸರಾಯ ಬಲ್ಲಾಳ

ಅನ್ಯಾಯವಾದುದೆನಿಸುವುದನ್ನು ಪ್ರತಿಭಟಿಸಲು ಆಸ್ಪದವಿರುವುದೇ ಪ್ರಜಾಪ್ರಭುತ್ವದ ಒಂದು ಗುಣ. ಪ್ರಜಾಪ್ರಭುತ್ವ ಅತ್ಯಂತ ಸಮರ್ಪಕವಾದುದೆನಿಸುವ ಆಡಳಿತೆಯ ವ್ಯವಸ್ಥೆಯೇನಲ್ಲ. ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವವೆಂದು ಕರೆಸಿಕೊಳ್ಳುವ ಭಾರತದಲ್ಲೂ ಇಂಥ ವ್ಯವಸ್ಥೆಯ ಹುಳುಕುಗಳನ್ನು ನಾವು ಸಾಕಷ್ಟು ಕಂಡಿದ್ದೇವೆ. ಆದರೆ ಜನಾಭಿಪ್ರಾಯ ಕೇಂದ್ರಿತವಾದ ಈ ವ್ಯವಸ್ಥೆ ಉಳಿದೆಲ್ಲ ವ್ಯವಸ್ಥೆಗಳಿಗಿಂತ ಮೇಲು, ಎಂದರೆ ಸರ್ವಾಧಿಕಾರ, ರಾಜಾಡಳಿತ, ಮಿಲಿಟರಿ ಆಡಳಿತೆ ಮುಂತಾದ ವ್ಯವಸ್ಥೆಗಳಿಂತ ಮೇಲು ಎಂಬ ತಿಳಿವಳಿಕೆ ಸಾರ್ವತ್ರಿಕವಾಗಿದೆ. ಪ್ರಜಾಪ್ರಭುತ್ವದ ಅಧಿಕಾರ ಚಲಾವಣೆ ಬಹುಸಂಖ್ಯಾಕ ಜನಾಭಿಪ್ರಾಯದ ಮೇಲೆ ನಿಂತಿರಬೇಕಾದರೂ, ಆಡಳಿತೆ ತನ್ನ ಹಾಗೂ ತನ್ನವರ ಸ್ವಾರ್ಥಕ್ಕಾಗಿ ಅಧಿಕಾರಕ್ಕೇ ಅಂಟಿಕೊಂಡಿರಬೇಕು ಎಂಬ ಆಸೆಯಿಂದ ಹಾಗೂ ಸ್ವಂತ ಸುಖಕ್ಕಾಗಿ ನೆರವಾಗಬಹುದಾದ ಆರ್ಥಿಕ ಪ್ರಯೋಜನಗಳ ದೃಷ್ಟಿಯಿಂದ, ಆಡಳಿತದ ಪ್ರಾಮಾಣಿಕತೆಯನ್ನು ಶಂಕಿಸಬಹುದಾದ ರೀತಿಯಲ್ಲಿ ಆಡಳಿತೆಯ ವ್ಯವಸ್ಥೆಯನ್ನು ದುರುಪಯೋಗ ಪಡಿಸಿಕೊಳ್ಳುವ ವಿಚಾರವೂ ನಮಗೆ ತಿಳಿದಿದೆ. ಆಡಳಿತೆಯ ಹುಳುಕುಗಳನ್ನು ಬಯಲಿಗೆಳೆಯಲು ಲೋಕಸತ್ತಾತ್ಮಕ ವ್ಯವಸ್ಥೆಯಲ್ಲಿ ಪ್ರಧಾನ ಪಾತ್ರ ವಹಿಸಬೇಕಾದುದು ಪತ್ರಿಕಾರಂಗ. ಈ ಮಾಧ್ಯಮ ರಂಗವೂ ನಿರ್ಭೀತ ಪ್ರತಿಭಟನಾ ಸಾಧನವೇ ಎಂದು ಯೋಚಿಸುವಾಗಲೂ ಪತ್ರಿಕೆಗಳನ್ನು ತಮ್ಮ ಸ್ವಾರ್ಥ ರಕ್ಷಣೆಗಾಗಿ ಬಳಸಿಕೊಳ್ಳುವ ಬಂಡವಾಳಶಾಹಿ ಪ್ರವೃತ್ತಿಯ ಪತ್ರಿಕೆಯ ಮಾಲಕರು ನಮಗೆ

ಎದುರಾಗುತ್ತಾರೆ. ಅವರು ಆಡಳಿತೆಯೊಡನೆ ಶಾಮೀಲಾಗಿ ಹೊಗಳುಭಟ್ಟರಾಗುವ ಸಾಧ್ಯತೆಯೂ ಇದೆ. ನಿಷ್ಪಕ್ಷಪಾತ ಟೀಕೆಯ ಮುಖವಾಡ ಧರಿಸಿ ಓದುಗರ ವಿಚಾರ ಲಹರಿಯನ್ನು, ಎಂದರೆ ಜನಾಭಿಪ್ರಾಯವನ್ನು, ತಮ್ಮ ಇಚ್ಛೆಗೆ ಸರಿಯಾಗಿ ತಿದ್ದಲು ಪ್ರಯತ್ನಿಸುವ ಸಾಧ್ಯತೆಯೂ ಇದೆ. ಯಾವ ಆಡಳಿತೆಯೂ ಪ್ರತಿಭಟನಾ ರೂಪದ ಟೀಕೆಯನ್ನು ಸಹಿಸುವುದಿಲ್ಲ. ತನ್ನ ಸ್ವಾರ್ಥಕ್ಕಾಗಿ ಇಂಥ ಪ್ರತಿಭಟನೆಯನ್ನು ಹತ್ತಿಕ್ಕುವ ಮಾರ್ಗಗಳನ್ನು, ಉಪಾಯಗಳನ್ನು, ಪತ್ರಕರ್ತರನ್ನು ತಮ್ಮ ಅಭಿಪ್ರಾಯ ಸಮರ್ಥನೆಗಾಗಿ ಸೆಳೆದುಕೊಳ್ಳಲು ಪತ್ರಕರ್ತರಿಗೆ ಕೊಡಬಹುದಾದ ಆಮಿಷಗಳನ್ನು ಚಿಂತಿಸುತ್ತಲೇ ಇರುವ ವಿಚಾರವೂ ನಮಗೆ ತಿಳಿದಿದೆ. ಆದರೆ ಪ್ರತಿಭಟನೆಯೊಂದೇ ಲೋಕ ಸತ್ತಾತ್ಮಕ ಆಡಳಿತೆಯಲ್ಲಿ ನಾಗರಿಕರಿಗೆ ಆಡಳಿತೆಯ ಹುಳುಕುಗಳನ್ನು ಎತ್ತಿ ತೋರಿಸಲು, ಸಾಮಾನ್ಯ ಜನರ ದೈನಂದಿನ ಜೀವನದ ಕಷ್ಟಗಳ ನಿವಾರಣೆ ಹೇಗೆಂದು ಆಡಳಿತೆಯನ್ನು ಪ್ರಶ್ನಿಸಲು ಇರುವ ಏಕೈಕ ಸಾಧನ. ಈ ಕೆಲಸವನ್ನು ನಿರ್ವಹಿಸಬೇಕಾದ ಮಾಧ್ಯಮ ರಂಗವನ್ನೂ ನಂಬಲು ಸಾಧ್ಯವಾಗದಂಥ ಪರಿಸ್ಥಿತಿಯಲ್ಲಿ ಜನಪರ ಸಂಘಟನೆಗಳೇ ಪ್ರತಿಭಟನೆಯ ಹೊಣೆ ಹೊರ ಬೇಕಾಗುವುದು. ದೀರ್ಘಕಾಲ ಜನಪರವೆನಿಸುವ ಕಾಳಜಿಗಳಲ್ಲೇ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡು ಎಲ್ಲ ಜನಾಂದೋಲನಗಳಲ್ಲೂ ಸಕ್ರಿಯವಾಗಿ ಭಾಗವಹಿಸಿ, ದೀನ ದಲಿತರ, ರೈತ ಕಾರ್ಮಿಕರ ಸಂತ್ರಸ್ತರ ನೆರವಿಗೆ ಬರುವ ಡಾ. ಜಿ. ರಾಮಕೃಷ್ಣ ಅವರ ನೆನಪು ನಮಗೆ ಬರುವುದು ಜನತೆಗೆ ಅನ್ಯಾಯವಾಗುತ್ತಿದೆ ಎನ್ನುವ ಸಂದರ್ಭಗಳನ್ನು ಇದಿರಿಸುವ ಪ್ರಸಂಗಗಳು ಬಂದಾಗ.

ಡಾ. ಜಿ. ರಾಮಕೃಷ್ಣ ಅವರಲ್ಲಿ ಆಳವಾದ ಅಧ್ಯಯನದಿಂದ ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ವದ ಇತಿಹಾಸ ಕಂಡಿರುವ ಕಾಣುತ್ತಿರುವ ತಿರುವುಗಳ ತಿಳಿವಳಿಕೆಯಿಂದ ಮಾರ್ಕ್ಸ್, ಲೆನಿನ್ ಅವರ ಸಿದ್ಧಾಂತಗಳ ಆಳವಾದ ಅಧ್ಯಯನದಿಂದ ದೊರಕಿದ ಇತಿಹಾಸ ಪ್ರಜ್ಞೆಯಿಂದ, ಎಲ್ಲ ಕಾಲಗಳಲ್ಲೂ ಸಂತ್ರಸ್ತರಾಗಿ ಉಳಿಯುವ ಜನರ ಕುರಿತ ಸಹಾನುಭೂತಿ, ಅವರನ್ನು ಎಲ್ಲ ಜನಾಂದೋಲನಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಮಾಡಿದೆ. ನಮ್ಮ ಎಲ್ಲ ತಾಪತ್ರಯಗಳಿಗೆ ಮುಖ್ಯ ಕಾರಣಗಳೆನಿಸುವ ಭ್ರಷ್ಟಾಚಾರ, ಹಾಗೂ ಜಾತೀಯತೆಗಳ ವಿರುದ್ಧ ಹೋರಾಡಲು ಯಾವಾಗಲೂ ಸಿದ್ಧರಾಗಿರುವವರು. ಈಗ 'ಹೊಸತು' ಎಂಬ ವೈಚಾರಿಕ ಮಾಸಿಕದ ಸಂಪಾದಕರಾಗಿಯೂ ನಮ್ಮನ್ನು ಕಾಡುತ್ತಿರುವ ಸಮಸ್ಯೆಗಳಿಗೆ ತೀಕ್ಷ್ಣವಾದ ಪ್ರತಿಕ್ರಿಯೆಯನ್ನು ತನ್ನ ಸಂಪಾದಕೀಯಗಳ ಮೂಲಕ ವ್ಯಕ್ತಪಡಿಸುತ್ತಿರುವವರು. ಆಡಳಿತದಲ್ಲಿ ಸ್ವಹಿತ ಸಾಧನೆ, ಭ್ರಷ್ಟಾಚಾರಗಳ ಪ್ರಕರಣಗಳು ಕಾಣಿಸಿಕೊಂಡಾಗ ಇವುಗಳ ಹಿಂದಿರುವ ಕಾರಸ್ಥಾನವನ್ನು ತಿಳಿಯಲು ರಿಟ್ ಅರ್ಜಿಗಳ ಮೂಲಕ ನ್ಯಾಯಾಲಯದ ಮೊರೆ ಹೋಗಲೂ ಅಂಜದವರು. ಯಾವಾಗಲೂ ಸ್ವಚ್ಛತೆಯ ಸಂಕೇತವೆನಿಸುವ ಬಿಳಿಯ ಉಡುಪನ್ನೇ ಧರಿಸುವ ರಾಮಕೃಷ್ಣ ಅವರ ವ್ಯಕ್ತಿತ್ವವೂ ಸ್ವಚ್ಛತೆಗೆ ಒಂದು ಸಂಕೇತವಾಗಿದೆ.

ದೀರ್ಘಕಾಲ ಮುಂಬಯಿಯಲ್ಲಿದ್ದ ನನಗೆ ಡಾ. ರಾಮಕೃಷ್ಣರವರ ಹೆಚ್ಚಿನ ಒಡನಾಟ ಸಾಧ್ಯವಾದದ್ದು ಬೆಂಗಳೂರಿಗೆ ಬಂದು ನೆಲೆಸಿದ ಮೇಲೆಯೆ. ಆದರೆ ಅವರ ಕಾರ್ಯವ್ಯಾಪ್ತಿಯ

ವಿವರಗಳು ಕರ್ನಾಟಕದ ಪತ್ರಿಕೆಗಳಲ್ಲಿ ದೊರಕುತ್ತಿದ್ದುದರಿಂದ ಅವರ ವಿಚಾರ ನನ್ನ ತಿಳಿವಳಿಕೆಯನ್ನು ಹೆಚ್ಚಿಸಿಕೊಂಡಿದ್ದೆ. ಸ್ಪಷ್ಟವಾದ ಎಡಪಂಥೀಯ ನಿಲುವು, ರೈತ ಕಾರ್ಮಿಕರ ಬಗ್ಗೆ ವಿಶೇಷವಾದ ಆಸಕ್ತಿ ಜನತೆಯ ಹಿತವನ್ನೆ ಗಮನದಲ್ಲಿರಿಸಿಕೊಂಡು ಎಂಥ ಇದಿರಾಳಿಯನ್ನಾದರೂ ಪ್ರಶ್ನಿಸಬಲ್ಲೆ ಎಂಬ ನೈತಿಕ ಪ್ರಜ್ಞೆ ಇವೆಲ್ಲ ಡಾ. ರಾಮಕೃಷ್ಣ ಅವರ ಸರಳ ಜೀವನದಲ್ಲೂ ಎದ್ದು ತೋರುವ ಗುಣಗಳು.

ಅವರ ಚಿಂತನಶೀಲ ಪ್ರವೃತ್ತಿ ಅವರನ್ನು ನಿತ್ಯ ಅಧ್ಯಯನಶೀಲರನ್ನಾಗಿ ಮಾಡಿದೆ. ತತ್ವಶಾಸ್ತ್ರಗಳ ತೌಲನಿಕ ಅಧ್ಯಯನ, ಚಾರಿತ್ರಿಕ ಭೌತವಾದದ ಸ್ಪಷ್ಟ ಜ್ಞಾನ, ಮಾರ್ಕ್ಸ್, ಲೆನಿನ್‌ರ ತತ್ವಗಳಲ್ಲೆ ಅಪಾರ ವಿಶ್ವಾಸ, ಸಾರ್ವಜನಿಕ ಜೀವನದ ಎಲ್ಲ ಸಮಸ್ಯೆಗಳನ್ನು ವಿಶ್ಲೇಷಿಸಲು ಅಗತ್ಯವೆನಿಸುವ ಗ್ರಂಥಗಳ, ಪತ್ರಿಕೆಗಳ ಓದು, ಇವೆಲ್ಲ ಅವರ ನಿತ್ಯ ರೂಢಿಯೇ ಎಂಬಂತೆ ಅವರು ಕರ್ನಾಟಕದ ಯಾವ ಮೂಲೆಯಲ್ಲೇ ಇರಲಿ, ಸಾಮಾನ್ಯ ನಾಗರಿಕರ ಬವಣೆಯನ್ನು ಅರ್ಥಮಾಡಿಕೊಳ್ಳುವುದರಿಂದ, ವ್ಯಕ್ತವಾಗುತ್ತದೆ. ಸ್ವತಃ ಗ್ರಂಥಕರ್ತರೂ ಆಗಿರುವ ಅವರು 'ನವಕರ್ನಾಟಕ ಪ್ರಕಾಶನದವರು ನಮ್ಮ ಸ್ವಾತಂತ್ರ್ಯದ ಸುವರ್ಣೋತ್ಸವದ ಸಂದರ್ಭದಲ್ಲಿ ಪ್ರಕಟಿಸಿದ ಸುವರ್ಣೋತ್ಸವ ಮಾಲಿಕೆಯ ಎಲ್ಲ ಕೃತಿಗಳಿಗೆ ವಿದ್ವತ್ಪೂರ್ಣ ಪ್ರಸ್ತಾವನೆಗಳನ್ನು ಬರೆದಿದ್ದಾರೆ. ಈ ಮಾಲಿಕೆಯಲ್ಲಿ ಪ್ರಕಟವಾದ ನನ್ನದೊಂದು ಕೃತಿ 'ಸ್ವಾತಂತ್ರ್ಯಕ್ಕೆ ಐವತ್ತು ವರ್ಷ'ಕ್ಕೂ ಅವರು ಬರೆದ ಪ್ರಸ್ತಾವನೆ ತುಂಬ ಅರ್ಥಗರ್ಭಿತವಾಗಿದೆ.

ನನ್ನ ಈ ಕಿರು ಲೇಖನದಲ್ಲಿ ಡಾ. ರಾಮಕೃಷ್ಣ ಅವರ ಸಾಧನೆಯ ಎಲ್ಲ ಮುಖಗಳನ್ನು ಪರಿಚಯಿಸುವ ಶಕ್ತಿ ನನಗಿದೆಯೇ ಎಂಬ ಸಂದೇಹದಿಂದಾಗಿ, ನನಗೆ ಮೆಚ್ಚುಗೆಯಾದ ಅವರ ಸಂಶೋಧನೆಯ ಕೃತಿ. 'ಭಾರತೀಯ ವಿಜ್ಞಾನದ ಹಾದಿ'ಯ ಕುರಿತು ಎರಡು ಮಾತು ಬರೆಯುವುದು ಉಚಿತವೆನಿಸುತ್ತದೆ.

'ಭಾರತೀಯ ವಿಜ್ಞಾನದ ಹಾದಿ' ಒಂದು ಅಪೂರ್ವ ವೈಚಾರಿಕ ಕೃತಿ. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಡಾ. ರಾಮಕೃಷ್ಣ ಅವರಿಗೆ ಎರಡು ವರ್ಷ ಕಾಲದ ಸಂದರ್ಶಕ ಪ್ರಾಧ್ಯಾಪಕತ್ವವನ್ನು ನೀಡಿ ಈ ಸಂಶೋಧನೆಗೆ ಅನುವು ಮಾಡಿಕೊಟ್ಟಿತ್ತು. ಭಾರತೀಯ ವೈಜ್ಞಾನಿಕ ಸಾಧನೆಯ ಬಗೆಗೆ ನಮ್ಮ ಚಿಂತನೆಯಲ್ಲಿ ಎರಡು ವಿಚಾರಧಾರೆಗಳಿವೆ. ಒಂದು, ನಮ್ಮ ವೈಜ್ಞಾನಿಕ ಪರಂಪರೆಯಲ್ಲಿ ಎಲ್ಲವೂ ಇತ್ತು ಎನ್ನುವ ಸಾಕಷ್ಟು ಆಧಾರಗಳಿಲ್ಲದ ವಿಚಾರ ಸರಣಿ. ಇನ್ನೊಂದರಲ್ಲಿ ವೈಜ್ಞಾನಿಕ ವಿಚಾರಧಾರೆಯೆಲ್ಲ ಪಶ್ಚಿಮದಿಂದಲೇ ಬಂದುದು ಎನ್ನುವ ಆಧುನಿಕತೆಯನ್ನೂ, ಇಂಗ್ಲಿಷ್ ಭಾಷೆಯನ್ನೂ ಮುಕ್ತಮನಸ್ಸಿನಿಂದ ನೆಚ್ಚಿಕೊಂಡ ರೀತಿ. ಎರಡೂ ಅರ್ಧಸತ್ಯಗಳೆಂದು ಪ್ರತಿಪಾದಿಸುವ ಡಾ. ರಾಮಕೃಷ್ಣ ಅವರು ಆರಂಭದಲ್ಲೇ ವಿಮಾನ ಸಾರಿಗೆಯೂ ನಮ್ಮ ಪ್ರಾಚೀನರ ಇತಿಹಾಸದಲ್ಲಿದೆ ಎನ್ನುವವರಿಗೆ ಆಗ ಬಳಸಲಾಗುತ್ತಿದ್ದ ಇಂಧನ ಯಾವುದು? ಎನ್ನುವ ಪ್ರಶ್ನೆ ಕೇಳುತ್ತಾರೆ. ಹರಪ್ಪಾ ಮೊಹೆಂಜೋದಾರೊ ನಾಗರಿಕತೆಗಳ ಕಾಲದಿಂದ ನಮ್ಮ ಖಗೋಳಶಾಸ್ತ್ರ ಹಾಗೂ ಗಣಿತಗಳ ಜ್ಞಾನ ಬೆಳೆದು ಬಂದ ರೀತಿ ಮುಂದೆ ಕತ್ತಲಾಗಿ

ಕಂಡ ಹಲವಾರು ಶತಮಾನಗಳು ಆಮೇಲೆ ನಡೆದ ವೈಜ್ಞಾನಿಕ ಸಾಧನೆ, ಅದಕ್ಕೆ ಬಂದ ಪ್ರತಿಕೂಲ ಸನ್ನಿವೇಶಗಳು ಇವನ್ನೆಲ್ಲ ವಸ್ತುನಿಷ್ಠ ರೀತಿಯಲ್ಲಿ ವಿಮರ್ಶಿಸಿದ್ದಾರೆ. ಧರ್ಮಶಾಸ್ತ್ರಕಾರರ ಹಿಡಿತದಿಂದಾಗಿ ಮುಕ್ತವಾದ ವೈಜ್ಞಾನಿಕ ಪದ್ಧತಿಗೆ ಉಂಟಾದ ತೊಡಕುಗಳನ್ನು ಚರಕ, ಸುಶ್ರುತ ಸಂಹಿತೆಗಳನ್ನು ವಿವೇಚಿಸುತ್ತ ಉದಾಹರಣೆಗಳ ಸಹಿತ ನಮ್ಮ ಆಯುರ್ವೇದದ ಪ್ರಗತಿಯೂ ಇದಿರಿಸಬೇಕಾಗಿ ಬಂದ ತೊಡಕುಗಳನ್ನು ವಿಶ್ಲೇಷಿಸಿದ್ದಾರೆ. ಸುಶ್ರುತ ಜಗತ್ತಿನ ಮೊದಲ ಶಸ್ತ್ರಕ್ರಿಯಾ ತಜ್ಞ ಎಂಬ ನಂಬಿಕೆ ಇದೆ. ಮರಣೋತ್ತರ ಶವ ಪರೀಕ್ಷೆಯಿಂದ ಕೆಲವು ಮುಖ್ಯ ಸಂಗತಿಗಳನ್ನು ತಿಳಿದುಕೊಳ್ಳಬಹುದೆಂಬ ತಿಳಿವಳಿಕೆ ಪರಾಶರ ಸ್ಮೃತಿಯ ಕಾಲಕ್ಕೆ ಪ್ರಚಲಿತ ವಾಗಿದ್ದುದನ್ನು ಡಾ. ರಾಮಕೃಷ್ಣ ಅವರು ನೆನಪಿಸಿ, ಯಾವುದಾದರೂ ಹಸುವು ಕೊಲ್ಲಲ್ಪಟ್ಟಿದ್ದರೆ ಅದರ ರಕ್ತವನ್ನು ಪರೀಕ್ಷಿಸುವುದರ ಮೂಲಕ ಅದು ನಿಜಕ್ಕೂ ಕೊಲ್ಲಲ್ಪಟ್ಟಿತ್ತೇ ಅಥವಾ ತನ್ನ ನಿಶ್ಶಕ್ತಿ ಮತ್ತು ರೋಗಗಳಿಂದ ಸತ್ತಿತೇ ಎಂದು ತಿಳಿಯಬಹುದು ಎಂದು ಆ ಸ್ಮೃತಿಯಲ್ಲಿ ಹೇಳಿದ್ದನ್ನು ನೆನಪಿಸುತ್ತಾರೆ. ಹೀಗೆ ಹಸುವಿನ ಮರಣೋತ್ತರ ಶವ ಪರೀಕ್ಷೆಯನ್ನು ವಿಧಿಸಿದ್ದ ಕಾಲದಿಂದ ಸ್ಥಿತ್ಯಂತರದಲ್ಲಿ ಯಾವುದೇ ಶವ ಪರೀಕ್ಷೆ ನಿಷಿದ್ಧವೆಂಬ ಪದ್ಧತಿ ಪ್ರಾಚೀನ ಭಾರತದಲ್ಲಿ ಸಂಪ್ರದಾಯವಾದಿಗಳು ಪಡೆದ ಮೇಲುಗೈಗೆ ನಿದರ್ಶನವೆಂದಿದ್ದಾರೆ. ಹಾಗೆಯೇ ಇದರಿಂದ ವೈಜ್ಞಾನಿಕ ಕುತೂಹಲ ಮತ್ತು ಜ್ಞಾನಗಳ ಬೆಳವಣಿಗೆಗೆ ಅಡ್ಡಗಾಲು ಹಾಕಿದಂತೆಯೂ ಆಗಿದೆ. ಸುಶ್ರುತನು ಶವವನ್ನು ಮುಟ್ಟುವುದಿರಲಿ ಅದನ್ನು ಕುಯ್ದು ಪರೀಕ್ಷೆ ಮಾಡಲು ಸಹ ಕ್ರಮಗಳನ್ನು ಸೂಚಿಸಿದ್ದಾನೆ. ಶವವನ್ನು ಕೆಲ ದಿನಗಳ ಮಟ್ಟಿಗೆ ನಿಂತ ನೀರಲ್ಲಿ ಮುಳುಗಿಸಿಟ್ಟು, ಆಮೇಲೆ ಬಿದಿರಿನಿಂದ ಮೇಲ್ಚರ್ಮವನ್ನು ಹೆರೆದು ಅಣಿಮಾಡಿಕೊಂಡರೆ ಶವದ ಒಳಭಾಗಗಳನ್ನು ನೋಡಲು, ಶವವನ್ನು ಕುಯ್ಯುವುದು ಸುಲಭವಾಗತ್ತದೆಂದು ಅವನು ಹೇಳಿದ್ದಾನೆ. ಆದರೆ ಧರ್ಮಶಾಸ್ತ್ರಕಾರರ ಸಿಟ್ಟಿಗೆ ವೈದ್ಯಕೀಯವು ತುತ್ತಾದ ನಂತರ ಶವವನ್ನು ಮುಟ್ಟುವುದೇ ಅಪರಾಧವೆಂದು ಎಣಿಸಲಾಯಿತೆಂಬುದನ್ನೂ ಡಾ. ರಾಮಕೃಷ್ಣ ತಿಳಿಸಿದ್ದಾರೆ. ವರ್ಣಾಶ್ರಮ ವ್ಯವಸ್ಥೆ ರೂಢಿಗೆ ಬಂದ ಮೇಲೆ ಧರ್ಮಶಾಸ್ತ್ರಕಾರರ ಪ್ರಾಬಲ್ಯ ಹೆಚ್ಚಿ, ನಮ್ಮ ವೈಜ್ಞಾನಿಕ ಪ್ರಗತಿ ಎಲ್ಲ ರಂಗಗಳಲ್ಲೂ ಧರ್ಮಶಾಸ್ತ್ರಕಾರರ ಹಿಡಿತದಲ್ಲಿ ಬಂದುದನ್ನು ಸಾಕಷ್ಟು ಉದಾಹರಣೆಗಳಿಂದ ಡಾ. ರಾಮಕೃಷ್ಣ ಅವರು ಈ ಗ್ರಂಥದಲ್ಲಿ ತೋರಿಸಿಕೊಟ್ಟಿದ್ದಾರೆ.

ಮೇಲೆ ಬರೆದುದೆಲ್ಲ ಅವರ ಸಂಶೋಧನಾ ಕೃತಿ 'ಭಾರತೀಯ ವಿಜ್ಞಾನದ ಹಾದಿ'ಯ ಕುರಿತಾಯಿತು. ಅವರು ನಿರ್ವಹಿಸುವ ಯಾವ ಕೆಲಸದಲ್ಲಾಗಲೀ ಅವರು ನೆಚ್ಚಿಕೊಂಡಿರುವ ಸೈದ್ಧಾಂತಿಕ ಹಿನ್ನೆಲೆ ಇದೆಯೆಂಬುದನ್ನು ನಾವು ಒಪ್ಪಿಕೊಂಡರೂ, ಅದಕ್ಕೆ ಪೂರಕವೆನಿಸುವಂತೆ ಮಾನವೀಯ ನೈತಿಕ ಪ್ರಜ್ಞೆ ಕ್ರಿಯಾಶೀಲವಾಗಿರುತ್ತದೆ ಎಂಬುದನ್ನೂ ನಾವು ನೆನಪಿನಲ್ಲಿರಿಸಿ ಕೊಳ್ಳಬೇಕು. ಈ ಸಂದರ್ಭದಲ್ಲಿ ನನಗೆ ನೆನಪಾಗುವುದು ನೈತಿಕತೆಯ ವಿಚಾರ. ಪ್ರಸಿದ್ಧ ಜೀವ ವಿಜ್ಞಾನಿ ಜೆ. ಬ್ರನೌಸ್ಕಿ ಹೇಳಿದ ಎರಡು ಮಾತುಗಳು: 'ಎರಡು ವಿಚಾರ ಪ್ರಣಾಲಿಗಳು ಸೇರಿ ನೈತಿಕತೆಯನ್ನು ರೂಪಿಸುತ್ತವೆ. ಒಂದು, ಇತರರ ಕುರಿತ ನಮ್ಮ ತಿಳಿವಳಿಕೆ ಸ್ಪಷ್ಟವಾಗಿರಬೇಕು. ಎಂದರೆ ಎಲ್ಲರಿಗೂ ಅನ್ವಯವಾಗುವ ನಂಬಿಕೆಗಳು, ತ್ಯಾಗದ ಮನೋಭಾವದ ವಿಶಾಲ ಹೃದಯ

ಮತ್ತು ಮೃದುವಾದ ನಡೆವಳಿಕೆ, ಮಾನವೀಯ ಪ್ರೀತಿಯ ಸಂವೇದನೆ. ಮತ್ತೊಂದು ನಿಶ್ಚಲವೆನಿಸುವ ತೀರ್ಮಾನ, ಯಾವುದೇ ಅಡ್ಡ ಯೋಚನೆ ಬಾರದಂಥದು ಮುಂದೆ ಏನಾಗ ಬಹುದೆಂಬ ನಿರ್ಧಾರ. ತನಗೂ ಇತರರಿಗೂ ಆ ಸಂದರ್ಭದಲ್ಲಿ ಒಬ್ಬ ನಾಯಕನಾಗಿಯೋ, ಹೇಡಿಯಾಗಿಯೋ ವರ್ತಿಸಿದರೆ ಏನಾಗಬಹುದೆಂಬ ತಿಳಿವಳಿಕೆ. ಮಾನವೀಯವೆನಿಸುವ ಪ್ರೀತಿಯನ್ನು ಯಾವ ಭೀತಿಗೂ ಒಳಗಾಗದ, ವೈಜ್ಞಾನಿಕವೆನಿಸುವ ನಿರ್ಧಾರಕ್ಕೆ ತಂದಾಗ ದೊರಕುವುದೇ ಶ್ರೇಷ್ಠ ಮಟ್ಟದ ನೈತಿಕತೆ.' 'A Sense of Future' ಗ್ರಂಥದಲ್ಲಿ ಬ್ರನೌಸ್ಕಿ ಹೇಳಿದ ಮಾತುಗಳಿವು. ಡಾ. ರಾಮಕೃಷ್ಣ ಅವರ ವ್ಯಕ್ತಿತ್ವಕ್ಕೂ ಈ ಮಾತು ಅನ್ವಯಿಸುತ್ತದೆ.

❑

ಭಾಗ ಮೂರು

ಸಂಸ್ಕೃತಿ ಚಿಂತನೆ

WTO, ಉನ್ನತ ಶಿಕ್ಷಣ ಮತ್ತು ಸಾಮ್ರಾಜ್ಯಶಾಹಿ

ಪ್ರೊ.ವಿ.ಎಸ್. ಲಕ್ಷ್ಮೀನಾರಾಯಣ

WTO ಪ್ರಣೀತ ಉನ್ನತ ಶಿಕ್ಷಣ, ನವವಸಾಹತೀಕರಣದ ಪ್ರಯತ್ನಗಳ ನೇರ ಪರಿಣಾಮ. ಸಾಮ್ರಾಜ್ಯಶಾಹಿ ಶಕ್ತಿಗಳು ದೇಶೀಯ ವಿದ್ಯಾಭ್ಯಾಸ ಪದ್ಧತಿಗಳನ್ನು ನಿರ್ನಾಮಗೊಳಿಸಿ, ಪಶ್ಚಿಮದ ಶ್ರೀಮಂತರ ರಾಷ್ಟ್ರಗಳ ಪರವಾದ ಬಂಡವಾಳಶಾಹೀ ತಾತ್ವಿಕ ದರ್ಶನ ಮತ್ತು ಮೌಲ್ಯ ಪದ್ಧತಿಗಳನ್ನು ಏಕರೂಪವಾಗಿ ಎಲ್ಲೆಡೆ ಹರಡಲು ಹಾಕಿಕೊಂಡಿರುವ ಸಾಮಾಜಿಕ-ಸಾಂಸ್ಕೃತಿಕ ಕಾರ್ಯಯೋಜನೆ. ಶಿಕ್ಷಣವನ್ನು ಅದರ ಸಾಮಾಜಿಕ-ಸಾಂಸ್ಕೃತಿಕ ಕಾಳಜಿಗಳಿಂದ ಬೇರ್ಪಡಿಸಿ ಸರಕೀಕರಣಗೊಳಿಸಿ, ಕೇಂದ್ರೀಕೃತ ಬಂಡವಾಳಶಾಹಿ ವ್ಯವಸ್ಥೆಯ ಪ್ರಮುಖ ಅಂಗವನ್ನಾಗಿ ಮಾಡುವ ರಾಜಕೀಯ ಆಕ್ರಮಣ.

ಸುಂಕ ಮತ್ತು ವ್ಯಾಪಾರದ ಮೇಲಿನ ಒಪ್ಪಂದ (GATT)ದ ಉಗಮ 1947ರಲ್ಲೇ ಆಗಿದ್ದರೂ 1963ರಿಂದ ಈಚೆಗೆ ಜಿನೆವಾ, ಟೋಕಿಯೋ ಮತ್ತು ಉರುಗ್ವೆ ಸುತ್ತಿನ ಮಾತುಕತೆ-ಒಪ್ಪಂದಗಳಲ್ಲಿ ಅದಕ್ಕೆ ನಿಜವಾದ ಅರ್ಥದಲ್ಲಿ ಜಾಗತೀಕರಣದ ಶಕ್ತಿ ಪ್ರಾಪ್ತವಾಯಿತು. ಪ್ರಪಂಚದ ವಿವಿಧ ದೇಶಗಳ ರಾಜಕೀಯ ಸಿದ್ಧಾಂತಗಳು ಏನೇ ಇದ್ದರೂ, ಆರ್ಥಿಕವಾಗಿ ಬಂಡವಾಳಶಾಹಿ ಪದ್ಧತಿಯನ್ನು ಮುನ್ನೊತ್ತುವ ಈ ಒಪ್ಪಂದಗಳ ಸಾಮಾನ್ಯ ಅಂಶಗಳೆಂದರೆ; ಸುಂಕಗಳ ಕಡಿತ, ದೇಶೀಯವಾದ ನಿರ್ಬಂಧಗಳ ನಿವಾರಣೆ, ಯೂರೋಪಿನ ದೇಶಗಳು ತೃತೀಯ ಜಗತ್ತಿನಲ್ಲಿ ಅನಿರ್ಬಂಧಿತ ವ್ಯಾಪಾರ ಮಾಡುವ ಮುಕ್ತ ಅವಕಾಶ, ಹಿಂದುಳಿದ ಮತ್ತು ಪ್ರಗತಿಶೀಲ ದೇಶಗಳಲ್ಲಿ ದೊರೆಯಬಹುದಾದ ಅಗ್ಗದ ಶ್ರಮ ಮೌಲ್ಯ ಮತ್ತು ಕಚ್ಚಾ ಸಾಮಗ್ರಿಗಳ ಮೇಲಿನ ನಿಯಂತ್ರಣ ಮತ್ತು ಬಳಕೆ. ಈ

ಕ್ರಮಗಳು ಹೊರನೋಟಕ್ಕೆ ಪ್ರಜಾತಾಂತ್ರಿಕ ವೆಂಬಂತೆ ತೋರಿದರೂ ವಾಸ್ತವವಾಗಿ ಬಲಿಷ್ಠ ರಾಷ್ಟ್ರಗಳ ಮೇಲೆ, ಅಂತಾರಾಷ್ಟ್ರೀಯ ಕಾನೂನಿನ ಹೆಸರಿನಲ್ಲಿ ನಡೆಸುವ ದಬ್ಬಾಳಿಕೆಯೇ ಆಗಿದೆ. ಕೃಷಿ, ಹೈನು ಉತ್ಪನ್ನಗಳು, ಜವಳಿ ಉದ್ಯಮ, ಸೇವೆ, ಬೌದ್ಧಿಕ ಆಸ್ತಿ ಹಕ್ಕುಗಳು, ಬಂಡವಾಳ ಹೂಡಿಕೆ ಹೀಗೆ ಒಂದು ದೇಶದ ಆರ್ಥಿಕತೆಯ ಮೂಲ ಅಂಶಗಳನ್ನೇ, ಜನರ ಬದುಕಿನ ರೀತಿ-ನೀತಿಗಳನ್ನೇ ನೇರವಾಗಿ ಬಲಿಷ್ಠ ರಾಷ್ಟ್ರಗಳ ನಿಯಂತ್ರಣಕ್ಕೆ ಒಪ್ಪಿಸುವ ಕ್ರಮಗಳು ಈ ಎಲ್ಲಾ ಒಪ್ಪಂದಗಳು.

ಈ ಎಲ್ಲಾ ಒಪ್ಪಂದಗಳಿಗೆ ಅಂತಾರಾಷ್ಟ್ರೀಯ ಕಾನೂನಿನ ಮಾನ್ಯತೆಯನ್ನು ತಂದುಕೊಡುವ ಸಂಸ್ಥೆ WTO. ಆದ್ದರಿಂದಲೇ WTO ಅನ್ನು 'ಒಪ್ಪಂದಗಳ ಒಪ್ಪಂದ' ಎಂದು ಕರೆಯುತ್ತಾರೆ.

ಜಾಗತಿಕ ಅರ್ಥವ್ಯವಸ್ಥೆ ನಗ್ನವಾಗಿ ಬಂಡವಾಳಶಾಹಿ ವ್ಯವಸ್ಥೆಯಾಗಿ, ದೇಶ-ರಾಷ್ಟ್ರಗಳ ಭೇದವಿಲ್ಲದೆ, ವ್ಯಾಪಾರಕ್ಕೆ ಸಂಬಂಧಿಸಿದ ವಿಷಯಗಳ ಮೇಲು ಉಸ್ತುವಾರಿಯನ್ನು ನೋಡಿ ಕೊಳ್ಳಲು ಅನುವಾಗುವಂತೆ, ಸಾಮ್ರಾಜ್ಯಶಾಹಿ ಶಕ್ತಿಗಳು ಮಾಡಿಕೊಂಡಿರುವ 'ಶಾಶ್ವತ' ಸಂಸ್ಥೆ ಇದು.

ಶಿಕ್ಷಣಕ್ಕೆ ಸಂಬಂಧಿಸಿದಂತೆ WTO ಶರತ್ತುಗಳಲ್ಲಿನ ಬಹುಮುಖ್ಯವಾದ ಅಂಶವೆಂದರೆ ಶಿಕ್ಷಣದ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾಳಜಿಗಳನ್ನು ಮೂಲೆಗೊತ್ತಿ ಅದನ್ನು ಲಾಭದಾಯಕ ಉದ್ಯಮದ ಸರಕೆಂದು ಪರಿಗಣಿಸುವುದು, ಮತ್ತು ದೇಶೀಯ ಸರ್ಕಾರಗಳ ಹಿಡಿತದಿಂದ ಬಿಡುಗಡೆಗೊಳಿಸಿ ದೇಶ ದೇಶಗಳ ನಡುವಿನ ಗಡಿಗಳ ನಿರ್ಬಂಧವಿಲ್ಲದೆ, ಬಂಡವಾಳಶಾಹಿಗಳ ನೇರ ಹಿಡಿತಕ್ಕೆ ಒಳಪಡಿಸುವುದು. ಅನಿರ್ಬಂಧಿತ ಸ್ಪರ್ಧೆಯನ್ನು ಉತ್ತೇಜಿಸಿ ಬಲಿಷ್ಠರು ಮಾತ್ರ ಬದುಕುಳಿಯುವಂಥ, ದುರ್ಬಲರನ್ನು ಪ್ರಜಾತಾಂತ್ರಿಕವಾಗಿ ಚುನಾಯಿತಗೊಂಡ ಆಯಾ ಸರ್ಕಾರಗಳೇ ರಕ್ಷಿಸಲಾಗದಂಥ ವ್ಯವಸ್ಥೆಯನ್ನು ಜಾರಿಗೆ ತರುವುದು. ಬಂಡವಾಳಶಾಹಿ ಪ್ರಜಾತಂತ್ರ ದಲ್ಲಿ ಬಲಿಷ್ಠರಿಗೆ ದುರ್ಬಲರನ್ನು ತುಳಿಯುವ ಹಕ್ಕು 'ಸಂವಿಧಾನ ಬದ್ಧ'ವಾಗೇ ಇರುವುದು ಎಲ್ಲರಿಗೂ ತಿಳಿದ ವಿಷಯ.

WTO ಪ್ರಣೀತ ಶಿಕ್ಷಣ ಪದ್ಧತಿಯಲ್ಲಿ ವಿದ್ಯೆ ಸಾಮಾಜಿಕ ಸಂಪತ್ತಲ್ಲ. ಭಾಷೆ, ಕೌಶಲ, ಜ್ಞಾನ, ಪರಿಣತಿ, ಸಂಶೋಧನಾ ಸಾಮರ್ಥ್ಯ, ಸಂಶೋಧಿತ ವಿಷಯಗಳು ಹೀಗೆ ಎಲ್ಲವೂ ಶಿಕ್ಷಣವನ್ನು ನಿಯಂತ್ರಿಸುವ ಬಲಿಷ್ಠ ಸಂಸ್ಥೆಗಳ ಸ್ವತ್ತಾಗುತ್ತವೆ. ಸಬಲರು ಮತ್ತು ದುರ್ಬಲರ ನಡುವಿನ ಕೊಡು-ಕೊಳ್ಳುವ ಯಾವುದೇ ಒಪ್ಪಂದದಲ್ಲಿ ಶರತ್ತುಗಳು ಎಷ್ಟೇ 'ಪ್ರಜಾತಾಂತ್ರಿಕ'ವಾಗಿ, 'ಮುಕ್ತ'ವಾಗಿ ಕಂಡರೂ, ಅವು ಸ್ಪಷ್ಟವಾಗಿ ಸಬಲರಿಗೆ ಲಾಭದಾಯಕವೂ ದುರ್ಬಲರಿಗೆ ಘಾತಕವೂ ಆಗಿರುತ್ತವೆ. 3000 ಕೋಟಿ ಡಾಲರುಗಳ ಮೌಲ್ಯದ ಶೈಕ್ಷಣಿಕ ಚಟುವಟಿಕೆಗಳನ್ನು WTO ಶಿಕ್ಷಣದ ವಹಿವಾಟೆಂದು ಪರಿಗಣಿಸುತ್ತದೆ. ಈ ವಹಿವಾಟಿನಲ್ಲಿ 'ಜ್ಞಾನೋದ್ಯಮ' (Knowledge industry) ಎನಿಸಿಕೊಳ್ಳುತ್ತದೆ. ಶಿಕ್ಷಕರು 'ಜ್ಞಾನಕಾರ್ಮಿಕರು' (Knowledge workers) ಎನಿಸಿಕೊಳ್ಳುತ್ತಾರೆ. ವಿದ್ಯಾರ್ಥಿಗಳು, ಶಿಕ್ಷಣ ಪಡೆಯುವಾಗ 'ಗಿರಾಕಿ'ಗಳೆಂದೂ, ಪಡೆದು ಕೆಲಸ ಹುಡುಕುವಾಗ 'ಉದ್ಯೋಗೋದ್ಯಮ' (Job industry) ಅಥವಾ ಉದ್ಯೋಗ

ಮಾರುಕಟ್ಟೆ (Job market)ಯಲ್ಲಿ ಬಿಕರಿಗೊಳ್ಳಬೇಕಾದ ಸರಕುಗಳಾಗುತ್ತಾರೆ. ಯಾರು ಕಡಿಮೆ ಬೆಲೆಗೆ ಸಿಗುವ ಉತ್ತಮ ಸರಕುಗಳೊ ಅವರಿಗೆ ಮಾರುಕಟ್ಟೆಯಲ್ಲಿ 'ಉತ್ತಮ ಭವಿಷ್ಯವಿದೆ', ಉತ್ತಮ ವಿದ್ಯಾರ್ಥಿಗಳಾಗುವುದೆಂದರೆ, 'ಉತ್ತಮ' ಸರಕುಗಳಾಗುವುದು. ಈ ಉತ್ತಮ ಸರಕುಗಳನ್ನು ಉತ್ಪಾದಿಸಲು ಉತ್ತಮ ಯಂತ್ರ (ಶಿಕ್ಷಕರು) ಉತ್ತಮ ಕೌಶಲಗಳ ಅಭಿವೃದ್ಧಿ (Skill development) ಮತ್ತು ಒಟ್ಟು ಗುಣಮಟ್ಟದ ನಿರ್ವಹಣೆ (Total quality management) ಅಗತ್ಯವಾಗುತ್ತದೆ. ಇವನ್ನು ಆಗುಮಾಡಲೆಂದೇ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಸರ್ಕಾರ ಮತ್ತು ಮಾನವಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯಗಳ ನೇರ ಉಸ್ತುವಾರಿಕೆಯಲ್ಲಿ, TQM ಕಾರ್ಯಾಗಾರಗಳು, ಪಠ್ಯಕ್ರಮಗಳ ನವೀಕರಣ, ಉನ್ನತ ಶಿಕ್ಷಣ ಪಠ್ಯಗಳ ಮರು ವರ್ಗೀಕರಣ ಮತ್ತು ಸಂಬಂಧಿಸಿದ ತಾತ್ವಿಕ ನಿರೂಪಣೆ-ಚರ್ಚೆಗಳು, ಸಂಕಿರಣ ಸಮಾವೇಶಗಳು ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತಿವೆ. ಆದರೆ ಶಿಕ್ಷಣ ಜಾಗತಿಕ ವ್ಯಾಪಾರೀಕರಣದ ಕಸರತ್ತುಗಳಲ್ಲಿ, WTOದ ಪಾತ್ರ ಮತ್ತು ಬಂಡವಾಳಶಾಹಿಯ, ನವವಸಾಹತೀಕರಣದ ಘಾತಕ ಅಂಶಗಳನ್ನು ಮರೆಮಾಚಿ 'ಜಾಗತೀಕರಣದ ಈ ದಿನಗಳಲ್ಲಿ ಶಿಕ್ಷಣ-ಶಿಕ್ಷಕ-ಶಿಕ್ಷಿತರುಗಳ ಗುಣಮಟ್ಟವನ್ನು ಕಾಯ್ದುಕೊಳ್ಳದೇ ಹೋದರೆ ನಾಶವಾಗಬೇಕಾದೀತೆಂದು' ಎಚ್ಚರಿಸಿ TQMನ ಮಹತ್ವವನ್ನು ಮನಗಾಣಿಸಲಾಗುತ್ತಿದೆ. ಶಿಕ್ಷಣದ ವ್ಯಾಪಾರೀಕರಣವೇ, ಮರುವಸಾಹತೀಕರಣವೇ, WTOದ ಶರತ್ತುಗಳೇ ಸ್ವತಃ ವಿನಾಶಕಾರಿ ಎಂಬುದನ್ನು ಬಹುತೇಕವಾಗಿ 'ರಾಜಕೀಯ ನಿರಕ್ಷರಿ' (Political illiterates) ಗಳಾಗಿರುವ ಶಿಕ್ಷಕರು ಅರಿಯಲಾರದೆ, 'ಶಿಕ್ಷಣ'ದಲ್ಲಿ ಗುಣಮಟ್ಟದ ಸುಧಾರಣೆ 'ಅತ್ಯಗತ್ಯ' ವೆಂದು ನಂಬುವ ವಿಪರ್ಯಾಸ ಒದಗಿದೆ. ಯಾವುದೇ ಕ್ಷೇತ್ರದಲ್ಲಿ ಗುಣಮಟ್ಟದ ಸುಧಾರಣೆ, ಬದಲಾವಣೆ ಅಪೇಕ್ಷಣೀಯವೇ. ಅದನ್ನು ಯಾರೂ ವಿರೋಧಿಸಲಾರರು. ಆದರೆ ಜಾಗತಿಕ ವ್ಯಾಪಾರಿಗಳ ಹಿತಾಸಕ್ತಿಗಳನ್ನು ಮುನ್ನೊತ್ತಿ- ಕಾಪಾಡಿಕೊಳ್ಳಲು, ಜನ ಸಮುದಾಯ ಜೀವನದ ಗುಣಮಟ್ಟವನ್ನೇ ಆಮೂಲಾಗ್ರವಾಗಿ ಹಾಳುಮಾಡುವ ಬದಲಾವಣೆಗಳನ್ನು, ಮುಗ್ಧವಾಗಿ ಸ್ವಾಗತಿಸುವ ಶಿಕ್ಷಕರು ಕಟುಕನ ಕತ್ತಿಯಲಗನ್ನು ನೆಕ್ಕುವ ಮೇಕೆಗಳೆನ್ನದೆ ವಿಧಿಯಿಲ್ಲ.

WTO ಪ್ರಣೀತ ಶಿಕ್ಷಣ ಪದ್ಧತಿಯ ಮತ್ತೊಂದು ಮುಖ್ಯ ಅಂಶ ಸ್ವಾಯತ್ತತೆ (Autonomy). ಶಿಕ್ಷಣವನ್ನು ಸರ್ಕಾರದ ಹಿಡಿತದಿಂದ ತಪ್ಪಿಸಿ ಜಾಗತಿಕ ವ್ಯಾಪಾರಿಗಳ ಕೈಗೆ ಕೊಡುವ ಕ್ರಮ ಇದು. WTO ಶರತ್ತುಗಳಲ್ಲಿನ ಕಣ್ಣೊರೆಸುವ ಅಂಶವೆಂದರೆ, ದೇಶೀಯ ಸರ್ಕಾರಗಳು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳನ್ನು ತಮಗಿಷ್ಟ ಬಂದ ರೀತಿಯಲ್ಲಿ ನಿಯಂತ್ರಿಸಿಕೊಳ್ಳಬಹುದು. ಅವನ್ನು WTO ಶರತ್ತುಗಳ ಪರಿಧಿಯೊಳಕ್ಕೆ ತರಬೇಕಾಗಿಲ್ಲ ಎಂಬುದು. ಆದರೆ ಸಹಾಯಧನಗಳನ್ನು ರದ್ದು ಪಡಿಸುವುದು, ವಿದೇಶೀ, ಅಂತರ್ದೇಶೀ ಮತ್ತು ದೇಶಾಂತರೀ ಸಂಸ್ಥೆಗಳಿಗೆ ಮುಕ್ತದ್ವಾರವನ್ನು ತೆರೆಯುವುದು, ದೇಶೀಯ ನೆಲದಲ್ಲಿ ಕಾರ್ಯನಿರ್ವಹಿಸುವ ವಿದೇಶೀ ಸಂಸ್ಥೆಗಳಿಗೆ, ದೇಶೀಯ ಸಂಸ್ಥೆಗಳಿಗೆ ಕೊಡುವ ಮಾನ್ಯತೆಯನ್ನೇ ಕೊಡಬೇಕೆನ್ನುವುದು, WTO ಶರತ್ತುಗಳಲ್ಲಿ ಬಹುಮುಖ್ಯವಾದವುಗಳು. ಒಂದು ಕಡೆ ವಿನಾಯತಿ ತೋರಿಸಿದಂತೆ ಮಾಡಿ, ಮತ್ತೊಂದೆಡೆ ಅತ್ಯಂತ ಘಾತಕವಾದ ಸ್ಪರ್ಧೆಯಲ್ಲಿ ಭಾಗವಹಿಸಲಾಗದಿರುವಂತೆ ನಿರ್ಬಂಧಿಸುವುದು ಜಾಗತಿಕ ಬಂಡವಾಳಶಾಹಿಯ ಹುಟ್ಟುಗುಣ. ಶಿಕ್ಷಣ ಮತ್ತು ಸೇವಾ

ವ್ಯಾಪಾರದ ಕ್ಷೇತ್ರಗಳಲ್ಲಿ ಪಶ್ಚಿಮದ ಬಲಿಷ್ಠ ರಾಷ್ಟ್ರಗಳಿಗಿರುವ ಅನುಕೂಲ ಅಗಾಧವಾದದ್ದು. ಇವುಗಳೊಂದಿಗೆ ಸ್ಪರ್ಧಿಸಲಾಗದೆ ದೇಶೀಯ ವಿದ್ಯಾ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ದೇಶಾಂತರೀ ಸಂಸ್ಥೆಗಳ ಹೊಟ್ಟೆ ಸೇರಿ, ತಾವೂ ಅವೇ ಆಗಿದ್ದೇವೆ ಎಂಬ ಭ್ರಮೆಗೆ ತುತ್ತಾಗುವ ದಿನಗಳು ದೂರವಿಲ್ಲ.

ವಸಾಹತೀಕರಣದ ಪ್ರಭಾವದಲ್ಲಿ ನಮ್ಮ ಯುವಕರು, ಪ್ರತಿಭಾವಂತರು, ವಿದೇಶಗಳಲ್ಲಿ ವ್ಯಾಸಂಗ ಮಾಡುವ, ವಿದೇಶಿ ಪದವಿಗಳನ್ನು ಪಡೆಯುವ ಕನಸು ಕಾಣುವುದು ಸರ್ವೇಸಾಮಾನ್ಯವಾಗಿತ್ತು. WTOದ ನವವಸಾಹತೀಕರಣದಲ್ಲಿ ಯಾವುದೇ ವಿದೇಶಿ ಪದವಿಯನ್ನು ಮನೆಯ ಬಾಗಿಲಲ್ಲೇ ಪಡೆಯಬಹುದು. ಜಾಗತೀಕರಣದಲ್ಲಿ ಅಡಕವಾಗಿರುವ ವ್ಯಾಪಾರೀಕರಣ, ಅನಿರ್ಬಂಧಿತ ಸ್ಪರ್ಧೆ ಮತ್ತು ಗಿರಾಕಿಯರ ಮನೆ ಬಾಗಿಲಿಗೇ ಬರುವ ವಾಣಿಜ್ಯ ತುರ್ತುಗಳು ಶಿಕ್ಷಣದ ವಿಷಯದಲ್ಲೂ ವ್ಯಾಪಕವಾಗಿ ಬಳಕೆಯಾಗುತ್ತಿವೆ. ದೇಶೀಯ ಮತ್ತು ಸಾಂಪ್ರದಾಯಿಕ ಕ್ರಮಗಳಿಗೆ ಬದಲಾಗಿ 'ಗಡಿಯಾಚೆಗಿನ ಶಿಕ್ಷಣ' (Cross border education) WTOದಿಂದಾಗಿ ಸಾಧ್ಯವಾಗಿದೆ. ಇದರಲ್ಲಿ ವಿದೇಶೀ ವಿಶ್ವವಿದ್ಯಾನಿಲಯ ದೂರ ಶಿಕ್ಷಣದ ಮೂಲಕ, ದೇಶಿಯ 'ಜ್ಞಾನಗಿರಾಕಿ'ಗಳನ್ನು (Knowledge customers) ಆಕರ್ಷಿಸಿ ಪಡೆಯುವುದು; ದೇಶೀಯ ವಿಶ್ವವಿದ್ಯಾನಿಲಯಗಳ ಸಹಯೋಗದಲ್ಲಿ ವಿದೇಶೀ ಜ್ಞಾನ ಕಾರ್ಮಿಕರನ್ನು ಕಳಿಸಿ ಗಿರಾಕಿಗಳನ್ನು ತಲುಪುವುದು; ಮತ್ತು ವಿದೇಶೀ ವಿಶ್ವವಿದ್ಯಾನಿಲಯಗಳ ಕ್ಯಾಂಪಸ್‌ಗಳನ್ನು ದೇಶೀಯ ನೆಲದಲ್ಲಿ ಪ್ರಾರಂಭಿಸುವುದು. ಹೀಗೆ ಮೂರು ರೀತಿಯಲ್ಲಿ 'ಜ್ಞಾನ ಬಿಕರಿ'ಯನ್ನು, ಯಾವುದೇ ದೇಶ ಮತ್ತಾವುದೇ ದೇಶದಲ್ಲಿ ಬೇಕಾದರೂ, ಯಾರು ಎಷ್ಟೇ ವಿರೋಧಿಸಿದರೂ ಅಲ್ಲಿನ ಸರ್ಕಾರಗಳು ಚುನಾಯಿಸುವ ಜನರಿಗೆ ಒಪ್ಪಿತವಾಗಿರಲಿ ಬಿಡಲಿ, ಶಿಕ್ಷಣ ಸಂಸ್ಥೆಗಳನ್ನು, ವಿಶ್ವವಿದ್ಯಾನಿಲಯಗಳನ್ನು ನಡೆಸಲು WTO ಶರತ್ತುಗಳು ದಾರಿ ಮಾಡಿಕೊಟ್ಟಿವೆ. ಇವುಗಳ ಪಠ್ಯಕ್ರಮ, ಶೈಕ್ಷಣಿಕ ಧ್ಯೇಯ-ಧೋರಣೆಗಳನ್ನು, ಚುನಾಯಿತ ಸರ್ಕಾರಗಳ ಸಮ್ಮತಿಯ ಹಂಗಿಲ್ಲದೆ, ವಿರೋಧದ ಸಂಕೋಚವಿಲ್ಲದೆ, ಸ್ಥಳೀಯ ಸಂಸ್ಕೃತಿ ಮೌಲ್ಯ ಪದ್ಧತಿಗಳಿಗೆ ಪ್ರತಿಕೂಲವಾಗಿದ್ದರೂ ಸಹ, ಈ ಶೈಕ್ಷಣಿಕ ಸಂಸ್ಥೆಗಳು WTO ನ್ಯಾಯದಡಿಯಲ್ಲಿ ರೂಪಿಸಿಕೊಳ್ಳಬಹುದು. ಇವು ರೂಪಿಸುವ ಮೌಲ್ಯಪದ್ಧತಿ, ಜೀವನದರ್ಶನ ಮತ್ತು ರಾಜಕೀಯ ಧೋರಣೆಗಳು ಸಾಮ್ರಾಜ್ಯಶಾಹೀ ಪದ್ಧತಿಗೆ ಸಹಾಯಕವೂ ಪೂರಕವೂ ಆಗಿರುತ್ತವೆಂದು ಯಾರು ಬೇಕಾದರೂ ಊಹಿಸಬಹುದು. ಇಂಥ ಶಿಕ್ಷಣ, ಅಸಮಾನತೆ, ಸ್ಪರ್ಧೆ, ಅಮಾನವೀಯತೆ ಮುಂತಾದ ಬಂಡವಾಳಶಾಹೀ ಮೌಲ್ಯಗಳನ್ನು ಅವೇ ಮನುಷ್ಯನ ನಿಜವಾದ ಗುಣಗಳೆಂಬಂತೆ ಯುವಕರ ಮನಸ್ಸಿನಾಳಕ್ಕೆ ಇಳಿಸುತ್ತವೆ. ಈ ಮೂಲಕ ಸಾಮಾಜಿಕ-ಸಾಂಸ್ಕೃತಿಕ ನಿಯಂತ್ರಣವೂ ಈಗಾಗಲೇ ಟಿವಿ ಮತ್ತು ಸಿನಿಮಾಗಳ ಮೂಲಕ ಆಗುತ್ತಿರುವಂತೆ ಸಾಧ್ಯವಾಗುತ್ತದೆ. ದೇಶದೇಶಗಳ ಅನನ್ಯತೆ, ವಿಶಿಷ್ಟತೆಗಳು ಕರಗಿ ಏಕಶಿಲಾ ಸಂಸ್ಕೃತಿ, ಬಂಡವಾಳಶಾಹೀ ಸಾಮಾಜಿಕತೆ ಮತ್ತು ರಾಜಕೀಯತೆಗಳು ಸ್ಥಾಪಿತಗೊಳ್ಳುತ್ತವೆ.

ಯಾವುದೇ ಸರಕಿನ ಬಳಕೆ ಹೆಚ್ಚಾಗಬೇಕಾದರೆ, ಅದರ ಅಗತ್ಯತೆಯನ್ನು ಸೃಷ್ಟಿಸಬೇಕು ಮತ್ತು ಅದನ್ನು ಆರಾಧಿಸಲು ಬೇಕಾದ ಮನಸ್ಥಿತಿಯನ್ನು ರೂಪಿಸಬೇಕು. ಈ ಕೆಲಸವನ್ನು

ಜಾಹೀರಾತುಗಳು ಮಾಡುತ್ತವೆ. ಆಧುನಿಕ ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಮತ್ತು ನವ ವಸಾಹತೀಕರಣದ ಶಕ್ತಿಗಳಿಗೆ ಸಮೂಹ ಮಾಧ್ಯಮಗಳು, ಯುದ್ಧ, ಮತ್ತು ಕಚ್ಚಾ ಸಾಮಗ್ರಿಗಳ ಮೇಲಿನ ನಿಯಂತ್ರಣ ಅತ್ಯಗತ್ಯ.

ಜಾಹೀರಾತುಗಳು, ಸಂಪರ್ಕಸಾಧನಗಳ ಬಲದೊಂದಿಗೆ ಕಲೆ, ಸಾಹಿತ್ಯ, ಸಂಗೀತ ಮತ್ತು ಭಾಷೆಗಳ ಒರಟು ಬಳಕೆಯಲ್ಲಿ ಸರಕು ಪ್ರೀತಿಯನ್ನು ಹುಟ್ಟಿಸುತ್ತವೆ. ಯುದ್ಧವನ್ನು ವೈಭವೀಕರಿಸುತ್ತವೆ. ಕಚ್ಚಾ ಸಾಮಗ್ರಿಗಳ ಒಡೆತನ-ನಿಯಂತ್ರಣವನ್ನು, ಸ್ವಾತಂತ್ರ್ಯ, ಪ್ರಜಾತಂತ್ರ, ಮಾನವ ಹಕ್ಕುಗಳು ಮುಂತಾದ ಮೌಲ್ಯಗಳ ಅಪಬಳಕೆಯ ಮೂಲಕ ಪ್ರತಿಪಾದಿಸುತ್ತವೆ.

ಎಲ್ಲಾ ಕ್ಷೇತ್ರಗಳಲ್ಲಿಯೂ ಈಗ ಹಾಸುಹೊಕ್ಕಾಗಿರುವ 'ಪ್ರಾಯೋಜನೆ'ಯ ಪರಿಕಲ್ಪನೆ ಶಿಕ್ಷಣ ಕ್ಷೇತ್ರಕ್ಕೂ ಕಾಲಿಡುತ್ತಿದೆ. ವಿದ್ಯಾ ಸಂಸ್ಥೆಗಳ ಪ್ರಾಯೋಜನೆ ಈಗಾಗಲೇ ಹಳ್ಳಿಗಳಿಗೂ ಕಾಲಿಟ್ಟಿದೆ. ಕೋರ್ಸ್‌ಗಳ ಪ್ರಾಯೋಜನೆ, ವಿದ್ಯಾರ್ಥಿವೇತನಗಳ ಪ್ರಾಯೋಜನೆ, ಕೊನೆಗೆ ಪಠ್ಯಪುಸ್ತಕಗಳ, ಪ್ರಶ್ನೆ ಪತ್ರಿಕೆಗಳ ಪ್ರಾಯೋಜನೆ ಶುರುವಾಗಿ, ಪುಸ್ತಕಗಳ ಅಂಚಿನಲ್ಲಿ ಪೆಪ್ಸಿ-ಕೋಕಕೋಲಗಳ ಜಾಹೀರಾತುಗಳು ರಾರಾಜಿಸುವ ದಿನಗಳು ದೂರವಿಲ್ಲ. ಅಂಗಿ ಬನಿಯನ್‌ಗಳ ಮೇಲೆ ವಿದೇಶೀ ಬಾವುಟಗಳು ವಾಲ್ಟ್‌ಡಿಸ್ನಿ ಚಿತ್ರಗಳು ಮತ್ತು ದೇಶ ವಿದೇಶಗಳ ಸಾಂಸ್ಕೃತಿಕ ಲಾಂಛನಗಳು ಈಗಾಗಲೇ ರೂಢಿಯಾಗಿರುವುದರಿಂದ ಪಠ್ಯಪುಸ್ತಕ-ಪ್ರಶ್ನೆ ಪತ್ರಿಕೆಗಳ ಮೇಲಿನ ಜಾಹೀರಾತುಗಳು ವಿಶೇಷವೆನಿಸದೇ ಹೋಗಬಹುದು. ಜಾಹೀರಾತು ಕಂಪೆನಿಗಳಿಗೆ ತಮ್ಮನ್ನು ಮಾರಿಕೊಂಡಿರುವ ಸಿನಿಮಾ ಮತ್ತು ಕ್ರೀಡಾತಾರೆಗಳು ಈಗಾಗಲೇ ಜಾಗತಿಕ ವ್ಯಾಪಾರಿಗಳ ಕೆಲಸವನ್ನು ಹಗುರ ಮಾಡಿದ್ದಾರೆ. ಪಠ್ಯಪುಸ್ತಕಗಳ ಮುಖ-ಬೆಲೆಗಳು ಪ್ರಾಯೋಜನೆ, ಜಾಹೀರಾತುಗಳಿಂದ 'ಆಕರ್ಷಕ'ವಾಗುವುದಾದರೆ ಯಾರು ತಾನೇ ಬೇಡವೆನ್ನುತ್ತಾರೆ?

ಶಿಕ್ಷಣದ ಸರಕೀಕರಣದಲ್ಲಿ ಒಂದು ಸಣ್ಣ ತೊಡಕಿದೆ. ಅದೇನೆಂದರೆ ಯಾವುದೇ ವಸ್ತುವನ್ನು ಸರಕೆಂದು ಪರಿಗಣಿಸಬೇಕಾದರೆ ಅದಕ್ಕೊಂದು ನಿರ್ದಿಷ್ಟ ಆಕಾರ ತೂಕ ಮತ್ತು ಗುಣಗಳಿರಬೇಕು. ಆಗ ಮಾತ್ರ ಅದಕ್ಕೆ ಬೆಲೆ ಕಟ್ಟಿ ಸರಕನ್ನಾಗಿ ಮಾರಬಹುದು, ಕೊಳ್ಳಬಹುದು. ಶಿಕ್ಷಣ ಅಮೂರ್ತ. ಅದನ್ನು ಒಂದು ನಿರ್ಧಿಷ್ಟ ಸಂಸ್ಥೆಯ ವಿದ್ಯಾರ್ಥಿ ಸಮೂಹದ ಒಟ್ಟು ವೆಚ್ಚದ ಗ್ರಹಿಕೆಯನ್ನಾಗಿ ಲೆಕ್ಕ ಹಾಕಬಹುದು. ಆದರೆ ಒಬ್ಬ ವಿದ್ಯಾರ್ಥಿಗೆ (ಗಿರಾಕಿಗೆ) ಕೊಡುವ ಶಿಕ್ಷಣದ ಬೆಲೆಯನ್ನು ನಿಗದಿ ಮಾಡುವುದು ಹೇಗೆ? ಸರ್ವಶಕ್ತವಾದ WTO ಷರತ್ತುಗಳಲ್ಲಿ ಇದಕ್ಕೂ ಪರಿಹಾರವಿದೆ. WTO ಶಿಕ್ಷಣವನ್ನು ಸೇವೆಯೆಂದ ಪರಿಗಣಿಸುತ್ತದೆ. ಯಾವುದೇ ಸೇವೆಯನ್ನು ವ್ಯಾಪಾರಿಗಳಿಗೆ ಗುತ್ತಿಗೆ ಕೊಡಬಹುದು. ಶೌಚಾಲಯ, ಕ್ಯಾಂಟೀನ್, ಹಾಸ್ಟೆಲ್ ಹೀಗೆ ಗುತ್ತಿಗೆ ಕೊಡುವ ಯಾವ ಸೇವೆಗಾದರೂ ಬೆಲೆ ಕಟ್ಟಬಹುದು. ಬೆಲೆ ಕಟ್ಟಬಹುದಾದ ಯಾವುದನ್ನು ಬೇಕಾದರೂ ಸರಕೆಂದು ಪರಿಗಣಿಸಿ WTO ಷರತ್ತುಗಳ ವ್ಯಾಪ್ತಿಗೆ ತರಬಹುದು. ಇದೇ ಕ್ರಮದಲ್ಲಿ ಸ್ಕೂಲು ಕಾಲೇಜುಗಳನ್ನು ವ್ಯಾಪಾರಿಗಳಿಗೆ ಗುತ್ತಿಗೆ ಕೊಡಬಹುದು. ಆಗ ಶಿಕ್ಷಣ ಶುಲ್ಕ, ಪಠ್ಯಕ್ರಮಗಳನ್ನು ಸಹ ವ್ಯಾಪಾರಿಗಳೇ ನಿರ್ಧರಿಸಬಹುದು. ಶುಲ್ಕ ದುಬಾರಿಯೆನಿಸಿದರೆ ವ್ಯಾಪಾರೀ ತಂತ್ರಗಳು ಇದ್ದೇ ಇವೆ. ಎರಡು ಸ್ಥೂಲ ವ್ಯತ್ಯಾಸಗಳುಳ್ಳ ಸರಕುಗಳನ್ನು ಅಕ್ಕಪಕ್ಕದಲ್ಲಿಟ್ಟು ಒಂದರ ಬೆಲೆಯನ್ನು ಮತ್ತೊಂದರ ಬೆಲೆಗಿಂತ ಹೆಚ್ಚೆಂದು ತೋರಿಸಿದರೆ ಸ್ವಾಭಾವಿಕವಾಗಿಯೇ ಬೆಲೆ

ಕಡಿಮೆಯೆಂದು ತೋರುವ ಸರಕಿಗೆ ಜನ ಮುಗಿಬೀಳುತ್ತಾರೆ. ಅಥವಾ ಹೆಚ್ಚಿನ ಬೆಲೆಯ ಸರಕು, ಗುಣಮಟ್ಟದಲ್ಲಿ ಹೆಚ್ಚೆಂದು ನಂಬಿ ಅದನ್ನೇ ಆಯ್ದುಕೊಳ್ಳುತ್ತಾರೆ. ಇದರ ಜೊತೆಗೆ, ಬ್ಯಾಂಕ್ ಸಾಲ, ಪ್ರಾಯೋಜನೆ, ಸುಳ್ಳುಕಡಿತ, ಸುಳ್ಳು ಸ್ಕಾಲರ್‌ಶಿಪ್‌ಗಳು ಇದ್ದೇ ಇವೆ. ಇವೆಲ್ಲಾ ಎಂದೋ ಎಲ್ಲೋ ಆಗಬಹುದಾದ ಸಂಗತಿಗಳಲ್ಲ. ಈ ಪ್ರಕ್ರಿಯೆ ಈಗಾಗಲೇ ಬೇರೆ ಬೇರೆ ಹಂತಗಳಲ್ಲಿ ಪ್ರಾರಂಭವಾಗಿಬಿಟ್ಟಿದೆ.

WTO ಮತ್ತು ಜಾಗತೀಕರಣದ ವಿವಿಧ ರೂಪಗಳ ಷರತ್ತುಗಳ ಚರ್ಚೆ ಬಹುತೇಕವಾಗಿ ಗುಟ್ಟಾಗೇ ನಡೆದಿವೆ. ಜನರನ್ನು ಕತ್ತಲಲ್ಲಿರಿಸಿ, ಜನರು ಚುನಾಯಿಸುವ ಸಂಸತ್ತುಗಳಲ್ಲಿ ಚರ್ಚಿಸದೆಯೇ ಈ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಮುಂದುವರಿದ ರಾಷ್ಟ್ರಗಳ ಶಿಕ್ಷಣ ತಜ್ಞರು, ಶಿಕ್ಷಕರು ಸಹ ಸಹಜವಾಗೇ ಆತಂಕಗೊಂಡಿದ್ದಾರೆ.

ಸರ್ಕಾರೀ ಪ್ರಣೀತ ಸಂಕಿರಣಗಳು, ಕಾರ್ಯಾಗಾರಗಳು, ಶಿಕ್ಷಕರನ್ನು WTO ಪ್ರಣೀತ ಶಿಕ್ಷಣ ದರ್ಶನಕ್ಕೆ ಒಗ್ಗಿಸುವ ಕೆಲಸ ಮಾಡುತ್ತಿವೆಯೇ ಹೊರತು, ನಿಜವಾಗಿ ಚರ್ಚೆ ಆಗುತ್ತಲೇ ಇಲ್ಲ. ವಿದ್ಯಾರ್ಥಿಗಳಿಗೆ ಏನಾಗುತ್ತದೆಯೆಂದೇ ತಿಳಿದಿಲ್ಲ. ಪೋಷಕರಿಗೆ ಈ ಬಗ್ಗೆ ತಿಳಿದುಕೊಳ್ಳುವ ಸಂದರ್ಭ ಒದಗಿಲ್ಲ. ವಿವಿಧ ಕೋರ್ಸುಗಳ ಪ್ರವೇಶ ಶುಲ್ಕ, ಶಿಕ್ಷಣ ಶುಲ್ಕ, ಮತ್ತು ಪರೀಕ್ಷಾ ಶುಲ್ಕಗಳು ಏರುತ್ತಲೇ ಹೋದಾಗ ಅವರೂ, ಶಿಕ್ಷಣದ ಬಗ್ಗೆ ತಲೆ ಕೆಡಿಸಿಕೊಳ್ಳಬಹುದೇ ಹೊರತು, ಸಮಸ್ಯೆಯ ನಿಜವಾದ ಮೂಲ ಗೋಚರಿಸದೆಯೇ ಹೋಗಬಹುದು. ಇದ್ದಲ್ಲಿಯೇ ವಿದೇಶೀ ಪದವಿಗಳನ್ನು ಪಡೆಯ ಬಯಸುವ ಶ್ರೀಮಂತರಿಗೆ ಇಡೀ ಪ್ರಕ್ರಿಯೆ ಬಯಸಿ ಬಂದ ವರವಾಗಿ ಕಾಣಿಸಬಹುದು.

ಈ ತಿಂಗಳ ಕೊನೆಯ ಹೊತ್ತಿಗೆ ಭಾರತದಲ್ಲಿ ಪ್ರಾರಂಭವಾಗುತ್ತಿರುವ 'ಉನ್ನತ' ಶಿಕ್ಷಣದ ಅಂತಾರಾಷ್ಟ್ರೀಯ ಶಾಲೆಗಳ. ಶುಲ್ಕ ಪದ್ಧತಿಯ ವಿವರಗಳು ಹೀಗಿವೆ.

ಶಾಲೆ	ತರಗತಿ	ವಾರ್ಷಿಕ ಶುಲ್ಕ
1. ಗುರಗಾಂವ್ Pahways	ಒಂದನೆಯ ತರಗತಿ	1.2 ಲಕ್ಷದಿಂದ
ಅಂತಾರಾಷ್ಟ್ರೀಯ ಶಾಲೆ	ಹತ್ತನೆಯ ತರಗತಿ	2.8. ಲಕ್ಷದವರೆಗೆ
2. ಅಲ್ವಾರ್‌ನ Sagor School	ಎಲ್ಲಾ ತರಗತಿಗಳಿಗೆ	1.75 ಲಕ್ಷ
3. ಡೆಹ್ರಾಡೂನ್‌ನ		
Selaqui School	ಎಲ್ಲಾ ತರಗತಿಗೆ	1.75 ಲಕ್ಷ
4. ಬೆಂಗಳೂರಿನ	ದೈನಿಕ ಊಟ ಸೇರಿ	1.95 ಲಕ್ಷ
Indus International	ಸಾಪ್ತಾಹಿಕವಾಗಿ	2.65 ಲಕ್ಷ
	ಊಟ ವಸತಿ ಸೌಕರ್ಯ	3.05 ಲಕ್ಷ
5. ಧೀರುಭಾಯಿ ಅಂಬಾನಿ	ಪ್ರಾಥಮಿಕ	35000 ದಿಂದ
ಅಂತಾರಾಷ್ಟ್ರೀಯ ಶಾಲೆ	12ನೇ ತರಗತಿ (ಪಿ.ಯು.ಸಿ)	2.4 ಲಕ್ಷದವರೆಗೆ

-ಆಧಾರ : ಎಕಾನಾಮಿಕ್ ಟೈಮ್ಸ್ - (8-04-2003)

'ಉನ್ನತ' ಎಂದರೆ, ಪದವಿಶಿಕ್ಷಣವೇ ಆಗಬೇಕೆಂದಿಲ್ಲ, ಶ್ರೀಮಂತರಿಗೆ ಮಾತ್ರ ಎಟಕುವ ಶಿಕ್ಷಣ ಎಂದೂ ಅರ್ಥ.

ಇದಕ್ಕೆ ಪರಿಹಾರ ಏನು? ಜಾಗತೀಕರಣಕ್ಕೆ WTO ಬಗ್ಗೆ ಮತ್ತು WTO ಪ್ರಣೀತ ಶಿಕ್ಷಣ ಕ್ರಮದ ಬಗ್ಗೆ ಈಗಾಗಲೇ ವಿಶ್ವವಿದ್ಯಾನಿಲಯಗಳಲ್ಲಿ ಜಾಗತಿಕವಾಗಿ, ದೇಶೀಯವಾಗಿ ಪ್ರತಿಕ್ರಿಯೆಗಳು ಬಂದಿವೆ. ಅವುಗಳನ್ನು 1. ಜಾಗತೀಕರಣ ಬೇಕು ಎನ್ನುವವರು, 2. ಜಾಗತೀಕರಣ ಬೇಕು ಆದರೆ ಅದರಲ್ಲಿನ ದೇಶೀಯತೆಗೆ ಮಾರಕವಾದ ಅಂಶಗಳು ಬೇಡ ಎನ್ನುವವರು, 3. ಜಾಗತೀಕರಣ ಬೇಕಿರಲಿ, ಬೇಡವಾಗಿರಲಿ ಅದು ಬಂದಾಗಿದೆ. ಆದ್ದರಿಂದ ಅದಕ್ಕೆ ಹೊಂದಿಕೊಂಡು ಅದರಿಂದಾಗುವ ಲಾಭವನ್ನು ಪಡೆಯಲು ಅನುವಾಗೋಣ ಎನ್ನುವವರು. 4. ಜಾಗತೀಕರಣ ಬೇಡ. ಅದು ಶಿಕ್ಷಣವಿರಲಿ, ವ್ಯಾಪಾರವಿರಲಿ, ದೇಶೀಯವಾಗಿ ಘಾತುಕ ವಾದುದು ಎನ್ನುವವರು. ಹೀಗೆ ನಾಲ್ಕು ಬಗೆಯ ಜನರಿದ್ದಾರೆ.

ಜಾಗತೀಕರಣ, ಖಾಸಗೀಕರಣಗಳ ಬಗ್ಗೆ ಒಲವುಳ್ಳವರಿಗೆ ಬದಲಾವಣೆ ಅನಿವಾರ್ಯ. ಬಂಡವಾಳ ಪದ್ಧತಿ ಮನುಷ್ಯ ಸ್ವಭಾವಕ್ಕೆ ಹತ್ತಿರವಾದುದು. ಸಮಾಜವಾದವೇ ಅಸಹಜವಾದುದು. ಈ ಜನ ಶ್ರೀಮಂತಿಕೆ, ಸ್ಪರ್ಧೆ, ಪೈಪೋಟಿಗಳಿದ್ದರೇ ಮನುಷ್ಯ ಸಮಾಜ ಮುಂದುವರೆಯಲು ಸಾಧ್ಯ ಎಂದು ನಂಬುತ್ತಾರೆ. ಜಾಗತೀಕರಣದ ಕೆಡುಕುಗಳು ಅದರ ಲಾಭಗಳಿಗಿಂತ ಗೌಣ ಎಂದು ಇವರ ನಂಬಿಕೆ. ಜಾಗತೀಕರಣ ಬೇಕು ಆದರೆ ಅದರ ಕೆಡುಕುಗಳು ಬೇಡ ಎನ್ನುವವರೂ ಅದರ ಲಾಭಾಂಶಗಳ ಕಡೆ ಕಣ್ಣಿಟ್ಟವರೇ. ಮೇಲ್ಪದರದ ಪ್ರಜಾತಂತ್ರದಾಚೆ ನೋಡಲಾರದ ಇವರಿಗೆ ಪರಿಷ್ಕೃತ ಜಾಗತೀಕರಣ ಅಪೇಕ್ಷಿತ. ವಿಶಾಲ ಆರ್ಥಿಕ-ರಾಜಕೀಯ ಭಿತ್ತಿಯಲ್ಲಿ ಜಾಗತೀಕರಣ ವನ್ನು ನೋಡಲಾಗದ ಇವರಿಗೆ, ಶ್ರೀಮಂತರಿಗೊಂದು ನ್ಯಾಯ ಬಡವರಿಗೊಂದು ನ್ಯಾಯ ಇದೆ ಎಂದು ಅರ್ಥವಾಗುವುದು ಕಷ್ಟ. ನಮ್ಮ ಸುತ್ತ ಮುತ್ತಲಿನ ಜನರಲ್ಲಿ ಇವರ ಸಂಖ್ಯೆಯೇ ಹೆಚ್ಚು. ಮೂರನೆಯ ಬಗೆಯ ಜನ ಪ್ರಯೋಜನವಾದಿಗಳು. ಸಾಮಾಜಿಕ ಕರ್ತವ್ಯ, ಚಳವಳಿ ಇತ್ಯಾದಿಯ ಬಗ್ಗೆ ಇವರಿಗೆ ಉಪೇಕ್ಷೆ. WTO ಸರಿಯಲ್ಲವೆಂದೇ ಇಟ್ಟುಕೊಳ್ಳೋಣ. ಆದರೆ ಅದರಿಂದ ಹೊರ ಬರಬೇಕಾದರೆ ಅಗಾಧ ಪ್ರಮಾಣದ ಪರಿಹಾರ ಕೊಡಬೇಕು. ಬಲಿಷ್ಠ ರಾಷ್ಟ್ರಗಳ ಕೋಪಕ್ಕೆ ತುತ್ತಾಗಬೇಕು. 'ಪ್ರಗತಿ' ಸಾಧ್ಯವಾಗುವುದಿಲ್ಲ. ಆದ್ದರಿಂದ ಜಾಗತೀಕರಣ ಇರಲಿ ಎನ್ನುತ್ತಾರೆ ಇವರು. ನಾಲ್ಕನೆಯ ಬಗೆಯ ಜನ ಜಾಗತೀಕರಣವನ್ನು ಆರ್ಥಿಕ-ರಾಜಕೀಯ ವಿಶಾಲಭಿತ್ತಿಯಲ್ಲಿ ಅರ್ಥಮಾಡಿಕೊಳ್ಳಲು ಯತ್ನಿಸುತ್ತಾರೆ. ಬಂಡವಾಳಶಾಹಿಗಳೊಂದಿಗೆ ಸಖ್ಯ-ಸಹಯೋಗ ಎಂದಿಗೂ ಸಮಾಜದ ವಿಷಮತೆಗಳನ್ನು ಬಗೆಹರಿಸುವುದಿಲ್ಲ. ಸದಾ ವಿಸ್ತರಿಸ ಬಯಸುವ ಬಂಡವಾಳಶಾಹಿ ತನ್ನ ಉಳಿವಿಗಾಗಿ ತಾನು ವಿರೋಧಿಸುವ ಸಮಾಜವಾದದ ಮೌಲ್ಯಗಳನ್ನು ಬೇಕಾದರೂ ಅಳವಡಿಸಿಕೊಳ್ಳುತ್ತದೆ. ಆದರೆ ತನ್ನ ಬಂಡವಾಳಶಾಹಿಯ ಮೂಲ ದರ್ಶನವನ್ನು ಬದಲಿಸಿಕೊಳ್ಳುವುದಿಲ್ಲ. ಈಗ ಪ್ರಪಂಚದಲ್ಲಿ ಸಂಭವಿಸುತ್ತಿರುವ ಬದಲಾವಣೆ ಗಳು, ಮನುಷ್ಯರು ಹೆಚ್ಚು ಹೆಚ್ಚು ಪ್ರಜ್ಞಾವಂತರೂ, ಸುಸಂಸ್ಕೃತರೂ ಆದಂತೆ, ಸಮಾಜವಾದದತ್ತ ಸರಿಯುತ್ತಿರುವ ವಿಶ್ವಸಮಾಜಗಳನ್ನು ಬಂಡವಾಳಶಾಹಿ ತನ್ನ ಆರ್ಥಿಕತೆಗೆ ಬಲವಂತವಾಗಿ

ಕಟ್ಟಿಹಾಕಲು ಮಾಡುತ್ತಿರುವ ಪ್ರಯತ್ನಗಳಿಂದ ಹುಟ್ಟಿದ ವಿಕೃತಿಗಳು. ಬಂಡವಾಳಶಾಹಿ ನಿರಂತರವಾಗಿ ಮಾಡುತ್ತಿರುವ ದೊಂಬರಾಟಗಳೇ ಅದು ಸರಿಯಲ್ಲ, ಸಹಜವಲ್ಲ ಎಂಬುದನ್ನು ಸಾಬೀತುಪಡಿಸುತ್ತವೆ.

WTO ಸಹ ದೇಶ ದೇಶಗಳ ಗಡಿಗಳನ್ನು ಮುರಿದು, ವಿಶ್ವಸಂಸ್ಥೆಯಂಥ ಜಾಗತಿಕ ವ್ಯವಸ್ಥೆಯನ್ನೂ ಧಿಕ್ಕರಿಸಿ ಅಥವಾ ದಾಟಿಕೊಂಡು ಇಡೀ ವಿಶ್ವವನ್ನು ಬಂಡವಾಳಶಾಹೀ ತೆಕ್ಕೆಯೊಳಕ್ಕೆ ತರಲು, ಸಾಮ್ರಾಜ್ಯಶಾಹಿ ಮಾಡುತ್ತಿರುವ ಪ್ರಯತ್ನವೇ ಆಗಿದೆ. "ಒಪ್ಪಿದರೆ ಒಪ್ಪಂದ ಇಲ್ಲದಿದ್ದರೆ ಆಕ್ರಮಣ" ಎನ್ನುವುದು ಸಾಮ್ರಾಜ್ಯಶಾಹಿಯ ಹಳೆಯ ಚಾಳಿ. ಸಾಂಸ್ಕೃತಿಕವಾಗಿ ಒಳಹೊಕ್ಕು, ಸಾಮಾಜಿಕವಾಗಿ ನೆಲೆಗೊಂಡು, ರಾಜಕೀಯ ನಿಯಂತ್ರಣ ಸಾಧಿಸುವುದು ಸಾಮ್ರಾಜ್ಯಶಾಹಿಗಳ ಈಚಿನ ಕಾರ್ಯತಂತ್ರ. ನವವಸಾಹತೀಕರಣದ ಅಂಗವಾಗಿ, ಅಸ್ತ್ರವಾಗಿ WTO ಮತ್ತು ಅದರ ಶಿಕ್ಷಣ ನೀತಿಗಳು ಬಂದಿವೆಯೇ ಹೊರತು ಅವೇ ಶತ್ರುಗಳಲ್ಲ. ಹೋರಾಡಬೇಕಾಗಿರುವುದು ಸಾಮ್ರಾಜ್ಯಶಾಹಿಯ ಜೊತೆ, WTO ವಿರೋಧದ ಮೂಲಕ.

❑

ಗ್ರಹಣ ಹಿಡಿಯುತ್ತಿರುವ ಉಚ್ಚ ಶಿಕ್ಷಣ

ಡಾ. ವಿ.ಕೆ. ತಿವಾರಿ

ಭಾರತದಂತಹ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳಲ್ಲಿ ಸಮಾಜದ ಸರ್ವತೋಮುಖ ಬೆಳವಣಿಗೆಗಾಗಿ ರೂಪಿಸುವ ಯೋಜನೆಗಳಲ್ಲಿ ಅಲ್ಲಿನ ಸರಕಾರಗಳು ಆದ್ಯತೆ ನೀಡಬೇಕಾಗಿರುವುದು ಶಿಕ್ಷಣ ಮತ್ತು ಆರೋಗ್ಯಕ್ಕೆ. ಇದು ಎಲ್ಲ ದೇಶಗಳಿಗೂ, ಎಲ್ಲ ಸಮಾಜಗಳಿಗೂ ಅನ್ವಯಿಸುವ ಮಾತು ಕೂಡ. ಸುಶಿಕ್ಷಿತ ಮತ್ತು ಆರೋಗ್ಯಕರ ಜನಸಮುದಾಯಗಳೇ ಅಭಿವೃದ್ಧಿಯತ್ತ ದಿಟ್ಟ ಹೆಜ್ಜೆಗಳನ್ನಿಡಲು ಸಾಧ್ಯ.

ಭಾರತದಲ್ಲಿ ಶಿಕ್ಷಣ ಮತ್ತು ಜನಾರೋಗ್ಯ, ಈ ಎರಡೂ ಅಂಶಗಳು ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಆಳಿದ ಎಲ್ಲ ಸರಕಾರಗಳ ಅಲಕ್ಷ್ಯಕ್ಕೆ ಗುರಿಯಾಗಿವೆಯೆಂದರೆ ತಪ್ಪಾಗಲಾರದು. ವ್ಯವಸ್ಥಿತ ಬದುಕಿಗೆ ಅನುವು ಮಾಡಿಕೊಡಬಲ್ಲ ಪ್ರಾಥಮಿಕ ಶಿಕ್ಷಣ ಕ್ಷೇತ್ರದ ಪರಿಸ್ಥಿತಿಯಂತೂ ಕರುಣಾಜನಕವಾಗಿದೆ. ಉಚ್ಚ ಶಿಕ್ಷಣದ ಸಮಸ್ಯೆಗಳು ಮತ್ತು ಅಲ್ಲಿನ ರಾಜಕೀಯ ವಿದ್ಯಮಾನಗಳು ಹಾಗೂ ಆ ಕ್ಷೇತ್ರವನ್ನು ಕಿತ್ತು ತಿನ್ನುತ್ತಿರುವ ಸಮಸ್ಯೆಗಳ ಬಗ್ಗೆ ಚಿಂತನೆ ಅಗತ್ಯವಾಗಿದೆ.

ವಿಶ್ವರಾಷ್ಟ್ರ ಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘಟನೆ ಉಚ್ಚ ಶಿಕ್ಷಣ ಕುರಿತು ಸಂಘಟಿಸಿದ ಮೊದಲನೆಯ ಸಮ್ಮೇಳನ ಜರುಗಿದ್ದು 1998, ಪ್ಯಾರಿಸ್‌ನಲ್ಲಿ. ಸಾಮಾಜಿಕ ಅಭಿವೃದ್ಧಿಯ ನಿಟ್ಟಿನಲ್ಲಿ ಉಚ್ಚ ಶಿಕ್ಷಣ ಎಷ್ಟು ಮಹತ್ವದ ಪಾತ್ರ ನಿರ್ವಹಿಸುತ್ತದೆ ಎಂಬುದನ್ನು ಆ ಸಮ್ಮೇಳನವು ಆಮೂಲಾಗ್ರವಾಗಿ ವಿಶ್ಲೇಷಿಸಿದೆ. ಜನಸಾಮಾನ್ಯರ ಹಿತಾಸಕ್ತಿಯ ದೃಷ್ಟಿಯಲ್ಲಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳು

ಸರಕಾರದ ನಿರ್ದೇಶನದಲ್ಲಿಯೇ ಜರುಗಬೇಕೆನ್ನುವುದು ಪ್ಯಾರಿಸ್ ಸಮ್ಮೇಳನದ ಒಂದು ಮುಖ್ಯವಾದ ಘೋಷಣೆ. ಇದಕ್ಕೆ ಅನುಗುಣವಾಗಿ ತಮ್ಮ ಯೋಜನೆಗಳನ್ನು ರೂಪಿಸಿಕೊಂಡ ಕೆಲವು ರಾಷ್ಟ್ರಗಳು ಗಮನಾರ್ಹವಾದ ಪ್ರಗತಿಯನ್ನು ಸಾಧಿಸಿವೆ. ಇದಾವುದನ್ನೂ ಲೆಕ್ಕಿಸದೆ ತಮ್ಮದೇ ಆದ ನೀತಿಗಳನ್ನನುಸರಿಸಿದ ರಾಷ್ಟ್ರಗಳಲ್ಲಿನ ವಿವಿಧ ಕ್ಷೇತ್ರಗಳಲ್ಲಿ ಏರುಪೇರುಗಳನ್ನು ಕಾಣುತ್ತೇವೆ. ಅನಕ್ಷರತೆ, ಅಸಮಾನತೆ, ಆರ್ಥಿಕ ಮುಗ್ಗಟ್ಟು, ನಿರುದ್ಯೋಗ ಇವೇ ಸಮಸ್ಯೆಗಳು ಅಲ್ಲಿ ತಾಂಡವವಾಡುತ್ತಿವೆ. ಮೇಲಾಗಿ, ಯುವಜನರು ಉಚ್ಚ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಪರಿಣಾಮವಾಗಿ ಉಂಟಾಗಿರುವ ಸಾಮಾಜಿಕ ಹಿನ್ನಡೆಯನ್ನು ಗುರುತಿಸಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ಎಲ್ಲ ಇಲಾಖೆಗಳು ಎಚ್ಚೆತ್ತುಕೊಂಡು ಕೂಡಲೆ ಕಾರ್ಯಮಗ್ನವಾಗಬೇಕಾಗಿದೆ. ಅಂತೆಯೇ ಎಲ್ಲ ಸಮಸ್ಯೆಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಿ ಇಡೀ ಶಿಕ್ಷಣ ಕ್ಷೇತ್ರವು ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಈ ಜವಾಬ್ದಾರಿ, ಮಾನವ ಸಂಪನ್ಮೂಲಗಳ ಅಭಿವೃದ್ಧಿ ಸಚಿವಾಲಯ, ವಿಶ್ವವಿದ್ಯಾಲಯ ಅನುದಾನ ಆಯೋಗ, ಪ್ರೌಢ ಶಿಕ್ಷಣ ಕೇಂದ್ರ ಮಂಡಳಿ, ಶಿಕ್ಷಣ, ಸಂಶೋಧನೆ ಹಾಗೂ ತಂತ್ರಜ್ಞಾನ ರಾಷ್ಟ್ರೀಯ ಸಮಿತಿ, ಮತ್ತಿತರ ಸಂಸ್ಥೆಗಳ ಮೇಲೂ ಇದೆ.

ಮೊದಮೊದಲು ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿದ ತಜ್ಞರು ರಾಷ್ಟ್ರದ ಹಿತಾಸಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದ ಕಾಲವೊಂದಿತ್ತು. ಅವರಿಗೆ ಆ ಮುನ್ನೋಟವಿತ್ತು. ಆ ಕಾರಣದಿಂದಲೇ, ಅಂದಿನ ಮುಂಗಡಪತ್ರಗಳಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಾಕಷ್ಟು ಹಣ ಮೀಸಲಾಗಿಡಲಾಗುತ್ತಿತ್ತು. ಇದಕ್ಕೆ ಧಕ್ಕೆ ಉಂಟಾಗಿದ್ದು 4ನೇ ಪಂಚವಾರ್ಷಿಕ ಯೋಜನೆಯ ಮತ್ತು ನಂತರದ ಕಾಲದಲ್ಲಿ. ಇವೆಲ್ಲದರ ಪರಿಣಾಮಗಳು ಈಗ ನಮ್ಮ ಮುಂದಿವೆ. ಹಣದ ಕೊರತೆ ಹಾಗೂ ಬದ್ಧತೆ ರಹಿತ ರೀತಿನೀತಿಗಳಿಂದ ಇಡೀ ಶಿಕ್ಷಣ ವ್ಯವಸ್ಥೆ ಕುಸಿಯುತ್ತಿದೆ. ಈ ಪರಿಸ್ಥಿತಿಗೆ ಕಾರಣವೆಂದರೆ ಆಳುವ ವರ್ಗವು ಇಲ್ಲಿ ಕಾಣಿಸಿರುವ ಅಂಶಗಳ ಬಗ್ಗೆ ತೋರಿದ ಅನಾದರ ಮತ್ತು ಬೇಜವಾಬ್ದಾರಿತನ. ಅವು ಯಾವುವೆಂದರೆ: 1) 14ನೇ ವಯಸ್ಸಿನವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕು ಮತ್ತು 1960ರ ಒಳಗಾಗಿ ಅನಕ್ಷರತೆಯನ್ನು ನಿರ್ಮೂಲಗೊಳಿಸಬೇಕು. 2) ಕೊಠಾರಿ ಆಯೋಗದ (1964-66) ಶಿಫಾರಸ್ಸುಗಳಂತೆ ಶಿಕ್ಷಣಕ್ಕಾಗಿ 1985ರ ಹೊತ್ತಿಗೆ ಅನುದಾನವನ್ನು ಸಮಗ್ರ ರಾಷ್ಟ್ರೀಯ ಉತ್ಪನ್ನದ ಶೇಕಡಾ 6ರಷ್ಟಕ್ಕೆ ಹೆಚ್ಚಿಸಬೇಕು. ಇದೇ ಶಿಫಾರಸ್ಸುಗಳನ್ನು ಸಂಸತ್ತಿನಲ್ಲಿ 1968ರ ತನ್ನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಒಂದು ಮುಖ್ಯ ಅಂಶವನ್ನಾಗಿ ಅಳವಡಿಸಿಕೊಂಡದ್ದು ಗಮನಿಸಬೇಕಾದ ಅಂಶ. ಈ ಕರ್ತವ್ಯಲೋಪದಿಂದ ಉಂಟಾದ ದುಷ್ಪರಿಣಾಮಗಳಿಂದಾಗಿ ಶಿಕ್ಷಣಕ್ಷೇತ್ರ ನಲುಗುತ್ತಿದೆ. ಸಾಕ್ಷರತೆ ಶೇಕಡಾ 64ರಷ್ಟು ಹೆಚ್ಚಿದೆಯೆಂಬ ವರದಿಗಳು ಹಾಗಿರಲಿ, ಅನಕ್ಷರತೆಯ ಜೊತೆಗೇ ಹುಟ್ಟಿಬರುವ ಲಿಂಗದ ಆಧಾರದ ಮೇಲಿನ ಅಸಮಾನತೆ, ಏರುಪೇರು ಎರಡೂ ಕಣ್ಣಿಗೆ ರಾಚುತ್ತವೆ. ಇದರಿಂದಾಗಿ ಜಾಗತಿಕ ವೇದಿಕೆಗಳಲ್ಲಿ ಭಾರತ ತಲೆ ತಗ್ಗಿಸುವ ಸಂದರ್ಭಗಳು ಉಂಟಾಗಿವೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಅನುಸರಿಸಿದ ದಿಕ್ಕೆಟ್ಟ ನೀತಿಗಳು ಕೂಡಲೆ ವಿಶ್ಲೇಷಣೆಗೆ ಗುರಿಯಾಗಬೇಕಾಗಿದೆ. ರಾಷ್ಟ್ರೀಯ ಸಾಕ್ಷರತಾ ಆಯೋಗ ತನ್ನ ಸಾಧನೆಗಳ ಬಗ್ಗೆ ಏನೇ ಹೇಳಿಕೊಂಡರೂ ಸಂಪೂರ್ಣ ಸಾಕ್ಷರತೆ ಹೇಗೆ, ಎಂದು, ಎನ್ನುವ ಬೃಹತ್ ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ಶಿಕ್ಷಣ ಕ್ಷೇತ್ರ ಭದ್ರ ಬುನಾದಿ ಇಲ್ಲದೆ ಎತ್ತೆತ್ತಲೋ ಸಾಗುತ್ತಿರುವಂತಿದೆ. ಗೊಡ್ಡು ಘೋಷಣೆಗಳಿಂದ, ಕ್ಲೀಷೆಗಳಿಂದ ಕಿಂಚಿತ್ತೂ ಪ್ರಯೋಜನವಾಗಲಾರದು. ಸೂಕ್ತವಾದ ನೀತಿಗಳನ್ನು ರೂಪಿಸಿ ಸಾಕಷ್ಟು ಹಣವನ್ನು ಒದಗಿಸಿ ಸಮಸ್ಯೆಗಳ ಪರಿಹಾರಕ್ಕೆ ನೆರವಾಗಲು ಸರಕಾರ ಮುಂದೆ ಬರಬೇಕಾಗಿದೆ. ಈ ನಿಟ್ಟಿನಲ್ಲಿ ಈವರೆಗೆ ಬಂದಿರುವ ಸುಳ್ಳು ಆಶ್ವಾಸನೆಗಳು ಸಂಸತ್ತಿನ ಇಲ್ಲವೇ ಕೆಂಪುಕೋಟೆಯ ಗೋಡೆಗಳಿಗೇ ಅಂಟಿಕೊಂಡು ನಾರುತ್ತಿವೆ. ಹಣದ ಕೊರತೆಯನ್ನು ನೀಗಿಸುತ್ತೇವೆಂದು ಎಲ್ಲ ಸರಕಾರಗಳು ಹೇಳುತ್ತಲೇ ಬಂದಿವೆ. ಇದು ಒಂದು ರೀತಿಯ ಜಾಡ್ಯ. ಹೇಳಿಕೆಗಳೇ ಬೇರೆ, ಆಡಳಿತದ ರೀತಿನೀತಿಗಳೇ ಬೇರೆ. ಆದರೆ ಇವೆಲ್ಲಕ್ಕಿಂತಲೂ ಉಚ್ಚಶಿಕ್ಷಣಕ್ಕೆ ಹಣ ಒದಗಿಸಲು ಈಗಿನ ಸಂದರ್ಭದಲ್ಲಿ ಸರಕಾರಕ್ಕೆ ಸಾಧ್ಯವಿಲ್ಲ. ಅದಕ್ಕಿಂತಲೂ ಗಂಭೀರವಾದ ಸಮಸ್ಯೆಗಳತ್ತ ರಾಷ್ಟ್ರವು ಗಮನಹರಿಸಬೇಕಾಗಿದೆ ಎಂಬುವ ಪ್ರಧಾನಿ ವಾಜಪೇಯಿ ಅವರ ಹೇಳಿಕೆಯಿಂದ ಶಿಕ್ಷಣ ಕ್ಷೇತ್ರಕ್ಕೆ ಒಂದು ದೊಡ್ಡ ಆಘಾತವೇ ಉಂಟಾಗಿದೆ ಎನ್ನುವುದು ಸ್ಪಷ್ಟ. ಅದೇ ಸಂದರ್ಭದಲ್ಲಿ ಸಮಗ್ರ ರಾಷ್ಟ್ರೀಯ ಉತ್ಪನ್ನ ಶೇ.8ರಷ್ಟು ಹೆಚ್ಚಿಸಬೇಕಾದ ದೊಡ್ಡ ಜವಾಬ್ದಾರಿಯನ್ನು ಸಂಶೋಧನಾ ಮತ್ತು ಅಭಿವೃದ್ಧಿ ಇಲಾಖೆಗೆ ಕೊಟ್ಟಿರುವುದು ಈಗಾಗಲೇ ಜನಮನದಲ್ಲಿರುವ ಹತಾಶ ಭಾವನೆಯನ್ನು ಇಮ್ಮಡಿಗೊಳಿಸುತ್ತದೆ.

ನವವಸಾಹತುಸಾಹಿ ಸ್ವರೂಪದ ಸಂರಚನಾ ಹೊಂದಾಣಿಕೆ

ಈ ಎಲ್ಲ ಬೆಳವಣಿಗೆಗಳು ನವವಸಾಹತುಶಾಹಿ ಶಕ್ತಿಗಳನ್ನು ಮಣೆಹಾಕಿ ಬರಮಾಡಿಕೊಳ್ಳುವ ಕೆಟ್ಟ ವಾತಾವರಣವನ್ನು ಸೃಷ್ಟಿಸುತ್ತಿರುವುದು ನಮಗೆಲ್ಲರಿಗೂ ಆತಂಕ ತರುವ ವಿಷಯ. ಈಗಾಗಲೇ ಸ್ವಾವಲಂಬನೆ ಎಂಬುವ ಮೌಲ್ಯವನ್ನು ಮೂಲೆಗಿರಿಸಿ ಬಹುರಾಷ್ಟ್ರೀಯ ಕಂಪನಿಗಳಿಗೆ ಆಹ್ವಾನವನ್ನು ನೀಡಲಾಗುತ್ತಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯ ಷರತ್ತುಗಳಿಗೆ ಶರಣಾಗಿ ಜಾಗತೀಕರಣ, ಖಾಸಗೀಕರಣ ಮತ್ತು ಮುಕ್ತ ಮಾರುಕಟ್ಟೆ ಎಂಬ ತಾರಕ ಮಂತ್ರಗಳಿಗೆ ಮೂಲಾಧಾರವಾಗಿರುವ ಸಂರಚನೆಯ ಹೊಂದಾಣಿಕೆ ನೀತಿಯನ್ನನುಸರಿಸಿ ನಮ್ಮ ರಾಷ್ಟ್ರದ ಜನಜೀವನವನ್ನು ಆಳುವ ವರ್ಗ ರೂಪಿಸಹೊರಟಿದೆ. ಸಾರ್ವಭೌಮತ್ವ ಎಂಬ ಉದಾತ್ತ ಮೌಲ್ಯದ ಪರಿಕಲ್ಪನೆಯೇ ಇಲ್ಲದ ಇವರಿಂದ ಇನ್ನೇನು ತಾನೇ ಅಪೇಕ್ಷಿಸಲು ಸಾಧ್ಯ? ಈ ನೆಲದ ಉತ್ಸಾಹಿ, ಅನುಭವಿ ಮತ್ತು ಪರಿಣಿತ ಉದ್ದಿಮೆದಾರರು ಮುಂದಿನ ದಾರಿ ಕಾಣದೆ ಕಂಗಾಲಾಗಿದ್ದಾರೆ. ಇವು ಸಾಲದೆಂಬಂತೆ ವಿಮೆ, ಬ್ಯಾಂಕಿಂಗ್ ಮತ್ತಿತರ ಮುಖ್ಯವಾದ ಹಣಕಾಸಿನ ಕ್ಷೇತ್ರಗಳ ಬಾಗಿಲುಗಳನ್ನು ವಿದೇಶಿ ಕಂಪೆನಿಗಳಿಗೆ ತೆರೆದಿಡುತ್ತಿರುವುದು ಭರದಿಂದ ಸಾಗಿದೆ. ಇದೊಂದು ರಾಷ್ಟ್ರ ವಿರೋಧಿ ಕ್ರಮ.

ಎಲ್ಲ ಆರ್ಥಿಕ ಚಟುವಟಿಕೆಗಳಲ್ಲಿಯೂ ಲಾಭವೇ ಪ್ರಧಾನವಾದ ಅಂಶವಾಗಿರಬೇಕೆನ್ನುವುದು ಒಂದು ಮಾನವ ವಿರೋಧಿ ನೀತಿ. ಈ ಸಂರಚನೆಯ ಹೊಂದಾಣಿಕೆ ನೀತಿಯು ಅಷ್ಟೇ ನೀಚತನ

ದಿಂದ ಕೂಡಿದೆ. ಅದರಿಂದ ಹೊರಹೊಮ್ಮುವ ಆಡಳಿತ ಕ್ರಮಗಳು, ಫಲಿತಾಂಶಗಳು ಕೂಡ ಜನರ ಹಿತಾಸಕ್ತಿಗಳಿಗೆ ವಿರೋಧವಾಗಿರುತ್ತವೆ. ಇಲ್ಲಿ ಲಾಭದ ಹೊಳೆ ಹರಿಯುವ ದಿಕ್ಕು ಒಂದೇ. ಅದೆಂದರೆ ಮೂರನೆ ಜಗತ್ತಿನ ರಾಷ್ಟ್ರಗಳಿಂದ ಜಿ - 8 ರಾಷ್ಟ್ರಗಳ ದೊಡ್ಡ ಕುಳಗಳ ಖಜಾನೆ ತುಂಬುವವರೆಗೆ ಮಾತ್ರ. ಈ ಸಂದರ್ಭದಲ್ಲಿ ವಿಶ್ವದ ಹುಲಿ ಎನಿಸಿಕೊಂಡಿದ್ದ ಕೊರಿಯ ಹಾಗೂ ಮೆಕ್ಸಿಕೋಗಳಲ್ಲಿ ಜರುಗಿದ ವಿದ್ಯಮಾನಗಳನ್ನು ನೆನಪಿಗೆ ತಂದುಕೊಳ್ಳಬಹುದು.

ವಿಶ್ವರಾಷ್ಟ್ರ ಸಂಸ್ಥೆಯನ್ನು ಕೈಗೊಂಬೆಯನ್ನಾಗಿ ಮಾಡಿಕೊಂಡು ಅದರ ಕಾರ್ಯಾಚರಣೆಗಳ ಮೂಲಕ ನವ ವಸಾಹತುಶಾಹಿಯು ಬಡ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆಗಳನ್ನು ನಿರ್ಜೀವ ವಾಗಿಸುತ್ತದೆ. ಬೌದ್ಧಿಕ ಆಸ್ತಿಯ ಹಕ್ಕುಗಳ ಶಾಸನದಿಂದ ಉಂಟಾಗಿರುವ ಆರ್ಥಿಕ ಅವ್ಯವಸ್ಥೆ, ಲೂಟಿಗಳಿಗೆ ಸಂಬಂಧಪಟ್ಟ ಅಂಕಿಅಂಶಗಳು ನವ ವಸಾಹತುಶಾಹಿ, ಸಾಮ್ರಾಜ್ಯಶಾಹಿ ಇಂದು ಬಳಸುತ್ತಿರುವ ತಂತ್ರಗಳ ಭಯಂಕರ ಚಿತ್ರಣವನ್ನು ನಮ್ಮ ಮುಂದಿಡುತ್ತವೆ.

ಜನತೆಯ ಜವಾಬ್ದಾರಿಗಳು

ಆರ್ಥಿಕ ಮತ್ತು ಶಿಕ್ಷಣ ಕ್ಷೇತ್ರಗಳನ್ನು ಬೇರ್ಪಡಿಸಿ, ಯಾವುದೇ ರಾಷ್ಟ್ರದ ಸಾಮಾಜಿಕ ಪ್ರಕ್ರಿಯೆಗಳನ್ನು ಚರ್ಚಿಸುವುದು ಅಸಂಬದ್ಧವೆನಿಸುತ್ತದೆ. ಹಾಗಾಗಿ ನಮ್ಮದೇ ಆರ್ಥಿಕ ಮತ್ತು ಶಿಕ್ಷಣ ನೀತಿಗಳನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಆಗುಹೋಗುಗಳನ್ನು ದೃಷ್ಟಿಯಲ್ಲಿಟ್ಟು ಪುನರ್ ವಿಮರ್ಶಿಸಬೇಕಾದ ಸಂದರ್ಭ ಈಗ ಬಂದಿದೆ. 10 ವರುಷಗಳಿಂದಲೂ ರೂಢಿಯಲ್ಲಿರುವ ಈ ಅಮಾನವೀಯ ಸಂರಚನೆಯ ಹೊಂದಾಣಿಕೆ ನೀತಿಯತ್ತ ನಾವು ತುರ್ತಾಗಿ ಗಮನ ಹರಿಸಬೇಕಾಗಿದೆ. ಇದರ ಬಗೆಗಿನ ಆಲಸ್ಯ ನಮ್ಮ ರಾಷ್ಟ್ರವನ್ನು ಪ್ರಪಾತದತ್ತ ಕೊಂಡೊಯ್ಯುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಇದರ ವಿರುದ್ಧ ಈಗಾಗಲೇ ಅನೇಕ ಕಡೆ ಜನತೆ ಸಿಡಿದೆದ್ದಿದ್ದಾರೆ. "ನಮಗೆ ಬೇಕು ಅನ್ನ, ನೀರು - ಅಣು ಬಾಂಬಿಗೆ ಧಿಕ್ಕಾರ" ಎಂಬ ಬಡಜನರ, ಪುಟ್ಟ ಮಕ್ಕಳ ಕೂಗು ರಾಷ್ಟ್ರದ ಪ್ರಗತಿಯ ಬಗ್ಗೆ ನಮಗೆಲ್ಲರಿಗಿರುವ ಕನಸುಗಳು ಚಿಗುರುವುದಕ್ಕೆ ನೀರೆರೆಯುತ್ತದೆ. ಪ್ರತಿಭಟಿಸುವ ಜನ ವಿಭಾಗಗಳೂ ಇದ್ದಾರೆನ್ನುವುದು ಒಳ್ಳೆಯ ಬೆಳವಣಿಗೆಯೇ!

ಅಧಿಕಾರದ ಗದ್ದುಗೆಯನ್ನೇರಿದ ಇತ್ತೀಚಿನ ಯಾವುದೇ ಸರಕಾರಗಳಾಗಲಿ, ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುತ್ತಿರುವ ಆರ್ಥಿಕ ತಜ್ಞರಾಗಲಿ ಶಿಕ್ಷಣ ಒಂದು ಆದ್ಯತೆಯ ಅಂಶವೆಂದು ಪರಿಗಣಿಸದೆ ಇರುವುದು ದುರದೃಷ್ಟಕರ. ಈ ಪ್ರವೃತ್ತಿಯ ವಿರುದ್ಧ ಹಾಗೂ ರಾಜಕೀಯ ಮತ್ತು ಆಡಳಿತ ವರ್ಗಗಳ ಕರ್ತವ್ಯಭ್ರಷ್ಟತ್ವವನ್ನು ಖಂಡಿಸಿ ಬದಲಾವಣೆಗಾಗಿ ಚಳವಳಿಯನ್ನು ಹೂಡುವ ಸಂದರ್ಭ ಈಗ ಬಂದಿದೆ.

ಪಂಜಾಬಿನ ಅನುಭವ

ನಾನು ಪಂಜಾಬಿನ ಜಲಂಧರ್ ಕಾಲೇಜಿನಲ್ಲಿ ಅಧ್ಯಾಪಕನಾಗಿರುವುದರಿಂದ ಅಲ್ಲಿನ ಶಿಕ್ಷಣ ಕ್ಷೇತ್ರದಲ್ಲಿ ಜರುಗುತ್ತಿರುವ ಅವ್ಯವಹಾರಗಳ ಬಗೆಗಿನ ಅನುಭವ ನನಗಿದೆ. ಈ ನಿಟ್ಟಿನಲ್ಲಿ ಒಂದೆರಡು ಅಂಶಗಳನ್ನು ಆಸಕ್ತರ ಗಮನಕ್ಕೆ ತರುವುದು ಸಮಯೋಚಿತವೆನಿಸುತ್ತದೆ.

ಪಂಜಾಬಿನ ಶಿಕ್ಷಣ ಕ್ಷೇತ್ರದ ಪರಿಸ್ಥಿತಿ ಭಿನ್ನವೇನಲ್ಲ. ಸಂಯುಕ್ತ ಅಕಾಲಿದಳ - ಬಿ.ಜೆ.ಪಿ. ಪಕ್ಷಗಳ ಸರಕಾರವು ಕೇಂದ್ರದ ಸಮ್ಮಿಶ್ರ ಸರಕಾರದೊಡನೆ ಕೈಜೋಡಿಸಿ ಆಡಳಿತ ನೀತಿಗಳನ್ನು ರೂಪಿಸುತ್ತಿದೆ. ಈಗಾಗಲೇ ಚರ್ಚಿಸಿದ ನವ ವಸಾಹತುಶಾಹಿಯ ಕರಾಳ ಛಾಯೆ ಈ ರಾಜ್ಯಕ್ಕೂ ಸಾಕಷ್ಟು ಅನಿಷ್ಟಗಳನ್ನು ತಂದೊಡ್ಡಿದೆ.

ಹಣಕಾಸಿನ ಬಿಕ್ಕಟ್ಟು, ಲಂಚಗುಳಿತನ ಮತ್ತು ನೀತಿಗೆಟ್ಟ ಆಡಳಿತ ಇಂದು ಪಂಜಾಬಿನ ಜನಜೀವನವನ್ನು ಆವರಿಸಿವೆ. ಶಿಕ್ಷಣ ಕ್ಷೇತ್ರವಂತೂ ಕೊಳೆತು ನಾರುತ್ತಿದೆ. ಚುನಾವಣಾ ಸಂದರ್ಭದಲ್ಲಿ ಜನಪ್ರಿಯ ಹಾಗೂ ಸುಳ್ಳು ಆಶ್ವಾಸನೆಗಳುಳ್ಳ ಪ್ರಚಾರಗಳಿಗೆ ಮಿತಿಯೇ ಇರುವುದಿಲ್ಲ. ಸಿಂಹಾಸನವೇರಿದ ನಂತರ ಅವೆಲ್ಲವೂ ನೆನೆಗುದಿಗೆ ಬೀಳುವುದು ಒಂದು ಸಂಪ್ರದಾಯವೇ ಆಗಿಬಿಟ್ಟಿದೆ. ಇಲ್ಲಿ ಸೋಲುವುದು ಪ್ರಜಾಪ್ರಭುತ್ವದ ಮೌಲ್ಯಗಳು. ಪ್ರಣಾಳಿಕೆಯಲ್ಲಿನ ಆಶ್ವಾಸನೆಗಳನ್ನು ಈಡೇರಿಸಲೇಬೇಕೆಂದು ಒತ್ತಾಯಿಸುವ ಪ್ರಬಲವಾದ ಜನತಾ ಚಳವಳಿಗಳ ಕೊರತೆ ಇಂತಹ ಸಂದರ್ಭಗಳಲ್ಲಿ ಎದ್ದು ಕಾಣುತ್ತದೆ.

ರಾಜ್ಯದ ಉಚ್ಚ ಶಿಕ್ಷಣ ಮಂತ್ರಿಗಳು ರಾಜೀನಾಮೆ ಕೊಟ್ಟ ನಂತರ ಈಗಾಗಲೇ ಹತ್ತಾರು ಜವಾಬ್ದಾರಿಗಳನ್ನು ಹೊತ್ತಿರುವ ಮುಖ್ಯಮಂತ್ರಿಗಳೇ ಆ ಶಾಖೆಗೆ ಜವಾಬ್ದಾರರಾಗಿದ್ದಾರೆ. ಕೆಲವು ಚರ್ವಿತ ಚರ್ವಣ ಮತ್ತು ಹಳಸು ಹೇಳಿಕೆಗಳನ್ನು ಬಿಟ್ಟರೆ ಅವರಿಂದ ಇನ್ನಾವ ಪ್ರಯತ್ನವೂ ಜರುಗಿಲ್ಲ. ಜರುಗುವುದೂ ಇಲ್ಲವೆಂಬ ಖಾತ್ರಿ ಪಂಜಾಬಿನ ಜನತೆಗೆ ಇದ್ದಂತಿದೆ.

ಎಲ್ಲೆಲ್ಲೂ ನಾವು ಕಾಣುತ್ತಿರುವುದು ಶಿಕ್ಷಣ ಕ್ಷೇತ್ರದ ಖಾಸಗೀಕರಣ ಮತ್ತು ವ್ಯಾಪಾರೀಕರಣ. ಹೇಳಹೆಸರಿಲ್ಲದ ಶಿಕ್ಷಣ ಸಂಸ್ಥೆಗಳು ಪಂಜಾಬಿನ ತಾಂತ್ರಿಕ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆಯಲು ಹಾತೊರೆಯುತ್ತಿವೆ. ಜೊತೆಗೆ ಹೇಗೋ ಮಾಡಿ ಉಂಬಳಿ ಪಡೆಯುವ ತರಾತುರಿ ಬೇರೆ. ಪಾಟಿಯಾಲದ ಪಂಜಾಬಿ ವಿಶ್ವವಿದ್ಯಾಲಯದ ಪರಿಸ್ಥಿತಿ ಇದಕ್ಕಿಂತಲೂ ಹದಗೆಟ್ಟಿದೆ. ಅಚ್ಚರಿಯೆಂದರೆ, ಈ ಹೊಲಸು ವಾತಾವರಣದ ಮಧ್ಯೆಯೂ ಚುನಾಯಿತ ಸೆನೆಟ್ ಮತ್ತು ಸಿಂಡಿಕೇಟ್ ಎರಡೂ ಈ ಅಪವಾದಕ್ಕೆ ಹೊರತಾಗಿವೆ. ಖಾಸಗೀಕರಣ ಮತ್ತು ವ್ಯಾಪಾರೀಕರಣದ ಹುಚ್ಚು ದಾಹವನ್ನು ಮೆಟ್ಟಿನಿಂತು ಇವೆರಡೂ ಸಂಸ್ಥೆಗಳು ಜನರ ಮೆಚ್ಚುಗೆಗೆ ಪಾತ್ರವಾಗಿವೆ. ತೀರ ದುಬಾರಿಯ ಶುಲ್ಕ ಮತ್ತು ಅವೈಜ್ಞಾನಿಕ ವ್ಯವಸ್ಥೆಗಳಿಗೆ ಬಲಿಪಶುಗಳಾಗಿರುವುದು ಅರ್ಹತೆಯುಳ್ಳ ಅಧ್ಯಾಪಕ ವರ್ಗ, ಗ್ರಂಥಾಲಯಗಳು ಮತ್ತು ಪ್ರಯೋಗ ಶಾಲೆಗಳು.

ಸರಕಾರೇತರ ಕ್ಷೇತ್ರದಲ್ಲಿ ಸುಮಾರು 160 ಕಾಲೇಜುಗಳ ಪರಿಸ್ಥಿತಿಯು ಚಿಂತಾಜನಕವಾಗಿದೆ. 1978ರಲ್ಲಿ ಆಚರಣೆಗೆ ತಂದ ಅನುದಾನ ನೀಡುವ ಯೋಜನೆ ಮುಗ್ಗರಿಸುತ್ತಿದೆ. ಖಾಲಿ ಇರುವ ಶಿಕ್ಷಕರ ಸ್ಥಾನಗಳನ್ನು ಭರ್ತಿ ಮಾಡುವುದಾಗಲಿ, ಸಮಯಕ್ಕೆ ಸರಿಯಾಗಿ ವೇತನ ಕೊಡುವುದಾಗಲಿ, ಪಠ್ಯಕ್ರಮದ ಪುನರ್‌ರಚನೆಯಾಗಲಿ ಯಾವುದನ್ನೂ ಸರಕಾರ ಗಣನೆಗೇ ತೆಗೆದುಕೊಳ್ಳುತ್ತಿಲ್ಲ. ಆಗಲೇ ಹೇಳಿದಂತೆ ಸರಕಾರ ನೀಡುವ ಆಶ್ವಾಸನೆಗಳಿಗೂ, ಅವರ ಆಡಳಿತ ಕ್ರಮಕ್ಕೂ ಇರುವ ವ್ಯತ್ಯಾಸ ಅಜಗಜಾಂತರ.

ಪ್ರಕಾಶ್ ಸಿಂಗ್ ಬಾದಲ್ ಸರಕಾರಕ್ಕೆ ಜ್ಞಾನೋದಯವಾಗುವ ಸಾಧ್ಯತೆಗಳು ತೀರಾ ಕಡಿಮೆ. ಆದರೆ ಶಿಕ್ಷಣ ಪರಿಸ್ಥಿತಿಗಳನ್ನು ಇಂದಿನ ಹಾಗೆಯೇ ಇನ್ನೂ ಮುಂದುವರೆಸಿಕೊಂಡು ಹೋಗುವಂತೆ ಬಿಡುವುದು ಸಲ್ಲದು. ತನ್ನ ರೀತಿ ನೀತಿಗಳನ್ನು ತಿದ್ದಿಕೊಂಡು ಶಿಕ್ಷಣ ಕ್ಷೇತ್ರದ ಸಮಸ್ಯೆಗಳಿಗೆ ಸ್ಪಂದಿಸುವಂತೆ ಸರಕಾರವನ್ನು ಒತ್ತಾಯಿಸುವುದು ಜನತೆಯ ಜವಾಬ್ದಾರಿಯಾಗಿದೆ.

ಇದು ಪಂಜಾಬಿನಲ್ಲಿನ ನನ್ನ ಮಟ್ಟಿನ ಅನುಭವವಷ್ಟೆ. ಇಂದಿನ ಸಂದರ್ಭದಲ್ಲಿ ನಿಷ್ಪಕ್ಷಪಾತವಾದ ಸಮೀಕ್ಷೆಯನ್ನು ಅಖಿಲ ಭಾರತ ಮಟ್ಟದಲ್ಲಿ ನಡೆಸಿದ್ದೇ ಆದರೆ ಬಹುತೇಕ ರಾಜ್ಯಗಳಿಗೆ ನವ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ವಕ್ತಾರರು ಆಚರಣೆಗೆ ತರುತ್ತಿರುವ ಸಂರಚನೆಯ ಹೊಂದಾಣಿಕೆ ನೀತಿಯ ಬಿಸಿ ತಟ್ಟುತ್ತಿರುವುದು ಅಲ್ಲಿನ ಅನುಭವಗಳಿಂದ ನಮಗೆ ತಿಳಿಯುತ್ತದೆ. ಈ ಸಂರಚನೆಯ ಹೊಂದಾಣಿಕೆ ಎಂಬುದು ಆಕ್ಟೋಪಸ್‌ನಂತೆ ತನ್ನ ಕಬಂಧ ಬಾಹುಗಳಿಂದ ಇಡೀ ಶಿಕ್ಷಣ ಕ್ಷೇತ್ರವನ್ನು ನಿಸ್ತೇಜವಾಗಿಸುತ್ತಿದೆ. ಇದು ಹೀಗೆ ಮುಂದುವರೆದರೆ, ನಾಳೆ ಇನ್ನೊಂದು ಕ್ಷೇತ್ರ, ನಾಳಿದ್ದು ಮಗದೊಂದು. ಇದಕ್ಕೆ ಕೊನೆ ಎಲ್ಲಿ?

ಇತ್ತೀಚಿನ ಇನ್ನೊಂದು ಹೊಸ ಬೆಳವಣಿಗೆಯತ್ತ ನಾವು ಗಮನಹರಿಸಬೇಕಾಗಿದೆ. ನಮ್ಮನ್ನಾಳುತ್ತಿರುವ ಕೇಂದ್ರದ ಸಮ್ಮಿಶ್ರ ಸರಕಾರ ಪೂಜೆ, ಪುನಸ್ಕಾರ, ವೇದಘೋಷ, ಉತ್ತರ ಕ್ರಿಯೆ ಇವುಗಳನ್ನೊಳಗೊಂಡ ಹಾಗೂ ನಮ್ಮ 'ಭವ್ಯ 'ವೈದಿಕ ಸಂಸ್ಕೃತಿ'ಯನ್ನು ವೈಭವೀಕರಿಸುವ ನಿಟ್ಟಿನಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ ಈ ಬಗ್ಗೆ ಸ್ನಾತಕೋತ್ತರ ಅಧ್ಯಯನವನ್ನು ಪ್ರಾರಂಭಿಸುವ ತಯಾರಿಯಲ್ಲಿದೆ. ರಾಷ್ಟ್ರದ ಅಧಿಕೃತ ಪುರೋಹಿತರಾದ ಮುರಳಿ ಮನೋಹರ ಜೋಷಿ ಅವರ ಆಶೀರ್ವಚನವೇ ಈ ಯೋಜನೆಗೆ ಕಾರಣವಾಗಿದೆ. ಇದಕ್ಕಾಗಿ ಸರಕಾರ ಭರಿಸಲಿರುವ ಕೋಟ್ಯಂತರ ರೂಪಾಯಿಗಳು ಎಲ್ಲಿಂದ ಬರುತ್ತದೆ ಎಂದು ಪ್ರಧಾನಿಯವರನ್ನು ಕೇಳಲೇ ಬೇಕಾಗಿದೆ.

ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘಟನೆಯ ಸಲಹೆಯಂತೆ ಉಚ್ಚ ಶಿಕ್ಷಣದ ಅವಕಾಶಗಳನ್ನು ಹೆಚ್ಚು ಹೆಚ್ಚು ವಿದ್ಯಾರ್ಥಿಗಳಿಗೆ ತೆರವು ಮಾಡಿಕೊಡಬೇಕೆಂಬ ಅರಿವು ಕೇಂದ್ರ ಮತ್ತು ಪಂಜಾಬ್ ಸರಕಾರಗಳಿಗೆ ಮೂಡಿಬರಬೇಕಾಗಿದೆ. (ಇತರ ರಾಜ್ಯಗಳಲ್ಲಿಯೂ ಇದೇ ಪರಿಸ್ಥಿತಿ ಇದೆಯೆಂದು ನನ್ನ ಅನಿಸಿಕೆ) ಇಲ್ಲದಿದ್ದಲ್ಲಿ, ಈಗಿರುವ ಬಿಕ್ಕಟ್ಟಿನಿಂದ ಮತ್ತು ಮುಂದಿನ ದಿನಗಳಲ್ಲಿ ಎರಗಿ ಬರಲಿರುವ ವಿಪತ್ತಿನಿಂದ ಉಚ್ಚ ಶಿಕ್ಷಣವನ್ನು ಪಾರು ಮಾಡುವುದು ಕನಸಿನ ಮಾತಾಗುತ್ತದೆ.

❑

ಕೋಮುವಾದದ ರಾಜಕೀಯ ಅರ್ಥಶಾಸ್ತ್ರ

ಭಾರತದ ಸಮಕಾಲೀನ ರಾಜಕೀಯ ಆಗು-ಹೋಗುಗಳತ್ತ ಒಂದು ಇಣುಕು ನೋಟ

ಡಾ. ವಿ. ಕೃಷ್ಣ ಅನಂತ್

ಕಳೆದ ಎರಡು ದಶಕಗಳಿಂದಲೂ ಕೋಮು ಮತ್ತು ಜಾತಿಗಳ ಪ್ರಭಾವ ಭಾರತದ ರಾಜಕಾರಣದಲ್ಲಿ ತೀವ್ರವಾಗುತ್ತಿದೆ. ಈ ಬೆಳವಣಿಗೆಯಿಂದಾಗಿ ಸಮಾಜವನ್ನು ಕಾಡುತ್ತಿರುವ ನಿರುದ್ಯೋಗ, ಬೆಲೆ ಏರಿಕೆ, ಹಸಿವು, ಬಡತನ, ಅನಕ್ಷರತೆ, ಆರ್ಥಿಕ ಅಸಮಾನತೆ ಮತ್ತಿತರ ಸಮಸ್ಯೆಗಳು ರಾಜಕೀಯ ಚರ್ಚಾ ವೇದಿಕೆಗಳಿಂದ ಹಿಂದೆ ಸರಿಯುತ್ತಿವೆ. ಆಹಾರ, ಸಹಾಯಧನ, ಜನಾರೋಗ್ಯ ಇವೇ ಮುಂತಾದ ಸಮಾಜ ಕಲ್ಯಾಣ ಯೋಜನೆಗಳೂ ಇದೇ ಜಾಡನ್ನು ಹಿಡಿಯುವಂತಾಗಿದೆ. ಕೃಷಿ ರಂಗವನ್ನು ಬಿಟ್ಟು ಬೇರೆಲ್ಲ ಕ್ಷೇತ್ರಗಳಿಗೂ ಸಹಾಯಧನ ನೀಡುವ ವ್ಯವಸ್ಥೆಗೆ ಇತಿಶ್ರೀ ಹಾಡುವ ತರಾತುರಿಯಲ್ಲಿ ಇಂದಿನ ಆಡಳಿತ ವರ್ಗ ತನ್ನ ಕಾರ್ಯಾಚರಣೆಯನ್ನು ನಡೆಸುತ್ತಿದೆ. ಇದಕ್ಕೆ ವಿರೋಧ ಕಂಡುಬಂದಿರುವುದು ಎಡ ಪಂಥೀಯ ಪಕ್ಷಗಳಿಂದ ಮಾತ್ರ.

ಸಾಮ್ರಾಜ್ಯಶಾಹಿ ವಿರೋಧಿ ದೀರ್ಘ ಹೋರಾಟದಿಂದ ಸ್ಫೂರ್ತಿ ಪಡೆದು, ಜಾತ್ಯತೀತ ಮತ್ತು ಪ್ರಜಾಪ್ರಭುತ್ವದ ಸುಭದ್ರ ವ್ಯವಸ್ಥೆಯ ಕನಸುಗಳನ್ನು ಹೊತ್ತು ಅಸ್ತಿತ್ವಕ್ಕೆ ಬಂದ ಭಾರತ ಇಂದು ಅತಂತ್ರ ಸ್ಥಿತಿಯಲ್ಲಿದೆ. ಸಾಮ್ರಾಜ್ಯಶಾಹಿ ವಿರೋಧಿ ಪರಂಪರೆಯಿಂದ ಹುಟ್ಟಿ ಬಂದ ಬಹುಮುಖೀ ಸಂಸ್ಕೃತಿ, ಅನೇಕತ್ವ ಮತ್ತು ಪ್ರಜಾಪ್ರಭುತ್ವ ಸಂಸ್ಥೆಗಳನ್ನು ನಿರ್ನಾಮ ಮಾಡಲು ಹೊರಟಿರುವ ಭಾರತೀಯ ಜನತಾ ಪಕ್ಷ ಮತ್ತು ಸಂಘಪರಿವಾರದ ಸಂಘಟನೆಗಳ ಪಿತೂರಿ ಹಾಗೂ ಬುಡಮೇಲು ಕೃತ್ಯಗಳು

ಒಂದು ಕಡೆಯಾದರೆ, ಮತ್ತೊಂದು ಕಡೆ ಬೃಹತ್ ರಾಷ್ಟ್ರೀಯ ಪಕ್ಷವೆನಿಸಿಕೊಂಡಿರುವ ಕಾಂಗ್ರೆಸ್ ಈ ಬೆಳವಣಿಗೆಗಳ ದುಷ್ಪರಿಣಾಮಗಳ ಅರಿವಿದ್ದೂ ತನ್ನ ಬೇಜವಾಬ್ದಾರಿತನವನ್ನು ಪ್ರದರ್ಶಿಸುತ್ತಿರುವುದು. ರಾಜಕೀಯ ಅಧಿಕಾರದ ದಾಹದಿಂದಲೋ ಸರಿಯಾದ ಸೈದ್ಧಾಂತಿಕ ದೃಷ್ಟಿಕೋನದ ಅಭಾವದಿಂದಲೋ ರಾಷ್ಟ್ರಮಟ್ಟದ ಮತ್ತು ರಾಜ್ಯಮಟ್ಟದ ಕೆಲವು ಪಕ್ಷಗಳು ಈ ಪ್ರಕ್ರಿಯೆಗೆ ಶಾಮೀಲಾಗಿ ನಿಂತಿವೆ.

ಗಂಭೀರವಾಗಿ ಪರಿಗಣಿಸಿದರೆ ಈ ಎಲ್ಲ ಆಗು ಹೋಗುಗಳಿಗೂ ಜವಾಬ್ದಾರಿ ಹೊರಬೇಕಾದದ್ದು ಕಾಂಗ್ರೆಸ್ ಪಕ್ಷ. ಬಲಪಂಥೀಯ ಧೋರಣೆಗಳಿಗೆ ಕುಮ್ಮಕ್ಕು, ಶಿಲಾನ್ಯಾಸ ಮತ್ತು ಬಾಬ್ರಿ ಮಸೀದಿ ಕೆಡವಿದ ಸಂದರ್ಭದಲ್ಲಿ ನರಸಿಂಹರಾವ್ ಸರಕಾರ ಗುಮ್ಮನೆ ಕೂತದ್ದು, ಇದೆಲ್ಲವನ್ನೂ ಪ್ರಜ್ಞಾವಂತ ಜನತೆಯು ಮರೆಯಲು ಸಾಧ್ಯವಿಲ್ಲ. ಇದು ಸಂದರ್ಭಕ್ಕೆ ತಕ್ಕಂತೆ ತನ್ನ ಬಣ್ಣವನ್ನು ಬದಲಾಯಿಕೊಂಡೇ ಬರುತ್ತಿರುವ ಆ ಪಕ್ಷದ ಜಾಯಮಾನವಲ್ಲದೆ ಮತ್ತೇನು?

ಜಾತ್ಯತೀತತೆಗೆ ಪೆಟ್ಟು

ವಸಾಹತುಶಾಹಿಯ ವಿರುದ್ಧದ ಭಾರತದ ಸ್ವಾತಂತ್ರ್ಯ ಸಂಗ್ರಾಮ ಅವಿಸ್ಮರಣೀಯ. ಅದು ಅಸಾಧಾರಣವಾದದ್ದು. ಆಗಾಗ್ಗೆ ಸಂಭವಿಸುತ್ತಿದ್ದ ಕೋಮು ಗಲಭೆಗಳು, ಸಾಮೂಹಿಕ ಹಿಂಸೆ. ಕೊಲೆ, ಲೂಟಿಯಂತಹ ಸಮಾಜ ಘಾತುಕ ಕೃತ್ಯಗಳನ್ನು ಬಗ್ಗುಬಡಿದು ಶೀಘ್ರ ಅವಧಿಯಲ್ಲಿಯೇ ಶಾಂತಿಯನ್ನು ಮರುಸ್ಥಾಪನೆ ಮಾಡಲು ಸಾಧ್ಯವಾಗುತ್ತಿದ್ದಂತಹ ಕಾಲವದು. ಆದರೆ ಈಗ? ಕೋಮು ಗಲಭೆ, ಹಿಂಸೆಗಳು, ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ ದಿನ ನಿತ್ಯದ ಘಟನೆಗಳಾಗಿವೆ. ಜಾತ್ಯತೀತ ಎಂಬುವ ಪದವೇ ಹಾಸ್ಯಾಸ್ಪದವಾಗುತ್ತಿದೆ. ಅದನ್ನು ಕುರಿತು ಹಗುರವಾಗಿ ಮಾತನಾಡುವ ರಾಜಕಾರಣಿಗಳು ದೆಹಲಿಯಲ್ಲಿ ಬೀಗುತ್ತಿದ್ದಾರೆ. ಇಂದು ಆಡಳಿತ ವರ್ಗ ಮತ್ತು ಜವಾಬ್ದಾರಿಯುತವೆನಿಸಿಕೊಂಡ ಕೆಲವು ರಾಜಕೀಯ ಪಕ್ಷಗಳು ಬಜಾಯಿಸುತ್ತಿರುವ ಡಂಗೂರಗಳಿಂದ ಹೊಮ್ಮುತ್ತಿರುವ ಕೂಗು ' ಕಾರ್ಗಿಲ್‌ನ ದಿಗ್ವಿಜಯ' ಮತ್ತು ಪೋಕ್ರಾನ್‌ನ ಪರಮಾಣು ಬಾಂಬಿನ ಸ್ಫೋಟನೆಯಿಂದ ಹೊಮ್ಮಿದ ಘೋಷಣೆ 'ಜೈ ವಿಜ್ಞಾನ್'! ವಾಸ್ತವದಲ್ಲಿ, ಕಾರ್ಗಿಲ್‌ನಲ್ಲಿ ಸಂಭವಿಸಿದ ಚಕಮಕಿಯನ್ನು 'ಯುದ್ಧ'ವೆಂದು ಕರೆದು ಜನರಲ್ಲಿ ಭ್ರಮೆ ಮೂಡಿಸುವುದೇ ಆತ್ಮ ವಂಚನೆಯ ಕೆಲಸ. 'ರಾಷ್ಟ್ರೀಯತೆ' ಎಂಬ ಶಬ್ದ ಈಗೀಗ ಕೋಮು ಮಾರುಕಟ್ಟೆಯಲ್ಲಿ ಬಹಳ ಪ್ರಚಲಿತವಾಗಿದೆ. ಭಾರತ ಮತ್ತು ಪಾಕಿಸ್ತಾನ ತಮ್ಮ ಪರಸ್ಪರ ಹಿತಾಸಕ್ತಿಯ ದೃಷ್ಟಿಯಿಂದ ಸ್ನೇಹಭಾವದಿಂದಿರಬೇಕೆನ್ನುವವರು ಆ ದೇಶದ ಏಜೆಂಟರುಗಳೆಂದು ಪರಿಗಣಿಸಲ್ಪಡುತ್ತಿದ್ದಾರೆ. ಇಲ್ಲಿ ತನ್ನ ಅರ್ಥವನ್ನು ಕಳೆದುಕೊಳ್ಳುವುದು ರಾಷ್ಟ್ರೀಯತೆ ಎಂಬುವ ಉದಾತ್ತ ಮೌಲ್ಯ.

ಅಂದಿನ ದಿನಗಳಲ್ಲಿ ಜರುಗಿದ್ದು ಮುಸ್ಲಿಮರು ಮತ್ತು ಮುಸ್ಲಿಮ್ ಲೀಗ್‌ನ ವಿರುದ್ಧ ಅಪಪ್ರಚಾರ! ಇಂದು ಪಾಕಿಸ್ತಾನ! ತಪ್ಪಿದರೆ ಕ್ರೈಸ್ತರು! ಅಂದರೆ, ಎಂದೆಂದಿಗೂ ಕೋಮು ದಳ್ಳುರಿ ಉರಿಯುತ್ತಲೇ ಇರಬೇಕು ! ಇವು ಕೋಮುವಾದಿಗಳಿಗೆ ಗ್ರಾಸವಾಗಿರುವ ಮುಖ್ಯ ಅಂಶಗಳು. ಇದೇ ಬಗೆಯ ದೃಷ್ಟಿಕೋನವನ್ನಿಟ್ಟುಕೊಂಡಿರುವವರು ಅಂದಿನ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮತ್ತು ಈಗಿನ ಕಾಂಗ್ರೆಸ್ (ಐ) ಪಕ್ಷದಲ್ಲಿ ಬಹುಮುಖ್ಯ ಸ್ಥಾನಗಳನ್ನು

ಅಲಂಕರಿಸಿಕೊಂಡು ಬರುತ್ತಲೇ ಇದ್ದಾರೆ. (ಗೋವಿಂದ ವಲ್ಲಭ್ ಪಂತ್, ಮದನ ಮೋಹನ ಮಾಲವೀಯ, ಗೋಪಿಚಂದ್ ಭಾರ್ಗವ ಮುಂತಾದವರು) ಗೋಲ್ವಲ್‌ಕರ್ ಮತ್ತು ಹೆಡ್ಗೆವಾರ್ ಅವರ ಅನಿಷ್ಟ ಪರಂಪರೆಯೇ ಈಗ ಭಾರತದ ಜಾತ್ಯತೀತ ವ್ಯವಸ್ಥೆಗೆ ಮಾರಕವಾಗುತ್ತಿರುವ 'ಹಿಂದುತ್ವವಾದ'. ಇತಿಹಾಸದ ತಿರುಚುವಿಕೆ ಹಾಗೂ ಗತಿಸಿದ ಹಿಂದೂ ಸಾಮ್ರಾಜ್ಯಗಳ ವೈಭವೀಕರಣಗಳ ನಾಟಕವಾಡಿ ರಾಷ್ಟ್ರೀಯತೆಗೆ ಹೊಸ ಅರ್ಥ ಕಲ್ಪಿಸುವ ಹುನ್ನಾರ ಅವ್ಯಾಹತವಾಗಿ ಜರುಗುತ್ತಿದೆ. ಬಹಿರಂಗವಾಗಿ ಇದು 'ಗುಪ್ತ ಕಾರ್ಯಕ್ರಮ' ಎಂಬ ಭ್ರಮೆ ಯಾರಿಗೂ ಬೇಡ.

ರಾಷ್ಟ್ರೀಯತೆ

ಹಾಗೆ ನೋಡಿದರೆ, ಭಾರತೀಯ ಸಂದರ್ಭದಲ್ಲಿ ರಾಷ್ಟ್ರೀಯತೆ ಎನ್ನುವ ಕಲ್ಪನೆಯೇ ಇತ್ತೀಚಿನದು. ವಸಾಹತು ಮತ್ತು ಸಾಮಾಜ್ಯಶಾಹಿ ವಿರುದ್ಧದ ಹೋರಾಟಗಳೇ ಅದಕ್ಕೆ ಪ್ರೇರಣೆ. ಭಾರತದ ಇತಿಹಾಸವನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಿದರೆ ಮಾತ್ರ ಅಂದಿನ ಘಟನೆಗಳನ್ನು, ಆಗುಹೋಗುಗಳನ್ನು ಸರಿಯಾಗಿ ಅರ್ಥೈಸಲು ಸಾಧ್ಯ. ಈ ಹಿನ್ನೆಲೆಯಲ್ಲಿ 1857ರ ಸಿಪಾಯಿ ದಂಗೆ, ಟಿಪ್ಪೂಸುಲ್ತಾನ್ ಹಾಗೂ ಮರಾಠರ ಹೋರಾಟಗಳ ಮಿತಿಗಳನ್ನು ಗುರುತಿಸಲು ಸಾಧ್ಯ. ಅವರ ಅಪ್ರತಿಮ ಕೆಚ್ಚು ಮತ್ತು ವೀರಾವೇಶದ ಹೋರಾಟಗಳ ಬಗ್ಗೆ ಯಾರೇ ಆಗಲಿ ಹೆಮ್ಮೆ ಪಡಬೇಕಾದ್ದು ಸಹಜ. ಆದರೆ, ಅವರ ಹೋರಾಟಗಳಿಗೆ ರಾಷ್ಟ್ರೀಯ ಕಲ್ಪನೆ ಎಂಬುದು ಎಲ್ಲಿತ್ತು? ಅಲ್ಲದೆ, ಅಂದಿನ ಸಂದರ್ಭದಲ್ಲಿ, ಅವು ವ್ಯವಸ್ಥೆಯ ವಿರುದ್ಧದ ಹೋರಾಟಗಳಾಗಲಿ, ಜನ ಸಾಮಾನ್ಯರ ಶೋಷಣೆಯ ವಿರುದ್ಧದ ಸಂಘಟಿತ ಹೋರಾಟಗಳಾಗಲಿ, ವಸಾಹತುಶಾಹಿಯ ಉತ್ಪಾದನಾ ವಿಧಾನದ ವಿರುದ್ಧದ ಹೋರಾಟಗಳಾಗಲಿ ಆಗಿರಲಿಲ್ಲ.

ರಾಷ್ಟ್ರೀಯತೆಯ ಮೊದಲ ಕಲ್ಪನೆಗಳನ್ನು ದಾದಾಭಾಯ್ ನವ್‌ರೋಜಿ ಹಾಗೂ ಬಾಲಗಂಗಾಧರ ತಿಲಕ್ ಅವರ ಬರಹಗಳಲ್ಲಿ ಮತ್ತು ಅವರು ಸಂಘಟಿಸಿದ ಹೋರಾಟಗಳಲ್ಲಿ ಕಾಣಬಹುದು. ಆರ್ಯರು ಆಕ್ರಣಮಕಾರರಲ್ಲ ಎಂಬ ವಾದವು ಈಗೀಗ ಹೆಚ್ಚು ಪ್ರಚಲಿತವಾಗುತ್ತಿದೆ. ಇದರ ವಿರುದ್ಧದ ಧೋರಣೆ ತಿಲಕರದು. ಇವರ ಅಭಿಪ್ರಾಯವನ್ನೇ, ಜವಾಹರಲಾಲ್ ನೆಹರು ಸಮರ್ಥಿಸುತ್ತಾರೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಇತಿಹಾಸದ ವೈಭವೀಕರಣದ ಪ್ರಯತ್ನಗಳು ಅಲ್ಲಲ್ಲಿ ಜರುಗಿದರೂ ರಾಷ್ಟ್ರೀಯತೆ ಎಂಬುದು ಒಂದು ಪ್ರಗತಿಶೀಲ ಕಲ್ಪನೆಯೆಂದು ಸ್ವಾತಂತ್ರ್ಯ ಸಂಗ್ರಾಮಕ್ಕೆ ಮುಂಚೂಣಿಯಲ್ಲಿದ್ದ ಬಹುತೇಕ ನಾಯಕರು ಮನಗಂಡಿದ್ದು ನಿರ್ವಿವಾದ. ಪರಿಣಾಮ, ಹಿಂದು, ಮುಸ್ಲಿಮ್, ಕ್ರಿಶ್ಚಿಯನ್ ಎಂಬ ಭೇದಭಾವವಿಲ್ಲದೆ ಸಮಸ್ತ ಜನಕೋಟಿ ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ಬಂಡೆದ್ದದ್ದು; ನಂತರ ಅದೊಂದು ವಸಾಹತುಶಾಹಿ, ಸಾಮ್ರಾಜ್ಯಶಾಹಿ ವಿರುದ್ಧದ ಐತಿಹಾಸಿಕ ಹೋರಾಟ ವಾದದ್ದು.

ಕಾಂಗ್ರೆಸ್‌ನ ಸ್ವರೂಪ

ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಹಿಂದುಗಳು, ಮುಸ್ಲಿಮರು, ಕ್ರಿಶ್ಚಿಯನ್ನರು, ಕಾರ್ಮಿಕ ವರ್ಗ ಮತ್ತು ರೈತ ಸಮುದಾಯ, ಬುದ್ಧಿಜೀವಿಗಳು, ಹೀಗೆ ಎಲ್ಲ ಜನ ವಿಭಾಗಗಳ ವೇದಿಕೆ

ಯಂತಿದ್ದ ಮತ್ತು ಹೋರಾಟದ ನಾಯಕತ್ವ ವಹಿಸಿದ್ದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಸ್ವರೂಪ 1947ರ ನಂತರದ ದಿನಗಳಲ್ಲಿ ಬದಲಾವಣೆಯಾಗತೊಡಗಿತು. ಅದರ ಕೆಲವು ನಾಯಕರ ಬಂಡವಾಳಶಾಹಿ ಮತ್ತು ಪುರೋಹಿತಶಾಹಿ ಧೋರಣೆಗಳು ಪಕ್ಷದ ರೀತಿ ನೀತಿಗಳಿಗೂ ಅಂಟಿಕೊಂಡವು. ಇಲ್ಲಿ ಹೇಳಬೇಕಾದ್ದು ಇಷ್ಟೆ: ಕೊಳೆತು ನಾರುತಿದ್ದ ವ್ಯವಸ್ಥೆಯ ಬಳುವಳಿಯಾಗಿ ಬಂದ ಸಾಮಾಜಿಕ - ಆರ್ಥಿಕ ಅನ್ಯಾಯ, ಅಸಮಾನತೆಗಳನ್ನು ತೊಲಗಿಸಿ ಹೊಸ ಸಮಾಜ ವ್ಯವಸ್ಥೆಯನ್ನು ಸೃಷ್ಟಿಸುವ ದೂರದೃಷ್ಟಿ, ಬದ್ಧತೆ ಅಂದಿನ ಸರಕಾರಕ್ಕಿರಬೇಕಿತ್ತು. ಆದರೆ ಅಂದಿನ ವಸ್ತುಸ್ಥಿತಿ ಏನು ಗೊತ್ತೆ? ಹೆಚ್ಚಿನ ಸಂಖ್ಯೆಯಲ್ಲಿ ಮೇಲ್ಜಾತಿಯವರು ಮತ್ತು ಭೂಮಾಲೀಕರೇ ನಾಯಕತ್ವದಲ್ಲಿದ್ದ ಕಾಂಗ್ರೆಸ್ ಊಳಿಗಮಾನ್ಯ ಪದ್ಧತಿ ವಿರುದ್ಧ, ದುಡಿವ ಜನತೆಯ ಪರವಾದ ರೀತಿ ನೀತಿಗಳನ್ನು ರೂಪಿಸುವಲ್ಲಿ ಸಂಪೂರ್ಣವಾಗಿ ಸೋತಿದ್ದು ಭಾರತದ ರಾಜಕಾರಣಕ್ಕೇ ಹೊಸ ತಿರುವು ಕೊಟ್ಟಂತಾಯಿತು. ಇದು ರಾಷ್ಟ್ರಕ್ಕೆ ಕಾಂಗ್ರೆಸ್ ಬಗೆದ ದ್ರೋಹ; ಅದನ್ನು ನಂಬಿ ಪ್ರಗತಿಯ ಕನಸುಗಳನ್ನು ಕಂಡ ಕೋಟಿ ಕೋಟಿ ಜನರಿಗಾದ ವಂಚನೆ.

ಜನಸಾಮಾನ್ಯರ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ವೈಜ್ಞಾನಿಕ ದೃಷ್ಟಿಯಿಂದ ಪರಿಹರಿಸಲು ಸಾಧ್ಯವಾಗದ ಸಂದರ್ಭಗಳಲ್ಲಿ ಆಡಳಿತವರ್ಗ ಸ್ವಾತಂತ್ರ್ಯ ಹೋರಾಟದ ಮೌಲ್ಯಗಳನ್ನು ಮರೆತು, ತೋರಿಕೆಗೆ ಮಾತ್ರವೇ ವೇದ-ಉಪನಿಷತ್ತುಗಳ ಮರೆಹೊಕ್ಕು, ಪರಿಹಾರಗಳಿಗಾಗಿ ಹಾತೊರೆದದ್ದು ಇತಿಹಾಸದ ಒಂದು ಭಾಗ. ಇದು ಒಂದು ಪುನರುತ್ಥಾನದ ಪ್ರಕ್ರಿಯೆ; ಆಡಳಿತ ವರ್ಗ ತನ್ನ ಸಿಂಹಾಸನವನ್ನು ಭದ್ರಪಡಿಸಿಕೊಳ್ಳುವ ಒಂದು ಹವಣಿಕೆ. ಇಂತಹ ಸಂದರ್ಭಗಳಲ್ಲಿ ರಾಷ್ಟ್ರೀಯತೆಗೆ ಹೊಸ ಅಪಾರ್ಥಗಳನ್ನು ಕಲ್ಪಿಸುವುದು ಇಂತಹ ಪಕ್ಷಗಳಿಗೆ ಸುಸಂದರ್ಭವಾಗುತ್ತದೆ. ಮುಗ್ಧ ಜನತೆಯ ಭವಿಷ್ಯ ಕತ್ತಲಿನತ್ತ ಸಾಗಲು ಪ್ರಾರಂಭಿಸುವುದು ಇಲ್ಲಿಂದ.

ಉನ್ನತ ಪರಂಪರೆ

ತೆಲಂಗಾಣ, ತೇಭಾಗ, ಪುನ್ನಪ್ರ-ವಯಲಾರ್ ಅವುಗಳಂತಹ ಸಶಸ್ತ್ರ ಹೋರಾಟಗಳು, ಭಾರತೀಯ ರಾಯಲ್ ನೌಕಾ ಪಡೆಯ ಬಂಡಾಯ, ಐ.ಎನ್.ಎ. ಸೈನಿಕರ ವಿಚಾರಣೆ, ರೈಲ್ವೆ ಕಾರ್ಮಿಕರ ಬೃಹತ್ ಹೋರಾಟಗಳು ಇಂತಹ ಅನೇಕ ಹೋರಾಟಗಳು ಸಾಮ್ರಾಜ್ಯಶಾಹಿ ವಿರುದ್ಧವಾಗಿದ್ದುದರ ಜೊತೆಗೆ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಸಮಾನತೆಗಳ ಮೌಲ್ಯಗಳನ್ನೇ ಮೂಲ ಅಂಶಗಳನ್ನಾಗಿಟ್ಟುಕೊಂಡು ಬೆಳೆದುಬಂದವು. ಅಂದಿನ ದಿನಗಳಲ್ಲಿ ಇಡೀ ಜನಸ್ತೋಮ ಕೋಮು, ಜಾತಿಗಳೆಂಬ ಕ್ಷುಲ್ಲಕ ವಿಷಯಗಳನ್ನು ಬದಿಗಿಟ್ಟು ಬೀದಿಗಿಳಿದದ್ದು ಆ ಹೋರಾಟಗಳ ಉಜ್ವಲ ಚಾರಿತ್ರ್ಯಕ್ಕೆ ಕುರುಹಾಗಿದೆ. ಅದೇ ಸಮಯದಲ್ಲಿ ಕೋಮುವಾದಿಗಳ ಧ್ವನಿ ಸದ್ದಿಲ್ಲದೆ ಅಡಗಿಹೋದದ್ದೂ ಅಂದಿನ ಸಂದರ್ಭದಲ್ಲಿನ ಬಹು ಮುಖ್ಯ ಅಂಶ.

ನಂತರದ ವಿಪರ್ಯಾಸ

ಸಹಜವಾಗಿಯೇ, ಕಾಂಗ್ರೆಸ್ ಕೈಬಿಡುತ್ತಿದ್ದ ಸಾಮ್ರಾಜ್ಯಶಾಹಿ ವಿರೋಧಿ ಧೋರಣೆಗಳು ಮತ್ತು ಸಮಾಜವಾದದ ಮೌಲ್ಯಗಳ ಹಿಂಬದಿಯಲ್ಲಿಯೇ ಆ ಪಕ್ಷದ ನಾಯಕರು ಗ್ರಾಮಾಂತರ ಪ್ರದೇಶಗಳ ಭೂಮಾಲಿಕರ ಜೊತೆ ಶಾಮೀಲಾಗಿದ್ದುದು ಬಂಡವಾಳಶಾಹಿ ಬೇರೂರುವುದಕ್ಕೆ ಕಾರಣವಾದದ್ದು ಈ ನಿಟ್ಟಿನಲ್ಲಿ ಗಮನಾರ್ಹವಾದ ಬೆಳವಣಿಗೆ. ಆಡಳಿತ ವರ್ಗ ಹೆಚ್ಚು ಹೆಚ್ಚಾಗಿ

ಪ್ರಜಾಪ್ರಭುತ್ವವಾದಿ ಬೆಳವಣಿಗೆಗೆ ವಿರುದ್ಧವಾಗಿ ಕೋಮುವಾದದ ಬೀಜಗಳನ್ನು ಬಿತ್ತಲು ಪ್ರಯತ್ನಿಸಿದ್ದು ಈ ಕಾಲಘಟ್ಟದಲ್ಲಿಯೇ. ಹಿಂದುತ್ವದ ಸೋಗಿನಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಯೋಜಿತ ರೀತಿಯಲ್ಲಿ ತಮ್ಮ ಕಾರ್ಯಾಚರಣೆಯನ್ನು ಆಗಲೇ ಪ್ರಾರಂಭಿಸಿದ್ದು ಕಾಕತಾಳೀಯ ವೇನಲ್ಲ. ಹಿಟ್ಲರ್‌ನ ಜರ್ಮನಿಯಲ್ಲಿ ಮತ್ತು ಮುಸ್ಸೋಲಿನಿಯ ಇಟಲಿಯಲ್ಲಿ ಆದ ಘಟನೆಗಳನ್ನು ಈ ಬೆಳವಣಿಗೆಗಳು ನಮಗೆ ನೆನಪಿಗೆ ತಂದುಕೊಡುತ್ತವೆ.

ಇಂದಿನ ಕರಾಳತೆ

ಸ್ವತಂತ್ರ, ಭಾರತದ ಆರ್ಥಿಕ ಬೆಳವಣಿಗೆ ಯಾವ ಹಾದಿಯಲ್ಲಿ ಮುಂದುವರೆಯಬೇಕು ಹಾಗೂ ಇಂದು ಸರಕಾರ ಆಡಂಬರದಿಂದ ಅನುಸರಿಸುತ್ತಿರುವ ಉದಾರೀಕರಣ ಅಥವಾ ಸಂರಚನೆಯ ಹೊಂದಾಣಿಕೆ ನೀತಿ, ಇವುಗಳ ಬಗ್ಗೆ ಆಳವಾದ ವಿಶ್ಲೇಷಣೆಯ ಆಗತ್ಯವಿದೆ.

1947ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷಕ್ಕೆ ಮಾರ್ಕ್ಸ್‌ವಾದದ ಆಧಾರದ ಮೇಲೆ ಸಾಮಾಜಿಕ ಕ್ರಾಂತಿಯನ್ನು ತರಬೇಕೆನ್ನುವ ಉದ್ದೇಶಗಳೇನೂ ಇರಲಿಲ್ಲ. ಕಾರ್ಮಿಕ ಚಳವಳಿಗಳು ಮತ್ತಿತರ ರಾಷ್ಟ್ರಮಟ್ಟದ ಬೃಹತ್ ಜನತಾ ಹೋರಾಟಗಳನ್ನು ಆವತ್ತಿನ ಆಡಳಿತ ವರ್ಗ ಹತ್ತಿಕ್ಕುತ್ತಿದ್ದದ್ದು ಇದಕ್ಕೆ ಸಾಕ್ಷಿ.

ಹೀಗಾದುದರ ಹಿನ್ನೆಲೆ

ಸ್ವತಂತ್ರ ಆರ್ಥಿಕ ಬೆಳವಣಿಗೆ, ಸರಕಾರದಿಂದ ಬಂಡವಾಳ ಹೂಡಿಕೆ, ಸಾರ್ವಜನಿಕ ಕ್ಷೇತ್ರಕ್ಕೆ ಮಾನ್ಯತೆ, ಭೂಸುಧಾರಣೆ, ಭೂಸ್ವಾಮಿಗಳ ಹಿಡಿತದಿಂದ ಬಡ ರೈತರ ವಿಮೋಚನೆ ಇವುಗಳೆಲ್ಲಕ್ಕೂ ಇಂಬು ಕೊಡುವಂತಿದ್ದ 1948ರ ಬಾಂಬೆ ಯೋಜನೆಯನ್ನು ನೆಹರು ಕಾಲದಲ್ಲಿ ಕಾರ್ಯರೂಪಕ್ಕೆ ತರುವ ಪ್ರಯತ್ನಗಳು ಜರುಗಿದ್ದು ಕಾಂಗ್ರೆಸ್ ಸರಕಾರದ ಜನಪ್ರಿಯತೆಯನ್ನು ಆಗ ಹೆಚ್ಚಿಸಿತ್ತು. ಭೂಮಾಲೀಕರು ಹಾಗೂ ಹಣವಂತ ರೈತರ ಒಲವು ಆ ಸರಕಾರಕ್ಕಿತ್ತು. ಹಾಗೆಯೇ ದಲಿತರ, ಮುಸ್ಲಿಮರ ಬೆಂಬಲವೂ ಕೂಡ ಸರಕಾರದ ಪರವಾಗಿದ್ದುದು ವಾಸ್ತವಾಂಶ. ಶೋಷಿತರ, ದುಡಿವ ಜನರ ಪರವಾದ ಅನೇಕ ಹೋರಾಟಗಳನ್ನು ಸಂಘಟಿಸುತ್ತಿದ್ದ ಕಮ್ಯುನಿಸ್ಟ್ ಮತ್ತು ಸಮಾಜವಾದಿ ಪಕ್ಷಗಳ ವರ್ಚಸ್ಸಿಗೆ ಈ ಕಾಲಘಟ್ಟದಲ್ಲಿ ಧಕ್ಕೆಯುಂಟಾದುದಕ್ಕೆ ಹಲವಾರು ಕಾರಣಗಳಿವೆ.

ಸ್ವಾತಂತ್ರ್ಯ ಪಡೆದ ಗುಂಗಿನಲ್ಲಿ ಅಧಿಕಾರದ ಗದ್ದುಗೆಯನ್ನೇರಿದ ಕಾಂಗ್ರೆಸ್ ಪಕ್ಷ ರಾಷ್ಟ್ರೀಯ ವಿಮೋಚನಾ ಚಳವಳಿಯ ಮೂಲ ಉದ್ದೇಶಗಳನ್ನೇ ಮರೆತು ಬಡತನ ನಿವಾರಣೆಯು ಸರಕಾರದ ಮುಂದಿರುವ ಬಹುಮುಖ್ಯ ಸವಾಲೆಂಬುದನ್ನೇ ಪರಿಗಣಿಸಲಿಲ್ಲ. ವಿವಿಧ ಕ್ಷೇತ್ರಗಳಲ್ಲಿ ಸ್ವಲ್ಪ ಮಟ್ಟಿಗೆ ಅಭಿವೃದ್ಧಿ ಕಂಡುಬಂದರೂ ಮೊದಲ ಮೂರು ಪಂಚವಾರ್ಷಿಕ ಯೋಜನೆಗಳು ಈ ದೃಷ್ಟಿಯಲ್ಲಿ ಫಲಕಾರಿಯಾಗಲಿಲ್ಲವೆಂದೇ ಹೇಳಬೇಕು. ಆಹಾರ ಪದಾರ್ಥಗಳಿಗೆ ಇನ್ನಿಲ್ಲದ ಬೇಡಿಕೆ, ಜೊತೆಗೆ 1962-1966 ಮತ್ತು 1974-75 ರಲ್ಲಿ ಉದ್ಭವಿಸಿದ ಕ್ಷಾಮದ ಪರಿಸ್ಥಿತಿ, ಬಿಹಾರದ ಬರಗಾಲ, ಈ ಕಾರಣಗಳಿಂದ 2.20 ಮಿಲಿಯನ್ ಟನ್‌ನಷ್ಟು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಬೇಕಾಯಿತು.

1970ರ ನಂತರ ಪಂಚವಾರ್ಷಿಕ ಯೋಜನೆಯನ್ನು ಕೈಬಿಟ್ಟು ವಾರ್ಷಿಕ ಯೋಜನೆಗಳನ್ನು

ಜಾರಿಗೆ ತಂದಾಗ ಎಲ್ಲ ಆರ್ಥಿಕ ಲೆಕ್ಕಾಚಾರಗಳು ಏರುಪೇರಾದವು. ಆಹಾರ ಧಾನ್ಯಗಳ ಕೊರತೆ, ಬೆಲೆ ಏರಿಕೆಗಳಿಂದ ಗ್ರಾಮೀಣ ಪ್ರದೇಶಗಳಲ್ಲಿಯೇ ಅಲ್ಲದೆ ನಗರಗಳಲ್ಲಿಯೂ ಜನಸಾಮಾನ್ಯರು ಕಂಗಾಲಾದರು. ಪರಿಣಾಮ, ಸರಕಾರದ ವರ್ಚಸ್ಸಿನ ಭಾರಿ ಇಳಿಮುಖ. ಬಹುತೇಕ ರಾಜ್ಯ ಚುನಾವಣೆಗಳಲ್ಲಿ ಕಾಂಗ್ರೆಸ್‌ಗೆ ಸೋಲು. ಚಿಂತೆಗೀಡಾದ ಕಾಂಗ್ರೆಸ್ ಪಕ್ಷ ಸೈದ್ಧಾಂತಿಕವಾಗಿ ಬಂಡವಾಳಶಾಹಿ ಧೋರಣೆಗಳಿಗೆ ಇನ್ನೂ ಹೆಚ್ಚಿನ ಒಲವು ತೋರಿಸಲು ಪ್ರಾರಂಭಿಸಿತು. ಹತಾಶೆಗೊಂಡ ಇಂದಿರಾಗಾಂಧಿ ಸರಕಾರ ಕೋಟ್ಯಾಂತರ ಕೃಷಿ ಕೂಲಿಗಾರರಿಗೆ, ಬಡರೈತರ ಸಮಸ್ಯೆಗಳಿಗೆ ಮೂಲಭೂತ ಪರಿಹಾರವೆನಿಸಿದ್ದ ಭೂ ಸುಧಾರಣೆಯನ್ನು ಬದಿಗೊತ್ತಿ ತಾನು ಬಹಳ ಪ್ರಗತಿಶೀಲ ಎಂದು ಸೋಗು ಹಾಕಿ ಬ್ಯಾಂಕ್ ರಾಷ್ಟ್ರೀಕರಣ, ರಾಜಧನ ರದ್ದತಿ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯ ವಿಸ್ತರಣೆ. ಇಂತಹ ಕ್ರಮಗಳನ್ನು ಘೋಷಿಸಿತು. ಇದೇ ಅವಧಿಯಲ್ಲೇ ಜನತೆಯ ಆಕ್ರೋಶಕ್ಕೆ ಕಾರಣವಾದದ್ದು ವಿಪರೀತ ಬೆಲೆ ಏರಿಕೆ, ಕಳ್ಳ ದಾಸ್ತಾನು, ಕಪ್ಪು ಮಾರುಕಟ್ಟೆ ಮತ್ತು ಲಂಚಗುಳಿತನ.

ಈ ಸಂದರ್ಭದಲ್ಲಿಯೇ "ರಾಜಕೀಯ ಗುತ್ತಿಗೆದಾರರು" ಎನ್ನಬಹುದಾದ ಹೊಸ ವರ್ಗ ಭಾರತದ ಇಡೀ ರಾಜಕಾರಣಕ್ಕೆ ಒಂದು ಹೊಸ ಆಯಾಮವನ್ನು ಸೃಷ್ಟಿಸಿದ್ದು ದೊಡ್ಡ ಅಪಾಯಕಾರಿ ಬೆಳವಣಿಗೆಯಾಯಿತು.

ಹಾಗೆ ನೋಡಿದರೆ, ಇಲ್ಲಿಂದಲೇ ಪ್ರಾರಂಭವಾದದ್ದು ಕಾಂಗ್ರೆಸ್‌ನ ಹೊಸ ಅವತಾರ. ಚುನಾವಣೆಗಳಿಗಾಗಲಿ ಯಾವುದೇ ರಾಜಕೀಯ ಚಟುವಟಿಕೆಗಳಿಗಾಗಲಿ ಕಾಂಗ್ರೆಸ್ ತನ್ನ ಉಳಿವಿಕೆಗಾಗಿ ಈ ವರ್ಗವನ್ನೇ ಅವಲಂಬಿಸಬೇಕಾಗಿ ಬಂದದ್ದು ಭಾರತದ ರಾಜಕೀಯ ಇತಿಹಾಸದ ಒಂದು ಅನಿಷ್ಟ ಬೆಳವಣಿಗೆಯಾಗಿ ಪರಿಣಮಿಸಿತು. ಲಂಚಗುಳಿತನ ಸಾಂಸ್ಥೀಕರಣಗೊಂಡದ್ದು, ದೇಶದ ರಾಜಕೀಯದಲ್ಲಿ ಗೂಂಡಾಗಳ, ಸಮಾಜಘಾತುಕರ ಆಧಿಪತ್ಯದ ಉಗಮವಾದದ್ದು ಈ ಸಂದರ್ಭದಲ್ಲೇ.

ತೀವ್ರವಾಗುತ್ತಿದ್ದ ಆರ್ಥಿಕ ಬಿಕ್ಕಟ್ಟಿನ ವಿರುದ್ಧ ಬಿಹಾರ್, ಉತ್ತರ ಪ್ರದೇಶ, ಗುಜರಾತ್‌ಗಳಲ್ಲಿ ಭುಗಿಲೆದ್ದ ಜನಾಂದೋಲನವನ್ನು ಬಗ್ಗುಬಡಿಯಲು ಆಡಳಿತ ವರ್ಗ ಅಮಾನವೀಯ ಕ್ರಮಗಳನ್ನು ಬಳಸಿತು. ಆನಂತರ ಜರುಗಿದ ಚುನಾವಣೆಗಳಲ್ಲಿ ಹೀನಾಯ ಸೋಲನ್ನನುಭವಿಸಿದ ಕಾಂಗ್ರೆಸ್ 1980ರಲ್ಲಿ ಮತ್ತೆ ಅಧಿಕಾರಕ್ಕೆ ಬಂದಿತು. ಕೂಡಲೆ ತಾನು ಜನಪರವಾದ ಸರಕಾರ ಎನಿಸಿಕೊಳ್ಳಲು ಸಾರ್ವಜನಿಕ ವಿತರಣಾ ವ್ಯವಸ್ಥೆ ಹಾಗೂ ಬಡತನ ನಿವಾರಣಾ ಯೋಜನೆಗಳಂತಹ ನಾಟಕಗಳ ಮರೆಹೋದದ್ದು ಒಂದು ದೊಡ್ಡ ಕತೆ. ಆದರೂ, ಬ್ಯಾಂಕ್ ರಾಷ್ಟ್ರೀಕರಣ, ಕೃಷಿಯೇತರ ಕ್ಷೇತ್ರಗಳಲ್ಲಿ ಉದ್ಯೋಗ ಅವಕಾಶಗಳಿಗೆ ಹೆಚ್ಚಿನ ಆದ್ಯತೆ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ಆದ ಕೆಲವು ಬದಲಾವಣೆಗಳಿಂದಾಗಿ ಆರ್ಥಿಕ ಕ್ಷೇತ್ರದಲ್ಲಿ ಒಂದೆರಡು ಸಕಾರಾತ್ಮಕ ಬೆಳವಣಿಗೆಗಳಾದದ್ದು ನಿಜವೇ.

ಪ್ರಸಕ್ತ ಸನ್ನಿವೇಶ

ಈ ಪ್ರಕ್ರಿಯೆಯಲ್ಲಿ ರಾಷ್ಟ್ರದ ರಾಜಕಾರಣದಲ್ಲಿ ಘಟಿಸಿದ ಕೆಲವು ಮಹತ್ತರ ಬದಲಾವಣೆ

ಗಳು ನಮ್ಮ ಮುಂದಿವೆ. ಆಡಳಿತ ವರ್ಗ ದಿಕ್ಕೆಡುತ್ತಿದ್ದ ಮತ್ತು ಜನಸಾಮಾನ್ಯರಿಂದ ದೂರ ಸರಿಯುತ್ತಿದ್ದ ಅಂದಿನ ಸಂದರ್ಭದಲ್ಲಿ ಹುಟ್ಟಿಕೊಂಡ ಅನೇಕ ಪ್ರಾದೇಶಿಕ ಪಕ್ಷಗಳು ರಾಷ್ಟ್ರದ ರಾಜಕೀಯ ಚಿತ್ರಣಕ್ಕೆ ಹೊಸ ತಿರುವು ಕೊಟ್ಟವು. ಅದೇ ಸಂದರ್ಭದಲ್ಲಿ ಕೆಲವು ಸುಧಾರಣೆಗಳನ್ನು, ಆದರಲ್ಲೂ ಭೂಸುಧಾರಣೆಯನ್ನು ಜಾರಿಗೆ ತರುವ ದಿಟ್ಟ ಹೆಜ್ಜೆ ಇಟ್ಟಿದ್ದು ಕೇರಳ ಮತ್ತು ಪಶ್ಚಿಮ ಬಂಗಾಲದ ಎಡ ಪಕ್ಷಗಳ ಸರಕಾರಗಳು. ತೆಲುಗು ದೇಶಂ ಪಕ್ಷದ ನೇತೃತ್ವದಲ್ಲಿ ಆಂಧ್ರದಲ್ಲಿಯೂ ಇಂತಹ ಕ್ರಮಗಳನ್ನು ಕೈಗೊಳ್ಳಲಾಯಿತು. ಬಿಹಾರ್, ಉತ್ತರ ಪ್ರದೇಶದ ಸರಕಾರಗಳು ಕನಿಷ್ಠ ಮಟ್ಟದ ಯಾವ ಜನಪರ ಯೋಜನೆಗಳನ್ನೂ ಜಾರಿಗೆ ತರುವ ರಾಜಕೀಯ ಗತ್ತನ್ನು ಪ್ರದರ್ಶಿಸಲಿಲ್ಲ. ಕರ್ನಾಟಕದಲ್ಲಿ ದೇವರಾಜ ಅರಸ್ ಸರ್ಕಾರ ಒಂದೆರಡು ಹೆಜ್ಜೆ ಇಟ್ಟು ಅಲ್ಲೇ ನಿಂತುಬಿಟ್ಟಿತು.

ಆರ್ಥಿಕ ಬೆಳವಣಿಗೆ ಮತ್ತು ಬಡತನ ನಿವಾರಣೆ ಎರಡೂ ಒಂದಕ್ಕೊಂದು ಹೊಂದಿಕೊಂಡು ಆಚರಣೆಗೆ ತರಬೇಕಾದ ಅಂಶಗಳು. ಅದಕ್ಕೆ ಬದಲಾಗಿ ನೀತಿಗೆಟ್ಟ, ರಾಜಕೀಯ ಮುನ್ನೋಟ ವಿಲ್ಲದ, ಸರಕಾರಿ ಆಶ್ರಯದಲ್ಲಿನ ಯೋಜನೆಗಳನ್ನು ಕೇಂದ್ರ ಸರಕಾರ ಜಾರಿಗೆ ತಂದದ್ದು ಅನೇಕ ಸಮಸ್ಯೆಗಳಿಗೆ ಕಾರಣವಾಯಿತು. ಇದರ ವಿರುದ್ಧ ರಾಷ್ಟ್ರಾದ್ಯಂತ ಹರಡಿಕೊಂಡ ಪ್ರತಿಭಟನಾ ಹೋರಾಟಗಳಲ್ಲಿ ಬಲಪಂಥೀಯ ಶಕ್ತಿಗಳದ್ದೇ ಮೇಲುಗೈ ಆಗಿ, ಎಡಪಕ್ಷಗಳು ಜನಸಾಮಾನ್ಯರ ಆವತ್ತಿನ ವಿಕೋಪಕ್ಕೆ ವೈಜ್ಞಾನಿಕ ವಿಶ್ಲೇಷಣೆಯ ಆಧಾರದಿಂದ ಸ್ಪಂದಿಸದೇ ಹೋದದ್ದು, ನಂತರದ ದಿನಗಳ ರಾಜಕೀಯ ಬೆಳವಣಿಗೆಗಳ ಮೇಲೆ ಅರ್ಥಪೂರ್ಣವಾದ ಪರಿಣಾಮ ಬೀರಿದ್ದು, ಎಲ್ಲರಿಗೂ ತಿಳಿದಿರುವ ವಿಷಯ. ಅಂದಿನ ರೈಲ್ವೆ ಮುಷ್ಕರವಾಗಲಿ, ಜಯಪ್ರಕಾಶ ನಾರಾಯಣ್ ಅವರ 'ಸಂಪೂರ್ಣ ಕ್ರಾಂತಿ'ಯ ಚಳವಳಿಯಾಗಲಿ ಈ ನಿಟ್ಟಿನಲ್ಲಿ ಒಂದೆರಡು ಉದಾಹರಣೆಗಳು ಮಾತ್ರ.

ವಿದೇಶಿ ಸಾಲದ ಹೊರೆ ಹೆಚ್ಚಾಗುತ್ತಿದ್ದ ಅಂದಿನ ಕಾಲಘಟ್ಟದಲ್ಲಿ ಮತ್ತು ಆಡಳಿತ ವರ್ಗವು ಸಮಾಜವಾದದ ಸೋಗನ್ನು ತೊರೆದು ಅಧಿಕಾರದ ಗದ್ದುಗೆಯೇರಲು ಜನವಿರೋಧಿ ನೀತಿಗಳ ಮರೆ ಹೋಗುತ್ತಿದ್ದ ಸಂದರ್ಭದಲ್ಲಿ ಬಲಪಂಥೀಯರು, (ಅದರಲ್ಲೂ ಆರ್.ಎಸ್.ಎಸ್.) ತಮಗೆ ಒದಗಿಬಂದ ಈ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಲು ಅನುವಾದರು. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ಮತ್ತಿತರ ಅಂತರರಾಷ್ಟ್ರೀಯ ಸಂಸ್ಥೆಗಳ ಷರತ್ತುಗಳ ಒತ್ತಡದಿಂದ ಸಮಾಜಕಲ್ಯಾಣ ಯೋಜನೆ, ಸಹಾಯಧನ ವ್ಯವಸ್ಥೆ ಎಲ್ಲವನ್ನೂ ಸರಕಾರ ಕ್ರಮೇಣ ಆರ್ಥಿಕ ನೀತಿಗಳ ವ್ಯಾಪ್ತಿಯಿಂದ ದೂರವಿಡುವ ಪ್ರಕ್ರಿಯೆಯಲ್ಲಿ ಪ್ರಾಮುಖ್ಯಕ್ಕೆ ಬಂದದ್ದು ಮುಕ್ತ ಮಾರುಕಟ್ಟೆಯ ವ್ಯವಸ್ಥೆ.

ಈ ಕಾಲಘಟ್ಟದಲ್ಲಿ ಕಾಂಗ್ರೆಸ್ (ಐ) ಪಕ್ಷದ ರೀತಿನೀತಿಗಳಲ್ಲಿ ಕೋಮುವಾದದ ಒಲವು ಗಳನ್ನು ಕಾಣುವುದು ಕಷ್ಟವೇನಲ್ಲ. ಹಿಂದುತ್ವ ಮತ್ತು ಬಹುಸಂಖ್ಯಾತ ವಾದಗಳೇ ಕಾಂಗ್ರೆಸ್, ಭಾ.ಜ.ಪ.ಗಳೆರಡೂ ಹೆಚ್ಚು ಜನಪ್ರಿಯವಾಗಲು ನಡೆಸಿದ ಸೆಣಸಾಟದ ಪರಿಣಾಮಗಳು. ಇದು ನಂತರದ ಮಹತ್ತರ ರಾಜಕೀಯ ಬೆಳವಣಿಗೆಗಳಿಗೆ ದ್ಯೋತಕವಾಗಿದೆ.

ಇಂದು ಭಾ.ಜ.ಪ. ಬಹುದೊಡ್ಡ ರಾಜಕೀಯ ಪಕ್ಷವೆಂಬುದು ನಿಜ. ಸೈದ್ಧಾಂತಿಕವಾಗಿ ಹಿಟ್ಲರನ ಫ್ಯಾಸಿಸಂಗೂ ಇದಕ್ಕೂ ಬಹಳ ಸಾಮ್ಯತೆ ಇದೆ. ಪ್ರಜಾಪ್ರಭುತ್ವವನ್ನು ನುಂಗಿಹಾಕಿದ, ಎರಡನೆಯ ಜಾಗತಿಕ ಯುದ್ಧಕ್ಕೆ ಕಾರಣನಾದ ಹಿಟ್ಲರನ ಪಾಶವೀ ಕೃತ್ಯಗಳನ್ನು ಈ ಪಕ್ಷವೂ ಅನುಸರಿಸುತ್ತದೆ.

ಆದ್ಯತೆ ಯಾವುದಕ್ಕೆ?

ಜಾತ್ಯತೀತತೆ-ಕೋಮುವಾದ ಇವೆರಡರ ಮಧ್ಯೆಯ ಘರ್ಷಣೆಯೇ ಇಂದು ರಾಷ್ಟ್ರದ ಮುಂದಿರುವ ದೊಡ್ಡ ಪ್ರಶ್ನೆ ಎಂಬುವ ಅಪಪ್ರಚಾರ ನಡೆಯುತ್ತಿದೆ. ಕಾಂಗ್ರೆಸ್‌ಗೆ ಬೇಕಾಗಿರುವುದೂ ಇದೇ. ಆದರೆ ನಿಜಾಂಶವೆಂದರೆ ಕೋಮುವಾದವನ್ನು ಮೀರಿ ಇಲ್ಲಿನ ವ್ಯವಸ್ಥೆಯ ಆಂತರಿಕ ವೈರುಧ್ಯಗಳ ಫಲವಾಗಿ ಉಂಟಾಗಿರುವ ಆರ್ಥಿಕ ಮುಗ್ಗಟ್ಟಿನ ಬಗ್ಗೆ ಕೂಡಲೆ ಜನತೆ ತಮ್ಮ ಗಮನಹರಿಸಬೇಕಾಗಿದೆ. ಅದಕ್ಕೆ ಅವಶ್ಯಕವಾದ ಪರ್ಯಾಯ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸುವ ಸಲುವಾಗಿ ಚಳವಳಿಗಳನ್ನು ರೂಪಿಸಬೇಕಾಗಿದೆ. ಜಾತ್ಯತೀತ ಮತ್ತು ಪ್ರಜಾಪ್ರಭುತ್ವಗಳ ಉಜ್ವಲ ಇತಿಹಾಸ, ಪರಂಪರೆ ಇರುವ ಎಡ ಪಕ್ಷಗಳು ಜಾತ್ಯತೀತತೆ ಮತ್ತು ಕೋಮುವಾದಕ್ಕೆ ಮಾತ್ರ ಸೀಮಿತಗೊಂಡ ಈ ರಾಜಕೀಯ ಚಿತ್ರಣದ ಪಿತೂರಿಯ ಬಲೆಗೆ ಬೀಳದೆ ಜನರನ್ನು ಕ್ರಾಂತಿಕಾರಿ ಹೋರಾಟಗಳಲ್ಲಿ ತೊಡಗಿಸಬೇಕಾಗಿದೆ. ರಾಷ್ಟ್ರೀಯ ಬಂಡವಾಳ ಶಾಹಿಗಳಿಗೆ ಎಂದಿನಿಂದಲೂ ಸಮಾಜವಾದಿ ಹಾದಿಯಲ್ಲಿ ತಮ್ಮ ನೀತಿಗಳನ್ನು ರೂಪಿಸಿ ಅಭಿವೃದ್ಧಿ ಯನ್ನು ತರಬೇಕೆಂಬುದಿರಲಿಲ್ಲ. ಅವರು ಕಾಲಕಾಲಕ್ಕೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪರಿಸ್ಥಿತಿಗೆ ಹೊಂದಿಕೊಂಡಂತೆ ತಮ್ಮ ಬಣ್ಣವನ್ನು ಬದಲಾಯಿಸುತ್ತಲೇ ಬಂದಿದ್ದಾರೆ. "ಜಾಗತಿಕ ಬಂಡವಾಳಶಾಹಿ"ಯಿಂದ ಮೊದಲ್ಗೊಂಡು ಇಂದು "ಉದಾರೀಕರಣ" ಮತ್ತು "ಖಾಸಗೀಕರಣ"ದ ಮಾತುಗಳನ್ನೇ ಆಡುತ್ತಿದ್ದಾರೆ. ಇದೆಲ್ಲದರ ಮೂಲ ಉದ್ದೇಶ ಖಾಸಗಿ ಬಂಡವಳಿಗರು, ಮಾಲಿಕ ವರ್ಗ ಮತ್ತು ಭೂಮಾಲೀಕರ ಉದ್ಧಾರವಷ್ಟೇ. ಈ ಕಾರ್ಯಾಚರಣೆಗೆ ಕೋಮು ಮತ್ತು ಮತೀಯ ದ್ವೇಷ ನೆರವಾಗುವುದು ಖಂಡಿತ. ಮಾರ್ಕ್ಸ್ ಈ ಮಾತುಗಳನ್ನು ಬಹಳ ಹಿಂದೆಯೇ ಹೇಳಿದ್ದಾನೆ. ಅದನ್ನು ಅರ್ಥಮಾಡಿಕೊಂಡು ಇಂದಿಗೆ ಅನ್ವಯಿಸುವುದು ಜನಪರ ಹೋರಾಟಗಳ ಜವಾಬ್ದಾರಿ.

ಈಗಿನ ಜಾಗತಿಕ ಬಂಡವಾಳದ ಕ್ರೂರ ಕ್ರೀಡೆಯ ಹಿನ್ನೆಲೆಯಲ್ಲಿ ಜನ ವಿರೋಧಿ 'ಉದಾತ್ತ' ಚಿಂತನೆಗಳು ಆಡಳಿತ ವರ್ಗದ (ಕಾಂಗ್ರೆಸ್ ಆಗಲಿ, ಭಾ.ಜ.ಪ. ಆಗಲಿ) ಆರ್ಥಿಕ ನೀತಿಗಳಿಂದ ಸಹಾಯಧನ ಖೋತಾ, ಲಂಚಗುಳಿತನ, ಅನಕ್ಷರತೆ, ಕಳ್ಳ ದಾಸ್ತಾನು, ಸರಕಾರಿ ನೌಕರಿಗಳಲ್ಲಿ ಖೋತಾ ಇವುಗಳಿಗೆ ಅನುವಾಗುವುದರಲ್ಲಿ ಸಂದೇಹವಿಲ್ಲ.

ಇವೆಲ್ಲದರ ಅರ್ಥ ಇಷ್ಟೇ: ಭಾರತದಲ್ಲಿ ಫ್ಯಾಸಿಸಂ ಅವತರಿಸುವ ಎಲ್ಲ ಲಕ್ಷಣಗಳೂ ಕಂಡು ಬರುತ್ತಿವೆ. ಅಧ್ಯಕ್ಷೀಯ ಪದ್ಧತಿ, ದೊಡ್ಡ ಬಂಡವಾಳಶಾಹಿಯ ಆಟಾಟೋಪಗಳು, ಬಹುಸಂಖ್ಯಾತ ವಾದ, ಸಂವಿಧಾನದ ವಿಮರ್ಶೆ, ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ, ಇವೆಲ್ಲವೂ ಆ ಲಕ್ಷಣಗಳ ಕೆಲವು ಅಂಶಗಳು. ಕಟ್ಟೆಚ್ಚರ ಹಿಂದೆಂದಿಗಿಂತಲೂ ಇಂದು ಹೆಚ್ಚು ಅಗತ್ಯವಾಗಿದೆ.

❑

ಕೋಮುವಾದದ ಸ್ವರೂಪ ಮತ್ತು ಆತಂಕಗಳು : ಎರಡು ಟಿಪ್ಪಣಿಗಳು

ಕೆ. ಫಣಿರಾಜ್

ಇವತ್ತಿನ ಸಂದರ್ಭವನ್ನು ಗಮನಿಸಿದರೆ ಎರಡು ಸಂಗತಿಗಳನ್ನಂತು ಸ್ಪಷ್ಟವಾಗಿ ಹೇಳಬಹುದು: (1) ಹಿಂದುತ್ವ ಕೋಮುವಾದ ಸಾಮಾಜಿಕ-ರಾಜಕೀಯ ಯಜಮಾನಿಕೆ ಗಳಿಸಿಕೊಂಡಿರುವುದರ ಪರಿಣಾಮವಾಗಿ, ಅಲ್ಪಸಂಖ್ಯಾತರ ಬದುಕು ಮಾತ್ರವಲ್ಲದೆ, ಪ್ರಜಾಪ್ರಭುತ್ವ ಹಾಗೂ ನಾಗರಿಕ ಸಮಾಜಗಳ ಆಧಾರದಲ್ಲಿ ಕಳೆದ ಇನ್ನೂರು ವರ್ಷಗಳಿಂದ ರೂಪ ಪಡೆಯಲು ಹವಣಿಸುತ್ತಿದ್ದ ಭಾರತದ ಆಧುನಿಕ ಸಮಾಜದ ಪರಿಕಲ್ಪನೆಯೇ ಅಪಾಯದಲ್ಲಿದೆ. (2) ಕೆಲವು ವ್ಯಕ್ತಿ/ಸಂಘಟನೆ/ಸಂಸ್ಥೆಗಳು ಎಷ್ಟೇ ಉತ್ಸಾಹದಿಂದ ಕೋಮುವಾದವನ್ನು ಎದುರಿಸಲು ತಯಾರಾಗಿದ್ದರೂ, ದೇಶದ ಜನಮಾನಸದಲ್ಲಿ ಪ್ರಜಾಪ್ರಭುತ್ವ, ನಾಗರಿಕ ಸಮಾಜದ ತತ್ವಗಳ ಆಧಾರದಲ್ಲಿ ಸಮಾಜದ ವ್ಯವಹಾರ ನಡೆಯುವ ಬಗ್ಗೆ ಅಪೇಕ್ಷೆ ಮೂಡದೇ ಕೋಮುವಾದದ ಯಜಮಾನಿಕೆಯನ್ನು ಎದುರಿಸುವುದು ಕಷ್ಟ. ಈ ಎರಡು ಸಂಗತಿಗಳನ್ನು ನಾವು ಗಮನಿಸಬೇಕಾದ್ದು, 'ಕಾಲವೇ ಹೀಗಿರುವಾಗ ನಾವೇನು ಮಾಡಬಹುದು' ಎಂದು ಸಮಜಾಯಿಷಿ ಕೊಟ್ಟುಕೊಳ್ಳುವುದಕ್ಕಲ್ಲ; ಇಂತಹ ನಿರಾಶೆಯ ವಾತಾವರಣದ ವಾಸ್ತವಿಕತೆಯನ್ನು ಮೊದಲು ಒಪ್ಪಿಕೊಂಡು, ಈ ಸ್ಥಿತಿಯನ್ನು ಮೀರುವ ದಾರಿಗಳ ಹುಡುಕಾಟಕ್ಕೆ ತೊಡಗುವುದು ಸೂಕ್ತ ಎಂದು ಸೂಚಿಸಲು ಮಾತ್ರ. ಸದಾತ್ ಹಸನ್ ಮಾಂಟೊನ ಕತೆಗಳು ಕಾಣಿಸುವ ಹಿಂಸೆಯ ಸ್ವರೂಪವನ್ನು ಮನಸ್ಸಿಗೆ ಹಚ್ಚಿಕೊಳ್ಳದ ಯಾವ ರಾಜಕೀಯವೂ ಮತೀಯವಾದವನ್ನು ಅರಗಿಸಿಕೊಂಡು ಬದುಕಬಲ್ಲ

ಸಮಾಜವನ್ನು ಕಟ್ಟಲಾರದು ಎಂದೇ ನನ್ನ ನಂಬಿಕೆ. ನಮ್ಮ ಪರಿಸ್ಥಿತಿ ಎಷ್ಟು ಸೂಕ್ಷ್ಮವಾಗಿದೆ ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಶಿವಮೊಗ್ಗಕ್ಕೆ ಹೊರಟ ಬಸ್ಸು ಆಗುಂಬೆಯಲ್ಲಿ ಚಾ-ತಿಂಡಿಗಾಗಿ ನಿಂತಿತ್ತು. ಅಲ್ಲಿ ತಮ್ಮ ಬಸ್ಸುಗಳಿಗಾಗಿ ಕಾಯುತ್ತಿದ್ದ ಏಜೆಂಟರು ಒಂದು ಕಡೆ ಕೂತು ಲೋಕಾಭಿರಾಮ ಮಾತಾಡುತ್ತಿದ್ದರು. ಅವರಲ್ಲೊಬ್ಬರು ಕಾವೇರಿ ವಿವಾದದ ಪ್ರಸ್ತಾಪ ಮಾಡಿದರು. ನಡು ವಯಸ್ಸು ದಾಟಿದ ಮತ್ತೊಬ್ಬರು "ಇದೇನು ಹಿಂದು-ಮುಸ್ಲಿಂ ಜಗಳವ? ನೀರು ಬೇಕಾಗಿರೋದು ತಮಿಳುನಾಡಿನ ಹಿಂದುಗಳಿಗೇ ಅಲ್ಲವ! ಹಂಚಿಕೊಳ್ಳೊ ಬುದ್ಧಿ ಇದ್ರೆ ಎಲ್ಲ ಸರಿಯಾದೀತು ಮಾರಾಯ" ಎಂದು ತಮ್ಮ ಅಭಿಪ್ರಾಯವನ್ನು ಸಾಕಷ್ಟು ದೊಡ್ಡ ಗಂಟಲಲ್ಲೇ ವ್ಯಕ್ತಪಡಿಸಿದರು. ಹತ್ತಿರದಲ್ಲೇ ಕೆಲವರು ಮುಸ್ಲಿಂ ಹೆಂಗಸರು ಬಸ್ಸಿಗಾಗಿ ಕಾಯುತ್ತಿದ್ದದ್ದನ್ನು ಕಂಡವನೊಬ್ಬ ಏನೋ ಕಣ್ಸನ್ನೆ ಮಾಡಿದ ಎಂದು ಕಾಣುತ್ತದೆ, ಮಧ್ಯವಯಸ್ಸು ದಾಟಿದ ಮನುಷ್ಯ "ನಾನೇನು ಆಡಬಾರದು ಆಡಿದೆನೋ ಮಾರಾಯ! ಇರೋ ವಿಷಯ ಹೇಳ್ದೆ ಅಷ್ಟೆ" ಎಂದರು.

1

ಭಾರತದಲ್ಲಿ ಇಂದು ಉಚ್ಛ್ರಾಯದಲ್ಲಿರುವ ಕೋಮುವಾದದ ಸ್ವರೂಪವನ್ನು ಎರಡು ಘಟನೆಗಳ ನಿರೂಪಣೆಯ ಮೂಲಕ ನಾವು ಸ್ಪಷ್ಟಪಡಿಸಿಕೊಳ್ಳಬಹುದೇನೊ. ಈ ಘಟನೆಗಳಲ್ಲಿ ಅಂತರ್ಗತವಾಗಿರುವ ವ್ಯಾಖ್ಯಾನ ನಮ್ಮ ಇಂದಿನ ಆತಂಕಗಳಿಗೆ ತಕ್ಕ ಪ್ರತಿಮೆಯಾಗಿದೆ ಎನ್ನುವ ನಂಬಿಕೆಯಿಂದ ಈ ಘಟನೆಗಳ ಬಗ್ಗೆ ಹೇಳುತ್ತಿದ್ದೇನೆ. ಮೊದಲನೆಯದು ದಿಲೀಪ್ ಡಿಸೋಜ 'ಔಟ್‌ಲುಕ್' ಪತ್ರಿಕೆಯಲ್ಲಿ ಬರೆದಿರುವ ಅವರ ಸ್ವಾನುಭವ. ಈ ಘಟನೆ ನಡೆದದ್ದು ಅಹ್ಮದಾಬಾದಿನಲ್ಲಿ; ಗೋಧ್ರದ ಘಟನೆಗಿಂತ ಹಲವು ತಿಂಗಳುಗಳ ಮುಂಚೆ. ಒಂದು ಮಧ್ಯಾಹ್ನ ಡಿಸೋಜ ಊಟಕ್ಕೆ ಹೋಟೆಲೊಂದನ್ನು ಹುಡುಕಿಕೊಂಡು ಆಟೋರಿಕ್ಷಾದಲ್ಲಿ ಹೊರಟಿದ್ದಾರೆ. ರಿಕ್ಷಾ ಕಿರಿದಾದ ಓಣಿಯೊಂದರಲ್ಲಿ ಹೊರಟಿದೆ. ಹಿಂದಿನಿಂದ ಹೊಚ್ಚಹೊಸ 'ಇಂಡಿಕಾ' ಕಾರು ಬರುತ್ತಿದೆ. ಕಾರಿನ ಚಾಲಕ ತನಗೆ ದಾರಿ ಬಿಡುವಂತೆ ಹಾರ್ನ್ ಹಾಕಿದ್ದಾನೆ. ರಿಕ್ಷಾದವನು ಸರಿಯಾಗಿ ಪ್ರತಿಕ್ರಿಯಿಸಿಲ್ಲ. ಹಾದೂ ಹೋಗುವ ಭರದಲ್ಲಿ ಕಾರಿನ ಮುಂಭಾಗ ಹಗುರಾಗಿ ರಿಕ್ಷಾದ ಹಿಂಭಾಗಕ್ಕೆ ತಾಗಿದೆ. ಆದರೆ ಕಾರಿಗೂ, ರಿಕ್ಷಾಕ್ಕೂ ಯಾವ ಜಖಂ ಆಗಿಲ್ಲ. ಹತ್ತು ಹೆಜ್ಜೆ ಮುಂದೆ ಹೋಗುವುದರೊಳಗೇ ಕಾರಿನವನು ರಿಕ್ಷಾವನ್ನು ಹಿಂದೆ ಹಾಕಿ ಮುಂದೆ ಹೋದವನೆ ಕಾರನ್ನು ಅಡ್ಡಾಗಿ ನಿಲ್ಲಿಸಿ, ಕಾರಿಂದ ಇಳಿದು ನಿಂತಿರುವ ರಿಕ್ಷಾದ ಕಡೆ ನಡೆದು ಬಂದ. ವೇಷಭೂಷಣಗಳನ್ನು ನೋಡಿದರೆ ಆತ ಯಶಸ್ವಿ ಉದ್ಯಮವೊಂದರ ಉನ್ನತ ಸ್ಥಾನದಲ್ಲಿದ್ದಾನೆ ಎಂದು ಗೊತ್ತಾಗಿಬಿಡುತ್ತದೆ. ಅವನು ಬಂದವನೆ, ತಾನು ಮೂರು ಸಾರಿ ಹಾರ್ನ್ ಹಾಕಿದರು ರಿಕ್ಷಾದವನು ದಾರಿಕೊಡಲಿಲ್ಲವೇಕೆ ಎಂದು ದಬಾಯಿಸಲು ಶುರುಮಾಡುತ್ತಾನೆ. ರಿಕ್ಷಾದವನೂ ಜಗಳಕ್ಕೆ ನಿಲ್ಲುತ್ತಾನೆ. ಮಾತಿಗೆ ಮಾತು ಬೆಳೆಯುತ್ತಿರುವುದನ್ನು ನೋಡಿ ದೀಲಿಪ್ ಡಿಸೋಜ ಮಧ್ಯ ಪ್ರವೇಶ ಮಾಡಿ ಸಮಾಧಾನ ಮಾಡಲು ಯತ್ನಿಸುತ್ತಾರೆ. ಕಾರಿನವನು ಶಾಂತವಾದ ಹಾಗೆ ಕಾಣುತ್ತದೆ. ಅವನು ತನ್ನ ಕಾರಿನ ಹತ್ತಿರ ನಡೆದವನೇ ಡಿಕ್ಕಿಯಿಂದ, ಕಾರಿನ ರಿಪೇರಿಗೆ ಯಾವ ರೀತಿಯಲ್ಲೂ ಉಪಯುಕ್ತವಲ್ಲದ ಒಂದು ಸಾಧನವನ್ನು - ಅದು ದಪ್ಪನೆಯ ಬಡಿಗೆ-ತೆಗೆದು

ರಿಕ್ಷಾ ಡ್ರೈವರನ ಬಳಿ ಬಂದು, ಅವನ ಕೈಗೆ ಹೊಡೆಯುತ್ತಾನೆ. ಹೊಡೆತದ ರಭಸ ಎಷ್ಟಿತ್ತೆಂದರೆ, ಆ ದಪ್ಪದ ಬಡಿಗೆ ಎರಡು ತುಂಡಾಗಿಬಿಡುತ್ತದೆ. ಅಷ್ಟು ಮಾಡಿ ಏನೂ ನಡೆದಿಲ್ಲವೆನ್ನುವಂತೆ ಅವನು ಕಾರು ಹತ್ತಿ ಹೋಗಿ ಬಿಡುತ್ತಾನೆ. ರಿಕ್ಷಾದವನ ಕೈಯಿಂದ ರಕ್ತ ಹರಿಯುತ್ತಿರುತ್ತದೆ. ಸುತ್ತ ನಿಂತು ನೋಡುತ್ತಿದ್ದ ಜನ ಕೊಂಕು ನಗೆ ನಕ್ಕು ತಮ್ಮ ದಾರಿ ಹಿಡಿಯುತ್ತಾರೆ. ರಸ್ತೆಯ ಬದಿ ಇದನ್ನೆಲ್ಲ ನೋಡುತ್ತಿದ್ದ ಬಾಲಕನೊಬ್ಬ ಬಂದು, ನೆಲದ ಮೇಲೆ ಬಿದ್ದಿದ್ದ ಬಡಿಗೆ ತುಂಡುಗಳನ್ನು ಹೆಕ್ಕಿಕೊಂಡು ಹೋಗುತ್ತಾನೆ.

ಎರಡನೆಯ ಪ್ರಸಂಗ ನನ್ನ ಸ್ವಂತದ ಅನುಭವ, 2001ರಲ್ಲಿ, ಏಪ್ರಿಲ್ 14ನೇ ತಾರೀಖು ಮಂಗಳೂರಿನ ಹತ್ತಿರ ಇರುವ ಮೂಡಬಿದಿರೆಯ ಸಮೀಪದ ಅಲಂಗಾರು ಎನ್ನುವಲ್ಲಿ 'ನ್ಯೂ ಲೈಫ್ ಫೆಲೋಶಿಪ್' ಎಂಬ ಪುಟ್ಟ ಪ್ರಾಟಸ್ಟಂಟ್ ಪಂಥದ ಪ್ರಾರ್ಥನಾ ಸಭೆಯ ಮೇಲೆ ಭಜರಂಗ ದಳದವರು ದಾಳಿ ಮಾಡಿದರು. ಈ ದಾಳಿಗೆ ಅವರು ಕೊಟ್ಟ ಕಾರಣ 'ಹಿಂದುಗಳ ಬಲವಂತದ ಮತಾಂತರ'. ಕಾರ್ಕಳದ ಹತ್ತಿರವಿರುವ ಚಿಕ್ಕ ಹಳ್ಳಿಯ ಇಬ್ಬರು ಯುವತಿಯರು ಹಾಗೂ ಅವರ ತಾಯಿಯನ್ನು ಮರಳು ಮಾಡಿ ಮತಾಂತರ ಮಾಡಿದ್ದಾರೆ ಎಂದು ಭಜರಂಗಿಗಳು ಹಾಗೂ ಕೆಲವು ಪತ್ರಿಕೆಗಳು ಆರೋಪಿಸಿದ್ದವು. ನಿಜವನ್ನು ತಿಳಿಯಲು ಗೆಳೆಯರಾದ ರಾಜಶೇಖರ್ ಮತ್ತು ನಾನು ಆ ಹುಡುಗಿಯರನ್ನು ಮಾತನಾಡಿಸಲು ಹೋಗಿದ್ದೆವು. ಇಬ್ಬರು ಹುಡುಗಿಯರಲ್ಲಿ ಕಿರಿಯವಳು ಹಾಗು ಅವರ ತಾಯಿ ನಮಗೆ ಮಾತನಾಡಲಿಕ್ಕೆ ಸಿಕ್ಕಿದರು. ಬದುಕಿನಲ್ಲಿ ಯಾವ ಭದ್ರತೆಯೂ ಇಲ್ಲದ ಭಿಲ್ಲವರ ಬಡ ಕುಟುಂಬವದು. ಅವರು ಯಾವುದೇ ಬಲವಂತಕ್ಕೆ ಮಣಿದು ಪ್ರಾರ್ಥನಾ ಸಭೆಗೆ ಹೋಗುತ್ತಿದ್ದದ್ದಲ್ಲ; ತಮ್ಮ ಬದುಕಿನ ಬವಣೆಗಳ ಪರಿಹಾರಕ್ಕೆ ಹಲವು ಲೌಕಿಕ ಪ್ರಯತ್ನಗಳನ್ನು ನಡೆಸಿ, ಫಲ ಕಾಣದೆ ಸದ್ಯಕ್ಕೆ ಈ ಪ್ರಾರ್ಥನಾ ಸಭೆಯಲ್ಲಿ ಸಾಂತ್ವನ ಕಂಡುಕೊಂಡವರು ಅವರು. ಇದು ಮತಾಂತರವೋ? ತಾವು ಒಂದು ಮತವನ್ನು ತೊರೆದು ಮತ್ತೊಂದು ಮತ ಸೇರಿದ್ದೇವೆಯೋ? ಮುಂತಾದ ಯಾವ ವಾದಗಳು ಅವರಿಗೆ ಮುಖ್ಯ ವಾಗಿರಲಿಲ್ಲ. ತಮ್ಮ ಬದುಕಿನ ಕಷ್ಟಗಳಿಗೆ ತಮಗೆ ಸರಿಕಂಡ ಮಾರ್ಗವನ್ನು ಆಯ್ದುಕೊಂಡಿದ್ದೇವೆ ಎನ್ನುವ ವಿಶ್ವಾಸ ಅವರಲ್ಲಿತ್ತು. ಭಜರಂಗದಳದವರು ಇವರ ಮನೆಗೆ ಬಂದು ಬೆದರಿಸಿದಾಗ ಕಿರಿಯ ಹುಡುಗಿ 'ನಮಗೆ ಸರಿ ಕಂಡದ್ದನ್ನು ಮಾಡುವ ಹಕ್ಕು ನಮಗಿದೆ. ಬೇಡ ಎಂದು ಹೇಳಲು ನೀವು ಯಾರು? ಎಂದು ಅವರ ಮುಖಕ್ಕೆ ಕೇಳಿದೆ' ಎಂದು ಹೇಳಿದಳು.

ದೀಲಿಪ್ ಡಿಸೋಜ ವಿವರಿಸಿದ ಆ ಕಾರಿನ ಮನುಷ್ಯನ ಅನುಕೂಲಕ್ಕೆ ಬೇಕಾದ್ದನ್ನು ಮಾಡಲು ನಮ್ಮ ಪ್ರಭುತ್ವ ಇವತ್ತು ಟೊಂಕ ಕಟ್ಟಿ ನಿಂತಿದೆ (ಸಮಾಜ ವಿಜ್ಞಾನಿ ಬ್ಲಂ ಹನ್ಸೆನ್, ಹಿಂದುತ್ವ ಕೋಮುವಾದಕ್ಕೆ ಇವತ್ತು 'ಕರಸೇವಕ'ರ ಬೆಂಬಲ ಮಾತ್ರವಲ್ಲದೆ, ಇಂತಹ 'ಕಾರು ಸೇವಕರ' ಭಾರಿ ಬೆಂಬಲವೂ ದೊರಕಿದೆ ಎಂದು ಸೋದಾಹರಣವಾಗಿ ವಿವರಿಸಿದ್ದಾರೆ. ನೋಡಿ: ಬ್ಲಂ ಹನ್ಸೆನ್ ಮತ್ತು ಕ್ರಿಸ್ಟೋಫರ್ ಜಿಫ್ರೊಲೊಟ್ (ಸಂ) 'ಬಿ.ಜೆ.ಪಿ. ಅಂಡ್ ಕಂಪಲ್ಷನ್ ಆಫ್ ಪಾಲಿಟಿಕ್ಸ್ ಇನ್ ಇಂಡಿಯ' ಓಯುಪಿ, ನ್ಯೂ ದೆಹಲಿ) ; ಆತನನ್ನು ತಮ್ಮವನು ಎಂದು ಹೇಳಿಕೊಳ್ಳಲು ಎಲ್ಲ ಸಂಘಟನೆಗಳು ಹಾತೊರೆಯಬಹುದು; ತನ್ನ ವರ್ತನೆಯ ಬಗ್ಗೆ ಆತನಿಗೆ,

ವಿಷಾದವಂತೂ ದೂರ ಉಳಿಯಿತು, ಹೆಮ್ಮೆ ಇರಲಿಕ್ಕೂ ಸಾಕು; ಇವತ್ತು ಆತ ಸಮಗೆ ಮಹಾ ಗೌರವಾನ್ವಿತವಾಗಿಯು, ರಿಕ್ಷಾದವನು ಅಸಭ್ಯವಾಗಿಯೂ ಕಂಡರೆ ಆಶ್ಚರ್ಯವೇನು ಇಲ್ಲ. ಅದೇ ಆ ಹುಡುಗಿಯನ್ನು ಹಾಗೂ ಆಕೆಯ ಕುಟುಂಬವನ್ನು ನೋಡಿ; ಅವರು ನಮ್ಮ ಪ್ರಭುತ್ವ ಹಾಗೂ ಸಮಾಜಗಳಿಂದ, ಎಲ್ಲಾ ಅರ್ಥದಲ್ಲೂ ನಿರ್ಲಕ್ಷಿತರಾದವರು; ಇವತ್ತು ಅವರ ಆಸರೆಗೆ ಇರುವುದು ಅವರ ವೈಯಕ್ತಿಕ ನಂಬಿಕೆ ಹಾಗೂ ಕಷ್ಟದ ಬದುಕು ಕಲಿಸಿದ ಜಿಗುಟುತನ. ಅವರಿಗೆ ಧಮಕಿ ಹಾಕಲು ಬಂದವರು ಕೂಡ, ಸಾಮಾಜಿಕವಾಗಿಯು, ಆರ್ಥಿಕವಾಗಿಯೂ ಇವರಿಗಿಂತ ಭಿನ್ನರಾದವರಲ್ಲ ಎನ್ನುವುದನ್ನು ಇಲ್ಲಿ ಅಗತ್ಯವಾಗಿ ಗಮನಿಸಬೇಕು; ನಾಳೆ ಭಜರಂಗಿಗಳು ಅವರ ಮನೆ ಸುಟ್ಟರೆ ಅವರಿಗೆ ಯಾರ ಬೆಂಬಲ ದೊರಕೀತು? ಹೆಚ್ಚೆಂದರೆ ನಮ್ಮ ಸರಕಾರ ಎರಡನೇ ಮಹಾಯುದ್ಧ ಕಾಲದ ರೈಫಲನ್ನು ಹಿಡಿದುಕೊಂಡ ಒಬ್ಬ ಪೊಲೀಸ್ ಪೇದೆಯನ್ನ ಒಂದೆರಡು ದಿನ ಸುಟ್ಟ ಮನೆಯ ಮುಂದೆ ನಿಲ್ಲಿಸಬಹುದು; ಅವನ ಚಾ, ತಿಂಡಿಯನ್ನೂ ಒಂದು ಹೊತ್ತು ಊಟಕ್ಕೂ ಪರದಾಡುತ್ತಿರುವ ಆ ಮನೆಯವರೇ ಪೂರೈಸಬೇಕಾದೀತಷ್ಟೆ!

ಹಾಗಾದರೆ ನಮ್ಮ ಎದುರು ('ಒಳಗೆ' ಎನ್ನುವುದೇ ಸೂಕ್ತವಾದದ್ದು) ಇರುವ ಕೋಮು ವಾದದ ಸ್ವರೂಪವೇನು? ವಿಶ್ವ ಹಿಂದು ಪರಿಷತ್ತಿನ ಧರ್ಮೇಂಧರ್ ಸಿನ್ಹಾ 'ಗುಜರಾತ್ ಇವತ್ತು ನಮ್ಮ ಮುಂದಿರುವ ಅಚ್ಚುಕಟ್ಟಾದ ಪ್ರಯೋಗಾಲಯ, ವಿಚಾರವಂತರೆಲ್ಲಾ ವೈಜ್ಞಾನಿಕ ನಿರ್ಲಿಪ್ತತೆಯಿಂದ ಗುಜರಾತಿನ ಘಟನೆಗಳನ್ನು ಗಮನಿಸಿ ನಿಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಿ' ಎಂದು ಅಪ್ಪಣೆ ಕೊಡಿಸಿದ್ದಾರೆ. ಅವರು ಹೇಳುತ್ತಿರುವುದು ಸರಿಯಾಗಿಯೇ ಇದೆ; ಹಿಂದುತ್ವ ಕೋಮುವಾದದ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲಿಕ್ಕೆ ನಾವು ಗುಜರಾತಿನಲ್ಲಿ ತಿಂಗಳಾನು ಗಟ್ಟಲೆ ನಡೆದ ಹಿಂಸೆಯನ್ನು ಗಮನಿಸಿದರೆ ಸಾಕು. ಗುಜರಾತಿನ ಹಿಂಸೆಯಲ್ಲಿ ನಂಬಬಹುದಾದ ಅಂದಾಜಿನ ಪ್ರಕಾರ ಎರಡೂವರೆ ಸಾವಿರ ಜನ ಸತ್ತಿದ್ದಾರೆ, ಎರಡು ಲಕ್ಷ ಜನ ಮನೆಮಾರು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. 1969ರಲ್ಲಿ ಅಹ್ಮದಾಬಾದ್ ಕೋಮುಗಲಭೆಯಲ್ಲಿ ಎರಡು ಸಾವಿರ ಜನ ಕೊಲೆಯಾಗಿದ್ದರು. 1984ರಲ್ಲಿ ದೆಹಲಿಯಲ್ಲಿ ನಡೆದ ಹತ್ಯಾಕಾಂಡದಲ್ಲಿ ಮೂರು ಸಾವಿರ ಸಿಖ್ಖರು ಕೊಲೆಯಾಗಿದ್ದರು ಎನ್ನುವುದನ್ನು ಇರಿಸಿಕೊಂಡರೂ ಗುಜರಾತಿನ ಇವತ್ತಿನ ಹಿಂಸೆಯ ಸ್ವರೂಪ ಹಲವಾರು ರೀತಿಯಲ್ಲಿ ಭಿನ್ನವಾಗಿದೆ; ಹಿಂಸೆಯ ಜೊತೆ ಈ ಭಿನ್ನತೆಯೂ ನಮ್ಮ ಆತಂಕವನ್ನು ಹೆಚ್ಚಿಸುತ್ತದೆ ಎನ್ನುವ ಕಾರಣಕ್ಕಾಗಿ ಇವುಗಳನ್ನು ಗಮನಿಸಬೇಕು:

1. ಗುಜರಾತಿನಲ್ಲಿ ನಡೆದ ಹಿಂಸೆಗೆ ಗೋಧ್ರದ ಭೀಕರ ಹತ್ಯೆ ಮಾತ್ರವಲ್ಲದೆ, ಈ ಘಟನೆಯ ಬಗ್ಗೆ 'ಸೆಕ್ಯುಲರ್ ಮಂದಿ' ಮೌನವಾಗಿದ್ದದ್ದೇ ಕಾರಣ ಎಂದು, ಬಿ.ಜೆ.ಪಿ.ಯೂ ಸೇರಿದ ಹಾಗೆ, ಸಂಘ ಪರಿವಾರದವರು ಹೇಳುತ್ತಿದ್ದಾರೆ. ಫೆಬ್ರವರಿ 27, 2002ರ ರಾತ್ರಿಯಿಂದಲೇ ಎಲ್ಲಾ ರಾಜಕೀಯ ಪಕ್ಷ ಹಾಗೂ ನಾಗರಿಕ ಸಂಘಟನೆಗಳು-ಇದರಲ್ಲಿ ಹಲವಾರು ಮುಸ್ಲಿಂ ಸಂಘಟನೆಗಳೂ ಸೇರಿವೆ-ಗೋಧ್ರದಲ್ಲಿ ನಡೆದದ್ದು ದಂಗು ಬಡಿಸುವಂತಹ ಪೈಶಾಚಿಕ ಕೃತ್ಯ ಎಂದು ಖಂಡಿಸತೊಡಗಿದ್ದವು. ಪಾರ್ಲಿಮೆಂಟಿನ ಸರ್ವಪಕ್ಷಗಳ ಸಭೆಯೂ ಇದೇ ರೀತಿಯ ನಿರ್ಣಯವನ್ನು ಒಮ್ಮತದಿಂದ ಪ್ರಕಟಿಸಿತು. ಮೇಲಾಗಿ ಎಲ್ಲರೂ ಈ ಘಟನೆಗೆ ಕಾರಣರಾದ

ವ್ಯಕ್ತಿಗಳನ್ನು ತಕ್ಷಣವೇ ಬಂಧಿಸಿ, ಕಾನೂನಿನ ರೀತ್ಯಾ ಶಿಕ್ಷೆ ವಿಧಿಸಬೇಕು ಎಂದು ಕೂಡ ಹೇಳಿದರು. ಇದೆಲ್ಲಾ ಸಾರ್ವಜನಿಕವಾಗಿಯೆ ನಡೆದದ್ದು. ಆದರೂ ಸಂಘಪರಿವಾರದವರು ಮಾಡುತ್ತಿರುವ ಆರೋಪದ ಅರ್ಥವೇನು? ಪೇಜಾವರ ಮಠಾಧೀಶರು ಅನಂತಮೂರ್ತಿಯವರ ಪತ್ರಕ್ಕೆ ಬರೆದ ಉತ್ತರದಲ್ಲಿ, ಗೋಧ್ರದ ಘಟನೆಯ ಬಗ್ಗೆ ಸಂಘಪರಿವಾರದ ಹೊರಗಿರುವ ಎಲ್ಲರ ಖಂಡನೆಯನ್ನೂ 'ಕಾಟಾಚಾರದ ಖಂಡನೆ' ಎಂದು ದೂಷಿಸಿ, ನಂತರದಲ್ಲಿ ನಡೆಯುತ್ತಿರುವ ಹಿಂಸೆಯ ಖಂಡನೆಗೆ ಇರುವಷ್ಟು ಧಮ್ ಮೊದಲಿನದ್ದಕ್ಕೆ ಇರಲಿಲ್ಲ ಎಂದಿದ್ದಾರೆ. ಎರಡೂ ಹಿಂಸೆಗಳ ಬಗೆಗೂ ಸೆಕ್ಯುಲರ್ ನಾಗರಿಕ ಸಮಾಜದ ಬಗೆಗೆ ನಂಬಿಕೆ ಇಟ್ಟುಕೊಂಡಿರುವ ಜನರು ತೋರಿದ ಪ್ರತಿಕ್ರಿಯೆಯಲ್ಲಿ ಏನು ವ್ಯತ್ಯಾಸವಿದೆ? ಎರಡೂ ಕಡೆಗಳಲ್ಲೂ ನಾಗರಿಕರ ಮೇಲೆ ಹಿಂಸೆ ನಡೆಸುತ್ತಿರುವವರನ್ನು ಬಂಧಿಸಿ, ಕಾನೂನಿನ ಪ್ರಕಾರ ವಿಚಾರಣೆ ನಡೆಸಿ, ತಕ್ಕ ಶಿಕ್ಷೆ ವಿಧಿಸಿ ಎಂದು ಮಾತ್ರ ತಾನೇ ಕೇಳುತ್ತಿರುವುದು? ಹಿಂಸೆಯಲ್ಲಿ ತೊಡಗಿರುವವರನ್ನು ಗುಜರಾತ್ ಸರಕಾರವಾಗಲಿ, ಕೇಂದ್ರ ಸರಕಾರವಾಗಲಿ ನಿಯಂತ್ರಿಸಲು ವಿಫಲವಾಗಿರುವುದರಿಂದ, ತಕ್ಷಣವೇ ನಮಗೆ ಶಸ್ತ್ರಾಸ್ತ್ರಗಳನ್ನು ಒದಗಿಸಿ, ನಾವು ಒಂದು ಕೈ ನೋಡಿಯೇಬಿಡುತ್ತೇವೆ ಎಂದು ಯಾರಾದರೂ ಹೇಳಿದ್ದಾರೆಯೋ? ಪ್ರಜಾಪ್ರಭುತ್ವದ ನಿಯಮಗಳನ್ನು ಗೌರವಿಸದೆ, ಸಾಂವಿಧಾನಿಕ ಸಂಸ್ಥೆಗಳ ಉತ್ತರದಾಯಿತ್ವದಲ್ಲಿ ನಂಬಿಕೆ ಇಡದೆ, ತಮ್ಮ ಮೂಗಿನ ನೇರಕ್ಕೆ ನ್ಯಾಯಾನ್ಯಾಯಗಳ ವ್ಯಾಖ್ಯೆಯನ್ನು ಬಗ್ಗಿಸಿ ಯಾರೂ ಹಿಂಸೆಯಲ್ಲಿ ತೊಡಗಕೊಡದು ಎನ್ನುವ ನಾಗರಿಕ ಸಮಾಜದ ನ್ಯಾಯಪ್ರಜ್ಞೆಯ ನೆಲೆಯಿಂದ ಖಂಡಿಸುವುದು ಸಂಘಪರಿವಾರದವರಿಗೆ ಸರಿ ಕಾಣುತ್ತಿಲ್ಲ. ತಮ್ಮ ಹಾಗೆ ದೇಶದ ಪ್ರತಿಯೊಬ್ಬರೂ ಇಬ್ಬರು ಮುಸ್ಲಿಮರ ಹೆಣಗಳನ್ನು ಉರುಳಿಸಿ, ಒಬ್ಬ ಹೆಂಗಸಿನ ಮೇಲೆ ಅತ್ಯಾಚಾರ ನಡೆಸಿ, ಒಬ್ಬ ಗರ್ಭಿಣಿ ಹೆಂಗಸಿನ ಭ್ರೂಣವನ್ನು ಬಗೆದು ನಮ್ಮ ಖಂಡನೆಯ ಧಂ ತೋರಿಸಬೇಕು ಎಂಬ ಇಂಗಿತವನ್ನು, ವಿಹಿಂಪ, ಭಜರಂಗದಳಗಳನ್ನು ಬಿಡಿ, ಸಂವಿಧಾನಕ್ಕೆ ಬದ್ಧವಾಗಿ ಆಡಳಿತ ನಡೆಸುವ ಜವಾಬ್ದಾರಿ ಇರುವ ಗುಜರಾತಿನ ಸರಕಾರ ಹಾಗೂ ಕೇಂದ್ರ ಸರಕಾರದ ಮಂತ್ರಿಗಳು, ಕೊನೆಗೆ ಈ ದೇಶದ ಪ್ರಧಾನ ಮಂತ್ರಿಗಳೂ ವ್ಯಕ್ತಪಡಿಸಿದ್ದಾರೆ.

2. ಸಮಾಜದಲ್ಲಿ ನಡೆಯುವ ಹಿಂಸೆಯ ಸಮ್ಮುಖದಲ್ಲಿ ಸರಕಾರಗಳು ವರ್ತಿಸುವ ಕೆಲವು ನಮೂನೆಗಳನ್ನು ನಾವು ಗಮನಿಸಬಹುದು. ಒಂದು ಸರಕಾರ ಕರಾಳ ಶಾಸನಗಳನ್ನು ರೂಪಿಸಿ, ಅವುಗಳನ್ನು ಜಾರಿಗೊಳಿಸುವ ಸಲುವಾಗಿ ಜನರ ಮೇಲೆ ಹಿಂಸೆ ನಡೆಸುವುದು, ಈ ಶಾಸನಗಳ ನೆಪ ಮಾಡಿಕೊಂಡು ಭಿನ್ನಮತೀಯರನ್ನು ಹಿಂಸಾತ್ಮಕವಾಗಿ ಬಗ್ಗು ಬಡಿಯಲಿಕ್ಕೆ ರಾಜ್ಯದ ಶಕ್ತಿಯನ್ನು ಉಪಯೋಗಿಸುವುದು - ಇಂತಹ ಕೃತ್ಯಗಳನ್ನು 'ಪ್ರಭುತ್ವ ನಡೆಸುವ ಭಯೋತ್ಪಾದನೆ' ಎನ್ನುತ್ತಾರೆ. ಸರಕಾರಗಳು 'ಪೋಟ'ದಂತಹ ಕಾಯ್ದೆಗಳ ಮೂಲಕ ಭಯೋತ್ಪಾದನೆ ನಡೆಸಬಹುದು ಎನ್ನುವ ಆತಂಕ ನಮಗೆಲ್ಲರಿಗೂ, ಸಕಾರಣವಾಗಿಯೇ ಇದೆ. ಎರಡನೆಯದು, ಪ್ರಬಲ ಗುಂಪುಗಳು ದುರ್ಬಲರ ಮೇಲೆ ನಡೆಸುವ ಹಿಂಸೆಯ ಬಗ್ಗೆ ಸರಕಾರಗಳು ಮೃದುವಾಗಿ ನಡೆದುಕೊಳ್ಳುವುದು; ಇಂತಹ ಹಿಂಸೆಗಳ ಹಿಂದೆ ಒಂದು ನಿಶ್ಚಿತವಾದ ಸಾಮಾಜಿಕ ಧೋರಣೆ ಇರುತ್ತದೆ ಎನ್ನುವುದು ಸರಿ; ಆದರೆ ಇಂತಹ ಹಿಂಸೆಯನ್ನು ಸರಕಾರ ಹಾಗೂ ಕಾನೂನುಗಳು ಮಾನ್ಯ ಮಾಡುವುದಿಲ್ಲ ಎಂದು ಒಪ್ಪಿಕೊಳ್ಳುವ ಕಾಟಾಚಾರದ ಸಭ್ಯತೆಯನ್ನಾದರೂ ಸರಕಾರಗಳು

ತೋರಿಸಿಕೊಳ್ಳುತ್ತವೆ; ಅಧಿಕಾರ ಸಮೀಕರಣ ಯಾವ ಕಡೆಗಾದರೂ ತಿರುಗಬಹುದು ಎಂಬ ವ್ಯಾವಹಾರಿಕ ಕಾರಣಕ್ಕಾದರೂ ಸರಕಾರಗಳು ಇಡೀ ರಾಜ್ಯ ಯಂತ್ರವನ್ನು ಒಂದು ಗುಂಪಿನ ವಶಕ್ಕೆ ಒಪ್ಪಿಸಿ ಕೈಕಟ್ಟಿ ಕೂಡುವುದಿಲ್ಲ; ದಲಿತರು ಹಾಗೂ ಹೆಂಗಸರ ಮೇಲೆ ನಡೆಯುವ ಹಿಂಸೆ ಮತ್ತು ಈ ಹಿಂದೆ ದೇಶದಾದ್ಯಂತ ನಡೆದ ಕೋಮು ಗಲಭೆಗಳ ಬಗ್ಗೆ ನಮ್ಮ ಸರಕಾರಗಳ ಧೋರಣೆ ಇಂತಹುದೇ ಆಗಿದೆ; ಪ್ರಜಾಪ್ರಭುತ್ವದಲ್ಲಿ ಇಂತಹ ವರ್ತನೆ ಸಹ್ಯವಾದುದಲ್ಲ; ಸರಕಾರಗಳ ಈ ರೀತಿಯ ವರ್ತನೆ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಿ ನಾಮಕಾವಾಸ್ತೆಯ ಜನತಂತ್ರ ಮಾತ್ರ ಉಳಿದುಕೊಳ್ಳುತ್ತದೆ ಎನ್ನುವುದು ನನ್ನ ವಾದವೂ ಹೌದು. ಆದರೆ ಇಂದು ಗುಜರಾತಿನ ಬಿ.ಜೆ.ಪಿ. ಸರಕಾರ ಹಾಗೂ ಕೇಂದ್ರದ ಎನ್.ಡಿ.ಎ. ಸರಕಾರದ ವರ್ತನೆ ಇದಕ್ಕಿಂತ ಹೆಚ್ಚು ಆತಂಕಕಾರಿಯಾಗಿದೆ. ನಮ್ಮ ದೇಶದ ಸಂವಿಧಾನದ ಪ್ರಕಾರ, ರಾಜಕೀಯ ಪಕ್ಷಗಳು ಸಂವಿಧಾನಕ್ಕೆ ಸಂಪೂರ್ಣ ಬದ್ಧವಾಗಿದ್ದು, ಅದರ ನಿಯಮದ ಪ್ರಕಾರ ಆಡಳಿತ ನಡೆಸುತ್ತೇವೆ ಎಂದು ಬೇಷರತ್ತಾಗಿ ಒಪ್ಪಿಕೊಳ್ಳಬೇಕು; ಈ ಒಪ್ಪಿಗೆಯ ಆಧಾರದಲ್ಲಿಯೇ ಚುನಾವಣೆಗಳಲ್ಲಿ ಸ್ಪರ್ಧಿಸುವ ಹಾಗೂ ಸರಕಾರವನ್ನು ರಚಿಸಿ, ಜನರ ಪರವಾಗಿ ನಿರ್ಧಾರಗಳನ್ನು ತೆಗೆದುಕೊಂಡು, ಆಡಳಿತ ನಡೆಸುವ ಅರ್ಹತೆ ರಾಜಕೀಯ ಪಕ್ಷಗಳಿಗೆ ದೊರೆಯುತ್ತದೆ. ಈ ರೀತಿ ಅಧಿಕಾರ ಹಿಡಿದ ಪಕ್ಷಗಳು ಸಂವಿಧಾನಬದ್ಧವಾಗಿ ಆಡಳಿತದ ಜವಾಬ್ದಾರಿಯನ್ನು ನಿರ್ವಹಿಸಬೇಕೆ ಹೊರತು, ಆಡಳಿತವನ್ನು ಸಂವಿಧಾನ ಮಾನ್ಯಮಾಡದ ಸಂಸ್ಥೆಗಳ ಕೈಗೊಪ್ಪಿಸಕೂಡದು. ಸಂಘಪರಿವಾರಕ್ಕೆ ದೇಶದ ಸಂವಿಧಾನದ ಬಗ್ಗೆ ವಾಸ್ತವಿಕವಾಗಿ ಎಳ್ಳಷ್ಟೂ ಗೌರವವಿಲ್ಲ; ಭಾರತವನ್ನು ಫ್ಯಾಸಿಸ್ಟ್ ಮಾದರಿಯ ರಾಷ್ಟ್ರವನ್ನಾಗಿಸಬೇಕು ಎನ್ನುವುದು ಸಂಘಪರಿವಾರದ ಘೋಷಿತ ಗುರಿ; ಮುಖ್ಯವಾಗಿ ಬಿ.ಜೆ.ಪಿ. ಸರಕಾರದಲ್ಲಿ ಇರುವವರಿಗೆ, 'ಸಂಘ ತಮ್ಮ ಆತ್ಮ'ವಾಗಿದ್ದರೂ, ಸಮಾಜವನ್ನು ಸಂಘಕ್ಕೆ ಒಪ್ಪಿಸುವ ಯಾವ ಹಕ್ಕೂ ಇಲ್ಲ; ಆದರೆ ಗುಜರಾತಿನಲ್ಲಿ ನಡೆದ ಹಿಂಸೆಯ ಹಿಂದೆ ಸಂವಿಧಾನಬದ್ಧವಾಗಿ ಅಧಿಕಾರ ಹಿಡಿದು, ಆಡಳಿತ ಯಂತ್ರವನ್ನು ವ್ಯವಸ್ಥಿತವಾಗಿ ಸಂವಿಧಾನ ಬಾಹಿರ ಸಂಸ್ಥೆಗಳಿಗೆ ರಾಜಾರೋಷವಾಗಿ ಒಪ್ಪಿಸಿದ ಕೆಲಸ ನಡೆದಿದೆ. ಹಿಂಸಾಚಾರ ಶುರು ವಾಗುವುದಕ್ಕೆ ಮುಂಚಿನ ಒಂದು ವರ್ಷದ ಗುಜರಾತಿನ ಬೆಳವಣಿಗೆಗಳನ್ನು ಗಮನಿಸಿದರೆ ಈ ಸಂಗತಿ ಸ್ಪಷ್ಟವಾಗುತ್ತದೆ. (ಈ ಬೆಳವಣಿಗೆ ಕೂಡ ಹಠತ್ತಾಗಿ ಘಟಿಸಿದ್ದೇನು ಅಲ್ಲ; ಇದು ಕಳೆದ ಅರ್ಧ ಶತಮಾನದಲ್ಲಿ ಸಂಘಪರಿವಾರದವರು ಗುಜರಾತಿನಲ್ಲಿ ಸಂಘಟಿಸಿದ ರಾಜಕೀಯದ ಪರಿಣಾಮವಾಗಿದೆ. ಬಿ.ಜೆ.ಪಿ.ಯು ಸಂಘಪರಿವಾರ ರೂಢಿಸಿದ ಸಾಮಾಜಿಕ ಯಜಮಾನಿಕೆಯ ಬುನಾದಿಯ ಮೇಲೆ ತನ್ನ ರಾಜಕೀಯವನ್ನು ಸಂಘಟಿಸಿರುವುದನ್ನು ನಾವು ಗಮನಿಸಬೇಕು. ಹಿಂದುತ್ವವಾದದ ಬೆಳವಣಿಗೆಯನ್ನು ಸವಿಸ್ತಾರವಾಗಿ ಅಧ್ಯಯನ ಮಾಡಿರುವ ವಿದ್ವಾಂಸ ಕ್ರಿಸ್ಟೋಫ್ ಜೆಫ್ರೊಲೇಟ್, ಸಂಘಪರಿವಾರ ಯಾವತ್ತೂ ಸಾಮಾಜಿಕ ಅಧಿಕಾರಕ್ಕೆ ಹೆಚ್ಚು ಮಹತ್ವ ಕೊಡುತ್ತದೆ; ರಾಜಕೀಯ ಅಧಿಕಾರವೇನಿದ್ದರು ಅದು ಸಾಮಾಜಿಕ ಯಜಮಾನಿಕೆಯನ್ನು ಗಟ್ಟಿಗೊಳಿಸುವಷ್ಟರ ಮಟ್ಟಿಗೆ ಮಾತ್ರ ಉಪಯುಕ್ತ ಎಂಬ ವಿಚಾರದ ನೆಲೆಯಲ್ಲಿ ಸಂಘ ಪರಿವಾರ ಕಾರ್ಯಾಚರಣೆ ನಡೆಸುತ್ತದೆ ಎಂದು ಹೇಳುತ್ತಾರೆ. ಗುಜರಾತಿನಲ್ಲಿ ಸಂಘ ಪರಿವಾರದ ಕಾರ್ಯಾಚರಣೆ ಅವರ ಮಾತನ್ನು ಸಮರ್ಥಿಸುತ್ತದೆ; ಹಾಗೆಯೆ, ಈ ನಮೂನೆಯ ರಾಜಕೀಯ

ವನ್ನು ಎದುರಿಸುವ ಯಾವ ತಯಾರಿಯನ್ನೂ ಇನ್ನುಳಿದ ರಾಜಕೀಯ ಪಕ್ಷಗಳು ಮಾಡದೆ ಇರುವುದು ಸಹ ಎದ್ದು ಕಾಣುತ್ತದೆ. *(ಗುಜರಾತಿನಲ್ಲಿ ಬಿ.ಜೆ.ಪಿ.ಯ ರಾಜಕೀಯದ ಸಂಕ್ಷಿಪ್ತ ಚರಿತ್ರೆಗಾಗಿ ಕೊನೆ ಪ್ಯಾರಾ ನೋಡಿ.)*

2001ರಲ್ಲಿ ಮೋದಿ ಸರಕಾರ ಶಾಸನದಲ್ಲಿ ತಿದ್ದುಪಡಿ ಮಾಡಿ ಸರಕಾರಿ ನೌಕರರು ಸಂಘಪರಿವಾರದ ಸಂಘಟನೆಗಳ ಸದಸ್ಯರಾಗಲು ಯಾವ ಅಡ್ಡಿಯೂ ಇಲ್ಲ ಎಂದು ಘೋಷಿಸಿತು. ರಾಜ್ಯದ ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳು, ಸಂಘಪರಿವಾರದ ಪೂರ್ಣಾವಧಿ ಕಾರ್ಯಕರ್ತರು, ರಾಜ್ಯದ ಗೃಹಮಂತ್ರಿ ಗೋವರ್ಧನ್ ಝುಡಾಪಿಯ ಸೇರಿದ ಹಾಗೆ ಹಲವಾರು ಜನ ಮಂತ್ರಿವರ್ಯರು ಸಂಘ ಪರಿವಾರದ ಸಂಘಟನೆಗಳ ಸಕ್ರಿಯ ಸದಸ್ಯರು. ಸ್ವತಃ ಮುಖ್ಯಮಂತ್ರಿಗಳು ತಮ್ಮ ಕಛೇರಿಯ ಬಾಗಿಲ ಮೇಲೆ ವಿಶ್ವಹಿಂದುಪರಿಷತ್ತಿನ ಪೋಸ್ಟರ್ ಹಚ್ಚಿಕೊಂಡಿದ್ದಾರೆ. ಮೇಲಾಗಿ, ಕೆಲವು ಉಗ್ರವಾದಿ ಮುಸ್ಲಿಂ ಸಂಘಟನೆಗಳನ್ನು ಕೇಂದ್ರ ಸರಕಾರ ನಿಷೇಧಿಸಿದಾಗ, ಸಂಘಪರಿವಾರದ ಸಂಘಟನೆಗಳನ್ನು ಸಹ ಇದೇ ಕಾರಣಕ್ಕೆ ಯಾಕೆ ನಿಷೇಧಿಸಬಾರದು ಎಂಬ ಪ್ರಶ್ನೆ ಹಾಕಿದಾಗ, ಕೇಂದ್ರ ಸರಕಾರದ ಗೃಹ ಸಚಿವರಾದ ಎಲ್.ಕೆ. ಅದ್ವಾಣಿ 'ಸಂಘಪರಿವಾರದ ಸಂಘಟನೆಗಳು ಭಯೋತ್ಪಾದಕ ಸಂಘಟನೆಗಳಲ್ಲ; ಅವು ಶಾಂತಿಪ್ರಿಯ ದೇಶಪ್ರೇಮಿ ಸಂಘಟನೆಗಳು' ಎಂದರೆ, ಸಂಸದೀಯ ವ್ಯವಹಾರಗಳ ಮಂತ್ರಿ ಪ್ರಮೋದ್ ಮಹಾಜನ್ 'ದೇಶಪ್ರೇಮಿ ಸಂಘಟನೆಗಳನ್ನು ಭಯೋತ್ಪಾದಕ ಸಂಘಟನೆಗಳ ಜೊತೆ ಹೋಲಿಸಿ ನಿಷೇಧದ ಒತ್ತಡ ಹೇರುವುದು ಸರಿಯಲ್ಲ' ಎಂದರು. ಈ ದೇಶದ ಪ್ರಧಾನಮಂತ್ರಿಗಳೇ 'ಸಂಘ ನನ್ನ ಆತ್ಮ' ಎಂದು ಸಾರ್ವಜನಿಕವಾಗಿ ಹೇಳಿಕೊಂಡದ್ದರ ಜೊತೆಗೆ, ಸಂಘಪರಿವಾರದ ಸಂಘಟನೆಗಳು ಗುಜರಾತಿನಲ್ಲಿ ಕ್ರಿಶ್ಚಿಯನ್ ಸಂಸ್ಥೆಗಳ ಮೇಲೆ ಹಿಂಸಾತ್ಮಕ ಹಲ್ಲೆ ನಡೆಸಿದಾಗ, 'ಮತಾಂತರ ಒಂದು ಗಂಭೀರ ಸಮಸ್ಯೆ; ಈ ವಿಷಯದ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಯಲಿ' ಎಂದು ಅಪ್ಪಣೆ ಕೊಡಿಸಿದರು. ಅಷ್ಟಲ್ಲದೆ, ಇದೇ ವರ್ಷ ಅಯೋಧ್ಯೆಯಲ್ಲಿ ರಾಮಮಂದಿರಕ್ಕೆ ಶಿಲಾನ್ಯಾಸ ಮಾಡಿಯೇ ಸಿದ್ಧ ಎಂದು ವಿಹಿಂಪ ದೇಶದ ನ್ಯಾಯವ್ಯವಸ್ಥೆಗೆ ಹಾಗೂ ಸರಕಾರಕ್ಕೆ ಸಾರ್ವಜನಿಕವಾಗಿ ಬೆದರಿಕೆ ಹಾಕಿತು; ಈ ಸಂಬಂಧದಲ್ಲಿ ವಿಹಿಂಪದಂತಹ ಸಾಂವಿಧಾನಿಕ ಅಧಿಕೃತತೆ ಇಲ್ಲದ, ಸ್ವತಃ ರಾಮಜನ್ಮಭೂಮಿ ವಿವಾದದಲ್ಲಿ ಪಕ್ಷಪಾತಿ ನಿಲುವು ಹೊಂದಿದ ಸಂಘಟನೆಯ ಜೊತೆ ಸರಕಾರ ಯಾಕೆ ಅಷ್ಟು ವಿನೀತವಾಗಿ ನಡೆದುಕೊಳ್ಳಬೇಕು ಎಂದು ಸಂಸತ್ತಿನಲ್ಲಿ ಕೇಳಲಾದ ಪ್ರಶ್ನೆಗೆ ವಾಜಪೇಯಿ 'ದೇಶದಲ್ಲಿ ಶಾಂತಿ ಸ್ಥಾಪನೆಯ ಕೆಲಸ ಬರಿ ಸರಕಾರದಿಂದ ಮಾತ್ರ ಸಾಧ್ಯವಾಗುವುದಿಲ್ಲ. ಅದಕ್ಕೆ ದೇಶದ ಶಾಂತಿಯಲ್ಲಿ ಕಾಳಜಿ ಇರುವ ಸ್ವಯಂ ಸೇವಾ ಸಂಸ್ಥೆಗಳಿಗೂ ಮಹತ್ವದ ಸ್ಥಾನ ಕಲ್ಪಿಸುವುದು ಅಗತ್ಯ' ಎಂದುಬಿಟ್ಟರು! ಈ ಹಿನ್ನೆಲೆಯಲ್ಲಿ ಗುಜರಾತ್ ಸರಕಾರದ ನಿಯಮ ತಿದ್ದುಪಡಿಯ ಪ್ರಭಾವವೇನು ಎಂದು ಊಹಿಸುವುದು ಕಷ್ಟವಲ್ಲ. ಯುವ ಪತ್ರಕರ್ತ ರಾಜ್‌ದೀಪ್ ಸರ್ದೇಸಾಯಿ ಗುಜರಾತಿನ ಮುಖ್ಯಮಂತ್ರಿಗಳ ಕಛೇರಿಯ ಬಾಗಿಲಲ್ಲಿರುವ ಪೋಸ್ಟರ್ ನೋಡಿ ಆಶ್ಚರ್ಯ ವ್ಯಕ್ತಪಡಿಸಿದ್ದಕ್ಕೆ, ಮುಖ್ಯಮಂತ್ರಿ ಕಾರ್ಯಾಲಯದ ನೌಕರನೊಬ್ಬ 'ಇದು ಕಾನೂನುಬದ್ಧವಾಗೆ ಇದೆಯಲ್ಲ, ನಾವೆಲ್ಲ ನಿಯಮಬದ್ಧವಾಗಿಯೇ ವಿ.ಹಿಂ.ಪ.ದ ಸದಸ್ಯರು' ಎಂದು ಹೇಳಿದನಂತೆ.

ಗುಜರಾತಿನ ಗೃಹಖಾತೆಯ ಸಚಿವ ಗೋವರ್ಧನ್ ಝಡಾಪಿಯ ಒಂದೇ ವರ್ಷದಲ್ಲಿ ಶೇ. 95ರಷ್ಟು ಪೊಲೀಸರ ಸ್ಥಾನಗಳನ್ನು ಬದಲಿ ಮಾಡಿದರು. ಅಲ್ಪ ಸಂಖ್ಯಾತ ಪೊಲೀಸ್ ಅಧಿಕಾರಿಗಳನ್ನು ಕಾನೂನು ನಿಯಂತ್ರಣ ವಿಭಾಗದಿಂದ ರಸ್ತೆ ನಿಯಂತ್ರಣಾ ವಿಭಾಗಕ್ಕೆ ವರ್ಗ ಮಾಡಲಾಯಿತು. ಇಷ್ಟು ದೊಡ್ಡ ಪ್ರಮಾಣದ ವರ್ಗಾವಣೆಯ ಅರ್ಥವೇನು ಎಂದು ಉನ್ನತ ಪೊಲೀಸ್ ಅಧಿಕಾರಿಗಳಿಗೆ ಹೊಳೆದದ್ದು ಫೆಬ್ರವರಿ 28, 2002ರ ನಂತರವೇ!

ಗೋಧ್ರದ ಘಟನೆ ನಡೆಯುವುದಕ್ಕೆ ಕೆಲವು ತಿಂಗಳುಗಳ ಮುಂಚೆಯೇ ಸಂಘಪರಿವಾರದ ಸಂಘಟನೆಗಳು ಸರಕಾರಿ ಕಛೇರಿಗಳಿಂದ ಮುಸ್ಲಿಮರ ಮನೆ, ಅಂಗಡಿಗಳ ಸಂಪೂರ್ಣ ವಿವರಗಳನ್ನು ಸಂಗ್ರಹಿಸಿದ ವಿಷಯವನ್ನು ಪತ್ರಿಕೆಗಳು ಧೃಢಪಡಿಸಿಕೊಂಡು ಪ್ರಕಟಿಸಿವೆ.

ಫೆಬ್ರವರಿ 28ರಂದು ಗುಜರಾತ್ ಬಂದ್‌ಗೆ ವಿ.ಹಿಂ.ಪ. ಕರೆಕೊಟ್ಟಿತು. ಹಿಂದಿನ ರಾತ್ರಿ ಸ್ವತಃ ಮುಖ್ಯಮಂತ್ರಿಗಳೇ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಕರೆದು, ಬಂದ್‌ಗೆ ಯಾವ ರೀತಿಯಲ್ಲಿಯೂ ಅಡ್ಡಿಪಡಿಸಕೂಡದು ಎಂದು ನಿರ್ದೇಶನ ನೀಡಿದರು.

ಫೆಬ್ರವರಿ 28ನೇ ತಾರೀಖು: ಗುಜರಾತ್ ಸರಕಾರದ ಮೂವರು ಮಂತ್ರಿಗಳು ಪೊಲೀಸ್ ಕಂಟ್ರೋಲ್ ರೂಮಿನಲ್ಲಿ ಕೂತು, ಪೊಲೀಸರು ಎಲ್ಲಿ ಹೋಗಬೇಕು, ಎಲ್ಲಿ ಹೋಗಕೂಡದು ಎಂದು ದಿನಪೂರ್ತಿ ನಿಯಂತ್ರಿಸಿದರು. ತನ್ನ ಪರಿವಾರದೊಟ್ಟಿಗೆ ಜೀವಂತವಾಗಿ ಸುಡಲ್ಪಟ್ಟ ಮಾಜಿ ಕಾಂಗ್ರೆಸ್ ಸಂಸತ್ ಸದಸ್ಯ ಇಸಾನ್ ಜಾಫ್ರಿ, ರಾಜ್ಯದ ಆರೋಗ್ಯ ಮಂತ್ರಿ ಅಶೋಕ್‌ಭಟ್ ಮುಕ್ಕಾಂ ಹೂಡಿದ್ದ ಪೊಲೀಸ್ ಕಂಟ್ರೋಲ್ ರೂಮಿಗೆ ಆರು ತಾಸುಗಳ ಕಾಲ ಸತತವಾಗಿ ಫೋನು ಮಾಡಿ ರಕ್ಷಣೆಗೆ ಗೋಗರೆದಿದ್ದರು.

ಬಂದ್‌ಗೆ ಸರಕಾರ ನಡೆಸುತ್ತಿರುವ ಪಕ್ಷವಾದ ಬಿ.ಜೆ.ಪಿ.ಯು ಬೆಂಬಲ ವ್ಯಕ್ತಪಡಿಸಿತು. ಸರಕಾರದ ಹಿರಿಯ ಮಂತ್ರಿಗಳು ಹಾಗೂ ಬಿ.ಜೆ.ಪಿ.ಯ ಶಾಸಕರು ಹಿಂಸೆಯಲ್ಲಿ ತೊಡಗಿದವರ ನೇತೃತ್ವ ವಹಿಸಿದ್ದನ್ನು ಕಣ್ಣಾರೆ ಕಂಡ ನಾಗರಿಕರು ಧೃಢಪಡಿಸಿದ್ದಾರೆ.

ಕಳೆದ ಆರು ತಿಂಗಳುಗಳಿಂದ ಗುಜರಾತಿನ ಹಳ್ಳಿಗಳಲ್ಲಿ ಭಜರಂಗದಳದವರು, ಯಾವ ಅಡ್ಡಿ ಆತಂಕಗಳಿಲ್ಲದೆ, ತಾವು ಹೇಳಿದಂತೆ ಕೇಳಿಕೊಂಡು ಬದುಕಬೇಕು ಎಂದು ಮುಸ್ಲಿಮರನ್ನು ನಿತ್ಯವೂ ಬೆದರಿಸುತ್ತಿದ್ದರು.

ದಾಳಿಕೋರರು ನೂರಾರು ಲಾರಿಗಳಲ್ಲಿ ಗ್ಯಾಸ್ ಸಿಲಿಂಡರ್ ಹಾಗೂ ಪೆಟ್ರೋಲ್ ತುಂಬಿದ ಕ್ಯಾನುಗಳನ್ನು ವ್ಯವಸ್ಥಿತವಾಗಿ ಹೊತ್ತು ತರುತ್ತಿದ್ದರು ಹಾಗೂ ಸೆಲ್ ಫೋನುಗಳನ್ನು ಬಳಸಿ ದಾಳಿಗಳನ್ನು ವ್ಯವಸ್ಥಿತವಾಗಿ ನಿರ್ದೇಶಿಸುತ್ತಿದ್ದರು.

ಹತ್ಯಾಕಾಂಡವನ್ನು ಪ್ರತಿಭಟಿಸುವ ನಾಗರಿಕರ ಮೇಲೆ ಸಂಘಪರಿವಾರದವರು ಖುಲ್ಲಂ ಖುಲ್ಲ ದೌರ್ಜನ್ಯ ನಡೆಸಿದ್ದಾರೆ. ದೇಶದ ರಕ್ಷಣಾ ಸಚಿವರನ್ನೂ ಅವರು ಬೆದರಿಸಿ ಕಳಿಸಿದ್ದಾರೆ. ಸಮೀಕ್ಷೆಗಾಗಿ ಬಂದ ಸಂಸದರ ತಂಡಕ್ಕೆ ಸ್ವತಃ ಮುಖ್ಯಮಂತ್ರಿಗಳೇ 'ಏನಾದರು ಆದರೆ ನಾನು

ಜವಾಬ್ದಾರನಲ್ಲ, ನಿಮ್ಮನ್ನು ನೀವು ಕಾಪಾಡಿಕೊಳ್ಳುವ ಧೈರ್ಯ ಇದ್ದರೆ ಹೋಗಿ' ಎಂದು ಹೇಳಿದ್ದಾರೆ.

2002ರ ಏಪ್ರಿಲ್- ಮೇ ತಿಂಗಳುಗಳಲ್ಲಿ, ಪರಿಸ್ಥಿತಿ ತಹಬದಿಗೆ ಬಂದಿರಬಹುದು ಎಂದು ಭಾವಿಸಿ, ಮುಸ್ಲಿಂ ಕುಟುಂಬಗಳು ತಮ್ಮ ಹಳ್ಳಿಗಳಿಗೆ ವಾಪಾಸು ಹೋದಾಗ 'ನಿಮ್ಮ ಹೆಂಗಸರ ಮಾನ, ಮಕ್ಕಳು ಮರಿಗಳ ಪ್ರಾಣ ಪ್ರಿಯವಾಗಿದ್ದರೆ ಇಲ್ಲಿಗೆ ಕಾಲಿಡಬೇಡಿ' ಎಂಬ ಗೋಡೆಬರಹಗಳು ಅವರನ್ನು ಸ್ವಾಗತಿಸಿದವು. ಈ ಜನ ಪೊಲೀಸರ ಮೊರೆ ಹೋದಾಗ, ಕಾನೂನು ಪಾಲಕರು 'ನೀವು ಬೇರೆ ಜಾಗ ನೋಡಿಕೊಳ್ಳುವುದೇ ಒಳ್ಳೆಯದು' ಎಂದು ಮುಲಾಜಿಲ್ಲದೆ ಹೇಳಿದ್ದಾರೆ. ಮತ್ತೆ ಕೆಲವು ಹಳ್ಳಿಗಳಲ್ಲಿ, ಗ್ರಾಮದ ಸರಪಂಚರೇ, ಹಳ್ಳಿಗಳಿಗೆ ವಾಪಸಾಗಲು ಇಚ್ಛಿಸುವ ಮುಸ್ಲಿಂ ಕುಟುಂಬಗಳಿಗೆ ಎರಡನೇ ದರ್ಜೆಯ ಪ್ರಜೆಗಳಾಗಿ ಬದುಕಲು ಒಪ್ಪಿಕೊಂಡರೆ ಮಾತ್ರ ಅವಕಾಶ ಕಲ್ಪಿಸುವುದಾಗಿ ಷರತ್ತು ಹಾಕಿದ್ದಾರೆ. ಮುಖ್ಯ ಚುನಾವಣಾ ಕಮೀಷನರ್ ಜೆ.ಎಂ. ಲಿಂಗ್ಡೊ ಸಮೀಕ್ಷೆಗೆಂದು ಈ ಹಳ್ಳಿಗಳಿಗೆ ಹೋದಾಗ, ಸರಪಂಚರು ಕಾನೂನು ಬಾಹಿರವಾದ ಷರತ್ತುಗಳನ್ನು ಯಾವ ಎಗ್ಗಿಲ್ಲದೆ ತಿಳಿಸಿದ್ದನ್ನು ಕೇಳಿ ದಂಗಾಗಿ ಹೋಗಿದ್ದಾರೆ.

ಗಲಭೆಗೆ ತುತ್ತಾದ ಮುಸ್ಲಿಮರ ಪುನರ್ವಸತಿಗೆ ಸರಕಾರ ಯಾವ ವ್ಯವಸ್ಥೆಯನ್ನೂ ಮಾಡಲಿಲ್ಲ. ಮುಸ್ಲಿಮ್ ಸಮುದಾಯದವರೇ ಪರಿಹಾರ ಶಿಬಿರಗಳನ್ನು ಆಯೋಜಿಸಿದರು. ಈ ಶಿಬಿರಗಳಿಗೆ ಬೇಕಾದ ಆಹಾರ ಪದಾರ್ಥಗಳನ್ನು ಸರಕಾರ ಸತಾಯಿಸಿ ಸತಾಯಿಸಿ ಸರಬರಾಜು ಮಾಡಿತು. ಮೂರೇ ತಿಂಗಳಲ್ಲಿ ಪರಿಸ್ಥಿತಿ ಸುಧಾರಿಸಿದೆ ಎಂಬ ನೆಪ ಒಡ್ಡಿ, ಗಲಭೆಗೆ ತುತ್ತಾದ ಜನರಿಗೆ ಯಾವುದೇ ಪುನರ್ವಸತಿಯ ವ್ಯವಸ್ಥೆಯನ್ನೂ ಮಾಡದೆ, ಗುಜರಾತ್ ಸರಕಾರವು ಪರಿಹಾರ ಶಿಬಿರಗಳನ್ನು ಮುಚ್ಚುವ ಆಜ್ಞೆಯನ್ನು ಹೊರಡಿಸಿತು. ಈ ಆಜ್ಞೆಯನ್ನು ಕೇಂದ್ರದ ಗೃಹ ಸಚಿವರು ಯಾವ ಮುಚ್ಚು ಮರೆಯೂ ಇಲ್ಲದೆ ಸಮರ್ಥಿಸಿಕೊಂಡರು.

ಈ ಎಲ್ಲಾ ಅಂಶಗಳು ಒಂದು ವಿಷಯವನ್ನಂತೂ ಸಾಬೀತು ಮಾಡುತ್ತವೆ: ಸರಕಾರ ತನ್ನ ಸಾಂವಿಧಾನಿಕ ಕರ್ತವ್ಯವನ್ನು ನಿರ್ವಹಿಸಲಿಲ್ಲ, ಮಾತ್ರವಲ್ಲ ಇಡೀ ಗುಜರಾತಿನ ಪ್ರಭುತ್ವದ ಅಧಿಕಾರ ಹಾಗೂ ನಾಗರಿಕ ಸಮಾಜದ ನಿಯಂತ್ರಣವನ್ನು ಸಂಘಪರಿವಾರದ ಕೈಗೆ ಒಪ್ಪಿಸಿ, ಅದು ಜಾರಿ ಮಾಡುತ್ತಿರುವ ಫ್ಯಾಸಿಸ್ಟ್ ನ್ಯಾಯವನ್ನು ಎಲ್ಲರೂ ಬೇಷರತ್ತಾಗಿ ಒಪ್ಪಿಕೊಳ್ಳುವುದು ಅನಿವಾರ್ಯ ಎಂದು ವಾದಿಸುತ್ತಿದೆ. ಇದು ಕಳೆದ 52 ವರ್ಷಗಳಲ್ಲಿ ಭಾರತದಲ್ಲಿ ನಡೆದಿರುವ 13,000ಕ್ಕೂ ಹೆಚ್ಚಿನ ಕೋಮು ಗಲಭೆಗಳಲ್ಲಿಯೇ ಅಭೂತಪೂರ್ವವಾದದ್ದು. ಗುಜರಾತಿನ ಸಮಾಜದ ಮೇಲೆ ಸಂಘಪರಿವಾರ ಎಂತಹ ಯಜಮಾನಿಕೆಯನ್ನು ಚಲಾಯಿಸುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಒಂದು ಉದಾಹರಣೆಯನ್ನು ನೋಡಬಹುದು. ಇದು ಅಹ್ಮದಾಬಾದಿನ ಸಿ.ಜಿ. ರೋಡ್ ಟ್ರೇಡರ್ಸ್ ಅಸೋಸಿಯೇಷನ್‌ನವರು, ಅಹ್ಮದಾಬಾದಿನಲ್ಲಿ ಗಲಭೆಗಳು ನಡೆಯುತ್ತಿದ್ದ ಹೊತ್ತಿನಲ್ಲಿ, ತನ್ನ ಸದಸ್ಯರಿಗೆ ಸಭೆಯೊಂದಕ್ಕೆ ಹಾಜರಾಗಲು ಕಳಿಸಿದ ಸಂಪರ್ಕ ಪತ್ರ:

C.G. ROAD SHOP OWNERS' ASSOCIATION

C.G. Road, Ahmedabad - 380009

This is to inform all the traders of the C.G. Road Shop Owners' Association that today, i.e., 4-4-2002 office bearers of the Vishwa Hindu Parishad and the office bearers of the Bajrang Dal Mr. Chinubhai Patel and Harishbhai Bhatt with their members met us personally. During the visit, the current Gujarat situation was discussed. Since the visit was unexpected we listened patiently to the officers of the Vishwa Hindu Parishad and the Bajrang Dal. After the discussions and before taking any decisions, we planned to hold a meeting with you. The meeting will be attended by the important traders of C.G. Road and the officers of the Vishwa Hindu Parishad and the Bajrang Dal.

We hope that we will all combine our efforts and take an appropriate decision.

Place : Hotel Nalanda, Mithakhali Chha (Six) Roads

Time : 04.31. P.M. Date : 06-04-2002 (Saturday)

Your Well-wishers, For C.G. Road Shop Owners' Association.

ಈ ಸಂಪರ್ಕ ಪತ್ರ ಹೊರಡಿಸುವ ಅರ್ಥಕ್ಕೆ ವಿವರಣೆಯ ಅಗತ್ಯವೇ ಇಲ್ಲ. ಹಿರಿಯ ಗಾಂಧಿವಾದಿ ನಿರ್ಮಲ ದೇಶಪಾಂಡೆಗೆ ಅಹ್ಮದಾಬಾದಿನ ಸರಕಾರಿ ಗೆಸ್ಟ್ ಹೌಸಿನಲ್ಲಿ ಬಿ.ಜೆ.ಪಿ. ಪುಢಾರಿಯೊಬ್ಬ ಹೇಳಿದ್ದು, ದಿಲೀಪ್ ಹಳ್ಳಿಯೊಂದಕ್ಕೆ ಹೋದಾಗ ಕಣ್ಣು ಕೆಂಪಗೆ ಮಾಡಿಕೊಂಡು, ಹಲ್ಲು ಕಡಿಯುತ್ತ, ಬಹಳ ಬಡವನಾಗಿದ್ದ ಯುವಕನೊಬ್ಬ ಹೇಳಿದ್ದು ಒಂದೇ ಮಾತು "ಇದು ಗಾಂಧಿಯ ಗುಜರಾತ್ ಅಲ್ಲ, (ವಲ್ಲಭಭಾಯಿ)ಪಟೇಲರ ಗುಜರಾತ್. ಈ ಮಾತುಗಳನ್ನು ಕೇಳಿದ ಇಬ್ಬರಿಗೂ ಪಟೇಲ್ ಈ ಜನಗಳು ಹೇಳುವ ತರಹದ ವ್ಯಕ್ತಿಯಲ್ಲ ಎಂದು ಗೊತ್ತಿತ್ತು; ಆದರೆ ಈ ಅರಿವಿನಿಂದ ಹೆಚ್ಚೇನು ಉಪಯೋಗವಾಗುವ ಹಾಗಿರಲಿಲ್ಲ; ಪಟೇಲ್, ಗಾಂಧಿ, ನೆಹರುರ ಗುಂಪಿಗಿಂತ ಸಾವರ್ಕರ್, ಹೆಡ್ಗೆವಾರ್, ಗೋಲ್ವಾಲ್ಕರ್ ಗುಂಪಿಗೆ ಸಹಜವಾಗಿ ಸೇರುವಂತಹವರು ಎನ್ನುವ ಸಹಮತವನ್ನು ಸಂಘಪರಿವಾರ ಯಶಸ್ವಿಯಾಗಿ ಉತ್ಪಾದಿಸಿಬಿಟ್ಟಿದೆ. ಗುಜರಾತಿನ ಹಿಂಸೆಯನ್ನು ಕಣ್ಣಾರೆ ಕಂಡ ಚಿಂತಕ ಗಣೇಶ್ ದೇವಿಯವರ ಪ್ರಕಾರ ಸಂಘಪರಿವಾರದ ರಾಜಕೀಯವನ್ನು ಎದುರಿಸಲು ಇದುವರೆವಿಗೂ ನಾವು ಅನುಸರಿಸಿಕೊಂಡು ಬಂದಿರುವ ಯಾವ ಹೋರಾಟದ ಮಾದರಿಯೂ ಉಪಯುಕ್ತವಲ್ಲ. ಗುಜರಾತಿನಲ್ಲಿ ಸರಿ ಸುಮಾರು ಎಲ್ಲ ಸಾಮಾಜಿಕ ಆಯಾಮಗಳನ್ನೂ ಸಂಘಪರಿವಾರ ಆಕ್ರಮಿಸಿಕೊಂಡುಬಿಟ್ಟಿದೆ;

ಅವರ ಬಳಿ ಹಣಕ್ಕೇನೂ ಕೊರತೆಯಿಲ್ಲ, ಆದರೂ ಪ್ರತಿಯೊಂದು ಕಾರ್ಯಕ್ರಮಕ್ಕು ಸಾರ್ವಜನಿಕರಿಂದ ಐವತ್ತು ಪೈಸೆ ಅಥವಾ ಒಂದು ರೂಪಾಯಿ ಸಂಗ್ರಹಿಸುವ ಮೂಲಕ, ಜನರನ್ನು ಮಾನಸಿಕವಾಗಿ ತಮ್ಮ ಕಾರ್ಯಕ್ರಮದ ಭಾಗವಾಗಿ ಮಾಡಿಕೊಂಡು ಬಿಡುತ್ತಾರೆ; ಗುಜರಾತಿನಲ್ಲಿ ವಿ.ಹಿಂ.ಪ. ಸಾವಿರಾರು ನಿರುದ್ಯೋಗಿ ಯುವಕರಿಗೆ ತಿಂಗಳಿಗೆ ಸಾವಿರ-ಎರಡುಸಾವಿರ ರೂಪಾಯಿಗಳನ್ನು ಕೊಟ್ಟು, ತಾವು ಕರೆದಾಗ ಕೆಲಸಕ್ಕೆ ಬರಬೇಕು ಎಂದು ನಿಗದಿ ಮಾಡುತ್ತದೆ; ನಂತರ ಆ ಯುವಕರಿಗೆ ಕೊಡುವ ಕೆಲಸಗಳೂ ಭಿನ್ನವಾಗಿರುತ್ತವೆ; ಗುಜರಾತಿನಲ್ಲಿ ಸುಮಾರು ಒಂದು ವರ್ಷ ಕಾಲ 'ಹಿಂದು ರಾಷ್ಟ್ರಕ್ಕೆ ಸ್ವಾಗತ' ಎಂಬ ಬೋರ್ಡುಗಳನ್ನು ತಯಾರುಮಾಡಲು ಇಂತಹ ಯುವಕರನ್ನು ಬಳಸಿಕೊಂಡರು; ಈ ರೀತಿಯಲ್ಲಿ ಮುಂಗಡ ಹಣ ಪಡೆದ ಹಲವಾರು ಯುವಕರಿಗೆ ಕಂಪ್ಯೂಟರ್, ಇಂಟರ್‌ನೆಟ್‌ಗಳನ್ನು ಬಳಸುವುದನ್ನು ಕಲಿಸಿ, ದೊಡ್ಡ ಮಟ್ಟದಲ್ಲಿ ಸೈಬರ್ ಲೋಕವನ್ನು ಆಕ್ರಮಿಸುವ ವಿದ್ಯೆಗೆ ಸಜ್ಜುಗೊಳಿಸಲಾಗುತ್ತದೆ; ಯಾವ ಸಮಯದಲ್ಲಾದರೂ ಸರಿ, ಒಂದು ಲಕ್ಷಕ್ಕೂ ಮಿಕ್ಕಿದ ಕಾರ್ಯಕರ್ತರ ಪಡೆ ಲಭ್ಯವಿರುವ ಹಾಗೆ, ಇಂತಹ ಹಲವಾರು ತಂತ್ರಗಳನ್ನು ಸಂಘ ಪರಿವಾರ ತನ್ನ ಬತ್ತಳಿಕೆಯಲ್ಲಿ ಇಟ್ಟುಕೊಂಡಿದೆ ಎಂದು ಗಣೇಶ್ ದೇವಿ ಉಡುಪಿಯಲ್ಲಿ ನಡೆದ ಪುಟ್ಟ ಸಭೆಯೊಂದರಲ್ಲಿ ಸೋದಾಹರಣವಾಗಿ ವಿವರಿಸಿದರು. ಇಷ್ಟಿದ್ದ ಮೇಲೆ, ಗುಜರಾತಿನ ಚುನಾವಣೆಯಲ್ಲಿ ಬಿ.ಜೆ.ಪಿ. ಗೆಲ್ಲುವುದು ಖಚಿತವಾಗಿತ್ತು. ಅದ್ಭುತ ವಿಜಯ ಸಾಧಿಸಿದ ನಂತರ, ಗೆಲುವಿನ ರೂವಾರಿ ನರೇಂದ್ರ ಮೋದಿ 'ತಮ್ಮ ಆಡಳಿತವು ಯಾರನ್ನೂ ಓಲೈಸುವುದಿಲ್ಲ, ಯಾರಿಗೂ ಅನ್ಯಾಯ ಮಾಡುವುದಿಲ್ಲ; ನಮ್ಮದು ಎಲ್ಲಾ ಗುಜರಾತಿನ ಪ್ರಜೆಗಳ ಒಳಿತನ್ನು ಉಂಟುಮಾಡುವ ಸರಕಾರವಾಗಿರುತ್ತದೆ' ಎಂದು ಹೇಳಿದ್ದರು. ನಂತರದ ದಿನಗಳಲ್ಲಿ, ಗೋಧ್ರ ಹಿಂಸೆಯ ಆರೋಪ ಹೊರಿಸಿ ನೂರಾರು ಮುಸಲ್ಮಾನರನ್ನು 'ಪೋಟ' ಕಾಯ್ದೆಯಡಿ ಜೈಲಿಗೆ ತಳ್ಳಲಾಗಿದ್ದರೆ, ಸಾಕಷ್ಟು ಸಾಕ್ಷ್ಯಾಧಾರಗಳಿದ್ದ ಬರೋಡದ 'ಬೆಸ್ಟ್ ಬೇಕರಿ ಸಜೀವ ದಹನ'ದ ಘಟನೆಯಲ್ಲಿ ಆರೋಪಿಗಳಾಗಿದ್ದ ಎಲ್ಲರೂ ಬೇಷರತ್ ಖುಲಾಸೆಯಾಗುವ ಹಾಗೆ ನೋಡಿಕೊಳ್ಳಲಾಗಿದೆ. ಒಂದು ವೇಳೆ ಬಿ.ಜೆ.ಪಿ. ಸೋತಿದ್ದರೆ, ಇಂತಹ ವಿದ್ಯಮಾನಗಳು ಇಷ್ಟು ಖುಲ್ಲಂ ಖುಲ್ಲ ನಡೆಯುತ್ತಿರಲಿಲ್ಲ ಎನ್ನುವ ವಾದವನ್ನು ಒಪ್ಪಿಕೊಂಡರೂ, ಗುಜರಾತಿನಲ್ಲಿನ ಸಾಮಾಜಿಕ ಪರಿಸ್ಥಿತಿ ಬದಲಾಗುತ್ತಿತ್ತೇ? ನನ್ನ ವಾದದ ಅಪೇಕ್ಷೆ ಇಷ್ಟೇ; ಸಂಘ ಪರಿವಾರದ ಅಂಗ ಸಂಸ್ಥೆಯಾದ ಬಿ.ಜೆ.ಪಿ.ಯ ಕೈಯಲ್ಲಿ ಪ್ರಭುತ್ವದ ಅಧಿಕಾರವಿದ್ದಷ್ಟೂ, ಸಂವಿಧಾನ ಬದ್ಧವಾದ, ನಾಗರಿಕ ಹಕ್ಕನ್ನು ಮಾನ್ಯಮಾಡುವ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಪಾಯ ತಪ್ಪಿದ್ದಲ್ಲ ಎನ್ನುವುದು ಸಮಸ್ಯೆಯ ಒಂದು ಮಗ್ಗಲು ಮಾತ್ರವಾಗಿದೆ; ಸಂಘಪರಿವಾರದ ವಿಚಾರಗಳು ಸಮಾಜದ ಬುದ್ಧಿ-ಭಾವಗಳಲ್ಲಿ ಹಬ್ಬಿ ಕೊಳ್ಳುತ್ತಿರುವುದು, ತನ್ಮೂಲಕ ಫ್ಯಾಸಿಸ್ಟ್ ಮಾದರಿ ಆಳ್ವಿಕೆಗೆ (ಭಾರತದ ಫ್ಯಾಸಿಸಂನ ಆವೃತ್ತಿಯು, ಇಟಾಲಿ ಅಥವಾ ಜರ್ಮನಿಗಿಂತ ತುಂಬಾ ಭಿನ್ನವಾಗಿದ್ದು, ಪ್ರಜಾಪ್ರಭುತ್ವದ ಹಂದರದಲ್ಲೇ ಅನಾವರಣಗೊಳ್ಳುವ ಇಸ್ರೇಲಿನ ಮಾದರಿಗೆ ಹತ್ತಿರವಾಗಿರುತ್ತದೆ ಎನ್ನುವುದು ನನ್ನ ಅಭಿಪ್ರಾಯ) ವ್ಯಾಪಕ ಸಹಮತ ದೊರೆಯುವುದು, ಇವುಗಳ ಪರಿಣಾಮ ದೂರಗಾಮಿಯೂ ಹೆಚ್ಚು ಅಪಾಯಕಾರಿಯೂ ಆಗಿದೆ: ಈ ಕಾರಣವಾಗಿ, 'ಹಿಂದುತ್ವ ರಾಷ್ಟ್ರೀಯವಾದ'ದ ಬೆಳವಣಿಗೆಯನ್ನು ನಾವು ವಿಭಿನ್ನವಾಗಿ ನೋಡುವ ಜರೂರಿದೆ.

2

ನೋಮ್ ಚೋಮ್‌ಸ್ಕಿ ಅಮೆರಿಕದ ಪ್ರಭುತ್ವವು ತನ್ನ ನಿರ್ಲಜ್ಜ ಸರ್ವಾಧಿಕಾರವನ್ನು ಜಗತ್ತಿನ ಎಲ್ಲ ಮೂಲೆಗಳಿಗೂ ಹಬ್ಬಿಸುವ ಪ್ರಯತ್ನದ ಭಾಗವಾಗಿ ರೂಢಿಗೆ ತಂದಿರುವ 'ಹಿಂಸೆಯ ಸಂಸ್ಕೃತಿ'ಯ ಬಗ್ಗೆ ಹೇಳುತ್ತಾರೆ. ಅವರ ಪ್ರಕಾರ, ಅಮೇರಿಕದ ಪ್ರಭುತ್ವವು ತಾನು ನಡೆಸುವ ಹಿಂಸೆ ಹಾಗೂ ಸಂದರ್ಭಕ್ಕೆ ತಕ್ಕ ಹಾಗೆ ಇತರ ಪ್ರಭುತ್ವಗಳು ನಡೆಸುವ ಹಿಂಸೆಗೆ ನೀಡುವ ಬೆಂಬಲವನ್ನು 'ಮನುಕುಲದ ಸ್ವಾತಂತ್ರ್ಯ', 'ಪ್ರಜಾಪ್ರಭುತ್ವದ ಮೌಲ್ಯಗಳ ರಕ್ಷಣೆ' ಇತ್ಯಾದಿ ಉದಾತ್ತ ಆದರ್ಶಗಳ ನೆಪದಲ್ಲಿ ಸಮರ್ಥಿಸಿಕೊಳ್ಳುತ್ತದೆ. ಆದರೆ ವಾಸ್ತವಿಕ ಸಂಗತಿ ಎಂದರೆ ಅಮೇರಿಕದ ಪ್ರಭುತ್ವ ಇವೇ ಮೌಲ್ಯಗಳನ್ನು ಲಂಗು ಲಾಗಮಿಲ್ಲದೆ ನಾಶಮಾಡುತ್ತಿರುತ್ತದೆ. ವಾಸ್ತವ ಮತ್ತು ಪ್ರಭುತ್ವದ ಬೊಗಳೆಗಳ ನಡುವೆ ಇರುವ ಅಗಾಧ ಅಂತರವನ್ನು ಮರೆಮಾಚಿ, ಸಾಮಾನ್ಯ ಜನ ತಮ್ಮ ಪ್ರಭುತ್ವವು ಹಿಂಸೆಯ ಬಗ್ಗೆ ಸಹಮತ ಸೂಚಿಸುವಂತೆ ಮಾಡಲು ಒಂದು ಕ್ರಿಯಾಶೀಲ ಪ್ರಚಾರ ಯೋಜನೆ ಮೊದಲನೇ ಮಹಾಯುದ್ಧದ ಕಾಲದಿಂದಲೂ ಮುಂದುವರೆದ ರಾಷ್ಟ್ರಗಳಲ್ಲಿ ಚಾಲ್ತಿಯಲ್ಲಿದೆ. ಇದು ಬಹಳ ಸೂಕ್ಷ್ಮವಾದ ಚತುರ ವ್ಯವಸ್ಥೆ; ಸಾಮಾನ್ಯ ಜನರ ನಿತ್ಯದ ಬದುಕಿನ ವಹಿವಾಟಿನ ಮೂಲಕವೇ ಅಧಿಕಾರಸ್ಥರ ಮೌಲ್ಯಗಳಿಗೆ ಸಮ್ಮತಿಯನ್ನು ಉತ್ಪಾದಿಸುವ ಚಾಣಾಕ್ಷ ವ್ಯವಸ್ಥೆ. ಈ ವ್ಯವಸ್ಥೆ ಎಷ್ಟು ಸಫಲವಾಗಿದೆ ಎಂದರೆ: ಮುಂದುವರೆದ ರಾಷ್ಟ್ರಗಳಲ್ಲಿ ಪ್ರಭುತ್ವ ಮತ್ತು ಆಡಳಿತ ಯಂತ್ರಗಳ ಸೂತ್ರ ಹಿಡಿಯಲು ಸಾಧ್ಯವಿರುವ ವರ್ಗಗಳಲ್ಲಿ ರಾಜಕೀಯ, ವೈಚಾರಿಕ ನೆಲೆಗಳಲ್ಲಿ ಎಷ್ಟೇ ಭಿನ್ನತೆ ಇದ್ದರೂ, ತಮ್ಮ ಪ್ರಭುತ್ವವು ಜಗತ್ತಿನ ದೊಡ್ಡಣ್ಣನಾಗಿರಬೇಕು, ಜಗತ್ತನ್ನು 'ಸರಿಯಾದ ಮಾರ್ಗದಲ್ಲಿ' ನಡೆಸಲು ಎಂತಹ ಹಿಂಸಾತ್ಮಕ ಕ್ರಮಗಳನ್ನಾದರೂ ಅನಿವಾರ್ಯವಾಗಿ ಕೈಗೊಳ್ಳಬೇಕು, ತಮ್ಮ 'ರಾಷ್ಟ್ರೀಯ ಭದ್ರತೆ ಹಾಗೂ ಹಿತಾಸಕ್ತಿ'ಗಳಿಗೆ ಹೊಂದಿಕೆಯಾಗದ ಎಲ್ಲ ಅಂತರಾಷ್ಟ್ರೀಯ ನಿಯಮಗಳನ್ನು ಸಾರಸಗಟು ಧಿಕ್ಕರಿಸಬೇಕು ಎನ್ನುವಂತಹ ನೀತಿಗಳ ಬಗ್ಗೆ ಮಾತ್ರ ಭಾರಿ ಸಹಮತವಿದೆ. ಹೀಗಾಗಿ, ವಿಯೆಟ್ನಾಂ, ಇಂಡೋನೇಷಿಯಗಳಿಂದ ಹಿಡಿದು ಕೊಲಂಬಿಯ, ಇಕ್ವಡೋರ್, ಹೈಟಿಗಳವರೆಗೆ ಅಮೇರಿಕದ ಪ್ರಭುತ್ವವು ಪ್ರತ್ಯಕ್ಷ / ಪರೋಕ್ಷವಾಗಿ ನಡೆಸುವ ಹಿಂಸೆಗಳಾಗಲಿ, ಜಗತ್ತಿನ ಬೇರೆ ದೇಶಗಳಿಗೆ ಕಂಟಕಪ್ರಾಯವಾಗಿರುವ ಅಮೇರಿಕದ ಏಕ ಪಕ್ಷೀಯ ಆರ್ಥಿಕ ನೀತಿಗಳಾಗಲಿ, ನ್ಯಾಯಯುತವಾದವು ಎಂಬ ನಂಬಿಕೆ ಸಾಮಾನ್ಯವಾಗಿಬಿಟ್ಟಿದೆ. ಇಂತಹ ವಾತಾವರಣವನ್ನು ಚೋಮ್‌ಸ್ಕಿ 'ಹಿಂಸೆಯ ಸಂಸ್ಕೃತಿ' ಎಂದು ಕರೆಯುತ್ತಾರೆ.

ಚಿಂತಕ ಐಜಾಜ್ ಅಹ್ಮದ್, ದಕ್ಷಿಣ ಏಶಿಯದಲ್ಲಿ ರೂಢಿಯಲ್ಲಿರುವ 'ಹಿಂಸೆಯ ಸಂಸ್ಕೃತಿ'ಯನ್ನು ಒಂಚೂರು ಭಿನ್ನವಾಗಿ ನಿರೂಪಿಸಿದ್ದಾರೆ. ಭಾರತದ ಪ್ರಭುತ್ವವು ಪ್ರಜಾಪ್ರಭುತ್ವ, ಸೆಕ್ಯುಲರ್ ತತ್ವ ಹಾಗೂ ನಾಗರಿಕ ಸಮಾಜದ ಪರಿಕಲ್ಪನೆಗಳನ್ನು ಸಾಂವಿಧಾನಿಕವಾಗಿ ಒಪ್ಪಿ ಕೊಂಡಿದೆ. ನಾಗರಿಕ ಸಮಾಜದ ಎಲ್ಲ ವ್ಯಾಜ್ಯಗಳೂ ಸಂವಿಧಾನಬದ್ಧ ಕಾನೂನಿನ ನಿಯಮಗಳ ಅನುಸಾರವಾಗಿಯೇ ಬಗೆಹರಿಯತಕ್ಕದ್ದು ಎನ್ನುವುದು ಕೂಡ ಸ್ಪಷ್ಟವಾಗಿಯೇ ಇದೆ; ಭಾರತದ ಪ್ರಭುತ್ವವು ಸೆಕ್ಯುಲರ್ ಪ್ರಜಾಪ್ರಭುತ್ವದ ತತ್ವಗಳನ್ನು ಸಾಕಷ್ಟು ಯಶಸ್ವಿಯಾಗಿಯೇ ಅಳವಡಿಸಿಕೊಂಡಿದೆ. ಹೀಗಿದ್ದು, ಭಾರತದಲ್ಲಿ ಕೋಮುಗಲಭೆಗಳು, ತತ್ಪರಿಣಾಮವಾಗಿ

ಅಲ್ಪಸಂಖ್ಯಾತರ ಮೇಲೆ ನಡೆಯುವ ಹಿಂಸೆ, ತೀರ ಸ್ವಾಭಾವಿಕ ಎನ್ನುವ ರೀತಿಯಲ್ಲಿ ಯಾಕೆ ಅವಿರತವಾಗಿ ಮುಂದುವರೆದುಕೊಂಡು ಬರುತ್ತಿದೆ? ತಮ್ಮ ಸುತ್ತಮುತ್ತ ನಡೆಯುವ ಈ ಹಿಂಸೆಗಳನ್ನು ನಾಗರಿಕರು ಯಾಕೆ ತಣ್ಣಗೆ, ಸಹಜವಾದ ಘಟನೆ ಎಂದು ಒಪ್ಪಿಕೊಂಡುಬಿಡುತ್ತಾರೆ? ಎನ್ನುವ ಸಮಸ್ಯೆಯನ್ನು ಐಜಾಜ್ ಮುಂದಿಡುತ್ತಾರೆ. ನಾಗರಿಕರ ಇಂತಹ ನಡವಳಿಕೆಗೆ ಐಜಾಜ್ ಸೂಚಿಸುವ ಕಾರಣವೇನೆಂದರೆ, ಸಂವಿಧಾನಬದ್ಧವಾದ ಕಾನೂನಿನ ಆಳ್ವಿಕೆ ಇರುವಾಗಲೂ, ನಮ್ಮ ಸಮಾಜದಲ್ಲಿ ದಲಿತರು ಹಾಗೂ ಹೆಂಸಗರ ಮೇಲೆ ನಡೆಯುವ ದಬ್ಬಾಳಿಕೆ ಮತ್ತು ಹಿಂಸೆಗಳಿಗೆ ಸಮ್ಮತಿಯ ಮುದ್ರೆ ದೊರಕಿದೆ. ದಲಿತರು-ಹೆಂಗಸರು ಸಾಂಪ್ರದಾಯಿಕ ಕಟ್ಟುಪಾಡುಗಳಿಗೆ ಬದ್ಧರಾಗಿ ಬದುಕಲು ಒಪ್ಪದಿದ್ದರೆ ದಂಡನೆಗೆ ಗುರಿಯಾಗುವುದು ಸರಿ ಎಂದು ಬಹುತೇಕ ಪ್ರಜೆಗಳು ಒಪ್ಪಿಕೊಂಡುಬಿಟ್ಟಿದ್ದಾರೆ. ಇದೇ 'ಹಿಂಸೆಯ ಸಂಸ್ಕೃತಿ' ಎಂದು ಐಜಾಜ್ ಹೇಳುತ್ತಾರೆ. ಇಂತಹ ಸಂಸ್ಕೃತಿಯು ಸಾಮಾಜಿಕ ಮನ್ನಣೆ ಗಳಿಸಿರುವಾಗ, ಹೊಸ 'ವಿರೋಧಿ ಗುಂಪು'ಗಳನ್ನು ಸೃಷ್ಟಿಸಿ, ಆ ಗುಂಪುಗಳ ಮೇಲೆ ನಡೆಯುವ ಹಿಂಸೆಗಳಿಗೆ ಸುಲಭವಾಗಿ ಸಮರ್ಥನೆಗಳನ್ನು ಉತ್ಪಾದಿಸಬಹುದು ಮತ್ತು ಸಾಮಾಜಿಕ ಸಮ್ಮತಿಯ ಮುದ್ರೆಯನ್ನೂ ದಕ್ಕಿಸಿಕೊಳ್ಳಬಹುದು. ಇವತ್ತು ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ಹಿಂಸೆ, ಸಮಾಜ ರೂಢಿಸಿಕೊಂಡಿರುವ 'ಹಿಂಸಾ ಸಂಸ್ಕೃತಿ'ಯ ಭಾಗವೇ ಆಗಿದೆ ಎನ್ನುವುದು ಐಜಾಜ್ ಅಹ್ಮದ್ ವಿಚಾರ.

ಅಂಟೋನಿಯೊ ಗ್ರಾಮ್ಸಿ ಆಳುವ ವರ್ಗಗಳ ರಾಜಕೀಯವನ್ನು ಅರ್ಥೈಸುವ, ಸಮಾಜವಾದಿ ತತ್ವ ಮತ್ತು ಆಚರಣೆಗಳನ್ನು ಕ್ರಿಯಾಶೀಲವಾಗಿ ಸಂಘಟಿಸುವ ವಿಷಯದಲ್ಲಿ ಸೂಕ್ಷ್ಮ ಒಳನೋಟಗಳಿಂದ ಕೂಡಿದ ಚಿಂತನೆಗಳನ್ನು ನೀಡಿರುವ ಪ್ರತಿಭಾವಂತ ಹಾಗೂ ಇಟಾಲಿಯಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸಂಘಟಿಸಿದ ಪ್ರಮುಖ ರಾಜಕಾರಣಿ. ಈತ ಮುಸ್ಸಲಿನಿಯ ಫ್ಯಾಸಿಸ್ಟ್ ಆಳ್ವಿಕೆಯ ವಿರುದ್ಧ ಹೋರಾಟವನ್ನು ಸಂಘಟಿಸಿ, ಕಠಿಣ ಶಿಕ್ಷೆಗೆ ಗುರಿಯಾಗಿ, ಫ್ಯಾಸಿಸ್ಟ್ ಸೆರೆಮನೆಯಲ್ಲಿ ಕೊನೆಯುಸಿರೆಳೆದ. ಬಂಡವಾಳಶಾಹಿಗಳು ತಾವೇ ಸೃಷ್ಟಿಸಿದ ಬಿಕ್ಕಟ್ಟನ್ನು ಮಾನವಂತವಾಗಿ ಶಮನ ಮಾಡಲು ಸಾಧ್ಯವಾಗದ ಚಾರಿತ್ರಿಕ ಪರಿಸ್ಥಿತಿಯಲ್ಲಿ, ದುಡಿಯುವ ವರ್ಗದ ಸವಾಲನ್ನು ಮೆಟ್ಟಿಹಾಕುವ ಸಲುವಾಗಿ ದಮನಕಾರಿ ಮಾರ್ಗವನ್ನು ಅನುಸರಿಸುತ್ತಾರೆ: ಫ್ಯಾಸಿಸಂ, ಮೊದಲ ಮಹಾಯುದ್ಧದ ನಂತರ ಉಂಟಾಗಿರುವ ಬಂಡವಾಶಾಹಿ ಬಿಕ್ಕಟ್ಟಿನ ಸನ್ನಿವೇಶದಲ್ಲಿ ದುಡಿಯುವ ವರ್ಗದ ಕ್ರಾಂತಿಯನ್ನು ದಮನ ಮಾಡಲು ಆಳುವ ವರ್ಗಗಳು ಅನುಸರಿಸುತ್ತಿರುವ ಕ್ರೂರ ಸರ್ವಾಧಿಕಾರಿ ಮಾರ್ಗ ಎನ್ನುವುದು, ಜಗತ್ತಿನ ಸಮಾಜವಾದಿ ಪಕ್ಷಗಳ ಒಕ್ಕೂಟವಾಗಿದ್ದ 'ಮೂರನೇ ಇಂಟರ್‌ನ್ಯಾಷನಲ್'ನ ನಿಲುವಾಗಿತ್ತು. ಆದರೆ ಗ್ರಾಮ್ಸಿ ಇದಕ್ಕಿಂತ ಭಿನ್ನ ರೀತಿಯಲ್ಲಿ ಚಿಂತಿಸಿದ. ಇಟಾಲಿಯ ದೀರ್ಘ ಇತಿಹಾಸದಲ್ಲಿ ಅಸಮಾನ ಸಾಮಾಜಿಕ ವ್ಯವಸ್ಥೆಯನ್ನು ಬದಲು ಮಾಡಲಿಕ್ಕೆ ತಕ್ಕುದಾದ ಚಾರಿತ್ರಿಕ ಸನ್ನಿವೇಶಗಳು ಸಾಕಷ್ಟು ಸೃಷ್ಟಿಯಾಗಿದ್ದವು. ಆದರೆ, ಪ್ರತಿ ಸಂದರ್ಭದಲ್ಲೂ ನಿಜವಾದ ಬದಲಾವಣೆಯನ್ನು ತರಬಲ್ಲ ಸಾಮರ್ಥ್ಯವಿದ್ದ ಪಕ್ಷ/ಗುಂಪುಗಳು ಸೀಮಿತವಾದ ಜನವರ್ಗವನ್ನು ಪ್ರತಿನಿಧಿಸುವತ್ತ ಮಾತ್ರ ಗಮನ ಹರಿಸಿದವು; ಇಟಾಲಿಯ ವಿಭಿನ್ನ ಸಮುದಾಯಗಳನ್ನು ಒಗ್ಗೂಡಿಸಿ , ಅವರ ವಿಶ್ವಾಸವನ್ನು ಸಂಪಾದಿಸಿ, ಪ್ರಭಾವಶಾಲಿ 'ಲೋಕ ನಾಯಕತ್ವ'ವನ್ನು ನೀಡುವುದಕ್ಕೆ ಅವಶ್ಯಕವಾಗಿದ್ದ

ಕ್ರಿಯಾಶೀಲ ರಾಜಕೀಯವನ್ನು ರೂಢಿಸಲು ಈ ಪಕ್ಷ /ಗುಂಪುಗಳಿಗೆ ಸಾಧ್ಯವಾಗಲೇ ಇಲ್ಲ. ಇಂತಹ ಪರ್ವಕಾಲದಲ್ಲೆಲ್ಲ 'ಲೋಕನಾಯಕತ್ವ'ವನ್ನು ಪರಿಣಾಮಕಾರಿಯಾಗಿ ಒದಗಿಸಿದ್ದು ಆಳುವ ವರ್ಗಗಳ ಹಿತವನ್ನು ಕಾಪಾಡುವ ಪಕ್ಷ/ ಗುಂಪುಗಳು. ಈ ಕಾರಣವಾಗಿ, ಪ್ರತಿ ಕ್ರಾಂತಿಕಾರಿ ಕಾಲಘಟ್ಟದಲ್ಲೂ, ಇಟಾಲಿಯ ಸಾಮಾಜಿಕ ಸ್ವರೂಪದಲ್ಲಿ ಬದಲವಣೆಗಳಾಗಿದ್ದರೂ, ಆ ಬದಲಾವಣೆಗಳಿಂದ ಆಳುವ ವರ್ಗಗಳ ಅಧಿಕಾರ ರಚನೆಯಲ್ಲಿ ಯಾವ ಮೂಲಭೂತ ವ್ಯತ್ಯಾಸವೂ ಆಗಲಿಲ್ಲ ಮಾತ್ರವಲ್ಲ, ಬಿಕ್ಕಟ್ಟಿನ ಕಾಲದಲ್ಲಿ 'ಲೋಕನಾಯಕತ್ವ'ವನ್ನು ವಹಿಸಿ ಕೊಂಡಿದ್ದರಿಂದ ಜನಸಾಮಾನ್ಯರಲ್ಲಿ ಆಳುವ ವರ್ಗಗಳ ಬಗ್ಗೆ ಗೌರವ-ವಿಶ್ವಾಸಗಳು ಹೆಚ್ಚಿ, ಆಳುವ ವರ್ಗಗಳ ಸಾಮಾಜಿಕ ಅಧಿಕಾರಕ್ಕೆ ಸರ್ವಸಮ್ಮತಿಯ ಬೆಂಬಲ ದೊರೆಯಿತು ಎಂದು ಗ್ರಾಮ್ಷಿ ವಿವರಿಸುತ್ತಾನೆ. ಈ ನಮೂನೆಯ ಸಾಮಾಜಿಕ ಬದಲಾವಣೆಗಳನ್ನು 'ಪ್ಯಾಸಿವ್ ರೆವೆಲ್ಯುಷನ್' ಎಂದು ಕರೆದ ಗ್ರಾಮ್ಷಿ, ಪ್ರತಿಯೊಂದು 'ಪ್ಯಾಸಿವ್ ರೆವೆಲ್ಯೂಷನ್' ಆಳುವ ವರ್ಗಗಳ ಅಧಿಕಾರವನ್ನು ಭದ್ರಗೊಳಿಸುವುದರ ಜೊತೆಗೆ ಆಳುವ ವರ್ಗಗಳ ಯಜಮಾನಿಕೆಗೆ ಜನ ಬೆಂಬಲವನ್ನೂ ದೊರಕಿಸಿಕೊಡುವ ಪರಿಯನ್ನೂ ವಿವರಿಸಿದ. ಅವನ ಪ್ರಕಾರ ಇಟಾಲಿಯಲ್ಲಿ ತಲೆ ಎತ್ತಿದ ಫ್ಯಾಸಿಸಂ ಕೂಡ, ಇಟಾಲಿಯ ಚರಿತ್ರೆಯಲ್ಲಿ ಘಟಿಸಿದ ಮತ್ತೊಂದು 'ಪ್ಯಾಸಿವ್ ರೆವೆಲ್ಯೂಷನ್'. ಮುಸ್ಸಲಿನಿ, ಮೊದಲ ಮಹಾಯುದ್ಧದ ಫಲವಾಗಿ ಇಟಾಲಿಯ ಉಂಟಾಗಿದ್ದ ಕ್ಷೋಭೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದ. ಇಟಾಲಿಯ ಚರಿತ್ರೆಯಲ್ಲಿ ಹಿಂದೆ ಯಾರು ಸಹ ಸಂಘಟಿಸದಿದ್ದ ಜನವರ್ಗಗಳನ್ನು ಆತ ತನ್ನ 'ಫ್ಯಾಸಿ' ಸಂಘಟನೆಯಲ್ಲಿ ಒಗ್ಗೂಡಿಸಿ, ಆ ಜನರಲ್ಲಿ ಸಾಮೂಹಿಕ ಪ್ರಜ್ಞೆಯನ್ನು ರೂಢಿಸಿದ; 1920ರ ಹೊತ್ತಿಗೆ 'ಫ್ಯಾಸಿ'ಯ ಬಡವರೂ ಸೇರಿದ ಹಾಗೆ ಇಟಾಲಿಯಲ್ಲಿ ದೊಡ್ಡ ಜನವಿಭಾಗದ ಬೆಂಬಲವನ್ನು ಪಡೆದಿತ್ತು ಎನ್ನುವ ಸಂಗತಿಗಳ ಕಡೆ ಗಮನ ಸೆಳೆದ ಗ್ರಾಮ್ಷಿ, 'ಫ್ಯಾಸಿಸಂ'ನ ಈ 'ಪ್ಯಾಸಿವ್ ರೆವೆಲ್ಯೂಷನ್' ಸ್ವರೂಪವನ್ನು ಮನಗಾಣದೆ, ಅದರ ವಿರುದ್ಧದ ಹೋರಾಟಕ್ಕೆ ಅವಶ್ಯಕವಾಗಿರುವ ರಾಜಕೀಯ ವನ್ನು ರೂಢಿಸುವುದು ಸಾಧ್ಯವಿಲ್ಲ ಎನ್ನುವ ಅಂಶವನ್ನು ಒತ್ತಿ ಹೇಳಿದ.

'ಹಿಂದುತ್ವ' ಕೋಮುವಾದವನ್ನು ಎದುರಿಸಬೇಕಾದರೆ, ಭಾರತದ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಅಸಮಾನತೆ, ಇತಿಹಾಸದಲ್ಲಿ ಜನ ಈ ಅಸಮಾನತೆಗಳ ವಿರುದ್ಧ ನಡೆಸಿದ ಹೋರಾಟಗಳ ಸ್ವರೂಪ, ಈ ಹೋರಾಟಗಳು ಸಮಾಜದ ಮೇಲೆ ಬೀರಿರುವ ಪ್ರಭಾವಗಳನ್ನು ಪ್ರಸ್ತುತ ಸನ್ನಿವೇಶದ ಹಿನ್ನೆಲೆಯಲ್ಲಿ ಪರಾಮರ್ಶಿಸಿ, ಭಾರತದ ವೈವಿಧ್ಯಮಯ ಜನ ವಿಭಾಗಗಳನ್ನು ಒಗ್ಗೂಡಿಸಿ, 'ಲೋಕ ನಾಯಕತ್ವ' ನೀಡಬಲ್ಲ 'ಹೊಸ ರಾಜಕೀಯ' ವಿಧಾನಗಳನ್ನು ಕಟ್ಟುವುದು ತೀರ ಅವಶ್ಯಕ ಎಂದೇ ನನ್ನ ನಂಬಿಕೆ. ಇದು ಬಹು ಶ್ರಮದಾಯಕ ಕೆಲಸ ಎನ್ನುವುದನ್ನು ನಾನು ಒಪ್ಪುತ್ತೇನೆ; ಆದರೆ ಕೋಮುವಾದದ ಪ್ರಭಾವದ ವಿರುದ್ಧದ ಹೋರಾಟ 'ಒನ್ ಡೇ ಮ್ಯಾಚ್'ನ ಹಾಗೆ ತರಾತುರಿಯಲ್ಲಿ ಮುಗಿದು ಹೋಗುವಂತಹದಲ್ಲ.

ಗುಜರಾತಿನಲ್ಲಿ ಜನಸಂಘವನ್ನು ಪ್ರಾರಂಭಿಸಿದವರು ಆರ್.ಎಸ್.ಎಸ್.ನ ಪ್ರಚಾರಕರು. ಅವರು ಮೊದಲಿಗೆ ತಮ್ಮ ಫ್ಯಾಸಿಸ್ಟ್ ಪ್ರಣಾಳಿಕೆಯನ್ನು ಮುಂದಿಟ್ಟು ಜನ ಬೆಂಬಲ ಗಳಿಸಲು

ನೋಡಿದರು. ಅದು ಫಲ ಕೊಡದಿದ್ದಾಗ, ಭೂಸುಧಾರಣೆಗಳಿಂದಾಗಿ ಜಮೀನುದಾರಿಕೆ ಮತ್ತು ಕಳೆದುಕೊಂಡ ರಜಪೂತರನ್ನು ಕಾಂಗ್ರೆಸಿನ ವಿರುದ್ಧ ಎತ್ತಿಕಟ್ಟಿದರು. ಭೂಸುಧಾರಣೆಯ ಲಾಭ ಪಡೆದು ಕಾಂಗ್ರೆಸ್ ಬೆಂಬಲಿಗರಾಗಿದ್ದ ಪಟ್ಟಿದಾರರಿಗೆ ಎದುರಾಗಿ ಶೂದ್ರ ಜಾತಿಯ ಕೂಲಿಗಳನ್ನು, ರಜಪುತರನ್ನೂ 'ಕ್ಷತ್ರಿಯರ ಐಕ್ಯತೆ'ಯ ಹೆಸರಿನಲ್ಲಿ ಒಗ್ಗೂಡಿಸಿ ಒಂದು ರಾಜಕೀಯ ನೆಲೆ ಸ್ಥಾಪಿಸಿಕೊಂಡರು. ಗುಜರಾತಿನಲ್ಲಿ ಜನಸಂಘ ಪ್ರಾರಂಭವಾಗಿ 18 ವರ್ಷಗಳ ನಂತರ, ಆರ್.ಎಸ್.ಎಸ್. ಕಾರ್ಯಕರ್ತರಲ್ಲದವರು ನಾಯಕರಾದ ಬಳಿಕ, ಪಕ್ಷಕ್ಕೆ ಗುಜರಾತಿನಲ್ಲಿ ಮೊದಲ ವಿಧಾನಸಭಾ ಸ್ಥಾನ ಸಿಕ್ಕಿತು. ಜಯಪ್ರಕಾಶ ನಾರಾಯಣರ ಚಳವಳಿಯಲ್ಲಿ ಭಾಗವಹಿಸಿ ಇವರು ತಮ್ಮ ರಾಜಕೀಯ ನೆಲೆಯನ್ನು ಗಟ್ಟಿಮಾಡಿಕೊಂಡದ್ದಲ್ಲದೆ, 1975ರ ಸಮ್ಮಿಶ್ರ ಸರಕಾರದಲ್ಲಿ ಸ್ಥಾನ ಪಡೆಯುವ ಮೂಲಕ ಅಧಿಕಾರದ ಮೊದಲ ರುಚಿಯುಂಡರು. ಜನಸಂಘ ಬಿ.ಜೆ.ಪಿ.ಯಾದ ನಂತರವೂ ತನ್ನ ರಾಜಕೀಯ ವೇದಿಕೆಯನ್ನು ಉಳಿಸಿಕೊಂಡದ್ದು, ಭಾರತದಲ್ಲಿ ಕಾಂಗ್ರೆಸ್ ಆಗಲೇ ರೂಢಿಸಿದ್ದ ಜಾತಿ ಸಮೀಕರಣ, ಜನ ಕಲ್ಯಾಣ ಯೋಜನೆಗಳ ತಂತ್ರಗಾರಿಕೆಯ ಮಿಶ್ರಣದ ಮೂಲಕ. ಆದರೆ, ಈ ಕಾಲಘಟ್ಟದುದ್ದಕ್ಕೂ ಸಂಘಪರಿವಾರದ ಇತರ ಸಂಘಟನೆಗಳು ತಮ್ಮ ಫ್ಯಾಸಿಸ್ಟ್ ವಿಚಾರಗಳನ್ನು ಶುದ್ಧವಾಗಿಟ್ಟುಕೊಂಡೇ ಕಾರ್ಯಾಚರಣೆ ನಡೆಸುತ್ತಿದ್ದವು. ರಾಜಕೀಯವಾಗಿ ಬಿ.ಜೆ.ಪಿ./ಜನಸಂಘ ಹಿನ್ನಡೆ ಅನುಭವಿಸಿದಾಗಲೆಲ್ಲ, ಸಂಘಪರಿವಾರದ ಇತರ ಸಂಘಟನೆಗಳು ತಮ್ಮ ಮೂಲ ಅಜೆಂಡಾವನ್ನು ಮುಂದಿಟ್ಟು, ಹಿಂಸಾತ್ಮಕ ಚಳವಳಿಗಳನ್ನು ನಡೆಸಿ, ಒಂದಷ್ಟು ರಾಜಕೀಯ ಅವಕಾಶ ತೆರೆದುಕೊಡುತ್ತಿದ್ದವು. ಇದಕ್ಕೆ ಉದಾಹರಣೆಯಾಗಿ, 1981 ಮತ್ತು 1985ರಲ್ಲಿ 'ಮೀಸಲಾತಿ' ವಿರೋಧಿ ಚಳವಳಿ ಸಂಘಟಿಸಿ, ಮೇಲ್ಜಾತಿಯ ಅಧಿಕಾರಸ್ಥರನ್ನು ಮುಂದಿಟ್ಟುಕೊಂಡು ದಲಿತರ ಮೇಲೆ ನಡೆಸಿದ ಹಿಂಸೆ;1981ರಲ್ಲಿ ಮಂಡಲ್ ವರದಿಯ ಸಮ್ಮುಖದಲ್ಲಿ, ಪ್ರಮುಖವಾಗಿ ಗುಜರಾತಿನಲ್ಲಿ, 'ರಾಮಜನ್ಮಭೂಮಿ ಚಳುವಳಿಯ' ನೆಪದಲ್ಲಿ ಶೂದ್ರರನ್ನು ಮುಸ್ಲಿಮರ ವಿರುದ್ಧ ಎತ್ತಿಕಟ್ಟಿ ನಡೆಸಿದ ಕೋಮು ಹಿಂಸೆ, ಇವುಗಳನ್ನು ಗಮನಿಸಬಹುದು. ಏನೇ ಆದರೂ, ಜಾತಿ ಪ್ರಾಬಲ್ಯ, ತತ್ಫಲವಾದ ರಾಜಕೀಯ ಅಧಿಕಾರ ಯಾವತ್ತು ಬದಲಾಗುತ್ತಲೇ ಇರುತ್ತದೆ ಎನ್ನುವುದನ್ನು 1995 ರಿಂದ 1998ರ ವರೆಗೆ ಗುಜರಾತಿನ ಬಿ.ಜೆ.ಪಿ. ಘಟಕದಲ್ಲಿ ನಡೆದ ಜಾತಿಯಾಧಾರಿತ ಕಿತ್ತಾಟ, ಸಾರ್ವಜನಿಕ ಮಾರಾಮಾರಿ, 'ಹಜುರಿಯಾ' (ಸಂಘಪರಿಹಾರಕ್ಕೆ ವಿಧೇಯರಾಗಿರುವವರು) ಮತ್ತು 'ಖಜುರಿಯಾ' (ಪರಿವಾರದ ಹೊರಗಿನವರು) ಒಡಕುಗಳು, ಸ್ಪಷ್ಟವಾಗಿಯೇ ತೋರಿಸಿದವು. (ಈ ಎಲ್ಲ ವಿವರಗಳು 'ಹಿಂದುತ್ವ' ರಾಜಕೀಯದ ಬಗ್ಗೆ ತುಂಬ ಅಧ್ಯಯನ ಮಾಡುತ್ತಿರುವ ಸಮಾಜಶಾಸ್ತ್ರಜ್ಞ ಘನಶ್ಯಾಂ ಶಾಹರ ವಿವಿಧ ಬರಹಗಳಿಂದ ತೆಗೆದುಕೊಳ್ಳಲಾಗಿದೆ.)

❑

ನಮ್ಮ ರಾಷ್ಟ್ರೀಯತೆಗಳ ಸಂಘರ್ಷ ಮತ್ತು ತಾಕಲಾಟಗಳು

ಆರ್.ವಿ. ಭಂಡಾರಿ

1

ನಮ್ಮ ಸಂಸ್ಕೃತಿಯ ಇತಿಹಾಸ ಶುರವಾಗುವುದೇ ಸಿಂಧೂ ಸಂಸ್ಕೃತಿಯಿಂದ. ಸಿಂಧೂ ಸಂಸ್ಕೃತಿಯ ಕುರಿತು ಅಲ್ಲಿಯ ಹರಪ್ಪಾ ಮತ್ತು ಮೆಹೆಂಜೊ ದಾರೋ ಎಂಬಲ್ಲಿ ದೊಡ್ಡ ಕಟ್ಟಡಗಳಿದ್ದು, ಉಳಿದದ್ದು ಸಣ್ಣ ಕಟ್ಟಡ ಗಳದ್ದು ಎಂಬುದನ್ನ ಹೇಳಲಾಗಿದೆ. ಅಂದರೆ ಶ್ರೀಮಂತರ ಅಥವಾ ಆಡಳಿತದಾರರ ವಸತಿಯ ಅಂತಸ್ತು ಬೇರೆಯಾಗಿದ್ದು, ಸಾದಾ ಕಟ್ಟಡಗಳು ಸಾಮಾನ್ಯ ಜನರದಾಗಿದೆ ಎಂದಾಯಿತು. ಇದು ಅಸ್ವಾಭಾವಿಕವೇನೂ ಅಲ್ಲ. ಸಿಂಧೂ ಸಂಸ್ಕೃತಿ ಒಂದು ಸಮೃದ್ಧ ಸಂಸ್ಕೃತಿಕೂಡ ಹೌದು. ಅವರಿಗೆ ಕಬ್ಬಿಣ ಗೊತ್ತಿರಲಿಲ್ಲ. ಆದರೆ ಅವರು ಗೋಧಿ, ಬಾರ್ಲಿ, ಬಟಾಣಿ, ಬತ್ತವನ್ನು ಬೆಳೆಯುತ್ತಿದ್ದರು. ಹಾಗೆಯೇ ಹತ್ತಿಯನ್ನು ಬೆಳೆಯುತ್ತಿದ್ದರು. ಬೇರೆ ಬೇರೆ ಕಸಬಿನವರು ಇದ್ದರು. ಎಲ್ಲ ಕಾರಣದಿಂದ ಅಲ್ಲಿ ವರ್ಣಭೇದ ಇರಲು ಸಾಧ್ಯ. ವರ್ಗವೆಂದರೆ ವೃತ್ತಿವರ್ಗವಾಗಿರಬಹುದು. ಆದರೂ ಅವರೆಲ್ಲ ಒಂದು ಸಾಮಾನ್ಯ ವರ್ಗವಾಗಿರಲು ಸಾಕು. ಈಗ ನಾವು ಕರೆಯುವ ಜಾತಿ ಇತ್ತೇ ಎಂಬುದು ತಿಳಿಯದು. ವೃತ್ತಿಯವರದ್ದು ಸಮಾನ ಜೀವನವಾಗಿ, ಆಳುವವರದ್ದು ಒಂದು ಶ್ರೀಮಂತ (ವ್ಯಾಪಾರಿ) ವರ್ಗ ವಾಗಿರಬಹುದೆಂದು ನಾವು ಊಹಿಸಬಹುದು. ಆದರೂ ಒಂದು ವಿಚಾರ ಮಹತ್ವದ್ದೆಂದರೆ ಅಲ್ಲಿಯ ಕಟ್ಟಡಗಳು (ದೊಡ್ಡ ಕೋಟೆ ಮತ್ತು ಉಳಿದವು ಸಾಮಾನ್ಯ ಕಟ್ಟಡಗಳು) ಸ್ಪಷ್ಟವಾಗಿ ಎರಡು ವರ್ಗಗಳನ್ನು ತೋರಿಸುತ್ತವೆ. ಕಾಳು ಸಂಗ್ರಹದ ದೊಡ್ಡ ಕಣಜಗಳನ್ನು ನೋಡಿದರೆ ಅಲ್ಲಿ ಸಾಮೂಹಿಕ

ಜೀವನ ಇತ್ತೇ ಎಂದು ಊಹಿಸಲೂ ಸಾಧ್ಯವಿದೆ. ಆದರೆ ಅಲ್ಲಿಯ ರಹಸ್ಯಮಯವಾದ ಬರಹವನ್ನು ಓದುವವರೆಗೂ ನಿಖರವಾದುದು ತಿಳಿಯಲಾರದು. ಆದರೆ ಇತಿಹಾಸವನ್ನು ಚಿತ್ರಿಸಬೇಕಾದರೆ ಜಾಗತಿಕ ಚರಿತ್ರೆಯ ಕೆಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಹಾಗೆ ನೋಡಿದರೆ ಸಿಂಧೂ ಸಂಸ್ಕೃತಿಯಲ್ಲೂ ವರ್ಗಸಮಾಜ ಕಾಣಿಸಿಕೊಂಡಿದ್ದವೆಂದರೆ ವಿಸಂಗತ ಎನಿಸಲಾರದು.

ಅಲ್ಲಿಂದ ನಾವು ಮುಂದಕ್ಕೆ ಬಂದರೆ ಆರ್ಯ ಸಂಸ್ಕೃತಿ ಅಥವಾ ವೈದಿಕ ಸಂಸ್ಕೃತಿಯನ್ನ ಕಾಣುತ್ತೇವೆ. ಇದನ್ನು ಓದಲು ಸಿಂಧೂ ಸಂಸ್ಕೃತಿಯ ಹಾಗೆ ರಹಸ್ಯವಾಗಬೇಕಾದುದಿಲ್ಲ. ಯಾಕೆಂದರೆ ಸಂಸ್ಕೃತ ಸಾಹಿತ್ಯ ಅದನ್ನು ತನ್ನೆಲ್ಲ ಆಯಾಮವನ್ನು ತೆರೆದುತೋರುತ್ತದೆ.

ಋಗ್ವೇದ ಇಂಥ ಒಂದು ಮುಖ್ಯ ಆಕರ. ಆರ್ಯರ ಪ್ರಾರಂಭಿಕ ಜೀವನವನ್ನು ಅದು ತಿಳಿಸಿಕೊಡುತ್ತದೆ. ಋಗ್ವೇದದ ಪ್ರಾರಂಭಿಕ ಹಂತದಲ್ಲಿ ಆರ್ಯರಲ್ಲಿ ಚಾತುರ್ವರ್ಣವಾಗಲಿ, ಜಾತಿ ಪದ್ಧತಿಯಾಗಲಿ ಇದ್ದಿರಲಿಲ್ಲ. ಬೇರೆ ಬೇರೆ ವೃತ್ತಿ ಜೀವನದವರು ವಿವಾಹಿತರಾಗಿ ಒಂದೇ ಕುಟುಂಬ ಆಗಿರುವ ಬಗ್ಗೆ ಅಲ್ಲಿ ದಾಖಲೆ ಇದೆ. ಆರ್ಯರ ಪ್ರಾರಂಭಿಕ ಜೀವನ ಮೂಲ ನಿವಾಸಿಗಳೊಡನೆಯ ಸಂಘರ್ಷ ಜೀವನವಾಗಿದ್ದರೂ ಅದು ಸಮನ್ವಯಕ್ಕೆ ಹಾದಿ ಮಾಡಿಕೊಟ್ಟಿರಬೇಕು. ಅದಕ್ಕೆ ಮುಖ್ಯ ಕಾರಣ ಅವರಲ್ಲಿರುವ ಹೆಣ್ಣುಗಳ ಕೊರತೆಯೂ ಆಗಿರಬಹುದು. ಅದೇನೇ ಇದ್ದರು ಈ ಸಮನ್ವಯದಲ್ಲಿಯ ಅನಾರ್ಯರ ಸಂಖ್ಯೆ ಜಾಸ್ತಿಯಾದಂತೆ ಅದು ವರ್ಣ ಪದ್ಧತಿಗೆ ದಾರಿಮಾಡಿಕೊಟ್ಟಿತು.

ವರ್ಣ ಪದ್ಧತಿಗೆ ಇದೊಂದೇ ಕಾರಣ ಎನ್ನುವಂತಿಲ್ಲ. ಇದು ಒಮ್ಮೆಲೇ ಕಾಣಿಸಿಕೊಂಡಿದ್ದಾಗಿರದೆ ಕಾಲಕ್ರಮದ ಪರಿಣಾಮದಲ್ಲಿ ಆದುದು. ಋಗ್ವೇದದ ದೀರ್ಘಕಾಲದ ಕೊನೆಕೊನೆಗೆ ಚಾತುರ್ವರ್ಣ ಉಂಟಾಯಿತು. ಪುರುಷಸೂಕ್ತದಲ್ಲಿ ಅದು ಸ್ಪಷ್ಟವಾಯಿತು. ಅದಕ್ಕೆ ದೈವಿಕ ಆಧಾರವನ್ನು ಒದಗಿಸಲಾಗಿ ಸಾಂಸ್ಕೃತಿಕ ಪರಂಪರೆಯನ್ನ ಪ್ರಾರಂಭ ಮಾಡಿತು. ಬಹಳ ಮುಖ್ಯವಾಗಿ ಗ್ರಹಿಸಬೇಕಾದುದೆಂದರೆ ಚಾತುರ್ವರ್ಣ ಎಂಬುದು ವರ್ಗ ವಿಭಜನೆ ಕೂಡ ಆಗಿತ್ತು. ಡಾ. ಬಿ.ಆರ್. ಅಂಬೇಡ್ಕರರು ವರ್ಣ ಎಂದರೆ ಬಣ್ಣ ಅಲ್ಲ. ಆರ್ಯರಲ್ಲೇ ಎಲ್ಲರೂ ಬೆಳ್ಳಗಿನವರೇ ಆಗಿರಲಿಲ್ಲ. ವರ್ಣ ಎಂಬುದು ವರ್ಗದ ಒಂದು ಸ್ವರೂಪವೇ ಆಗಿದೆ ಎಂದು ಅಭಿಪ್ರಾಯ ಪಡುತ್ತಾರೆ.

> **"ಸಮಕಾಲೀನರಾದ ಹಿಂದೂಗಳು ಮಾರ್ಕ್ಸ್‌ವಾದದ ಬಹುದೊಡ್ಡ ವಿರೋಧಿಗಳು. ಅದರ ವರ್ಗ ಹೋರಾಟದ ಸಿದ್ಧಾಂತದಿಂದ ಅವರು ಭಯಗೊಂಡಿದ್ದಾರೆ. ಆದರೆ ಇಂಡಿಯಾ ದೇಶವು ವರ್ಗ ಹೋರಾಟ ಮಾತ್ರವಲ್ಲ, ವರ್ಗ ಸಮರಗಳ ತೌರೂರು"**
>
> *(ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂಪುಟ 3 ಪು. 71)*

ಎಂದು ಹೇಳುವ ಅವರ ಮಾತು ಪ್ರಸ್ತುತವಾಗಿದೆ. ಆರ್ಯರಲ್ಲಿ ವರ್ಗ ವಿಭಜನೆ ಆದ ರೀತಿಯನ್ನು ಇ.ಎಂ.ಎಸ್. ನಂಬೂದರಿಪಾದ್ ಹೀಗೆ ಹೇಳುತ್ತಾರೆ.

> "ದಾಳಿಕೋರ ಆರ್ಯರು ಕೃಷಿಕ್ಷೇತ್ರದ ಉತ್ಪಾದನೆಯ ರೀತಿಯನ್ನ ಅಭಿವೃದ್ಧಿಪಡಿಸುತ್ತಾ ಆರ್ಯೇತರ ಬುಡಕಟ್ಟನ್ನು ಒಂದರ ನಂತರ ಒಂದು ಎಂಬಂತೆ ಒಡೆದು ಹಾಕಿದರು. ಒಂದು ಕಡೆ ಆರ್ಯೇತರರ ಬೇರೆ

ಬೇರೆ ಗುಂಪುಗಳು ಒಂದಾದ ಸಮಾಜವು ತಲೆ ಎತ್ತಿದರೆ, ಇನ್ನೊಂದು ಕಡೆ ಆರ್ಯ ಮತ್ತು ಆರ್ಯೇತರರ ಸಮಾಜ ತಲೆ ಎತ್ತಿತು.

ಬುಡಕಟ್ಟು ಪದ್ಧತಿಯನ್ನು ಒಡೆದುದರ ಪರಿಣಾಮವಾಗಿ ಒಟ್ಟಂದದ ಉತ್ಪಾದನೆಯ ಸಾಮರ್ಥ್ಯ ಹೆಚ್ಚಾಯಿತು. ಅದೇ ಹೊತ್ತಿಗೆ ಉತ್ಪಾದನೆಯ ರೀತಿಯಲ್ಲಿ ಪ್ರಗತಿ ಹೊಂದಿತು. ಈ ಪರಿಕ್ರಮದಿಂದಾಗಿ ಉತ್ಪಾದಕ ಚಟುವಟಿಕೆ ಬಗೆಬಗೆಯವಾದವು ಮತ್ತು ಅನೇಕ ಗುಂಪುಗಳು ಬೇರೆಬೇರೆಯದೇ ಆದ ವಿಶಿಷ್ಟ ಉದ್ಯೋಗದಲ್ಲಿ ತೊಡಗಿಕೊಂಡಿದ್ದರಿಂದ ಉತ್ಪಾದನಾ ಸಾಮರ್ಥ್ಯ ಹೆಚ್ಚಾಯಿತು. ಈ ಎಲ್ಲ ಸಂಗತಿಗಳು ವರ್ಗವಿಭಜನೆಗೆ (Division of Labour) ಅವಕಾಶ ಮಾಡಿಕೊಟ್ಟಿತು. ಹೀಗೆ ಉತ್ಪಾದನೆಯು ಹೆಚ್ಚಾದಂತೆ ಹೊಸ ಉತ್ಪಾದಕ ಸಂಬಂಧಗಳು ಉಂಟಾದವು. ಅದೇ ಚಾತುರ್ವರ್ಣ ಪದ್ಧತಿ ಮತ್ತು ಇದು ಪ್ರಾಥಮಿಕವಾಗಿ ಶೋಷಣೆಯ ಮೇಲೆ ನಿಂತ ಪದ್ಧತಿಯಾಗಿತ್ತು. ಹಾಗೆಯೇ ಇದು ಉತ್ಪಾದನೆಯ ಸಾಮರ್ಥ್ಯವೂ, ಅವರ ರೀತಿಯೂ ಬದಲಾಗುತ್ತ, ಸಂಕೀರ್ಣವಾಗುತ್ತ ಜಾತಿ ಪದ್ಧತಿಗೆ ಪರಿವರ್ತಿತವಾಯಿತು"

(A history of Indian freedom Struggle 1986; 12)

ಇದು ವರ್ಗವಿಭಜನೆಯ ಸಾಂಸ್ಕೃತಿಕ ಸ್ವರೂಪದ್ದಾಗಿದೆ. ನಮ್ಮಲ್ಲಿ ಉಂಟಾದ ಜಾತಿ ಪದ್ಧತಿಗೆ ಇದು ಮೂಲವಾಗಿದೆ. ಹಾಗೆಯೇ ಇದು ವಿಶ್ಲೇಷಣೆಗೆ ಸಿಕ್ಕದಷ್ಟು ಸಂಕೀರ್ಣವಾಗಿದೆ; ಗೋಜಲವಾಗಿದೆ. ಆದ್ದರಿಂದಲೇ ಜಾತಿ ಎಂಬುದು ಮುಚ್ಚಿದ ವರ್ಗ ಎಂದು ಅಂಬೇಡ್ಕರ್ ಹೇಳುತ್ತಾರೆ. ಹೀಗಾಗಿ ವರ್ಣ-ಜಾತಿ ಎರಡು ಏಕಕಾಲಕ್ಕೆ ರಾಜಕೀಯವೂ, ಸಾಂಸ್ಕೃತಿಕವೂ ಆಗಿದೆ.

ಹೀಗಾದಾಗ ಬೇರೆಬೇರೆ ವರ್ಣಗಳ ಇರುವಿಕೆ ಬೇರೆಯಾಗುತ್ತದೆ. ಇರುವಿಕೆ ಅಂದರೆ ಬದುಕನ್ನು ಸಾಗಿಸುವಿಕೆ ಅವರವರ ಲೋಕದೃಷ್ಟಿಯನ್ನು ಬೇರೆಯನ್ನಾಗಿ ಮಾಡುತ್ತದೆ. ಲೋಕದೃಷ್ಟಿ ಎನ್ನುವುದೇ ಸಾಂಸ್ಕೃತಿಕ ಎನ್ನಿಸಿಕೊಳ್ಳುತ್ತದೆ. 'ಜನರ ಜೀವನದ ವಿಧಾನವೇ ಸಂಸ್ಕೃತಿ' ಎಂದು ಹೇಳುವ ಹರ್‌ಕೊವಿಟ್ಸ್‌ನ ಮಾತು (ಉದ್ಧರಣೆ ಬರಗೂರು ರಾಮಚಂದ್ರಪ್ಪ ಉಪ ಸಂಸ್ಕೃತಿ ಅಧ್ಯಯನ; ಕರ್ನಾಟಕ ಸಾಹಿತ್ಯ ಅಕಾಡೆಮಿ; 1993; 16) ಇಲ್ಲಿಗೆ ಸಮಂಜಸವಾಗಿದೆ. ವರ್ಗ ಮತ್ತು ವರ್ಗೀಯ ಬದುಕಿನ ವಿಧಾನಕ್ಕೆ ಉದ್ಯೋಗ ಮತ್ತು ಆರ್ಥಿಕತೆ ಆಧಾರವಾಗಿದೆ ಎಂಬುದು ಬಹುಮುಖ್ಯವಾಗಿದೆ. ಎಂತಲೇ ಆರ್ಥಿಕ ಆದಾಯವನ್ನು ಕಡಿಮೆ ತರುವ ಜಾತಿ ದುರ್ಬಲವಾಗುತ್ತಾ ಹೀನವಾಗುತ್ತಾ ಹೋಗುತ್ತದೆ. ಹೀಗೆ ಚಾತುರ್ವರ್ಣ ಪದ್ಧತಿ ಶ್ರೇಣೀಕೃತವಾಗಿ ಶೂದ್ರವರ್ಣ ಅತಿ ದುರ್ಬಲವರ್ಗವಾಗಿದ್ದು, ಅಲ್ಲಿಯೂ ಕೆಳಜಾತಿಗಳು ಶ್ರೇಣೀಕರಣಕ್ಕೆ ಒಳಗಾಗಿವೆ. ಈ ಕಟ್ಟಡದ ತಳದಲ್ಲಿ ದಲಿತರು (ಅಸ್ಪೃಶ್ಯರು) ಇದ್ದು ಅವರ ಬದುಕು ದಾರುಣವೂ ಆಗಿದೆ; ಅಮಾನವೀಯವೂ ಆಗಿದೆ. ಇಂಥ ಸಮಾಜ ನಮ್ಮ ಮುಂದೇ ಇದೆ.

ಹೀಗೆ ಉದ್ಯೋಗ, ಆರ್ಥಿಕತೆಯನ್ನು ಅವಲಂಬಿಸಿ ಉಂಟಾಗುವ ಗುಂಪು ಸಮಾಜದಲ್ಲಿ ಪ್ರತಿಯೊಂದು ಗುಂಪಿನ ಅಥವಾ ಜಾತಿ-ಬುಡಕಟ್ಟುಗಳ ಜೀವನವಿಧಾನ ಬೇರೆಬೇರೆಯಾಗಿದ್ದು ಬೇರೆ ಬೇರೆ 'ಸಂಸ್ಕೃತಿಯ ಹುಟ್ಟಿಗೆ ಎಡೆಮಾಡಿಕೊಡುತ್ತದೆ. ಇಲ್ಲಿ ಪ್ರತಿಯೊಂದು ಸಮಾಜದ ಹಿತಾಸಕ್ತಿಯೂ ಬೇರೆಬೇರೆಯಾಗಿರುತ್ತದೆ ಮತ್ತು ಅವು ತನಗಿಂತ ಉತ್ತಮ ಸ್ಥಾನಮಾನ ಹೊಂದಿರುವ ಜಾತಿ-ವರ್ಗದೊಡನೆ ಹೋರಾಟಕ್ಕಿಳಿಯುತ್ತವೆ. ಬಹಳ ಸಲ ಈ ಜಾತಿಸಮಾಜ ತನ್ನ ಜಾತಿಯನ್ನು ಇಟ್ಟುಕೊಂಡು ಸಮಾನ ಆಸಕ್ತಿ ಅಥವಾ ಪರಿಸ್ಥಿತಿ ಹೊಂದಿದ ಜಾತಿಯ

ಜೊತೆ ಒಂದಾಗಿ ತನ್ನ ಸಮಾನ ವೈರಿಯನ್ನು ಗುರುತಿಸಿಕೊಂಡು ಹೋರಾಟಕ್ಕಿಳಿಯುತ್ತದೆ. ಆದರೆ ವರ್ಗದ ಸ್ಪಷ್ಟ ಸ್ವರೂಪ ಕಾಣಿಸಿಕೊಂಡಿರದ ಸಮಾಜದಲ್ಲಿ ಈ ಹೋರಾಟ ಜಡವೂ, ಬಹು ಸಂಕೀರ್ಣವೂ ಆಗಿದ್ದು ಸಾಂಸ್ಕೃತಿಕ ರೂಪವಾಗಿ ಪರಿವರ್ತನೆ ಹೊಂದುತ್ತದೆ. ಇದು ಇಂದಿನ ಪರಿಸ್ಥಿತಿ ಕೂಡ ಹೌದು.

ಭಾರತದ ಸಂದರ್ಭದಲ್ಲಿ ಇಂಥ ಸಂಘರ್ಷ ವರ್ಣ-ವರ್ಣಗಳ ಮಧ್ಯೆ ನಡೆಯುವುದು ಸಂಭಾವ್ಯವಾಗೇ ಇದೆ. ಅದು ವರ್ಣ ಸಂಘರ್ಷವೂ ಆಗಿ ವರ್ಗ ಸಂಘರ್ಷವೂ ಆಗಿರುತ್ತದೆ.

ಮೊದಲಲ್ಲಿ ಆರ್ಯರ ಅನೇಕ ಗುಂಪುಗಳು ಇಲ್ಲಿ ಬಂದಿವೆ ಮತ್ತು ಅವು ಅನಾರ್ಯ ಗುಂಪಿನೊಡನೆ ಸಂಘರ್ಷಕ್ಕಿಳಿದಂತೆ ಸಮನ್ವಯಕ್ಕೂ ತೊಡಗಿದವು.

ವೇದಗಳಲ್ಲಿ ಋಗ್ವೇದ ಹೇಗೆ ಮಹತ್ವದ್ದಾಗಿದೆಯೋ ಹಾಗೆ ಅಥರ್ವವೇದ ಕೂಡ ಮಹತ್ವದ್ದಾಗಿದೆ. ಅಥರ್ವವೇದವನ್ನು ತುಸು ಕೀಳು ಎಂದೇ ಮಡಿವಂತರು ಗ್ರಹಿಸುತ್ತಾರೆಂದು ಅಭ್ಯಾಸಿಗಳು ಹೇಳುತ್ತಾರೆ. ಅದೇನೇ ಇರಲಿ "ಅಥರ್ವವೇದವು ಮುಖ್ಯವಾಗಿ ಪ್ರಾಕೃತ ಮಂತ್ರವಾದಗಳಿಗೆ ಸಂಬಂಧಿಸಿದ ಮಂತ್ರವನ್ನೊಳಗೊಂಡಿದೆ. ಜ್ವರವನ್ನು ವಾಸಿ ಮಾಡುವುದರಿಂದ ತೊಡಗಿ ಪ್ರೇಮಿಯ ಹೃದಯವನ್ನು ವಶೀಕರಿಸುವವರೆಗಿನ ನಾನಾತರಹದ ಉದ್ದೇಶಗಳನ್ನು ಈಡೇರಿಸುವುದಕ್ಕೆ ನೆರವೇರಿಸತಕ್ಕ ಮಂತ್ರಸಹಿತ ಕ್ರಿಯೆಗಳ ವಿವರಣೆ ಅದರಲ್ಲಿ ಅಡಕವಾಗಿದೆ" ಎಂದು ಡಾ. ದೇವೀಪ್ರಸಾದ ಚಟ್ಟೋಪಾಧ್ಯಾಯ ಹೇಳುತ್ತಾರೆ. *('ಭಾರತೀಯ ದರ್ಶನಗಳು', ಅನು. ಬಿ.ವಿ. ಕಕ್ಕಿಲ್ಲಾಯ, ಪು. 76)* ಈ ಮಂತ್ರವಾದದ ಹಾಡುಗಳಲ್ಲಿ ಹೆಚ್ಚಿನವುಗಳು ಹಾಗೂ ಅವುಗಳಿಗೆ ಸಂಬಂಧಿಸಿದ ಮಂತ್ರವಾದದ ಕ್ರಿಯೆಗಳು ಇಡೀ ಭೂಮಿಯ ಮೇಲೆ ಹರಡಿದ್ದು ಆಶ್ಚರ್ಯಕರವಾದ ಸಾಮ್ಯತೆ ಹೊಂದಿವೆ. ಉತ್ತರ ಅಮೇರಿಕದ ಇಂಡಿಯನ್ನರ, ಆಫ್ರಿಕಾದ ನೀಗ್ರೋ, ಯೂರೋಪಿನ ರೈತರ ಮಧ್ಯೆ ಕೂಡ ಅಥರ್ವವೇದದೊಳಗಿಂದ ಹರಿದು ಬಂದಿರುವಂತಹದೇ ದೃಷ್ಟಿಕೋನ ಕಾಣುತ್ತದೆ - ಎಂದು ವಿಂಟರ್‌ನೀಡ್ಸ್ ಹೇಳುತ್ತಾರೆ (ಅಲ್ಲೇ)

ಇದನ್ನ ಪ್ರಸ್ತಾಪಿಸುವುದಕ್ಕೆ ಕಾರಣ ಇಂಥ ದೃಷ್ಟಿ ಪ್ರಾಕೃತವಾದುದು ಮತ್ತು ಸಾಮಾನ್ಯವಾದುದು ಎನ್ನಲು. ಅಭಿವೃದ್ಧಿ - ಪ್ರಗತಿ - ಹೊಂದಿದ ಮೇಲೂ ಈ ಮೂಲ ಚಿಂತನೆ ಮುಂದುವರಿಯುವುದು ಅಸಾಧ್ಯವೇನೂ ಅಲ್ಲ. ಹಾಗೆ ನೋಡಿದಾಗ ಇದು ಆರ್ಯರ ಮೊದಲ ಅವಧಿಯ ವಿಚಾರವೂ ಆಗಿರಬಹುದು. ಯಾಕೆಂದರೆ ಸಿಂಧೂ ಸಂಸ್ಕೃತಿಯಲ್ಲಿ ಇಂತಹದೇ ದೃಷ್ಟಿ ಇತ್ತು. ಮಂತ್ರ, ಮಾಟ, ತಾಯಿತ ಕಟ್ಟುವುದು ವಗೈರೆ. ಇವು ಸಿಂಧೂ ಸಂಸ್ಕೃತಿಯ ಅಂತೇ ಆರ್ಯೇತರ ಸಂಸ್ಕೃತಿಯ ರೂಢಿಗಳು. ಆರ್ಯರು ಯಜ್ಞ ಸಂಸ್ಕೃತಿಯವರಾದರೂ ಇದು ಆರ್ಯೇತರರಿಂದ ಪರಿಚಯವಾಗಿ ಒಂದು ಶಾಖೆಯಾಗಿ ರೂಢಿಯಲ್ಲಿ ಇದ್ದಿರಲೂಬಹುದು. ಅದು ಆರ್ಯ ಮತ್ತು ಆರ್ಯೇತರರ ಮಿಶ್ರಣದ ಸಂದರ್ಭವೆನ್ನುವುದನ್ನು ಗಮನಿಸಬೇಕು. ಅದೇನೇ ಇದ್ದರೂ ಆರ್ಯ ಸಂಸ್ಕೃತಿ ಯಜ್ಞ ಸಂಸ್ಕೃತಿಯಾಗಿದೆ ಮತ್ತು ಅದು ಪುರುಷ ಪ್ರಾಮುಖ್ಯ ಸಂಸ್ಕೃತಿ ಕೂಡ ಹೌದು. ಆರ್ಯೇತರ ಸಂಸ್ಕೃತಿಯಲ್ಲಿ ಮಾತೃದೇವತೆ ಮುಖ್ಯವಾದರೆ ಆರ್ಯ ಸಂಸ್ಕೃತಿಯಲ್ಲಿ ಪುರುಷ (ಇಂದ್ರ) ದೇವತೆ ಮುಖ್ಯ. ಆದ್ದರಿಂದ ಆರ್ಯ ಪ್ರಾರಂಭದ ಅವಧಿಯ ಆಯ್ದು ಆರ್ಯೇತರ

ನಂಬಿಕೆಯಾದ ಮಂತ್ರ ಮಾಟಗಳು ಹೀನತ್ವವನ್ನು ಹೊಂದಿರಬಹುದು ಇದು ಋಗ್ವೇದ ಕಾಲದ ಸಂಗತಿ. ಆದರೆ ಹೀಗೆ ಸಿಂಧೂ ಸಂಸ್ಕೃತಿಯ ಪುನರವತಾರ ಅಥವಾ ಪುನರುತ್ಥಾನ ಋಗ್ವೇದದ ಅವಧಿಯ ನಂತರದ ಅಥರ್ವ ವೇದದಲ್ಲಿ ಯಾಕಾಯಿತು? ಇದು ಆರ್ಯರ ಮೊದಲ ಬಣಕ್ಕೂ ಆರ್ಯೇತರ ಶೂದ್ರ - ಬಣಕ್ಕೂ ಸಂಬಂಧಿಸಿದ ವಿಚಾರವೇ ಆಗಿದೆ. "ಆರ್ಯೇತರ ಸಂಪ್ರದಾಯಗಳೊಂದಿಗೆ ಸಂಬಂಧಪಟ್ಟ ಅಥರ್ವವೇದದಲ್ಲಿ ಹಲವಾರು ಮಾಯಾ ಮಂತ್ರಗಳು ಹಾಗೂ ವಶೀಕರಣ ಸೂತ್ರಗಳಿವೆ; ಕಾಯಿಲೆಗಳು ಮತ್ತು ದುಷ್ಟಶಕ್ತಿಗಳ ಕಾಟದಿಂದ ದೂರವಿರಲು ಹಲವಾರು ತಾಯಿತಗಳನ್ನು ನಮೂದಿಸಲಾಗಿದೆ" ಎಂದು ಪ್ರೊ. ಆರ್.ಎಸ್. ಶರ್ಮ ಹೇಳುವುದು ಅರ್ಥಪೂರ್ಣವಾಗಿದೆ. *(ಪ್ರಾಚೀನ ಭಾರತ; ಅನು.: ಎನ್.ಪಿ. ಶಂಕರನಾರಾಯಣರಾವ್ 1997; ಪು. : 62)*

ಇದೇ ಹೊತ್ತಿಗೆ ವೇದಕಾಲದಲ್ಲೇ ಉಂಟಾದ ವೇದ ವಿರೋಧಿ ಭಾವ ಮತ್ತು ಭೌತ ತಾತ್ವಿಕ ದೃಷ್ಟಿ 'ಲೋಕಾಯತ ದರ್ಶನ'ದಲ್ಲಿ ನಿಚ್ಚಳವಾಗಿ ಕಾಣುತ್ತದೆ. ಇವೆಲ್ಲವುಗಳಿಂದ ಇದು ಭಾರತೀಯ ಚರಿತ್ರೆಯಲ್ಲೇ ಮೊದಲ ಸಂಘರ್ಷವಾಗಿದ್ದು, ಇದು ವರ್ಗ ಸಂಘರ್ಷವೂ ಆಗಿದ್ದು, ಸಾಂಸ್ಕೃತಿಕ ರಾಷ್ಟ್ರೀಯತೆಯ ಮೊದಲ ಸಂಘರ್ಷವೂ ಆಗಿದೆ ಎಂಬುದು ಸ್ಪಷ್ಟ.

ಇಂತಹ ಸಂಘರ್ಷವನ್ನು ಚರಿತ್ರೆಯಲ್ಲಿ ನಾವು ಮತ್ತೆಮತ್ತೆ ನೋಡುತ್ತೇವೆ. ಭಾರತ ಚರಿತ್ರೆ ಬೆಳವಣಿಗೆ ಇಲ್ಲದ್ದು ಎಂಬ ಹೇಳಿಕೆಗೆ ಈಗ ಯಾವ ಗೌರವವೂ ಇಲ್ಲ. ಅದು ಜಡವಾಗಿದೆ ಎಂದರೆ ಮಂದವಾಗಿದೆ ಎಂದು ಮಾತ್ರ ಅರ್ಥ. ಅದಕ್ಕೆ ಕಾರಣವೇನು ಎಂಬುದೆಲ್ಲ ಇಲ್ಲಿ ಪ್ರಸ್ತುತವಲ್ಲ. ಹಿಂದೆಯೇ ವೇದಕಾಲೀನ ಸಂಸ್ಕೃತಿಯಲ್ಲಿ ಮಾತೃದೇವತೆಯ ಸ್ಥಾನ ಮುಖ್ಯವಾಗಲಿಲ್ಲ ಎಂಬ ಮಾತು ಬಂದಿದೆ. ಆದರೆ ಸತ್ತು ಹೋಗಲಿಲ್ಲ. ಅದು ಆರನೇ ಶತಮಾನದಲ್ಲಿ ಮತ್ತೆ ಕಾಣಿಸಿಕೊಳ್ಳುತ್ತದೆ.

"ಕೆಲವು ವೈದಿಕ ಗ್ರಂಥಗಳು ಭೂಮಿಯನ್ನು ದೇವತೆಯೆಂದು ಗೌರವಿಸಿದುವಾದರೂ ಆಕೆಗೆ ಪ್ರಾಮುಖ್ಯ ದೊರೆಯಲಿಲ್ಲ. ದೇವಿಯೇ ಪರದೈವ ಎಂಬ ಭಾವನೆ ಹಿಂದು ಮತದಲ್ಲಿ ಬೆಳೆಯಲು ಸಮಯ ಹಿಡಿಯಿತು. ಕ್ರಿ.ಶ. ಆರನೆಯ ಶತಮಾನದಿಂದೀಚೆಗೆ ಪುರಾಣಗಳು ಹಾಗೂ ತಂತ್ರ ಸಾಹಿತ್ಯದಲ್ಲಿ ದುರ್ಗಾ, ಅಂಬಾ, ಕಾಳಿ, ಚಂಡಿ ಮುಂತಾದ ಮಾತೃದೇವತೆಗಳು ಪ್ರಸ್ತಾಪಗೊಳ್ಳುತ್ತಾರೆ. ಕ್ರಮೇಣ ಪ್ರತಿ ಗ್ರಾಮವೂ ತನ್ನ ತನ್ನ ಗ್ರಾಮದೇವತೆಯನ್ನು ರೂಪಿಸಿಕೊಂಡಿತು" ಎಂದು ಆರ್.ಎಸ್. ಶರ್ಮಾ ಹೇಳುತ್ತಾರೆ *('ಪೂರ್ವೋಕ್ತ' ಪುಟ : 61)* "ರಾಜಸ್ಥಾನದಲ್ಲಿ ಅಂಬೇರಿನ ಅಂಬಾ ಮತ್ತು ಬಿಕನೇರಿನ ಕರ್ನಿಮಾತಾ, ಒಡಿಸ್ಸದಲ್ಲಿ ಸಂಬಲಪುರದ ಸಮಲೇಶ್ವರಿ, ಅರ್ಬುದ ಪರ್ವತದ ಅರ್ಬುದಮಾತಾ, ಪಟನಾದ ಪಟದೇವಿ, ಗಯೆಯ ಗಯೇಶ್ವರಿ, ಪಂಜಾಬಿನ ಕಾಂಗ್ರಾದಲ್ಲಿ ಜ್ವಾಲಾಮುಖಿ, ಕಲಕತ್ತೆಯ ಕಾಳಿ, ಮೈಸೂರಿನ ಚಾಮುಂಡೇಶ್ವರಿ ಮೊದಲಾದ ದೇವತೆಯರೆಲ್ಲ ನಗರ ರಕ್ಷಕಿಯರೇ" ಎಂದು ರಾಮಚಂದ್ರರಾವ್ ಹೇಳುತ್ತಾರೆ. *('ಭಾರತೀಯ ದೇವಾಲಯಗಳ ಜಾನಪದ ಮೂಲ' 1981 ಪು. : 78)* ಇಷ್ಟು ವ್ಯಾಪಕವಾದ ಪುನರುತ್ಥಾನ ಆಕಸ್ಮಿಕ ಎನ್ನುವ ಹಾಗೆ ಇಲ್ಲ. ಆಶ್ಚರ್ಯವೆಂದರೆ ಸಿಂಧೂ ಸಂಸ್ಕೃತಿ ಕಾಲದ ಕೆಂಪು ಬಣ್ಣವನ್ನು ಈಗಲೂ ಈ ದೇವಿಯರು ಇಟ್ಟುಕೊಂಡಿದ್ದಾರೆ.

ಇಂಥ ಸಾಂಸ್ಕೃತಿಕ ಸಂಘರ್ಷ ಧಾರ್ಮಿಕದ ರೀತಿಯಲ್ಲಿ ನಡೆದದ್ದು ನಮಗೆ ಪರಿಚಿತವಾದುದೇ. ಜೈನ, ಬೌದ್ಧ ಇತ್ಯಾದಿಗಳು ಆ ಸಾಲಿನವೇ. ಬಹಳ ಆಶ್ಚರ್ಯಕರವಾಗಿ ವೇದಕಾಲದಲ್ಲಿ ನಿರ್ಲಕ್ಷ್ಯಕ್ಕೂ ನಿಂದನೆಗೂ ಕಾರಣವಾದ ಶಿವನ ಅವತಾರ ಮತ್ತೆ 12ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಕಾಣಿಸಿಕೊಳ್ಳುತ್ತದೆ. ಕಾಶ್ಮೀರದ್ದು ಮೊದಲೇ ಕಾಣಿಸಿಕೊಂಡಿದೆ. ಈ ಶಿವ ಸಿಂಧೂ ಸಂಸ್ಕೃತಿಯಲ್ಲಿ ದೇವರು. ನಂದಿ ಕೂಡ ಅಲ್ಲಿಯದೆ. ಇವು ಆರ್ಯೇತರ ದೇವತೆಗಳು. ವೈದಿಕ ಸಂಸ್ಕೃತಿಯಲ್ಲಿ ಕೂಡ ಬೇರೆಬೇರೆ ಪರಿವರ್ತನೆಗೆ ಒಳಗಾದವನು ಶಿವ. ಆದರೆ ಮತ್ತೆ ಅದೇ ರೂಪದಲ್ಲಿ ಒಂದು ವ್ಯಾಪಕ ಆಂದೋಲನವಾಗಿ ಕಾಣಿಸಿಕೊಳ್ಳುವ ಅವಶ್ಯಕತೆಯಾದರೂ ಏನಿತ್ತು? ಈ ಲಿಂಗ ವೈದಿಕ ಸಂಸ್ಕೃತಿಗೆ ವಿರುದ್ಧವಾಗಿ ಬಂದುದು. ಅಂದರೆ ಸನಾತನವೆನ್ನುವ ಯಜಮಾನ ಸಂಸ್ಕೃತಿಯ ರಾಷ್ಟ್ರೀಯತೆಗೆ ಪ್ರತಿಭಟನೆಯಾಗಿ ಮೂಡಿದ್ದು. ಆದರೆ ಅದು ಮತ್ತೂ ಜಡವಾಗಿ ಬಿಡುತ್ತದೆ. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಅದು ಶೋಷಕವಾಗುತ್ತದೆ.

ಬಸವಣ್ಣನವರು "ವೇದ ಶಾಸ್ತ್ರಾಗಮ ಪುರಾಣಗಳೆಂದು ಕೊಟ್ಟಣ ಕುಟ್ಟುತ್ತ ನುಚ್ಚು ತೌಡು ಕಾಣಿಬೊ" ಮುಂತಾಗಿ ವೈದಿಕ ಧರ್ಮದ ಯಜಮಾನಿಕೆಯನ್ನು ತೀವ್ರವಾಗಿ ಚುಚ್ಚಿದರು. ತಮ್ಮನ್ನು ತಾವೇ ಚೆನ್ನಯ್ಯನ ಮನೆಯ ದಾಸಿಮಗ ಎಂಬಂತೆ ತಮ್ಮ ಹುಟ್ಟಿನ ಬ್ರಾಹ್ಮಣ ಶ್ರೇಷ್ಠತೆಯನ್ನ ಕಳೆದುಕೊಂಡರು. ಆದರೆ ಮುಂದೆ ಅದೇ ಏನಾಯಿತೆಂಬುದನ್ನು ಚಂಪಾ ತಮ್ಮದೊಂದು ಕವನದಲ್ಲಿ ಹೀಗೆ ವಿಡಂಬಿಸಿದ್ದಾರೆ.

> "ನಿನ್ನ ಗುರು ಜಗದ್ಗುರುವಾಗಿ ಅಡ್ಡಡ್ಡ
> ಅಡ್ಡಪಲ್ಲಕ್ಕಿಯಲಿ ಮೆರೆದನೊ ಬಸವಾ
> ಹಗಲೆಲ್ಲ ಹಡಬಿಟ್ಟಿ ತಿಂದ ಜಂಗಮ ಕುಂತ
> ಕುಂತಲ್ಲೆ ಸ್ಥಿರವಾದನಲ್ಲೊ ಬಸವಾ"

ಆದರೆ ಭಕ್ತಿ ಚಳವಳಿಯೇನೂ ಸತ್ತು ಹೋಗಲಿಲ್ಲ. ಮುಂದೆ ಇದು ವೈಷ್ಣವಿ ಪಂಥವಾಗಿ ಕರ್ನಾಟಕ, ಮಹಾರಾಷ್ಟ್ರ, ಬಂಗಾಲ, ಪಂಜಾಬ ಹೀಗೆ ದೇಶದ ಎಲ್ಲ ಕಡೆ ಹಬ್ಬಿತು. ಈ ಚಳವಳಿಯ ಎರಡು ಟಿಸಿಲುಗಳನ್ನು ಕಾಣಬಹುದು. ಒಂದನೆಯದು ವೈಯಕ್ತಿಕ ಮುಕ್ತಿ. ವೈಯಕ್ತಿಕಕ್ಕೆ ದೇವರ ಒಲವು. ಇಲ್ಲಿ ಭಕ್ತರೆಲ್ಲರ ಕುರಿತು ಉದಾರವಾದಿ ನಿಲುವು ಇದೆ. ಆದರೆ ಸಾಮಾಜಿಕವಾದ ಜಾತಿಯ ಅನಿಷ್ಟವನ್ನು ಮುಟ್ಟುವ ಹಾಗಿಲ್ಲ. ಆದರೆ ಎರಡನೆಯದು ವೈಯಕ್ತಿಕವಾಗಿದ್ದಾಗಲೇ ಸಾಮಾಜಿಕವಾದುದು. ಬಸವ ಚಳವಳಿ ಇದೇ ಪ್ರಕಾರದ್ದಾಗಿತ್ತು. ಈ ಪ್ರಕಾರದ ಚಳವಳಿಯಲ್ಲಿ ಜಾತಿ ಮತ್ತು ಅಸ್ಪೃಶ್ಯತೆಯನ್ನು ನಾಶಪಡಿಸುವ, ಮೇಲು ಜಾತಿಯ ಶ್ರೇಷ್ಠತೆಯನ್ನು ಭಂಗಗೊಳಿಸುವ ಕೆಚ್ಚು-ರೊಚ್ಚು ಇತ್ತು. ಇಂಥಲ್ಲಿ ಇದು ಸಾಂಸ್ಕೃತಿಕ ಹೋರಾಟವಾದಂತೆ ವರ್ಗಹೋರಾಟ ಕೂಡ ಆಗಿದೆ ಎಂಬುದನ್ನು ಗ್ರಹಿಸಬೇಕು. ಇದರ ಆಯಾಮವಾಗೇ ಮಹಿಳಾ ಜಾಗೃತಿಯನ್ನು ಸಹ ಗ್ರಹಿಸಬೇಕು. ಭಕ್ತಿಪಂಥದಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರತ್ಯೇಕವಾಗಿ ದಾಖಲಿಸುವಷ್ಟು ಮೌಲಿಕವಾಗಿದೆ.

> "ಭಕ್ತಿ ಪಂಥದ ಈ ಆಂದೋಲನದಲ್ಲಿ ಕಂಡುಬರುವ ಈ ಪರ್ಯಾಯಗಳು ಮೂಲನೆಲೆಯಲ್ಲಿ ಸ್ತ್ರೀ ಪ್ರಧಾನ ಅಂಶಗಳಿಂದ ಪ್ರೇರಿತವಾದಂತಹವುಗಳಾಗಿವೆ. ದಕ್ಷಿಣದಲ್ಲಿ ಪ್ರಾರಂಭವಾಗಿ ಅಲೆಅಲೆಯಾಗಿ ಹರಡುತ್ತ

> ಉತ್ತರ ಭಾರತವನ್ನು ವ್ಯಾಪಿಸಿ ಬಹುಶಃ ಅಖಿಲ ಭಾರತದ ವ್ಯಾಪ್ತಿಯನ್ನು ಪಡೆದ ಈ ಚಳವಳಿಯಲ್ಲಿ ಮಹಿಳಾ ಸಂತರು ನಿರ್ವಹಿಸಿದ ಪಾತ್ರವನ್ನು ಗಮನಿಸಿದರೆ ಈ ಧಾರ್ಮಿಕ ಚಳುವಳಿಯು ಮಹಿಳೆಯರಿಗೆ ವಿಮೋಚನೆಯ ಚಾಲನಶಕ್ತಿಯಾದದ್ದು ಕಂಡುಬರುತ್ತದೆ. ಪ್ರಭಾವಶಾಲಿ ವ್ಯಕ್ತಿತ್ವದ ಒಬ್ಬ ಮಹಿಳೆಯಾದರೂ ಇರದ ಭಕ್ತಿ ಚಳುವಳಿಯು ದಕ್ಷಿಣದಲ್ಲೂ ಇಲ್ಲ, ಉತ್ತರದಲ್ಲೂ ಇಲ್ಲ. ಅಕ್ಕ, ಮೀರಾ, ಅವ್ವೆಯಾರ್, ಆಂಡಾಳ್, ಲಾಲ್‌ದೇಡ್‌ನಂತಹವರು ಸಾಂಪ್ರದಾಯಿಕ ಅರ್ಥದ ಗಂಡು-ಹೆಣ್ಣಿನ ಸಂಬಂಧವನ್ನು ಬದಲಾಯಿಸುವ ಧಿಕ್ಕರಿಸುವ, ಅಥವಾ ತಿರಸ್ಕರಿಸುವ ನಿಲುವುಗಳು ಪರಂಪರಾಗತ ನಿಲುವುಗಳಿಗೆ ಒಡ್ಡಿದ ಸವಾಲುಗಳಾಗಿದ್ದವು"

ಎಂದು ಹೇಳುವ ಗಂಗಾಧರ ಮೂರ್ತಿಯವರ ಮಾತುಗಳು ಭಕ್ತಿಚಳವಳಿಯ ಮಹಿಳಾ ಪ್ರಧಾನ ಆಯಾಮದ ಅಂತರಂಗವನ್ನು ನಿಖರಗೊಳಿಸುತ್ತವೆ. *('ಭಾರತೀಯ ಭಕ್ತಿಪಂಥ ಮತ್ತು ಮಹಿಳೆಯರು', ವಿಚಾರ ಸಾಹಿತ್ಯ 1991 ಕ.ಸಾ. ಅಕಾಡೆಮಿ, ಪು. 133-134)*

2

ಭಾರತೀಯ ರಾಷ್ಟ್ರೀಯತೆ ಒಂದು ಪ್ರಜಾಪ್ರಭುತ್ವವಾದಿ ರಾಷ್ಟ್ರೀಯತೆಯನ್ನ ಹೊರೆದು ಕೊಂಡು ಮೂರ್ತವಾಗಿ, ಸ್ಪಷ್ಟವಾಗಿ ರಾಜಕೀಯವಾಗಿ ಮೈಳೆದುದು ನಮ್ಮ ರಾಷ್ಟ್ರೀಯ ಅಥವಾ ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ನಡೆದ ಸ್ವಾತಂತ್ರ್ಯಹೋರಾಟದಲ್ಲಿಯೇ. ಅಲ್ಲಿಯೂ ಕೂಡ ರಾಷ್ಟ್ರೀಯತೆ ಸಾಂಸ್ಕೃತಿಕ ಸ್ವರೂಪದಲ್ಲೆ ಪ್ರಾರಂಭವಾಯಿತೆಂಬುದು ನಿಚ್ಚಳ. ಸಾಂಸ್ಕೃತಿಕ ಎನ್ನುವುದು ರಾಜಕೀಯ ರಾಷ್ಟ್ರೀಯತೆಯ ಅಂತರ್ಗತ ಭಾಗ ಕೂಡ ಹೌದಲ್ಲವೇ?

ರಾಜಾರಾಮ ಮೋಹನರಾಯರು ನವಭಾರತದ ಹರಿಕಾರರು ಎಂದು ಚರಿತ್ರಕಾರರು ಕರೆಯುತ್ತಾರೆ. ಸಂಸ್ಕೃತ, ಪರ್ಶಿಯನ್, ಬಂಗಾಲಿ ಭಾಷೆಯಲ್ಲಿ ಪರಿಣತರಾದ ಮೋಹನರಾಯರು ಪಾಶ್ಚಾತ್ಯರ 'ಆಧುನಿಕತೆ'ಯಿಂದ ಪ್ರಭಾವಿತರಾಗಿದ್ದರು. ಕಲಕತ್ತಾ (ಕೊಲಕೊತಾ)ದಲ್ಲಿ ಕಾಲೇಜು ತೆಗೆಯಬೇಕೆಂದು ವಸಾಹತು ಸರಕಾರ ಬಯಸಿದಾಗ ಭಾರತದ ಸನಾತನ ಧಾರ್ಮಿಕ ಭಾಷೆಯಾದ ಸಂಸ್ಕೃತದ ಬದಲು ತಮಗೆ ವಿಜ್ಞಾನ ಶಿಕ್ಷಣ ಸಿಕ್ಕಬೇಕೆಂದು ಬಯಸಿ ಇಂಗ್ಲಿಷ್ ಕಾಲೇಜ್ ತೆರೆಯುವುದಕ್ಕೆ ಒತ್ತಾಯಿಸಿದವರು ಅವರು. ಆದರೆ ಇದು ಆಧುನಿಕ ಭಾರತವನ್ನು ಕಟ್ಟುವ ವಿಚಾರದಲ್ಲೇ ಹೊರತು ಹಿಂದೂ ಸಂಸ್ಕೃತಿಯಿಂದ ವಿಮೋಚನೆ ಹೊಂದುವ ದೃಷ್ಟಿಯಿಂದಲ್ಲ. ಹಿಂದೂ ಧರ್ಮದಲ್ಲಿಯ ಜಾತೀಯತೆ, ಸತಿಹೋಗುವಿಕೆ, ಬಹುಪತ್ನಿತ್ವ, ಧಾರ್ಮಿಕ ಮೌಢ್ಯ ಇತ್ಯಾದಿಗಳನ್ನು ಕಿತ್ತೊಗೆದು ಆಧುನಿಕ ಕಾಲಕ್ಕೆ ಸರಿಹೊಂದುವಂತೆ ಸುಧಾರಣೆಗೊಳಿಸಬೇಕೆಂಬ ಇರಾದೆಯಿಂದಲೇ ಬ್ರಹ್ಮೋಸಮಾಜವೆಂಬ ಸಮಾಜ ಸುಧಾರಣಾ ಸಂಸ್ಥೆಯನ್ನು ಸ್ಥಾಪಿಸಿದರು. ದಯಾನಂದ ಸರಸ್ವತಿ, ಈಶ್ವರಚಂದ್ರ ವಿದ್ಯಾಸಾಗರ ಮುಂತಾದವರು ಸುಧಾರಣಾವಾದಿಗಳಾಗಿದ್ದರು. ವಿವೇಕಾನಂದರಂತೂ ಬಿರುಗಾಳಿಯಂತೆ ವೈದಿಕ ಜಾತಿ ಶ್ರೇಣೀಕರಣವನ್ನು ಖಂಡಿಸಿದರು; ಆದರೆ ವೇದಾಂತವನ್ನು ಎತ್ತಿ ಹಿಡಿದರು.

ಮುಂದೆ ರಾಷ್ಟ್ರೀಯ ಕಾಂಗ್ರೆಸಿನಲ್ಲಿ ಉಗ್ರಗಾಮಿಗಳೆಂದೇ ಪ್ರಸಿದ್ಧರಾದ ಬಾಲಗಂಗಾಧರ ತಿಲಕ್ ಅವರು ರಾಷ್ಟ್ರೀಯ ಆಂದೋಲನವನ್ನು ತೀವ್ರಗೊಳಿಸಲು ಗಣಪತೋತ್ಸವವನ್ನು ಪ್ರಾರಂಭಿಸಿದರು. ಇದೊಂದು ಆಂದೋಲನದ ತಾಂತ್ರಿಕ ಕ್ರಿಯೆಯಾಗಿದ್ದರೂ ರಾಷ್ಟ್ರೀಯತೆಗೆ

ಒಂದು ಸಾಂಸ್ಕೃತಿಕ ಸ್ವರೂಪ ಕೂಡ ಪ್ರಾಪ್ತವಾಯಿತು. ಇದು ಹಿಂದೂ ರಾಷ್ಟ್ರೀಯತೆಯ ಉದ್ದೇಶವನ್ನೇನೂ ಹೊಂದಿರದಿದ್ದರೂ ಹಿಂದೂ ಸಾಂಸ್ಕೃತಿಕ ಶಕ್ತಿಯ ಸಮ್ಮಿಳಿತವಾಗುವುದಕ್ಕೆ ಅವಕಾಶವಾಯಿತು. ಆದರೆ ರಾಷ್ಟ್ರೀಯ ಕಾಂಗ್ರೆಸ್ ಮತೀಯವಾದಿ ವೇದಿಕೆಯೇನು ಆಗಿರಲಿಲ್ಲ. ಮಹಾತ್ಮಾಗಾಂಧಿ ಸಾಂಸ್ಕೃತಿಕ (ಹಿಂದೂ) ಮನುಷ್ಯರೇ ಆಗಿದ್ದರೂ ಅವರ ಕಾಲದಲ್ಲಿ (ಗಾಂಧಿ ಯುಗದಲ್ಲಿ) ಸ್ವಾತಂತ್ರ್ಯ ಆಂದೋಲನ ಸ್ಪಷ್ಟವಾಗಿ ಧರ್ಮನಿರಪೇಕ್ಷತೆಯನ್ನು - ಸೆಕ್ಯುಲರಿಸಂ - ಬೆಳೆಸಿಕೊಂಡು ಬಂತು. ಆದರೆ ಇದೇ ಹೊತ್ತಿನಲ್ಲಿ ಹಿಂದುತ್ವವಾದವೆಂಬ ಮತ್ತು ಮುಸ್ಲಿಮತ್ವ ಎಂಬ ಎರಡು ರಾಷ್ಟ್ರೀಯವಾದವೂ ಬೆಳೆದು ಬಂದವು. ಸೆಕ್ಯುಲರಿಸಂ - ಧರ್ಮನಿರಪೇಕ್ಷತೆ - ಹಿಂದುತ್ವವಾದ ಮತ್ತು ಮುಸ್ಲಿಂ ರಾಷ್ಟ್ರೀಯವಾದ ಇವು ತ್ರಿಕೋನದಲ್ಲಿ ಸಂಘರ್ಷ ನಡೆಸಿದವು. ಇದರ ಪರಿಣಾಮ ವಿದಿತವಾಗೇ ಇದೆ. ಇವುಗಳಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಧರ್ಮನಿರಪೇಕ್ಷವಾದ ರಾಷ್ಟ್ರೀಯತೆಗೆ ಕೊನೆತನಕವೂ ಬದ್ಧವಾಯಿತು. ಮಹಾತ್ಮಗಾಂಧಿ ಹಿಂದೂ-ಮುಸ್ಲಿಂ ಒಗ್ಗಟ್ಟಿಗಾಗಿ ತಮ್ಮ ಜೀವವನ್ನೇ ಮುಡುಪಾಗಿಟ್ಟುದು ಮತ್ತು ಆ ಕಾರಣಕ್ಕಾಗೇ ಹಿಂದುತ್ವವಾದಿ ರಾಷ್ಟ್ರೀಯತೆ ಅವರನ್ನು ಬಲಿತೆಗೆದುಕೊಂಡುದು ಸರ್ವಶ್ರುತವಾಗಿದೆ. ಹಾಗೆಯೇ ಮುಸ್ಲಿಂ ರಾಷ್ಟ್ರೀಯತೆ ಭಾರತ ಮತ್ತು ಪಾಕಿಸ್ತಾನ ಎಂಬೆರಡು ರಾಷ್ಟ್ರಗಳ ನಿರ್ಮಾಣಕ್ಕೆ ಕಾರಣವಾಯಿತು. ಹೀಗೆ ಮುಸ್ಲಿಂ ರಾಷ್ಟ್ರೀಯತೆಗೆ ಮುಸ್ಲಿಂ ಲೀಗು ನೇತಾರವಾಯಿತು ಮತ್ತು ಅದು ಜೈಸಿತು. ಹಾಗೆಂದೊಡನೆ ರಾಷ್ಟ್ರೀಯವಾದಿ - ಧರ್ಮನಿರಪೇಕ್ಷಿತವಾದಿ ಮುಸ್ಲಿಮರು ಇರಲಿಲ್ಲವೆಂದಲ್ಲ. ಮೌಲಾನಾ ಅಬುಲ್ ಕಲಾಂ ಆಝಾದರು ಆರು ವರ್ಷಗಳಷ್ಟು ದೀರ್ಘಾವಧಿಯ ತನಕ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಅವರು ಕೊನೆ ತನಕವೂ ರಾಷ್ಟ್ರೀಯ ಏಕತೆಗೆ ಬದ್ಧರಾಗಿದ್ದರು. ಅವರಂತೆ ಗಡಿನಾಡ ಗಾಂಧಿ ಎಂದೇ ಹೆಸರಾದ ಅಬ್ದುಲ್ ಗಫರ್‌ಖಾನರೂ ಕೂಡ ರಾಷ್ಟ್ರ ವಿಭಜನೆಗೆ ವಿರೋಧವಾಗಿದ್ದು, ವಿಭಜನೆಯಿಂದ ತುಂಬ ದುಃಖಿಗಳಾದರು.

1931ರಲ್ಲಿ ಪಂಜಾಬಿನಲ್ಲಿ ಜರುಗಿದ ಪಂಜಾಬ್ ನೆಶನಲಿಸ್ಟ್ ಮುಸ್ಲಿಂ ಕಾನ್‌ಫರೆನ್ಸ್ ಸಮ್ಮೇಳನದ ಸ್ವಾಗತಾಧ್ಯಕ್ಷರಾದ ಮಲಿಕ್ ಬರ್ಕತ್ ಅಲಿ ತಮ್ಮ ದೀರ್ಘವಾದ ಬಾಷಣದಲ್ಲಿ ಹಿಂದೂ-ಮುಸ್ಲಿಂ ಏಕರಾಷ್ಟ್ರೀಯತೆಯನ್ನು ಪ್ರತಿಪಾದಿಸಿದರು. ಅದರ ಒಂದು ಪ್ಯಾರಾವನ್ನು ಇಲ್ಲಿ ಕೊಡಲಾಗುವುದು.

> "ನಾವು ಸ್ವತಂತ್ರ ಇಂಡಿಯಾದಲ್ಲಿ ಅಷ್ಟೇ ಅಲ್ಲ, ಅಖಂಡ ಇಂಡಿಯಾದಲ್ಲಿ ನಂಬಿಕೆಯುಳ್ಳವರಾಗಿದ್ದೇವೆ. ಆ ಇಂಡಿಯಾ ಹಿಂದುಗಳ ಅಥವಾ ಸಿಖ್ಖರದ್ದಾಗಲಿ, ಈ ಆ ಜಾತಿಯದ್ದಾಗಲಿ ಆಗಿರದೆ ಸರ್ವಜನತೆಯ ಇಂಡಿಯಾ ಆಗಿರುತ್ತದೆ. ಇದು ನಮ್ಮ ಅಚಲ ಶ್ರದ್ಧೆಯಾಗಿರುವುದರಿಂದ ಹಿಂದೂ ಅಥವಾ ಮುಸ್ಲಿಮ್ ಇಂಡಿಯಾ ಎನ್ನುವ ಇಂಡಿಯಾದ ವಿಭಜನೆಗೆ ನಾವು ಭಾಗೀದಾರರಾಗುವುದಿಲ್ಲ ಎಂದು ಅದನ್ನು ತಿರಸ್ಕರಿಸುತ್ತೇವೆ. ಹಿಂದೂ ಮತ್ತು ಮುಸ್ಲಿಂ ಇಂಡಿಯಾ ಪರಿಕಲ್ಪನೆ ಆಯಾ ಪಕ್ಷಗಳ ಜಾತ್ಯಂಧರಿಗೆ, ಅವರಲ್ಲಿ ಎಷ್ಟೇ ಉನ್ಮಾದದ ಅಲೆಗಳನ್ನು ಹುಟ್ಟಿಸಲಿ ಅದನ್ನು ನಾವು ಎತ್ತರದ ಧ್ವನಿಯಲ್ಲಿ ವಿರೋಧಿಸುತ್ತೇವೆ. ಅದು ಕೇವಲ ಅವ್ಯವಹಾರಿಕ ಮತ್ತು ತುಚ್ಛ ಎಂದಷ್ಟೇ ಅಲ್ಲ, ಆಧುನಿಕ ಇಂಡಿಯಾದ ಎಲ್ಲ ರಾಜಕೀಯ ಚಟುವಟಿಕೆಗಳ ಉದಾತ್ತತೆಗೆ ಸಾವಿನ ಗಂಟೆಯಾಗಿದೆ. ಇದೆಲ್ಲದರ ಜೊತೆ ಅದು ಇಂಡಿಯಾದ ಪ್ರಮುಖ ಚಾರಿತ್ರಿಕ ಪರಂಪರೆಗೆ ಕೂಡ ವಿರುದ್ಧವಾಗಿದೆ ಎಂದು ಅದನ್ನು ನಾವು ವಿರೋಧಿಸುತ್ತೇವೆ."

(ಉದ್ಧರಣೆ : 'ಡಾ. ಬಾಬಾ ಸಾಹೇಬ್ ಅಂಬೇಡ್ಕರರ ಬರಹಗಳು ಮತ್ತು ಭಾಷಣಗಳು', ಸಂಪುಟ 8, 1998, ಪು. 420)

ಜಿನ್ನಾ ಕೂಡ ಬೇರೆಯಾಗಿದ್ದರೂ ಇದೇ ಅಭಿಪ್ರಾಯ ಹೊಂದಿದ್ದರು. ಆದರೆ ಮುಂದೆ ಈ ಇಬ್ಬರೂ ಪಾಕಿಸ್ತಾನದ ರಚನೆಗೆ ಹಠ ಹಿಡಿದರು. ಇದಕ್ಕೆಲ್ಲ ಏನು ಕಾರಣ? ಯಾರು ಕಾರಣರು? ಅತ್ಯಂತ ಸಂಕೀರ್ಣವಾದ ವಿಚಾರ. ಇದು ವಿಶ್ಲೇಷಣೆಗೆ ಸಿಲುಕದಷ್ಟು ಸೂಕ್ಷ್ಮ ಸಂಗತಿಯಾಗಿ ಜರುಗಿಬಿಟ್ಟಿದೆ. ಇದರಲ್ಲಿ ರಾಷ್ಟ್ರೀಯ ಕಾಂಗ್ರೆಸಿನ ತಪ್ಪೆಂದು, ಮುಸ್ಲಿಂ ಲೀಗಿನ ತಪ್ಪೆಂದೂ ವಾದಿಸಲು ಸಾಕಷ್ಟು ದಾಖಲೆಗಳೇನೋ ಸಿಕ್ಕುತ್ತವೆ. ಆದರೆ ದಾಖಲೆಗೂ ಮೀರಿದ ಭಾವನೆಯ ಎಳೆ 'ಮಸೆದ ಗಾಳಿಗಿಂತ ತೆಳುವು' ಆಗಿ ಇರಲು ಸಾಧ್ಯವಲ್ಲ?

3

ಭಾರತ ಸ್ವತಂತ್ರವಾಯಿತು, ಗಣರಾಜ್ಯವಾಯಿತು. ನಮಗೆ ವಿಶಾಲವೂ ನಿಖರವೂ ಆದ ಒಂದು ಲಿಖಿತ ಸಂವಿಧಾನವೂ ಪ್ರಾಪ್ತವಾಯಿತು. 'ಸೆಕ್ಯುಲರ್' ಭಾವನೆ ನಮ್ಮ ಸಂವಿಧಾನದ ಅಂತರಂಗ ಎಂದು ತಜ್ಞರು ಸಾರಿದ್ದಾರೆ. ಸಂವಿಧಾನ ಎಲ್ಲ ಧರ್ಮಾವಲಂಬಿಗಳಿಗೆ ತಮ್ಮ ತಮ್ಮ ಧರ್ಮ - ಆರಾಧನೆಯನ್ನು ನಡೆಸಿಕೊಂಡು ಹೋಗಲು ಸಮಾನ ರಕ್ಷಣೆಯನ್ನು ಒದಗಿಸಿದೆ. ಪ್ರಜಾಪ್ರಭುತ್ವ, ಸಮಾಜವಾದಿ ಸಮಾಜ ರಚನೆ ನಮ್ಮ ಸಂವಿಧಾನದ ಆಶಯ. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆ ನಮ್ಮ ಸಂವಿಧಾನದ ಉಸಿರು. ಇಷ್ಟಾದ ಮೇಲೆ ಸ್ವಾತಂತ್ರ್ಯ ಪೂರ್ವದ ರಾಷ್ಟ್ರೀಯತೆಗಳ ತಾಕಲಾಟ ನಿಂತಿರಬಹುದೆಂದೂ ಸಮಾಜವಾದಿ ಆಶಯದ ಪ್ರಜಾಪ್ರಭುತ್ವದಡಿಯಲ್ಲಿ ನಮ್ಮ ಸಂಸ್ಕೃತಿ ಹೊಸ ಆಶಯದ, ಹೊಸ ಆಯಾಮದ ಪ್ರಕ್ರಿಯೆಯಲ್ಲಿ ಬೆಳವಣಿಗೆ ಹೊಂದಲು ಮುಕ್ತವಾಗಿದೆ ಎಂದು ಗ್ರಹಿಸಬಹುದಾದ ಸಂದರ್ಭ ಎಂದು ತಿಳಿದುಕೊಂಡರೆ ತಪ್ಪಾದೀತು. ಯಾಕೆಂದರೆ ಸ್ವಾತಂತ್ರ್ಯಪೂರ್ವದ ರಾಷ್ಟ್ರೀಯವಾದದ ತಾಕಲಾಟದಿಂದ ದೇಶ ಮುಕ್ತವಾಗಲಿಲ್ಲ. ಇಂಥ ರಾಷ್ಟ್ರೀಯತೆಯಲ್ಲಿ 'ಹಿಂದುತ್ವ' ವಾದ ಒಂದು.

ರಾಷ್ಟ್ರೀಯ ಸ್ವಯಂ ಸೇವಕದ (ಆರ್.ಎಸ್.ಎಸ್.) ಪಾತ್ರ ಗಾಂಧಿ ಹತ್ಯೆಯಲ್ಲಿ ನಿಚ್ಚಳ ವಾದದ್ದರಿಂದ ಆರ್‌ಎಸ್‌ಎಸ್‌ಗೆ ಬಹುದೊಡ್ಡ ಹಿನ್ನಡೆಯೇನೋ ಆಯಿತು. ಆದರೆ ಅದು ಈಗ ವಿಶ್ವ ಹಿಂದೂ ಪರಿಷತ್, ಭಜರಂಗದಳ ಇತ್ಯಾದಿಗಳ ಹೆಸರಿನಲ್ಲಿ ಪ್ರಬಲವಾಗಿದೆ. ಇಷ್ಟೇ ಅಲ್ಲ ಅದು ಇದೀಗ ಬಿ.ಜೆ.ಪಿ. ಮೂಲಕ ಕೇಂದ್ರದಲ್ಲಿ ಅಧಿಕಾರ ಹಿಡಿದಿದೆ. ಇದು ಭಾರತದ ಸ್ವಾತಂತ್ರ್ಯ ಸೂರ್ಯಕ್ಕೆ ಹಿಡಿದ ಖಗ್ರಾಸಗ್ರಹಣವಾಗಿದೆ. ಯಾಕೆಂದರೆ ಈ ಮೇಲಿನ ಸಂಘಟನೆಗಳು ಪ್ರತಿಪಾದಿಸುವ ತತ್ತ್ವಗಳು ಸಂವಿಧಾನ ವಿರೋಧಿಯೂ, ಮಾನವ ವಿರೋಧಿಯೂ ಆಗಿವೆ. ಹಿಂದುತ್ವ, ಹಿಂದೂಧರ್ಮ, ಕೇಸರಿ-ಕಾವಿ, ಓಂ ಮಂತ್ರ ಇವು ಹಿಂದೂ ಸಂಸ್ಕೃತಿಯ ಭಾವಚೋದಕ ಪದಗಳಾಗಿರುವುದರಿಂದ ಸುಲಭವಾಗಿ ಜನರನ್ನು ಮರಳುಗೊಳಿಸಬಹುದಾಗಿದೆ. ಇದನ್ನು ವಿ.ಡಿ. ಸಾವರ್‌ಕರ್, ಎಂ.ಎಸ್. ಗೋಳ್ವಲ್ಕರ ಆದಿಯಾಗಿ ಇಲ್ಲಿಯ ತನಕವೂ ವ್ಯವಸ್ಥಿತವಾಗಿ ಬೆಳೆಸಿಕೊಂಡು ಬರಲಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿಯೇ ಹಿಂದೂ ಮಹಾಸಭೆಯ ಮೂಲಕ ಸವಾರ್ಕರ್ ಹಿಂದುತ್ವದ ಹುಟ್ಟನ್ನು ಹಾಕಿದರು. ಅನಂತರ ಆರ್.ಎಸ್.ಎಸ್.ನ ಗುರು ಗೋಳ್ವಲ್ಕರ ಅದನ್ನು ಶಿಸ್ತು ಬದ್ಧವಾಗಿ ಬೆಳೆಸಿದರು. ಈ ಹಿಂದುತ್ವವಾದದ ಹೃದಯಸ್ಥವಾದ ತಾತ್ವಿಕತೆಯನ್ನು ತಿಳಿಸಲು

ಗೋಳ್ವಲ್ಕರರೇ ತಮ್ಮ 'ಚಿಂತನ ಗಂಗಾ' (Bunch of Thought)ದಲ್ಲಿ ಹೇಳಿದ ಕತೆಯನ್ನು ಪ್ರೊ. ರಾವ ಸಾಹೇಬ ಕಸಬೆಯವರು ತಮ್ಮ 'ಪಂಜು' (ಇದು ಮರಾಠಿಯಲ್ಲಿ 'ರೋಲ್'ದ ಅನುವಾದ ವಾಗಿದ್ದು ಅನುವಾದಕರು ದತ್ತಾತ್ರಯ ಪೂಜಾರಿಯವರಾಗಿದ್ದಾರೆ, ವರ್ಷ : 1982) ಪುಸ್ತಕದ 42ನೇ ಪುಟದಲ್ಲಿ ಕೊಟ್ಟಿರುವುದನ್ನು ಓದುಗರ ಅವಗಾಹನೆಗಾಗಿ ಇಲ್ಲಿ ಕೊಡಲಾಗುತ್ತಿದೆ.

"ದಕ್ಷಿಣದಲ್ಲಿ ಒಬ್ಬ ಆಂಗ್ಲ ಅಧಿಕಾರಿ ಇದ್ದನು. ನಾಯುಡು ಎಂಬ ಒಬ್ಬ ಸ್ಥಾನೀಯ ವ್ಯಕ್ತಿಯು ಅವನ ಸಹಾಯಕನಾಗಿದ್ದನು. ಆ ಆಂಗ್ಲ ಅಧಿಕಾರಿಯ ಒಬ್ಬ ಕೆಲಸದಾಳು ಬ್ರಾಹ್ಮಣನಾಗಿದ್ದನು. ಒಂದು ದಿನ ಆಂಗ್ಲ ಅಧಿಕಾರಿಯು ದಾರಿಯಲ್ಲಿ ಹೊರಟಿದ್ದನು. ಕೆಲಸದಾಳು ಅವನ ಹಿಂದೆ ಹಿಂದೆ ನಡೆದಿದ್ದನು. ಎದಿರಿನಿಂದ ಆ ಅಧಿಕಾರಿಯ ನಾಯುಡು ಜಾತಿಯ ಸಹಾಯಕನು ಬಂದನು. ಆ ಇಬ್ಬರು ಅಧಿಕಾರಿಗಳು ಆಂಗ್ಲಪದ್ಧತಿಗನುಸಾರವಾಗಿ ಹಸ್ತಾಂದೋಲನ ಮಾಡಿ ಪರಸ್ಪರ ಕುಶಲವನ್ನು ವಿಚಾರಿಸಿಕೊಂಡರು. ಆದರೆ ಕೆಲಸದಾಳನ್ನು ನೋಡುತ್ತಲೇ ಸಹಾಯಕನಾದ ನಾಯುಡು ತನ್ನ ಟೊಪ್ಪಿಯನ್ನು ತೆಗೆದು ಅವನ ಕಾಲಿಗೆ ಎರಗಿ ನಮಸ್ಕಾರ ಮಾಡಿದನು. ಆಂಗ್ಲ ಅಧಿಕಾರಿಗೆ ಇದನ್ನ ನೋಡಿ ಆಶ್ಚರ್ಯವಾಯಿತು. ಅವನು ತನ್ನ ಸಹಾಯಕನ ಕುರಿತು ಹೀಗೆ ಕೇಳಿದನು. ನಾನು ನಿನ್ನ ವರಿಷ್ಠ ಅಧಿಕಾರಿಯಾಗಿದ್ದೇನೆ. ಆದರೂ ನೀನು ಎದೆ ಸೆಟೆದು ನಿಂತು ಕೇವಲ ಹಸ್ತಾಂದೋಲನ ಮಾಡಿದೆ. ಇವನಂತೂ ನನ್ನ ಕೆಲಸದ ಆಳು. ನಡುದಾರಿಯಲ್ಲಿ ನೀನು ಅವನಿಗೆ ಸಾಷ್ಟಾಂಗ ಪ್ರಣಾಮ ಹೇಗೆ ಮಾಡಿದೆ? ಆಗ ನಾಯುಡು ಜಾತಿಯ ಆ ಸಹಾಯಕ ಹೀಗೆ ಹೇಳಿದನು : ತಾವು ನನ್ನ ವರಿಷ್ಠಾದಿಕಾರಿಯಾಗಿದ್ದೀರಿ ನಿಜ. ಆದರೆ ತಾವು ಮ್ಲೇಚ್ಛರು ಮತ್ತು ಇವನು ತಮ್ಮ ಆಳಾಗಿದ್ದರೂ ನಮ್ಮ ಸಮಾಜವು ಯುಗಯುಗಗಳಿಂದ ಪೂಜ್ಯವೆಂದು ತಿಳಿದ ಬ್ರಾಹ್ಮಣ ವರ್ಗಕ್ಕೆ ಸೇರಿದವನಾಗಿದ್ದಾನೆ. ಅವನಿಗೆ ತಲೆ ಬಾಗಿಸುವುದು ನನ್ನ ಕರ್ತವ್ಯವಾಗಿದೆ"

ಇದಕ್ಕೆ ಯಾವ ವ್ಯಾಖ್ಯಾನವೂ ಬೇಡ. ಆರ್.ಎಸ್.ಎಸ್ ಮತ್ತು ವಿಶ್ವ ಹಿಂದೂ ಪರಿಷತ್ ಪ್ರತಿಪಾದಿಸುವ 'ಹಿಂದುತ್ವ'ದ ತಿರುಳು. ಇದನ್ನು ಇಂದಿನ ನಮ್ಮ ಯಾವ ಹಿಂದುತ್ವವಾದಿಗಳೂ ಅಲ್ಲಗಳೆಯುತ್ತಿಲ್ಲ. ಅಂದರೆ 'ಹಿಂದುತ್ವ' ವಾದವೆಂದರೆ ಮಹಾತ್ಮಾ ಗಾಂಧಿ ಯಾವ ಹಿಂದೂ ಧರ್ಮವನ್ನು ತನ್ನ ರಕ್ತ-ಮಾಂಸವನ್ನಾಗಿ ಮಾಡಿಕೊಂಡಿದ್ದರೊ ಅದಲ್ಲ. ಬದಲಾಗಿ ಬ್ರಾಹ್ಮಣ ಶ್ರೇಷ್ಠತೆಯನ್ನು ಪುನಃ ಸ್ಥಾಪಿಸಬಯಸುವ 'ಹಿಂದುತ್ವ'ವಾಗಿದೆ. 'ಹಿಂದುತ್ವ'ವಾದಿಗಳು ಜಾತಿಯನ್ನು ಮನ್ನಿಸುತ್ತಾರೆ. ಇವರಿಗೆ ಲಕ್ಷಾಂತರ ಯಹೂದಿಗಳನ್ನು ಜಾತಿಯ ಹೆಸರಿನಲ್ಲಿ ಅಮಾನುಷವಾಗಿ ಕೊಂದ ಜರ್ಮನಿಯ ಸರ್ವಾಧಿಕಾರಿಯಾಗಿದ್ದ ಹಿಟ್ಲರ ಆದರ್ಶವಾಗಿದ್ದಾನೆ. ಆರ್ಯ ಜನಾಂಗದ ಶ್ರೇಷ್ಠತೆಯನ್ನು ಸಾರುತ್ತ ಜನಾಂಗೀಯ ದ್ವೇಷ ಹರಡಿ ಯಹೂದ್ಯರನ್ನು ಕೊಲ್ಲಿಸಿದ ಹಿಟ್ಲರನ ಬಗ್ಗೆ ಅಭಿಮಾನ ಪಡುತ್ತ 'ಹಿಂದೂಸ್ತಾನದಲ್ಲಿ ನಮಗೆ ಕಲಿಯಲು ಇದೊಂದು ಉತ್ತಮ ಪಾಠ (A good lesson for us in Hindustan to learn and profit by)' ಎಂದು ಆರ್‌ಎಸ್‌ಎಸ್‌ನ ಗುರು ಗೋಳ್ವಲ್ಕರ ಹೇಳುತ್ತಾರೆ. ಸಮಾಜವಾದವನ್ನು ಅವರು ದ್ವೇಷಿಸುತ್ತಾರೆ. ಅಂದರೆ ಸಮಾನತೆಯನ್ನು ಅವರು ನಿರಾಕರಿಸುತ್ತಾರೆ.

ಅವರು ಇದೀಗ ಮುಂದೆ ಮಾಡುವ ಒಂದೇ ಮಂತ್ರವೆಂದರೆ ಇಸ್ಲಾಂ ಧರ್ಮದ ವಿರೋಧ. ಅದು ಪ್ರಜಾಪ್ರಭುತ್ವದ ರೀತಿಯಿಂದ ಅಲ್ಲ. ಬದಲಾಗಿ ಮುಸ್ಲಿಮರನ್ನು ಕೊಲ್ಲಬೇಕು ಎನ್ನುತ್ತಾರೆ. ಅವರ ಮುಸ್ಲಿಂ ವಿರೋಧಕ್ಕೆ ಕಾರಣ ಹಿಂದೆ ಮುಸ್ಲಿಮರು ಭಾರತದ ಮೇಲೆ ದಾಳಿ ಮಾಡಿದ್ದರು.

ಇಲ್ಲಿ ರಾಜರಾಗಿ ಅವರಿಗಿಂತ ಶ್ರೇಷ್ಠರಾದ ಹಿಂದೂಗಳನ್ನು ಆಳಿದರು. ಹಿಂದೂಗಳನ್ನು ಮತಾಂತರಿಸಿದರು. ಹಿಂದೂ ದೇವಾಲಯಗಳನ್ನು ನಾಶಮಾಡಿ ಮಸೀದಿ ಕಟ್ಟಿದರು. ಆದ್ದರಿಂದ ಈಗ ಇತಿಹಾಸವನ್ನು ಸರಿಪಡಿಸಬೇಕಾಗಿದೆ. ಇತಿಹಾಸವನ್ನು ಸರಿಪಡಿಸುವುದೆಂದರೆ ಹಿಂದೆ ಅವರು ಹೇಗೆ ಹಿಂದುಗಳನ್ನು ಮತಾಂತರಿಸಿದರೋ ಹಾಗೆ ಈಗಿನ ಮುಸ್ಲಿಮರನ್ನು ಹಿಂದೂ ಧರ್ಮಕ್ಕೆ ಮತಾಂತರಿಸಬೇಕು. ಅದು ಹೇಗೆಂದರೆ, ಹೀಗೆ ಮತಾಂತರ ಹೊಂದಿದವರು ಅವರ ಹಿಂದಿನ ಮೂಲ ತಲೆಮಾರಿನವರು ಯಾವ ಜಾತಿ, ಸಂಸ್ಕೃತಿಯನ್ನು ಪಾಲಿಸುತ್ತಿದ್ದರೊ ಅದೇ ಜಾತಿಗೆ ಮರಳಬೇಕು. ಇಲ್ಲದಿದ್ದರೆ ಹಿಂದುಗಳು ಒಟ್ಟಾಗಿ ಅವರನ್ನು ಕೊಲ್ಲಬೇಕು.

ಹಿಂದೆ ದೇವಸ್ಥಾನ ಇರಬಹುದಾದ ಸ್ಥಳದಲ್ಲಿ ಮಸೀದಿ ಇದೆ ಎಂದು ಕಂಡುಬಂದರೆ ಆ ಮಸೀದಿಯನ್ನ ಕೆಡುಹಿ ಅಲ್ಲಿ ದೇವಸ್ಥಾನ ಕಟ್ಟಬೇಕು. ಈ ಕಾರಣದಿಂದ ಅಯೋಧ್ಯೆಯ 500 ವರ್ಷ ಹಳೆಯದಾದ ಬಾಬರಿ ಮಸೀದಿಯನ್ನು ಕೆಡುಹಲಾಯಿತು. ಅದು ರಾಮ ಹುಟ್ಟಿದ ಸ್ಥಳ, ಅಲ್ಲಿ ರಾಮಮಂದಿರ ಕಟ್ಟಬೇಕೆಂಬುದು ಹಿಂದುತ್ವವಾದಿಗಳ ನಿರ್ಧಾರ. ಈ ವಿಷಯವಾಗಿ ಸಂವಿಧಾನ, ಕಾನೂನು, ನ್ಯಾಯಾಲಯ ಒಂದೂ ಅವರಿಗೆ ಸಂಬಂಧಕ್ಕೆ ಬರಲಾರದು. ಸಮಾನತೆ, ಸಮಾಜವಾದವನ್ನು ಸಾರುವ ಸಂವಿಧಾನ ಸರಿಯಲ್ಲ. ಸಂವಿಧಾನವನ್ನು ಬದಲಿಸಬೇಕು. ಇದು ಅವರ ವಾದ.

ಮುಸ್ಲಿಂ ಆಳ್ವಿಕೆಯಲ್ಲಿ ಹಿಂದೂ ಮತಾಂತರವಾಗಲಿ, ದೇವಸ್ಥಾನ ನಾಶ, ಸುಲಿಗೆ ನಡೆಯಲೇ ಇಲ್ಲವೆಂದಾಗಲಿ ಹೇಳಿದರೆ ಸತ್ಯವಾಗಲಾರದು. ಆದರೆ ಅಂಥ ಕ್ರಿಯೆ ಎರಡು ರಾಜರುಗಳ ಮತ್ತು ರಾಜ್ಯಗಳ ಮಧ್ಯೆ ನಡೆದ ಯುದ್ಧ, ನಾಶ ಅದಾಗಿದೆ. ಅಂಥವು ಹಿಂದೂ ರಾಜರ ಮಧ್ಯೆಯೂ ನಡೆದಿದೆ. ಆದರೆ ಮುಸ್ಲಿಂ ಇತಿಹಾಸವೆಂದರೆ ಹಿಂದುಗಳ ಕೊಲೆ, ದೇವಸ್ಥಾನದ ನಾಶ ಇತ್ಯಾದಿ ಎಂದೇ ತಿಳಿಯಬೇಕಿಲ್ಲ. ಮುಸ್ಲಿಂ ಆಡಳಿತದಲ್ಲಿ ಹಿಂದೂಗಳು ಉನ್ನತ ಹುದ್ದೆಯಲ್ಲೂ ಇದ್ದರು. ಉದಾರವಾದ ಅರಸರೂ ಇದ್ದರು. ಭಾರತದ ತಳದ ಆಡಳಿತದಲ್ಲಿ ಅವರು ಕೈಹಾಕಿದ್ದು ಅಪರೂಪ. ಮುಸ್ಲಿಂ ಕಾಲದ ಇತಿಹಾಸದ ಬಗ್ಗೆ ಏಕಪಕ್ಷೀಯವಾದ ಹೇಳಿಕೆ ಅಪಾಯಕಾರಿ. ಆ ಕಾಲದ ನಿಜಸ್ಥಿತಿಯ ಕುರಿತು ಖ್ಯಾತ ಚಿಂತಕ ಜಿ. ರಾಜಶೇಖರ ಹೇಳುವುದ ನೋಡಿ.

> "ಇವತ್ತು ನಮ್ಮ ತರಗತಿಗಳಿಗೆ ಬೋಧಿಸುವ ಮಧ್ಯಯುಗದ ಚರಿತ್ರೆ ಎಂದರೆ ಮುಸ್ಲಿಂ ರಾಜರ ಆಳ್ವಿಕೆಯ ಚರಿತ್ರೆ ಮಾತ್ರ. ಇದು ಕೂಡ ಸುಳ್ಳು ಮತ್ತು ಅರ್ಧಸತ್ಯಗಳಿಂದ ತಿರುಚಲ್ಪಟ್ಟ ಚರಿತ್ರೆ. ಮಧ್ಯಯುಗದ ಮುಸ್ಲಿಂ ಅರಸರ ರಾಜಕಾರಣಕ್ಕೂ ಇಸ್ಲಾಂ ಧರ್ಮಕ್ಕೂ ನಡುವೆ ಮತಭೇದ, ಬಿಕ್ಕಟ್ಟುಗಳು ಇರಲೇ ಇಲ್ಲ ಎನ್ನುವುದು ಒಟ್ಟಾರೆಯಾಗಿ ಇಂತಹ ಚರಿತ್ರೆಯ ಧೋರಣೆ. ಇಸ್ಲಾಂ ಧರ್ಮ ಸದಾ ಆಕ್ರಮಣಶೀಲವಾದದ್ದು ಈ ದೇಶದ ಇತರ ಮತಧರ್ಮಗಳನ್ನು ಅದು ಒಟ್ಟಾಗಿ ಎದುರಿಸಿತ್ತು, ಹಾಗೂ ಆ ಧರ್ಮದ ಒಳಗೆ ಬಂಡಾಯಗಳೇ ಇರಲಿಲ್ಲ ಎನ್ನುವುದೂ ಕೂಡ ನಮ್ಮ ಚರಿತ್ರೆಯ ಪುಸ್ತಕಗಳಲ್ಲಿ ಅಂತರ್ಗತವಾಗಿ ಇರುವ ಧೋರಣೆ. ಆದರೆ ಈ ಧೋರಣೆ. ಮಧ್ಯಯುಗದ ಭಾರತದ ಅನೇಕ ಮುಖ್ಯ ಸಂಗತಿಗಳತ್ತ ಕುರುಡಾಗಿದೆ. ಮುಸ್ಲಿಂ ರಾಜಕಾರಣ ಮತ್ತು ಇಸ್ಲಾಂ ಧರ್ಮ ಒಂದು ಇನ್ನೊಂದಕ್ಕೆ ಪರ್ಯಾಯವಲ್ಲ. ಇಸ್ಲಾಂ ಧರ್ಮದ ಒಳಗೆ ತಾತ್ವಿಕ ಸಂಘರ್ಷಗಳು ಇರಲಿಲ್ಲ ಎನ್ನುವುದೂ ಕೂಡಾ ಸತ್ಯವಲ್ಲ. ಆದರೆ ಪೂರ್ವಾಗ್ರಹದ ಕುರುಡು ಪಟ್ಟಿ ಕಟ್ಟಿಕೊಂಡವರು ಚರಿತ್ರೆ ಮತ್ತು ವರ್ತಮಾನದ ಬದುಕಿನಲ್ಲಿ ತಮ್ಮ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಇರುವ ಸತ್ಯವನ್ನು ಕಾಣಲಾರರು. ಕರ್ನಾಟಕದ ಸೂಫಿಗಳ ಬಗ್ಗೆ ಮಹಾಪ್ರಬಂಧವೊಂದನ್ನು ಇಂಗ್ಲಿಷ್

ಭಾಷೆಯಲ್ಲಿ ಅಮೇರಿಕದ ಚರಿತ್ರಕಾರರೊಬ್ಬರು ಬರೆದಿರುವುದು ಇದ್ದುದರಲ್ಲಿಯೇ ನಾವು ಸಂತೋಷಪಟ್ಟು ಕೊಳ್ಳಬಹುದಾದ ವಿಷಯ"

(ಸಾಹಿತ್ಯ ವಿಮರ್ಶೆ, ಸಾಹಿತ್ಯ ಅಕಾಡೆಮಿ 1988; 134)

ಸೂಫಿ ಪಂಥ ಎನ್ನುವುದು ಹಿಂದೂಗಳಲ್ಲಿಯ ಭಕ್ತಿ ಪಂಥದ ಚಳವಳಿ ಇದ್ದಹಾಗೆ. ಈ ಸೂಫಿಗಳು ತಾವು ಬದುಕಿದ ಪರಿಸರದೊಡನೆ ಒಂದಾಗಿ ಹೋದವರು ಹಿಂದೂ, ಮುಸ್ಲಿಂ ಎಂಬ ಭೇದವಿಲ್ಲದೆ ಬಡ ಜನರ ಬದುಕಿಗೊದಗಿದರು. ಅವರು ಹಿಂದೂ-ಮುಸ್ಲಿಂ ಧರ್ಮದ ಸಮನ್ವಯದ ಸೇತುವೆಯಾದರು. ಕರ್ನಾಟಕದಲ್ಲಿಯ ಸೂಫಿಗಳ ಬಗ್ಗೆ ಡಾ. ರಹಮತ್ ತರೀಕೆರೆ 'ಕರ್ನಾಟಕದ ಸೂಫಿಗಳು' (1999) ಎಂಬ ಗ್ರಂಥವನ್ನೇ ಬರೆದಿದ್ದಾರೆ.

ಸೂಫಿಗಳು ಮಡಿವಂತ ಮುಸ್ಲಿಮರ ವಿರುದ್ಧ ಬಂಡೆದ್ದವರು. ಅವರದು ಗುರುಶಿಷ್ಯ ಪರಂಪರೆ, ಏಕಾಂತಧ್ಯಾನ, ಹುಚ್ಚರ ಹಾಗೆ ವರ್ತನೆ, ಸರಳವಾದ ಬದುಕು. ಅವರು ಹೇಗೆ ಏಕಾಂತವಾಸಿಗಳೋ ಹಾಗೆ ಜನಪ್ರೇಮಿಗಳೂ ಹೌದು. ಸೂಫಿಗಳಲ್ಲಿ ಅನೇಕ ಶಾಖೆಗಳೂ ಇವೆ. ಸೂಫಿಗಳು ರಾಜಾಶ್ರಯ ದೊರಕಿ, ಮತಮಾನ್ಯವಾದಾಗ ಅವರ ವಿರುದ್ಧವೇ ಬಂಡೆದ್ದವರು ದರ್ವೇಶಿ ಸೂಫಿಗಳು. ಒಟ್ಟಂದದಲ್ಲಿ ಸೂಫಿಗಳು ಕವಿಗಳು, ವಿದ್ವಾಂಸರು, ವಿರಕ್ತರು, ಸಂಸಾರಿಗಳು, ಶಾಸ್ತ್ರಕಾರರು, ಸಂಗೀತಗಾರರು, ಬಹು ಮುಖ್ಯವಾಗಿ ಅನುಭಾವಿಗಳು.

ಸೂಫಿ ಪಂಥಕ್ಕೂ ಭಕ್ತಿಪಂಥಕ್ಕೂ ಹಾಲು ಸಕ್ಕರೆ ಒಂದಾದಂಥ ಸಂಬಂಧ ಉಂಟಾಗಿದೆ. ಇದು ದೇಶವ್ಯಾಪಿ ಆದಂತಹದು. 14ನೇ ಶತಮಾನದಲ್ಲಿ ಕಾಶ್ಮೀರದಲ್ಲಿ ಶೈವ ಭಕ್ತಿಪಂಥಕ್ಕೂ ಸೂಫಿಗಳಿಗೂ ಸಂಬಂಧ ಬಂತು. ಯೋಗಿನಿ ಲಲ್ಲೇಶ್ವರಿ ಮತ್ತು ಸೂಫಿ ಸಂತರಾದ ನುಂದ ಮತ್ತು ಬಾಬಾ ನಸರುದ್ದೀನರ ಮಧ್ಯೆ ಆಧ್ಯಾತ್ಮಿಕ ಚರ್ಚೆ ನಡೆದ ದಾಖಲೆಗಳಿವೆ.

"ಶಿವ ಸರ್ವಾಂತರ್ಯಾಮಿಯಾಗಿದ್ದಾನೆ
ಹಿಂದೂ ಮುಸಲ್ಮಾನರನು ಬೇರೆಬೇರೆಯಾಗಿ ಭಾವಿಸದಿರು!"

('ಮಹಾಯೋಗಿ ಲಲ್ಲೇಶ್ವರಿ', ಡಾ. ಪಂಚಾಕ್ಷರಿ ಹಿರೇಮಠ, ದ್ವಿ.ಮು. 2000)

ಎಂದಿದ್ದಾಳೆ ಲಲ್ಲೇಶ್ವರಿ.

ಕರ್ನಾಟಕದಲ್ಲಿ ಮಹಿಪತಿದಾಸ ಎಂಬ ಬ್ರಾಹ್ಮಣ ಸಂತನ ಗುರು ಮಹಷಂಗ್ ಎಂಬ ಸೂಫಿ ಸಂತನಾಗಿದ್ದಾನೆ. ಕರ್ನಾಟಕದಲ್ಲಿ ಪ್ರಸಿದ್ಧವಾಗಿರುವ ನಾಥಪಂಥ, ದತ್ತಾತ್ರೇಯ ಪಂಥ, ಕಾಡಸಿದ್ಧ ಪರಂಪರೆ, ಸಿದ್ಧಪಂಥದೊಡನೆ ಸೂಫಿಗಳ ಸಂಬಂಧ ಸ್ಥಾಪಿತವಾಯಿತು. ವೀರಶೈವ ಧರ್ಮದೊಡನೆಯ ಸಂಬಂಧ ಇನ್ನೂ ಹೆಚ್ಚು. ಕೊಡೆಕಲ್ ಪರಂಪರೆ, ತಿಂತಿಣಿ ಮೋನಪ್ಪ, ಸಾವಳಗಿ ಶಿವಲಿಂಗ, ಶಿರಹಟ್ಟಿ ಫಕೀರೇಶ್ವರ ಮುಂತಾದ ಪರಂಪರೆಯೊಡನೆ ಅವರ ಬೆಸುಗೆ ಧರ್ಮಭೇದವಿಲ್ಲದ್ದು. ಒಬ್ಬರ ಅವತಾರ ಒಬ್ಬರು ಎನ್ನುವಂತಹದು. 'ದರ್ಗಾ' ಎಂದರೆ ಸೂಫಿ ಸಂತರ ಸಮಾಧಿ ಸ್ಥಳ. ಜನಪದ ದೇವಸ್ಥಾನಗಳಂತೆ ಸರಳವಾದುದು. ಇದು ಹಿಂದು-ಮುಸಲ್ಮಾನರಿಬ್ಬರಿಗೂ ಪವಿತ್ರ ಸ್ಥಳ. ಗಮನಿಸಲೇ ಬೇಕಾದ ಸಂಗತಿಯೆಂದರೆ ಇದು ಬಡವರ ಯಾತ್ರಾ ಸ್ಥಳ. ಸೂಫಿ ಅನುಭಾವಿಗಳು ಬಡವರೊಡನೆ ಬೆರೆತು ಬದುಕಿದವರು. ಬಡವರಿಗೆ

ಜಾತಿ-ಧರ್ಮದ ಭೇದವಿಲ್ಲ. ಅವರಿಗೆ ಬದುಕು ಮುಖ್ಯ. ಬದುಕೇ ಧರ್ಮ-ದೇವರು. ದರ್ಗಾದಲ್ಲಿ ಅವರಿಗೆ ಮನಶ್ಶಾಂತಿ ದೊರಕುತ್ತದೆ. ಇದು ಭಾರತದಾದ್ಯಂತ ಹರಡಿದೆ. ಅಂತಹದೆ ಒಂದು ದರ್ಗಾ ಚಿಕ್ಕಮಗಳೂರು ಜಿಲ್ಲೆಯ ಬಾಬಾ ಬುಡನ್‌ಗಿರಿ. ಅಲ್ಲಿ ಸೂಫಿ ಸಂತನೋರ್ವನ ಸಮಾಧಿ ಹಾಗೂ ದತ್ತಾತ್ರೇಯ ಪೀಠ ಒಂದೇ ಬದಿಗಿದೆ. ಅದಕ್ಕೆ ಮುಸ್ಲಿಮನೇ ವ್ಯವಸ್ಥಾಪಕ. ನೂರು ವರ್ಷಗಳಿಂದ ಹಿಂದು-ಮುಸ್ಲಿಂ ಎನ್ನದೆ ಅಲ್ಲಿ ಹೋಗಿ ಲೋಬಾನ ಹಾಕಿಯೋ, ಕಾಯಿ ಹಣ್ಣು ಒಪ್ಪಿಸಿಯೋ ಸಾವಿರಾರು ಭಕ್ತರು ತಮ್ಮ ಹರಕೆಯನ್ನು ಸಲ್ಲಿಸುತ್ತಿದ್ದರು. ಅದು ಭಾರತದಲ್ಲೇ ಹಿಂದೂ ಮುಸ್ಲಿಂ ಸ್ನೇಹ ಸಾಮರಸ್ಯದ ಸಂಕೇತವಾದುದು. ಆದರೆ ಈಗ ಹಿಂದುತ್ವವಾದಿಗಳು ಅಲ್ಲಿ ಪ್ರವೇಶಿಸಿ ಹಿಂದೂ ಮುಸ್ಲಿಂ ಸಾಮರಸ್ಯವನ್ನು ಕೆಡಿಸುತ್ತಿದ್ದಾರೆ. ಎಂದೆಂದೂ ಹೋಗದ ಈ ಶ್ರೀಮಂತರು ಈಗ ಅಲ್ಲಿ ಹೋಗಿ ಬಡವರ ಬದುಕಿನ ಮಧ್ಯೆ ಬೆಂಕಿ ಹಾಕುತ್ತಿದ್ದಾರೆ. ಹೋಮ-ಹವನ, ದತ್ತಾತ್ರೇಯ ಪೀಠ ಬೇರೆಯಾಗಬೇಕು. ಮುಸ್ಲಿಂ ಧರ್ಮಾಧಿಕಾರಿ ಬದಲಾಗಬೇಕು - ಇತ್ಯಾದಿ ಗುಲ್ಲೆಬ್ಬಿಸಿ ಕೋಮುಗಲಭೆಯನ್ನೆಬ್ಬಿಸುತ್ತಿದ್ದಾರೆ. ವಿಶ್ವ ಹಿಂದೂ ಪರಿಷತ್ತಿನ ಅಂತಾರಾಷ್ಟ್ರೀಯ ಕಾರ್ಯದರ್ಶಿ ಪ್ರವೀಣ್ ತೊಗಾಡಿಯಾ ಅಯೋಧ್ಯೆಯ ಬಾಬರಿ ಮಸೀದಿಯಲ್ಲಿ ನಡೆಸಿದಂಥ ಗಲಭೆಯನ್ನೇ ಇಲ್ಲಿ ನಡೆಸುತ್ತೇವಾಗಿ ಹೇಳುತ್ತಾನೆ. ಯಾವುದೇ ಚರಿತ್ರೆ, ಸಂಸ್ಕೃತಿ ವಿಕಸನಗೊಳ್ಳುತ್ತ, ಬೆಳೆಯುತ್ತ, ವಿಶಾಲವಾದ ಅಖಂಡವಾದ ಮಾನವೀಯತೆ ಯನ್ನ ಬೆಳೆಸುತ್ತ ಹೋಗಬೇಕೇ ಹೊರತು ಮತ್ತೆ ಸಾವಿರ ವರ್ಷದ ಹಿಂದಿನ ಚರಿತ್ರೆಗೆ ಮರಳುವುದೆಂದರೆ ನಮ್ಮ ವಿನಾಶವನ್ನು ನಾವೇ ಮಾಡಿಕೊಂಡಂತಾಗುತ್ತದೆ. ಸೂಫಿ ಮತ್ತು ಭಕ್ತಿಪಂಥ ಸಾಧಿಸಿದ ಹಿಂದೂ ಮುಸ್ಲಿಂ ಸಾಮರಸ್ಯ ನಮಗೆ ಮುಂದಿನ ಬೆಳವಣಿಗೆಗೆ ಹಾದಿಯಾಗಬೇಕು. ನಮ್ಮ ಬಡಜನತೆ ಸಾಧಿಸಿದ್ದ ಸಾಮರಸ್ಯಕ್ಕೆ ಅವರೇ ಹಾಡಿದ ಹಾಡೊಂದರ ಉದಾಹರಣೆ ಇಲ್ಲಿದೆ.

> "ಹುಸೇನಿ ಸಾಹೇಬರ ಬದಿಯಲಿ ಹೋಗಿ
> ಹಸನರಾಗಿ ನಾವು ಬಂದೇವು
> ಮಸೂದಿಯೊಳಗಿನ ಮೂಲವ ತಿಳಿದು
> ದೀನದಯಾಳ ನೆನೆದೇವು.
> ಲಾಡ ಬಂಧನದ ಲಾಡಿಯ ಕಟ್ಟಿ
> ಓಡ್ಯಾಡು ಪಂಜೆಯ ಹಿಡಿದೇವೊ
> ಸೂರ್ಯಚಂದ್ರರು ಎಂದಿಗೆ ಇಲ್ಲಾ
> ಅಂದೊಬ್ಬ ಪೀರನ ಕಂಡೇವೊ...." (*'ಕರ್ನಾಟಕದ ಸೂಫಿಗಳು', ಪು. 63*)

ಹಾಡು ಹೀಗೆ ಮುಂದುವರಿಯುತ್ತದೆ.

ಸ್ವಾತಂತ್ರ್ಯ ಹೋರಾಟದ ಗುಂಟ ಮೂರನೆಯದೊಂದು 'ದಲಿತ ರಾಷ್ಟ್ರೀಯತೆ' ಬೆಳೆದು ಕೊಂಡೇ ಬಂದಿದೆ.

ಹಿಂದೂ ಧರ್ಮದಲ್ಲಿ ಚಾತುರ್ವರ್ಣದ ಜೊತೆಗೆ ಪಂಚಮ ವರ್ಣವೊಂದು 'ಶೂದ್ರ'ದಲ್ಲಿ ಶೂದ್ರಕ್ಕಿಂತ ಕಡೆಯದಾಗಿ ಉಂಟಾಯಿತು. ಅವರು ಅಸ್ಪೃಶ್ಯರಾದರು. ಜೀತದವರಾದರು. ಈ

ದಲಿತರಿಗೆ ವಿಮೋಚನೆಯ ದಾರಿ ಸಿಕ್ಕಿದ್ದು ಬ್ರಿಟಿಷ್ ವಸಾಹತುಶಾಹಿ ಅಡಿಯಲ್ಲಿ. ಅಂಬೇಡ್ಕರರಿಗಿಂತ ನೂರು ವರ್ಷ ಪೂರ್ವದಲ್ಲೇ ಮೂಡಿಬಂದ ಮಹಾತ್ಮಾ ಜ್ಯೋತಿಬಾ ಫುಲೆ ಮಹಾರಾಷ್ಟ್ರದವರು. ಅವರು ಆಗಿನ ವೈದಿಕಶಾಹಿಯನ್ನು ಖಂಡಿಸಿ, ಜನ ಸಂಘಟನೆ ಮಾಡಿ, ಸಂಘಟನೆ, ಬರಹಗಳ ಮೂಲಕ ಆಂದೋಲನ ಶುರು ಮಾಡಿದರು. ಆಗಿನ ಮಹಾರಾಷ್ಟ್ರದ ಬ್ರಾಹ್ಮಣ ಆಳರಸರಾದ ಪೇಶ್ವೆಗಳ ಕಾಲ. ಕೆಳಜಾತಿಯವರಿಗೂ, ಮಹಿಳೆಯರಿಗೂ ಬಹಳ ಕೆಟ್ಟ ಕಾಲ. ಆ ಮಧ್ಯೆ ಫುಲೆ ಧೀಮಂತರಾಗಿ ನಿಂತವರು. ವಿಧವೆಯರಿಗಾಗಿ, ಹೆಣ್ಣು ಮಕ್ಕಳಿಗಾಗಿ, ಅಸ್ಪೃಶ್ಯರಿಗಾಗಿ ಶಾಲೆ ತೆಗೆದರು. ಅವರು ಕೇವಲ ದಲಿತರ ಕುರಿತಷ್ಟೇ ನೋಡದೆ, ತುಳಿತಕ್ಕೊಳಗಾದವರ ಬಗ್ಗೆಲ್ಲ ಹೋರಾಡಿದ ಮಹಾ ಪ್ರಜಾಪ್ರಭುತ್ವವಾದಿಗಳಾಗಿದ್ದರೆಂದು ಚಿಂತಕ ಬಿ.ಟಿ. ರಣದಿವೆ ಹೇಳುತ್ತಾರೆ.

ಅದೇ ತಾತ್ವಿಕ ಹಿನ್ನೆಲೆಯಲ್ಲಿ ಹೆಸರಿಗೆ ತಕ್ಕಂತೆ ಭೀಮನಾಗಿ ದಲಿತರ ಪರ ನಿಂತು ಡಾ. ಬಿ.ಆರ್. ಅಂಬೇಡ್ಕರ್ ಹೋರಾಡಿದರು. ಸ್ವಾತಂತ್ರ್ಯ ಹೋರಾಟಗಾರರ ಬೂರ್ಜ್ವಾ ಉದಾರವಾದಿ ನಾಯಕರೆಂದು ಹೆಸರಾದ ಮಹಾತ್ಮಾಗಾಂಧಿ ವಿರುದ್ಧವಾಗಿ ಅವರು ಸೆಣೆಸಬೇಕಾಯಿತು. ಯಾಕೆಂದರೆ ಗಾಂಧೀಜಿಗೆ ಭಾರತ ಸ್ವಾತಂತ್ರ್ಯ ಬಹು ಮುಖ್ಯವಾಗಿತ್ತು. ಆದರೆ ಅಂಬೇಡ್ಕರ ಅವರ ಸ್ವಾತಂತ್ರ್ಯ ದಲಿತರ ದಾಸ್ಯ ವಿಮೋಚನೆಯ ಸಂಗಡವೇ ಅಥವಾ ದಲಿತರ ಸಮಾನತೆಯ ಅವಕಾಶ-ಹಕ್ಕಿನೊಡನೆಯೇ ಬರಬೇಕೆಂದಿತ್ತು.

> **"...ಎಲ್ಲಿಯವರೆಗೆ ದಲಿತ ವರ್ಗಗಳ ಕೈಗೆ ಅಧಿಕಾರ ಬರುವುದಿಲ್ಲವೋ ಅಲ್ಲಿಯವರೆಗೂ ಅವರ ಸಮಸ್ಯೆಗಳು ಬಗೆಹರಿಯುವುದಿಲ್ಲ. ದೇಶದ ಸಾರ್ವತ್ರಿಕ ರಾಜಕೀಯ ಸಮಸ್ಯೆಯ ಜೊತೆಯಲ್ಲೇ ದಲಿತರ ಸಮಸ್ಯೆ ಕೂಡ ಇತ್ಯರ್ಥವಾಗಬೇಕಿದೆ. ಬದಲಾಗಿ, ದೇಶದ ಅಧಿಕಾರದ ಹಸ್ತಾಂತರದ ನಂತರ ಹಿಂದೂ ಸಾಮ್ರಾಜ್ಯವಾದಿಗಳ ದಾಕ್ಷಿಣ್ಯದಲ್ಲಿ ದುರ್ಬಲರ ಸಮಸ್ಯೆಗೆ ಪರಿಹಾರ ಹುಡುಕಲು ನಾವು ತಯಾರಿಲ್ಲ...."** *(ಉದ್ಧರಣ : 'ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಂಬೇಡ್ಕರ್', ಡಾ. ಮ.ನ. ಜವರಯ್ಯ, 2001, ಪುಟ : 79)*

ಎಂದು ಅಂಬೇಡ್ಕರ್ ಹೇಳಿದರು.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಮೂರು ಸಂಗತಿಗಳಿವೆ. ಮೊದಲನೆಯದಾಗಿ ಸ್ವಾತಂತ್ರ್ಯಾನಂತರ ಹಿಂದೂ ಸಾಮ್ರಾಜ್ಯವಾದಿಗಳ ದಾಕ್ಷಿಣ್ಯದಲ್ಲಿ ದುರ್ಬಲರ ಸಮಸ್ಯೆಗೆ ಪರಿಹಾರ ಹುಡುಕುವುದು.

ಇದು ಅವರ ಮುಂಧೋರಣಿ ಎಷ್ಟು ಸತ್ಯ ಎಂಬುದು ನಮಗೆ ಈಗ ಹೆಚ್ಚು ತಿಳಿದಿದೆ. ಅಂಬೇಡ್ಕರರು ಹೆಸರಿಸಿದ ಹಿಂದೂ ಸಾಮ್ರಾಜ್ಯ ಎನ್ನುವುದೇ 'ಹಿಂದುತ್ವ'ದ ಸಾಮ್ರಾಜ್ಯ. ಯಾವ ಮನುಸ್ಮೃತಿಯನ್ನು ಶೂದ್ರ ವಿರೋಧಿ ಗ್ರಂಥ ಎಂದು ಅಂಬೇಡ್ಕರರು ಪ್ರತಿಭಟಿಸಿ, ಸಾರ್ವಜನಿಕವಾಗಿ ಸುಟ್ಟರೋ ಅದೇ ಸ್ಮೃತಿ ತತ್ತ್ವವನ್ನೇ ಈಗಿನ 'ಹಿಂದುತ್ವವಾದಿ'ಗಳು ಸಾರುತ್ತಿದ್ದಾರೆ. ಅದು ಅವರ ಗುಪ್ತ ಕಾರ್ಯಕ್ರಮ. 'ಹಿಂದುತ್ವವಾದ' ಈಗ ಒಂದು ಕೇವಲ 'ವಾದ'ವಾಗಿ ನಮ್ಮ ಮುಂದೆ ಇಲ್ಲ. ಬದಲಾಗಿ ಅದು ಅಧಿಕಾರ ಪಡಕೊಂಡಿದೆ. ಎರಡನೆಯದಾಗಿ 'ದಲಿತ-ದುರ್ಬಲರ ಸಮಸ್ಯೆ ದೇಶದ ಸಾರ್ವತ್ರಿಕ ರಾಜಕೀಯ ಸಮಸ್ಯೆಯ ಜೊತೆಗೇ ಬಗೆಹರಿಯಬೇಕಿದೆ' ಇದು ಸಾಂಸ್ಕೃತಿಕವಾದಂತೆ ರಾಜಕೀಯವೂ ಆಗಿದೆ. ಇದೀಗ 'ಹಿಂದುತ್ವ' ಕೇಂದ್ರದಲ್ಲಿ ಅಧಿಕಾರ

ಹಿಡಿಯುವ ಮೊದಲು ಕಾಂಗ್ರೆಸ್ ಅಧಿಕಾರದಲ್ಲಿತ್ತು. ಇಂದಿಗೂ ಬಿ.ಜೆ.ಪಿ.ಗೆ ಪ್ರತಿಪಕ್ಷ ಅದೇ. ದೇಶದ ಹೆಚ್ಚಿನ ರಾಜ್ಯಗಳಲ್ಲಿ ಅನೇಕ ಪಕ್ಷಗಳು ಇವೆ. ಕಾಂಗ್ರೆಸ್‌ಗೆ ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟ ಪಕ್ಷ ಎಂಬ ಕೀರ್ತಿ ಇದೆ. ಆದರೆ ಅದು ದೇಶದ ಬಡವರ-ದಲಿತರ ಸಮಸ್ಯೆಯನ್ನು ಏಕೆ ಬಗೆಹರಿಸಲಿಲ್ಲ? ಅದಕ್ಕೆ ನೂರೊಂದು ಉತ್ತರವನ್ನು ಹೇಳಬಹುದು. ಹೋಗಲಿ, ದೇಶದಲ್ಲಿ ಭೂಸುಧಾರಣೆಯು ಇದ್ದರೂ ಸಾಧ್ಯಗೊಳಿಸಿತೆ? ಇಲ್ಲ, ಯಾಕೆಂದರೆ ಅದು ಊಳಿಗಮಾನ್ಯ ಪ್ರಭುಗಳ ಬಂಡವಾಳಶಾಹಿಗಳ ಪಕ್ಷವಾಗಿದೆ. ಈಗಂತೂ ಅದು ತನ್ನ ಉದಾರತೆಗೂ ನೀರು ಬಿಟ್ಟಿದೆ.

ಆದರೆ ಅದು ಇಂದಿಗೂ ಸೆಕ್ಯುಲರ್ ಪಕ್ಷವೆಂದೇ ಹೆಸರಾಗಿದೆ. ಆದರೆ ಬಂಡವಾಳಶಾಹಿ - ಊಳಿಗಮಾನ್ಯ ಪ್ರಭುಗಳ ಮುಖವಾಡವಾದ ಅದು ತನ್ನ ಮೊದಲಿನ ಸೆಕ್ಯುಲರಿಸಂಗೆ ಸಹ ತಿಲಾಂಜಲಿ ಕೊಡುತ್ತ ಬಂದಿದೆ. ರಾಜೀವಗಾಂಧಿ ಅವರು ಪ್ರಧಾನಿಯಾಗಿದ್ದಾಗ ಶಹಬಾನು ಎಂಬ ಮುಸ್ಲಿಂ ಮಹಿಳೆಗೆ ಗಂಡ ತಲಾಖ್ (ವಿಚ್ಛೇದನೆ) ನೀಡಿದ. ಆಕೆ ನ್ಯಾಯಾಲಯ ಹತ್ತಿದಾಗ ಸರ್ವೋಚ್ಚ ನ್ಯಾಯಾಲಯ ಜೀವನಾಂಶ ಕೊಡುವಂತೆ ಗಂಡನಿಗೆ ವಿಧಿಸಿತು. ಆಗ ಕೆಲ ಮತೀಯವಾದಿಗಳು ಗುಲ್ಲೆಬ್ಬಿಸಿದರು. ರಾಜೀವಗಾಂಧಿ ಮುಸ್ಲಿಂ ವೋಟು ಗಳಿಕೆಯ ಆಶೆಯಿಂದ ಮುಸ್ಲಿಂ ಮಹಿಳೆಯರಿಗೆ ಪರವಾಗುವಂಥ ಪ್ರಗತಿಪರ ತೀರ್ಪಿನ ವಿರುದ್ಧ ಸಂವಿಧಾನ ತಿದ್ದುಪಡಿ ಮಾಡಿ ತೀರ್ಪನ್ನು ನಿರರ್ಥಕಗೊಳಿಸಿದರು. ಕೂಡಲೇ ಹಿಂದುತ್ವವಾದಿಗಳು 'ಹಿಂದೂ' ಹೆಸರಿನಲ್ಲಿ ಗುಲ್ಲೆಬ್ಬಿಸಿದೊಡನೆ ಅವರ ವೋಟು ತಪ್ಪಿಬಿಡಬಹುದೆಂದು ಅವರನ್ನು ತುಷ್ಟಿಗೊಳಿಸಲೆಂದು ಅವರ ಬೇಡಿಕೆಯಾದ ಬಾಬರಿ ಮಸೀದಿಯ ಬೀಗ ತೆಗೆಸಿ ಅಲ್ಲಿಯೇ ನಿರ್ಮಿತವಾದ ರಾಮ ಮೂರ್ತಿಗೆ ಪೂಜೆ ಸಲ್ಲಿಸಲು ಅವಕಾಶ ಮಾಡಿಕೊಟ್ಟರು. ಇದರಿಂದ ಮಸೀದಿ ನಾಶ ಮತ್ತು ಕೊಲೆ-ರಕ್ತಪಾತ ನಡೆದವು. ಅಜ್ಜ-ನೆಹರು-ಯಾವುದಕ್ಕೆ ಬೀಗ ಹಾಕಿಸಿದ್ದರೊ ಮೊಮ್ಮಗ ಅದನ್ನು ತೆಗೆಸಿದರು!

ಅಧಿಕಾರಕ್ಕಾಗಿ ಯಾರು ಎಷ್ಟೇ ಹೀನ ಕೆಲಸ ಮಾಡಲೂ ಜನವಿರೋಧಿ ಕೆಲಸ ಮಾಡಲೂ, ಬಡವರ-ಶೋಷಿತರ ಬಗ್ಗೆ ನಿರ್ಲಕ್ಷ್ಯ ಮಾಡಲೂ ಹಿಂದೆಮುಂದೆ ನೋಡರೆಂಬ ಇತಿಹಾಸ ನಮ್ಮ ಮುಂದಿದೆ.

ಬಾಬರಿ ಮಸೀದಿ ಕೆಡಹುವುದು ರಾಮಮಂದಿರ ಕಟ್ಟುವುದೇ ಹಿಂದೂಗಳ ಏಕಮೇವ ಉದ್ಧಾರ ಎಂದು ರಥಯಾತ್ರೆ ಹೊರಟ ಲಾಲಕೃಷ್ಣ ಅದ್ವಾನಿ, ಅಧಿಕಾರಕ್ಕಾಗಿ ಬಾಬರಿ ಮಸೀದಿ ಬಾಗಿಲು ತೆಗೆಸಿದ ರಾಜೀವಗಾಂಧಿ, ಬಾಬರಿ ಮಸೀದಿ ಉರುಳಿಸುವಾಗ ಅಧಿಕಾರದಲ್ಲಿದ್ದ ನರಸಿಂಹರಾವ್ ಇವರೆಲ್ಲ ಒಂದೇ ಗುಂಪಿನಲ್ಲಿ ಬರುವವರು. ಇದು ಶ್ರೀಮಂತರ ವರ್ಗಸ್ವಭಾವ. ಇದಕ್ಕೆ ಧರ್ಮಭೇದವಿಲ್ಲ. ಮೊದಲು ಭಾರತದ ವಿಭಜನೆಯನ್ನು ವಿರೋಧಿಸಿದ ಜಿನ್ನಾ, ಅಧಿಕಾರ, ಅಂತಸ್ತಿನ ಆಸೆಗಾಗಿ ಮುಸ್ಲಿಂರಲ್ಲಿ ಧರ್ಮಾಂಧತೆಯನ್ನು ಪೋಷಿಸಿ ಪಾಕಿಸ್ತಾನದ ರಚನೆಗೆ ಕಾರಣರಾದರು. ಮುಸ್ಲಿಮರ ಒಂದು ಬಹುದೊಡ್ಡ ಜನವರ್ಗ ಅಲ್ಪಸಂಖ್ಯಾತರಾಗಿರುತ್ತದೆ, ಅವರಲ್ಲಿ ಬಡವರು, ಅನಕ್ಷರಸ್ತರೇ ಹೆಚ್ಚು, ಅವರ ಸಂಕಷ್ಟಗಳೇನು, ಎಂಬುದರ ಕುರಿತು

ಅವರ ಮತ್ತು ಅವರ ಸಂಗಾತಿಗಳ ಮನ ಮಿಡಿಯಲಿಲ್ಲ. ಜಿನ್ನಾ ಭಾರತದ ಅಲ್ಪಸಂಖ್ಯಾತ ಮುಸ್ಲಿಮರಿಗೆ ಏನು ಹೇಳಿದರು ಗೊತ್ತೇ? '....Jinnah in his parting massage to the Muslims of India, advised them to be loyal citizens, hoping that this would help them with majority community" (The assassination of Mahatma Gandhi By K.L. 'Gauba' 1969; page 41) ನೀವು ಭಾರತದ ನಂಬಿಗಸ್ತ ನಾಗರಿಕರಾಗಿರಿ. ಇದು ಬಹುಸಂಖ್ಯಾತರೊಡನೆಯ ನಿಮ್ಮ ಬಾಳುವೆಗೆ ಸಹಾಯಕವಾಗುತ್ತದೆ" ಎಂಬ ಉಪದೇಶವನ್ನು ಮಾಡಿ ತಾವು ಮಾತ್ರ ಪಾಕಿಸ್ತಾನದ ಗವರ್ನರರಾಗಿ ಹೊರಟು ಹೋದರು. ಆದ್ದರಿಂದ ಧರ್ಮ ಯಾವುದೇ ಇರಲಿ ಮೇಲು ಜಾತಿ ಮತ್ತು ವರ್ಗದ ಅರ್ಥಾತ್ ಊಳಿಗಮಾನ್ಯ ಮತ್ತು ಬಂಡವಾಳಶಾಹಿ ವರ್ಗದ ಮತ್ತು ಅದರ ಕೃಪಾಪೋಷಿತವಾದ ಶ್ರೀಮಂತ ವರ್ಗದ ಮನೋಭಾವಗಳು ಒಂದೇ. ಆದ್ದರಿಂದ ಹಿಂದೂ-ಮುಸ್ಲಿಂ ಕ್ರಿಶ್ಚಿಯನ್ ಇತ್ಯಾದಿ ನೋಡದೆ ಬಡವರೆಲ್ಲ ಒಂದು ವರ್ಗವಾಗಿ ಹೋರಾಡಬೇಕಾಗುತ್ತದೆ. ಆಗ ಇದು ಬಡವರ-ದಲಿತರ ರಾಷ್ಟ್ರೀಯತೆಯ ಹೋರಾಟವಾಗುತ್ತದೆ. ಡಾ. ಅಂಬೇಡ್ಕರ್ ಹೇಳಿದ ಮೂರನೇ ಮಾತು 'ಎಲ್ಲಿಯವರೆಗೆ ದಲಿತರ ಕೈಗೆ ಅಂದರೆ ದುರ್ಬಲರ-ಬಡವರ ಕೈಗೆ ಅಧಿಕಾರ ಬರುವುದಿಲ್ಲವೋ ಅಲ್ಲಿಯವರೆಗೆ ಸಮಸ್ಯೆ ಬಗೆಹರಿಯುವುದಿಲ್ಲ.....' ಎಂಬುದು.

ಈಗ ಇಲ್ಲಿಯ ರಾಷ್ಟ್ರೀಯತೆಗಳ ತಾಕಲಾಟ ಮತ್ತು ಸಂಘರ್ಷ ಸ್ಪಷ್ಟವಾಯಿತು. ಇಲ್ಲಿ ನಮಗೆ ಮೂರು ರಾಷ್ಟ್ರೀಯತೆಗಳ ತಾಕಲಾಟ ಮತ್ತು ಸಂಘರ್ಷ ನಿಚ್ಚಳವಾಗಿ ತೋರುತ್ತದೆ.

1. 'ಹಿಂದುತ್ವ'ವಾದಿಗಳ ರಾಷ್ಟ್ರೀಯತೆ. ಅದು ಅಲ್ಪಸಂಖ್ಯಾತರ ದ್ವೇಷಿ ಹಾಗೂ ಸೆಕ್ಯುಲರ್ ವಿರೋಧಿ ಮತ್ತು ಜಾತಿ-ಧರ್ಮಗಳ ಭೇದವಿಲ್ಲದ ಸಮಾನತೆ - ಸಮಾಜವಾದಿ ತತ್ವವನ್ನು ಸಾರುವ ನಮ್ಮ ಸಂವಿಧಾನಕ್ಕೆ ವಿರೋಧಿ, ಪ್ರಗತಿ ವಿರೋಧಿಯಾಗಿದೆ. ಅಲ್ಲದೆ ಅದು ಶ್ರೀಮಂತರ, ಬಂಡವಾಳಶಾಹಿ ಪರವಾದ ರಾಜಕೀಯ ಮತ್ತು ಸಾಂಸ್ಕೃತಿಕ ನಿಲುವಿಗೆ ಬದ್ಧವಾಗಿದೆ. ಮುಖ್ಯವಾಗಿ ಅಲ್ಪಸಂಖ್ಯಾತರ, ದಲಿತರ, ಬಡವರ ವಿರೋಧಿಯಾಗಿದೆ.

2. ಕಾಂಗ್ರೆಸ್, ಜನತಾ ಮುಂತಾದ ರಾಷ್ಟ್ರೀಯ ಮತ್ತು ಪ್ರಾದೇಶಿಕ ರಾಜಕೀಯ ಪಕ್ಷಗಳು. ಇವು ಬಂಡವಾಳಶಾಹಿ, ಊಳಿಗಮಾನ್ಯ ಮತ್ತು ಮಧ್ಯಮ ವರ್ಗದ ರಾಷ್ಟ್ರೀಯತೆಯನ್ನು ಹೊಂದಿವೆ. ಮೇಲುಜಾತಿಗಳೊಡನೆ ಕೆಳಜಾತಿಗಳ, ಬಹಳ ಮುಖ್ಯವಾಗಿ ಹಿಂದುಳಿದ ಜಾತಿಗಳ ಸಂಯೋಗವೂ ಇದೆ. ಹೀಗಾಗಿ ಇದು ಅತ್ತ ಪ್ರಾಣಿಯೂ, ಇತ್ತ ಪಕ್ಷಿಯೂ ಆದ ಬಾವುಲ ಹಕ್ಕಿಯ ಥರವಾಗಿದೆ. ಆದರೆ ಇವೆಲ್ಲ ಸೆಕ್ಯುಲರ್ - ಧರ್ಮನಿರಪೇಕ್ಷಿತ - ಸಿದ್ಧಾಂತಕ್ಕೆ ಅಂಟಿಕೊಂಡಿವೆ. ತನ್ನ ಅಧಿಕಾರದ ಆಶೆಗಾಗಿ ಮತೀಯವೂ ಆಗಿಬಿಡಬಹುದಾದ ಗುಣವುಳ್ಳ ಈ ರಾಷ್ಟ್ರೀಯತೆ ಅಲ್ಪಸಂಖ್ಯಾತರ ಮತ್ತು ಕೆಳಜಾತಿ - ವರ್ಗಗಳಿಂದ ಪೋಷಣೆಯನ್ನು ಪಡೆದಿದೆ.

3. ಇದು ದಲಿತರ, ಕೂಲಿ-ಕಾರ್ಮಿಕರ, ಬಡರೈತರ, ಮಧ್ಯಮ ತರದ ಉದ್ಯೋಗಿಗಳ, ಅಲ್ಪಸಂಖ್ಯಾತರ, ಸಮಾಜವಾದಿ ಸಂಸ್ಕೃತಿಯ ರಾಷ್ಟ್ರೀಯತೆಯಾಗಿದೆ ಮತ್ತು ಸೆಕ್ಯುಲರ್‌ಗೆ

ಬದ್ಧವಾಗಿದೆ. ಇದು ಸಂಪೂರ್ಣವಾಗಿ ಹರಳುಗಟ್ಟುವುದು ಕಮ್ಯುನಿಸ್ಟ್ ಮತ್ತು ಇತರ ಎಡಪಂಥೀಯ ಪಕ್ಷಗಳಲ್ಲಿ.

ಮೊದಲನೇ ಸುತ್ತಿನ ಸಂಘರ್ಷ 'ಹಿಂದುತ್ವ' (ಮತೀಯವಾದಿ ಮತ್ತು ಸೆಕ್ಯುಲರ್) ರಾಷ್ಟ್ರೀಯತೆಯ ನಡುವೆ ನಡೆಯಬೇಕಾಗುತ್ತದೆ. ಅಂದರೆ ಹಿಂದುತ್ವವಾದವನ್ನು ಎದುರಿಸುವಾಗ ಸೆಕ್ಯುಲರ್ ಆದ ಎಲ್ಲ ರಾಷ್ಟ್ರೀಯತೆಯೂ ಒಂದಾಗಬೇಕಾಗುತ್ತದೆ. ಅಂದರೆ ಉಳಿದೆಲ್ಲ ರಾಷ್ಟ್ರೀಯತೆಗೆ 'ಹಿಂದುತ್ವ' (ಮತೀಯ) ರಾಷ್ಟ್ರೀಯತೆ ಸಮಾನ ವೈರಿಯಾಗುತ್ತದೆ. ಎರಡನೆಯ ಸುತ್ತಿನಲ್ಲಿ ಸಂಘರ್ಷ ಸೆಕ್ಯುಲರ್ ರಾಷ್ಟ್ರೀಯತೆಯನ್ನೇ ಹೊಂದಿರುವ ಮಧ್ಯಮ ಸ್ತರದ ರಾಷ್ಟ್ರೀಯತೆ ಮತ್ತು ಅದರ ಹೊರತಾದ ಎಡತಾತ್ವಿಕತೆಯ ರಾಷ್ಟ್ರೀಯತೆಯ ಮಧ್ಯೆ ನಡೆಯಬೇಕಾಗುತ್ತದೆ. ಇದು ವರ್ಗ ಹೋರಾಟವಾಗಬೇಕಾಗುತ್ತದೆ ಮತ್ತು ಕೆಳವರ್ಗದ ರಾಷ್ಟ್ರೀಯತೆ ಗೆಲ್ಲಬೇಕಾಗುತ್ತದೆ.

ಇವು ನಮ್ಮ ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಿಕ, ನೈತಿಕ ಬದುಕಿನ ಎಲ್ಲ ರಂಗದಲ್ಲಿ ಪ್ರಭಾವ - ಪರಿಣಾಮ ಬೀರುವ ರಾಷ್ಟ್ರೀಯತೆಗಳ ಸಂಘರ್ಷ ಮತ್ತು ತಾಕಲಾಟಗಳಾಗಿವೆ.

❑

ಹಿಂದೂ ಫ್ಯಾಸಿಸಂ; ಸವಾಲುಗಳು ಮತ್ತು ಸಂಘರ್ಷ

ಶಿವಸುಂದರ್

ಗುಜರಾತಿನ ನರಹತ್ಯಾಕಾಂಡ ನಡೆದು ಒಂದು ವರ್ಷವಾಯಿತು. ಕಳೆದ ಫೆಬ್ರವರಿಯಲ್ಲಿ ಗುಜರಾತಿನಾದ್ಯಂತ ಹಿಂದುತ್ವವಾದಿ ಫ್ಯಾಸಿಸ್ಟರು ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ನಡೆಸಿದ ದೌರ್ಜನ್ಯ, ಕಗ್ಗೊಲೆ, ಭೀಕರ ಅತ್ಯಾಚಾರ ನಾಗರಿಕ ಪ್ರಪಂಚವನ್ನೇ ದಿಗ್ಭ್ರಾಂತಗೊಳಿಸಿತು. ಇದು ಇತಿಹಾಸ ಬಲ್ಲ ಹಲವರಿಗೆ ಎರಡನೇ ಪ್ರಪಂಚಯುದ್ಧದ ಕಾಲಾವಧಿಯಲ್ಲಿ ಹಿಟ್ಲರನು ನಡೆಸಿದ ಯಹೂದಿಗಳ ನರಮೇಧವನ್ನು ನೆನಪಿಗೆ ತಂದಿತು.

ಗುಜರಾತಿನ ನರಹತ್ಯಾಕಾಂಡ ಇತರ ಎಲ್ಲಾ ಕೋಮುಗಲಭೆಗಳಿಗಿಂತ ಮೂಲಭೂತವಾದ ವ್ಯತ್ಯಾಸ ಹೊಂದಿರುವುದು ಮುಸ್ಲಿಮರ ಸಾವಿನ ಹಾಗೂ ಕ್ರೌರ್ಯದ ಪ್ರಮಾಣದ ಹೆಚ್ಚಳದಲ್ಲಿ ಮಾತ್ರವಲ್ಲ, ಹಾಗೆ ನೋಡಿದರೆ 1947ರ ನಂತರ ನಡೆದ ಎಲ್ಲಾ ಕೋಮುಗಲಭೆಗಳಲ್ಲಿ ಸತ್ತವರಲ್ಲಿ ಶೇ. 65ರಷ್ಟು ಮುಸ್ಲಿಮರೇ ಆಗಿದ್ದಾರೆಂದು ಸರ್ಕಾರಿ ದಾಖಲೆಗಳು ಹಾಗೂ ಧೂಳು ಕೂತಿರುವ ಹಲವಾರು ಆಯೋಗದ ವರದಿಗಳು ಸಾರಿ ಹೇಳುತ್ತವೆ. ರಾಮರಥಯಾತ್ರೆಯ ರಕ್ತಸಿಕ್ತ ಇತಿಹಾಸದ ನಂತರ 90ರ ದಶಕದಲ್ಲಿ ನಡೆದ ತಥಾಕಥಿತ ಕೋಮು ಗಲಭೆಗಳಲ್ಲಿ ಬಹುಪಾಲು ಹಿಂದೂ ಕೋಮುವಾದಿಗಳು ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ನಡೆಸಿದ ಏಕಪಕ್ಷೀಯ ದಾಳಿಗಳೇ ಆಗಿವೆ. ಇದರಿಂದಾಗಿ ಮುಸ್ಲಿಮರ ಸಾವಿನ ಪ್ರಮಾಣ ಶೇ. 90ರಷ್ಟನ್ನು ತಲುಪಿದೆ. 93ರ ಮುಂಬೈ ಗಲಭೆಗಳ ಬಗ್ಗೆ ವಿಚಾರಣೆ ನಡೆಸಿದ ಶ್ರೀ ಕೃಷ್ಣ ಆಯೋಗವೂ ಇದರ ಬಗ್ಗೆ ಆತಂಕ ವ್ಯಕ್ತಪಡಿಸಿದೆ. ಆ ಲೆಕ್ಕದಲ್ಲಿ 90ರ ದಶಕದಲ್ಲಿ 'ಕೋಮು

ಗಲಭೆಗಳೆಂದು' ನಡೆದ ಬಹುಪಾಲು 'ಅಲ್ಪಸಂಖ್ಯಾತರ ಹತ್ಯಾಕಾಂಡವನ್ನು' ಕೋಮು ಗಲಭೆಗಳೆಂದು ಕರೆಯುವುದೇ ಒಂದು ತಪ್ಪು. ಒಂದರ್ಥದಲ್ಲಿ ಅವೆಲ್ಲವೂ ಗುಜರಾತಿಗೆ ಮುನ್ನ ನಡೆದ ರಂಗತಾಲೀಮುಗಳೇ.

ಹೀಗಾಗಿ ಗುಜರಾತಿನ ನರಹತ್ಯಾ ಕಾಂಡ ಆತಂಕ ಹುಟ್ಟಿಸಬೇಕಿರುವುದು ಅದರ ಕ್ರೌರ್ಯದ ಪ್ರಮಾಣಕ್ಕೆ ಮಾತ್ರವಲ್ಲ, ಬದಲಿಗೆ ಅದರ ಹಿಂದಿನ ರಾಜಕೀಯ ಸಿದ್ಧಾಂತ ಆತಂಕಿತ ಜನತೆಯ ನಡುವೆ ಮಾನ್ಯತೆ ಪಡೆದುಕೊಳ್ಳುತ್ತಿರುವುದು.... ಹಾಗೂ ಅದು ಪ್ರಭುತ್ವದ ಎಲ್ಲಾ ಅಂಗಗಳಲ್ಲೂ ವ್ಯಾಪಿಸುತ್ತಿರುವುದು ಮತ್ತು ಒಂದೊಂದಾಗಿ "ಸಾಂವಿಧಾನಿಕ ಸಂಸ್ಥೆಗಳನ್ನೆಲ್ಲಾ" ವಶಪಡಿಸಿ ಕೊಳ್ಳುತ್ತಿರುವುದು, ಒಂದು ನಿರ್ದಿಷ್ಟ ಐತಿಹಾಸಿಕ-ರಾಜಕೀಯ ದಿಕ್ಕಿನ ಹೊಸ ಬೆಳವಣಿಗೆ ಯಾಗಿದ್ದು..... ಇದು ನೆಮ್ಮದಿಯ ಬದುಕು ಹಾಗೂ ಪ್ರಜಾತಾಂತ್ರಿಕ ಮೌಲ್ಯವುಳ್ಳ ಸಮಾಜವನ್ನು ಬಯಸುವ ಎಲ್ಲರನ್ನೂ ಚಿಂತೆಗೆ ಹಚ್ಚಬೇಕಿದೆ.

ಸಂಘಪರಿವಾರದ ಈ ಎಲ್ಲಾ ಪ್ರಭುತ್ವ ಬೆಂಬಲಿತ ಹತ್ಯಾಕಾಂಡಗಳನ್ನು ಕೇವಲ ರಾಜಕಾರಣವೆಂದು ಹಲವರು ಭಾವಿಸುತ್ತಾರೆ. ಹೀಗಾಗಿ ಸಂಸದೀಯ ರಾಜಕಾರಣದಲ್ಲಿ ಅದಕ್ಕೆ ಪರ್ಯಾಯ ಸೃಷ್ಟಿಸುವುದು ಅಥವಾ ಸಂಸದೀಯ ಅಧಿಕಾರ ಪರಿವಾರಕ್ಕೆ ದಕ್ಕದಂತೆ ಮಾಡುವುದೇ ಪರಿವಾರದ ಕೋಮು ಅಪಾಯವನ್ನು ಎದುರಿಸಲು ಸೂಕ್ತ ಮಾರ್ಗವೆಂದು ನಂಬುತ್ತಾರೆ. ಅದಕ್ಕಾಗಿ ಹಲವಾರು ಅವಕಾಶವಾದಿ ಸಂಸದೀಯ ಸರ್ಕಸ್ಸುಗಳನ್ನೆಲ್ಲಾ ಮಾಡುತ್ತಾರೆ. ಆದರೆ ಸಂಘ ಪರಿವಾರದ ಅಜೆಂಡಾ ಕೇವಲ ಸಂಸದೀಯ ಅಧಿಕಾರ ಪಡೆದುಕೊಳ್ಳುವುದಷ್ಟೇ ಅಲ್ಲ.

ಇನ್ನೂ ಕೆಲವು ಬುದ್ಧಿಜೀವಿಗಳು ಈ ಕೋಮು ಗಲಭೆಗಳೆಲ್ಲಾ ತಪ್ಪು ತಿಳಿವಳಿಕೆಯಿಂದ, ಸಂಘ ಪರಿವಾರದ ಪೂರ್ವಾಗ್ರಹ ಪೀಡಿತ ಅಪಪ್ರಚಾರದಿಂದ ಸಂಭವಿಸುತ್ತಿದ್ದು..... ಸೂಕ್ತ ತಿಳಿವಳಿಕೆ ಹಾಗೂ ಸತ್ಯಸಂಗತಿಗಳ ಪ್ರಚಾರ ಮಾಡಿದರೆ ಸಾಕು.... ಪರಿವಾರದ ಅಜೆಂಡಾ ತಾನೇ ತಾನಾಗಿ ಕುಸಿದು ಬೀಳುತ್ತದೆಂದು ಭಾವಿಸುತ್ತಾರೆ.... ಆದರೆ ವಾಸ್ತವವೆಂದರೆ, ಸಂಘ ಪರಿವಾರದ ಪ್ರಚಾರಕ್ಕೆ ಬೆಂಬಲ ಸಿಕ್ಕುತ್ತಿರುವುದು ಕೇವಲ ತಪ್ಪು ತಿಳಿವಳಿಕೆಯಿಂದಾಗಿ ಮಾತ್ರವಲ್ಲ....

ಇನ್ನೂ ಕೆಲವು ಸುಸ್ವಾದ ಬುದ್ಧಿಜೀವಿಗಳು, ಪ್ರಗತಿಪರ ಹೋರಾಟಗಾರರ ಪ್ರಕಾರ ಸಂಘಪರಿವಾರದವರು ಹುಟ್ಟುಹಾಕುವ ವಿವಾದಗಳಿಗೆ ಪ್ರಗತಿಪರರು ಪ್ರತಿಕ್ರಿಯಿಸುವು ದರಿಂದಾಗಿಯೇ ಅವರು ಬೆಳೆಯುತ್ತಿದ್ದಾರೆ. ಆದ್ದರಿಂದ ಒಂದೋ ಅವರನ್ನು ನಿರ್ಲಕ್ಷಿಸಬೇಕು... ಅಥವಾ ಅಂತಹವುಗಳನ್ನು ರಾಜ್ಯವ್ಯಾಪ್ತಿ ವಿವಾದ ಮಾಡದೆ ಸ್ಥಳೀಯ ಪರಿಹಾರಗಳನ್ನು ಕಂಡುಕೊಳ್ಳಬೇಕು. ಆದರೆ ಸಕ್ರಿಯ ಬಲಪಂಥೀಯ ರಾಜಕಾರಣ ಪ್ರಗತಿಪರರ ನಿಷ್ಕ್ರಿಯತೆ ಸೃಷ್ಟಿಸುವ ನಿರ್ವಾತವನ್ನು ಬಳಸಿಕೊಂಡು ಬೆಳೆಯುತ್ತದೆ. ಅವರು ಉದ್ರೇಕಿಸುವ ಪ್ರತಿಯೊಂದು ಸ್ಥಳೀಯ ವಿವಾದಗಳ ಹಿಂದೆ ರಾಜ್ಯವ್ಯಾಪಿ ರಾಜಕಾರಣದ ಹುನ್ನಾರವಿರುವಾಗ ಅದನ್ನು ಸ್ಥಳೀಯ ಸಮಸ್ಯೆ ಎಂದು ಕರೆದುಕೊಳ್ಳುವುದು ಬಹಿರಂಗ ಆತ್ಮವಂಚನೆಯೇ ಹೊರತು ಬೇರೇನಲ್ಲ.....

ಬೇರೆ ಕೆಲವು ಭಾವನಿಷ್ಠ ಬುದ್ಧಿಜೀವಿ ಜಡ ಹೋರಾಟಗಾರರ ಪ್ರಕಾರ ಹಿಂದೂ

ಕೋಮುವಾದ ಒಂದು ಸಾಂಸ್ಕೃತಿಕ ಸಮಸ್ಯೆ ಮಾತ್ರ.... ಹೀಗಾಗಿ ಅದನ್ನು ಪರ್ಯಾಯ ಪ್ರತಿ ಸಂಸ್ಕೃತಿ ಕಟ್ಟುವ ಮೂಲಕ ಅಥವಾ ಪರಂಪರೆಯ ಪ್ರಜಾತಾಂತ್ರಿಕ ಅಂಶಗಳ ಪುನರುಜ್ಜೀವನದ ಮೂಲಕ ಹೊಡೆದಟ್ಟಬಹುದು..... ಆದರೆ ಹಿಂದೂ ಕೋಮುವಾದ ಒಂದು ರಾಜಕಾರಣವೆ ಆಗಿದ್ದು ನಿರ್ದಿಷ್ಟ ರಾಜಕೀಯ ಕಾರ್ಯಕ್ರಮವಿಲ್ಲದೆ ಅದನ್ನು ಹೊಡೆದಟ್ಟಲು ಸಾಧ್ಯವಿಲ್ಲ.... ಅದೇ ರೀತಿ ಸಾಮಾಜಿಕ ಸಂಬಂಧಗಳ ಪ್ರಜಾತಂತ್ರೀಕರಣವಾಗದೆ ಪರಂಪರೆಯ ಪುನರುಜ್ಜೀವನ ಹಿಂದೂ ಕೋಮುವಾದಿಗಳಿಗೆ ಸಹಕರಿಸುತ್ತಿವೆ.

ಮೇಲಿನ ಈ ಎಲ್ಲಾ ಬಗೆಯ ವಿವಿಧ ವ್ಯಾಖ್ಯಾನಗಳಲ್ಲೂ ಒಂದಷ್ಟು ಸತ್ಯವಿದೆ.....ಆದರೆ ಅದೆಲ್ಲಕ್ಕಿಂತ ಹೆಚ್ಚಾಗಿ ಹಿಂದೂ ಕೋಮುವಾದದ ರಾಜಕಾರಣವನ್ನು ಸ್ಪಷ್ಟವಾದ ನೆಲೆಗಳಲ್ಲಿ ಅರ್ಥೈಸಿಕೊಳ್ಳಲಾಗದ ಗೊಂದಲವಿದೆ.... ಈ ಸಮಸ್ಯೆಯನ್ನು ಸರಿಯಾಗಿ ಅರ್ಥಮಾಡಿ ಕೊಳ್ಳಲಾಗದ ಬಲಹೀನತೆಯಿಂದಾಗಿಯೇ ಸಂಘ ಪರಿವಾರಕ್ಕೆ ಸರಿಯಾದ ಪ್ರತ್ಯುತ್ತರ ಕೊಡಲಾಗುತ್ತಿಲ್ಲವೆಂಬ ಹತಾಶೆ ಹಾಗೂ "ಅವರು ಅಜೆಂಡಾ ನಿಗದಿಪಡಿಸುವವರಾಗಿ..... ನಾವು ಕೇವಲ ಅದಕ್ಕೆ ಪತ್ರಿಕ್ರಿಯಿಸುವವರಾಗಿ ಉಳಿದುಬಿಡುತ್ತಿದ್ದೇವೆಂಬ" ರಾಜಕೀಯ ಅಸಹನೆ ಪ್ರಗತಿಪರರ ನಡುವೆಯೂ ಹೆಚ್ಚಾಗುತ್ತಿದೆ.

ಆದ್ದರಿಂದಲೇ ಹಿಂದುತ್ವ ಕೋಮುವಾದಿಗಳ ರಾಜಕೀಯ ಹಾಗೂ ಅದು ಮಾನ್ಯ ವಾಗುತ್ತಿರುವ ಇಂದಿನ ಸಂದರ್ಭವನ್ನು ಇನ್ನಷ್ಟು ಗಂಭೀರವಾಗಿ ಅರ್ಥಮಾಡಿಕೊಂಡು ಅದಕ್ಕೆ ಸರಿಯಾದ ಪ್ರತ್ಯುತ್ತರ ನೀಡಬಲ್ಲ ಪರ್ಯಾಯ ರಾಜಕಾರಣ ಕಟ್ಟಬೇಕಿದೆ.

ಆಳುವ ವರ್ಗಗಳ ಅತಿ ನಗ್ನ ಭಯೋತ್ಪಾದನೆ ಫ್ಯಾಸಿಸಂ

ಇಪ್ಪತ್ತನೇ ಶತಮಾನದ ಜಗತ್ತಿನ ಇತಿಹಾಸದಲ್ಲಿ ಈ ಬಗೆಯ ಜನಾಂಗೀಯ ದ್ವೇಷದ ರಾಜಕಾರಣ, ನರಹತ್ಯಾಕಾಂಡಗಳ ಮೂಲಕ ಪ್ರಭುತ್ವಾಧಿಕಾರ ವಶಪಡಿಸಿಕೊಂಡಂತಹ ಹಲವಾರು ಉದಾಹರಣೆಗಳಿವೆ. ಇದು ಸೇನೆಗಳ ಯುದ್ಧ ನಡೆದು ರಕ್ತಪಾತದ ಮೂಲಕ ರಕ್ತ ಸಿಂಹಾಸನವೇರಿದ ರಾಜರುಗಳಿಗಿಂತ ಭಿನ್ನವಾದದ್ದು ಹಾಗೂ ಅಪಾಯಕಾರಿಯಾದದ್ದು..... ಅಥವಾ ಸೇನಾಬಲದ ಮೂಲಕ ಪ್ರತಿರೋಧವನ್ನೆಲ್ಲಾ ಹತ್ತಿಕ್ಕಿ ಅಧಿಕಾರಕ್ಕೇರುವ ಸರ್ವಾಧಿಕಾರಿಗಳ ಮಾರ್ಗಕ್ಕಿಂತಲೂ ಭಿನ್ನವಾದದ್ದು...ಇವೆರಡೂ ಬಗೆಯ ಅಧಿಕಾರ ಗ್ರಹಣಗಳು ಪ್ರಜಾಪ್ರಭುತ್ವ ಮಾದರಿ ಇನ್ನೂ ಪರಿಚಿತವಾಗದ ಅಥವಾ ಇನ್ನಷ್ಟು ಗಟ್ಟಿಗೊಳ್ಳದ ಸಂದರ್ಭದಲ್ಲಿ ಸಂಭವಿಸಿ ದಂತಹವು....

ಆದರೆ ಪ್ರಜಾಪ್ರಭುತ್ವ ಮಾದರಿಯ ಆಡಳಿತ ಪದ್ಧತಿ....ಇದೆಷ್ಟೇ ತೋರಿಕೆಯದ್ದಾದರೂ ಸರಿ...ಹಾಗೂ 'ಸಮಾನತೆ, ಸೋದರತೆ, ಪ್ರಭುತ್ವ'ದಂತಹ ಪ್ರಜಾಪ್ರಭುತ್ವ ಮೌಲ್ಯಗಳು ಸಾಪೇಕ್ಷವಾಗಿ ನೆಲೆಯೂರಿರುವ ಸಮಾಜ ಸಂದರ್ಭದಲ್ಲಿ ದೊಡ್ಡ ಬಂಡವಾಳವಾದಿ (ಹಾಗೂ ಭಾರತದಂತಹ ಕಡೆ ದೊಡ್ಡ ಭೂಮಾಲೀಕ)ಗಳ ಪರವಾಗಿ ಪ್ರಜಾಪ್ರಭುತ್ವದ ಹೆಸರಿನಲ್ಲೇ ಜನತೆಯ ಸುಲಿಗೆ ಮಾಡುವ ಆಳುವ ವರ್ಗಗಳು, ಉಲ್ಬಣಗೊಳ್ಳುತ್ತಿರುವ ಆರ್ಥಿಕ-ರಾಜಕೀಯ ಸಂಕ್ಷೋಭೆಗಳ ಕಾರಣದಿಂದಾಗಿ ಇನ್ನೂ ಪ್ರಜಾಪ್ರಭುತ್ವದ ರೀತಿಯಲ್ಲಿ ಆಳಲು - ಅರ್ಥಾತ್ -

ಸುಲಿಯಲು ಸಾಧ್ಯವಿಲ್ಲದಾದಾಗ....ಹಾಗೂ ಅದರಿಂದ ಉಂಟಾಗುವ ಅಪಾರ ಅಸಹನೆ, ಆಕ್ರೋಶಗಳು ಸಮಾಜದ ಬದಲಾವಣೆಯಂತಹ ಕ್ರಾಂತಿಗಳಲ್ಲಿ ಪರ್ಯಾವಸಾನವಾಗದಂತೆ ತಡೆಯಲು ಕಂಡುಕೊಂಡಿರುವ ಮಾರ್ಗವೇ.....ಜನತೆಯ ನಡುವೆ ಜನಾಂಗೀಯ ದ್ವೇಷವನ್ನು ಬಿತ್ತಿ ಕೃತಕ ಶತ್ರುವನ್ನು ಸೃಷ್ಟಿಸುವ, ಆ ಮೂಲಕ ತಾವೇ ನಿಜವಾದ ಶತ್ರುವೆಂಬುದನ್ನು ಮರೆ ಮಾಚುವ ನಗ್ನ, ಭಯೋತ್ಪಾದಕ ಆಡಳಿತ ಪದ್ಧತಿ...ಅದನ್ನೇ ರಾಜಕೀಯ ಪಂಡಿತರು ಫ್ಯಾಸಿಸಂ ಎಂದೂ ಕರೆಯುತ್ತಾರೆ.

ಮಾರ್ಟಿನ್ ಕಿಚನ್ ಎನ್ನುವ ರಾಜಕೀಯ ಪಂಡಿತನ ಪ್ರಕಾರ "ಫ್ಯಾಸಿಸಂ..... ಎಂಬುವುದು ವರ್ಗ/ವ್ಯಕ್ತಿಗಳಿಗಿಂತ ಅಮೂರ್ತ ರಾಷ್ಟ್ರಸಾರ್ವಭೌಮತೆ ಮುಖ್ಯವೆಂದು ಸಾರುವ, ಆಕ್ರಮಣ ಶೀಲತೆಯನ್ನು ಕೊಂಡಾಡುವ, ಎಲ್ಲಾ ಬಗೆಯ ಉದಾರವಾದಿ ಮೌಲ್ಯಗಳನ್ನು ತಿರಸ್ಕರಿಸುವ ಒಂದು ತೀವ್ರಗಾಮಿ ಬಲಪಂಥೀಯ ರಾಜಕಾರಣವಾಗಿದೆ." ಈ ಸಿದ್ಧಾಂತಗಳು ಹುಟ್ಟಿಕೊಳ್ಳಲು ನಿಜವಾದ ಹಿನ್ನೆಲೆಯು ಬಡಜನತೆಯ ಬದುಕಿನಲ್ಲಿ ಉಂಟಾಗುತ್ತಿರುವ ತಳಮಳವು ಉಂಟುಮಾಡಬಹುದಾದ ರಾಜಕೀಯ ಪ್ರತಿರೋಧದ ಬಗ್ಗೆ ಆಸ್ತಿವಂತ ವರ್ಗಗಳಲ್ಲಿ ಉಂಟಾಗಿರುವ ಭೀತಿ ಹಾಗೂ ಬಡ ಜನತೆಯ ಬದುಕಿನಲ್ಲಿ ತೀವ್ರವಾದ ಬಡತನ, ಹಣದುಬ್ಬರ, ಅಪೌಷ್ಟಿಕತೆ, ನಿರುದ್ಯೋಗ ಇತ್ಯಾದಿಗಳು. ಇವು ಆಳುವ ವರ್ಗಗಳ ನೀತಿಯಿಂದಲೇ ಉಂಟಾಗಿದ್ದು ಅದು ಇನ್ನಷ್ಟು ಹೆಚ್ಚಾಗುವ ಸಂದರ್ಭವೇ ಇರುವಾಗ ಸಾಮಾಜಿಕ ಸಂಕ್ಷೋಭೆಯ ನಿರ್ವಹಣೆಯ ಮಾರ್ಗವಾಗಿ ಆಳುವ ವರ್ಗಗಳು "ಫ್ಯಾಸಿಸಂ"ಗೆ ಮೊರೆ ಹೋಗುತ್ತಾರೆ. ಜಗತ್ತಿನ ಮೇಲೆ ಆವರಿಸಿದ್ದ ಫ್ಯಾಸಿಸ್ಟ್ ಅಪಾಯವನ್ನು ಹಿಮ್ಮೆಟ್ಟಿಸಿದ ಸೋವಿಯತ್ ರಷ್ಯಾದ ಕೆಂಪುಸೇನೆಯ ದಂಡನಾಯಕ ಹಾಗೂ ಪ್ರಪಂಚದ ಬಡಜನತೆಯ ಸಮಾಜವಾದಿ ಆಶಯವನ್ನು ಮಾತ್ರವಲ್ಲದೆ ಬಂಡವಾಳಿಗರ ಪ್ರಜಾತಂತ್ರವನ್ನು ಫ್ಯಾಸಿಸ್ಟ್ ಆಕ್ರಮಣದಿಂದ ಕಾಪಾಡಿದ ಕಮ್ಯುನಿಸ್ಟ್ ಚಿಂತಕ ಸ್ಟಾಲಿನ್ನರ ಪ್ರಕಾರ 'ಫ್ಯಾಸಿಸಂ ಬಂಡವಾಳಶಾಹಿಯ ಬಲಹೀನತೆಯ ಸಂಕೇತ.... ಬಂಡವಾಳ ಶಾಹಿಯು ಇನ್ನೂ ತನ್ನ ಹಳೆಯ ಸಂಸದೀಯ ಪ್ರಜಾತಂತ್ರದ ಮಾದರಿಯಲ್ಲೇ ಆಳ್ವಿಕೆ ನಡೆಸಲು ಸಾಧ್ಯವಿಲ್ಲದಂತಹ ಸಂದರ್ಭದಲ್ಲಿ ಅದು ಫ್ಯಾಸಿಸಂನ ನಗ್ನ ಭಯೋತ್ಪಾದಕ ಆಳ್ವಿಕೆಯ ಮೊರೆ ಹೋಗುತ್ತದೆ." ಅದೇ ರೀತಿ 1930ರ ದಶಕದಲ್ಲಿ ಸ್ಪೇನ್‌ನ ಫ್ಯಾಸಿಸ್ಟ್ ಫ್ರಾಂಕೋ ಸರ್ವಾಧಿಕಾರದ ವಿರುದ್ಧ ಹೋರಾಡಿದ ಡಾ. ವಿಸೆಂಟಿ ನವಾರೋ ಹೇಳುವಂತೆ "ಫ್ಯಾಸಿಸಂ ಬಂಡವಾಳಶಾಹಿ ಮತ್ತು ಉದಾರವಾದಿ ಪ್ರಜಾತಂತ್ರದ ಗಾಯಗಳಲ್ಲಿ ಮೊದಲೇ ಅಡಗಿ ಕುಳಿತಿರುತ್ತದೆ. ಫ್ಯಾಸಿಸ್ಟರು ಪ್ರಜಾಪ್ರಭುತ್ವದ ಆಳ್ವಿಕೆಯಲ್ಲೇ ಹುಟ್ಟಿಕೊಂಡಿರುತ್ತಾರೆ ಹಾಗೂ ಪ್ರಜಾತಂತ್ರದ ಉಪಾಸಕ ರೆಂಬಂತೆ ಚಲಾವಣೆಯಾಗುತ್ತಿರುತ್ತಾರೆ"

ಇದು ಸಾಧ್ಯವಾಗಲು ಅದು ಅನುಸರಿಸುವ ಮಾರ್ಗ ಜನಾಂಗೀಯ ದ್ವೇಷ. ಆ ಬಗೆಯ ಜನಾಂಗೀಯ ದ್ವೇಷ ಬಿತ್ತಲು ಅದು ಸುಳ್ಳುಗಳನ್ನು ಬಿತ್ತರಿಸುತ್ತದೆ. ಇತಿಹಾಸವನ್ನು ಜನಾಂಗೀಯ ಸಿದ್ಧಾಂತದಡಿ ಪುನರ್ ರಚಿಸುತ್ತದೆ. ಬಡ ಜನತೆಯ ನಡುವೆ ಬಲವಾದ, ಆಕ್ರಮಣಶೀಲ ಸೈನಿಕ ತರಬೇತಿಯುಳ್ಳ, ಜನಾಂಗೀಯ ದ್ವೇಷವೇ ಉಸಿರಾಗಿರುವ ಸಂಘಟನೆ ನಿರ್ಮಿಸುತ್ತದೆ.

ಅದರ ಮೂಲಕ ನರಹತ್ಯಾಕಾಂಡಗಳನ್ನು ಬೀಭತ್ಸ- ದೌರ್ಜನ್ಯ ಅತ್ಯಾಚಾರಗಳನ್ನು ನಡೆಸುತ್ತಿದೆ.... ಬಡ ಜನತೆಯ ಬೆರಳಿನಿಂದಲೇ ಅವರ ಕಣ್ಣನ್ನು ಚುಚ್ಚಿಸುತ್ತಿದೆ. ಇವೆಲ್ಲವೂ ಬಡಜನತೆಯ ಐಕ್ಯತೆಯನ್ನು ನಾಶಗೊಳಿಸಿ ಅವರ ನಿಜವಾದ ಶತ್ರುವಿನ ವಿರುದ್ಧ ಐಕ್ಯ ಹೋರಾಟ ಹಾಗೂ ಪರ್ಯಾಯ ಸೃಷ್ಟಿಯ ಸಾಧ್ಯತೆಯನ್ನು ಮುಚ್ಚಿಹಾಕುತ್ತಿದೆ. ಬಿಕ್ಕಟ್ಟು ತೀವ್ರವಾದಾಗ ಆ ಸಮಾಜಗಳಿಗೆ ಉಳಿಯುವುದು ಎರಡೇ ದಾರಿ. ಒಂದು ಸಮಾಜದ ಬದಲಾವಣೆಯ ಕ್ರಾಂತಿ. ಮತ್ತೊಂದು ಸಮಾಜದ ದಮನದ ಫ್ಯಾಸಿಸಂ. ಹೀಗೆ ಫ್ಯಾಸಿಸಂ ಕ್ರಾಂತಿಯ ಮಾರ್ಗವನ್ನೇ ನಾಶಮಾಡಿ ದುಡಿಯುವ ವರ್ಗದ ಮೇಲಿನ ದಮನವನ್ನು ಜಾಗತೀಕರಿಸಲು ಪ್ರಯತ್ನಿಸುತ್ತದೆ.

ಆದ್ದರಿಂದಲೇ ಫ್ಯಾಸಿಸ್ಟ್ ರಾಜಕಾರಣದ ಬಗ್ಗೆ ಆಮೂಲಾಗ್ರ ಅಧ್ಯಯನ ಮಾಡಿದ ಕಮ್ಯುನಿಸ್ಟ್ ಚಿಂತಕ ಡಿಮಿಟ್ರೋವ್ "ಫ್ಯಾಸಿಸಂ ಎಂಬುದು ದುಡಿಯುವ ಜನತೆಯ ಮೇಲೆ ಬಂಡವಾಳವು ನಡೆಸುವ ಅತ್ಯಂತ ಕ್ರೂರ ಧಾಳಿಯಾಗಿದೆ. ಫ್ಯಾಸಿಸಂ ಎಂಬುದು ಎಲ್ಲೆ ಮೀರಿದ ದುರಭಿಮಾನ ಮತ್ತು ಒಂದು ಅನಾಗರೀಕ ಯುದ್ಧವಾಗಿದೆ. ಫ್ಯಾಸಿಸಂ ಎಂಬುದು ಕಾರ್ಮಿಕರ ಹಾಗೂ ಎಲ್ಲಾ ದುಡಿಯುವ ಜನತೆಯ ಅತ್ಯಂತ ಅಪಾಯಕಾರಿ ಶತೃವಾಗಿದೆ" ಎಂದು ಹೇಳುತ್ತಾರೆ.

ಹೀಗಾಗಿ ಫ್ಯಾಸಿಸಂ ಎಂದರೆ ಜನಾಂಗೀಯ ದ್ವೇಷ.... ಆದರೆ ಅದೇ ಅದರ ಗುರಿಯಲ್ಲ.... ಫ್ಯಾಸಿಸಂ ಎಂದರೆ ಕಗ್ಗೊಲೆ, ಹತ್ಯಾಕಾಂಡ, ಕ್ರೌರ್ಯ. ಆದರೆ ಅದು ಮಾರ್ಗವೇ ವಿನಃ ಗುರಿಯಲ್ಲ. ಫ್ಯಾಸಿಸಂ ಎಂದರೆ ಸಂಸದೀಯ ಪ್ರಜಾತಂತ್ರದ ನಾಶ..... ಫ್ಯಾಸಿಸಂ ಎಂದರೆ ಜನತೆಯ ಹೋರಾಟದ ಮೇಲೆ ದಾಳಿ.... ನಿಜ ಆದರೆ ಇವೆಲ್ಲವೂ ಫ್ಯಾಸಿಸಂನ ಪರ್ಯಾಯವಾದ ಕ್ರಾಂತಿಯನ್ನು ತಡೆಗಟ್ಟಲಿಕ್ಕೆ, ಬಂಡವಾಳದ ಭೂಮಾಲೀಕರ ಆಳ್ವಿಕೆಗೆ ಪರ್ಯಾಯವಾದ ಸಮಾಜವಾದವನ್ನು ತಡೆಗಟ್ಟಲಿಕ್ಕೆ ಆಳುವ ವರ್ಗಗಳು ಹಾಕಿಕೊಂಡಿರುವ ರಾಜಕೀಯ, ಸೈನಿಕ, ಸಾಮಾಜಿಕ ಸಾಂಸ್ಕೃತಿಕ ಕಾರ್ಯಕ್ರಮವೇ ಫ್ಯಾಸಿಸಂ...

ಆದರೆ ಈ ಸಮಗ್ರ ದೃಷ್ಟಿಕೋನವಿಲ್ಲದಿದ್ದರಿಂದಲೇ ಇಟಲಿ, ಹಾಗೂ ಜರ್ಮನಿಗಳಲ್ಲಿ ಫ್ಯಾಸಿಸಂನ ಪ್ರತಿರೋಧ ಟೊಳ್ಳಾಗಿ ಹಿಟ್ಲರ್ ಹಾಗೂ ಮುಸಲೋನಿ ವಿಜಯಶಾಲಿಗಳಾದರು. ಸಮಾಜ ವಿಜ್ಞಾನಿ ಸುಮಿತ್ ಸರ್ಕಾರ್ ಗುರುತಿಸುವಂತೆ "ಇಟಲಿ ಮತ್ತು ಜರ್ಮನಿಯಲ್ಲಿ ಫ್ಯಾಸಿಸಂ ಒಂದು ಯೋಜಿತ ರೀತಿಯಲ್ಲಿ ಬೀದಿ ದಂಗೆಗಳು (ಜನರಿಂದ ಬೆಂಬಲಿತವಾದದ್ದು) ಮತ್ತು ಪೊಲೀಸ್, ಸೇನೆ ಹಾಗೂ ಅಧಿಕಾರ ವರ್ಗಗಳ ನಡುವೆ ವ್ಯಾಪಿಸಿದ ಪ್ರಭಾವ ಮತ್ತು ಒಂದು ಮಧ್ಯಮಾರ್ಗಿ ರಾಜಕಾರಣಿಗಳ ಸಮ್ಮತಿಯೊಂದಿಗೆ ಅಧಿಕಾರಕ್ಕೇರಿತು. ಆದರೆ ಇದರ ಪರಿಣಾಮ ಎಷ್ಟು ಬೀಭತ್ಸವಾಗಿತ್ತು ಎಂಬುದನ್ನು ನಿಕಟಪೂರ್ವ ಇತಿಹಾಸ ತೋರಿಸಿಕೊಟ್ಟಿದೆ. ಫ್ಯಾಸಿಸಂನ ಬಗ್ಗೆ ಈ ಸಮಗ್ರ ಗ್ರಹಿಕೆ ಇಲ್ಲವಾದ್ದರಿಂದಲೇ ಇಟಲಿ, ಜರ್ಮನಿಗಳಲ್ಲಿ ಕ್ರಾಂತಿ ಸಾಧ್ಯತೆ ಮಣ್ಣುಗೂಡಿತು.... ಮಾತ್ರವಲ್ಲ ಇತಿಹಾಸ ಕಂಡರಿಯದಂತಹ ಭೀಕರ ಹತ್ಯಾಕಾಂಡಗಳು ನಡೆದುಹೋದವು. ಇಡೀ ಪ್ರಪಂಚಕ್ಕೆ ಪ್ರಜಾತಂತ್ರ ಹಾಗೂ ನೆಮ್ಮದಿಯ ಬದುಕು ಇಲ್ಲವಾಯಿತು. ಮತ್ತೊಂದೆಡೆ ಫ್ಯಾಸಿಸಂನ ಬಗ್ಗೆ ಸ್ಪಷ್ಟ ಗ್ರಹಿಕೆಯಿದ್ದ ಸ್ಟಾಲಿನ್ ನೇತೃತ್ವದ ಕೆಂಪು ಸೇನೆ ಸಮಾಜವಾದವನ್ನು ಮಾತ್ರವಲ್ಲ, ಬಂಡವಾಳಶಾಹಿ ಪ್ರಜಾತಂತ್ರವನ್ನು ಕಾಪಾಡಿತು.

ಇಂದು ಭಾರತದಲ್ಲಿ ಮಾತ್ರವಲ್ಲ ಇಡೀ ಪ್ರಪಂಚದಾದ್ಯಂತ ಮತ್ತೊಮ್ಮೆ ಅದೇ ಪರಿಸ್ಥಿತಿ ಎದುರಾಗಿದೆ. ಜಾಗತೀಕರಣದ ಹೆಸರಲ್ಲಿನ ಸಾಮ್ರಾಜ್ಯಶಾಹಿ ಆಕ್ರಮಣ ಭಾರತವನ್ನು ಒಳಗೊಂಡಂತೆ ಪ್ರಪಂಚದ ಬಡ ರಾಷ್ಟ್ರಗಳಲ್ಲಿ ಪ್ರತಿಕ್ರಾಂತಿಯ - ತೀವ್ರ ಬಲಪಂಥೀಯ ರಾಜಕಾರಣವನ್ನು ಹುಟ್ಟುಹಾಕಿದೆ. ಸಾಮ್ರಾಜ್ಯಶಾಹಿಗಳು ಇದುವರೆಗೆ ಈ ರಾಷ್ಟ್ರಗಳು ತಮ್ಮ ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಪಡೆದುಕೊಂಡಂಥ, ಅಲ್ಪ ಸ್ವಲ್ಪ ಸ್ವಾತಂತ್ರ್ಯದ ಹೋರಾಟ ಹುಟ್ಟಿಹಾಕಿದ್ದ, ಪ್ರಜಾತಂತ್ರದ ಮೌಲ್ಯ ಹಾಗೂ ರಾಜಕೀಯ ಶಕ್ತಿಗಳ ಮೇಲೂ ದಾಳಿ ನಡೆಸುತ್ತಿದೆ. ಆ ಮೂಲಕ ಆ ಸಮಾಜಗಳಲ್ಲಿ ಸ್ವಾತಂತ್ರ್ಯ ಸಮರದಲ್ಲಿ ಉಕ್ಕೇರಿದ್ದ ಜನತೆಯ ಪ್ರಜಾ ತಾಂತ್ರಿಕ ಆಶಯ ಹಾಗೂ ಮೌಲ್ಯಗಳು ಮೂಲೆಗುಂಪು ಮಾಡಿದ್ದ ತೀವ್ರ ಬಲಪಂಥೀಯ ಹಾಗೂ ಫ್ಯಾಸಿಸ್ಟ್ ಶಕ್ತಿಗಳಿಗೆ ಬೆಂಬಲ ಕೊಟ್ಟು ತನ್ನ ದಾಳಿಯ ಅಸ್ತ್ರವನ್ನಾಗಿಸಿಕೊಳ್ಳುತ್ತಿದೆ.... ಇದು ಸೌದಿಯ ಷೇಕ್ ಆಗಿರಬಹುದು. ಅಥವಾ ಭಾರತದ ಸಂಘ ಪರಿವಾರವಾಗಬಹುದು..... ಸೆಪ್ಟೆಂಬರ್ 11ರ ನಂತರವಂತೂ 'ಭಯೋತ್ಪಾದನೆ ವಿರುದ್ಧದ ಯುದ್ಧ'ದ ಹೆಸರಿನಲ್ಲಿ ಜಗತ್ತಿನ ಎಲ್ಲಾ ಬಲಪಂಥೀಯ ಫ್ಯಾಸಿಸ್ಟ್ ಶಕ್ತಿಗಳಿಗೆ ಅಮೇರಿಕ ನೇರ ಬೆಂಬಲವನ್ನೇ ನೀಡುತ್ತ ಜನತೆಯ ಮೇಲೆ ಯುದ್ಧ ಸಾರುವ ನಗ್ನ ಹಾಗೂ ನೇರ ಪ್ರಭುತ್ವ ಭಯೋತ್ಪಾದನೆಯ ಫ್ಯಾಸಿಸ್ಟ್ ಆಳ್ವಿಕೆಯನ್ನೇ ಹುಟ್ಟುಹಾಕಿದೆ. ಭಾರತದಲ್ಲಿನ ಸಂಘ ಪರಿವಾರದ ಬೆಳವಣಿಗೆಯನ್ನು, ಗುಜರಾತಿನ ನರಮೇಧ ವನ್ನು, ಮೋದಿತ್ವದ ವಿಜಯವನ್ನು, ಬಾಬಾಬುಡನ್ ಗಿರಿಯ ಮೇಲೆ ಭಜರಂಗದಳದ ದಾಳಿಯನ್ನು ಈ ಹಿನ್ನೆಲೆಯಲ್ಲೇ....ಹಿಂದೂ ಫ್ಯಾಸಿಸಂನ ಬೆಳವಣಿಗೆಯ ಕ್ರಮದಲ್ಲೇ ಅರ್ಥಮಾಡಿ ಕೊಳ್ಳಬೇಕಿದೆ.

ಹಿಂದೂ ಕೋಮುವಾದ ಮಾತ್ರವಲ್ಲ.... ಹಿಂದೂ ಫ್ಯಾಸಿಸಂ

ಇದರರ್ಥ ಸಂಘ ಪರಿವಾರದವರು ಫ್ಯಾಸಿಸ್ಟರಾದದ್ದು ಇತ್ತೀಚೆಗೆ ಎಂದಲ್ಲ.... ಆರೆಸ್ಸೆಸ್ ಹುಟ್ಟಿನಿಂದಲೂ ಅದಕ್ಕಿದ್ದದ್ದೇ ಫ್ಯಾಸಿಸ್ಟ್ ಕಾರ್ಯಕ್ರಮ. ಅದು ತನ್ನ ಹುಟ್ಟಿನಿಂದಲೂ ಎಂದಿಗೂ ಬ್ರಿಟಿಷರ ವಿರುದ್ಧ ಬಂಡವಾಳಿಗರ ವಿರುದ್ಧ ಭೂಮಾಲೀಕರ ವಿರುದ್ಧ ಹೋರಾಟ ಮಾಡುವ ಯೋಚನೆಯನ್ನೂ ಮಾಡಿದ್ದಿಲ್ಲ. ಸಂಘಪರಿವಾರದ ಸರಸಂಚಾಲಕ ಗೋಳ್ವಾಲ್ಕರ್ ಪ್ರಕಾರ 'ಸ್ವಾತಂತ್ರ್ಯ ಹೋರಾಟವನ್ನು ಬ್ರಿಟಿಷ್ ವಿರೋಧಿ ಹೋರಾಟದ ಮಟ್ಟಕ್ಕೆ ಇಳಿಸಿದ್ದು ಗಾಂಧಿಯ ಅತಿ ದೊಡ್ಡ ತಪ್ಪು'. ಅವರು ಎತ್ತಿ ಹಿಡಿಯುವ ಮತ್ತೊಬ್ಬ ಹಿಂದೂ ಫ್ಯಾಸಿಸ್ಟ್ ನಾಯಕ ಸಾವರ್ಕರ್ ಪ್ರಕಾರ 'ಮುಸ್ಲಿಂ ಆಳ್ವಿಕೆಯಿಂದ ಭಾರತವನ್ನು ಮುಕ್ತಿಗೊಳಿಸಿದ ಬ್ರಿಟಿಷರಿಗೆ ನಾವು ಋಣಿಯಾಗಿರಬೇಕು.....ಹಾಗೂ ಅದರ ಮುಂದುವರಿಕೆಗೆ ಸಹಾಯ ಮಾಡಬೇಕು'. 1947ಕ್ಕೆ ಮುನ್ನವೇ ಆಗಲಿ, ಆ ನಂತರವೇ ಆಗಲಿ ಅವರು ಯಾವುದೇ ಕಾರ್ಮಿಕ ಹಾಗೂ ರೈತ ಹೋರಾಟದಲ್ಲಿ ಭಾಗವಹಿಸಿದ ಉದಾಹರಣೆ ಇಲ್ಲ. ವರ್ಗ ಸಂಘರ್ಷ ಹಿಂದೂ ಸಮಾಜದ ಸಾಮರಸ್ಯವನ್ನು ಹದಗೆಡಿಸುತ್ತದಾದ್ದರಿಂದ ವರ್ಗ ಸಾಮರಸ್ಯದ ಮುಖವಾಡವೇ ಅವರ ಸಿದ್ಧಾಂತವಾಗಿದೆ. ಹೀಗಾಗಿ ರೈತರ, ಕಾರ್ಮಿಕರ ಮುಷ್ಕರ ಇತ್ಯಾದಿಗಳು ವಿದೇಶೀ ಸಿದ್ಧಾಂತ ಪ್ರಚೋದಿತ ರಾಷ್ಟ್ರದ್ರೋಹಿ ಕೃತ್ಯಗಳು. ಅದರಿಂದಾಗಿ ಮುಂದುವರೆಯುವ ಅಸಮಾನತೆ ಪ್ರಕೃತಿ

ಸಹಜ....ಆದ್ದರಿಂದ ರೈತ-ಕಾರ್ಮಿಕರು ಅದನ್ನು ಸುಮ್ಮನೇ ಒಪ್ಪಿಕೊಳ್ಳಬೇಕು. ಸಮಾನತೆಯೆಂಬ ವಿದೇಶೀ ಪರಿಕಲ್ಪನೆ ಇಟ್ಟುಕೊಂಡು ಹೋರಾಡಬಾರದು.

ಹಾಗೆ ಸಂಘಪರಿವಾರದ ಸಿದ್ಧಾಂತ ಮೊದಲಿನಿಂದಲೂ ಒಂದು ಸಾಮ್ರಾಜ್ಯಶಾಹಿ ಪರ, ಶೋಷಕ ವರ್ಗಗಳ ಪರ ಸಿದ್ಧಾಂತವೇ ಆಗಿದೆ. ಅವರ ಸಮಾಜ ನಿರ್ವಹಣೆ-ನಿರ್ಮಾಣ-ನಿರ್ನಾಮ ಯೋಜನೆಗಳೆಲ್ಲ ಮುಸಲೋನಿ ಹಾಗೂ ಹಿಟ್ಲರ್‌ನಿಂದ ಪ್ರೇರಣೆ ಪಡೆದ 'ವಿದೇಶಿ' ಫ್ಯಾಸಿಸ್ಟ್ ಸಿದ್ಧಾಂತಗಳೇ ಆಗಿವೆ. ವಾಸ್ತವವಾಗಿ ಮುಸಲೋನಿಯ ನಾಜಿ ಸಿದ್ಧಾಂತ ಅಧ್ಯಯನ ಮಾಡಲು ಆರೆಸ್ಸೆಸ್ 'ಮುಂಜ್' ಎನ್ನುವ ವ್ಯಕ್ತಿಯೊಬ್ಬನನ್ನು ಕಳಿಸಿಕೊಡುತ್ತದೆ. ಹಾಗೂ ಅದರ ಆಧಾರದಲ್ಲಿ ನಂತರ ತನ್ನ ಸಂಘಟನೆ ಕಟ್ಟುತ್ತದೆ. 1947ರ ನಂತರವೂ ಜನರ ಪ್ರಜಾತಾಂತ್ರಿಕ ಆಶಯಗಳು ಸಮಾಜವಾದದ ಬಗ್ಗೆ ಪ್ರಬಲವಾದ ಹಾಗೂ ಬಹಿರಂಗ ಒಲವು, ಹಿಟ್ಲರ್ ಹಾಗೂ ಹಿಟ್ಲರ್‌ವಾದಿ ಸಿದ್ಧಾಂತಗಳ ಬಗ್ಗೆ ಪ್ರಬಲವಾದ ವಿರೋಧಗಳು ಸಂಘಪರಿವಾರದ ರಾಜಕೀಯಕ್ಕೆ ಮನ್ನಣೆ ಸಿಗದಂತೆ ಮಾಡಿದವು. ಹಾಗೂ 1947ರ ನಂತರದ ಮೊದಲೆರಡು ದಶಕಗಳಲ್ಲಿ ದೇಶದ ರಾಜಕಾರಣದಲ್ಲಿ ಅವರ ಪಾತ್ರ ಅಮುಖ್ಯವಾಗಿತ್ತು. 1952ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಸಂಘ ಪರಿವಾರದ ಭಾರತೀಯ ಜನಸಂಘಕ್ಕೆ ದಕ್ಕಿದ್ದು ಕೇವಲ ಶೇ. 3.1ರಷ್ಟು ಓಟುಗಳು ಮಾತ್ರ. ಶ್ಯಾಮ್ ಪ್ರಸಾದ್ ಮುಖರ್ಜಿಯ ನೇತೃತ್ವದಲ್ಲಿ ಆಗಲೇ ಜನ ಸಂಘವು ಕಾಶ್ಮೀರದ ವಿಷಯವನ್ನು ಕೋಮುವಾದೀಕರಣಗೊಳಿಸಲು ಪ್ರಯತ್ನಿಸಿ ವಿಫಲವಾಗಿತ್ತು. (ಪ್ರಧಾನಿ ನೆಹರೂ ಕಾಶ್ಮೀರಿಗಳ ಆಶಯಕ್ಕೆ ದ್ರೋಹ ಬಗೆದಾಗಿತ್ತು.) ನಂತರ 1956ರಲ್ಲಿ ಉತ್ತರ ಪ್ರದೇಶದಲ್ಲಿ ಗೋಹತ್ಯಾ ನಿಷೇಧ ಚಳವಳಿ ಇತ್ಯಾದಿಗಳ ಮೂಲಕ ಸಂಘಪರಿವಾರ ಪ್ರಧಾನ ರಾಜಕಾರಣ ಪ್ರವೇಶಿಸಲು ಪ್ರಯತ್ನಿಸುತ್ತಲೇ ಇತ್ತು. 1961ರ ಭಾರತ - ಚೀನಾ ಯುದ್ಧ ಹಾಗೂ 1965ರ ಭಾರತ-ಪಾಕಿಸ್ತಾನ ಯುದ್ಧಗಳ ಸಂದರ್ಭದಲ್ಲಿ ಆರೆಸ್ಸೆಸ್ ತಾನು ದೊಡ್ಡ ದೇಶಭಕ್ತನಂತೆ ತೋರಿಸಿಕೊಳ್ಳಲು ಹಾಗೂ ಜನಸಾಮಾನ್ಯತೆ ಗಳಿಸಿಕೊಳ್ಳಲು ಸ್ವತಃ 'ಸೆಕ್ಯುಲರ್' ನೆಹರೂಗೆ ಅವಕಾಶ ಮಾಡಿಕೊಟ್ಟಿತು. ನಂತರ 1970ರ ನಂತರದಲ್ಲಿ ಜೆ.ಪಿ. ನೇತೃತ್ವದಲ್ಲಿ ನಡೆದ ಭ್ರಷ್ಟಾಚಾರ ವಿರೋಧಿ ಹೋರಾಟದಲ್ಲಿ ಜೆ.ಪಿ.ಯು ಸ್ವತಃ ಆರೆಸ್ಸೆಸ್ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟರು ಹಾಗೂ 'ಒಂದು ವೇಳೆ ಆರೆಸ್ಸೆಸ್ ಒಂದು ಕೋಮುವಾದಿ ಸಂಘಟನೆಯಾಗಿದ್ದಲ್ಲಿ ನಾನೂ ಒಬ್ಬ ಕೋಮುವಾದಿಯೇ' ಎಂದು ಘೋಷಿಸುವ ಮೂಲಕ ತನ್ನೆಲ್ಲಾ ಜನಪ್ರಿಯತೆಯನ್ನು ಆರೆಸ್ಸೆಸ್ ಅನ್ನು ಜನಮಾನ್ಯಗೊಳಿಸಲು ಧಾರೆಯೆರೆದರು. 1977ರಲ್ಲಿ ತುರ್ತು ಪರಿಸ್ಥಿತಿ ನಂತರ ಬಲವಾದ ಕಾಂಗ್ರೆಸ್ ವಿರೋಧಿ ಅಲೆಯಲ್ಲಿ ಅಧಿಕಾರಕ್ಕೆ ಬಂದ ಜನತಾ ಸರ್ಕಾರದಲ್ಲಿ ಸಂಘಪರಿವಾರದವರು ಮೊದಲ ಬಾರಿಗೆ ಪ್ರಭುತ್ವಾಧಿಕಾರದ ರುಚಿ ಪಡೆದರು..... ಹಾಗೂ ಆಗಲೇ ಶಿಕ್ಷಣದ ಕೋಮುವಾದೀಕರಣದ ಮೊದಲ ಪ್ರಯತ್ನ ಗಳನ್ನು ಪ್ರಾರಂಭಿಸಿದರು. ನಂತರ 1980ರಲ್ಲಿ ಜನತಾ ಪಕ್ಷದಿಂದ ಹೊರಬಂದು 'ಭಾರತೀಯ ಜನತಾಪಕ್ಷ'ವನ್ನು ಕಟ್ಟಿದ ಸಂಘಪರಿವಾರಕ್ಕೆ 1984ರ ಚುನಾವಣೆಯಲ್ಲಿ ದಕ್ಕಿದ್ದು ಕೇವಲ ಎರಡು ಸೀಟು. ಆಗ ಈಗಿನ ಪ್ರಧಾನ ಮಂತ್ರಿ ವಾಜಪೇಯಿ ಸಹ ಚುನಾವಣೆಯಲ್ಲಿ

ಸೋಲುಂಡಿದ್ದರು. 1952ರಿಂದ 1984ರ ತನಕ ಈ ಹಿಂದೂ ಕೋಮುವಾದಿಗಳು ಪಡೆದ ಓಟಿನ ಷೇರು ಶೇ. 10ನ್ನು ದಾಟಲಿಲ್ಲ.... ಹೀಗಾಗಿ 1947ರ ನಂತರದ ಮೂವತ್ತೈದು ವರ್ಷಗಳ ಕಾಲ ಪ್ರಧಾನ ರಾಜಕಾರಣದ ಅಂಚಿನಲ್ಲೇ ಉಳಿದಿದ್ದರು. ಅವರು ಉಳಿಯಲು ಹಾಗೂ ಬೆಳೆಯಲು ಮಧ್ಯಮ ಮಾರ್ಗ ಹಾಗೂ ಕಥಾಕಲ್ಪಿತ ಎಡಬಿಡಂಗಿ ಸಮಾಜವಾದಿಗಳು ಹಾಗೂ ಜೆ.ಪಿ. ವಾದಿಗಳೇ ಕಾರಣರಾದರೆಂಬುದು ಗಮನಾರ್ಹವಾದ ಸಂಗತಿ.

ನಂತರ 1984ರಲ್ಲಿ ಸಿಖ್‌ರ ನರಹತ್ಯೆ ನಡೆಸಿದ ಕಾಂಗ್ರೆಸ್ ಸರ್ಕಾರ ಮುಸ್ಲಿಂ ಮಹಿಳೆ ಶಾ ಬಾನು ಪ್ರಕರಣದಲ್ಲಿ ಮುಸ್ಲಿಂ ಕೋಮುವಾದಿಗಳನ್ನು ಸಂತೈಸಲು ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧ ಸಂಸತ್ ವಿಧೇಯಕ ಜಾರಿ ಮಾಡಿತು. ಹಾಗೂ ಅದಕ್ಕೆ ಪ್ರತಿಯಾಗಿ ಹಿಂದೂ ಕೋಮುವಾದಿಗಳನ್ನು ಸಂತೈಸಲು ಅಯೋಧ್ಯೆಯ ರಾಮಮಂದಿರದ ಬಾಗಿಲನ್ನು ತೆರೆಸಿತು. ಇದು ಹೊಸ ರಾಜಕೀಯ, ಸಾಮಾಜಿಕ ಸಂದರ್ಭದಲ್ಲಿ ಪುನರುಜ್ಜೀವನಗೊಂಡ ಹಿಂದೂ ಕೋಮುವಾದಿ ರಾಜಕಾರಣಕ್ಕೂ ಬಾಗಿಲನ್ನು ತೆರೆಯಿತು. ಇದನ್ನು ಸಂಪೂರ್ಣವಾಗಿ ಬಳಸಿಕೊಂಡು ಬಿ.ಜೆ.ಪಿ., ವಿ.ಹೆಚ್.ಪಿ., ಭಜರಂಗಿಗಳು ಸಂಕಲ್ಪ ಯಾತ್ರೆ, ಇಟ್ಟಿಗೆ ಯಾತ್ರೆ, ರಥ ಯಾತ್ರೆಗಳ ಮೂಲಕ 1990ರ ವೇಳೆಗೆ ಉತ್ತರ ಭಾರತದಲ್ಲಿ ಪ್ರಬಲ ಶಕ್ತಿಯಾಗಿ ಬೆಳೆದವು.

ಆ ವೇಳೆಗೆ ಕೋಮುವಾದಿ ಹಿಂದುತ್ವ ರಾಜಕಾರಣಕ್ಕೆ ಜನಸಾಮಾನ್ಯರ ನಡುವೆ ಮಾನ್ಯತೆ ಸಿಗಬಹುದಾದ ಸಾಮಾಜಿಕ, ರಾಜಕೀಯ ವಾತಾವರಣ ಸೃಷ್ಟಿಯಾಗಿತ್ತು. 1947ರಲ್ಲಿ ಹುಟ್ಟುಹಾಕಿದ್ದ ಆಶೆ-ನಿರೀಕ್ಷೆಗಳನ್ನು ಕಾಂಗ್ರೆಸ್ ಹಾಗೂ ಕಾಂಗ್ರೆಸ್ ಮಾದರಿ ಭೂಮಾಲೀಕ - ಬಂಡವಾಳಶಾಹಿ ಪರ ಹಾಗೂ ಮೃದು ಕೋಮುವಾದೀ ಪಕ್ಷಗಳು ಹುಸಿಗೊಳಿಸಿದ್ದವು. ಒಂದೆಡೆ ಈ ದೇಶದ ದೊಡ್ಡ ಭೂಮಾಲೀಕ-ದೊಡ್ಡ ಬಂಡವಾಳಿಗರು ಈ ಕಾಲಾವಧಿಯಲ್ಲಿ ಮತ್ತಷ್ಟು ಬಲಿತರೆ, ಮತ್ತೊಂದೆಡೆ ವಿಶಾಲ ಜನಸಮೂಹ ಮತ್ತಷ್ಟು ಬಡತನ, ನಿರುದ್ಯೋಗ, ಹಸಿವಿನಿಂದ ನರಳುವುದೇ ಮುಂದುವರೆಯಿತು. ಇದು ಒಂದೆಡೆ ನಕ್ಸಲ್ಬರಿಯಂತಹ ಕ್ರಾಂತಿಕಾರಿ ಚಳವಳಿಗೂ ಇತರ ದಲಿತ-ಶೂದ್ರ-ಮಹಿಳಾ ಚಳವಳಿಗಳ ಪ್ರಜಾತಾಂತ್ರಿಕ ಹೋರಾಟಗಳ ಹುಟ್ಟಿಗೂ ಕಾರಣವಾಯಿತು. ಹಸಿರು ಕ್ರಾಂತಿಯ ಪರಿಣಾಮವಾಗಿ ಗ್ರಾಮೀಣ ರೈತಾಪಿಯ ಒಂದು ವರ್ಗಕ್ಕೂ ಕೆಲವು ಶೂದ್ರ ಜಾತಿಗಳ ಒಂದು ವರ್ಗದ ಮುಂಚಲನೆಗೂ ಅವಕಾಶ ಮಾಡಿಕೊಟ್ಟಿತು. ಆದರೆ ಮಂಡಲ್ ಚಳವಳಿ, ದಲಿತ ಚಳವಳಿ ಹಾಗೂ ನಕ್ಸಲ್ಬರಿಯಂತಹ ಕ್ರಾಂತಿಕಾರಿ ಚಳವಳಿಗಳ ಮುನ್ನಡೆಗಳು ಇವೆಲ್ಲವನ್ನೂ ಸೈದ್ಧಾಂತಿಕವಾಗಿ ಹಾಗೂ ಪ್ರಾಯೋಗಿಕವಾಗಿ ಹಿಮ್ಮೆಟ್ಟಿಸಬಲ್ಲ ರಾಜಕೀಯ ಶಕ್ತಿಗೆ ಒತ್ತಾಸೆ ನೀಡಿದವು. ಕಾಂಗ್ರೆಸ್ ಮಾದರಿ ಹುಸಿ ಘೋಷಣೆಯ ರಾಜಕಾರಣ ಜನರೆದುರು ಬಯಲಾಗಿ ಅಸ್ಥಿರ ಸರ್ಕಾರ ಅರ್ಥಾತ್ ಸ್ಫೋಟಕ ಸಾಮಾಜಿಕ ನಿರ್ವಹಣ ಪರಿಸ್ಥಿತಿಯನ್ನು ಉಂಟುಮಾಡಿದ್ದ ಸಂದರ್ಭದಲ್ಲಿ ಬಹಿರಂಗವಾಗಿಯೇ ಜನವಿರೋಧಿ ರಾಜಕಾರಣ ಮಾಡಿಯೂ ಅಧಿಕಾರ ನಡೆಸಬಲ್ಲ ರಾಜಕೀಯ ಶಕ್ತಿಯಾಗಿ ಬಿ.ಜೆ.ಪಿ. ಮತ್ತದರ ಪರಿವಾರವು 90ರ ದಶಕದಲ್ಲಿ ಪುನರುಜ್ಜೀವನಗೊಂಡಿತು.

ಹಿಂದುತ್ವ-ಜಾಗತೀಕರಣದ ರಥಚಕ್ರ

ಆ ರೀತಿಯಲ್ಲಿ 1992ರಲ್ಲಿ ಬಾಬ್ರಿ ಮಸೀದಿಯ ವಿಧ್ವಂಸ ಒಂದು ಬಗೆಯಲ್ಲಿ ಮುಂದು ವರಿದ ವಿಧ್ವಂಸಕ್ಕೆ ಮುನ್ನಡೆಯಾಯಿತು. 90ರ ನಂತರ ಭಾರತೀಯ ಆರ್ಥಿಕತೆಯ ಮೇಲೆ ಜಾಗತೀಕರಣದ ಹೆಸರಲ್ಲಿ ಹೆಚ್ಚಾದ ಸಾಮ್ರಾಜ್ಯಶಾಹಿ ಆಕ್ರಮಣ ಜನತೆಯನ್ನು ಮತ್ತಷ್ಟು ದಿವಾಳಿ ಮಾಡಿತು. ಕುತೂಹಲಕಾರಿ ಅಂಶವೆಂದರೆ ಜಾಗತೀಕರಣದ ಈ ಹತ್ತು ವರ್ಷಗಳೇ ಹಿಂದೂ ಕೋಮುವಾದ ಬೆಳವಣಿಗೆಯ ಹತ್ತು ವರ್ಷಗಳಾಗಿವೆ. ಜಾಗತೀಕರಣದ ಪ್ರಭಾವ ಜನತೆಯ ಮೇಲೆ ತೀವ್ರಗೊಳ್ಳುತ್ತಿದ್ದಂತೆ ಜನತೆಯ ಮೇಲೆ ಹಿಂದುತ್ವವಾದಿಗಳ ಪ್ರಭಾವವೂ ಹೆಚ್ಚಾಗುತ್ತಿದೆ. ಒಂದೆಡೆ ಜಾಗತೀಕರಣದ ಹೆಸರಲ್ಲಿ ಸಾಮ್ರಾಜ್ಯಶಾಹಿ ಆಕ್ರಮಣವು 1947ರ ನಂತರ ಕಟ್ಟಿಕೊಂಡ ಸಂಸದೀಯ ಪ್ರಜಾತಾಂತ್ರಿಕ ಸಂಸ್ಥೆಗಳನ್ನೆಲ್ಲಾ ಅಪ್ರಸ್ತುತಗೊಳಿಸುತ್ತಿದ್ದರೆ ಮತ್ತೊಂದೆಡೆ ಎಲ್ಲಾ ಸಂಸದೀಯ ಸಂಸ್ಥೆ ಹಾಗೂ ಸ್ಥಾನಗಳನ್ನು ಹಿಂದುತ್ವವಾದಿಗಳು ಉಲ್ಲಂಘಿಸುವ ಮೂಲಕ ಅಮಾನ್ಯಗೊಳಿಸುತ್ತಿದ್ದಾರೆ. ಅಥವಾ ಸಂವಿಧಾನ ಬಾಹಿರ ಮಾರ್ಗೋಪಾಯಗಳ ಮೂಲಕ ಅವುಗಳನ್ನು ಆಕ್ರಮಿಸುತ್ತಿದ್ದಾರೆ. ಒಂದೆಡೆ ಸಾಮ್ರಾಜ್ಯಶಾಹಿ ಲೂಟಿಗೆ ಅನುಸಾರವಾಗಿ ಸಬ್ಸಿಡಿ ಕಡಿತ, ಸಾರ್ವಜನಿಕ ವಲಯದ ವಿಕ್ರಯ, ಕಾರ್ಮಿಕ ವಿರೋಧಿ ಕಾಯ್ದೆ ಇತ್ಯಾದಿಗಳಂತಹ ಜನವಿರೋಧಿ - ಎರಡನೇ ಪೀಳಿಗೆ ಸುಧಾರಣೆ ಜಾರಿಗೆ ಬರುತ್ತಿದ್ದಂತೆ ಹಿಂದುತ್ವ ಗುಜರಾತ್ ಹತ್ಯಾಕಾಂಡದಂತಹ ಮೋದಿತ್ವದ ಹಂತಕ್ಕೆ ಬೆಳೆಯುತ್ತಿದೆ.

1992ರಲ್ಲಿ ಜಾಗತೀಕರಣದ ಆರ್ಥಿಕ ಪುನರ್‌ರಚನೆಯ ಮೊದಲ ಪೀಳಿಗೆಯ ಸುಧಾರಣೆಯ ಕ್ರಮಗಳು ಜಾರಿಯಾದ ಸಂದರ್ಭದಲ್ಲಿ ಕೋಮುವಾದಿಗಳು ಬಾಬ್ರಿ ಮಸೀದಿ ಧ್ವಂಸ ಮಾಡಿದ್ದರು. ಆದರೆ ಆ ನಂತರದ ಚುನಾವಣೆಗಳಲ್ಲಿ ಬಿ.ಜೆ.ಪಿ.ಯನ್ನು ಜನತೆ ಹೀನಾಯವಾಗಿ ಸೋಲಿಸಿತು. ಆದರೆ ಈಗ 2002ರಲ್ಲಿ ಇನ್ನಷ್ಟು ಭೀಕರವಾದ ಸಾಮ್ರಾಜ್ಯಶಾಹಿ ಪರ ಎರಡನೇ ಪೀಳಿಗೆ ಸುಧಾರಣೆ ಅನುಷ್ಠಾನಕ್ಕೆ ಬರುತ್ತಿರುವ ವೇಳೆಯಲ್ಲಿ ಮೋದಿ ನೇತೃತ್ವದಲ್ಲಿ ಗುಜರಾತಿನ ನರಮೇಧ ನಡೆಯಿತು. ಆದರೆ ವ್ಯತ್ಯಾಸವೆಂದರೆ ನರಮೇಧದ ನಂತರ ಮೋದಿ ಇನ್ನಷ್ಟು ಜನ ಬೆಂಬಲ ದೊಂದಿಗೆ ಅಧಿಕಾರಕ್ಕೆ ಮರಳಿರುವುದು. ಯಾವ ಕಾರ್ಮಿಕರ ಹಾಗೂ ದಲಿತರ ಮೇಲೆ ಸಂಘಪರಿವಾರದ ಆರ್ಥಿಕ ನೀತಿಗಳು ಭೀಕರ ಪರಿಣಾಮ ಬೀರಿ ಬೀದಿಗೆ ತಳ್ಳುತ್ತಿವೆಯೋ, ಅದೇ ಜನಸಮುದಾಯಗಳು ಸಂಘಪರಿವಾರದವರಿಗೆ ಓಟು ಹಾಕುವಂತೆ, ಶೋಷಣೆಗೆ ಸಮ್ಮತಿ ನೀಡುವಂತೆ ಮಾಡಿರುವುದರಲ್ಲಿ ಅವರು ಬಿತ್ತರಿಸುತ್ತಿರುವ 'ದ್ವೇಷ ಸಿದ್ಧಾಂತ'ದ ಶಿಕ್ಷೆ ಯೇನೆಂಬುದು ಮನವರಿಕೆಯಾಗುತ್ತದೆ.

ಆದರೆ ಅದಕ್ಕೆ ಪರ್ಯಾಯವಾದ ಸಿದ್ಧಾಂತ ಬದುಕು, ಭವಿಷ್ಯದ ಗ್ರಾಹ್ಯ ಮಾದರಿಗಳು ಇಲ್ಲದಂತಾಗಿರುವುದು ಪ್ರಸ್ತುತ ದುರ್ಭರ ಪರಿಸ್ಥಿತಿಗೆ ಮತ್ತೊಂದು ಕಾರಣ.

ಇದು ಹಿಂದೂ ಫ್ಯಾಸಿಸಂ ಸಮಾಜದಲ್ಲಿ ಆಳವಾಗಿ ಬೇರು ಬಿಡುತ್ತಿರುವುದರ ಸಂಕೇತವಾಗಿದೆ. ಇದಕ್ಕೆ ಸಾಮ್ರಾಜ್ಯಶಾಹಿಗಳ ಒತ್ತಾಸೆ, ಆಳುವ ವರ್ಗಗಳ ಬೆಂಬಲ, ಜನತೆಯ ಆತಂಕ,

ಕೋಮುವಾದಿ ದಿಕ್ಕಿನೆಡೆ ಹೊರಳಿಸಿರುವ ಹಿಂದುತ್ವವಾದಿಗಳ ರಾಜಕೀಯ ಸಾಮಾಜಿಕ ಸಂಕ್ಷೋಭೆ, ಎಷ್ಟು ಕಾರಣವಾಗುತ್ತಿದೆಯೋ ಅಷ್ಟರ ಮಟ್ಟಿಗೆ ಇದನ್ನು ಸಮಗ್ರವಾಗಿ ಗ್ರಹಿಸದ, ಹೋರಾಟಗಳಿಂದ ಹಿಮ್ಮುಖವಾಗಿರುವ ಎಡಪಂಥೀಯ ಹಾಗೂ ಪ್ರಗತಿಪರ ರಾಜಕಾರಣವೂ ಕಾರಣವಾಗಿದೆ.

ವಾಸ್ತವವಾಗಿ 90ರ ದಶಕದಲ್ಲಿ ಕಾರ್ಮಿಕರ ಮೇಲೆ ಬಂಡವಾಳದ ದಾಳಿ ತೀವ್ರವಾಗಿದ್ದರೂ ಕಾರ್ಮಿಕ ಮುಷ್ಕರಗಳಿಗಿಂತ ಆಡಳಿತ ಮಂಡಳಿಯ ಲಾಕೌಟುಗಳೇ ಹೆಚ್ಚಾಗಿವೆ. ಬಡ ಮಧ್ಯಮ ರೈತರ ಮೇಲೆ ಕೃಷಿ ಬಹುರಾಷ್ಟ್ರೀಯ ಕಂಪೆನಿಗಳ ದಾಳಿ ಹೆಚ್ಚುತ್ತಿದ್ದರೂ ಅಲ್ಲಲ್ಲಿ ತತ್ಪ್ರೇರಿತ ಹೋರಾಟಗಳು ನಡೆಯುತ್ತಿದ್ದರೂ ಅವುಗಳಲ್ಲಿ ಒಟ್ಟು ಚಳವಳಿಯ ಕುರುಹೇ ಕಾಣುತ್ತಿಲ್ಲ. ದಲಿತರ ಮೇಲಿನ ದಾಳಿ ಬರ್ಬರಗೊಳ್ಳುತ್ತಿದ್ದರೂ ಈ ದಶಕದಲ್ಲಿ ದಲಿತರ ಐಕ್ಯತೆಗಿಂತ ವಿಘಟನೆಯೇ ಹೆಚ್ಚಾಗುತ್ತಿದೆ. ಮತ್ತೊಂದೆಡೆ ಈ ಎಲ್ಲಾ ಜನಸಮುದಾಯಗಳ ಆತಂಕವನ್ನು ಹಿಂದುತ್ವವಾದಿಗಳು ಕಲ್ಪಿತ ಮುಸ್ಲಿಂ ಶತ್ರುವಿನ ವಿರುದ್ಧ ಸಂಘಟಿಸುತ್ತಿದ್ದಾರೆ. ಗುಜರಾತಿನಲ್ಲಿ ಆದಿವಾಸಿ ದಲಿತರು ಮುಸ್ಲಿಮರ ಮೇಲಿನ ದಾಳಿಯಲ್ಲಿ ಭಾಗಿಯಾಗಿದ್ದಾರೆ. ಮುಂಬೈನ ಕಾರ್ಮಿಕರು ಶಿವಸೈನಿಕರಾಗಿದ್ದಾರೆ. ರೈತರು ರಾಮ ರಥಯಾತ್ರೆಗೆ ಇಟ್ಟಿಗೆ ಹೊತ್ತಿದ್ದಾರೆ. ಈ ಬೆಳವಣಿಗೆಗೆ ಪ್ರಧಾನವಾದ ಕಾರಣ ಹಿಂದೂ ಫ್ಯಾಸಿಸಂಅನ್ನು ಒಂದು ಸಂಸದೀಯ ಅಧಿಕಾರದ ಕಸರತ್ತೆಂದು ಭಾವಿಸಿ ಹೋರಾಟಗಳನ್ನೆಲ್ಲಾ ಅವರನ್ನು ಸಂಸದೀಯ ಅಧಿಕಾರ ಪಡೆಯದಂತೆ ಮಾಡುವ ಸರ್ಕಸ್ಸಿಗೆ ಸೀಮಿತಗೊಳಿಸಿದ್ದು. ರಾಜೀರಹಿತ ವರ್ಗ ಹೋರಾಟದಲ್ಲಿ ನಿರತವಾಗದೆ ಅವಕಾಶವಾದಿ ರಾಜಕಾರಣದಲ್ಲಿ ಮುಳುಗಿ ಫ್ಯಾಸಿಸ್ಟರ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟದ್ದು. ಹಿಂದೂ ಫ್ಯಾಸಿಸಂ ಅನ್ನು ಕೇವಲ ಸಾಂಸ್ಕೃತಿಕ ಸಮಸ್ಯೆಯೆಂದು ಗೌಣಗೊಳಿಸಿ ಪ್ರಬಲ ರಾಜಕೀಯ ಹೋರಾಟ ಕಟ್ಟದೇ ಹೋದದ್ದು.... ಸಾರಾಂಶದಲ್ಲಿ ಪ್ರಸ್ತುತ ಭೀಕರ ಬಿಕ್ಕಟ್ಟಿಗೆ ಪ್ರಬಲ ಸಮಾಜವಾದಿ/ಜನಮುಖಿ ಪರ್ಯಾಯ ಕಟ್ಟದೆ ವ್ಯವಸ್ಥೆಗೆ ತೇಪೆ ಹಾಕುತ್ತಾ, ಹಾಕುತ್ತಾ ವ್ಯವಸ್ಥೆಯ ಭಾಗವೇ ಆಗಿ ಹೋದದ್ದು.....

ಫ್ಯಾಸಿಸಂ ಸವಾಲು....ಸಂಘರ್ಷವೊಂದೇ ಉತ್ತರ

ಸಾಮ್ರಾಜ್ಯಶಾಹಿಗಳ, ದೊಡ್ಡ ಬಂಡವಾಳಿಗರ, ಭೂ ಮಾಲೀಕರ ಸೇವೆಗಾಗಿಯೇ ಕೋಮುವಾದಿ ಹಿಂದು ಫ್ಯಾಸಿಸಂ ರೂಪ ಪಡೆದಿರುವುದು ಸ್ಪಷ್ಟ. ಹಿಂದೂ ಫ್ಯಾಸಿಸಂ ಹೇಗೆ ಈ ಮೇಲಿನ ಮೂರರ ಸೇವಕ ಎಂಬುದನ್ನು ವಿವರಿಸಲು ಅಗತ್ಯವಿರದಷ್ಟರ ಮಟ್ಟಿಗೆ ಅದು ಹೆಚ್ಚಳವಾಗಿದೆ. ಫ್ಯಾಸಿಸಂ ಈ ನಾಡಿನ ಎಲ್ಲಾ ಪ್ರಜಾಪ್ರಭುತ್ವ ಮೌಲ್ಯಗಳ ಪ್ರಜಾತಾಂತ್ರಿಕ ಬದುಕಿನ ಮೇಲಿನ ದಾಳಿಯಾಗಿದೆ. ಬ್ರಾಹ್ಮಣೀಕರಣ ಅದರ ತಿರುಳು. ಸಾಮ್ರಾಜ್ಯಶಾಹಿಗಳ ಸೇವೆ ಅದರ ಉದ್ದೇಶ. ಅಲ್ಪಸಂಖ್ಯಾತರ ಹತ್ಯಾಕಾಂಡ, ಅದರ ಮಾರ್ಗ. ಈಗಾಗಲೇ ಅದು ಸಮೂಹ ತಳಹದಿ, ಪ್ರಭುತ್ವ ಬೆಂಬಲ-ಪ್ರಭುತ್ವದೊಳಗಿನ ವ್ಯಾಪಕತೆ ಎಲ್ಲವನ್ನೂ ಪಡೆದುಕೊಂಡಿದೆ. ಅದರೊಂದಿಗೆ ಮಧ್ಯಮಾರ್ಗಿ ಪಕ್ಷಗಳ, ಸೋಗಲಾಡಿ ಸಮಾಜವಾದಿಗಳ ಬೆಂಬಲವನ್ನೂ ಪಡೆದುಕೊಂಡಿದೆ. ಈಗಾಗಲೇ ಗುಜರಾತಿನಿಂದ ಪ್ರಾರಂಭಗೊಂಡು ನರಹತ್ಯಾ

ಕಾಂಡವನ್ನು ಪ್ರಾರಂಭಿಸಿದೆ. ಈ ದೇಶದ ಅಧ್ಯಕ್ಷ ಪದವಿ, ಉಪಾಧ್ಯಕ್ಷ, ಪ್ರಧಾನಮಂತ್ರಿ, ಕೋರ್ಟ್, ಅಧಿಕಾರಶಾಹಿ ಎಲ್ಲವನ್ನೂ ಒಂದೊಂದಾಗಿ ವಶಪಡಿಸಿಕೊಳ್ಳುತ್ತಿದೆ.

ಮತ್ತೊಂದೆಡೆ ಚಿಕ್ಕಮಗಳೂರಿನಂಥ ಕಡೆಗಳಲ್ಲಿ ಫ್ಯಾಸಿಸಂ ವಿರೋಧಿ ಎಡ-ಪ್ರಜಾತಾಂತ್ರಿಕ ಶಕ್ತಿಗಳೆಲ್ಲಾ ಒಂದಾಗುತ್ತಿವೆ. ಒಂದೆಡೆ ಈ ಐಕ್ಯತೆಯೊಂದಿಗೆ ಹಿಂದು ಫ್ಯಾಸಿಸಂ ಎಂಬ ಮೂರ್ತ ಶತ್ರುವಿನ ವಿರುದ್ಧ ಮುಖಾಮುಖಿ ಹಾಗೂ ಸಮಗ್ರ ರೀತಿಯ ಹೋರಾಟ ನಡೆಸಬಲ್ಲ ಕಸುವು ಇಂದಿನ ಅಗತ್ಯವಾಗಿದೆ. ಸೋವಿಯತ್ ರಷ್ಯಾದ ಕೆಂಪುಸೇನೆ ಇಲ್ಲದಿದ್ದರೆ ಹಿಟ್ಲರ್ ಸೋಲುತ್ತಿರಲಿಲ್ಲ. ನಿಜವಾಗಿ ಪ್ರಜಾಪ್ರಭುತ್ವ ಹಾಗೂ ಸಮಾಜವಾದದ ವಿರುದ್ಧದ ದಾಳಿಯೆಂದು ಗ್ರಹಿಸಿ ಆ ನಿಟ್ಟಿನಲ್ಲಿ ಪ್ರಪಂಚದ ಪ್ರಜಾತಾಂತ್ರಿಕ ಸಮಾಜವಾದಿ ಶಕ್ತಿಗಳನ್ನು ಸಜ್ಜುಗೊಳಸದಿದ್ದಲ್ಲಿ ಫ್ಯಾಸಿಸಂ ನಾಶವಾಗುತ್ತಿರಲಿಲ್ಲ.

ಭಾರತದ ಸಂದರ್ಭದಲ್ಲಿ ಈ ಎರಡೂ ಕೊರತೆಗಳನ್ನು ನೀಗುವ ಕಡೆ ನಮ್ಮ ಪ್ರಯತ್ನಗಳು ಸಾಗಬೇಕಿದೆ. ಕೋಮುವಾದ ವಿರೋಧ, ಫ್ಯಾಸಿಸಂ ವಿರೋಧವಾಗಿ ಪರಿಣಮಿಸಬೇಕಿದೆ. ಫ್ಯಾಸಿಸಂ ಎಂಬುದು ರೈತ-ಕಾರ್ಮಿಕ-ಮಹಿಳೆ-ದಲಿತ-ಶೂದ್ರ, ಪ್ರಜಾಪ್ರಭುತ್ವ, ಸಮಾಜವಾದಿ ವಿರೋಧಿ ಸೈನಿಕ ಶಕ್ತಿ ಪಡೆದ ಒಂದು ಸುಸಜ್ಜಿತ ಶತ್ರು ಎಂದು ಅರ್ಥಮಾಡಿಕೊಳ್ಳಬೇಕಾಗಿದೆ. ಆ ನಿಟ್ಟಿನಲ್ಲಿ ಈ ಜನವರ್ಗಗಳನ್ನೆಲ್ಲಾ ಸಂಘಟಿಸಿ ಫ್ಯಾಸಿಸಂಗೆ ನೈಜ ಪರ್ಯಾಯವಾದ ರಾಜಕೀಯ ಚಿಂತನೆಗೆ, ಹೋರಾಟಕ್ಕೆ, ಸಂಘರ್ಷಕ್ಕೆ ಎಲ್ಲಾ ಪ್ರಜಾತಾಂತ್ರಿಕ ಶಕ್ತಿಗಳೂ, ವರ್ಗಗಳೂ ಎಲ್ಲಾ ರೀತಿಯಲ್ಲಿ ಸಜ್ಜಾಗಬೇಕಿದೆ.

ಮಾರ್ಕ್ಸ್ ಮತ್ತು ವಿಜ್ಞಾನ

ಪ್ರೊ. ಎಂ.ಎ. ಸೇತುರಾವ್

ಸೋವಿಯತ್ ಒಕ್ಕೂಟ ವಿಭಜನೆಯಾದ ನಂತರ, ಸೋವಿಯತ್ ಕ್ರಾಂತಿಯ ಮಹತ್ವವನ್ನು ಚರಿತ್ರೆಕಾರರು ಅಲ್ಲಗಳೆಯುವುದು ಸಾಮಾನ್ಯ ವಾಗಿದೆ. ಆದರೆ, ಈ ಕ್ರಾಂತಿಯ ಬೆನ್ನೆಲುಬಾಗಿದ್ದ ತಾತ್ವಿಕ ದೃಷ್ಟಿಯನ್ನೂ ಸಾರಾಸಗಟಾಗಿ ತಳ್ಳಿ ಹಾಕುವ ಪ್ರವೃತ್ತಿಯನ್ನು ನಾವು ಗಮನಿಸುತ್ತಿದ್ದೇವೆ. ಸೋವಿಯತ್ ಕ್ರಾಂತಿಗೆ ಪುಷ್ಟಿಯನ್ನೊದಗಿಸಿದ ಮಾರ್ಕ್ಸ್‌ನ ಬರಹಗಳನ್ನು ಮೂಲೆಗುಂಪಾಗಿಸುವುದು ಸದ್ಯದಲ್ಲಿ ನಾವು ನೋಡುತ್ತಿರುವ ಅನಪೇಕ್ಷಣೀಯ ವರ್ತನೆ. ಮಾರ್ಕ್ಸ್ ಸಿದ್ಧಾಂತದ ಅನೇಕ ಮುಖಗಳಲ್ಲಿ ವಿಜ್ಞಾನದ ಬಗ್ಗೆ ಮಾರ್ಕ್ಸ್ ತಾಳಿದ ನಿಲುವು ಅತ್ಯಂತ ಸೂಕ್ಷ್ಮ ಹಾಗೂ ಪ್ರಬಲವೆಂದೆನಿಸುತ್ತದೆ. ಈ ನಿಲುವಿನ ಹಲವು ಸೂಕ್ಷ್ಮಗಳನ್ನು ಇಲ್ಲಿ ಉಲ್ಲೇಖಿಸಿದೆ.

ಕಾರ್ಲ್ ಮಾರ್ಕ್ಸ್‌ಗೆ ಜಗತ್ತಿನ ನಿಜಸ್ವರೂಪವನ್ನು ತಿಳಿಯಲು ವಿಜ್ಞಾನವು 'ಸಾಧಕವಾಗಿದ್ದುದಲ್ಲದೆ ವಿಜ್ಞಾನ ಮತ್ತು ಕೈಗಾರಿಕೆಗೆ ಇರುವ ಸಂಬಂಧ, ಬಂಡವಾಳಶಾಹಿ ಕಾಲದಲ್ಲಿ ಇವೆರಡರ ಪರಸ್ಪರ ಹೊಂದಾಣಿಕೆ, ಇವುಗಳನ್ನು ಅರ್ಥೈಸಲು ನೆರವನ್ನು ನೀಡಿತ್ತು. ಮಾರ್ಕ್ಸ್ ಚಿಂತನೆಯಲ್ಲಿ ವಿಜ್ಞಾನದ ಮುನ್ನಡೆಯನ್ನು ಅರ್ಥಪೂರ್ಣವಾಗಿ ವಿವರಿಸುವುದಲ್ಲದೆ, ವಿಜ್ಞಾನವು ಸಮಾಜವಾದಿ ಸಮಾಜವನ್ನು ಕಟ್ಟುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಬಲ್ಲುದೆಂಬ ಆಶಾವಾದವೂ ಇದ್ದಿತು.

ತನ್ನ ವಾದವನ್ನು ಮಂಡಿಸುವಾಗ ಮಾರ್ಕ್ಸ್ ಹೆಗೆಲ್‌ನ ದ್ವಂದ್ವತಾ ಮಾರ್ಗವನ್ನೂ (ಡಯಲೆಕ್ಟಿಕ್), ವಿಜ್ಞಾನಿಗಳ ವಾಸ್ತವತಾವಾದವನ್ನೂ (ಮೆಟೀರಿಯಲಿಸ್ಟಿಕ್) ಮತ್ತು ರಿಕಾರ್ಡೊ, ಆಡಮ್ ಸ್ಮಿತ್ ಮತ್ತಿತರ

ಆರ್ಥಿಕ ತಜ್ಞರ ಆರ್ಥಿಕ ವಾದಗಳನ್ನೂ ಸೂಕ್ತವಾಗಿ ಬಳಸಿಕೊಂಡಿದ್ದುಂಟು. ಹೀಗೆ ಮಾರ್ಕ್ಸ್ ತನ್ನ ಕ್ರಾಂತಿಕಾರಿ ಪ್ರಣಾಳಿಕೆಯನ್ನು ವಿಸ್ತರಿಸುವಾಗ ವಿಜ್ಞಾನದ ಮೂಲಭೂತ ಸಂದೇಶಗಳ ಆಸರೆ ಪಡೆದಿದ್ದ. "ನಾನು ಮಾರ್ಕ್ಸಿಸ್ಟ್ ಅಲ್ಲ"ವೆಂದ ಮಾರ್ಕ್ಸ್ ವಿಜ್ಞಾನವನ್ನು ಒಂದು ತಾತ್ವಿಕ 'ಸಿಸ್ಟಮ್' ಅನ್ನಾಗಿ ಅರ್ಥೈಸಬಾರದೆಂದು ಎಚ್ಚರಿಕೆ ನೀಡಿದ್ದ. ವಿಜ್ಞಾನದ ಮುಖ್ಯ ತಿರುಳೆಂದರೆ ವಿಜ್ಞಾನದ ಮಾರ್ಗ. ವೈಜ್ಞಾನಿಕ ಸಂಶೋಧನೆಗಳಿಗೆ ಈ ವಿಧಾನವು ಹೇಗೆ ಸಹಕಾರ ನೀಡುತ್ತದೆಯೋ ಅದೇ ರೀತಿ ಸಮಾಜವಾದವನ್ನು ನಿರೂಪಿಸುವಾಗಲೂ ವಿಜ್ಞಾನ ನೆರವನ್ನು ನೀಡುತ್ತದೆಯೆಂದು ಮಾರ್ಕ್ಸ್ ಒತ್ತಿ ಒತ್ತಿ ಹೇಳಿದ್ದ. ಫ್ರೆಂಚ್ ಅರ್ಥಶಾಸ್ತ್ರಜ್ಞ ಪ್ರೂಧೋನ್ ಬರೆದ "ಬಡತನದ ತಾತ್ವಿಕ ಜಿಜ್ಞಾಸೆ"ಗೆ ಉತ್ತರವಾಗಿ ಪ್ರಕಟಿಸಿದ "ತಾತ್ವಿಕ ಜಿಜ್ಞಾಸೆಯ ಬಡತನ" ಎಂಬ ಗ್ರಂಥದಲ್ಲಿ ಈ ವಿಷಯವನ್ನು ಮಾರ್ಕ್ಸ್ ಹೀಗೆ ಸುಸ್ಪಷ್ಟಪಡಿಸಿದ:

"ಕೇವಲ ಸೈದ್ಧಾಂತಿಕವಾಗಿ ಕನಸು ಕಾಣುವ ದಾರ್ಶನಿಕರು ವಿಜ್ಞಾನವನ್ನು ಎಲ್ಲಿಯವರೆಗೆ ಒಂದು 'ಸಿಸ್ಟಮ್' ಆಗಿ ಮನಗಾಣುತ್ತಾರೋ ಅಲ್ಲಿಯವರೆಗೆ ಅವರು 'ಬಡತನ'ದಲ್ಲಿ ಅಷ್ಟನ್ನೇ ನೋಡುತ್ತಾರೆಯೇ ವಿನಃ ತುಕ್ಕು ಹಿಡಿದ ಸಮಾಜ ವ್ಯವಸ್ಥೆಯನ್ನು ಕಿತ್ತೊಗೆಯುವ ಕ್ರಾಂತಿಕಾರಕ ಶಕ್ತಿ ಅದಾಗಬಲ್ಲದೆಂಬ ಅಂಶವನ್ನು ಗ್ರಹಿಸುವುದಿಲ್ಲ. ಚಾರಿತ್ರಿಕ ಸಂಘರ್ಷದಿಂದ ಜನಿಸಿದ ವಿಜ್ಞಾನ, ಸಾಮಾಜಿಕ ಬದಲಾವಣೆಯನ್ನು ತರುವುದರಲ್ಲಿ ಯಶಸ್ವಿಯಾಗಿ ಕೇವಲ ಸೈದ್ಧಾಂತಿಕ ಹಂತದಿಂದ ಕ್ರಾಂತಿಕಾರಕ ಪಥಕ್ಕೆ ಧಾವಿಸಿದೆ."

ಡಾರ್ವಿನ್ನನ ವಿಕಾಸವಾದದ ಉಪಯುಕ್ತತೆಯನ್ನು ಮಾರ್ಕ್ಸ್ ಮನಗಂಡು ಈ ವಾದವನ್ನು ಬೆಂಬಲಿಸಿದ. ಪ್ರಕೃತಿಯ ಅಧ್ಯಯನ ವಿಜ್ಞಾನದ ಕ್ಷೇತ್ರ. ಪ್ರಕೃತಿಯನ್ನು ಪ್ರಕ್ರಿಯೆಗಳ ಮೂಲಕ ಅರ್ಥಮಾಡಿಕೊಳ್ಳಬೇಕೇ ವಿನಃ ಸ್ಥಾಯಿ ತತ್ತ್ವಗಳ ಮೂಲಕವಲ್ಲವೆಂಬ ನಿಲುವನ್ನು ಮಾರ್ಕ್ಸ್ ತಾಳಿದ. ಇದು ವಿಜ್ಞಾನಿಗಳು ಒಪ್ಪತಕ್ಕಂಥ ಅಭಿಪ್ರಾಯವೇ ಆಗಿದೆ. ಇದಲ್ಲದೆ, ಪ್ರಕೃತಿಯನ್ನೂ ಪರಿಸರವನ್ನೂ ಬದಲಾಯಿಸಲು ಸಹ ವಿಜ್ಞಾನ ಅಗತ್ಯವೆಂದು ಮಾರ್ಕ್ಸ್ ತನ್ನ ಲೇಖನಗಳಲ್ಲಿ ಮಂಡಿಸಿದ್ದುಂಟು.

ವಿಜ್ಞಾನದ ರೂಪುರೇಷೆಗಳನ್ನು ಚರ್ಚಿಸುತ್ತಾ "ನಮ್ಮ ಇಂದ್ರಿಯಗಳಿಗೆ ಗೋಚರವಾಗುವುದೆಲ್ಲ ವಿಜ್ಞಾನದ ವಸ್ತುವಾಗಬೇಕು. ವಾಸ್ತವಿಕ ಪ್ರಜ್ಞೆ ಮತ್ತು ಬದುಕಿನ ಅವಶ್ಯಕತೆಗಳೆರಡೂ ಸಮನ್ವಯವಾದಾಗ ಅದು ನಿಜವಾದ 'ವಿಜ್ಞಾನ'ವೆನಿಸಿಕೊಳ್ಳುತ್ತದೆ. ನೈಜವಾದ ವಿಜ್ಞಾನ ಪ್ರಕೃತಿಯ ಅಧ್ಯಯನದಿಂದ ಆರಂಭವಾಗುತ್ತದೆ. ನಿಸರ್ಗದ ಇತಿಹಾಸದ ಸ್ಪಷ್ಟ ವಿಭಾಗವೇ ಮಾನವನ ಇತಿಹಾಸ. ನಿಸರ್ಗದಲ್ಲಿ ವಿಕಾಸವಾಗಿ ಮಾನವನ ಬೆಳವಣಿಗೆಯಾಯಿತು. ಅಂದ ಮೇಲೆ, ಕ್ರಮೇಣ ಪ್ರಾಕೃತಿಕ ವಿಜ್ಞಾನ ಹಾಗೂ ಮಾನವ ವಿಜ್ಞಾನ ಪರಸ್ಪರ ಹಾಸುಹೊಕ್ಕಾಗಿ ಸ್ಪಂದಿಸಿ, ಹೊಸೆದುಕೊಂಡು ಏಕೈಕ ವಿಜ್ಞಾನವೆನಿಸಿಕೊಳ್ಳುತ್ತದೆ" (ಮಾರ್ಕ್ಸ್ - ಎಂಗಲ್ಸ್: ಪತ್ರಗುಚ್ಛ).

ವಿಜ್ಞಾನ ಕೇವಲ ಮಾನವನ ಮನಸ್ಸಿನ ಕೃತಿ ಮಾತ್ರವಲ್ಲ. ಸಾಮಾಜಿಕ ಮತ್ತು ಔದ್ಯೋಗಿಕ ಕ್ರಾಂತಿಯ ಸಂದರ್ಭದಲ್ಲಿ ವಿಜ್ಞಾನ ಹುಟ್ಟಿ ಅಂದಿನ ಸಮಾಜದ ಸೇವೆಯನ್ನು ಮಾಡುವ

ಸಾಧನವಾಗಿ ಪರಿಣಮಿಸಿತೆಂದು ಮಾರ್ಕ್ಸ್ ಹೇಳಿದ. ಸಮಾಜಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನದ ಅವಶ್ಯಕತೆ ಇದ್ದರೆ, ವಿಜ್ಞಾನ ತಾನೇತಾನಾಗಿ ಮುಂದುವರಿಯುವುದು. ವಿಶ್ವವಿದ್ಯಾಲಯಗಳ ಸ್ಥಾಪನೆಯಿಂದ ಮಾತ್ರ ವಿಜ್ಞಾನ ಬೆಳೆಯುತ್ತದೆಯೆಂಬುದು ಭ್ರಮೆಯಷ್ಟೆ!

20ನೆಯ ಶತಮಾನದಲ್ಲಿ ವಿಜ್ಞಾನ ಒಂದು ಬೃಹತ್ ವ್ಯವಸ್ಥೆಯಾಗಿ ಬೆಳೆಯಿತಷ್ಟೆ. ಅಂತೆಯೇ ಈ ವ್ಯವಸ್ಥೆಗೆ ಸಾಕಷ್ಟು ಧನಸಹಾಯ ಅಗತ್ಯವಾಗಿದೆ. ಸರ್ಕಾರ ಅಥವಾ ಸರ್ಕಾರದಿಂದ ಪೋಷಿತವಾದ ಸಂಸ್ಥೆಗಳ ಮತ್ತು ವ್ಯವಸ್ಥೆಗಳ ಧನಸಹಾಯವಿಲ್ಲದೆ ವಿಜ್ಞಾನದ ಬೆಳವಣಿಗೆ ಕುಂಠಿತವಾಗುವುದು ಸಹಜ. ಈ ಕಾರಣಕ್ಕಾಗಿಯೇ ವಿಜ್ಞಾನ ಆಳುವ ಬಂಡವಾಳಶಾಹಿ ವರ್ಗದ ಒಂದು ಸಾಧನವಾಗಿದೆ. ಬಂಡವಾಳಶಾಹಿ ವರ್ಗವಾದರೋ ತನ್ನ ಅನುಕೂಲಕ್ಕೆ ಅಗತ್ಯವಾದ ವೈಜ್ಞಾನಿಕ ಸಂಶೋಧನೆಗಳನ್ನು ಮಾತ್ರ ಬಳಸಿಕೊಳ್ಳುವುದರಲ್ಲಿ ನಿರತವಾಗಿದೆ. ಜೀನ್‌ಗಳನ್ನು ಕುರಿತಾದ ಸಂಶೋಧನೆಗಳು ಜಗತ್ತನ್ನೇ ವಿಸ್ಮಯಗೊಳಿಸುವ ಹಂತವನ್ನು ಮುಟ್ಟಿದ್ದರೂ, ಆನುವಂಶಿಕ ಕಾಯಿಲೆಗಳನ್ನು ಗುಣಪಡಿಸುವ 'ಜೀನ್ ಥೆರಪಿ" ಇನ್ನೂ ಶೈಶವಾವಸ್ಥೆಯಲ್ಲೇ ಇರುವುದು ಇದಕ್ಕೆ ಉದಾಹರಣೆಯಾಗಿದೆ. ಆದರೆ, ಪರಮಾಣು ಶಸ್ತ್ರಾಸ್ತ್ರಗಳನ್ನೂ ಕ್ಷಿಪಣಿಗಳನ್ನೂ ವಿಷವಾಯುಗಳನ್ನೂ ಇನ್ನಿತರ ಮಾರಕ ಅಸ್ತ್ರಗಳನ್ನೂ ತಯಾರು ಮಾಡಲು ಎಲ್ಲೂ ಇಲ್ಲದ ಆತುರ. ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಎದ್ದು ಕಾಣುತ್ತಿರುವ ಆರ್ಥಿಕ ಮುಗ್ಗಟ್ಟಿನ ಒಂದು ಮುಖ ಇದು. ಈ ರಾಷ್ಟ್ರಗಳು ಆರ್ಥಿಕ ಮುಗ್ಗಟ್ಟನ್ನು ಎದುರಿಸಲಾರದೆ, ಸಮಾಜವಾದದ ಆಧಾರದ ಮೇಲೆ ಹೊಸ ವ್ಯವಸ್ಥೆಯಾಗುವುದೆಂಬುದು ಮಾರ್ಕ್ಸ್‌ನ ವಾದವಷ್ಟೆ. ಆದರೆ ಈ ಮುಗ್ಗಟ್ಟನ್ನು ಎದುರಿಸುವ ಮತ್ತು ಮುಂದೂಡುವ ತಂತ್ರವನ್ನು ಬಂಡವಾಳಶಾಹಿ ರಾಷ್ಟ್ರಗಳು ಕಂಡುಕೊಂಡಿವೆ. ಎರಡನೆಯ ಜಾಗತಿಕ ಯುದ್ಧವಾದ ನಂತರ ಯೂರೋಪಿನ ರಾಷ್ಟ್ರಗಳ ಮರು ವ್ಯವಸ್ಥೆಗೆಂದು ಅಮೆರಿಕ ಮಾರ್ಷಲ್ ಆರ್ಥಿಕ ಸಹಾಯ (ಏಡ್) ಮತ್ತಿತರ ಯೋಜನೆಗಳನ್ನು ಅನುಷ್ಠಾನಕ್ಕೆ ತಂದದ್ದು ಸರಿಯಷ್ಟೆ. ಈ ಮಾರ್ಷಲ್ ಯೋಜನೆಯಿಂದ ಐರೋಪ್ಯ ರಾಷ್ಟ್ರಗಳ ಪುನರುಜ್ಜೀವನ ಸಾಧ್ಯವಾಗಲಿಲ್ಲವೆಂಬುದು ಚರಿತ್ರೆಯ ಅಂಶವಾಗಿ ನಿಂತಿದೆ. ಬೂರ್ಜ್ವಾ ಅರ್ಥಶಾಸ್ತ್ರಜ್ಞರೇ ಮಾರ್ಷಲ್ ಏಡನ್ನು (AID) "ಆರ್ಥಿಕ ಮುಗ್ಗಟ್ಟನ್ನು ಬೇರೆ ದೇಶಗಳಿಗೆ ರಫ್ತು ಮಾಡುವ ಉಪಾಯ" ಎಂದು ವಿಶ್ಲೇಷಿಸಿದ್ದಾರೆ.

ಮಾರ್ಕ್ಸ್‌ನ ತಾತ್ವಿಕ ತೀರ್ಮಾನಗಳಿಗೂ ಭೌತಿಕ ವಾದದ ನಿಯಮಗಳಿಗೂ ವ್ಯತ್ಯಾಸವಿದೆ. ಮಾರ್ಕ್ಸ್‌ವಾದವನ್ನು ಭೌತಿಕ ನಿಯಮದಂತೆ ಅರ್ಥೈಸಲು ಹೊರಟರೆ ಅದು ತಪ್ಪಾಗುತ್ತದೆ. ಮಾರ್ಕ್ಸ್‌ವಾದ ಮಾನವ ಸಮಾಜದ ಬದಲಾವಣೆಯನ್ನು ಕುರಿತಾಗಿದೆ. ಪ್ರಕೃತಿಯ ನಿಯಮ ಗಳಿಗೂ ಮಾರ್ಕ್ಸ್‌ವಾದದ ಆಧಾರದ ಮೇಲೆ ನಿರೂಪಿಸಿದ ತೀರ್ಮಾನಗಳಿಗೂ ಮೂಲಭೂತವಾದ ವ್ಯತ್ಯಾಸವಿದೆ. ಭೌತಿಕ ನಿಯಮಗಳಿಗೆ ಅನಿವಾರ್ಯತೆ ಇರಬಹುದು. ಆದರೆ, ಮಾನವಸಮಾಜದ ಬದಲಾವಣೆಯಾಗುವುದರಲ್ಲಿ ಈ ರೀತಿಯ ಅನಿವಾರ್ಯತೆ ಇರಲಿಕ್ಕೆ ಸಾಧ್ಯವಿಲ್ಲ. ಕಮ್ಯೂನಿಸ್ಟ್ ಪ್ರಣಾಳಿಕೆಯಲ್ಲಿ (1848) "ದುಡಿಮೆಯ ಫಲವನ್ನು ತಮ್ಮದಾಗಿಸಿಕೊಳ್ಳುವವರನ್ನು ಹಾಗೆ ಮಾಡಲು ಅಶಕ್ತರನ್ನಾಗಿಸಲಾಗುವುದು" ಎಂದಿದೆ. ಇದು ಭೌತ ನಿಯಮಗಳಂತೆ

ಕರಾರುವಾಕ್ಕಾಗಿರುತ್ತದೆಯೆಂದು ಹೇಳಲು ಸಾಧ್ಯವಿಲ್ಲ. ಕಾರಣ, ಈ ರೀತಿಯ ಸಾಮಾಜಿಕ ಬದಲಾವಣೆಗಳಿಗೆ ಮಾನವ ಪ್ರಯತ್ನ ಅನಿವಾರ್ಯ. ಮಾನವನ ಪ್ರಜ್ಞಾಪೂರ್ವಕ ಕ್ರಿಯಾಶೀಲತೆಯಿದ್ದರೆ ಮಾತ್ರ ಸಾಮಾಜಿಕ ಕ್ರಾಂತಿ ಫಲಿಸಬಹುದು. ಈ ಅಂಶವನ್ನು ಮರೆತು ಸಾಮಾಜಿಕ ಕ್ರಾಂತಿ ತಾನೇ ತಾನಾಗಿ ಫಲಿಸುವುದೆಂಬ ಭಾವನೆ, ಮನುಷ್ಯನನ್ನು ಕೇವಲ ಯಂತ್ರವನ್ನಾಗಿಸಿ ನೋಡುವುದು ಯಾಂತ್ರಿಕ ವಾಸ್ತವತಾವಾದದ ಪರಮಾವಧಿ ಎನಿಸೀತು!

ವಸ್ತು ಮತ್ತು ಅದನ್ನು ಗ್ರಹಿಸುವ ನಮ್ಮ ಪ್ರಜ್ಞೆಯ ಬಗ್ಗೆ ಮಾರ್ಕ್ಸ್ ಹೀಗೆ ಹೇಳಿದ : "ನಾವು ಪ್ರಜ್ಞಾಪೂರ್ವಕವಾಗಿ ವಸ್ತುವನ್ನು ಗ್ರಹಿಸಲಿ ಅಥವಾ ಗ್ರಹಿಸದಿರಲಿ, ವಸ್ತು ನಿರಂತರವಾಗಿ ಅಸ್ತಿತ್ವದಲ್ಲಿರುತ್ತದೆ. ಆದರೆ, ಈ ವಸ್ತುನಿಷ್ಠೆ ಯಾಂತ್ರಿಕವಾಗಿರುವುದಿಲ್ಲ. ಇದು ಸಚೇತನವಾಗಿದ್ದು ನಮ್ಮ ಪ್ರಜ್ಞೆಯೂ ಸಚೇತನವಾಗಿರುತ್ತದೆ. ವಸ್ತುವಿನ ಗ್ರಹಿಕೆಗೆ ಸಂಬಂಧಪಟ್ಟ ವೀಕ್ಷಣೆಗಳನ್ನು ಕಾಲ, ಅವಕಾಶ ಮತ್ತು ವೀಕ್ಷಣೆಯ ವಿಧಾನಗಳು ಸೀಮಿತಗೊಳಿಸುತ್ತವೆ. ಹಾಗೆಂದು ಹೇಳಿದಾಗ ವೀಕ್ಷಣೆಗಳಿಂದ ಲಭಿಸಿದ ಜ್ಞಾನ ತಪ್ಪೆಂದು ಹೇಳಲಾಗದು. ಜ್ಞಾನ ಮತ್ತು ವಾಸ್ತವ ಸತ್ಯಗಳು ಒಂದರ ಮೇಲೊಂದು ಪಾರಸ್ಪರಿಕವಾದ ಎಳೆತವನ್ನು ಅನುಭವಿಸುತ್ತವೆ. ವಿಜ್ಞಾನದ ಪ್ರತಿಯೊಂದು ಪ್ರಗತಿಪರ ಹಂತವೂ ಈ ಎಳೆತ ಅಥವಾ ವೈರುಧ್ಯವನ್ನು ಹೊಸದೊಂದು ಮಟ್ಟಕ್ಕೆ ಕೊಂಡೊಯ್ಯುತ್ತದೆ."

ಈ ವಾದವನ್ನು ಹಿನ್ನೆಲೆಯಾಗಿಟ್ಟುಕೊಂಡರೂ ಸಹ, ಮಾನವನ ಪ್ರಜ್ಞೆಯನ್ನು ಅರ್ಥೈಸುವುದು ಅಷ್ಟೇನೂ ಸುಲಭವಲ್ಲ. ಪ್ರಜ್ಞೆಯಲ್ಲಿ ಸಾಕಷ್ಟು ಸಂಕೀರ್ಣತೆ ಇರುತ್ತದೆ. ಈ ಸಂಕೀರ್ಣತೆಯನ್ನು ಅಸಡ್ಡೆ ಮಾಡಿ ಇಡಿಯಾಗಿ ಸರಳೀಕರಿಸಿದರೆ ತಪ್ಪಾದೀತು. ಮಾರ್ಕ್ಸ್ ಹೇಳಿದಂತೆ ಮನಸ್ಸು ವಸ್ತುವಿನ ಅತ್ಯಂತ ಸಂಕೀರ್ಣತೆಯುಳ್ಳ ರೂಪಾಂತರ.

ಬಾಹ್ಯಾಕಾಶ ಎಷ್ಟು ವಿಶಾಲವೋ ಮನಸ್ಸು ಎಂಬುದು ಅಷ್ಟೇ ವಿಶಾಲ ಸ್ವರೂಪವುಳ್ಳದ್ದು. ಪ್ರಕೃತಿಯನ್ನು ಪ್ರತಿಬಿಂಬಿಸುವ ಮನಸ್ಸು ಕೂಡ ವಿಶಾಲವಾಗಿದ್ದು ಶಿಕ್ಷಣ, ಪ್ರಾವೀಣ್ಯ ಮತ್ತು ಅವಶ್ಯಕತೆಗಳ ಒತ್ತಡದಿಂದ ತನ್ನ ವಿಶಿಷ್ಟ ಶಕ್ತಿಯನ್ನು ಪಡೆದಿರುತ್ತದೆ. ತನ್ನ ಮನಸ್ಸಿನ ಪರಿಪೂರ್ಣ ಶಕ್ತಿಯನ್ನು ಪಡೆಯಲು ಸಾಧನೆಯ ಅಗತ್ಯವಿದೆ. ಇಂಥ ಮನಸ್ಸಿನ ಅದ್ಭುತ ಶಕ್ತಿ ವಸ್ತು ಮತ್ತು ವಾಸ್ತವತೆಗೆ ಹೊರತಲ್ಲ. ಮನಸ್ಸಿನ ಅನೇಕ "ಅದ್ಭುತ ಶಕ್ತಿ"ಗಳನ್ನು ನಾವು ಈಗೀಗ ಅರ್ಥಮಾಡಿಕೊಳ್ಳಲು ಮೊದಲ ಹೆಜ್ಜೆಗಳನ್ನು ಇಟ್ಟಿದ್ದೇವೆ. ಹೀಗಾಗಿ ಎಲ್.ಎಸ್.ಡಿ., ಮಾರಿಜುವಾನಾ ಮುಂತಾದ ಮಾದಕ ವಸ್ತುಗಳು ಮಿದುಳಿನ ಮೇಲೆ ಮಾಡುವ ಪರಿಣಾಮವನ್ನು, ಮಿದುಳಿನಲ್ಲಿರುವ ನ್ಯೂರಾನ್ (ನರಕೋಶ)ಗಳ ನಡೆವಳಿಕೆ ಮತ್ತು ಅವುಗಳ ಮೇಲೆ ರಾಸಾಯನಿಕಗಳ ಪ್ರಭಾವಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿದೆ.

ಜನಸಂಖ್ಯಾಸ್ಫೋಟ ಹಾಗೂ ಆಹಾರದ ಲಭ್ಯತೆಯನ್ನು ಕುರಿತು ಮಾರ್ಕ್ಸ್ ಮತ್ತು ಏಂಗಲ್ಸ್ ಕಾಲದಲ್ಲೇ ಮಾಲ್ತುಸ್ ತನ್ನ ನಿರಾಶಾವಾದದ ಸಿದ್ಧಾಂತವನ್ನು ಮಂಡಿಸಿದ್ದ. ಜನಸಂಖ್ಯಾ ಸ್ಫೋಟದೊಟ್ಟಿಗೇ ಕೃಷಿ ಭೂಮಿಯ ಫಲವತ್ತತೆ ಮತ್ತು ಉತ್ಪನ್ನ ಕ್ಷೀಣಿಸುವುದು ಖಚಿತವೆಂದು

ಮಾಲ್ತುಸ್ ಸಿದ್ಧಾಂತ ಸಾರಿತ್ತು. ಮಾರ್ಕ್ಸ್ ಮತ್ತು ಏಂಗಲ್ಸ್ ಈ ಸಿದ್ಧಾಂತಕ್ಕೆ ಸವಾಲನ್ನು ಹಾಕಿದ್ದರು. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಪೂರ್ಣವಾಗಿ ಬಳಸಿಕೊಂಡು, ಕೃಷಿಗೆ ಯೋಗ್ಯವಾದ ಜಮೀನನ್ನು ಉತ್ತು ಬಿತ್ತರೆ ಜನರಿಗೆ ಸಾಕಷ್ಟು ಧಾನ್ಯವನ್ನು ಒದಗಿಸಬಹುದೆಂಬ ಆಶಾವಾದವನ್ನು ಅವರು ವ್ಯಕ್ತಪಡಿಸಿದ್ದರು. ಸ್ವಲ್ಪ ಮಟ್ಟಿಗೆ ಅವರ ಅಭಿಪ್ರಾಯಗಳಿಗೆ ಹಸಿರು ಕ್ರಾಂತಿ ಪುಷ್ಟಿಯನ್ನೊದಗಿಸಿದೆಯೆಂದು ಹೇಳಬಹುದು. ಆದರೆ, ಇಂದಿನ ಜನಸಂಖ್ಯಾಸ್ಫೋಟವನ್ನು ಪರಿಗಣಿಸಿದರೆ, 21ನೆಯ ಶತಮಾನದಲ್ಲಿ ವಿಶ್ವದ ಎಲ್ಲ ಜನತೆಗೂ ಸಾಕಷ್ಟು ಆಹಾರ ಒದಗಿಸುವುದು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಒಂದು ಬೃಹತ್ ಸವಾಲಾಗಬಹುದು. ಮಾರ್ಕ್ಸ್ ಆಶಾವಾದಿಯಾಗಿದ್ದ. ಜನಸಂಖ್ಯೆಯ ಹೆಚ್ಚಳ ಅಗಾಧವಾದರೂ ವಿಜ್ಞಾನ ಮತ್ತು ತಂತ್ರಜ್ಞಾನ ಆ ಸವಾಲನ್ನು ಎದುರಿಸಲು ಶಕ್ತವಾಗಿರುತ್ತದೆಯೆಂಬ ವಿಶ್ವಾಸವನ್ನು ಮಾರ್ಕ್ಸ್ ಹೊಂದಿದ್ದ. ಮಾರ್ಕ್ಸ್- ಏಂಗಲ್ಸ್ ಪತ್ರ ವ್ಯವಹಾರದಲ್ಲಿ ಈ ಆಶಾಭಾವನೆಗಳು ವ್ಯಕ್ತವಾಗಿವೆ. 'ವಿಜ್ಞಾನಕ್ಕೆ ಏನು ಸಾಧ್ಯವಿಲ್ಲ!' ಎಂಬ ಮಾತನ್ನು ಮಾರ್ಕ್ಸ್ ಹೇಳಿದ್ದುಂಟು.

ವೈಜ್ಞಾನಿಕ ಸಿದ್ಧಾಂತಗಳಿಂದ ಗಳಿಸಿದ ಉಪಯುಕ್ತ ಫಲಿತಾಂಶಗಳನ್ನು ಅರ್ಥೈಸುವಲ್ಲಿ ಮಾರ್ಕ್ಸ್‌ವಾದ ತನ್ನ ಕೊಡುಗೆಯನ್ನು ನೀಡಿದೆ. ಇದಲ್ಲದೆ, ಈ ಸಿದ್ಧಾಂತಗಳನ್ನು ಸೃಷ್ಟಿಸಿದ ಸಾಮಾಜಿಕ ಶಕ್ತಿಗಳನ್ನು ಗುರುತಿಸುವ ವಿಧಾನವನ್ನೂ ಮಾರ್ಕ್ಸ್‌ವಾದ ಕಲಿಸಿದೆ. ಆಧುನಿಕ ವಿಜ್ಞಾನ ಔದ್ಯೋಗಿಕ ಕ್ರಾಂತಿಯ ಕಾಲದಲ್ಲಿ ಬೇರೊಡೆಯಿತೆಂಬುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು. ಹೀಗಾಗಿ ಬಂಡವಾಳಶಾಹಿ ಕಾಲದ ವಿರೋಧ ಬಣಗಳನ್ನೂ ಸಂಘರ್ಷಗಳನ್ನೂ ಅರ್ಥಮಾಡಿ ಕೊಳ್ಳದೆ ವಿಜ್ಞಾನದ ಅಭಿವೃದ್ಧಿಯನ್ನು ಅರ್ಥಪೂರ್ಣವಾಗಿ ವಿವರಿಸಲು ಸಾಧ್ಯವಿಲ್ಲ. ವರ್ಗ ಸಂಘರ್ಷಗಳ ಹಿನ್ನೆಲೆಯಲ್ಲಿ, ಮಾನವನ ಆರ್ಥಿಕ ಅವಶ್ಯಕತೆಗಳ ಅನಿವಾರ್ಯತೆಯಲ್ಲಿ ಮತ್ತು ಉತ್ಪನ್ನ ಬಲಗಳ ಆಸರೆಯಿಂದ ವಿಜ್ಞಾನ ಗ್ರೀಕ್ ಕಾಲದಿಂದ ಇಂದಿನವರೆಗೆ ಹೇಗೆ ವಿಕಾಸ ಹೊಂದಿದೆ ಎಂಬುದರ ಸಮಗ್ರ ಚರಿತ್ರೆಯನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿದವರು ಜೆ.ಡಿ. ಬರ್ನಾಲ್. ಅವರು ಬರೆದ 'ಸೈನ್ಸ್ ಇನ್ ಹಿಸ್ಟರಿ' ಈ ಕ್ಷೇತ್ರದ ಮೇರು ಪರ್ವತ. ಬರ್ನಾಲ್ ಹೇಳಿದಂತೆ ವಿಜ್ಞಾನದ ಶಾಖೆಗಳ ಸಮನ್ವಯವೇ ಮಾರ್ಕ್ಸ್‌ನ ವಾದದ ತಿರುಳಾಗಿತ್ತು. ಪ್ರಕೃತಿ ವಿಜ್ಞಾನ ಮತ್ತು ಸಾಮಾಜಿಕ ವಿಜ್ಞಾನವನ್ನು ಬೇರ್ಪಡಿಸುವ ದೃಷ್ಟಿಯನ್ನು ಮಾರ್ಕ್ಸ್ ತಳ್ಳಿಹಾಕಿದ್ದ. ಕಾರ್ಲ್ ಮಾರ್ಕ್ಸ್‌ಗೆ ವಿಜ್ಞಾನದ ಬಗ್ಗೆ ಇದ್ದ ದೃಢ ವಿಶ್ವಾಸವನ್ನು ಏಂಗಲ್ಸ್ ಮಾರ್ಕ್ಸ್ ನಿಧನ ಸಂದರ್ಭದಲ್ಲಿ ಹೇಳಿದ ವಾಕ್ಯಗಳಿಂದ ಮನದಟ್ಟಾಗುತ್ತದೆ: "ಮಾರ್ಕ್ಸ್ ಒಬ್ಬ ವಿಜ್ಞಾನಿ. ಇಷ್ಟು ಹೇಳಿದರೆ ಸಾಲದು. ಮಾರ್ಕ್ಸ್‌ಗೆ ವಿಜ್ಞಾನ ಒಂದು ಚಾರಿತ್ರಿಕ, ಕ್ರಿಯಾತ್ಮಕ ಮತ್ತು ಕ್ರಾಂತಿಕಾರಕ ಬಲವಾಗಿ ಕಾಣಿಸಿತು."

ಒಟ್ಟಿನಲ್ಲಿ ವಿಜ್ಞಾನದ ಬಗ್ಗೆ ಮಾರ್ಕ್ಸ್ ತಳೆದಿದ್ದ ಭಾವನೆಗಳು ಇಂದಿಗೂ ಸುಸಂಗತ. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೂ ವರ್ಗ ಸಂಘರ್ಷಕ್ಕೂ ಇರುವ ಸಂಬಂಧ ಇಂದಿಗೂ ಮಾರ್ಕ್ಸ್ ಹೇಳಿದಂತೆಯೇ ಇದೆ. ವರ್ಗ ಸಂಘರ್ಷವಿಲ್ಲದೆ ವೈಜ್ಞಾನಿಕ ಅಭಿವೃದ್ಧಿ ಯಾವ ಮಟ್ಟಕ್ಕೆ ಏರಿದರೂ ಸಮಾಜದ ದೀನ ದಲಿತವರ್ಗದವರಿಗೆ ವಿಜ್ಞಾನದ ಫಲ ದೊರಕದಿರಬಹುದು. ಹಾಗೆ ನೋಡಿದರೆ,

ಸಮಾಜವಾದದ ಅವಲಂಬನೆಯಿಲ್ಲದೆ ವಿಜ್ಞಾನದ ಸಂಪೂರ್ಣ ಬಳಕೆ ಕೇವಲ ಕನಸಿನ ಗಂಟಾಗುತ್ತದೆ. ಮಾರ್ಕ್ಸ್ ಒಬ್ಬ ವೈಜ್ಞಾನಿಕ ಚಿಂತಕ ಹಾಗೂ ಸಾರ್ವಜನಿಕ ಜೀವನದಲ್ಲಿ ಹೋರಾಟಗಾರ. ಮಾರ್ಕ್ಸ್‌ನ ಜೀವನವನ್ನು ಅರ್ಥಮಾಡಿಕೊಳ್ಳಬೇಕಾದರೆ ಅವನ ಈ ಎರಡು ಮುಖಗಳ ಪರಿಚಯ ಅತ್ಯಗತ್ಯ. ವಿಜ್ಞಾನಿಯಾದವನು ಸಾರ್ವಜನಿಕ ಚಟುವಟಿಕೆಗಳಲ್ಲಿ ಸಕ್ರಿಯ ವಾಗಿ ಭಾಗವಹಿಸಬೇಕೆಂದು ಮಾರ್ಕ್ಸ್ ಒತ್ತಾಯಪೂರ್ವಕವಾಗಿ ಹೇಳುತ್ತಿದ್ದ. ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ಸಂಘರ್ಷಗಳಲ್ಲಿ ವಿಜ್ಞಾನಿ ಪಾಲ್ಗೊಳ್ಳಬೇಕೆಂದು ಮಾರ್ಕ್ಸ್ ದೃಢವಾಗಿ ನಂಬಿದ್ದ. ತನ್ನ ಜೀವನದಲ್ಲೇ ಈ ಮಾರ್ಗವನ್ನು ಅವಲಂಬಿಸಿದ್ದ. ಈ ನಿಟ್ಟಿನಲ್ಲಿ ಅವನ ಉಕ್ತಿಗಳನ್ನೇ ಉದ್ಧರಿಸುವುದು ಸೂಕ್ತ: "ವೈಜ್ಞಾನಿಕ ಹವ್ಯಾಸಗಳಲ್ಲಿ ತೊಡಗಿಕೊಳ್ಳುವ ಭಾಗ್ಯವಂತರು ತಮ್ಮ ಜ್ಞಾನ ಭಂಡಾರವನ್ನು ಜನತೆಯ ಸೇವೆಗೆ ಅರ್ಪಿಸಬೇಕು."

ಮಾರ್ಕ್ಸ್‌ನ ಬಹುಮುಖ ಪ್ರತಿಭೆಯನ್ನು ಗಮನಿಸಿದರೆ, ಈತ ಕಳೆದ ಸಹಸ್ರಮಾನದ ಅಪ್ರತಿಮ ವ್ಯಕ್ತಿ ಎನ್ನಬಹುದು.

❑

ಮಾರ್ಕ್ಸ್‌ನ ಚಿಂತನೆಗಳು : ವರ್ತಮಾನದ ಕ್ರಿಯಾಶೀಲತೆಗೆ ಒಂದು ಗವಾಕ್ಷಿ

ಡಾ. ಬಸವರಾಜ ಕಲ್ಗುಡಿ

20ನೇ ಶತಮಾನದ ಕೊನೆಯ ಭಾಗ; ಮಾರ್ಕ್ಸ್‌ವಾದ, ಕಮ್ಯುನಿಸಂ ಅಂತ್ಯಗೊಂಡಿದೆ, ಅಪ್ರಸ್ತುತವಾಗಿದೆ ಎಂದು ಗುಲ್ಲೆಬ್ಬಿಸಿದ ಕಾಲ. ಸೋವಿಯತ್ ಒಕ್ಕೂಟ ಹಂಚಿ ಹೋಗಿ, ಕಮ್ಯೂನಿಸ್ಟರ ರಾಜಕೀಯ ವಾತಾವರಣ ಇಲ್ಲವಾದಾಗ, ಬಹುಪಾಲು ಪಾಶ್ಚಾತ್ಯ ರಾಷ್ಟ್ರಗಳು ಈ ವಾದವನ್ನು ಕ್ಷಿಪ್ರಗತಿಯಲ್ಲಿ ಜಗತ್ತೆಲ್ಲ ಹರಡುವಂತೆ ಮಾಡಿದವು. ಮಾರ್ಕ್ಸ್ ನಿಷ್ಫಲಗೊಂಡ ಎನ್ನುವ ಮಾತಿನಿಂದ ಹಿಡಿದು ಅವನ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ 'ತಾತ್ವಿಕತೆ'ಗಳ ಮಿತಿಯನ್ನು ಕುರಿತು ಲೇಖನಗಳು, ಗ್ರಂಥಗಳು ಬಂದವು. ಮಾವೋತ್ಸೆತುಂಗನ ವ್ಯಕ್ತಿತ್ವವನ್ನು ವಿರೂಪಗೊಳಿಸಲು ಪ್ರಯತ್ನಿಸಲಾಯಿತು. ಕನ್ನಡದಲ್ಲೂ ಈ ಬಗೆಯ ಸಣ್ಣನೆಯ ಗಾಳಿ ಸುಳಿಯಿತು.

ನಮ್ಮ ವರ್ತಮಾನವು 'ತಾತ್ವಿಕತೆ' ಮತ್ತು 'ನಡಾವಳಿ'ಯ ಮೌಲ್ಯಗಳಿಗೆ ಸೂಕ್ಷ್ಮವಾಗಿ ಎರವಾಗುತ್ತಿರುವ ಕಾಲ. ವಿಶ್ವದ ಅತ್ಯಂತ ಪ್ರಬಲ ರಾಜಕಾರಣ ಮತ್ತು ಆರ್ಥಿಕ ಪ್ರಭುತ್ವದ ಎದುರು ಯಾವುದೇ ಬಗೆಯ ಮೌಲ್ಯದ ಮಾತುಗಳು ಅಪ್ರಸ್ತುತವೆನ್ನಿಸುವಂತೆ ಮಾಡಿಬಿಡುವ ಈ ಸನ್ನಿವೇಶದಲ್ಲಿ ಇಂಥ ಆಲೋಚನೆಗಳನ್ನು ಖಚಿತವಾಗಿ, ಸ್ಪಷ್ಟವಾಗಿ ಮತ್ತು ಒತ್ತಾಯಪೂರ್ವಕವಾಗಿ ನಿರಾಕರಿಸುವ ವಾತಾವರಣವನ್ನು ನಾವು ನಿರ್ಮಾಣ ಮಾಡಬೇಕಾಗಿದೆ. ಇಂಥ ವಾತಾವರಣದ ನಿರ್ಮಾಣವು ಕೇವಲ ಸರಳವಾದ ಭಾವನಾತ್ಮಕ ಮಾತುಗಳಿಂದಲಾಗಲೀ, ಆವೇಶಪೂರಿತ

ಖಂಡನೆಯಿಂದಲಾಗಲೀ ಉಂಟಾಗುವಂಥದ್ದಲ್ಲ. ಅರಿಯುವಿಕೆ ಅಥವಾ ತಿಳಿವಳಿಕೆಯ ಹೊಸ ಕ್ರಮವನ್ನು ಗಾಢವಾಗಿ ರೂಪಿಸಬೇಕಾದ ಅವಶ್ಯಕತೆ ಈಗ ಇದೆ. ಹಾಗಾದಾಗ ಮಾತ್ರ ಸಮಾಜ ಪರವಾದ ಕ್ರಿಯಾಶೀಲತೆಗಳಿಗೆ ಒಂದು ಹೊಸ ಸಂಚಲನೆ ಮತ್ತು ಆತ್ಮವಿಶ್ವಾಸ ಮೂಡುವುದು ಸಾಧ್ಯವಾಗುತ್ತದೆ.

I

ಈ ಮೇಲಿನ ನನ್ನ ಮಾತಿನಲ್ಲಿ ಒಂದು ವಾದಕ್ಕೆ ಅವಕಾಶವಿದೆ ಎಂದು ನೀವು ಹೇಳಬಹುದು. ಅದೇಂದರೆ, ಹೊಸ ಅರಿವು ಜನಪರ ಕ್ರಿಯಾಸಂಚಲನೆಗೆ ಕಾರಣವಾಗುತ್ತದೆಯೋ ಅಥವಾ ಜನಸಮುದಾಯದ ('ವರ್ಗ'ವೆಂಬ ಪರಿಭಾಷೆಯಲ್ಲಿ) ಚಳವಳಿಗಳು ಹೊಸ ಅರಿವಿಗೆ ಕಾರಣವಾಗುತ್ತವೋ? ಫ್ಯೂವರ್ ಬಾಷ್ - 'ಇರುವಿಕೆಯಿಂದ ಅರಿವು' ಎಂದು ಹೇಳಿದ ಮಾತು ಮಾರ್ಕ್ಸ್‌ನಿಗೆ ಹೊಸ ಸಂವೇದನೆಗೆ ಕಾರಣವಾಯಿತು. ರಾಜ್ಯಾಂಗದ (State) ಮಹತ್ವವನ್ನು ಕುರಿತ ಹೆಗೆಲ್‌ನ ಮಾತುಗಳಿಗೆ ಮಾರ್ಕ್ಸ್ ಉತ್ತರವನ್ನು ಕೊಡಲು ಮೇಲಿನ ಸಂವೇದನೆಯನ್ನು ಬಳಸಿಕೊಳ್ಳುತ್ತಾನೆ. 1843ರಲ್ಲಿ ಹೆಗಲ್ಲನಿಗೆ ಉತ್ತರ ಕೊಡುತ್ತ, ಪ್ರಜಾಪ್ರಭುತ್ವದ ಪರವಾಗಿ ತನ್ನ ನಿಲುವನ್ನು ಸ್ಪಷ್ಟಪಡಿಸಿ, ರಾಜಸತ್ತೆಯ ವಿರುದ್ಧ ತನ್ನ ನಿಲುವನ್ನು ಎತ್ತಿ ತೋರುತ್ತಾನೆ. ಆ ಮಹತ್ವದ ಸಂವಾದ ಹೀಗಿದೆ : ಹೆಗೆಲ್ ಹೇಳಿದ, ಸಮಾಜದಲ್ಲಿರುವ ವಿಭಿನ್ನ ಬಗೆಯ ಸಂಘರ್ಷಗಳನ್ನು (ಸಾಮಾಜಿಕ, ಆರ್ಥಿಕ - ಮುಂ) ನಿವಾರಿಸಬಲ್ಲ ಒಂದು ಉಚ್ಚತಮ ಸಂಸ್ಥೆ ಎಂದರೆ ರಾಜ್ಯಸತ್ತೆ. ಮನುಷ್ಯ ಸ್ವಾತಂತ್ರ್ಯವನ್ನು ಈ 'ನಾಗರಿಕ ಸಮಾಜದಲ್ಲಿ' ಒದಗಿಸಬಲ್ಲಂಥ ಸಂಸ್ಥೆಯೇ ಅದು.

ಹೆಗಲ್ಲನ ಈ ವಾದವನ್ನು ಒಪ್ಪದೆ - ನಾಗರಿಕ ಸಮಾಜದಲ್ಲಿ ಸಮುದಾಯವು ನಿಯಮಗಳನ್ನು ರೂಪಿಸುತ್ತವೆಯೇ ಹೊರತು ನಿಯಮಗಳಿಂದ ಮನುಷ್ಯ ರೂಪುಗೊಳ್ಳುವುದಿಲ್ಲ ಎಂದು ಹೇಳಿದ.

ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ - 'ಸೈದ್ಧಾಂತಿಕವಾಗಿ ಸಾಂಸ್ಥಿಕಗೊಂಡ ರಚನಾ ಮಾದರಿ'ಯನ್ನು ಮಾರ್ಕ್ಸ್ ಒಡೆಯುವುದರ ಮೂಲಕ ಕೇವಲ ಹೆಗಲ್ಲನಿಗೆ ಉತ್ತರ ಕೊಡುತ್ತಿರಲಿಲ್ಲ, ರೂಪುಗೊಳ್ಳಬೇಕಾದ ನಾಗರಿಕ ಸಮಾಜದಲ್ಲಿ ಸಮುದಾಯವು ರೂಪಿಸಿಕೊಳ್ಳ ಬೇಕಾದ ಸೈದ್ಧಾಂತಿಕ ಮೌಲ್ಯಗಳ ಬಗ್ಗೆ ಮಾತನಾಡುತ್ತಿದ್ದ.

(ಅ) ಮಾರ್ಕ್ಸ್‌ನ ಪ್ರಕಾರ 'ಅರಿವು' ಎನ್ನುವುದು ಸಾಂಸ್ಥಿಕಗೊಂಡ ಸಿದ್ಧಾಂತದ ಮೊತ್ತವಲ್ಲ; ಅದು ಸಮುದಾಯದ ಇರುವಿಕೆಯಲ್ಲಿ, ಇರುವಿಕೆಯಿಂದ ಮೂಡುವಂಥದ್ದು. ಮಾತ್ರವಲ್ಲ, ಇರುವಿಕೆಯನ್ನು ಸ್ಪಷ್ಟವಾಗಿ ರೂಪುಗೊಳಿಸುವಂಥದ್ದು. ಪರಸ್ಪರ ಇರುವಿಕೆ ಹಾಗೂ ಅರಿವು ಒಂದನ್ನೊಂದು ಪೋಷಿಸುವ, ಬೆಳೆಸುವ ಪ್ರಕ್ರಿಯೆಗಳು ಎನ್ನುವುದು ಮಾರ್ಕ್ಸ್‌ನ ವೈಚಾರಿಕತೆಯ ಹಿಂದಿನ ಚಿಂತನೆಯಾಗಿದೆ.

II

ಈ ಹಿನ್ನಲೆಯಲ್ಲಿ ಮಾರ್ಕ್ಸ್‌ನ ಸೈದ್ಧಾಂತಿಕ ಮಾತುಗಳು - ಬಹುಪಾಲು ಓದುಗರು ನಂಬಿದ - ಹಾಗೆ - ಕೇವಲ ಚರಿತ್ರೆಗೆ ಸೇರಿದ ವಾದಗಳೆಂದಾಗಲೀ ಕೇವಲ ಸೈದ್ಧಾಂತಿಕ ಮೊತ್ತವೆಂದಾಗಲೀ ಕರೆಯಲು ಸಾಧ್ಯವಿಲ್ಲ. 1843ರ ಹಸ್ತಪ್ರತಿಗಳ ಬಹುಪಾಲು ಬರಹಗಳ ಸಾರವನ್ನು ಕೊಂಚ ಗಮನವಿಟ್ಟು ಚಿಂತಿಸಿದರೆ, ಅವುಗಳು ಮೂಲಭೂತವಾಗಿ ಪ್ರಜಾಪ್ರಭುತ್ವಕ್ಕೆ ಇರಬೇಕಾದ ನಡಾವಳಿಯ ಮೌಲ್ಯ (Ethical Values)ಗಳನ್ನು ಕುರಿತ ಚಿಂತನೆಗಳೇ ಆಗಿವೆ. ಆಗ ಪ್ರಾರಂಭವಾಗುತ್ತಿದ್ದ ಪ್ರಜಾಪ್ರಭುತ್ವವೆಂಬ ಅಮೂರ್ತ ತತ್ವಕ್ಕೆ ಇರಬೇಕಾದ ಮೂರ್ತ ರೂಪದ ಮೌಲ್ಯಗಳನ್ನು ಕಟ್ಟುವ ಪ್ರಕ್ರಿಯೆಯ ಮಾತುಗಳು ಅವು. ಆಗ ಮಾರ್ಕ್ಸ್ ತನ್ನ ಬರವಣಿಗೆಗಳಿಗೆ ಜರ್ಮನ್ ಮತ್ತು ಪಶ್ಚಿಮ ಯುರೋಪಿಯನ್ ಸಂದರ್ಭದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟಿದ್ದನಾದರೂ, ಯಾವ ವರ್ಗ ಹಿತದೃಷ್ಟಿಯ ಚಿಂತನೆ ಅವನ ಮೂಲಭೂತ ಆಲೋಚನೆಯಾಗಿತ್ತೋ ಅದು ಪ್ರಜೆಗಳ ಪ್ರಭುತ್ವಕ್ಕೇ ಒಂದು ಮೌಲ್ಯವನ್ನು ಕೊಡುವಂಥದ್ದಾಗಿತ್ತು. ಹೀಗಾಗಿ ಆಗ ಉದ್ಭವಗೊಳ್ಳುತ್ತಿದ್ದ ಕಾರ್ಮಿಕ ವರ್ಗವನ್ನು ನುರಿತ ಪ್ರೊಲಿಟರೇಟ್, ವರ್ಕಿಂಗ್ ಕ್ಲಾಸ್ ಮೊದಲಾದ ಪರಿಭಾಷೆಗಳಿಗೆ ಆ ಸಂದರ್ಭದ ಜನವರ್ಗವನ್ನು ಕುರಿತ ಅರ್ಥವ್ಯಾಪ್ತಿಯ ಗ್ರಹಿಕೆ ಮಾತ್ರವಲ್ಲದೆ ಪ್ರಜಾಸತ್ತೆಯ ಮೌಲ್ಯವನ್ನು ನಿಖರಗೊಳಿಸುವ ಕ್ರಿಯಾಶೀಲತೆಯ ನಿರ್ದೇಶನಗಳೂ ಆಗಿದ್ದವು. 'ವರ್ಗ ಪ್ರಜ್ಞೆ' ಎನ್ನುವುದು ಪ್ರತಿಯೊಂದು ಕಾಲದಲ್ಲಿಯೂ ಜನಸಮುದಾಯವು ತನ್ನ ಆರ್ಥಿಕ, ಸಾಮಾಜಿಕ ನೆಲೆಯ ಗ್ರಹಿಕೆಯನ್ನು ಇರುವಿಕೆ ಹಾಗೂ ಅರಿಯುವಿಕೆಯ ಮೂಲಕ ಸಾಧಿಸಿದಾಗ ಅದಕ್ಕೊಂದು 'ವರ್ಗ'ದ ಸಾಧ್ಯತೆಗಳು ಉಂಟಾಗುತ್ತವೆ. ಇದನ್ನು ಮಾರ್ಕ್ಸ್‌ನೂ ಕೂಡ ಸ್ಪಷ್ಟವಾಗಿ ರಷಿಯಾದ ರೈತಾಪಿ ಸಮಸ್ಯೆಗೆ ಸಂಬಂಧಿಸಿದ ತನ್ನ ಉತ್ತರಗಳಲ್ಲಿ ಹೇಳುತ್ತಾನೆ.

(ಅ) ಹೀಗಾಗಿ - ಚರಿತ್ರೆಯನ್ನು ಕುರಿತ ಮಾರ್ಕ್ಸ್‌ನ ಮಾತುಗಳು ಬಹುಮುಖ್ಯವಾದವು. ಚರಿತ್ರೆಯನ್ನು ಕುರಿತ ಅವನ ಮುಖ್ಯ ತಾತ್ವಿಕ ನೆಲೆ 'ಮನುಷ್ಯ ಸಮುದಾಯ ಚರಿತ್ರೆಯನ್ನು ಕಟ್ಟುತ್ತದೆ' ಎನ್ನುವುದು. ಚರಿತ್ರೆಯನ್ನು ಕಾಲಗಣನೆಯ ನೆಲೆಯಲ್ಲಿ ವಿವರಿಸುವುದಾದರೆ ಮಾರ್ಕ್ಸ್‌ನ ಪ್ರಕಾರ ಅದು ವರ್ತಮಾನವೇ. ಚರಿತ್ರೆ ಎಂದರೆ ಪ್ರಜೆಯ ಪ್ರಭುತ್ವವನ್ನು ಪ್ರತಿಯೊಂದು ಕಾಲದಲ್ಲೂ ಕಟ್ಟುವ ಕಾರ್ಯವೇ. ವರ್ತಮಾನದ ಕ್ರಿಯಾಶೀಲತೆ ಮತ್ತು 'ವರ್ಗ ಪ್ರಜ್ಞೆ' ಇವೆರಡೂ ನಿರಂತರ ಗತಿಶೀಲವಾಗಿರಬೇಕಾದಂಥವು. 'ವರ್ಗ ಪ್ರಜ್ಞೆ' ಎನ್ನುವುದನ್ನು ಮಾರ್ಕ್ಸ್‌ನೂ ಸಹ ಕೇವಲ ಕೈಗಾರೀಕೀಕರಣ ಸಂದರ್ಭದ ಕಾರ್ಮಿಕ ಸಮುದಾಯಕ್ಕೆ ಅನ್ವಯ ಎನ್ನುವ ಅಭಿಪ್ರಾಯ ಹೊಂದಿದವನಾಗಿರಲಿಲ್ಲ. ವರ್ಗಪ್ರಜ್ಞೆಯು ದಮನಕ್ಕೊಳಗಾದ ಎಲ್ಲ ಬಗೆಯ ಸಮುದಾಯಗಳ ಅರಿವಿನ ಸ್ಥಿತಿಯೆನ್ನುವುದು ಮಾರ್ಕ್ಸ್ ಚಿಂತನೆಯ ಸಾರವಾಗಿದೆ.

III

ಮೌಲ್ಯ ಪರಿಕಲ್ಪನೆಯ ಮಟ್ಟದಲ್ಲಿ - ಮಾರ್ಕ್ಸ್‌ವಾದ, ಸಮಾಜವಾದ ಮತ್ತು ಗಾಂಧಿವಾದಗಳನ್ನು ನಾವು ಒಂದುಗೂಡಿಸಿ ನೋಡಬೇಕಾದ ಪರಿಸ್ಥಿತಿ ಈಗ ಇದೆ. ನಮ್ಮ

ಎಡಪಂಥೀಯ ಸಂಘಟನೆಗಳು, ಭೂಹೀನ ಕೃಷಿ ಕಾರ್ಮಿಕರು, ದಲಿತರು ಹಾಗೂ ಅಲ್ಪಸಂಖ್ಯಾತರ ಬಗ್ಗೆ ತಳೆದ ನಿಲುವು ಮತ್ತು ಚಳವಳಿಗಳು ಅರ್ಥಪೂರ್ಣವಾದಂಥವುಗಳು ಮತ್ತು ಪ್ರಮುಖ ವಾದಂಥವುಗಳು. ವರ್ಗಪ್ರಜ್ಞೆಯೆನ್ನುವುದರ ಭಿನ್ನಮುಖಗಳನ್ನು ಭಾರತೀಯ ಸಂದರ್ಭದಲ್ಲಿ ಕ್ರಿಯಾತ್ಮಕವಾಗಿ ಇವು ಗ್ರಹಿಸಿಕೊಂಡಿವೆ. ಈಗ ನಮ್ಮ ಮುಂದೆ ಇರುವ ಗಂಭೀರ ಸಮಸ್ಯೆಗಳೆಂದರೆ - ವಿಶ್ವದಲ್ಲಿ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಒತ್ತಾಯಗಳನ್ನು ನಿರ್ದೇಶಿಸುವ ಶಕ್ತಿಯಾಗಿರುವ ಅಮೆರಿಕಾದ ನೀತಿಯು ಈ ಜಗತ್ತಿನ ದುರ್ಬಲ(?) ರಾಷ್ಟ್ರಗಳನ್ನು ಒಂದು ವರ್ಗಪ್ರಜ್ಞೆಯ ಗ್ರಹಿಕೆಯ ಕಡೆಗೆ ಧಾವಿಸುವಂತೆ ಮಾಡಬೇಕಾಗಿದೆ. ಇಂಥದೊಂದು ಚಟುವಟಿಕೆ ಯನ್ನು ಎಡಪಂಥೀಯ ಸಂಘಟನೆಗಳು, ಸಮುದಾಯಗಳು ಭಿನ್ನಭಿನ್ನ ಘಟ್ಟಗಳಲ್ಲಿ ಮಾಡುವ ಅವಶ್ಯಕತೆ ಇದೆ. ಸ್ಥಳೀಯ ಆರ್ಥಿಕ ರಚನೆ, ಸಂಪನ್ಮೂಲಗಳು, ರೈತಾಪಿ ಸಮೂಹ-ದಿವಾಳಿ ಎದ್ದು ಹೋಗುತ್ತಿರುವುದನ್ನು ಈ ಹಿನ್ನೆಲೆಯಲ್ಲಿ ಅರಿಯಬೇಕಾಗಿದೆ. ಅರೇಬಿಕ್ ರಾಷ್ಟ್ರಗಳು ಆರ್ಥಿಕವಾಗಿ ದಮನೀಯವಾದ ವಸಾಹತೀಕರಣಕ್ಕೆ ಗುರಿಯಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸಿದ್ಧಾಂತದ ಚೌಕಟ್ಟಿಗೆ ಕಟ್ಟಿಹಾಕಿಕೊಂಡು ಚರಿತ್ರೆಯ ಕಟ್ಟುವಿಕೆಯಲ್ಲಿ ಭಾಗವಾದಂತೆ ಮಾಡದೆ ವಿಶಾಲ ಸಂಯೋಜನಾಸ್ಥಿತಿಯನ್ನು ಪ್ರಗತಿಪರರು ಮಾಡಬೇಕಾಗಿದೆ.

ಮಾರ್ಕ್ಸ್‌ನ ಚಿಂತನೆಯನ್ನು ಮೌಲ್ಯ ಪರಿಕಲ್ಪನೆಯ ಎತ್ತರದಲ್ಲಿ ಗ್ರಹಿಸಿದಾಗ ಅದರ ನಿರಂತರ ಪ್ರಸ್ತುತತೆಯು ಅರ್ಥವಾದೀತು. ಎಲ್ಲ ಮೌಲ್ಯ ಪರಿಕಲ್ಪನೆಯ ತಾತ್ವಿಕ ಚಿಂತನೆಗಳಿಗೂ ಈ ಮಾತು ಅನ್ವಯವಾಗುತ್ತದೆ.

❑

ಆಕಾಶಕ್ಕೆ ಎರಡು ಗೇಣು ಕಮ್ಮಿ

ದೇವನೂರ ಮಹಾದೇವ

ನಾನು ಗಾಂಧಿ ಚಿತ್ರ ನೋಡಿದೆ. ದಲಿತ ಸಂಘರ್ಷ ಸಮಿತಿ ಈ ಚಿತ್ರವನ್ನು ಬಹಿಷ್ಕರಿಸಿರುವುದರಿಂದ ಈ ರೀತಿಯಾಗಿ ಹೇಳಬೇಕಾಗಿ ಬಂದಿದೆ. ಹೀಗಾಗಿ ನಾನು ಗಾಂಧಿ ಚಿತ್ರ ನೋಡಿರುವುದು ನಮ್ಮ ರಾಜ್ಯ ಸಂಚಾಲಕ ಬಿ. ಕೃಷ್ಣಪ್ಪರಾದಿಯಾಗಿ ಗೆಳೆಯರಿಗೆ ಬೇಸರವಾಗಿರುತ್ತದೆ, ಆದರೆ ಆಶ್ಚರ್ಯವಾಗಿರುವುದಿಲ್ಲ. ಯಾಕೆಂದರೆ ಈ ಅಶಿಸ್ತಿನ ಮಹಾದೇವ ಬಹಿಷ್ಕರಿಸಿದ್ದರೂ ನೋಡಿ ಬಿಡುತ್ತಾನೆ ಅಂತ ಅವರು ಮೊದಲೇ ಅಂದುಕೊಂಡಿರಲೂ ಬಹುದು. ಹಾಳಾಗಲಿ, ಅವ ಬೇಕಾದರೆ ಗುಟ್ಟಾಗಿ ನೋಡಿಕೊಳ್ಳಲಿ ಅದನ್ನು ಯಾಕೆ ಬರೆದ, ಬರೆದು ಯಾಕೆ ಸಂಘಟನೆಯಲ್ಲಿ ಗಲಿಬಿಲಿ ಉಂಟು ಮಾಡಿದ ಎಂಬ ಸಿಟ್ಟು ಅವರಲ್ಲೀಗ ಉಂಟಾಗಿರಬೇಕು. ಅವರಿಗೆ ಏನೇ ಆಗಿರಲಿ ಬೇಸರವೊ, ಕೋಪವೋ, ಸಂಘಟನೆಗೆ ನುಂಗಲಾರದ ತುತ್ತೋ, ಏನೇ ಆಗಿರಲಿ ನಾನು ಬರೆಯಲೇಬೇಕು ಅನ್ನಿಸಿದೆ, ಬರೆಯುತ್ತಿದ್ದೇನೆ.

ಮೊದಲನೆಯದಾಗಿ ಗಾಂಧಿ ಚಿತ್ರ ಬಹಿಷ್ಕರಿಸುವುದನ್ನು ನಾನು ಬಯಸಿರಲಿಲ್ಲ. ವಿರೋಧಿಸಿದರೂ ನನ್ನ ಮಾತು ನಡೆಯುವ ಸ್ಥಿತಿಯಲ್ಲಿರಲಿಲ್ಲ. ಬಹಿಷ್ಕಾರ ಬಹುಮತದ ನಿರ್ಣಯವಾಗಿತ್ತು. ಹಾಗಿದ್ದೂ ನಮ್ಮ ಗೋವಿಂದಯ್ಯ, ಯಾವ ಸಿನಿಮಾ ಬಂದರೂ ಬಿಡದೆ ನೋಡುವ ಗೋವಿಂದಯ್ಯ, ಗಾಂಧಿ ಚಿತ್ರ ಬಂದಾಕ್ಷಣವೇ ಬೆಂಗಳೂರಿಗೆ ಹೋಗಿ ಕದ್ದು ಎರಡು ಸಲ ನೋಡಿಬಿಟ್ಟಿದ್ದನು. ಮೈಸೂರಿಗೆ ಗಾಂಧಿ ಚಿತ್ರ ಬಂದಾಗ ಲೋಕಸಭಾ ಸದಸ್ಯ ಶ್ರೀನಿವಾಸ್ ಪ್ರಸಾದ್‌ರ ತಮ್ಮ ರಾಮಸ್ವಾಮಿ ಮೊದಲೇ ಟಾಕೀಸ್ ಮಾಲಿಕನನ್ನ ನಡುಗಿಸಿ, ಇನ್ನು ಯಾವ ರೀತಿ ಪ್ರತಿಭಟಿಸಬೇಕೆಂದು ನನ್ನ ಬಳಿ ಬಂದರು. ಸರಳವಾದ ನೇರವಾದ

ದುಡುಕು ಸ್ವಭಾವದ ರಾಮಸ್ವಾಮಿ ನನಗೆ ಇಷ್ಟವಾದ ಹುಡುಗ. ಆತ, ಆತನ ಗುಂಪು ದುಡುಕಿ ಎಲ್ಲಿ ಟಾಕೀಸನ್ನೇ ಚಚ್ಚಿ ಹಾಕಿಬಿಡುತ್ತದೊ ಎಂಬ ಆತಂಕ ನನಗುಂಟಾಗತೊಡಗಿತು. ಆಗ ನಮ್ಮ ರಾಜ್ಯ ಸಂಚಾಲಕ ಕೃಷ್ಣಪ್ಪನವರು ಮೈಸೂರಿನಲ್ಲಿದ್ದರು. ಪರಿಸ್ಥಿತಿ ವಿವರಿಸಿದೆ. ಆಂಧ್ರದಲ್ಲೋ ಮದ್ರಾಸಲ್ಲೋ ಚಿತ್ರಮಂದಿರದೊಳಗೆ ಹಾವು ಬಿಟ್ಟಿದ್ದು ನನಗೆ ಹೇಸಿಗೆ ತರಿಸಿತ್ತು. ಈಗಾಗಲೇ ಬೆಂಗಳೂರಿನಲ್ಲಿ ಪ್ರತಿಭಟಿಸಿದ್ದರಿಂದ, ಪ್ರತಿಭಟನೆ ಸಾಂಕೇತಿಕವಾದುದರಿಂದ ಇಲ್ಲೂ ಮಾಡುವುದು ಅನಗತ್ಯ ಎಂದೆ. ಅದಕ್ಕೆ ಕೃಷ್ಣಪ್ಪನವರು 'ಮಾಡಲಿ ಬಿಡಯ್ಯ, ಗಲಾಟೆ ಆದರೆ ಆಗುತ್ತೆ, ನೀನು ಯಾಕೆ ತಡೆಯುತ್ತೀ?' ಎಂದರು. ನನ್ನ ಗಾಬರಿ ಹೆಚ್ಚಿತ್ತು. ನಾನು ರಾಮಸ್ವಾಮಿ ಬಳಿ ಬಂದು 'ಟಾಕೀಸಿಗೆ ಏನೂ ಜಖಂ ಮಾಡಬೇಡಿ, ಅಂಬೇಡ್ಕರ್ ಇಲ್ಲದ ಗಾಂಧಿ ಅಪೂರ್ಣ ಎಂದಷ್ಟೇ ಹೇಳಿ' ಎಂದು ಇಪ್ಪತ್ತು ಸಲ ವಿನಂತಿಸಿ ಬೆಂಗಳೂರಿಗೆ ಹೊರಟೆ. ಬೆಂಗಳೂರಿನಲ್ಲಿ ಇದ್ದರೂ ಏನಾಗಿರುತ್ತದೋ ಎಂಬ ಕಿಡಿ ನನ್ನನ್ನು ಸುಡುತ್ತಿತ್ತು.

2

ಇನ್ನು ಗಾಂಧಿ ಚಿತ್ರದ ಬಗ್ಗೆ : ಒಂದು ಮಿತಿಯೊಳಗೆ ಗಾಂಧಿಯನ್ನೇ ಕೇಂದ್ರವಾಗಿಸಿಕೊಂಡು ಗಾಂಧಿಯನ್ನಷ್ಟೇ ತೆಗೆದಿರುವ ಚಿತ್ರವಿದು. ಗಾಂಧಿ ಬಿಟ್ಟು ಉಳಿದವರೆಲ್ಲಾ ಇಲ್ಲಿ ಇಲ್ಲವಾಗಿದ್ದಾರೆ. ಗಾಂಧಿ ಪಾತ್ರಧಾರಿಯಂತೂ ಗಾಂಧಿಯೇ ಆಗಿಬಿಟ್ಟು ಎಲ್ಲೂ ಅಭಿನಯಿಸಿಯೇ ಇಲ್ಲ. ಗಾಂಧಿ ಅನುಯಾಯಿಗಳಾದ ನೆಹರೂ, ಪಟೇಲರುಗಳು ಕಮಂಗಿಗಳಾಗಿ, ಕೊನೆಗೆ ಅಧಿಕಾರ ದಾಹಿಗಳಾಗಿ, ಇಂದಿರಾಗಾಂಧಿಯವರೂ ಇಷ್ಟಪಡದಷ್ಟು ಚೆನ್ನಾಗಿ ಮೂಡಿವೆ. ಜಿನ್ನಾರ ಅಭಿನಯ ಚೆನ್ನಾಗಿದ್ದು, ಅಂಬೇಡ್ಕರರ ದುಃಖದಾಳವನ್ನು ಅರಿಯದವ ಅಂಬೇಡ್ಕರ್ ಅನ್ನು ಚಿತ್ರಿಸಿದ್ದರೆ ಜಿನ್ನರಂತಾಗಿ ಬಿಡುತ್ತಿತ್ತು. ಚಿತ್ರದಲ್ಲಿ ಅಂಬೇಡ್ಕರ್ ಇಲ್ಲದಿದ್ದುದು ಒಂದು ರೀತೀಲಿ ಒಳ್ಳೆಯದಾಯಿತು ಅನ್ನಿಸಿತ್ತು. ಅಲ್ಲದೆ ಗಾಂಧಿ ಕಾಲದ ಮುಖ್ಯರಾದ ವಿನೋಬಾ, ಸುಭಾಷ್‌ಚಂದ್ರಬೋಸ್, ಜೆ.ಪಿ., ಲೋಹಿಯಾ ಮುಂತಾದ ಪಾತ್ರಗಳೂ ಚಿತ್ರದಲ್ಲಿಲ್ಲದಿರುವಾಗ ಅಂಬೇಡ್ಕರ್ ಇಲ್ಲದಿರುವಿಕೆಯಲ್ಲಿ ದುರುದ್ದೇಶವಿದೆ ಎಂದೇನೂ ನನಗನ್ನಿಸಿರಲಿಲ್ಲ. ಆದರೆ ಸಾಮಾಜಿಕವಾಗಿ ಕೆಳಸ್ತರದತ್ತ ಗಾಂಧಿ ಚಲಿಸುವಂತಾಗಲು ಅಂಬೇಡ್ಕರರ ಅದಮ್ಯ ಚೇತನ ಕಾರಣ ಎಂಬು ದರಲ್ಲೇನೂ ನನಗೆ ಅನುಮಾನವಿಲ್ಲ.

ಇದನ್ನೆಲ್ಲಾ ಯೋಚಿಸುತ್ತಾ ಆ ಕಾಲದಲ್ಲಿ ನಾನು ಇದ್ದಿದ್ದರೆ ಯಾರ ಕಡೆ ಇರುತ್ತಿದ್ದೆ ಎಂದು ನನ್ನ ತಲೆ ತಿಂದಿತು. ಅದೆಷ್ಟು ಯೋಚಿಸಿದರೂ ನಿಲುಕದೆ ತಳಮಳಿಸಿದೆ. ನಿದ್ದೆಯಲ್ಲೂ ಈ ಚಿಂತೆ ನನ್ನನ್ನು ಬಿಡುತ್ತಿರಲಿಲ್ಲ. ಎದ್ದಾಗ, ನಾನು ಗಾಂಧಿ ಜೊತೆ ಇದ್ದೂ - ಅಂಬೇಡ್ಕರರನ್ನು ಅರ್ಥಮಾಡಿಕೊಳ್ಳಬೇಕೆಂದು ಗಾಂಧಿಯೊಡನೆ ಅಂಬೇಡ್ಕರರ ಪರವಾಗಿ ವಾದಿಸುತ್ತಿದ್ದೆನೇನೋ ಎನಿಸಿತು.

3

ಗಾಂಧಿಯದು ಭೂಮಿಯಂತೆ ಒಂದು ಕ್ಷಣವೂ ನಿಲ್ಲದೆ ಚಲಿಸುವ ಚೇತನವು. ಈ ಚೇತನವ ನಿರ್ದೇಶಕ ಹೇಗೆ ಅದ್ಭುತವಾಗಿ ಹಿಡಿದಿದ್ದಾನೆಂದರೆ - ಮೋಹನ್‌ದಾಸನು ಮೊದಲು ಕೆಂಪು

ಮನುಷ್ಯನನ್ನು ಅನುಕರಿಸಲು ಹೋಗಿ ಆ ಪ್ರಯಾಣದಲ್ಲಿ ಕ್ರೂರವಾಗಿ ತಳ್ಳಿಸಿಕೊಂಡು ಅವಮಾನಿತನಾಗಿ 'ಗಾಂಧಿ'ಯಾಗಲು ಆರಂಭಿಸುತ್ತಾನೆ. ಭಾರತೀಯ ಅಸ್ಪೃಶ್ಯತನದ ಬೀಜ ಅವನ ಎದೆಗೆ ಆಗ ಬಿತ್ತಿದಂತಾಗಿರಬೇಕು. ಕೇವಲ ಈ ಒಂದು ಅವಮಾನಕ್ಕೆ ಆ ಮೋಹನದಾಸನು 'ಮಹಾತ್ಮಾ ಗಾಂಧಿ'ಯಾಗಿ ಪರಿವರ್ತನೆಗೊಳ್ಳುವುದಾದರೆ ದೇಹವಿಡೀ, ಜೀವನಪಿಡೀ ಅವಮಾನದಿಂದಲೇ ಮಾಡಲ್ಪಟ್ಟ ಅಸ್ಪೃಶ್ಯ ಬೆಳೆದರೆ ಅದೆಷ್ಟು ಎತ್ತರಕ್ಕೆ ಬೆಳೆಯಬಹುದೆಂಬುದು ನನ್ನ ಊಹೆ ಅಳತೆಗಳಿಗೆ ನಿಲುಕದಷ್ಟು ಎತ್ತರದ್ದಾಗಿಬಿಟ್ಟಿತ್ತು.

ಆಫ್ರಿಕಾದಲ್ಲಿ ಕರಿಯನಾದ ಮೋಹನ್‌ದಾಸ್‌ಗೆ ಆ ಕರಿಯತನವೇ ಅವನಿಗೆ ದಿಕ್ಕು ತೋರಿಸುತ್ತದೆ. ಸಹನೆ, ದೃಢತೆ, ಅಹಿಂಸೆ ಇವುಗಳೊಡನೆ ಎದುರಾಳಿಯನ್ನು ಮಾನವನಾಗಿಸುವ ಅಪೂರ್ವತೆ, ಇದರೊಟ್ಟಿಗೇ ಹೊಸತಾಗಿ ಸಹಜೀವನ ಕಟ್ಟುವ ಒಳಗಣ್ಣು ಗಾಂಧಿಗೆ ಅಲ್ಲುಂಟಾಗುತ್ತದೆ. ಆ ಕಾಗದ ಸುಡುವ ಸಂದರ್ಭದಲ್ಲಿ ಮೋಹನ್‌ದಾಸ್ ಗಾಂಧಿಗೆ ಬಿಳಿ ಪೊಲೀಸ್ ಹೊಡೆದೂ ಹೊಡೆದೂ ಸುಸ್ತಾಗಿ ಗಾಂಧಿಯ ನಿರ್ಲಿಪ್ತ ಕಾಯಕಕ್ಕೆ ಆ ಕ್ರೂರ ಪೊಲೀಸ್‌ನಲ್ಲೂ 'ಮಾನವ ಇಣುಕುವುದ'ರ ಎಳೆಯೇ ಗಾಂಧಿಯನ್ನು ಮುಂದೆ ನಡೆಸಿಕೊಂಡು ಹೋಗುತ್ತದೆ.

ಆಮೇಲೆ ಮೋಹನ್‌ದಾಸ್ ಗಾಂಧಿ ಮೊದಲನೆ ದರ್ಜೆಯ ಗುಜರಾತಿಯಾಗಿ ಭಾರತಕ್ಕೆ ಬಂದು, ಆತನ ಪಯಣದಲ್ಲಿ ರೈಲು ನಿಂತಾಗ - ಉಟ್ಟ ಸೀರೆಯನ್ನೇ ಒಗೆದುಕೊಳ್ಳುತ್ತಿದ್ದ ಹೆಂಗಸಿಗೆ ತನ್ನ ಪೇಟ ಬಿಚ್ಚಿಕೊಟ್ಟು ಎರಡನೇ ದರ್ಜೆಯ ಭಾರತೀಯನಾಗುತ್ತಾನೆ. ಅಲ್ಲಿಂದ ಚಂಪಾರಣ್ಯವೂ ಆತನಿಗೆ ಲಂಗೋಟಿ ಮಾತ್ರದಷ್ಟು ಉಳಿಸಿಕೊಟ್ಟು ಮೂರನೇ ದರ್ಜೆಗೆ ಇಳಿಸಿ ಮಹಾತ್ಮ ನನ್ನಾಗಿಸುತ್ತದೆ. ಗರೀಬತನದ ದೇಹ, ಮನಸ್ಸು, ಚಿಂತನೆ ಪಡೆದು ಮೋಹನದಾಸ್ ಕರಮಚಂದ ಗಾಂಧಿಯು ಮಹಾತ್ಮಾ ಗಾಂಧಿಯಾಗುತ್ತಾರೆ.

ಮಾನವ ಒಂದು ಜೀವಿತದಲ್ಲಿ ಇಷ್ಟು ಆಗುವುದು ಒಂದು ಪವಾಡವೆ. ತನ್ನ ಒಂದು ದೇಹದಲ್ಲಿ ಇಷ್ಟೆಲ್ಲಾ ರೂಪಾಂತರವಾದ ಗಾಂಧಿ ತನ್ನ ಜೀವಿತವ ಪ್ರಯೋಗಕ್ಕಿಟ್ಟುಕೊಂಡ ಗಾಂಧಿ - ಯಾಕೆ ಅಸ್ಪೃಶ್ಯನ ದೇಹ, ಮನಸ್ಸು ಪಡೆಯಲಿಲ್ಲ ಎಂಬುದು ನನ್ನ ಖಿನ್ನನನ್ನಾಗಿಸಿದೆ. ಅಸ್ಪೃಶ್ಯರ ಬಗ್ಗೆ ಅತ್ಯಂತ ಕಳಕಳಿ, ಅನುಕಂಪ ತೋರಿಸುತ್ತಾರೇ ಹೊರತು ಗಾಂಧಿಯು ಅಸ್ಪೃಶ್ಯ ಸ್ಥಿತಿಯೇ ಆಗಿ ಅದರ ದನಿಯಾಗುವುದಿಲ್ಲ. ಅಸ್ಪೃಶ್ಯರ 'ಬಗ್ಗೆ'ಯಿಂದ ಗಾಂಧಿ 'ಅದಾ'ಗುವುದಿಲ್ಲ. ಅಸ್ಪೃಶ್ಯ ಆಗಲು ಮುಂದಿನ ಜನ್ಮ ಬಯಸುತ್ತಾರೆ. ಅದಕ್ಕಾಗಿ ಗಾಂಧಿ ಬಗ್ಗೆ ಅಂಬೇಡ್ಕರರಿಗೆ ಇರುವ ಕಠೋರತೆಯನ್ನೂ ಅರ್ಥ ಮಾಡಿಕೊಳ್ಳಬೇಕೆನಿಸುತ್ತದೆ.

'ಭಾರತ ಎರಡಾಗುವುದಾದರೆ ನನ್ನ ಹೆಣದ ಮೇಲಾಗಬೇಕೆಂದು ನುಡಿದ ಗಾಂಧಿ ತಮ್ಮ ನುಡಿಯನ್ನು ಉಳಿಸಿಕೊಂಡಿದ್ದರೆ ಕ್ರಿಸ್ತನ ಮಟ್ಟಕ್ಕೆ ಮುಟ್ಟುತ್ತಿದ್ದರು' ಎನ್ನುವ ಡಾ. ಲೋಹಿಯಾರ ಮಾತಿನ ಸತ್ಯತೆ - ಅಂದರೆ, ಗಾಂಧಿಯ ಈ ಒಂದು ಕೊರತೆ ಮತ್ತು ಗಾಂಧಿ ಈ ನಾಡ ತಳದ ಮಾನವ ಅಸ್ಪೃಶ್ಯನ ದೇಹ, ಮನಸ್ಸು ಚಿಂತನೆ ಪಡೆಯದೆ ಅದಕ್ಕಾಗಿ ಮುಂದಿನ ಜನ್ಮ ಆಶಿಸುವುದು - ಈ ಎರಡೂ ಕೊರತೆಯಿಂದಾಗಿ ನಮ್ಮ ಯುಗದ ಎತ್ತರದ ಪುರುಷ ಗಾಂಧಿಯ ಎತ್ತರ ಆಕಾಶ ಮುಟ್ಟಲು ಎರಡು ಗೇಣು ಕಮ್ಮಿಯಾಗುತ್ತದೆ.

4

ನಾನು ಅಹಿಂಸೆಯ ಪರವಾಗಿದ್ದು ಉದ್ವಿಗ್ನತೆಯ ದಲಿತ ಸ್ನೇಹಿತರೊಡನೆ - 'ಅಂಬೇಡ್ಕರ್ ಕೂಡಾ ಅಹಿಂಸೆಯನ್ನು ಹಿಡಿದಿದ್ದರು. ಅದಕ್ಕೆ ಅವರು ಬೌದ್ಧರಾದುದು' ಎಂದು ಒಪ್ಪಿಸುತ್ತಿದ್ದೆ. ಆದಾಗ್ಯೂ ಅನೇಕರು ಒಪ್ಪುತ್ತಿರಲಿಲ್ಲ. ಆಗ ವಾಸ್ತವತೆಯ ಉದಾಹರಣೆ ಕೊಟ್ಟು ಅಂದರೆ - 'ನೋಡಿ, ನಾವು ಅಸ್ಪೃಶ್ಯರು ಕಮ್ಮಿ ಸಂಖ್ಯೆಯಲ್ಲಿದ್ದೇವೆ. ಪೊಲೀಸು, ಮಿಲಿಟರಿ ಎದುರಿಸುವುದು ಆಗದ ಮಾತು. ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ಅಕ್ಕಪಕ್ಕದ ವಾಸಿಗಳಾದ ಸವರ್ಣೀಯರು ನಾವು ಇರುವುದನ್ನೇ ಸಹಿಸರು. ಹೀಗಿರುವಾಗ ನಾವು ಹಿಂಸೆ ಹಿಡಿದರೆ ನಮಗೆ ಉಳಿಗಾಲವಿಲ್ಲ' ಎಂದು ತಂತ್ರವಾಗಿಯಾದರೂ ಅಹಿಂಸೆ ಒಪ್ಪಿಸಲು ಹೆಣಗುತ್ತಿದ್ದೆ. ಗಾಂಧಿ ಚಿತ್ರ ನೋಡಿದ ಮೇಲೆ ನನ್ನ ಈ ತಂತ್ರವಾದವೂ ತಪ್ಪೆನಿಸಿತು. ಚಳವಳಿಕಾರರು ಪೊಲೀಸರನ್ನು ಕೊಂದಾಗ, ನೆಹರೂ, ಪಟೇಲ್, ಜಿನ್ನಾರು ವಿರೋಧಿಸಿದರೂ ಗಾಂಧಿ ಉಪವಾಸ ಮಾಡಿ, ಚಳವಳಿ ಹಿಂದೆಗೆದು ಕೊಂಡದ್ದು ನನ್ನನ್ನು ಬದಲಿಸಿತು. ಬಿಳಿ ನ್ಯಾಯಾಧೀಶ ಕರಿಯ ಗಾಂಧಿಗೆ ಎದ್ದು ನಿಂತಿತ್ತು. ನನಗಾಗ ಅಹಿಂಸೆ ತಂತ್ರವಲ್ಲ, ಅದು ಬದುಕು ಅನ್ನಿಸಿತು.

5

ಸಾಹಿತ್ಯ ಲೋಕದ ಮಂದಣ್ಣ ಉರುಫ್ ಗಾಂಧಿ ಗೋವಿಂದಯ್ಯ 'ಹೇಗಿದೆ ಗಾಂಧಿ' ಎಂದು ನೆಗಾಡಿದನು. ಅದಕ್ಕೆ ನಾನು 'ಸಾಯಲು ಮಾನಸಿಕವಾಗಿ, ದೃಢವಾಗಿ ಸಿದ್ಧವಾದವನು ಮಾತ್ರ ಗಾಂಧಿಯಾಗಬಲ್ಲ' ಎಂದೆ. ಅಹಿಂಸಾವಾದಿಯಾದ ಗಾಂಧಿಯ ದೇಹದ ಒಂದು ರೋಮದಲ್ಲೂ ಹೇಡಿತನದ ಸುಳಿವು ಇಲ್ಲದಿರುವುದು ನಮ್ಮನ್ನು ನಡುಗಿಸಿತು. ಹೇಡಿಯಾದವನು ಅಹಿಂಸಾವಾದಿಯಾಗುವುದು ಅಸಾಧ್ಯ ಎಂಬ ನಿಜವೂ ಅರಿವಾಗಿ ನಮ್ಮನ್ನು ಬೆವರಿಸಿತು. ಇಂಥಾ ಗಾಂಧಿಯನ್ನು ಅಪಾರ್ಥಕ್ಕೊಳಗಾಗಿಸಿದ ಸೈತಾನ ನಮಗೆ ಸಿಗಲಿಲ್ಲ. ಅಥವಾ ನಮ್ಮ ಹೇಡಿತನವೇ ಆ ಸೈತಾನ ಆಗಿರಬೇಕು. ನಮ್ಮ ದಲಿತ ಸ್ನೇಹಿತರ ಕಣ್ಣೂ ಗಾಂಧಿಯ ಬಗ್ಗೆ ಸಂಪೂರ್ಣವಾಗಿ ಮುಚ್ಚಿಕೊಂಡಿರುವುದು ನಮ್ಮನ್ನು ಖಿನ್ನರನ್ನಾಗಿಸಿತು. ಕಸ್ತೂರಿಬಾರವರು ಅಸ್ಪೃಶ್ಯನೊಬ್ಬನ ಕೆಲಸ ಎಂದು ಕಕ್ಕಸ್ಸು ಎತ್ತಲು ನಿರಾಕರಿಸಿದಾಗ, ಗಾಂಧಿಯು ತನ್ನನ್ನೇ ತಾನು ಕಳೆದುಕೊಂಡು ಉದ್ವಿಗ್ನನಾಗಿ ಮನೆಯಿಂದಲೇ ದೂಡುವ ಚಿತ್ರ ನಮ್ಮೀರ್ವರ ಕಣ್ಮುಂದೂ ನಿಂತಿತ್ತು.

6

ದಲಿತ ಸಂಘರ್ಷ ಸಮಿತಿ ತನ್ನದೇ ರೂಪಿಲ್ಲದೆ ತನ್ನದೇ ದಾರಿಯಿಲ್ಲದೆ ದಿಕ್ಕೆಡುತ್ತಿದೆ. ಮೊನ್ನೆ ದೇವಲಾಪುರದ ಕಾಡು ಸಂಬಂಧಿಸಿ, ದಲಿತ ಸಂಘದ ಸ್ನೇಹಿತರು ನಡೆಸಿದ ಧರಣಿಯಲ್ಲಿ ಕಾಡಿನ ಅಧಿಕಾರಿಯನ್ನು ಸಿಕ್ಕಾಪಟ್ಟೆ ಬೈದು ಆತನನ್ನು ಕುಪಿತಗೊಳಿಸಿದರು ಎಂದು ಕೇಳಿದೆ. ಇದು ಅನಗತ್ಯವಾಗಿತ್ತು.

ದೇವಲಾಪುರದ ಭೂ ಚಳವಳಿಯು ಕಾಡಿಗೆ ವಿರೋಧವಲ್ಲ. ರೆವಿನ್ಯೂ ಭೂಮಿಯಿಂದಾಗಿ ದಾಖಲಾತಿ ಸಿಕ್ಕಿದ್ದರಿಂದಲೇ ಆರಂಭವಾದ ಚಳವಳಿ ಅದು. ಜೀವಿಜಯ, ಜಿಗಜಿಣಗಿ, ಜಿಲ್ಲಾಧಿಕಾರಿ, ವಿಶೇಷ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿಗಳು ನಮ್ಮಂಥ ಗರೀಬರ ಪರವಾಗಿದ್ದರು.

ಇತರರಿಗೆ ಸೌಂದರ್ಯಕ್ಕೆ, ಕೇಂದ್ರ ಸರಕಾರಕ್ಕೆ ನೀಲಗಿರಿ ಬೆಳಸಿ ಟಾಟಾ ಬಿರ್ಲಾರಿಗೆ ಕೊಡಲು ಕಾಡು ಬೇಕಾದರೆ, ದಲಿತರಿಗೆ ರೈತಾಪಿ ಜನರ ಬದುಕಿಗೆ ಮಳೆ ಬೆಳೆಗೆ ಸೌದೆ ಸೊಪ್ಪು ಸೊದೆಗೆ ಕಷಾಲೆಗೆ ಬೇಕಾದಂತಹ ಕಾಡು,

ಕಾಡ ಅಧಿಕಾರಿಗಳ ಬಳಿ....

ಭೂಮಾಲಿಕರು ಕಾಡಿನ ಕಲ್ಲುಕಿತ್ತು ಕಾಡನ್ನು ಒತ್ತರಿಸಿರುವುದನ್ನು ಮುಟ್ಟದ ಕಾಡಿನ ಅಧಿಕಾರಿಗಳೇ

ಹಾಗೆ ಸರ್ಕಾರದ ಬಳಿ....

ಕಾಡನ್ನು ನುಂಗುತ್ತಿರುವ ಕಾಡಿನ ಅಧಿಕಾರಿಗಳನ್ನು ರೆವಿನ್ಯೂ ಭೂಮಿಯೆಂದು, ಗರೀಬರು ಬಂದಾಗ ಅದ ಕಾಡು ಭೂಮಿ ಮಾಡುತ್ತಿ! ಕಾಡು ಭೂಮಿಯನ್ನು ಒತ್ತರಿಸುವ ಭೂಮಾಲೀಕರಿಗೆ ಅದ ರೆವಿನ್ಯೂ ಭೂಮಿ ಮಾಡುತ್ತಿ! ಹೊಟ್ಟೆಗಿಲ್ಲದ ನಮ್ಮ ಹೊಟ್ಟೆಯನ್ನೇಕೆ ತುಳಿಯುತ್ತೀ? ನಿನ್ನ ನಿಜ ಏನು?

- ಎಂದಷ್ಟೇ ಕೇಳಿದ್ದರೆ ಸಾಕಾಗಿತ್ತು. ಆಗ ಅಧಿಕಾರಿಯೂ, ಸರ್ಕಾರವೂ ಕನಿಷ್ಟ ಯೋಚಿಸು ವಂತಾದರೂ ಆಗುತ್ತಿತ್ತು. ಅವು ತಮ್ಮನ್ನು ತಾವು ಮುಟ್ಟಿನೋಡಿಕೊಳ್ಳುತ್ತಿದ್ದವು.

ಅದಕ್ಕಾಗೆ ನಮ್ಮ ದಲಿತ ವಿಭಾಗದ ಸಂಚಾಲಕ ಶ್ರೀಹರಿಹರ ಆನಂದಸ್ವಾಮಿಯವರು ದ್ವೇಷ, ಅನುಮಾನದ ಪ್ರವೃತ್ತಿ ಉಳ್ಳವರಾದ್ದರಿಂದ ಅವರಿಗೆ 'ದಯವಿಟ್ಟು ಗಾಂಧಿ ಚಿತ್ರ ನೋಡಿ' ಎಂದು ಎರಡು ಸಲ ವಿನಂತಿಸಿದೆ. ಹಾಗೆಯೇ ಇನ್ನೊಬ್ಬ ಕಾಂಗ್ರೆ ಗೂಂಡಾಗಿರಿಯಿಂದ ಪರಿವರ್ತಿತ ನಾಗಿ ದಲಿತಸಂಘವ ಸೇರಿ ದಿನದಿನಕ್ಕೂ ಬೆಳೆಯುತ್ತ ದಲಿತ ಸಂಘದ ನಾಯಕನಾಗುತ್ತಿರುವ ಕೋಟೆಯ ಬೆಟ್ಟಯ್ಯ ಎಂಬ ಚೈತನ್ಯದ ಸೆಲೆಯಂತಿರುವ ಹುಡುಗನಿಗೂ ಸಿಕ್ಕಾಗ ಗಾಂಧಿ ಚಿತ್ರ ನೋಡು ಎಂದು ಹೇಳಬೇಕೆಂದಿರುವೆ. ನನ್ನೆಲ್ಲ ದಲಿತ ಸಂಘದ ಗೆಳೆಯರಿಗೂ ನಾನು ಹೇಳುವುದು ಹೀಗೆಯೇ.

7

ಯಾಕೆಂದರೆ ನಮಗಿನ್ನೂ ಸ್ವಾತಂತ್ರ್ಯ ಎಂಬುದು ಬಂದಿಲ್ಲ. ನಮಗೆ ವಿಮೋಚನೆಯು ಆಗಬೇಕಾಗಿದೆ. ಗಾಂಧಿಯು ಬ್ರಿಟೀಷರಿಂದ ಸ್ವಾತಂತ್ರ್ಯ ಪಡೆದದ್ದು ಒಂದು ರೀತೀಲಿ ಸುಲಭದ್ದು. ಗಾಂಧಿಯೊಡನೆ ಸಮಸ್ತ ಜನರಿದ್ದರು. ಮತ್ತು ಈ ನೆಲದಲ್ಲದವ ವೈರಿಯಾಗಿದ್ದನು. ಆದರೆ ನಮ್ಮ ಇರುವಿಕೆಯನ್ನು ಸಹಿಸದಿರುವ ಸವರ್ಣೀಯ ಜನಸ್ತೋಮವ ಗೆಲ್ಲುತ್ತ ಅದರ ಮನ ವಶಮಾಡಿಕೊಳ್ಳುತ್ತ ನಾವು ನಮ್ಮ ವಿಮೋಚನೆ ಕಡೆಗೆ ನಡೆಯಬೇಕಾಗಿದೆ. ನಮ್ಮೊಡನೆಯೂ ಬೆರಳಣಿಕೆಯಷ್ಟು ಮಾತ್ರ ಸವರ್ಣೀಯರು ಬರಬಹುದು. ಇಂಥದ್ದರಲ್ಲಿ ಹೀಗಿರುವಾಗ ನಮ್ಮ ಬಿಡುಗಡೆಯ ನೂರು 47ರ ಸ್ವಾತಂತ್ರ್ಯ ಹೋರಾಟಕ್ಕೂ ಮಿಗಲು ಪಡೆದುಕೊಂಡಿರುತ್ತದೆ. ಇಂಥದ್ದರಲ್ಲಿ, ಹೀಗಿರುವಾಗ ನಮ್ಮ ವಿಮೋಚನೆಗಾಗಿ ಸಾವಿರಾರು ರೀತಿಗಳನ್ನು ನಾವು ತಡಕಬೇಕಾಗಿದೆ. ಇಂಥದ್ದರಲ್ಲಿ, ಹೀಗಿರುವಾಗ ಗಾಂಧಿಯೂ ನಮಗೆ ದಿಕ್ಕಾಗಬಹುದು.

❑

ಗಾಂಧೀಜಿ - ಡಾ. ಅಂಬೇಡ್ಕರ್ : ಇವರುಗಳ ವಿಚಾರ, ಚಿಂತನಗಳಲ್ಲಿ ಸಾಮ್ಯತೆ

ಜಿ.ಕೆ. ಗೋವಿಂದರಾವ್

ಬಹುಶಃ ನನಗೆ ಗೊತ್ತಿದ್ದ ಮಟ್ಟಿಗೆ ಈ ವೇದಿಕೆಯಿಂದಾಗಲಿ ಅಥವಾ ಯಾವುದೇ ವೇದಿಕೆಯಿಂದಾಗಲಿ ಗಾಂಧೀಜಿ ಮತ್ತು ಅಂಬೇಡ್ಕರ್ ಅವರನ್ನು ಜೊತೆಜೊತೆಯಾಗಿಟ್ಟು ಅವರ ವಿಚಾರಗಳಲ್ಲಿ ಸಾಮ್ಯತೆ, ಭಿನ್ನಾಭಿಪ್ರಾಯ ಇವುಗಳ ಕುರಿತು ಮೂರು ದಿನಗಳ ಚರ್ಚೆಯನ್ನು ಮಾಡುತ್ತಿರುವ ಸಂದರ್ಭ ಇದೇ ಮೊದಲು.* ಇದು ಸಾಧಾರಣ ಪ್ರಯತ್ನವಲ್ಲ. ಈ ವಿಷಯದ ಬಗ್ಗೆ ಮಾತನಾಡಬೇಕೆಂದು ನನಗೆ ಹೇಳಿದಾಗಿನಿಂದ ಒಂದು ವಿಷಯ ನನ್ನ ಮನಸ್ಸಿನಲ್ಲಿ ಬಹಳ ಗಾಢವಾಗಿ ಕೆಲಸ ಮಾಡುತ್ತಲಿದೆ. ಗಾಂಧೀಜಿ ಅವರು ತೀರಿಕೊಂಡು ಐವತ್ತೈದು ವರ್ಷಗಳಾದವು. ಇನ್ನು ಮೂರು ವರ್ಷಕ್ಕೆ ಅಂಬೇಡ್ಕರ್ ಅವರು ತೀರಿಕೊಂಡು ಐವತ್ತು ವರ್ಷಗಳಾಗುತ್ತವೆ. ಅಂದರೆ ನಾವು ಇಂದು ಈ ಚರ್ಚೆಯನ್ನು ಐವತ್ತು ವರ್ಷಗಳಾಚೆ ನಿಂತು ಮಾಡುತ್ತಲಿದ್ದೇವೆ. ವೇದಿಕೆಗಳ ಮೇಲೆ ನಿಂತು ಕೇವಲ ಅಕೆಡೆಮಿಕ್ ಆಗಿ ಈ ವಿಷಯವನ್ನು ವಿಶ್ಲೇಷಣೆ ಮಾಡುತ್ತ ನಿಂತರೆ ಸಾಲದು. ಅವರಿಬ್ಬರ ಮಧ್ಯದ ಸಾಮ್ಯತೆ ಹಾಗೂ ಬಿನ್ನಾಭಿಪ್ರಾಯಗಳು, ಯಾವುದೇ ಇರಲಿ, ಅವುಗಳನ್ನು ನಮ್ಮ ತತ್‌ಕ್ಷಣದ ಸಂದರ್ಭಕ್ಕೆ ಅನ್ವಯಿಸಿ ಮಾತನಾಡಿದಾಗ ಮಾತ್ರ ನಮ್ಮ

---

* ಬೆಂಗಳೂರು ವಿಶ್ವವಿದ್ಯಾಲಯದ 'ಗಾಂಧಿ ಭವನ' ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರ ಜಂಟಿಯಾಗಿ ಏರ್ಪಡಿಸಿದ್ದ 'ಮಹಾತ್ಮಾ ಗಾಂಧಿ - ಡಾ. ಬಿ.ಆರ್. ಅಂಬೇಡ್ಕರ್ - ಜನಪರ ಕಾಳಜಿಗಳು' - ಕಮ್ಮಟದಲ್ಲಿ ಮಂಡಿಸಿದ ಬಾಷಣ - 12-07-2003

ಚರ್ಚೆ ಅರ್ಥಪೂರ್ಣ ಆಗುತ್ತದೆ. ಇಲ್ಲದಿದ್ದರೆ ಅವರುಗಳು ಅಲ್ಲಿಯೇ ಇರುತ್ತಾರೆ, ನಾವು ಇಲ್ಲಿಯೇ ಇರುತ್ತೇವೆ.

ಯಾವ ಒಂದು ಚಳವಳಿಯೂ ಕೂಡ ಆಂತರಿಕವಾಗಿ ಒಳಗಿನಿಂದಲೇ ಭಿನ್ನಾಭಿಪ್ರಾಯಗಳಿಗೆ ಎಡೆಮಾಡಿಕೊಡದೆ ಬೆಳೆಯುವುದೇ ಇಲ್ಲ. ಆದರೆ ಈ ಭಿನ್ನಾಭಿಪ್ರಾಯಗಳು ಯಾವ ಬಗೆಯವಾಗಿರಬೇಕು? ಕ್ರಿಯಾಶೀಲ ಭಿನ್ನಾಭಿಪ್ರಾಯ ಒಂದು, ಪ್ರತಿಗಾಮೀ ಭಿನ್ನಾಭಿಪ್ರಾಯ ಮತ್ತೊಂದು. ಸುಮಾರು 1920ರ ದಶಕದಲ್ಲಿ ಡಾ. ಅಂಬೇಡ್ಕರ್ ಅವರು ಪ್ರಕಾಂಡವಾಗಿ ಭಾರತದ ಇತಿಹಾಸದಲ್ಲಿ ತಮ್ಮ ಹೆಸರನ್ನು ಅಚ್ಚೊತ್ತುತ್ತಾರೆ. ಇತಿಹಾಸದಲ್ಲಿ ಒಬ್ಬ ಪ್ರಧಾನ ವ್ಯಕ್ತಿಯಾಗಿ ಬರುತ್ತಾರೆ.

ಅದೇ ಕಾಲಕ್ಕೆ ಅಂದರೆ ಸುಮಾರು 1925ರ ವೇಳೆಗೆ ಮತ್ತೊಂದು ಅಧ್ಯಾಯವೂ ಆರಂಭವಾಯಿತು. ಅದುವರೆವಿಗೆ ಬಡತನ, ಶಿಕ್ಷಣ, ನಿರೋದ್ಯೋಗ, ಅಸಮಾನತೆ ಒಂದಿಷ್ಟೂ ಯೋಚನೆ ಮಾಡಿರದಿದ್ದ ಒಂದು ಗುಂಪು, ಒಂದು ವರ್ಗ ಇದ್ದಕ್ಕಿದ್ದಂತೆ ಈ ದೇಶದ ಭವಿಷ್ಯದ ಬಗ್ಗೆ ಚಿಂತನೆ ಆರಂಭಿಸುತ್ತದೆ. ಅವರ ಆತಂಕ ಇದ್ದದ್ದು 'ಈ ದೇಶಕ್ಕೆ ಸ್ವಾತಂತ್ರ್ಯ ಬಂದರೆ ನಮ್ಮ ಸ್ಥಿತಿ ಏನಾಗುತ್ತದೆ" ಎಂಬ ರೀತಿಯದು. ಈ 'ನಮ್ಮ' ಎಂದಾಗ ಯಾರು ಈ 'ನಾವು' ಎಂಬುದನ್ನು ನೋಡೋಣ. ಈ 'ನಾವು'ಗಳು ಎಂದರೆ ಕೋಮುವಾದಿಗಳು. 'ರಾಷ್ಟ್ರೀಯ ಸ್ವಯಂ ಸೇವಕ ಸಂಘ' ಹಾಗೂ 'ಹಿಂದೂ ಮಹಾಸಭಾ' ಎಂಬ ಸಂಘಟನೆಗಳನ್ನು ಹುಟ್ಟು ಹಾಕಿದ ಶಕ್ತಿಗಳು.

1920ರ ವೇಳೆಗಾಗಲೇ ಭಾರತದ ಇತಿಹಾಸದ ಮೇಲೆ ತಮ್ಮ ಗಾಢ ಛಾಪು ಬಿತ್ತಿದ್ದ ಗಾಂಧೀಜಿ - ಅವರದ್ದು ಮತ್ತು 20ರ ದಶಕದ ವೇಳೆಗೆ ಒಂದು ಶಕ್ತ ದನಿಯಾಗಿ ಬೆಳೆದ ಅಂಬೇಡ್ಕರ್ ಅವರದ್ದು ಎರಡು ಚಳವಳಿಗಳಾದರೆ, ಈ ಕೋಮುವಾದಿಗಳು ಆರಂಭಿಸಿದ ಚಟುವಟಿಕೆ ಒಂದು ಪಿತೂರಿ ಆಗಿ ಪರಿವರ್ತನೆಗೊಂಡಿತು. ಅಂಬೇಡ್ಕರ್ ಅವರ ಕಳಕಳಿ ಏನಿತ್ತೆಂದರೆ 'ಈ ದೇಶಕ್ಕೆ ಸ್ವಾತಂತ್ರ್ಯ ಬಂದರೆ ನನ್ನಜನದ ಗತಿ ಏನಾಗ್ತದೆ' ಎಂದು. ಇದು ಕ್ರಿಯಾಶೀಲ ಚಿಂತನೆ. ಪಿತೂರಿ ಮಾಡಹೊರಟ ಕೋಮುವಾದಿ ಶಕ್ತಿಗಳ ಕಾಳಜಿಯೂ ಇದೇ ರೀತಿಯದಾಗಿತ್ತು, 'ಸ್ವಾತಂತ್ರ್ಯ ಬಂದ ಮೇಲೆ ಹಿಂದೂ ಧರ್ಮದ ಭವಿಷ್ಯವೇನು?' ಎಂಬ ಕಾಳಜಿ. ಅಂದರೆ ಪರಂಪರಾನುಗತವಾಗಿ ಬಂದ, ಸಾವಿರಾರು ವರ್ಷಗಳ 'ಹಿಂದೂ ಧರ್ಮ'ವೆಂಬ ವ್ಯವಸ್ಥೆಯ ಭವಿಷ್ಯದ ಕಳಕಳಿಯಿದು. ಅಂಬೇಡ್ಕರ್ ಅವರದು 'ಇದೇ ಸಾವಿರಾರು ವರ್ಗಗಳ ಈ ಪರಂಪರೆಯಲ್ಲಿ ತುಳಿತಕ್ಕೆ ಸಿಲುಕಿಕೊಂಡ ತನ್ನ ಜನಗಳ ಭವಿಷ್ಯವೇನು? ಈ ಹಿಂದೂವಾದಿಗಳ ಕೈಗೆ ಅಧಿಕಾರ ಹೋದರೆ ಅಸಮಾನತೆ, ಶೋಷಣೆ ಎಂದಿಗಾದರೂ ಕೊನೆಗೊಳ್ಳಬಹುದೆಂಬ ಆಸೆ ಉಳಿಸಿಕೊಳ್ಳಬಹುದೆ?' ಈ ಬಗೆಯ ಆತಂಕವಾಗಿತ್ತು. ಗಾಂಧೀಜಿಯವರು ಕೂಡ ಆ ವೇಳೆಗಾಗಲೇ ಅಸ್ಪೃಶ್ಯರನ್ನು 'ಹರಿಜನರು' ಎಂಬ ಹೆಸರಿನಲ್ಲಿ ಕರೆದು ಅವರುಗಳು ಸಮಾನಾವಕಾಶ, ಸ್ವಾತಂತ್ರ್ಯ, ಆತ್ಮಾಭಿಮಾನ ಇವುಗಳನ್ನು ಬೆಳೆಸಿಕೊಳ್ಳುವುದಕ್ಕೆ ಸಾಧ್ಯ ಮಾಡಿಕೊಡಬೇಕೆಂದು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದರು.

ಗಾಂಧೀಜಿಯವರಿಗೂ ಅಂಬೇಡ್ಕರ್ ಅವರಿಗೂ ಕಣ್ಣಿಗೆ ಹೊಡೆಯುವಂಥ ವ್ಯತ್ಯಾಸ, ನನಗೆ ಅನ್ನಿಸಿದ ಮಟ್ಟಿಗೆ, ಒಂದು ಬಹುಮುಖ್ಯ ವಿಷಯದಲ್ಲಿದೆ. ಗಾಂಧೀಜಿಯವರು ತಾವು ಅಚಲವಾಗಿ ನಂಬಿದ ದೇವರ ಮೂಲಕ ಮನುಷ್ಯನನ್ನು ನೋಡುತ್ತಾರೆ. ಅಂಬೇಡ್ಕರ್ ಅವರು ಮನುಷ್ಯನ ಮೂಲಕ ಮನುಷ್ಯಕುಲವನ್ನು ನೋಡುತ್ತಾರೆ. ಗಾಂಧೀಜಿ ಅವರು ಎಷ್ಟು ದೃಢವಾಗಿ, ಗಾಢವಾಗಿ ದೇವರನ್ನು ನಂಬಿದ್ದರು ಎಂದರೆ ಅವರ ಪ್ರಕಾರ ಆ ದೇವರು ಸೃಷ್ಟಿಸಿದ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಕೂಡ ಒಂದು ಘನತೆ, ಅಭಿಮಾನ, ನ್ಯಾಯಾನ್ಯಾಯಗಳ ವಿವೇಚನಾ ಶಕ್ತಿ, ತಪ್ಪು-ನೆಪ್ಪುಗಳ ವಿಮರ್ಶಾ ಶಕ್ತಿ ಇವೆಲ್ಲವೂ ಸಾಧ್ಯ ಎನ್ನುವ ಒಂದು ಮುಗ್ಧವಾದ ನಂಬಿಕೆ. ಇದು ತಪ್ಪಲ್ಲ. ಇದು ಒಂದು ಬಗೆಯ ಧಾರ್ಮಿಕ ಫೇತ್. ಅಂಥ ನಂಬಿಕೆಯಲ್ಲಿ ಯೋಚನೆಮಾಡುವಂಥವರು ಮನುಷ್ಯ ಕುಲದಲ್ಲಿ ಮುಗ್ಧವಾಗಿ ನಂಬಿಕೆ ಇಡುತ್ತಾರೆ. ಅಂಬೇಡ್ಕರ್ ಅವರಿಗೆ ಮನುಷ್ಯ ಮುಖ್ಯ. ಮನುಷ್ಯ ಮುಖ್ಯ ಅಂದಕೂಡಲೇ ಸಾಮಾನ್ಯನೊಬ್ಬನ ಶಕ್ತಿ ಸಾಮರ್ಥ್ಯಗಳ ಜೊತೆಗೇ ಅವನ ದೌರ್ಬಲ್ಯಗಳೂ ಪ್ರಜ್ಞೆಗೆ ಬರುತ್ತವೆ. ಅವನ ಶಕ್ತಿ ಗಮನಕ್ಕೆ ಬಂದಷ್ಟೇ ತೀವ್ರವಾಗಿ ಅವನ ಸಣ್ಣತನಗಳೂ, ಸ್ವಾರ್ಥಗಳೂ ಗಮನಕ್ಕೆ ಬರುತ್ತವೆ. ಈ ಎಲ್ಲ ಮನುಷ್ಯ ಶಕ್ತಿ, ದೌರ್ಬಲ್ಯಗಳ ಮಧ್ಯದಲ್ಲಿ ಕೆಲಸ ಮಾಡಬೇಕು. ಬಹುಶಃ ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಮಧ್ಯದಲ್ಲಿ ಕಾಣುವ ದೊಡ್ಡ ಪ್ರಮಾಣದ ಭಿನ್ನಾಭಿಪ್ರಾಯ ಇದು ಎಂದು ನನಗೆ ಅನ್ನಿಸುತ್ತದೆ. ಅಭಿಪ್ರಾಯಭೇದ ಅನ್ನುವುದಕ್ಕಿಂತ, ಸುತ್ತಲ ವಸ್ತುಸ್ಥಿತಿಯನ್ನು ನೋಡುವುದರಲ್ಲಿ ತೋರುವ ಎರಡು ವಿಭಿನ್ನ ದೃಷ್ಟಿಕೋನಗಳು ವಿರೋಧಾಭಾಸವಾಗಿ ಕಂಡರೂ ಈ ಬೇಧದಲ್ಲಿಯೇ ಅವರಿಬ್ಬರ ನಡುವಿನ ಸಾಮ್ಯತೆಯೂ ಇರುವುದು ಎಂದು ಹೇಳಬಹುದು. ಯಾವ ಬಗೆಯ ಸಾಮ್ಯತೆ? ಇಬ್ಬರಿಗೂ ಪ್ರಧಾನ ಸಾಮಾನ್ಯ ಅಂಶ ಅವರ ಫೇತ್, ನಂಬಿಕೆ. ಈ ನಂಬಿಕೆ, ನಾಳಿನ ಬಗ್ಗೆ, ಈ ನಾಡಿನ ಭವಿಷ್ಯದ ಬಗ್ಗೆ, ಜನಗಳ ಬಗ್ಗೆ, ಸ್ವಾತಂತ್ರ್ಯದ ಬಗ್ಗೆ. ಅಂಬೇಡ್ಕರ್ ಅವರ ಬಗ್ಗೆ ಅಪಪ್ರಾಚರವೊಂದು ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ವಲಯಗಳಿಂದ ಹಬ್ಬುತ್ತಿತ್ತು. ಅವರನ್ನು ಒಬ್ಬ ಬ್ರಿಟಿಷ್‌ವಾದಿಯೆಂದೂ, ಭಾರತ ಸ್ವಾತಂತ್ರ್ಯ ವಿರೋಧಿಯೆಂದೂ ಪ್ರಚಾರಮಾಡಲಾಗುತ್ತಿತ್ತು. ಆದರೆ ಈ ಜನ, ಅಂಬೇಡ್ಕರ್ ಅವರು 1930ರಲ್ಲಿ ಲಂಡನ್ನಿನಲ್ಲಿ ನಡೆದ ದುಂಡುಮೇಜಿನ ಸಭೆಯಲ್ಲಿ ಬ್ರಿಟಿಷರನ್ನು ಕುರಿತು ಆಡಿದ ಮಾತುಗಳನ್ನು ನೆನೆಯುವುದಿಲ್ಲ. ನೆನೆದರೂ ಅದಕ್ಕೆ ಪ್ರಚಾರ ನೀಡುವುದಿಲ್ಲ. ಆ ಸಭೆಯಲ್ಲಿ ಬ್ರಿಟಿಷ್ ಪ್ರಧಾನಿ ರ್‍ಯಾಮ್‌ಸೆ ಮೆಕ್‌ಡೊನಾಲ್ಡ್ ಅವರೂ ಆಸೀನರಾಗಿದ್ದರು. ಅಂಬೇಡ್ಕರ್ ಅವರು ಈ ಸಭೆಯನ್ನು ಉದ್ದೇಶಿಸಿ ಆಡಿದ ಮಾತುಗಳು ಇವು : "150 ವರ್ಷಗಳ ಕಾಲ ನೀವು ನಮ್ಮ ದೇಶವನ್ನು ಆಳಿದ್ದೀರಿ. 150 ವರ್ಷಗಳ ಹಿಂದೆ ಈ ನಾಡಿನಲ್ಲಿದ್ದ ಜಾತಿ ವ್ಯವಸ್ಥೆ, ಮೇಲುಕೀಳುಗಳೆಂಬ ಬೇಧಗಳು ಇವುಗಳು ಅಮಾನವೀಯ ಎಂದು ನಿಮಗೆ ನಿಜವಾಗಿ ಗೊತ್ತಾಗಿದ್ದಿದ್ದರೆ ಪರಿಸ್ಥಿತಿ ಈಗ ಇರುವ ಹಾಗೆ ಇರುತ್ತಿರಲಿಲ್ಲ. ಆವಾಗ ಬ್ರಾಹ್ಮಣ ರಾಜ್ಯವಿತ್ತು. ಈಗ ನೀವು ಬಂದಿರಿ. ಆದರೆ ಏನು ವ್ಯತ್ಯಾಸ ಮಾಡಿದಿರಿ ನೀವು? ಎಳ್ಳುಕಾಳಿನಷ್ಟೂ ಇಲ್ಲ. ಬದಲಿಗೆ ನಿಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುವುದಕ್ಕಾಗಿ ಕೆಳವರ್ಗದ ಜನಗಳ ಶೋಷಣೆಯನ್ನು, ಈ ಕೊಳಕನ್ನು ಸಹಿಸುವುದಷ್ಟೇ ಅಲ್ಲ, ಜಾಣ ಕಿವುಡು ಮತ್ತು ಜಾಣ ಕುರುಡುಗಳಿಂದ ನೋಡುತ್ತ

ಬಂದಿದ್ದೀರಿ". ಅಂಬೇಡ್ಕರ್ ಅವರು ಈ ಎಲ್ಲ ಮಾತನಾಡುವಾಗ, ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಮೂಲಭೂತವಾದ ಅಪ್ರೋಚ್‌ಗಳ ಬಗ್ಗೆ ಮಾತನಾಡುವಾಗ, ಈ ಐವತ್ತು ವರ್ಷಗಳ ನಂತರದಲ್ಲಿ ಮಾತನಾಡುತ್ತಿರುವ ನಾವು ನಮ್ಮ ಅಪ್ರೋಚನ್ನೂ ಸ್ಪಷ್ಟಪಡಿಸಿ ಕೊಳ್ಳಬೇಕು. ಗಾಂಧೀಜಿ ಅನೇಕ ಕಡೆ ಹೇಳ್ತಾರೆ : " ನಾನು ಅಸ್ಪೃಶ್ಯನಾಗಿ ಹುಟ್ಟದೇ ಹೋದು ದೊಂದು ಶಾಪ. ಯಾಕಂದ್ರೆ ನಾನು ಎಷ್ಟೇ ಅವರ ಪರವಾಗಿ ಯೋಚನೆ ಮಾಡಿದರೂ ಅಸ್ಪೃಶ್ಯನೊಬ್ಬ ನನ್ನನ್ನು ನಂಬಿಕೆಯಿಂದ ನೋಡಲಾರ". ಮತ್ತೂ ಮುಂದುವರೆದು ಹೇಳುತ್ತಾರೆ, "ನಿಮ್ಮ ಅವಮಾನವನ್ನು ಕಲ್ಪಿಸಿಕೊಳ್ಳಬಲ್ಲೆನೇ ಹೊರತು ಅನುಭವದ ಮೂಲಕ ಪಡೆದುಕೊಳ್ಳಲು ಸಾಧ್ಯವೇ ಇಲ್ಲ. ನಾನು ಎಷ್ಟೇ ಪ್ರಯತ್ನಿಸಿದರೂ ಅದು ದುಃಸ್ಸಾಧ್ಯ. ಹಾಗಾದರೆ ಅವಮಾನವೆಂಬುವ ಪ್ರಶ್ನೆಯನ್ನು, ಎಂದೂ ಕೆಳಜಾತಿಯೆಂಬ ರೀತಿಯಲ್ಲಿ ನಡೆಸಿಕೊಂಡ ಬಗೆಯನ್ನು ನಾನು ಗ್ರಹಿಸಿ ಹೋರಾಟವನ್ನು ಮುಂದುವರೆಸುವುದು ಹೇಗೆ?.... ನನಗೆ ಮತ್ತೊಂದು ಜನ್ಮ ಎಂಬುದೊಂದು ಇದ್ದರೆ ನಾನು ಅಸ್ಪೃಶ್ಯನಾಗಿ ಹುಟ್ಟಲು ಬಯಸುತ್ತೇನೆ" ಎಂದು.

ನಾವು ಮರೆಯಲೇಬಾರದ ಒಂದು ಅಂಶ ಇಲ್ಲಿದೆ. ಈ ಇಬ್ಬರು ಮಹಾನ್‌ನಾಯಕರುಗಳ ಮಧ್ಯದಲ್ಲಿದ್ದ ಸಾಮ್ಯತೆ ಎಂದರೆ ಈ ಸ್ವಾತಂತ್ರ್ಯದ ಜೊತೆಗೇ ಒಂದು ಸಾಮಾಜಿಕ ಕ್ರಾಂತಿ ಯಾಗಬೇಕು ಎಂಬ ನಂಬಿಕೆಯದು. ಇಂಥ ದೃಷ್ಟಾಂತ ಜಗತ್ತಿನ ಯಾವ ಸ್ವಾತಂತ್ರ್ಯ ಹೋರಾಟ ದಲ್ಲಿಯೂ ನಾವು ಕಾಣುವುದಿಲ್ಲ. ಸಾಮಾಜಿಕ ಚಳವಳಿ ಮತ್ತು ರಾಜಕೀಯ ಸ್ವಾತಂತ್ರ್ಯ ಈ ಎರಡು ಚಳವಳಿಗಳು ಏಕಕಾಲದಲ್ಲಿ; ಬ್ರಿಟಿಷರ ವಿರುದ್ಧದ ರಾಜಕೀಯ ಸ್ವಾತಂತ್ರ್ಯ ಹೋರಾಟ ಮತ್ತು ನಮ್ಮ ಸಮಾಜದ ಒಳಗಿನ ಎಲ್ಲ ಕಲ್ಮಶಗಳನ್ನು ಒಪ್ಪಿಕೊಂಡು, ಅವುಗಳನ್ನು ತೊಡೆದುಹಾಕುವುದಕ್ಕೆ ಮಾಡುವ ಸಾಮಾಜಿಕ ಕ್ರಾಂತಿ ಎರಡೂ ಒಟ್ಟೊಟ್ಟಿಗೆ ಆಗುತ್ತವೆ. ಇದನ್ನು ನಾವು ಮರೆಯಲೇಬಾರದು.

ಅಂಬೇಡ್ಕರ್ ಅವರು ಗಾಂಧೀಜಿಯವರನ್ನು ಅನೇಕ ಬಾರಿ ಕಟುವಾಗಿ ಟೀಕಿಸಿದ್ದಾರೆ. ಹಾಗೆ ಟೀಕೆಗಳು ಬಂದಾಗಲೆಲ್ಲ ಗಾಂಧೀಜಿಯವರು ಹೇಳುತ್ತಾರೆ "ನನ್ನ ಮೇಲೆ ಉಗಳಲಿಕ್ಕೆ ಅವರಿಗೆ ಸಂಪೂರ್ಣ ಹಕ್ಕಿದೆ. ಅದಕ್ಕೆ ನಾನು ಅರ್ಹನೇ ಆಗಿದ್ದೇನೆ. ಇಡೀ ಒಂದು ಜನಾಂಗವನ್ನೇ ಹಿಂಸಿಸಿದ, ಶೋಷಿಸಿದ ವರ್ಗಕ್ಕೆ ನಾನು ಸೇರಿದ್ದೇನೆ" ಎಂದು.

ಐವತ್ತು ವರ್ಷಗಳ ನಂತರ ನಿಂತು ನಾವು ಮಾತನಾಡುವಾಗ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ : 'ಅಂಬೇಡ್ಕರ್ ಅವರ ಈ ಟೀಕೆಯಲ್ಲಿ ವೈಯಕ್ತಿಕವಾದ ದ್ವೇಷವಿತ್ತೆ?' ಎಂದು. ವೈಯಕ್ತಿಕ ದ್ವೇಷದಿಂದ, ಇಂಗ್ಲಿಷಿನಲ್ಲಿ malice ಅಂತಾರಲ್ಲ, ಆ ಮನೋಭಾವದಲ್ಲಿ ಅಂಬೇಡ್ಕರ್ ಅವರು ಗಾಂಧೀಜಿ ಅವರನ್ನು ದ್ವೇಷಮಾಡಿದ್ದರೆ, ಇವತ್ತು ಅಂಬೇಡ್ಕರ್ ಅವರು ಮನಸ್ಸನ್ನು ಹುಳಿಮಾಡಿಕೊಂಡ ಒಬ್ಬ ಮಹಾನ್ bitter ಮನುಷ್ಯ ಎಂದು ಅನ್ನಿಸಿಕೊಂಡು ಬಿಡುತ್ತಿದ್ದರು ಅಷ್ಟೆ. ಒಬ್ಬ ತೀವ್ರತರದ ಸಿನಿಕ ಮನುಷ್ಯ ಎನಿಸಿಬಿಡುತ್ತಿದ್ದರು. ಆದರೆ ಅಂಬೇಡ್ಕರ್ ಒಬ್ಬ bitter ಮನುಷ್ಯನಲ್ಲ, ಒಬ್ಬ ಸಿನಿಕನಲ್ಲ ಎಂಬುದನ್ನು ನಾವು ಕಂಡುಕೊಂಡಿ ದ್ದೇವೆ. ಯಾಕೆಂದರೆ ಸಿನಿಕನೊಬ್ಬ ಜನನಾಯಕನಾಗಲಾರ.

ಅಂಬೇಡ್ಕರ್ ಅವರಿಗೆ ಗಾಂಧೀಜಿ ಎಷ್ಟು ಪ್ರಮುಖ ವ್ಯಕ್ತಿ ಎಂದು ಗೊತ್ತಿತ್ತು. ಎಂಥ ಜನನಾಯಕರಾಗಿ ರೂಪುಗೊಂಡಿದ್ದಾರೆ ಎಂಬ ಅರಿವೂ ಇತ್ತು. ಇಡೀ ದೇಶವನ್ನು ಪ್ರತಿನಿಧಿಸುವ ಸಿಂಬಲ್ ಗಾಂಧೀಜಿ ಎಂದು ಅಂಬೇಡ್ಕರ್ ಕಂಡುಕೊಂಡಿದ್ದರು. ಯಾವುದರ ಸಿಂಬಲ್ ಗಾಂಧೀಜಿ? ಎಲ್ಲ ಆಂತರಿಕ ಹಾಗೂ ಬ್ರಿಟಿಷರ ಜೊತೆಗಿನ ಹೋರಾಟಗಳಿಗೆ, ಚಳವಳಿಗೆ ಅವರು ಸಿಂಬಲ್. ಹೀಗಾಗಿ ಅಂಬೇಡ್ಕರ್ ಸೈದ್ಧಾಂತಿಕವಾಗಿ ಹೋರಾಟ ಮಾಡಬೇಕಾದರೆ ಗಾಂಧಿಯವರೊಡನೆ ಮಾತ್ರ ಎಂದು ಮನಗಂಡಿದ್ದರು. ಹೀಗಾಗಿಯೇ ಗಾಂಧೀಜಿ ಅವರೇ ಅಂಬೇಡ್ಕರ್ ಅವರ ಪ್ರಧಾನ ಟಾರ್ಗೆಟ್.

ಈ ಸಂದರ್ಭದಲ್ಲಿಯೇ 'ಹಿಂದೂಯಿಸಂ' ಬಗ್ಗೆ ಈ ಇಬ್ಬರು ನಾಯಕರುಗಳ ಅಬಿಪ್ರಾಯವೇನು ಎಂದು ವಿಚಾರ ಮಾಡಬೇಕು. ಗಾಂದೀಜಿಯವರಿಗೆ ಹೇಗೆ ದೇವರ ಮೂಲಕ ಮನುಷ್ಯನೋ ಹಾಗೆಯೇ ಧರ್ಮದ ಮೂಲಕ ಮನುಷ್ಯ. ಧರ್ಮ ಎಂದರೆ ಅವರಿಗೆ ಹಿಂದೂಯಿಸಂ. ಅವರು ಪದೇಪದೇ ಹೇಳುತ್ತಿದ್ದಂತೆ ಈ ಹಿಂದೂಯಿಸಂನಲ್ಲಿ ಅಸಹ್ಯಕರವಾದ ಒಂದು ಅಂಶ ಇದೆ. ಅದೇ ಅಸ್ಪೃಶ್ಯತೆ. ಇದನ್ನು ನಿವಾರಿಸಬೇಕು. ಈ ಅಸ್ಪೃಶ್ಯತೆಯ ನಿವಾರಣೆ ಅವರ ಪ್ರಕಾರ ಉಚ್ಚವರ್ಗದವರ ಮನಃ ಪರಿವರ್ತನೆಯಿಂದ ಸಾಧಿಸಬೇಕು. ಯಾರು ಸವಲತ್ತುಗಳು, ಸೌಲಭ್ಯಗಳು, ಅವಕಾಶಗಳು ಇವುಗಳನ್ನು ಸಾವಿರಾರು ವರ್ಷಗಳಿಂದ ಹುಟ್ಟಿನಿಂದಲೇ ಪಡೆದುಕೊಂಡಿದ್ದರೋ ಅಂಥವರುಗಳಿಗೆ ಈ ಜಾತಿವ್ಯವಸ್ಥೆಯ ಘೋರ ಮುಖಗಳ ಪರಿಚಯ ಮಾಡಿಸಿ, ಅವರ ಮನಸ್ಸುಗಳ ಮೇಲೆ ಪರಿಣಾಮ ಬೀರಿ, ಕೆಳವರ್ಗದವರ ಉದ್ಧಾರ ಮಾಡಬೇಕು ಎಂಬುದು ಅವರ ವಾದ ಮತ್ತು ನಿಲುವು ಆಗಿದ್ದಿತು. ಬಹಳ ಮುಗ್ಧವಾದ ನಂಬಿಕೆ ಅದು. ಅದಕ್ಕಾಗಿ ಅವರನ್ನು ಟೀಕಿಸಿ ಉಪಯೋಗವಿಲ್ಲ. ಅವರ ಯೋಚನಾಕ್ರಮ, ವಿಚಾರದೃಷ್ಟಿ ಅದು.

ಆದರೆ ಇಲ್ಲಿ ನಾವು ಹಿಂದೂಯಿಸಂ ಬಗ್ಗೆಯೇ ಪ್ರಶ್ನೆ ಎತ್ತಬೇಕಾಗುತ್ತದೆ. ಹೀಗೆ ಬಹು ಗಂಭೀರವಾಗಿ ಪ್ರಶ್ನೆ ಎತ್ತುವುದಕ್ಕೆ ಈ ಸಂದರ್ಭವೂ - ಅಂದರೆ ಗಾಂಧೀಜಿ ಹಾಗೂ ಅಂಬೇಡ್ಕರ್ ಅವರುಗಳ ಮುಖಾಮುಖಿ - ಪ್ರೇರಕವಾಗುತ್ತದೆ.

1920ರ ದಶಕದ ವೇಳೆಗಾಗಲೇ ಗಾಂಧೀಜಿಯವರು ಹಿಮಾಲಯದಷ್ಟು ಎತ್ತರಕ್ಕೆ ಬೆಳೆದು ಬಿಟ್ಟಿದ್ದರು. ಗಾಂಧೀಜಿಯವರಿಗಿಂತ ಅಂಬೇಡ್ಕರ್ 20 ವರ್ಷ ಕಿರಿಯವರು. ಹೀಗಿದ್ದೂ ಅಂಬೇಡ್ಕರ್ ಅವರು ಮತ್ತು ಅವರ ಚಳವಳಿ ಹೇಗೆ ಗಾಂಧೀಜಿಯವರ ಮೇಲೆ ಗುಪ್ತವಾಗಿ ಪ್ರಭಾವ ಬೀರಿತು ಎಂಬುದನ್ನು ನಾವು ಗಮನಿಸಬೇಕು. ತಮ್ಮ ಚಳವಳಿಯ ಮೊದಲ ದಿನಗಳಲ್ಲಿ ಗಾಂಧೀಜಿಯವರು ಏನು ಹೇಳುತ್ತಿದ್ದರು? 'ವರ್ಣಾಶ್ರಮ ಧರ್ಮ ಉಳಿಸಿಕೊಳ್ಳಬೇಕು. ವರ್ಣಾಶ್ರಮ ಧರ್ಮ ಮುಖ್ಯ. ಅಸ್ಪೃಶ್ಯತೆ ನಿವಾರಣೆಯಾದರೆ ಜಾತಿ ವ್ಯವಸ್ಥೆ ಪವಿತ್ರವಾಗ್ತದೆ ಎಂದು ಅನ್ನುತ್ತಿದ್ದರು. ಇದೆ ಸಮಯದಲ್ಲಿ ಅವರು ಸಹಪಂಕ್ತಿ ಭೋಜನ ಹಾಗೂ ಅಂತರಜಾತಿ ವಿವಾಹ ಇವುಗಳನ್ನು ವಿರೋಧಿಸುತ್ತಿದ್ದರು. (ತಮ್ಮ ಆಶ್ರಮದಲ್ಲಿಯೇ ಹರಿಜನರಿಗೆ ಮುಕ್ತ ಪ್ರವೇಶವಷ್ಟೇ ಅಲ್ಲ ಅವರನ್ನು ಆಶ್ರಮವಾಸಿಗಳನ್ನಾಗಿ ಸ್ವೀಕರಿಸುತ್ತಲೂ ಇದ್ದ ಗಾಂಧೀಜಿಯವರು ಸಾರ್ವಜನಿಕವಾಗಿ ಸಹಪಂಕ್ತಿ ಭೋಜನ, ಅಂತರಜಾತಿ ವಿವಾಹಗಳ ಬಗ್ಗೆ ಈ ನಿಲುವು

ತಾಳಿದ್ದು ಒಂದು ವಿಚಿತ್ರ ಸಂಗತಿಯೂ ಹೌದು). ಆದರೆ ಕ್ರಮೇಣ ಗಾಂಧೀಜಿಯವರ ನಿಲುವಿನಲ್ಲಿ ಆದ ಬದಲಾವಣೆಗಳನ್ನು ನಾವು ಗಮನಿಸಬೇಕು. 1930ರ ವೇಳೆಗೆ ಅವರು "ವರ್ಣಾಶ್ರಮ ಧರ್ಮ, ಜಾತಿಪದ್ಧತಿಯೆಂಬುವುದು ಅಸ್ಪೃಶ್ಯತಾ ನಿವಾರಣೆಯಿಂದ ತಮಗೆ ತಾವೇ ಇಲ್ಲವಾಗುತ್ತವೆ" ಎಂದು ಹೇಳುತ್ತಾರೆ. ಸ್ವಾತಂತ್ರ್ಯ ಬರುತ್ತದೆ ಎಂಬುದು ಖಂಡಿತವಾಗುತ್ತಿದ್ದಂತೆ ಅವರು ಹೇಳುತ್ತಾರೆ. "ಅಸ್ಪೃಶ್ಯತೆ ಉಳಿದುಕೊಂಡಿದ್ದೂ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದರೆ ಅಂಥ ಸ್ವಾತಂತ್ರ್ಯದ ಬಗೆಗೆ ನನಗೆ ಯಾವ ರೀತಿಯಾದ ಆಸಕ್ತಿಯಿಲ್ಲ, ಗೌರವವೂ ಇಲ್ಲ" ಎಂದು. ಮತ್ತು ಇದೇ ವೇಳೆಗೆ ಅವರು ಹರಿಜನ ದೇವಾಲಯ ಪ್ರವೇಶ ಹಾಗೂ ಸಹಪಂಕ್ತಿ ಭೋಜನಗಳನ್ನು ಉತ್ತೇಜಿಸಿ ಮಾತನಾಡುತ್ತಾರೆ. ಅಂತರ್‌ಜಾತಿ ವಿವಾಹವನ್ನು ವಿರೋಧಿಸುತ್ತಿದ್ದ ಅವರು ಸಂಪೂರ್ಣ ಬದಲಾಗಿ "ನವವಧೂವರರು ನನ್ನ ಆಶೀರ್ವಾದ ಪಡೆಯಬೇಕೆಂದು ಇಚ್ಛಿಸಿದರೆ ಅವರಲ್ಲಿ ಒಬ್ಬರಾದರೂ ಅಸ್ಪೃಶ್ಯ ಜಾತಿಗೆ ಸೇರಿರಬೇಕು" ಎಂದು ಘೋಷಿಸುತ್ತಾರೆ. ಈ ಬದಲಾದ ನಿಲುವಿಗೆ ಅಂಬೇಡ್ಕರ್ ಅವರ ಚಳವಳಿಯ ಪ್ರಭಾವ ಅವರ ಮೇಲೆ ಪರೋಕ್ಷವಾಗಿ ಆಗುತ್ತಿತ್ತು ಎಂಬುದೆ ಕಾರಣ ಎಂದು ನಿಸ್ಸಂಶಯವಾಗಿ ಹೇಳಬಹುದು.

ಅಂಬೇಡ್ಕರ್ ಅವರು 'ಹಿಂದೂ ರಾಜ್' ಕುರಿತಾಗಿ ಆಡಿದ ಒಂದು ಮಾತನ್ನು ಸಂಪೂರ್ಣವಾಗಿ ಇಲ್ಲಿ ಉದ್ಧರಿಸಲು ಬಯಸುತ್ತೇನೆ : "If Hindu Raj does become a fact, it will no doubt be the greatest calamity for the country, no matter what the Hindus say, Hinduism is a menace to liberty, equality and fraternity. On that account it is incompatible with democracy" ಈ ಇಡೀ ಸಾಲುಗಳಲ್ಲಿ ಪ್ರಜಾಪ್ರಭುತ್ವ ಎಂಬ ಶಬ್ದ ಬಹು ಮುಖ್ಯವಾದದ್ದು. ಪ್ರಜಾಪ್ರಭುತ್ವಕ್ಕೂ, ಹಿಂದೂಯಿಸಂಗೂ ಮಧ್ಯೆ ಯಾವ ರೀತಿಯ ಸಾಮಾನ್ಯಾಂಶಗಳಿಲ್ಲ; ಪರಸ್ಪರ ಹೊಂದಿಕೊಳ್ಳದ ಎರಡು ವಿರುದ್ಧ ತತ್ವಗಳು ಅವು ಎಂಬುದರ ಬಗ್ಗೆ ಅಂಬೇಡ್ಕರ್ ಅವರಿಗೆ ಕೊಂಚವೂ ಅನುಮಾನವಿರಲಿಲ್ಲ. ಗಾಂಧೀಜಿಯವರಿಗೂ ಕೂಡ ಅಷ್ಟೇ ತೀವ್ರವಾಗಿ ಕೋಮುವಾದಿ ನಿಲುವುಗಳನ್ನು ಕುರಿತಾದ ಭಯಂಕರ ಅನುಮಾನಗಳಿದ್ದವು. ಹಿಂದೂ ಜಾಗೃತಿಯನ್ನುಂಟು ಮಾಡಲು ಯುವಶಕ್ತಿಯನ್ನು ಆರ್.ಎಸ್.ಎಸ್. ಮೂಲಕ ಸಂಘಟಿಸುತ್ತಿದ್ದ ಕಾಲದಲ್ಲಿ ಗಾಂಧಿಯ ಬಳಿ ಒಬ್ಬರು ಕೇಳುತ್ತಾರೆ: "ಈ ಆರ್.ಎಸ್.ಎಸ್. ಯುವಕರಲ್ಲಿ ಶಿಸ್ತು ಮತ್ತು ದೇಶಭಕ್ತಿ ಇವುಗಳನ್ನು ಕಲಿಸುವುದರಲ್ಲಿ ಯಶಸ್ವಿಯಾಗಿಲ್ಲವೆ" ಎಂದು. ಅದಕ್ಕೆ ಗಾಂಧೀಜಿಯವರು ಒಂದು ಕ್ಷಣವೂ ಅನುಮಾನಿಸದೆ ಹೇಳುತ್ತಾರೆ "ಹೌದು, ಹಿಟ್ಲರ್‌ನ ನಾಝಿ ಸರಕಾರವೂ ಯುವಕರಿಗೆ ಇಷ್ಟೇ ಶಿಸ್ತು, ದೇಶಭಕ್ತಿಗಳನ್ನು ಕಲಿಸುವುದರಲ್ಲಿ ಯಶಸ್ವಿಯಾಗಿತ್ತು" ಎಂದು.

ಧರ್ಮ ಜೀವಂತವಾಗಿ ಉಳಿಯಬೇಕಾದರೆ ಜಂಗಮತ್ವವಿರಬೇಕು ಎಂದು ಬಸವಣ್ಣನವರು ಹೇಳಿದ್ದರು. ಧರ್ಮ ಡೈನಮಿಕ್ ಆಗಿರಬೇಕು. ಹಿಂದೂಯಿಸಂಗೆ ಏನಾಗಿದೆಯೆಂದರೆ ಸ್ಥಾವರತ್ವ ಬಡಿದುಕೊಂಡುಬಿಟ್ಟಿದೆ. ಕೊಳೆತು ನಾರುತ್ತಿದೆ. ಬಹುಮುಗ್ಧವಾಗಿ, ಹಿಂದೂಯಿಸಂ ಎಂದರೆ ಮಾನವೀಯತೆಯ ಅತ್ಯುತ್ಕೃಷ್ಟ ರೀತಿಯ ಒಂದು ಅಬಿವ್ಯಕ್ತಿ ಎಂದು ನಂಬಿದ್ದ ಗಾಂಧೀಜಿಯವರಿಗೆ

ನಿಧಾನವಾಗಿ ಅದು ವಾಸ್ತವದಲ್ಲಿ ಹಾಗಾಗುತ್ತಿಲ್ಲವಲ್ಲ ಎಂಬ ದಿಗಿಲು ಆರಂಭವಾಯಿತು. ಎರಡು ಕ್ರಿಯಾಶೀಲ, ಜನಪರ ಚಳವಳಿಗಳ ಮಧ್ಯೆ ತಮ್ಮ ಜನ್ಮ ಪಡೆದು ಬೃಹದಾಕಾರವಾಗಿ ಬೆಳೆಯುತ್ತಿದ್ದ ಪಿತೂರಿ ಗಾಂಧೀಜಿ ಹಾಗೂ ಅಂಬೇಡ್ಕರ್ ಇಬ್ಬರ ಕಿವಿಯಲ್ಲಿಯೂ ಎಚ್ಚರಿಕೆಯ ಗಂಟೆಗಳನ್ನು ಬಾರಿಸುತ್ತಿತ್ತು. ಇದನ್ನು ನಾವು ಕೂಡ ಮರೆಯಬಾರದು. ಈ ಪಿತೂರಿ ನಿಶ್ಶಬ್ದವಾಗಿ, ನಿರಂತರವಾಗಿ ಬೆಳೆಯುತ್ತಲೇ ಇದೆ. ಈ ಶಕ್ತಿಯನ್ನು ಎದುರಿಸುವಾಗ ಗಾಂಧೀಜಿಯವರಿಗೆ ಹಿಂದೂಯಿಸಂ ಕುರಿತಾದ ತೀವ್ರವಾದ ಅನುಮಾನಗಳು ಕಾಡಿದ್ದರೆ ಆಶ್ಚರ್ಯವಿಲ್ಲ. ಅನೇಕ ಬಾರಿ, ಅನೇಕ ಕಡೆ ಗಾಂಧೀಜಿಯವರು ಈ ಕುರಿತು ಮಾತನ್ನು ಆಡುತ್ತಾರೆ.

ಗಾಂಧೀಜಿ ಅವರ ಮತ್ತು ಅಂಬೇಡ್ಕರ್ ಅವರ ನಡುವಿನ ಸಾಮಾನ್ಯ ಅಂಶಗಳು ಯಾವುವು? ಇದನ್ನು ಅರಿತುಕೊಳ್ಳಲು ಕಲವು ಮುಖ್ಯ ಘಟನೆಗಳಲ್ಲಿ ಪರಸ್ಪರರ ನಡವಳಿಕೆಗಳನ್ನು ನಾವು ಸೂಕ್ಷ್ಮವಾಗಿ ಗಮನಿಸಬೇಕು. ಮಹಾನ್ ನಾಯಕರ ಲಕ್ಷಣವೆಂದರೇನೆ ಪರಸ್ಪರ ನಿಲುವುಗಳನ್ನು, ಧೋರಣೆಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಗೌರವಿಸುವುದು ಎಂದು. ಇಂಥ ಮುಖ್ಯ ಘಟನೆಗಳಲ್ಲಿ 1932ರ ಗಾಂಧೀಜಿಯವರ ಐತಿಹಾಸಿಕ ಉಪವಾಸ ಒಂದು ದೃಷ್ಟಾಂತವಾಗ ಬಹುದು. ಈ ಇಬ್ಬರು ನಾಯಕರ ಮಧ್ಯೆ ಭಿನ್ನಾಭಿಪ್ರಾಯ - ವಿರಸವೇ ಎನ್ನುವಷ್ಟು ಮಟ್ಟಿಗಿನ ಅಭಿಪ್ರಾಯಭೇದ - ಈ ಸಂದರ್ಭದಲ್ಲಿ ಸ್ಫೋಟಗೊಂಡಿತು. ಈ ಭಿನ್ನಾಭಿಪ್ರಾಯಗಳ ನಡುವೆಯೂ ಅಂಬೇಡ್ಕರ್ ಅವರು ಗಾಂಧೀಜಿಯವರ ಕುರಿತಾಗಿ ಅವಹೇಳನಕಾರಿಯಾಗಿ ಮಾತನಾಡುತ್ತಿರಲಿಲ್ಲ. ಅವರನ್ನು ಎಂದೂ 'ಮಹಾತ್ಮಾಜೀ' ಎಂದೇ ಕರೆಯುತ್ತಿದ್ದರು. ಆ ಉಪವಾಸದ ಸಮಯದಲ್ಲಿ ಗಾಂಧೀಜಿಯವರನ್ನು ಸೆರೆಮನೆಯಲ್ಲಿ ಕಾಣಲು ಹೋಗುತ್ತಾರೆ ಅಂಬೇಡ್ಕರ್. ಅಲ್ಲಿ ಅವರಾಡುವ ಮೊದಲ ಮಾತೇ ಇದು : "Mahatmaji, you have been very unfair to us". ಗಾಂಧೀಜಿ ಅದಕ್ಕೆ ಉತ್ತರವಾಗಿ 'ನೋಡು ನಾನು ಏನು ಮಾಡಬೇಕು ಅಂತ ಪ್ರಯತ್ನಪಡ್ತಾ ಇದ್ದೀನಿಯೋ ಅದನ್ನು ಮಾಡ್ತಾ ಇದ್ದೇನೆ. ನನ್ನ ಕೈಲಾದಷ್ಟುಮಟ್ಟಿಗೆ ಮಾಡ್ತಾ ಇದೀನಿ. But you want my life" ಎಂದನ್ನುತ್ತಾರೆ. ಅಂಬೇಡ್ಕರ್ ಅವರು ಈ ಮಾತಿಗೆ ಯಾವ ಮಹತ್ವದ ರೂಪುಕೊಡುತ್ತಾರೆ ಎಂಬುದು ಗಮನಾರ್ಹ. "Yes, I want your life, I want your life to work for the abolition of untouchability. "ನಿಮ್ಮ ಜೀವವನ್ನೇ ಮುಡುಪಾಗಿಟ್ಟು ಈ ಅಸ್ಪೃಶ್ಯತೆಯ ನಿವಾರಣೆಗೆ ದುಡಿಯಿರಿ. You will become a hero".

ಐವತ್ತು ವರ್ಷಗಳಿಗೂ ದೂರ ನಿಂತು ನಾವು ಗಾಂಧೀಜಿಯವರ ಈ ಉಪವಾಸದ ಕುರಿತು ಮಾತನಾಡುತ್ತಿದ್ದೇವೆ. ಗಾಂಧೀಜೀಯವರ ಈ ಉಪವಾಸ ಬ್ಲಾಕ್‌ಮೇಲ್ ತಂತ್ರವೋ ಎಂದು ಆಲೋಚಿಸಬೇಕು. ಗಾಂಧೀಜಿ ಹೇಳ್ತಾರೆ "ನನಗೆ ಕೊಡೋಕೆ ಆಗೋದು ನನ್ನ ಜೀವ ಮಾತ್ರ. ಅದ್ದರಿಂದ ಅದನ್ನು ಮಾತ್ರ ಕೊಡ್ತಾ ಇದ್ದೇನೆ" ಅಂದಿನ ಆ ಸಂದರ್ಭದ, ವೈಮನಸ್ಯಗಳ ಕುರಿತು ನಾವು academic ಆಗಿ ಮಾತ್ರ ಮಾತನಾಡಿದರೆ ಸಾಲದು. ಆ ಉಪವಾಸ ಸತ್ಯಾಗ್ರಹದ ಹಿನ್ನೆಲೆಯಲ್ಲಿನ ಮೀಸಲು ಕ್ಷೇತ್ರಗಳ ಪ್ರಶ್ನೆ ಇಂದು ಯಾವ ರೂಪುಪಡೆಯಬಹುದಿತ್ತು? ಇದು

ಗಾಂಧೀಜಿ ಅಂದುಕೊಂಡಿದ್ದಂತೆ ಕೇವಲ ಹಿಂದೂ ಧರ್ಮಕ್ಕೆ ಮಾತ್ರ ಸೀಮಿತವಾದ ಪ್ರಶ್ನೆಯಲ್ಲ. ಭಾರತ ದೇಶ ಒಂದು ಒಕ್ಕೂಟ. ಈ ಜನ ಸಮೂಹದ ಒಕ್ಕೂಟ ಏನಾಗಬಹುದಿತ್ತು? "Hinduism would be divided" ಅಂತ ಗಾಂಧೀಜಿ ಅಂದರು. ನನ್ನ ಪ್ರಕಾರ ಕೇವಲ ಹಿಂದೂಯಿಸಂ ಅಲ್ಲ ಇಡೀ ದೇಶ ಒಡೆದು ಹೋಗುವ ಸಾಧ್ಯತೆಗಳೂ ಇದ್ದವು. ಗಾಂಧೀಜಿಯವರು ಮಾಡಿದ ತಪ್ಪು ಅಂತ ನನಗೆ ಅನ್ನಿಸುವುದೆಂದರೆ ಮುಸಲ್ಮಾನರಿಗೆ, ಕ್ರಿಶ್ಚಿಯನ್ನರಿಗೆ, ಸಿಖ್ಖರಿಗೆ ಈ ಮೀಸಲು ಕ್ಷೇತ್ರದ ಸವಲತ್ತು ನೀಡಲು ಒಪ್ಪಿಗೆ ನೀಡಿದುದು. ನನ್ನ ಪ್ರಕಾರ ಅವರಿಗೂ ನೀಡಬಾರದಿತ್ತು. ಅವರೂ ಈ ದೇಶದ ಪ್ರಜೆಗಳೆ. ಪ್ರಜಾಪ್ರಭುತ್ವದ ಅಡಿಪಾಯದ ಮೇಲೆ ದೇಶಕಟ್ಟಬೇಕು ಎಂದು ಬಯಸುತ್ತಿದ್ದವರೇ ಹೀಗೆ ಧರ್ಮ, ಕೋಮು ಗಳನ್ನು ಎತ್ತಿಹಿಡಿಯಬಾರದಿತ್ತು. ಅಂಬೇಡ್ಕರ್ ಅವರಿಗೆ ಈ ವಿಷಯದಲ್ಲಿ ತೀವ್ರ ಅಸಮಾಧಾನ ವಾದದ್ದು ಆಶ್ಚರ್ಯದ ಸಂಗತಿಯೇನೂ ಅಲ್ಲ. ಅವರು ಗಾಂಧೀಜಿಗೆ ಹೇಳಿದರು: "ನಿಮಗೆ ಮುಸಲ್ಮಾನರ ಬಗ್ಗೆ ಇರುವಂಥ ಸಹಾನುಭೂತಿ ನಮ್ಮ ಬಗ್ಗೆ ಇಲ್ಲ. ನಿಮಗೆ ಇರೋದಕ್ಕೆ ಸಾಧ್ಯವಿಲ್ಲ. ನಾವು ಕಣ್ಣಿಗೆ ಬೀಳದ ದರಿದ್ರಲ್ಲಿ ದರಿದ್ರರು. ನಾವು ಕಚಡಾ, ರಾಡಿ. ನಿಮಗೆ ಕಾಣಿಸುವುದಿಲ್ಲ. ಮುಸಲ್ಮಾನರು ಗಲಾಟೆ ಮಾಡ್ತಾರೆ. ಅದಕ್ಕೆ ಅವರಿಗೆ ಮಣೆ ಹಾಕ್ತೀರಿ." ಬಹಳ ಸರಿಯಾದ ಮಾತುಗಳು ಇವು. ಎಂದೇ ಗಾಂಧೀಜಿ ಅವರು ಮಾಡಿದ ತಪ್ಪು ಇದು ಎಂದು ನಾನು ಹೇಳಿದ್ದು. ಸ್ವಾತಂತ್ರ್ಯ, ಸಮಾನತೆಗಳ ಬಗ್ಗೆ ಮಾತನಾಡುವಾಗ ಹಿಂದೂ, ಮುಸಲ್ಮಾನ, ಕ್ರಿಶ್ಚಿಯನ್ ಅಂತ ಯೋಚನೆ ಮಾಡುವುದಕ್ಕೆ ಆರಂಭಿಸುವುದೇ ತಪ್ಪು. ಹರಿಜನರಿಗೆ ಈ ಅವಕಾಶವನ್ನು - ಅಂದರೆ ಪ್ರತ್ಯೇಕ ಮತದ ಹಕ್ಕನ್ನು - ನಿರಾಕರಿಸಿದ ಹಾಗೆ ಮುಸಲ್ಮಾನರಿಗೂ ನಿರಾಕರಿಸಬೇಕಾಗಿತ್ತು. ಗಾಂಧೀಜಿ ಅವರ ಈ ಸಂದರ್ಭದಲ್ಲಿ ಚಿಂತನೆ ಮತ್ತು ಅವರು ಕೈಗೊಂಡ ಕ್ರಮಗಳು ಎಷ್ಟೇ ಲೋಪಗಳಿಂದ ಕೂಡಿದ್ದರೂ ಕೂಡ ಈ ಪ್ರತ್ಯೇಕ ಮತಪಟ್ಟಿಯ ಪ್ರಶ್ನೆಗೆ ಈಗ ಉತ್ತರಕೊಡುವಾಗ ನಾವು ಅತ್ಯಂತ ವಸ್ತುನಿಷ್ಠವೂ, ದೂರದೃಷ್ಟಿಯುಳ್ಳದ್ದೂ ಆದ ನಿಲುವು ತಾಳಬೇಕಾದುದು ಅವಶ್ಯವಾಗುತ್ತದೆ. ಇಲ್ಲಿ ಗಾಂಧೀಜಿಯವರ ನಿಲುವು ಸರಿಯಾಗಿತ್ತು ಅಥವಾ ಅಂಬೇಡ್ಕರ್ ಅವರದ್ದು ಸರಿಯಾಗಿತ್ತು ಎಂಬ ಸರಿ ತಪ್ಪುಗಳ ಅರ್ಹತಾಪತ್ರಗಳನ್ನು ನೀಡುವುದಷ್ಟೇ ನಮ್ಮ ಕರ್ತವ್ಯವಲ್ಲ. ಸ್ವಾತಂತ್ರ್ಯೋತ್ತರ ಭಾರತದ ಈ ಐವತ್ತೈದು ವರ್ಷಗಳಲ್ಲಿ ದೇಶ ಹೇಗೆ ರೂಪುಗೊಳ್ಳುತ್ತಿದೆ ಎಂಬುದನ್ನು ಬಹುಸೂಕ್ಷ್ಮವಾಗಿ ಗಮನಿಸುವ ಯಾರಿಗೇ ಆಗಲಿ 1932ರ ಪ್ರಕರಣದ ಕುರಿತಾದ ದಿಢೀರ್ ತೀರ್ಮಾನ ತೆಗೆದುಕೊಳ್ಳುವುದು ಸಾಧ್ಯವೇ ಆಗದು. ಯಾವುದೇ ವರ್ಗದವರಾಗಲಿ ಕಹಿಯಿಲ್ಲದ ಮನಸ್ಸಿನಿಂದ, ಪೂರ್ವಗ್ರಹಗಳಿಲ್ಲದೆ ಇದರ ಕುರಿತು ಚಿಂತಿಸಬೇಕು. ಸದ್ಯಕ್ಕೆ ನನಗೆ ಅನ್ನಿಸುವಮಟ್ಟಿಗೆ 1932ರ ಸಂದರ್ಭದಲ್ಲಿ ಅಂಬೇಡ್ಕರ್ ಅವರು ಹಟ ಮಾಡಿದ್ದು ಸರಿಯಾದ ಕ್ರಮವೇ. ಆದರೆ ಈಗಿನ ನಮ್ಮ ಜಾತಿ, ಪಂಗಡ ಇವುಗಳ ಸಾಮಾಜಿಕ, ರಾಜಕೀಯ ನೆಲೆಗಳಲ್ಲಿ ತಾಳುತ್ತಿರುವ ಸ್ವರೂಪಗಳು ನೋಡಿದಾಗ ಗಾಂಧೀಜಿಯವರ ನಿಲುವು ಸರಿಯಾದದ್ದು ಎಂದು ಅನಿಸುತ್ತದೆ. ದೂರದೃಷ್ಟಿಯುಳ್ಳದ್ದಾಗಿತ್ತು ಎನಿಸುತ್ತದೆ. ಆದರೆ ತತ್‌ಕ್ಷಣ ಸೇರಿಸಲೇಬೇಕಾದ ಮಾತೆಂದರೆ ಗಾಂಧೀಜಿಯವರು ಹೇಳಿದ 'ಹಿಂದೂಯಿಸಂನ ಭವಿಷ್ಯ'ದ ದೃಷ್ಟಿಯಲ್ಲಿ ಅಲ್ಲ, ಆದರೆ ಇಡೀ ದೇಶದ ಭವಿಷ್ಯದ ದೃಷ್ಟಿಯಲ್ಲಿ.

1955ರಲ್ಲಿ ಅಂಬೇಡ್ಕರ್ ಅವರು ಬಿ.ಬಿ.ಸಿ.ಗೆ ಒಂದು ಸಂದರ್ಶನ ನೀಡುತ್ತಾರೆ. ಅದರಲ್ಲಿ ಅವರು ಗಾಂಧೀಜಿಯವರ ಕುರಿತು ಈ ಮಾತುಗಳನ್ನಾಡುತ್ತಾರೆ. "of all the people I have known in India it was only Mahatma Gandhiji who did something for us (the untouchables). No one else". ಈ ಮಾತುಗಳನ್ನು ನಾಟಕಕ್ಕೆ ಆಡಬೇಕಾದ ಅವಶ್ಯಕತೆಯಿಲ್ಲ. ಎಲ್ಲೋ ಆಳದಲ್ಲಿ ಗಾಂಧೀಜಿಯವರ ಬಗೆಗೆ ಗೌರವವಿದೆ. ನಂಬಿಕೆಯಿದೆ. ಇವರಿಬ್ಬರ ನಡುವಿನ ಜಗಳ ಕ್ರಿಯಾಶೀಲ ಜಗಳ. ಜೀವಂತ ವ್ಯಾಜ್ಯ. ಈ ವ್ಯಾಜ್ಯಗಳು ವಿವಿಧ ಆಯಾಮಗಳಲ್ಲಿ ಪುನರ್‌ಸೃಷ್ಟಿ ಪಡೆಯುತ್ತಲೇ ಇರಬೇಕು. ಅಂಬೇಡ್ಕರ್ ಅವರು 1942 ಬ್ರಿಟಿಷರು ನೇಮಿಸಿದ ಮಂತ್ರಿಮಂಡಲದ ಸದಸ್ಯರಾದರು. ತಾವು ಯಾತಕ್ಕಾಗಿ ಹೀಗೆ ಮಾಡಿದರು ಎಂದು ಅವರು ವಿವರಿಸುತ್ತಾರೆ. ಗಾಂಧೀಜಿ ಅವರಿಗೆ ಮತ್ತು ಕಾಂಗ್ರೆಸ್ಸಿಗೆ ಅವರು ಒಂದು ಪ್ರಶ್ನೆ ಕೇಳ್ತಾರೆ: "ನೀವು-ಅಂದರೆ ಕಾಂಗ್ರೆಸಿಗರು-ಯುದ್ಧದ ನಂತರ ಬ್ರಿಟಿಷರ ಉದ್ದಿಶ್ಯಗಳೇನು ಎಂದು ಅವರನ್ನು ಕೇಳುತ್ತಿದ್ದೀರಿ. ಸಂತೋಷ. ಕೇಳಿ. ನಾನೂ ಕೇಳುತ್ತೇನೆ. ಆದರೆ ನಾನು ನಿಮ್ಮನ್ನು, ಕಾಂಗ್ರೆಸಿಗರನ್ನು, ಒಂದು ಪ್ರಶ್ನೆ ಕೇಳ್ತೀನಿ - 'ಸ್ವಾತಂತ್ರ್ಯಾನಂತರ ನೀವು ಅಧಿಕಾರ ಪಡೆದ ಮೇಲೆ, ನನ್ನ ಜನಗಳ ಸ್ಥಿತಿಯೇನು? ಏನು ಮಾಡಬೇಕಂತ ಇದೀರಿ? ಅಸ್ಪೃಶ್ಯತೆ ನಿವಾರಣೆ ನಿಮ್ಮ ಪಕ್ಷದ ಕಾರ್ಯಕ್ರಮ ಎಂದು ಒಂದು ಠರಾವು ಪಾಸುಮಾಡಿದ್ದೀರಿ. ಆದರೆ ನಮ್ಮ ಜನ ಏನಾದರೂ ಕಿಂಚಿತ್ ಚಳವಳಿಯಲ್ಲಿ ತೊಡಗಿದರೂ ನೀವುಗಳು, ನಾಲ್ಕಾಣೆ ಕಾಂಗ್ರೆಸ್ ಸದಸ್ಯರು ಗ್ರಾಮಗಳಲ್ಲಿ, ನಗರಗಳಲ್ಲಿ ಏನು ಮಾಡ್ತಾ ಇದೀರಿ? ಅಧಿಕಾರ ಬಂದ ಮೇಲೆ ಏನು ಮಾಡ್ತೀರಿ? I have every right to demand. ಜಿನ್ನಾಗೆ ಬೇರೆ ದೇಶ ಕೊಡ್ತೀರಿ. ನಮಗೇನು ಮಾಡ್ತೀರಿ?" ಈ ಸಿಟ್ಟು, ಈ ನೈತಿಕ ಆಕ್ರೋಶ ಅರ್ಥವಾಗುವುದು ಗಾಂಧೀಜಿಯವರಿಗೆ ಮಾತ್ರ. ನೆಹರೂ ಅವರಿಗಲ್ಲ, ಪಟೇಲ್, ರಾಜಾಜಿ ಅವರುಗಳಿಗಲ್ಲ. ಮಹರ್ ಕೆರೆ ಚಳವಳಿ ಉಪ್ಪಿನ ಸತ್ಯಾಗ್ರಹ ದಷ್ಟೇ ಮಹತ್ವದ ಚಳವಳಿ ಎಂದು ಇಂದು ನಮಗೆ ಅರ್ಥವಾಗಬೇಕು. ಸಮುದ್ರ ತೀರದಲ್ಲಿ ಕೈ ಅದ್ದಿ ಹಿಡಿಯುಪ್ಪು ಎತ್ತಿ ಹಿಡಿದದ್ದು ಎಂಥ ಕ್ರಾಂತಿಕಾರಿ ಕ್ರಮವೋ ಅಷ್ಟೇ ಕ್ರಾಂತಿಕಾರಿ ಕ್ರಮ ಮಹರ್ ಕೆರೆಯಲ್ಲಿ ತಮ್ಮ ಜನಗಳ ಜೊತೆಗೆ ಹೋಗಿ ಅಂಬೇಡ್ಕರ್ ಅವರು ಬೊಗಸೆ ನೀರನ್ನು ಕೈಗೆತ್ತಿಕೊಂಡದ್ದು. ಗಾಂಧೀಜಿಯವರದು ಬ್ರಿಟಿಷರಿಗೆ ಒಡ್ಡಿದ ಸವಾಲು. ಅಂಬೇಡ್ಕರ್ ಸನಾತನ ಹಿಂದೂವಾದಿಗಳಿಗೆ ಒಡ್ಡಿದ ಸವಾಲು, ಎರಡೂ ಮಹತ್ವವಾದವು.

1946-47ರಲ್ಲಿ, ಭಾರತೀಯ ಮಂತ್ರಿಮಂಡಲ ರಚಿಸುವ ಸಮಯದಲ್ಲಿ ಗಾಂಧೀಜಿಯವರು ನೆಹರೂ ಅವರಿಗೆ ಅಂಬೇಡ್ಕರ್ ಅವರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೋ ಎಂದು ಹೇಳುತ್ತಾರೆ. ನೆಹರೂ ಒಪ್ಪುವುದಿಲ್ಲ. ಅಂಬೆಡ್ಕರ್ ಒಬ್ಬ ಬ್ರಿಟಿಷ್‌ವಾದಿ ಎಂಬುದೆ ನೆಹರೂ ಅವರ ಅಭಿಪ್ರಾಯ. ಆಗ ಗಾಂಧೀಜಿಯವರು ಹೇಳಿದರು: "ಸ್ವಾತಂತ್ರ್ಯ ನಿನಗೆ ಮಾತ್ರ, ಕಾಂಗ್ರೆಸಿಗೆ ಮಾತ್ರವಲ್ಲ ದೊರಕಿರುವುದು. ಸ್ವಾತಂತ್ರ್ಯ ಈ ದೇಶಕ್ಕೆ ದೊರಕಿರೋದು. ಹಾಗೆಂದ ಮೇಲೆ ಈ ದೇಶದಲ್ಲಿ ಯಾರು ಪ್ರಮುಖರಿದ್ದಾರೆ, ಯಾರು ಜನಗಳನ್ನು ಪ್ರತಿನಿಧಿಸುತ್ತಾರೆ, ಯಾರು ಜನಗಳ ಆಸೆ, ಅಭೀಷ್ಟೆ, ಕನಸುಗಳ ಪ್ರತೀಕವಾಗಿರುತ್ತಾರೆ ಅವರನ್ನೆಲ್ಲ ನೀನು ತೆಗೆದುಕೊಳ್ಳಬೇಕು. ಹಾಗಾಗಿ ಅಂಬೆಡ್ಕರ್ ಅವರನ್ನು ಮಂತ್ರಿಮಂಡಲಕ್ಕೆ ಸೆರಿಸಿಕೋ". ನೆಹರು ಅಂಬೇಡ್ಕರ್ ಅವರನ್ನು

ಒಪ್ಪಿಕೊಂಡರು, ಆದರೆ ಅವರಿಗೆ ಕೊಟ್ಟಿದ್ದು ಮಾತ್ರ ಒಂದು ಸತ್ವಹೀನ ಇಲಾಖೆಯ ಮಂತ್ರಿಪದವಿ - ಕಾನೂನು ಇಲಾಖೆಯದು. ಆದರೂ ಈ ದೇಶದ ಪುಣ್ಯವಶಾತ್ ಸಂವಿಧಾನ ರೂಪಿಸಿದ ಸಮಿತಿಗೆ ಅವರು ಅಧ್ಯಕ್ಷರಾದರು. ಹೀಗೆ ಅವರ ನಾಯಕತ್ವದಲ್ಲಿ ಸಂವಿಧಾನ ರಚನೆಯಾದ ಕೂಡಲೆ ಒಂದು ದೊಡ್ಡ ಅಲ್ಲೋಲಕಲ್ಲೋಲವೇ ಆಯಿತು. ಮನುಸ್ಮೃತಿಯನ್ನು ಸುಟ್ಟ ಇವನೊಬ್ಬ ಹೊಸ ಮನು; ನಮ್ಮ ಸ್ವಾತಂತ್ರ್ಯೋತ್ತರ ಭಾರತದ ಮನು ಎಂಬ ಹೊಗಳಿಕೆ, ಮೂದಲಿಕೆ ಎರಡೂ ಕೂಡಿಯೇ ಮಾತುಗಳು ಕೇಳಿ ಬಂದವು. ನನ್ನ ಪ್ರಕಾರ ಅಂಬೇಡ್ಕರ್ ಅವರು ಮನುಸ್ಮೃತಿಯನ್ನು ಸುಟ್ಟಿದ್ದು, ಅವರು ಮಹರ್ ಕೆರೆಯಲ್ಲಿ ನೀರನ್ನು ಎತ್ತಿದಷ್ಟೇ ಮಹತ್ವದ ರಾಜಕೀಯ ಕ್ರಿಯೆ. ಆ ಕ್ರಾಂತಿಕಾರಿ ಭಾವನೆ ನಮಗೆ ಬರಬೇಕು. ಸ್ವಾತಂತ್ರ್ಯ ಬಂದ ಐವತ್ತು ವರ್ಷಗಳ ನಂತರವೂ ಈ ದೇಶದಲ್ಲಿ ಚಾಲ್ತಿಯಲ್ಲಿರುವುದು ಮನುಧರ್ಮಶಾಸ್ತ್ರವೇ. ಹೀಗೆ ವ್ಯವಸ್ಥೆಗೊಳ್ಳುತ್ತಿರುವ ಸಾಮಾಜಿಕ ಸ್ಥಿತಿಯ ಬಗ್ಗೆ ನಾವು ಎಚ್ಚರದಿಂದ ಇರಬೇಕು. ಮನುಸ್ಮೃತಿಯ ಬಗ್ಗೆ ಪ್ರಪ್ರಥಮವಾಗಿ ಈ ದೇಶದಲ್ಲಿ ಒಂದು ನಿಲುವು ತೆಗೆದುಕೊಂಡವರು ಅಂಬೇಡ್ಕರ್ ಅವರು. ಹಿಂದೂ ಧರ್ಮ ರಚನೆ, ಗಾಂಧೀಜಿಯವರು ಭಾವಿಸಿದ್ದಂತೆ ಉಪನಿಷತ್ ವಾಕ್ಯಗಳ ಮೇಲೆ ನಿಂತಿರುವುದಲ್ಲ; ಮೇಲು-ಕೀಳು, ಹೆಣ್ಣು-ಗಂಡು ಎಂಬ ತಾರತಮ್ಯ ಸೃಷ್ಟಿಸುವ ಮನುಧರ್ಮಶಾಸ್ತ್ರದ ಮೇಲೆ. ಎಂದೇ ಮನುಧರ್ಮಶಾಸ್ತ್ರವನ್ನು ಪ್ರಶ್ನಿಸಿದ ಕೂಡಲೇ ಗಾಂಧೀಜಿಯವರೂ ಸಹ ಈ ಹಿಂದೂಧರ್ಮದ ಕಲ್ಪನೆಯ ಬಗೆಗೆ ಮರುಚಿಂತನೆ ಮಾಡುವುದು ಅವಶ್ಯವಾಯಿತು. ಮಾನಸಿಕವಾಗಿ ಅಂಬೇಡ್ಕರ್ ಅವರಿಗೆ ಹತ್ತಿರವಾಗುತ್ತ ಬಂದರು. ನೆಹರೂ ಅವರು ಪ್ರಧಾನಮಂತ್ರಿಯಾದರೆ ಹೇಗೆ ಈ ದೇಶದಲ್ಲಿ ಕೋಮುವಾದದ ಭೀತಿ ಕಡಿಮೆಯಾಗಬಹುದೆಂದು ನಂಬಿದ್ದರೋ ಹಾಗೆಯೇ ಅಂಬೇಡ್ಕರ್ ಅಂಥವರೊಬ್ಬರು ನಾಯಕರಾಗಿ ಬಂದರೆ ಎಂದಾದರೊಂದು ದಿನ ಸಾಮಾಜಿಕ ಸಮಾನತೆ, ನ್ಯಾಯ ಇವುಗಳು ಸಾಧ್ಯವಾಗಬಹುದು ಎಂದು ನಂಬಿದ್ದಿರಲೇ ಬೇಕು ಎಂದು ನನಗೆ ದೃಢವಾಗಿ ಅನ್ನಿಸುತ್ತದೆ. ಈ ಎರಡೂ ಚಳವಳಿಗಳು ಜೀವಂತ ಉಳಿಯಬೇಕಾದರೆ ನಾವು ಜೀವಂತವಾಗಿ ಈ ಪ್ರಶ್ನೆಗಳಿಗೆ ಸ್ಪಂದಿಸಬೇಕು. ಬುದ್ಧ ಮೋಕ್ಷ ಎಂಬ ಶಬ್ದ ಬಳಸಲಿಲ್ಲ, ದೇವರ ಬಗ್ಗೆ ಮಾತನಾಡಲಿಲ್ಲ. ಅನುಭವದ ಮೂಲಕ ಈ ಬದುಕನ್ನು ಗ್ರಹಿಸುವುದು ಹೇಗೆ? ಈ ಸಮಾಜದಲ್ಲಿ ಹುಟ್ಟಿದ ಮೇಲೆ ಒಟ್ಟಾಗಿ ಬದುಕುವುದು ಹೇಗೆ? ಇವುಗಳ ಕುರಿತು ಚಿಂತಿಸಿದ ಬುದ್ಧ. ಬುದ್ಧನ ನಂತರ ಬಸವಣ್ಣನೇ ಅತಿ ಪ್ರಮುಖ ಧಾರ್ಮಿಕ, ಸಾಂಸ್ಕೃತಿಕ ವ್ಯಕ್ತಿ. ಬಸವಣ್ಣ, ಗಾಂಧೀಜಿ ಹಾಗೂ ಅಂಬೇಡ್ಕರ್ ಅವರಿಗೆ ಒಂದು ಸಾಮಾನ್ಯ ಅಂಶ ಇದೆ. ರಾಜಕೀಯ ಮತ್ತು ಧಾರ್ಮಿಕ ಪ್ರಜ್ಞೆ. ಅಂಬೇಡ್ಕರ್ ಅವರು ತಮ್ಮ ಜೀವಿತದ ಕೊನೆಯ ಭಾಗದಲ್ಲಿ ಬುದ್ಧನಲ್ಲಿ ಮೊರೆಹೋಗಿದ್ದು ಅವರಲ್ಲಿನ ವಿಶಿಷ್ಟ ರೀತಿಯ ಧಾರ್ಮಿಕ ಪ್ರಜ್ಞೆಯ ಕುರುಹು. ಹಿಂದೂ ಧರ್ಮದ ವಿರುದ್ಧದ ಪ್ರತಿಭಟನೆಯೂ ಹೌದು. ಜೊತೆಜೊತೆಗೆ ಮನುಷ್ಯ ಇಲ್ಲಿ ಸಮಾನತೆ, ಘನತೆ, ಗೌರವಗಳಿಂದ ಬದುಕಬೇಕೆಂಬುದೇ ಒಂದು ಧಾರ್ಮಿಕ ಕಳಕಳಿಯಾಗಿದ್ದ ಬುದ್ಧನೇ ತಮ್ಮ ಜನಗಳ ಸಮಸ್ಯೆಗಳಿಗೆ ಉತ್ತರ ಎಂದು ಕಂಡುಕೊಂಡ ರೀತಿಯೂ ಹೌದು. ಈ ಮೂವರೂ ರಾಜಕೀಯ ಜಂಜಾಟದ ಮಧ್ಯದಲ್ಲಿ ಸಾಮಾಜಿಕ ಚಳವಳಿಯನ್ನು ರೂಪುಗೊಳಿಸಬೇಕು ಎಂದು ಮನಸ್ಸು ಮಾಡಿದ್ದಷ್ಟೇ ಅಲ್ಲ,

ಸಂಪೂರ್ಣ ಅದೊಂದೇ ಮಾರ್ಗ ಎಂದು ಖಂಡಿತವಾಗಿ ನಂಬಿದ್ದವರು. ದೂರ ಸರಿದುಬಿಡುವುದರಿಂದಲ್ಲ, ಮಧ್ಯ ಪ್ರವೇಶಿಸಿ ಎಲ್ಲ ಅನಿರೀಕ್ಷಿತಗಳಿಗೂ ತಲೆಕೊಡುವ ಧೈರ್ಯ ಮಾಡುವುದು. ಈ ಹೊಂಡದಲ್ಲಿ ಧುಮುಕುವುದು. ಈಜಿ ಹೊರಬರುವುದು. ಹೊರಬರುವ ಪ್ರಕ್ರಿಯೆಯಲ್ಲಿಯೇ ತನ್ನ ಜನಗಳನ್ನು ದಡಮುಟ್ಟಿಸುವುದು. ಆದ್ದರಿಂದಲೇ ನಾವು ನೆನೆಯಬೇಕಾದದ್ದು ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ನಾಲ್ವರನ್ನೂ. ಕೇವಲ ಬುದ್ಧ, ಬಸವ, ಅಂಬೇಡ್ಕರ್‌ರನ್ನಷ್ಟೇ ಅಲ್ಲ.

1920-30ರ ಸ್ಥಿತಿಗೂ 2003ರ ಸ್ಥಿತಿಗೂ ದಲಿತರು, ನೂರಕ್ಕೆ ನೂರರಷ್ಟಲ್ಲದಿದ್ದರೂ ಸುಮಾರಷ್ಟು ಮುಂದುವರೆದಿದ್ದಾರೆ. ಆದರೆ ಅಂಬೇಡ್ಕರ್ ಅವರು ಆಶಿಸಿದ್ದ ಗೌರವ ಸಿಕ್ಕಿಲ್ಲ. ಅಭಿಮಾನ ಸಿಕ್ಕಿಲ್ಲ. ಸಮಾನರು ಎಂಬ ಭಾವ ಅವರ ಮನದಾಳದಲ್ಲಿ ನೆಲೆಸಲಿಲ್ಲ. 'ಏನು ಹಾಗಂದರೆ ಅರ್ಥ?' ಅಂದರೆ ಉಚ್ಚವರ್ಗದವನಿಗೆ 'ನಾನು ತ್ಯಾಗಮಾಡಿದ್ದರಿಂದ ನೀನು ಉದ್ಧಾರವಾಗುತ್ತಿದ್ದಿ' ಎಂಬ ಭಾವ ದಲಿತರ ಬಗೆಗೆ ಆಳವಾಗಿ ನೆಲೆಸಿಬಿಟ್ಟಂತಿದೆ. ಹಾಗೆಯೇ ದಲಿತನ ಮನಸ್ಸಿನ ಆಳದಲ್ಲಿ 'ಎಲ್ಲೋ ಭಿಕ್ಷೆ ಸ್ವೀಕರಿಸುತ್ತಿದ್ದೇನೆಯೆ' ಎಂಬ ಅನುಮಾನ ಹೋಗಿಲ್ಲ. ಆದ್ದರಿಂದಲೇ ಪ್ರಶ್ನೆ ಇವತ್ತು, ಅರುವತ್ತು ವರ್ಷಗಳಿಗಿಂತಲೂ ಇಂದು ಮತ್ತೂ ಪ್ರಖರವಾಗಿದೆ. ಆದದ್ದರಿಂದಲೇ ಚರ್ಚೆ ಮಾಡುತ್ತಿರುವ ನಾವುಗಳು ನಿಷ್ಠುರ ಧೈರ್ಯದಿಂದ ವರ್ತಿಸಬೇಕಾಗುತ್ತದೆ. ನಾನಿಲ್ಲಿ ನಿಂತು ಮಾತನಾಡುವಾಗ ಗಾಂಧೀಜಿಯವರ ಹಿನ್ನೆಲೆ, ಅಂಬೇಡ್ಕರ್ ಅವರ ಹಿನ್ನೆಲೆ ಮಾತನಾಡುತ್ತಿರುವಂತೆಯೇ ನನ್ನ ಹಿನ್ನೆಲೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡಬೇಕು. ನಾನು ಶೂನ್ಯದಲ್ಲಿ ನಿಂತು ಮಾತನಾಡುತ್ತಿಲ್ಲ. ಒಂದು ಸಂದರ್ಭದಲ್ಲಿ ನಿಂತು ಮಾತನಾಡುತ್ತಿದ್ದೇನೆ. ಯಾವುದದು ಸಂದರ್ಭ? ನಾನು ಬ್ರಾಹ್ಮಣ, ಸುಸಂಸ್ಕೃತ ಮನೆತನದವನು, ಪಟ್ಟಣಿಗ. ಈ ಎಲ್ಲ ಸತ್ಯಗಳೂ ಹೇಗೆ ನನ್ನ ಮೇಲೆ, ಗಾಂಧೀಜಿ, ಅಂಬೇಡ್ಕರ್ ಅವರ ಕುರಿತು ಮಾತನಾಡುವಾಗ ಪ್ರಭಾವ ಬೀರುತ್ತದೆ? ಇವಿಷ್ಟನ್ನು ನಾನು ಮರೆತು ಆಲೋಚನೆ ಮಾಡಲು ಸಾಧ್ಯವೋ? ಸಾಧ್ಯವಿಲ್ಲ. ಮೀಸಲಾತಿ ಪ್ರಶ್ನೆ ಕುರಿತು ಮಾತನಾಡುವಾಗ ಬ್ರಾಹ್ಮಣನೊಬ್ಬ ಹೇಗೆ ಯೋಚನೆ ಮಾಡಬೇಕು? "ಒಂದೋ, ನಿನಗೆ ಸ್ವಾತಂತ್ರ್ಯ, ಸಮಾನತೆಗಳಲ್ಲಿ ನಂಬಿಕೆಯಿದೆ; ಇಲ್ಲವೋ, ಇಲ್ಲ ಅಷ್ಟೆ." ಸ್ವಾತಂತ್ರ್ಯದಲ್ಲಿ ನಂಬಿಕೆಯಿದೆ ಎಂದಾದ ಮೇಲೆ "ಅವಕಾಶವಂಚಿತರಿಗೆ ಅವಕಾಶಗಳನ್ನು ಹೆಚ್ಚಿಗೆ ಮಾಡಿಕೊಡುವುದು ನನ್ನ ಕರ್ತವ್ಯ, ಖಂಡಿತ ದಾನವಲ್ಲ, ಔದಾರ್ಯವಲ್ಲ." ಕ್ಷುದ್ರ ತರ್ಕದ ಮಾತುಗಳಾದ 'ತೋಳ ಕುರಿಮರಿ' ನ್ಯಾಯವಾಯಿತಲ್ಲ ಈ ನಿಲುವು ಎಂದು ವಾದಿಸುವುದು ನಮ್ಮ ಜಾಣತನದ ಮತ್ತೊಂದು ಮುಖ ಅಷ್ಟೆ. ಇದೇ ವಾದವನ್ನು ಹಿಂದೂವಾದಿಗಳು ಮತ್ತೂ ಬುದ್ಧಿವಂತಿಕೆಯಿಂದ ಬಳಸುತ್ತಾರೆ. ಈ ಮೀಸಲಾತಿಯ ಕುರಿತಾದ ಚರ್ಚೆಯಲ್ಲಿ ಅವರ ವಾದ ಇದು : "ದಲಿತರಿಗೆ ಆದ ಅನ್ಯಾಯ ಸರಿಪಡಿಸುವದಕ್ಕಾಗಿ ನೀವು ಮೀಸಲಾತಿ ಕೇಳುತ್ತೀರಿ. ಅದೇ ನಾವು ಬಾಬರನಿಂದ ಆದ ಅನ್ಯಾಯಕ್ಕೆ ಮಂದಿರ ನಿರ್ಮಾಣ ಕೇಳಿದರೆ ಯಾಕೆ ವಿರೋಧಿಸ್ತೀರಿ" ಅಂತ. ತಾರ್ಕಿಕ ವಾದದ ಪರಾಕಾಷ್ಠೆ ಇದು. ಸ್ವಲ್ಪ ದುರ್ಬಲ ಮನಸ್ಸು, ಬುದ್ಧಿಶಕ್ತಿಗಳವರಾದರೆ ನಾವು ಈ ಪ್ರಶ್ನೆಯ ಮುಂದೆ ಮೂಕರಾಗಿಬಿಡಬೇಕು. ಆದರೆ ನಾವು ಉತ್ತರ ಕೊಡಬೇಕಾದ ರೀತಿ, ನನಗನ್ನಿಸುವಂತೆ

ಹೀಗಿರಬೇಕು : "ಒಂದು ಸಂಸ್ಕೃತಿಯೇ, ಒಂದು ಜನತೆಯ ಬದುಕಿನ ರೀತಿಯೇ ಮೇಲುಕೀಳುಗಳನ್ನು, ಅಸ್ಪೃಶ್ಯರನ್ನು ಮತ್ತು ಅವಮಾನವನ್ನು ಸಮಾಜದ ಅವಿಭಾಜ್ಯ ಅಂಗವಾಗಿ ಮಾಡಿಕೊಂಡು ಸಮರ್ಥಿಸುವುದು ಒಂದು ಬಗೆ. ಆದರೆ ಬಾಬರನಂಥವನೊಬ್ಬ, ಘಜನಿ ಮಹಮದ್‌ನಂಥನವನೊಬ್ಬ ಮತಾಂಧ, ಒಂದುಮಂದಿರ ಒಡೆದುದಕ್ಕೆ ಇಡೀ ಮುಸ್ಲಿಂ ಸಮುದಾಯವನ್ನೇ ಅನುಮಾನ ದ್ವೇಷಗಳಿಂದ ಕಾಣುವುದೇ ಮತ್ತೊಂದು ಬಗೆ. ಬಾಬರ್‌ನ ಕೃತ್ಯ ಹಿಂದೂ ಧರ್ಮಕ್ಕಾದ ಪೆಟ್ಟಲ್ಲ. ಆದರೆ ಹಿಂದೂ ಧರ್ಮದ ಜಾತಿವಾದಿಗಳು ಜೀವಂತ ಮನುಷ್ಯನಿಗೆ ಮಾಡಿದಂಥ ಅವಮಾನ, ಇನ್ನೂ ಬದುಕಿರುವ ಜನಕ್ಕೆ ಮಾಡುತ್ತಿರುವ ಅವಮಾನ ಇವುಗಳನ್ನು ಸರಿಪಡಿಸುವುದಕ್ಕೆ ಹೋಗುವ ಕ್ರಮಗಳನ್ನು ಮಸೀದಿ ಒಡೆಯುವ ಕ್ರಮದ ಜೊತೆಗೆ ತಾಳೆ ಹಾಕಿ ನೋಡುವುದಕ್ಕೆ ಸಾಧ್ಯವಿಲ್ಲ." ಹಿಂದೂತ್ವವಾದವೆಂಬುದು ಅಥವಾ ಯಾವುದೇ ಬಗೆಯ ಮತಾಂಧತೆ ಕ್ಯಾನ್ಸರಿನ ತರಹ ಗುಟ್ಟಾಗಿ ಬೆಳೆದು ಬಿಡುತ್ತದೆ. ಕಣ್ಣುಬಿಡುವುದರೊಳಗೆ ನಾವು ಆಹುತಿಯಾಗಿಬಿಟ್ಟಿರುತ್ತೇವೆ. ಇಂಥ ಸ್ಥಿತಿಯಲ್ಲಿ ಹಿಂಸೆಗೆ ಎಡೆಮಾಡಿಕೊಟ್ಟುಬಿಡುತ್ತೇವೆ.

ಈ ದೇಶದಲ್ಲಿ ಗಾಂಧೀಜಿ ಅವರಿಗೂ, ಅಂಬೇಡ್ಕರ್ ಅವರಿಗೂ ಮಧ್ಯೆ ಭಾಷೆ ಸಾಧ್ಯವಿತ್ತು. ಅಂಬೇಡ್ಕರ್, ಗಾಂಧೀಜಿ, ಟ್ಯಾಗೂರ್, ನೇತಾಜಿ ಇವರುಗಳ ಮಧ್ಯೆ ಎಷ್ಟೋ ಬಿನ್ನಾಭಿಪ್ರಾಯಗಳಿದ್ದರೂ ಅವರುಗಳ ಮಧ್ಯೆ ಭಾಷೆಯಿತ್ತು. ಮಾತಿನಲ್ಲಿ ನಂಬಿಕೆಯಿದ್ದಿತು. ಆದರೆ ಇಂದು ನಾವು ಮಾತಿನಲ್ಲಿ ನಂಬಿಕೆ ಕಳೆದುಕೊಂಡಿದ್ದೇವೆ. ನಾಳಿನ ಬಗ್ಗೆ ನಂಬಿಕೆ ಕಳೆದುಕೊಂಡಿದ್ದೇವೆ. ನಾವು ಸಿನಿಕರಾಗುತ್ತಿದ್ದೇವೆ. ಸಿನಿಕತನ ಹಿಂಸಾವಾದದ ಮೊದಲ ಹಂತ.

ಕಳೆದುಕೊಳ್ಳುತ್ತಿರುವ ಭಾಷೆಯನ್ನು ಮತ್ತೆ ಪುನರುಜ್ಜೀವನಗೊಳಿಸೋದಕ್ಕೆ ನಮಗೆ ಗಾಂಧೀಜಿ ಮತ್ತು ಅಂಬೇಡ್ಕರ್ ಅವರಲ್ಲಿ ಮತ್ತೆ ನಂಬಿಕೆ ಬರಬೇಕು. ನಿಜವಾದ ಅರ್ಥದಲ್ಲಿ ಅವರಿಬ್ಬರು ಪರಸ್ಪರ ಎಷ್ಟು ಹತ್ತಿರವಿದ್ದರು ಎಂದು ನಿಮಗೆ ತಿಳಿಯುತ್ತ ಬರುತ್ತದೆ. ಭಾವನಾತ್ಮಕ ಸಂಬಂಧ ಇದು. ಪ್ರಜಾಪ್ರಭುತ್ವವನ್ನು ಧರ್ಮವಾಗಿ ಸ್ವೀಕರಿಸಿದಾಗ ಮಾತ್ರ ಅಂಬೇಡ್ಕರ್ ಮತ್ತು ಗಾಂಧೀಜಿ ನಮಗೆ ಪ್ರಸ್ತುತರಾಗುತ್ತಾರೆ. ಜಾತಿವಾದ, ಕೋಮುವಾದಗಳನ್ನು ನಮ್ಮ ಜೀವನರೀತಿಗಳನ್ನಾಗಿ ಸ್ವೀಕರಿಸಿದರೆ ಗಾಂಧೀ, ಅಂಬೇಡ್ಕರ್ ನಮಗೆ ದೂರವಾಗುತ್ತಾರೆ. ಅವರನ್ನು ನಾಶಮಾಡಬೇಕು ಅಥವಾ ಅವರ ವಾದವನ್ನು ನಮ್ಮ ಸ್ವಾರ್ಥಗಳಿಗೆ ತಿರುಚಿ ನಮ್ಮ ಕಾರ್ಯಸಾಧನೆಗೆ ಬಳಸಿಕೊಳ್ಳಬೇಕು. ಇವುಗಳ ಬಗ್ಗೆ ಎಲ್ಲ ನಾವು ಯೋಚನೆ ಮಾಡಬೇಕು, ವಿಶೇಷವಾಗಿ ಯುವಕರು. ಕೇವಲ ಗಾಂಧೀಜಿ, ಅಂಬೇಡ್ಕರ್ ಅವರ ವಿಚಾರಗಳನ್ನು ನಾವು ಓದಿಕೊಂಡರೆ ಸಾಲದು. ಮನನ, ಧ್ಯಾನ, ಸಾಧ್ಯವಾಗಬೇಕು. ಇಂದಿನ ಯುವಕರು ಮುಂದೆ ಇನ್ನು ಇಪ್ಪತ್ತು ಮೂವತ್ತು ವರ್ಗಗಳಲ್ಲಿ ಗಾಂಧೀಜಿ, ಅಂಬೇಡ್ಕರ್ ಇವರುಗಳ ಕೊಡುಗೆ ಬಗ್ಗೆ ಯಾವ ಕಹಿ ಇಲ್ಲದೆ, ಯಾವ ಒಗರಿಲ್ಲದೆ, ಹಗೆತನವಿಲ್ಲದೆ ಮಾತನಾಡುವುದಕ್ಕೆ ಸಾಧ್ಯವಾಗಲಿ ಎಂದು ಹಾರೈಸುತ್ತೇನೆ; ಸಾಧ್ಯವಾಗುತ್ತದೆ ಎಂದು ನಂಬುತ್ತೇನೆ.

❑

ಜನಪರ ಚಳವಳಿಗಳ ಮುಂದಿರುವ ಸವಾಲುಗಳು

ಸನತ್ ಕುಮಾರ ಬೆಳಗಲಿ

ಹನ್ನೆರಡನೇ ಶತಮಾನದಿಂದ ಈವರೆಗೆ ಅನೇಕ ಚಳವಳಿಗಳನ್ನು ಕನ್ನಡ ನಾಡು ಕಂಡಿದೆ. ವರ್ಣಾಶ್ರಮ ಪದ್ಧತಿ ವಿರುದ್ಧ ಬಸವಣ್ಣ ಬಂಡೆದ್ದ. ಅಂದಿನಿಂದ ಇಲ್ಲಿಯತನಕ ಶೋಷಣೆಗೊಳಗಾದ ಜನತೆಯ ಧ್ವನಿಯಾಗಿ ಹಲವಾರು ಆಂದೋಲನಗಳು ಈ ನೆಲದಲ್ಲಿ ನಡೆದಿವೆ. ಎಂಟುನೂರು ವರ್ಷಗಳ ಈ ಪುರೋಗಾಮಿ ಚಿಂತನೆಯನ್ನೇ ಬುಡಮೇಲು ಮಾಡಲು ಹೊರಟಿರುವ ಫ್ಯಾಸಿಸ್ಟ್ ಶಕ್ತಿಗಳು ಅಧಿಕಾರದ ಅಟ್ಟಹಾಸದಲ್ಲಿ ಮೆರೆಯುತ್ತಿರುವ ಈ ದಿನಗಳಲ್ಲಿ ಕರ್ನಾಟಕ ಕಂಡ ಚಳವಳಿಗಳ ಫಲಶ್ರುತಿ ಬಗ್ಗೆ ಜಿಜ್ಞಾಸೆ ನಡೆಯಬೇಕಾಗಿದೆ. ದೇಹವನ್ನು ದೇಗುಲವೆಂದು, ಶಿರವನ್ನು ಹೊನ್ನ ಕಳಶವೆಂದು, ಸ್ಥಾವರ ಲಿಂಗವನ್ನೇ ತಿರಸ್ಕರಿಸಿದ ಶರಣರ ಈ ನಾಡಿನಲ್ಲಿ ಮಂದಿರ ನಿರ್ಮಾಣದ ಹೆಸರಿನಲ್ಲಿ ಪುರೋಹಿತಶಾಹಿಯನ್ನು ಪುನಃ ಸ್ಥಾಪಿಸಲು ಕಂದಾಚಾರಿ ಶಕ್ತಿಗಳು ಹುನ್ನಾರ ನಡೆಸುತ್ತಿರುವಾಗ, ಜನಪರ ಚಳವಳಿಗಳ ಒಟ್ಟು ಸ್ಥಿತಿಗತಿಗಳ ಬಗ್ಗೆ ಚಿಂತನೆ ನಡೆಯಬೇಕಾಗಿದೆ.

ಕಳೆದ ಐದು ಸಾವಿರ ವರ್ಷಗಳಿಂದ ಭಾರತದ ಜೀವಸತ್ವವನ್ನೇ ಹೀರಿದ ಕರ್ಮಸಿದ್ಧಾಂತ ನಮ್ಮ ಸಾಮಾಜಿಕ ಬದುಕನ್ನು ಇಂದಿಗೂ ನಿಯಂತ್ರಿಸುತ್ತಿದೆ. ಉತ್ಪಾದನಾ ಚಟುವಟಿಕೆಗಳಲ್ಲಿ ಎಂದೂ ಪಾಲುಗೊಳ್ಳದ ವರ್ಗ ಸೃಷ್ಟಿಸಿದ ಸುಳ್ಳಿನ ಬಲೆಗೆ ನಮ್ಮ ಸಮಾಜ ಮತ್ತೆ ಸಿಲುಕಿಕೊಳ್ಳುತ್ತಿದೆ. ಹಿಂದಿನ ಜನ್ಮದ ಪಾಪ, ಮುಂದಿನ ಜನ್ಮದ ಸುಖದ ಅಂತೆ-ಕಂತೆಗಳಲ್ಲಿ ವರ್ತಮಾನ ಕಾಲದಲ್ಲಿ ಸುಲಿಗೆಯನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಹೋಗುವ ಹುನ್ನಾರ ನಡೆದಿದೆ. ಈ ಕರಾಳ ಶಕ್ತಿಗಳ

ಕಬಂಧಬಾಹುಗಳಿಂದ ಪಾರಾಗಲು ಈ ದೇಶ ಚಡಪಡಿಸುತ್ತಲೇ ಇದೆ. ಈ ಚಡಪಡಿಕೆಯನ್ನೇ ಹೊಸಕಿ ಹಾಕುವ ಕುತಂತ್ರಗಳು ಶತಮಾನಗಳಿಂದ ಇಲ್ಲಿ ನಡೆದಿವೆ, ನಡೆಯುತ್ತಲೇ ಇವೆ. ಎಲ್ಲ ಜನಪರ ಚಳವಳಿಗಳಿಗೆ ಪ್ರಸಕ್ತ ಕಾಲಘಟ್ಟದಲ್ಲಿ ಇದೇ ಮುಖ್ಯ ಸವಾಲಾಗಿದೆ.

ಜಾತಿ ಮತಗಳಿಲ್ಲದ ಸರ್ವರಿಗೂ ಸಮಾನ ಅವಕಾಶವಿರುವ ಸಮಾಜಕ್ಕಾಗಿ ಚಿಂತಿಸಿದ ಬಸವಣ್ಣ, ಬುದ್ಧ ಹಾಗೂ ಇಡೀ ಸಂತಪರಂಪರೆಯನ್ನೇ ನುಂಗಿ ನೀರು ಕುಡಿದ ಕರ್ಮಸಿದ್ಧಾಂತ ಈ ಬಂಡಾಯಗಳನ್ನು ದಕ್ಕಿಸಿಕೊಳ್ಳಲಾಗದೆ ವಿಲಿವಿಲಿ ಒದ್ದಾಡುತ್ತಿದೆ. ಅದೇ ಜನಪರ ಆಶಯ ಗಳನ್ನಿಟ್ಟುಕೊಂಡು ಉದಿಸಿದ ಕರ್ನಾಟಕದ ವಿಭಿನ್ನ ಚಳವಳಿಗಳು ತಮ್ಮ ಬಲವರ್ಧನೆಗಿಂತ ಅಸ್ತಿತ್ವ ಉಳಿಸಿಕೊಳ್ಳಲು ಮೂಲಭೂತವಾದಿ ಶಕ್ತಿಗಳೊಂದಿಗೆ ನಿರಂತರ ಸಂಘರ್ಷ ನಡೆಸಬೇಕಾಗಿ ಬಂದಿದೆ. ಒಮ್ಮೆ ಫ್ಯಾಸಿಸ್ಟ್ ಶಕ್ತಿಗಳು ಸಂಪೂರ್ಣ ಅಧಿಕಾರ ವಹಿಸಿಕೊಂಡರೆ ಈ ನೆಲದ ಯಾವ ಪ್ರಗತಿಪರ ಆಂದೋಲನವೂ ಉಳಿಯುವುದಿಲ್ಲ ಎಂಬುದನ್ನು ನಾವು ಮರೆಯಬಾರದು.

ಕರ್ನಾಟಕದ ಬದುಕನ್ನು ಹಸನಾಗಿಸಲು ಅನೇಕ ಚಳವಳಿಗಳು ನಡೆದಿವೆ, ನಡೆಯುತ್ತಿವೆ. ಫಲಶ್ರುತಿಯ ಮಾತು ಬಂದಾಗ ಕರ್ಮಸಿದ್ಧಾಂತದ ನೆನಪಾಗುತ್ತದೆ. ಈ ಚಳವಳಿಗಳ ಕಸರತ್ತೆಲ್ಲ ಫಲಾಪೇಕ್ಷೆಯಿಲ್ಲದ ದುಡಿಮೆಯಾಗಿದೆ. ಒಂದು ಹಂತದವರೆಗೆ ಆವೇಶದಿಂದ ಸೆಣಸಿದ ಚಳವಳಿಗಳು ಅನೇಕ ಬಾರಿ ಅಡ್ಡಹಾದಿ ಹಿಡಿದಿವೆ. ಆಂತರಿಕ ದೌರ್ಬಲ್ಯಗಳಿಂದ ನಿಟ್ಟುಸಿರು ಬಿಟ್ಟಿವೆ. ಈಗ ಸುಸ್ತಾಗಿ ವಿಶ್ರಾಂತಿ ತೆಗೆದುಕೊಳ್ಳುತ್ತಿವೆ. ಆದರೆ ಈ ಆಂದೋಲನಗಳ ಫಲಾನುಭವಿಗಳು ಮಾತ್ರ ವ್ಯವಸ್ಥೆಯೊಂದಿಗೆ ನೈಚ್ಯಾನುಸಂಧಾನ ಮಾಡಿಕೊಂಡು ಸುಖವಾಗಿದ್ದಾರೆ. ಈ ದುರಂತದ ಮರಳುಗಾಡಿನಲ್ಲೂ ಆಸೆಯ ಸೆಲೆಗಳು ಚಿಮ್ಮುತ್ತಲೇ ಇವೆ.

ಹಿಂದಿನ ಕತೆ ಬೇಡ, ಕರ್ನಾಟಕ ಏಕೀಕರಣಕ್ಕಾಗಿ ನಡೆದ ಹೋರಾಟ ಕನ್ನಡ ಮಾತಾಡುವ ಜನರ ಹೊಸ ರಾಜ್ಯದ ಉದಯಕ್ಕೆ ನಾಂದಿಹಾಡಿತು. ಈ ಹೋರಾಟದಲ್ಲೂ ಮುಂಚೂಣಿಯಲ್ಲಿದ್ದ ವರು ಕಮ್ಯುನಿಸ್ಟರು ಮತ್ತು ಸೋಷಲಿಸ್ಟರು. ನಿರಂತರ ಸಂಘರ್ಷದ ಫಲವಾಗಿ ಕರ್ನಾಟಕವೇನೋ ಆಯಿತು. ಆದರೆ ಕನಸಿನ ಕರ್ನಾಟಕ ಕಟ್ಟಲಾಗಲೇ ಇಲ್ಲ. ಹೋರಾಟದ ರಣರಂಗದಲ್ಲಿದ್ದವರು ಹಿಂದೆ ಸರಿದು ಯಾರ್ಯಾರೋ ಅಧಿಕಾರ ಹಂಚಿಕೊಂಡರು. ದಿಢೀರನೆ ಉದ್ಭವಿಸಿದ ಫಲಾನುಭವಿ ಗಳ ಕೈಯಲ್ಲಿ ಸಿಕ್ಕ ಕರ್ನಾಟಕ ಮೈಸೂರು ಎಂದಾಯಿತು. ಈ ಹೆಸರು ಬದಲಿಸಿ ಕರ್ನಾಟಕವಾಗಲು ದೇವರಾಜ ಅರಸರವರೆಗೆ ಕಾಯಬೇಕಾಯಿತು.

ಹೆಸರು ಕರ್ನಾಟಕವಾದರೂ ರಾಜ್ಯದ ಜನರಾಡುವ ಭಾಷೆಯಲ್ಲಿ ಆಡಳಿತ ನಡೆಯಲಿಲ್ಲ. ವಿಧಾನ ಸೌಧದ ಸಚಿವಾಲಯಗಳನ್ನು ಆಕ್ರಮಿಸಿಕೊಂಡ ಅನ್ಯಭಾಷಿಕ ಐಎಎಸ್‌ಗಳು ಜನಭಾಷೆಗೆ ನೇಣುಹಾಕುತ್ತಲೇ ಬಂದರು. ಆದರೆ ಕನ್ನಡ ಸಾಯಲಿಲ್ಲ; ಸಾಯುವ ಭಾಷೆ ಅದಲ್ಲ. ಈ ಭಾಷೆಯ ಉಳಿವಿಗೆ ನಿರಂತರ ಹೋರಾಟ ನಡೆಯಿತು. ಈ ಆಂದೋಲನಗಳಿಗೆಲ್ಲ ಶಿಖರಪ್ರಾಯ ವಾದ ಗೋಕಾಕ್ ಚಳವಳಿ ಮೂಡಿಸಿದ ಜಾಗೃತಿ ಅಧಿಕಾರಶಾಹಿಯನ್ನು ತಲ್ಲಣಗೊಳಿಸಿತು. ಪಾಟೀಲ ಪುಟ್ಟಪ್ಪ, ಡಾ. ರಾಜ್‌ಕುಮಾರ್, ಚಂದ್ರಶೇಖರ ಪಾಟೀಲ, ಬರಗೂರು ರಾಮಚಂದ್ರಪ್ಪ

- ಹೀಗೆ ಹಲವಾರು ಪ್ರಮುಖರ ನೇತೃತ್ವದಲ್ಲಿ ನಡೆದ ಹೋರಾಟ ತನ್ನ ತಾರ್ಕಿಕ ಗುರಿ ಸಾಧಿಸಿದೆಯೇ ಎಂದು ಪರಾಮರ್ಶಿಸಬೇಕಾಗಿದೆ.

ಇದೇ ಸಂದರ್ಭದಲ್ಲಿ ನರಗುಂದದಲ್ಲಿ ಸ್ಫೋಟಗೊಂಡ ರೈತ ಚಳವಳಿ ರಾಜ್ಯ ರಾಜಕಾರಣದ ದಿಕ್ಕನ್ನೇ ಬದಲಿಸಿತು. ಬೆಟರ್‌ಮೆಂಟ್ ಲೆವಿ ವಿರುದ್ಧ ಆರಂಭವಾದ ಹೋರಾಟ ರಾಜ್ಯದೆಲ್ಲೆಡೆ ವ್ಯಾಪಿಸಿತು. ನರಗುಂದದಿಂದ ಹೊರಟ ರೈತ ಜಾಥಾ ಐದುನೂರು ಕಿ.ಮೀ. ಕ್ರಮಿಸಿ ಬೆಂಗಳೂರು ತಲುಪಿದಾಗ ಗುಂಡೂರಾವ್ ಸರಕಾರ ತತ್ತರಿಸಿಹೋಯಿತು. ಈ ಆಂದೋಲನದಲ್ಲೂ ಎಡಪಕ್ಷಗಳು, ಅಂದಿನ ಅರಸು ಕಾಂಗ್ರೆಸ್ ಪ್ರಮುಖ ಪಾತ್ರ ವಹಿಸಿದ್ದವು. ಒಂದೆಡೆ ಭಾಷಾ ಚಳವಳಿ, ಇನ್ನೊಂದೆಡೆ ರೈತ ಚಳವಳಿ ಇದರಿಂದಾಗಿ ಗುಂಡೂರಾವ್ ಸರಕಾರದ ವಿರುದ್ಧ ಉಕ್ಕೇರಿದ ಜನತೆಯ ಅತೃಪ್ತಿಯ ಅಲೆಯ ಮೇಲೆ ರಾಜ್ಯದಲ್ಲಿ ಪ್ರಥಮ ಕಾಂಗ್ರೆಸ್ಸೇತರ ಸರಕಾರ 1983ರಲ್ಲಿ ಅಧಿಕಾರಕ್ಕೆ ಬಂತು.

ಕಾಂಗ್ರೆಸ್ಸೇತರ ಸರಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಕಾಲಘಟ್ಟದಲ್ಲಿ ದಲಿತ ಚಳವಳಿ ವಹಿಸಿದ ಪಾತ್ರವನ್ನು ಕಡೆಗಣಿಸಲಾಗುವುದಿಲ್ಲ. ಶತಮಾನಗಳಿಂದ ಅವಮಾನಕ್ಕೊಳಗಾದ, ಗೂಟಕ್ಕೆ ಕಟ್ಟಿದ ದನಗಳಂತಿದ್ದ ಅಸ್ಪೃಶ್ಯ ಸಮುದಾಯದಲ್ಲಿ ದಲಿತ ಸಂಘರ್ಷ ಸಮಿತಿ ಹಚ್ಚಿದ ಕಿಚ್ಚು ಹಳ್ಳಿಹಳ್ಳಿಗೆ ವ್ಯಾಪಿಸಿತು. ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ ಜಾಗೃತ ಗೊಂಡಿದ್ದ ಹಿಂದುಳಿದ ವರ್ಗಗಳು ಮೊಟ್ಟಮೊದಲ ಬಾರಿಗೆ ರಾಜಕೀಯ ಅಧಿಕಾರಕ್ಕಾಗಿ ಹಕ್ಕು ಪ್ರತಿಪಾದಿಸತೊಡಗಿದವು. ಅರಸು ರೂಪಿಸಿದ ಹೊಸ ನಾಯಕತ್ವದ ಬೇರುಗಳು ಅವಕಾಶವಂಚಿತ ಜನಾಂಗದಲ್ಲಿದ್ದವು.

ದಲಿತ, ಬಂಡಾಯ ಚಳವಳಿಗಳು ಒಟ್ಟೊಟ್ಟಿಗೆ ಬೆಳೆದು ಬಂದವು. ಬಂಡಾಯ ಸಾಹಿತ್ಯ ಚಳವಳಿ ಇನ್ನೂ ವಿಶಾಲವ್ಯಾಪ್ತಿ ಪಡೆದು ಮಾರ್ಕ್ಸ್, ಲೋಹಿಯಾ, ಅಂಬೇಡ್ಕರರ ವಿಚಾರಧಾರೆಗಳ ಸಮಾನ ಮನಸ್ಕರ ವೇದಿಕೆಯಾಗಿ ಹೊರಹೊಮ್ಮಿತು. ಅನೇಕ ಹೊಸ ಬರಹಗಾರರನ್ನು ಸೃಷ್ಟಿಸಿತು. ಸಾಂಸ್ಕೃತಿಕ ರಂಗದಲ್ಲಿ ಕ್ರಾಂತಿಯ ಅಲೆ ಎಬ್ಬಿಸಿದ ಸಮುದಾಯ ಜನಾಂದೋಲನಗಳಿಗೆ ಹೊಸ ಚೈತನ್ಯ ನೀಡಿತು. ಹೀಗೆ ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಸೇರಿ ಆಳುವ ವರ್ಗ ತತ್ತರಿಸುವಂತಾಯಿತು.

ಆದರೆ ಇಷ್ಟೆಲ್ಲಾ ಹೋರಾಟದ ಪ್ರತಿಫಲ ದೊರೆತದ್ದು ಜನತಾ ಪಕ್ಷ ಎಂಬ ಮೇಲ್ವರ್ಗಗಳ ಗುಂಪಿಗೆ. 1983ರಲ್ಲಿ ಅನಿರೀಕ್ಷಿತವಾಗಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ಸೇತರ ಸರಕಾರದಲ್ಲಿ ಬಂಗಾರಪ್ಪ-ದೇವೇಗೌಡರಿಗೆ ಜಗಳ ಹಚ್ಚಿ ರಾಮಕೃಷ್ಣಹೆಗಡೆ ಕರ್ನಾಟಕದ ಮುಖ್ಯಮಂತ್ರಿ ಯಾದರು. ಅಂದಿನಿಂದಲೇ ರಾಜ್ಯದ ಜನಪರ ಚಳವಳಿಗಳ ಅವನತಿಯೂ ಆರಂಭವಾಯಿತು. ಗುಂಡೂರಾಯರು ದಮನ ನೀತಿಯಿಂದ ಜನಚಳವಳಿಯನ್ನು ಬಗ್ಗು ಬಡಿಯಲು ಹೋಗಿ ಅಧಿಕಾರ ಕಳೆದುಕೊಂಡರೆ, ರಾಮಕೃಷ್ಣಹೆಗಡೆ ಧೃತರಾಷ್ಟ್ರಾಲಿಂಗನ ಮಾಡಿ ಆಂದೋಲನಗಳನ್ನೆಲ್ಲ ಹೊಸಕಿ ಹಾಕಿದರು.

'ಪಾರ್ಲಿಮೆಂಟಿನ ಕುರ್ಚಿಯ ಮೇಲೆ ವರ್ಷಗಟ್ಟಲೆ ಚರ್ಚೆಗೆ ಕೂತು ಬಡವರ ಬೆವರು ರಕ್ತವ ಕುಡಿದು ಏಳಲೇ ಇಲ್ಲ ಸ್ವಾತಂತ್ರ್ಯ' ಎಂದು ಅವಮಾನಿತ ಜನಾಂಗದ ಹುಡುಗರಲ್ಲಿ ಕ್ರಾಂತಿಯ ಕನಸು ಮೂಡಿಸಿದ ದಲಿತ ಕವಿಯೊಬ್ಬರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ನಾಮಕರಣ ಮಾಡಿದ ಹೆಗಡೆ ದಲಿತ ಚಳವಳಿಯನ್ನು ಮುಗಿಸಲು ತಂತ್ರ ರೂಪಿಸಿದರು. ನಂತರ ಇದೇ ದಲಿತರ ಬಂಡಾಯ ಚಳವಳಿಗಳಿಂದ ಬಂದವರು ಅನೇಕ ಸರಕಾರಿ ನಿಗಮ ಮಂಡಲಿ ಪ್ರಾಧಿಕಾರಗಳ ಸ್ಥಾನಮಾನ ಪಡೆದು, ಗೂಟದ ಕಾರಿನಲ್ಲಿ ಓಡಾಡತೊಡಗಿದ ನಂತರ ಅವರ ಪಾಲಿಗೆ ಕ್ರಾಂತಿಯಾಗಿ ನೆಮ್ಮದಿಯ ಬದುಕು ನಿರ್ಮಾಣವಾದಂತಾಯಿತು. ವ್ಯವಸ್ಥೆಯೊಳಗೂ ನುಸುಳಿ ಜನಪರ ಕೆಲಸ ಮಾಡಲು ಸಾಧ್ಯ ಎಂಬುದನ್ನು ಬರಗೂರರಂಥವರು ತೋರಿಸಿಕೊಟ್ಟ ರೆಂಬುದನ್ನು ಮರೆಯಲು ಸಾಧ್ಯವಿಲ್ಲ.

ನರಗುಂದ ಚಳವಳಿಯ ಆವೇಶದ ಅಲೆಯ ನಂತರ ತಣ್ಣಗಾಗಿದ್ದ ರೈತ ಚಳವಳಿಗೆ ಪ್ರೊ. ಎಂ.ಡಿ. ನಂಜುಂಡಸ್ವಾಮಿ, ಎನ್.ಡಿ. ಸುಂದರೇಶ ಮುಂತಾದವರು ಹೊಸ ಚೈತನ್ಯ ನೀಡಿದರು. ಅದಕ್ಕೊಂದು ನಿರ್ದಿಷ್ಟ ಕಾರ್ಯಕ್ರಮ ರೂಪಿಸಿದರು. ಹಳ್ಳಿಗಾಡಿನಲ್ಲಿ ಚೂರುಪಾರು ಸಾಲದ ಬಾಕಿಗಾಗಿ ಪಾತ್ರೆ, ಪಡಗ ಜಪ್ತಿ ಮಾಡಿಕೊಂಡು ಹೋಗುತ್ತಿದ್ದ ಸರಕಾರಿ ಅಧಿಕಾರಿಗಳ ಕಾಟ ತಪ್ಪಿತು. ನೂರಾರು ಹಳ್ಳಿಗಳ ಹೊರಗೆ ರೈತರ ಅನುಮತಿಯಿಲ್ಲದೇ ಸರಕಾರಿ ಅಧಿಕಾರಿಗಳು ಒಳಗೆ ಪ್ರವೇಶಿಸುವಂತಿಲ್ಲ ಎಂಬ ರೈತ ಸಂಘದ ಬೋರ್ಡ್‌ಗಳು ನೇಗಿಲಯೋಗಿಗಳಲ್ಲಿ ಹೊಸ ಆತ್ಮಸ್ಥೈರ್ಯವನ್ನು ಮೂಡಿಸಿದವು. ಆದರೆ ಮಣ್ಣಿನೊಂದಿಗೆ, ಭೂಮಿಯೊಂದಿಗೆ ಸಂಬಂಧವಿರಿಸಿಕೊಂಡಿರುವ ಎಲ್ಲರ ಚಳವಳಿಯಾಗಿ, ಧ್ವನಿಯಾಗಿ ರೈತ ಸಂಘ ಹೊರಹೊಮ್ಮಲೇ ಇಲ್ಲ. ಭೂಮಿಯ ಮೇಲೆ ಒಡೆತನ ಹೊಂದಿದವರಿಗೆ ಮಾತ್ರ ಸೀಮಿತವಾಗಿ ಉಳಿದ ರೈತ ಆಂದೋಲನ ನೀರಾವರಿಯ ಕಬ್ಬು ಬೆಳೆಯುವ ಪ್ರದೇಶಗಳಾದ ಮಂಡ್ಯ, ಬೆಳಗಾವಿ, ಶಿವಮೊಗ್ಗ, ರಾಯಚೂರು ಮುಂತಾದ ಜಿಲ್ಲೆಗಳಲ್ಲಿ ನಿರ್ಣಾಯಕ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿ ದರೂ ಕೃಷಿ ಕೂಲಿಗಾರರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಲೇ ಇಲ್ಲ. ಹೀಗಾಗಿ ಭೂ ಮಾಲೀಕ ವರ್ಗದ ಚಳವಳಿ ಎಂಬ ಖ್ಯಾತಿಯನ್ನು ಇದು ಪಡೆದರೂ ಮುಂದಿನ ದಿನಗಳಲ್ಲಿ ಇದ್ದ ನೆಲೆಗಳನ್ನೂ ಉಳಿಸಿಕೊಳ್ಳಲಿಲ್ಲ.

ಶಿವಮೊಗ್ಗದ ಸುಂದರೇಶ ನಿಧನದ ನಂತರ ರೈತ ಚಳವಳಿ ಅನೇಕ ಏರಿಳಿತಗಳನ್ನು ಕಂಡಿತು. ನಂಜುಂಡಸ್ವಾಮಿ, ಬಾಬಾಗೌಡ ಪಾಟೀಲ ಶಾಸಕರಾದರು. ಈ ಚಳವಳಿಯನ್ನು ಆಪೋಶನ ಮಾಡಿಕೊಳ್ಳಲು ಹೆಗಡೆ ಯತ್ನಿಸಿದರೂ ಸಾಧ್ಯವಾಗಲಿಲ್ಲ. ಇವರಲ್ಲಿ ಬಿರುಕು ಮೂಡಿಸಲು ಯತ್ನಿಸಿ ಕೊಂಚಮಟ್ಟಿಗೆ ಅವರು ಸಫಲರಾದರು ಆದರೆ ನಂಜುಂಡಸ್ವಾಮಿ ಆಳುವ ವರ್ಗದೊಂದಿಗೆ ತಾತ್ವಿಕ ಪ್ರಶ್ನೆಯಲ್ಲಿ ಎಂದೂ ರಾಜಿ ಮಾಡಿಕೊಳ್ಳಲಿಲ್ಲ. ಅಂತಲೇ ಈ ಚಳವಳಿ ಹಲವಾರು ಹೋಳುಗಳಾಗಿಯೂ ಅಸ್ತಿತ್ವದಲ್ಲಿದೆ. ಆದರೆ ಆಗಾಗ ವ್ಯಕ್ತಿ ಪ್ರತಿಷ್ಠೆಯ ಪೈಪೋಟಿ ಈ ಚಳವಳಿಗೆ ಪಿಡುಗಿನಂತೆ ಅಂಟಿಕೊಂಡಿದೆ.

ಆದರೆ ಆಂತರಿಕ ಸಂಘಟನಾತ್ಮಕ ದೌರ್ಬಲ್ಯಗಳು ರೈತ ಸಂಘವನ್ನು ಇಂದಿನ ಸ್ಥಿತಿಗೆ

ತಂದು ನಿಲ್ಲಿಸಿದೆ. ನಂಜುಂಡಸ್ವಾಮಿ ಅವರೊಂದಿಗೆ ಶಾಸಕರಾದ ಬಾಬಾಗೌಡ ಪಾಟೀಲರಿಗೆ ಅಧಿಕಾರದ ಸವಿ ಹತ್ತಿತು. ಒಮ್ಮಿಂದೊಮ್ಮೆಲೇ ಬಿಜೆಪಿ ಸೇರಿದ ಅವರು ಆರ್.ಎಸ್.ಎಸ್. ಪಥಸಂಚಲನಗಳಲ್ಲಿ ಖಾಕಿ ಚಡ್ಡಿ ಹಾಕಿಕೊಂಡು ಮಿಂಚತೊಡಗಿದರು. ಕೇಂದ್ರದಲ್ಲಿ ಮಂತ್ರಿಯೂ ಆದರೂ ನಂತರ ಸೋತರು. ಈಗ ದೇವೇಗೌಡರ ಜನತಾದಳದಲ್ಲಿದ್ದಾರೆ. ಈಗ ಉಳಿದಿರುವ ರೈತ ಚಳವಳಿಯಲ್ಲೂ ಮಾಜಿ ಶಾಸಕ ಪುಟ್ಟಣ್ಣಯ್ಯ ಸೇರಿದಂತೆ ಮಂಡ್ಯ, ಶಿವಮೊಗ್ಗ ಜಿಲ್ಲೆಗಳ ಪ್ರಮುಖರು ಪ್ರೊ. ನಂಜುಂಡಸ್ವಾಮಿ ಅವರಿಂದ ಪ್ರತ್ಯೇಕಗೊಂಡು ತಮ್ಮದೇ ರೈತಸಂಘ ಕಟ್ಟಿಕೊಂಡಿದ್ದಾರೆ.

ಐದು ದಶಕಗಳ ಹಿಂದೆಯೇ ಕರ್ನಾಟಕದಲ್ಲಿ ಮೈದಾಳಿದ ಕಮ್ಯೂನಿಸ್ಟ್ ಚಳವಳಿ ಈ ನೆಲದಲ್ಲಿ ಬೇರು ಬಿಡಲೇ ಇಲ್ಲ. ಆರಕ್ಕೇರದೇ ಮೂರಕ್ಕಿಳಿಯದೇ ಹಾಸಿಗೆ ಇದ್ದಷ್ಟೆ ಕಾಲು ಚಾಚಿ ಬಿದ್ದುಕೊಂಡ ಈ ಆಂದೋಲನ ಎಂದೂ ಜ್ವಾಲಾಮುಖಿಯಾಗಲಿಲ್ಲ. ಆದರೆ ಅದರ ಕೆಂಪು ಕಿಡಿ ಆರಿ ಬೂದಿಯಾಗಲೂ ಇಲ್ಲ. ನಗರ ಪ್ರದೇಶದ ಕಾರಖಾನೆಯ ಕಾರ್ಮಿಕ ವರ್ಗಕ್ಕೆ ತನ್ನನ್ನು ಸೀಮಿತಗೊಳಿಸಿಕೊಂಡ ಕಮ್ಯೂನಿಸ್ಟ್ ಚಳವಳಿ ಸಮಾಜವಾದಿ ಚಳವಳಿಯಂತೆ ಇನ್ನಾವುದೇ ಬೂರ್ಜ್ವಾಪಕ್ಷದಲ್ಲಿ ಅಂತರ್ಧಾನಗೊಂಡು ಅಸ್ತಿತ್ವ ಕಳೆದುಕೊಳ್ಳಲಿಲ್ಲ ಎಂಬುದೊಂದೇ ಅದರ ಹೆಗ್ಗಳಿಕೆ. ಹಾಗೂ ಅಭಿಮಾನ ಪಡಬೇಕಾದ ಸಂಗತಿಯಾಗಿದೆ.

ನಲವತ್ತರ ದಶಕದ ಆರಂಭದಲ್ಲಿ ಹುಬ್ಬಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡು ಚಟುವಟಿಕೆ ಆರಂಭಿಸಿದ ಕಮ್ಯುನಿಸ್ಟ್ ಚಳವಳಿ ಆರಂಭದಲ್ಲಿ ಅನೇಕ ಪ್ರಜ್ಞಾವಂತ ಯುವಕರನ್ನು ಆಕರ್ಷಿಸಿದ್ದು ನಿಜ. ಬಸವರಾಜ ಕಟ್ಟೀಮನಿ, ತರಾಸು, ಚದುರಂಗರಂಥ ಸಾಹಿತಿಗಳು ಇದರಿಂದ ಪ್ರಭಾವಿತ ರಾಗಿದ್ದರು. ನಿರಂಜನರಂಥ ಸಾಹಿತಿಗಳು ಪಕ್ಷದ ಸಕ್ರಿಯ ಸದಸ್ಯರಾಗಿ ದುಡಿದರು. ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಈ ಪಕ್ಷ ವಹಿಸಿದ ಪಾತ್ರ ಗಣನೀಯವಾಗಿದೆ. ಸ್ವಾತಂತ್ರ್ಯ ನಂತರ ಭೂ ಸುಧಾರಣೆಗಾಗಿ ಹೋರಾಟ ನಡೆಸಿದ ಇತಿಹಾಸ ಇದಕ್ಕಿದೆ. ಉಳುವವನೆ ಹೊಲದೊಡೆಯ ನಾಗಬೇಕೆಂಬ ಹೋರಾಟ ನಡೆಸಿದ ಶ್ರೇಯಸ್ಸು ಇದರದು. ಆದರೆ ದೇವರಾಜ ಅರಸು ಮುಖ್ಯಮಂತ್ರಿಯಾಗಿ ಭೂ ಸುಧಾರಣಾ ಶಾಸನ ಜಾರಿಗೆ ತಂದನಂತರ, ಹೊಲದೊಡೆಯರಾದ ಉಳುವವರು ಕೆಂಬಾವುಟದಿಂದ ದೂರವಾದರು.

ಸ್ವಾತಂತ್ರ್ಯ ನಂತರ ಕಮ್ಯೂನಿಸ್ಟ್ ಚಳವಳಿ ಕೇವಲ ಕಾರ್ಮಿಕ ವರ್ಗಕ್ಕೆ ಸೀಮಿತವಾಗಿ ಉಳಿಯಿತು. ಸಮತಾವಾದಿ ಸಮಾಜದ ಕನಸನ್ನು ಕಂಡು ಈ ಕ್ರಾಂತಿಕಾರಿ ಪಕ್ಷಕ್ಕೆ ತಮ್ಮನ್ನು ಅರ್ಪಿಸಿಕೊಂಡ ಅನೇಕ ಕಾರ್ಯಕರ್ತರ ಆಯುಷ್ಯವೆಲ್ಲ ಕಾರ್ಮಿಕ ಆಯುಕ್ತರ ಕಚೇರಿಯ ರಾಜಿ-ಸಂಧಾನಗಳಲ್ಲಿ ಕಳೆದುಹೋಯಿತು. ದುಡಿಯುವ ವರ್ಗದಲ್ಲಿ ವರ್ಗಪ್ರಜ್ಞೆ ಮೂಡಿಸಿ ವರ್ಗರಹಿತ ಸಮಾಜ ನಿರ್ಮಿಸುವ ಕನಸು ನನಸಾಗಲೇ ಇಲ್ಲ. ನಗರ ಪ್ರದೇಶದ ಸಂಘಟಿತ ಕಾರ್ಮಿಕ ವರ್ಗದ ನಡುವೆ ಪ್ರತಿಷ್ಠಾಪಿತಗೊಂಡ 'ಕೆಂಬಾವುಟ' ಎಲ್ಲವನ್ನೂ ಕಳೆದುಕೊಂಡ ನಿಜವಾದ ಶೋಷಿತರ ಬಳಿ ಬರಲೇ ಇಲ್ಲ.

ಆರಂಭದ ಹಂತದಲ್ಲಿ ಕಮ್ಯೂನಿಸ್ಟ್ ಚಳವಳಿಗೆ ನೇತೃತ್ವ ವಹಿಸಿದ ನಾಯಕರು ದ್ವಿತೀಯ

ಹಂತದ ನಾಯಕರ ಪಡೆಯನ್ನು ರಚಿಸಲಿಲ್ಲ. ತಾವಿರುವವರೆಗೆ ಓಡಾಡಿ ಸುಸ್ತಾದ ಅವರಿಗೆ ತಮ್ಮ ನಂತರ ಈ ಚಳವಳಿಯ ಭವಿಷ್ಯವೇನೆಂಬ ದೂರದೃಷ್ಟಿಯ ಆಲೋಚನೆಯೇ ಇರಲಿಲ್ಲ. ಹೀಗಾಗಿ ಕಮ್ಯುನಿಸ್ಟ್ ಪಕ್ಷ ಈ ರಾಜ್ಯದ ಸಮಸ್ತ ಜನತೆಯ ಪಕ್ಷವಾಗಿ ಬೆಳೆಯಲೇ ಇಲ್ಲ. ಈ ನೆಲದಲ್ಲೇ ಬೇರು ಬಿಟ್ಟಿರುವ ಪ್ರಗತಿಪರ ಆಶಯಗಳಿಗೆ ಅದು ಸ್ಪಂದಿಸಲಿಲ್ಲ. ಬಸವಣ್ಣ, ಸರ್ವಜ್ಞ, ಟಿಪ್ಪುಸುಲ್ತಾನ ಮುಂತಾದವರ ಪರಂಪರೆಯ ನೈಜ ವಾರಸುದಾರರು ತಾವೆಂದು ಕಮ್ಯೂನಿಸ್ಟರು ಅರಿತುಕೊಳ್ಳಲೇ ಇಲ್ಲ.

ಕ್ರಾಂತಿಯ ಮುಂಚೂಣಿ ಪಡೆಯಾಗಬೇಕಿದ್ದ ಕಾರ್ಮಿಕ ವರ್ಗ ಇಂದು ಜಾತಿ-ಧರ್ಮದ ಹೆಸರಿನಲ್ಲಿ ನೂರೆಂಟು ಹೋಳುಗಳಾಗಿ ಒಡೆದಿದೆ. ಕೆಂಬಾವುಟದ ನೇತೃತ್ವದಲ್ಲಿ ಹೋರಾಡಿ ಸಂಬಳ ಹೆಚ್ಚಿಸಿಕೊಂಡು ಬೋನಸ್ ಪಡೆದ ನಂತರ ಸಂತೃಪ್ತವಾದ ಸಂಘಟಿತ ಕಾರ್ಮಿಕ ವರ್ಗ ತನ್ನ ಚಾರಿತ್ರಿಕ ಕರ್ತವ್ಯ ಪಾಲನೆಯಲ್ಲಿ ವಿಫಲಗೊಂಡಿದೆ. ಅಂತಲೇ ಇಂದು ಕೆ.ಎಸ್.ಆರ್.ಟಿ.ಸಿ., ಎಚ್.ಎಂ.ಟಿ., ಎಚ್.ಎ.ಎಲ್.ಗಳಂಥ ಸಾರ್ವಜನಿಕ ರಂಗದ ಸಂಸ್ಥೆಗಳಲ್ಲೂ ಶ್ರಮಜೀವಿಗಳ ನಡುವೆ ಬ್ರಾಹ್ಮಣರ ಸಂಘ, ವೀರಶೈವರ ಸಂಘ, ಒಕ್ಕಲಿಗರ ಸಂಘಗಳು ಹುಟ್ಟಿಕೊಂಡಿವೆ. ತಮ್ಮ ಬೇಡಿಕೆಗಳಿಗಾಗಿ ಕಮ್ಯುನಿಸ್ಟರ ಜೊತೆಗೆ ಬರುವ ಇವರು ಅದು ಮುಗಿದ ನಂತರ ತಮ್ಮ ಜಾತಿ ಗೂಡುಗಳಲ್ಲಿ ಹೋಗಿ ಸೇರಿಕೊಳ್ಳುತ್ತಾರೆ.

ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣದ ಪರಿಣಾಮವಾಗಿ ಕೈಗಾರಿಕೆಗಳು ಮುಚ್ಚಿ, ಸಾವಿರಾರು ಶ್ರಮಜೀವಿಗಳು ಬೀದಿಪಾಲಾಗಿದ್ದಾರೆ. ಹರಿಹರ, ದಾವಣಗೆರೆ ಹಾಗೂ ಹುಬ್ಬಳ್ಳಿಯಂಥ ಕಡೆ ಪರಿಸ್ಥಿತಿ ಭಯಾನಕವಾಗಿದೆ. ಕಾರ್ಖಾನೆ ಇದ್ದಾಗ ಕೆಂಬಾವುಟ ಹಿಡಿದಿದ್ದ ಈ ಸಂಘಟಿತ ಕಾರ್ಮಿಕರೇ ಈಗ ವಿಶ್ವಹಿಂದೂ ಪರಿಷತ್, ಭಜರಂಗದಳ ಮುಂತಾದ ಸಂಘಪರಿವಾರದ ಕಾರ್ಯಕ್ರಮಗಳಲ್ಲಿ ಭಗವಾಧ್ವಜ ಹಾಗೂ ತ್ರಿಶೂಲಗಳನ್ನು ಹಿಡಿದುಕೊಂಡು ಓಡಾಡುವ ದೃಶ್ಯ ಸಾಮಾನ್ಯವಾಗಿದೆ.

ರಾಜ್ಯದಲ್ಲಿ ನಡೆದ ಇತ್ತೀಚಿನ ವಿಧಾನಸಭೆ ಚುನಾವಣೆಗಳಲ್ಲಿ ಒಬ್ಬನೇ ಒಬ್ಬ ಕಮ್ಯುನಿಸ್ಟ್ ಅಭ್ಯರ್ಥಿ ಆರಿಸಿಬರಲಾಗಲಿಲ್ಲ. ಕಾರ್ಮಿಕ ವರ್ಗವೇ ನಿರ್ಣಾಯಕವಾಗಿರುವ ಕ್ಷೇತ್ರಗಳಲ್ಲೂ ಕೂಡ ಮೂರುಸಾವಿರಕ್ಕಿಂತ ಕಡಿಮೆ ಮತ ಪಡೆದು ಠೇವಣಿ ಕಳೆದುಕೊಳ್ಳಬೇಕಾಯಿತು. ಕಮ್ಯುನಿಸ್ಟ್ ಚಳವಳಿಯ ಆರುದಶಕಗಳ ಸಾಧನೆಗಳ ಮೌಲ್ಯಮಾಪನ ಮಾಡಿದರೆ ದೊರೆತ ಫಲಶ್ರುತಿ ಇದು. ಬಹುಶಃ ಕಾರ್ಯಕರ್ತರನ್ನು ಸೈದ್ಧಾಂತಿಕವಾಗಿ ಅಣಿಗೊಳಿಸಿದ್ದಿದ್ದರೆ ಈ ದುರವಸ್ಥೆ ಬರುತ್ತಿರಲಿಲ್ಲವೇನೋ.

ಇಷ್ಟೆಲ್ಲ ದೌರ್ಬಲ್ಯಗಳಿದ್ದಾಗಲೂ ಕಮ್ಯುನಿಸ್ಟ್ ಚಳವಳಿ ಇಂದಿಗೂ ಅಸ್ತಿತ್ವ ಉಳಿಸಿ ಕೊಂಡಿರುವುದಕ್ಕೆ ಕಾರಣ ಕಮ್ಯುನಿಸ್ಟರ ಅಚಲ ಸೈದ್ಧಾಂತಿಕ ನಿಷ್ಠೆ. ಎಷ್ಟೇ ತೊಂದರೆ ಬರಲಿ ಸೋತು ಸುಣ್ಣವಾಗಲಿ ಕೋಮುವಾದಿ, ಜಾತಿವಾದಿ ಶಕ್ತಿಗಳೊಂದಿಗೆ ಕಮ್ಯೂನಿಸ್ಟರು ಎಂದೂ ರಾಜಿ ಮಾಡಿಕೊಳ್ಳಲಿಲ್ಲ. ಕೆಲ ಸಮಾಜವಾದಿಗಳೆಂದು ಹೇಳಿಕೊಳ್ಳುವವರೂ, ಕೇಂದ್ರದಲ್ಲಿ ಮಂತ್ರಿಸ್ಥಾನದ ಆಸೆಗಾಗಿ ತಾವು ಉದ್ದಕ್ಕೂ ವಿರೋಧಿಸುತ್ತ ಬಂದಿದ್ದ ಪುರೋಹಿತಶಾಹಿಯ

ಪ್ರತೀಕವಾದ ಸಂಘಪರಿವಾರವನ್ನು ಸೇರಿ ಬಾಳೆಎಲೆ ಮುಂದೆ ಊಟಕ್ಕೆ ಕುಳಿತರು. ಆದರೆ ಕಮ್ಯುನಿಸ್ಟರು ಮತಾಂಧತೆಯ ವಿರುದ್ಧದ ಹೋರಾಟವನ್ನೇ ತನ್ನ ಏಕೈಕ ಕಾರ್ಯಕ್ರಮವನ್ನಾಗಿ ಮಾಡಿಕೊಂಡರು.

ಆದರೆ ಕಮ್ಯುನಿಸ್ಟ್ ಚಳವಳಿ ತನ್ನ ಲೋಪಗಳನ್ನು ಸರಿಪಡಿಸಿಕೊಳ್ಳಬೇಕಾಗಿದೆ. ಬರೀ ಸಂಘಟಿತ ಕಾರ್ಮಿಕ ವರ್ಗದ ಆರ್ಥಿಕ ಬೇಡಿಕೆಯಲ್ಲಿ ಮುಳುಗಿರುವ ಅದು ಈ ನೆಲದ ಆಶಯಗಳಿಗೆ ಸ್ಪಂದಿಸಬೇಕಾಗಿದೆ. ಇಲ್ಲಿನ ನದಿ, ಬೆಟ್ಟ, ಭಾಷೆ, ಪರಿಸರದ ಸಮಸ್ಯೆಗಳಿಗೆ ಸ್ಪಂದಿಸದೆ ಹೊಸ ಸಮಾಜವನ್ನಾಗಲೀ ನಾಡನ್ನಾಗಲೀ ಕಟ್ಟಲು ಸಾಧ್ಯವಿಲ್ಲ. ಹದಿನೆಂಟನೆ ಶತಮಾನದಲ್ಲಿ ಕಾರ್ಲ್ ಮಾರ್ಕ್ಸ್ ಹೇಳಿದ್ದನ್ನೇ ಪಠಿಸುತ್ತ ಕುಳಿತುಕೊಳ್ಳುವುದು ಮಾರ್ಕ್ಸ್‌ವಾದವಲ್ಲ. ಮಾರ್ಕ್ಸ್‌ನ ನಂತರದ ಇಲ್ಲಿಯವರೆಗಿನ ಚಾರಿತ್ರಿಕ ಬೆಳವಣಿಗೆಯ ಅಧ್ಯಯನ ಅಗತ್ಯವಾಗಿದೆ. ಈ ಅಧ್ಯಯನದ ಬೆಳಕಿನಲ್ಲಿ ಕಮ್ಯೂನಿಸ್ಟ್ ಚಳವಳಿಯು ಹೊಸ ದಿಕ್ಕಿನತ್ತ ಸಾಗಬೇಕಾಗಿದೆ.

ಇನ್ನು ದಲಿತ ಚಳವಳಿ. ಎಪ್ಪತ್ತರ ದಶಕದಲ್ಲಿ ಕರ್ನಾಟಕದ ಸಾಮಾಜಿಕ ಬದುಕಿನಲ್ಲಿ ಅಲ್ಲೋಲ ಕಲ್ಲೋಲ ಉಂಟುಮಾಡಿದ ದಲಿತ ಸಂಘರ್ಷ ಸಮಿತಿ ಅಂಬೇಡ್ಕರರ ಸೈದ್ಧಾಂತಿಕ ನೆಲೆಯಲ್ಲಿ ರೂಪುಗೊಂಡರೂ, ಅಷ್ಟಕ್ಕೆ ಸೀಮಿತವಾಗಿ ಉಳಿಯದೆ ಉಳಿದ ಪುರೋಗಾಮಿ ಆದರ್ಶಗಳಿಗೂ ಸ್ಪಂದಿಸಿತು. ಉಳಿದ ರಾಜ್ಯಗಳಂತೆ ಕರ್ನಾಟಕದ ದಲಿತ ಚಳವಳಿಗೆ ಮಾರ್ಕ್ಸ್, ಗಾಂಧಿ ಎಂದೂ ಅಸ್ಪೃಶ್ಯರಾಗಲಿಲ್ಲ, ಜಾತಿವಾದ, ಕೋಮುವಾದದ ಪ್ರಶ್ನೆಯಲ್ಲಿ ಇದು ಎಂದೂ ರಾಜಿ ಮಾಡಿಕೊಳ್ಳಲಿಲ್ಲ.

ಆದರೆ ದಲಿತ ಸಂಘರ್ಷ ಸಮಿತಿ ಇಂದು ಒಂದಾಗಿ ಉಳಿದಿಲ್ಲ. ರಾಜ್ಯದ ಅನೇಕ ಊರುಗಳಲ್ಲಿ ಸರಕಾರಿ ಅಧಿಕಾರಿಗಳನ್ನು ಬ್ಲ್ಯಾಕ್‌ಮೇಲ್ ಮಾಡುವ ಜನರ ಕೈಯಲ್ಲಿ ಸಿಕ್ಕು ಈ ಚಳವಳಿ ಅಡ್ಡದಾರಿ ಹಿಡಿದಿದೆ. ಆದರೂ ಅದರ ಮೂಲಭೂತ ಕಾಳಜಿಗಳನ್ನು ಪ್ರಶ್ನಿಸಲು ಸಾಧ್ಯವಿಲ್ಲ. ಜನತಾ ದಳದೊಂದಿಗೆ ಗುರುತಿಸಿಕೊಳ್ಳದೇ ಪ್ರತ್ಯೇಕವಾಗಿ ಉಳಿದಿದ್ದರೆ ಅದೊಂದು ಪ್ರಭಾವಿ ಶಕ್ತಿಯಾಗಿ ಹೊರಹೊಮ್ಮಬಹುದಿತ್ತು.

ಸಮಾಜವಾದಿ ಸೋವಿಯತ್ ರಷ್ಯ ಪತನಗೊಂಡ ನಂತರ ಕರ್ನಾಟಕ ಮಾತ್ರವಲ್ಲ ಮೂರನೆ ಜಗತ್ತಿನ ಪುರೋಗಾಮಿ ಚಳವಳಿಗಳಿಗೆಲ್ಲ ಚೇತರಿಸಲಾಗದ ಪೆಟ್ಟು ಬಿದ್ದಿದೆ. ಅಮೆರಿಕನ್ ಸಾಮ್ರಾಜ್ಯಶಾಹಿಯ ಕರಾಳಹಸ್ತ ನವೋದಿತ ರಾಷ್ಟ್ರಗಳ ಸ್ವಾತಂತ್ರ್ಯ, ಸಾರ್ವಭೌಮತ್ವಕ್ಕೆ ಗಂಡಾಂತರ ತಂದಿದೆ. ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ ಹಾಗೂ ವಿಶ್ವಬ್ಯಾಂಕ್‌ಗಳ ಸಾಲದ ಬಲೆಗೆ ಸಿಲುಕಿದ ದೇಶಗಳು ವಿಲಿವಿಲಿ ಒದ್ದಾಡುತ್ತಿವೆ. ಜಾಗತೀಕರಣ, ಉದಾರೀಕರಣದ ಮಾಯಾಮೃಗದ ಬೆನ್ನು ಹತ್ತಿದ ಇಂಡೋನೇಶ್ಯಾ-ಇಥಿಯೋಪಿಯಾದಂಥ ದೇಶಗಳು ಅವಸಾನದ ಅಂಚಿಗೆ ಬಂದು ನಿಂತಿವೆ. ಮಾರುಕಟ್ಟೆ ಆರ್ಥಿಕತೆ, ರಫ್ತು ನೀತಿಗಳು ನಮ್ಮ ದೇಶದ ಒಕ್ಕಲುತನ, ಕರಕುಶಲತೆ ಹಾಗೂ ದೇಶಿ ಸಂಪನ್ಮೂಲಗಳಿಗೆ ಕುತ್ತು ತಂದಿವೆ.

ಒಂದೆಡೆ ಜಾಗತೀಕರಣದ ಯಮಪಾಶ ಇನ್ನೊಂದೆಡೆ ಮತಾಂಧತೆಯ ದಳ್ಳುರಿ. ಇವುಗಳ

ನಡುವೆ ನಮ್ಮ ಜನ ಚಳವಳಿಗಳನ್ನು ಉಳಿಸಿಕೊಳ್ಳಲು ಹೆಣಗಾಡಬೇಕಾಗಿದೆ. ಈ ಹೊಸ ಸವಾಲುಗಳು ಜನಾಂದೋಲನಗಳ ಮುನ್ನಡೆಗೆ ಪ್ರೇರಣೆ ನೀಡಬೇಕಾಗಿದೆ. ಮಾರುಕಟ್ಟೆ ಅರ್ಥ ನೀತಿಯ ಈ ಅಬ್ಬರ ಶಾಶ್ವತವಲ್ಲ. ಬಂಡವಾಳಶಾಹಿ ಅರ್ಥವ್ಯವಸ್ಥೆ ತನ್ನ ಆಂತರಿಕ ಬಿಕ್ಕಟ್ಟಿನಿಂದ ಇಂದಲ್ಲ ನಾಳೆ ಅವಸಾನ ಹೊಂದುತ್ತದೆ. ಯೂರೋಪಿಗೆ ಈಗಾಗಲೇ ಅದರ ಬಿಸಿ ತಟ್ಟಿದೆ. ಜಾಗತಿಕ ವ್ಯವಸ್ಥೆಯ ಮರು ಮಾರ್ಪಾಟಾಗಿ ಮತ್ತೆ ಪ್ರಗತಿಪರ ಚಳವಳಿ ಚೇತರಿಸುವ ದಿನಗಳು ಸಮೀಪಿಸುತ್ತಿವೆ.

ಚಳವಳಿಗಳು ಸ್ಥಗಿತಗೊಂಡಿವೆ ಎಂದು ನಿರಾಶರಾಗದೆ ಹೊಸ ಸನ್ನಿವೇಶ ಎದುರಿಸಲು ಮಾನಸಿಕ ಸಿದ್ಧತೆ ಮಾಡಿಕೊಳ್ಳಬೇಕಾಗಿದೆ. ಇಂದಲ್ಲ ನಾಳೆ ಜನಾಂದೋಲನಗಳು ಮತ್ತೆ ಚಿಗಿತು ಕೊಳ್ಳುತ್ತವೆ. ಹಿಂದಿನ ಲೋಪದೋಷಗಳನ್ನು ಸರಿಪಡಿಸಿಕೊಂಡು ಹೊಸ ಭಾರತ ಕಟ್ಟಲು ಮುಂದೆ ನಡೆಯುವ ಹೋರಾಟ ಇನ್ನೂ ಜವಾಬ್ದಾರಿಯುತವಾದುದಾಗಿದೆ. ಹಿಂದೂ ಕೋಮುವಾದ ಇಂದು ಫ್ಯಾಸಿಸಂ ರೂಪ ತಾಳತೊಡಗಿದೆ. ಗುಜರಾತ್ ಹತ್ಯಾಕಾಂಡದ ಸಮಯದಲ್ಲಿ ಈ ಅಪಾಯದ ಸ್ಪಷ್ಟ ಸೂಚನೆಗಳು ದೊರೆತಿವೆ. ಅಯೋಧ್ಯೆ, ಮಥುರಾದಂಥ ವಿವಾದಗಳು ನೆಪಮಾತ್ರ. ಸಂಘಪರಿವಾರದ ನಿಜವಾದ ಗುರಿ ಸಾವರ್ಕರ, ಗೋಳ್ವಲಕರ ಕಲ್ಪನೆಯ ಹಿಂದೂರಾಷ್ಟ್ರ ನಿರ್ಮಾಣ. ಇಂಥ ರಾಷ್ಟ್ರ ನಿರ್ಮಾಣವಾದರೆ ಆಗ ಅನೇಕ ಲೋಪಗಳ ನಡುವೆಯೂ ಸಕಲರಿಗೆ ಸಮಾನಾವಕಾಶ ನೀಡಿದ ಈ ಸಂವಿಧಾನ ನಾಶವಾಗುತ್ತದೆ. ಜಾತ್ಯತೀತ ಜನತಾಂತ್ರಿಕ ವ್ಯವಸ್ಥೆಯೇ ಬುಡಮೇಲಾಗುತ್ತದೆ.

ಬಾಬಾ ಬುಡನ್‌ಗಿರಿ, ಈದ್ಗಾ ಮೈದಾನ, ಟಿಪ್ಪು ಸುಲ್ತಾನ ಹೀಗೆ ನಾನಾ ಸಮಸ್ಯೆಗಳನ್ನು ಸೃಷ್ಟಿಸಿ, ಈ ಕರ್ನಾಟಕವನ್ನು ಕಬಳಿಸಲು ಸಂಘಪರಿವಾರದಿಂದ ಫ್ಯಾಸಿಸ್ಟ್ ಶಕ್ತಿಗಳು ಮಸಲತ್ತು ನಡೆಸಿವೆ. ಇಂಥ ಗಂಡಾಂತರವನ್ನು ಡಾ. ಜಿ. ರಾಮಕೃಷ್ಣರಂಥ ಚಿಂತನಶೀಲರು ಮೂರು ದಶಕಗಳ ಹಿಂದೆಯೇ ಗುರುತಿಸಿ ಎಚ್ಚರಿಸಿದ್ದರೂ ಜನಪರ ಆಂದೋಲನಗಳು ಈ ಅಪಾಯದ ಬಗ್ಗೆ ಎಚ್ಚರ ವಹಿಸಲೇ ಇಲ್ಲ. ಈಗಲೂ ಕಾಲ ಮಿಂಚಿಲ್ಲ, ಮನುಷ್ಯ ಸಮಾನತೆಯಲ್ಲಿ ನಂಬಿಕೆ ಹೊಂದಿರುವ ಜಾತ್ಯತೀತ ಜನತಾಂತ್ರಿಕ ವ್ಯವಸ್ಥೆ ಬಗ್ಗೆ ಕಾಳಜಿ ಇರುವ ಎಲ್ಲಾ ಪ್ರಗತಿಪರರೂ ಒಂದುಗೂಡಬೇಕಾಗಿದೆ. ಮಾರ್ಕ್ಸ್‌ವಾದಿಗಳು, ಅಂಬೇಡ್ಕರ್‌ವಾದಿಗಳು, ಲೋಹಿಯಾವಾದಿಗಳು, ಗಾಂಧಿವಾದಿಗಳು, ಬಸವಣ್ಣವಾದಿಗಳು ಹೀಗೆ ಎಲ್ಲಾ ಪುರೋಗಾಮಿಗಳು ಒಂದೇ ವೇದಿಕೆಗೆ ಬರುವುದು ಇಂದು ಅನಿವಾರ್ಯವಾಗಿದೆ. ಬಾಬಾ ಬುಡನ್‌ಗಿರಿ ಹಾಗೂ ಶ್ರೀರಂಗಪಟ್ಟಣಗಳಲ್ಲಿ ನಡೆದ ಕೋಮು ಸೌಹಾರ್ದ ರ್‍ಯಾಲಿಗಳು ಅಂಧಕಾರದಲ್ಲೂ ಆಶಾಕಿರಣಗಳಾಗಿವೆ.

❑

‘ಭಾಗವತ’ : ಒಂದು ಜನಪರ ಚಳವಳಿ

ಎಚ್.ಕೆ. ರಾಮಚಂದ್ರಮೂರ್ತಿ

ಹಿಂದೂ ಪುರಾಣ ಸಾಹಿತ್ಯ ಸಂಪದದಲ್ಲಿ ಬಹು ಪ್ರಸಿದ್ಧವಾದ ಭಾಗವತ ಪುರಾಣ ಅತ್ಯಂತ ಅರ್ವಾಚೀನವಾದುದು. ಸಾಹಿತಿಗಳು ಶತಮಾನಗಳ ಉದ್ದಕ್ಕೂ ಅದನ್ನು ಹಲವಾರು ಸಂದರ್ಭಗಳಲ್ಲಿ ಹೆಚ್ಚು ವ್ಯಾಪಕವಾಗಿ ಬಳಸಿಕೊಳ್ಳುತ್ತಾ ಬಂದಿದ್ದಾರೆ. ಆದರೆ ಈ ಪುರಾಣದ ಕಾಲ ನಿರ್ಣಯ ಮತ್ತು ಅದರ ಉಗಮದ ಬಗ್ಗೆ ಬಹಳಷ್ಟು ಭಿನ್ನಾಭಿಪ್ರಾಯಗಳಿವೆ. ಭಾಗವತ ಪುರಾಣ ಒಂದು ರೀತಿಯ ಅಸಂಗತ ಮಿಶ್ರಣವಾಗಿದ್ದು ಇದು ಕ್ರಿ.ಪೂ. 4ನೇ ಶತಮಾನದಷ್ಟು ಹಿಂದೆಯೇ ಉಪಲಬ್ಧವಿತ್ತೆನ್ನುತ್ತಾರೆ. ಇವು ಒಂದನೆಯ ಸಹಸ್ರಮಾನ (ಅಂದರೆ ಕ್ರಿ.ಶ. 1000)ದವರೆಗೆ ರಚಿತವಾಗುತ್ತಲೇ ಇದ್ದವೆಂದು ಕಾಣುತ್ತದೆ. ಇಂಥ ಹಳೆಯ ಪುರಾಣಗಳು ನಾನಾ ರಾಜವಂಶಗಳ ದಾಖಲುಗಳೂ, ವಂಶಾವಳಿ ಕಥನಗಳ, ಆಖ್ಯಾನ ಉಪಾಖ್ಯಾನಗಳ ಆಕರಗಳೂ ಆಗಿದ್ದವು. ಲೋಕದ ಸೃಷ್ಟಿ, ಮಾನವ ಕೋಟಿಯ ಹುಟ್ಟು-ಬೆಳವಣಿಗೆ ಮುಂತಾದ ವಿಷಯಗಳು ಈ ಸಾಹಿತ್ಯ ರಾಶಿಯಲ್ಲಿ ಹೇರಳವಾಗಿ ಕಾಣಸಿಗುತ್ತವೆ. ಈ ಪುರಾಣಗಳನ್ನು ಬಹುಕಾಲ ‘ಸೂತರು’ ಅಥವಾ ಗಾಯಕ ಕವಿಗಳು ಜೋಪಾನವಾಗಿ ರಕ್ಷಿಸಿಕೊಂಡು ಬಂದರು. ಕ್ರಿಶ್ಚಿಯನ್ ಯುಗದ ಪ್ರಾರಂಭದಲ್ಲಿ ಈ ಪುರಾಣಗಳನ್ನು ಶೈವರು, ವೈಷ್ಣವರು ತಮ್ಮ ತಮ್ಮ ಧಾರ್ಮಿಕ ತತ್ತ್ವ ವಿಚಾರಗಳನ್ನು ಜನಪ್ರಿಯಗೊಳಿಸಲು ಪ್ರಚಾರ ಮಾಧ್ಯಮವಾಗಿ ಬಳಸಿಕೊಂಡರು. ಅದೇ ಕಾಲದ ಸುಮಾರಿನಲ್ಲಿ ಈ ವಿವಿಧ ಧಾರ್ಮಿಕ ಗುಂಪಿನವರೇ ರಾಮಾಯಣ-ಮಹಾಭಾರತಗಳಲ್ಲಿ ಸಹ ತಮಗೆ ಅಗತ್ಯವೆನಿಸಿದ ಮಾರ್ಪಾಡುಗಳನ್ನು ರೂಪಿಸಿಕೊಂಡರು.

ಆಮೇಲಿನ ಶತಮಾನಗಳ ಅವಧಿಯಲ್ಲಿ ಇವರುಗಳು ಹಳೆಯ ಪುರಾಣ ವಸ್ತುಗಳನ್ನು ಹಂದರವಾಗಿಟ್ಟುಕೊಂಡು ಅವುಗಳ ಒಟ್ಟಂದದ ಸ್ವರೂಪ ಬದಲಾಯಿಸದೆ ಬೇರೆ ಬೇರೆ ಪುರಾಣಗಳನ್ನು ರಚಿಸಿದರು. ಅದೇ ವಸ್ತು, ರಚನಾ ಸ್ವರೂಪ, ಆದರೆ ಬದಲಾದ ದೃಷ್ಟಿಕೋನಗಳು - ಹೀಗೆ ಸುಮಾರು 10ನೇ ಶತಮಾನದ ವೇಳೆಗೆ ಶೈವ, ವೈಷ್ಣವ ಎಂದು ಸ್ಪಷ್ಟವಾಗಿ ಗುರುತಿಸಬಲ್ಲ 18-19 ಪುರಾಣಗಳು ಸೃಷ್ಟಿಯಾದವು. ಇವು ಬೇರೆ ಬೇರೆ ಕಾಲದ ಹತ್ತು ಹಲವು ಮೂಲಗಳಿಂದ ಎತ್ತಿಕೊಂಡ ವಸ್ತು-ವಿಚಾರಗಳನ್ನೊಳಗೊಂಡ ವಿಶ್ವಕೋಶಗಳಂತಾದವು. ಹಿಂದೂ ಧರ್ಮದ ಪರಿಧಿಯೊಳಗೆ ಸೃಷ್ಟಿಯಾದ ವೈವಿಧ್ಯಮಯ ದಾಖಲುಗಳಾದವು.

ಇವುಗಳಲ್ಲಿ ಮುಖ್ಯವಾದ ಬಾಗವತ ಪುರಾಣವು ಒಂದು ಅವಧಿಯ ವಿಶಿಷ್ಟ ಗುಂಪಿನ ವಿಚಾರಧಾರೆಯನ್ನು ಪ್ರತಿಪಾದಿಸುವ, ಅತ್ಯಂತ ಸಮವಾಯ ಸ್ವರೂಪದ ರಚನೆಯಾಗಿದೆ. ಈ ಕಾರಣದಿಂದಲೇ ಅದು ಮೌಲಿಕವಾದ ಐತಿಹಾಸಿಕ ದಾಖಲು ಎನಿಸಿಕೊಂಡಿದೆ.

ಭಾಗವತ ಪುರಾಣದ ಕಾಲ ಇನ್ನೂ ಸ್ಪಷ್ಟವಾಗಿ ನಿರ್ಣಯವಾಗಿಲ್ಲ. ಕ್ರಿ.ಶ. 1030ರಲ್ಲಿ ರಚಿತವಾದ ಆಲ್‌ಬರೂನಿಯ ಹಿಂದೂ ಪುರಾಣಗಳ ಯಾದಿಯಲ್ಲಿ ಅದನ್ನು ಸೇರಿಸಲಾಗಿದೆ. ಆದ್ದರಿಂದ ಅದು ಕ್ರಿ.ಶ. 1030ರ ಹಿಂದೆಯೇ ಉಪಲಬ್ಧವಿರಬೇಕು. 'ಹರಿವಂಶ' 'ವಿಷ್ಣು ಪುರಾಣ'ಗಳಿಗಿಂತ ಅದರಲ್ಲಿ ಕೃಷ್ಣನ ಜೀವನ ಚರಿತ್ರೆ ಕುರಿತು ಹೆಚ್ಚು ವಿವರಗಳಿವೆ. 'ಹರಿವಂಶ' 'ವಿಷ್ಣು ಪುರಾಣ'ಗಳೆರಡೂ ಕ್ರಿ.ಶ. 3-4ನೇ ಶತಮಾನಗಳಿಗಿಂತ ಹಿಂದಿನವು. ಆದ್ದರಿಂದ ಭಾಗವತ ಪುರಾಣ ಕ್ರಿ.ಶ. 500ಕ್ಕಿಂತ ಹಿಂದಿನದೂ ಅಲ್ಲ, ಕ್ರಿ.ಶ. 950ಕ್ಕಿಂತ ಈಚಿನದೂ ಅಲ್ಲವೆಂಬುದು ಸ್ಪಷ್ಟವಾಗುತ್ತದೆ. ಆರ್.ಸಿ. ಹಜ್ರಾ, ಎಫ್.ಇ. ಪರ್ಗಿಟರ್, ಜೆ.ಎಸ್. ಫಾರ್ಕುಹರ್, ಸಿ.ವಿ.ವೈದ್ಯ, ಕೆ.ಎ. ನೀಲಕಂಠ ಶಾಸ್ತ್ರಿ, ಎಂ. ವಿಂಟರ್‌ನಿಟ್ಸ್ ಮುಂತಾದ ಪುರಾತತ್ವ ಶಾಸ್ತ್ರಜ್ಞರ ಅಭಿಪ್ರಾಯಗಳೆಲ್ಲವನ್ನೂ ಕ್ರೋಡೀಕರಿಸಿ ಹೇಳುವುದಾದರೆ, ಭಾಗವತ ಪುರಾಣ ಕ್ರಿ.ಶ. ಹತ್ತನೆಯ ಶತಮಾನದಲ್ಲಿ ರಚಿತವಾಗಿರಬಹುದೆಂಬ ಊಹೆ ಸಾಧಾರವೆನ್ನಬಹುದು.

ಭಾಗವತ ಪುರಾಣ ಎಲ್ಲಿ, ಭಾರತದ ಯಾವ ಪ್ರದೇಶದಲ್ಲಿ ರಚಿತವಾಯಿತೆಂಬ ವಿಷಯದಲ್ಲಿ ಮಾತ್ರ ವಿದ್ವಾಂಸರ ನಡುವೆ ಹೆಚ್ಚು ಒಮ್ಮತವಿದ್ದಂತೆ ತೋರುತ್ತದೆ. ಫಾರ್ಕುಹರ್ 'ಭಾಗವತ ಮಹಾತ್ಮ್ಯ'ದ ಕೆಲವು ವಾಕ್ಯಗಳಲ್ಲಿ ಹಾಗೂ ಅದರ ಅನುಬಂಧದಲ್ಲಿ, ದ್ರಾವಿಡ ನಾಡಿನವರ ಭಕ್ತಿಯ ಉಜ್ವಲ ಸ್ವರೂಪವನ್ನು ಕಾಣಬಹುದು' ಎಂದು ಪ್ರಶಂಸೆ ಮಾಡಿದ್ದಾರೆ. ಜತೆಗೆ, ತಮಿಳುನಾಡಿನ ಆಳ್ವಾರುಗಳ ಭಕ್ತಿಪಂಥದ ಆಧ್ಯಾತ್ಮಿಕ ಚಟುವಟಿಕೆಗಳನ್ನು ಗಮನಿಸಿದಲ್ಲಿ ಇದು ತಮಿಳರ ಭಾಗವತ ಸಂಪ್ರದಾಯದಿಂದಲೇ ರಚಿತವಾಗಿರಬೇಕೆಂಬುದು ನಿಸ್ಸಂದೇಹವೆನ್ನುತ್ತಾರೆ. ಇದರಲ್ಲಿ ದಕ್ಷಿಣ ಭಾರತದ ಧರ್ಮಕ್ಷೇತ್ರಗಳ, ಸಂಸ್ಕೃತಿ, ಚರಿತ್ರೆ ಇತ್ಯಾದಿಗಳ ವಿವರಗಳಿರುವುದರಿಂದ ಭಾಗವತ ಪುರಾಣದ ಕರ್ತೃ ದ್ರಾವಿಡ ನಾಡಿನವರೇ ಆಗಿರಬೇಕೆಂಬ ವಾದ ಇದಕ್ಕೆ ಪುಷ್ಟಿ ಒದಗಿಸುತ್ತದೆ. ಡಾ. ರಾಧಾ ಕಮಲ ಮುಖರ್ಜಿ ಭಾಗವತ ಪುರಾಣವು ದಕ್ಷಿಣ ಭಾರತದ ಆಳ್ವಾರುಗಳ, ಆಚಾರ್ಯರುಗಳ, ಭಕ್ತಿಪಂಥದ ಸಂಪ್ರದಾಯದಿಂದಲೇ ಹೊಮ್ಮಿತೆನ್ನುತ್ತಾರೆ. ದಕ್ಷಿಣ ಭಾರತದಲ್ಲಿ ಭಾಗವತ ರಚನೆಗಿಂತ ಹಿಂದಿನಿಂದಲೂ ಕೃಷ್ಣಾರಾಧನೆ

ಪ್ರಚಲಿತವಾಗಿತ್ತೆಂದು ಹೇಳಿ, ಇದು ಪಾಂಡ್ಯ ರಾಜ್ಯದಲ್ಲಿ ಅಥವಾ ಕಾಂಚಿಪುರದ ಆಸುಪಾಸಿನಲ್ಲಿ ರಚಿತವಾಗಿರಬೇಕೆಂಬ ನಿರ್ಧಾರಕ್ಕೆ ಬರುತ್ತಾರೆ. ಈ ಯಾವುದೇ ಅಭಿಪ್ರಾಯಕ್ಕೂ ಹೆಚ್ಚು ಗಟ್ಟಿಭದ್ರ ಸಾಕ್ಷ್ಯಾಧಾರಗಳಿಲ್ಲವಾದರೂ ಭಕ್ತಿಪಂಥವು ಉತ್ತರ ಭಾರತದ ಉಳಿದೆಡೆ ತೀರಾ ತಡವಾಗಿ ಪ್ರಚಾರಕ್ಕೆ ಬಂತೆಂಬುದನ್ನು ಅವರು ಮುಖ್ಯವಾಗಿ ಗಮನಿಸುತ್ತಾರೆ. ಇದರಲ್ಲಿ ಶಂಕರಾಚಾರ್ಯರು ಪ್ರತಿಪಾದಿಸಿದ ಅದ್ವೈತ ವಿಚಾರಗಳಿವೆ ಎಂಬುದನ್ನು ಒಪ್ಪದ ವಿದ್ವಾಂಸರು ಅದ್ವೈತ ವೇದಾಂತ ಹಾಗೂ ಭಾಗವತ ಪುರಾಣಗಳೆರಡರ ಮೇಲೆಯೂ ಬೌದ್ಧತತ್ವಗಳು ಪ್ರಭಾವ ಬೀರಿರುವ ಸಾಧ್ಯತೆಯನ್ನು ಅವರು ಸೂಚಿಸುತ್ತಾರೆ.

ಭಾಗವತದಲ್ಲಿ ಅಭಿವ್ಯಕ್ತವಾಗಿರುವ ಅತ್ಯಂತ ಗಮನಾರ್ಹ ಅಂಶ : ಅದು ಭಕ್ತಿಮಾರ್ಗದ ಶ್ರೇಷ್ಠತೆಯನ್ನು ಒತ್ತಿ ಹೇಳುತ್ತದೆ. ವಿಷ್ಣುವಿನ ದಶಾವತಾರಗಳಲ್ಲೊಂದಾದ ಕೃಷ್ಣಾವತಾರವನ್ನು ಕುರಿತ ಭಕ್ತಿ ಪ್ರತಿಪಾದನೆ ಭಾಗವತದ ಮುಖ್ಯ ಉದ್ದೇಶ. ಕೃಷ್ಣನನ್ನು 'ವಾಸುದೇವ', 'ಹರಿ', 'ಮುಕುಂದ', 'ಅಚ್ಯುತ', 'ಭಗವಾನ್' ಎಂಬಿತ್ಯಾದಿ ಹೆಸರುಗಳಿಂದ ಕರೆಯಲಾಗಿದ್ದು, ಭಕ್ತಿ ಎಂಬುದು ವೈಷ್ಣವ ಪಂಥಕ್ಕೆ ಹೊಸದೇನೂ ಅಲ್ಲ. ಭಗವದ್ಗೀತೆ ಮತ್ತಿತರ ಪ್ರಾಚೀನ ಗ್ರಂಥಗಳಲ್ಲಿ ಇದಕ್ಕೆ ಪ್ರಬಲ ಸಮರ್ಥನೆ ಉಂಟಷ್ಟೆ. ಕರ್ಮಮಾರ್ಗ, ಜ್ಞಾನಮಾರ್ಗಗಳ ಜತೆಯಲ್ಲಿ ಭಕ್ತಿಮಾರ್ಗವೂ ಒಂದು ಮೋಕ್ಷ ಸಾಧನೆಯಷ್ಟೆ. ಹಿಂದಿನ ಗ್ರಂಥಗಳಲ್ಲಿ ಭಕ್ತಿ ಎಂಬುದು ಒಂದು ತಪಸ್ಸು ಅಥವಾ ಭಗವಂತನನ್ನು ಕುರಿತ ಧ್ಯಾನ. ಆದರೆ ಭಾಗವತದಲ್ಲಿ, ಆಳ್ವಾರುಗಳ ಪ್ರಬಂಧಗಳಲ್ಲಿರುವಂತೆ, ಭಕ್ತಿಯೊಂದೇ ಮುಖ್ಯ ಹಾಗೂ ಭಗವಂತನ ಸಂಬಂಧದಲ್ಲಿ ಪ್ರಪತ್ತಿಯೊಂದೇ ಮೋಕ್ಷಕ್ಕೆ ಸಾಧನ..... ಭಾಗವತ ಪುರಾಣದ ಮೂರನೆಯ ಸ್ಕಂದದ 29ನೆ ಭಾಗದಲ್ಲಿ ಬರುವ ಭಕ್ತಿಯೋಗ ಕುರಿತ ಮಾತುಗಳೆಲ್ಲವೂ ಭಗವದ್ಗೀತೆಯ ಈ ಶ್ಲೋಕ ತಾತ್ಪರ್ಯದ ಪ್ರತಿಧ್ವನಿಯಂತಿವೆ:

'ನನ್ನನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ ಜನ್ಮ, ಮೃತ್ಯು, ಮುಪ್ಪು ಇವುಗಳ ದುಃಖಗಳನ್ನು ದಾಟಿ ಅಮೃತತ್ವ ಪಡೆಯಬೇಕು; ಇದೇ ಭಕ್ತಿಯೋಗ ಅಥವಾ ಆತ್ಯಂತಿಕ (ಚಿರಂತನ, ಅಂತ್ಯರಹಿತ) ಸ್ಥಿತಿ.'

ಭಕ್ತ ಅಥವಾ ಭಾಗವತನ ಲಕ್ಷಣಗಳನ್ನು ವಿವರಿಸುವ ಇನ್ನೊಂದು ಭಾಗದಲ್ಲಿಯೂ ಭಕ್ತಿಯ ವಿಶ್ಲೇಷಣೆ ಇದೆ. ಭಾಗವತನೆಂದರೆ 'ಯಾವನು ಭಗವತ್ ಸೃಷ್ಟಿಯ ಸರ್ವಜೀವಿಗಳನ್ನೂ ಪ್ರೀತಿಸುವನೋ ಅವನು ಎಲ್ಲದರಲ್ಲೂ ಭಗವಂತನ ಸೃಷ್ಟಿಯ ಸ್ವರೂಪವನ್ನು ಕಾಣುವನು. ಯಾರು ಇಂದ್ರಿಯಗಳ ಮೂಲಕ ಭಗವಂತನ ಎಲ್ಲಾ ಸೃಷ್ಟಿಯನ್ನು ಗ್ರಹಿಸುತ್ತಾ ಮಮಕಾರಗಳಿಂದ ಮುಕ್ತನೋ, ರಾಗದ್ವೇಷಗಳನ್ನು ವರ್ಜಿಸಿ ಸೃಷ್ಟಿಯೆಲ್ಲವೂ ಭಗವಂತನ ಮಾಯೆ ಎಂಬುದನ್ನು ಅರ್ಥಮಾಡಿಕೊಳ್ಳುವನೋ ಅವನೇ ಅತ್ಯಂತ ಶ್ರೇಷ್ಠ ಭಾಗವತ.'

'ಯಾರು ಹರಿನಾಮ ಸ್ಮರಣೆ ಮಾಡುತ್ತಾ, ಇಹಲೋಕದ ಹಸಿವು, ಆಸೆ, ನೋವು, ಚಿಂತೆ, ಹುಟ್ಟು, ಸಾವುಗಳಿಂದ ಭವಭಯಗಳಿಂದ ವಿಚಲಿತನಾಗದಿರುವನೋ ಅವನೇ ನಿಜವಾದ ಭಾಗವತ.'

'ಯಾರು ಭಗವಾನ್ ವಾಸುದೇವನನ್ನು ಕುರಿತು ಏಕಾಗ್ರಚಿತ್ತನಾಗಿರುವನೋ, ಯಾವನಲ್ಲಿ ಆಸೆ ಆತಂಕಗಳಿಲ್ಲವೋ ಅವನೇ ಉತ್ತಮೋತ್ತಮ ಭಾಗವತ'.

'ಯಾರು ಶಾಂತಚಿತ್ತನಾಗಿ, ಸಕಲ ಜೀವಿಗಳನ್ನೂ ಸಮಾನರೆಂದು ಭಾವಿಸಿ, 'ನನ್ನದು-ನನ್ನದಲ್ಲ' ಎಂಬ ಭೇದ ಭಾವಗಳನ್ನು ತೊರೆಯುವನೋ ಅವನೇ ನಿಜವಾದ ಭಾಗವತ. ಅವನಿಗೆ ಭಕ್ತಿಯೊಂದೇ ಸತ್ಯ, ಮಿಕ್ಕುದೆಲ್ಲವೂ ಮಿಥ್ಯ.'

ಹೀಗೆ ಸರ್ವತೋಮುಖವಾದ ಭಕ್ತಿಯ ಸ್ವರೂಪವನ್ನು ಕುರಿತ ವಿಚಾರ ಸಂಹಿತೆಯೇ ಭಾಗವತದಲ್ಲಿ ಅಭಿವ್ಯಕ್ತವಾಗಿರುವ ಧರ್ಮ. ಭಗವಂತ-ಭಕ್ತರ ನಡುವಣ ಭಾವುಕ-ಆಧ್ಯಾತ್ಮಿಕ ಸಂಬಂಧವನ್ನು ಕುರಿತ ವಿಚಾರಧಾರೆ ಭಾಗವತದ ಉದ್ದಕ್ಕೂ ತುಂಬಿ ಹರಿಯುತ್ತದೆ. ಈ ಭಕ್ತಿಯ ಗುಣವಿಶೇಷಗಳೆಂದರೆ : ಮೂರ್ತಿಪೂಜೆ, ವ್ರತಾಚಾರಣೆ, ಆರಾಧನೆ, ಷೋಡಶೋಪಚಾರ ಪೂಜೆಗಳು, ಸಂಕೀರ್ತನೆ, ನೃತ್ಯ ಗೀತಾದಿಗಳು, ಪುರಾಣ, ಪುಣ್ಯ ಕಥಾಶ್ರವಣ ಇತ್ಯಾದಿ. ಇದಕ್ಕಾಗಿಯೇ ಸ್ಥಾಪಿತವಾದ ದೇವಾಲಯ ಮಂದಿರಗಳಲ್ಲಂತೂ ಈ ವ್ರತಾದಿಗಳು ಸಾಂಗೋಪಾಂಗವಾಗಿ ನೆರವೇರುತ್ತವೆ. ಭಕ್ತ ತನ್ನನ್ನು ಭಗವಂತನ ಸೇವೆಗೆ ಅರ್ಪಿಸಿಕೊಳ್ಳುವಾಗ ಅವನಿಗೆ ಯಾವ ಲೋಭ ಮೋಹಗಳಿರುವುದಿಲ್ಲ. ಇದು ನಿಷ್ಕಾಮ ಕರ್ಮದ ಒಂದು ಖಚಿತ ರೂಪ.

ಭಕ್ತಿಪಂಥದ ಮುಖ್ಯ ಅಂಶವೆಂದರೆ : ಇದರಲ್ಲಿ ಜಾತಿ ಮತ ಭೇದಗಳ ಉಪಾಧಿ ಇಲ್ಲ, ಬಡವ ಬಲ್ಲಿದರೆಂಬ ತಾರತಮ್ಯವಿಲ್ಲ. ಇದೇ ರೀತಿಯಲ್ಲಿ ಭಾಗವತ ಧರ್ಮದ ಎರಡು ಪ್ರಧಾನ ವಿಚಾರಗಳು ನಮ್ಮ ಗಮನ ಸೆಳೆಯುತ್ತವೆ. ವೈದಿಕ ಸಂಪ್ರದಾಯ ನಿಷ್ಠೆ, ಧಾರ್ಮಿಕ ವಿಧಿ ಪ್ರಕ್ರಿಯೆ ಇತ್ಯಾದಿಗಳಿಗೆ ಇಲ್ಲಿ ಅವಕಾಶವಿಲ್ಲ. ಶ್ರೇಣೀಕೃತ ಸಮಾಜದ ಜಾತಿಮತಗಳು ವಿಧಿಸುವ ಮೇಲು-ಕೀಳುಗಳೆಂದ ಸಂಕುಚಿತ ಭಾವಗಳಿಲ್ಲ. ಅಷ್ಟೆ ಅಲ್ಲ, ವೈದಿಕ ಧರ್ಮವನ್ನು ನೇರವಾಗಿ ವಿರೋಧಿಸದಿದ್ದರೂ, ಅದು ವೈದಿಕ ಧರ್ಮದ ಲೋಪದೋಷಗಳನ್ನು ಎತ್ತಿ ತೋರಿಸಿ ಭಕ್ತಿಯ ಪಾರಮ್ಯವನ್ನು ಸಮರ್ಥಿಸಲು ಹಿಂಜರಿಯುವುದಿಲ್ಲ.

ಈ ಟೀಕೆ, ವೇದಗಳಿಗೆ ಮಾತ್ರ ಸೀಮಿತವಾಗುವುದಿಲ್ಲ. ಮಹಾಭಾರತ ಹಾಗೂ ಅಂದಿನ ಇತರ ಪುರಾಣಗಳಲ್ಲಿ ಭಗವಂತನ ಮಹಿಮೆಯನ್ನು ಸಾಕಷ್ಟು ಕೀರ್ತಿಸದಿರುವುದಕ್ಕಾಗಿ ಅವುಗಳನ್ನು ಕುರಿತ ಟೀಕೆಗಳೂ ಕಾಣಸಿಗುತ್ತವೆ. (ನೋಡಿ: ಭಾಗವತ ಪುರಾಣ 15, 8-11) ಕೃಷ್ಣ ಹೇಳುತ್ತಾನೆ: "ನನ್ನ ಅವತಾರದ ಉದ್ದೇಶ, ಲೋಕವನ್ನು ಪರಿಶುದ್ಧಗೊಳಿಸುವ ಅಗತ್ಯ, ಸೃಷ್ಟಿ ಸ್ಥಿತಿ ಲಯಗಳೆಂಬ ನನ್ನ ಕಾರ್ಯ ವ್ಯವಸ್ಥೆ, ಇವುಗಳನ್ನು ಔಚಿತ್ಯಪೂರ್ಣವಾಗಿ ವಿಶ್ಲೇಷಿಸದ ಪೊಳ್ಳು ಮಾತುಗಳಿಗೆ ವಿವೇಕಿಯಾದ ನನ್ನ ಭಕ್ತನು ಬೆಲೆ ಕೊಡಬಾರದು. ಸಂಪ್ರದಾಯನಿಷ್ಠ ವೈದಿಕ ಧರ್ಮ ಅಕಾಲಿಕ, ನಿರರ್ಥಕ ಎಂಬ ಕಾರಣಕ್ಕಾಗಿಯೇ ಅದರ ಲೋಪದೋಷಗಳನ್ನು ತಿದ್ದುವಂಥ ವೈಚಾರಿಕತೆ ಅತ್ಯಗತ್ಯ. 'ಹರಿಯನ್ನು ನೆನೆಯದ ಶೃತಿ-ಸ್ಮೃತಿಗಳಿಂದೇನು ಲಾಭ? ಯೋಗ, ಸಾಂಖ್ಯ ಅಥವಾ ಲೋಕ ವಿರಕ್ತಿ ಕೇವಲ ಸ್ವಪ್ರಯೋಜನಕ್ಕಾಗಿ ಎಸಗುವ ವೇದ ಪಠಣಗಳಿಂದ

ಏನು ಪ್ರಯೋಜನ? ಭಗವದನುಗ್ರಹಕ್ಕೆ ಪಾತ್ರನಾದವನಿಗೆ ಇವುಗಳ ಅಗತ್ಯವಾದರೂ ಏನು?' (IV 31, 11-12)

'ಅಪಾರ ಜ್ಞಾನ, ಧ್ಯಾನ ಹಾಗೂ ಧಾರ್ಮಿಕ ವ್ರತಾಚರಣೆಗಳ ಮೂಲಕ ಬಹುಕಾಲದಿಂದ ಭಗವಂತನ ಸಾಕ್ಷಾತ್ಕಾರಕ್ಕೆಳಸುತ್ತಿರುವ ವಚನಶೂರರಿಗೆ ಸರ್ವಜ್ಞನೂ ಸರ್ವಶಕ್ತನೂ ಆದ ಅವನು ಎಟಕುತ್ತಿಲ್ಲ. ಅತ್ಯಂತ ವಿಸ್ತಾರವೂ ದುರ್ಗಮವೂ ಆದ ವೇದಗಳನ್ನು ಅಧ್ಯಯನ ಮಾಡುತ್ತಾ ಪೂಜನೀಯ ಗ್ರಂಥಗಳನ್ನು ಆಧರಿಸಿ ಭಗವಂತನನ್ನು ಆರಾಧಿಸುವವರಿಗೂ ಸಹ ಅವನು ದಕ್ಕುತ್ತಿಲ್ಲ. ಸ್ವಯಂಭುವಾದ ಭಗವಂತನ ಕೃಪೆಗೆ ಪಾತ್ರನಾದವನಿಗೆ ಲೌಕಿಕ ಅಥವಾ ವೈದಿಕ ವಿಚಾರಗಳ ಅಗತ್ಯವಿಲ್ಲ.'

ಇದನ್ನು ಶ್ರೀಕೃಷ್ಣ ಇನ್ನಷ್ಟು ನಿರ್ಣಾಯಕವಾಗಿ ಘೋಷಿಸುತ್ತಾನೆ. 'ನಾನು ಭಕ್ತಿಗೆ ಮಾತ್ರ ಮಣಿಯುತ್ತೇನೆ; ನಾನು ಸತ್ಪುರುಷರ ಆಪ್ತ. ನನ್ನ ಮೇಲಿನ ಭಕ್ತಿಯು ಶ್ವಪಾಕರನ್ನು ಅವರ ಪಾಪದಿಂದ ಬಿಡುಗಡೆ ಮಾಡುತ್ತದೆ..... ಸತ್ಯ, ಕರುಣೆ, ಜ್ಞಾನಗಳಿಂದಲೂ ವ್ರತಾಚರಣೆಗಳಿಂದ ಕೂಡಿದ ಧರ್ಮವೂ ಸಹ ಭಕ್ತಿಹೀನನ ಆತ್ಮವನ್ನು ಪರಿಶುದ್ಧಗೊಳಿಸದು'.

ಹೀಗೆ ಭಾಗವತವು ಭಕ್ತಿಮಾರ್ಗ ಮತ್ತು ವೈದಿಕ ಅಥವಾ ಸಾಂಪ್ರದಾಯಕ ಧರ್ಮಗಳ ನಡುವಣ ಮುಖ್ಯ ವ್ಯತ್ಯಾಸಗಳನ್ನು ಗುರುತಿಸುತ್ತಾ, ಭಕ್ತಿಮಾರ್ಗ ಹೇಗೆ ಇನ್ನುಳಿದ ಪರ್ಯಾಯ ಮೋಕ್ಷ ಮಾರ್ಗಗಳಿಗಿಂತ ವಿಭಿನ್ನ ಎಂಬುದನ್ನು ಒತ್ತಿ ಹೇಳುತ್ತದೆ. ಅದು ಸಂಪ್ರದಾಯಬದ್ಧ ಧರ್ಮವನ್ನು ಟೀಕಿಸುವುದರ ಜತೆಗೆ, ಪ್ರಸ್ತುತ ಸಾಮಾಜಿಕ ಧಾರ್ಮಿಕ ವ್ಯವಸ್ಥೆಗಳನ್ನು ಅಲ್ಲಗಳೆಯುತ್ತದೆ. ಭಕ್ತಿಮಾರ್ಗದಿಂದ ಲಭಿಸುವ ಮೋಕ್ಷ ಸಾಧನೆಗೆ ವ್ಯಕ್ತಿಯ ಹುಟ್ಟು-ಜಾತಿಗಳಾಗಲಿ, ಅವನ ಸಾಮಾಜಿಕ ಸ್ಥಿತಿಗಳಾಗಲಿ ಲೆಕ್ಕಕ್ಕೆ ಬರುವುದಿಲ್ಲ. ಕೃಷ್ಣನ ಬಾಲ್ಯದಲ್ಲಿ ಗೋಕುಲದ ಗೋಪ ಗೋಪಿಯರೆಲ್ಲರೂ ಗೊಲ್ಲರ ಜಾತಿಯವರಾದರೂ ಅವನನ್ನು ಅಪಾರ ಭಕ್ತಿಯಿಂದ ಆರಾಧಿಸುತ್ತಿದ್ದರು. ಆದರೆ ಗೋಕುಲದ ಬ್ರಾಹ್ಮಣರು ಪರಬ್ರಹ್ಮ ಸ್ವರೂಪಿಯಾದ ಶ್ರೀಕೃಷ್ಣನನ್ನು ನಿರಾಕರಿಸುತ್ತಿದ್ದರು - 'ಯಾರು ಕ್ಷುದ್ರ ಚಾಪಲ್ಯಗಳನ್ನು ಬಯಸಿ ಹೆಮ್ಮೆಯಿಂದ ಬೀಗುತ್ತಿದ್ದರೋ ಅಂಥವರಿಗೆ ಭಗವಂತನ ಹಿತವಚನಗಳು ಹಿಡಿಸಲಿಲ್ಲ'. ಮಾನವ ಸ್ವರೂಪಿಯಾಗಿ ಕಾಣಿಸಿಕೊಂಡ ಅಧೋಕ್ಷಜನನ್ನು ಅವರು ಗೌರವಿಸಲಿಲ್ಲ. ಕಡು ದಾರಿದ್ರ್ಯದಿಂದ ಬಳಲುವ, ಆದರೆ ಅಪಾರ ಶ್ರದ್ಧೆಯಿಂದ ತುಂಬಿ ತುಳುಕುವ, ಭಕ್ತಜನರು ಮತ್ತು ಅಷ್ಟೈಶ್ವರ್ಯ ಸಂಪನ್ನರಾಗಿ ಉತ್ತಮ ಜಾತಿಯವರೆನಿಸಿಕೊಂಡರೂ, ಭಕ್ತಿಯನ್ನೂ ಭಕ್ತರನ್ನೂ ನಿರಾಕರಿಸುವವರು - ಈ ಇಬ್ಬರ ನಡುವಣ ವ್ಯತ್ಯಾಸವನ್ನು ಉದ್ದಕ್ಕೂ ಭಾಗವತದಲ್ಲಿ ಗುರುತಿಸಲಾಗಿದೆ.

ಐಶ್ವರ್ಯ ಗಳಿಕೆ ಮತ್ತು ಅದರ ರಕ್ಷಣೆಗಾಗಿ ತಮ್ಮ ಶಕ್ತಿ ಸಾಮರ್ಥ್ಯಗಳನ್ನೂ, ಕಾಲವನ್ನೂ ಬಳಸುವವರನ್ನು ಭಾಗವತದಲ್ಲಿ ಉಗ್ರವಾಗಿ ಖಂಡಿಸಲಾಗಿದೆ. ಐಶ್ವರ್ಯ ಭಕ್ತಿಗಳೆರಡಕ್ಕೂ ಎಷ್ಟು ಪರಸ್ಪರ ವಿರೋಧವಿದೆಯೆಂದರೆ ಕೇವಲ ಸರಳ ಜೀವಿಗೆ ಮಾತ್ರ ಪರಿಶುದ್ಧ ಭಕ್ತಿ ಸಾಧ್ಯ ಎಂಬ ಮಾತನ್ನು ಭಾಗವತ ಸ್ಪಷ್ಟವಾಗಿ ಹೇಳುತ್ತದೆ. ಕೃಷ್ಣ, ರುಕ್ಮಿಣಿಗೆ ಹೇಳುತ್ತಾನೆ : 'ನಾವು

ಬಡವರು. ಆದ್ದರಿಂದ ನಾವು ಬಡಜನರಿಗೆ ಪ್ರಿಯರಾದವರು. ಐಶ್ವರ್ಯವಂತರು ಹೆಚ್ಚಾಗಿ ನನ್ನನ್ನು ಬಯಸುವುದಿಲ್ಲ'.

ಸರಳ ಜೀವಿಯಾದವನಿಗೆ ಮಾತ್ರ ನಿಜವಾದ ದೈವಭಕ್ತಿ ಸಾಧ್ಯ ಎಂಬ ಮಾತನ್ನೇ ವಿಸ್ತರಿಸಿ ಹೇಳುತ್ತ ಕೃಷ್ಣ ಹೇಗೆ ಭಕ್ತರನ್ನು ತನ್ನಡೆಗೆ ಸೆಳೆಯುತ್ತಾನೆಂಬುದರ ರಹಸ್ಯವನ್ನು ತಿಳಿಸುತ್ತಾನೆ:

'ಯಾರು ನನ್ನ ಕೃಪೆಗೆ ಪಾತ್ರರಾಗುವರೋ ಅಂಥವರು ಮೊದಲು ಕಷ್ಟ ಕಾರ್ಪಣ್ಯಗಳಿಗೆ ಸಿಕ್ಕಿ ಅವರ ಬಳಿ ಇರುವ ಐಹಿಕ ಐಶ್ವರ್ಯವೆಲ್ಲ ಕ್ರಮೇಣ ಕರಗಿ ಹೋಗುವಂತೆ ಮಾಡುತ್ತೇನೆ; ಆಗ ಅವರ ನೆಂಟರಿಷ್ಟರೆಲ್ಲರೂ ಅವನ ಕೈ ಬಿಡುವರು.'

'ಆಗ ಅವನು ಯಾರು ಈಗಾಗಲೆ ನನ್ನ ಕೃಪೆಗೆ ಪಾತ್ರರಾಗಿರುವರೋ ಅಂಥವರ ಜತೆ ಸ್ನೇಹ ಬೆಳೆಸುತ್ತಾನೆ - ಯಾರು ಐಶ್ವರ್ಯ ಸಂಪಾದನೆಗಾಗಿ ಹೆಣಗಿ ಸೋತು ಜಿಗುಪ್ಸೆ ಪಡುತ್ತಿರುವರೋ ಅಂಥವರ ಸಹವಾಸವನ್ನು ಅವನು ಬಯಸುವಂತೆ ಮಾಡುತ್ತೇನೆ. (X, 88-8-9)

ಇದೇ ಮಾತನ್ನು ನಾರದರು ತಮ್ಮ ಯುವಕ ಶಿಷ್ಯರಿಗೆ ವಿವರಿಸುತ್ತಾ 'ಐಶ್ವರ್ಯ ವ್ಯಾಮೋಹದಿಂದ ಕಣ್ಣಿಲ್ಲದಂತಾಗಿರುವವನು ತನ್ನ ಹಾಗೆ ದುಃಖದಿಂದ ನರಳುವವರ ಬಗ್ಗೆ ಅನುಕಂಪ ತೋರಿಸುವಂತಾಗುತ್ತಾನೆ.

'ದೇಹಕ್ಕೆ ಮುಳ್ಳು ಚುಚ್ಚಿ ಯಾತನೆ ಪಡುವವನು ಇತರರಿಗೆ ಯಾತನೆಯನ್ನುಂಟು ಮಾಡ ಬಯಸುವುದಿಲ್ಲ. ತನಗಾಗುತ್ತಿರುವ ನೋವಿನಿಂದ ಇತರರ ನೋವನ್ನು ಅರ್ಥಮಾಡಿಕೊಳ್ಳುವುದು ಅವನಿಗೆ ಸಾಧ್ಯವಾಗುತ್ತದೆ.... ಎಂದೂ ನೋವನ್ನು ಅನುಭವಿಸದವನಿಗೆ ಇತರರ ನೋವು ಅರ್ಥವಾಗುವುದಾದರೂ ಹೇಗೆ?

'ಐಶ್ವರ್ಯವೆಲ್ಲವನ್ನೂ ಕಳೆದುಕೊಂಡವನು ತನ್ನ ಅಹಂಕಾರ, ರಾಗ ದ್ವೇಷಗಳನ್ನು ತ್ಯಜಿಸುವಂತಾಗುತ್ತದೆ; ಕಡು ಕ್ರೂರ ಕಷ್ಟಗಳಿಗೆ ತುತ್ತಾದಾಗಲೇ, ಅವನಲ್ಲಿ ನಿಜವಾದ ಪಾರಮಾರ್ಥಿಕ ಪ್ರಜ್ಞೆಯುಂಟಾಗುತ್ತದೆ.'

'ಐಶ್ವರ್ಯ ಮದದಿಂದ ಮೆರೆಯುತ್ತಾ, ಇನ್ನಷ್ಟು ಹಣಕ್ಕಾಗಿ ಹೋರಾಡುತ್ತ, ಸರಳ ಜೀವಿಗಳನ್ನೂ, ಸಾತ್ವಿಕ ಜನರನ್ನೂ ಕಣ್ಣೆತ್ತಿ ನೋಡದಿರುವವನಿಗೆ ಮುಕುಂದನ ಪಾದಗಳ ಸ್ಮರಣೆಯುಂಟಾಗುವುದಾದರೂ ಹೇಗೆ?' (X, 10, 13-18)

ಭಾಗವತದಲ್ಲಿ ಈ ರೀತಿಯ ಖಂಡನೆ ಕೇವಲ ಹಣಕ್ಕಾಗಿ ಬಾಯಿ ಬಾಯಿ ಬಿಡುವ ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗಿಲ್ಲ. ಅಂಥ ವ್ಯಕ್ತಿಗಳಿಗೆ ಪ್ರೋತ್ಸಾಹ, ಆಶ್ರಯಗಳನ್ನು ಕೊಡುವ ಸಂಸ್ಥೆ-ವ್ಯವಸ್ಥೆಗಳನ್ನೂ ಅತ್ಯುಗ್ರವಾಗಿ ಖಂಡಿಸಲಾಗಿದೆ. ಇಂತಹ ಒಂದು ದುಷ್ಟ ವ್ಯವಸ್ಥೆ ಜಾತಿ, ಮತ ಪದ್ಧತಿ. ವ್ಯಕ್ತಿಯ ಯೋಗ್ಯತೆಯನ್ನು ಅವನ ಕುಲ, ಹುಟ್ಟು ಇವುಗಳ ಮೇಲೆ ನಿರ್ಧರಿಸುವ ಅಮಾನುಷ ವ್ಯವಸ್ಥೆ. ಅಂದರೆ ವರ್ಣಾಶ್ರಮ ಧರ್ಮವನ್ನು ಕುರಿತ ನೇರವಾದ ಟೀಕೆ, ಖಂಡನೆ

ಭಾಗವತದಲ್ಲಿ ಬರುವುದಿಲ್ಲವಾದರೂ ಕೇವಲ ಹುಟ್ಟಿನಿಂದ ಒಬ್ಬ ವ್ಯಕ್ತಿಯ ಗುಣಾವಗುಣಗಳು ಉದ್ಭವಿಸುತ್ತವೆಂಬ ಮಾತನ್ನು ಅದು ಒಪ್ಪಿಕೊಳ್ಳುವುದಿಲ್ಲ. ಕೆಲವೊಮ್ಮೆಯಂತೂ, 'ಮಹಾಭಾರತ'ದಲ್ಲಿ ಬರುವ ವರ್ಣಾಶ್ರಮ ಧರ್ಮದ ಉಲ್ಲೇಖಗಳ ಪ್ರಭಾವವನ್ನೇ ಅಲ್ಲಲ್ಲಿ ಗುರುತಿಸಬಹುದು. ಜತೆಗೆ ವರ್ಣಾಶ್ರಮ ಧರ್ಮವನ್ನು, ಭಕ್ತಿಪಂಥದ ಸೂತ್ರಗಳನ್ನು ಸಮನ್ವಯಗೊಳಿಸುವ ಪ್ರಯತ್ನಗಳು ಇಲ್ಲಿ ಗೋಚರಿಸುತ್ತವೆ. ಆದರೆ ಭಗವದ್ಭಕ್ತಿಯುಳ್ಳ ಬ್ರಾಹ್ಮಣರನ್ನು ಪ್ರಶಂಸಿಸುವಲ್ಲಿ 'ಅಂಥವರು ಸದಾಚಾರ ಸಂಪನ್ನರೂ, ಸಜ್ಜನರೂ, ಆಗಿದ್ದು ಸುಳ್ಳು ತಟವಟ, ಮಾತ್ಸರ್ಯ, ದ್ವೇಷ, ದುರಹಂಕಾರ, ಹಿಂಸಾ ಪ್ರವೃತ್ತಿಗಳ ಸೋಂಕಿಲ್ಲದವರಾಗಿರಬೇಕು' ಎಂದು ಸ್ಪಷ್ಟವಾಗಿ ಹೇಳುತ್ತದೆ. (X 7, 13).

ಸತ್ಕುಲ ಪ್ರಸೂತರಾದರೂ ಆಚಾರ ಹೀನರಾದ ಜನರಿಗೂ ಭಗವದ್ಭಕ್ತರಾದ ಜನಸಾಮಾನ್ಯರಿಗೂ ಇರುವ ವೈದೃಶ್ಯವನ್ನು ಅಲ್ಲಲ್ಲಿ ಕಾಣಬಹುದು. ಅಂತ್ಯಜರೆನಿಸಿಕೊಂಡವರ ಪರಿಶುದ್ಧ ನಡವಳಿಕೆ, ನಮ್ರತೆ, ಸತ್ಯಸಂಧತೆ, ಸ್ವಾಮಿಭಕ್ತಿ ಇವುಗಳನ್ನು ಕುರಿತ ಮಾತುಗಳು ಮತ್ತೆಮತ್ತೆ ಬರುತ್ತವೆ. (VII, 11, 24) (VII, 9, 9-10)

ವ್ಯಕ್ತಿಯ ಹುಟ್ಟಿಗೂ ಅವನ ಸಜ್ಜನತೆ, ಭಕ್ತಿಭಾವಗಳಿಗೂ ಯಾವ ಸಂಬಂಧವೂ ಇಲ್ಲವೆಂಬ ಮಾತನ್ನು ನಾರದರು ತಮ್ಮ ಧರ್ಮಸೂತ್ರಗಳ ಮೂಲಕ ಉದಾಹರಿಸುತ್ತಾರೆ. (VII, 11,8 12) ಅವರು ವಿವಿಧ ವರ್ಣಗಳಿಗೆ ಸೇರಿದ ಜನರ ವಿಶೇಷ ಗುಣಗಳನ್ನು ವಿಶ್ಲೇಷಿಸುತ್ತಾ ಅತ್ಯಂತ ಕೆಳ ವರ್ಗದವರೂ ಸಹ (ಆಳುವ ವರ್ಗವನ್ನುಳಿದು) ಬೇರೆ ಯಾವುದೇ ವರ್ಗದ ಜನರ ಕಸುಬನ್ನು ಕೈಕೊಳ್ಳಬಹುದು ಎನ್ನುತ್ತಾರೆ. (VII, 11-17)

ಭಾಗವತದಲ್ಲಿ ನೇರವಾಗಿ ಭಕ್ತನನ್ನು ಅವನ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯ ದೃಷ್ಟಿಯಿಂದ ಪರಿಶೀಲಿಸುವ ಪ್ರಯತ್ನವಿಲ್ಲ. ಆದರೆ ಪರೋಕ್ಷವಾಗಿ ಇಂಥ ಹಿನ್ನೆಲೆಯ ಸೂಚನೆಯನ್ನು ಇಲ್ಲಿ ಗುರುತಿಸಬಹುದು. ಭಕ್ತಿ ಮಾರ್ಗವನ್ನು ನಂಬಿದವರು ತಮ್ಮ ಬಡತನ, ಸೇವಾ ಮನೋಭಾವಗಳು ವ್ಯಕ್ತಿಯ ಚಾರಿತ್ರ್ಯವನ್ನು ಬೆಳಸಿ, ಭಗವದ್ಭಕ್ತಿಯನ್ನುದ್ದೀಪಿಸುತ್ತದೆಂದು ನಂಬಿದ್ದರು. ಅವರಿಗೆ ಬಡತನದ ಕಷ್ಟಕಾರ್ಪಣ್ಯಗಳ ಬಗ್ಗೆ ಅರಿವಿದ್ದಂತೆ ಐಶ್ವರ್ಯ ಉಳ್ಳವರ ದುರಹಂಕಾರ, ಸ್ವಾರ್ಥಗಳ ಪರಿಜ್ಞಾನವೂ ಇರುತ್ತದೆ. ಪರಾನುಕಂಪೆ, ಸಕಲ ಜೀವಿಗಳನ್ನೂ (ಜಾತಿ ಮತಗಳ ಭೇದವಿಲ್ಲದೆ) ಸಮಾನರೆಂದು ಕಾಣುವ ನಿಷ್ಪಕ್ಷಪಾತ ದೃಷ್ಟಿ-ಇವುಗಳ ಅಗತ್ಯವನ್ನು ಅವರು ಚೆನ್ನಾಗಿ ಮನವರಿಕೆ ಮಾಡಿಕೊಂಡಿರುತ್ತಾರೆ. ಅವರು ನಡೆಸುವ ಪೂಜೆ ಪುನಸ್ಕಾರಗಳು ಸರಳವೂ, ಆಡಂಬರರಹಿತವೂ ಆಗಿರುತ್ತವೆ.

ಭಾಗವತದಲ್ಲಿ ವ್ಯಕ್ತಿಗಳ ಕಷ್ಟ ಕಾರ್ಪಣ್ಯಗಳು, ನೋವು ನರಳಿಕೆಗಳು ಅವರ ಪಾಪದ ಫಲವೆಂಬ ಮಾತು ಎಲ್ಲೂ ಬರುವುದಿಲ್ಲ. ಅಂಥವರು ಯಾವಾಗಲೂ ಕರುಣೆ ಸಹಾನುಭೂತಿಗೆ ಪಾತ್ರರಾಗಿರುತ್ತಾರೆ. 'ಭಗವಂತನು ಯಾವಾಗಲೂ ದುಃಖಿಗಳ ಆಪ್ತಬಂಧು'(1-17-30) 'ಸಜ್ಜನರು ಹೃದಯವಂತರು, ಕರುಣಾರ್ದ್ರ ಹೃದಯಿಗಳು' (V. 8-10) 'ದರಿದ್ರ ನಾರಾಯಣನ ಸೇವೆಯೇ ಭಗವಂತನ ಸೇವೆ' (VII - 16.56) ಇತ್ಯಾದಿ ಮಾತುಗಳೇ ಇದಕ್ಕೆ ಸಾಕ್ಷಿ.

ಒಂದು ದೃಷ್ಟಿಯಲ್ಲಿ ಈ ಹಲವು ಮಾತುಗಳು ಅಲ್ಲಲ್ಲಿ ಉತ್ಪ್ರೇಕ್ಷೆ, ಅತಿಪ್ರಶಂಸೆಗಳಿಂದ ಕೂಡಿವೆ ಎನಿಸಿದರೂ ಭಾಗವತದಲ್ಲಿ ಬರುವ ದೀನದಲಿತರ ಹೃದಯವಂತಿಕೆ ಕುರಿತ ಭಾವನೆಗಳು ಅತ್ಯಂತ ಪ್ರಮಾಣಿಕವಾಗಿವೆ ಎಂಬುದರಲ್ಲಿ ಸಂದೇಹವಿಲ್ಲ. ಭಾಗವತದಲ್ಲಿನ ಪ್ರಮುಖ ಭಕ್ತ ವೃಂದದವರೇ ಈ ಮಾತುಗಳಿಗೆ ಖಚಿತ ಸಾಕ್ಷಿಗಳು. ಹಿಂದೆ ಹೇಳಿದಂತೆ, ಗೋಕುಲದ ಗೋಪಿಯರು ಗೊಲ್ಲರ ಪತ್ನಿಯರು. ಇವರು ಹುಟ್ಟಿನಿಂದ ಮೇಲು ಜಾತಿಯವರಲ್ಲ. ಇವರಿಗೆ ವಿದ್ಯೆಯಾಗಲಿ, 'ಗುರುವಿನ ಕೃಪಾಕಟಾಕ್ಷ'ವಾಗಲಿ, ಮತ ಕರ್ಮಾಚರಣೆಗಳಾಗಲಿ, ಮಡಿ ಮೈಲಿಗೆಗಳ ಅರಿವಾಗಲಿ ಇಲ್ಲ-ಅಚಲವಾದ ಕೃಷ್ಣಭಕ್ತಿಯೊಂದೇ ಅವರ ತಾರಕ ಮಂತ್ರ. ಭಾಗವತದ ಕಥೆಯನ್ನು ನಿರೂಪಿಸುವ 'ಸೂತ' ಕೆಳಜಾತಿಯವನು. ಭಗವಂತನನ್ನು ಬಿಟ್ಟರೆ ಭಾಗವತದಲ್ಲಿ ಅತ್ಯಂತ ಪ್ರಮುಖ ಪಾತ್ರವಾದ ನಾರದ ಮಹರ್ಷಿ (ಯಾರು ಭಕ್ತಿಯ ಪಾರಮ್ಯ ವನ್ನು ಲೋಕಕ್ಕೆ ಸಾರುತ್ತ ಭಕ್ತರಲ್ಲಿ ಭಕ್ತನೆನಿಸಿಕೊಂಡಿರುವನೋ ಅಂಥ ನಾರದರು ಪೂರ್ವದಲ್ಲಿ ಗಂಧರ್ವರಾಗಿದ್ದರೂ) ಭಾಗವತದಲ್ಲಿ ದಾಸಿಯೊಬ್ಬಳ ಮಗನಾಗಿ ಕಾಣಿಸಿಕೊಳ್ಳುವ ಶೂದ್ರನಷ್ಟೆ. ಪ್ರಹ್ಲಾದನು ದೈತ್ಯರಾಜನ ಮಗನಾಗಿದ್ದು ತಾನು 'ಕೆಳಜಾತಿಯವನು' (VII, 9.12) ಎಂದು ಹೇಳಿಕೊಳ್ಳುತ್ತಾನೆ.

ಕೇವಲ ಈ ಪ್ರಧಾನ ಪಾತ್ರಗಳಿಗೆ ಇದು ಸೀಮಿತವಾಗಿಲ್ಲ. ಭಾಗವತದಲ್ಲಿನ ಹಲವು ಗೌಣ ಪಾತ್ರಗಳು ಸಮಾಜದ ಅತ್ಯಂತ ಕೆಳಸ್ತರದವರಾಗಿದ್ದರೂ ತಮ್ಮ ಅಪಾರ ಭಗವದ್ಭಕ್ತಿಯ ಪ್ರಭಾವದಿಂದ ಉನ್ನತ ದರ್ಜೆಗೇರಿ ಉದಾತ್ತಚರಿತರೆನಿಸಿಕೊಳ್ಳುತ್ತಾರೆ. ಕಂಸನನ್ನು ದಮನ ಮಾಡಲು ಮಥುರೆಗೆ ಬರುವ ಶ್ರೀಕೃಷ್ಣ-ಬಲರಾಮರನ್ನು ಭೇಟಿಯಾಗುವ ಅಜ್ಞಾತ ನೇಯ್ಗೆ ಯವನೊಬ್ಬ ಅವರಿಗೆ ತಾನೇ ತಯಾರಿಸಿದ ಉತ್ತಮ ವಸ್ತ್ರಗಳನ್ನು ಕಾಣಿಕೆಯಾಗಿ ಕೊಡುತ್ತಾನೆ. ಹೂವಾಡಿಗನೊಬ್ಬ ಪುಷ್ಪಮಾಲೆ ಅರ್ಪಿಸುತ್ತಾನೆ. ವಣಿಕ ವೃಂದವೊಂದು ರಾಮ-ಕೃಷ್ಣರ ಪೂಜೆ ಮಾಡುತ್ತಾರೆ. ಕೃಷ್ಣನ ಭಕ್ತವೃಂದವನ್ನು ನೋಡಿ ಪರೀಕ್ಷಿತ ರಾಜ ಕೇಳುತ್ತಾನೆ - 'ಇದೇನು ಶಿವನನ್ನು ಆರಾಧಿಸುವವರೆಲ್ಲ ಹಣ ಉಳ್ಳವರು, ಹರಿಯನ್ನು ಪೂಜಿಸುವವರು ಮಾತ್ರ ಸ್ಥಿತಿವಂತರಲ್ಲವಲ್ಲಾ?' (X 88.1)

ಈ ಸಾಕ್ಷ್ಯಾಧಾರಗಳ ನೆಲಗಟ್ಟಿನ ಮೇಲೆ ಭಾಗವತ ಪುರಾಣದ ಸಾಮಾಜಿಕ ಆರ್ಥಿಕ ಹಿನ್ನೆಲೆಯ ಸಮಗ್ರ ಚಿತ್ರವೊಂದನ್ನು ರಚಿಸುವುದು ಸಾಧ್ಯವೇ? ಇದಕ್ಕೆ ಐತಿಹಾಸಿಕ ಬೆನ್ನೆಲುಬು ಇಲ್ಲದಿರುವುದರಿಂದ ಇದೊಂದು ತಾತ್ಕಾಲಿಕ ಪ್ರಯತ್ನವಾಗಬಹುದಾದರೂ ಅಂಥ ಊಹನೆಗಳಿಗೆ ಮಾತ್ರ ಭಾಗವತದಲ್ಲಿ ಸಾಕಷ್ಟು ಅವಕಾಶವಿದೆ. 'ಭಾಗವತ ಪುರಾಣಗಳು' ನಿಸ್ಸಂದೇಹವಾಗಿ ಉಳ್ಳವರ, ಸಮಾಜದ ಮೇಲು ವರ್ಗದವರ, ಸಂಪ್ರದಾಯ ನಿಷ್ಠೆಯುಳ್ಳ ಗುಂಪಿನವರ ದೃಷ್ಟಿಯಿಂದ ರಚಿತವಾದುದಲ್ಲ. ಅಷ್ಟೇ ಅಲ್ಲ, ಪಟ್ಟಭದ್ರ ವ್ಯವಸ್ಥೆಯನ್ನು ಸಮರ್ಥಿಸುವ ಭಾಗ್ಯವಂತರು, ಗಣ್ಯರು ಭಕ್ತಿ ಪಂಥದ ವಿಚಾರಗಳನ್ನು ವಿರೋಧಿಸುತ್ತಿದ್ದರೆಂಬುದು ಅದರಲ್ಲಿ ಎದ್ದು ತೋರುತ್ತದೆ. ಭಕ್ತಿಯಿಂದ ಮುಕ್ತಿ ಸಾಧ್ಯವೆಂಬುದನ್ನು ಎತ್ತಿ ಹಿಡಿದು ಬಾಗವತ ಪುರಾಣವು ಸಮಾಜದ ನಾನಾ ವರ್ಗದ, ನಾನಾ ವೃತ್ತಿಯ, ದೀನ ದಲಿತರನ್ನು ಸನ್ಮಾರ್ಗದತ್ತ ಕೊಂಡೊಯ್ಯುವ ಪ್ರಯತ್ನ ಮಾಡಿತೆಂಬುದು ಸ್ಪಷ್ಟವಾಗುತ್ತದೆ.

ಸಾಹಿತ್ಯದ ದೃಷ್ಟಿಯಿಂದ ನೋಡುವಾಗ ಭಾಗವತದಲ್ಲಿ ಅತ್ಯಂತ ಕಾವ್ಯಮಯವೂ, ವಿದ್ವತ್ಪೂರ್ಣವೂ ಆದ ಭಾಗಗಳಿರುವುದು ದೃಷ್ಟಿಗೋಚರವಾಗುತ್ತದೆ. ಇದನ್ನು ರಚಿಸಿದ ಭಾಗವತರು ಕೆಳವರ್ಗದ ಅನಕ್ಷರಸ್ಥರಾಗಿರಲಿಲ್ಲವೆಂಬುದು ಸಹ ಖಚಿತವಾಗುತ್ತದೆ. ಬಹುಶಃ ಅವರು ಅಂದಿನ ಸಾಮಾಜಿಕ-ಧಾರ್ಮಿಕ ವ್ಯವಸ್ಥೆಗೆ ಸೇರಿದ ವಿದ್ವಾಂಸರುಗಳಲ್ಲ. ಅವರಲ್ಲಿ ಹಲವರು ಭಕ್ತಿ ಪಂಥದ ಪ್ರವರ್ತಕರಾದ ಸಾಧು ಸಂತರಾಗಿರಬಹುದು, ಉದಾರ ಆದರ್ಶದ ವಿದ್ವತ್ ಜನರಾಗಿರಬಹುದು. ಭಾಗವತದಲ್ಲಿ ನಾರದರಂಥವರನ್ನು ಕುರಿತ ಪ್ರಸ್ತಾಪ ಬರುವುದು ಇದಕ್ಕೆ ಸಾಕ್ಷ್ಯ ಒದಗಿಸುತ್ತದೆ. ಬಹುತೇಕ ಅವರು ಪುರೋಹಿತ ವರ್ಗದವರೂ ಆಗಿರಲಿಕ್ಕಿಲ್ಲ. ಆಳ್ವರುಗಳ ಇತಿಹಾಸವನ್ನು ನೋಡಿದರೆ ಭಾಗವತ ಪ್ರವರ್ತಕರ ವೈವಿಧ್ಯಮಯ ಹಿನ್ನೆಲೆ, ಜೀವನ ಕ್ರಮ ಅರ್ಥವಾಗುತ್ತದೆ.

ಅಸಾಧುವಲ್ಲದ ಈ ಊಹನೆಗಳನ್ನು ಆಧಾರವಾಗಿಟ್ಟುಕೊಂಡರೆ ಭಾಗವತವು ಪ್ರತಿಪಾದಿಸಿದ ಭಕ್ತಿಪಂಥದ ಒಂದು ಉಪಯುಕ್ತ ಚಿತ್ರ ದೊರೆಯುತ್ತದೆ. ಈ ಪಂಥವನ್ನು ಪ್ರಚಾರ ಮಾಡಿದ ಭಾಗವತರುಗಳ ವಿದ್ವತ್ತು, ಸಮಾಜದಲ್ಲಿನ ಅವರ ಗಣ್ಯ ಸ್ಥಾನಮಾನಗಳಿಂದಾಗಿ ಭಕ್ತಿ ಪಂಥಕ್ಕೆ ಮಾನ್ಯತೆ ದೊರೆತಂತಾಯಿತು. ಈ ಪಂಥಕ್ಕೆ ಆಕರ್ಷಿತರಾದ ಜನಸಾಮಾನ್ಯರಿಗೂ ಸಾಮಾಜಿಕವಾದ ಗೌರವ ಮನ್ನಣೆ ಸಿಕ್ಕುವಂತಾಯಿತು. ದೇವಾಲಯಗಳ ಸ್ಥಾಪನೆ ಮತ್ತು ಅದಕ್ಕೆ ಸಂಬಂಧಿಸಿದ ಸಾಮಾಜಿಕ ಚಟುವಟಿಕೆಗಳನ್ನು ಸೂಕ್ಷ್ಮವಾಗಿ, ಐತಿಹಾಸಿಕ ದೃಷ್ಟಿಯಿಂದ ನೋಡಿದರೆ ಭಕ್ತಿಪಂಥ ಪ್ರಧಾನವಾಗಿ ಒಂದು ನಾಗಕರಿಕ ಚಳವಳಿಯೆಂದು ತೋರುತ್ತದೆ. ನಗರ ಪ್ರದೇಶಗಳಲ್ಲಿನ ಜನಸಾಮಾನ್ಯರ ಅಗತ್ಯಗಳನ್ನು ಪೂರೈಸುವಂತಾದುದರಿಂದ ಭಕ್ತಿಪಂಥವು ಪಟ್ಟಭದ್ರ ಹಿತಾಸಕ್ತಿಯ, ಕಂದಾಚಾರದ ಭಾವನೆಯ ಜನರ ವಿರೋಧವನ್ನು ಶಕ್ತಿಯುತವಾಗಿ ಎದುರಿಸುವುದು ಸಾಧ್ಯ ವಾಯಿತು.

❑

ಲಲ್ಲೇಶ್ವರಿ

ಡಾ. ವಿಜಯಾ

ಲಲ್ಲ ಕಾಶ್ಮೀರಿ ಪಂಡಿತ ಮನೆತನದವಳು. ಹಿಂದೂ ಸಂಪ್ರದಾಯ, ಆಚಾರಗಳನ್ನು ಹೊರಗಿಟ್ಟು ಆಂತರ್ಯದಲ್ಲಿ ಮನಸ್ಸಿಟ್ಟ ಶಿವಯೋಗಿನಿ. ಆಧ್ಯಾತ್ಮಿಕ ಪರಿಪೂರ್ಣತೆಗಾಗಿ ನಾಡೆಲ್ಲ ಸಂಚರಿಸಿದ ಲಲ್ಲ ಹೋದಲ್ಲೆಲ್ಲ ಆಕೆಗೆ ಅನೇಕರು ಶಿಷ್ಯರಾದರು. ಆಕೆ ಹೇಳಿದ ವಾಕ್ಯಗಳನ್ನು 'ಲಲ್ಲವಾಕ್', 'ಲಲ್ಲವಾಕ್ಯಾನಿ' ಅನ್ನುತ್ತಾರೆ.

ಕಾಶ್ಮೀರದ ಶ್ರೀನಗರದ ಬಳಿ ಇರುವ ಪಂಡ್ರೆನ್ತಾನ್ ಪುರಾಣಾಧಿಷ್ಠಾನ ಆಕೆಯ ಹುಟ್ಟೂರು. ಅದನ್ನು ಸೇಂಪೂರ್ ಎಂದು ಕರೆಯುತ್ತಾರೆ. ಆಕೆಯ ಹನ್ನೆರಡನೆ ವಯಸ್ಸಿಗೆ ಪಾಂಪೂರ್ (ಸಂಸಾಪುರ-ಪದ್ಮಪುರ)ನಲ್ಲಿಯ ಸಿದ್ಧರೊಬ್ಬರ ಮಗನಾದ ನಿಕಾಭಟ್ಟನೊಡನೆ ವಿವಾಹವಾಯಿತು. ಮಾವ ಆಕೆಗೆ ಕೊಟ್ಟ ಹೆಸರು ಪದ್ಮಾವತಿ (ಪದ್ಮನ್ ಡೆಡ್). ಆದರೆ ಜನ ಆಕೆಯನ್ನು ಪ್ರೀತಿಯಿಂದ ಕರೆದದ್ದು ಲಲ್ಲ, ಲಲ್ಲಡೆಡ್ ಎಂದೇ.

ಗಂಡನ ಮಲತಾಯಿಯೇ ಅತ್ತೆ. ಆಕೆ ಲಲ್ಲಳಿಗೆ ವಿಪರೀತ ಕಿರುಕುಳ ಕೊಡುತ್ತಿದ್ದಳೆಂದೂ ಅವೆಲ್ಲವನ್ನೂ ಸಹಿಸಿ ಸದಾ ಶಿವಧ್ಯಾನ-ಆರಾಧನೆಗಳಲ್ಲಿ ಮುಳುಗುತ್ತಿದ್ದ ಲಲ್ಲ ಒಂದು ದಿನ ವಿವಸ್ತ್ರಳಾಗಿ, ಶಿವನನ್ನು ಹುಡುಕುತ್ತ ಹೊರಟಳೆಂದೂ ಹೇಳುತ್ತಾರೆ.

ಲಲ್ಲಳಿಗೆ ಪೂರ್ವಜನ್ಮದ ನೆನಪುಗಳಿದ್ದವೆಂಬುದಕ್ಕೆ ಅನೇಕ ನಿದರ್ಶನಗಳನ್ನು ಕೊಡಲಾಗಿದೆ. ಆಕೆಯ ವಾಕ್‌ಗಳಲ್ಲಿ ಅಂಥ ಅಂಶಗಳೂ ಸಿಗುತ್ತವೆ. ಪಂಡ್ರೆನ್ತಾನ್‌ನಲ್ಲೇ ಮೊದಲು ಒಂದು ಮಗುವಿಗೆ ಜನ್ಮವಿತ್ತಳೆಂದೂ 'ಈ ಕೂಸು ನನಗೇನಾಗಬೇಕು?' ಎಂದು ಗುರುಗಳನ್ನು

ಕೇಳಿದಳೆಂದೂ ಅವರು 'ನಿನ್ನ ಮಗು' ಎಂದಾಗ ಆಕೆ ನಾನೀಗಲೇ ಸತ್ತು, ಮಹ್ರೂಮ್ ಗ್ರಾಮದಲ್ಲಿ ಇಂತಿಕಾ ಗುರುತಿರುವ ಹೆಣ್ಣು ಕುದುರೆಯಾಗಿ ಹುಟ್ಟುತ್ತೇನೆ, ಮುಂದೆ ಈ ಮಗುವೇ ನನ್ನ ಗಂಡನಾಗುತ್ತಾನೆ, ಬೇಕಾದರೆ ಪರೀಕ್ಷಿಸಿ ಎಂದಳೆಂದೂ ಮುಂದೆ ಕುದುರೆ, ನಾಯಿ ಇತ್ಯಾದಿ ಜನ್ಮಗಳನ್ನು ತಳೆದು ಏಳನೆ ಜನ್ಮದಲ್ಲಿ ಅದೇ ಪಂಡ್ರೆನ್ಥಾನ್ ಊರಿನ ಅದೇ ಮನೆಯಲ್ಲಿ ಲಲ್ಲೇಶ್ವರಿಯಾಗಿ ಜನಿಸಿದಳೆಂದು, ನಿಕಾಭಟ್ಟನೊಂದಿಗೆ ವಿವಾಹವಾದ ಸಂದರ್ಭದಲ್ಲಿ ಆಕೆ ಹಿಂದಿನ ಜನ್ಮವೊಂದರಲ್ಲಿ ನನ್ನ ಮಗನಾಗಿದ್ದವನೇ ಇಂದು ಮದುಮಗನಾಗಿದ್ದಾನೆಂದು ಹೇಳಿದ್ದಾಗಿಯೂ ಕಥೆಯಿದೆ.

"ಸರೋವರವು ಶೂನ್ಯದಲ್ಲಿ ಲೀನವಾದದ್ದನ್ನು ನಾನು ಏಳು ಬಾರಿ ಕಂಡಿದ್ದೇನೆ" ಎಂದು ಆಕೆ ಹೇಳಿದ ಮಾತು ಪ್ರಳಯವನ್ನು ಕುರಿತದ್ದಾಗಿರಬಹುದು. ಆಕೆಗೆ ಪುನರ್ಜನ್ಮ ಕಲ್ಪನಾ ಯೋಗ ಸಿದ್ಧಿ ಇದ್ದಿರಬಹುದು ಎಂಬ ಅಭಿಪ್ರಾಯವಿದೆ.

ಅತ್ತೆ ಹೊಟ್ಟೆತುಂಬ ಊಟ ಕೊಡುತ್ತಿರಲಿಲ್ಲ. ಹಬ್ಬ-ಜಾತ್ರೆ ಏನು ವಿಶೇಷವಾದರೂ ಲಲ್ಲಳಿಗೆ ಊಟ ಇಲ್ಲ. ತಟ್ಟೆಯಲ್ಲಿ ಚಪ್ಪಡಿಕಲ್ಲನ್ನಿಟ್ಟು ಅದರ ಮೇಲೆ ಕೊಂಚವೇ ಅನ್ನ ಹಾಕಿ, ನೋಡಲು ತಟ್ಟೆ ತುಂಬಾ ಬಡಿಸಿದಂತೆ ಕಾಣುವ ಹಾಗೆ ಮಾಡುತ್ತಿದ್ದಳಂತೆ. ಇವತ್ತಿಗೂ ಇರುವ 'ಕುರಿನಾದ್ರು ಕೊಯ್ಲಿ ಮರೀನಾದ್ರೂ ಕೊಯ್ಲಿ ಲಲ್ಲೀಗ್ ಮಾತ್ರ ಕಲ್ಲು' ಎಂಬ ಪ್ರಚಲಿತ ಗಾದೆ ಇಂಥ ಪ್ರಸಂಗವನ್ನು ಕುರಿತದ್ದೇ ಆಗಿರಬಹುದು.

ನೀರು ತರಲು ನದೀಘಟ್ಟಕ್ಕೆ ಹೋಗುತ್ತಿದ್ದ ಲಲ್ಲ ನೀರಮೇಲೇ ನಡೆದು ಆಚೆ ದಡದಲ್ಲಿದ್ದ ಶಿವಾಲಯದಲ್ಲಿ ಧ್ಯಾನಮಗ್ನಳಾಗಿಬಿಡುತ್ತಿದ್ದಳು. ತಡವಾಗಿ ಮನೆಗೆ ಬರುತ್ತಿದ್ದ ಲಲ್ಲಳ ಚಾರಿತ್ರ್ಯವನ್ನೇ ಶಂಕಿಸಿದ ಅತ್ತೆ ಅವಳ ಗಂಡನಿಗೆ ಚಾಡಿ ಹೇಳಿದಳು. ಸಿಟ್ಟಿಗೆದ್ದ ಗಂಡ ಅವಳತ್ತ ಕಲ್ಲು ತೂರಿದ. ಆ ಕಲ್ಲು ಅವಳ ತಲೆಯ ಮೇಲಿದ್ದ ನೀರಿನ ಮಡಕೆಗೆ ತಾಗಿ ಮಡಕೆ ಚೂರಾಯಿತು. ಆದರೆ ತಲೆಯ ಮೇಲೆ ನೀರು ಮಂಜುಗಡ್ಡೆಯಂತೆ ಕೂತಿತ್ತು. ಲಲ್ಲ ಒಂದೂ ಮಾತಾಡದೆ ನೀರನ್ನು ಪಾತ್ರೆಗಳಿಗೆ ತುಂಬಿಸಿದಳು. ಮತ್ತು ಮಿಕ್ಕ ಮಂಜು ಗಡ್ಡೆಯ ಚೂರನ್ನು ಹೊರಗೆಸೆದಳು. ಅದೇ ಒಂದು ಕೊಳವಾಯಿತೆಂದೂ ಈಗಲೂ 'ಲಲ್ಲಕೊಳ' ಎಂಬ ಹೆಸರಿನ ಕೊಳವೊಂದು ಇದೆಯೆಂದೂ ಹೇಳುತ್ತಾರೆ.

ಇಲ್ಲಿಂದಾಚೆಗೆ ಅವಳ ಪವಾಡಗಳು ಜನರಿಗೆ ತಿಳಿದು ಅವಳನ್ನು ಹುಡುಕಿ ಬರತೊಡಗಿದರು. ಇನ್ನು ಮನೆಯಲ್ಲಿರದೆ ಆಕೆ ಉನ್ಮತ್ತಳಂತೆ ಶಿವನನ್ನು ಹುಡುಕುತ್ತ ಹೊರಟಳು. "ಹೀಬ್ರೂಗಳ ನಬೀಗಳಂತೆ, ಮುಸ್ಲಿಮರ ದರ್ವೇಶಿಗಳಂತೆ ಲಲ್ಲ ವಿಚಿತ್ರವಾಗಿ, ಉನ್ಮತ್ತಳಂತೆ ಶಿವನನ್ನು ಅರಸುತ್ತಾ, ಹಾಡುತ್ತಾ, ಕುಣಿಯುತ್ತಾ, ಗೊತ್ತುಗುರಿ ಇಲ್ಲದೆ ನಗ್ನಳಾಗೇ ಅಲೆಮಾರಿಯಾದಳು...." ಆಕೆಯ ಪವಾಡಗಳು ಎನ್ನಲಾದ ಅನೇಕ ಅಂಶಗಳು ಬಹು ದೊಡ್ಡ ತತ್ತ್ವವನ್ನೇ ಹೇಳುತ್ತವೆ. ಅವು ಹಿಂದೂ-ಮುಸಲ್ಮಾನರಿಬ್ಬರಿಗೂ ಅನ್ವಯವಾಗುತ್ತವೆ.

ಸಿದ್ಧ ಶ್ರೀಕಂಠ ಆಕೆಯ ಗುರು ಎಂದರೂ ಅನೇಕ ಸಂದರ್ಭಗಳಲ್ಲಿ ಗುರುವಿಗೇ ಗುರು

ವಾಗಿದ್ದಾಳೆ ಆಕೆ. ಅದೊಂದು ವಿಚಿತ್ರ ಗುರು-ಶಿಷ್ಯ ಸಂಬಂಧ. ಪರಸ್ಪರ ಟೀಕೆ ಮಾಡಿಕೊಳ್ಳುತ್ತ ಸತ್ಯ ದರ್ಶನ ಮಾಡಿಸುವ ಪರಿಯೊಂದನ್ನು ಅಲ್ಲಿ ಕಾಣಬಹುದು. ಲಲ್ಲ ಬಹುತೇಕ ಉಪಮೆಗಳನ್ನು ಬಳಸಿ ಮಾತಾಡುತ್ತಾಳೆ.

ಸಿದ್ಧ ಶ್ರೀಕಂಠ ನಲವತ್ತು ದಿನಗಳ ತಪಸ್ಸಿಗೆ ಕುಳಿತ. ಲಲ್ಲ 'ನಂದೀ ಮಾರ್ಗದಲ್ಲಿ ತನ್ನ ಕುದುರೆ ಒದೆಸಿಕೊಳ್ಳುತ್ತಿರುವುದನ್ನು ಕಾಣುತ್ತಾ ತಪಸ್ಸು ಮಾಡುತ್ತಿದ್ದಾನೆ' ಎಂದು ಅಣಕವಾಡಿದಳು. ಧ್ಯಾನಮಧ್ಯೆ ತನ್ನ ಮನಸ್ಸು ಹಳಿತಪ್ಪಿದ್ದನ್ನು ಆತ ಗ್ರಹಿಸಿದ. ಆಕೆ ನಿಜವಾದ ತಪಸ್ಸು ಹೇಗಿರುತ್ತದೆ ಎಂದು ತೋರಿಸಿದಳು :

ಒಂದು ದೊಡ್ಡ ಮಡಕೆಯಲ್ಲಿ ಕಾಲಿಟ್ಟು ನಿಂತು ಮೇಲೆ ಮತ್ತೊಂದು ಮಡಕೆಯನ್ನು ಕವುಚಿ ಹಾಕಿಕೊಂಡಳು. ಚಂದ್ರನು ಕ್ಷೀಣಿಸಿದಂತೆಲ್ಲ ಆಕೆಯೂ ಕುಗ್ಗಿದಳು. ಹದಿನೈದನೆ ದಿನ ಅಮಾವಾಸ್ಯೆಯ ರಾತ್ರಿ ಅವಳು ಪಾದರಸವಾಗಿದ್ದಳು. ಅದು ನಡುಗುತ್ತಿತ್ತು. ಮರುದಿನದಿಂದ ಚಂದ್ರ ವೃದ್ಧಿಸತೊಡಗಿದಂತೆ ಅವಳೂ ಹಿಗ್ಗುತ್ತ ಹುಣ್ಣಿಮೆಯ ರಾತ್ರಿಗೆ ಲಲ್ಲಳಾಗಿ ಎದ್ದು ಬಂದಳು. ಸಿದ್ಧ ಶ್ರೀಕಂಠನು "ಆ ಚೂರು ಪಾದರಸವೇಕೆ ನಡುಗುತ್ತಿತ್ತು?" ಎಂದು ಕೇಳಿದ. "ಆ ಪಾದರಸವೇ ನಾನು. ಶರೀರ ಬಂಧನಗಳಿಂದ, ಇಂದ್ರಿಯ ಮೋಹದಿಂದ, ಮನಸ್ಸು - ಅಹಂಗಳಿಂದ ಹೊರತಾದ ನಾನು. ಆದರೂ ನಾನು ಮುಕ್ತಿ ಸಿಗುವುದೋ ಇಲ್ಲವೋ ಎಂಬ ಭಯದಿಂದ ನಡಗುತ್ತಿದ್ದೆ. ದೇಹ ದಂಡನೆಯಿಂದ ಮುಕ್ತಿ ಎಂದೂ ಸಿಗುವುದಿಲ್ಲ. ಅದು ದೇವರ ದಯದಿಂದ ಮಾತ್ರ ಸಿಗುತ್ತದೆ" ಎಂದಳು.

ಈ ಕುರಿತು ಮಂತ್ರಪಠನ, ಆಂಗಿಕ ಸನ್ನೆಗಳಿಂದ ಕೂಡಿದ ಮುಸ್ಲಿಂ ವಿಧಿಗಳ ವಿರುದ್ಧವಾಗಿ ಲಲ್ಲ ಹೀಗೆ ಪವಾಡ ಮಾಡಿದಳು ಎಂದು ಮುಸ್ಲಿಂ ವಿದ್ವಾಂಸರು ಹೇಳುತ್ತಾರೆ.

ಒಮ್ಮೆ ಲಲ್ಲ ಬರಿ ಮೈಯಲ್ಲಿ ರಸ್ತೆಯಲ್ಲಿರುವುದನ್ನು ಕಂಡ ಅವಳ ಮಾವ ಮನೆಯೊಳಕ್ಕೆ ಕರೆದೊಯ್ದು ಬಟ್ಟೆ ತೊಡಿಸಲು ಪ್ರಯತ್ನಿಸಿದ. "ಅಲ್ಲಿ ಮನುಷ್ಯರೇ ಇಲ್ಲ. ಇರುವುದೆಲ್ಲ ಮೇಕೆ - ಕುರಿಗಳು" ಎಂದು ನಕ್ಕಳು ಲಲ್ಲ. ಹೊರಗೆ ನೋಡಿದಾಗ ಮಾವನಿಗೆ ಎಲ್ಲರೂ ಕುರಿ-ಮೇಕೆಗಳಾಗಿ ಕಂಡರಂತೆ.

ಲಲ್ಲ ಮೂಢನಂಬಿಕೆ-ಅರ್ಥಹೀನ ಸಂಪ್ರದಾಯಗಳನ್ನು ಖಂಡಿಸಿದವಳು. ದೇವಸ್ಥಾನದಲ್ಲಿ ಪೂಜೆಯಲ್ಲಿದ್ದ ಸಿದ್ಧ ಶ್ರೀಕಂಠನಿಗೆ ತಾನು ಬಹಿರ್ದೇಶಕ್ಕೆ ಹೋಗಲು ಯಾರು ಇಲ್ಲದ ಸ್ಥಳ ತೋರಿಸು ಅಂದಳು. ಆತ ನಿರ್ಜನ ಪ್ರದೇಶಕ್ಕೆ ಕರೆದೊಯ್ದ. ಲಲ್ಲ ಕೂತಲ್ಲೆಲ್ಲ ಕೆರೆದಳು. ಕೆರೆದಲ್ಲೆಲ್ಲ ಲಿಂಗಗಳೆದ್ದವು. ದೇವರಿಲ್ಲದ ಸ್ಥಳವೇ ಇಲ್ಲ! ಅದೇ ಲಲ್ಲ ಮೂರ್ತಿ ಪೂಜೆಯನ್ನು ವಿರೋಧಿಸುತ್ತಿದ್ದಳು. ಸಿದ್ಧ ಶ್ರೀಕಂಠನ ಪೂಜಾ ಕೊಠಡಿಯಲ್ಲಿದ್ದ ದೇವರ ವಿಗ್ರಹದ ಮೇಲೆಯೇ ಒಮ್ಮೆ ಹೇಸಿಗೆ ಮಾಡಿದ್ದಳಂತೆ.

ಸಂತ ಶೇಖ್ ನೂರುದ್ದೀನ್ ವಲಿ ಎಂಬಾತನೊಂದಿಗೆ ಆಕೆ ಆಧ್ಯಾತ್ಮ ಚರ್ಚೆ ಮಾಡುತ್ತಿದ್ದ ಳೆಂದೂ ಆತ ಹುಟ್ಟಿದಾಗ ತಾಯ ಹಾಲು ಕುಡಿಯಲು ಬರದೆ ಹಟಮಾಡುತ್ತಿದ್ದ ಮಗುವನ್ನು

ರಸ್ತೆಯಲ್ಲಿ ಹಾದು ಹೋಗುತ್ತಿದ್ದ ಲಲ್ಲ ಕಂಡಳೆಂದೂ "ಇಲ್ಲಿ ಹುಟ್ಟಿ ಬರಲು ನಾಚಿಕೆ ಆಗಲಿಲ್ಲ, ತಾಯ ಮೊಲೆ ಹಾಲು ಕುಡಿಯಲು ನಾಚಿಕೆಯೆ?" ಎಂದು ಅಣಕವಾಡಿ ತಾನೇ ಮೊಲೆ ಹಾಲು ಕುಡಿಸಿದಳೆಂದು ಕತೆಯಿದೆ. ಶೇಕ್ ವಲಿ ಬರೆದ ಒಂದು ಶ್ರುಕ್‌ನಲ್ಲಿ ಈ ಪ್ರಸ್ತಾಪವಿದೆ.

> **ಪದುರು ಪುರದವಳು ಲಲ್ಲೆ ಯೋಗಿನಿ ತಾಯಿ**
> **ಪರಮ ಸುಧೆ ಮೊಗೆದು ಕುಡಿದು**
> **ಸಲಹಿದಳು ಸಂತರ ತನ್ನ ತೊಡೆ ಮೇಲೆ**
> **ಪ್ರಭು, ಕೊಡೊ ನನಗಾ ಕೃಪೆಯ.**

* * *

14ನೇ ಶತಮಾನದಲ್ಲಿ ತೈಮೂರರ ಆಳ್ವಿಕೆ ಇತ್ತು. ಸಯೀದ್‌ಗಳು ಪಲಾಯನ ಮಾಡುತ್ತಿದ್ದರು. ಹಾಗೆ ಮೀರ್ ಸಹೀದ್ ಹಮದಾನಿ ಎಂಬುವವ ತನ್ನ ಜನರೊಂದಿಗೆ ಕಾಶ್ಮೀರಕ್ಕೆ ಬಂದ. ಅವರೆಲ್ಲ ತೈಮೂರನು ಕೆಂಪಗೆ ಕಾದ ಕಬ್ಬಿಣದ ಮೇಲೆ ಸವಾರಿ ಮಾಡಿ ತಮ್ಮ ಪರಿಶುದ್ಧತೆ ಸಾಬೀತು ಮಾಡಬೇಕು ಎಂದದ್ದರಿಂದ ಹೆದರಿ ಪಲಾಯನ ಮಾಡಿದ್ದರು.

ಲಲ್ಲಳು ಹಮದಾನಿ ಬರುತ್ತಿರುವುದನ್ನು ಕಂಡು ದಿನಸಿ ಅಂಗಡಿಯಲ್ಲಿ ಬಚ್ಚಿಟ್ಟುಕೊಳ್ಳುವಂತೆ ನಟಿಸಿದಳು. ಅಂಗಡಿಯವ ಓಡಿಸಿದ. ಹತ್ತಿರದ ರೊಟ್ಟಿ ಅಂಗಡಿಗೆ ನುಗ್ಗಿದಳು. ಬಾಯಿ ತೆರೆದಿದ್ದ ದೊಡ್ಡ ಒಲೆಯಲ್ಲಿ ಜಿಗಿದಳು. ಅಂಗಡಿಯವ ಹೆದರಿ ಒಲೆಯ ಬಾಯಿ ಮುಚ್ಚಿಬಿಟ್ಟ. ಹಮದಾನಿ ಬಂದು ಒಲೆಯ ಬಾಯಿ ತೆರೆದಾಗ ಲಲ್ಲ ಸ್ವರ್ಗಲೋಕದ ಹಸಿರುಡುಗೆಯಲ್ಲಿ ಎದ್ದು ಬಂದಳು. ತೈಮೂರನು ಒಡ್ಡಿದ ಪಣ ಕಷ್ಟಕರವಾದ್ದೇನಲ್ಲ ಎಂದು ಮನದಟ್ಟು ಮಾಡಲು ಲಲ್ಲ ಹಾಗೆ ಮಾಡಿದಳೆಂದು ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ 'ಲಲ್ಲ ಹೊಕ್ಕಿದ್ದು ದಿನಸಿ ಅಂಗಡಿ, ಬಂದಿದ್ದು ರೊಟ್ಟಿ ಅಂಗಡಿಯಿಂದ' ಎಂಬ ನಾಣ್ಣುಡಿಯೊಂದು ಇಂದಿಗೂ ಬಳಕೆಯಲ್ಲಿದೆ.

ಹಮದಾನಿ-ಲಲ್ಲ ಭೇಟಿಯೇ ಆಗಲಿಲ್ಲ ಎಂದು ಇತಿಹಾಸಕಾರರು ಹೇಳುತ್ತಾರೆ. ಆದರೆ ಪವಾಡಗಳು ಕತೆಗಳು ಇವೆ. ಇವುಗಳ ಹಿಂದಿನ ಅರ್ಥಗಳು ವಿಶೇಷ ಮಹತ್ವದವು ಎಂಬುದಕ್ಕೆ ಅವು ಮುಖ್ಯವಾಗುತ್ತವೆ.

ಒಮ್ಮೆ ಸಯೀದ್ ಹಮದಾನಿಯನ್ನು ಕಂಡು ಲಲ್ಲ ನಾಚಿ, ಮೊಳಕಾಲು ಮುಂಗೈಗಳಿಂದ ದೇಹವನ್ನು ಮರೆ ಮಾಡಿಕೊಂಡಳು. 'ಜನರೆದುರು ಬೆತ್ತಲೆ ತಿರುಗುತ್ತೀ ಈಗೇನು ನಾಚಿಕೆ' ಎಂದ ಹಮದಾನಿಗೆ "ನಾನೊಬ್ಬಳು ಹುಚ್ಚಿ. ಗಂಡು ಕೂದಲಿನ ಕೊಳಕಿ, ವಡ್ಡಿ, ದಾರಿಯಲ್ಲಿ ಹೋಗುವವರಿಗೆ ನಾನು ನಾಚುವುದಿಲ್ಲ. ನೀನೊಬ್ಬ ಮನುಷ್ಯ. ನನ್ನ ನಗ್ನತೆ ನೋಡಿಬಿಟ್ಟೆ. ಮರ್ಯಾದೆ ಪ್ರಶ್ನೆ. ಮೈ ಮುಚ್ಚಿಕೊಳ್ಳುತ್ತಿದ್ದೇನೆ" ಎಂದಳಂತೆ.

ಆಕೆ ನಡೆದು ಹೋಗುತ್ತಿದ್ದರೆ ಮಕ್ಕಳು ಹುಚ್ಚಿ, ಮುದುಕಿ ಎಂದು ಕೂಗುತ್ತಾ ಗಲಾಟೆ ಮಾಡುತ್ತಿದ್ದವು. ಒಮ್ಮೆ ಬಟ್ಟೆ ಅಂಗಡಿಯವನೊಬ್ಬ ಹುಡುಗರನ್ನು ಓಡಿಸಿ ಅವಳಿಗೆ ಬಟ್ಟೆಕೊಟ್ಟ. ಆ ಬಟ್ಟೆಯನ್ನು ಎರಡು ತುಂಡು ಮಾಡಿ ತನ್ನ ಎರಡೂ ಭುಜದ ಮೇಲೆ ಹಾಕಿಕೊಂಡಳು.

ದಾರಿಯಲ್ಲಿ ಜನ ತಲೆಬಾಗಿ ನಮಸ್ಕರಿಸಿದಾಗ ಒಂದು ಗಂಟು ಹಾಕಿದಳು. ಅವಮಾನ ಮಾಡಿದಾಗ ಇನ್ನೊಂದು ತುಂಡಿಗೆ ಗಂಟು ಹಾಕಿದಳು. ಕೊನೆಗೆ ಅವೆರಡು ಸಮಸಮವಾಗಿದ್ದುದನ್ನು ಅಂಗಡಿಯವನಿಗೆ ತೋರಿಸುತ್ತ,

"ಬೈಗುಳ ಸಾವಿರ ಬೈದರೂ ಅವರೆಲ್ಲ
ಬಳಲೆನು ನಾನು ತೊಳಲೆನು ನಾನು...."

ಎಂದು ಹಾಡಿದಳು. ಇಂಥ ಅನೇಕ ದಂತಕತೆಗಳು ಆಕೆಯ ಬಗ್ಗೆ ಹರಡಿಹೋಗಿವೆ.

ಶ್ರೀನಗರಿಂದ 28 ಮೈಲಿ ದೂರಕ್ಕಿರುವ ವೆಜಿಬ್ರಾರ್ ಎಂಬಲ್ಲಿ ಜುಮ್ಮಾ ಮಸೀದಿಯ ಗೋಡೆಯ ಹಿಂದೆ ಅವಳ ಶರೀರದಿಂದ ಜ್ಯೋತಿಯೊಂದು ಹೊರಬಂದು ಮಾಯವಾಯಿತು. ಅವಳಿಗಾಗ 71 ವಯಸ್ಸು ಎಂದು ಪೀರ್ ಗುಲಾಮ್ ಹಸನ್ ಬರೆಯುತ್ತಾರೆ. ಆ ಬಗ್ಗೆ ಈ ಹಿಂದೆ ಹೇಳಿದ ಹಾಗೆ ಮಡಕೆಯಲ್ಲಿ ಕೂತು, ಮೇಲೊಂದು ಮಡಕೆ ಕವುಚಿಕೊಂಡಳು ಲಲ್ಲ. ಆಮೇಲೆ ತೆಗೆದು ನೋಡಿದರೆ ಖಾಲಿಯಿತ್ತು. ಅವಳು ಒಂದು ಕುರುಹೂ ಉಳಿಸದೆ ಕರಗಿ ಹೋದಳು ಎಂದೂ ದಂತ ಕಥೆಯಿದೆ.

ಹಿಂದೂ ಮುಸಲ್ಮಾನರಿಬ್ಬರಿಗೂ ಹತ್ತಿರವಾದ ಲಲ್ಲೇಶ್ವರಿ ತನ್ನ 'ವಾಖ್'ಗಳ ಮೂಲಕ ಮಹತ್ವದ ಮಾತುಗಳನ್ನು ಹೇಳಿದಳು. ಶಾಸ್ತ್ರೀಯ ಸಂಗೀತದ ಮೂಲಕ ಕೂಡಾ ಆಕೆಯ 'ವಾಖ್'ಗಳನ್ನು ಹಾಡುತ್ತಾರೆ; ಸೂಫಿಯಾ ಭಕ್ತರು ಸೂಫಿಯಾನಾ ಕಲಮ್‌ಗಳಲ್ಲಿ ಲಲ್ಲವಾಖ್ ಗಳನ್ನು ಹಾಡುತ್ತಾರೆ.

ಲಲ್ಲ ಕಾಶ್ಮೀರಿ ಭಾಷೆ-ಸಾಹಿತ್ಯ ಕಟ್ಟಿದ ಮೊದಲಿಗಳು. ಆಧುನಿಕ ಕವಿ, ಕಾಶ್ಮೀರಿ ಭಾಷೆಯ ತಾಯಿ ಅನ್ನುತ್ತಾರೆ. ತಾನು ಕಲಿತಿದ್ದ ಸಂಸ್ಕೃತದ ಕಾವ್ಯ ಗುಣವನ್ನು ಕಾಶ್ಮೀರಿ ಭಾಷೆಯಲ್ಲಿ ಪ್ರಯೋಗಿಸಿದಳು. ತತ್ಸಮಗಳನ್ನು ಬಳಸುತ್ತ ಕಾಶ್ಮೀರಿ ಆಡುಭಾಷೆಯಲ್ಲೂ ತತ್ತ್ವವಿಚಾರಗಳನ್ನು ಹೇಳಲು ಸಾಧ್ಯಮಾಡಿ ತೋರಿಸಿದಳು. ಅವಳದು ಸಮನ್ವಯ ದೃಷ್ಟಿ. ಹಿಂದೂ ಸಂಪ್ರದಾಯ ಗಳಲ್ಲಿದ್ದ ಕುಂದು ಕೊರತೆಗಳನ್ನು ವಿರೋಧಿಸಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಬದಲಾವಣೆ ತರುವ ಪ್ರಯತ್ನ ಮಾಡಿದವಳು ಲಲ್ಲೇಶ್ವರಿ.

ಅವಳ ಬಾಯಿಂದ ಹೊರಬಂದ ಸೊಳ್ನುಡಿಗಳು 'ವಚನ'ಗಳ ಹಾಗೆ ಇವೆ. ಅವಳ ಶಿವಪ್ರೇಮ, ಧರ್ಮ ಭೇದವಿಲ್ಲದ್ದು, ಅಂತರಂಗ ಶುದ್ಧಿಗೆ ಮಹತ್ವ ಕೊಡುವಂಥದ್ದು. ಸೊಳ್ನುಡಿಗಳು ಸಾಮಾನ್ಯವಾಗಿ ನಾಲ್ಕು ಸಾಲುಗಳ ಪದ್ಯ ರೂಪದಲ್ಲಿ ಇವೆ. ಬಹುತೇಕ ಲಲ್ಲವಾಖ್‌ಗಳು ಅಕ್ಕಮಹಾದೇವಿಯ ವಚನಗಳನ್ನು ಹೋಲುತ್ತವೆ. ಎಲ್ಲವೂ ಮೌಖಿಕ ಸಂಪ್ರದಾಯದಲ್ಲಿ ಉಳಿದುಬಂದಿವೆಯಾದ್ದರಿಂದ ಹೊಸ ಶಬ್ದಗಳು, ಪ್ರಕ್ಷಿಪ್ತಗಳು ಸಹಜವಾಗೇ ಸೇರಿವೆ. ಭಾರತ ದಲ್ಲಿ ಪರ್ಷಿಯನರ ಆಗಮನ, ಪ್ರಾಬಲ್ಯ ಹೆಚ್ಚುತ್ತಿದ್ದ ಆ ದಿನಗಳಲ್ಲಿ ಕ್ರಮೇಣ ಲಲ್ಲವಾಖ್ ಗಳಲ್ಲಿ ಪರ್ಷಿಯನ್ ಪದಗಳು ಸೇರಿವೆ. ಹೀಗಾಗಿ ನಮ್ಮಲ್ಲಿ ಸರ್ವಜ್ಞ ಮೊದಲಾದವರ ಹಾಗೆ ಲಲ್ಲವಾಖ್‌ಗಳಲ್ಲಿ ಎಷ್ಟು ಆಕೆಯವು, ಎಷ್ಟು ಸೇರ್ಪಡೆ ಆದವು ಎಂಬುದನ್ನು ಗುರುತಿಸುವುದು ಕಷ್ಟ. ಅವಳದೇ ಶೈಲಿಯಲ್ಲಿ ಅನೇಕರು ರಚನೆ ಮಾಡಿರಬಹುದು.

ಸಾಮಾನ್ಯವಾಗಿ ಲಲ್ಲವಾಖ್‌ಗಳನ್ನು ಅವಳ ಬದುಕಿನ ಬಗ್ಗೆ ತಿಳಿಸುವಂಥವು, ಲೋಕಕ್ಕೆ ಬೋಧಿಸುವಂಥವು ಮತ್ತು ಆಧ್ಯಾತ್ಮ ವಿಚಾರಗಳನ್ನು ಹೇಳುವಂಥವು ಎಂದು ಮೂರು ವಿಭಾಗಗಳಾಗಿ ವಿಂಗಡಿಸಿಕೊಳ್ಳುತ್ತಾರೆ.

ಕೆಲವು ಲಲ್ಲವಾಖ್‌ಗಳು :

ಕಣ್ಣೀರು ಕರೆಯುವೆನು ನಿಗಾಗಿ ಓ ಜೀವ
ಜಗದ ದಂಡೆಗೆ ನೀನು ಹಾಕಿರುವೆ ಲಂಗರವ
ಜಗದ ನೆರಳೂ ಜೊತೆ ಬರವು ನೀನೂ ಸಾರ ಜಾವ
ನಿಜದ ನಿಲುಮೆಯ ಯಾಕೆ ಮರೆತೆಯೆ ನನ ಜೀವ?

ಗುರು ನನಗೆ ನೀಡಿದ ಒಂದೇ ಮಾತು :
ಹೊರಗಿನ ನೋಟವ ಒಳಗಿಡು ಎಂದು
ಗುರು ಅಂದ ನುಡಿಯೆ ದೇವನದೆಂದು
ಕುಣಿಯತೊಡಗಿದೆ ಬತ್ತಲಾಗಿಂದು

ಇರುವುದೆಲ್ಲವೂ ಎಲ್ಲೆಲ್ಲೂನೂ ಶಿವನೆ ಇರುವ ಮನೆ
ಹಿಂದೂ ಬೇರೆ ಮುಸ್ಲಿಮ ಬೇರೆ-ಗೆರೆಗಳ ಹಾಕದಿರು
ತಿಳಿದು ಅರಿತುಕೊ ನಿನ್ನನು ನಿನ್ನಲ್ಲೇ
ಇದುವೆ ಪರಮನ ನಿಜದರಿವಿನ ಕಲ್ಪತರು.

ಸದಾ ಮಾನಕೆ ಚಳಿಯುರಿ ಮೈಗೆ ನಿನಗೆ ಅದೇ ರಕ್ಷೆ!
ಊಟಕ್ಕೆ ಹುಲ್ಲು; ಕುಡಿಯಲು ನೀರು-ಜೀವಕಷ್ಟೆಸಾಕು
ಯಾರು ಹೇಳಿದರೊ ಬಲಿಯ ನೀಡಲು ಬ್ರಾಹ್ಮಣ ನಿನಗೆ
ಜೀವವಿಲ್ಲದ ಕಲ್ಲಿನ ಮುಂದೆ ಕುರಿಯ ಮರಿಯ ತಂದು?

ಶಿವಾ ಶಿವಾ ಶಿರಗುಡುವರು ಸಾಸ ಹಂಸವಾಲಿಸುವರು
ದಿನದಿನ ಬೇಹಾರದಲಿ ಬಿದ್ದಿದ್ದರೂ
ಅಂಟು ಜಂಟಿಯ ಮನ ಬಿಡಿಸಿ ಕೂಡಿಕೊಂಡು
ಸುರು ಗುರುನಾಥನನ್ನೊಲಿಸುವರು

ನಾಲಿಗೆ ತೀಟೆ ಬಣ್ಣದ ದಿರಿಸು ನಿತ್ಯ ಶಾಂತಿ ತಾರವೋ
ತಿಳಿದವ ತಿಳಿವ ಲೋಕದ ಬಯಕೆ ನಂಬಿಕೆ ಎಲ್ಲ ದಂಡ
ಮೃತ್ಯು ಭೀತಿಯ ಚಿಂದಿ ಮಾಡಿ ಮೇಲಕ್ಕೇರಿರೋ
ಇಂಥ ತೃಪ್ತಿಯ ಬಾಳು ಬಾಳುವ ಮಂದಿ ಅಲ್ಲ ಕಾಗೆಗೆ ಪಿಂಡ.

ಒಡಲ ಬಳಲಿಸಬೇಡ ಹಸಿವು ತೃಷೆಗಳಲಿ
ಹಸಿವಾದಾಗ ಒಂದು ಹಿಡಿ ಅನ್ನ ಉಣ್ಣು
ವಿಧಿ ನೇಮ ಪೂಜೆಗಳು ಹಾಳಾಗಿ ಹೋಗಲಿ
ಒಳಿತನೇ ಮಾಡು-ನಿನ್ನ ಧರ್ಮವಿಟ್ಟು

ಲೋಭ ಕಾಮ ಕ್ರೋಧ - ಮೂವರಸುರರ ಕೊಲ್ಲು
ನಿನ್ನನೆ ಕೊಲಲು ಅಂಬನೆಸೆವರು ಅವರು

ಹುಷಾರು, ವಿವೇಕ ಸಂಯಮಗಳ ಊಟವಿಕ್ಕವರಿಗೆ;
ಹಸಿದ್ದ ಸಿದು ರಕ್ಕಸರು ಸೊರಗಿ ಹೋಗುವರು.

ಪೆದ್ದ ಪೆಕರರು ಶಾಸ್ತ್ರಪುಸ್ತಕಗಳನ್ನೋದುವರು
ಗಿಳಿ ಹಾಗೆ ಉಲಿಯುವವರು ರಾಮರಾಮ
ಮಜ್ಜಿಗೆ ಅಂಬಂತೆ ನೀರನ್ನೆ ಕಡೆಯುವರು
ಫಲವಿಲ್ಲ ಯತ್ನದಲಿ; ಆಹ, ಕೊಬ್ಬಿ ಮೆರೆಯುವರು

ನಿನಗೂ ಆರು ನನಗೂ ಆರು, ನೀಲಿಕೊರಳದೇವ
ದೂರಕೆ ಸರಿದು ನರಳುತಾ ಇದೆ ಯಾಕೆ ನನ್ನ ಜೀವ?
ನೀನಾರಕೆ ಒಡೆಯ; ಆ ಆರೂ ಸೇರಿ ಪೂರ್ತಿ
ನನ್ನ ಲೂಟಿಸಿದಂದು ಶುರುವೋ ಭಿನ್ನಭಾವ

[ಇಲ್ಲಿ ಆರು ಎಂದರೆ ಮಿತಿಗೋ ಮಾಯೆ (ಸಂಕೋಚ ಶಕ್ತಿ), ಕಲೆ (ಕಲ್ಮಶ), ವಿದ್ಯೆ (ಸೀಮಿತ ಅರಿವು) ರಾಗ (ಬಂಧನ), ಕಾಲ (ನಶ್ವರತೆ), ನಿಯತಿ (ವಿಧಿನಿಯಮ) ಮತ್ತು ಇನ್ನೊಂದು ಆರು ಕಂಚುಕಗಳು ಎಂದು ಅರ್ಥೈಸುತ್ತಾರೆ]

ನಾನು ಲಲ್ಲ, ನನ್ನ ಮನಸಿನ ವನದ ಬಾಗಿಲ ಸಾರಿದೆ
ಶಿವನು ಶಕ್ತಿಯು ಕೂಡಿಕೊಂಡಿದ್ದ ಸುಖವನು ನೋಡಿದೆ
ಅಲ್ಲೀಗೆ ಆಗಲೆ ಆನಂದಕೊಳದ ನೀರಲಿ ಮಿಂದೆ
ಜೀವವನ್ನು ಕಳ ಹಿಡಿದುಕೊಂಡಂದು ಜಗತ್ತು ಕಾಡುವುದೆ?

ಬಯಸಲಿಲ್ಲ ಯಾವುದನೂ, ನಂಬಲಿಲ್ಲ ಏನನೂ
ನನ್ನ ವಾಖ್ ತಂದೀಯಿತು ನಾನು ಕುಡಿವ ಮಧುವನು
'ವಾಖಿ'ನ ತಾಖತ್ತಿನಿಂದ ಒಳಗುತ್ತವೆ ಹಿಡಿದುಕೊಂಡೆ
ಸುರುಳಿ ಸುತ್ತಿ ಬಡಿದು ನೆಲದ ಮೇಲೆ ಅದನು ಚಿಂದಿ ಮಾಡಿದೆ.

ಈಗ ಹರಿವ ನದಿ ಕಂಡೆ
ಈಗ ಸೇತು ಇಲ್ಲ ದಡವೂ ಇಲ್ಲ
ಈಗ ಹೂತ ಪೊದೆ ಕಂಡೆ
ಈಗ ಗುಲಾಬಿ ಇಲ್ಲ ಮುಳ್ಳೂ ಇಲ್ಲ.

ಪರಮಹಂಸ ಯೋಗಿ ತೊರೆದು ತನ್ನೂರನ್ನು
ಪೀಠಪೀಠಗಳಲಿ ಸುಳಿದ
ತನ್ನ ಒಳಗಿನೊಳಗೆ ನೆಲೆಗೊಂಡು ಇರುವಂಥ
ಅವನ ಕಾಣಲು ಹೊರಗೆ ಅಲೆದ

ಇಲ್ಲಿ ಮಾತಿಲ್ಲ ಭಾವಗಳಿಲ್ಲ, ಕುಲ, ಅಕುಲ ಇಲ್ಲ
ಮೌನಮುದ್ರೆ ಇತ್ಯಾದಿಗಳಿಗೆ ಬರಲಪ್ಪಣೆ ಇಲ್ಲ
ಶಿವನದ್ದಾಗಲಿ ಶಕ್ತಿಯದಾಗಲಿ ಸುಳಿವುನೂ ಇಲ್ಲ
ಅರಿತಾಗ ಬೇಕಾದುದಿನ್ನೂ ಏನೋ ಉಳಿದುಕೊಂಡಿದೆಯಲ್ಲ

ತನುವನು ಕೊಟ್ಟೆ ಮನವನು ಕೊಟ್ಟೆ
ಬಾರಿಸಿತು ಸತ್ಯದ ಗಂಟೆ
ಧಾರಣೆಯಲ್ಲಿ ಮನಸನು ನೆಟ್ಟೆ
ಆಕಾಶ ಪ್ರಕಾಶ ಹಾದೆ.

ಗಾಲಿಯನಾಡಿಸಿ ಕೂಡಲೆ ತಿರುಗಿಸಬಲ್ಲೆ ಗಿರಣಿಯ
ಮನಸೇ ಗೂಟ ಗಿರಣಿಯ ತಾ ತಿರುಗಿಸಬಲ್ಲದು
ಒಮ್ಮೆ ತಿರುಗಿದರಾಯ್ತು ನುಣ್ಣಗೆ ನುರಿ ನುರಿಸಬಲ್ಲದಯ್ಯ
ಅಲ್ಲಿಂದಾಚೆ ಗಿರಣಿಗೆ ದವಸ ತಾನೇನೆ ಬರುವುದು.

ಕುದುರೆಯು ಶಿವನು ಕೇಶವನು ಜೀನು
ಅಲಂಕಾರ ಚಾಟಿಗೆ ಬ್ರಹ್ಮನು
ಯೋಗದಿಂದ ಯೋಗಿ ಹಿಡಿವನು ಖೂನು-
ಸರದಾರ ಯಾವನೋ ಅವನು ?

ಹೆದ್ದಾರಿಯಿಂದ ಬಂದೂ ಅದ ಹಿಡಿದು ಹೋಗಲಿಲ್ಲ
ದಿನ ಇಳಿಯುತಿರುವುದಲ್ಲ ಈ ಪರಿ ನಡುವಿನಲ್ಲೆ
ತಡಕಿ ನೋಡಿಕೊಂಡೆ ಚಿಕ್ಕಾಸು ಕೂಡ ಇಲ್ಲ
ಅಂಬಿಗನ ಕೂಲಿಯನ್ನು ನಾ ಹೇಗೆ ನೀಡಬಲ್ಲೆ ?

❑

ಭಾರತೀಯ ಭಕ್ತಿಪಂಥ ಮತ್ತು ಮಹಿಳೆಯರು

ಬಿ. ಗಂಗಾಧರ ಮೂರ್ತಿ

"ಯತ್ರ ಪೂಜ್ಯಂತೇ ನಾರಿ ರಮತೇ ತತ್ರ ದೇವಾಃ" ಎಂಬ ಅಗತ್ಯಕ್ಕಿಂತಲೂ ಹೆಚ್ಚು ಉತ್ಸಾಹದಿಂದ ಉದ್ಧರಿಸಲಾಗುವ ಹೇಳಿಕೆ ಮಹಿಳೆಯ ಸಾಮಾಜಿಕ ಸ್ಥಾನಮಾನವನ್ನು ಕುರಿತ ಚರ್ಚೆಯಲ್ಲಿ ತಪ್ಪದೆ ತಲೆ ಹಾಕುತ್ತದೆ. ಈ ಹೇಳಿಕೆಯು ಸನಾತನ ಧರ್ಮದ ಪುನರುಜ್ಜೀವನಕ್ಕಾಗಿ ಹಂಬಲಿಸುವವರ ಅಪರಾಧಿ ಮನೋಭೂಮಿಕೆಯ ಅಭಿವ್ಯಕ್ತಿಯಾಗಿರಬೇಕೆಂಬ ಸಂದೇಹ ನನಗಿದೆ. ಮಹಿಳೆಗೆ ಇಂತಹ ಅತಿ ಗೌರವದ ಸಾಮಾಜಿಕ ಸ್ಥಾನಮಾನಗಳನ್ನು ನಮ್ಮ ಪ್ರಾಚೀನ ಹಿಂದೂ ಸಮಾಜ ಕಲ್ಪಿಸಿತ್ತು ಎಂಬುದು ಕಾಲ್ಪನಿಕವೋ, ವಾಸ್ತವವೋ ತಿಳಿಯದು. ಆದರೆ ನಾವು ಬದುಕುತ್ತಿರುವ ಆಧುನಿಕ ಸಮಾಜದಲ್ಲಿ ಮಹಿಳೆಯ ಸ್ಥಾನಮಾನಕ್ಕೆ ಸಂಬಂಧಿಸಿದ ದೃಷ್ಟಿಕೋನ ಹೀಗಿದೆ: "ದೇವರು ಪುರುಷ ಹಾಗೂ ಮಹಿಳೆಯನ್ನು ಸಮಾನವಾಗಿ ಸೃಷ್ಟಿಸಿಲ್ಲ. ಮಹಿಳೆಯರು ಪುರುಷರೊಂದಿಗೆ ಸ್ಪರ್ಧಿಸುವುದರ ಬಗ್ಗೆ ಯೋಚಿಸುವುದನ್ನು ನಿಲ್ಲಿಸಿ ಮನೆಗೆ ಮರಳಬೇಕು." ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದವರು ಸರ್ವೋಚ್ಚ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶರಾಗಿದ್ದ (ಈಗ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು) ಶ್ರೀ ರಂಗನಾಥ ಮಿಶ್ರರು. (ನವೆಂಬರ್ 1990) ಇಪ್ಪತ್ತನೇ ಶತಮಾನದ ಕೊನೇ ಪಾದದಲ್ಲಿರುವ ಭಾರತೀಯ ನ್ಯಾಯಾಂಗದ ಅತ್ಯುನ್ನತ ಪೀಠವನ್ನು 'ಅಲಂಕರಿಸಿದ್ದ' ಜಸ್ಟೀಸ್ ಮಿಶ್ರರಿಗೆ ಈ ಅಭಿಪ್ರಾಯವಿದ್ದರೆ ಪ್ರಾಚೀನ ಭಾರತದಲ್ಲಿ ಅವಳ ಸ್ಥಾನಮಾನವು ಹೇಗಿದ್ದಿರಬಹುದೆಂದು ಊಹಿಸಲು ಘನಪಾಠಿ ಪಂಡಿತರೇನೂ ಬೇಕಿಲ್ಲ.

ಚಾತುರ್ವರ್ಣ್ಯವಾಗಿ ಆರ್ಯರ ಆಗಮನದ ನಂತರ ವಿಸ್ತೃತಗೊಂಡ

ವ್ಯವಸ್ಥೆಯು ಮೂಲದಲ್ಲಿ ಎರಡು ವರ್ಣಗಳ ವ್ಯವಸ್ಥೆಯಾಗಿದ್ದುದರ ಆಧಾರಗಳು ಋಗ್ವೇದದಲ್ಲೇ ಕಂಡುಬರುತ್ತದೆ. ಹೆಣ್ಣು- ಗಂಡುಗಳ ಲಿಂಗಭೇದದ ಸಾಮಾಜಿಕ ಪಾತ್ರವು ನಿಖರಗೊಳ್ಳಲು ನಡೆದ ಸುದೀರ್ಘ ಸಂಘರ್ಷದ ಈ ಸಂಕ್ರಮಣ ಕಾಲವನ್ನು ಭಾರತೀಯ ಇತಿಹಾಸದ ಮೊದಲ ಸಾಮಾಜಿಕ ಕ್ರಾಂತಿ ಎನ್ನುವವರೂ ಇದ್ದಾರೆ. ಪ್ರಾರಂಭಿಕ ಕಾಲದ ಹೆಣ್ಣು-ಗಂಡುಗಳೆಂಬ (ಕ್ಷತ್ರ-ಬ್ರಹ್ಮನ್ ಎಂದು ಗುರುತಿಸಲಾಗಿರುವ) ದ್ವಿವರ್ಣ ವ್ಯವಸ್ಥೆಯ ಸಂದರ್ಭದ, ಈ ಸಾಮಾಜಿಕ ಬದಲಾವಣೆಯು ಭಾರತೀಯ ಸಮಾಜದ ಉತ್ಪಾದನಾ ಕ್ಷೇತ್ರದಲ್ಲಿ ಪುರುಷನ ಪ್ರಧಾನತೆಯನ್ನು ಸ್ಥಾಪಿಸಿದ ಕಾಲಾವಧಿಗೆ ಸೇರಿದ್ದು. ಗಂಗಾತೀರದ ನಾಗರಿಕತೆಯಲ್ಲಿ ಮಹಿಳೆ ಭೂಮಿಯನ್ನು ಕೃಷಿಗಾಗಿ ಉಳುಮೆ ಮಾಡುವ ಪದ್ಧತಿಯು ವ್ಯಾಪಕವಾಗಿ ಜಾರಿಯಲ್ಲಿತ್ತು. ಈ ಪದ್ಧತಿಯನ್ನು ಮೂಲದ ಸ್ಮೃತಿಯಾಗಿ ವಿಧಿಕ್ರಿಯೆಯ ರೂಪದಲ್ಲಿ ಇಂದಿಗೂ ಉಳಿಸಿ ಕೊಳ್ಳಲಾಗಿದೆ. ಭೋಜಪುರಿ ಜಾನಪದ ಪರಂಪರೆಯ ಹಾರ್ ಫಾರ್ಮರಿ ಗೀತೆಗಳಲ್ಲಿ ಹಳ್ಳಿಯ ಪ್ರಾಯದ ಹೆಣ್ಣುಗಳು ಮಳೆಗಾಗಿ ನಡುರಾತ್ರಿಯಲ್ಲಿ ಬೆತ್ತಲೆಯಾಗಿ ಉಳುಮೆ ಮಾಡುವ ಚಿತ್ರಣವಿದೆ. ಇಂತಹ ವಿಧಿಕ್ರಿಯೆಯಲ್ಲಿ ಜನಕ ಮಹಾರಾಜನ ಮಡದಿ ಸೋಂಧಾಲಿಯಾ ಕೂಡಾ ಭಾಗವಹಿಸಿದ ಪ್ರಸ್ತಾವ ಬರುತ್ತದೆ. ಉತ್ಪಾದ್ಯ ವ್ಯವಸ್ಥೆಯಲ್ಲಿ ಪಾತ್ರವಹಿಸುತ್ತಿದ್ದ ಮಹಿಳೆಯ ಸಾಮಾಜಿಕ ಸ್ಥಾನವನ್ನು ಪಲ್ಲಟಗೊಳಿಸಿ ಕ್ರಮೇಣ ಉಳುಮೆಗಾಗಿ ನೇಗಿಲನ್ನು ಬಳಸಲು ತೊಡಗಿದ ಪುರುಷಪರ ವ್ಯವಸ್ಥೆಯತ್ತ ಸಮಾಜವು ಹೊರಳತೊಡಗಿದ್ದು ಆಗಲೇ. ನೇಗಿಲು ಆಗಿನ ಕಾಲದ ಪುರುಷ ಪ್ರಧಾನ ಸಮಾಜದ ಸಂಕೇತವಾದದ್ದು ಹೀಗೆ.

ಅಭಿಜಾತ ಸಮಾಜವೆಂದು ಕರೆಯಲಾಗುವ ಇತಿಹಾಸದ ಕಾಲಘಟ್ಟದಲ್ಲಿ ಜೀತದಾಳುಗಳಿಗೆ ಮತ್ತು ಮಹಿಳೆಯರಿಗೆ ಸಮಾನತೆಯನ್ನು ನೀಡಲಾಗದ ಸಾಮಾಜಿಕ ಪರಿಮಿತಿಗಳು ಇದ್ದವೆಂಬು ದರಲ್ಲಿ ವಿಶೇಷತೆಯೇನೂ ಇಲ್ಲ. ಈ ಅಭಿಜಾತ ಯುಗವೆಂಬುದು ಕರಾಳಯುಗವಾಗಿದ್ದನ್ನು ಕುರಿತು ಇತಿಹಾಸಕಾರರು ಮತ್ತು ಸಮಾಜಶಾಸ್ತ್ರಜ್ಞರು ಹೇರಳವಾಗಿ ಬರೆದಿದ್ದಾರೆ. ಗ್ರೀಕ್ ಅಭಿಜಾತ ಸಮಾಜದ ಬೌದ್ಧಿಕ ಪರಂಪರೆಯ ಪ್ರಸಿದ್ಧ ದಾರ್ಶನಿಕನೂ, ಪ್ರತಿಭಾವಂತನೂ ಆದ ಅರಿಸ್ಟಾಟಲ್‌ಗೆ ಗಂಡಸು ದೇವರ ಪರಿಪೂರ್ಣ ಸೃಷ್ಟಿ ಎನಿಸಿದರೆ, ಹೆಂಗಸು ಅಪರಿಪೂರ್ಣ ಸೃಷ್ಟಿ ಎನಿಸಿದಳಂತೆ. ಶಿಕ್ಷಣದಲ್ಲಿ ಮಹಿಳೆಗೆ ಸಮಾನಾವಕಾಶ ಕಲ್ಪಿಸಬೇಕೆಂದು ಪ್ರತಿಪಾದಿಸಿದ ನೆನ್ನಲಾದ ದಾರ್ಶನಿಕ ಪ್ಲೇಟೊ 'ಸದ್ಯ' ದೇವರು ನನ್ನನ್ನು ಹೆಣ್ಣಾಗಿ ಹುಟ್ಟಿಸಲಿಲ್ಲವಲ್ಲ ಎನ್ನುತ್ತಿದ್ದನಂತೆ. 'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ' ಎಂಬ ನಿಷೇಧವನ್ನು ಕುಖ್ಯಾತ ಮನುಸ್ಮೃತಿ ಹೇರುತ್ತದೆ. ಮನು ಪೂರ್ವ ಸಮಾಜದಲ್ಲಿ ಮಹಿಳೆಗೆ ಪುರುಷ ಸಮಾನ ಅಧಿಕಾರಗಳು ಇದ್ದವೆಂದು ಅಂಬೇಡ್ಕರ್ ಅಭಿಪ್ರಾಯಪಡುತ್ತಾರಾದರೂ ಸನಾತನವಾದಿ ಪಂಡಿತರು ಒದಗಿಸುವ ಆಧಾರಗಳನ್ನೇ ಆಶ್ರಯಿಸುತ್ತಾರೆ. ಕರಾಳ ಯುಗದ ಮಹಿಳೆಯ ಸಾಮಾಜಿಕ ಸ್ಥಾನಮಾನವನ್ನು ನಿರ್ವಚಿಸಿದ ಆ ಯುಗದ ಪ್ರಾತಿನಿಧಿಕ ಅಭಿವ್ಯಕ್ತಿಗಳ ಪರಿಮಿತಿಯು ಯುಗದ ಪರಿಮಿತಿಯೂ ಆಗಿರುವ ಸಾಧ್ಯತೆಯೇ ಹೆಚ್ಚು. ಆದರೆ ಆಧುನಿಕ ಯುಗದ ಭಾರತೀಯ ಮಹಿಳೆಯ ಸಾಮಾಜಿಕ ಪಾತ್ರವನ್ನು ನಿರ್ದೇಶಿಸುವ ಪ್ರಯತ್ನ ಮಾಡಿಸ ಜಸ್ಟಿಸ್ ಮಿಶ್ರ ಮತ್ತು ಅವರಂತಹವರು ಇನ್ನೂ

ಆ "ಕರಾಳ ಯುಗ" ಧರ್ಮದ ಪರಿಮಿತಿಯನ್ನು ಮೀರದಿರುವುದು ಮಹಿಳಾ ಸಮಾನತೆಯ ದೃಷ್ಟಿಯಿಂದ ಆತಂಕಕಾರಿಯಾದ ವಿಷಯವಾಗಿದೆ.

ಈ ಹಿನ್ನೆಲೆಯಲ್ಲಿ ನೋಡಿದಾಗ 6ನೇ ಶತಮಾನದಿಂದ 16ನೇ ಶತಮಾನದ ಹತ್ತು ಶತಮಾನಗಳ ಸುದೀರ್ಘ ಕಾಲಾವಧಿಯ ಭಕ್ತಿಪಂಥವೆಂದು ಕರೆಯಲಾಗುವ ಭಿನ್ನಮತೀಯ ಚಳವಳಿಗಳು ಮಹಿಳೆಯ ವ್ಯಕ್ತಿತ್ವ ವಿಕಾಸ ಮತ್ತು ಹೆಣ್ಣು-ಗಂಡಿನ ಸಂಬಂಧದ ಪರಿಧಿಯ ವಿಸ್ತಾರಕ್ಕೆ ಕಲ್ಪಿಸಿದ ಅವಕಾಶಗಳು ಕ್ರಾಂತಿಕಾರಕವಾಗಿ ಕಂಡರೆ ಅದರಲ್ಲಿ ಅಸಹಜವಾದದ್ದೇನಿಲ್ಲ. ಜಾಗತಿಕವಾಗಿ ಹಲವಾರು ಚಾರಿತ್ರಿಕ ಸಂದರ್ಭಗಳಿಂದ ರೂಪುಗೊಂಡಿರುವ ಕ್ರಾಂತಿಯ ಬಗೆಗಿನ ಪರಿಕಲ್ಪನೆಯ ಇಂದಿನ ತಿಳಿವಳಿಕೆಗೆ ಈ ಭಿನ್ನಮತೀಯ ಚಳವಳಿಗಳು ಕ್ರಾಂತಿಕಾರಕವಾಗಿ ಕಾಣಲಾರವು ಎಂಬುದೇನೋ ನಿಜ. ಧಾರ್ಮಿಕ ಚೌಕಟ್ಟಿನೊಳಗೆ ಮೂರ್ತಗೊಂಡ ಈ ಪ್ರತಿಭಟನೆಗಳು ಹೊಸ ಧಾರ್ಮಿಕ ಆಯಾಮಗಳನ್ನು ಸೃಷ್ಟಿಸಿಕೊಂಡಂತೆಯೇ ಸಾಮಾಜಿಕವಾದ ಹೊಸ ಆಯಾಮಗಳ ಸೃಷ್ಟಿಗೂ ಪ್ರತ್ಯಕ್ಷ ಪ್ರೇರಕ ಶಕ್ತಿಗಳಾಗಿವೆ. ಹಾಗೆಯೇ ದೇಶೀ ಭಾಷೆಗಳ ಸಾಹಿತ್ಯಕ್ಕೂ ಮೌಲಿಕವಾದ ಕೊಡುಗೆಯನ್ನು ನೀಡಿವೆ. ಸಾಮಾಜಿಕವಾಗಿ ಶತಮಾನಗಳವರೆಗೆ ದುರ್ಬಲಗೊಳಿಸಲ್ಪಟ್ಟ ಸಮುದಾಯಗಳು ಮತ್ತು ಮಹಿಳೆ ಸೃಜನಶೀಲತೆಯನ್ನು ಪಡೆದುಕೊಳ್ಳಲು ಸಾಧ್ಯವಾದದ್ದು ಭಕ್ತಿಪಂಥದ ಚಳವಳಿಗಳ ಮೂಲಕವೇ.

ಪುರುಷನೆಂಬ ಅಹಮಿಕೆಯು ಅಳಿಯದವನಿಗೆ ಭಕ್ತಿಪಂಥದಲ್ಲಿ ಸ್ಥಾನವಿಲ್ಲ. ಅಹಂಕಾರವು ಭಕ್ತಿಮಾರ್ಗದ ಮೋಕ್ಷ ಸಾಧನೆಗೆ ತೊಡಕು. ಭಕ್ತಿಯ ಅನುಭಾವದಲ್ಲಿ ಗಂಡು ಹೆಣ್ಣಾಗುತ್ತಾನೆ. ಭಕ್ತರೆಲ್ಲ ಹೆಣ್ಣು. ಹೆಣ್ಣಾದ ಅನುಭಾವಿಗಳಿಗೆ ದೈವವೊಂದೇ. ಸಮರ್ಪಣೆ, ವಿನಮ್ರತೆ, ಹೆಣ್ಣು ಭಾವ ಭಕ್ತಿಪಂಥದ ಪ್ರಧಾನ ನೆಲೆಗಳು. ಭಕ್ತಿಪಂಥದ ಮಹತ್ವದ ಸಾಧನೆಯೆಂದರೆ ಮಾತೃ ಭಾಷೆಯಲ್ಲಿ ಸಾಹಿತ್ಯ ರಚಿಸಿ ಮಾತೃಪ್ರಧಾನ ಭೂಮಿಕೆಯ ತಾಯ್ನುಡಿಯನ್ನೂ ಆ ಮೂಲಕ ಭಾಷಾ ಸಾಹಿತ್ಯಗಳನ್ನೂ ಬೆಳೆಸಿದ್ದು. ವೈದಿಕ ಸಮಾಜದ ಅತಿ ಎತ್ತರದ ಸ್ಥಾನವನ್ನೂ ಆರ್ಯರ ಪುರುಷ ಪ್ರಧಾನ ವ್ಯವಸ್ಥೆಯ ಪಿತೃಸ್ಥಾನವನ್ನೂ ಅಲಂಕರಿಸಿದ್ದವರು ಬ್ರಾಹ್ಮಣರು. ಭೂಸುರರು ದೇವರೊಂದಿಗೆ ಮಾತನಾಡುವ ಭಾಷೆ ಸಂಸ್ಕೃತ - ದೇವಭಾಷೆ, ಭಕ್ತಿಚಳವಳಿಯ ಧಾರ್ಮಿಕ ಕ್ಷೇತ್ರದಲ್ಲಿ ಪಿತೃಭಾಷೆಯೂ, ದೇವಭಾಷೆಯೂ ಆಗಿದ್ದ ಸಂಸ್ಕೃತವು ಗಳಿಸಿದ್ದ ಏಕಸ್ವಾಮ್ಯತೆಯನ್ನು ಮುರಿದು, ಮಾತೃಭಾಷೆಯಲ್ಲಿ ಭಕ್ತನು ಆರಾಧ್ಯ ದೈವದೊಂದಿಗೆ ಮಾತನಾಡಲು ಸಾಧ್ಯವಾಗಿದ್ದು ಹಾಗೂ ಪುರೋಹಿತರಂತಹ ದಲ್ಲಾಳಿಗಳ ಮತ್ತು ಧಾರ್ಮಿಕ ಸಾಹಿತ್ಯದ ನೆರವಿಲ್ಲದೆ ದೇವರೊಂದಿಗೆ ಸಂವಾದ ನಡೆಸಲು ಸಾಧ್ಯವಾದದ್ದು ಭಕ್ತಿಚಳವಳಿಯಲ್ಲಿಯೇ ಎಂಬುದನ್ನು ಎ.ಕೆ. ರಾಮಾನುಜನ್ ಗುರುತಿಸುತ್ತಾರೆ.

ಭಕ್ತಿಪಂಥದ ಈ ಅಂದೋಲನದಲ್ಲಿ ಕಂಡುಬರುವ ಪರ್ಯಾಯಗಳು ಮೂಲ ನೆಲೆಗಳಲ್ಲಿ ಸ್ತ್ರೀ ಪ್ರಧಾನ ಅಂಶಗಳಿಂದ ಪ್ರೇರಿತವಾದಂಥವುಗಳಾಗಿವೆ. ದಕ್ಷಿಣದಲ್ಲಿ ಪ್ರಾರಂಭವಾಗಿ, ಅಲೆ ಅಲೆಯಾಗಿ ಹರಡುತ್ತಾ ಉತ್ತರ ಭಾರತವನ್ನು ವ್ಯಾಪಿಸಿ, ಬಹುಶಃ ಅಖಿಲ ಭಾರತ ವ್ಯಾಪ್ತಿಯನ್ನು ಪಡೆದ ಈ ಚಳವಳಿಯಲ್ಲಿ ಮಹಿಳಾ ಸಂತರು ನಿರ್ವಹಿಸಿದ ಪಾತ್ರವನ್ನು ಗಮನಿಸಿದರೆ, ಈ

ಧಾರ್ಮಿಕ ಚಳವಳಿಯು ಮಹಿಳೆಯರಿಗೆ ವಿಮೋಚನೆಯ ಚಾಲಕ ಶಕ್ತಿಯಾಗಿದ್ದುದು ಕಂಡು ಬರುತ್ತದೆ. ಪ್ರಭಾವಶಾಲಿ ವ್ಯಕ್ತಿತ್ವದ ಒಬ್ಬ ಮಹಿಳೆಯಾದರೂ ಇರದ ಭಕ್ತಿಚಳವಳಿಯು ದಕ್ಷಿಣದಲ್ಲೂ ಇಲ್ಲ. ಉತ್ತರದಲ್ಲೂ ಇಲ್ಲ. ಅಕ್ಕ, ಮೀರಾ, ಅವ್ವೆಯಾರ್, ಆಂಡಾಳ್, ಲಾಲಾದೇಡ್‌ನಂಹವರು ಸಾಂಪ್ರತಾದಾಯಿಕ ಅರ್ಥದ ಗಂಡು-ಹೆಣ್ಣಿನ ಸಂಬಂಧವನ್ನು ಬದಲಾಯಿಸುವ, ಧಿಕ್ಕರಿಸುವ ಅಥವಾ ತಿರಸ್ಕರಿಸುವ ನಿಲುವುಗಳು ಪರಂಪರಾಗತ ಮೌಲ್ಯಗಳಿಗೆ ಒಡ್ಡಿದ ಸವಾಲುಗಳಾಗಿದ್ದವು.

ಭಕ್ತಿಚಳವಳಿಯ ಪುರುಷರಿಗೆ ಪುರುಷಪ್ರಧಾನ ಸಮಾಜದಲ್ಲಿ ಲಿಂಗಭೇದವನ್ನಾಧರಿಸಿದ ಸಾಮಾಜಿಕ ಪ್ರತಿಕೂಲಗಳಿರಲಿಲ್ಲ. ವಿವಾಹಿತರಾಗಿ ಕುಟುಂಬ ಜೀವನ ಸಾಗಿಸುವುದು ಭಕ್ತಿಯ ಸಮರ್ಪಣಾ ಜೀವನಕ್ಕೆ ಸಾಮಾಜಿಕವಾದ ಆಪತ್ತನ್ನು ಒಡ್ಡುತ್ತಿರಲಿಲ್ಲ. ಗೃಹಸ್ಥ ಜೀವನವನ್ನು ಸ್ವೀಕರಿಸಿಯೂ ಭಕ್ತನಾಗಿ ಬೀದಿಗಿಳಿಯುವುದು, ಬೋಧಕನಾಗಿ ಊರೂರು ಸುತ್ತುವುದು ಸಮಸ್ಯೆಯನ್ನು ಸೃಷ್ಟಿಸುತ್ತಿರಲಿಲ್ಲ. ಆದರೆ ಭಕ್ತಿಪಂಥದ ಮಹಿಳೆಯ ಇಂತಹ ಸ್ವಾತಂತ್ರ್ಯಾಪೇಕ್ಷೆಯನ್ನು ಮಾನ್ಯಮಾಡುವುದು ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಸಾಧ್ಯವಿರಲಿಲ್ಲ. ಭಕ್ತಿಪಂಥಧ ಮಹಿಳಾ ಸಂತರು ಪುರುಷ ಸಂತರಿಗೆ ಎದುರಾದಾಗ ಎರಡು ವಿಶಿಷ್ಟ ರೀತಿಯ ಸಮಸ್ಯೆಗಳನ್ನು ಎದುರುಗೊಳ್ಳುತ್ತಾರೆ. ಈ ಸಮಸ್ಯೆಗಳೆಂದರೆ ವಿವಾಹ ಮತ್ತು ಹೆಣ್ಣೆಂಬ ದೇಹ. ಸಂತ ಮಹಿಳೆಯರಲ್ಲಿ ಬಹಿನಾಭಾಯಿಯಂಥವರನ್ನು ಬಿಟ್ಟರೆ ಮೋಕ್ಷ ಸಾಧನೆಯ ಹುಡುಕಾಟದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡ, ಮಹಿಳೆಯರ ಸಾಂಪ್ರದಾಯಿಕ ಅರ್ಥದ ವಿವಾಹ ಮತ್ತು ದಾಂಪತ್ಯವನ್ನು ಒಪ್ಪಿಕೊಂಡವರಲ್ಲ. ಆದರೂ ಭಕ್ತಿ ಜೀವನವನ್ನು ಆಲಂಗಿಸಿಕೊಂಡ ಸಾಧಕ-ಪತಿಯ "ಇಚ್ಛೆಯನರಿತು ನಡೆವ ಸತಿ"ಯಾಗಿ ಸಾಧ್ವಿಯರೆನಿಸಿಕೊಂಡ ತಿರುವಳ್ಳುವರ್‌ನ ಆದರ್ಶಮಯ ಆಜ್ಞಾನುವರ್ತಿ ವಾಸುಕಿಯಂತಹ ಪತ್ನಿಯರಿದ್ದಾರೆ. ಮಹಾರಾಷ್ಟ್ರ ಮತ್ತು ಗುಜರಾತ್‌ಗಳಲ್ಲಿ ಕಂಡುಬರುವಂತೆ ದಾಂಪತ್ಯವನ್ನು ಒಪ್ಪಿಕೊಂಡು ಅದರ ಪರಿಮಿತಿಯೊಳಗೆ ಭಕ್ತಿ ಚಳವಳಿಯಲ್ಲಿ ಭಾಗಿಯಾದವರಿದ್ದಾರೆ. ಮುಕ್ತಾ, ಸೋಯ್‌ರಾ ಮತ್ತು ಅಪೂಬಾಯಿಯರಂತಹ ಮಹಿಳಾ ಸಂತರು ಈ ಗುಂಪಿಗೆ ಸೇರಿದವರು. ಕೌಟುಂಬಿಕ ಸಂಬಂಧಗಳಲ್ಲಿ ಸಾಂಪ್ರದಾಯಿಕ ಚೌಕಟ್ಟನ್ನು ಸ್ವಲ್ಪ ಮಟ್ಟಿಗೆ ಪ್ರಶ್ನಿಸಿದರೂ ಅದನ್ನು ತಿರಸ್ಕರಿಸದೆ ಸಾಧ್ವಿಯರಾಗಿ ಅಥವಾ ಪರಮಾಧಿ ಎಂದು ಪರಿಗಣಿಸಲ್ಪಟ್ಟ ಸಾಧಕಳ ಸ್ವತಂತ್ರ ವ್ಯಕ್ತಿತ್ವ ವಿಕಾಸವನ್ನು ಬಯಸದ ಮಹಿಳಾ ಸಂತರಾಗಿ ಜೀವಿಸಿದ ಇಂತಹ ಮಹಿಳೆಯರದ್ದು ಒಂದು ಗುಂಪು.

ಮತ್ತೊಂದು ಗುಂಪಿನ ಮಹಿಳಾ ಸಂತರು ವಿವಾಹ ಮತ್ತು ಕೌಟುಂಬಿಕ ಜೀವನವನ್ನು ತಮ್ಮ ಧಾರ್ಮಿಕ ಆಕಾಂಕ್ಷೆಗಳಿಗೆ ಮಾರಕವೆಂದು ಬಗೆಯುತ್ತಾರೆ. ಆ ಮೂಲಕ ಈ ಸಂಬಂಧಗಳನ್ನು ಧಿಕ್ಕರಿಸುತ್ತಾರೆ ಅಥವಾ ತಿರಸ್ಕರಿಸುತ್ತಾರೆ. ಹಿಂದೂ ಮತ್ತು ಬೌದ್ಧ ಸಂಪ್ರದಾಯಗಳು ಮಹಿಳೆಗೆ ಸಾಧಕಳ ಸ್ವತಂತ್ರ ವ್ಯಕ್ತಿತ್ವವನ್ನೂ ಕೌಟುಂಬಿಕ ಸಂಬಂಧಗಳಲ್ಲಿ ಪುರುಷನಿಗಿದ್ದ ಗೌರವದ ಸಮಾನ ಸ್ಥಾನವನ್ನೂ ನೀಡುವಂತಹ ಬೌದ್ಧಿಕ ಮತ್ತು ಸಾಮಾಜಿಕ ರಚನೆಗಳಾಗಿರಲಿಲ್ಲ. ಸಾಧಕಳ ಸ್ವತಂತ್ರ ವ್ಯಕ್ತಿತ್ವ ವಿಕಾಸದ ದೃಷ್ಟಿಯಿಂದ ಇವೆರಡೂ ವಿಫಲ ಸಾಮಾಜಿಕ ರಚನೆಗಳು.

ಬೌದ್ಧ ಧರ್ಮವು ಪ್ರಭಾವಶಾಲಿ ಭಿನ್ನಮತೀಯ ಚಳವಳಿ. ಬುದ್ಧನ ಸಂಘ-ಗಣದ ಕೂಟ ರಚನೆಯಲ್ಲಿ ಬ್ರಾಹ್ಮಣ ವರ್ಣಕ್ಕೆ ಸ್ಥಾನವಿರಲಿಲ್ಲವೆಂಬುದು ನಿಜವಾದರೂ ಮಹಿಳೆಯ ಬಗ್ಗೆ ಬುದ್ಧನ ನಿಲುವು ಕ್ರಾಂತಿಕಾರಕ ಖಚಿತತೆಯುಳ್ಳದ್ದಾಗಿರಲಿಲ್ಲ. ಗೃಹಸ್ಥ ಜೀವನವನ್ನು ಆರಿಸಿಕೊಂಡ ಮಹಿಳೆಯು ಪುರುಷನಿಗೆ ಅಧೀನಳಾಗಿ ಅವನ ಆಜ್ಞಾನುವರ್ತಿಯಾಗಿ ಬಾಳ್ವೆ ನಡೆಸುವುದನ್ನು ಸ್ತ್ರೀ ಧರ್ಮವೆಂದೇ ಬಗೆಯಲಾಗುತ್ತಿತ್ತು.

ಬುದ್ಧನು ಆಮ್ರಪಾಲಿಗೆ ದೀಕ್ಷೆ ನೀಡಿದನಾದರೂ ಭಿಕ್ಷುಣಿಯರನ್ನು ಸಂಘ-ಗಣದಲ್ಲಿ ಪ್ರತ್ಯೇಕ ಗುಂಪುಗಳಾಗಿ ಇಡಲಾಗುತ್ತಿತ್ತು. ಬುದ್ಧನ ಆಪ್ತ ಅನುಯಾಯಿಯಾದ ಆನಂದನು ಇಂತಹ ಪ್ರತ್ಯೇಕತೆಯ ಅಗತ್ಯವನ್ನು ಮತ್ತೆ ಮತ್ತೆ ಒತ್ತಿ ಹೇಳುವುದು ಕಂಡುಬರುತ್ತದೆ. ಬೌದ್ಧ ಧರ್ಮವು ಎಲ್ಲ ಧರ್ಮಗಳಿಗಿಂತಲೂ ಹೆಚ್ಚು ಸಾಮಾಜಿಕವಾದ ಧರ್ಮ ಎನ್ನುವ ಕೋಸಾಂಬಿಯವರು ಬೌದ್ಧ ಧರ್ಮದಲ್ಲಿ ಭಿಕ್ಷುಣಿಯರಿಗೆ ಸಮಾನತೆಯನ್ನು ನೀಡಲಾಗುತ್ತಿತ್ತು ಎನ್ನುತ್ತಾರೆ. ಆದರೆ ಈ ಅಭಿಪ್ರಾಯವನ್ನು ಸಾಪೇಕ್ಷತೆಯ ಹಿನ್ನೆಲೆಯಲ್ಲಿ ಒಪ್ಪಬಹುದು. ಬುದ್ಧನ ಕಾಲದಲ್ಲೇ ಭಿಕ್ಷು ಸಂಘಗಳು ನೈತಿಕವಾಗಿ ವಿಘಟನೆ ಹೊಂದತೊಡಗಿದ್ದವು. ಹಲವು ಆಷಾಢಭೂತಿಗಳು ಭಿಕ್ಷುಗಳಾಗಿ ಸಂಘದಲ್ಲಿ ಸೇರ್ಪಡೆಯಾಗಿ ವಿಹಾರಗಳಲ್ಲಿ ವಿಷಯಾಸಕ್ತ ಚಟುವಟಿಕೆಗಳು ಹೆಚ್ಚುತ್ತಿರುವ ಸನ್ನಿವೇಶವಿದ್ದಂತೆ ತೋರುತ್ತದೆ. ವಿಹಾರಗಳು ಬಸಿರಿ ಬಾಣಂತಿಯರ ಗೂಡುಗಳಾಗುತ್ತಿದ್ದ ಘಟನೆಗಳ ಬಗ್ಗೆ ಪ್ರಾರಂಭಿಕ ಕಾಲದ ಬೌದ್ಧ ಗ್ರಂಥ ಚುಲ್ಲವಗ್ಗ ಪ್ರಸ್ತಾಪಿಸುತ್ತದೆ. ಬಹುಶಃ ಇಂತಹ ನಿಗ್ರಹಾತೀತ ಘಟನೆಗಳಿಂದಾಗಿ ಆನಂದನು ಪ್ರತ್ಯೇಕತೆಯ ಪ್ರತಿಪಾದಕನಾಗಿರಬಹುದೆಂದು ಊಹಿಸಲು ಸಾಧ್ಯವಿದೆ.

ಅದೇನೇ ಇದ್ದರೂ ಬೌದ್ಧ ಮತವು ತಾಂತ್ರಿಕ ಆಚರಣೆಗಳತ್ತ ಹೊರಳುವವರೆಗೆ ಮಹಿಳೆಗೆ ಬೌದ್ಧ ಧರ್ಮದಲ್ಲಿ ಸಾಂಪ್ರದಾಯಿಕ ಸಂಕೋಲೆಗಳಿಂದ ವಿಮೋಚನೆ ಪಡೆಯುವ ಚಾಲಕ ಶಕ್ತಿ ದೊರಕಲಿಲ್ಲ. "ನಾರಿ ನರಕಕ್ಕೆ ದಾರಿ" ಎಂಬಂತಹ ಹಿಂದೂ ಸನ್ನಿವೇಶಗಳ ಸಮಾನಾಂತರ ಸನ್ನಿವೇಶಗಳು ಬೌದ್ಧ ಸಾಹಿತ್ಯದಲ್ಲೂ ಕಾಣಿಸಿಕೊಳ್ಳುತ್ತವೆ. ಪುರುಷ ದೃಷ್ಟಿಕೋನಕ್ಕೆ ಅಂಟಿಕೊಂಡೇ ನಡೆದ ಬೌದ್ಧ ಸಾಹಿತ್ಯವು ಹೆಣ್ಣು ಹಿಂಗದ ಕಾಮುಕ ಪ್ರಾಣಿ, ಮದುವೆ ಎಂದರೆ ಮರಣ, ಚಂಚಲತೆಯ ಮತ್ತೊಂದು ರೂಪವೇ ಹೆಣ್ಣು ಮುಂತಾಗಿ ಪ್ರಚಾರ ಮಾಡತೊಡಗಿದ ಉದಾಹರಣೆಗಳು ಹೇರಳವಾಗಿ ದೊರಕುತ್ತವೆ. ಕುನಾಲಜಾತಕವಂತೂ ಹೆಣ್ಣು ಸ್ವಭಾವತಃ ಲಂಪಟಳು, ಪುರುಷನ ನಾಶಕ್ಕಾಗಿ ಜನ್ಮ ತಳೆದಳು ಎನ್ನುತ್ತದೆ. ಸ್ತ್ರೀ ದ್ವೇಷಿ ಎಂಬರ್ಥ ಬರುವ ಅನಿತ್ತಿಗಂಧ ಎಂಬ ಪಾತ್ರವೊಂದು ಕ್ಷತ್ರಿಯ ಸಂಹಾರ ಮಾಡುತ್ತದೆ. ಹೆಣ್ಣು ವಿಶ್ವಾಸಾರ್ಹಳಲ್ಲವಾದ್ದರಿಂದ ಹರೆಯದ ಹುಡುಗರು ವಿವಾಹ ಮತ್ತು ಕುಟುಂಬ ಜೀವನಕ್ಕೆ ಆಕರ್ಷಿತರಾಗಿ ದುಃಖ ಅನುಭವಿಸದಿರಲೆಂದು ಇಂತಹ ಮಹಿಳಾ ವಿರೋಧಿ ಪ್ರಚಾರವನ್ನು ಜಾತಕ ಕತೆಗಳು ಮಾಡಿರಬಹುದು ಎನ್ನುತ್ತಾರೆ ಗ್ಯಾರೆಟ್ ಜೋನ್ಸ್.

ಈ ಚಿಂತನ ಕ್ರಮವು ಇಡಿಯಾಗಿ ಪುರುಷ ಪ್ರಧಾನ ಮೌಲ್ಯಗಳಿಂದ ರೂಪುಗೊಂಡಿರುವಂತಹುದು ಎಂದು ಬಿಡಿಸಿ ಹೇಳುವ ಅಗತ್ಯವಿಲ್ಲ. ಬುದ್ಧನ ನಂತರ ಕಾಲದಲ್ಲಿ ರಚಿತವಾದ

ಬೌದ್ಧ ಸಾಹಿತ್ಯದಲ್ಲಿ ವಿಪುಲವಾದ ಪ್ರಕ್ಷಿಪ್ತಗಳು ಕಂಡುಬರುವುದು ನಿಜವಾದರೂ ಪಟ್ಟಭದ್ರ ಬೌದ್ಧಿಕ ರಚನೆಗಳನ್ನು ಸ್ಥಾಯಿಗೊಳಿಸಲು ನಡೆಸಿದ ಪಿತೂರಿಯ ನಿದರ್ಶನಗಳಿವು. ಹಿಂದೂ ಧರ್ಮದ ಪ್ರಮುಖ ನೆಲೆಯಿಂದ ವಿಮುಖಗೊಂಡ ಬೌದ್ಧ ಧರ್ಮವು ಹೆಣ್ಣಿನ ಬಗ್ಗೆ ತಳೆದ ನಿಲುವುಗಳಿಗಿಂತ ಭಕ್ತಿಚಳವಳಿಯು ತಳೆದ ನಿಲುವುಗಳು, ಪರ್ಯಾಯ ಸಾಂಸ್ಕೃತಿಕ ನೆಲೆಯಿಂದ ಹೇಗೆ ಕ್ರಾಂತಿಕಾರಿಯಾಗಿವೆ ಎನ್ನುವುದು ಗಮನಿಸಬೇಕಾದ ಸಂಗತಿಯಾಗಿದೆ.

ಭಕ್ತಿಚಳವಳಿಯಲ್ಲಿ ವಿವಾಹ ಮತ್ತು ಕೌಟುಂಬಿಕ ಸಂಬಂಧಗಳ ಸಮಸ್ಯೆಯನ್ನು ನಿಷ್ಠುರ ವಿಧಾನದಲ್ಲಿ ಬಗೆಹರಿಸಿಕೊಳ್ಳುವ ಮಹಿಳಾ ಸಂತರು ಪುರುಷ ಪ್ರಧಾನ ಮೌಲ್ಯಗಳನ್ನು ತೀವ್ರವಾಗಿ ವಿರೋಧಿಸುತ್ತಾರೆ. ವಿರೋಧಗಳು ವ್ಯಕ್ತವಾಗುವ ಬಗೆ ಹಲವು. ಆದರೆ ಈ ವಿನ್ಯಾಸದ ಕೇಂದ್ರ ವಸ್ತುವೆಂದರೆ ಪುರುಷನು ಧಾರ್ಮಿಕ ಸಾಧನೆಯ ಮಾರ್ಗದಲ್ಲಿ ಬಂದೊದಗಿದ ವಿಪತ್ತು ಎಂಬುದು. ನಿಖಾಯಗಳು ಮತ್ತು ಜಾತಕಗಳ ಬೌದ್ಧಯುಗದ ಹಾಗೂ ಸ್ಮೃತಿಗಳ ಕಾಲದ ದೃಷ್ಟಿಕೋನವನ್ನು ಈ ಗುಂಪಿನ ಮಹಿಳಾ ಸಂತರು ತಲೆಕೆಳಗಾಗಿಸಿರುತ್ತಾರೆ. ಈ ಯುಗಗಳಲ್ಲಿ ಮೋಕ್ಷ ಸಾಧನೆಗೆ ಹೆಣ್ಣು ತೊಡಕು ಎಂದಾದರೆ ಭಕ್ತಿಚಳವಳಿಯಲ್ಲಿ ಮೋಕ್ಷ ಸಾಧನೆಗೆ ಗಂಡು ತೊಡಕು ಎಂಬ ಪರಿಕಲ್ಪನೆಯ ಆಧಾರ ಇವರಿಗೆ ಚಾಲಕ ಶಕ್ತಿಯನ್ನು ಒದಗಿಸುತ್ತದೆ. ಇಲ್ಲಿ ಗಂಡಂದಿರು ಕಾಮುಕರಾಗಿ, ಕಂಟಕರಾಗಿ ಮೋಕ್ಷ ಸಾಧನೆಗೆ ಅಡ್ಡಿಯಾಗಿರುತ್ತಾರೆ. ಈ ಸಮಸ್ಯೆಯನ್ನು ಅವ್ವೆಯು ಇಷ್ಟದೈವಕ್ಕೆ ತನ್ನ ಯೌವನವನ್ನು ಸಮರ್ಪಿಸಿ ಮುಪ್ಪನ್ನು ಪಡೆಯುವುದರ ಮೂಲಕ ಬಗೆಹರಿಸಿಕೊಳ್ಳುತ್ತಾಳೆ. ಕಾಮಾಸಕ್ತಿಗೆ ಪ್ರೇರಕವೂ ಪೋಷಕವೂ ಆಗಬಹುದೆಂಬ ಕಾರಣದಿಂದ ಅವಳು ಯೌವನವನ್ನು ಪವಾಡ ಸದೃಶಳಾಗಿ ದಾಟಿ, ಬೋಧಕಳಾಗಿ ಊರೂರು ಸುತ್ತುತ್ತಾಳೆ. ಆಂಡಾಳ್ ಇಷ್ಟದೇವತೆಯಾದ ಕೃಷ್ಣನ ವಿಗ್ರಹದಲ್ಲಿ ಲೀನವಾಗುತ್ತಾಳೆ. ಇಂತಹ ಸನ್ನಿವೇಶಗಳಲ್ಲಿ ಈ ಮಹಿಳಾ ಸಂತರು ತಮ್ಮನ್ನು ವಿವಾಹ ಮತ್ತು ಕೌಟುಂಬಿಕ ಜೀವನದಿಂದ ಹೊರತುಪಡಿಸಿ ಕೊಳ್ಳುವ ಪ್ರಯತ್ನಗಳು ಕಂಡು ಬರುತ್ತದೆ.

ಆದರೆ ಕರಿಕಾಲಮ್ಮ ತನ್ನ ಸೌಂದರ್ಯವನ್ನು ಇಷ್ಟದೈವವಾದ ಶಿವನಿಗೆ ಸಮರ್ಪಿಸುತ್ತಾಳೆ. ಗಂಡನಾಗಲೀ, ಬೇರಾವ ಪುರುಷನಾಗಲೀ ತನ್ನನ್ನು ಕಣ್ಣೆತ್ತಿ ನೋಡದಂತಹ ಕುರೂಪ ಕಂಕಾಲ ಸ್ಥಿತಿಯನ್ನು ವರವಾಗಿ ಪಡೆದು ದಾಂಪತ್ಯವನ್ನು ತಿರಸ್ಕರಿಸುತ್ತಾಳೆ.

ಮೀರಾ ಮೋಕ್ಷ ಸಾಧನೆಯ ಮಾರ್ಗದಲ್ಲಿ ದಾಂಪತ್ಯವು ತಂದೊಡ್ಡುವ ಬಾಧಕಗಳನ್ನು ಅನುಭವಿಸುವುದು ನಿಜವಾದರೂ ನಂತರ ತವರನ್ನೂ, ಗಂಡನನ್ನೂ, ಗಂಡನ ಮನೆಯನ್ನೂ ತಿರಸ್ಕರಿಸುತ್ತಾಳೆ. ಸಿಸೋದಿಯಾ ಕುಟುಂಬದ ರಜಪೂತ ಸಮುದಾಯಕ್ಕೆ ಸೇರಿದ ಮೀರಾ ಚಮ್ಮಾರನಾದ ರೋಹಿದಾಸನನ್ನು ಗುರುವಾಗಿ ಸ್ವೀಕರಿಸಿದವಳು. ಸಾಧುಗಳ ಸಾಮೀಪ್ಯದಲ್ಲಿ ಕೆಳಜಾತಿಯ ಭಕ್ತ ಜನತೆಯ ಜೊತೆಗೆ ಗೆಜ್ಜೆ ಕಟ್ಟಿಕೊಂಡು ಭಕ್ತಿಪರವಶಳಾಗಿ ಹಾಡುತ್ತಾ ಕುಣಿಯುತ್ತಾ ತನ್ನ ಇಷ್ಟದೇವತೆ ಗಿರಿಧರನನ್ನು ಆರಾಧಿಸತೊಡಗುತ್ತಾಳೆ. ಶೀಲ ರಜಪೂತ ಹೆಣ್ಣಿನ ಪರಮಮೌಲ್ಯ. ಸಾಂಪ್ರದಾಯಿಕವಾದ ಸತಿ ಮತ್ತು ಜೋಹರ್ ಪದ್ಧತಿಗಳು ಇದಕ್ಕೆ ಉತ್ತಮ ನಿದರ್ಶನಗಳು. ಹಾಗೆಯೇ ಹೆಣ್ಣಿನ ಶೀಲ ರಕ್ಷಣೆ ರಜಪೂತ ಸಮಾಜದ ವೀರ ಪರಂಪರೆಯ

ಸಾಂಪ್ರದಾಯಿಕ ಮೌಲ್ಯ. ಹೆಣ್ಣಿಗೆ ಕುಟುಂಬದ ಹೊರಗೆ ಸಾರ್ವಜನಿಕವಾದ ಬದುಕಿಲ್ಲ. ಪರಂಪರಾಗತವಾದ ಈ ಎಲ್ಲಾ ಮೌಲ್ಯಗಳನ್ನು ಮೋಕ್ಷ ಸಾಧನೆಗಾಗಿ ತಿರಸ್ಕರಿಸಿದವಳು ಮೀರಾ.

ಪ್ರತಿಷ್ಠಿತ ಮನೆತನವಾದ ಸಿಸೋದಿಯಾ ಕುಟುಂಬದ ಸೊಸೆಯಾಗಿ ಬಂದ ಮೀರಾಳ ಈ ವರ್ತನೆಗಳಿಂದ ಬೇಸತ್ತು ಅವಮಾನಿತವಾದ ಗಂಡ ಅವಳನ್ನು ಕೊಲೆ ಮಾಡಲು ಹಲವು ಬಗೆಯಾಗಿ ಪ್ರಯತ್ನಿಸಿದನೆಂಬುದು ಮೀರಾಳ ಭಜನೆಗಳಿಂದಲೂ, ಐತಿಹ್ಯಗಳಿಂದಲೂ ತಿಳಿದು ಬರುತ್ತದೆ. ಭಕ್ತಿಚಳವಳಿಯ ಮಹಿಳಾ ಸಂತರಲ್ಲಿ ಮೀರಾಳಿಗೆ ವಿಶಿಷ್ಟವೂ, ಮಹತ್ವವೂ ಆದ ಸ್ಥಾನವಿದೆ. ಉತ್ತರ ಭಾರತದಲ್ಲಿ ಎಲ್ಲೆಲ್ಲೂ ಕೇಳಬಹುದಾದ ಮಹಿಳಾ ಸಂತಳ ಹೆಸರು ಇದೊಂದೆ. ಮೀರಾ ಭಜನ್‌ಗಳನ್ನು ರಜಪೂತ ಸಮಾಜದ ಪ್ರತಿಷ್ಠಿತ ಜಾತಿಗಳು ನಾಶಮಾಡಲು ಪ್ರಯತ್ನಿಸಿದ ಹಲವಾರು ಉದಾಹರಣೆಗಳನ್ನು ಬೆಳಕಿಗೆ ತರಲಾಗಿದೆ. ಮೀರಾಳ ಹೆಸರೆತ್ತುವುದೇ ಅಪರಾಧ ಎನ್ನುವಂತಹ ಪರಿಸ್ಥಿತಿ ರಾಜಸ್ಥಾನದ ಬಲಿಷ್ಠ ಜಾತಿಗಳ ಸಾಂದ್ರತೆಯಿರುವ ಪ್ರದೇಶದಲ್ಲಿರುವುದನ್ನು ಹಲವರು ಗುರುತಿಸಿದ್ದಾರೆ. ಕೆಳಜಾತಿಗಳಲ್ಲಿ ಮೌಖಿಕ ಪರಂಪರೆಯಾಗಿ ಮೀರಾ ಭಜನ್‌ಗಳು ಮತ್ತು ಐತಿಹ್ಯಗಳು ಹೇರಳವಾಗಿ ಸಿಗುತ್ತವೆ. ಮೀರಾಳ ಭಕ್ತಿ ಸಾಹಿತ್ಯದ ಪುನರ್ ರಚನೆ ಸಾಧ್ಯವಾದದ್ದು ಈ ಜಾನಪದ ಮೂಲದಿಂದಲೇ ಎಂಬ ಅಭಿಪ್ರಾಯವಿದೆ. ಮೀರಾ ಧಾರ್ಮಿಕವಾಗಿ, ಸಾಮಾಜಿಕವಾಗಿ ಸಂತ್ರಸ್ತ ಕೆಳಜಾತಿಗೆ ವಿಮೋಚನೆಯ ಪ್ರತೀಕಳಾಗಿದ್ದಳೆಂಬುದು ಈ ಚಳವಳಿಯ ಅನನ್ಯತೆಯನ್ನು ತೋರಿಸುತ್ತದೆ.

ಕಾಶ್ಮೀರದ ಲಾಲ್‌ದೇಡ್ ಮತ್ತು ಅಕ್ಕಾಮಹಾದೇವಿ ವಿವಾಹ ಮತ್ತು ದಾಂಪತ್ಯವನ್ನು ಧಿಕ್ಕರಿಸುವುದರ ಜೊತೆಗೆ ಮೋಕ್ಷ ಸಾಧನೆಯ ಮಾರ್ಗದಲ್ಲಿ ಹೆಣ್ಣೆಂಬ ದೇಹವು ತೊಡಕಾಗುವ ಸಮಸ್ಯೆಯನ್ನು ಎದುರಿಸುತ್ತಾರೆ. ಮೀರಾಳು ಕೂಡ ಹೆಣ್ಣಾಗಿ ಪುರುಷ ಸಂತರ ಒಡನಾಟದಲ್ಲಿ ಒದಗಬಹುದಾದ ದೈಹಿಕ ಸಮಸ್ಯೆಯ ಆಪತ್ತನ್ನು ಅನುಭವಿಸಿ ದಾಟುತ್ತಾಳೆ. ಐತಿಹ್ಯವೊಂದರ ಪ್ರಕಾರ ಸಾಧುವೊಬ್ಬ ತನ್ನ ಕನಸಿನಲ್ಲಿ ಕೃಷ್ಣನು ಪ್ರತ್ಯಕ್ಷನಾಗಿ ಮೀರಾಳ ಜೊತೆ ಮಲಗುವಂತೆ ತನಗೆ ಆಜ್ಞಾಪಿಸಿದನೆಂದು ಹೇಳುತ್ತಾನೆ. ಮೀರಾ ಅವನಲ್ಲಿನ ಹೆಣ್ಣುದೇಹಕ್ಕಾಗಿ ಹಾತೊರೆಯುವ ಕಾಮಾಂಧತೆಯ ಕುಟಿಲತೆಯನ್ನು ಬಯಲಿಗೆಳೆಯುತ್ತಾಳೆ. ಸಂತರು ಸೇರಿದ ಗೋಷ್ಠಿಯ ನಡುವೆ ಹಾಸಿಗೆಯನ್ನು ಸಿದ್ಧಪಡಿಸಿ "ಮಲಗು ಬಾ, ದೈವೇಚ್ಛೆ, ಈಗೇಕೆ ಅಂಜುವೆ" ಎಂದಳಂತೆ. ಆ ಸಾಧು ತನ್ನ ನೀಚತೆಗೆ ನಾಚಿ ಕ್ಷಮೆ ಯಾಚಿಸಿದನಂತೆ. ಭಕ್ತಿಚಳವಳಿಯ ಪುರುಷ ಸಂತರ ಒಡನಾಟದಲ್ಲಿ ಮಹಿಳಾ ಸಂತರು ಲೈಂಗಿಕವಾದ ಶೋಷಣೆಗೆ (ಮೊದಲು ಹೆಸರಿಸಿರುವ 'ಚೆಲ್ಲವಗ್ಗ'ದಲ್ಲಿನ ಘಟನೆಗಳಂತೆ) ಒಳಗಾಗುತ್ತಿದ್ದರೆಂಬುದಕ್ಕೆ ಇಂತಹ ಐತಿಹ್ಯಗಳು ಸಾಕ್ಷಿ.

ದೇಹ ಮತ್ತು ದೇಹಾತೀತ ಅನುಭವಗಳ ಇಂತಹ ತೀವ್ರ ಸಂಘರ್ಷವು ಅಕ್ಕಮಹಾದೇವಿಯ 'ವಿಮೋಚನೆ'ಯ ಹೋರಾಟದಲ್ಲಿ ವ್ಯಕ್ತವಾಗುತ್ತದೆ. ಅಕ್ಕ, ಅವ್ವೆಯಂತೆ ಯೌವ್ವನವನ್ನು ತಿರಸ್ಕರಿಸುವುದಿಲ್ಲ. ಕರಿಕಾಲಮ್ಮೆಯಂತೆ ರೂಪವನ್ನು ತಿರಸ್ಕರಿಸುವುದಿಲ್ಲ. ಬದಲಾಗಿ ಲಾಲ್ ದೇಡಳಂತೆ ದೇಹವನ್ನು ಮುಂದಿಟ್ಟುಕೊಂಡು, ಸಮಾಜವು ಕಲ್ಪಿಸಿದ ಸಂಕೋಲೆಗಳನ್ನು ಧಿಕ್ಕರಿಸಿ, ತನ್ನನ್ನು ನಗ್ನಗೊಳಿಸಿಕೊಂಡು ಸಮಾಜದ ಮುಖಕ್ಕೆ ರಾಚುವಂತೆ ಒಡ್ಡುತ್ತಾಳೆ:

ಬಿಟ್ಟಿಹ ಮೊಲೆಯ, ಭರದ ಜವ್ವನದ ಚೆಲುವ
ಕಂಡು ಬಂದಿರಣ್ಣಾ
ಅಣ್ಣಾ ನಾನು ಹೆಂಗೂಸಲ್ಲ, ಅಣ್ಣಾ ನಾನು
ಸೂಳೆಯಲ್ಲ, ಅಣ್ಣಾ ಮತ್ತೆ ನನ್ನ ಕಂಡು

ಆರೆಂದು ಬಂದಿರಣ್ಣಾ
ಚೆನ್ನಮಲ್ಲಿಕಾರ್ಜುನನಲ್ಲದ
ಪರ ಪುರುಷನು ನನಗಾಗದ ಮೋರೆ ನೋಡಣ್ಣಾ.

ಎನ್ನುವ ಅವಳ ನಿಲುವಿನಲ್ಲಿ ಅಡಗಿರುವ ಪ್ರತಿಭಟನೆ ಧಾರ್ಮಿಕ ಕ್ಷೇತ್ರಕ್ಕಷ್ಟೇ ಸೀಮಿತವಾದುದಲ್ಲ. ಪುರುಷ ಪ್ರಧಾನ ಜಗತ್ತಿನ ಮೌಲ್ಯಗಳಿಗೆ ಪ್ರತಿಭಟನೆಯ ಸ್ವರೂಪದ ಚಾರಿತ್ರಿಕ ವಿಸ್ತಾರವನ್ನು ನೀಡುವಂತಹುದ್ದು. "ಕಾಯವನು ಅಕಾಯ"ಗೊಳಿಸಿಕೊಳ್ಳುವ (ಮನ ಲಯವಾಗಿತ್ತು.... ಭಾವ ಬಯಲಾಯಿತ್ತು... ಕಾಯ ಆಕಾಯವಾಯಿತು) ಅಪೂರ್ವ ಸಾಮಾಜಿಕ ಪ್ರತಿಭಟನೆ ಅವಳ ಅನುಭಾವಿಕತೆಯ ಬೇರ್ಪಡಿಸಲಾಗದ ಮತ್ತೊಂದು ಮಗ್ಗುಲಾಗಿದೆ. ಅಕ್ಕನಂತೆಯೇ ಲಾಲ್‌ದೇಡ್ ಬತ್ತಲೆಯಾಗಿ ಹಾಡುತ್ತಾ ಕುಣಿಯುತ್ತಾ ಸುತ್ತುತ್ತಾಳೆ. ಹುಚ್ಚಿ ಎಂದು ಅವಹೇಳನ ಮಾಡುವ ಜನತೆಯ ಕುಹಕಗಳಿಗೆ ಕಿವಿಗೊಡದೆ ಭಕ್ತಿಯ ಪಾರಮ್ಯವನ್ನು ಮೆರೆದು ಕಾಶ್ಮೀರ ಭಾಷೆಗೆ ಜೀವಧಾತುವನ್ನು ನೀಡಿದವಳು ಅವಳು.

ಅಕ್ಕಮಹಾದೇವಿ ಬತ್ತಲೆಯಾಗಿ, ಸಮಾಜದ ಸಾಂಪ್ರದಾಯಿಕ ಜಗತ್ತಿನೊಂದಿಗೆ ಸಂಘರ್ಷಕ್ಕೆ ಇಳಿಯುವುದು ಧಾರ್ಮಿಕ ಚೌಕಟ್ಟಿನೊಳಗೆಂಬುದು ನಿಜ. ಆದರೆ ಶರಣ ಸಮುದಾಯದಲ್ಲಿ ಅವಳಿಗೆ ದೊರೆತ ಘನತೆಯ ಸ್ಥಾನಮಾನ ಬಹುಶಃ ಈ ಗುಂಪಿನ ಮತ್ತಾವ ಮಹಿಳಾ ಸಂತಳಿಗೂ ದೊರೆತಂತೆ ಕಾಣದು-

ಕಾಯದ ಲಜ್ಜೆಯ ಕಲ್ಪಿತವ ಕಳೆದು
ಜೀವದ ಲಜ್ಜೆಯ ಮೋಹವನಳಿದು
ಮನದ ಲಜ್ಜೆಯ ನೆನಹ ಸುಟ್ಟು
ಭಾವದ ಕೂಟ ಬತ್ತಲೆಯಿಂದರಿದು
ತವಕದ ಸ್ನೇಹ ವ್ಯವಹಾರಕ್ಕೆ ಹುಗದು
ಕೂಡಲಸಂಗಮದೇವಯ್ಯ
ಎನ್ನ ಹೆತ್ತ ತಾಯಿ ಮಹಾದೇವಿಯಕ್ಕನ
ನಿಲವ ನೋಡಯ್ಯ ಪ್ರಭುವೆ

ಎನ್ನುವ ಬಸವಣ್ಣನವರ ವಚನ ಮತ್ತು

ಗುಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ
ಮಹಾದೇವಿಯಕ್ಕನ ಶ್ರೀಪಾದಕ್ಕೆ
ನಮೋ ನಮೊ ಎಂಬೆನು

ಎನ್ನುವ ಪ್ರಭುದೇವರ ವಚನಗಳು ಅನುಭವ ಮಂಟಪವು ನಿರ್ಮಿಸಿದ ಸಮಾಜೋ ಧಾರ್ಮಿಕ ವಾತಾವರಣದ ಲಿಂಗಪತಿ - ಶರಣಸತಿ ಎಂಬ ಅನುಭಾವಿಕ ನೆಲೆಯಲ್ಲಿ ಅಕ್ಕನಿಗೆ

ದೊರೆತ ಬೆಂಬಲವನ್ನು ಸೂಚಿಸುತ್ತದೆ. ಇಂತಹ ಬೆಂಬಲ ಮೀರಾಳಿಗಾಗಲೀ ಅಥವಾ ಅಪಮಾನವನ್ನು ನುಂಗಿಕೊಳ್ಳುತ್ತಾ ತನ್ನ ನೋವನ್ನು ಹಾಡಾಗಿ ಹಾಡುತ್ತಾ ಭಕ್ತಿ ಪರವಶತೆಯನ್ನು ಮೆರೆದ ಲಾಲ್‌ದೇಡ್‌ಳಿಗಾಗಲೀ ದೊರೆತಂತಿಲ್ಲ. ಕರ್ನಾಟಕ ವೀರಶೈವ ಚಳವಳಿಯ ಶರಣರು ತಳೆದ ನಿಲುವನ್ನು ಮಹಾರಾಷ್ಟ್ರದ ಚೋಖಮೇಳ, ತುಕಾರಾಂ ಮತ್ತು ಏಕನಾಥರಂತಹ ಪ್ರಖ್ಯಾತ ಸಂತರು ತಳೆದಿದ್ದ ಸಾಂಪ್ರದಾಯಿಕ ನಿಲುವಿನೊಂದಿಗೆ ಹೋಲಿಸಿದರೆ ಅನುಭವ ಮಂಟಪದ ಮುಕ್ತ ವಾತಾವರಣವು ಮಹಿಳೆಯ ದೃಷ್ಟಿಯಿಂದ ಅಪೂರ್ವವೂ ಅನನ್ಯವೂ ಆಗಿತ್ತೆಂಬುದರಲ್ಲಿ ಉತ್ಪ್ರೇಕ್ಷೆ ಏನೂ ಇರದು.

ಭಕ್ತಿಚಳವಳಿಗಳು ಸ್ತ್ರೀ ಪ್ರಧಾನ ಭೂಮಿಕೆಯನ್ನು ಒಪ್ಪಿಕೊಂಡವಾದರೂ, ಆಧುನಿಕ ಅರ್ಥದಲ್ಲಿ ಇವು ಮಹಿಳಾ-ಪರ ಸುಭದ್ರ ಸೈದ್ಧಾಂತಿಕ ಚೌಕಟ್ಟನ್ನು ಒದಗಿಸುತ್ತವೆ ಎನ್ನುವಂತಿಲ್ಲ. ಒಂದು ಕಾಲಘಟ್ಟದ ಸಮಾಜದಲ್ಲಿನ ಬೆಳವಣಿಗೆಗಳಲ್ಲಿ ಅನಿಷ್ಟಗಳಿದ್ದರೂ ಅವು ಆ ಘಟ್ಟದಲ್ಲಿ ಅನಿಷ್ಟಗಳಾಗಿ ತೋರದಿರಬಹುದು ಅಥವಾ ಆ ಅನಿಷ್ಟಗಳು ಬಗೆಹರಿಸಿಕೊಳ್ಳಬೇಕಾದವು ಎನ್ನುವ ಗಂಭೀರ ಚಿಂತನೆಗೆ ಒಳಗು ಮಾಡುವಂತಹ ಸಮಸ್ಯೆಗಳಾಗದೇ ಇರಬಹುದು. ಆದ್ದರಿಂದ ನಮ್ಮ ಕಾಲಕ್ಕೆ ಸಾಮಾಜಿಕ ಸಮಸ್ಯೆಗಳಾಗಿ ಕಾಡುವಂತಹವು ಚರಿತ್ರೆಯ ಹಿಂದಿನ ಕಾಲಘಟ್ಟವೊಂದರಲ್ಲಿ ಕಾಡುವ ಸಮಸ್ಯೆಗಳಾಗಿಲ್ಲದಿರಬಹುದು. ಆದ್ದರಿಂದಲೇ ಭಕ್ತಿ ಚಳವಳಿಯಲ್ಲಿ ಅಚ್ಚಳಿಯದ ಸ್ಥಾನವನ್ನೂ, ಕೊಡುಗೆಯನ್ನೂ ಸಾಧ್ಯವಾಗಿಸಿಕೊಂಡ ಮಹಿಳಾ ಸಂತರು ಸಮಾಜದ ಇನ್ನಿತರ ಕ್ಷೇತ್ರಗಳಲ್ಲಿ ಮಹಿಳೆಯ ಸಮಸ್ಯೆಯನ್ನು ನೋಡಲಾಗಲಿಲ್ಲ ಎನ್ನಲೂಬಹುದು.

ಸ್ತ್ರೀವಾದಿ ಚಳವಳಿಯು ವರ್ಗವ್ಯವಸ್ಥೆ ಎಂಬ ಸೈದ್ಧಾಂತಿಕ ಪರಿಕಲ್ಪನೆಯಂತೆ ಪಶ್ಚಿಮದಿಂದ ಬಂದದ್ದು. ಈ ಅರ್ಥದಲ್ಲಿ ಪ್ರತ್ಯೇಕ ಸಂಘಟನೆಯಾಗಿ ಅದು ಈ ಚಳವಳಿಯಲ್ಲಿ ಯಾವ ಪಾತ್ರವನ್ನು ವಹಿಸಬಹುದಾಗಿತ್ತು ಎನ್ನುವುದು ನಮ್ಮ ಊಹಾ ಪ್ರಪಂಚಕ್ಕೆ ಬಿಟ್ಟ ವಿಷಯ. ಆದರೆ ಭಕ್ತಿಚಳವಳಿಯೆಂಬ ಸಾಗರದ ನಡುವೆ ಅಲ್ಲಲ್ಲಿ ಹರಡಿದ ಪ್ರತಿಭಟನೆಯ ನಡುಗಡ್ಡೆಗಳಂತೆ ಪುರುಷ ಪ್ರಧಾನ ಮೌಲ್ಯಗಳನ್ನು ವಿರೋಧಿಸುವ ಈ ಸಂತ ಮಹಿಳೆಯರು ಕಾಣಿಸಿಕೊಳ್ಳುತ್ತಾರೆ.

ಇಂತಹ ಪ್ರತಿಭಟನೆಯನ್ನು ಕಾಣಬೇಕಾದರೂ ಈ ದೇಶ ಅದೆಷ್ಟು ಶತಮಾನಗಳು ಕಾಯಬೇಕಾಯಿತು!

❑

ಸಂಸ್ಕೃತಿ ನುಡಿಗಟ್ಟಿನ ಸಮಸ್ಯೆ: ಜಾಗತೀಕರಣ ಚರ್ಚೆಯಲ್ಲಿ

ಡಾ. ರಹಮತ್ ತರೀಕೆರೆ

ಕಳೆದ ವರ್ಷ ತುಮಕೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಒಂದು ವಿಶೇಷವೆಂದರೆ, ಅಧ್ಯಕ್ಷರದೂ ಒಳಗೊಂಡಂತೆ, ಹೆಚ್ಚಿನ ಭಾಷಣಗಳಲ್ಲಿ ಚರ್ಚೆಗೊಳಗಾದ ವಿಷಯ ಜಾಗತೀಕರಣವಾಗಿತ್ತು. ಸಾಹಿತ್ಯವನ್ನು ರೊಮ್ಯಾಂಟಿಕ್ಕಾಗಿ ಭಾವಿಸುವವರಿಗೆ ಇದೇನು ಸಾಹಿತ್ಯ ಸಮ್ಮೇಳನವೋ, ರಾಜಕೀಯ ಸಮ್ಮೇಳನವೋ ಎಂದು ಗಾಬರಿಯಾಗುವ ಮಟ್ಟದಲ್ಲಿ ಈ ಚರ್ಚೆಯಿತ್ತು. ಕಳೆದ ಏಳೆಂಟು ವರುಷಗಳಿಂದಲೂ 'ಜಾಗತೀಕರಣ'ವು ಕನ್ನಡದ ಲೇಖಕರಿಗೆ ಕಾಡುತ್ತಿದೆ. ಲೇಖಕರು ಸಮುದಾಯಗಳ ಮೇಲೆ ಪರಿಣಾಮ ಬೀರುವ ಸಂಗತಿಗಳಾದ ಜಾಗತೀಕರಣ, ಕೋಮುವಾದ, ಮೂಲಭೂತವಾದಗಳ ಮೇಲೆ ತಲೆಕೆಡಿಸಿಕೊಂಡಿದ್ದಾರೆ ಎನ್ನುವುದು, ಅವರ ಕಾಳಜಿಯನ್ನು ಸೂಚಿಸುತ್ತದೆ. ಈ ಕಾಳಜಿಯ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡಬೇಕಿಲ್ಲ. ಆದರೆ ಇವರಲ್ಲಿ ಕೆಲವರು ಜಾಗತೀಕರಣದ ಚರ್ಚೆಯಲ್ಲಿ ಬಳಸುತ್ತಿರುವ ಒಂದು ನುಡಿಗಟ್ಟು ಮಾತ್ರ ಸಮಸ್ಯಾತ್ಮಕವಾಗಿದೆ. ಅದೆಂದರೆ 'ನಮ್ಮ ಸಂಸ್ಕೃತಿ' ಎಂಬ ನುಡಿಗಟ್ಟು.

'ನಮ್ಮ ಸಂಸ್ಕೃತಿ ಪ್ರಾಚೀನವಾದುದು, ಬಹುಮುಖಿಯಾದುದು. ಇದರ ಮೇಲೆ ವಿದೇಶದ ಏಕರೂಪಿ ಸಂಸ್ಕೃತಿಯು ಜಾಗತೀಕರಣದ ರೂಪದಲ್ಲಿ ಬಂದಿದೆ. ಆಕ್ರಮಣಕಾರಿಯಾದ ಇದನ್ನು ನಮ್ಮ ಸಂಸ್ಕೃತಿಯ ಮೂಲಕವೇ ಮುಖಾಮುಖಿ ಮಾಡಬೇಕಾಗಿದೆ' ಎಂದು ಕೆಲವರು ವಾದಿಸುತ್ತಿದ್ದಾರೆ. ಅತ್ಯಂತ ಜನಪ್ರಿಯವಾಗಿರುವ ಈ ವಾದವನ್ನು 'ಜಾಗತೀಕರಣ

ವಿರೋಧಿ ಸಂಸ್ಕೃತಿ ಚಿಂತನೆ' ಎಂದು ಕರೆಯಬಹುದು. ಇದರ ಜತೆಗೆ ಅಷ್ಟೊಂದು ಜನಪ್ರಿಯ ವಾಗಿರದ ಮತ್ತೊಂದು ವಾದವಿದೆ. 'ಜಾಗತೀಕರಣವು ನಮ್ಮ ಸಮಾಜದ ಕೆಳಜಾತಿಗಳ ದಲಿತರ ದಮನಿತರ ಸಂಸ್ಕೃತಿಗಳನ್ನು ವಿಶ್ವದ ಆಧುನಿಕ ಸಂಸ್ಕೃತಿಗಳ ಜತೆ ಸಂವಾದ ಮಾಡಲು ಚರಿತ್ರೆಯೇ ಒದಗಿಸಿರುವ ಅವಕಾಶ. ಇದಕ್ಕೆ ಬೆನ್ನು ಕೊಡದೆ ಮುಖಾಮುಖಿ ಮಾಡಿ ಲಾಭ ಪಡೆಯಬೇಕು' ಎಂಬುದು ಇದರ ತರ್ಕ. ಇದನ್ನು 'ಜಾಗತೀಕರಣ ಪರವಾದ ಸಂಸ್ಕೃತಿ ಚಿಂತನೆ' ಎನ್ನಬಹುದು. ಕನ್ನಡದಲ್ಲಿ ಕೆಲವೇ ದಲಿತ ಚಿಂತಕರು ಈ ವಾದವನ್ನು ಮಂಡಿಸಿದ್ದಾರೆ.

ಜಾಗತೀಕರಣವನ್ನು ಗ್ರಹಿಸಿರುವ ಮತ್ತು ಮುಖಾಮುಖಿ ಮಾಡುವ ರೀತಿಯಲ್ಲಿ ಇವರಲ್ಲಿ ಅನೇಕ ವ್ಯತ್ಯಾಸಗಳಿವೆ. ಆದರೆ ಇವರ ಪ್ರಧಾನ ನುಡಿಗಟ್ಟು ಮತ್ತು ಕಾಳಜಿ ಮಾತ್ರ ಸಂಸ್ಕೃತಿ ರಕ್ಷಿಸುವ, ಸಂಸ್ಕೃತಿಯಿಂದ ರಕ್ಷಣೆ ಪಡೆಯುವ ಅಥವಾ ಜಾಗತಿಕ ಸಂಸ್ಕೃತಿಗಳ ಜತೆಗೆ ಸಹವಾಸ ಮಾಡುವತ್ತಲೇ ಇದೆ. ಪ್ರಶ್ನೆ 'ಸಂಸ್ಕೃತಿ'ಯ ನುಡಿಗಟ್ಟು ಬಳಸುವ ಸರಿತಪ್ಪುಗಳದ್ದಲ್ಲ. ಈ ನುಡಿಗಟ್ಟಿನಿಂದ ಉಂಟಾಗುತ್ತಿರುವ ತಾತ್ವಿಕ ರಾಜಕೀಯ ಪರಿಣಾಮಗಳದ್ದು. ಇಲ್ಲಿ 'ಸಂಸ್ಕೃತಿ' ಎಂಬುದನ್ನು ಭಾವುಕವಾದ ಅಮೂರ್ತವಾದ ಅಸ್ಪಷ್ಟವಾದ ಅರ್ಥದಲ್ಲಿ ಬಳಸಲಾಗುತ್ತದೆ ಹಾಗೂ ರಾಜಕೀಯ ಆರ್ಥಿಕ ವಿದ್ಯಮಾನಗಳ ಚರ್ಚೆಯನ್ನು 'ನಮ್ಮ' ಮತ್ತು 'ಅನ್ಯ' ಸಂಸ್ಕೃತಿ ಎಂಬ ದೊಡ್ಡ ವಿಭಜನೆ ಮಾಡಿಕೊಂಡು ಚರ್ಚಿಸಲಾಗುತ್ತದೆ. ಜಾಗತೀಕರಣವನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಅರಿಯುವ, ಆರ್ಥಿಕ ರಾಜಕಾರಣದ ನೆಲೆಯಲ್ಲಿ ವಿಶ್ಲೇಷಿಸುವುದರ ಬದಲು, ಅದನ್ನೊಂದು 'ನಮ್ಮ ಸಂಸ್ಕೃತಿ' ಮಲಿನಗೊಳಿಸಲು ಬಂದ ದುಷ್ಟನೆಂದು ಕಳವಳಿಸುವುದು ಅಥವಾ ಕೆಳಜಾತಿಗಳ ಬಿಡುಗಡೆಗೆ ಬಂದ ದೇವದೂತನೆಂಬಂತೆ ಸಂಭ್ರಮಿಸುವುದು ಮಾಡಲಾಗು ತ್ತಿದೆ. ಈ ಸಾಂಸ್ಕೃತಿಕ ನುಡಿಗಟ್ಟು ಜಾಗತೀಕರಣ ಅರ್ಥಪೂರ್ಣ ಪ್ರತಿರೋಧ ಇಲ್ಲವೇ ಮುಖಾಮುಖಿಯತ್ತ ಒಯ್ಯುತ್ತದೆಯೇ? ಜಾಗತೀಕರಣದ ಮೇಲೆ ಮಾತಾಡುವ ರೈತನಾಯಕರು, ಕಾರ್ಮಿಕ ಚಳವಳಿಗಾರರು ಬಳಸುವ ಸಂಸ್ಕೃತಿ ನುಡಿಗಟ್ಟನ್ನು ಲೇಖಕರು ಯಾಕೆ ಬಳಸುತ್ತಿದ್ದಾರೆ? ಈ ನುಡಿಗಟ್ಟಿನಲ್ಲಿ ಜಾಗತೀಕರಣದ ಪರಿಣಾಮಗಳಾದ ರೈತರ ಆತ್ಮಹತ್ಯೆ, ಕಾರ್ಮಿಕರ ನಿರುದ್ಯೋಗ ಇವೆಲ್ಲ ಯಾಕೆ ಮುಖ್ಯವಾಗುವುದಿಲ್ಲ? ಬದಲಿಗೆ ನಮ್ಮ ಭಾಷೆ ಕಣ್ಮರೆಯಾಗುತ್ತಿದೆ, ಜನಪದ ಸಾಹಿತ್ಯ ಕಣ್ಮರೆಯಾಗುತ್ತಿದೆ, ಸಾಹಿತ್ಯ ಓದಲು ಓದುಗರಿರುವುದಿಲ್ಲ, ಅಶ್ಲೀಲ ಟಿವಿ ಕಾರ್ಯಕ್ರಮಗಳು ತರುಣರನ್ನು ಕೆಡಿಸುತ್ತಿವೆ ಮುಂತಾದ ಸಂಗತಿಗಳು ಮುಖ್ಯವಾಗುತ್ತಿವೆ. ಇದು ಈ ಲೇಖಕರ ರಾಜಕೀಯ ಚಿಂತನೆಯ ವಿಶಿಷ್ಟತೆಯೋ ರಾಜಕೀಯ ಪ್ರಜ್ಞೆಯ ಪರಿಮಿತಿಯೊ? ಜಾಗತೀಕರಣವನ್ನು ಸಂಸ್ಕೃತಿ ಪರಿಭಾಷೆಯಲ್ಲಿ ಚರ್ಚಿಸುತ್ತಿರುವ ಈ ಸಂದರ್ಭದಲ್ಲಿ ಇಂತಹ ಪ್ರಶ್ನೆಗಳನ್ನು ಎತ್ತುವುದು ಅಗತ್ಯವಾಗಿದೆ.

ಸಂಸ್ಕೃತಿ ನಾಲ್ಕು ಅರ್ಥಗಳಲ್ಲಿ

ಮೊದಲಿಗೆ ಸಂಸ್ಕೃತಿ ಎಂಬ ಪರಿಕಲ್ಪನೆ ಕನ್ನಡದಲ್ಲಿ ಬಳಕೆಯಾಗುತ್ತಿರುವ ರೀತಿಯನ್ನು ಗಮನಿಸಬೇಕು. ಅದು ಕೊನೇಪಕ್ಷ ನಾಲ್ಕು ಅರ್ಥಗಳಲ್ಲಿ ಬಳಕೆಯಾಗುತ್ತಿದೆ.

1) 'ಸಂಸ್ಕೃತಿ ಎಂಬುದು ನಾಗರಿಕ ಸಮಾಜದಿಂದ ದೂರದಲ್ಲಿ ಅಂಚಿನಲ್ಲಿರುವ, ಹಿಂದುಳಿದ

ಅಥವಾ ಬುಡಕಟ್ಟು ಸಮುದಾಯದ ಸಾಮಾಜಿಕ ಜೀವನದ ಆಚರಣೆಗಳ ವಿಶಿಷ್ಟ ಲೋಕ.' ಇದನ್ನು ಸಂಸ್ಕೃತಿಯ ಮಾನವಶಾಸ್ತ್ರೀಯ ವ್ಯಾಖ್ಯೆ ಎನ್ನಬಹುದು. ಈಗಲೂ ಕನ್ನಡದ ಜಾನಪದ ಅಧ್ಯಯನಗಳಲ್ಲಿ ಇದು ಚಾಲ್ತಿಯಲ್ಲಿದೆ.

2) ಸಂಸ್ಕೃತಿಯು ಒಂದು ಸಮುದಾಯದ ಸಮಗ್ರ ಜೀವನ ವಿಧಾನಗಳ ಮೊತ್ತ ಎಂದು ನಂಬುವ ಗ್ರಹಿಕೆ. ಇದರಲ್ಲಿ ಆ ಸಮುದಾಯದ ರಾಜಕೀಯ ಸಾಮಾಜಿಕ ಧಾರ್ಮಿಕ ಆರ್ಥಿಕ ಜೀವನದ ವಿದ್ಯಮಾನಗಳೆಲ್ಲ ಸೇರುತ್ತವೆ. ಜನರ ದುಡಿಮೆಯ ಲೋಕದ ಭಾಗವನ್ನಾಗಿಯೇ ಇದನ್ನು ಗ್ರಹಿಸಲಾಗುತ್ತದೆ. ಹೆಚ್ಚಿನ ಎಡಪಂಥೀಯ ಚಿಂತಕರು ಈ ವ್ಯಾಖ್ಯೆಯನ್ನು ಬಳಸುತ್ತಾರೆ.

3) ಸಾಹಿತ್ಯ ಸಂಗೀತ ನಾಟಕ ಶಿಲ್ಪಕಲೆ ವಾಸ್ತುಕಲೆ ಚಿತ್ರಕಲೆ - ಇತ್ಯಾದಿ ಲಲಿತಕಲೆಗಳಿಗೆ ಸಂಬಂಧಿಸಿದ ಕಲ್ಪನಾ ಪ್ರಧಾನ ಚಟುವಟಿಕೆಗಳನ್ನು ಸಂಸ್ಕೃತಿ ಎಂದು ತಿಳಿಯುವ ನಿಲುವು. ಶಾಲಾ ಕಾಲೇಜುಗಳಲ್ಲಿ ಮಾಡಲಾಗುವ 'ಸಾಂಸ್ಕೃತಿಕ ಕಾರ್ಯಕ್ರಮ'ಗಳಿಂದ ಹಿಡಿದು, ಕರ್ನಾಟಕ ಸರಕಾರವು 'ಸಂಸ್ಕೃತಿ ಇಲಾಖೆ' ಮೂಲಕ ಮಾಡಿಕೊಂಡು ಬಂದಿರುವ 'ಸಂಸ್ಕೃತಿ' ಉತ್ಸವಗಳೆಲ್ಲ ಇಂತಹವು.

4) ಸಂಸ್ಕೃತಿ ಎಂಬುದು ಸಭ್ಯ ಸಮಾಜವು ಒಪ್ಪಿಕೊಂಡಿರುವ ನೈತಿಕ ಮೌಲ್ಯ ಮತ್ತು ಆದರ್ಶಗಳ ಮೊತ್ತ ಎಂದು ತಿಳಿಯುವ ಗ್ರಹಿಕೆ. ಇದನ್ನು ನೈತಿಕ ಮೌಲ್ಯಕೇಂದ್ರಿತ ವ್ಯಾಖ್ಯೆ ಎಂದು ಕರೆಯಬಹುದು. ಇಲ್ಲಿ ಸಂಸ್ಕೃತಿಯನ್ನು ಆಯ್ದ ಉತ್ತಮ ನಿದರ್ಶನಗಳ ಮೂಲಕ ಕಟ್ಟಲಾಗುತ್ತದೆ. ಇಲ್ಲಿ ಸಂಸ್ಕೃತಿ ಎಂಬುದು ಹಿರೀಕರ ಸಾಧನೆಯಾಗಿದ್ದು, ಅದನ್ನು ರಕ್ಷಿಸುವುದು, ಶ್ರದ್ಧೆಯಿಂದ ಅನುಸರಿಸುವುದು ವರ್ತಮಾನದ ಜವಾಬ್ದಾರಿ. ವಸಾಹತುಶಾಹಿ ಕಾಲದಲ್ಲಿಯೇ ಹುಟ್ಟಿಕೊಂಡ ಈ ವ್ಯಾಖ್ಯೆಯನ್ನು ಡಿವಿಜಿ ಪ್ರಚಾರಕ್ಕೆ ತಂದರು.

ಕನ್ನಡದಲ್ಲಿ ಜನಪ್ರಿಯವಾಗಿರುವವು ಕೊನೆಯ ಎರಡು ಗ್ರಹಿಕೆಗಳು. ಇವುಗಳ ಗಾಢ ಪ್ರಭಾವದಲ್ಲಿಯೇ ಜಾಗತೀಕರಣ ಕುರಿತ ಹೆಚ್ಚಿನ ಚರ್ಚೆಗಳು ನಡೆಯುತ್ತಿವೆ.

ಜಾಗತೀಕರಣ: ನಾಲ್ಕು ಅರ್ಥಗಳಲ್ಲಿ

ಸಂಸ್ಕೃತಿಯಂತೆ ಜಾಗತೀಕರಣದ ಮೇಲಿನ ಗ್ರಹಿಕೆಗಳೂ ವೈವಿಧ್ಯಮಯವಾಗಿವೆ. ಈ ಕುರಿತು ಕನ್ನಡದಲ್ಲಿ ನಾಲ್ಕು ಗ್ರಹಿಕೆಗಳಿದ್ದಂತಿವೆ.

1) ಜಾಗತೀಕರಣವು ಜಾಗತಿಕ ಬಂಡವಾಳಶಾಹಿಯ ಹೊಸ ಅವತಾರ. ಇದು ವಸಾಹತುಶಾಹಿ ಕಾಲದಿಂದಲೂ ಇದೆ. ಈಗ ವಿಶ್ವವ್ಯಾಪಾರ ಒಪ್ಪಂದಗಳಿಗೆ ನಮ್ಮ ಸರಕಾರ ಸಹಿ ಮಾಡಿದ ಮೇಲೆ, ನೇರ ವಿದೇಶಿ ಬಂಡವಾಳ ಹೂಡಿಕೆ ಮೂಲಕ, ಬಹುರಾಷ್ಟ್ರೀಯ ಕಂಪನಿಗಳ ಮೂಲಕ ಬೃಹತ್ ಪ್ರಮಾಣದಲ್ಲಿ ಇದು ಬರುತ್ತಿದೆ ಅಷ್ಟೆ. ಸಾಮ್ರಾಜ್ಯಶಾಹಿ ಆರ್ಥಿಕ ವ್ಯವಸ್ಥೆಯು ಬಡದೇಶಗಳ ನೈಸರ್ಗಿಕ ಸಂಪತ್ತನ್ನು ದೋಚಲು, ಅವನ್ನು ತನ್ನ ಸರಕು ಸುರಿವ ಮಾರುಕಟ್ಟೆಯಾಗಿಸಲು ಹೂಡಿದ ಹುನ್ನಾರ. ಇದನ್ನು ನಮ್ಮಲ್ಲಿ ಅತ್ಯುತ್ಸಾಹದಿಂದ ಬರಮಾಡಿಕೊಳ್ಳುವ ವರ್ಗಗಳು ಇವೆ. ಜಾಗತೀಕರಣ ಶಕ್ತಿಗಳು ಒಂದು ದೇಶದ ರಾಜಕಾರಣ, ಆರ್ಥಿಕತೆಯ

ರಚನೆಯನ್ನೇ ತಮಗೆ ಬೇಕಾದಂತೆ ಮಾರ್ಪಡಿಸಬಲ್ಲವು. ಇದರಿಂದ ಸಮಾಜದ ಬಹುಸಂಖ್ಯಾತ ದುಡಿಯುವ ಸಾಮಾನ್ಯ ಜನರ ಪಾಲಿನ ಜೀವನ ಮತ್ತಷ್ಟು ದುಸ್ತರವಾಗುತ್ತದೆ. ಇದನ್ನು ಪ್ರತಿರೋಧಿಸದೆ ಇದ್ದರೆ ನಾಡು ಇನ್ನೊಂದು ಗುಲಾಮಗಿರಿಯ ಯುಗವನ್ನು ಪ್ರವೇಶಿಸಬೇಕಾಗುತ್ತದೆ' - ಎಂಬ ಗ್ರಹಿಕೆ. ಇದನ್ನು ರಾಜಕೀಯ ಅರ್ಥಶಾಸ್ತ್ರದ ಗ್ರಹಿಕೆ ಎನ್ನಬಹುದು.

2) ಜಗತ್ತು ಈಗ ಕಾಣುತ್ತಿರುವ ಆರ್ಥಿಕ ಬದಲಾವಣೆ, ತಂತ್ರಜ್ಞಾನದ ಪ್ರಗತಿಗಳನ್ನು, 'ಬಂಡವಾಳಶಾಹಿ', 'ಸಾಮ್ರಾಜ್ಯಶಾಹಿ' ಮುಂತಾದ ಮಾರ್ಕ್ಸಿಸ್ಟ್ ಪರಿಭಾಷೆಯಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಇವೆಲ್ಲ ಅರ್ಥ ಕಳಕೊಂಡಿರುವ ಸೈದ್ಧಾಂತಿಕ ಕ್ಲೀಷೆಗಳು. ಈಗಿನ ಬೆಳವಣಿಗೆಗಳನ್ನು ಹೊಸ ದೃಷ್ಟಿಕೋನದಲ್ಲಿ ಹೊಸ ನುಡಿಗಟ್ಟಲ್ಲಿ ನೋಡಬೇಕು. ಸಾಮಾಜಿಕ ಬದಲಾವಣೆಯನ್ನು ಮಾಡುತ್ತವೆ ಎಂದು ನಾವು ಭಾವಿಸಿದ್ದ ಎಷ್ಟೋ ಸಿದ್ಧಾಂತಗಳು ಸೋತು ನಿರುಪಯುಕ್ತವಾಗಿವೆ. ಇಂದು ಯಾವ ಸಿದ್ಧಾಂತಗಳೂ ಇಲ್ಲದ ಚಂದ್ರಬಾಬು ನಾಯ್ಡು ತರಹದವರು ಮಾಡುತ್ತಿರುವ ಸಾಧನೆಗಳು ಅದ್ಭುತವಾದವು ಎಂಬುದು ಇನ್ನೊಂದು ನಿಲುವು. ಪೂರ್ಣಚಂದ್ರ ತೇಜಸ್ವಿಯವರ ಸಂದರ್ಶನದಲ್ಲಿ ಈ ನಿಲುವು ವ್ಯಕ್ತವಾಗುತ್ತಿದೆ.

3) ಹಿಂದೆ ಬ್ರಿಟಿಷರ ಜತೆ ಬಂದಿದ್ದ ವಸಾಹತುಶಾಹಿ ಆಧುನಿಕತೆಯು ತನ್ನ ವಿಜ್ಞಾನ ತಂತ್ರಜ್ಞಾನ ವೈಚಾರಿಕತೆಗಳ ಮೂಲಕ, ನಮ್ಮ ದೇಶದ ಅನೇಕ ಕೆಳಜಾತಿ ಕೆಳವರ್ಗದ ಸಮುದಾಯಗಳನ್ನು ಬಿಡುಗಡೆ ಮಾಡಿತು. ಈಗ ಬಂದಿರುವ ಜಾಗತೀಕರಣವು ಆಧುನಿಕತೆಯ ಮತ್ತೊಂದು ಘಟ್ಟ. ಇದಕ್ಕೂ ನಮ್ಮನ್ನು ಬಿಡುಗಡೆಗೊಳಿಸಬಲ್ಲ ಚಾರಿತ್ರಿಕ ಶಕ್ತಿಯಿದೆ. ಈ ಶಕ್ತಿಯ ಪ್ರಯೋಜನವನ್ನು ದಲಿತರು ಕೆಳಜಾತಿಗಳು ಹಾಗೂ ಅವರ ಸಂಸ್ಕೃತಿಗಳು ಪಡೆಯಬೇಕಿದೆ ಎಂಬ ನಿಲುವು. ಕೆಲವೇ ದಲಿತ ಚಿಂತಕರು ಈ ವಾದ ಮಂಡಿಸಿದ್ದಾರೆ.

4) ಜಾಗತೀಕರಣವು ದೇಶೀ ಸಂಸ್ಕೃತಿಗಳ ಪಾಲಿಗೆ ಕೇಡಿಗನಂತೆ ಬಂದಿರುವ ಹೊಸ ವಿಕಾರ. ಇದನ್ನು ಎದುರಿಸುವ ಉಪಾಯವೆಂದರೆ ನಮ್ಮ ಸಾಂಪ್ರದಾಯಿಕ ಗ್ರಾಮಜೀವನ, ಕುಲಕಸುಬು, ದೇಶೀಭಾಷೆ, ಸ್ಥಳೀಯ ಊಟ-ಉಡುಗೆಗಳು, ಧರ್ಮ ದೇವರುಗಳು, ಹಬ್ಬಗಳು, ಆಚರಣೆಗಳು ಇವಕ್ಕೆ ಗಟ್ಟಿಯಾಗಿ ಅಂಟಿಕೊಳ್ಳುವುದು ಎಂಬ ವಾದ. ಅನಂತಮೂರ್ತಿ ಅವರ ಜಾಗತೀಕರಣ ಚಿಂತನೆಯಲ್ಲಿ ಇದರ ಎಳೆಗಳಿವೆ. ಇದರಲ್ಲಿ ಕರ್ನಾಟಕದ ಅನೇಕ ಜಾನಪದ ಚಿಂತಕರೂ ಸೇರಿಕೊಳ್ಳುತ್ತಾರೆ.

ತಾತ್ವಿಕ ತೊಡಕುಗಳು

ಸಂಸ್ಕೃತಿ ಹಾಗೂ ಜಾಗತೀಕರಣ ಕುರಿತಂತೆ ಇರುವ ಈ ವ್ಯಾಖ್ಯಾನಗಳಲ್ಲಿ ಕೆಲವು ಮಾತ್ರ ಗಂಭೀರವಾದ ತಾತ್ವಿಕ ತೊಡಕನ್ನು ನಿರ್ಮಿಸಿವೆ. ಅವುಗಳಲ್ಲಿ ಮುಖ್ಯವಾದವನ್ನು ಪರಿಶೀಲಿಸಬಹುದು.

1) ಕನ್ನಡದಲ್ಲಿ ಜಾಗತೀಕರಣವು ಶತ್ರುವೋ ಮಿತ್ರನೋ ಎಂಬ ಬಗ್ಗೆ ಖಚಿತಗೊಳ್ಳದ ಗೊಂದಲವು ಅಕ್ಷರಸ್ಥರಲ್ಲಿ ವ್ಯಾಪಕವಾಗಿದೆ. ಇದಕ್ಕೆ ಕಾರಣ, ವಿದೇಶಿ ಬಂಡವಾಳವನ್ನು,

ಬಹುರಾಷ್ಟ್ರೀಯ ಕಂಪನಿಗಳನ್ನು ನಮ್ಮ ರಾಜ್ಯಕ್ಕೆ ಬರುವಂತೆ ಮಾಡುವುದೇ ಸರಕಾರವೊಂದರ ದಕ್ಷತೆ ಅಳೆವ ಮಾನದಂಡ, ನಾಡಿಗೆ ಮಾಡುವ ಉಪಕಾರ ಎಂಬಂತಹ ಚಿತ್ರ ಒಂದು ಕಡೆಯಿದ್ದರೆ, ಜಾಗತೀಕರಣದ ವಿರುದ್ಧ ಹೋರಾಡುವುದೇ ದೇಶಪ್ರೇಮ ಎಂಬ ಜನಪರ ಚಳವಳಿಗಾರರು, ಸಂಸ್ಕೃತಿ ಚಿಂತಕರು ಇನ್ನೊಂದೆಡೆ ಇರುವುದು ಇಂತಹದೊಂದು ವಿಚಿತ್ರ ಪರಿಸ್ಥಿತಿ ಕೂಡ ಜಾಗತೀಕರಣ ವಿಶ್ಲೇಷಣೆಯಲ್ಲಿ 'ಸಂಸ್ಕೃತಿ ರಕ್ಷಣೆ' ಎಂಬ ನುಡಿಗಟ್ಟು ಜನಪ್ರಿಯವಾಗಲು ಒಂದು ಕಾರಣವಿರಬಹುದು.

2) ಕೆಲವರಿಗೆ ಜಾಗತೀಕರಣವು ಶ್ರೀಮಂತ ದೇಶಗಳ ಆರ್ಥಿಕ ರಾಜಕಾರಣವೆಂದು ಸ್ಪಷ್ಟ ಗೊತ್ತಿದೆ. ಆದರೆ ಅದರ ವಿರುದ್ಧ ಸಂಸ್ಕೃತಿ ಪರಿಭಾಷೆಯಲ್ಲಿ ಚರ್ಚಿಸುವುದು ಸಮ್ಮತವಿಲ್ಲ. 'ಮುಕ್ತ ಮಾರುಕಟ್ಟೆ' ಆರ್ಥಿಕ ನೀತಿಯನ್ನು ಪ್ರಭುತ್ವಗಳು ಅಧಿಕೃತ ಪಾಲಿಸಿಯಾಗಿ ಒಪ್ಪಿಬಿಟ್ಟಿವೆ. ಅದನ್ನು ವಿರೋಧಿಸುವುದು ಕಷ್ಟ ಮತ್ತು ಅಸಾಧ್ಯ. ವಾಸ್ತವ ಹೀಗಿರುತ್ತ ಜಾಗತೀಕರಣವನ್ನು ತಾತ್ವಿಕವಾಗಿ ವಿರೋಧಿಸುತ್ತ, ಸಾಂಕೇತಿಕ ಪ್ರತಿರೋಧ ಮಾಡುತ್ತ ಕೂರುವುದು ಆತ್ಮವಂಚನೆ. ಇದರ ಬದಲು ವಾಸ್ತವವನ್ನು ಒಪ್ಪಿಕೊಂಡು ಇದರ ಲಾಭ ಪಡೆಯುವುದು ಉಚಿತ. ಆಗ ವಿದೇಶಿ ಕಂಪನಿಗಳು ಮೀಸಲಾತಿ ಪಾಲಿಸುವಂತೆ ಮಾಡುವುದು, ಕನ್ನಡ ಭಾಷೆಯ ಬಳಕೆ ಮಾಡುವಂತೆ ಮಾಡುವುದು, ಸ್ಥಳೀಯರಿಗೆ ಉದ್ಯೋಗ ಕೊಡುವುದು ಇತ್ಯಾದಿಯಾಗಿ ನಮ್ಮ ಪ್ರಯೋಜನಕ್ಕೆ ತಕ್ಕಂತೆ ಮಣಿಸಬಹುದು. ಸಾಧ್ಯವಾಗದ ಆದರ್ಶಗಳಿಗಾಗಿ ಬೊಬ್ಬೆ ಹೊಡೆದು, ಗೆಲುವು ತಂದುಕೊಡದ ಆದರ್ಶಗಳ ಹಿಂದೆ ಹೋಗುವುದಕ್ಕಿಂತ ಸಾಧ್ಯತೆಗಳ ರಾಜಕಾರಣ ಮಾಡುವುದು ಮೇಲು ಎಂದು ಭಾವಿಸಿದವರೂ ಇದ್ದಾರೆ.

ಈ ವಾಸ್ತವವಾದಿಗಳ ಮಾತಲ್ಲಿ ಸತ್ಯವಿದೆ. ಆದರೆ ಈ 'ರಿಯಾಲಿಟಿ'ಗೆ ಒಮ್ಮೆ ತಲೆಯೊಪ್ಪಿಸಿದರೆ, ಸಮುದಾಯಗಳನ್ನು ಇಡಿಯಾಗಿ ಬಿಡುಗಡೆ ಮಾಡಬಲ್ಲ ಪರ್ಯಾಯಗಳ ಹುಡುಕಾಟವೇ ಸಾಧ್ಯವಿಲ್ಲ. ಕೊನೆಗೂ ಎರಡನೇ ದರ್ಜೆ ಪ್ರಜೆಯಾಗಲು ಒಪ್ಪುವ ಇದು ಯುದ್ಧಕ್ಕೆ ಮೊದಲೆ ಒಪ್ಪಿಕೊಂಡ ಸೋಲು ಕೂಡ. ಯಾಕೆಂದರೆ ಈ ಆಟದಲ್ಲಿ ಅಂತಿಮ ಗೆಲುವು ಜಾಗತೀಕರಣ ಶಕ್ತಿಗಳದ್ದು. ಈ ವಾಸ್ತವವಾದವು ಕೊನೆಗೆ ಅವಕಾಶವಾದಿಯಾಗಿ ಅಥವಾ 'ನನಗೆ ಜಾಗ ಸಿಕ್ಕರೆ ಸಾಕು' ಎಂಬ ವ್ಯಕ್ತಿವಾದವಾಗಿ ಉಳಿಯುತ್ತದೆ. ನಿರುದ್ಯೋಗಿಯಾಗಿರುವ ತರುಣರಲ್ಲಿ, ಅದರಲ್ಲೂ ವಿಜ್ಞಾನ ಪದವೀಧರರಲ್ಲಿ ಈ ಅವಕಾಶವಾದವು ಮೊಳೆಯುತ್ತಿರುವುದನ್ನು ಕಾಣಬಹುದು. ಇವರಿಗೆ ಜಾಗತೀಕರಣವನ್ನು ಸಂಸ್ಕೃತಿ ನುಡಿಗಟ್ಟಿನಲ್ಲಿ ಮಾತ್ರವಲ್ಲ, ರಾಜಕೀಯ ಪ್ರತಿರೋಧದ ಭಾಷೆಯಲ್ಲಿ ವಿಶ್ಲೇಷಣೆ ಮಾಡುವುದೂ ಅಮುಖ್ಯ ಅನಿಸುತ್ತದೆ.

3) ಇನ್ನು ಜಾಗತೀಕರಣವನ್ನು ತಂತ್ರಜ್ಞಾನ ವಿಜ್ಞಾನಗಳ, ವೈಚಾರಿಕತೆ ಮಾನವೀಯತೆಗಳನ್ನು ತುಂಬಿಕೊಂಡ ಆಧುನಿಕತೆ ಎಂದು ತಿಳಿದು, ಅದು ದಲಿತರನ್ನು ಬಿಡುಗಡೆ ಮಾಡಬಲ್ಲದು, ದಲಿತ ಸಂಸ್ಕೃತಿಗೆ ಆಧುನಿಕಗೊಳ್ಳುವ ವಿಶಾಲ ಅವಕಾಶ ಕಲ್ಪಿಸಿದೆ ಎನ್ನುವ ವಾದ. ಇದು ಆಧುನಿಕತೆ ಹಾಗೂ ಜಾಗತೀಕರಣಗಳನ್ನು ಒಂದೇ ಎಂದು ತಪ್ಪಾಗಿ ತಿಳಿದುದರ ಫಲವಾಗಿದೆ. ಪ್ರಶ್ನೆಯೆಂದರೆ, ವಸಾಹತುಶಾಹಿ ಆಳ್ವಿಕೆಯ ಭಾಗವಾಗಿ ಬಂದ ಆಧುನಿಕತೆಯು ತನ್ನ

ದಮನಕೋರತನ ನೀತಿಯ ಜತೆಯಲ್ಲೇ ವಿಜ್ಞಾನ, ತಂತ್ರಜ್ಞಾನ, ವೈಚಾರಿಕತೆ, ಆಧುನಿಕ ಶಿಕ್ಷಣ ಮುಂತಾದ ಸಂಗತಿಗಳನ್ನು ತಂದಿದ್ದು ನಿಜ. ಈ ಆಧುನಿಕತೆಯು ಜಾತಿಪದ್ಧತಿ ಲಿಂಗಭೇದಗಳಿರುವ ಭಾರತದಂತಹ ಸಮಾಜದಲ್ಲಿ, ಕೆಳವರ್ಗದ ಜನರಿಗೆ ಆಧುನಿಕ ಶಿಕ್ಷಣ ವಿಜ್ಞಾನ ವೈಚಾರಿಕತೆಗಳ ಮೂಲಕ ಸಣ್ಣಪುಟ್ಟ ಬಿಡುಗಡೆಯ ಹಾದಿಗಳನ್ನು ಮೂಡಿಸಿದ್ದೂ ನಿಜ. ಇಂತಹ ಶಕ್ತಿಯನ್ನಾದರೂ ಜಾಗತೀಕರಣವು ಒಳಗೊಂಡಿದೆಯೇ? ಇದು ದಮನಿತ ಸಂಸ್ಕೃತಿಗಳು ವಿಶ್ವದ ಸಂಸ್ಕೃತಿಗಳ ಜತೆ ಸಂವಾದ ಮಾಡುವ ಅವಕಾಶ ನೀಡುತ್ತದೆಯೇ?

4) ನೈತಿಕ ಮೌಲ್ಯಕೇಂದ್ರಿತ ಹಾಗೂ ಲಲಿತಕಲಾಕೇಂದ್ರಿತ ಸಂಸ್ಕೃತಿ ವ್ಯಾಖ್ಯೆಯ ಕಷ್ಟವೆಂದರೆ, ಅದು ದುಡಿವ ಕೆಳವರ್ಗದ ಸಮುದಾಯಗಳು ವರ್ತಮಾನದಲ್ಲಿ ಮಾಡುತ್ತಿರುವ ಆರ್ಥಿಕ ಸಾಮಾಜಿಕ ಸಂಘರ್ಷಗಳನ್ನೇ ಒಳಗೊಳ್ಳುವುದಿಲ್ಲ. ಜಾಗತೀಕರಣಕ್ಕೆ ಎದುರಾಗಿ ನಮ್ಮ ಗ್ರಾಮೀಣ ಸಂಸ್ಕೃತಿಯನ್ನು ಮುಂದೊಡ್ಡಬೇಕು ಎನ್ನುವಾಗ 'ನಮ್ಮ ಸಂಸ್ಕೃತಿ'ಯು ಕಂಬಾಲಪಲ್ಲಿ ಗುಜರಾತುಗಳನ್ನು ಒಳಗೊಂಡಿದೆ, ಇವು ಜಾಗತೀಕರಣದ ಕೇಡಿನ ಜತೆಜತೆಯಲ್ಲೇ ವಿಮರ್ಶೆಗೆ ಒಳಗಾಗಬೇಕಾದವು ಎಂದು ಯೋಚಿಸುವುದಿಲ್ಲ. ಯಾಕೆಂದರೆ ಜನತೆಯ ಈ ಒಳಶತ್ರುಗಳು, (ಉದಾಹರಣೆಗೆ ಹಿಂದುತ್ವವಾದವು) ಇವತ್ತು ಜಾಗತೀಕರಣದ ಶಕ್ತಿಗಳ ಜತೆ ಕೈಜೋಡಿಸಿವೆ. ಸ್ವವಿಮರ್ಶೆಯಿಲ್ಲದ ಇಂತಹ 'ನಮ್ಮ ಸಂಸ್ಕೃತಿ' ಪರಿಕಲ್ಪನೆ ಮೂಲಕ, ಜಾಗತಿಕ ರಾಜಕಾರಣದ ವಿದ್ಯಮಾನಕ್ಕೆ ಪ್ರತಿಕ್ರಿಯಿಸುವುದು ಎಷ್ಟು ಉಪಯುಕ್ತ?

5) ಜಾಗತೀಕರಣವನ್ನು 'ಜಾನಪದ ಅಥವಾ ದೇಸೀ ಸಂಸ್ಕೃತಿಯ ಶತ್ರು' ಎಂದು ತಿರಸ್ಕರಿಸುವ ಚಿಂತನೆಯ ಸಮಸ್ಯೆ ಎಂದರೆ, ಇದು ಆಧುನಿಕ ವಿಜ್ಞಾನ ತಂತ್ರಜ್ಞಾನ ಬೆಳವಣಿಗೆಯನ್ನೇ ಜಾಗತೀಕರಣ ಎಂಬಂತೆ ದನಿ ಹೊರಡಿಸುತ್ತದೆ. ಉದಾಹರಣೆಯಾಗಿ ಜಾಗತೀಕರಣ ಕುರಿತ ವಿಚಾರಸಂಕಿರಣವೊಂದರಲ್ಲಿ ಯು.ಆರ್. ಅನಂತಮೂರ್ತಿ ಅವರು ಮಾಡಿದ ಭಾಷಣವನ್ನು ಗಮನಿಸಬಹುದು. "ದೇಶಪ್ರೇಮ, ಸಂಸ್ಕೃತಿಯ ಮೂಲಕ ಜಾಗತೀಕರಣವನ್ನು ಎದುರಿಸಬೇಕಾಗಿದೆ" ಎಂಬ ಹೆಸರಲ್ಲಿ ಅದು ಪ್ರಕಟವಾಗಿದೆ. (ಅಕಾದೆಮಿಯ ವಾರ್ತಾಪತ್ರ, ಅಕ್ಟೋಬರ್ 2001 - ಜನವರಿ 2002). ಚಂದ್ರಶೇಖರ ಕಂಬಾರರ ಸಂದರ್ಶನಗಳಲ್ಲೂ ಈ ದನಿಯಿದೆ. ಪೇಜಾವರಸ್ವಾಮಿಗಳೂ ಇದೇ ದನಿಯಲ್ಲಿ (ಪ್ರಜಾವಾಣಿ ವರದಿ: 14/2/02) ಮಾತಾಡಿರುವುದುಂಟು. ಕನ್ನಡದಲ್ಲಿ ಬಹಳ ಜನಪ್ರಿಯವಾಗಿರುವ ವಾದವಿದು. ಈ ವಾದದಲ್ಲಿ ದೇಶೀ ಸಂಸ್ಕೃತಿ ರಕ್ಷಣೆಗಾಗಿ ಜಾನಪದ ಹಿನ್ನೆಲೆಯ ಕೆಲವರು ಜಾಗತೀಕರಣದ ವಿರೋಧದಲ್ಲಿ ಸೇರಿರುವುದು ವಿಚಿತ್ರ. 'ಹೊಸತು' (ಜನವರಿ 2002) ಪತ್ರಿಕೆಯಲ್ಲಿ ಕೋಡಿರಾಂಪುರ ಅವರು ಬರೆದ 'ಜಾಗತೀಕರಣ ಮತ್ತು ಸಂಸ್ಕೃತಿ' ಎಂಬ ಲೇಖನದಲ್ಲಿ ಈ ವಾದವಿದೆ. ಕನ್ನಡದ ಜಾನಪದ ಅಧ್ಯಯನಗಳ ಪ್ರಧಾನ ನಿಲುವೇ 'ಜಾನಪದವು ಆಧುನಿಕತೆಯ ಓಟದಲ್ಲಿ ನಾಶವಾಗುತ್ತದೆ, ಅದನ್ನು ರಕ್ಷಿಸಿಕೊಳ್ಳಬೇಕಾಗಿದೆ' ಎಂಬ ಆತಂಕಮಯಿ ಹಾಗೂ ಆತ್ಮರಕ್ಷಕವಾದುದು. ಆದ್ದರಿಂದ ದೇಶಿಯನ್ನು ಸರಳವಾಗಿ ಗ್ರಾಮೀಣ ಸಂಸ್ಕೃತಿ ಎಂದು ಭಾವಿಸಿರುವವರು, ತರ್ಕದ ಕೊನೆಗೆ ಬಲಪಂಥೀಯ ಚಿಂತನೆಯ ಮಗ್ಗುಲಿಗೆ ಹೋಗಿಬಿಡುವುದು ವಿಚಿತ್ರವೆನಿಸಿದರೂ ಸಹಜವಾಗಿದೆ.

ಇವರನ್ನು ಒಂದೇ ನುಡಿಗಟ್ಟಿಗೆ ತಂದಿರುವುದು ಜಾಗತೀಕರಣವೆಂಬ ಸಮಾನಶತ್ರುವಿಗಿಂತ ಹೆಚ್ಚಾಗಿ, ದೇಶೀ ಸಂಸ್ಕೃತಿ ಎಂಬ ಸಮಾನ ಮಿತ್ರ. ಈ ಜನಪದ ಸಂಸ್ಕೃತಿ ಚಿಂತಕರು ವಿದ್ಯುಚ್ಛಕ್ತಿಯ ಇಂಜಿನ್ನುಗಳು ಬಂದು, ಹೇಗೆ ಕಪಿಲೆ ಹೊಡೆಯುವ ಪದ್ಧತಿಯೂ ಕಪಿಲೆಯ ಹಾಡುಗಳೂ ನಾಶವಾದವು ಎಂದು ವಿಷಾದಿಸುತ್ತಾರೆ. ಕಪಿಲೆಯ ಹಾಡುಗಳಿಗಾಗಿ ನಮ್ಮ ರೈತರು ಆಧುನಿಕ ತಂತ್ರಜ್ಞಾನ ಬಳಸಬಾರದು ಎಂಬುದು ಇಲ್ಲಿನ ಅರ್ಥವೇ? ಆದರೆ ಗ್ರಾಮೀಣ ರೈತರು ತಮ್ಮ ನೀರಾ ಹೆಂಡವಾಗದಂತೆ ರಕ್ಷಿಸಬಲ್ಲ ಹೊಸ ತಂತ್ರಜ್ಞಾನ ಕೇಳುತ್ತಿದ್ದಾರೆ. ತಮ್ಮ ಬೋರ್ವೆಲ್ಲುಗಳಿಗೆ ವಿದ್ಯುತ್ ಸಂಪರ್ಕ ಕೇಳುತ್ತಿದ್ದಾರೆ. ಅವರು ಯಾವತ್ತೂ ಆಧುನಿಕತೆಯ ತಂತ್ರಜ್ಞಾನದ ಆರಾಧಕರು. 'ಸಂಸ್ಕೃತಿ' ರಕ್ಷಣೆಗಾಗಿ ಅವರು ಅದನ್ನು ತ್ಯಾಗ ಮಾಡುವವರಲ್ಲ. 'ಸಂಸ್ಕೃತಿ' ರಕ್ಷಕ ನುಡಿಗಟ್ಟು ನಗರ ಮಧ್ಯಮ ವರ್ಗದಿಂದ ಹುಟ್ಟುತ್ತಿರುವುದರಿಂದ ಈ ವೈರುಧ್ಯ ಸೃಷ್ಟಿಯಾಗಿದೆಯೇ?

6) ಜಾಗತೀಕರಣವು ಜಾನಪದ ಸಂಸ್ಕೃತಿಯ ನಾಶಕ ಎಂದು ಆತಂಕ ಮಾಡುವವರು ಪ್ರತಿಯಾಗಿ, ಜಾನಪದವು ತನ್ನನ್ನು ಕೊಲ್ಲುವ ಶಕ್ತಿಗಳಿಂದ ತಪ್ಪಿಸಿಕೊಂಡು ಬದುಕುವ ಉಪಾಯ ಗಳನ್ನು ಒಳಗೊಂಡಿದೆ, ಆದ್ದರಿಂದ ಜಾಗತೀಕರಣದ ವಿರುದ್ಧ ಈ ಗ್ರಾಮೀಣ ಸಂಸ್ಕೃತಿಯನ್ನೇ ಗುರಾಣಿಯಾಗಿ ಬಳಸಿಕೊಳ್ಳಬೇಕು ಎಂದೂ ನಂಬುತ್ತಾರೆ. ಈ ತರ್ಕ ಕೊಂಚ ಮುಂದೆ ಹೋಗಿ, ಬಡವರು ಅಶಿಕ್ಷಿತರು ಹಳ್ಳಿಗರು ಮಾತ್ರ ಜಾಗತೀಕರಣದ ಸಾಂಸ್ಕೃತಿಕ ವಿನಾಶದಿಂದ ಸಂಸ್ಕೃತಿಯನ್ನು ರಕ್ಷಿಸಬಲ್ಲರು ಎನ್ನುವಲ್ಲಿಗೆ ಹೋಗಿ ಮುಟ್ಟಿಬಿಡುತ್ತದೆ. ವಸಾಹತುಶಾಹಿಯ ಆಧುನಿಕತೆಯನ್ನು ಪಾಶ್ಚಿಮಾತ್ಯ ಅಹಂಕಾರ ಹಾಗೂ ಲೌಕಿಕ ದುರಾಸೆಯ ಕೂಸಾಗಿ ಗ್ರಹಿಸಿದ್ದ ಗಾಂಧೀಜಿ, ತಮ್ಮ 'ಹಿಂದ್ ಸ್ವರಾಜ್' ಪುಸ್ತಕದಲ್ಲಿ, ದೇಶೀ ಸಂಸ್ಕೃತಿಯನ್ನು ಒಂದು ಯುದ್ಧ ತಂತ್ರವಾಗಿ ಮಂಡಿಸಿದ್ದರು. ಈಗ ನೂರು ವರುಷಗಳ ಬಳಿಕ 'ಹಿಂದ್ ಸ್ವರಾಜ್' ಚಿಂತನೆಯನ್ನು ನಿರಾಳವಾಗಿ ಪರ್ಯಾಯವೆಂದು ಮಂಡಿಸುವುದು ಚಿಂತನಾ ವಿಲಾಸವಾಗಿ ಕಾಣುತ್ತದೆ.

7) ಸಂಸ್ಕೃತಿ ರಕ್ಷಕ ಪ್ರತಿರೋಧದ ಯಾವತ್ತೂ ಸಮಸ್ಯೆ ಎಂದರೆ, ಅನ್ಯರ ಆಕ್ರಮಣದ ವಿರುದ್ಧ ತನ್ನನ್ನು ಹೇಗೆ ರಕ್ಷಿಸಿಕೊಳ್ಳಬೇಕು ಎಂಬ ಉಪಾಯ ಹುಡುಕುವ ಅವಸ್ಥೆಯಲ್ಲಿ ಸದಾ ಇರುವುದು. ಈ ಚಿಂತನೆ ಒಂದರ್ಥದಲ್ಲಿ ಹಿಪಾಕ್ರಟಿಕ್ ಕೂಡ. ಯಾಕೆಂದರೆ, ವಿದೇಶಿ ದೊಡ್ಡ ಬಂಡವಾಳ ಮಿಲಿಟರಿಯಾಗಿ ಬಲಿಷ್ಠವಾಗಿರುವ ದೇಶಗಳ ಮುಂದೆ ಮೊಳಕಾಲೂರಿ, ಅದರ ಶಿಕ್ಷಣ ಪದ್ಧತಿ, ಭಾಷೆ, ಆರ್ಥಿಕತೆ ಎಲ್ಲವನ್ನು ನಿತ್ಯಬಾಳಿನಲ್ಲಿ ಅನುಭವಿಸುತ್ತದೆ. ಆದರೆ ಸಂಸ್ಕೃತಿ ಎಂಬ ಅಮೂರ್ತವಾದ ವಿಷಯದಲ್ಲಿ ಮಾತ್ರ ಆತ್ಮರಕ್ಷಕನಾಗಿ ವರ್ತಿಸುತ್ತದೆ. ಇದಕ್ಕೆ ಜಾಗತೀಕರಣವು ನಮ್ಮ ನೈಸರ್ಗಿಕ ಸಂಪತ್ತುಗಳನ್ನು ಹೇಗೆ ದೋಚುತ್ತಿದೆ ಎಂಬುದಕ್ಕಿಂತ, ಮೈಕೇಲ್ ಜಾಕ್ಸನ್ ಬಂದು ಕುಣಿಯುವುದು, ಕಾಲೇಜು ಹುಡುಗರು ವ್ಯಾಲಂಟೈನ್ ಡೇ ಮಾಡುವುದು ನಮ್ಮ ಸಂಸ್ಕೃತಿಗೆ ಮಾರಕ ಅನಿಸುತ್ತದೆ. ಈ ಬಗೆಯ ಪಾವಿತ್ರ್ಯರಕ್ಷಕ ಮತ್ತು ಆತ್ಮಸಂಭಾವಿತ ಸಂಸ್ಕೃತಿಯ ಪರಿಕಲ್ಪನೆಯ ಮೂಲಕ, ಜಾಗತೀಕರಣ ಮುಖಾಮುಖಿ ಮಾಡುವುದು ಸಂಘಪರಿವಾರದ ಆಲೋಚನಾ ವಿಧಾನಕ್ಕೆ ಸಮೀಪವಾಗಿದೆ.

ಒಂದು ಪ್ರತಿವಾದ

ಜಾಗತೀಕರಣವನ್ನು 'ನಮ್ಮ ಸಂಸ್ಕೃತಿಯ ಮೇಲೆ ವಿದೇಶಿ ಸಂಸ್ಕೃತಿಯ ಆಕ್ರಮಣ' ಎಂಬ ನುಡಿಗಟ್ಟಲ್ಲಿ ಚರ್ಚೆಗಳು ಕಾಣಿಸಿಕೊಂಡಾಗ, ಚಂಪಾ ಅವರು ಮಾಡಿದ ಪ್ರತಿಕ್ರಿಯೆಯೊಂದು ಕುತೂಹಲಕರವಾಗಿತ್ತು. 'ಜಾಗತೀಕರಣವು ದೇಶೀಯ ಸಂಸ್ಕೃತಿಯನ್ನು ಕಂಗೆಡಿಸುತ್ತದೆ ಎನ್ನುವುದಾದರೆ ಅದನ್ನು ನಾವು ಯಾಕೆ ಸ್ವಾಗತಿಸಬಾರದು? ಈ ಆತಂಕ ವ್ಯಕ್ತ ಮಾಡುತ್ತಿರುವವರು, ನಮ್ಮ ಸಮಾಜದ ಮೇಲು ಜಾತಿಗೆ ಸೇರಿದವರು. ಅವರ ಸಂಸ್ಕೃತಿ ಎಂದರೆ ಜಾತಿ ಪದ್ಧತಿ ಒಪ್ಪುವಂತಹದು. ಚರಿತ್ರೆಯುದ್ದಕ್ಕೂ ಪ್ರಗತಿಪರರು ಈ ಜಾತಿ ವರ್ಣ ಸಂಸ್ಕೃತಿ ನಾಶವಾಗಬೇಕು ಎಂದು ದಂಗೆ ಎದ್ದಿದ್ದಾರೆ. ನಾವು ಮಾಡುವ ಕೆಲಸವನ್ನು ವಿದೇಶದ ಶಕ್ತಿಯೊಂದು ಮಾಡುತ್ತದೆ ಎಂದಾದರೆ, ಅದನ್ನು ನಾವ್ಯಾಕೆ ವಿರೋಧಿಸಬೇಕು?' - ಇದರಲ್ಲಿ ವಿತಂಡವಾದ, ವಿಡಂಬನೆ ಇದೆ, ನಿಜ. ಆದರೆ ಜಾಗತೀಕರಣದ ಆತಂಕವು ಗತಕಾಲದ ಸಾಧನೆಗಳಲ್ಲಿ ತಲೆಮರೆಸಿಕೊಳ್ಳುವತ್ತ ಎಳೆಯತೊಡಗಿದರೆ, ಅದರ ಅಪಾಯವನ್ನು ತೋರಿಸಲು ಇಂತಹ ಅತಿವಾದ ಹುಟ್ಟುತ್ತದೆ.

ಲೇಖಕರ ವರ್ಗಮಿತಿ?

ಕನ್ನಡ ಜಾಗತೀಕರಣ ಚಿಂತನೆಗಳಲ್ಲಿ ಯಾಕೆ ಸಾಂಸ್ಕೃತಿಕ ಭಾವನಾತ್ಮಕ ಪರಿಭಾಷೆ ಬಳಕೆಯಾಗುತ್ತದೆ? ಇದು ರಾಜಕೀಯವಾಗಿ ಆರ್ಥಿಕವಾಗಿ ಈ ವಿದ್ಯಮಾನವನ್ನು ವಿಶ್ಲೇಷಿಸುವ ತಾತ್ವಿಕ ಮಿತಿಯನ್ನು ಕುರಿತದ್ದೇ? ಈ ವಿಷಯವನ್ನು ಸಮಾಜ ವಿಜ್ಞಾನಿಗಳಿಗಿಂತ ಹೆಚ್ಚಾಗಿ 'ಸೃಜನಶೀಲ' ಲೇಖಕರು ಸಾಹಿತಿಗಳು ಭಾವನಾತ್ಮಕವಾಗಿ ಮಂಡಿಸುತ್ತಿರುವುದರಿಂದ ಹೀಗಾಗುತ್ತಿದೆಯೇ? ಜಾಗತೀಕರಣದ ಬಗ್ಗೆ ಚರ್ಚಿಸುತ್ತಿರುವ ಲೇಖಕರಿಗೆ, ಜಾಗತೀಕರಣದ ವಿರುದ್ಧ ನಡೆಯುತ್ತಿರುವ ಸಮೂಹ ಚಳವಳಿಗಳ ಸಹವಾಸ ಇಲ್ಲದಿರುವುದರಿಂದ ಇಂತಹ ನುಡಿಗಟ್ಟು ಬಳಕೆಯಾಗುತ್ತಿದೆಯೇ? ಈ ನುಡಿಗಟ್ಟು ವ್ಯವಸ್ಥೆಯನ್ನು ನೇರ ಎದುರುಹಾಕಿಕೊಳ್ಳದೆ ನಿರಪಾಯಕರವಾದ ಪ್ರತಿರೋಧ ಮಾಡಬೇಕೆನ್ನುವ ಲೇಖಕರ ವರ್ಗದ ಮಿತಿಯಿಂದ ಹುಟ್ಟಿದ್ದೇ? ಬಲಿಷ್ಠ ಶತ್ರುವನ್ನು ರಾಜಕೀಯವಾಗಿ ಎದುರಿಸಲು ಆಗದ ಅಸಹಾಯಕತೆಯೇ ಧಾರ್ಮಿಕ ನೈತಿಕ ಸಾಂಸ್ಕೃತಿಕ ನುಡಿಗಟ್ಟನ್ನು ಹುಟ್ಟಿಸುತ್ತದೆಯೇ? ಅಥವಾ ರಾಜಕೀಯ ಆರ್ಥಿಕ ಅಜೆಂಡಕ್ಕೆ ಧಾರ್ಮಿಕ ಸಾಂಸ್ಕೃತಿಕ ಪರಿಭಾಷೆಯ ಬಳಕೆ ಭಾರತೀಯರ ಯುದ್ಧತಂತ್ರವಾಗಿದೆಯೇ? ಕೊನೆಯ ಮಾತನ್ನು ಕೊಂಚ ವಿವರಿಸಬೇಕು.

ಭಾರತದಲ್ಲಿ ಅನೇಕ ವಸಾಹತುಶಾಹಿ ವಿರೋಧಿ ಚಳವಳಿಗಳು ಇಂತಹ ವೇಷಧಾರಿ ತಂತ್ರವನ್ನು ಬಳಸಿದವು. ವಸಾಹತುಶಾಹಿ ಸಂದರ್ಭದಲ್ಲಿ ಹುಟ್ಟಿದ 'ಭಾರತೀಯ ಸಂಸ್ಕೃತಿ' ರಕ್ಷಕ ಚಟುವಟಿಕೆಗಳು ಆಳದಲ್ಲಿ ರಾಜಕೀಯ ಪ್ರತಿಕ್ರಿಯೆಗಳಾಗಿದ್ದವು. ರಾಜಕೀಯ ಪ್ರತಿರೋಧವು ಸಂಸ್ಕೃತಿ ಪರಿಭಾಷೆಯಲ್ಲಿ ವ್ಯಕ್ತವಾಗುವುದಕ್ಕೆ ಮಾಸ್ತಿ (ಕರ್ನಾಟಕದ ಜನತೆಯ ಸಂಸ್ಕೃತಿ 1932), ಡಿವಿಜಿ (ಸಂಸ್ಕೃತಿ 1953) ಅವರ ಸಂಸ್ಕೃತಿ ಚಿಂತನೆಗಳು ಒಳ್ಳೆ ನಿದರ್ಶನಗಳು.

ಬ್ರಿಟಿಷರು ಪಾತ್ರಗಳಾಗಿ ಬರುವ ಮಾಸ್ತಿಯವರ ಕತೆಗಳಲ್ಲಿ ಸಾಂಸ್ಕೃತಿಕ ವೇಷಧಾರಣೆಯ ರಾಜಕೀಯ ಪ್ರತಿಕ್ರಿಯೆಗೆ ಸ್ವಾರಸ್ಯಕರ ಮಾದರಿಗಳಿವೆ.

ಈಗಲೂ ಜಾಗತೀಕರಣವು ತನ್ನ ಎದುರಾಳಿಗಳಿಂದ ಬಗೆಬಗೆಯ ಪ್ರತಿರೋಧದ ನುಡಿಗಟ್ಟನ್ನೂ ಪರಿಭಾಷೆಯನ್ನೂ ಹುಟ್ಟಿಸುತ್ತಿದೆ. ಮಧ್ಯ ಏಶಿಯಾದಲ್ಲಿ ಅಮೆರಿಕವು ತೈಲ ರಾಜಕಾರಣಕ್ಕಾಗಿ ಮಾಡುತ್ತಿರುವ ದಮನ, ಪಿತೂರಿಗಳು ಅರಬ್ ಸಮಾಜಗಳಲ್ಲಿ ಮೂಲಭೂತ ವಾದದ ನುಡಿಗಟ್ಟನ್ನು ಹುಟ್ಟಿಸುತ್ತಿವೆ. ಇದು ಆಳದಲ್ಲಿ ರಾಜಕಾರಣ ಆರ್ಥಿಕ ಪ್ರತಿಕ್ರಿಯೆ ಯಾಗಿದ್ದರೂ, ಅದು ತನ್ನ ಪ್ರತಿರೋಧಕ್ಕೆ ಬಳಸುತ್ತಿರುವ ನುಡಿಗಟ್ಟು ಮಾತ್ರ 'ನಮ್ಮ ಧರ್ಮ' 'ನಮ್ಮ ಸಂಸ್ಕೃತಿಗಳ ಪಾವಿತ್ರ್ಯ ರಕ್ಷಣೆ' ಎಂಬುದಾಗಿದೆ. ಜನಪರ ಚಳವಳಿಗಳು ಕೂಡ ತಮ್ಮ ದಾರಿಯಲ್ಲಿ ಈ ತಂತ್ರವನ್ನು ಬಳಸುವುದುಂಟು. ಉದಾಹರಣೆಗೆ, ಕುದುರೆಮುಖ ಗಣಿಗಾರಿಕೆ ಯಿಂದ ನಾಶವಾಗುತ್ತಿರುವ ತುಂಗಭದ್ರಾ ನದಿಗಳು. ಇದು ನೇರವಾಗಿ ಎಂಟು ಜಿಲ್ಲೆಗಳ ಒಂದು ಲಕ್ಷಾಂತರ ಜನರ ಬದುಕಿಗೆ ಸಂಬಂಧಿಸಿದ ಪ್ರಶ್ನೆಯಾಗಿದೆ. ಆದರೂ ಈ ಚಳವಳಿಗಳಿಗೆ ತುಂಗಭದ್ರಾ ತೀರದ ಮಠಾಧೀಶರು ತಂತಮ್ಮ ಕ್ಷೇತ್ರಗಳ ದಡದಲ್ಲಿ ಹರಿಯುವ ನದಿಗಳ ಪಾವಿತ್ರ್ಯವನ್ನು ಹೇಳಿ, ಅವಕ್ಕೆ ಧಾರ್ಮಿಕ ಆಯಾಮವನ್ನು ನೀಡುವ ಕೆಲಸ ಮಾಡಿಸಬೇಕಾಯಿತು. ಇದು ಬಲಿಷ್ಠ ಶತ್ರುವಿನ ಸೋಲಿಗೆ ಜನಬೆಂಬಲ ಪಡೆಯಲು ಬಳಸಲಾಗುವ ಯುದ್ಧತಂತ್ರವೋ ಅಥವಾ ಭಾರತೀಯ ರಾಜಕೀಯ ಪ್ರತಿರೋಧಗಳ ಚಾಳಿಯೋ?

ಹೀಗೆ ಹೇಳುವಾಗ, ನುಡಿಗಟ್ಟು ಅಥವಾ ತಂತ್ರಗಾರಿಕೆಗಳು ಯಾವುವು ಎನ್ನುವುದಕ್ಕಿಂತ ಅವು ಯಾತಕ್ಕಾಗಿ ಮತ್ತು ಅವುಗಳ ಪರಿಣಾಮ ಯಾವುದು ಎಂಬ ಪ್ರಶ್ನೆ ಮುಖ್ಯವಾಗಬೇಕು. ಯಾಕೆಂದರೆ ಈ ಹೊತ್ತೂ 'ಧರ್ಮ', 'ಸಂಸ್ಕೃತಿ'ಯ ಪರಿಭಾಷೆಯಲ್ಲಿ ರಾಜಕಾರಣದ ಅಜೆಂಡಾಗಳನ್ನು ಅಡಗಿಸುವ ಕಲೆಯಲ್ಲಿ ಸಂಘ ಪರಿವಾರವು ಅದ್ಭುತ ಪರಿಣತಿ ಪಡೆದಿದೆ. ಅದು ಆರೆಸ್ಸೆಸ್ಸನ್ನು 'ಸಾಂಸ್ಕೃತಿಕ ಸಂಘಟನೆ' ಎಂದು ಕರೆಯುತ್ತದೆ. ತಾನು ನಿರ್ವಹಿಸುವ ಕೋಮುವಾದಿ ದೇಶಭಕ್ತಿಯನ್ನು 'ಸಾಂಸ್ಕೃತಿಕ ರಾಷ್ಟ್ರೀಯತೆ' ಎಂದು ಕರೆಯುತ್ತದೆ. ಆದರೆ ಅದನ್ನು ಬಲ್ಲ ಎಲ್ಲರಿಗೂ ಗೊತ್ತಿದೆ, ಒಳಗೆ ಇರುವುದು ಪ್ರಚ್ಛನ್ನವಾದ ರಾಜಕಾರಣ ಎಂದು. ರಾಜಕಾರಣವನ್ನು ಧಾರ್ಮಿಕ ಸಾಂಸ್ಕೃತಿಕ ಪರಿಭಾಷೆಯಲ್ಲಿ ವಿವರಿಸಬಲ್ಲ ಅದು, ಧಾರ್ಮಿಕ ಆಯಾಮದಲ್ಲಿ ಪ್ರಕಟವಾಗುವ ತನ್ನ ಎದುರಾಳಿಗಳ ಪ್ರತಿಕ್ರಿಯೆಗಳನ್ನು ಮಾತ್ರ, ಅಂತಾರಾಷ್ಟ್ರೀಯ ರಾಜಕಾರಣದ ಹಿನ್ನೆಲೆಯಲ್ಲಿಟ್ಟು ರಾಜಕೀಯ ಆರ್ಥಿಕ ಪರಿಭಾಷೆಯಲ್ಲಿ ನೋಡುವುದಿಲ್ಲ. ಉದಾ: ಸೆಪ್ಟೆಂಬರ್ 11ರ ಘಟನೆಯು, ಅದರ ಪಾಲಿಗೆ ಕೇವಲ ಮುಸ್ಲಿಂ ಭಯೋತ್ಪಾದನೆಯ ಕೃತ್ಯ. ಅಮಾಯಕರನ್ನು ಬಲಿತೆಗೆದುಕೊಳ್ಳುವ ಯಾವ ಕೃತ್ಯವನ್ನೂ ಸಮರ್ಥಿಸಲಾಗದು; ನಿಜ. ಆದರೆ ಈ ಹತಾಶೆ ಕ್ರೌರ್ಯಗಳನ್ನು ಹಡೆಯುತ್ತಿರುವ ಮಹಾತಾಯಿ ಯಾರು? ಅದರ ಗರ್ಭಬೇರು ಎಲ್ಲಿದೆ? ಸಂಪತ್ತನ್ನು ದೋಚುವ ಬಲಿಷ್ಠ ದೇಶಗಳ ಹಿತಾಸಕ್ತಿಗಳು, ಬಡದೇಶಗಳಲ್ಲಿ ಆಡುವ ಆಟದ ಫಲವಾಗಿ ಹುಟ್ಟುತ್ತಿರುವ ಭಸ್ಮಾಸುರವಲ್ಲವೇ ಅದು? ರಾಜಕೀಯ ಆರ್ಥಿಕ ಆಯಾಮ

ವುಳ್ಳ ಸಂಗತಿಗಳನ್ನು, ಕೇವಲ ಧರ್ಮ ನಾಗರಿಕತೆ ಸಂಸ್ಕೃತಿಗಳ ಪರಿಭಾಷೆಯಲ್ಲಿ ವಿಶ್ಲೇಷಿಸುವುದು, ಸತ್ಯವನ್ನು ಮರೆಮಾಚುವ ಉದ್ದೇಶಪೂರ್ವಕ ರಾಜಕಾರಣವಾಗಿದೆ.

ಶತ್ರುಗಳಿಗೂ ಪ್ರಿಯವಿದು?

ಜಾಗತೀಕರಣ ಚರ್ಚೆಗೆ ಸಂಸ್ಕೃತಿ ಪರಿಭಾಷೆ ಬಳಸುವುದರ ವಿಚಿತ್ರ ಪರಿಣಾಮಕ್ಕೆ, ಈಚೆಗೆ ಅಮೆರಿಕದ ಡೆಟ್ರಾಯಿಟ್‌ನಲ್ಲಿ ನಡೆದ ಕನ್ನಡಿಗರ ಸಮ್ಮೇಳನಕ್ಕೆ ಎಸ್.ಎಂ. ಕೃಷ್ಣ ಕಳಿಸಿದ ಭಾಷಣ ಒಳ್ಳೆಯ ಉದಾಹರಣೆ ("ಭಾಷೆ ಸಂಸ್ಕೃತಿಗಳ ಮೇಲೆ ದಾಳಿ : ಮುಖ್ಯಮಂತ್ರಿ ವಿಷಾದ" - ಪ್ರಜಾವಾಣಿ 1-9-02). ಅವರು ತಮ್ಮ ಭಾಷಣದ ಮೊದಲ ಭಾಗದಲ್ಲಿ, ಜಾಗತೀಕರಣವು ಹೇಗೆ ಭಾರತದ ಉಪಸಂಸ್ಕೃತಿಗಳ ಅಸ್ತಿತ್ವವನ್ನೇ ಅಲುಗಾಡಿಸುವಂತಹ ಅಪಾಯವನ್ನು ಒಡ್ಡಿದೆ ಎಂದು ಆತಂಕ ಮಾಡುತ್ತಾರೆ. ನಮ್ಮ ಭಾಷೆ ಸಂಸ್ಕೃತಿ ಉಳಿಸಿಕೊಳ್ಳಬೇಕಾಗಿದೆ ಎಂದು ಕರೆಯನ್ನು ಕೊಡುತ್ತಾರೆ. ಆದರೆ ತಮ್ಮ ಭಾಷಣದ ಎರಡನೇ ಭಾಗದಲ್ಲಿ ಕರ್ನಾಟಕವು ಇಡೀ ಭಾರತದಲ್ಲಿಯೇ ವಿದೇಶಿ ಬಂಡವಾಳ ಹೂಡಿಕೆಗೆ ಅತ್ಯುತ್ತಮ ಪರಿಸರವುಳ್ಳ ನಾಡಾಗಿರುವುದರಿಂದ, ಇಲ್ಲಿ ವಿದೇಶಿ ಬಂಡವಾಳವು ಬರಬೇಕು ಎಂದು ಆಹ್ವಾನಿಸುತ್ತಾರೆ. ಮೊದಲ ಆಶಯವನ್ನು ಎರಡನೆಯ ಆಶಯವು ಇಕ್ಕಟ್ಟಿಗೆ ಸಿಕ್ಕಿಸುವುದನ್ನು ಅವರು ಗಮನಿಸುವುದಿಲ್ಲ. ಅಥವಾ ಇವೆರಡನ್ನೂ ವೈರುಧ್ಯವಿಲ್ಲದೆ ಒಟ್ಟಿಗೆ ಮಾತಾಡುವುದು ಅವರಿಗೆ ಸಾಧ್ಯ ಮಾಡಿಕೊಟ್ಟಿರುವುದು ಸಂಸ್ಕೃತಿ ರಕ್ಷಣೆ ಎಂಬ ಸರ್ಕಾರದ ಭಾಷೆ. ಎಂತಲೇ ಇವತ್ತು ಜಾಗತೀಕರಣದ ಪರವಾಗಿ ಆತಂಕ ಮಾಡುತ್ತಲೇ, ಸಂಸ್ಕೃತಿ ರಕ್ಷಣೆಗೆಂದು ಸಾಹಿತ್ಯ ಸಮ್ಮೇಳನಕ್ಕೆ ಅನುದಾನ ಕೊಡುವುದು, ಹಂಪಿ ಉತ್ಸವ ಮಾಡಿಸುವುದು ಸಾಧ್ಯವಾಗಿದೆ.

ಹೀಗೆ ಜಾಗತೀಕರಣದಿಂದ ದೇಶಿ ಸಂಸ್ಕೃತಿ ನಾಶವಾಗುತ್ತಿದೆ ಎಂಬ ಆತಂಕವು ಜಾಗತೀಕರಣದ ಶಕ್ತಿಗಳಿಗೆ ಪ್ರಿಯವೂ ಆಗಿದೆ. ಕಾರಣ, ಈ ಆತಂಕಕ್ಕೆ ಪರಿಹಾರವನ್ನು ಜಾಗತೀಕರಣದ ಮುಂಚೂಣಿ ದೇಶಗಳೇ ಒದಗಿಸಿವೆ. ಇದರಲ್ಲಿ ಹಿಂದುಳಿದ ಸಮಾಜದಲ್ಲಿರುವ ವಿಭಿನ್ನ ಸಮುದಾಯಗಳ ಸಂಸ್ಕೃತಿಯ ವೈವಿಧ್ಯವನ್ನು ದಾಖಲಿಸುವ ಉಳಿಸುವ ಯೋಜನೆಯೂ ಒಂದು. ಕರ್ನಾಟಕದ ಅನೇಕ ಕಾಲೇಜುಗಳಲ್ಲಿ ಫೋರ್ಡ್ ನೆರವಿನಿಂದ ಜಾರಿಗೊಂಡಿರುವ ಕ್ಯಾಂಪಸ್ ವೈವಿಧ್ಯದ ರಕ್ಷಣೆ ಯೋಜನೆ (CDI) ಇಂತಹದ್ದು. 'ನಮ್ಮ ಸಂಸ್ಕೃತಿ'ಯ ರಕ್ಷಣೆಗಾಗಿ ಫೋರ್ಡಿನವರ ಕಳಕಳಿ! ಇದೊಂದು ಕಠೋರ ವ್ಯಂಗ್ಯ. ಜಾಗತೀಕರಣದ ಶಕ್ತಿಗಳು ಕೊಡಮಾಡಿದ ಫಂಡುಗಳಿಂದ ದಲಿತರ, ಮಹಿಳೆಯರ, ಅಲ್ಪಸಂಖ್ಯಾತರ, ಬುಡಕಟ್ಟುಗಳ ಸಾಂಸ್ಕೃತಿಕ ವಿಶಿಷ್ಟತೆಯನ್ನು ದಾಖಲಿಸುವ ಕೆಲಸವನ್ನು ಅನೇಕ ಎನ್‌ಜಿಓಗಳು ಟೊಂಕ ಕಟ್ಟಿ ಮಾಡುತ್ತಿವೆ. ಇದಕ್ಕಾಗಿ ಸಾವಿರಾರು ನಿರುದ್ಯೋಗಿ ಯುವಕರನ್ನು ತೊಡಗಿಸಿಕೊಳ್ಳಲಾಗಿದೆ. ಜಾಗತೀಕರಣದ ಈ ಹೊತ್ತಿನಲ್ಲಿ, ಯಾಕೆ ಎನ್‌ಜಿಓಗಳು ನಮ್ಮ ಸಂಸ್ಕೃತಿಯ ಬಹುರೂಪಿ ಹುಡುಕಾಟವನ್ನು ಅಥವಾ ದಲಿತ ಮುಸ್ಲಿಂ ಮಹಿಳಾ ಗಿರಿಜನ ಮುಂತಾದ ಚಿಕ್ಕಚಿಕ್ಕ ಸಮುದಾಯಗಳ ಸಾಂಸ್ಕೃತಿಕ ಅನನ್ಯತೆಯನ್ನು, ದೊಡ್ಡ ಪ್ರಶ್ನೆಯನ್ನಾಗಿ ಮಾಡಿಕೊಂಡಿವೆ? ಈ ಗೂಢವನ್ನು ಸರಿಯಾಗಿ ಬಿಡಿಸುವ ಸವಾಲು ಎದುರಿಗಿದೆ. ನಮ್ಮ ಸಮಾಜದೊಳಗಿನ ಭಿನ್ನಾಭಿಪ್ರಾಯ, ಸಂಘರ್ಷಗಳತ್ತಲೇ ನಮ್ಮ

ಗಮನ ಹರಿಸುವ, ದಲಿತ ಮಹಿಳೆ ಅಲ್ಪಸಂಖ್ಯಾತ ಬುಡಕಟ್ಟು ಸಂಸ್ಕೃತಿ ಎಂಬ ತುಂಡುಗಳು ತಮಗೆ ತಾವೇ ದ್ವೀಪಗಳಾಗಿಬಿಡುವ, ಅಥವಾ ತಮ್ಮ ಶತ್ರುವನ್ನು ಬಗಲಲ್ಲೇ ಹುಡುಕುವ ಪ್ರೇರಿಸುವ ಕೆಲಸ ಮಾಡಿಸುತ್ತಿದೆಯೇ? ಇದಕ್ಕೆ ತಕ್ಕಂತೆ ಪ್ರತಿಯೊಂದು ತುಣುಕಿನ ಅಸ್ತಿತ್ವವನ್ನೂ ಮನ್ನಿಸುವ ನೆಪದಲ್ಲಿ, ಯಾವುದಕ್ಕೂ ಕೊಡುವ ಬಿಂದುವೊಂದು ಇರುವುದನ್ನೆ ನಿರಾಕರಿಸುವ ಪೋಸ್ಟ್ ಮಾಡರ್ನಿಸ್ಟ್ ಚಿಂತನೆಗಳು ಇದೇ ಹೊತ್ತಲ್ಲಿ ಬೀಸುತ್ತಿರುವುದು ಆಕಸ್ಮಿಕವಲ್ಲ ತಾನೇ?

ಆದ್ದರಿಂದಲೇ ಜಾಗತೀಕರಣ ಚರ್ಚೆಗೆ ಸಂಸ್ಕೃತಿ ನುಡಿಗಟ್ಟನ್ನು ಬಳಸುವುದು ಸಮಸ್ಯಾತ್ಮಕ ಮಾತ್ರವಲ್ಲ, ಅದು ಚರ್ಚೆಯನ್ನು ರಾಜಕೀಯವಾಗಿ, ತಾತ್ವಿಕವಾಗಿ ಅಳ್ಳಕಗೊಳಿಸುವ, ಭಾವುಕಗೊಳಿಸುವ, ಸೀಮಿತಗೊಳಿಸುವ, ಹಾದಿ ತಪ್ಪಿಸುವ ಭಾಷೆಯಾಗಿಬಿಟ್ಟಿದೆ. ಆದ್ದರಿಂದ ಜಾಗತೀಕರಣದ ಚರ್ಚೆ ರಾಜಕೀಯ ಆರ್ಥಿಕತೆಯ ಪರಿಭಾಷೆಯಲ್ಲಿ, ದುಡಿವ ಸಮುದಾಯಗಳ ಬದುಕಿನ ಮೇಲಾಗುತ್ತಿರುವ ಪರಿಣಾಮಗಳ ನೆಲೆಯಲ್ಲಿ ಮಾಡುವುದೂ ಜರೂರಾಗಿದೆ. ಒಂದೊಮ್ಮೆ 'ಸಂಸ್ಕೃತಿ' ಪರಿಕಲ್ಪನೆ ಬಳಸುವುದೇ ಆದರೆ ಅದು ಈ ಸಮುದಾಯಗಳ ರಾಜಕೀಯ ಆರ್ಥಿಕ ಸಾಮಾಜಿಕ ಸುಖ ದುಃಖ ಸಂಕಟ ಸಮಸ್ಯೆಗಳೆಲ್ಲವನ್ನು ಪ್ರತಿನಿಧಿಸುವಂತೆ ವಿಶಾಲ ಅರ್ಥವ್ಯಾಪ್ತಿಯನ್ನು ಪಡೆದುಕೊಳ್ಳಬೇಕು. ಇಲ್ಲದಿದ್ದರೆ ಸಂಸ್ಕೃತಿ ಎಂಬ ಪದವನ್ನೇ ಜಾಗತೀಕರಣದ ರಾಜಕಾರಣದ ಚರ್ಚೆಯಿಂದ ಸದ್ಯಕ್ಕೆ ಬಹಿಷ್ಕರಿಸಬೇಕು.

❑

ಸಂಸ್ಕೃತಿಯ ಅಧ್ಯಯನ : ಕೆಲವು ಪ್ರತಿಕ್ರಿಯೆಗಳು

ಎಚ್.ಎಸ್. ರಾಘವೇಂದ್ರರಾವ್

ನಾನು ಮುಖ್ಯವಾಗಿ ಸಾಹಿತ್ಯದ ವಿದ್ಯಾರ್ಥಿ. ಸಂಸ್ಕೃತಿಯ ಅಧ್ಯಯನದಲ್ಲಿ ನನಗಿರುವ ಆಸಕ್ತಿಯು ಆನುಷಂಗಿಕವಾದುದು. ಆದರೆ ಕಳೆದ ಮೂವತ್ತು ವರ್ಷಗಳಲ್ಲಿ, ನನ್ನ ಕಾರ್ಯಕ್ಷೇತ್ರವಾದ ಸಾಹಿತ್ಯ ವಿಮರ್ಶೆಯಲ್ಲಿ ನಡೆದಿರುವ ಹಲವು ಬದಲಾವಣೆಗಳು, ನನ್ನಂತಹ ಅನೇಕರಿಗೆ ಸಂಸ್ಕೃತಿಯನ್ನು ಕುರಿತ ಚಿಂತನೆಯನ್ನು ಅನಿವಾರ್ಯವಾಗಿಸಿವೆ. ಈಚೆಗೆ ಒಂದು ಸಮುದಾಯದ ಸಂಸ್ಕೃತಿಯನ್ನು, ಅದರ ಚಲನಶೀಲ ನೆಲೆಗಳಲ್ಲಿ ಅಭ್ಯಾಸ ಮಾಡುವ ಒಟ್ಟು ಪ್ರಕ್ರಿಯೆಯ ಭಾಗವಾಗಿ ಮಾತ್ರ, ಸಾಹಿತ್ಯದ ಅಧ್ಯಯನವನ್ನು ಪರಿಭಾವಿಸಲಾಗುತ್ತಿದೆ. ಈ ಬೆಳವಣಿಗೆಯು ಅನೇಕರಲ್ಲಿ ಸಾಹಿತ್ಯದ "ಅನನ್ಯತೆ" ಹಾಗೂ "ಕಲಾತ್ಮಕತೆ"ಗೆ ಉಂಟಾಗಬಹುದಾದ "ಅಪಾಯ"ವನ್ನು ಕುರಿತ ಆತಂಕಗಳನ್ನು ಹುಟ್ಟಿಸಿದೆ. ಸಾಹಿತ್ಯದಲ್ಲಿ ಕಲಾತ್ಮಕತೆಯ ಸ್ವರೂಪ ಹಾಗೂ ಆಕೃತಿಗೆ ಸಂಬಂಧಪಟ್ಟ ತೀರ್ಮಾನಗಳೂ ಸಂಸ್ಕೃತಿ ನಿರ್ದೇಶಿತವೇ ಆಗಿರುತ್ತವೆ. ಆದ್ದರಿಂದ ಸಾಹಿತ್ಯದ ರೂಪನಿಷ್ಠ ಅಧ್ಯಯನದ ಆಶಯ, ವಿಧಾನ ಮತ್ತು ಪರಿಕರಗಳಲ್ಲಿ, ಈ ಸಾಂಸ್ಕೃತಿಕ ಅಗತ್ಯಗಳಿಗೆ ಅನುಗುಣವಾದ "ಮರುಹೊಂದಾಣಿಕೆ" ಮಾಡಿಕೊಳ್ಳುವುದು ನಮ್ಮ ಇಂದಿನ ಅನಿವಾರ್ಯಗಳಲ್ಲಿ ಒಂದು.

ಸಾಹಿತ್ಯದಲ್ಲಿ, ಸಮುದಾಯದ ಬಹುಮುಖೀ ಪ್ರತಿನಿಧೀಕರಣಕ್ಕೆ, ಹಾಗೂ ಶೋಷಿತ ನೆಲೆಗಳ ಪರವಾದ ವಾದ ಮಂಡನೆಗೆ ಒತ್ತು ನೀಡಿದ ದಲಿತ ಬಂಡಾಯ ಚಳವಳಿಯ ಆಶಯಗಳಿಗೆ ಪರ್ಯಾಯವೆಂದು ಈ ಸಂಸ್ಕೃತಿನಿಷ್ಠ ಅಧ್ಯಯನವನ್ನು ನೋಡಬೇಕೋ ಅಥವಾ ಇದು ಅಂಥ ಕಾಳಜಿಗಳ ತರ್ಕಬದ್ಧ ಮುಂದುವರಿಕೆಯೋ ಎಂಬ ಅಂಶವು ನಮ್ಮ

ದೃಷ್ಟಿಕೋನವನ್ನು ಅವಲಂಬಿಸಿರುತ್ತದೆ. ಸಮುದಾಯದ ಸಂಸ್ಕೃತಿಯ ಮೇಲೆ ಇರುವ ವರ್ತಮಾನದ ಒತ್ತಡಗಳನ್ನು ಹಿನ್ನೆಲೆಗೆ ಸರಿಸಿ, ಅದರ ಏಕಮುಖಿಯೋ ಬಹುಮುಖಿಯೋ ಆದ ಭೂತಕಾಲದ ನೆಲೆಗಳನ್ನು ವೈಭವೀಕರಿಸುವ ಪ್ರಯತ್ನವೂ ಅಪಾಯಕಾರಿಯೆಂದೇ ತೋರುತ್ತದೆ.

ಒಂದು ಸಾಹಿತ್ಯಕೃತಿಯನ್ನು ಕೇವಲ ಸಾಹಿತ್ಯಕ ಅಧ್ಯಯನದ ವಸ್ತುವಾಗಿ ಪರಿಗಣಿಸಿ ವಿಮರ್ಶೆಯ ಚೌಕಟ್ಟಿನೊಳಗೆ ಪರಿಶೀಲಿಸುವುದಕ್ಕೂ ಅದೇ ಆಕರವನ್ನು ಸಂಸ್ಕೃತಿಯ ಅಧ್ಯಯನದ ಮೂಲವಾಗಿ ಪರಿಶೀಲಿಸುವುದಕ್ಕೂ ಕೆಲವು ಮುಖ್ಯ ವ್ಯತ್ಯಾಸಗಳಿವೆ. ಕನ್ನಡ ವಿಮರ್ಶೆಯಲ್ಲಿ ಇಂಥ ಸಾಂಸ್ಕೃತಿಕ ಅಧ್ಯಯನದ ಹಲವು ನಿದರ್ಶನಗಳನ್ನು ನೋಡಬಹುದು. ಆದರೂ ಅಂಥ ವಿಧಾನದ ತಾತ್ವಿಕ ನೆಲೆಗಟ್ಟು ಮತ್ತು ಅದು ಬಳಸುವ ಪರಿಕರಗಳನ್ನು ಕುರಿತ ಸ್ಪಷ್ಟವಾದ ಚಿಂತನೆಯ ಅಗತ್ಯವಿದೆ. ಇಲ್ಲಿ ಆ ಕುರಿತು ಕೆಲವು ಮಾತುಗಳನ್ನು ಹೇಳಲಾಗಿದೆ.

ಸಾಹಿತ್ಯಕ ಆಕರಗಳನ್ನು ಅವುಗಳ ಆಕೃತಿಸೂಕ್ಷ್ಮತೆಗಳಿಂದ ಹೊರತುಪಡಿಸಿ ಕೇವಲ ಮಾಹಿತಿ ಮೂಲವೆಂದು ಪರಿಗಣಿಸುವ ರೂಕ್ಷ ಬಗೆಯೊಂದು ಮೊದಲಿನಿಂದಲೂ ರೂಢಿಯಲ್ಲಿದೆ. ದುರದೃಷ್ಟದಿಂದ ಇಂದಿನ ಶೈಕ್ಷಣಿಕ ಸಂದರ್ಭದಲ್ಲಿ ಸಾಹಿತ್ಯವು ವಿದ್ಯಾರ್ಥಿಗಳಿಗೆ ಸಂವಹನ ವಾಗುವ ಬಗೆಯೂ ಹೀಗೆ ಅಸೂಕ್ಷ್ಮವಾದುದೇ ಆಗಿದೆ. ಚರಿತ್ರೆ, ಸಮಾಜಶಾಸ್ತ್ರ ಮುಂತಾದ ಮಾನವಿಕ ಶಿಸ್ತುಗಳ ವಿದ್ಯಾರ್ಥಿಗಳು ಅಪರೂಪವಾಗಿ ಸಾಹಿತ್ಯವನ್ನು ಬಳಸಿಕೊಂಡಾಗಲೂ ಅದೇ ದಾರಿಯನ್ನು ಹಿಡಿಯುತ್ತಾರೆ.

ಆದರೆ ಸಾಂಸ್ಕೃತಿಕ ಅಧ್ಯಯನವು ಸಾಹಿತ್ಯಕ ಆಕೃತಿಗಳನ್ನು ಗ್ರಹಿಸುವ ಬಗೆಯು ಬೇರೆಯಾದುದು. ಭಾಷೆಯಲ್ಲಿರುವ ಎಲ್ಲ "ಕಥನ"ಗಳಿಗೂ ಅದರದೇ ಆದ ಆಕೃತಿಯಿದ್ದು, ಅವು ಕೂಡಾ ಅನೇಕ ಬಗೆಯ ಸಾಹಿತ್ಯಕ ತಂತ್ರಗಳನ್ನು ಬಳಸಿಕೊಳ್ಳುವುದರಿಂದ, ಸಾಂಸ್ಕೃತಿಕ ಅಧ್ಯಯನವು "ಸಾಹಿತ್ಯಕ ಆಕೃತಿ"ಗಳ ಅನನ್ಯತೆಯನ್ನು ಅಲ್ಲಗಳೆಯುತ್ತದೆ. ಅಂತಿಮವಾಗಿ ಆ ಕ್ಷಣದಲ್ಲಿ ನಿರ್ಮಾಣವಾಗುವ ಪಠ್ಯವು ಓದುಗನೇ ಕಟ್ಟಿಕೊಳ್ಳುವ "ರಚನೆ" (ಕನ್ಸ್ಟ್ರಕ್ಟ್) ಆಗಿರುವುದರಿಂದ ಅದು "ವಿಶಿಷ್ಟ ಕಲೆ"ಯೆಂದು ಹೇಳುವ ಅಗತ್ಯವಿಲ್ಲ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ನಿರಾಕರಿತವಾಗುತ್ತಿರುವುದು "ಆಕೃತಿ"ಯಲ್ಲ, ಅದಕ್ಕೆ ಕೊಡಲಾಗುವ "ಅತಿಮಾನವ" ಸ್ಥಾನಮಾನ. ಏಕೆಂದರೆ ಆಕೃತಿಯಲ್ಲಿ ಆಗುವ ಪರಿವರ್ತನೆಗಳೂ ಸಂಸ್ಕೃತಿ ವಿಶ್ಲೇಷಣೆಯ ವ್ಯಾಪ್ತಿಯಲ್ಲಿಯೇ ಬರುತ್ತದೆ ಎನ್ನುವುದು ಇವರಿಗೆ ಗೊತ್ತು. ಅವೆರಡನ್ನೂ ಏಕ ಕಾಲದಲ್ಲಿ ಪರಿಶೀಲಿಸುವುದರಿಂದ ಸಂಸ್ಕೃತಿಯ ಅಧ್ಯಯನವನ್ನು ಅದರ ಸಾಮಾಜಿಕವಾದ ಕಾರಣಮೀಮಾಂಸೆಯ ಸಂಗಡವೇ ನಡೆಸಲು ಸಾಧ್ಯವಾಗುತ್ತದೆ. ಒಂದು ಪಠ್ಯಕ್ಕೆ ಅದು ರಚಿತವಾದ ಕಾಲದಲ್ಲಿ ಒದಗಿ ಬಂದ ಆಕೃತಿಯ ಹಿಂದೆಯೂ ಶಕ್ತಿ ರಾಜಕೀಯದ ಮೀಮಾಂಸೆ ಯಿರುತ್ತದೆ. ಅಷ್ಟೇ ಅಲ್ಲ, ಅಂಥ ಕೃತಿಯ ಯಾವ ನಿರ್ದಿಷ್ಟ ಆಶಯಗಳು ಸೋಸಿ ಹೋಗಿವೆ ಮತ್ತು ಯಾವ ಆಶಯಗಳು ನಮ್ಮ ಕಾಲದವರೆಗೆ ಹರಿದುಬಂದಿವೆ ಎನ್ನುವುದರ ವಿಶ್ಲೇಷಣೆ ಕೂಡ ರಾಜಕೀಯ ಚಲನಶೀಲತೆಗೆ ಹಿಡಿದ ಕನ್ನಡಿಯೇ ಆಗುತ್ತದೆ. ಅಂತಿಮವಾಗಿ ಯಾವುದೇ "ಸಾಂಸ್ಕೃತಿಕ ಪಠ್ಯ"ದ ವಿಶ್ಲೇಷಣೆಯು ನಮ್ಮ ಕಾಲದ ಅಗತ್ಯಗಳಿಂದಲೇ ರೂಪಿತವಾಗಿರುತ್ತದೆ.

ಅಥವಾ ನಮ್ಮ ಕಾಲದ ಬೇರೆ ಬೇರೆ ರಾಜಕೀಯ ನಿಲುವುಗಳು ಒಂದೇ ಪಠ್ಯವನ್ನು ತಮ್ಮ ಅಜೆಂಡಾಗಳಿಗೆ ಅನುಗುಣವಾಗಿ ಕಟ್ಟಿರುವ ಸಾಧ್ಯತೆಯಿದೆ. ಯಾವುದೇ ಒಳ್ಳೆಯ ಬರೆಹದ ವಿಮರ್ಶೆಯ ಇತಿಹಾಸ ಕೂಡ ಈ ಮಾತಿಗೆ ಸಾಕ್ಷಿಯಾಗಿದೆ. ಹಾಗಲ್ಲದೆ ಸಾಂಸ್ಕೃತಿಕ ಅರ್ಥವಂತಿಕೆಯ ರಾಜಕೀಯದಿಂದ ಅಲಾಯಿದವಾದ ಸ್ವಯಂಭೂ ಪರಿಕಲ್ಪನೆಯೆಂದು ತಿಳಿಯುವ ಅಗತ್ಯವಿಲ್ಲ. ಈ ರೀತಿಯ ಓದು ಸಾಹಿತ್ಯಕೃತಿಯ ಸೂಕ್ಷ್ಮ ಓದನ್ನು (ಕ್ಲೋಸ್ ರೀಡಿಂಗ್) ನಿರಾಕರಿಸುವುದೆಂದು ತಿಳಿಯಲು ಯಾವ ಕಾರಣವೂ ಇಲ್ಲ. ಬದಲಾಗಿ ಕೃತಿಯನ್ನು ಅರ್ಥ, ಭಾಷೆ, ಸಾಂಕೇತಿಕತೆ, ಡಿಸ್‌ಕೋರ್ಸ್ ಮುಂತಾದ ಹಲವು ನೆಲೆಗಳಲ್ಲಿ ನೋಡುವ ಪ್ರಯತ್ನವು ಖಂಡಿತವಾಗಿಯೂ ಸಾಂಸ್ಕೃತಿಕವಾದ ಒಳನೋಟಗಳನ್ನೇ ನೀಡುತ್ತದೆ. ಇತ್ತೀಚಿನ ದಶಕಗಳಲ್ಲಿ ಸ್ತ್ರೀವಾದೀ ವಿದ್ವಾಂಸರು ಮಹಾನ್ ಲೇಖಕರೆಂದು ಪರಿಗಣಿತರಾದ ಸಾಹಿತಿಗಳ ಪಠ್ಯಗಳನ್ನು ಲಿಂಗಾಧರಿತ ತಾತ್ವಿಕತೆಯ ನೆಲೆಗಟ್ಟಿನಿಂದ ಮರುವ್ಯಾಖ್ಯಾನ ಮಾಡಿರುವ ಬಗೆಯು ಈ ಮಾತಿಗೆ ಸಾಕ್ಷಿ.

ವಸ್ತುನಿಷ್ಠವೂ ನಿಷ್ಪಕ್ಷಪಾತವೂ ಆದ ಅಧ್ಯಯನವು ಸಾಧ್ಯವೆಂಬ ಭ್ರಮೆಗೆ ವಿದಾಯ ಹೇಳದೆ, ಸಂಸ್ಕೃತಿಯನ್ನು ಕುರಿತ ಅಧ್ಯಯನಗಳನ್ನು ಗ್ರಹಿಸಲು ಸಾಧ್ಯವಿಲ್ಲ. ನಾವು ಈಗ ಮಾಡುತ್ತಿರುವ ಕೆಲಸಗಳೂ ಸೇರಿದಂತೆ ಪ್ರತಿಯೊಂದು ಪ್ರಯತ್ನವೂ ನಿರ್ದಿಷ್ಟವಾದ ಹಿನ್ನೆಲೆಯಲ್ಲಿ, ಖಚಿತವಾದ ಧೋರಣೆಗಳೊಂದಿಗೆ ರೂಪಿತವಾಗಿರುತ್ತದೆ. ತಿಳಿದೋ ತಿಳಿಯದೆಯೋ ಯಾವುದೋ ಒಂದು ವ್ಯೂಹತಂತ್ರದ ಭಾಗವಾಗಿರುತ್ತದೆ. ಆದ್ದರಿಂದಲೇ ಅಧ್ಯಯನಕಾರರ ಪ್ರಾಮಾಣಿಕತೆ, ಪಾಂಡಿತ್ಯಗಳ ಬಗ್ಗೆ ಗೌರವವನ್ನಿಟ್ಟುಕೊಂಡೂ ಅವರ ಕೆಲಸವನ್ನು ವಿಮರ್ಶೆಗೆ ಒಳಪಡಿಸಲು ಸಾಧ್ಯ. ಧಾರ್ಮಿಕ ಮೂಲಭೂತವಾದ, ನಾಸ್ತಿಕ ಸುಧಾರಣಾವಾದ, ಸಮುದಾಯದ ಜೀವನಕ್ರಮವನ್ನು ನಿರಾಕರಿಸದ ಅವೈದಿಕ ಅನುಭಾವ, ಈಗ ಎಲ್ಲಕಡೆಯೂ ಏಟು ತಿನ್ನುತ್ತಿರುವ ರ್‍ಯಾಶನಲಿಸಂ-ಮಾನವತಾವಾದಗಳ ಜೋಡಿ ಮುಂತಾದ ವಿರೋಧಿಧಾರೆಗಳ ನಡುವಿನ ವಾಗ್ವಾದಕ್ಕೆ ಭೂಮಿಕೆಯನ್ನು ದೊರಕಿಸಲೆಂದೇ ಸಂಸ್ಕೃತಿದ್ರವ್ಯದ ತಯಾರಿಕೆ ಮತ್ತು ಬಳಕೆಗಳು ನಡೆಯುತ್ತಿರುವುದು ಇಂದಿನ ಸನ್ನಿವೇಶದ ವಿಶಿಷ್ಟತೆ. ನಮ್ಮ ಅಧ್ಯಯನಗಳು "ಆಕ್ಟಿವಿಸ್ಟ್" ಆಗಬೇಕೋ ಅಥವಾ ಕೇವಲ "ಅಕಡೆಮಿಕ್" ಆಗಬೇಕೋ ಎನ್ನುವುದು ನಾವು ಎದುರಿಸುತ್ತಿರುವ ಇನ್ನೊಂದು ಬಿಕ್ಕಟ್ಟು. ಕೇವಲ ಅಕಡೆಮಿಕ್ ಆಗಿ ಹಲ್ಲು ಉಗುರುಗಳನ್ನು ಕಳೆದುಕೊಂಡ ಅಧ್ಯಯನವು ಪ್ರತಿಷ್ಠಿತ ಶಕ್ತಿಗಳ "ಮುದ್ದುಮಗು" ಆಗಿರುತ್ತದೆ. ಹಾಗೆಂದು ಮಾಧ್ಯಮಗಳಲ್ಲಿ ಮಾತ್ರ ಆಕ್ಟಿವಿಸ್ಟ್ ಆಗಿರುವ ಪ್ರತಿಭಟನೆಯ ನೆಲೆಗಳು ನಮ್ಮನ್ನು ಎಲ್ಲಿಗೂ ಕರೆದೊಯ್ಯುವುದಿಲ್ಲ. "ರಾಜ್ಯ ವ್ಯವಸ್ಥೆ"ಯ ಅಂಗಗಳೇ ಆದ ವಿಶ್ವವಿದ್ಯಾಲಯಗಳಲ್ಲಿ ನಡೆದಿರುವ ಅಧ್ಯಯನಕ್ಕೆ ಸಮಾನಾಂತರವಾಗಿಯೇ ನಡೆದುಬಂದಿರುವ ಭಿನ್ನಮತೀಯ ವಿದ್ವಾಂಸರ ಧ್ವನಿಗಳು, ಈಚೆಗೆ ವಿಶ್ವವಿದ್ಯಾಲಯಗಳ ಒಳಗೆ ಜಾಗ ಪಡೆದಿರುವ ಹೊಸ ಪೀಳಿಗೆಯ ವಿದ್ವಾಂಸರ ಮನ್ನಣೆಯನ್ನು ಗಳಿಸಿರುವುದು ಇಂದಿನ ವಿಶಿಷ್ಟ ವಾಸ್ತವ. "ಜಾನಪದ ಅಧ್ಯಯನ", "ಗಿರಿಜನ ಅಧ್ಯಯನ" ಮತ್ತು "ಸ್ತ್ರೀವಾದೀ ಚಿಂತನೆ"ಗಳ ವಕ್ತಾರರು ವಿಶ್ವವಿದ್ಯಾಲಯಗಳ ವೈದಿಕ - ಮಧ್ಯಮವರ್ಗದ ಮುಖಗಳನ್ನು ಬದಿಗೆ ಸರಿಸಿ, ಸಂಶೋಧನೆಗೆ ಹೊಸ ಆಯಾಮಗಳನ್ನು ನೀಡುತ್ತಿದ್ದಾರೆ. ಹೀಗೆ ಬದಿಗೆ ಸರಿಸಲಾದ

"ಚಿಂತನವಿಧಾನಗಳು" ಹಾಗೂ ವ್ಯಕ್ತಿಗಳು, ಆ ವ್ಯವಸ್ಥೆಯ ಹೊರಗೆ ತಮ್ಮದೇ ಆದ ಸಣ್ಣಪುಟ್ಟ ಕೇಂದ್ರಗಳನ್ನು ಸ್ಥಾಪಿಸಿಕೊಂಡು ಕೆಲಸಮಾಡುತ್ತಿರುವುದು ಇಂದಿನ ವಿಶೇಷ. ಎಂದರೆ, ಕರ್ನಾಟಕದಲ್ಲಂತೂ ನಮ್ಮ ಕಣ್ಣೆದುರಿಗೆ ಅಧ್ಯಯನದ ಪ್ರಧಾನ ಮತ್ತು ಅಧೀನ ಧಾರೆಗಳು ಅದಲುಬದಲಾಗಿಬಿಟ್ಟಿವೆ. ಕೇವಲ ಹತ್ತು ವರ್ಷಗಳ ಹಿಂದೆ 'ಮಂಟೇಸ್ವಾಮಿ ಕಾವ್ಯ'ದ ಅಥವಾ 'ಮಲೆ ಮಾದೇಶ್ವರ ಕಾವ್ಯ'ದ ಅಥವಾ "ಸಿರಿ ಪಾಡ್ದನ"ದ ಹೆಸರು ಕೂಡ ಕೇಳದವರು ಇಂದು ಅವುಗಳನ್ನು ಹಾಡಿಹೊಗಳುತ್ತಿರುವುದು ಈ ಮಾತಿಗೆ ಸಾಕ್ಷಿಯಾಗಿದೆ. ಹೀಗೆ ಮಾಡುತ್ತಿರುವುದು ತಪ್ಪು ಎಂದಲ್ಲ. ಆದರೆ ಬದಲಾಗುತ್ತಿರುವ ಜೀವನ ಸನ್ನಿವೇಶಗಳ ಬಗ್ಗೆ ತಲೆಕೆಡಿಸಿಕೊಳ್ಳದ ಯಾವುದೇ ವೈಭವೀಕರಣವು ಕೇವಲ ನಾಸ್ಟಾಲ್ಜಿಯಾಕ್ಕೆ ಕಾರಣವಾಗುತ್ತದೆ. ಸಂಶೋಧನೆಯಲ್ಲಿ ಬಳಸುವ ಪಾಶ್ಚಾತ್ಯ ಪರಿಕಲ್ಪನೆಗಳನ್ನು ಅರಗಿಸಿಕೊಳ್ಳದಿರುವುದರ ಫಲವಾದ ಗೊಂದಲ ಹಾಗೂ ಅನನ್ವಯಗಳ ಪರಿಣಾಮವೂ ಸ್ಪಷ್ಟವಾಗಿ ಕಂಡುಬರುತ್ತಿದೆ. ಸಾಹಿತ್ಯವನ್ನು ಹೊರತುಪಡಿಸಿದ ಮಾನವಿಕ ಅಧ್ಯಯನಗಳಾಗಲೀ, ಸಮಾಜಶಾಸ್ತ್ರೀಯ ಅಧ್ಯಯನಗಳಾಲೀ ಕರ್ನಾಟಕದ ಮಟ್ಟಿಗಂತೂ ಬಾಲ್ಯಾವಸ್ಥೆಯನ್ನೂ ತಲುಪಿಲ್ಲ. ಆ ಕ್ಷೇತ್ರಗಳ ವಿದ್ವಾಂಸರು ಕನ್ನಡವನ್ನು ತಮ್ಮ ಬರವಣಿಗೆಯ ಮಾಧ್ಯಮವಾಗಿ ಬಳಸಿಕೊಳ್ಳುವ ಮಾತಂತೂ ದೂರವೇ ಉಳಿಯಿತು. ಶಂ.ಬಾ. ಜೋಶಿ, ಕಪಟರಾಳ ಕೃಷ್ಣರಾಯ, ದ.ರಾ.ಬೇಂದ್ರೆ, ಮಧುರಚೆನ್ನ ಮುಂತಾದವರ ಆಲೋಚನೆಗಳು ಕನ್ನಡದ ಗೋಡೆಗಳನ್ನು ದಾಟದೆ, ಇಲ್ಲಿಯೇ ಸಂಶೋಧನೆ ನಡೆಸುತ್ತಿರುವ ಅನ್ಯ ಶೈಕ್ಷಣಿಕ ಶಿಸ್ತುಗಳ ವಿದ್ವಾಂಸರ ಗಮನಕ್ಕೂ ಬರದೆ ಆಗಂತುಕವಾಗಿ ಉಳಿದಿವೆ.

ಈ ಶತಮಾನದ ಮೊದಲ ದಶಕಗಳಲ್ಲಿ ಪ್ರಾರಂಭವಾದ, ಸಂಸ್ಕೃತಿಯನ್ನು ಕುರಿತ ಸಂಶೋಧನೆಗಳಲ್ಲಿ ಎರಡು ಖಚಿತವಾದ ದಿಕ್ಕುಗಳನ್ನು ಗುರುತಿಸಬಹುದು. ಮೊದಲನೆಯದು ಚಾರಿತ್ರಿಕವಾದರೆ ಎರಡನೆಯದು ಜಾನಪದೀಯವಾದುದು. ಈ ಎರಡು ಚಲನೆಗಳ ಹಿಂದೆಯೂ ವಸಾಹತುಶಾಹಿಗೆ ತೋರಿಸಿದ ಪ್ರತಿಕ್ರಿಯೆ, ರಾಷ್ಟ್ರೀಯತಾವಾದ, ಕರ್ನಾಟಕದ ಏಕೀಕರಣ ಹೋರಾಟ ಮುಂತಾದ ಸಮಾನ ಪ್ರೇರಣೆಗಳನ್ನು ಗುರುತಿಸಬಹುದು. ಎಷ್ಟೋ ಬಾರಿ ಅದೇ ವಿದ್ವಾಂಸರು ಎರಡೂ ಬಗೆಯ ಹುಡುಕಾಟದಲ್ಲಿ ತೊಡಗಿರುತ್ತಿದ್ದರು. ಸಾಹಿತ್ಯೇತರವಾದ ದಾಖಲೆಗಳು ಅನುಪಲಬ್ಧವೊ, ಅಲಕ್ಷಿತವೋ ಆಗಿದ್ದವು. ಆದ್ದರಿಂದ ಶಾಸನಗಳೋ, ಸಾಹಿತ್ಯಕೃತಿಗಳೋ ಅಧ್ಯಯನದ ಮೂಲ ಆಕರಗಳಾದುದರಲ್ಲಿ ಆಶ್ಚರ್ಯವೇನೂ ಇಲ್ಲ. ವಿಭಿನ್ನ ಧರ್ಮಗಳ ಚೌಕಟ್ಟಿನಲ್ಲಿ ರೂಪಿತವಾದ ಜೀವನಕ್ರಮಗಳ ಅಧ್ಯಯನವು ಸಮಾನ ಅಂಶಗಳ ಹುಡುಕಾಟಕ್ಕೆ, ಸಹ ಜೀವನಕ್ಕೆ, ಒತ್ತುಕೊಟ್ಟಂತೆಯೇ ಅಸಹಿಷ್ಣುತೆಗೂ ಒತ್ತಾಸೆ ನೀಡಿತು. ಅದರಲ್ಲೂ ಬೇರೆ ಬೇರೆ ಜೀವನಕ್ರಮಗಳಿಗೆ "ಆಗಂತುಕ"ನಾದ ಅಧ್ಯಯನಕಾರನ "ಸಹಜ" - ನೈತಿಕ ಆಯ್ಕೆಗಳೂ ಕೂಡ ಸಂಸ್ಕೃತಿ ವಿವರಗಳ ನಡುವೆ ಮೇಲು-ಕೀಳು ಎಂಬ ಪರಿಗಣನೆಗೆ ಅವಕಾಶ ಮಾಡಿಕೊಟ್ಟವು. ಇಂಗ್ಲಿಷ್ ಸಂಶೋಧಕನಿಗೆ ಅಗ್ರಹಾರ ಎಷ್ಟು ಅಪರಿಚಿತವಾಗಿತ್ತೋ, ಬ್ರಾಹ್ಮಣ ಸಂಶೋಧಕನಿಗೆ ಹೊಲಗೇರಿಯೂ ಅಷ್ಟೇ ಅಪರಿಚಿತವಾಗಿತ್ತು. ಇಬ್ಬರೂ ತೋರಿಸಿದ್ದು ರೊಮ್ಯಾಂಟಿಕ್ ಆದರೂ ಸುಪಿರಿಯರ್ ಆದ ಪ್ರತಿಕ್ರಿಯೆಯನ್ನೇ. ಹಾಗೆ ನೋಡಿದರೆ ಇಂಥ ಜೀವನಕ್ರಮಗಳ ಹೆಚ್ಚು ನಿಕಟವೂ, ಜೀವಂತವೂ ಆದ ಪರಿಚಯವು ನಮಗೆ ಲಭಿಸುತ್ತಿರುವುದು ಜಾನಪದ ಅಧ್ಯಯನಕಾರರ ಬರವಣಿಗೆಗಿಂತ ಹೆಚ್ಚಾಗಿ ಸೃಜನಶೀಲ

ಸಾಹಿತ್ಯಕೃತಿಗಳಲ್ಲಿಯೇ. ಅಲ್ಲಿಯೂ ಲೇಖಕರ ನಿಲುವುಗಳು ಖಚಿತವಾಗಿ ಕೆಲಸ ಮಾಡಿವೆ. ಕಾರಂತರ ಚೋಮ, ಕುವೆಂಪುರವರ ಗುತ್ತಿ-ತಿಮ್ಮಿಯರ ಜಗತ್ತು, ಶ್ರೀರಂಗರ ಕಾದಂಬರಿಯ ಬಿ. ರಾಮ/ಭರಮ, ಅನಂತಮೂರ್ತಿಯವರ "ಭಾರತೀಪುರ"ದ ಹೆಸರಿಲ್ಲದ ಹೊಲೆಯರು, ದೇವನೂರು ಮಹಾದೇವರ ಕಾದಂಬರಿಗಳ ಸಾಕಮ್ಮ ಮತ್ತು ಸಂಗಡಿಗರ ಲೋಕ ಇವು, ಒಂದೇ ಸಂಸ್ಕೃತಿಯನ್ನು "ಓದುವ" ಹಲವು ಬಗೆಗಳಾಗಿ, ಕಾಲದಿಂದ ಕಾಲಕ್ಕೆ ನಮಗೆ ದೊರಕಿವೆ. ಒಂದು ಜೀವನಕ್ರಮಕ್ಕೆ ಒಳಗಿನವರಾಗಿ, ಹೊರಗಿನವರಾಗಿ ಅಥವಾ ಏಲಿಯನೇಟೆಡ್ ಆದವರಾಗಿ ಅದನ್ನು ಕಟ್ಟಿಕೊಂಡ ಈ ವಿಧಾನಗಳು ಸಂಸ್ಕೃತಿ ಅಧ್ಯಯನದ ಮಾದರಿಗಳೆಂದೇ ನಾನು ತಿಳಿಯುತ್ತೇನೆ. ಮಾಸ್ತಿಯವರ "ಕಾಕನಕೋಟೆ ನಾಟಕವು ಇಂಥ ಶೋಧನೆಗಳ ಸ್ವರೂಪ, ಗುಣ ಮತ್ತು ಪರಿಮಿತಿಗಳನ್ನು ತುಂಬಾ ಚೆನ್ನಾಗಿ ಕಾಣಿಸುತ್ತದೆ. ಹಾಗೆಯೇ ಅಕಡೆಮಿಕ್ ಅಧ್ಯಯನಗಳ ಆಚೆ ಇರುವ, ಈ ಶತಮಾನದುದ್ದಕ್ಕೂ ನಡೆದುಕೊಂಡೇ ಬಂದಿರುವ ಜಾನಪದ ಮತ್ತು ಜನಪ್ರಿಯ ಸಂಸ್ಕೃತಿ ಸಂಗತಿಗಳನ್ನೂ ನಾವು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಅವು ಏಕಕಾಲದಲ್ಲಿ ಸಂಸ್ಕೃತಿ ವಿಶ್ಲೇಷಣೆಯ ಪ್ರಕ್ರಿಯೆಗಳೂ ಆಗುತ್ತವೆ. ನಂತರದ ಅಧ್ಯಯನಕಾರರಿಗೆ ಆಕರಗಳೂ ಆಗುತ್ತವೆ. ಉದಾಹರಣೆಗೆ "ಯಕ್ಷಗಾನ" ಅಥವಾ "ಕಂಪನಿ ನಾಟಕ"ಗಳು ಸಂಸ್ಕೃತಿಯ ಬಗ್ಗೆ ತಾವು ಏನನ್ನೋ ಹೇಳುತ್ತಿದ್ದವು. ಅವುಗಳನ್ನು ಬಳಸಿಕೊಂಡು ನಾವು ಇನ್ನೇನನ್ನೋ ಹೇಳಬಹುದು.

ನಮ್ಮ ಸಮುದಾಯದ ಜೀವನಕ್ರಮಗಳಲ್ಲಿ ಸಂಸ್ಕೃತಿಯು ಅಸ್ತಿತ್ವದಲ್ಲಿದ್ದ ಸ್ವರೂಪ ಏನೇ ಇರಲಿ, ಅವುಗಳನ್ನು ಅಧ್ಯಯನ ಮಾಡುವ ಕ್ರಮಗಳಂತೂ ಪಾಶ್ಚಾತ್ಯ ಮಾದರಿಗಳನ್ನು ಅನುಸರಿಸುತ್ತಲೇ ಬಂದಿವೆ.

"ಸಂಸ್ಕೃತಿನಿರ್ದಿಷ್ಟ"ವಲ್ಲದ, "ವ್ಯಾಲ್ಯೂ ನ್ಯೂಟ್ರಲ್" ಅಲ್ಲದ ಈ ವಿಧಾನಗಳು ವಾಸ್ತವವನ್ನು "ಮರುರಚನೆ" ಮಾಡುವ ವಿಧಾನಗಳು ಕುತೂಹಲಕಾರಿಯಾದವು. "ಸಂಸ್ಕೃತಿ" ಎನ್ನುವ ಪರಿಕಲ್ಪನೆಯು ಮ್ಯಾಥ್ಯೂ ಆರ್ನಾಲ್ಡ್ ಮುಂತಾದವರ ಕಾಲದಿಂದ ಇಂದಿನವರೆಗೆ ಪಡೆದಿರುವ ಹೊಸ ಆಯಾಮಗಳು ಸಹಜವಾಗಿಯೇ ಈ ಅಧ್ಯಯನಗಳಲ್ಲಿ ಪ್ರತಿಫಲಿತವಾಗಿವೆ. ಲೇಖಕರ ರಾಜಕೀಯ ನಿಲುವುಗಳು ಕೂಡ ಸಂಸ್ಕೃತಿ ವಿಶ್ಲೇಷಣೆಯ ಮೇಲೆ ಪರಿಣಾಮ ಬೀರಿವೆ. ಡಿ.ವಿ.ಜಿ., ಮಾಸ್ತಿ, ದೇವುಡು ಮುಂತಾದ ಹಿರಿಯ ತಲೆಮಾರಿನ ಲೇಖಕರು, ಸಂಸ್ಕೃತಿಯನ್ನು, ಹಿಂದೂ ಧರ್ಮದ ಅತ್ಯುನ್ನತ ಮೌಲ್ಯಗಳಿಂದ ರೂಪಿತವಾದ, ಮನುಷ್ಯ ಅಂತರಂಗದ ಸಂಸ್ಕಾರದ ಫಲವೆಂದೇ ತಿಳಿದರು. ಅವರ ಪ್ರಕಾರ ಒಬ್ಬ ಸುಸಂಸ್ಕೃತನಾದ ವ್ಯಕ್ತಿ ಇರಬಹುದೇ ವಿನಾ ಇಡೀ ಸಮುದಾಯದ ಸಮಸ್ತರೂ ಸುಸಂಸ್ಕೃತರಾಗುವುದು ಸಾಧ್ಯವಿಲ್ಲ. ಮಾಸ್ತಿಯವರ "ವೆಂಕಟಿಗನ ಹೆಂಡತಿ" ಕಥೆಯ ವೆಂಕಟಿಗನಾಗಲಿ, ಕಾರಂತರ "ಮೂಕಜ್ಜಿಯ ಕನಸುಗಳು' ಕಾದಂಬರಿಯಲ್ಲಿ ಬರುವ ಪಮ್ಮ-ದುಗ್ಗಿಯರಾಗಲಿ ಈ ಮಾನವಿಕ - ನೈತಿಕ ಅರ್ಥದಲ್ಲಿ ಮಾತ್ರ ಸುಸಂಸ್ಕೃತರು. ಎಂದರೆ ಒಂದು ಸಮುದಾಯದ ನಡಾವಳಿಯ ನಿಯಮಗಳನ್ನು ಅರ್ಥಮಾಡಿಕೊಳ್ಳುವ, ಅನುಸರಿಸುವ ಹಾಗೆಯೇ, ಮಾನವೀಯ ಅಗತ್ಯಗಳು ಬಂದಾಗ ಅವನ್ನು ಮುರಿದು ಕಟ್ಟುವ ಕೆಲವು ಜನರ ಹಿರಿತನಗಳನ್ನು ಇಂಥ ಅಧ್ಯಯನಗಳು ಒಪ್ಪಿಕೊಂಡವು. ಮೊದಮೊದಲು ಪಾಶ್ಚಾತ್ಯರಿಂದ ಕಲಿತ ಪಾಠಗಳನ್ನು ಆಧುನಿಕ ಮೌಲ್ಯಗಳನ್ನು ಅವರಿಗೇ ಒಪ್ಪಿಸಿ, ಅವರ ಮೆಚ್ಚುಗೆ

ಪಡೆಯುವ ವಿಧೇಯ ವಿದ್ಯಾರ್ಥಿಗಳಂತೆ ಮಾಡಲಾದ ಈ ಕೆಲಸವು ಬಹುಕಾಲ ಅದೇ ನಿಟ್ಟಿನಲ್ಲಿ ನಡೆಯಲಿಲ್ಲ. ಒಂದು ಕಡೆ, ಪಾಶ್ಚಾತ್ಯವಾದರೂ ಬ್ರಿಟಿಷ್ ಅಲ್ಲದ ಎಡಪಂಥೀಯ - ಸುಧಾರಣಾ ವಾದೀ ಧೋರಣೆಗಳು ಸಂಸ್ಕೃತಿಯ ಅಧ್ಯಯನದಲ್ಲಿ ಆಸಕ್ತಿ ತೋರಿಸಿದವು. ಇನ್ನೊಂದು ಕಡೆ ರಾಷ್ಟ್ರೀಯತಾವಾದವು ಕ್ರಮೇಣ ಪೆಡಸಾಗಿ, ಸಂಪ್ರದಾಯವಾದವಾಗಿ ಪರಿವರ್ತನೆ ಪಡೆಯಿತು. ಇವುಗಳಲ್ಲಿ ಮೊದಲನೆಯದು ಪ್ರಾಚೀನವಾದುದನ್ನೆಲ್ಲ ಗ್ರಾಮೀಣವಾದುದನ್ನೆಲ್ಲ ಮೂಢನಂಬಿಕೆ, ಅವೈಚಾರಿಕ ಎಂದು ನಿರಾಕರಿಸ ಹೊರಟಿತು. ಮತ್ತೊಂದು ನೆಲೆಯು "ಮೂಲ"ಗಳಿಗೆ ಹಿಂದಿರುಗುವ ಹಂಬಲದಲ್ಲಿ ಹೆಚ್ಚು ಹೆಚ್ಚು ಆಕ್ರಮಣಶೀಲವಾಯಿತು. ಅಲ್ಲಿಯ ಸಮರೂಪ ಧಾರಣೆಯ ನೆಪದಲ್ಲಿ ಮೇಲುವರ್ಗದ ಆಶಯಗಳ ವೈಭವೀಕರಣ ನಡೆಯಿತು. ಈ ಮಾತಿಗೆ ನಿದರ್ಶನವಾಗಿ ಮಾಸ್ತಿಯವರ "ಅಂತರಗಂಗೆ" ಮತ್ತು "ಧರ್ಮಸಂರಕ್ಷಣೆ" ಎಂಬ ಕೃತಿಗಳನ್ನು ಪರಿಶೀಲಿಸಬಹುದು.

ಇದೆಲ್ಲದರ ಪರಿಣಾಮವಾಗಿ, ಬಹುಸಂಸ್ಕೃತಿನಿಷ್ಠ ಸಮಾಜದ ಜೀವನಕ್ರಮಗಳಲ್ಲಿ ಬೇರು ಬಿಡದ ಪ್ರಗತಿಶೀಲತೆ ಮತ್ತು ಆ ಜೀವನಕ್ರಮಗಳಿಗೆ ಪರ್ಯಾಯವಾಗಿ ವೈದಿಕ - ಪಾಶ್ಚಾತ್ಯ ಜೀವನ ವಿಧಾನವನ್ನು ಮುಂದುಮಾಡಿದ ಸಂಪ್ರದಾಯಪರತೆಗಳ ನಡುವೆ ಜನಪದ ಜೀವನಕ್ರಮ ಗಳು ಕ್ರಮೇಣ ಕರಗಿ ಹೋದವು. ಅಥವಾ ಕೇವಲ ಹೊರ ಆವರಣಕ್ಕೆ ಸೀಮಿತವಾದ ಆಚರಣೆ ಯಲ್ಲಿ ಮಾತ್ರ ಉಳಿದುಕೊಂಡವು. ಇಲ್ಲವೇ ಅವು ಮ್ಯೂಸಿಯಂ ಆಂಟಿಕ್‌ಗಳಾಗಿ ಬದಲಾದವು. ಆ ಕಾಲದ ಸಾಂಸ್ಕೃತಿಕ ಅಧ್ಯಯನಗಳಲ್ಲಿಯೂ ಈ ರೀತಿಯ ದ್ವಂದ್ವಗಳನ್ನು ಗುರುತಿಸಬಹುದು.

ಒಂದರ ನಂತರ ಒಂದರಂತೆ, ಮೂಡಿಬಂದ ಭಾರತೀಯ ಪುನರುಜ್ಜೀವನ ಮತ್ತು ಸ್ವಾತಂತ್ರ್ಯ ಚಳವಳಿಗಳ ಪ್ರಧಾನ ಆಶಯಗಳ ಕರ್ನಾಟಕ ಸಂಸ್ಕೃತಿಯ ಅಧ್ಯಯನದ ಮೇಲೂ ಪರಿಣಾಮ ಬೀರಿದವೆನ್ನುವುದರಲ್ಲಿ ಅನುಮಾನವಿಲ್ಲ. ಆಗ ದಕ್ಷಿಣ ಮಹಾರಾಷ್ಟ್ರವೆನಿಸಿದ್ದ ಇಂದಿನ ಉತ್ತರ ಕರ್ನಾಟಕದಲ್ಲಿ ತಿಲಕರ ವಿಚಾರಗಳು ಮೇಲುಗೈ ಪಡೆದರೆ, ಡಿ.ವಿ.ಜಿ.ಯವರೂ ಸೇರಿದಂತೆ ಹಳೆಯ ಮೈಸೂರಿನ ಹಲವರು "ರಾಜಭಕ್ತಿ"ಯ ಆವರಣದಲ್ಲಿಯೇ ಗೋಖಲೆಯವರ ಮಂದಗಾಮೀ ಚಿಂತನೆಗಳಿಂದ ಪ್ರಭಾವಿತರಾದರು. ವಿವೇಕಾನಂದ ಮತ್ತು ಗಾಂಧೀಜಿಯವರ ವಿಚಾರಗಳನ್ನು ಬಹುಮಟ್ಟಿಗೆ ಬ್ರಾಹ್ಮಣೀಕರಣಗೊಳಿಸಿ ಸ್ವೀಕರಿಸಲಾಯಿತು. ಹಲವು ಸಂಗತಿಗಳಲ್ಲಿ ನೂರಕ್ಕೆ ನೂರರಷ್ಟು ಸುಧಾರಣಾವಾದೀ ಧೋರಣೆಯನ್ನು ತಳೆದ ಕುವೆಂಪುರವರು ಕೂಡ ಏಕಘನಾಕಾರದ, ಆಧ್ಯಾತ್ಮೀಕರಣಗೊಂಡ ವಿಶ್ವವ್ಯಾಪೀ ಸಂಸ್ಕೃತಿಯೊಂದರ ಅಗತ್ಯವನ್ನು ಪ್ರತಿಪಾದಿಸುತ್ತಾರೆ. ತಮ್ಮ ಕಾದಂಬರಿಗಳಲ್ಲಿ ಚಿತ್ರಿತವಾದ ಸಮುದಾಯಗಳ ಅವಸಾನದ ಪಥವನ್ನು ಊಹಿಸಿದ ಅವರು ವಿಶ್ವಮಾನವನ ಪರಿಕಲ್ಪನೆಯ ಕಡೆಗೆ ಚಲಿಸಿದುದರಲ್ಲಿ ಆಶ್ಚರ್ಯವೇನೂ ಇಲ್ಲ.

ಆದರೆ ಕರ್ನಾಟಕ ಸಂಸ್ಕೃತಿಯನ್ನು ಅಧ್ಯಯನ ಮಾಡುವ ಮತ್ತೊಂದು ಪ್ರಧಾನ ಧಾರೆಯು ಈ ಶತಮಾನದ ಮೊದಲ ದಶಕಗಳಿಂದಲೂ ಬಹಳ ಮ್ಯೂಟೆಡ್ ಆಗಿಯಾದರೂ ಅಸ್ತಿತ್ವದಲ್ಲಿದೆ. ಅದು ಕಪಟರಾಳ ಕೃಷ್ಣರಾವ್, ಶಂ.ಬಾ.ಜೋಶಿ, ಕೆ.ವಿ. ಸುಬ್ಬಣ್ಣ, ಕೆ.ವಿ. ನಾರಾಯಣ,

ಜಿ. ರಾಜಶೇಖರ, ಡಿ.ಆರ್ ನಾಗರಾಜ್, ಬಸವರಾಜ ಕಲ್ಗುಡಿ, ರಹಮತ್ ತರೀಕೆರೆ ಮುಂತಾದ ಲೇಖಕರು ಬೇರೆ ಬೇರೆ ಕಾಲ, ದೇಶ, ಸಂದರ್ಭಗಳಲ್ಲಿ ಮಂಡಿಸುತ್ತಾ ಬಂದಿರುವ ಚಿಂತನ ಪರಂಪರೆ. ಇವರೆಲ್ಲರನ್ನೂ ಒಟ್ಟಿಗೆ ಹಿಡಿದಿಡುವ ಸಂಗತಿಯೆಂದರೆ ಕರ್ನಾಟಕ ಸಂಸ್ಕೃತಿಯ ಬಹುಮುಖಿಯೂ ಅವೈದಿಕವೂ ಆದ ನೆಲೆಗಳ ಬಗ್ಗೆ ಇವರು ತೋರಿಸಿರುವ ಆಸಕ್ತಿ ಮತ್ತು ಅವುಗಳನ್ನು ಕಾಪಾಡಿಕೊಳ್ಳಬೇಕು ಎಂಬ ಆರೋಗ್ಯಕರ ಧೋರಣೆ. ಇವರಲ್ಲಿ ಯಾರೂ ಹುಸಿ ಪ್ರಗತಿಶೀಲವಾದ ಧೋರಣೆಗಳಿಗೆ ತಮ್ಮನ್ನು ತೆತ್ತುಕೊಂಡು ಸಾಂಸ್ಕೃತಿಕ ನಿರ್ವಾತದ ಪರವಾಗಿ ವಾದಿಸುವವರಲ್ಲ. ಇವರಿಗೆ ಕರ್ನಾಟಕ ಸಂಸ್ಕೃತಿಯ ಪುನಾರಚನೆಯೆನ್ನುವುದು ವರ್ತಮಾನಕ್ಕೆ ಅತ್ಯಂತ ಪ್ರಸ್ತುತವಾದ ಸಂಗತಿಯೂ ಹೌದು. ಅಧ್ಯಯನದ ಒತ್ತು ರಾಜಕೇಂದ್ರಿತ ನೆಲೆಗಳಿಂದ ಸಮುದಾಯಕೇಂದ್ರಿತ ನೆಲೆಗಳ ಕಡೆಗೆ ಚಲಿಸಿದಾಗ ಹೊಸ ತಿಳಿವಳಿಕೆ ಮೂಡುತ್ತದೆ. ಆದ್ದರಿಂದಲೇ ಶಂ.ಬಾ. ಅವರ ಸೂರ್ಯ ಮತ್ತು ಚಂದ್ರ ಸಂಸ್ಕೃತಿಗಳ ಪರಿಕಲ್ಪನೆ, ಜಿ. ಎನ್. ದೇವಿ ಮತ್ತು ಡಿ.ಆರ್. ನಾಗರಾಜ ಅವರು ಮಂಡಿಸಿದ ಸಾಂಸ್ಕೃತಿಕ ವಿಸ್ಮೃತಿಯನ್ನು ಕುರಿತ ಆಲೋಚನೆಗಳು, ಬರಗೂರು ರಾಮಚಂದ್ರಪ್ಪ, ರಹಮತ್ ತರೀಕೆರೆ ಮುಂತಾದವರು ಬಳಸಿರುವ ಉಪಸಂಸ್ಕೃತಿ, ಪ್ರತಿಸಂಸ್ಕೃತಿ ಇತ್ಯಾದಿ ಪಾರಿಭಾಷಿಕಗಳ ಸುತ್ತಲೂ ಆಲೋಚನೆಗಳು ನಡೆಯುತ್ತಿವೆ.

ಆದರೆ ಸಮಸ್ಯೆಯಿರುವುದು ಮನುಷ್ಯನ ಭೌತಿಕಜೀವನ ವಿಧಾನಗಳಿಗೂ ಸಂಸ್ಕೃತಿಗೂ ಇರುವ ನಿಕಟವೂ ಅವಲಂಬಿತವೂ ಆದ ಸಂಬಂಧಗಳನ್ನು ಗ್ರಹಿಸದೆ ಇರುವುದರಲ್ಲಿ. ಆಧುನಿಕವಾದ ಬದುಕಿನ ಕ್ರಮಗಳನ್ನು ಅನಿವಾರ್ಯವಾಗಿಯೋ ಆಯ್ಕೆಯಿಂದಲೋ ಸ್ವೀಕರಿಸಿದಾಗ ಅದರ ಸಂಗಡವೇ ಸಂಸ್ಕೃತಿ ವಿವರಗಳೂ ಬದಲಾಗುತ್ತವೆ. ಕ್ರಮೇಣ ಸಂಸ್ಕೃತಿಯನ್ನು ಕುರಿತ ದೃಷ್ಟಿಕೋನ ಹಾಗೂ ಆಲೋಚನೆಗಳೂ ಪರಿವರ್ತಿತವಾಗುತ್ತವೆ. ಇದು ನಿಜವಾದಾಗ ನಮ್ಮ ಜೀವನಸಂಬಂಧೀ ಆಯ್ಕೆಗಳೇ ನಿರ್ಣಾಯಕವಾಗುವುದರಲ್ಲಿ ಅನುಮಾನವಿಲ್ಲ. ಇಂಥ ಸನ್ನಿವೇಶದಲ್ಲಿ ಗಾಂಧೀಜಿಯವರಿಂದ ಪ್ರಣೀತವಾದ ಜೀವನಕ್ರಮವೂ ಸಂಭವನೀಯ ಆಯ್ಕೆಯಾಗಿ ಉಳಿದಿಲ್ಲ. ವ್ಯವಸ್ಥೆಯ ಅತಿರೇಕಗಳಿಗೆ ಅದರೊಳಗಡೆಯೇ ರೂಪಿತವಾಗ ಬಹುದಾದ ಪ್ರತಿರೋಧಗಳು ಮಾತ್ರ ಪರ್ಯಾಯಗಳನ್ನು ನೀಡಬಹುದು. ಅದು ಯಾವುದಾದರೂ ಇರಲಿ, ಆಧುನಿಕತೆಯ ಸಂಪೂರ್ಣ ನಿರಾಕರಣೆಯಾಗಲಿ, ಎಂದೋ ಇತ್ತೆಂದು ಹೇಳಲಾಗುತ್ತಿರುವ "ಸ್ವರ್ಣ ಯುಗ"ದ ಮರುಕಟ್ಟೋಣವಾಗಲಿ ಅಸಂಭವ ಹಾಗೂ ಅನಪೇಕ್ಷಣೀಯ. ವ್ಯಕ್ತಿಯಲ್ಲಾಗಲೀ, ಸಮುದಾಯದಲ್ಲಾಗಲೀ ಆ ಬಗೆಯ ತಿಳಿವಳಿಕೆಯನ್ನು ಬೆಳೆಸುವ ಸಾಮರ್ಥ್ಯವನ್ನು ಧರ್ಮ, ಭಕ್ತಿ, ಅನುಭಾವಗಳು ಕಳೆದುಕೊಂಡಿದೆಯೆಂದೇ ತೋರುತ್ತದೆ. ಪರಿಣಾಮವಾಗಿ, ಹೊಸ ಸನ್ನಿವೇಶದಲ್ಲಿ ಒಡಮೂಡಿರುವ ಹೊಸ ನೈತಿಕತೆ ಮತ್ತು ಜೀವನ ವಿಧಾನಗಳನ್ನು ಗಮನಕ್ಕೆ ತಂದುಕೊಳ್ಳುವ ಸಿದ್ಧಾಂತಗಳು ರೂಪಿತವಾಗಬೇಕಿವೆ. ಕೊನೆಗೂ ಸಂಸ್ಕೃತಿಯ ಅಧ್ಯಯನವು ಹರಿಯುವ ನೀರಿನ ನೆಲೆಗಳನ್ನು ಹಿಡಿಯುವ ಕೆಲಸವೇ ವಿನಾ ಅಲ್ಲಿ ಏನು ಹರಿಯಬೇಕೆಂದು ತೀರ್ಮಾನಿಸುವ ಕೆಲಸ ಅಲ್ಲ. ಸಾಹಿತ್ಯದ ಅಧ್ಯಯನವೂ ಕೂಡ ಇಂತಹುದೇ ಪ್ರಯತ್ನವಾಗಿರುತ್ತದೆ.

❑

ಸಮಕಾಲೀನ ಕರ್ನಾಟಕ ಸಂಸ್ಕೃತಿಯ ವಿಶಿಷ್ಟತೆ

ಕೆ. ಮರುಳಸಿದ್ದಪ್ಪ

ಸಮಕಾಲೀನ ಕರ್ನಾಟಕ ಸಂಸ್ಕೃತಿಯ ಸ್ವರೂಪವನ್ನು ಗ್ರಹಿಸುವಲ್ಲಿ ಕೆಲವು ತೊಡಕುಗಳಿವೆ. ಜಾಗತಿಕ ಪ್ರಭಾವಗಳು ಮತ್ತು ರಾಷ್ಟ್ರೀಯ ಪ್ರಭಾವಗಳಿಂದ ಬಿಡಿಸಿಕೊಂಡು ಕರ್ನಾಟಕ ಸಂಸ್ಕೃತಿಯ ವಿಶಿಷ್ಟ ಗುಣಲಕ್ಷಣಗಳನ್ನು ಗುರುತಿಸುವುದು ಸಮಕಾಲೀನ ಸಂದರ್ಭಕ್ಕೆ ತೀರಾ ಅಗತ್ಯವಿದೆ. ಪಾಶ್ಚಾತ್ಯ ಸಂಸ್ಕೃತಿಯ ಸೆಳೆತ ಮತ್ತು ಭಾರತೀಯ ಸಂಸ್ಕೃತಿಯೊಂದಿಗಿರುವ ಗಟ್ಟಿಯಾದ ಪರಂಪರಾಗತ ಸಂಬಂಧದಿಂದಾಗಿ ಸಮಕಾಲೀನ ಕರ್ನಾಟಕ ಸಂಸ್ಕೃತಿಯು ತನ್ನತನವನ್ನು ನಿಧಾನವಾಗಿ ಕಳೆದುಕೊಳ್ಳುತ್ತಿದೆ ಎಂಬುದು ನನ್ನ ಅನಿಸಿಕೆ. ಮತ್ತೊಂದು ಅತಿರೇಕದ 'ಕನ್ನಡವಾದ'ದ ನೆಲೆಯಿಂದ ಭಾಷಾಂಧತೆಯೊಂದಿಗೆ ಕರ್ನಾಟಕ ಸಂಸ್ಕೃತಿಯನ್ನು ಗುರುತಿಸಲಾಗುತ್ತದೆ. ಆದರೆ ಈ ಭಾಷಾ ಚಳವಳಿಗಳೇನಿದ್ದರೂ ತಮ್ಮ ವಾದವನ್ನು ಕೇವಲ ರಾಜಕೀಯ ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡುವಷ್ಟಕ್ಕೇ ಸೀಮಿತಗೊಂಡಿವೆಯೇ ಹೊರತು, ಅದಕ್ಕಿಂತ ಮುಂದೆ ಹೋಗಿ ಕರ್ನಾಟಕ ಸಂಸ್ಕೃತಿಯ ಮೂಲ ಲಕ್ಷಣಗಳನ್ನು ಗುರುತಿಸುವ ಮತ್ತು ಅದರ ಮೌಲ್ಯಗಳನ್ನು ಎತ್ತಿ ಹಿಡಿಯುವ ಆಸಕ್ತಿ ಅವುಗಳಿಗಿಲ್ಲ. ಭಾಷಾ ಚಳವಳಿಗೆ ಸಾಂಸ್ಕೃತಿಕ ಆಯಾಮವನ್ನು ಜೋಡಿಸಬಯಸುವ ವಿದ್ವಾಂಸರೂ ಸಹ ಈಗಾಗಲೇ ಪ್ರಚಲಿತವಿರುವ ಸಿದ್ಧಾಂತಗಳನ್ನೇ ಪ್ರತಿಪಾದಿಸುತ್ತ ಬಂದಿದ್ದಾರೆ. ಮಯೂರಶರ್ಮನೇ ಕನ್ನಡ ಸಂಸ್ಕೃತಿಯ ಮೂಲ ಪುರುಷನೆನ್ನುವ ಈ ವಿದ್ವಾಂಸರು ವೈದಿಕ ಸಂಸ್ಕೃತಿಗೆ ಪರ್ಯಾಯವಾಗಿ ಬೆಳೆದು ಬಂದ ಕನ್ನಡ ಪರಂಪರೆಯ ಸಾಂಸ್ಕೃತಿಕ ಆಂದೋಲನಗಳನ್ನು ಗೌಣವಾಗಿಸಿ ಚರ್ಚಿಸುತ್ತಾರೆ.

ಅಖಿಲ ಭಾರತ ವ್ಯಾಪ್ತಿಯಲ್ಲಿ ಹಿಂದೂ ಸಂಸ್ಕೃತಿಯ ಶ್ರೇಷ್ಠತೆಯನ್ನೇ ಎತ್ತಿ ಹಿಡಿಯುವ ಮತ್ತು ಮಹಾರಾಷ್ಟ್ರದ ಮಟ್ಟಿಗೆ 'ಮರಾಠಿವಾದ'ವನ್ನು ಪ್ರತಿಪಾದಿಸುವ ಶಿವಸೇನೆಯ ಆದರ್ಶಗಳಿಗೂ ನಮ್ಮ ಕನ್ನಡ ಚಳವಳಿಗಾರರ ಆದರ್ಶಗಳಿಗೂ ಮೂಲಭೂತವಾದ ವ್ಯತ್ಯಾಸಗಳಿಲ್ಲ. ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ತಮ್ಮ ಸ್ಥಳೀಯ ಸಂಸ್ಕೃತಿಯ ಬಗೆಗೆ ಇರುವ ಅಭಿಮಾನವನ್ನು ನಮ್ಮ ಕನ್ನಡ ಚಳವಳಿಯೊಂದಿಗೆ ಹೋಲಿಸಿದರೆ ಇದು ಸ್ಪಷ್ಟವಾಗುತ್ತದೆ. ಮೇಲೆ ಹೇಳಿರುವ ಮೂರು ರಾಜ್ಯಗಳಲ್ಲಿ ನಮ್ಮ ಸಂಸ್ಕೃತಿಗಳ ಅಭಿಮಾನವಿರುವಂತೆ ಸೋದರ ಸಂಸ್ಕೃತಿಗಳ ಬಗೆಗೂ ಗೌರವವಿದೆ. ಆದರೆ ಶಿವಸೇನೆಯ ಆದರ್ಶವು ಅಹಂಕಾರ ಮೂಲವಾದುದು. ಹಿಂದೂ ಸಂಸ್ಕೃತಿಯ ಪರಮೋನ್ನತಿಯನ್ನು ಎತ್ತಿ ಹಿಡಿಯುವ ಮೂಲಕವೇ 'ಮರಾಠಿವಾದ'ವನ್ನು ಪ್ರತಿಪಾದಿಸುವ ಹಾದಿಯನ್ನು ನಂಬಿರುವಂತಹುದು.

ಇನ್ನು ಕರ್ನಾಟಕ ಸಂಸ್ಕೃತಿಯ ಐತಿಹಾಸಿಕ ನೆಲೆಗಳಾವುವೆಂಬುದನ್ನು ಪರಿಶೀಲಿಸಬಹುದು.

ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆಯನ್ನು ವಸ್ತುನಿಷ್ಠವಾಗಿ ಪರಿಶೀಲಿಸಿದಾಗ ಅಲ್ಲಿ ಪ್ರಮುಖವಾಗಿ ಎರಡು ಧಾರೆಗಳಿರುವುದು ತಟ್ಟನೆ ಗೋಚರವಾಗುವ ವಿಚಾರ. ಜೈನ ಪುರಾಣಗಳು ಮತ್ತು ವೈದಿಕ ಸಂಸ್ಕೃತಿಯ ರಾಮಾಯಣ ಮಹಾಭಾರತಗಳನ್ನು ನಮ್ಮ ಪ್ರಾಚೀನ ಕವಿಗಳು ಕನ್ನಡ ಪರಿಸರದಲ್ಲಿ ಪುನರ್‌ಸೃಷ್ಟಿಸಿ ಶ್ರೇಷ್ಠವೆನ್ನಬಹುದಾದ ಕೆಲವು ಮಹಾಕೃತಿಗಳನ್ನು ಕೊಟ್ಟಿದ್ದಾರೆ. ಆದರೆ ಹನ್ನೆರಡನೆಯ ಶತಮಾನದ ಬಳಿಕವೇ ಕನ್ನಡ ಕಾವ್ಯದಲ್ಲಿ ಕನ್ನಡದ ಸಾಂಸ್ಕೃತಿಕ ವೀರರ ಕಥೆಗಳು ಕಾವ್ಯವಸ್ತುವಾಗುವುದು. ಹರಿಹರ, ರಾಘವಾಂಕ, ಚಾಮರಸರಂತಹ ಕವಿಗಳ ವಸ್ತು ಪ್ರಪಂಚಕ್ಕೂ ಪಂಪ, ರನ್ನ, ನಾಗಚಂದ್ರರ ಪ್ರೌಢ ಕಾವ್ಯ ಪರಂಪರೆಯ ವಸ್ತು ಪ್ರಪಂಚಕ್ಕೂ ಇರುವ ವ್ಯತ್ಯಾಸವನ್ನು ಗಮನಿಸದಿರುವಂತಿಲ್ಲ. ಹೀಗೆ ವಚನಕಾರರಿಂದ ಆರಂಭವಾಗಿ ಭಕ್ತಿಪಂಥದ ಕವಿಗಳಿಂದ ಸಮೃದ್ಧಗೊಂಡು ಹತ್ತೊಂಬತ್ತನೆಯ ಶತಮಾನದ ಅನುಭಾವಿಗಳವರೆಗೆ ವ್ಯಾಪಿಸಿರುವ ಈ ಅಚ್ಚಗನ್ನಡ ಪರಂಪರೆಯಲ್ಲಿ ಪುರಂದರದಾಸ, ಕನಕದಾಸರಂತಹ ಹರಿದಾಸರು. ಸರ್ವಜ್ಞನಂತಹ ದೇಸೀ ಕವಿಗಳು ಸೇರುತ್ತಾರೆ. ಲಕ್ಷ್ಮೀಶ, ಕುಮಾರವ್ಯಾಸ, ರತ್ನಾಕರವರ್ಣಿಯಂತಹ ಮಹಾಕವಿಗಳು ತಮ್ಮ ದೇಸೀ ನಿಷ್ಠೆಯಿಂದಾಗಿ ಈ ಪರಂಪರೆಯಲ್ಲಿಯೇ ಗುರುತಿಸಲ್ಪಡುತ್ತಾರೆ. ಹೀಗೆ ಕನ್ನಡ ಕಾವ್ಯ ಪರಂಪರೆಗಳನ್ನು ಎರಡಾಗಿ, ಪ್ರತ್ಯೇಕವಾಗಿ ಗುರುತಿಸಬೇಕಾಗುತ್ತದೆ. ಪಂಪ, ರನ್ನ, ನಾಗಚಂದ್ರ, ಷಡಕ್ಷರಿ ಮುಂತಾದವರ ಪ್ರೌಢ ಕಾವ್ಯ ಪರಂಪರೆ ಹಾಗೂ ಹರಿಹರನಿಂದ ಕುಮಾರವ್ಯಾಸನವರೆಗಿನ ಜನಪ್ರಿಯ ಕಾವ್ಯ ಪರಂಪರೆ.

ರಾಜಕೀಯ ಚರಿತ್ರೆಯ ನೆಲೆಯಲ್ಲಿ ಕದಂಬರಿಂದ ಮೈಸೂರು ಅರಸರವರೆಗೆ ನೂರಾರು ಪಾಳೆಯಗಾರರೂ ಸೇರಿದಂತೆ ತನ್ನದೇ ಆದ ಪ್ರತ್ಯೇಕ ರಾಜಕೀಯ ಚಾರಿತ್ರಿಕ ಪರಂಪರೆಯೊಂದು ಕರ್ನಾಟಕಕ್ಕೆ ಇದೆಯಾದರೂ ಪ್ರಾಚೀನ ಕರ್ನಾಟಕ ಸಂಸ್ಕೃತಿಯ ಸ್ವರೂಪ ಸ್ಪಷ್ಟವಾಗುವುದು ಅದರ ಧಾರ್ಮಿಕ ಮತ್ತು ಸಾಹಿತ್ಯಿಕ ನೆಲೆಗಳಿಂದ ಮಾತ್ರವೆಂಬುದನ್ನು ಮರೆಯುವಂತಿಲ್ಲ. ಬೌದ್ಧ,

ಜೈನ, ವೈಷ್ಣವ, ಇಸ್ಲಾಂ ಮುಂತಾಗಿ ವಿವಿಧ ಧರ್ಮಗಳ ಪ್ರಭಾವದ ಪರಿಸರದಲ್ಲಿ ಕರ್ನಾಟಕ ಸಂಸ್ಕೃತಿ ರೂಪು ಹೊಂದಿದೆಯಾದರೂ ಉದಾರವಾದಿ ಭಕ್ತಿ ಪಂಥದ ನೆಲೆಗಟ್ಟಿನ ಮೇಲೆ ನಿಂತಿರುವ ವಚನ ಪರಂಪರೆ ಮತ್ತು ಹರಿದಾಸರ ಪರಂಪರೆಗಳು ಮಾತ್ರ ಧಾರ್ಮಿಕವಾಗಿ ಅಚ್ಚಗನ್ನಡ ಪರಂಪರೆಗಳೆನ್ನಬಹುದಾಗಿದೆ. ಅದರಲ್ಲಿಯೂ ಶೈವ ಪರವಾದ ಸಂಪ್ರದಾಯಗಳೇ ಕನ್ನಡ ಸಂಸ್ಕೃತಿಯ ಪ್ರಧಾನ ವೈಶಿಷ್ಟ್ಯವೆನ್ನಬಹುದು. ಕನ್ನಡ ಜನಪದ ಕಾವ್ಯ, ಕಥೆ, ಆಚರಣೆಗಳು, ಕನ್ನಡ ನಾಡಿನ ದೇವಾನುದೇವತೆಗಳ ವೈವಿಧ್ಯ - ವೈಶಿಷ್ಟ್ಯಗಳನ್ನು ಗಮನಿಸಿದರೆ ಈ ಮಾತು ಸ್ಪಷ್ಟವಾದೀತು. ಕನ್ನಡದಲ್ಲಿ ದೊರಕಿರುವ ಎರಡು ಜನಪದ ಮಹಾಕಾವ್ಯಗಳು - ಮಹದೇಶ್ವರ ಮತ್ತು ಮಂಟೇಸ್ವಾಮಿ ಪುರಾಣಗಳು - ಶೈವ ಪರಂಪರೆಗೆ ಸೇರಿರುವುದು ಆಕಸ್ಮಿಕವಲ್ಲ. ಕನ್ನಡ ಜನಪದ ಕಥೆಗಳ ಮುಕ್ತಾಯದಲ್ಲಿ ಸಾಮಾನ್ಯವಾಗಿ ಪ್ರತ್ಯಕ್ಷರಾಗಿ ಪರಿಹಾರ ಸೂಚಿಸುವವರು ಪಾರ್ವತಿ ಪರಮೇಶ್ವರರು. ಭಾಷಿಕವಾಗಿ ಪ್ರಾಚೀನ ಕರ್ನಾಟಕ ಮತ್ತು ತಮಿಳು ಸಂಸ್ಕೃತಿಗಳೆರಡೂ ಸಮೀಪ ಸಂಬಂಧಿಗಳು. ವೀರಶೈವರ ಅರುವತ್ತುಮೂರು ಪುರಾತನರು ಮತ್ತು ವೈಷ್ಣವರ ಆಳ್ವಾರುಗಳು ತಮಿಳು ಸಂಸ್ಕೃತಿಗೆ ಸೇರಿದವರು. ಧಾರ್ಮಿಕವಾಗಿ ಕನ್ನಡ ತಮಿಳು ಸಂಸ್ಕೃತಿಗಳೆರಡೂ ಅವಳಿ ಸಂಸ್ಕೃತಿಗಳೆಂದರೂ ತಪ್ಪಾಗುವುದಿಲ್ಲ.

ಇಸ್ಲಾಂ ಧರ್ಮದ ಸೂಫಿ ಪಂಥದ ಪ್ರಭಾವವೂ ನಮ್ಮ ಭಕ್ತಿ ಪರಂಪರೆಯನ್ನು ಗಾಢವಾಗಿ ಸೇರಿರುವಂತಿದೆ. ಬಾಬಾಬುಡನ್‌ಗಿರಿ, ಬಂದೇನವಾಜ್‌ದರ್ಗ, ಸಾವಳಗಿ, ಶಿಶುನಾಳ ಮುಂತಾದ ಹಲವು ಸ್ಥಳಪುರಾಣಗಳು ಇದನ್ನು ಸ್ಪಷ್ಟವಾಗಿ ಸೂಚಿಸುತ್ತವೆ.

ಯಕ್ಷಗಾನ ಬಯಲಾಟ ಪರಂಪರೆಯ ಮೂಲಕ ಕೇರಳದೊಂದಿಗೆ, ವಿಜಯನಗರದ ಸಾಮ್ರಾಜ್ಯದ ಮೂಲಕ ಆಂಧ್ರದೊಂದಿಗೆ, ಕರ್ನಾಟಕ ಸಂಗೀತ ಪರಂಪರೆಯ ಮೂಲಕ ಇಡೀ ದಕ್ಷಿಣ ಭಾರತದೊಂದಿಗೆ ತನ್ನ ಸಂಬಂಧವನ್ನು ಸ್ಥಾಪಿಸಿಕೊಂಡಿರುವ ಕರ್ನಾಟಕ ಸಂಸ್ಕೃತಿಯು ಉತ್ತರ ಕರ್ನಾಟಕದ ರಂಗಭೂಮಿ ಮತ್ತು ಸಾಹಿತ್ಯಗಳ ಮೂಲಕ ಮರಾಠೀ ಸಂಬಂಧವನ್ನೂ ಉಳಿಸಿಕೊಂಡು ಬಂದಿದೆ.

ಹೀಗೆ ಐತಿಹಾಸಿಕವಾಗಿ ಕರ್ನಾಟಕ ಸಂಸ್ಕೃತಿ ಬಹು ಮೂಲಗಳಿಂದ ಪ್ರಭಾವವನ್ನು ಹೀರಿ ಸಮೃದ್ಧಿ ಹೊಂದಿರುವ ಬಹುಮುಖೀ ಸಂಸ್ಕೃತಿಯೆಂಬುದು ಸ್ಪಷ್ಟವಾಗಿದೆ. ಉತ್ತರ ಭಾರತದ ಅಭಿಜಾತ ಪರಂಪರೆಗಿಂತ ದಕ್ಷಿಣ ಭಾರತದ ಜನಪ್ರಿಯ ಸಂಸ್ಕೃತಿಯೊಂದಿಗೆ ಕರ್ನಾಟಕ ಸಂಸ್ಕೃತಿಯ ಸಂಬಂಧ ಗಾಢವಾಗಿದ್ದು ಈ ಸಂಬಂಧದ ಬೇರುಗಳು ಸಾವಿರಾರು ವರ್ಷಗಳ ಪ್ರಾಚೀನತೆ ಪಡೆದಿವೆ. ಆದರೆ ಸಮಕಾಲೀನ ಕರ್ನಾಟಕದ ರಾಜಕೀಯದಿಂದಾಗಿ ನೆರೆಹೊರೆಯ ರಾಜ್ಯಗಳೊಂದಿಗೆ ಇರುವ ಚಾರಿತ್ರಿಕ ಸಂಬಂಧವನ್ನು ನಾವು ಸಂಪೂರ್ಣವಾಗಿ ಗೌಣವಾಗಿಸಿ ಕೇವಲ ಭಾರತೀಯ ಸಂಸ್ಕೃತಿಯ ಅಂಗವಾಗಿಯೇ ನಮ್ಮನ್ನು ಗುರುತಿಸಿಕೊಳ್ಳುತ್ತಿರುವುದರೊಂದಿಗೆ ನಮ್ಮೊಡನೆ ಕರುಳಬಳ್ಳಿಯ ಸಂಬಂಧ ಹೊಂದಿರುವ ತಮಿಳು ಸಂಸ್ಕೃತಿಯನ್ನು ದ್ವೇಷಿಸುವ ಮಟ್ಟವನ್ನು ತಲುಪಿದ್ದೇವೆ. ಇದೊಂದು ಬಹು ದೊಡ್ಡ ವಿಪರ್ಯಾಸವಾಗಿದ್ದು ಕನ್ನಡ ಸಂಸ್ಕೃತಿಗೆ ಇದರಿಂದ ಬಹು ದೊಡ್ಡ ಹಾನಿಯಾಗಿದೆ.

ಬ್ರಿಟಿಷರ ಆಡಳಿತವು ಕರ್ನಾಟಕದ ನಾಗರಿಕ ಸಂಸ್ಕೃತಿಯನ್ನು ಪ್ರಭಾವಿಸಿದಂತೆ ಗ್ರಾಮೀಣ ಸಂಸ್ಕೃತಿಯನ್ನು ಪ್ರಭಾವಿಸಲಿಲ್ಲವಾದರೂ ಇಂಗ್ಲಿಷ್ ಶಿಕ್ಷಣದಿಂದಾಗಿ ಸಂಕೀರ್ಣವಾದ ಒಂದು ಪರಿಸ್ಥಿತಿ ಏರ್ಪಟ್ಟಿದೆ. ಸ್ವಾತಂತ್ರ್ಯದ ತರುವಾಯುವೂ ವೃತ್ತಪತ್ರಿಕೆ, ರೇಡಿಯೊ, ದೂರದರ್ಶನ ದಂತಹ ಸಂಪರ್ಕ ಮಾಧ್ಯಮಗಳು ಇಂಗ್ಲಿಷ್ ಸಂಸ್ಕೃತಿಯ ಪ್ರಭಾವವನ್ನು ಇನ್ನೂ ಆಳಕ್ಕೆ ತಲುಪಿಸಿವೆ. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಕೇವಲ ಆಫೀಸು, ಶಾಲೆ, ಕಾಲೇಜುಗಳಿಗೆ ಸೀಮಿತ ವಾಗಿದ್ದ ಈ ಪ್ರಭಾವ ಈಗ ಸರ್ವವ್ಯಾಪಿಯಾಗಿದೆ. ಇಂಗ್ಲಿಷ್ ಸಂಸ್ಕೃತಿಯ ಪ್ರಭಾವವನ್ನು ತಡೆಗಟ್ಟಲು ಭಾರತೀಯ ನವೋದಯ ಚಳವಳಿ ಒಡ್ಡಿದ ಪ್ರತಿರೋಧದಿಂದಾಗಿ ಭಾರತೀಯ ಸಂಸ್ಕೃತಿಯ ಪುನರುಜ್ಜೀವನವಾಯಿತಾದರೂ ನಾನು ಯಾವುದನ್ನು ಅಚ್ಚಗನ್ನಡ ಪರಂಪರೆಯೆಂದು ಗುರುತಿಸಿರುವೆನೋ ಅದು ಇನ್ನೂ ಹಿಂದೆ ಸರಿಯಿತು. ಬ್ರಿಟಿಷರು ಭಾರತಕ್ಕೆ ಬರದೇ ಇದ್ದರೆ ಎಲ್ಲ ರಾಜ್ಯಗಳ ದೇಸೀ ಪರಂಪರೆಗಳು ಸ್ವತಂತ್ರವಾಗಿ ಅವಿಚ್ಛಿನ್ನವಾಗಿ ಬೆಳೆಯುತ್ತಿದ್ದವು. ಬ್ರಿಟಿಷರ ಆಡಳಿತದಿಂದ, ಇಂಗ್ಲಿಷ್ ಭಾಷೆಯ ಮೂಲಕ, ಭಾರತೀಯ ಸಂಸ್ಕೃತಿಯೂ ಸಹ ಕರ್ನಾಟಕದ ಸಂಸ್ಕೃತಿಯ ದೇಸೀ ತೇಜಸ್ಸನ್ನು ಮಂಕಾಗಿಸಿತು.

ಆಧುನಿಕ ಸಂದರ್ಭದಲ್ಲಿ ಭಾರತೀಯ ಸಂಸ್ಕೃತಿ ಇತರ ರಾಜ್ಯಗಳಲ್ಲಿ ಇನ್ನೂ ಆಳವಾಗಿ ಬೇರೂರಲು ಸಂಸ್ಕೃತ ಭಾಷೆಗಿಂತ ಇಂಗ್ಲಿಷ್ ಭಾಷೆಯೇ ಕಾರಣವಾಯಿತೆಂಬುದು ಗಮನಾರ್ಹ ಸಂಗತಿಯಾಗಿದೆ. ಹತ್ತೊಂಬತ್ತನೆ ಶತಮಾನಕ್ಕೆ ಹೋಲಿಸಿದರೆ ಇಂದು ಕರ್ನಾಟಕ ಸಂಸ್ಕೃತಿ ಹೆಚ್ಚು ಹೆಚ್ಚಾಗಿ ತನ್ನ ವೈಶಿಷ್ಟ್ಯ ಕಳೆದುಕೊಂಡು ಭಾರತೀಯ ಸಂಸ್ಕೃತಿಯಲ್ಲಿ ಲೀನವಾಗಿದೆ ಯೆಂಬುದು ಯಾರಿಗಾದರೂ ಕಾಣಿಸಬೇಕಾದ ಸಂಗತಿ. ವಸಾಹತುಶಾಹಿಯಿಂದ ಆಧುನಿಕ ಗೊಂಡಂತೆ, ಭಾರತದ ಎಲ್ಲ ರಾಜ್ಯಗಳ ಉಪಸಂಸ್ಕೃತಿಗಳೂ ಕ್ರಮೇಣ ನಾಶಗೊಂಡವು. ಕರ್ನಾಟಕ ದಲ್ಲಿಯೇ ಇರುವ ಕೊಡಗು, ಕರಾವಳಿ, ಉತ್ತರ ಕರ್ನಾಟಕ, ಮೈಸೂರು ಪ್ರದೇಶದ ಉಪ ಭಾಷೆಗಳು, ನೂರಾರು ಬುಡಕಟ್ಟುಗಳು, ಜಾತಿ ಉಪಜಾತಿಗಳು ತಮ್ಮ ಸ್ವಂತಿಕೆ ಮತ್ತು ವೈಶಿಷ್ಟ್ಯವನ್ನು ಕಳೆದುಕೊಳ್ಳಲು ವಸಾಹತುಶಾಹಿಯೇ ಕಾರಣವಾಯಿತು. ವೈದಿಕ ಸಂಸ್ಕೃತಿಯನ್ನೇ ಅಧಿಕೃತ ಸಂಸ್ಕೃತಿಯೆಂದು ಗ್ರಹಿಸುತ್ತಿರುವುದಕ್ಕೆ ಕಾರಣವನ್ನು ಬ್ರಿಟಿಷ್ ಆಡಳಿತ ಮೂಲದಲ್ಲಿಯೇ ಹುಡುಕಬಹುದಾಗಿದೆ.

ತನ್ನ ತಾಳಿಕೆಯ ಗುಣದಿಂದ ಭಾರತೀಯ ಸಂಸ್ಕೃತಿ ಅನ್ಯಸಂಸ್ಕೃತಿಗಳ ಪ್ರಭಾವವನ್ನು ಜೀರ್ಣಿಸಿಕೊಂಡಿತೆಂದು ಹೇಳಬಹುದು. ಈ ಮಾತನ್ನು ಕರ್ನಾಟಕ ಸಂಸ್ಕೃತಿಗೆ ಹೇಳಲು ನಾನು ಹಿಂಜರಿಯುತ್ತೇನೆ. ಸಮಕಾಲೀನ ಕರ್ನಾಟಕ ಸಂಸ್ಕೃತಿಯಲ್ಲಿ ಪ್ರಾಚೀನ ಕನ್ನಡ ಸಂಸ್ಕೃತಿಯ ಕುರುಹುಗಳೇನೂ ವಿಶೇಷವಾಗಿ ನನಗೆ ಕಾಣಿಸುತ್ತಿಲ್ಲ. ಪಾಳು ಬಿದ್ದಿರುವ ಹೊಯ್ಸಳ ದೇವಾಲಯಗಳು, ಐಹೊಳೆ, ಲಕ್ಕುಂಡಿ, ಹಂಪೆ, ಬನವಾಸಿ ಮುಂತಾದ ಭಗ್ನಾವಶೇಷಗಳು ಯಾವ ಕನ್ನಡಿಗನ ಹೊಟ್ಟೆಯನ್ನೂ ಉರಿಸಿ ದೊಡ್ಡ ಚಳವಳಿಗೆ ಕಾರಣವಾಗಿಲ್ಲವಾದರೂ ರಾಮಜನ್ಮಭೂಮಿಯ ಹಕ್ಕಿಗಾಗಿ ಸಾವಿರಾರು ಮೈಲಿಗಳ ಆಚೆ ಇರುವ ಅಯೋಧ್ಯೆಗೆ ಕನ್ನಡಿಗರು ಇಟ್ಟಿಗೆ ಹೊತ್ತದ್ದನ್ನು ಹೇಗೆ ವಿವರಿಸಬೇಕೋ ಗೊತ್ತಾಗುತ್ತಿಲ್ಲ.

ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಪ್ರಕಟಗೊಂಡಿರುವ ಸಮಾಜ ಸಂಸ್ಕೃತಿಯೂ ಹೆಚ್ಚಾಗಿ ರಾಷ್ಟ್ರೀಯ ಸಂಸ್ಕೃತಿಗೆ ಹೊಂದಿಕೆಯಾಗುತ್ತದೆಯೆಂಬುದೂ ಇಲ್ಲಿ ಗಮನಿಸಲೇಬೇಕಾದ ಸಂಗತಿ. ಒರಿಯಾ, ಬಂಗಾಳಿ, ಮಲೆಯಾಳಿ ಭಾಷೆಗಳ ಕಥಾ ಸಾಹಿತ್ಯದಲ್ಲಿ ಕಾಣುವ ವಿಶಿಷ್ಟ ಸಾಮಾಜಿಕ ಸಂಸ್ಕೃತಿಯನ್ನು ಸಮಕಾಲೀನ ಕನ್ನಡ ಕಥೆ ಕಾದಂಬರಿಗಳಲ್ಲಿ ಕಾಣಲಾಗುವುದಿಲ್ಲವೆಂಬುದನ್ನು ಗಮನಿಸಬಹುದು. ಆದರೆ ಈ ಮಾತಿಗೆ ಅಪವಾದವೆಂಬಂತೆ ಕುವೆಂಪು, ರಾವ್‌ಬಹದ್ದೂರ್, ಮಿರ್ಜಿ ಅಣ್ಣಾರಾಯರಂತಹ ನವೋದಯ ಬರಹಗಾರರ ಕಾದಂಬರಿಗಳನ್ನು, ಸ್ವಾತಂತ್ರ್ಯೋತ್ತರ ಗ್ರಾಮೀಣ ನೆಲೆಯಿಂದ ಬಂದ ಮುಖ್ಯ ಲೇಖಕರನ್ನು, ಇತ್ತೀಚಿನ ದಲಿತ ಸಾಹಿತ್ಯವನ್ನು ಗಮನಿಸಬಹುದಾದರೂ, ಆಧುನಿಕ ಕನ್ನಡ ಸಾಹಿತ್ಯದ ಶ್ರೇಷ್ಠ ಬರಹಗಾರರು ಭಾರತೀಯ ಸಂಸ್ಕೃತಿಯಿಂದ ಪಡೆದ ಪ್ರೇರಣೆ ಇನ್ನೂ ಗಾಢವಾದುದೆಂಬುದರಲ್ಲಿ ಸಂದೇಹಕ್ಕೆ ಅವಕಾಶವೇ ಇಲ್ಲ.

ಜಾನಪದ ಸಂಸ್ಕೃತಿ ಮತ್ತು ಶಿಷ್ಟ ಸಂಸ್ಕೃತಿಗಳ ನಡುವೆ ಕರ್ನಾಟಕದಲ್ಲಿ ಮೂಲಭೂತವಾದ ಸಂಘರ್ಷಗಳಿದ್ದುದರಿಂದಲೇ ಇವೆರಡರ ಸಮನ್ವಯದಿಂದ ಜನಪ್ರಿಯ ಸಂಸ್ಕೃತಿಯೊಂದು ಹುಟ್ಟಿಕೊಂಡಿತು. ವಚನ ಪರಂಪರೆ, ಹರಿದಾಸ ಸಾಹಿತ್ಯ, ಹತ್ತೊಂಬತ್ತನೆಯ ಶತಮಾನದ ಅನುಭಾವಿಗಳು, ಹರಿಹರ, ರಾಘವಾಂಕ, ಕುಮಾರವ್ಯಾಸ, ಚಾಮರಸ, ರತ್ನಾಕರವರ್ಣಿ, ಕನಕದಾಸ, ಸರ್ವಜ್ಞ ಮುಂತಾದವರು ಈ ಜನಪ್ರಿಯ ಸಂಸ್ಕೃತಿಯ ವಕ್ತಾರರು. ಕಾಲಕಾಲಕ್ಕೆ ಕಾಣಿಸಿಕೊಂಡ ಸಾಮಾಜಿಕ ಚಳವಳಿಗಳು ಶಿಷ್ಟ ಸಂಸ್ಕೃತಿಯ ಕಠೋರ ಸಾಮಾಜಿಕ ನೀತಿ ನಿಯಮಗಳನ್ನು ಪ್ರತಿಭಟಿಸಿದಂತೆ ಜಾನಪದ ಸಂಸ್ಕೃತಿಯ ಮೂಢ ನಂಬಿಕೆಗಳನ್ನೂ ವಿರೋಧಿಸಿವೆ. ತಮ್ಮ ಜನಪರ ನಿಲುವುಗಳಿಂದಾಗಿ ಈ ಸಾಮಾಜಿಕ ಚಳವಳಿಗಳು ಪ್ರಗತಿಪರತೆಯನ್ನು ಸ್ವಾಗತಿಸುತ್ತವೆ. ವಚನ ಚಳವಳಿಯಿಂದ ಮೊದಲಾಗಿ ಇತ್ತೀಚಿನ ದಲಿತ ಚಳವಳಿಯವರೆಗೆ ಕರ್ನಾಟಕದ ಚರಿತ್ರೆಯಿಂದ ಹಲವು ಪ್ರಗತಿಪರ ಸಾಮಾಜಿಕ ಚಳವಳಿಗಳ ಉದಾಹರಣೆಯನ್ನು ಕೊಡಬಹುದು.

❑

'ಕರ್ನಾಟಕ ಸಂಸ್ಕೃತಿಯ ಅಧ್ಯಯನ'ವೆಂಬ ವಿಚಾರ ಸಂಕಿರಣದ ಅಂಗವಾಗಿ ಹಾಕಿದ ಪ್ರಶ್ನೆಗಳಿಗೆ ಉತ್ತರ ರೂಪವಾಗಿ ಇಲ್ಲಿನ ಅಭಿಪ್ರಾಯಗಳಿವೆ.

ಕುಸಿಯುತ್ತಿರುವ ಸಾಂಸ್ಕೃತಿಕ ನೆಲೆಗಳು

ರಂಜಾನ್ ದರ್ಗಾ

ನಾನು 27 ವರ್ಷಗಳ ಹಿಂದೆ ನನ್ನ ಊರು ವಿಜಾಪುರ ಬಿಟ್ಟವನು. ಶಿಕ್ಷಣಕ್ಕಾಗಿ, ಹೊಟ್ಟೆಪಾಡಿಗಾಗಿ ಹೀಗೆ ಬಂಧು ಬಳಗದಿಂದ ಮತ್ತು ಹುಟ್ಟಿ ಬೆಳೆದ ವಾತಾವರಣದಿಂದ ದೂರ ಉಳಿಯುವುದು ಬಹುಪಾಲು ಜನರಿಗೆ ಅನಿವಾರ್ಯವಾಗಿದೆ. ಹಾಗೆಯೆ ಹೊಸ ಸಂಬಂಧಗಳು ಸೃಷ್ಟಿಯಾಗುವುದು ಸಹಜವಾಗಿದೆ. ಬುಂದೇಲಖಂಡದ ಕಲಾವಿದನೊಬ್ಬ ಬಹಳ ವರ್ಷಗಳ ಹಿಂದೆ ನನಗೆ ಹೇಳಿದ ಮಾತು ಇನ್ನೂ ಹಸಿರಾಗಿದೆ. ಅಲ್ಲಿನ ಜನ ಬರಗಾಲದಲ್ಲಿ ಗುಳೆ ಹೋಗುವಾಗ ಬೆಳೆವ ಭೂಮಿಯಲ್ಲಿ ಧಾನ್ಯ ಚೆಲ್ಲುತ್ತ ಹೋಗುತ್ತಾರೆ. ಮಳೆ ಬಂದಾಗ ಈ ಭೂಮಿ ಬೆಳೆದು, ಇಲ್ಲೇ ಉಳಿದವರ ಹಸಿವು ಹಿಂಗಿಸಲಿ ಎಂದು. ಹೆಣ್ಣುಮಕ್ಕಳು ಗಂಡನ ಮನೆಗೆ ಹೋಗುವಾಗ ಹೀಗೇ ಮಾಡುತ್ತಾರೆ; ತಮ್ಮ ತವರೂರು ಹಸಿರಾಗಿರಲೆಂದು. ಸಂಸ್ಕೃತಿಯು ರೂಪತಾಳುವ ಸಂದರ್ಭಗಳಿವು. ಸಂಸ್ಕೃತಿ ಎಂಬುದು ಜನಸಮುದಾಯದ ಮನಸ್ಸುಗಳನ್ನು ಪೋಣಿಸುವಂಥ ದಾರ. ಈ ದಾರದ ಎಳೆಗಳು ಅಂತಃಕರಣದಿಂದ ಸೃಷ್ಟಿಯಾಗಿರುತ್ತವೆ. ಹೀಗೆ ಸಂಸ್ಕೃತಿಯು ಭೂಮಿಯ ಮೇಲೆ ಒಂದಾಗಿ ಸಹ್ಯವಾಗಿ ಬದುಕಲು ಬೇಕಾದ ವಾತಾವರಣವನ್ನು ಸೃಷ್ಟಿಸುತ್ತದೆ. ಈ ವಾತಾವರಣ ಕಲುಷಿತಗೊಂಡಷ್ಟೂ ಬದುಕು ಅಸಹ್ಯವಾಗುತ್ತ ಹೋಗುತ್ತದೆ. ಮನುಷ್ಯನಿಗಿಂತ ಅವನ ಕೈಯಲ್ಲಿನ ನೀಲಿ ನೋಟು ದೊಡ್ಡದಾಗುತ್ತದೆ. ಲಕ್ಷಾಂತರ ಜನರ ಮಧ್ಯೆ ಮನುಷ್ಯ ಏಕಾಕಿ ಆಗುತ್ತ ಹೋಗುತ್ತಾನೆ.

ಮನುಷ್ಯನ ಸಾಂಸ್ಕೃತಿಕ ನೆಲೆಗಳು ಎಷ್ಟು ಗಟ್ಟಿಯಾಗಿವೆ ಎಂದರೆ ಅವು ಮನುಷ್ಯನನ್ನು ಕುಸಿದುಬೀಳಲು ಬಿಡುವುದಿಲ್ಲ. ಆದರೆ ಕುಸಿದು

ಬೀಳುವುದೇ ಮನುಷ್ಯನ ಗುರಿಯಾದರೆ ಯಾವ ಸಂಸ್ಕೃತಿಯಿಂದಲೂ ಅವನನ್ನು ರಕ್ಷಿಸಲು ಸಾಧ್ಯವಿಲ್ಲ. 'ಗರ್ವಸೇ ಕಹೋ ಹಂ ಹಿಂದೂ ಹೈ' ಅಥವಾ 'ಗರ್ವಸೇ ಕಹೋ ಹಂ ಮುಸ್ಲಿಂ ಹೈ' ಎಂದು ಹೇಳುವವರನ್ನು ಯಾವ ಸಂಸ್ಕೃತಿಯೂ ರಕ್ಷಿಸಲು ಸಾಧ್ಯವಿಲ್ಲ. ಈ ಸತ್ಯದ ಅರಿವಿನೊಂದಿಗೆ ಮನುಷ್ಯನ ಸಾಂಸ್ಕೃತಿಕ ಸಂಬಂಧಗಳನ್ನು ಅರಿತುಕೊಳ್ಳಬೇಕೆ ಹೊರತು ಅದನ್ನು ಯಾವುದೇ ಧರ್ಮ ಅಥವಾ ಜನಾಂಗದ ಬಾಲಂಗೋಚಿಯಾಗಿ ಮಾಡುವುದರ ಮೂಲಕ ಅಲ್ಲ. ಯಾವುದೇ ಧರ್ಮ ಮತ್ತು ಜನಾಂಗ ತನ್ನ ಸಾಂಸ್ಕೃತಿಕ ಸತ್ವದಿಂದಾಗಿ ದೊಡ್ಡದಾಗಿರುತ್ತದೆ ಹೊರತಾಗಿ ಬೇರಾವುದರಿಂದಲೂ ಅಲ್ಲ. ಬಸವಣ್ಣನವರು ಸಂಸ್ಕೃತಿಯನ್ನು ದಯೆಯ ರೂಪದಲ್ಲಿ ಕಂಡರು. ಗಾಂಧೀಜಿಯವರು ಸಹಬಾಳ್ವೆಯ ರೂಪದಲ್ಲಿ ಕಂಡರು. ಹೀಗೆ ಸೃಷ್ಟಿಯಾದ ಸಂಸ್ಕೃತಿಯ ಒತ್ತಡಗಳು ಎಷ್ಟು ಬಲವಾಗಿರುತ್ತವೆ ಎಂದರೆ ಅವು ಮನುಷ್ಯ ಅಧಃಪತನ ಹೊಂದುವುದನ್ನು ತಡೆಯುತ್ತವೆ.

1993ರ ಏಪ್ರಿಲ್ 1 ರಂದು ಭಟ್ಕಳದಲ್ಲಿ ಪ್ರಾರಂಭವಾದ ಕೋಮುಗಲಭೆ ಒಂದಿಲ್ಲೊಂದು ರೀತಿಯಲ್ಲಿ ವರ್ಷದುದ್ದಕ್ಕೂ ಮುಂದುವರಿಯಿತು. ಅಂದು ಶ್ರೀರಾಮ ನವಮಿ. ಆ ನಿಮಿತ್ತ ಭಟ್ಕಳದ ಪ್ರಸಿದ್ಧ ಹನುಮಂತ ದೇವರ ರಥಯಾತ್ರೆ. ಅಂದು ಸಂಜೆ ರಥಯಾತ್ರೆ ಮುಗಿದು ಇನ್ನೇನು ಮಂದಿರ ತಲುಪುವ ಸಂದರ್ಭದಲ್ಲಿ ರಥದ ಮೇಲೆ ಮೂರು ಕಲ್ಲುಗಳು ಬಿದ್ದವು ಎಂಬ ವದಂತಿ ಎಲ್ಲೆಡೆ ಹರಡಿತು. ಅಂದೇ ರಾತ್ರಿ ಮುಸ್ಲಿಮರ ಮೇಲೆ ಹಲ್ಲೆಗಳು ಪ್ರಾರಂಭವಾದವು. ಪ್ರತಿ ಹಲ್ಲೆಗಳೂ ನಡೆದವು. ಇಡೀ ಭಟ್ಕಳ ಪಟ್ಟಣ ಮತ್ತು ಸುತ್ತಮುತ್ತಲಿನ ಗ್ರಾಮಗಳು ದುಷ್ಕರ್ಮಿಗಳ ಆಡುಂಬೊಲಗಳಾದವು. ಭಟ್ಕಳ ಪಕ್ಕದಲ್ಲಿರುವ ನಸ್ತಾರ ಗ್ರಾಮದ ಒಂದು ಘಟನೆ ಹೀಗಿದೆ:

ಸಮುದ್ರ ತೀರದ ಸುಂದರ ಗ್ರಾಮ ನಸ್ತಾರದಲ್ಲಿ ಮುಖ್ಯವಾಗಿ ಮೀನುಗಾರರು ವಾಸಿಸುತ್ತಿದ್ದಾರೆ. ಅವುಗಳಲ್ಲಿ ಕೆಲವು ಶ್ರೀಮಂತ ಮುಸ್ಲಿಂ ಕುಟುಂಬಗಳೂ ಇವೆ. ಗಲಭೆಯ ಸಂದರ್ಭದಲ್ಲಿ ಮಧ್ಯರಾತ್ರಿಯ ವೇಳೆ ಇಂಥ ಒಂದು ಮುಸ್ಲಿಂ ಮನೆಗೆ ಬೆಂಕಿ ಹಚ್ಚಲು ಅದೇ ಗ್ರಾಮದ ಮೀನುಗಾರ ಯುವಕರ ಗುಂಪೊಂದು ಬಂದಿದೆ. ಮನೆಯಲ್ಲಿ ಮನೆಯೊಡೆಯನ ತಾಯಿ, ಹೆಂಡತಿ ಮತ್ತು ಮಗಳು ಇದ್ದಾರೆ. ದುಡಿಯುವುದಕ್ಕಾಗಿ ಮನೆಯೊಡೆಯ ಕೊಲ್ಲಿ ರಾಷ್ಟ್ರವೊಂದಕ್ಕೆ ಹೋಗಿದ್ದಾನೆ. ಪುಂಡರು ಮನೆಯ ಮುಂದಿನ ಭಾಗಕ್ಕೆ ಬೆಂಕಿ ಹಚ್ಚುವಾಗ ಎಚ್ಚರಗೊಂಡ ಮನೆಯೊಡತಿ ಅಷ್ಟೆಲ್ಲ ಗದ್ದಲದ ಮಧ್ಯೆ ಬಕೆಟ್‌ನಿಂದ ಬೆಂಕಿಯ ಮೇಲೆ ನೀರು ಸುರಿಯತೊಡಗಿದಳು. ಆ ಬೆಂಕಿಯ ಬೆಳಕಿನಲ್ಲಿ ಕಾಣುತ್ತಿದ್ದವರೆಲ್ಲರೂ ಅವಳಿಗೆ ಪರಿಚಿತರೇ; ಅದೇ ಗ್ರಾಮದವರು. ಆದರೆ ಆ ಬೆಳಕಿನಲ್ಲಿ ಒಬ್ಬ ಯುವಕನ ಮುಖ ಕಂಡು ಅವಳು ಸುಸ್ತಾದಳು. ಬೆಂಕಿ ನಂದಿಸುವ ಉತ್ಸಾಹ ಕುಗ್ಗತೊಡಗಿತು. ಏಕೆಂದರೆ ಆತ ಅವಳ ಮಗನಾಗಿದ್ದ! ಮಗನೆಂದರೆ ಮಗನ ಹಾಗೇ ಮಗುವಾಗಿನಿಂದಲೂ ಮನೆಯಲ್ಲೇ ಬೆಳೆದ ಹುಡುಗ. ಅವಳ ತೊಡೆಯ ಮೇಲೆ, ಅವಳ ಅಪ್ಪುಗೆಯಲ್ಲೇ, ಅವಳ ಮುದ್ದಾಟದಲ್ಲೇ ಬೆಳೆದ ಪಕ್ಕದ ಮನೆಯ ಮೀನುಗಾರರ ಹುಡುಗ! ಅವಳು ಸುಸ್ತಾಗಿ ಬೆಂಕಿಯ ಮೇಲೆ ನೀರು ಸುರಿಯುತ್ತಲೇ ಇದ್ದಳು. ರೋಷಾವೇಶದ

ಗುಂಪಿನಲ್ಲಿ ಕೂಗಾಟ ನಡೆದೇ ಇತ್ತು. ಆಕೆ ಬೆಂಕಿಯ ಮೇಲೆ ನೀರು ಸುರಿಯುವಾಗ ಗುಂಪಿನಿಂದ ಒಬ್ಬಾತ ಬಂದು ಅವಳ ಕೈ ಹಿಡಿದಾಗ ಗುಂಪಿನೊಳಗಿದ್ದ ಅವಳ ಮಗ - ಆ ಹುಡುಗ ಆವೇಶದಿಂದ ಆ ಕೈ ಹಿಡಿದವನ ಕೊರಳಪಟ್ಟಿ ಹಿಡಿದು ಎರಡು ಬಿಗಿದ. ಆಗ ಕೈ ಹಿಡಿದವ ದಂಗಾದ. ಕೈ ಬಿಟ್ಟು ನಿಂತ. ಇಡೀ ಗುಂಪು ಸ್ತಬ್ಧವಾಯಿತು. ನಂತರ ಅವರೆಲ್ಲ ಅಲ್ಲಿಂದ ತೆರಳಿದರು. ಘಟನೆ ನಡೆದ ಕೆಲ ದಿನಗಳ ನಂತರ ನಸ್ಪಾರ ಗ್ರಾಮಕ್ಕೆ ಭೇಟಿ ನೀಡಿದ ಪತ್ರಕರ್ತರು ಆ ಮಹಿಳೆಯನ್ನು ವಿಚಾರಿಸಿದಾಗ ತಿಳಿದು ಬಂದ ಸತ್ಯವಿದು. ನಾವೆಲ್ಲ ಕೇಳಿದೆವು "ಆ ಗುಂಪಿನಲ್ಲಿದ್ದವರನ್ನು ಗುರುತಿಸಬಲ್ಲಿರಾ?" ಎಂದು. ಆಕೆ ಹೇಳಿದಳು "ಆ ಹುಡುಗರೆಲ್ಲಾ ಇಲ್ಲೇ ಓಡಾಡುವವರು, ನಮ್ಮ ಹಿತ್ತಲಿನ ಬಾವಿಯಿಂದ ಸಿಹಿ ನೀರನ್ನು ಒಯ್ಯುವವರು" ಎಂದು. ಆದರೂ ಆ ಮಹಿಳೆ ಯಾರ ಮೇಲೂ ಪೊಲೀಸರಿಗೆ ದೂರು ಕೊಡಲಿಲ್ಲ. ಇದೆಲ್ಲ ದಿನಾ ಆಗುವಂಥದ್ದಲ್ಲ; ಕೂಡಿ ಬದುಕುವುದೇ ದೈನಂದಿನ ಸತ್ಯ ಎಂಬ ನಿರ್ಧಾರ ಆ ಮಹಿಳೆಯದಾಗಿತ್ತು.

ಕೂಡಿ ಬದುಕುವ ದೈನಂದಿನ ಸತ್ಯದ ಸತ್ವದಿಂದಲೇ ಸಂಸ್ಕೃತಿಯ ಸೃಷ್ಟಿಯಾಗುತ್ತದೆ. ನಾನು ಚಿಕ್ಕವನಿದ್ದಾಗ ಹೆಣ್ಣುಮಕ್ಕಳ ಮಧ್ಯೆ ಒಂದು ನಡವಳಿಕೆ ಇತ್ತು. ನನ್ನ ಗಲ್ಲಿಯ ಹೆಣ್ಣುಮಕ್ಕಳ ಬಗ್ಗೆ ಹೇಳಬೇಕೆಂದರೆ ಅವರೆಲ್ಲ ಸಾಮಾನ್ಯವಾಗಿ ಬಡ ಕುಟುಂಬದವರೇ. ಅವರಿಗೆಲ್ಲ ವರ್ಷಕ್ಕೆ ಒಂದು ಜೊತೆ ಇಳಕಲ್ ಸೀರೆ ಖರೀದಿಸುವುದೇ ಸಂಭ್ರಮ. ಒಂದು ಜೊತೆ ಸೀರೆ ಕೊಳ್ಳುವುದಕ್ಕಾಗಿ ಅವರು ಅನೇಕ ತಿಂಗಳುಗಳವರೆಗೆ ಲೆಕ್ಕಹಾಕಬೇಕಾಗಿತ್ತು. ಹಣ ಕೂಡಿಸಬೇಕಿತ್ತು. ನನ್ನ ತಾಯಿಯೂ ಅಷ್ಟೆ. ದಿಂಡಿ ಹಾಕಲೂ ಸಾಧ್ಯವಿಲ್ಲದಷ್ಟು ಸೀರೆಗಳು ಹರಿದಾಗ ಹೊಸ ಸೀರೆ ಖರೀದಿಸಲು ಬಯಸುತ್ತಿದ್ದಳು. ಹೇಗೊ ನನ್ನ ತಂದೆ ಹಣ ಕೂಡಿಸಿ ಕೊಡುತ್ತಿದ್ದರು. ಹೊಸ ಸೀರೆ ತಂದ ಮೇಲೆ ನನ್ನ ತಾಯಿಗೆ ಆ ಸೀರೆಗಳನ್ನು ಉಡಲು ಕನಿಷ್ಟ ಒಂದು ತಿಂಗಳಾದರೂ ಬೇಕಾಗುತ್ತಿತ್ತು. ತಾನು ಉಡುವ ಮೊದಲು ತನಗೆ ಬೇಕಾದ ಹೆಣ್ಣುಮಕ್ಕಳೆಲ್ಲ ಉಡಬೇಕೆಂಬುದೇ ಅವಳ ಆಶಯವಾಗಿತ್ತು. ಆ ಎರಡು ಸೀರೆಗಳನ್ನು ಪ್ರತಿದಿನ ಇಬ್ಬರು ಹೆಣ್ಣುಮಕ್ಕಳು ಉಡುತ್ತಿದ್ದರು. ಮರುದಿನ ಒಗೆದು ಒಣಗಿಸಿ ಕೊಡುತ್ತಿದ್ದರು. ಮತ್ತೆ ಅವು ಇನ್ನಿಬ್ಬರು ಹೆಣ್ಣು ಮಕ್ಕಳ ಕಡೆಗೆ ಹೋಗುತ್ತಿದ್ದವು. ಹೀಗೆ ಸವಾರಿ ಮುಗಿದ ಮೇಲೆ ಮನೆಗೆ ಬರುತ್ತಿದ್ದವು. ಬೇಕಾದವರೆಲ್ಲ ಉಟ್ಟು ಸಂತೋಷಪಟ್ಟ ಮೇಲೆ ನನ್ನ ತಾಯಿ ಆ ಸೀರೆಗಳನ್ನು ಉಡುತ್ತಿದ್ದಳು. ಹೀಗೆ ಬೇರೆಯವರಿಗೆ ಉಡಿಸಿ, ಉಣಿಸಿ ಸಂತೋಷಪಡುವ ಸಂಸ್ಕೃತಿ ನಮ್ಮದು - ಜನ ಸಾಮಾನ್ಯರದು.

ನಮ್ಮ ಜನ ಊಟದ ಸಮಯದಲ್ಲಿ ಭೇಟಿಯಾದಾಗ ಪರಸ್ಪರ ಊಟದ ಬಗ್ಗೆ ವಿಚಾರಿಸು ತ್ತಾರೆ. ಒಬ್ಬರು "ಊಟ ಆಯಿತಾ" ಕೇಳಿದರೆ ಇನ್ನೊಬ್ಬರು "ಆಯ್ತು, ನಿಮ್ಮದು ಆಯ್ತಾ" ಎನ್ನುತ್ತಾರೆ. ಸಮಾಜದಲ್ಲಿ ಯಾರೂ ಉಪವಾಸವಿರಬಾರದು ಎಂಬುದು ನಮ್ಮ ಸಂಸ್ಕೃತಿಯ ಮುಖ್ಯ ಲಕ್ಷಣಗಳಲ್ಲೊಂದಾಗಿದೆ.

ಕೆಲವೇ ದಶಕಗಳ ಹಿಂದೆ ಮನುಷ್ಯ ಎಷ್ಟೊಂದು ಸಾಮಾಜಿಕನಾಗಿದ್ದ. ಈಗ ನೋಡಿ

ಹೇಗಾಗಿದ್ದಾನೆ! ಆತ ಸಾಮಾಜಿಕವಾಗಿ ಮರಣಶಯ್ಯೆಯಲ್ಲಿದ್ದಾನೆ. ಅಲಿಯಾಬಾದ ಗ್ರಾಮದ ತಳವಾರ ರಾಮಪ್ಪ ನೆನಪಾಗುತ್ತಾನೆ. ನಾನು ಬಾಲ್ಯದಲ್ಲಿ ನನ್ನ ತಾಯಿಯ ತವರೂರಾದ ಆ ಹಳ್ಳಿಯಲ್ಲಿ ನನ್ನ ಅಜ್ಜಿಯ ಜೊತೆ ಇದ್ದವನು. ಅವಳು ಕೂಲಿ ಕೆಲಸಕ್ಕೆ ಹೋಗುವಾಗ ಅವಳ ಜೊತೆ ಹೋಗುತ್ತಿದ್ದೆ. ಒಂದು ಸಲ ಸೇಂಗಾ ಸುಗ್ಗಿಯಲ್ಲಿ ಸೇಂಗಾ ಆರಿಸುವ ಕೂಲಿ ಕೆಲಸಕ್ಕೆ ಹೋದೆವು. ಎಲ್ಲ ಕೂಲಿ ಹೆಣ್ಣುಮಕ್ಕಳು ಸಾಲಾಗಿ ಸೇಂಗಾ ಆರಿಸುತ್ತಿದ್ದರು. ಗೆಜ್ಜಿ ಸೇಂಗಾದ ಗಿಡಗಳನ್ನು ಕೀಳುತ್ತ ಅವುಗಳ ಬೇರಿಗೆ ಅಂಟಿಕೊಂಡಿರುವ ಸೇಂಗಾ ಬಿಡಿಸುತ್ತ ಒಂದು ಡಬ್ಬದಲ್ಲಿ ತುಂಬಿಕೊಳ್ಳುವುದು. ಅದು ತುಂಬಿದ ಮೇಲೆ ಒಂದು ಕಡೆ ಹಾಕುವುದು..... ಹೀಗೆ ಏಳು ಬಾರಿ ಒಂದು ಕಡೆ ಹಾಕಿದ ಮೇಲೆ ಎಂಟನೆಯದನ್ನು ಪಕ್ಕದ ಜಾಗದಲ್ಲಿ ಹಾಕುವುದು.

ಸಂಜೆಯಾಗುವುದರೊಳಗಾಗಿ ಈ ರೀತಿ ಪ್ರತಿಯೊಬ್ಬರೂ ಎರಡು ಶೇಂಗಾ ರಾಶಿಯನ್ನು ಹಾಕುತ್ತಿದ್ದರು. ದೊಡ್ಡಪಾಲು ಹೊಲದೊಡೆಯನಿಗೆ ಹೋದರೆ ಸಣ್ಣ ಪಾಲನ್ನು ಕೂಲಿಕಾರರು ತೆಗೆದುಕೊಳ್ಳುತ್ತಿದ್ದರು. ನಾನು ನನ್ನ ಅಜ್ಜಿಯ ಜೊತೆ ಚಿಕ್ಕ ಡಬ್ಬದಲ್ಲಿ ಸೇಂಗಾ ಸಂಗ್ರಹಿಸಿ ದೊಡ್ಡ ಮತ್ತು ಸಣ್ಣ ಗುಂಪನ್ನು ಮಾಡುತ್ತಿದ್ದೆ. ನನ್ನ ದೊಡ್ಡ ಗುಂಪೇ ಸಣ್ಣದಾಗಿರುವುದರಿಂದ ನನ್ನ ಪಾಲಿನ ಗುಂಪು ಅತಿ ಸಣ್ಣದಾಗಿರುತ್ತಿತ್ತು. ನನ್ನ ಅಜ್ಜಿಯ ಪಕ್ಕದಲ್ಲಿದ್ದ ಹೆಣ್ಣುಮಗಳು ಪ್ರಾಮಾಣಿಕವಾಗಿ ರಾಶಿ ಹಾಕುತ್ತಿರಲಿಲ್ಲ. ನಾಲ್ಕೈದು ಡಬ್ಬ ಸೇಂಗಾ ಹೊಲದೊಡೆಯನ ರಾಸಿಗೆ ಸುರಿದ ಕೂಡಲೆ ನಂತರ ಸಂಗ್ರಹಿಸಿದ್ದನ್ನು ತನ್ನ ರಾಶಿಗೆ ಹಾಕಿಕೊಳ್ಳುತ್ತಿದ್ದಳು. ನನ್ನ ಅಜ್ಜಿಗೆ ಇದೆಲ್ಲ ಹಿಡಿಸಲಿಲ್ಲ. ಆಕೆ ಸಮೀಪದ ಮರದ ನೆರಳಲ್ಲಿ ಕುಳಿತು ಚುಟ್ಟಾ ಸೇದುತ್ತಿದ್ದ ಹೊಲದೊಡೆಯ ತಳವಾರ ರಾಮಣ್ಣನಿಗೆ ಹೇಳಲು ಹೊರಟಳು. ನಾನೂ ಹಿಂಬಾಲಿಸಿದೆ. ಈ ಅನ್ಯಾಯವನ್ನು ಕೇಳಿಯೂ ತಳವಾರ ರಾಮಪ್ಪ ಶಾಂತಚಿತ್ತನಾಗಿ ನನ್ನ ಅಜ್ಜಿಗೆ ಹೇಳಿದ "ಅವಳು ಹಾಗೆ ಮಾಡುತ್ತಿರುವುದನ್ನು ನಾನಿಲ್ಲಿ ಗಮನಿಸುತ್ತಲೇ ಇದ್ದೇನೆ. ಅವಳ ಗಂಡ ಸತ್ತಿದ್ದಾನೆ. ಬಹಳ ಕಷ್ಟಪಟ್ಟು ನಾಲ್ಕು ಮಕ್ಕಳನ್ನು ಸಾಕುತ್ತಿದ್ದಾಳೆ. ಅವಳ ಮನಸ್ಸು ನೋಯಿಸುವುದು ಬೇಡ. ಅವಳು ತನಗೆ ತಿಳಿದಂತೆ ಮಾಡಲಿ. ನೀನು ತಿಳಿದೂ ತಿಳಿಯದಂತಿರು" ಎಂದ. ನನ್ನ ಅಜ್ಜಿ ಮೌನವಾಗಿ ಹಿಂದಿರುಗಿದಳು.

ತಳವಾರ ರಾಮು ಮನುಷ್ಯನ ಸಂವೇದನಾಶೀಲತೆಯ ಪ್ರತೀಕವಾಗಿದ್ದಾನೆ. ಬೇರೆ ಜೀವಗಳ ಬಗ್ಗೆ ಕಾಳಜಿ ಇದ್ದಾಗ ಮಾತ್ರ ಸಂವೇದನಾಶೀಲತೆಯ ಸೆಲೆ ಉಕ್ಕುವುದು. ಕಳೆದ ದಶಕಗಳಿಂದ ಆಗುತ್ತಿರುವ ವಿಕೃತ ಸಾಮಾಜಿಕ ಬದಲಾವಣೆ ಮನುಷ್ಯನ ಕೋಮಲ ಭಾವನೆಗಳನ್ನು ಹೊಸಕಿ ಹಾಕುತ್ತಿದೆ. ಸರಂಜಾಮಿ ಯುಗದಲ್ಲಿ ಕ್ರೌರ್ಯವು ಪ್ರಬಲವಾಗಿದ್ದರೂ ಸ್ವಾಭಿಮಾನವು ಸ್ಥಾಯಿಯಾಗಿತ್ತು. ಆ ಸ್ವಾಭಿಮಾನ ಸಾಮಾಜಿಕ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಹಾಯಕವಾಗುತ್ತಿತ್ತು. ಶೂರನಾದವನ ಮೇಲೆ ತನ್ನ ಸಮಾಜವನ್ನು ರಕ್ಷಿಸುವ ಜವಾಬ್ದಾರಿ ಇರುತ್ತಿತ್ತು; ಶ್ರೀಮಂತನ ಮೇಲೆ ಸಮಾಜಸೇವೆಯ ನೈತಿಕ ಜವಾಬ್ದಾರಿ ಇರುತ್ತಿತ್ತು. ಕಾಯಕ ನಿಷ್ಠೆಯ ಮತ್ತು ಪ್ರಾಮಾಣಿಕ ಬಡವರಿಗೆ ಸಮಾಜದಲ್ಲಿ ಮರ್ಯಾದೆ ಇತ್ತು. ಒಬ್ಬರು ಇನ್ನೊಬ್ಬರಿಗೆ ಸಹಕಾರಿಯಾಗುವುದು ನೈತಿಕ ಜವಾಬ್ದಾರಿ ಎಂಬಂತೆ ಸಹಜವಾಗಿತ್ತು. ಮನುಷ್ಯನ ಕೈಯಲ್ಲಿ ಹಣದ ಚಲಾವಣೆ

ಜಾಸ್ತಿಯಾದಷ್ಟೂ ಆತ ಸಾಮಾಜಿಕವಾಗಿ ಅತಂತ್ರನಾಗುತ್ತಿದ್ದಾನೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬಡವರಿಗೆ ಹೆಚ್ಚಿನ ಅವಕಾಶಗಳು ಲಭ್ಯವಾದವು. ಬಡವರು ಶಿಕ್ಷಣ ಕಲಿತು ಮುಂದೆ ಬರಲು ಸ್ವಲ್ಪಮಟ್ಟಿಗಾದರೂ ಸಾಧ್ಯವಾಯಿತು. ಇದೆಲ್ಲ ಭಾರತದಲ್ಲಿ ಕೇವಲ 50 ವರ್ಷಗಳಲ್ಲಾದ ಭಾರೀ ಬದಲಾವಣೆ. ಅದಕ್ಕೂ ಮುಂಚೆ ಪ್ರತಿಯೊಬ್ಬ ವ್ಯಕ್ತಿ ತನ್ನ ಜಾತಿ ಮತ್ತು ಪರಂಪರಾಗತ ಕಾಯಕದ ಚೌಕಟ್ಟಿನಲ್ಲೇ ಬದುಕುವ ಪರಿಸ್ಥಿತಿ ಇತ್ತು. ಶೇಕಡಾ 90ರಷ್ಟು ಭಾರತೀಯರು ಕಳೆದ 5000 ವರ್ಷಗಳಿಂದ ಒಂದೇ ತೆರನಾದ ಬದುಕನ್ನು ಅನುಭವಿಸಿದವರು. ಅದು ಅವರಿಗೆ ಜನ್ಮದತ್ತವಾಗಿ ಬಂದಿತ್ತು. ಕಳೆದ 50 ವರ್ಷಗಳಲ್ಲಿ ಸಾಕಷ್ಟು ಬದಲಾವಣೆ ಕಂಡುಬಂದಿದೆ. ಆದರೆ ಬದುಕು ನೆಮ್ಮದಿಯನ್ನು ಕಳೆದುಕೊಳ್ಳುತ್ತಿದೆ. ಪ್ರೀತಿ, ವಿಶ್ವಾಸ, ಭದ್ರತೆ, ಆರೋಗ್ಯ, ಶಿಕ್ಷಣ, ಗೆಳೆತನ, ಮಾನವ ಸಂಬಂಧಗಳು, ಕಾಳಜಿಗಳು, ಅಭಿವೃದ್ಧಿ ಹೀಗೆ ಎಲ್ಲವೂ ಕರೆನ್ಸಿಯ ಮೂಲಕವೇ ನಡೆಯುತ್ತಿವೆ! ಈ ಕ್ಷಣದಲ್ಲಿ ಬಡವರ ಸ್ವಾಭಿಮಾನದ ಪ್ರತೀಕವಾಗಿ ನನಗೆ ಗೌರವ್ವ ಅಜ್ಜಿ ನೆನಪಾಗುತ್ತಿದ್ದಾಳೆ. ಆ ಅಜ್ಜಿ, ನನ್ನ ಅಜ್ಜಿ ಮತ್ತು ಇತರೆ ಹೆಣ್ಣುಮಕ್ಕಳು ಬೇರೆಯವರ ತೋಟವೊಂದರಲ್ಲಿ ಕಸ ತೆಗೆಯಲು ಹೋಗುತ್ತಿದ್ದರು. ನಾನು ಅಜ್ಜಿಯ ಕೂಡ ಹೋಗುತ್ತಿದ್ದೆ. ಸೂರ್ಯ ಮೂಡುವ ವೇಳೆ ಬುತ್ತಿಯನ್ನು ತಲೆಯ ಮೇಲಿಟ್ಟು, ಅದರ ಮೇಲೆ ಕಸ (ಕಳೆ) ತೆಗೆಯಲು ಬಳಸುವ ಕುರ್ಪಿಯನ್ನಿಟ್ಟುಕೊಂಡು, ತೋಟದ ಕಡೆಗೆ ಧಾವಿಸುವ ದೃಶ್ಯ ಇನ್ನೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಹೀಗೆ ತೋಟಕ್ಕೆ ಕಳೆ ತೆಗೆಯಲು ಹೋದ ಹೆಂಗಸರು ಸಂಜೆ ಕೆಲಸ ಮುಗಿಸಿ ಮರಳುವ ವೇಳೆ ಆ ತೋಟದಲ್ಲಿನ ಕಾಯಿಪಲ್ಲೆಗಳನ್ನು ಸ್ವಲ್ಪ ಪ್ರಮಾಣದಲ್ಲಿ ತೆಗೆದುಕೊಂಡು ಹೋಗಬಹುದಿತ್ತು. ಇದೊಂದು ವಾಡಿಕೆಯಾಗಿತ್ತು. ತೋಟದ ಮಾಲೀಕ ಅದನ್ನು ಸಹಿಸಿಕೊಂಡು ಇರುತ್ತಿದ್ದ. ಎಲ್ಲಾ ಹೆಂಗಸರು ತಮಗೆ ಬೇಕೆನಿಸಿದ ಕಾಯಿಪಲ್ಲೆ ತೆಗೆದು ಕೊಳ್ಳುತ್ತಿದ್ದರು. ಹಾಗೆ ತೆಗೆದುಕೊಳ್ಳುವಾಗ ಸ್ವಲ್ಪ ಹೆಚ್ಚಿಗೆ ತೆಗೆದುಕೊಂಡರೆ ಮಾಲೀಕ ಏನಂದಾನು ಎಂಬ ಪ್ರಶ್ನೆ ಕಾಡುತ್ತಿತ್ತು. ಆದರೆ ಗೌರವ್ವ ಅಜ್ಜಿ, ಈ ಅಳುಕಿನಿಂದ ಮುಕ್ತವಾಗಿದ್ದಳು. ಏಕೆಂದರೆ ಅವಳು ಯಾವುದೇ ತೆರನಾದ ಕಾಯಿಪಲ್ಲೆಯನ್ನು ಮುಟ್ಟುತ್ತಿರಲಿಲ್ಲ ಕೂಡ. ಅವಳು ಬಡವರೊಳಗಿನ ಬಡವಿ. ಆದರೆ ಆಕೆಯ ಸ್ವಾಭಿಮಾನಕ್ಕೆ ಎಲ್ಲರೂ ಒಳಗಿನಿಂದಲೇ ನಮಿಸು ತ್ತಿದ್ದರು. ಅವಳಿಗೆ ಒಂದು ಮಾತು ಹೇಳುವಾಗಲೂ ಎಚ್ಚರಿಕೆ ವಹಿಸುತ್ತಿದ್ದರು.

ಎಲ್ಲ ಹೆಂಗಳೆಯರು ಕಾಯಿಪಲ್ಲೆ ತೆಗೆದುಕೊಂಡರೆ, ಆಕೆ ಗೋಳಿಪಲ್ಲೆ ತೆಗೆದುಕೊಳ್ಳು ತ್ತಿದ್ದಳು. ಆ ಗೋಳಿಪಲ್ಲೆ ಏನು ಗೊತ್ತೆ? ಅದು ಕಳೆಯ ಒಂದು ಭಾಗವಾಗಿತ್ತು! ಆದರೆ ಅದು ನಿಜಕ್ಕೂ ಶಕ್ತಿವರ್ಧಕ ಪಲ್ಲೆ ಆಗಿತ್ತು. ರೈತರು ಅದನ್ನು ಬೇರ್ಪಡಿಸಿ ಹಸುವಿಗೆ ಹಾಕಿದರೆ ಹಸು ಹೆಚ್ಚು ಹಾಲು ಕೊಡುವುದು. ಆ ಪಲ್ಲೆಯನ್ನು ತೆಗೆದುಕೊಳ್ಳಲು ಯಾರ ಅನುಮತಿಯೂ ಬೇಕಿರಲಿಲ್ಲ. ಅಂತೆಯೆ ಗೌರಜ್ಜಿ ಅದನ್ನು ತೆಗೆದುಕೊಳ್ಳುತ್ತಿದ್ದಳು. ಮಧ್ಯಾಹ್ನ ಎಲ್ಲರೂ ಬಾವಿಕಟ್ಟೆಯ ಪಕ್ಕದ ನೀರು ತುಂಬಿದ ಹೌದಿನ ಬಳಿ ಗಿಡದ ನೆರಳಲ್ಲಿ ಬುತ್ತಿ ಬಿಚ್ಚಿದಾಗ ಅವಳು ಹೌದಿನ ಇನ್ನೊಂದು ಬದಿಗೆ ಕುಳಿತು ಬುತ್ತಿ ಬಿಚ್ಚುತ್ತಿದ್ದಳು. ಕಾರಣವಿಷ್ಟೇ ಎಲ್ಲರೂ ಬುತ್ತಿ ಬಿಚ್ಚಿದಾಗ ತಮ್ಮ ತಮ್ಮ ಒಣಗಿ (ಕಾಯಿಪಲ್ಲೆಯಿಂದ ಮಾಡಿದ ಪದಾರ್ಥ) ಹಂಚಿಕೊಳ್ಳು

ತ್ತಿದ್ದರು. ಗೌರಜ್ಜಿಯ ಪಲ್ಲೆ ಬರಿ ಗೋಳಿಪಲ್ಲೆಯಾಗಿದ್ದರಿಂದ ಅದು ಬಾರ್ಟರ್ ಸಿಸ್ಟಮ್‌ಗೆ ತಕ್ಕುದಲ್ಲವೆಂದು ಅವಳ ಭಾವನೆ. ಉತ್ತಮ ಒಣಗಿಗೆ ಗೋಳಿಪಲ್ಲೆಯಿಂದ ಮಾಡಿದ ಒಣಗಿಯನ್ನು ಕೊಡುವುದೆಂತು? ಇಂಥ ಸನ್ನಿವೇಶದಲ್ಲಿ ಅವಳನ್ನು ಉಳಿದ ಬಡ ಕೂಲಿ ಹೆಂಗಸರು ಜೊತೆ ಊಟಕ್ಕೆ ಕರೆಯುವ ಧೈರ್ಯ ಮಾಡುತ್ತಿರಲಿಲ್ಲ. ನಂತರ ಎಲ್ಲ ಮಾಮೂಲು. ಅವಳ ಗಾಂಭೀರ್ಯ, ಸ್ವಾಭಿಮಾನ ಹಾಗೂ ಕರ್ತವ್ಯನಿಷ್ಠೆ ನನಗೆ ಆದರ್ಶಗಳಾಗಿ, ಮೌಲ್ಯಗಳಾಗಿ ಇಂದಿಗೂ ಕಾಡುತ್ತಿವೆ. ಬಡವರ ಘನತೆಯನ್ನು ಹರಾಜು ಹಾಕುತ್ತಿರುವ ಇಂದಿನ ವ್ಯಾಪಾರಿ ಯುಗದಲ್ಲಿ ಜನಸಂಸ್ಕೃತಿ ಎಂಥ ಒತ್ತಡಗಳಿಗೆ ಸಿಲುಕಿದೆ ಎಂಬುದನ್ನು ಚಿಂತಿಸುವ ಕ್ಷಣಗಳಿವು.

ವಿಜಾಪುರದ ಸಂಕ್ರಮಣ ಸೊಲ್ಲಾಪುರದ ಸಂಕ್ರಮಣದಷ್ಟೇ ಪ್ರಸಿದ್ಧ. ಆಗ ಸಿದ್ಧರಾಮನ ಜಾತ್ರೆ ಇರುವುದು. ನಾನು ಚಿಕ್ಕವನಿದ್ದಾಗ ಈ ಜಾತ್ರೆ ಒಂದು ತಿಂಗಳವರೆಗೆ ನಡೆಯುತ್ತಿತ್ತು. ಗಾಂಧಿ ಚೌಕದಿಂದ ಬಿ.ಎಲ್.ಡಿ.ಇ. ಸಂಸ್ಥೆಯ ಆವರಣದವರೆಗೆ ಸುಮಾರು ಮೂರು ಕಿಲೋಮೀಟರ್ ಉದ್ದಕ್ಕೂ ಇರುವ ರಸ್ತೆಯ ಇಕ್ಕೆಲಗಳಲ್ಲಿ ಜಾತ್ರೆಯ ಅಂಗಡಿಗಳು ತಲೆ ಎತ್ತುತ್ತಿದ್ದವು. ಬೆಂಡು ಬತ್ತಾಸಿನ ಅಂಗಡಿಗಳು, ಸೇಂಗಾ ಚುರಮುರಿ ಅಂಗಡಿಗಳು, ಹೋಟೆಲ್‌ಗಳು, ಫ್ಯಾನ್ಸಿ ಸ್ಟೋರ್ಸ್, ಹೂ, ಹಣ್ಣು, ತೆಂಗಿನ ಕಾಯಿ, ಅರಿಶಿನ-ಕುಂಕುಮ ಮತ್ತು ಅಗರಬತ್ತಿ ಅಂಗಡಿಗಳು, ಆಟದ ಸಾಮಾನುಗಳ, ಅಡುಗೆಮನೆ ಸಾಮಾನುಗಳ ಮುಂತಾದ ತರಹೆವಾರಿ ಅಂಗಡಿಗಳು, ಕುಸರೆಳ್ಳಿನ ಅಂಗಡಿಗಳು, ಸಕ್ಕರೆ ಹಾರದ ಅಂಗಡಿಗಳು, ಸಂಕ್ರಾಂತಿ ಗ್ರೀಟಿಂಗ್ ಕಾರ್ಡ್ಸ್ ಅಂಗಡಿಗಳು, ಸಣ್ಣ ಸರ್ಕಸ್ ಮತ್ತು ಇಂದ್ರಜಾಲದ ಟೆಂಟುಗಳು ಒಂದೇ ಎರಡೇ ಜನಜಾತ್ರೆ. ಎಲ್ಲಿ ನೋಡಿದಲ್ಲಿ ಜನ. ಇದರ ಜೊತೆಗೇ ತಿಂಗಳುಗಟ್ಟಲೆ ನಡೆಯುವ ದನಗಳ ಜಾತ್ರೆ. ಕಬ್ಬು ತಿನ್ನುತ್ತ ದನಗಳ ಜಾತ್ರೆ ನೋಡುವುದೇ ಒಂದು ಖುಷಿ. ದೊಡ್ಡ ಮೈದಾನದಲ್ಲಿ ನಡೆಯುವ ಈ ದನದ ಜಾತ್ರೆಯಲ್ಲಿ ಸಾವಿರಗಟ್ಟಲೆ ಎತ್ತಿನ ಜೋಡಿಗಳು ಮಾರಾಟಕ್ಕೆ ಲಭ್ಯವಾಗುತ್ತಿದ್ದವು. ಈ ಜೋಡಿ ಎತ್ತುಗಳು ಮತ್ತು ಹೋರಿಗಳು ಬರಿ ಮಾರಾಟದ ವಸ್ತುಗಳಂತಲ್ಲ. ಕೊಳ್ಳುವವರು, ಮಾಲೀಕ ಅವುಗಳನ್ನು ಹೇಗೆ ನೋಡಿಕೊಂಡಿದ್ದಾನೆ ಎಂಬುದನ್ನು ಗಮನಿಸುತ್ತಿದ್ದರು. ಅವು ಮಾರಾಟ ಮಾಡುವ ರೈತನ ಆತ್ಮಗೌರವದ ಪ್ರತೀಕವಾಗಿರುತ್ತಿದ್ದವು. ಕಿಲಾರಿ ಹೋರಿಗಳು, ಮೌಳಿ ಎತ್ತುಗಳು, ದುಂಡುಕೋಡಿನವು, 'V' ಆಕಾರದಲ್ಲಿದ್ದು ಸ್ವಲ್ಪ ಮುಂದೆ ಬಾಗಿದ ಕೋಡುಗಳುಳ್ಳವು ಎತ್ತರದ ಮಿಣಿಯವು, ಉದ್ದನೆಯ ಗಂಗೆದೊಗಲಿನವು. ಎಲ್ಲ ಸರಿಯಿದ್ದೂ ಕಸಬರಿಗೆ ಸುಳಿಯವು, ಇರಕಳು, ಸಂಭಾವಿತ ಮತ್ತು ಬುಸಗುಟ್ಟುವ ಎತ್ತುಗಳು ಹೀಗೆ ನೋಡುತ್ತ ಸಾಗುತ್ತಿದ್ದೆವು.

ಮಧ್ಯೆ ಬಣ್ಣದ ಪರದೆಗಳಿಂದ ಮತ್ತು ಬೇಗಡೆ ಹಾಳೆಗಳಿಂದ ಅಲಂಕೃತವಾದ ಮನಮೋಹಕ ತಾತ್ಕಾಲಿಕ ಹೋಟೆಲ್‌ಗಳು, ರುಚಿಕರವಾದ ಮಿರ್ಚಿ ಭಜಿ, ಪುಠಾಣಿ ಚಟ್ನಿ, ಪೂರಿ ಬಾಜಿ, ಬಿಸಿ ಬಿಸಿ ಕೆ.ಟಿ. (ಸ್ಪೆಷಲ್ ಚಹಾ). ಚಹಾದ ಅಂಗಡಿಯಲ್ಲಿ ಸಿಗುವ ಎಲ್ಲ ತಿನ್ನುವ ಖಾರ ಪದಾರ್ಥಗಳನ್ನು ಚೂಡಾದಲ್ಲಿ ಹಾಕುವುದರ ಮೂಲಕ ಸಿದ್ಧವಾಗುವ 'ಸಂಗೀತ'. ಜೋರಾಗಿ ಇದ್ದರೂ ಕಿವಿಗೆ ಇಂಪಾಗಿ ಕೇಳುವ ಹಿಂದಿ ಸಿನಿಮಾ ಹಾಡುಗಳು : 'ತಕದೀರ ಕಾ ಫಸಾನಾ'. 'ಏ

ಮಾಲಿಕ್ ತೇರೆ ಬಂದೇ ಹಂ', 'ಜಿಸ್ ದೇಶಮೆ ಗಂಗಾ ಬಹತೀ ಹೈ', 'ಜಿಂದಗಿ ಕ್ಯಾ ಹೈ ಮನ್ ಕೆ ದರಿಯಾ ಹೈ', 'ಮೇರೆ ಮನ ಡೋಲೆ', 'ಜೋ ವಾದಾ ಕಿಯಾ ತೋ ನಿಭಾನ ಪಡೇಗಾ', 'ಪ್ಯಾರ್ ಕಿಯಾ ತೋ ಡರನಾ ಕ್ಯಾ' ಇಂಥ ಕರ್ಣಮಧುರ ಹಾಡುಗಳನ್ನು ಎಲ್ಲೆಂದರಲ್ಲಿ ನೂರಾರು ಲೌಡ್‌ಸ್ಪೀಕರ್‌ಗಳು ಬಿತ್ತರಿಸುತ್ತಿದ್ದವು. ಇಂಥ ತಾತ್ಕಾಲಿಕ ಹೋಟೆಲ್‌ಗಳಲ್ಲಿ ದುಡಿಯುವ ಸಹಸ್ರಾರು ಮಂದಿ ಹುಡುಗರು, ಯುವಕರು ಮತ್ತು ಮಧ್ಯ ವಯಸ್ಕರು ಸೋತು ಸುಣ್ಣವಾಗಿರುತ್ತಿದ್ದರು. ನೆನಪಿನಂಗಳದಲ್ಲಿ ಅವರ ಮುಖಗಳು ಇನ್ನೂ ಕಾಣಿಸುತ್ತಿವೆ, ದುಃಖಿಗೊಳಿಸುತ್ತಲೇ ಇವೆ.

ಈ ಜಾತ್ರೆಯಲ್ಲಿ ಬಡಿಗೆಗಳನ್ನು ಕೊಳ್ಳುವುದೊಂದು ವಿಶೇಷ. ಹಿಡಿಯಲು ಅನುಕೂಲವಾಗುವಷ್ಟು ದಪ್ಪನೆಯ ಬತ್ತದ ಬಡಿಗೆಗಳಿಗೆ ಕೇರಿನ ರಸದಿಂದ ಡಿಸೈನ್ ಮಾಡಿ ಸಿಂಗರಿಸಿರುತ್ತಿದ್ದರು. ಈ ಜಾತ್ರೆಯಲ್ಲಿ ಮನೆಗೆ ಮತ್ತು ಒಕ್ಕಲುತನಕ್ಕೆ ಬೇಕಾದ ಎಲ್ಲ ವಸ್ತುಗಳು ಕೂಡ ಸಿಗುತ್ತಿದ್ದವು. ಕೃಷಿ ಉಪಕರಣಗಳು, ನೀರಾವರಿ ಪಂಪ್‌ಸೆಟ್‌ಗಳು, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ, ಉತ್ತಮ ತಳಿಯ ಬೀಜಗಳು ಹೀಗೆ ಎಲ್ಲವನ್ನೂ ಉತ್ಪಾದಿಸುವ ಕಂಪನಿಗಳು ವಸ್ತುಪ್ರದರ್ಶನದಲ್ಲಿ ಭಾಗವಹಿಸುತ್ತಿದ್ದವು. ಶಫರ್ಡ್ ಹಾಲ್ (ಶಿವಾನುಭವ ಮಂಟಪ)ನಲ್ಲಿ ಕೃಷಿ ಉತ್ಪನ್ನಗಳ ಪ್ರದರ್ಶನ ನಡೆಯುತ್ತಿತ್ತು. ಹಿಂದೆಂದೂ ನೋಡದಂಥ ದಪ್ಪ ದಪ್ಪ ಕುಂಬಳಕಾಯಿ, ಪಪಾಯಿ, ಜೋಳದ ತೆನೆ, ಹಳ್ಳಿಗಳ ಮಾಡೆಲ್, ಹೊಸ ನೀರಾವರಿ ವ್ಯವಸ್ಥೆಯ ಮಾದರಿ, ಅರಣ್ಯ ಮತ್ತು ವನ್ಯಜೀವಿಗಳ ಪ್ರತಿಸೃಷ್ಟಿ ಮುಂತಾದವು ಮೋಹಕ ಜಗತ್ತನ್ನು ಸೃಷ್ಟಿಸುತ್ತಿದ್ದವು. ಅಪರಾಧಗಳ ಬಗ್ಗೆ ಮಾಹಿತಿ ಒದಗಿಸುವ ಪೊಲೀಸ್ ಮಳಿಗೆಗಳಿರುತ್ತಿದ್ದವು. ಕುಸ್ತಿಗಳು ಪ್ರತಿದಿನ ನಡೆಯುತ್ತಿದ್ದವು. ಕೊನೆಯ ದಿನ ಬೆಳ್ಳಿಬಂಗಾರದ ಕಡಗ ಗೆಲ್ಲುವ ಕುಸ್ತಿಗಳಾದ ಜಂಗಿ ನಿಕಾಲಿ ಕುಸ್ತಿಗಳನ್ನು ನೋಡಲು ಹತ್ತಾರು ಸಹಸ್ರ ಜನ ಮದ್ದು ಸುಡುವ ಕಣಿವೆಯಲ್ಲಿ ಸೇರುತ್ತಿದ್ದರು. ಹೊರ್ತಿ ಒಡ್ಡನಂಥ ಪೈಲವಾನ್ ಅಖಾಡಕ್ಕೆ ಬರುವುದನ್ನು ನೋಡುವುದೇ ಒಂದು ಸಂಭ್ರಮ. ಹಲಗೆ ಬಾರಿಸುತ್ತ ಕೊಂಬು ಊದುತ್ತ, ಕೆಂಪು ಬಟ್ಟೆಯನ್ನು ಹಾರಿಸುತ್ತ ಆ ಕಡುಗಪ್ಪು ಸುಂದರಾಂಗನನ್ನು ಕರೆತಂದಾಗ ಜನ ಮುಗಿಲು ಮುಟ್ಟುವ ಹಾಗೆ ಹರ್ಷೋದ್ಗಾರ ತೆಗೆದದ್ದು ಇನ್ನೂ ನೆನಪಿದೆ. ಆತನ ಗತ್ತು ಗಾಂಭೀರ್ಯ, ಸಡ್ಡು ಹೊಡೆದು 'ಸಮೂಹ ಸನ್ನಿ' ಹಿಡಿಸುವ ಚಾಕಚಕ್ಯತೆ ಎಲ್ಲವೂ ನೆನಪಿವೆ. ಇಂಥ ಅನೇಕ ಪೈಲವಾನರು ವಿಜಾಪುರದ ನಗರ ದೇವತೆ ಸಿದ್ಧರಾಮೇಶ್ವರನ ಜಾತ್ರೆಯಲ್ಲಿ ತಮ್ಮ ಅದೃಷ್ಟ ಖಿಲಾಯಿಸುವ ಸಂದರ್ಭಕ್ಕೆ ಕಾಯುತ್ತಿದ್ದರು. ಜಾತ್ರೆಯ ಕೊನೆಯ ದಿನ ಮದ್ದು ಸುಡುವ ಕಾರ್ಯಕ್ರಮವಿರುತ್ತಿತ್ತು. ಆ ರಾತ್ರಿ ಲಕ್ಷಾಂತರ ರೂಪಾಯಿ ಮೌಲ್ಯದ ಬಾಣ ಬಿರುಸುಗಳನ್ನು ಸುಡುವರು. ಕತ್ತಲೆಯಲ್ಲಿ ಬಣ್ಣಬಣ್ಣಗಳಿಂದ ಕೂಡಿದ ಕನಸಿನ ಲೋಕ ಸೃಷ್ಟಿಯಾಗುವುದನ್ನು ನಾ ನೋಡಿದ್ದು ಅಲ್ಲಿಯೇ.

ಜಾತ್ರೆಯ ಸಂದರ್ಭದಲ್ಲಿ ಹತ್ತಾರು ದಿನಗಳ ಕಾಲ ಸಿದ್ಧೇಶ್ವರ ಗುಡಿಯ ಮುಂದೆ ಎಸ್.ಎಸ್. ಹೈಸ್ಕೂಲಿನ ಆಟದ ಮೈದಾನದಲ್ಲಿ, ಇತರೆ ಆಯಕಟ್ಟಿನ ಸ್ಥಳಗಳಲ್ಲಿ ಸಣ್ಣಾಟ-

ದೊಡ್ಡಾಟ, ಬೈಲಾಟಗಳು ಪ್ರತಿದಿನ ನಡೆಯುತ್ತಿದ್ದವು. ಶ್ರೀಕೃಷ್ಣಪಾರಿಜಾತದ ಶ್ರೀಕೃಷ್ಣ ಪಾತ್ರಧಾರಿ ಜಮಖಂಡಿ ಅಪ್ಪಾಲಾಲನನ್ನು ನೋಡಲು ಹತ್ತಾರು ಸಹಸ್ರ ಜನ ಮುಗಿಬೀಳುತ್ತಿದ್ದರು. ಅಪ್ಪಾಲಾಲ ಸಾಹೇಬರು ಶ್ರೀಕೃಷ್ಣನ ಅವತಾರವಿರಬಹುದೇ ಎನ್ನುವಷ್ಟರ ಮಟ್ಟಿಗೆ ಆ ಪಾತ್ರದ ಜೊತೆ ಅವರ ತಾದಾತ್ಮ್ಯ ಇತ್ತು. ಆ ಧ್ವನಿ, ಆ ಗಾಂಭೀರ್ಯ, ಆ ನಟನಾ ಕೌಶಲ ಈಗೆಲ್ಲ ಕನಸಿನ ಮಾತು. ಜಮಖಂಡಿ ಕಡೆಯ ಮದರಖಂಡಿ ಗ್ರಾಮದವರ 'ಹೇಮರೆಡ್ಡಿ ಮಲ್ಲಮ್ಮ' ನಾಟಕ ಎಷ್ಟು ಪ್ರಸಿದ್ಧವಾಗಿತ್ತೆಂದರೆ ಜನ ಅದಕ್ಕೆ 'ಮದರಖಂಡಿ ಮಲ್ಲಮ್ಮ' ಎಂದೇ ಕರೆಯುತ್ತಿದ್ದರು. ಆ ನಾಟಕದಲ್ಲಿ ಪ್ರತ್ಯಕ್ಷನಾಗುವ ಶಿವನ ಕೊರಳಲ್ಲಿ ಜೀವಂತ ನಾಗರಹಾವು ಇರುತ್ತಿತ್ತು. ಅದು ಅವನ ತಲೆಯ ಮೇಲೆ ಹೆಡೆ ತೆಗೆದು ಆಡುತ್ತಿತ್ತು!

ಹೆಣ್ಣು ಹೆಚ್ಚೋ ಗಂಡು ಹೆಚ್ಚೋ ಎನ್ನುವ ಹರದೇಶಿ ನಾಗೇಶಿ ಡಪ್ಪಿನಾಟ ರಾತ್ರಿ ಇಡೀ ನಡೆಯುತ್ತಿತ್ತು. ಹೆಣ್ಣಿನ ಪರವಾಗಿ ಹೆಣ್ಣು ವಾದಿಸುತ್ತ ಹಾಡುವ ರೀತಿ, ಆ ಧೈರ್ಯ, ಸ್ಥೈರ್ಯ, ಹಟ ಮತ್ತು ಏಕಾಗ್ರತೆಯಲ್ಲಿ ಸ್ತ್ರೀವಾದವನ್ನು ಕೇಳುವುದು ಒಂದು ಸುಖ.

ಸಂಕ್ರಮಣದ ನಂದಿಕೋಲುಗಳು. ಅವುಗಳ ಮಧ್ಯೆ ಇನ್ನೂ ಎತ್ತರವಾದ, ಭಾರವಾದ ಮತ್ತು ಸುಂದರವಾದ ನಾಗನಂದಿಕೋಲು. ಅವುಗಳನ್ನು ಹೊತ್ತವರು, ಬೆಂಬಲವಾಗಿ ಸುತ್ತ ಇದ್ದವರು, ಧೋತ್ರ, ರುಮಾಲು ಮತ್ತು ಬಾರಾಬಂಧಿ ಧರಿಸಿ ಚಳ್ಳಂ ಬಾರಿಸುತ್ತ, ತಾಳಕ್ಕೆ ಸರಿಯಾಗಿ ಕುಣಿಯುವವರು ಎಲ್ಲರೂ ನನ್ನೊಳಗೇ ಇದ್ದಾರೆ. ವಿಜಾಪುರ ಬಿಟ್ಟ ನಂತರ ಅನೇಕ ವರ್ಷಗಳವರೆಗೆ ನಾನು ಸಂಕ್ರಮಣದ ವೇಳೆ ವಿಜಾಪುರಕ್ಕೆ ಹೋಗುವ ಪರಿಪಾಠವಿಟ್ಟುಕೊಂಡಿದ್ದೆ. ಆಗ ನನ್ನ ಬಾಲ್ಯ ಸ್ನೇಹಿತರನೇಕರು ಸಿಗುತ್ತಿದ್ದರು. ಸಂಕ್ರಮಣದಲ್ಲಿ ಕುಸರೆಳ್ಳು ಕೊಡುವುದು ಮತ್ತು ಆ ಸಂದರ್ಭದಲ್ಲಿ ಕುಸರೆಳ್ಳಿನ ಚಿಕ್ಕ ಪ್ಯಾಕೆಟ್‌ನಿಂದ ಕೂಡಿದ ಸಂಕ್ರಮಣ ಶುಭಾಶಯ ಪತ್ರಗಳನ್ನು ಪೋಸ್ಟ್ ಮಾಡುವುದು ಸಂತಸದ ವಿಷಯಗಳಾಗಿದ್ದವು. ಶಾಲೆ, ಹೈಸ್ಕೂಲುಗಳಿದ್ದಾಗ ಯಾವುದೇ ಕೆಟ್ಟ ಗಳಿಗೆಯಲ್ಲಿ ಕೆಲವು ಗೆಳೆಯರ ಜೊತೆ ಪಿ (ಮಾತು) ಬಿಡುತ್ತಿದ್ದೆವು. ಆಮೇಲೆ ಮಾತನಾಡುವ ತೀವ್ರತೆ ಬಹಳಷ್ಟಿದ್ದರೂ ಅಭಿಮಾನದ ಕಾಟದಿಂದಾಗಿ ದಾರಿ ಸುಗಮವಾಗುತ್ತಿರಲಿಲ್ಲ. ಆದರೆ ನಮಗೆ ವರ್ಷದಲ್ಲಿ ಎರಡು ದಿನಗಳು ತುಂಬ ಖುಷಿ ಕೊಡುತ್ತಿದ್ದವು. ಅಂದು ನಮಗಾಗಿ ಸ್ವರ್ಗದ ಸುಖದ ಬಾಗಿಲುಗಳು ತೆರೆದಿರುತ್ತಿದ್ದವು. ಒಂದು ಸಂಕ್ರಮಣದಲ್ಲಿ ಕುಸರೆಳ್ಳು ಹಂಚುವ ದಿನ. 'ನಾವೂ ನೀವೂ ಎಳ್ಳು ಬೆಲ್ಲದ್ಹಾಂಗ ಇರೂನ್ರಿ' ಎನ್ನುತ್ತ ಕುಸರೆಳ್ಳು ಹಂಚುತ್ತಿದ್ದೆವು. ಇನ್ನೊಂದು ದಸರಾದಲ್ಲಿ ಬನ್ನಿ ಮುಡಿಯುವ ದಿನ. ಬನ್ನಿ ಪತ್ರೆಗಳನ್ನು ಒಯ್ದು 'ನಾವೂ ನೀವೂ ಬಂಗಾರದ್ಹಾಂಗ ಇರೂನ್ರಿ' ಎಂದು ಕೊಡುತ್ತಿದ್ದೆವು. ಈ ಎರಡೂ ಸಂದರ್ಭದಲ್ಲಿ ಮಾತು ಬಿಟ್ಟ ಗೆಳೆಯರ ಜೊತೆ ಮಾತನಾಡುವ ಕ್ಷಣಗಳು ಸೃಷ್ಟಿಯಾಗುತ್ತಿದ್ದವು. ವರ್ಷಗಟ್ಟಲೆ ಮುಖ ತಿರುಗಿಸಿಕೊಂಡಿರುತ್ತಿದ್ದ ಹಿರಿಯರು ಕೂಡ ಈ ಸಂದರ್ಭದಲ್ಲಿ ಮಾತನಾಡುತ್ತಿದ್ದರು. ಹೀಗೆ ಒಂದು ಜಾತ್ರೆ ಎನ್ನುವುದು ಮನುಷ್ಯನ ಆನಂದ, ಸ್ವಾತಂತ್ರ್ಯ, ಹೊಸದನ್ನು ಕಲಿಯುವುದು, ಕಲೆ ಸಾಹಿತ್ಯ ಪ್ರಜ್ಞೆ ಬೆಳೆಸುವುದು, ಸಂಬಂಧಗಳನ್ನು ಕುದುರಿಸುವುದು ಹೊಸ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಬಗ್ಗೆ ತಿಳಿವಳಿಕೆ ಪಡೆಯುವುದು, ಮಾರುವುದು, ಕೊಳ್ಳುವುದು, ಅನುಭವವನ್ನು

ವಿಸ್ತರಿಸಿಕೊಳ್ಳುವುದು ನಡೆಯುತ್ತಿತ್ತು. ಸಹಸ್ರಾರು ಕುಟುಂಬಗಳು ಒಂದು ಜಾತ್ರೆಯಿಂದ ಇನ್ನೊಂದು ಜಾತ್ರೆಗೆ ವಸ್ತುಗಳನ್ನು ಮಾರಾಟಕ್ಕೆ ಒಯ್ಯುತ್ತ ಜೀವಮಾನ ಕಳೆಯುತ್ತಿದ್ದವು. ಆ ನೋವು ಆ ಸುಖ ಎಲ್ಲವೂ ಬದುಕಾಗಿತ್ತು. ಜಾತ್ರೆಯಲ್ಲಿ ತೆಗೆಸಿಕೊಂಡ ಸವಾ (1.25) ರೂಪಾಯಿ ಫೋಟೊ ಮಾತ್ರ ಜೊತೆಯಲ್ಲಿ ಉಳಿಯುತ್ತಿತ್ತು. ಕಾರು, ಸ್ಕೂಟರ್, ದಿಲೀಪ ಕುಮಾರ್, ವೈಜಯಂತಿಮಾಲಾ, ಜಾನಿವಾಕರ್ ಮುಂತಾದ ವಸ್ತು ಮತ್ತು ನಾಯಕ-ನಾಯಕಿಯರ ಕಟ್‌ಔಟ್‌ಗಳ ಜೊತೆ ಫೋಟೊ ತೆಗೆದುಕೊಂಡು ಜನ ಮನೆಯಲ್ಲಿ ಹಚ್ಚುತ್ತಿದ್ದರು. ಒಂದು ಗಂಟೆಯಲ್ಲಿ ಈ ಫೋಟೋ ಸಿಗುತ್ತಿತ್ತು. ಕಲರ್ ಬೇಕೆಂದರೆ ಬಣ್ಣ ಕುಂಚದೊಂದಿಗೆ 'ಆರ್ಟಿಸ್ಟ್' ರೆಡಿ ಇರುತ್ತಿದ್ದ.

ಜಾತ್ರೆ ಎಂಬುದು ಸಂಪ್ರದಾಯ, ಪರಂಪರೆ, ವ್ಯವಹಾರ ಜ್ಞಾನ, ಕಲಾಜ್ಞಾನಗಳಿಂದ ಕೂಡಿದ ನೆನಪಿನ ಆಗರ. ಜನಸಾಮಾನ್ಯರ ವಿಶ್ವವಿದ್ಯಾಲಯ. ಬದುಕಿನ ಆಸರೆ. ಮಾನವನ ಸಾಂಸ್ಕೃತಿಕ ಸಂಬಂದಗಳ ಬೆನ್ನೆಲುಬು. ಆದರೆ ಕಳೆದ ಒಂದು ದಶಕದಲ್ಲಿ ಮನುಷ್ಯನ ಈ ಅನುಭವಕ್ಕೆ, ಪ್ರತಿಭೆಗೆ ಮತ್ತು ನಿಷ್ಠೆಗೆ ಜಾಗತೀಕರಣದ ಮಾರುಕಟ್ಟೆಯಲ್ಲಿ ಕವಡಿ ಕಿಮ್ಮತ್ತೂ ಸಿಗುತ್ತಿಲ್ಲ. ಇಂಥ ಒಂದು ಸುವ್ಯವಸ್ಥಿತವಾದ ಜಾತ್ರೆಗೆ ಸಹಸ್ರಾರು ಜನ ಬುದ್ಧಿವಂತರ ಅವಶ್ಯಕತೆ ಇರುತ್ತಿತ್ತು. ಅಲ್ಲಿ ಎತ್ತುಗಳಿಗೆ, ಹೋರಿಗಳಿಗೆ ಬಹುಮಾನ ನೀಡುವಾಗ ಸ್ವಜನ ಪಕ್ಷಪಾತವಿರುತ್ತಿರಲಿಲ್ಲ. ನಾಲ್ಕು ಜನ ಏನಂದಾರು ಎಂಬ ಪ್ರಜ್ಞೆಗಿಂತಲೂ ಹೆಚ್ಚಾಗಿ ಯೋಗ್ಯತೆ ಇರುವುದನ್ನು ಆಯ್ಕೆ ಮಾಡಬೇಕೆಂಬ ಭಾವನೆ ಇರುತ್ತಿತ್ತು. ಜನ ಎಷ್ಟು ಕುಶಾಗ್ರಮತಿಗಳೆಂದರೆ ದನಗಳ ಜಾತ್ರೆಯಲ್ಲಿ ಸುತ್ತಾಡಿದ ನಂತರ ಈ ಜೋಡಿಗೆ ಮೊದಲ ಬಹುಮಾನ, ಈ ಜೋಡಿಗೆ ಎರಡನೇ ಬಹುಮಾನ ಮುಂತಾಗಿ ನಿರ್ಧರಿಸಿಯೇ ಬಿಡುತ್ತಿದ್ದರು. ಹೀಗೆ ಲಕ್ಷಾಂತರ ಜನರ ಜೀವನಾಡಿಯಾಗಿದ್ದ ಸಂಕ್ರಮಣದಲ್ಲಿ ಒಂದು ಸಲ ವಿಜಾಪುರಕ್ಕೆ ಧಾವಿಸುವಾಗ ಏನಾಯಿತೆಂದರೆ, ಅಂದು ರಾತ್ರಿ 8 ಗಂಟೆಗೆ ಬಸ್ ನಿಲ್ದಾಣದಿಂದ ಟಾಂಗಾದಲ್ಲಿ ಕುಳಿತು ಮನೆಯ ಕಡೆಗೆ ಹೊರಟೆ. ದಾರಿಯಲ್ಲಿ ನಂದಿಕೋಲುಗಳು ಕಂಡವು. ಜೊತೆಗೆ ಹತ್ತಾರು ಜನ ಇದ್ದರು. ಜನರ ಉತ್ಸಾಹವೇಕೆ ಕುಂದಿದೆ. ಯಾವುದೇ ಹುರುಪು ಕಾಣುತ್ತಿಲ್ಲವಲ್ಲ ಎಂದು ಮನಸ್ಸು ಅಳುಕಿತು. ನನ್ನ ಬಾಲ್ಯವನ್ನು ಮರಳಿ ತರುತ್ತಿದ್ದ ಈ ಜಾತ್ರೆಯ ಬಗ್ಗೆ ನಾನು ಎಷ್ಟೊಂದು ಹಚ್ಚಿಕೊಂಡಿದ್ದೆನೆಂದರೆ ನನ್ನ ಕಾಮ್ರೇಡ್‌ಗಳು ನನ್ನ ಈ ಭಾವನಾತ್ಮಕ ಸಂಬಂಧದ ಬಗ್ಗೆ ನಗುವ ಹಾಗಾಗಿತ್ತು.

ಟಾಂಗಾ ಹಾಗೇ ಮುಂದುವರಿಯಿತು. ಟಾಂಗಾವಾಲಾ ನನಗೆ ಬಂಧುವಿನ ಹಾಗೆ ಕಾಣುತ್ತಿದ್ದ. ವಿಜಾಪುರದ ಬಡವರ ನಯ ನಾಜೂಕು, ಅಂತಃಕರಣ ಎಲ್ಲವೂ ಮೈವೆತ್ತಂತಿದ್ದ ಆ ವಿಮ್ರ ಭಾವದ ಮತ್ತು ನಗುಮುಖದ ಟಾಂಗಾವಾಲನ ಜೊತೆ ಅದೂ ಇದೂ ಮಾತನಾಡುತ್ತಿದ್ದೆ. ಎದುರಿಗೆ ದೊಡ್ಡದೊಂದು ಕಟ್ಟಡ ಕಾಣಿಸಿತು. ಅದರ ಎದುರು ಸಹಸ್ರಾರು ಸೈಕಲ್‌ಗಳ ರಾಶಿ ಕಂಡಿತು. ಇದೇನು ಎಂದು ಕೇಳಿದೆ. 'ಅದೂ ದೊಡ್ಡ ಮನೀರಿ, ಆದರ ಅದರೊಳಗೆ ಥೇಟರ್ ಐತ್ರಿ, ಅದರಾಗ ಅದೇನೋ ಬ್ಲೂ ಫಿಲಂ ಅಂತ್ರಿ, ತೋರಸ್ತಾರ್ರಿ. ಜನಾ ಅಲ್ಲೇ ಮುಗಿ ಬೀಳತಾರ್ರಿ. ದಿನಾ ರಾತ್ರಿ ಕೂಡಿ ಹತ್ತ ಆಟಾ ತೋರಸ್ತಾರ ನೋಡ್ರಿ" ಎಂದ. ಬಹಳ ನೋವಾಯಿತು.

ಗಾಢವಾದ ಮೌನ ಆವರಿಸಿತು. ಆ ಮನೆಯ ಮಾಲೀಕನ ತಮ್ಮ ನನ್ನ ಬಾಲ್ಯ ಸ್ನೇಹಿತ. ಪ್ರಾಥಮಿಕ ಶಾಲೆಯಲ್ಲಿ ಇದ್ದಾಗಲೇ ನಾನು ಅವರ ಮನೆಯಲ್ಲಿ 'ನನ್ನ ನಲ್ಲ' ಓದಿದ್ದು. ಅದನ್ನು ಬರೆದ ಖ್ಯಾತ ದಾರ್ಶನಿಕ ಕವಿ ಹಲಸಂಗಿ ಚನ್ನಮಲ್ಲಪ್ಪನವರು ಆ ನನ್ನ ಗೆಳೆಯನ ಸೋದರ ಮಾವ!

ನಮ್ಮ ಉತ್ಪಾದನಾ ವ್ಯವಸ್ಥೆ, ಉತ್ಪಾದನಾ ಸಾಧನಗಳು, ಉತ್ಪಾದನಾ ಪದ್ಧತಿ ಮತ್ತು ಮಾರುಕಟ್ಟೆ ಪದ್ಧತಿ ಬದಲಾದಂತೆಲ್ಲ ನಮ್ಮ ಸಾಂಸ್ಕೃತಿಕ ನೆಲೆಗಳು ನಮಗರಿಯದಂತೆಯೇ ಸೂಕ್ಷ್ಮವಾಗಿ ಬದಲಾಗುತ್ತ ಹೋಗುತ್ತವೆ. ಒಂದು ಸಾಂಸ್ಕೃತಿಕ ಪರಿಸರದಲ್ಲಿ ಅತಿ ಮುಖ್ಯವಾದವನು ಬದಲಾದ ಪರಿಸ್ಥಿತಿಯಲ್ಲಿ ನಿರುಪಯುಕ್ತನಾಗಿ ಕಾಣುತ್ತಾನೆ. ಸಾಮ್ರಾಜ್ಯಶಾಹಿ ಸಂಸ್ಕೃತಿಯ ಮುಂದೆ ತೃತೀಯ ಜಗತ್ತಿನ ಸಂಸ್ಕೃತಿಗಳು ನೀರಿನಿಂದ ಹೊರಬಿದ್ದ ಮೀನುಗಳ ಹಾಗೆ ಬಾಯಿ ಬಿಡುತ್ತಿವೆ!

❑

ಸ್ವಾತಂತ್ರ್ಯದ ಸಂಕೋಲೆಗಳು

ಜಿ. ರಾಜಶೇಖರ್

ಗಿರೀಶ್ ಕಾರ್ನಾಡರ, "ಟೀಪೂ ಕಂಡ ಕನಸು" ನಾಟಕದ ಮೊದಲ ಅಂಕದ ಒಂದು ದೃಶ್ಯದಲ್ಲಿ ಟೀಪೂ, ತನ್ನ ಆಸ್ಥಾನಿಕ ಗುಲಾಮ್ ಅಲಿ ಜೊತೆ ಫ್ರಾನ್ಸ್ ದೇಶದೊಂದಿಗೆ ಸಂಧಾನ ಏರ್ಪಡಿಸಿಕೊಳ್ಳುವ ಬಗ್ಗೆ ಮಾತು ನಡೆಸಿದ್ದಾನೆ. ಫ್ರೆಂಚ್ ಸೈನ್ಯದ ನೆರವಿನಿಂದ ರಾಜ್ಯವನ್ನು ಕಬಳಿಸಲು ಹೊಂಚು ಹಾಕಿರುವ ಬ್ರಿಟಿಷರನ್ನು ದೂರವಿಡುವುದು ಅವನ ಯೋಜನೆ. ಬ್ರಿಟಿಷ ವಸಾಹತುಶಾಹಿಯ ಮೊದಲ ದಿನಗಳಲ್ಲಿಯೇ ಅದರ ಆಕ್ರಮಣದ ಸ್ವರೂಪವನ್ನು ಯಥಾವತ್ತಾಗಿ ಗ್ರಹಿಸಿದವನು ಟೀಪೂ. ಈ ಅರ್ಥದಲ್ಲಿ ಅವನ ಬದುಕು, ದೇಶದ ಸ್ವಾತಂತ್ರ್ಯ ಚಳವಳಿಯ ಮುನ್ಸೂಚನೆಯಂತೆ ಕಾಣುತ್ತದೆ. ಆದರೆ ಬ್ರಿಟನ್ ಜೊತೆಗಿನ ತನ್ನ ಹಣಾಹಣಿಯಲ್ಲಿ ಫ್ರಾನ್ಸ್ ನೆರವಿಗೆ ಬಂದೀತು ಎಂದು ಯೋಚಿಸುವುದರಲ್ಲಿ ಟೀಪೂ ತನ್ನ ಕಾಲದ ಪರಿವೆಯಿಲ್ಲದ ಮುಗ್ಧನಂತಿದ್ದಾನೆ. ಫ್ರಾನ್ಸ್‌ಗೆ ರಾಯಭಾರಿಯಾಗಿ ಹೋಗಲಿರುವ ಗುಲಾಮ್ ಅಲಿಗೆ ಅವನು ಹೇಳುತ್ತಾನೆ..... ನಾನು ಫರಾಸೀ ದೊರೆಯೊಡನೆ ಒಂದು ಸಂಧಾನ ಮಾಡಿಕೊಳ್ಳಲು ತಯಾರಿದ್ದೇನೆ. ಅವರು ಹತ್ತು ಸಾವಿರ ಫರಾಂಸೀ ಸೈನಿಕರನ್ನು ಕಳಿಸಿಕೊಡಬೇಕು. ಆ ಸೈನಿಕರು ನನ್ನ ಕೈಕೆಳಗೆ ಇರತಕ್ಕದ್ದು. ಅದು ಮುಖ್ಯ. ನನ್ನ ಮಾತು ನಡಿಯತಕ್ಕದ್ದು. ನನಗೆ ಅಷ್ಟು ಸಹಾಯ ಸಿಕ್ಕರೆ ಸಾಕು; ನಾವು ಇಂಡಿಯಾ ನಕ್ಷೆಯನ್ನೇ ಬದಲಾಯಿಸಿಬಿಡಬಹುದು....." (ಟೀಪೂ ಕಂಡ ಕನಸು - ಮನೋಹರ ಗ್ರಂಥಮಾಲಾ, ಧಾರವಾಡ 2000. ಪುಟ 26)

ಫ್ರಾನ್ಸ್‌ನಲ್ಲಿ ಅವನು ಇಟ್ಟ ವಿಶ್ವಾಸ ಸುಳ್ಳಾದದ್ದು, ಟೀಪೂಗೇ ಸ್ವತಃ

ಮನವರಿಕೆಯಾಯಿತು. ಆದರೆ ಅಕಸ್ಮಾತ್ ಅವನಿಗೆ ಫ್ರೆಂಚ್ ಸೈನ್ಯದ ನೆರವು ದೊರೆತು, ಬ್ರಿಟಿಷರನ್ನು ಸೋಲಿಸಿದ್ದರೂ ಅವನ ದೈವ ಬದಲಾಗುತ್ತಿತ್ತೇನು? ಎಷ್ಟೆಂದರೂ ಬ್ರಿಟನ್ ಹಾಗೇ ಫ್ರಾನ್ಸ್ ಕೂಡ ಒಂದು ಯುರೋಪಿಯನ್ ರಾಷ್ಟ್ರ. ಬ್ರಿಟನ್ ಜೊತೆ ಅದಕ್ಕೆ ಜಗಳ ಏನಿದ್ದರೂ ವಸಾಹತುಗಳ ಕೊಳ್ಳೆಯನ್ನು ಹಂಚಿಕೊಳ್ಳುವ ವಿಷಯದಲ್ಲಿ ಮಾತ್ರ. ವಸಾಹತುಶಾಹೀ ರಾಷ್ಟ್ರವಾಗಿ, ಫ್ರಾನ್ಸ್ ಆಫ್ರಿಕಾ ಮತ್ತು ಮಧ್ಯ ಪ್ರಾಚ್ಯದಲ್ಲಿ ವರ್ತಿಸಿದ ರೀತಿ, ಬ್ರಿಟನ್‌ನ ಕುಟಿಲತೆ ಮತ್ತು ಕ್ರೌರ್ಯಗಳಿಗಿಂತ ಯಾವ ರೀತಿಯಲ್ಲೂ ಕಡಿಮೆ ಇರಲಿಲ್ಲ. ಬ್ರಿಟನ್‌ನ ಪ್ರಜಾಪ್ರಭುತ್ವದ ಹಾಗೆ ಫ್ರೆಂಚ್ ಮಹಾಕ್ರಾಂತಿಯ ಆದರ್ಶಗಳಾದ 'ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ'ಗಳಿಗೆ ಕೂಡ ವಸಾಹತುಗಳ ಒಳಗೆ ಪ್ರವೇಶವಿರಲಿಲ್ಲ. ಫ್ರಾನ್ಸ್ ಟೀಪೂ ಜೊತೆ ಸಹ ಬೇರೆ ರೀತಿಯಲ್ಲಿ ವರ್ತಿಸುತ್ತಿರಲಿಲ್ಲ ಎಂದು ಈಗ ನಾವು ಚರಿತ್ರೆಯ ಹಿನ್ನೋಟದಿಂದ ಖಾತ್ರಿಯಾಗಿ ಹೇಳಬಹುದು. ಟೀಪೂ ತನ್ನ ಕೈಕೆಳಗೆ ಫರಾಂಸೀ ಸೈನಿಕರು ಇರತಕ್ಕ ಮಾತಾಡುತ್ತಾನೆ. ವಸಾಹತುಶಾಹೀ ಚರಿತ್ರೆಯಲ್ಲೇ ಇಂತಹದ್ದು ನಡೆದಿಲ್ಲ. ಟೀಪೂ ಸೋಲನ್ನು ಬೆನ್ನಿಗೆ ಕಟ್ಟಿಕೊಂಡೇ ಬ್ರಿಟನ್ ವಿರುದ್ಧ ಸೆಣಸಿದವನು.

ಆದರೆ ಟೀಪೂ ತಪ್ಪಿಬಿದ್ದದ್ದು ಇದೊಂದು ಲೆಕ್ಕಾಚಾರದಲ್ಲಿ ಮಾತ್ರವಲ್ಲ. ಗಿರೀಶರ ನಾಟಕದ ಮೊದಲ ಅಂಕದ ಮೊದಲ ದೃಶ್ಯದಲ್ಲೇ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಟೀಪೂ ಮತ್ತು ಬ್ರಿಟಿಷರ ನಡುವೆ ಸಂಘರ್ಷ ಇರುವುದು ರಾಜ್ಯದ ಒಡೆತನಕ್ಕಾಗಿ ಮಾತ್ರವಲ್ಲ; ಅದು ಚರಿತ್ರೆಯ ಕುರಿತ ಎರಡು ಗ್ರಹಿಕೆಗಳ ನಡುವಿನ ಸಂಘರ್ಷವೂ ಹೌದು. ನಾಟಕದ ಶುರುವಿಗೇ 'ಅಧಿಕೃತ' ಅಂದರೆ ವಸಾಹತುಶಾಹಿಯ ಅಧಿಕೃತ ಇತಿಹಾಸಕಾರ ಸೈಯದ್ ಕಿರ್ಮಾನಿ, ಬ್ರಿಟಿಷ್ ಸೈನ್ಯಾಧಿಕಾರಿ, ಕರ್ನಲ್ ಕಾಲಿನ್ ಮೆಕೆಂಝಿಗೆ ಹೇಳುತ್ತಾನೆ. "…..ನಿಮ್ಮ ಇತಿಹಾಸ ಸಿದ್ಧವಾಗಿ ಬಿಟ್ಟಿದೆ." ಅವರು ಟೀಪೂವಿನ ಅವಸಾನದ ಬಗ್ಗೆ ಸಂಭಾಷಣೆ ನಡೆಸಿದ್ದಾರೆ. ಕಿರ್ಮಾನಿಗೆ ಟೀಪೂವಿನದ್ದು ಧಿರೋದಾತ್ತ ಮರಣ. ವಸಾಹತುಶಾಹೀ ದೃಷ್ಟಿಕೋನದ ಕಾಲಿನ್ ಮೆಕೆಂಝಿಯ ಪಾಲಿಗೆ ಅದು ಟೀಪೂ ತನಗೆ ತಾನೇ ತಂದುಕೊಂಡದ್ದು. ಎಲ್ಲ ಕಾಲಗಳಲ್ಲೂ, ಎಲ್ಲ ದೇಶಗಳಲ್ಲೂ ಚರಿತ್ರೆಯನ್ನು ಬರೆಯುವವರು ಗೆದ್ದವರೇ. ಟೀಪೂ ಮತ್ತು ಬ್ರಿಟಿಷರ ಸಂಘರ್ಷದಲ್ಲಿ ಮೆಕೆಂಝಿ ಗೆದ್ದವರ ಕಡೆಯವನು. ಕಿರ್ಮಾನಿ ಕೇವಲ ಲಿಪಿಕಾರ; ಅವನು ಬರೆಯುವುದು ಈಗಾಗಲೇ ಸಿದ್ಧವಾದ ಗೆದ್ದವರ ಚರಿತ್ರೆಯನ್ನು. ಬ್ರಿಟಿಷರು ಟೀಪೂನದ್ದು ಮಾತ್ರವಲ್ಲ, ಅವನಿಗಿಂತ ಹಿಂದಿನ ಭಾರತದ ಚರಿತ್ರೆಯನ್ನೂ ತಮ್ಮ ಕಣ್ಣೋಟಕ್ಕೆ ಸರಿಯಾಗಿ ಬರೆಸಿದರು. ಕಿರ್ಮಾನಿಗೆ ಇದು ಗೊತ್ತಿದೆ. ತನ್ನ ಮಾತಿನ ಎಳೆಯನ್ನೇ ಮುಂದುವರಿಸಿ ಆತ ಹೇಳುತ್ತಾನೆ "….ನನ್ನ ಸಂಸ್ಕೃತಿಯ ಪರವಾಗಿ ಮಾತಾಡೋ ಹಕ್ಕು ನನಗೆಲ್ಲಿದೆ? ಅದನ್ನು ಎಂದೋ ಕಳೆದುಕೊಂಡುಬಿಟ್ಟಿದ್ದೇನೆ." (ಪುಟ 4) ವಸಾಹತುಶಾಹಿಯಲ್ಲಿ ಸಾಮಾನ್ಯಪ್ರಜೆಗೆ ಹೇಗೋ ಹಾಗೆಯೇ ಬುದ್ಧಿಜೀವಿಗೂ ತನ್ನ ಕಾಲದ ಮತ್ತು 'ಸ್ವ'ದ ಅರಿವು ಬರುವುದು ಅವಮಾನದ ಮುಖಾಂತರವೇ.

ನಾಟಕದಲ್ಲಿ ಕಾಲಗತಿಗೆ ಸ್ಪಂದಿಸುವ, ಹೆಚ್ಚು ಸಂಕೀರ್ಣವಾದ ಇನ್ನೊಂದು ಬಗೆಗೆ ಸ್ವತಃ

ಟೀಪೂವೇ ದೃಷ್ಟಾಂತವಾಗಿದ್ದಾನೆ. ಭಾರತದ ಸಂಸ್ಥಾನಗಳ ಮೇಲೆ ಬ್ರಿಟನ್ ನಡೆಸಿದ ವಸಾಹತು ಶಾಹೀ ಆಕ್ರಮಣವನ್ನು ಹಾಗೆಂದೇ ಗುರುತಿಸಿದವರಲ್ಲಿ ಟೀಪೂ ಮೊದಲಿಗ. ಅದೇ ವೇಳೆಗೆ ಯುರೋಪ್‌ನ ವಿಜ್ಞಾನ, ತಂತ್ರಜ್ಞಾನಗಳ ಬಗ್ಗೆ ಅವನಷ್ಟು ಆಸಕ್ತಿ ಮೆಚ್ಚುಗೆ ಅವನ ಕಾಲದಲ್ಲಿ ಬೇರೆ ಯಾರಿಗೂ ಇರಲಿಲ್ಲ. ಈ ದೃಷ್ಟಿಯಿಂದಲೂ ಅವನ ವ್ಯಕ್ತಿತ್ವ ಭವಿಷ್ಯದ ಮುನ್ಸೂಚನೆ ಯಂತಿದೆ. ಟೀಪೂ ಎರಡು ವಿರುದ್ಧ ಸಂಗತಿಗಳ ಸೆಳೆತದಲ್ಲಿ ಸಿಕ್ಕಿಕೊಂಡವನು. ಅಧಿಕಾರದ ಮಟ್ಟಿಗೆ, ಬ್ರಿಟಿಷರು ಅವನ ಪ್ರತಿದ್ವಂದ್ವಿಗಳು. ಆದರೆ ವ್ಯಾಪಾರ ವಹಿವಾಟು, ತಂತ್ರಜ್ಞಾನಗಳ ಮಟ್ಟಿಗೆ ಅವರು ಅವನಿಗೆ ಗುರುಗಳು! ಅವನೇ ಹೇಳಿಕೊಳ್ಳುವಂತೆ "ಒಂಟೆಯ ಯುಗ ಮುಗಿದು ಹಡಗದ ಯುಗ ಪ್ರಾರಂಭವಾಗಿದೆ" (ಪುಟ 40) ಎಂದು ಟೀಪೂಗೆ ಕಲಿಸಿದವರೇ ಬ್ರಿಟಿಷರು. ವ್ಯಾಪಾರ ವಹಿವಾಟುಗಳ ಉಮೇದಿಯೇ ವಸಾಹತುಶಾಹಿಯ ಮುಖ್ಯ ಪ್ರೇರಣೆಗಳಲ್ಲಿ ಒಂದು ಎಂಬುದು ಸರಳ ಸಂಗತಿ. ಟೀಪೂವಿನ ಚಿಂತನೆಯಲ್ಲಿ ಅದಕ್ಕೂ ಆಳವಾದ ವಿರೋಧಾಭಾಸ ವೊಂದಿದೆ. ಕಾಲ ಮತ್ತು ಚರಿತ್ರೆಗಳನ್ನು ಟೀಪೂ ಗ್ರಹಿಸುವುದೇ ವಸಾಹತುಶಾಹಿಯ ಬೌದ್ಧಿಕ ವಿಧಾನಗಳಲ್ಲಿ. ಬ್ರಿಟಿಷರ ವ್ಯಾಪಾರೀ ಬುದ್ಧಿಯ ಹಿಂದೆ ಇರುವ ದುರಾಶೆ, ಅಲ್ಪತನಗಳನ್ನು ಟೀಪೂ ಗುರುತಿಸಿದ್ದಾನೆ. ಆದರೆ ಅದು ಅವನಿಗೆ 'ಮುಂದುವರಿದ' ನಾಗರೀಕತೆಯಂತೆಯೂ ಭಾಸವಾಗುತ್ತದೆ. 'ಒಂಟೆಯ ಯುಗ ಕಳೆದು ಹಡಗದ ಯುಗ' ಎನ್ನುವ ಅವನ ಮಾತಿನಲ್ಲಿ ಹಡಗಕ್ಕಿಂತ ಒಂಟೆ ಹಿಂದುಳಿದದ್ದು ಹಾಗಾಗಿ ಆ ಕಾಲವೂ 'ಹಿಂದುಳಿದದ್ದು' ಎಂದು ಮಾತ್ರ ಧ್ವನಿತವಾಗುವುದಿಲ್ಲ, ಒಂಟೆಯ ಯುಗ ಕಳೆದು ಹಡಗದ ಯುಗಕ್ಕೆ ಬರುವುದು ಅನಿವಾರ್ಯ ಮತ್ತು ಕಾಲದ ನಡೆಗೆ ಇರುವುದು ಅದೊಂದೇ ಹಾದಿ ಎಂಬ ತಿಳುವಳಿಕೆಯೂ ಆ ಮಾತಿನ ಹಿಂದೆ ಇದೆ... ಮೂಲತಃ ಇದು ಕಾಲ, ಚರಿತ್ರೆ ಮತ್ತು ಭವಿಷ್ಯಗಳ ಕುರಿತ ವಸಾಹತುಶಾಹೀ ಚಿಂತನೆ. ಈ ಚಿಂತನೆಯ ಪ್ರಕಾರ, ಪ್ರಾಚೀನ ಕಾಲದಿಂದ ವರ್ತಮಾನದವರೆಗೆ ಮನುಷ್ಯ ನಾಗರಿಕತೆ ಬೆಳೆಯುತ್ತಲೇ ಬಂದಿದೆ. ಹಡಗುಗಳ ಯುಗಕ್ಕೆ ಹೋಲಿಸಿದರೆ, ಒಂಟೆಯ ಯಗ ಹಿಂದುಳಿದದ್ದು. ಆದರೆ ವಿಮಾನಗಳ ಜೊತೆ ಹೋಲಿಕೆಯಲ್ಲಿ ಹಡಗು ಕೂಡ ಹಿಂದುಳಿದ ಸಂಪರ್ಕ ಸಾಧನ. ಪಶ್ಚಿಮದ ನಾಗರಿಕತೆ ಈಗ ವಿಮಾನಗಳ ಯುಗದ ಆಚೆಗೆ ಜಿಗಿಯುವ ಹಂತದಲ್ಲಿ ಅದು ಪ್ರೌಢಾವಸ್ಥೆಗೆ ತಲುಪಿದೆ. ಅದರ ಜೊತೆ ಹೋಲಿಕೆಯಲ್ಲಿ ಏಷ್ಯ, ಆಫ್ರಿಕಾ ಮತ್ತು ದ.ಅಮೆರಿಕಾದ ದೇಶಗಳು ಇನ್ನೂ ಶೈಶವಾವಸ್ಥೆಯಲ್ಲಿವೆ. ವಸಾಹತುಶಾಹಿ ತನ್ನಲ್ಲಿ ಅಳವಡಿಸಿಕೊಂಡ ಈ ಬೌದ್ಧಿಕ ನಿಲುವಿನಿಂದಾಗಿ ಯುರೋಪ್‌ನ ಅಧಿಕಾರಿಗಳು ಮಾತ್ರವಲ್ಲ ಬುದ್ಧಿಜೀವಿಗಳಿಗೆ ಕೂಡ, ವಸಾಹತುಗಳ ಜನ ಇನ್ನೂ ಬಾಲ್ಯಾವಸ್ಥೆಯಲ್ಲಿರುವ 'ಮುಗ್ಧ'ರ ಹಾಗೆ ಕಂಡರು. ಈ ಮುಗ್ಧತೆ ಒಂದು ನೈತಿಕ ಸ್ಥಿತಿ ಅಲ್ಲ. ಅದು ಕೇವಲ ಐಂದ್ರಿಕವಾದದ್ದು. ವಸಾಹತುಗಳ ಬಗ್ಗೆ, ಯುರೋಪ್, ಈ 'ಓರಿಯಂಟಲಿಸ್ಟ್' ಗ್ರಹಿಕೆಗಳ ಬಗ್ಗೆ ಎಡ್ವರ್ಡ್ ಸಯೀದ್ ಮಾಡಿರುವ ವಿಶ್ಲೇಷಣೆ ಈಗ ಸರ್ವವಿದಿತವಾಗಿರುವುದರಿಂದ ಆ ಬಗ್ಗೆ ಇಲ್ಲಿ ಲಂಬಿಸಬೇಕಾದ ಅಗತ್ಯವಿಲ್ಲ. ಗಿರೀಶರ ನಾಟಕ ಇದಕ್ಕೆ ಸಂಬಂಧಿಸಿದಂತೆ ಬಹಳ ಮುಖ್ಯವಾದ ಪ್ರಶ್ನೆಯೊಂದನ್ನು ನಮ್ಮ ಮುಂದೆ ಇಡುತ್ತದೆ. ಪಶ್ಚಿಮದ ತಂತ್ರಜ್ಞಾನ ಮತ್ತು ಆರ್ಥಿಕ ಅಭಿವೃದ್ಧಿಗಳ ಕುರಿತ ಆಕರ್ಷಣೆಯಿಂದಾಗಿ, ಟೀಪೂ ವಸಾಹತುಶಾಹಿಯ ಬೌದ್ಧಿಕತೆಯನ್ನು ಅನಾಮತ್ತಾಗಿ ಸ್ವೀಕರಿಸಿಬಿಟ್ಟನೆ? ಇತಿಹಾಸ ಅವನ

ಮಟ್ಟಿಗೂ 'ಸಿದ್ಧ'ವಾಗಿಬಿಟ್ಟಿತ್ತೆ? ಟೀಪೂ ಒಂದೆಡೆ ಕೇಳುತ್ತಾನೆ, "ವಿಲಾಯತ್ ಅನ್ನೋ ಪ್ರದೇಶನೇ ಇಲ್ಲ; ಅಂಗ್ರೇಜರು ಅನ್ನೋ ಜನನೇ ಇಲ್ಲ ಎಂದು ಕಣ್ಮುಚ್ಚಿ ಹಾಲು ಕುಡಿದೇನು ಪ್ರಯೋಜನ?" (ಪುಟ 22). ಇನ್ನೊಂದು ಸಂದರ್ಭದಲ್ಲಿ, ದೇಶೀಯ ಸಂಸ್ಥಾನಗಳನ್ನೆಲ್ಲ ನುಂಗಿ ನೊಣೆದು ಬ್ರಿಟಿಷರು ಮುಂದೊತ್ತಿ ಬರುವ ವಿದ್ಯಮಾನದ ಬಗ್ಗೆ ಆತ ಹೇಳುತ್ತಾನೆ, "ದೇವರನ್ನು ಸಾಕ್ಷಿಯಾಗಿಟ್ಟು ಹೇಳುತ್ತೇನೆ; ನಮ್ಮ ಹೊಸ್ತಿಲ ಮೇಲೆ ಅಂಗ್ರೇಜರ ನೆರಳು ಬೀಳೋದು ತಪ್ಪಿದ್ದಲ್ಲ" (ಪುಟ 30). ಆದರೆ ಯುರೋಪ್‌ನ ತಂತ್ರಜ್ಞಾನವೂ ಹೀಗೆಯೇ ಮುಂದೊತ್ತಿ ಬರುತ್ತದೆ; ನಾಗರೀಕತೆ ಸಾಗಿ ಬಂದಿರುವುದೇ ಆ ದಾರಿಯಲ್ಲಿ ಎಂಬ ತಿಳಿವಳಿಕೆಯೂ ಅವನದ್ದಾಗಿದೆ. ತಂತ್ರಜ್ಞಾನ ಅವನ ಮಟ್ಟಿಗೆ ವಸಾಹತುಶಾಹಿಯ ಸೋಂಕಿಲ್ಲದ ವಿಶ್ವಾತ್ಮಕ ಮೌಲ್ಯವಾಗಿದೆ! ಅವನು ಏಕಕಾಲಕ್ಕೆ ಬ್ರಿಟನ್‌ನಿಂದ ಆಕರ್ಷಿತನಾಗಿದ್ದಾನೆ; ಬ್ರಿಟನ್ ನಾಗರೀಕತೆ ಅನಿವಾರ್ಯ ಎನ್ನುತ್ತಿದ್ದಾನೆ; ಜೊತೆಗೆ ಅದರ ವಿರುದ್ಧವೇ ಹೋರಾಟ ನಡೆಸಿದ್ದಾನೆ. ಸೋಲು ಅವನ ಹಣೆಯಲ್ಲೇ ಬರೆದಿದೆ!

ಟೀಪೂವಿನ ಅಸ್ಮಿತೆಯಲ್ಲಿ ತನ್ನ ನಾಗರಿಕತೆಯ ಕುರಿತ ಕೀಳರಿಮೆಯ ಒಂದು ಎಳೆಯೂ ಸೇರಿಕೊಂಡಿದೆ. ಫ್ರಾನ್ಸ್‌ನಿಂದ ಅವನು ಸಂಸ್ಥಾನಕ್ಕೆ ಕರೆಯಿಸಲು ಉದ್ದೇಶಿಸಿದ್ದವರಲ್ಲಿ ವೈದ್ಯರು, ಬಡಗಿಗಳು, ಕಮ್ಮಾರರು, ನೇಕಾರರು ಮತ್ತು ಕೀಲಿಗಾರರೂ ಇದ್ದಾರೆ. ಪರಂಪರಾಗತವಾಗಿ ಈ ವೃತ್ತಿಗಳನ್ನು ನಡೆಸಿಕೊಂಡು ಬಂದ ಜನ ಅವನ ಸಂಸ್ಥಾನದಲ್ಲಿಯೇ ಇದ್ದರು. ಆದರೆ ಅವರ ತಾಂತ್ರಿಕತೆ 'ಹಿಂದುಳಿದದ್ದು' ತೋಟಗಾರಿಕೆಯಲ್ಲೂ ಅವನಿಗೆ ಯುರೋಪ್‌ನ ನಿಪುಣರೇ ಬೇಕು (ಪುಟ 27). ಆದರೆ ಟೀಪೂಗೆ ಯುರೋಪ್‌ನ ವಿಜ್ಞಾನ ತಂತ್ರಜ್ಞಾನಗಳಿಗಿಂತಲೂ ದೊಡ್ಡ ಪ್ರಲೋಭನೆ ಯುರೋಪ್‌ನ 'ರಾಷ್ಟ್ರೀಯವಾದ'. ಬ್ರಿಟನ್‌ಗೆ ತಾನು ಒಂದು ರಾಷ್ಟ್ರ ಎಂಬ ಅರಿವಿದೆ; ಅಸ್ಮಿತೆ ಇದೆ; ಅದರಿಂದಾಗಿ ಬ್ರಿಟಿಷ್ ಸೈನಿಕರು ಭಾರತದಲ್ಲಿ ಜೀವದ ಹಂಗು ತೊರೆದು ಯುದ್ಧ ಮಾಡುತ್ತಾರೆ; ಆದರೆ ಸಂಸ್ಥಾನದಲ್ಲಿ ತನ್ನ ಜನಗಳೇ ತನ್ನ ವಿರುದ್ಧ ಒಳ ಸಂಚು ನಡೆಸುತ್ತಿದ್ದಾರೆ ಎಂಬ ಅಳಲು ಅವನಿಗೆ (ಪುಟ 66-67). ನಾಟಕದಲ್ಲಿ ಇನ್ನೊಂದು ಕಡೆ, ಬ್ರಿಟಿಷರು ಟೀಪೂ ಮೇಲೆ ಹೇರಿದ ಒಪ್ಪಂದದ ಶರತ್ತುಗಳಲ್ಲಿ ಅವನ ಇಬ್ಬರು ಮಕ್ಕಳು ಒತ್ತೆಯಾಳುಗಳಾಗಬೇಕು ಎಂದು ವಿಧಿಸಿದ್ದರ ಬಗ್ಗೆ ಟೀಪೂ ಹೇಳುತ್ತಾನೆ, "ನಮ್ಮ ನಾಡಿನಲ್ಲೊಂದು ಹೊಸ ಭಾಷೆ ಬಂದಿದೆ; ಹೊಸ ಸಂಸ್ಕೃತಿ ಬಂದಿದೆ. ಅಂಗ್ರೇಜಿ! ಏಳು-ಎಂಟು ವರ್ಷದ ಕಂದಮ್ಮಗಳನ್ನು ಯುದ್ಧಕೈದಿಯಾಗಿ ಬಳಸಬಲ್ಲ ಸಂಸ್ಕೃತಿ" (ಪುಟ 52). ಟೀಪೂ ಈ ಭಾಷೆಯನ್ನು ಅಂಗ್ರೇಜಿ ಎನ್ನುತ್ತಿದ್ದಾನೆ. ಆದರೆ ಇದು ಫ್ರೆಂಚ್ ಅಥವಾ ಜರ್ಮನ್ ಕೂಡ ಆಗಬಹುದು! ವಾಸ್ತವವಾಗಿ ಇದು ಐರೋಪ್ಯರಾಷ್ಟ್ರೀಯವಾದ ಭಾಷೆ ಮತ್ತು ಸಂಸ್ಕೃತಿ. ಭಾರತದ ದೇಶೀಯ ಸಂಸ್ಥಾನಗಳಿಂದ ಹಿಡಿದು ಇಂದಿನ ಇರಾಕ್‌ವರೆಗೆ ತೃತೀಯ ಜಗತ್ತಿನವರು ಈ ಭಾಷೆ ಮತ್ತು ಸಂಸ್ಕೃತಿಗಳನ್ನು ಮತ್ತೆ ಮತ್ತೆ ಎದುರಿಸುತ್ತಿದ್ದಾರೆ.

ಟೀಪೂ ಬ್ರಿಟಿಷ್ ವಸಾಹತುಶಾಹಿಯ ಉದ್ದೇಶಗಳನ್ನು ಮನಗಂಡಿದ್ದ; ಅದನ್ನು ಆತ ಅಸಾಧಾರಣ ಧೈರ್ಯ ಮತ್ತು ಕಳಕಳಿಗಳಿಂದ ಎದುರಿಸಿದ ಕೂಡ. ಆದರೆ ಹಾಗೆ ಮಾಡುವಾಗ ಅವನು ಯುರೋಪ್‌ನ ನಾಗರೀಕತೆಯ ತರ್ಕವನ್ನು ತನ್ನದಾಗಿಸಿಕೊಂಡಿದ್ದ. ಬ್ರಿಟನ್‌ನ

ವಸಾಹತುಶಾಹಿಯನ್ನು ಅದರ ಅಸ್ತ್ರಗಳಿಂದಲೇ ಸೋಲಿಸುವುದು ಅವನ ನಿರ್ಧಾರವಾಗಿತ್ತು. ಅವನ ಅಚ್ಚುಮೆಚ್ಚಿನ ಆಟಿಗೆ - ಬ್ರಿಟಿಷ್ ಸೈನಿಕನನ್ನು ಕೆಡವಿ ಹಲ್ಲೆ ಮಾಡುತ್ತಿರುವ ಹುಲಿ - ಅವನ ರಾಜನೀತಿಗೆ ಒಂದು ರೂಪಕದಂತಿದೆ. ಚನ್ನಪಟ್ಟಣದ ಕಸುಬುಗಾರರು ಅಂತಹ ಹಿಂಸ್ರ ಆಟಿಗೆಗಳನ್ನು ಮಾಡಲು ನಿರಾಕರಿಸಿದಾಗ ಟೀಪೂ ಫ್ರಾನ್ಸ್‌ನಿಂದ ಅದನ್ನು ಮಾಡಿಸಿ ತರಿಸಿದ್ದರ ಬಗ್ಗೆ ನಾಟಕದಲ್ಲಿ ಒಂದೆಡೆ ಪ್ರಸ್ತಾಪವಿದೆ (ಪುಟ 39). ನಾಟಕದಲ್ಲಿ ಈ ಆಟಿಗೆ ಸಂಕೇತಿಸುವ ಹಿಂಸೆಯ ಸಂಕಲ್ಪದ ಬಗ್ಗೆ ಜಿಗುಪ್ಸೆ ಪಟ್ಟುಕೊಳ್ಳುವವಳು ಟೀಪೂವಿನ ಪತ್ನಿ ರುಕಯ್ಯಾ ಒಬ್ಬಳೇ. ಹಿಂಸೆಯನ್ನು ಹಿಂಸೆಯಿಂದಲೇ ಎದುರಿಸುವ, ಟೀಪೂವಿನ ಹೋರಾಟದ ಮಾರ್ಗವನ್ನು ಗಾಂಧೀಜಿಯ ವಿಚಾರಗಳ ಜೊತೆಗೆ ಇಟ್ಟು ನೋಡಿದರೆ, ಸ್ವಾತಂತ್ರ್ಯ ಮತ್ತು ದಾಸ್ಯ ಎರಡೂ ಹೊಸ ಬೆಳಕಿನಲ್ಲಿ ಕಾಣಿಸಿಕೊಳ್ಳುತ್ತವೆ. ಗಾಂಧೀಜಿ ವಸಾಹತುಶಾಹಿಯನ್ನು ವಿರೋಧಿಸುವುದರ ಜೊತೆ, ಅವರ ವೈಚಾರಿಕತೆಯನ್ನೂ ನಿರಾಕರಿಸಿದ್ದರು. 'ಹಿಂದ್ ಸ್ವರಾಜ್'ನಲ್ಲಿ ಗಾಂಧೀಜಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಟೀಪೂನ ವಿಚಾರಗಳಿಗೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿವೆ. ಭಾರತದ ಸ್ವಾತಂತ್ರ್ಯದ ಹೋರಾಟ ಬ್ರಿಟನ್ನನ್ನು ಅದರ ದಾಸ್ಯದಿಂದ ಬಿಡುಗಡೆ ಮಾಡೀತು ಎಂದು ಅವರು ಹಾರೈಸಿದ್ದರು. ಯುರೋಪ್‌ನ ನಾಗರಿಕತೆ ಟೀಪೂಗೆ ಆಕರ್ಷಣೀಯವಾಗಿ ಕಂಡರೆ, ಗಾಂಧೀಜಿ ಆ ಬಗ್ಗೆ ಹೇಳಿದ್ದು ಮಾರ್ಮಿಕವಾಗಿದೆ, "ಅಂತಹದ್ದು ಒಂದು ಇದೆ ಎಂದು ಯೋಚಿಸಲು ಚೆನ್ನಾಗಿರುತ್ತದೆ. It is a good idea" ನೌಕಾಯಾನದಲ್ಲಿ ಆದ ಆವಿಷ್ಕಾರಗಳು ಮತ್ತು ಔದ್ಯಮಿಕ ಕ್ರಾಂತಿ ಯುರೋಪ್‌ನ ವಸಾಹತುಶಾಹಿಗೆ ಕುಮ್ಮಕ್ಕು ನೀಡಿದರೆ, ಅಂತರಿಕ್ಷ ಯಾನದ ಹೊಸ ಸಾಧನೆಗಳಿಂದಾಗಿ 20ನೆಯ ಶತಮಾನದಲ್ಲಿ ಅಮೆರಿಕ ಇಡೀ ಭೂಮಂಡಲದ ಮೇಲೆ ತನ್ನ ಆಧಿಪತ್ಯವನ್ನು ಸ್ಥಾಪಿಸಿದೆ. ಯುರೋಪ್ ಮತ್ತು ಅಮೆರಿಕದ ಶಸ್ತ್ರಾಸ್ತ್ರಗಳಂತೂ, ವಿಜ್ಞಾನದ ಕೊಡುಗೆಗಳೇ ಆಗಿವೆ. ಜ್ಞಾನಯುಗದ ಮೌಲ್ಯಗಳಾದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸೆಕ್ಯುಲರ್ ರಾಷ್ಟ್ರ, ವೈಯಕ್ತಿಕ ಹೊಣೆಗಾರಿಕೆ, ಕಾನೂನಿನ ಆಳ್ವಿಕೆ ಮುಂತಾದವುಗಳನ್ನು ಮುಂದುಮಾಡಿ ಯುರೋಪ್ ತನ್ನನ್ನು ಸಮರ್ಥಿಸಿಕೊಂಡಿತು. ಆದರೆ ವಸಾಹತುಗಳನ್ನು ಲೂಟಿ ಮಾಡುವುದೊಂದೇ ಅದರ ಉದ್ದೇಶವಾಗಿತ್ತು. ಈ ಬಗ್ಗೆ ಎರಿಕ್ ಹಾಬ್ಸ್‌ಬಾಮ್ ಹೇಳುತ್ತಾರೆ, "ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಇದ್ದುದು ಕೇವಲ ಸ್ವಾರ್ಥ ಸಾಧನೆಯ ಉದ್ದೇಶ. ವಿಶ್ವಾತ್ಮಕ ಮೌಲ್ಯಗಳನ್ನು ವಸಾಹತುಗಳಲ್ಲಿ ನೆಲೆಗೊಳಿಸುವುದು ಯಾವತ್ತೂ ಅವರ ಗುರಿಯಾಗಿರಲಿಲ್ಲ. ಬ್ರಿಟನ್‌ನ ನೌಕಾಪಡೆಯ ವಿಸ್ತರಣೆಗೆ ಗುಲಾಮರ ಮಾರಾಟವನ್ನು ತಡೆಗಟ್ಟುವ ಉದ್ದೇಶವಿದೆ ಎಂದು ಪ್ರಚಾರ ಮಾಡಲಾಯಿತು. ಇವತ್ತು ಮಾನವ ಹಕ್ಕುಗಳ ರಕ್ಷಣೆಯನ್ನು ಅಮೆರಿಕದ ಮಿಲಿಟರಿ ವಿಸ್ತರಣೆಗೆ ಒಂದು ಕಾರಣವೆಂದು ಹೇಳಲಾಗುತ್ತಿದೆ..... ಮಾನವ ಕುಲಕ್ಕೆ ತಾವು ಒಳಿತು ಮಾಡುತ್ತಿದ್ದೇವೆ ಎಂದು ಭಾವಿಸುತ್ತಲೇ ತಮ್ಮ ಸ್ವಂತದ ಲಾಭದ ಮೇಲೆ ಮಾತ್ರ ಕಣ್ಣಿಟ್ಟಿರುವ ಸಾಮ್ರಾಜ್ಯಗಳು ಅತ್ಯಂತ ಅಪಾಯಕಾರಿ." 19ನೆಯ ಶತಮಾನದ ಯುರೋಪ್‌ನ ವಸಾಹತುಶಾಹಿ ಮತ್ತು 20ನೆಯ ಶತಮಾನದಲ್ಲಿ ಅಮೆರಿಕದ ಸಾಮ್ರಾಜ್ಯಶಾಹಿ ಜಗತ್ತಿನಾದ್ಯಂತ ಲಕ್ಷಾಂತರ ಜನರನ್ನು ಕೊಂದಿವೆ. 20ನೆಯ ಶತಮಾನದ ಯುರೋಪ್ ನರಮೇಧಗಳನ್ನೂ ಅನುಭವಿಸಿದೆ. ಇವಕ್ಕೆ ವೈಜ್ಞಾನಿಕ ಸಮರ್ಥನೆಗಳನ್ನು ನೀಡಲಾಗಿತ್ತು!

ಟೀಪೂ ಕಂಡ ಕನಸಿನ ಕೊನೆಯಲ್ಲಿ ಇರುವುದೂ ಇದೇ ಹಿಂಸೆಯೆ? ವಸಾಹತುಶಾಹಿಯಿಂದ ಬಿಡುಗಡೆ ಮತ್ತು ಪಶ್ಚಿಮದ ಅಭಿವೃದ್ಧಿಯ ಮಾದರಿಗಳು ಎರಡೂ ಟೀಪೂ ಬಯಸಿದಂತಹವು - ಟೀಪೂನ ನಂತರದ ಭಾರತ ಸಾಧಿಸಿಕೊಂಡಿತು; ಆದರೆ ಟೀಪೂ ಬಯಸಿದ ರೀತಿಯಲ್ಲಿ ಮಾತ್ರ ಅಲ್ಲ. ಭಾರತ ಸ್ವಾತಂತ್ರ್ಯ ಗಳಿಸಿದ ಸಂದರ್ಭದಲ್ಲಿ ಈ ಉಪಖಂಡದಲ್ಲಿ ಹತ್ತು ಲಕ್ಷ ಜನ ಕಗ್ಗೊಲೆಯಾದರು; ಎರಡು ಕೋಟಿಯಷ್ಟು ಜನ ಮನೆಮಾರು ಕಳೆದುಕೊಂಡರು. ಉಪಖಂಡ ದಲ್ಲಿ ತಲೆ ಎತ್ತಿದ್ದ ಹೊಸ ರಾಷ್ಟ್ರೀಯವಾದದ ಹಿಂಸೆಯಿಂದ ಹೆಂಗಸರು ಮತ್ತು ಮಕ್ಕಳಿಗೆ ಕೂಡ ವಿನಾಯಿತಿ ಇರಲಿಲ್ಲ. ಟೀಪೂ 'ಅಂಗ್ರೇಜಿ' ಎಂದು ತಪ್ಪಾಗಿ ಕರೆದ ರಾಷ್ಟ್ರೀಯತೆಯ ಭಾಷೆಯನ್ನು ಇಲ್ಲಿನ ಜನ ತಮ್ಮದಾಗಿಸಿಕೊಂಡಿದ್ದರು! ಉಪಖಂಡದ ಎರಡು ದೇಶಗಳು - ಭಾರತ ಮತ್ತು ಪಾಕಿಸ್ತಾನ-ಇಂದು ಹೊಂದಿರುವ ಅಣುಬಾಂಬುಗಳು ರಾಷ್ಟ್ರೀಯವಾದದ ಈ ಹಿಂಸ್ರ ಭಾಷೆಯ ಆತ್ಯಂತಿಕ ಅಭಿವ್ಯಕ್ತಿ!

ಅಣುಬಾಂಬುಗಳ ಜೊತೆ ಆರ್ಥಿಕ ಅಭಿವೃದ್ಧಿ (ಪಶ್ಚಿಮದ ಮಾದರಿಯದ್ದು ಎಂದು ಅಲಾಯದ ಹೇಳಬೇಕಾಗಿಲ್ಲ!)ಯೂ ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಅವಶ್ಯ ಎಂಬುದು ಸ್ವತಂತ್ರ ಭಾರತದ ಆಳುವ ವರ್ಗದ ನಿಲುವು. ಅಣುಬಾಂಬುಗಳ ಬಗೆಗಾದರೂ ಅಲ್ಲೊಂದು ಇಲ್ಲೊಂದು ಪ್ರತಿಭಟನೆಯ ದನಿ ಕೇಳಿತು. ಆದರೆ ಅಭಿವೃದ್ಧಿಯ ಕುರಿತು ಮಾತ್ರ ದೇಶದ ಎಲ್ಲ ರಾಜಕೀಯ ಪಕ್ಷಗಳು ಮತ್ತು ಪ್ರತಿಷ್ಠಿತ ಜನ ವರ್ಗಗಳಲ್ಲಿ ಒಮ್ಮತದ ನಿಲುವಿದೆ. ಈ ಒಮ್ಮತದ ಪರಿಣಾಮವಾಗಿ, ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಹಿಂಸೆಯನ್ನು ಯಾರೂ ವಿರೋಧಿಸುವು ದಿಲ್ಲ, ಗಮನಿಸುವುದೂ ಇಲ್ಲ. ಈ ಅಭಿವೃದ್ಧಿ ಯೋಜನೆಗಳು - ಮುಖ್ಯವಾಗಿ ಅಣೆಕಟ್ಟು, ಗಣಿಗಾರಿಕೆ, ಹೆದ್ದಾರಿ ನಿರ್ಮಾಣ, ಅರಣ್ಯಾಧಾರಿತ ಉದ್ಯಮಗಳು ಇತ್ಯಾದಿ- ನಿರ್ಗತಿಕರನ್ನಾಗಿ ಮಾಡಿದ ಜನರನ್ನು ನಾವು ನೋಡುವ ಬಗೆ ಯುರೋಪಿಯನ್ನರು ನಮ್ಮನ್ನು ನೋಡಿದ ಬಗೆಗಿಂತ ಯಾವ ರೀತಿಯಲ್ಲಿ ಬೇರೆ?

ಈ ಮಾತುಗಳನ್ನು ಸ್ಪಷ್ಟಪಡಿಸಲು ಒಂದು ಉದಾಹರಣೆ ಕೊಡಬಯಸುತ್ತೇನೆ. ಅದು ಭಾರತ ಈಗ ಮೈಗೂಡಿಸಿಕೊಂಡಿರುವ ರಾಷ್ಟ್ರೀಯವಾದ ಮತ್ತು ಅಭಿವೃದ್ಧಿಯ ಪರಿಕಲ್ಪನೆಗಳ ಘೋರ ಹಿಂಸೆಯ ಒಂದು ಕಿರು ಅಭಿನಯದಂತಿದೆ. ಈ ಘಟನೆ ನಡೆದದ್ದು ಗುಜರಾತ್‌ನಲ್ಲಿ. ಕಳೆದ ವರ್ಷ ಗೋಧ್ರಾ ಮತ್ತು ತದನಂತರದ ಹತ್ಯಾಕಾಂಡದ ಉನ್ಮಾದ ಸ್ವಲ್ಪ ಹಿರಿದು. ನರೇಂದ್ರ ಮೋದಿ ತನ್ನ ಅಧಿಕಾರವನ್ನು ಇನ್ನಷ್ಟು ಗಟ್ಟಿಗೊಳಿಸಲು ಚುನಾವಣೆಯ ಪ್ರಸ್ತಾಪ ಮುಂದಿಟ್ಟಿದ್ದರು. (ಆತನ ಅಂದಾಜು ಎಷ್ಟು ಸರಿಯಾಗಿತ್ತು!) ಗಲಭೆಯ ದಿನಗಳಲ್ಲಿ ಮುಸ್ಲಿಮ್ ನಿರಾಶ್ರಿತರಿಗೆ ನಿಷ್ಠುರವಾಗಿ ಬಾಗಿಲು ಮುಚ್ಚಿದ್ದ ಅಹ್ಮದಾಬಾದ್‌ನ ಗಾಂಧಿ ಭವನದಲ್ಲಿ ಆ ಹಿಂಸಾಕಾಂಡವನ್ನು ಖಂಡಿಸಲು ಒಂದು ಸಭೆ ಕರೆಯಲಾಗಿತ್ತು. ಈ ಸಭೆಗೆ ನರ್ಮದಾ ಬಚಾವೋ ಆಂದೋಲನದ ಮೇಧಾ ಪಾಟ್ಕರ್ ಬಂದಾಗ, ಆಕೆಯ ಮೇಲೆ ಹಲ್ಲೆ ನಡೆಯಿತು. ಹಲ್ಲೆ ನಡೆಸಿದವರಲ್ಲಿ ಬಿ.ಜೆ.ಪಿ. ಜೊತೆ ಕಾಂಗ್ರೆಸ್ ಪಕ್ಷದವರೂ ಇದ್ದರು. ಬಹುಶಃ ಅಂದು ಮೇಧಾ ವಿರುದ್ಧ ನಡೆದ ಹಲ್ಲೆಗೆ ಗುಜರಾತ್‌ನ ಬಹುಪಾಲು ಜನರ ಸಮ್ಮತಿಯೂ ಇತ್ತು. ಮುಸ್ಲಿಮರ

ಮೇಲೆ ನಡೆದ ಹಿಂಸಾಚಾರಕ್ಕೆ ಇರುವ ಹಾಗೆಯೇ! ನರ್ಮದಾ ಯೋಜನೆ ಗುಜರಾತ್‌ನ ಜನಗಳ ಪಾಲಿಗೆ ಕುಡಿಯುವ ನೀರು ಮತ್ತು ಕೃಷಿಗೆ ನೀರಾವರಿ ಒದಗಿಸುವ ಒಂದು ಅಭಿವೃದ್ಧಿ ಕಾರ್ಯಕ್ರಮ! ನರ್ಮದಾ ಯೋಜನೆಯ ಅತಿ ದೊಡ್ಡ ಕಾಮಗಾರಿ-ಸರ್ದಾರ್ ಸರೋವರ ಅಣೆಕಟ್ಟಿನ ಎತ್ತರವನ್ನು ತಗ್ಗಿಸಬೇಕು ಎಂಬ ತನ್ನ ಹೋರಾಟದಿಂದ ಮೊದಲೇ ಮೇಧಾ ಗುಜರಾತ್‌ನ ಜನತೆಯ ಸಿಟ್ಟಿಗೆ ಗುರಿಯಾಗಿದ್ದರು. ಹಾಗಾಗಿ ಗಾಂಧಿ ಭವನದ ಆ ಪ್ರತಿಭಟನಾ ಸಭೆಗೆ ಹಾಜರಾಗಿ, ಮೇಧಾ ಆ ಕಾರ್ಯಕ್ರಮವನ್ನೇ ಹಾಳುಗೆಡವಿದರು ಎಂದು ಅವತ್ತು ಅನೇಕ ಪ್ರಗತಿಶೀಲರು ಮತ್ತು ಸೆಕ್ಯುಲರ್‌ವಾದಿಗಳು ಸಹ ಭಾವಿಸಿದರು. ಗುಜರಾತ್‌ನ ಮುಸ್ಲಿಮರಿಗೆ ನೆರವು ಸಂಘಟಿಸಿ, ಅಪಾರ ಧೈರ್ಯ ತೋರಿದ್ದ ಮಲ್ಲಿಕಾ ಸಾರಾಭಾ‌ಯ್ ಕೂಡ, "ಮೇಧಾಗೆ ಆ ಸಭೆಗೆ ಆಮಂತ್ರಣವಿರಲಿಲ್ಲ" ಎಂದು ಪ್ರತಿಕಾ ಹೇಳಿಕೆ ನೀಡಿದರು! (ಪ್ರತಿಭಟನಾ ಸಭೆಗೂ ಆಮಂತ್ರಣವೇ?)

ಮೇಧಾ ಪಾಟ್ಕರ್ ಕಂದಾಚಾರಿಯಲ್ಲ. ಆಕೆ ಪ್ರಗತಿ ವಿರೋಧಿಯೂ ಅಲ್ಲ. ಜನರಿಗೆ ಕುಡಿಯುವ ನೀರು, ವಿದ್ಯುತ್, ಉದ್ಯೋಗ ಇತ್ಯಾದಿಗಳು, ತುರ್ತಾಗಿ ಬೇಕು ಎನ್ನುವುದನ್ನು ಆಕೆ ಅಲ್ಲಗಳೆಯುವುದೂ ಇಲ್ಲ. ಆದರೆ ನರ್ಮದಾ ಯೋಜನೆಯಿಂದ ನಿರ್ಗತಿಕರಾಗಿರುವ ಸಾವಿರಾರು ಕುಟುಂಬಗಳ (ಒಂದು ಕನಿಷ್ಟ ಅಂದಾಜಿನ ಪ್ರಕಾರ 60 ಸಾವಿರ) ಪರವಾಗಿ ಮೇಧಾ ಹೋರಾಟ ನಡೆಸಿದ್ದಾರೆ. ಆ ಬೃಹತ್ ಯೋಜನೆಯಿಂದ ಸಂತ್ರಸ್ತರಾಗಿರುವ ಬಡ ಆದಿವಾಸಿಗಳು ಮತ್ತು ಇತರ ರೈತರಿಗೆ ಮನುಷ್ಯಯೋಗ್ಯವಾದ ಒಂದು ಪರ್ಯಾಯ ವ್ಯವಸ್ಥೆ ಮತ್ತು ಅವರು ಕಳೆದುಕೊಂಡಿರುವ ಜಮೀನಿಗೆ ಸೂಕ್ತ ಪರಿಹಾರ - ಇವುಗಳಿಗಾಗಿ ಅನೇಕ ವರ್ಷಗಳಿಂದ ಮೇಧಾ ಏಕಾಂಗಿಯಾಗಿ, ಗುಜರಾತ್, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಗಳ ಸರಕಾರಗಳು ಮತ್ತು ಕೇಂದ್ರ ಸರಕಾರಗಳನ್ನು ಆಗ್ರಹಿಸುತ್ತಿದ್ದಾರೆ. ನರ್ಮದಾ ಯೋಜನೆಯ ನಿರ್ವಸಿತರ ಬಗ್ಗೆ ದೇಶದ ಎಲ್ಲ ರಾಜಕೀಯ ಪಕ್ಷಗಳೂ ಸಮಾನವಾದ ಉಪೇಕ್ಷೆಯ ಧೋರಣೆ ತಳೆದಿವೆ. ದೇಶದ ಅಭಿವೃದ್ಧಿ ಯೋಜನೆಗಳಿಂದ ನಿರ್ನಾಮವಾಗುವ ಅರಣ್ಯ ಮತ್ತು ಅದರ ಜೀವಕೋಟಿಗೆ ಯಾವ ತರ್ಕವನ್ನು ಅನ್ವಯಿಸಲಾಗುತ್ತದೋ ಅದೇ ತರ್ಕವನ್ನು ಈ ಯೋಜನೆಗಳಿಂದ ನಿರ್ವಸಿತರಾಗುವ ಆದಿವಾಸಿಗಳು ಮತ್ತಿತರರಿಗೂ ನಮ್ಮ ರಾಜಕೀಯ ಪಕ್ಷಗಳು ಅನ್ವಯಿಸುತ್ತಿವೆ. ಗುಜರಾತ್‌ನ ಹಿಂಸೆಯನ್ನು ಪ್ರಾಮಾಣಿಕವಾಗಿ ವಂಚಿಸುವ ಅನೇಕ ಲಿಬರಲ್‌ಗಳಿಗೆ, ಈ ದೇಶದ ಅಭಿವೃದ್ಧಿ ಯೋಜನೆಗಳ ಹಿಂಸೆ ಕಾಣಿಸುವುದೇ ಇಲ್ಲ. ಗುಜರಾತ್‌ನ ಮುಸ್ಲಿಮರ ಮೇಲೆ ನಡೆದ ಹಿಂಸೆ ನರ್ಮದಾ ನದೀ ತೀರದ ರೈತರು ಮತ್ತು ಆದಿವಾಸಿಗಳನ್ನು ನಿರ್ಗತಿಕರನ್ನಾಗಿ ಮಾಡಿದ್ದು-ಇವೆರಡಕ್ಕೂ ಸಮಾನ ಅಂಶವೊಂದಿದೆ. ಎರಡೂ, 'ರಾಷ್ಟ್ರಪ್ರಭುತ್ವ'ದ ಆಧುನಿಕ ಪರಿಕಲ್ಪನೆಯ ಬಳುವಳಿಗಳು. ಇದನ್ನು ಮರೆತರೆ, ಗುಜರಾತ್‌ನ ಹಿಂಸೆಯ ಉಸ್ತುವಾರಿ ನಡೆಸಿದವರು ರಾಕ್ಷಸರಂತೆಯೂ, ನರ್ಮದಾ ಯೋಜನೆಯನ್ನು ರೂಪಿಸಿದ ರಾಜಕಾರಣಿಗಳು ಮತ್ತು ಎಂಜಿನಿಯರುಗಳು ಸೀದಾ ಸಾದಾ ಜನರಂತೆಯೂ ಕಾಣಬಹುದು. ವಾಸ್ತವವಾಗಿ ಎರಡು ಬಗೆಯ ಜನಗಳೂ ಭಾರತವೆಂಬ ಹಿಂಸ್ರ ರಾಷ್ಟ್ರಪ್ರಭುತ್ವದ ವಿಧೇಯ ಪ್ರಜೆಗಳು!

ವಿಜ್ಞಾನ, ಅಭಿವೃದ್ಧಿ ಮತ್ತು ರಾಷ್ಟ್ರೀಯವಾದಗಳು ನಮ್ಮ ಮುಂದೆ ಒಡ್ಡಿರುವ ಸವಾಲುಗಳನ್ನು ಮೊತ್ತಮೊದಲಿಗೆ ಸರಿಯಾಗಿ ಗ್ರಹಿಸಿದವರು ಗಾಂಧೀಜಿ. ಟೀಪೂ ಕಾಲದಲ್ಲಿ ಆಧುನಿಕತೆಯ ಸ್ವರೂಪ ಇಷ್ಟು ಖಚಿತವಾಗಿ ಹರಳುಗಟ್ಟಿರಲಿಲ್ಲ. ಗಿರೀಶ್‌ರ ನಾಟಕದ ಟೀಪೂ ಅನಿವಾರ್ಯವಾಗಿ ಗಾಂಧೀಜಿಯನ್ನು ನೆನಪಿಸುತ್ತಾನೆ. ತನ್ನ ಅಳವಿಗೆ ಮೀರಿದ ಚಾರಿತ್ರಿಕ ಶಕ್ತಿಗಳ ತಿರುಗಣೆ ಮಡುವಿನಲ್ಲಿ ಸಿಕ್ಕಿಕೊಂಡಿರುವ ಟೀಪೂವಿನ ಪಾಡು ನಮ್ಮನ್ನು ತಬ್ಬಿಬ್ಬುಗೊಳಿಸುತ್ತದೆ. ಅವನು ನಮ್ಮದೇ ಕನಸು ಮತ್ತು ದಿಗಿಲುಗಳ ಪ್ರತಿರೂಪವಾಗಿದ್ದಾನೆ. ಹಿಂದುತ್ವವಾದಿಗಳು ಟೀಪೂ ಬಗ್ಗೆ ಅಪಪ್ರಚಾರ ನಡೆಸುತ್ತಿರುವ ಸಂದರ್ಭದಲ್ಲಿಯೇ ಈ ನಾಟಕ ಪ್ರಕಟವಾಗಿದೆ. ಅವರಿಗೆ ಉತ್ತರ ಕೊಡುವುದು ನಾಟಕದ ಉದ್ದೇಶವಲ್ಲ. ಹಾಗೆ ನೋಡಿದರೆ ಟೀಪೂವನ್ನು ಕೊಂಡಾಡುವುದು ಕೂಡ ನಾಟಕದ ಉದ್ದೇಶವಲ್ಲ. ಹಿಂದುತ್ವವಾದಿಗಳು ಟೀಪೂವಿನ ಪಾಳೆಯಗಾರೀ ದರ್ಪ ಮತ್ತು ಅಸಹನೆಯ ಒಂದೆರಡು ಉದಾಹರಣೆಗಳನ್ನೇ ದೊಡ್ಡದು ಮಾಡಿ ಅವನ ವ್ಯಕ್ತಿತ್ವಕ್ಕೆ ಮಸಿ ಬಳಿಯುತ್ತಿದ್ದಾರೆ. ಪ್ರಗತಿಶೀಲರ ಮಟ್ಟಿಗೆ ಅವನೊಬ್ಬ ಸ್ವಾತಂತ್ರ್ಯ ಹೋರಾಟಗಾರ; ತನ್ನ ರಾಜ್ಯಭಾರದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ಅಭಿವೃದ್ಧಿಗಳನ್ನು ಅಳವಡಿಸಿಕೊಂಡಿದ್ದ 'ದಾರ್ಶನಿಕ ಮುತ್ಸದ್ದಿ' ! ಇಬ್ಬರಿಗೂ ಟೀಪೂ ಕೆಲವು ಧೋರಣೆಗಳ ಪ್ರತಿನಿಧಿಯಷ್ಟೇ ಆಗಿದ್ದಾನೆ. ಆದರೆ ಗಿರೀಶರ ನಾಟಕದ ಟೀಪೂ, ತನ್ನ ಕಾಲದ ಸಂದಿಗ್ಧಗಳನ್ನು ಎದುರಿಸುತ್ತಿರುವವನು. ಅವನ ಉತ್ಸಾಹ, ಆಶಾವಾದ ಮತ್ತು ಅವನು ಸಂಭ್ರಮಿಸುವ ಸಂಗತಿಗಳಲ್ಲಿ ಮುಗ್ಧತೆ ಇದೆ; ಜೊತೆಗೆ ಅಸಹನೀಯವಾದ ವ್ಯಂಗ್ಯವೂ ಇದೆ. ಟೀಪೂ ಧೀರೋದಾತ್ತ ನಾಯಕನಾಗಿರುವುದರ ಜೊತೆ ನಮ್ಮ ಕಾಲದ ದುರಂತಗಳ ಮುನ್ಸೂಚನೆಯಂತೆಯೂ ಇದ್ದಾನೆ.

* * *

ಡಾ. ಜಿ. ರಾಮಕೃಷ್ಣ ಬಹಳ ವರ್ಷಗಳಿಂದ ಕಮ್ಯುನಿಸ್ಟ್ ಚಳವಳಿಯಲ್ಲಿ ತನ್ನನ್ನು ತೊಡಗಿಸಿಕೊಂಡಿರುವವರು. ಅವರು ಎತ್ತಿ ಹಿಡಿದ ಅನೇಕ ಆದರ್ಶಗಳು ಈಗ ತೀವ್ರ ಸಂದೇಹಕ್ಕೆ ಒಳಗಾಗಿವೆ. ಆ ಆದರ್ಶಗಳ ಸಾಕಾರವೆನ್ನಿಸಿದ್ದ ಸೋವಿಯತ್ ರಷ್ಯಾ ಕಣ್ಮರೆಯಾಗಿದೆ. ಜಿ.ರಾಮಕೃಷ್ಣರ ನಿಷ್ಠೆ ಮಾತ್ರ ಅಚಲವಾಗಿ ಉಳಿದಿದೆ. ಸೋವಿಯತ್ ರಷ್ಯಾದ ಕೊನೆಯ ಕ್ಷಣಗಳಲ್ಲಾದರೂ ಅವರ ನಿಷ್ಠೆ ಹೊಯ್ದಾಡಿತೆ? ಭ್ರಮನಿರಸನದ ಭಾವ ಮೂಡಿತೆ? ಇದೊಂದು ಖಾಸಗಿ ಪ್ರಶ್ನೆ. ರಾಜಕೀಯವನ್ನೇ ಉಂಡು ಉಟ್ಟು ಉಸಿರಾಡುವ ಕಮ್ಯುನಿಸ್ಟರಿಗೆ ಖಾಸಗಿ ಮತ್ತು ಸಾರ್ವಜನಿಕ ಎಂಬ ವ್ಯತ್ಯಾಸವಿಲ್ಲ. ಅವರ ಪಕ್ಷದ ನಿಲುವೇ ಅವರ ಸ್ವಂತದ ನಿಲುವು. ಜಿ.ರಾಮಕೃಷ್ಣರ ಮಟ್ಟಿಗೆ ಕೂಡ ಇದು ಬೇರೆ ಇರಲಿಕ್ಕಿಲ್ಲ. ಆದರೆ ಅವರದ್ದು ಭಿನ್ನಮತ ಸಹಿಸದ ಏಕೋ ದೃಢನಿಷ್ಠೆಯಲ್ಲ. ತಾನು ಒಪ್ಪದ ಅಭಿಪ್ರಾಯಗಳನ್ನು ಅವರು ವ್ಯವಧಾನದಿಂದ ಕೇಳಿಸಿಕೊಳ್ಳಬಲ್ಲರು. ಕಮ್ಯುನಿಸ್ಟ್ ಚಳವಳಿಯಲ್ಲಿ ಅವರಂತಹ ಪರಮತ ಸಹಿಷ್ಣುಗಳು ಅಪರೂಪ. ಚಾಲ್ತಿಯಲ್ಲಿರುವ ಸಮಾಜವಾದದ ಬಗ್ಗೆ ನಮಗಿರುವ ಸಂದೇಹಗಳನ್ನು ಜಿ. ರಾಮಕೃಷ್ಣರ ಬಳಿ ಹೇಳಲು, ನಿಜವಾದ ಸಮಾಜವಾದದಲ್ಲಿ ನಮ್ಮ ನಿಷ್ಠೆಯನ್ನು ಸಾಬೀತು

ಪಡಿಸಬೇಕು ಎಂದೂ ಅವರು ಒತ್ತಾಯಿಸುವವರಲ್ಲ. ರಷ್ಯಾದಲ್ಲಿ ಕಮ್ಯೂನಿಸಂ ಸ್ವತಃ ತಾನೇ ಒಂದು ವ್ಯವಸ್ಥೆಯಾದದ್ದರ ದುರಂತ ಏನೇ ಇರಲಿ, ಕರ್ನಾಟಕದಲ್ಲಂತೂ ಜಿ. ರಾಮಕೃಷ್ಣ ಇಷ್ಟು ವರ್ಷಗಳ ಕಾಲವೂ ವ್ಯವಸ್ಥೆಗೆ ಒಂದು ವಿರೋಧ ಪಕ್ಷದಂತೆ ಕಾರ್ಯ ನಿರ್ವಹಿಸಿದವರು. ಈ ಪ್ರಬಂಧದ ಅನೇಕ ಮಾತುಗಳನ್ನು ಬಹುಶಃ ಜಿ. ರಾಮಕೃಷ್ಣ ಒಪ್ಪುವುದಿಲ್ಲ. ಆದರೆ ಅವರ ಜೊತೆಗಲ್ಲದೆ ಬೇರೆ ಯಾರ ಜೊತೆ ಅವನ್ನು ಚರ್ಚಿಸಲಿ? ಅವರು ಈ ಅಭಿಪ್ರಾಯಗಳನ್ನು ಒಪ್ಪಲಿ ಬಿಡಲಿ, ಸಮಾಜವಾದ ಈ ಸವಾಲುಗಳನ್ನು ಬಗೆಹರಿಸಿಕೊಳ್ಳಲೇಬೇಕು ಎಂಬುದನ್ನು ಅವರು ಒಪ್ಪುತ್ತಾರೆ ಎಂಬ ಭರವಸೆ ನನಗೆ ಇದೆ. ಸಮಾಜವಾದಕ್ಕೆ ಮಾತ್ರ ಈ ಜಗತ್ತಿನ ಎಲ್ಲ ಆರ್ತರು, ನೊಂದವರು ಮತ್ತು ತಿರಸ್ಕೃತರ ಧ್ವನಿಯಾಗುವ ಸಾಧ್ಯತೆ ಇದೆ. ಆದರೆ ಹಾಗೆ ಆಗಲು ಸಮಾಜವಾದ, ಆಧುನಿಕತೆ ತಂದೊಡ್ಡಿರುವ ವಿಪರ್ಯಾಸಗಳಿಗೆ ಪರಿಹಾರ ಕಂಡುಕೊಳ್ಳಲೇ ಬೇಕು ಎಂಬ ನಂಬಿಕೆಯಲ್ಲಿ ಈ ಪ್ರಬಂಧದ ಮುಖಾಂತರ ಹಿರಿಯರಾದ ಜಿ. ರಾಮಕೃಷ್ಣರಿಗೆ ನನ್ನ ಗೌರವ ಸಲ್ಲಿಸುತ್ತೇನೆ.

❑

ಜಾನಪದ ಮತ್ತು ಆಧುನಿಕ ಸಾಹಿತ್ಯ

ಕಿ.ರಂ. ನಾಗರಾಜ

ಈ ಲೇಖನದ ಶೀರ್ಷಿಕೆ ಸುಮಾರು ಮೂರು ಮುಖ್ಯ ಅಂಶಗಳನ್ನು ಚರ್ಚಿಸಲು ದಾರಿ ಮಾಡಿಕೊಟ್ಟಿದೆ. ಆಧುನಿಕ ಪರಿಸರ-ಜಾನಪದ-ಆಧುನಿಕ ಕನ್ನಡ ಕಾವ್ಯ. ಈ ವಿಚಾರಗಳು ನನ್ನ ಚರ್ಚೆಗೆ ಮುಖ್ಯ ಭಿತ್ತಿಯನ್ನು ಒದಗಿಸಿವೆ. ಈ ಸಂದರ್ಭದಲ್ಲಿ ನಾನು ಸ್ಪಷ್ಟವಾಗಿರಲು ಎಚ್ಚರ ವಹಿಸುತ್ತಿರುವಂತೆಯೇ ಅನೇಕ ಗೊಂದಲಗಳನ್ನು ಎದುರಿಸುತ್ತಿದ್ದೇನೆ. ಆಧುನಿಕ ಪರಿಸರ ಎನ್ನುವುದು - ನಮ್ಮ ಪ್ರಕೃತ ಸಾಂಸ್ಕೃತಿಕ ಪರಿಸರ ಎಂಬ ಅರ್ಥದಲ್ಲಿಯೂ ನಾನು ತಿಳಿಯುತ್ತೇನೆ. ಈ ಪರಿಸರ ನಮ್ಮ ಸಾಮಾಜಿಕ, ವೈಯಕ್ತಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಮತ್ತು ತಾತ್ವಿಕ ಸಂಬಂಧಗಳ ಅಂತರ್‌ಪ್ರಕ್ರಿಯೆಗಳ ಒಟ್ಟು ಮೊತ್ತ ಎಂದು ತಿಳಿಯುತ್ತೇನೆ. ಇಂತಹ ಎಲ್ಲ ಸಂಬಂಧಗಳ ಅಭಿವ್ಯಕ್ತಿಯಾಗಿಯೇ ಕನ್ನಡ ಶಾಬ್ದಿಕ ರಚನೆಗಳನ್ನು ಅಭ್ಯಸಿಸುವುದು ನನಗೆ ಅನಿವಾರ್ಯ ಆಗಿದೆ. ಅಕ್ಷರದಿಂದ ಆದ ವೈಯಕ್ತಿಕ ರಚನೆಗಳು, ಶಿಷ್ಟವೆಂದು ಕರೆಯಲ್ಪಡುವ ರಚನೆಗಳು, ವಾಕ್ ಸಂಪ್ರದಾಯ (Oral tradition)ದ ನಿಯಮಗಳಿಗೆ ಅನುಗುಣವಾಗಿ ರಚಿತವಾಗಿರುವ ಅಸಂಖ್ಯಾತ ರಚನೆಗಳು ಕನ್ನಡ ಸಂಸ್ಕೃತಿಯಲ್ಲಿ ಸಂವಹನಕ್ಕೆ ಗುರಿಯಾಗಿರುವ ರೀತಿ ತುಂಬ ಮಹತ್ವದ ಅಂಶ. ಕನ್ನಡದ ಮಟ್ಟಿಗೆ ಹೇಳುವುದಾದರೆ ಶಿಷ್ಟ ಎಂಬ ಪ್ರಭೇದವೇ ಒಂದು ರೀತಿಯಲ್ಲಿ ಅಸ್ಪಷ್ಟವೂ, ಕೃತಕವೂ, ಆಗಿದೆ. ಏಕೆಂದರೆ ವಚನಕಾರರಾಗಲಿ, ಹರಿಹರ, ರಾಘವಾಂಕ, ಕುಮಾರವ್ಯಾಸ, ಕೀರ್ತನಕಾರರು, ಲಕ್ಷ್ಮೀಶ, ಸರ್ವಜ್ಞ ಇವರ ಕೃತಿಗಳು ನಮ್ಮ ಗ್ರಾಮೀಣ ಸಂಸ್ಕೃತಿಯ ಅತ್ಯಂತ ಪ್ರಮುಖ ಭಾಗವಾಗಿ ಹರಡಿಕೊಂಡಿವೆ. ಇಲ್ಲಿ ಹೆಸರಿಸಿದ ಕವಿಗಳ ಕೃತಿಗಳು ಮಾತ್ರ ಇಂತಹ

ಸಂವಹನಕ್ಕೆ ಗುರಿಯಾಗಿರುವುದಲ್ಲದೆ ಈ ಹೊತ್ತಿಗೂ ನಡೆಯುವ ಪುರಾಣ ಪ್ರವಚನ (mythical discourse)ಕ್ಕೆ ಗುರಿಯಾಗಿರುವ 'ಶೂನ್ಯ ಸಂಪಾದನೆ', 'ಬಸವ ಪುರಾಣ', 'ರಾಜಶೇಖರ ವಿಳಾಸ', 'ನೇಮಿಜಿನೇಶ ಸಂಗತಿ', 'ಹರಿಭಕ್ತಿ ಸುಧೆ', 'ಹರಿಕಥಾಮೃತಸಾರ' ಇವುಗಳು ಸದ್ಯದ ಪರಿಸರದಲ್ಲಿ ಇಂದಿಗೂ ಬಹುಸಂಖ್ಯಾತ ಗ್ರಾಹಕರನ್ನು ಆಕರ್ಷಿಸುತ್ತಿವೆ. ಆಧುನಿಕ ಪರಿಸರವು ಜನಪದ ಅಭಿವ್ಯಕ್ತಿ, ವ್ಯಕ್ತಿ ನಿರ್ಮಿತ ಸಾಹಿತ್ಯಕ ಅಭಿವ್ಯಕ್ತಿ, ಇವೆರಡನ್ನಷ್ಟೇ ಅಲ್ಲದೆ ಕಳೆದ ಶತಮಾನಗಳಿಂದ ನಮ್ಮ ಈ ಪರಿಸರಕ್ಕೆ ಇಳಿದು ಬಂದಿರುವ ಕನ್ನಡ ಕಾವ್ಯಗಳು ನಮ್ಮ ಆಧುನಿಕ ಕಾವ್ಯವಲಯವನ್ನು ನಿರ್ಮಾಣಮಾಡಿದೆ. ಆಧುನಿಕ ಕಾಲದ ಬಗೆಗೆ ನಾವು ಹಾಕಿಕೊಳ್ಳುವ ಗಡಿರೇಖೆಗಳು ಕೇವಲ ಅಸ್ಪಷ್ಟವಾದುವುಗಳು. ಆಧುನಿಕವೆಂದ ಕೂಡಲೇ ಇಂಗ್ಲಿಷ್ ಗೀತಗಳು, ಗೆಳೆಯರ ಗುಂಪು, ಬ್ರಿಟಿಷರ ಆಗಮನ, ಸ್ವರಾಜ್ಯ ಚಳವಳಿ ಮೊದಲಾದ ನೆಲೆಗಳು ಮುಖ್ಯವಾಗಿ ಕಾಣಿಸುತ್ತವೆ. ಆಧುನಿಕ ಕಾಲದ ಬಗೆಗೆ - ಪ್ರಜ್ಞೆಯ ಬಗೆಗೆ ಅನೇಕ ಮಟ್ಟದ ಚರ್ಚೆ ನಮ್ಮ ವಿಮರ್ಶೆಯ ಸಂದರ್ಭದಲ್ಲಿ ನಡೆದಿದೆ. ಈ ವಿಮರ್ಶೆಯ ಸಂದರ್ಭದಲ್ಲಿ ಹುಟ್ಟಿರುವ ಮುಖ್ಯ ಪರಿಕಲ್ಪನೆಗಳನ್ನು ಬಳಸಿಕೊಳ್ಳುತ್ತ, ಕೆಲವು ಗ್ರಹಿಕೆಗಳನ್ನು ಇಲ್ಲಿ ಮಂಡಿಸಲು ಇಚ್ಛಿಸುತ್ತೇನೆ.

ಕನ್ನಡ ನವೋದಯವನ್ನು ಕುರಿತು ಮಾತನಾಡುವಾಗ ಅದರಲ್ಲೂ ಅಕಾಡೆಮಿಕ್ ವಲಯದಲ್ಲಿ ಚರ್ಚಿಸುವಾಗ ನಾವು ಹಾಕಿಕೊಳ್ಳುವ ಕಾಲದ ಬಗೆಗೆ ಗಡೀರೇಖೆಗಳು ಒಂದು ರೀತಿಯಲ್ಲಿ ಈಗಾಗಲೇ ನಿರ್ದಿಷ್ಟಗೊಂಡಂತೆ ಭಾವಿಸಲಾಗಿದೆ. ನವೋದಯದ ಆರಂಭದ ಕನ್ನಡ ಕವಿತೆಯ ಕೃಷಿಕಾರರು ಎಂದರೆ 18-19ನೆಯ ಶತಮಾನಗಳಲ್ಲಿ ಆಗಿಹೋದ ಅನುಭಾವಿ ಕವಿಗಳು. ಇವರನ್ನು ತತ್ವದ ಪದಕಾರರೆಂದು ಕರೆದುಕೊಂಡು ಬರಲಾಗಿದೆ. (ಇನ್ನು ಮುಂದೆ ನಾನು ಅನುಭಾವಿ ಕವಿಗಳು ಎಂದು ಅವರನ್ನು ನಿರ್ದೇಶಿಸುತ್ತೇನೆ.) ಕಾಲಾತೀತ ಪಾತ್ರಸೃಷ್ಟಿ, ಕಲ್ಪನಾಂಶ, ಮೋಹಕವಾದ ಗೇಯಾತ್ಮಕತೆ, ಮೂಲಭೂತ ಚಿಂತನೆ - ಈ ಕವಿಗಳ ಮೂಲಕ ಅಭಿವ್ಯಕ್ತ ಗೊಂಡಿರುವುದನ್ನು ನಾವು ಗಮನಿಸಬಹುದಾಗಿದೆ. ಕನ್ನಡ ಕಾವ್ಯ ಪರಂಪರೆ ಮತ್ತು ಜನಪದ (ಜನಪ್ರಿಯ) ಪರಂಪರೆಯ ಸೃಜನಶೀಲ ಒಪ್ಪಂದ ಈ ಕವಿಗಳ ರಚನೆಗಳ ಸಂದರ್ಭದಲ್ಲಿ ಕಾಣುವ ಮುಖ್ಯ ಅಂಶ. ಶಿಶುನಾಳ ಶರೀಫ, ನಾಗಲಿಂಗ ಯತಿ, ಸರ್ಪಭೂಷಣ ಶಿವಯೋಗಿ, ಬಂಡೆ ಗವಿಸಿದ್ದ, ಗೋವಿಂದ ಭಟ್ಟ ಮುಂತಾಗಿ ಅಸಂಖ್ಯಾತ ಚಾರಣ ಕವಿಗಳು 20ನೆಯ ಶತಮಾನದ ಕ್ಯಾಲೆಂಡರ್ ತೆರೆಯುವ ಮುನ್ನ ಆಗಿಹೋಗಿದ್ದಾರೆ. ಇವರ ರಚನೆಗಳು ನಮ್ಮ ಪ್ರಾದೇಶಿಕ ಸಂಸ್ಕೃತಿಯ ಅಂತರ್ಯದಲ್ಲಿ ಇಂದಿಗೂ ಜೀವಂತವಾಗಿ ಸೇರಿಕೊಂಡಿವೆ. ಅದನ್ನು ರಚನೆ ಮಾಡಿದವರ ಹೆಸರನ್ನೇ ತಿಳಿಯದೆ, ವಿವಿಧ ವಾಚನ ಸಂಪ್ರದಾಯಗಳಿಗೆ ಗುರಿಯಾಗಿ ಅವುಗಳನ್ನು ಹಾಡಿಕೊಂಡು ಬರಲಾಗಿದೆ, ಜನಪದ ಗಾಯಕರೆನಿಸಿಕೊಳ್ಳುವವರು ಈ ರಚನೆಗಳನ್ನು ಸಾಕಷ್ಟು ಸಂಖ್ಯೆಗಳಲ್ಲಿ ಹಾಡಿಕೊಂಡೇ ಬಂದಿದ್ದಾರೆ. ಆದರೆ ಇಂತಹ ರಚನೆಗಳು ನಮ್ಮ ಜನಪದ ಸಂಕಲನಕಾರರಿಗೆ ಬೇಡದಿರುವುದರಿಂದ, ಈ ರಚನೆಗಳ ಸಂಕಲನ ಇನ್ನೂ ಶಾಸ್ತ್ರೀಯವಾದ ಅಧ್ಯಯನವನ್ನು ಒಳಗೊಳ್ಳಬೇಕಾಗಿದೆ. ಜನಪದ ಗಾಯಕನಿಗೆ ಈ ಭಾಷೆಯಲ್ಲಿಯೇ ಸೃಷ್ಟಿಯಾದ ಬೇರೆ ಯಾವ ರಚನೆಗಳು ತಿಳಿದಿವೆ ಎಂಬುದನ್ನು ಕಂಡುಕೊಳ್ಳುವುದರ ಮೂಲಕ ನಮ್ಮ ಶಾಬ್ದಿಕ

ಸೃಷ್ಟಿಯ ಪ್ರಸಾರದ ಮತ್ತೊಂದು ಆಯಾಮವನ್ನು ತಿಳಿಯಲು ಸಾಧ್ಯವಾಗುತ್ತದೆ. ಏಕೆಂದರೆ ಇಂದಿನ ಜನಪದ ಗಾಯಕ ಕೇವಲ ಜನಪದ ಗಾಯಕನಾಗಿಯೇ ಉಳಿದಿದ್ದಾನೆಯೇ? ಕೇವಲ ಜನಪದ ಗಾಯಕನಾಗಿದ್ದ ವ್ಯಕ್ತಿಯ ಮೇಲೆ ಆಗಿರಬಹುದಾದ ಆಧುನಿಕ ಪ್ರಭಾವಗಳ ಸ್ವರೂಪ ಎಂತಹುದು? ಅವನು ಸಿನಿಮಾ, ಕಂಪನಿ ನಾಟಕ, ಸರ್ಕಸ್, ಸಿನಿಮಾಹಾಡು, ಖವ್ವಾಲಿ, ಗಾಣ, ಬಾಂಬೆ ಷೋ ಮುಂತಾದ ಪ್ರಭಾವಗಳಿಗೆ ಗುರಿಯಾದವನೂ ಆಗಿದ್ದಾನೆ. ಒಬ್ಬನೇ ವ್ಯಕ್ತಿ ಜನಪದ ರಚನೆಗಳು ಮತ್ತು ತನ್ನ ಸಂದರ್ಭದಲ್ಲಿ ಸೃಷ್ಟಿಯಾಗುತ್ತಿರುವ ಶಾಬ್ದಿಕವಾದ ರಚನೆಗಳನ್ನು ಸ್ವೀಕರಿಸಿರುವ ಸಂದರ್ಭವನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗುತ್ತದೆ. ನಾನು ಮೇಲೆ ಹೇಳಿದ ಈ ಅನುಭಾವಿ ಕವಿಗಳು ಕನ್ನಡ ನವೋದಯದ ನೆಲೆಯನ್ನು ಮೊದಲು ಅನಾವರಣ ಮಾಡಿದ ಕವಿಗಳು. ನಾವು ಯಾವುದನ್ನು 'ರಮ್ಯ' ಎಂದು ಕರೆಯುತ್ತೇವೆಯೋ ಆ ಮನೋಭಾವ ಯಾವುದೇ ನಿರ್ದಿಷ್ಟ ಕಾಲಮಾನಕ್ಕೆ ಸಂಬಂಧಿಸಿದ್ದಲ್ಲ. ಅದು ಇಡೀ ಸೃಜನಶೀಲ ವ್ಯಾಪಾರವನ್ನೇ ಒಳಗೊಂಡದ್ದು. ರಮ್ಯಗುಣ ಕೇವಲ ಸಾಹಿತ್ಯದಲ್ಲಿ ಮಾತ್ರ ಕಾಣುವ ವಿಶಿಷ್ಟ ಅಂಶ ಅಲ್ಲ. ವರ್ಣಚಿತ್ರ, ಸಂಗೀತ, ಶಿಲ್ಪವೇ ಮೊದಲಾದ ಅಭಿವ್ಯಕ್ತಿಗಳಲ್ಲಿಯೂ ಗುರುತಿಸುವಂಥದ್ದು ರಮ್ಯದ ಹಿನ್ನೆಲೆ ಇರುವ ತಾತ್ವಿಕತೆ, ಮನುಷ್ಯನ ಬದುಕಿನ ನಡುವಳಿಯ ಮೂಲಕ ರೂಪುಗೊಂಡದ್ದೂ ಆಗಿದೆ. ಕನ್ನಡ ಭಾಷೆಯ ಸಹಜವಾದ ಶೈಲಿಕ ಸ್ತರಗಳನ್ನು ಈ ಅನುಭಾವಿ ಕವಿಗಳು ತಮ್ಮ ರಚನೆಗಳಲ್ಲಿ ತೋರಿದ್ದಾರೆ. ಈ ರಚನೆಗಳು ಕನ್ನಡ ಜನಪದದ ಅಂತರ್ಯದಲ್ಲಿ ಹರಿದಿರುವುದನ್ನು ನಾವು ತಿಳಿದದ್ದೂ ಕೂಡ ಈ ಕಾಲದಲ್ಲಿಯೇ. (ಈ ಅನುಭಾವಿ ಕವಿಗಳ ಬಗೆಗೆ ಶಿ.ಶಿ. ಬಸವನಾಳ, ದ.ರಾ. ಬೇಂದ್ರೆ, ಎಲ್. ಬಸವರಾಜು ಮುಂತಾದವರ ಅಧ್ಯಯನ ತುಂಬಾ ಉಪಯುಕ್ತವಾದದ್ದಾಗಿದೆ.) ಕಾವ್ಯದ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದರಲ್ಲಿ ಶರೀಫ, ಸಪ್ಪಣ್ಣನಂತಹ ಕವಿಗಳು ತೋರುವ ಎತ್ತರವನ್ನು ಮತ್ತು ಅವರು ಪ್ರತಿನಿಧೀಕರಣಗೊಳಿಸುವ ವಾಸ್ತವಿಕತೆಯನ್ನು ನಾವು ಇನ್ನೂ ಸೂಕ್ಷ್ಮವಾಗಿ ತಿಳಿಯಬೇಕಾಗಿದೆ. ಜನಪದ ಅಭಿವ್ಯಕ್ತಿ ಮತ್ತು ಸೃಜನಶೀಲ ಅಭಿವ್ಯಕ್ತಿ (ವ್ಯಕ್ತಿ ನಿರ್ಮಿತ) ಇವುಗಳೆರಡರ ನಡುವೆ ಗೆರೆ ಬಲು ತೆಳುವು. ಕಾವ್ಯರಚನೆಯ ನಿರ್ದಿಷ್ಟ ಪ್ರಮಾಣಗಳನ್ನು ಒಪ್ಪಿ ಬರೆಯುವ ಈ ಕವಿಗಳು ಕನ್ನಡ ಸಂಸ್ಕೃತಿಯ ಒಳಗೆ ನಿಂತು ಬರೆಯುತ್ತಿರುವ ಕವಿಗಳು. ಕನ್ನಡದ ಅನಕ್ಷರಸ್ಥ ವಲಯಕ್ಕೆ ಕವಿತೆಗಳ ಮೂಲಕ ಶಾಬ್ದಿಕ ರಚನೆಯನ್ನು ಮುಟ್ಟಿಸುವುದು ಹೇಗೆ ಎಂಬ ಸಮಸ್ಯೆ ಈ ಕವಿಗಳಿಗೆ ಮುಖ್ಯವಾಗಿದೆ. ಪಂಪನನ್ನು ಕಾಡಿದ ಮಾರ್ಗ-ದೇಸಿಯ ಸಮಸ್ಯೆ, ಕಾವ್ಯಸಂಪ್ರದಾಯದ ಚೌಕಟ್ಟಿನಿಂದ ಹೊರಗೆ ನಿಂತು ಕಾವ್ಯ ಪರಂಪರೆ ಎದುರಿಸಬಹುದಾದ ಅನೇಕ ಸಮಸ್ಯೆಗಳನ್ನು ಎದುರಿಸಿದ ವಚನಕಾರರು ಮತ್ತು ಕೀರ್ತನಕಾರರು, ಹರಿಹರ, ರಾಘವಾಂಕ, ಕುಮಾರವ್ಯಾಸರು ತಮ್ಮ ಭಾಷೆ ಮತ್ತು ಛಂದಸ್ಸುಗಳ ಮೂಲಕ ಬಹುಸಂಖ್ಯಾತರನ್ನು ತಲುಪಲು ಮಾಡಿದ ಪ್ರಯತ್ನವನ್ನು ಈ ಅನುಭಾವಿ ಕವಿಗಳ ಸಂದರ್ಭದಲ್ಲಿಯೂ ಮುಖ್ಯವಾಗಿ ಗಮನಿಸುತ್ತೇವೆ. ಅಲ್ಲದೆ ಈ ಹೊತ್ತಿನ ಕವಿಯ ಮುಖ್ಯ ಸಮಸ್ಯೆ ಮತ್ತು ಸವಾಲೂ ಕೂಡ ಇದೇ ಆಗಿದೆ.

ಇಂದಿನ ಕವಿಗಳ ಮೇಲೆ ಮೇಲಿಂದ ಮೇಲೆ ಬೀಳುತ್ತಿರುವ ಒತ್ತಡ ಒಂದು ದೃಷ್ಟಿಯಲ್ಲಿ ಕನ್ನಡ ಕಾವ್ಯ ಪರಂಪರೆ ಮತ್ತು ಸಮಕಾಲೀನ ಪರಿಸರದ ಸ್ವರೂಪವನ್ನು ವಿವರಿಸಿಕೊಳ್ಳಲು

ಸಹಾಯಕ್ಕೆ ಒದಗಿ ಬರುತ್ತದೆ. ಹೀಗಾಗಿ ಸಮೂಹ ಮಾಧ್ಯಮಗಳು ಮತ್ತು ನಮ್ಮ ಸಾಹಿತ್ಯದ ಸಂಬಂಧ ಸೂಕ್ಷ್ಮವಾದ ವಿಮರ್ಶೆಗೆ ಒಳಪಡುತ್ತಿದೆ.

ಕಾವ್ಯ ಒಂದು ಸಾಮಾಜಿಕ ಸಂಸ್ಥೆ ಎಂಬುದನ್ನು ನಾವೆಲ್ಲರೂ ತಿಳಿದಿದ್ದೇವೆ. ಈ ಸಾಮಾಜಿಕ ಸಂಸ್ಥೆಯ ಮೂಲಕ ಸೃಷ್ಟಿಯಾಗುವ ಎಲ್ಲ ಶಾಬ್ದಿಕ ರಚನೆಗಳೂ ನಿರ್ದಿಷ್ಟ performance ನಿಂದಲೇ ತನ್ನ ಸಂಸ್ಕೃತಿಯ ಭಾಗ ಕೂಡ ಆಗುತ್ತವೆ. ಇದರಿಂದ ತಿಳಿಯುವುದೇನೆಂದರೆ ಬಹುತೇಕ ಕನ್ನಡದ ಮಹತ್ವದ ಸಾಹಿತ್ಯ ಕೃತಿಗಳು ಅನಕ್ಷರಸ್ಥ ಸಂಸ್ಕೃತಿಯ ಬಗೆಗೆ ಗಾಢವಾದ ತಿಳಿವಳಿಕೆಯಿಂದ ಕೂಡಿದ್ದಾಗಿದೆ. ಇಂದಿಗೂ ನಿಜವಾದ ಅರ್ಥದಲ್ಲಿ ಅನಕ್ಷರಸ್ಥರೇ ಕನ್ನಡ ಕವಿತೆಯ ನಿಜವಾದ ಗ್ರಾಹಕರು. ಈ ಕಾವ್ಯಗಳನ್ನು ತಮ್ಮ ದೈನಂದಿನ ಮುಖ್ಯ ಭಾಗವಾಗಿ ಸ್ವೀಕರಿಸಿ ಅದರ ಮೂಲಕ ತಮ್ಮ ಚಹರೆಯನ್ನು ಮತ್ತು ಸಂಸ್ಕೃತಿಯೊಂದಿಗೆ ಸಂಬಂಧವನ್ನು ಕಂಡುಕೊಳ್ಳುವವರೂ ಆಗಿದ್ದಾರೆ. ಅನೇಕ ಸಮೂಹ ಮಾಧ್ಯಮಗಳು ಎಲೆಕ್ಟ್ರಾನಿಕ್ ಸಂಸ್ಕೃತಿಯ ಮುಖ್ಯ ಭಾಗ ಆಗಿದೆಯೇ ಎಂಬಂಥ ಪ್ರಶ್ನೆಗಳಿಗೆ ಉತ್ತರವನ್ನಾಗಲೀ, ಕಾರಣಗಳನ್ನಾಗಲಿ ಸರಳಗೊಳಿಸಿ ವಿವರಿಸುವುದು ಅಸಾಧ್ಯ. ಸಂವಹನದ ಸಾಧ್ಯತೆಯ ಪ್ರಶ್ನೆಗೆ ಕವಿಯಲ್ಲಿಯೇ ಕಾರಣಗಳನ್ನು ಹುಡುಕುವುದು ಒಂದು ರೀತಿಯದು. ಇದು ತುಂಬಾ ಗಮನೀಯವಾದದ್ದೆನಿಸುವುದಿಲ್ಲ. ಲೇಖಕನನ್ನು ಪೂರ್ತಿಯಾಗಿ ಹೊಣೆಗಾರರನ್ನಾಗಿ ಮಾಡದೆ ಇದಕ್ಕೆ ಕಾರಣಗಳನ್ನು ನಮ್ಮ ಆರ್ಥಿಕ ಸಮಸ್ಯೆ, ಶಿಕ್ಷಣ ಪದ್ಧತಿ, ಸಮೂಹ ಸಂವಹನ ಮಾಧ್ಯಮಗಳು ಇವುಗಳ ಮಟ್ಟದಲ್ಲಿ ಹುಡುಕುವುದು ಹೆಚ್ಚು ಫಲಪ್ರದವಾಗಬಹುದು. ಕನ್ನಡದ ಬಹುತೇಕ ಸಮರ್ಥ ಕವಿತೆಗಳನ್ನು ಅನೇಕ ಮಟ್ಟಗಳಲ್ಲಿ ಸಮೂಹ ಸಂವಹನಕ್ಕೆ ಗುರಿಪಡಿಸುವುದು ಸಾಧ್ಯವಿದೆ. ಕವಿಯೇ ಈ ಕೆಲಸ ಮಾಡಬೇಕೆಂದರೆ ಹೇಗೆ? ಆಧುನಿಕ ಪರಿಸರದಲ್ಲಿ ಹುಟ್ಟುವ ಈ ಸಮಸ್ಯೆಗಳು ಪ್ರಾಯಶಃ ನಮ್ಮ ಜನಪದದ ಸೃಷ್ಟ್ಯಾತ್ಮಕ ಅಭಿವ್ಯಕ್ತಿ ಮತ್ತು ಅವುಗಳ ಸಮಕಾಲೀನ ಸಂವಹನದ ಸಮಸ್ಯೆಗಳಿಗೂ ಅನ್ವಯಿಸುತ್ತದೆ.

ಈ ಅನುಭಾವಿ ಕವಿಗಳು ತಮ್ಮ ಅಂತರಂಗದ ಸೂಕ್ಷ್ಮ ಕಂಪನಗಳನ್ನು, ಆರೋಗ್ಯಕರ ಪ್ರೇಮವನ್ನು ಬ್ರಿಟಿಷರ ದಬ್ಬಾಳಿಕೆ ಮತ್ತು ಕ್ರೂರ 'ಯಂತ್ರ-ನಾಗರಿಕತೆ'ಯ ಸಂದರ್ಭದಲ್ಲಿ ಅಭಿವ್ಯಕ್ತಿಸಿದವರು. ತಮ್ಮ ಸುತ್ತಣ ಸಮುದಾಯದ ಸಂದರ್ಭಗಳಲ್ಲಿ ನಾಶಗೊಳ್ಳುತ್ತಿದ್ದ ಮನುಷ್ಯ ಸಂಬಂಧಗಳನ್ನು ಕುರಿತು ಅವರು ಬರೆದರು. ರಾಜಕೀಯ ಕೋಲಾಹಲ, ಅಸ್ಥಿರ ಆರ್ಥಿಕ ಬದುಕು, ಗುಲಾಮಗಿರಿಗೆ ತಮಗೆ ಅರಿವಿಲ್ಲದಂತೆಯೆ ಒಳಗಾದ ಸ್ಥಿತಿ ಇವುಗಳ ಹಿನ್ನೆಲೆಯಲ್ಲಿ ತಮ್ಮ ಪ್ರಸ್ತುತವನ್ನು ಗುರುತಿಸಿಕೊಂಡಿರುವ ಸ್ವರೂಪವನ್ನು ಆ ರಚನೆಗಳಲ್ಲಿ ಕಾಣಬಹುದು. ಬ್ರಿಟಿಷರ ಆಗಮನವನ್ನು ಕಾಲಜ್ಞಾನಿಯಾಗಿ ಸಾಂಕೇತಿಕವಾಗಿ ಸೂಚಿಸಿದ ನಾಗಲಿಂಗನ ಬಗೆಗೆ ಬೆಳೆದಿರುವ ಕತೆ ತುಂಬ ಮಾರ್ಮಿಕವಾಗಿದೆ. ಈ ಅನುಭಾವಿ ಕವಿಗಳ ಸುತ್ತ ಹರಡಿರುವ ನೂರಾರು ಕತೆಗಳು ಹಾಗೂ ಮಿಥ್‌ಗಳಿಗೆ ಮಿತಿಯಿಲ್ಲ. ಕಳೆದ ಶತಮಾನದ ಮಧ್ಯಭಾಗದಲ್ಲಿದ್ದ ಈ ಚಾರಣ ಕವಿಗಳು ಕನ್ನಡದಲ್ಲಿ - ಪ್ರಾದೇಶಿಕ ಸಂಸ್ಕೃತಿಗಳ ಆವರಣವನ್ನು ಜಾಗೃತಗೊಳಿಸಿದವರು. ಸಮಕಾಲೀನ ಪರಿಸರದಲ್ಲಿ ಸೃಷ್ಟಿಯಾಗುವ ಸೃಜನಶೀಲ ಲೇಖಕರು ಸೃಷ್ಟಿಸಿರುವ ಮಿಥ್ ಯಾವ

ಸ್ವರೂಪದ್ದೆಂದು ತಿಳಿಯಲು ನಾವು ಪ್ರಯತ್ನಪಡಬೇಕಿದೆ. ಜಾನಪದದ ಅಧ್ಯಯನದ ಮಾರ್ಗಗಳನ್ನು ಕಂಡುಕೊಳ್ಳುತ್ತಿರುವ, ಪ್ರಾಯಶಃ ಹುಡುಕುತ್ತಿರುವ ನಾವು, ಬ್ರಿಟಿಷರ ಸಾಹಿತ್ಯ ಮಾರ್ಗ ಮತ್ತು ಅದರೊಂದಿಗೆ ಅಸ್ಪಷ್ಟವಾದ ಸಂಬಂಧವನ್ನು ಪಡೆದುಕೊಂಡಿದ್ದ ಜಾನಪದದ ಅಧ್ಯಯನ ಮಾರ್ಗವನ್ನು ಸ್ವೀಕರಿಸಿದ್ದರಿಂದ ನಮ್ಮ ಸಂಸ್ಕೃತಿಯನ್ನು ಬೇರೊಂದು ಸಂಸ್ಕೃತಿಯ ಕಣ್ಣುಗಳಿಂದ ನೋಡುವ ವಿಪರ್ಯಾಸ ನಮ್ಮ ಅಧ್ಯಯನದ ತುಂಬ ಹರಡಿಕೊಂಡಿದೆ. ನಮ್ಮ ಸಂಸ್ಕೃತಿಯ ಒಳಗೆ ನಿಂತು ಆ ಸಂಸ್ಕೃತಿ ಸೂಕ್ಷ್ಮಗಳನ್ನು ಮತ್ತೊಂದು ಸಂಸ್ಕೃತಿಯ ವ್ಯಾಖ್ಯಾನ, ವಿವರಣೆಗಳೊಂದಿಗೆ ನೋಡುವುದು ಎಂದರೆ ಹೇಗೆ ಎಂಬ ಪ್ರಶ್ನೆ ನಮ್ಮ ಮುಂದಿದೆ. ಮಾನವ ಶಾಸ್ತ್ರದ ಪರಿಕಲ್ಪನೆಗಳು ನಮ್ಮ ಜಾನಪದದ ಅಧ್ಯಯನದ ಚರ್ಚೆಯಲ್ಲಿ ಮುಖ್ಯವಾಗಿ ಕಾಣಿಸಿಕೊಂಡಿವೆ. ಆದರೆ ಕನ್ನಡ ಸಂಸ್ಕೃತಿಯ ಮಾನವಶಾಸ್ತ್ರದ ನೆಲೆ ಯಾವುದು? ಹಾಗೂ ಅದರ ಆಕರ-ಪರಿಕರಗಳು ಯಾವುವು? ಅದಕ್ಕೆ ನಾವು ಗ್ರಹಿಸಿಕೊಂಡಿರುವ ಆಕರಗಳನ್ನಾಗಲಿ, ದಾಖಲೆಗಳನ್ನಾಗಲಿ ಯಾವ ದೃಷ್ಟಿಕೋನಗಳಿಂದ ಪರಿಶೀಲಿಸಬೇಕೆಂಬ ಪ್ರಶ್ನೆ ನಮ್ಮ ಸಂದರ್ಭದಲ್ಲಿ ಚರ್ಚಿತವಾಗಬೇಕಾಗಿದೆ. ಕನ್ನಡ ಸಂಸ್ಕೃತಿಯ ಸಂದರ್ಭದಲ್ಲಿ ಬೆಳೆದುಬಂದಿರುವ ಮಾನವಶಾಸ್ತ್ರ (Anthropology), ಭಾಷಾವಿಜ್ಞಾನ, ಮನೋವಿಜ್ಞಾನ, ಕಾವ್ಯಮೀಮಾಂಸೆ ಮತ್ತು ಇತರ ಜ್ಞಾನ ಶಾಖೆಗಳ ಆಲೋಚನೆಗಳನ್ನು ಕನ್ನಡ ಜಾನಪದ ಅಧ್ಯಯನ ಇನ್ನೂ ತನ್ನ ಅಧ್ಯಯನದ ಕಕ್ಷೆಗೆ ಸೇರಿಸಿಕೊಳ್ಳದೆ ಇರುವುದರಿಂದ ಸಮಕಾಲೀನ ಪರಿಸರದ ವಿಭಿನ್ನ ದಿಕ್ಕುಗಳನ್ನು, ತಾನು ತನ್ನ ವಸ್ತುವನ್ನು ಅದರ ಎಲ್ಲ ಸೂಕ್ಷ್ಮಗಳಲ್ಲಿ ತಿಳಿಯುವ ಪ್ರಯತ್ನದಲ್ಲಿ ಜಾನಪದವಿಜ್ಞಾನಿ ಅಸಮರ್ಥನಾಗಿದ್ದಾನೆ. ಮಧುರಚೆನ್ನ, ಹರ್ಡೇಕರ ಮಂಜಪ್ಪ, ಶಂ.ಬಾ. ಜೋಶಿ, ಮುಳಿಯ ತಿಮ್ಮಪ್ಪಯ್ಯ, ಪಂ. ತಾರಾನಾಥ, ಶಿವರಾಮ ಕಾರಂತ, ಗೋವಿಂದ ಪೈ, ಆಲೂರ ವೆಂಕಟರಾವ್ ಇವರ ಆಲೋಚನೆ - ವಿಚಾರಗಳಲ್ಲಿ ಕಂಡುಬರುವ ಸಾಂಸ್ಕೃತಿಕ ಮಾನವ ಶಾಸ್ತ್ರದ ನೆಲೆಗಳು, ಬೇಂದ್ರೆಯವರ ಗದ್ಯ ಬರಹಗಳು, ಗೋವಿಂದ ಪೈಗಳ ಸಂಶೋಧನೆಯಲ್ಲಿ ಸಂಸ್ಕೃತಿ, ಭಾಷೆ ಮತ್ತು ಭೌಗೋಳಿಕ ಸೂಕ್ಷ್ಮಗಳನ್ನು ಬಳಸುವ ರೀತಿ, ಗ್ರಂಥ ಸಂಪಾದನೆಯ ಆಂತರ್ಯದಲ್ಲಿಯೇ ರೂಪುಗೊಳ್ಳುವ ಡಿ.ಎಲ್. ನರಸಿಂಹಾಚಾರ್ಯರ ಅಂತರ್‌ಸಂಬಂಧಿ ಶಿಸ್ತು, ಬಸವನಾಳರ ವಚನಶೋಧನೆಯಲ್ಲಿ ಪ್ರತೀತವಾಗಿರುವ ಸಾಮಾಜಿಕ - ಚಾರಿತ್ರಿಕ ದೃಷ್ಟಿ, ಬೆಟಗೇರಿ, ಅರ್ಚಕ ರಂಗಸ್ವಾಮಿ, ಡಿ.ವಿ.ಜಿ., ಮಾಸ್ತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಇವರೆಲ್ಲರ ವಿಚಾರಗಳು ನಮ್ಮ ನವೋದಯ ವಿದ್ವಾಂಸರು ಸೃಷ್ಟಿಸಿರುವ ಮಾನವಶಾಸ್ತ್ರದ ಮೂಲಗಳೆ ಆಗಿವೆ. ಅಕಾಡೆಮಿಕ್ ಅರ್ಥದಲ್ಲಿ ಮಾನವಶಾಸ್ತ್ರೀಯ ಅಧ್ಯಯನ ಅವರದಾಗಿತ್ತೇ ಎಂಬಂಥ ಪ್ರಶ್ನೆಗಳು ನಮಗೆ ಮುಖ್ಯವಲ್ಲ. ಅವರ ಬರಹಗಳ ಮೂಲಕ ಕನ್ನಡ ಮಾನವ ಶಾಸ್ತ್ರದ ಆಕೃತಿಯನ್ನು ನಾವು ನಿರ್ಮಿಸಬೇಕಾಗಿದೆ. ಅಲ್ಲದೆ ಈ ಮಾನವಶಾಸ್ತ್ರಜ್ಞರು ಹೇಗೆ ಕನ್ನಡ ಸಂಸ್ಕೃತಿಯನ್ನು ವಿಶ್ಲೇಷಿಸಲು ವಿಭಿನ್ನ ಮಾರ್ಗಗಳನ್ನೇ ಪ್ರತಿನಿಧಿಸುತ್ತಾರೆಂಬುದನ್ನು ಗುರುತಿಸುವ ಜವಾಬ್ದಾರಿ ಇಂದಿನ ಜಾನಪದ ಅಧ್ಯಯನದ ಮುಖ್ಯ ಕಾರ್ಯವೂ ಆಗಬೇಕಾಗಿದೆ. ಅವರಲ್ಲೇ ಚಾರಿತ್ರಿಕತ್ವವನ್ನು ಪ್ರತಿಪಾದಿಸುವ ಚಿಂತಕರು, ರೂಪನಿಷ್ಠ ವಿಶ್ಲೇಷಣೆಕಾರರು ಮತ್ತು ಸಾಮಾಜಿಕ, ಸಾಂಸ್ಕೃತಿಕ ಅಧ್ಯಯನಕ್ಕೆ ಪೂರ್ವ ಪೀಠಿಕೆಯನ್ನು ಹಾಕಿದವರಿಗಿಂತ ನಾವು ಪಾಶ್ಚಾತ್ಯ

ಸಂದರ್ಭದಲ್ಲಿ ಬೆಳೆಯುತ್ತಿರುವ ಚಿಂತನೆಗಳನ್ನು ಸ್ವೇಚ್ಛೆಯಾಗಿ ಮತ್ತು ಅಸಂಗತವಾಗಿ ನಮ್ಮ ಅಧ್ಯಯನದಲ್ಲಿ ಒಳಗು ಮಾಡಿಕೊಂಡಂತೆ, ಜಾನಪದ ಅಧ್ಯಯನ ನಮ್ಮ ಸಂಸ್ಕೃತಿಯ ಮುಖ್ಯ ಚಿಂತನೆಗೆ ದಾರಿ ಮಾಡಿಕೊಡದೆ ಹೋಗಿರಬಹುದು. ನಮ್ಮ ಸಂದರ್ಭದ ಮಾನವಶಾಸ್ತ್ರದ ಪರಿಕಲ್ಪನೆಗಳನ್ನು ಮುಖ್ಯ ಭಿತ್ತಿಯನ್ನಾಗಿ ಗುರುತಿಸಿಕೊಳ್ಳದೆ ಹೋದರೆ ಕಲೋನಿಯಲ್ ಮತ್ತು ಸಾಮ್ರಾಜ್ಯಶಾಹಿ ಮಾನವಶಾಸ್ತ್ರದ ಪರಿಕಲ್ಪನೆಗಳನ್ನು ನಮ್ಮ ಸಂಸ್ಕೃತಿಯ ರಚನೆಗಳಲ್ಲಿ ಹುಡುಕುವ ಅಸಂಗತ ಸಾಹಸದಲ್ಲಿ ನಾವು ಕೊನೆಯಾಗಲೂಬಹುದು. ಇತ್ತೀಚಿನ ದಿನಗಳಲ್ಲಿ ಇಂತಹ ಮಾನವಶಾಸ್ತ್ರದ ಪರಿಕಲ್ಪನೆಗಳನ್ನು ನಮ್ಮ ಸಂಸ್ಕೃತಿಯ ರಚನೆಗಳೊಂದಿಗೆ ಹೊಂದಾಣಿಕೆ ಮಾಡುವಲ್ಲಿ ದೊಡ್ಡ ಗೊಂದಲವೇ ಏರ್ಪಟ್ಟಿದೆ. ಇದು ಕೇವಲ ಜಾನಪದ ಅಧ್ಯಯನಕ್ಕೆ ಮಾತ್ರ ಬಡಿದಿರುವ ಗರವಲ್ಲ. ನಮ್ಮ ಸಂಸ್ಕೃತಿಯ ಎಲ್ಲ ನೆಲೆಗಳ ಬಗೆಗೂ ಇದು ನಿಜವಿರಬಹುದು.

ಸಮಕಾಲೀನ ಪರಿಸರದಲ್ಲಿ ಈ ಎರಡೂ ಅಭಿವ್ಯಕ್ತಿಗಳು ಅಂದರೆ, ವಾಕ್ ಸಂಪ್ರದಾಯದ ರಚನೆಗಳು ಮತ್ತು ಸಮಕಾಲೀನ ಸಾಹಿತ್ಯ ಇವೆರಡೂ ಕ್ರಿಯಾತ್ಮಕವಾಗಿರುವುದರಿಂದ ನಮ್ಮ ಚರ್ಚೆ ಹೆಚ್ಚು ವ್ಯಾಪಕಗೊಳ್ಳುತ್ತದೆ. ಈ ಎರಡೂ ರೀತಿಯ ರಚನೆಗಳಲ್ಲಿ ಆದ್ಯಂತಿಕ (Absolute) ಮತ್ತು ದೈನಂದಿನ (Everyday life) ಎಂಬ ಎರಡು ನೆಲೆಗಳನ್ನು ಸ್ಥೂಲವಾಗಿ ಗುರುತಿಸಲು ಸಾಧ್ಯವಿದೆ. ಮೇಲುಸ್ತರ ಮತ್ತು ಕೆಳಸ್ತರದ ನಿಜಗಳನ್ನು ಶೋಧಿಸುವ ಸ್ವರೂಪವನ್ನು ಇವೆರಡೂ ರಚನೆಗಳ ಸಂದರ್ಭದಲ್ಲಿ ಗುರುತಿಸಲು ಸಾಧ್ಯವಿದೆ. ಅನುಭಾವದ ನೆಲೆ, ಕೌಟುಂಬಿಕ ನೆಲೆ, ದೈನಿಕಗಳು, ನಡಾವಳಿಗಳು ಇವುಗಳ ನಡುವಣ ಸಂಬಂಧದ ಶೋಧ ಇಲ್ಲಿ ನಡೆದಿದೆ. ಜನಪದದ ಅಭಿವ್ಯಕ್ತಿ ಪ್ರಾಚೀನವೂ ಅಲ್ಲ, ಹೊಸದೂ ಅಲ್ಲ- ಅದು ಸದ್ಯಕಾಲೀನ. ಭಾಷೆ ಮತ್ತು ಸಂಸ್ಕೃತಿಯ ಸಂಬಂಧವಲ್ಲದೆ ಬೇರಾವ ರೀತಿಯಲ್ಲಿಯೂ ಶಾಬ್ದಿಕ ಸಂಸ್ಕೃತಿಯ ನೆಲೆಗಳನ್ನು ತಿಳಿಯಲು ಸಾಧ್ಯವಿಲ್ಲ. ವಚನಕಾರರ ಕಾಯತತ್ವದ ಮೂಲಕ ಜನಪದದ ಎಲ್ಲ ಶ್ರದ್ಧೆ ನಂಬಿಕೆಗಳಿಗೆ ಮೇಲೆ ಹೇಳಿದ ದೈವಿಕ ಮತ್ತು ದೈನಿಕಗಳ ಸಂಬಂಧದೊಡನೆ ಸಮೀಕರಿಸಬಹುದಾಗಿದೆ. ಇಂಥ ಅಭಿವ್ಯಕ್ತಿಗಳಲ್ಲಿ ಯಾವ ನೆಲೆ ಪ್ರಧಾನ ಹಾಗೂ ಯಾವುದು ಅಪ್ರಧಾನ ಎಂಬುದನ್ನು ವಿಭಜಿಸಲು ಸಾಧ್ಯವಿಲ್ಲ. ಮನುಷ್ಯನ ತುಮುಲಗಳನ್ನು ತಮ್ಮ ಸಂದರ್ಭದಲ್ಲಿ ನಿಂತು ಪ್ರತಿಕ್ರಿಯಿಸುವ ಆಧುನಿಕ ಕವಿಗಳು ನಮ್ಮ ಕಣ್ಣೆದುರಿಗೆ ರೂಪುಗೊಳ್ಳುವ ಮಿಥಿಕಲ್ ಸೃಷ್ಟಿಗೆ ಉದಾಹರಣೆ. ಆಧುನಿಕ ಪರಿಸರದಲ್ಲಿ ಪಂಪ, ಬಸವಣ್ಣ, ಹರಿಹರ, ಕುಮಾರವ್ಯಾಸರು ಮಹೋನ್ನತ ಶಾಬ್ದಿಕ ಸೃಷ್ಟಿಗೆ ಕಾರಣವಾಗಿರುವ ಜನಪದ ನಾಯಕರಂತೆ ಕಾಣಿಸುತ್ತಾರೆ. ಅಂತೆಯೇ ಕಾರಂತ, ಬೇಂದ್ರೆ, ಕುವೆಂಪು, ಕೈಲಾಸಂ, ಮಾಸ್ತಿ ಈ ಕಾಲದ ಜನಪದ ನಾಯಕರು. ಜನಪದ ನಾಯಕರ ಬಹುರೂಪವಾದ, ವೈವಿಧ್ಯಮಯವಾದ ವ್ಯಕ್ತಿತ್ವ ಇವರ ಕೃತಿಗಳ ಮೂಲಕವೂ ಮತ್ತು ಅವರ ಸಾರ್ವಜನಿಕ ಜೀವನದ ಮೂಲಕವೂ ನಾವು ತಿಳಿಯಬಹುದಲ್ಲವೆ? ಇದೇ ಲೇಖಕರ ಹಿಂದೆ ಬಂದ ಅನೇಕ ಕವಿಗಳು ತಮ್ಮ ನವೀನ, ಸೃಜನಶೀಲ ಪ್ರತೀಕಗಳನ್ನು ಕಟ್ಟಿರುವಂತೆಯೇ ಆದ್ಯಂತಿಕ ಮತ್ತು ಲೌಕಿಕಗಳ ಘರ್ಷಣೆಯ ವಿಭಿನ್ನ ನೆಲೆಗಳನ್ನು ಶೋಧಿಸಿದ್ದಾರೆ. ಈ ಎಲ್ಲ ಕವಿಗಳ ಶೋಧನೆ ಸಾಮಾಜಿಕಗೊಂಡ, ಮಾನವೀಕರಣಕ್ಕೆ ಗುರಿಯಾಗಿರುವ ಪ್ರತೀಕಗಳ ನಿರ್ಮಿತಿಗೆ ಕಾರಣವಾಗಿದೆ.

ನಿಸರ್ಗ ಮತ್ತು ಮಾನವ ಸಂಬಂಧ, ಕುಟುಂಬ ಮತ್ತು ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ ಮೂಲಭೂತಗಳು, ಭೂಮ್ಯಾಕಾಶದ ನಡುವೆ ನಡೆಯುವ ಪ್ರಾಕೃತಿಕ ಸಂಘರ್ಷ, ಕಾಲದಂಥ ಅಮೂರ್ತ ಪರಿಕಲ್ಪನೆಯ ಬಗೆಗೆ ಹುಟ್ಟಿರುವ ಅನೇಕ ರಚನೆಗಳು ಆಧುನಿಕ ಕವಿಗಳು ನಿರ್ಮಿಸುವ ಸೃಜನಶೀಲ ಮಿಥ್‌ಗಳಾಗಿ ರೂಪುಗೊಂಡಿವೆ.

ಮಧುರಚೆನ್ನರ ಕವಿತೆಗಳಲ್ಲಿನ ಅನುಭಾವದ ಪೂರ್ವರಂಗ-ಕಾಳರಾತ್ರಿ-ಮುಂಬೆಳಗು, ಬೇಂದ್ರೆಯವರ ಕೌಟುಂಬಿಕ, ಆದಿಭೌತಿಕ ರಚನೆಗಳು ಮತ್ತು ವಿಸ್ಮಯಾಶ್ರಿತವಾದ ನಿಗೂಢ ಶೋಧನೆ, ಪು.ತಿ.ನ. ಅವರ ಆಧುನಿಕ ಪರಿಸರದ ಮೂಲಜಿಜ್ಞಾಸೆ, ಕುವೆಂಪು ಅವರ ನಿಸರ್ಗ ಮತ್ತು ಮನುಷ್ಯ ಸಂಬಂಧದ ಚಿಂತನೆಗಳು, ಅಡಿಗರ ಭೂಮಿ ಮತ್ತು ಮನುಷ್ಯ, ವರ್ತಮಾನ ಮತ್ತು ಭೂತಗಳ ಸಂಘರ್ಷದಿಂದ ಸೃಷ್ಟಿಗೊಳ್ಳುವ ಪುನರುತ್ಥಾನದ ಪ್ರತೀಕ, ಕೆ.ಎಸ್. ನರಸಿಂಹಸ್ವಾಮಿಯರ ಕೌಟುಂಬಿಕತೆಯ ಕೇಂದ್ರ ಸಂಬಂಧದಿಂದ ಹೊರಡುವ ತಾಯಿ-ಮಗ-ತಂದೆ ಇವುಗಳ ನೆಲೆ, ಕಣವಿಯವರ ಭೂಮ್ಯಾಕಾಶಗಳ ನಡುವಣ ಸಂಬಂಧದಿಂದ ಪ್ರಕಟಗೊಳ್ಳುವ ವಿಸ್ಮಯದ ಶೋಧ, ಜಿ.ಎಸ್. ಶಿವರುದ್ರಪ್ಪನವರ ಕಾಲ ಮತ್ತು ಮನುಷ್ಯ ಸಂಬಂಧದ ಆಲೋಚನೆಗಳು ನಮ್ಮ ಕವಿತೆಯ ಸಂದರ್ಭದಲ್ಲಿ ಸೃಷ್ಟಿಯಾಗುತ್ತಿರುವ ಅನೇಕ ಸೃಷ್ಟ್ಯಾತ್ಮಕ ಪ್ರತೀಕಗಳೇ ಆಗಿವೆ. ರಾಮಚಂದ್ರಶರ್ಮ, ಗಂಗಾಧರ ಚಿತ್ತಾಲ, ರಾಮಾನುಜನ್, ಚಂದ್ರಶೇಖರ ಕಂಬಾರ ಇವರ ರಚನೆಗಳು ನಿರ್ದಿಷ್ಟ ಕೇಂದ್ರವೊಂದರ ಮೂಲಕ ಪ್ರಕಟಗೊಳ್ಳುವ ಸೃಷ್ಟ್ಯಾತ್ಮಕ ಪ್ರತೀಕಗಳಿಗೆ ಉದಾಹರಣೆಗಳಾಗಿವೆ.

2

'ಪ್ರತೀಕ'ವೆಂದರೆ ಮಾತಿನ ಒಂದು ಮಾದರಿ. ಈ ಮಾದರಿ ಸ್ವೇಚ್ಛೆಯಾದುದಲ್ಲ. ಭಾಷೆಯ ಮೂಲಕ ಇಂಥ ಮಾದರಿ ಪ್ರತೀಕಗಳು ಸೃಷ್ಟಿಯಾಗಬೇಕಾದರೆ ಅದಕ್ಕೆ ಕೆಲವು ಸ್ಥಿತಿಗಳು ಅಗತ್ಯ. ಭಾಷೆ ಪ್ರತೀಕಕ್ಕೆ ತಿರುಗುವ ಪ್ರಕ್ರಿಯೆ ತುಂಬ ಸೂಕ್ಷ್ಮವಾದದ್ದು. ನಾವು ಯಾವುದನ್ನು ಪ್ರತೀಕವೆಂದು ಕರೆಯುತ್ತೇವೆಯೋ ಆ ಪ್ರತೀಕವೇ ಭಾಷೆಯಿಂದ ಸಿದ್ಧವಾದ ಸಂವಹನ ವ್ಯವಸ್ಥೆ. ಪ್ರತೀಕ ಒಂದು ವಸ್ತುವಲ್ಲ, ಪರಿಕಲ್ಪನೆಯಲ್ಲ, ವಿಚಾರವಲ್ಲ. ಪ್ರತೀಕ ಮಹತ್ವವಾದದ್ದನ್ನು ಅನೇಕ ನೆಲೆಗಳ ಮೂಲಕ ಸೂಚಿಸುವಂತೆ, ಪ್ರತೀಕವು ಮಾತಿನ ಒಂದು ಮಾದರಿಯಾಗಿರುವುದರಿಂದ ಯಾವುದು ಬೇಕಾದರೂ ಪ್ರತೀಕ ಆಗಬಹುದು. ಆದ್ದರಿಂದ ಯಾವುದೇ ಪ್ರತೀಕದ ವಿವರಣೆ ಅದರ ಪರ್‌ಫಾರ್ಮೆನ್ಸ್‌ನಿಂದ ನಮಗೆ ಅನುಭವವಾಗುವಂಥದ್ದು. ಪ್ರತೀಕಕ್ಕೂ ನಿರ್ದಿಷ್ಟ ಆಶಯಕ್ಕೂ ಸಂಬಂಧವಿಲ್ಲ. ಇಂಥ ಪ್ರತೀಕಗಳ ಸೃಷ್ಟಿಯಲ್ಲಿ ಆಧುನಿಕ ಕವಿಗಳು ತೋರಿರುವ ವಿಭಿನ್ನ ಸ್ವರೂಪಗಳನ್ನು ಗುರುತಿಸಬೇಕಾಗಿರುವುದು ನನ್ನ ಕೆಲಸ ಎಂಬುದನ್ನು ನಾನು ತಿಳಿದಿದ್ದೇನೆ. ಆದರೆ ಆಧುನಿಕ ಕನ್ನಡ ಕಾವ್ಯ ಅನೇಕ ಪ್ರಭೇದಗಳುಳ್ಳ ಕಾವ್ಯಸಂಸ್ಥೆಯಾಗಿರುವ ಕಾರಣ ಅಲ್ಲಲ್ಲಿ ಮಾಡಿರುವ ಸೂಚನೆಗಳಿಗಷ್ಟೇ ಈ ಪ್ರಬಂಧ ಸೀಮಿತಗೊಳ್ಳಬೇಕಾಗಿದೆ.

ಕನ್ನಡ ಪ್ರತೀಕಾತ್ಮಕವಾದ ಶಾಬ್ದಿಕ ರಚನೆಗಳ ಅಭ್ಯಾಸದಿಂದ ತಿಳಿದು ಬರುವ ಮುಖ್ಯ ಅಂಶವೆಂದರೆ ಈ ಎರಡೂ ಪರಂಪರೆಗಳು ಸಾಹಿತ್ಯ ಪರಂಪರೆ ಮತ್ತು ಜಾನಪದ ಪರಂಪರೆ.

(ಸಾಹಿತ್ಯ ಪರಂಪರೆಯಲ್ಲಿಯೂ ವಿಶಿಷ್ಟವಾದ ವಾಕ್ ಸಂಪ್ರದಾಯದ ಪರಂಪರೆಯೊಂದನ್ನು ನಾವು ಈಗಾಗಲೆ ಗುರುತಿಸಿಕೊಂಡಿದ್ದೇವೆ.) ಈ ಎರಡೂ ಪರಂಪರೆಗಳು ಒಂದಕ್ಕೊಂದು ಪೂರಕ ಸಂಬಂಧಗಳಾಗಿ ಇಂದಿಗೂ ಕ್ರಿಯಾಶೀಲವಾಗಿವೆ. ಸಂಸ್ಕೃತಿಯ ಆಶಯದ ದೃಷ್ಟಿ ಮತ್ತು ರಾಜಕೀಯ ಸಂದರ್ಭಗಳಲ್ಲಿ ಈ ಎರಡೂ ಅಭಿವ್ಯಕ್ತಿಗಳು ಕೂಡಿಯೇ ಜಾಗೃತವಾಗಿರುವುದನ್ನು ನಾವು ತಿಳಿಯಬಹುದಾಗಿದೆ. ಸಂಸ್ಕೃತ ಭಾಷೆಯೊಂದಿಗೆ ಈ ಎರಡೂ ನೆಲೆಯ ಶಾಬ್ದಿಕ ಅಭಿವ್ಯಕ್ತಿಗಳು ನಿರಂತರವಾದ ದಾಳಿಯನ್ನು ಮಾಡಿದೆ. ಮಾರ್ಗಪರಂಪರೆಯೊಂದಿಗೆ ನಮಗೆ ತಿಳಿದಂತೆ ಮೊದಲು ಜಗಳ ತೆಗೆದವನೇ ಪಂಪ. ಇಂದಿನ ಕವಿಗಳೂ ಕೂಡ ಈ ಸಮಸ್ಯೆಯನ್ನು ಎದುರಿಸಲು ಪ್ರಯತ್ನಿಸುತ್ತಲೇ ಇದ್ದಾರೆ. ಇದು ಒಂದು ಅರ್ಥದಲ್ಲಿ ಕವಿಗಳ ಸಮಸ್ಯೆಯಾಗಿ ಕಾಣಿಸಿಕೊಂಡರೆ ನಮ್ಮ ಸಂಸ್ಕೃತಿಯ ವಿಶಿಷ್ಟ ಘರ್ಷಣೆಯ ಪರಿಚಯಕ್ಕೂ ದಾರಿ ಮಾಡಿಕೊಡಬಹುದು.

ಭಾಷೆ ಮತ್ತು ಪ್ರತೀಕ ಇವೆರಡಕ್ಕೂ ಮಧ್ಯೆ ಒಂದು ಬೌದ್ಧಿಕ ಸಂಬಂಧ ಇದೆ. ಇದನ್ನು ರೂಪಕ, ಪ್ರತಿಮೆ ಮತ್ತು ಸಂಕೇತ ವ್ಯವಸ್ಥೆಗಳ ಮೂಲಕ ಗುರುತಿಸುತ್ತೇವೆ. ಜನಪದ ಅಭಿವ್ಯಕ್ತಿ ರೂಪಕ ಸಮೃದ್ಧವಾದದ್ದು. ಭಾಷೆಯ ಎಲ್ಲ ಸೂಕ್ಷ್ಮಗಳು ಜಾಗೃತಗೊಂಡು, ಈ ಅಭಿವ್ಯಕ್ತಿಯಲ್ಲಿ ಅತ್ಯಂತ ಕ್ರೀಯಾಶೀಲವಾಗಿ ಸಂಘಟಿಸಲ್ಪಟ್ಟಿರುತ್ತದೆ. ಜನಪದ ಭಾಷಿಕ ಸ್ವರೂಪವು ಗಾದೆ ಮಾತುಗಳು, ಹೇಳಿಕೆಗಳು, ದೃಷ್ಟಾಂತಗಳು, ಸಾಮತಿಗಳು ಮತ್ತು ಪೂರ್ವನಿರೂಪಣೆಯ ಅಂಶವನ್ನು ಒಳಗೊಂಡಿರುವ ಅನೇಕ ಅಂಶಗಳನ್ನು ಒಳಗೊಂಡಿದೆ. ಇದು ಕವಿತೆಯ ಉಗಮಕ್ಕೆ ಸಂಬಂಧಿಸಿದ ಅನೇಕ ಹೊಳವುಗಳನ್ನು ಕೊಡುತ್ತದೆ. ಇದೆಲ್ಲ ಜನಪದ ಕವಿತೆಯ ವಿಕಾಸಕ್ಕೆ ಮತ್ತು ಶಾಬ್ದಿಕ ಸಾಹಿತ್ಯದ ಮತ್ತೊಂದು ವಲಯಕ್ಕೆ ಅತ್ಯಂತ ನಿಕಟ ಸಂಬಂಧವನ್ನು ಪಡೆದುಕೊಂಡದ್ದಾಗಿದೆ. ಇಂತಹ ಸ್ಥಿತಿ ಜನಪದ ಮತ್ತು ಸೃಷ್ಟ್ಯಾತ್ಮಕ ಸಾಹಿತ್ಯಗಳಲ್ಲಿನ ತಂತ್ರ ಮತ್ತು ರೂಪಗಳಿಗಷ್ಟೇ ಸೀಮಿತವಾಗಿಲ್ಲ. ಅದಕ್ಕಿಂತ ಇವುಗಳಿಂದ ಕನ್ನಡ ಸಂಸ್ಕೃತಿಯ ಅತ್ಯಂತ ಸೂಕ್ಷ್ಮವಾದ ಚೈತನ್ಯ ಯಾವ ಸ್ವರೂಪದ್ದೆಂದು ತಿಳಿದುಬರುತ್ತದೆ. ಎಂದರೆ ನಮ್ಮ ಸಂಸ್ಕೃತಿಯಲ್ಲಿಯೇ ಜಾಗೃತವಾಗಿ ಇರುವ ಜೀವ ಸತ್ವಗಳನ್ನು ಭಾಷಿಕವಾಗಿ ಗ್ರಹಿಸಿರುವ ಸ್ಪಷ್ಟ ಸಂಬಂಧಗಳು ಜಾನಪದ ಅಭಿವ್ಯಕ್ತಿ ಮತ್ತು ಸೃಷ್ಟ್ಯಾತ್ಮಕ ಅಭಿವ್ಯಕ್ತಿಗಳಲ್ಲಿ ಹೇಗೆ ಫಲನಗೊಂಡಿದೆ ಎಂಬುದನ್ನು ತಿಳಿಯುವುದು ನಮ್ಮ ಮುಖ್ಯ ಉದ್ದೇಶವಾಗಬೇಕು.

ಜನಪದ ಅಭಿವ್ಯಕ್ತಿಯಲ್ಲಿ ಶಾಬ್ದಿಕ ರಚನೆಗಳನ್ನು ನಾವು ಪರಿಭಾವಿಸುವ ಕ್ರಮ ಯಾವುದು? ಅದಕ್ಕಾಗಿ ಬಳಸುವ ಮಾನದಂಡಗಳು ಹುಟ್ಟುವುದು ಮತ್ತು ರೂಪುಗೊಳ್ಳುವುದು ಎಲ್ಲಿ ಎಂಬ ಪ್ರಶ್ನೆ ನಮ್ಮ ಅಧ್ಯಯನದ ಸಂದರ್ಭದಲ್ಲಿ ಅಸ್ಪಷ್ಟವಾಗಿದೆ. ಹೇಳಿಕೆಗಳಿಗಷ್ಟೇ ಸೀಮಿತವಾಗಿ ನಿಲ್ಲುವಂಥ ದುರ್ಬಲ ನಿಲುವುಗಳು ಸಾಕಷ್ಟು ಪ್ರಮಾಣದಲ್ಲಿಯೇ ಪ್ರಚಾರದಲ್ಲಿವೆ. ಅಂತರ್ ಸಂಬಂಧಿಯಾದ ಅಧ್ಯಯನ ಮುಖ್ಯವೆನ್ನುವ ಮಾತಿನೊಂದಿಗೆ ಒಂದು ಸಾವಿರ ವರ್ಷಗಳ ಕನ್ನಡ ಸಾಹಿತ್ಯದ ರಚನೆಗಳೊಂದಿಗೆ ಜಾನಪದ ಅಧ್ಯಯನದ ಸಂಬಂಧದ ಸ್ವರೂಪ ಇನ್ನೂ ಅಸ್ಪಷ್ಟವಾಗಿಯೆ ಉಳಿದಿದೆ. ಶಿಷ್ಟ ಮತ್ತು ಅಶಿಷ್ಟವೆಂಬಂಥ ವರ್ಗೀಕರಣಗಳಿಗೆ ಸ್ಪಷ್ಟವಾದ ತಾತ್ವಿಕ ನೆಲೆಯಿಲ್ಲ. ಏಕೆಂದರೆ ಇವು ಜಾನಪದದ ಸೃಜನಶೀಲತೆಯ ಬಗೆಗೆ ಭ್ರಮಾಶೀಲವೂ

ಏಕಪಕ್ಷೀಯವೂ ಆದ ಸ್ವೇಚ್ಛೆಯ ಧೋರಣೆಯಿಂದ ಹುಟ್ಟಿದವುಗಳು. ಅಲ್ಲದೆ ಸಂವಹನದ ಸಾಧ್ಯತೆಗಳ ಬಗೆಗೆ ಏರ್ಪಡುವ ವಸ್ತುಸ್ಥಿತಿ ಮತ್ತು ಕ್ರಿಯಾ ಸಂಬಂಧಗಳನ್ನು ಧಿಕ್ಕರಿಸುವಂಥವೂ ಆಗಿವೆ. ಅಲ್ಲದೆ ಸೃಜನಶೀಲ ಕಾವ್ಯಪರಂಪರೆ ಮತ್ತು ಸೃಜನಶೀಲ ಜಾನಪದ ಪರಂಪರೆ ಇವುಗಳ ಆಂತರಿಕ ಸಂಬಂಧಗಳನ್ನು ಕೇವಲ ಕೆಲವು ಕವಿಗಳು ಮಾತ್ರ ಪಡೆದಿದ್ದಾರೆಂಬ ದೃಷ್ಟಿಗಷ್ಟೇ ಸೀಮಿತವಾಗಿದೆ. ಅದರಲ್ಲಿಯೂ ಕನ್ನಡ ಕವಿಗಳಲ್ಲಿ ಕಾಣಿಸಿಕೊಂಡಿರುವ ಗಾದೆಮಾತುಗಳು, ಪಡೆನುಡಿಗಳು ಮತ್ತು 'ದೇಸಿ' ಅಂಶಗಳು ಯಾವ ಕವಿಯಲ್ಲಿ ಹೆಚ್ಚು ಪ್ರಮಾಣದಲ್ಲಿ ಕಾಣಿಸಿ ಕೊಳ್ಳುತ್ತದೆಂಬುದೇ ಅವರಿಗೆ ಪ್ರಮುಖ ಆಧಾರ. ಇಂಥ ಅಧ್ಯಯನದಿಂದ ಹುಟ್ಟುವ ಚಿಂತನೆಗಳು ನಮಗೆ ಅಷ್ಟೇನೂ ಉಪಯುಕ್ತವಲ್ಲ.

ಜನಪದ ಅಭಿವ್ಯಕ್ತಿ ಮತ್ತು ಸೃಷ್ಟ್ಯಾತ್ಮಕ ಅಭಿವ್ಯಕ್ತಿ ಇವುಗಳಲ್ಲಿನ ಕೆಲವು ಸಾಮಾನ್ಯ ಅಂಶಗಳನ್ನು ಈ ಲೇಖನದಲ್ಲಿ ಈಗಾಗಲೇ ವಿವರಿಸಲಾಗಿದೆ. ಕನ್ನಡ ಕವಿಗಣದಿಂದ ಸೃಷ್ಟಿಯಾಗಿರುವ ಅನೇಕ ಮಿಥ್‌ಗಳು ದೇವರುಗಳನ್ನು ಕುರಿತ ಕಥೆಗಳೇ ಆಗಿವೆ. ಈ ಕಥಾನಕಗಳು ತನ್ನೊಳಗೆ ಅಸಂಖ್ಯಾತ ವಿಚಾರಗಳು ಮತ್ತು ನಡಾವಳಿಗಳನ್ನು ಒಳಗೊಂಡಿದೆ. ಹೀಗಾಗಿ ಕನ್ನಡ ಸಾಹಿತ್ಯದಲ್ಲಿ ದಿವ್ಯ ಕಥಾನಕಗಳು ಮತ್ತು ಜಾತ್ಯಾತೀತ ರಚನೆಗಳ ನಡುವಣ ಗೆರೆಯನ್ನು ಎಳೆಯಲು ಸಾಧ್ಯವಾಗುವುದಿಲ್ಲ. ನಾನು ಈ ಮಾತನ್ನು ಕನ್ನಡದ ಮಹತ್ವದ ಕೃತಿಗಳಿಗಷ್ಟೇ ಸೀಮಿತಗೊಳಿಸಿಕೊಂಡು ಹೇಳುತ್ತಿದ್ದೇನೆ. ನಮ್ಮದೇ ಆದ ಅರ್ಥದಲ್ಲಿ ಧರ್ಮ ಮತ್ತು ಪುರಾಣಗಳನ್ನು ನಾವು ಗ್ರಹಿಸಿರುವುದರಿಂದ ಅವುಗಳನ್ನು ನಮ್ಮ ಕಲೋನಿಯಲ್ ಮನಸ್ಥಿತಿಯಿಂದ ನೋಡುವ ಪ್ರಯತ್ನವೇ ಮುಖ್ಯವಾಗಿತ್ತು. ಕನ್ನಡ ಜನಪದದ ಸಂದರ್ಭದಲ್ಲಿ ನಮ್ಮ ಮಹತ್ವದ ಕೃತಿಗಳೆಲ್ಲವೂ ಜಾತ್ಯಾತೀತ ರಚನೆಗಳು. ಈ ದೃಷ್ಟಿಯಿಂದ ಕನ್ನಡದ ಕವಿಗಳು ಈಗಿನ ಸಾಹಿತ್ಯದ ಅಭ್ಯಾಸಿಯ ದೃಷ್ಟಿಯಲ್ಲಿ ಧರ್ಮಾತೀತ ಹಾಗೂ ಜಾತ್ಯಾತೀತ ವಿಚಾರಗಳನ್ನೇ ಮಂಡಿಸಿದವರೆಂದು ತಿಳಿಯುತ್ತದೆ. ಇದಕ್ಕೆ ಕಾರಣ ಅಖಿಲ ಭಾರತೀಯ ವ್ಯಾಪ್ತಿಯ ಸಂಸ್ಕೃತ ಕಥಾನಕಗಳು ಪ್ರಾದೇಶಿಕ ಸಂದರ್ಭದ ಜನಪದ ಕಥಾನಕಗಳು ನಮ್ಮ ಕವಿಗಳ ಶೋಧನೆಗೆ ಭಿತ್ತಿಯನ್ನು ಒದಗಿಸಿದವು. ಕನ್ನಡ ಕವಿಗಳ ದೃಷ್ಟಿಯಲ್ಲಿ ಈ ಕಥಾನಕಗಳು ರಾಷ್ಟ್ರೀಯ ಮತ್ತು ಉಪರಾಷ್ಟ್ರೀಯ ನೆಲೆಗಳಲ್ಲಿ ಸ್ವೀಕೃತವಾದವು. ಕನ್ನಡ ಕವಿಗಳು ಕಥಾನಕಗಳನ್ನು ನಡೆಸಿರುವ ಕ್ರಮವನ್ನು ನೋಡಿದರೆ-ಅವುಗಳ ನಿರೂಪಣಾ ಕ್ರಮ Legenderyಯಿಂದ ಚಾರಿತ್ರಿಕತ್ವದ ಕಡೆಗೆ ಚಲಿಸುವಂಥದ್ದಾಗಿದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿನ ಕೃತಿಗಳು ತಮ್ಮದೇ ಆದ ಸಾಂಸ್ಕೃತಿಕ ಚರಿತ್ರೆಯನ್ನು, ಅದರ ವಿಕಾಸದ ದ್ರವ್ಯಗಳನ್ನು ಒಳಗೊಂಡಿವೆ. ಕನ್ನಡ ಚರಿತ್ರೆಯ ಏಳು-ಬೀಳುಗಳು, ಮಾನವಿಕ ಇತಿಹಾಸದ ಸೂಕ್ಷ್ಮಾತಿಸೂಕ್ಷ್ಮ ವಿವರಗಳೊಂದಿಗೆ ಈ ಕೃತಿಗಳಲ್ಲಿ ಅಭಿವ್ಯಕ್ತಗೊಂಡಿವೆ. ಇಲ್ಲೆಲ್ಲ ಮನುಷ್ಯ ನನ್ನು ವೈಯಕ್ತಿಕ ಹಾಗೂ ಸಾಮುದಾಯಿಕ ಬದುಕಿನ ಸಂದರ್ಭದಲ್ಲಿ ನೋಡಲಾಗಿದೆ. ಕನ್ನಡದ ಯಾವುದೇ ಮಹತ್ವದ ಸಾಹಿತ್ಯ ಕೃತಿ ಕೇವಲ ಪೂಜ್ಯಸ್ಥಾನದ ಮಟ್ಟದಲ್ಲಿ ಮಾತ್ರ ಸ್ವೀಕೃತವಾಗಿಲ್ಲ. ಹರಿಶ್ಚಂದ್ರ ಕಾವ್ಯ, ಗದುಗಿನ ಭಾರತ, ಜೈಮಿನಿ ಭಾರತ, ಸರ್ವಜ್ಞನ ವಚನಗಳು, ದಾಸರ ಕೀರ್ತನೆಗಳು ಇವುಗಳ ಈ ಕಾಲದ ಪ್ರಸಾರವನ್ನಷ್ಟೇ ಗಮನಿಸಿದರೂ ಅವುಗಳ ಸಾರ್ವತ್ರಿಕತೆಯನ್ನು ತಿಳಿಯಲು ಸಾಧ್ಯವಿದೆ. ಇದಕ್ಕೆ ಕಾರಣವೆಂದರೆ ಕನ್ನಡ ಸಮಾಜವನ್ನು ಪ್ರತಿನಿಧಿಸುವ

ವಿಶಿಷ್ಟಾಂಶಗಳು ಈ ಕೃತಿಗಳ ಮುಖ್ಯ ಕಾಳಜಿಗಳಾಗಿವೆ. ಕನ್ನಡ ಸಮಾಜದಲ್ಲಿನ ಧರ್ಮ, ರಾಜನೀತಿ, ಸಾಮಾಜಿಕ ರಚನೆ, ಪರಿಸರ, ಚರಿತ್ರೆ ಮತ್ತು ವಿಶಿಷ್ಟ ಭೌಗೋಳಿಕ ಅಂಶಗಳು ಈ ಕೃತಿಗಳ ಮೂಲಕ ಪ್ರತಿನಿಧೀಕರಣಕ್ಕೆ ಗುರಿಯಾಗಿವೆ. ಯಾವುದೇ ಭಾಷೆಯಲ್ಲಿ ನಡೆಯುವ ಶಿಷ್ಟ ಮತ್ತು ಅಶಿಷ್ಟ ಕೃತಿಗಳ ರಚನೆಗಳು ಆ ಸಂಸ್ಕೃತಿಯ ಇಮ್ಯಾಜಿನೇಟಿವ್ ಅಗತ್ಯಗಳಿಗಾಗಿ ಹಾಗೂ ಸಾಂಸ್ಕೃತಿಕ ಒತ್ತಡಗಳಿಂದ ಸೃಷ್ಟಿಯಾದದ್ದು. ಈ ಎರಡೂ ರೀತಿಯ ರಚನೆಗಳು ಮೂಲಭೂತವಾಗಿ ಭಾಷಿಕ ನೆಲೆಯಿಂದಲೇ ಹುಟ್ಟಿದವುಗಳು.

ಕನ್ನಡದ ಮಹತ್ವದ ಕೃತಿಗಳು ಈ ಹೊತ್ತಿಗೂ ಜನಪ್ರಿಯತೆಯನ್ನು ಪಡೆದುಕೊಂಡಿರುವುದಕ್ಕೆ ಅನೇಕ ಕಾರಣಗಳಿವೆ. ಧರ್ಮ-ಮತ-ಜಾತಿ ವಲಯವನ್ನೂ ಮೀರಿ ಬೆಳೆದಿರುವ ಅವುಗಳ ಜನಪ್ರಿಯತೆ ಮತ್ತು ಜನಾದರಣೀಯ ಸತ್ವಗಳು, ಆ ಕೃತಿಗಳು ಹುಟ್ಟಿದ ಮತ್ತು ವಿವಿಧ ಕಾಲಮಾನಗಳಲ್ಲಿ ಯಾವ ಯಾವ ಸ್ವರೂಪವನ್ನು ಪಡೆದುಕೊಂಡವೆಂಬುದನ್ನು ಊಹಿಸಲು ಆಗಾಧ ಕಲ್ಪನೆ ಬೇಕು. ಈ ಕೃತಿಗಳು ರಚನೆಯಾದ ಕಾಲದಲ್ಲಿಯೆ ಅವುಗಳಿಗೆ ಪೂಜ್ಯತೆ ಒದಗಿ ಬಂದಿರಲಾರದು. ವಸಾಹತುಶಾಹಿ ಆಳ್ವಿಕೆಯಲ್ಲಿ ನಮ್ಮ ಸಂಸ್ಕೃತಿಯನ್ನು ನೋಡುವ ವಿಲಕ್ಷಣ ದೃಷ್ಟಿಯೊಂದು ಬೆಳೆದದ್ದರಿಂದ ನಮ್ಮ ಕವಿಗಳನ್ನು ನೋಡುವ ದೃಷ್ಟಿ ಬದಲಾಯಿತು. ನಮ್ಮ ಆಧುನಿಕ ಜಾನಪದ ಅಧ್ಯಯನದ ತತ್ವವಿಚಾರವೂ ಕೂಡ ಇದರಿಂದ ಹೊರತಾಗಿಲ್ಲ. ಕವಿಗಳು ಸೃಷ್ಟಿಸಿರುವ ಮಿಥ್ ಮತ್ತು ಜನಪದದ ಅಶಯಗಳ ಮೂಲಕ ವೈವಿಧ್ಯಮಯವಾದ ಶೋಧನೆಗಳತ್ತ ಗಮನಹರಿಸುತ್ತೇವೆ.

ಈ ಸೃಜನಶೀಲ ಮಿಥ್‌ಗಳು ಜನಪ್ರಿಯ ಪರಂಪರೆಯ ಮಿಥ್‌ಗಳೊಂದಿಗೆ ಸಂಬಂಧವನ್ನು ಬೆಸೆದುಕೊಂಡಿರುವುದರಿಂದ ಆ ಸಮಾಜದ ಧಾರ್ಮಿಕ ಮತ್ತು ರಾಜಕೀಯ ಸಂಬಂಧಗಳು ಬೇರೆಲ್ಲ ವಿವರಗಳೊಂದಿಗೆ - ಪ್ರಕಟಗೊಳ್ಳುತ್ತವೆ. ಸೃಜನಶೀಲ ಪ್ರತೀಕ ನಿರ್ಮಿತಿಯಾಗಲೀ, ಜನಪ್ರಿಯ ಪರಂಪರೆಯ ಪ್ರತೀಕ ನಿರ್ಮಿತಿಯಾಗಲೀ ಒಂದು ಸಂಸ್ಕೃತಿಯ ಸಂಬಂಧದೊಡನೆ ಪಡೆಯುವ ಸಂಬಂಧದೊಡನೆ ಪಡೆಯುವ ಸಂಬಂಧ ತುಂಬ ಮುಖ್ಯವಾದದ್ದೂ ಆಗುತ್ತದೆ. ಮಹಾಭಾರತ ಮತ್ತು ರಾಮಾಯಣದ ಕಥಾನಕಗಳು ಮತ್ತು ಜೈನ ಮತ್ತು ವೀರಶೈವ ಕಥಾಭಿತ್ತಿಗಳು ಪ್ರಸಾರಗೊಂಡಿರುವುದು ಸಂಸ್ಕೃತದಿಂದ ಮಾತ್ರವೆ ಅಲ್ಲದೆ ತನ್ನದೇ ಆದ ಪ್ರಾದೇಶಿಕ ಮತ್ತು ಜನಪ್ರಿಯ ಪರಂಪರೆಯ ಮೂಲಕ ಹರಿದು ಬಂದಿರುವುದೂ ಆಗಿದೆ. ಹೀಗಾಗಿ ಕನ್ನಡ ಪ್ರಾದೇಶಿಕ ಸಂಸ್ಕೃತಿ ತನ್ನದೇ ಆದ Mythical Cultureಅನ್ನು ಒಳಗೊಂಡಿರುವಂಥದ್ದೂ ಆಗಿದೆ.

ಕನ್ನಡ ನವೋದಯ ಕವಿಗಳು ತಮ್ಮ ಕಥಾಭಿತ್ತಿಯನ್ನು ಮಹಾಭಾರತ, ರಾಮಾಯಣ ಮತ್ತು ಭಾಗವತವೇ ಮೊದಲಾದ ನೆಲೆಗಳಿಂದ ಆರಿಸಿಕೊಂಡಿದ್ದರೂ ಅವುಗಳಲ್ಲಿ ಅಲ್ಲಿಯ ತನಕ ನಿರ್ದಿಷ್ಟವಾದ ಆಶಯಗಳನ್ನು ಬಿತ್ತರಿಸಿದರು. ಪು.ತಿ.ನ. ಅವರ ರಾಮಾಯಣ, ಭಾಗವತ ರೂಪಕಗಳು, ಕುವೆಂಪು ಅವರ ಚಿತ್ರಾಂಗದಾ, ರಾಮಾಯಣ ದರ್ಶನಂ, ಗೋವಿಂದ ಪೈ ಅವರ ಗೊಲ್ಗೋಥಾ ಮತ್ತು ವೈಶಾಖಿ, ಕಡೆಂಗೊಂಡ್ಲು ಶಂಕರಭಟ್ಟರ ಮಾದ್ರಿಯ ಚಿತೆ ಇವುಗಳು

ಸ್ಪಷ್ಟವಾಗಿ ಮಿಥಿಕಲ್ ಪುನರ್‌ಸೃಷ್ಟಿಗಳು. ಇಂದಿನ ನಮಗೆ ಇವುಗಳು ಸೃಜನಶೀಲ ಮಿಥಿಕಲ್ ರಚನೆಗಳು ಮಾತ್ರವಾಗದೆ ಜಾತ್ಯತೀತ ರಚನೆಗಳಾಗಿಯೂ ಕಾಣಿಸುತ್ತಿವೆ. ನಮ್ಮ ಹಿಂದಿನ ಕವಿಗಳ ರಚನೆಗಳೂ ಇಂದಿನ ಸಂದರ್ಭದಲ್ಲಿ ಅಂಥದೇ ಅವಗಾಹನೆಗೆ ಪಕ್ಕಾಗಿವೆ. ಈ ಹಿನ್ನೆಲೆಯಲ್ಲಿ - ಸೃಜನಶೀಲ ಕಾವ್ಯನಿರ್ಮಿತಿ ಮತ್ತು ಜನಪ್ರಿಯ ಪರಂಪರೆಯ ಕ್ರಿಯಾತ್ಮಕವಾದ ಅಂತರ್ ಪ್ರಕ್ರಿಯೆಗಳ ಮೂಲಕ ನಮ್ಮ ಲೇಖಕರ ಸಂಸ್ಕೃತಿಯ ಸಂದರ್ಭವನ್ನು ಅಭಿವ್ಯಕ್ತಿಸಿರುವ ಸ್ವರೂಪವನ್ನು ತಿಳಿಯಲು ದಾರಿಯಾಗುತ್ತದೆ. ನಾನು ಮೇಲೆ ಸೂಚಿಸಿರುವ ಕೃತಿಗಳು ವಾಕ್ ಸಂಪ್ರದಾಯದ ಮೇಲೆ ಆಧಾರಿತವಾದದ್ದಾಗಿದೆ. ಆಧುನಿಕ ಕಾವ್ಯ ಸಂದರ್ಭ ಕನ್ನಡ ಕಾವ್ಯ ಪರಂಪರೆಯ ವಿಶಿಷ್ಟಾಂಶಗಳೊಂದಿಗೆ ಜನಪ್ರಿಯ ಪರಂಪೆಯ ಮುಖ್ಯ ಸತ್ವಗಳನ್ನು ಒಳಗೊಳ್ಳುವುದರಿಂದ - ನಮ್ಮ ಸಂಸ್ಕೃತಿಯ ಆಂತರಿಕ ಸಂಬಂಧಗಳ ವಲಯವೊಂದು ನಿರ್ಮಾಣವಾಗುತ್ತದೆ. ಈ ಆಂತರಿಕ ಸಂಬಂಧವನ್ನು ತತ್ಕಾಲೀನ ಸಾಮಾಜಿಕ ಸಂಬಂಧವೆಂತಲೂ ಗುರುತಿಸಬಹುದು.

ಜನಪದದ ನಿರ್ಮಿತಿ ಮತ್ತು ಸೃಜನಶೀಲ ನಿರ್ಮಿತಿ ಇವೆರಡೂ ಮೌಲ್ಯಬದ್ಧ ಸಂಕೇತ ವ್ಯವಸ್ಥೆಯನ್ನು ತನ್ನ ಮುಖ್ಯ ನೆಲೆಯನ್ನಾಗಿ ಹೊಂದಿರುವುದರಿಂದ ಮಿಥ್‌ನ ಆಧುನಿಕ ಗ್ರಾಹಕ ಹೆಚ್ಚು ದಟ್ಟವಾದ ಅನುಭವಗಳನ್ನು ಈ ಎರಡೂ ನೆಲೆಯ ಕೃತಿಗಳ ಮೂಲಕ ಪಡೆಯುತ್ತಾನೆ. ರಾಮಾಯಣ ದರ್ಶನಂ ಅಂತಹ ಈ ಕಾಲದ ಮಿಥಿಕಲ್ ಸೃಷ್ಟಿಯನ್ನು ಓದುಗ ಹೇಗೆ ಗ್ರಹಿಸಬೇಕೆಂಬ ಪ್ರಶ್ನೆಗೆ ಈ ಚರ್ಚೆ ಒಂದಿಷ್ಟು ಸಹಾಯವನ್ನು ಒದಗಿಸಬಹುದು. ರಾಮಾಯಣ ದರ್ಶನಂ-ದ ಕತೆಗೆ ಮೂಲ ಯಾವುದು? ವಾಲ್ಮೀಕಿಯದೆ? ತೊರವೆ ನರಹರಿಯದೆ? ಕಂಬನದೆ? ಮುದ್ದಣ-ನಾಗಚಂದ್ರರದ್ದೆ? ಓದುಗ ಯಾವ ರಾಮಾಯಣ ಕೃತಿಯನ್ನೂ ಆಧರಿಸದ ಜನಪದ ಕಥಾನಕದಿಂದ ಹರಿದು ಬಂದಿರುವ ರಾಮಾಯಣದ ಭಾವಕೋಶದೊಂದಿಗೆ ಮಾತ್ರ ಆ ಕೃತಿಯನ್ನು ಪ್ರವೇಶಿಸುತ್ತಾನೆ. ಇಂಥ ಕೃತಿಯಿಂದ ಉಂಟಾದ ಪರಿಣಾಮ ಬೇರೆಲ್ಲ ರಚನೆಗಳಿಗಿಂತ ಭಿನ್ನವಾದದ್ದೂ ಆಗಿದೆ. ರಾಮಾಯಣ ದರ್ಶನಂ ಕೃತಿಗೆ ತನ್ನದೇ ಆದ ಸಂಕೇತ ವ್ಯವಸ್ಥೆ ಇದೆ ಎನ್ನುವುದನ್ನು ನಾನು ಚೆನ್ನಾಗಿ ಬಲ್ಲೆ. ಒಂದು ಮಿಥ್ ಆಗಲೀ, ಸೃಜನಶೀಲ ಮಿಥ್ ಆಗಲೀ ಸ್ವಾಭಾವಿಕವಾಗಿಯೇ ಸಂಸ್ಕೃತಿಯ ಮೂಲಕ ಸಿದ್ಧವಾದ ಸಂಕೇತ ವ್ಯವಸ್ಥೆಯಿಂದ ಕೂಡಿದ ರಾಚನಿಕ ಸ್ವರೂಪವನ್ನು ಪಡೆದಿರುತ್ತದೆ. ಮಿಥ್ ಅನೇಕ ಅರ್ಥಗಳನ್ನು ಧರಿಸುವ ಶಕ್ತಿಯನ್ನು ಪಡೆದುಕೊಂಡಿರುವುದರಿಂದ ಸೃಜನಶೀಲ ಮಿಥ್‌ಗಳೂ ಕೂಡ ಅಂಥ ಧಾರಣಶಕ್ತಿಯನ್ನು ಸಶಕ್ತವಾಗಿ ಪಡೆಯುತ್ತವೆ. ಇದು ಮಿಥಿಕಲ್ ರಚನೆಗಳ ಭಾಷಿಕ ಸಂದರ್ಭಕ್ಕೆ ಸಂಬಂಧಿಸಿದ್ದು. ಭಾಷೆಗೆ ಇರುವ ಅಭಿವಾಚನೀಯತೆಯ ಕಾರಣದಿಂದಲೂ ಕವಿ ಬಳಸುವ ಭಾಷಾಸ್ವರೂಪದ ಅಧ್ಯಯನ ಸಾಧ್ಯವಿದೆ. ಈ ದೃಷ್ಟಿಯಿಂದ ಆಧುನಿಕ ಕನ್ನಡ ಕವಿತೆಯ ಕೆಲವು ನೆಲೆಗಳ ಅಭ್ಯಾಸ ಸಾಧ್ಯವಿದೆ.

❑

ಧರ್ಮ ಕುರಿತು ಕುವೆಂಪು

ವಿ. ಚಂದ್ರಶೇಖರ ನಂಗಲಿ

ಬೆರಳು ತೋರಿದರೆ ಹಸ್ತವನ್ನೇ ನುಂಗುತ್ತಾನೆಂಬ ಗಾದೆಯಿದೆ. ಧರ್ಮ ಕುರಿತು ಕುವೆಂಪು ವಿಚಾರಧಾರೆಯ ಬಗ್ಗೆ ನಾನಿಲ್ಲಿ ಬೆರಳು ತೋರುವ ಕೆಲಸ ಮಾತ್ರ ಮಾಡುತ್ತೇನೆ. ಸಹೃದಯರಾದ ತಾವೆಲ್ಲ ಈ ತೋರು ಬೆರಳಿನ ಜೊತೆಗೆ ಇಡಿಯಾದ ಹಸ್ತವೊಂದರ ಸ್ವರೂಪವನ್ನು ಗ್ರಹಿಸ ಬೇಕೆಂದು ವಿನಂತಿಸುತ್ತೇನೆ. ನಮ್ಮ ದೇಶದಲ್ಲಿ ಎರಡು ವಿಧವಾದ ಆಲೋಚನಾ ಕ್ರಮಗಳನ್ನು (ಇವು ಎರಡು ವಿಧವಾದ ಜೀವನಶೈಲಿಗಳೂ ಹೌದು) ಸುಸ್ಪಷ್ಟವಾಗಿ ಗುರುತಿಸಬಹುದು. ಒಂದು, ಅನುಲೋಮ ಚಿಂತನೆ; ಇನ್ನೊಂದು, ಪ್ರತಿಲೋಮ ಚಿಂತನೆ.

ಅನುಲೋಮ ಚಿಂತನೆಗಳು : ಅನುಲೋಮ ಚಿಂತನೆ ಎಂದೆಂದೂ ಯಥಾಸ್ಥಿತಿಯನ್ನೇ ಪ್ರತಿಪಾದಿಸುತ್ತದೆ. ಜನ್ಮಾಧಾರಿತ ಅಸಮಾನತೆಯನ್ನು ಸಾರುವ ವರ್ಣವ್ಯವಸ್ಥೆ, ಮತೀಯ ಭೇದಭಾವಗಳನ್ನು ಹುಟ್ಟುಹಾಕುವ ಸಾಂಸ್ಥಿಕ ಧರ್ಮ ಮತ್ತು ಪುರೋಹಿತಶಾಹಿ, ಆರ್ಥಿಕ ತಾರತಮ್ಯಕ್ಕೆ ಕಾರಣವಾದ ಊಳಿಗಮಾನ್ಯ ಪದ್ಧತಿ, ಇವುಗಳನ್ನೆಲ್ಲ ಸಂರಕ್ಷಿಸುತ್ತಿರುವ ಪ್ರಭುತ್ವ ಶಕ್ತಿಯ ಪಟ್ಟಭದ್ರ ಹಿತಾಸಕ್ತಿಗಳು, ಸ್ವಾರ್ಥದಿಂದ ಕೂಡಿದ ಸಂಸ್ಕೃತೀಕರಣ ಮತ್ತು ಪಾಶ್ಚಾತ್ಯೀಕರಣಗಳು, ಭಾರತ ವ್ಯಾಪಿಯಾದ ಸ್ಥಗಿತ ಚೌಕಟ್ಟುಗಳು, ಸಂಸ್ಕೃತಿಯ ಮಹಾ ಪ್ರವಾಹದಲ್ಲಿ ಏಕರೂಪಾತ್ಮಕ ವಾದ ದೃಷ್ಟಿ-ಧೋರಣೆಗಳು - ಇವೆಲ್ಲ ರೂಢಿಬದ್ಧ. ಯಾರು ಇವುಗಳನ್ನು ಪ್ರತಿಪಾದಿಸುತ್ತಾರೋ ಅವರನ್ನು ಯಥಾಸ್ಥಿತಿಯ ಪ್ರತಿಪಾದಕರು ಎಂದು ಕರೆಯಬೇಕಾಗುತ್ತದೆ. ತಾತ್ವಿಕವಾಗಿ ಇವರೆಲ್ಲರು ಭಾವನಾವಾದಿಗಳೂ, ವ್ಯಕ್ತಿವಾದಿಗಳೂ ಆಗಿದ್ದಾರೆ. ಇವರನ್ನು ಭಿನ್ನವಾದಿಗಳೆಂತಲೂ ಕರೆಯ

ಬಹುದು. ಅವರ ಆಲೋಚನೆ ಮತ್ತು ಜೀವನಶೈಲಿಗಳ ಹಿಂದಣ ತತ್ತ್ವಜ್ಞಾನ ಇದೇ ಆಗಿದೆ. ಅವರಿಗೆ ಸಮಾಜದಲ್ಲಿ ನಿಸ್ವಾರ್ಥವಾದ ಯಾವೊಂದು ಬದಲಾವಣೆಯೂ ಬೇಕಾಗಿಲ್ಲ.

ಪ್ರತಿಲೋಮ ಚಿಂತನೆಗಳು : ಪ್ರತಿಲೋಮ ಚಿಂತನೆಯು ಸದಾ ಪರಿವರ್ತನೆಯ ಹರಿಕಾರನಾಗಿದೆ. ವರ್ಣವ್ಯವಸ್ಥೆಯ ಉಲ್ಲಂಘನೆ, ಸಾಂಸ್ಥಿಕ ಧರ್ಮ ಮತ್ತು ಪುರೋಹಿತಶಾಹಿಯ ನಿರಾಕರಣೆ (ಉದಾ: ಭಕ್ತಿಪಂಥ), ಭೂ ಸ್ವಾಮ್ಯ ನೀತಿಯ ಧಿಕ್ಕಾರ, ಪ್ರಭುತ್ವಕ್ಕೆ ತಲೆಬಾಗದ ದಿಟ್ಟತನ, ಅನನ್ಯತೆಯ ಹುಡುಕಾಟ ಮತ್ತು ಸ್ವರೂಪ ಜ್ಞಾನ, ಸ್ಥಳೀಯವಾದ ಜಾನಪದ ಬುದ್ಧಿಮತ್ತೆ, ಸಂಸ್ಕೃತಿಯ ಮಹಾ ಪ್ರವಾಹದಲ್ಲಿ ಬಹುರೂಪಾತ್ಮಕ ದೃಷ್ಟಿ-ಧೋರಣೆಗಳು - ಇವೆಲ್ಲ ರೂಢಿವಿರುದ್ಧ. ಇಂತಹ ಚಿಂತನೆಗಳನ್ನು ಯಾರು ಹೇಳುತ್ತಾರೋ ಅವರನ್ನು ಪರಿವರ್ತನಕಾರರು ಎನ್ನಬಹುದು. ಪರಿವರ್ತನೆಯನ್ನು ಬಲವಾಗಿ ಪ್ರತಿಪಾದಿಸುವ ಇವರನ್ನೆಲ್ಲ ತಾತ್ವಿಕವಾಗಿ ಭೌತವಾದಿಗಳು, ಸಮಾಜವಾದಿಗಳು ಮತ್ತು ಅಭಿನ್ನವಾದಿಗಳು ಎಂದು ಗುರುತಿಸಬಹುದು. ವ್ಯಕ್ತಿ ಮತ್ತು ಸಮಾಜದ ನೆಲೆಗಳಲ್ಲಿ ಯಾವ ವಿಧವಾದ ಭಿನ್ನತೆಯನ್ನೂ ಅವರು ಇಷ್ಟಪಡುವುದಿಲ್ಲ.

ಈ ಹಿನ್ನೆಲೆಯಲ್ಲಿ ನೋಡಿದರೆ, ಜಗದಚ್ಚರಿಯ ಅಂದದ ಒಪ್ಪಂದ, ಜೀವಿ-ಜೀವಿಗಳ ನಡುವಣ ಅಭೇದದ ಕಟ್ಟಡ, - ಇವು ಕುವೆಂಪು ಸಾಹಿತ್ಯದ ವಿಶಿಷ್ಟ ದರ್ಶನವಾಗಿದೆ. **ಗತಿಶೀಲತೆ ಮತ್ತು ಪರಿವರ್ತನೆ** ಕುವೆಂಪು ಸಾಹಿತ್ಯದ ತಿರುಳಾಗಿದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಅಂತಕ್ಕನ ಓಟ್ಲುಮನೆಯು ಸಾರ್ವಜನಿಕ ಶಿಕ್ಷಣದ ಪರಿಣಾಮವಾಗಿ ವಿದ್ಯಾರ್ಥಿನಿಲಯವಾಗಿ ಪರಿವರ್ತನೆಯಾಗುವ ಚಿತ್ರಣವಿದೆ. ಇನ್ನೊಬ್ಬರಿಗೆ ಸಹಾಯ ಮಾಡಲು ಮುಂದಾಗುವ ಐಗಳು ಅನಂತಯ್ಯನವರು ಹೊಸದಾಗಿ ಆರಂಭಗೊಂಡ ಕಿಲಸ್ತರ ಇಸ್ಕೋಲ್ಮನೆಗೆ ಹೆಡ್‌ಮಾಸ್ಟರ್ ಆಗಿ ನೇಮಕವಾಗುತ್ತಾರೆ. ಈ ಅತಿ ಸಣ್ಣ ಸೂಚನೆಗಳು ಕುವೆಂಪು ಅವರು ಪರಿವರ್ತನೆಯ ಒಂದು ಎಳೆಯನ್ನು ಬಿಟ್ಟುಕೊಡದವರಾಗಿದ್ದಾರೆ ಎನ್ನುವುದನ್ನು ಸೂಚಿಸುತ್ತದೆ. ಮಾನವಲೋಕ, ನಿಸರ್ಗ ಮತ್ತು ಇಡೀ ಜಗತ್ತು ಪರಿವರ್ತನೆಯ ಋತಕ್ಕೆ (= ಪರಿವರ್ತನೆ ಯಿಲ್ಲದ್ದು 'ಅನೃತ') ಹೇಗೆ ಬದ್ಧವಾಗಿದೆ ಎಂಬುದನ್ನು ಕುವೆಂಪು ಸಾಹಿತ್ಯ ನಿರೂಪಿಸುತ್ತದೆ.

ಕುವೆಂಪು ಸಾಹಿತ್ಯದ ತಿರುಳನ್ನು ಡಿ.ಆರ್. ನಾಗರಾಜ್ ಮತ್ತೊಂದು ನಿಟ್ಟಿನಿಂದ ತಮ್ಮ ಲೇಖನವೊಂದರಲ್ಲಿ ಪ್ರತಿಪಾದಿಸಿದ್ದಾರೆ. ಅವರ 'ಸಂಸ್ಕೃತಿ ಕಥನ'ದಲ್ಲಿ 'ಎರಡು ಭಾರತಗಳು' - ಎಂಬ ಲೇಖನವಿದೆ. ನೈಪಾಲ್ ಮತ್ತು ರಾಜಾರಾವ್ ಇವರ ಸಾಹಿತ್ಯವನ್ನು ಕುರಿತ ಚರ್ಚೆ ಇಲ್ಲಿದೆ. ಡಿ.ಆರ್. ನಾಗರಾಜ್ ನೈಪಾಲ್ ಅವರನ್ನು ಆತಂಕವಾದಿಯೆಂದು ಗುರುತಿಸಿದ್ದಾರೆ. ಭಾರತ ಎಷ್ಟೆಲ್ಲಾ ಭವ್ಯವಾಗಿತ್ತು. ಈಗ ಎಲ್ಲ ಗಲೀಜು, ಕೊಳಕು, ಬಡತನ ಈ ಬಗೆಯ ನಿರೂಪಣೆಯೇ ಆತಂಕವಾದ. ಇನ್ನೊಂದು ಬಗೆಯ ಕಥನವೆಂದರೆ ಆರಾಧನಾ ವಾದ. ಭಾರತವನ್ನು ಪೂಜ್ಯಭಾವದಿಂದ ನೋಡುವಂಥದ್ದು. ದಿವ್ಯ ಭಾರತದ ಬಗ್ಗೆ ಒಂದು ರೀತಿಯ ಆರಾಧನೆಯನ್ನು ರಾಜಾರಾವ್ ಸಾಹಿತ್ಯದಲ್ಲಿ ಗುರುತಿಸಬಹುದು. ಇದನ್ನು ಚರ್ಚಿಸುತ್ತಾ ಲೇಖನದ ಕೊನೆಯಲ್ಲಿ ಡಿ.ಆರ್.ಎನ್. ಹೇಳಿರುವ ನುಡಿಗಳಿವು :

....."ಈ ದೃಷ್ಟಿಯಿಂದ ಕನ್ನಡ ನವೋದಯದ ಕುವೆಂಪು, ಕಾರಂತರಂಥವರೇ ಹೆಚ್ಚು ಗಟ್ಟಿ ನೆಲೆಯಲ್ಲಿದ್ದಾರೆ ಎನ್ನಿಸುತ್ತದೆ. ಉತ್ಪ್ರೇಕ್ಷಿತ ತಲ್ಲಣಗಳೂ ಇಲ್ಲ, ಹುಂಬ ಪೂಜೆಯೂ ಇಲ್ಲ. ಭಾರತದ ಚರಿತ್ರೆಯ ಬಹಿರಂಗ ಗತಿ ಮತ್ತು ಅಂತರಂಗದ ಲಯಗಳೆರಡಕ್ಕೂ ಹತ್ತಿರವಾಗಿದ್ದ ಪ್ರತಿಭೆಯು ಮುಖ್ಯ ಶಕ್ತಿ ಇದು ಎನ್ನಬಹುದು".... *ಸಂಸ್ಕೃತಿ ಕಥನ, ಪು. 573*

2

ಆರಂಭದಲ್ಲಿ ಹೇಳಿದ ಅನುಲೋಮ ಚಿಂತನೆಗಳೆಂಬ ಯಥಾಸ್ಥಿತಿವಾದದ ಬೇರುಗಳು ಗತಕಾಲದಲ್ಲಿ ಬಲವಾಗಿ ಸೇರಿಕೊಂಡುಬಿಟ್ಟಿವೆ. ಆದ್ದರಿಂದ, 'ಇಂದಿನ ಸಾಮಾಜಿಕ ಸಮಸ್ಯೆಗಳು' - ಎಂಬ ವಿಷಯವನ್ನು ಕೇವಲ ವರ್ತಮಾನ ಕಾಲದಲ್ಲಿ ಮಾತ್ರ ಗ್ರಹಿಸಲಾಗದು! ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಒಂದಕ್ಕೊಂದು ಅಂಟಿಕೊಂಡಂತೆ ಅಂತರ್ ಸಂಬಂಧಿಯಾಗಿ ಬೇರು ಬಿಟ್ಟಿರುವ ಎಲ್ಲ ಬಗೆಯ ಶ್ರೇಣೀಕರಣಗಳು, ತಾರತಮ್ಯಗಳು, ಭೇದ ಭಾವಗಳನ್ನು ಸಂಯೋಜಿಸಿ, ಸೂತ್ರೀಕರಿಸಿದ ಎರಡು ಗ್ರಂಥಗಳೆಂದರೆ 1. ಕೌಟಿಲ್ಯನ ಅರ್ಥಶಾಸ್ತ್ರ, 2. ಮನುವಿನ ಧರ್ಮಶಾಸ್ತ್ರ.

ಕೌಟಿಲ್ಯನ ಅರ್ಥಶಾಸ್ತ್ರದ ಬಗ್ಗೆ ಎಸ್.ಜಿ. ಸರ್ದೇಸಾಯಿಯವರು ಹೇಳಿದ ಮಾತು ತುಂಬ ಪ್ರಸ್ತುತವಾಗಿದೆ : "ಕೌಟಿಲ್ಯನು ತನ್ನ 'ಅರ್ಥಶಾಸ್ತ್ರ'ದಲ್ಲಿ ರಾಜನಿಗೆ ಯಾವುದೇ ಅಂಧಶ್ರದ್ಧೆಯಲ್ಲಿ ನಂಬಿಕೆ ಇರಿಸದಂತೆ ಹಾಗೂ ಆನ್ವೀಕ್ಷಕಿ (= ತಾರ್ಕಿಕ) ಪದ್ಧತಿಯನ್ನು ದೃಢವಾಗಿ ಅನುಸರಿಸುವಂತೆ ಬುದ್ಧಿವಾದ ಹೇಳಿದ್ದಾನೆ. ಆದರೆ ಪ್ರಜೆಗಳಲ್ಲಿ ಮಾತ್ರ ಮೂಢನಂಬಿಕೆ ಬಲಗೊಳ್ಳುವಂತೆ ಎಲ್ಲ ಯತ್ನ ಮಾಡಬೇಕೆಂದೂ ಸಲಹೆ ಮಾಡಿದ್ದಾನೆ." (*ಪ್ರಾಚೀನ ಭಾರತದಲ್ಲಿ ದಾರ್ಶನಿಕ ಸಂಘರ್ಷ ಮತ್ತು ಅದರ ಸಾಮಾಜಿಕ ಮಹತ್ವ - ಪು. 25*). ರಾಜನಾದವನು ಯಾವ ವಿಧವಾದ ಮೂಢನಂಬಿಕೆಯನ್ನೂ ಪಾಲಿಸಬಾರದು, ಆದರೆ ಪ್ರಜೆಗಳಲ್ಲಿ ಮಾತ್ರ ಮೂಢನಂಬಿಕೆ ಹೆಚ್ಚಿಸಬೇಕು, ಗಡಿಭಾಗದಲ್ಲಿ ಯುದ್ಧಗಳು ನಡೆಯುತ್ತಿರಬೇಕು, ಆತಂಕದ ಸ್ಥಿತಿಯೊಂದನ್ನು ನಿರ್ಮಾಣ ಮಾಡಬೇಕು ಮುಂತಾದ ಪ್ರತಿಪಾದನೆಗಳಿರುವುದರಿಂದಲೇ ಅದನ್ನು 'ಕುಟಿಲ ಅರ್ಥಶಾಸ್ತ್ರ'ವೆಂದೂ ಕರೆಯುತ್ತಾರೆ.

ಮನು ಧರ್ಮಶಾಸ್ತ್ರವಾದರೋ ಪುರುಷ ಪ್ರಾಧಾನ್ಯ ಮತ್ತು ಜನ್ಮಾಧಾರಿತ ಅಸಮಾನತೆಗಳನ್ನು ಬಲವಾಗಿ ಪ್ರತಿಪಾದಿಸಿದೆ. ಇದನ್ನು ಸವಿವರವಾಗಿ ನಿರೂಪಿಸುವ ಅವಶ್ಯಕತೆ ಇಲ್ಲಿಲ್ಲ. ಮತಮೌಢ್ಯ ಪ್ರಚಾರಕ ಧರ್ಮಶಾಸ್ತ್ರಗಳನ್ನು ಕುವೆಂಪು ಸದಾ ತಿರಸ್ಕರಿಸುತ್ತಲೇ ಬಂದಿದ್ದಾರೆ. ಕುವೆಂಪು ಸಮಗ್ರ ಕಾವ್ಯದಿಂದ ಆಯ್ದ ನುಡಿಗಳಿವು: "ನಿನ್ನೆದೆಯ ದನಿಯೆ ಋಷಿ! ಮನು ನಿನಗೆ ನೀನು" - 1.368. "ನಮ್ಮ ಹೃದಯವೆ ನಮಗೆ ಶ್ರೀ ಧರ್ಮಸೂತ್ರ" - 1.369. ಒಟ್ಟಿನಲ್ಲಿ ಕೌಟಿಲ್ಯ ಮತ್ತು ಮನುವಿಗೆ ಹೋಲಿಸಿ ನೋಡಿದಾಗಲೇ ಕುವೆಂಪು ವೈಶಿಷ್ಟ್ಯ ವೇನೆಂಬುದು ಮನದಟ್ಟಾಗುತ್ತದೆ. ಕೌಟಿಲ್ಯ ಮತ್ತು ಮನುಗಳು ಪಟ್ಟಭದ್ರ ಹಿತಾಸಕ್ತಿಗಳ ಸಂರಕ್ಷಕರಾಗಿ ಕಾಣುವರಲ್ಲದೆ ಯಥಾಸ್ಥಿತಿವಾದಿಗಳೂ ಅವಕಾಶವಾದಿಗಳೂ ಆಗಿ ಕಾಣಿಸುತ್ತಾರೆ. ಆದರೆ ಕುವೆಂಪು ತುಳಿತಕ್ಕೆ ಒಳಗಾದವರ ಸಂರಕ್ಷಕನಾಗಿ ಕಾಣಿಸುತ್ತಾರೆ. ಜೊತೆಗೆ ಪರಿವರ್ತನವಾದಿ ಮತ್ತು ಮಾನವತಾವಾದಿಯಾಗಿದ್ದಾರೆ. ಕುವೆಂಪು ಹೇಳುವುದು 'ಆತ್ಮಶ್ರೀಗಾಗಿ ನಿರಂಕುಶಮತಿ

ಗಳಾಗಿ' ಎಂದು. ಇದೇ ಹೆಸರಿನ ಕುವೆಂಪು ಪುಸ್ತಕವೂ ಇದೆ. ಆದರೆ, ಕೌಟಿಲ್ಯ ಹೇಳುವುದು 'ರಾಜ್ಯಶ್ರೀಗಾಗಿ ನಿರಂಕುಶ ಪ್ರಭುಗಳಾಗಿ' ಎಂದು. ಇದನ್ನೆಲ್ಲ ಗಮನಿಸಿಯೇ ಕುವೆಂಪು 'ವಿಚಾರ ಕ್ರಾಂತಿಗೆ ಆಹ್ವಾನ' ನೀಡಿರುವುದು.

'ಕನ್ನಡದಲ್ಲಿ ವಿಚಾರ ಸಾಹಿತ್ಯ'ವೆಂಬ ದೃಷ್ಟಿಯಿಂದ ಪರಿಶೀಲನೆ ನಡೆಸಿದರೆ 1944ರಲ್ಲಿ ಪ್ರಕಟವಾದ ಕುವೆಂಪು ಅವರ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' - ಎಂಬ ಪುಸ್ತಕ ಮತ್ತು 1945ರಲ್ಲಿ ಪ್ರಕಟವಾದ ಶಿವರಾಮ ಕಾರಂತರ 'ಬಾಳ್ವೆಯೇ ಬೆಳಕು' - ಎಂಬ ಪುಸ್ತಕ - ಇವೆರಡರಿಂದಲೇ ಆರಂಭಿಸಬೇಕಾಗಿದೆ. ಇವೆರಡೂ ಕೃತಿಗಳ ಅಂತಿಮ ಗುರಿ ಒಂದೇ! ಕುವೆಂಪು ಪುಸ್ತಕದಿಂದ ಆಯ್ದ ಈ ಅಭಿಪ್ರಾಯ ಗಮನಿಸಿ : "ದೇವರನ್ನು ಪೂಜಿಸಿದರೆ ದೇವರಾಗುತ್ತೇವೆ. ದೆವ್ವಗಳನ್ನು ಪೂಜಿಸಿದರೆ ದೆವ್ವಗಳಾಗುತ್ತೇವೆ" ಇದೇ ವಿಚಾರಧಾರೆಯನ್ನೆ ಶಿವರಾಮ ಕಾರಂತರು 'ನಮ್ಮ ಅಳತೆಯನ್ನು ಮೀರಲಾರದ ದೇವರು' - ಪ್ರಬಂಧದಲ್ಲಿ ತರ್ಕಬದ್ಧವಾಗಿ ನಿರೂಪಿಸಿದ್ದಾರೆ. ಕುವೆಂಪು ಮತ್ತು ಕಾರಂತರು ಕನ್ನಡ ವಿಚಾರ ಸಾಹಿತ್ಯದ ಆದ್ಯ ಪ್ರವರ್ತಕರಾಗಿದ್ದಾರೆ.

ಕನ್ನಡದಲ್ಲಿ ಪ್ರಬಂಧಗಳ ಪರಂಪರೆಯನ್ನೇ ಗುರುತಿಸಬಹುದು. ಇದರಲ್ಲಿರುವ ಎರಡು ಕವಲುಗಳೆಂದರೆ 1. ಲಲಿತ ಪ್ರಬಂಧಗಳು, 2. ವೈಚಾರಿಕ ಪ್ರಬಂಧಗಳು. 1984ರಲ್ಲಿ ಕೈವಾರದಲ್ಲಿ ಸಾಹಿತ್ಯ ಸಮ್ಮೇಳನ ನಡೆದಾಗ ಎ.ಎನ್. ಮೂರ್ತಿರಾಯರು ಅಧ್ಯಕ್ಷತೆ ವಹಿಸಿದ್ದರು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಅವರು ಹೇಳುವುದೇನೆಂದರೆ, ಲಲಿತ ಪ್ರಬಂಧಗಳು ಕನ್ನಡದಲ್ಲಿ ಸಾಕಷ್ಟು ಬಂದಿವೆ. ಆದರೆ ವೈಚಾರಿಕ ಪ್ರಬಂಧಗಳ ತೀವ್ರವಾದ ಕೊರತೆಯಿದೆ, ಇದನ್ನು ತುಂಬಬೇಕಾಗಿದೆ ಯೆಂಬ ಸಂದೇಶ ನೀಡಿದ್ದಾರೆ. 1944-45ರಲ್ಲಿ ಕುವೆಂಪು ಮತ್ತು ಕಾರಂತರು ಆರಂಭಿಸಿದ್ದ ಸಂಸ್ಕೃತಿ ಚಿಂತನೆ ಮತ್ತು ವೈಚಾರಿಕ ಜಾಗ್ರತಿಯ ಮಾರ್ಗ ಇದೀಗ ಬಹುತೇಕ ಕ್ಷೀಣವಾಗಿದೆ.

ಕೌಟಿಲ್ಯ ಮತ್ತು ಮನುಪ್ರೇರಿತ ಅನುಲೋಮ ಚಿಂತನೆಯ ವಿಜೃಂಭಣೆಯಿಂದಾಗಿಯೇ ಇಡಿಗಾಳಿನಂತೆ ಇರಬೇಕಾದ ಮಾನವ ಜೀವನವು ಬೇಳೆಯಾಗಿ ಬೇರ್ಪಟ್ಟಿದೆ; ಸೃಷ್ಟಿಹೀನವಾಗಿದೆ. ಇದಕ್ಕೆ ಕೌಟಿಲ್ಯ ಮತ್ತು ಮನು ವಿರಚಿತ ಗ್ರಂಥಗಳೇ ಕಾರಣವೆಂದಲ್ಲ. ಆ ಗ್ರಂಥಗಳ ಹಿಂದೆ ಚಲನರಹಿತ ಸಾಮಾಜಿಕ ವ್ಯವಸ್ಥೆಯ ಪ್ರತಿಪಾದನೆಯಿದೆ. ಇಂಥ ಸಾಮಾಜಿಕ ವ್ಯವಸ್ಥೆಯ ಫಲಶ್ರುತಿಯನ್ನಾಗಿ ಆ ಎರಡು ಗ್ರಂಥಗಳನ್ನು ನೋಡಬೇಕಾಗಿದೆ. ಕೌಟಿಲ್ಯ ಮತ್ತು ಮನು ಪ್ರಣೀತ ಮಾರ್ಗದಲ್ಲಿ ನಡೆದುಬಂದ ಸಾಮಾಜಿಕ ವ್ಯವಸ್ಥೆಯಲ್ಲಿ ಶ್ರಮಜೀವಿಗಳು - ಬುದ್ಧಿ ಜೀವಿಗಳು, ಪ್ರತಿಷ್ಠಿತರು - ಅಪ್ರತಿಷ್ಠಿತರು, ಸಾಮಾನ್ಯರು - ಉನ್ನತರು ಎಂಬ ಅವಕಾಶವಾದಿ ತತ್ತ್ವಜ್ಞಾನವೊಂದು ಹುಟ್ಟಿಕೊಳ್ಳುತ್ತದೆ. ಆದರೆ, "ಮನುಷ್ಯ ಜಾತಿ ತಾನೊಂದೆ ವಲಂ" - ಎಂದು ನಂಬಿರುವ ಕುವೆಂಪು ಈ ಕಪಟ ನೀತಿಯನ್ನು ಒಪ್ಪುವುದಿಲ್ಲ. ಸಕಲ ಜೀವರಾಶಿಯ ಮಧ್ಯೆ ಅವರು ಗುರುತಿಸುವ 'ಮೂಲಸತ್ವ' ಒಂದೇ ಆಗಿದೆ. ಈ ದೃಷ್ಟಿಯಿಂದ ಕುವೆಂಪು ಅವರ 'ಗೊಬ್ಬರ'ವೆಂಬ ಕವನವನ್ನಿಲ್ಲಿ ಸ್ಮರಿಸಿಕೊಳ್ಳಬಹುದು. 'ಮರದ ತುದಿ ಹೂವು' ಮತ್ತು 'ಗೊಬ್ಬರ'ಗಳ ಸಂವಾದದ ಮೂಲಕ ಕುವೆಂಪು ಅವರು ತಳರಚನೆ ಮತ್ತು ಮೇಲುರಚನೆಗಳ ಅದ್ವಯ ಸಂಬಂಧವನ್ನು ಸಾಮಾಜಿಕವಾದ 'ಮುನ್ನೋಟ'ವೆಂಬಂತೆ ಪ್ರತಿಪಾದಿಸಿದ್ದಾರೆ.

ಗೊಬ್ಬರದ ಮೂಲಸತ್ವವೇ ಮರದ ತುದಿಹೂವಿನಲ್ಲಿದೆಯೆಂಬ ಗ್ರಹಿಕೆ ನ್ಯಾಯಬದ್ಧವಾಗಿದೆ. ಭಿನ್ನಭೇದ ಮಾಡದ ಕುವೆಂಪು ಕಾಣ್ಕೆಗೆ 'ಹಾರೈಕೆ'ಯೆಂಬ ಈ ಕವಿತೆ ಗಮನಿಸಿ :

ವಜ್ರವನಾಗಿಸು ಈ ಇದ್ದಲಿನ ಚೂರನು
ನಿನ್ನಡಿಯ ವಿದ್ಯುತ್ ಸ್ಪರ್ಶದಿಂದ
ಓ ಜಗದ್ಗುರುವೆ!
ವಜ್ರವಾಯುಧವಾಗಿ ಇಂದ್ರ ಹಸ್ತವ ಸೇರಿ
ಆಸುರೀ ದಮನ ದನಲಕೆ ನಿವೇದಿತವಾಗಲಿ!

ವಜ್ರವು ಉನ್ನತವಾದುದು; ಇದ್ದಲು ಸಾಮಾನ್ಯವಾದುದು. ಆದರೆ, ಇವೆರಡರ ಮೂಲಸತ್ವ ಬೇರೆಬೇರೆಯಲ್ಲ. ಆದ್ದರಿಂದಲೇ, ಇದ್ದಲು 'ವಜ್ರ'ವಾಗಿ ಪರಿವರ್ತನೆಗೊಳ್ಳಬೇಕು. ವಜ್ರವು ಆಯುಧವಾಗಿ ರಾಕ್ಷಸ ಸಂಹಾರಕ್ಕೆ ಸಿದ್ಧವಾಗಬೇಕು ಎಂಬ ಆಶಯ ಕುವೆಂಪು ಸಾಹಿತ್ಯದಲ್ಲಿದೆ.

ಸೌಂಗರ್ಯಾನುಭೂತಿ ಮತ್ತು ಸ್ಫೂರ್ತಿ ತತ್ವಗಳಂಥ ಕಾವ್ಯ ಮೀಮಾಂಸೆಯ ವಿಚಾರಗಳು ಕೂಡ ಜೀವನ ಮೀಮಾಂಸೆಗೆ ಹೊರತಾದ ಸಂಗತಿಗಳಲ್ಲವೆಂಬುದನ್ನು ಕುವೆಂಪು ತಮ್ಮ ಕೃತಿಗಳಲ್ಲಿ ಬಿಂಬಿಸಿದ್ದಾರೆ : ಸೂರ್ಯೋದಯಕ್ಕೆ ಸ್ಪಂದಿಸುವ ತಿಮ್ಮಿ ಮತ್ತು ಸೆಗಣಿ ಹುಳುವಿನ ಹೋರಾಟದಿಂದ ಸ್ಫೂರ್ತಿ ಪಡೆಯುವ ಗುತ್ತಿಯನ್ನಿಲ್ಲಿ ಸ್ಮರಿಸಬಹುದು. ವಿದ್ಯೆಯನ್ನು ಅಥವಾ ಜ್ಞಾನವನ್ನು 'ಖಾಸಗಿ ಆಸ್ತಿ' ಮಾಡಿಕೊಂಡಿರುವ ಭಿನ್ನವಾದಿಗಳಿಗೆ ಈ ಬಗೆಯ ನಿರೂಪಣೆ ಮತ್ತು ದರ್ಶನ ದೃಷ್ಟಿ ಸಾಧ್ಯವಿಲ್ಲ. ನುಡಿದಂತೆ ನಡೆದುಕೊಳ್ಳುವ ವಚನಕಾರರ ದಿಟ್ಟತನ ಕುವೆಂಪು ಅವರಲ್ಲಿದೆ. ಇದನ್ನೇ ಕಾರ್ಲ್‌ಮಾರ್ಕ್ಸ್ 'ಆಲೋಚನ ಮತ್ತು ಆಚರಣೆಗಳ ಸಾಂಗತ್ಯ'ವೆಂದು ಕರೆದಿದ್ದಾನೆ.

3

ಕೌಟಿಲ್ಯ ಮತ್ತು ಮನುಗಳು ಕ್ರಮವಾಗಿ ರಾಜಪೀಠ ಮತ್ತು ಧರ್ಮಪೀಠಗಳ ಸಂರಕ್ಷಕರೆಂಬುದನ್ನು ಮನಗಾಣಬೇಕು. ಈ ಎರಡು ಪೀಠಗಳೊಂದಾಗಿ 'ಪ್ರಭುತ್ವ'ದ ಚಾಲಕ ಶಕ್ತಿಯಾಗುತ್ತದೆ. ಇದೊಂದು ರೀತಿಯಲ್ಲಿ 'ಆಂತರಿಕ ವಸಾಹತುಶಾಹಿ' ಎನ್ನಬಹುದು. ಇದನ್ನು ಕುವೆಂಪು ತಮ್ಮ ಕವನಗಳಲ್ಲಿ ಸ್ಪಷ್ಟವಾಗಿ ಗುರುತಿಸಿದ್ದಾರೆ.

ದೊರೆ ಮತ್ತು ಪುರೋಹಿತ

ಕೂಡಿದಾಗ ಹುಟ್ಟಿತು ಮತ
ಮೊದಲ ಠಕ್ಕ, ಮೊದಲ ಬೆಪ್ಪ
ಕೂಡಿದಾಗ ಮೂಡಿತು ಮತ.
ಯಾವುದನೃತ? ಯಾವುದು ಋತ ?
ಅಂತೂ ನಡೆಯಿತದ್ಭುತ!

(-ಮಂತ್ರಾಕ್ಷತೆ)

.... ಅಂದು ಫ್ರಾನ್ಸಿನ ಕ್ರಾಂತಿಕಾರ ದಿದೋರೆ
ದೊರೆ-ಪುರೋಹಿತರ ಕುರಿತಾಡಿದಾ ಸೂಕ್ತಿ

ದಿಟವಾಗದಿದ್ದರೀ ಪೊಡವಿಗಿಹುದೇ ಮುಕ್ತಿ?
"ಕೊನೆಯ ಪುರೋಹಿತನ ಕರುಳು
ಕೊನೆಯ ದೊರೆಯ ಕೊರಳಿಗುರುಳು
ಬಿಗಿಯದಿದ್ದರಲ್ಲಿ ತಿರುಳು
ಪೃಥ್ವೀ ಸ್ವಾತಂತ್ರ್ಯಕೆ?"

(-ಮೌಢ್ಯಮೇಧ)

ದೊರೆ ಮತ್ತು ಪುರೋಹಿತರಿಬ್ಬರು ಕೂಡಿದಾಗ ಹುಟ್ಟಿಕೊಳ್ಳುವ, ನಮ್ಮ ದೇಶದ 'ಆಂತರಿಕ ವಸಾಹತುಶಾಹಿ'ಯ ಸ್ವರೂಪವನ್ನು ಕುವೆಂಪು ಖಚಿತವಾಗಿ ಮನಗಂಡಿದ್ದರಿಂದಲೇ, ವಿದೇಶಿ ವಸಾಹತುಶಾಹಿ ಮತ್ತು ಸ್ವದೇಶಿ ವಸಾಹತುಶಾಹಿಗಳೆರಡನ್ನೂ ಒಟ್ಟಿಗೆ ಗುರುತಿಸಿದ್ದಾರೆ :

ಕರಿಯರದೊ ಬಿಳಿಯರದೊ ಯಾರದಾದರೆ ಏನು?
ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ
ವಿಜಯನಗರವೊ? ಮೊಗಲರಾಳ್ವಿಕೆಯೊ? ಇಂಗ್ಲಿಷರೊ?
ಎಲ್ಲರೂ ಜಿಗಣೆಗಳೇ ನನ್ನ ನೆತ್ತರಿಗೆ!
ಕತ್ತಿ ಪರದೇಶಿಯಾದರೆ ಮಾತ್ರ ನೋವೆ?
ನಮ್ಮವರೆ ಹದ ಹಾಕಿ ತಿವಿದರದು ಹೂವೆ?

- ರೈತನ ದೃಷ್ಟಿ

ರಾಜಪೀಠವನ್ನು ಕೂಡ ಪಾದಾಕ್ರಾಂತ ಮಾಡಿಕೊಂಡ ಧರ್ಮಪೀಠದ ವಿಜೃಂಭಣೆಯೇ 'ಪುರೋಹಿತಶಾಹಿ'. ಇದರ ಬೇರುಗಳು ಗತಕಾಲದಲ್ಲಿ ಊರಿಕೊಂಡಿದ್ದರೆ, ಇದರ ಮುಳ್ಳುಗಳು ವರ್ತಮಾನಕಾಲದಲ್ಲಿ ಚುಚ್ಚುತ್ತಾ ರಕ್ತ ಹರಿಸುತ್ತಿವೆ. ಈ ದೃಷ್ಟಿಯಿಂದ ನೋಡಿದರೆ, ಭಕ್ತಿ V/s ಪುರೋಹಿತಶಾಹಿ ಕನ್ನಡ ಸಾಹಿತ್ಯ ಪರಂಪರೆಯ ಬಹುಮುಖ್ಯ ಆಶಯಗಳಲ್ಲೊಂದಾಗಿದೆ. ನಮ್ಮ ವಚನಕಾರರು 'ಪುರೋಹಿತಶಾಹಿ' ಎಂಬ ಆಂತರಿಕ ವಸಾಹತುಶಾಹಿಯ ವಿರುದ್ಧ 'ಭಕ್ತಿ'ಯ ಅಸ್ತ್ರ ಹಿಡಿದು ಹೋರಾಡಿದವರು. ಆದರೆ ಆಧುನಿಕ ಸಂದರ್ಭದಲ್ಲಿ ಸಂಕೀರ್ಣ, ಜಟಿಲ ಜಾಲದ ಪುರೋಹಿತಶಾಹಿಯ ವಿರುದ್ಧ ಅದೇ ಭಕ್ತಿಮಂತ್ರವನ್ನು ಭಜಿಸಲು ಸಾಧ್ಯವಿರಲಿಲ್ಲ. (=ತಕ್ಷಣ ಗಾಂಧೀಜಿ, ಆಶ್ರಮದ ಸಪ್ತಾಹಮಾರ್ಗ, ಭಜನೆ ಇತ್ಯಾದಿಗಳೆಲ್ಲ ನೆನಪಾಗುತ್ತವೆ.) ಒಂದು ವೇಳೆ ಸಾಧ್ಯವಿದ್ದರೂ ಅದಕ್ಕೆ ಶಕ್ತಿ ಸಾಲುತ್ತಿರಲಿಲ್ಲವೆಂದು ತೋರುತ್ತದೆ. ಆದ್ದರಿಂದಲೇ ಇದನ್ನು ಕುವೆಂಪು ಅವರು ವಿಜ್ಞಾನ **V/s ಪುರೋಹಿತಶಾಹಿ** ಎಂಬಂತೆ ಮನಗಂಡು, ಪಲ್ಲಟಗೊಳಿಸಿ ಪ್ರಸ್ತುತಪಡಿಸಿದ್ದಾರೆ. ಈ ಬಗೆಯ ಪಲ್ಲಟ ಅಥವಾ ಸ್ಥಿತ್ಯಂತರ ಚರಿತ್ರೆಯ ಗತಿಗೆ ಸಂಬಂಧಪಟ್ಟಿದೆಯೆಂಬುದು ಸ್ಪಷ್ಟವಾಗಿದೆ. ಕುವೆಂಪು ಸಮಗ್ರ ಕಾವ್ಯದಲ್ಲಿ ವಿಜ್ಞಾನಬುದ್ಧಿ, ವಿಜ್ಞಾನಮತಿ, ವಿಜ್ಞಾನದೀವಿಗೆ, ವಿಜ್ಞಾನಸೂರ್ಯ - ಎಂಬಂಥ ನುಡಿಗಟ್ಟುಗಳನ್ನು ಈ ದೃಷ್ಟಿಯಿಂದ ಪುನರವಲೋಕಿಸಬೇಕು.

ಪುರೋಹಿತಶಾಹಿಯ ಸಂಖ್ಯಾಕ್ಷರಿ ಮಂತ್ರಗಳಲ್ಲಿ ಪಂಚಾಕ್ಷರಿ, ಷಡಾಕ್ಷರಿ, ಸಪ್ತಾಕ್ಷರಿ ಮಂತ್ರಗಳಿವೆ. ಇವುಗಳಿಗೆ ಪ್ರತಿದ್ವಂದ್ವಿಯಾಗಿ ಕನ್ನಡ ಸಾಹಿತ್ಯದಲ್ಲಿ ಹಲವು ಬಗೆಯ ವಿಶಿಷ್ಟ

ಮಂತ್ರಗಳಿರುವುದನ್ನು ನನ್ನ ಅಧ್ಯಯನದಲ್ಲಿ ಕಂಡುಕೊಂಡಿದ್ದೇನೆ: ಹರಿಹರನ ಕಣ್ಣಪ್ಪದೇವರ ರಗಳೆಯಲ್ಲಿರುವ ನಾಮಮಂತ್ರವೆಂದರೆ 'ಹಸಿದಯ್ಯ'ನೆಂದು. ಕಣ್ಣಪ್ಪನು ಶಿವನನ್ನು ಕರೆಯುವುದು 'ಹಸಿದಯ್ಯ'ನೆಂದೇ! ಪಾರ್ವತಿ ಇದೇನು ಹೆಸರು, ಇದಾವ ಮಂತ್ರವೆಂದು ಮೂಗು ಮುರಿಯುತ್ತಾಳೆ. ಅದಕ್ಕೆ ಶಿವನು ಅರ್ಚಕನ ಶಾಸ್ತ್ರೀಯ ಭಕ್ತಿಗಿಂತ ಕಣ್ಣಪ್ಪನ ಅಶಾಸ್ತ್ರೀಯ ಭಕ್ತಿಯೇ ಮಿಗಿಲಾದುದೆಂಬುದನ್ನು ಸ್ಪಷ್ಟಪಡಿಸುತ್ತಾನೆ. ಇದು ಹರಿಹರನ ಸ್ವಂತ ಕಲ್ಪನೆಯಾಗಿರುವಂತೆಯೇ, ಪುರೋಹಿತಶಾಹಿಯ ವಿರುದ್ಧ ಮೂಡಿಬಂದಿರುವ ವಿಶಿಷ್ಟ ಕಾಣ್ಕೆಯಾಗಿದೆ. ಮುದ್ದಣ-ಮನೋರಮೆಯರ ಸಂವಾದದಲ್ಲಿ ಮಾರ್ಮಿಕವಾಗಿ ಎಂಬಂತೆ ಸ್ಫೋಟಗೊಳ್ಳುವ 'ಭವತಿ ಭಿಕ್ಷಾಂ ದೇಹಿ'ಯೆಂಬ ಮಂತ್ರವು ನಗೆಯ ಹಿಂದಿನ ನೋವಾಗಿರುವಂತೆಯೇ, ಸುಖವಾಗಿ ಕುಳಿತು ಉಣ್ಣುವ ಪುರೋಹಿತಶಾಹಿಯ ಮೂದಲಿಕೆಯೂ ಆಗುತ್ತದೆ.

ಕುವೆಂಪು ಅವರ 'ವನ ಗಾಯಕ' (1.200) ಎಂಬ ಕವಿತೆಯ ಕೊನೆಯಲ್ಲಿರುವ ಮಂತ್ರವಿದು: "ನಿನಗೆ ನಮೋ ಓ ಕಾಜಾಣ" ಇದು ಏಕೆ ಮುಖ್ಯವಾಗುತ್ತದೆಯೆಂದರೆ, 'ಡೋ ಡೋ' - ಎಂಬ ಕಾಣೆಯಾಗಿರುವ ಪಕ್ಷಿ ಇವತ್ತು ಪರಿಸರ ನಾಶದ ಸಂಕೇತವಾಗಿ ಜಗತ್‌ವ್ಯಾಪಿಯಾಗಿ ಬಳಕೆಯಾಗುತ್ತಿದೆ. ಕಾಜಾಣವು ಮಲೆನಾಡಿನ ನಿತ್ಯಹರಿದ್ವರ್ಣದ ವನಸೀಮೆಗಳಲ್ಲಿರುವ ಪಕ್ಷಿ. ಆದ್ದರಿಂದಲೇ ಇದು ವನಗಾಯಕ. ಮಲೆನಾಡಿನ ಕಾಡಿಗೂ ಈ ಕಾಜಾಣಕ್ಕೂ ಅವಿನಾಭಾವ ಸಂಬಂಧವಿದೆ. ಮಲೆನಾಡಿನ ಕಾಡು ನಾಶಗೊಂಡರೆ ಕಾಜಾಣವೂ ನಾಶಗೊಂಡಂತೆಯೇ ಸರಿ. ಆದ್ದರಿಂದ, ಕನ್ನಡ ನಾಡಿನ ಪರಿಸರವನ್ನು ಲಕ್ಷಿಸಿ ಹೇಳುವುದಾದರೆ ಕಾಜಾಣವು ನಮ್ಮ ಪಾಲಿಗೆ ಪರಿಸರ ಸಂರಕ್ಷಣೆಯ ಪ್ರತೀಕವಾಗಿದೆ. ಆದ್ದರಿಂದಲೇ "ನಿನಗೆ ನಮೋ ಓ ಕಾಜಾಣ" - ಎನ್ನುವುದರ ಮೂಲಕ ಕುವೆಂಪು ಅವರು ನಮಗೆ ಪ್ರಸ್ತುತವಾದ ಧರ್ಮ ಯಾವುದೆಂಬುದನ್ನು ಸ್ಪಷ್ಟೀಕರಿಸಿದ್ದಾರೆ. ಇದೇ ಪರಿಸರ ಧರ್ಮ. ಇದು ಪ್ರಸ್ತುತ ಏಕೆಂದರೆ, ಇವತ್ತು ಮತಗಳು ವ್ಯಕ್ತಿ-ವ್ಯಕ್ತಿಗಳ ನಡುವಣ ಗೋಡೆಯಾಗುತ್ತಿದೆ; ಸಮುದಾಯಗಳು ಒಳಹೊಕ್ಕು ಬರಲಾರದ ಉಕ್ಕಿನ ಕೋಟೆಗಳಾಗುತ್ತಿವೆ. ನಾವು ನಿಜವಾಗಿಯೂ 'ಅನಿಕೇತನ'ವಾಗಬೇಕಾದರೆ ಇಂತಹ ಒಂದು ಪರಿಸರ ಧರ್ಮದ ನೆಲೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ.

ಪುರೋಹಿತಶಾಹಿಯು ಸದಾ ವರ್ತಮಾನಬದ್ಧವಾಗಿರುತ್ತದೆ; ತನ್ನ ಅಗತ್ಯಕ್ಕೆ ತಕ್ಕಂತೆ 'ಗತ'ವನ್ನು ಕೂಡ ತಿರುಚಿಕೊಂಡು ವರ್ತಮಾನಕ್ಕೊಳಪಡಿಸುತ್ತದೆ (=ಅಯೋಧ್ಯಾ ಮಂದಿರ ನಿರ್ಮಾಣ). ಇಂಥ ಪುರೋಹಿತಶಾಹಿಯ ಜೇಷ್ಠಪುತ್ರನೇ (: ತೆಲುಗಿನಲ್ಲಿದು 'ದೆಷ್ಟ' = ದರಿದ್ರ ಪುತ್ರನೆಂಬ ವಿಡಂಬನೆಗೊಳಗಾಗಿದೆ) 'ಕೋಮುವಾದ' ಎನ್ನಬೇಕು. ಇದು ಎಲ್ಲ ಸಾಂಸ್ಥಿಕ ಧರ್ಮಗಳಲ್ಲಿ ಕ್ರಮೇಣ ಮೊಳೆಯುವ 'ಕೊಂಬು' ಎನ್ನಬಹುದು. ಕೋಮುವಾದವು ತಳಹದಿಯಾಗಿ ಸುಸ್ಥಿರಗೊಂಡರೆ, ಭಯೋತ್ಪಾದನೆಯು ತುದಿಶಿಖರವಾಗಿ ವಿಜೃಂಭಿಸುತ್ತದೆ. ಆದ್ದರಿಂದಲೇ ನಾವಿಲ್ಲಿ ಧರ್ಮಕ್ಕೆ ಸಂಬಂಧಿಸಿ ಜಳ್ಳು-ಕಾಳು ನ್ಯಾಯವನ್ನು ಕಂಡುಕೊಳ್ಳಬೇಕಾಗುತ್ತದೆ. ಒಬ್ಬ ರೈತ ತಾನು ಬೆಳೆದದ್ದನ್ನೆಲ್ಲ ಕಣಜಕ್ಕೆ ತುಂಬಿಕೊಳ್ಳುವುದಿಲ್ಲ. ಅವನು ತೂರಿಕೊಳ್ಳುತ್ತಾನೆ; ಜಳ್ಳನ್ನು ಬಿಟ್ಟು ಕಾಳನ್ನು ಪರಿಗ್ರಹಿಸುತ್ತಾನೆ. ಧರ್ಮ, ಸಾಹಿತ್ಯ, ವಿಜ್ಞಾನ

ಎಲ್ಲವೂ ಸಂಸ್ಕೃತಿಯ ಬೆಳೆಗಳೇ. ಇದರಲ್ಲಿ ಕೂಡ ನಾವು ತೂರಿಕೊಳ್ಳಬೇಕು. ಮತಧರ್ಮ ಬೇರೆ ಮನೋಧರ್ಮ ಬೇರೆ. ಮತಧರ್ಮವು ತಾನೇ ಏಕಮೇವ ಎನ್ನುತ್ತದೆ. ಮನೋಧರ್ಮವು ವೈವಿಧ್ಯಮಯವಾಗಿರುತ್ತದೆ. ಇದನ್ನು ಚಿಕಾಗೋ ಭಾಷಣದಲ್ಲಿಸ್ವಾಮಿ ವಿವೇಕಾನಂದರು ಸ್ಪಷ್ಟಪಡಿಸಿದ್ದಾರೆ. ಅದನ್ನೇ ಕುವೆಂಪು ವಿಶ್ವಮಾನವ ಸಂದೇಶದ ಒಂದು ಭಾಗವಾಗಿ ಇಟ್ಟುಕೊಂಡಿದ್ದಾರೆ : "ಮತಧರ್ಮ ಗುಂಪು ಕಟ್ಟುವ ವಿಷಯವಾಗಬಾರದು. ಯಾರೂ ಯಾವ ಒಂದು ಮತಕ್ಕೂ ಸೇರದೆ, ಪ್ರತಿಯೊಬ್ಬನೂ ತಾನು ಕಂಡುಕೊಳ್ಳುವ 'ತನ್ನ' ಮತಕ್ಕೆ ಸೇರಬೇಕು. ಅಂದರೆ, ಜಗತ್ತಿನಲ್ಲಿ ಎಷ್ಟು ವ್ಯಕ್ತಿಗಳಿದ್ದಾರೋ ಅಷ್ಟೇ ಸಂಖ್ಯೆಯ ಮತಗಳಿರುವಂತಾಗುತ್ತದೆ." ಇಲ್ಲಿ ಪ್ರತಿಪಾದಿತವಾಗಿರುವ 'ತನ್ನ' ಮತವನ್ನೇ ಮನೋಧರ್ಮವೆಂದು ನಾನಿಲ್ಲಿ ಕರೆದಿದ್ದೇನೆ.

ಮತಧರ್ಮವು ತನ್ನ ಸುತ್ತ ಉಕ್ಕಿನ ಕೋಟೆಯನ್ನು ಕಟ್ಟಿಕೊಂಡು ಒಂದು ಸ್ಥಾವರವಾಗಿ ಪರಿಣಮಿಸುತ್ತದೆ, ಮನೋಧರ್ಮವು ನಿಸರ್ಗ ಮತ್ತು ಸಂಸ್ಕೃತಿಯ ಮೇಳನದಲ್ಲಿ 'ಜಂಗಮ' ವಾಗುತ್ತಾ ವೈವಿಧ್ಯಮಯವಾಗುತ್ತದೆ: ಗ್ರಾಮ್ಯಧರ್ಮ, ವನ್ಯಧರ್ಮ, ವೃತ್ತಿಧರ್ಮ, ವಯೋಧರ್ಮ, ರಾಷ್ಟ್ರಧರ್ಮ, ವಿಶ್ವಧರ್ಮ, ನಿಸರ್ಗಧರ್ಮ, ನವೀನಧರ್ಮ ಇತ್ಯಾದಿ. ಇದೇ ಧರ್ಮದ ನೈಜವಾದ ಪರಿಶುಭ್ರವಾದ ಅವತಾರಗಳು. ಇದನ್ನು ಮೊದಲಿಗೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಮನಗಾಣಿಸಬೇಕು.

ಕುವೆಂಪು ಸಾಹಿತ್ಯದಲ್ಲಿ ಸಮೃದ್ಧವಾದ ಗ್ರಾಮ್ಯಧರ್ಮ ಮತ್ತು ವನ್ಯಧರ್ಮ ಪ್ರವೃತ್ತಿಗಳಿವೆ. ಜನಪದ ದೈವಗಳನ್ನು ಕುವೆಂಪು ಒಪ್ಪುವುದಿಲ್ಲ; ಹೀಯಾಳಿಸುತ್ತಾರೆಂದು ಡಿ.ಆರ್. ನಾಗರಾಜ್ ಗುರುತಿಸಿರುವುದು ಸರಿಯಲ್ಲ. ಕುವೆಂಪು ತಿರಸ್ಕರಿಸುವುದು ಹಿರಿಯ ಪರಂಪರೆ ಮತ್ತು ಕಿರಿಯ ಪರಂಪರೆಗಳ ಮೌಢ್ಯವನ್ನು ಮಾತ್ರ. ಉದಾಹರಣೆಗೆ, ಭೂಮಿಹುಣ್ಣಿಮೆ ಹಬ್ಬ ಅಥವಾ ಕಳಮಶ್ರೀ ಆರಾಧನೆ ಕುರಿತು ಕುವೆಂಪು ನುಡಿಗಳಿವು : "ಕಳಮಶ್ರೀಯ ಆರಾಧನೆಯ ಜೊತೆಗೆ ಕಲೋಪಾಸನೆಯೂ ಆಗುತ್ತದೆ. ಜಡಜಗತ್ತು ಸಸ್ಯಾದಿಗಳೂ ತತ್ತ್ವತಃ ಚೈತನ್ಯವೇ ಆದುದರಿಂದ ವಂದನೀಯ ಎಂಬುದು ಆ ಪೂಜೆಯ ಅವ್ಯಕ್ತಬೋಧೆ" - (ಮಲೆಗಳಲ್ಲಿ ಮದುಮಗಳು, ಪು.382). ಈ ಮಾತಿನ ಹಿಂದೆ ಜನಪದ ಆಚರಣೆಗಳ ಬಗ್ಗೆ ಕುವೆಂಪು ಅವರಿಗಿದ್ದ ಸಕಾರಾತ್ಮಕ ಒಲವು ಸ್ಪಷ್ಟವಾಗಿದೆ. ಕುವೆಂಪು ಕಾವ್ಯದಲ್ಲಿ ಜನಪದ ಮಾತೃದೈವಗಳನ್ನು ಕುರಿತು ಎದೆ ತುಂಬಿ ಹಾಡಿರುವುದನ್ನು ಗುರುತಿಸಬಹುದು. ಉದಾ :

> **ಬನದಮ್ಮ ಜಲದಮ್ಮ ನೆಲದಮ್ಮರೆಲ್ಲ**
> **ಹಿಗ್ಗಿ ಹರಸುವ ತೆರದಿ ಸುಗ್ಗಿಯನು ಹಾಡಿ**
> **..........**
> **ಕಣ್ಣು ಕಣ್ಣಿನ ತೋರಣಂಗಳನು ನೆಯ್ದು**
> **ಗದ್ದೆಗಳ ತೋಟಗಳ ಪೂಜಿಸುವ ಬನ್ನಿ.**
>
> ***ಸುಗ್ಗಿಯ ಹಾಡು (1.32)***

ಆದರೆ, ಜಾನಪದದಲ್ಲಿ ಈ ಮಾತೃದೇವತೆಗಳು ಮಾತ್ರವಲ್ಲ, ಮೌಢ್ಯದೇವತೆಗಳೂ ಇದ್ದಾವೆ.

ಮತಮೌಢ್ಯಗಳು ಹಿರಿಯ ಪರಂಪರೆಯಲ್ಲಿರಲಿ ಅಥವಾ ಕಿರಿಯ ಪರಂಪರೆಯಲ್ಲಿರಲಿ ಇದನ್ನೆಲ್ಲ ಕುವೆಂಪು ಒಪ್ಪುವುದಿಲ್ಲ. ಉದಾ: ಮಲೆಮಾದೇಶ್ವರ, ಬೆಟ್ಟಕಂತೆ ಮೊದಲಾದ ಕವಿತೆಗಳಲ್ಲಿ ಕುವೆಂಪು ಜನಪದ ದೈವಗಳನ್ನು ತಿರಸ್ಕರಿಸಿದ್ದಾರೆ. ಕುವೆಂಪು ಅವರನ್ನು ವಿಮರ್ಶಿಸುವಾಗ ಇಂಥ ವೈರುಧ್ಯಗಳನ್ನು ಗಮನಿಸಬೇಕಾಗುತ್ತದೆ ಇಲ್ಲದಿದ್ದರೆ ಏಕಪಕ್ಷೀಯ ತೀರ್ಮಾನಗಳನ್ನು ತಲುಪಿಬಿಡುತ್ತೇವೆ.

4

ಕುವೆಂಪು ಧರ್ಮವನ್ನು ಗುಡಿ-ಚರ್ಚು-ಮಸೀದಿಗಳಲ್ಲಿ ಕಂಡವರಲ್ಲ. ಬದುಕಿನ ಎಲ್ಲ ನೆಲೆಗಳಲ್ಲಿ, ಅಂತರಂಗ - ಬಹಿರಂಗದಲ್ಲಿ ಧರ್ಮವನ್ನು ಕಾಣದವನ ಧಾರ್ಮಿಕ ದೃಷ್ಟಿ ತೀರ ಸಂಕುಚಿತವಾದುದು. ಕುವೆಂಪುಗೆ 'ಧರ್ಮ'ವೆಂಬುದು ಬದುಕಿನ ನಡೆ-ನುಡಿಯಿಂದ ಬೇರ್ಪಡಿಸಲಾಗದ ಸತ್ಯ. ಧರ್ಮವು ಅವರಿಗೆ ಸಹಜವಾದ ಉಸಿರಾಟವಿದ್ದಂತೆ. ಅದು ಸಹಜ ಮನೋಧರ್ಮ ಮತ್ತು ನಿಸರ್ಗ ಸಹಜ ಜೀವನ ಶೈಲಿ. ಧರ್ಮವು ವ್ಯಕ್ತಿ ಮತ್ತು ಸಮಾಜಗಳ ಮಹತ್ ಸ್ವಪ್ನ! ಇದೊಂದು ಆಂತರಿಕವಾದ ಕಟ್ಟಡವಿದ್ದಂತೆ. ಧರ್ಮವೆಂದರೆ ಬಾಹ್ಯಸ್ಥಾವರಗಳೆಂದು ತಿಳಿದವರು ಕುವೆಂಪು ಕಾಣ್ಕೆಯಿಂದ ಬಹುದೂರ ಸಿಡಿದವರೆಂದೇ ಹೇಳಬೇಕು. ಕುವೆಂಪು ಕಾಣ್ಕೆಯ ಕೆಲವೊಂದು ವಿಶಿಷ್ಟ ನಿದರ್ಶನಗಳಿವು :

1. ನಮ್ಮ ಎದೆಗಳಲಿಹವು ಮಾಸದ
   ದೇವನೊತ್ತಿರುವಡಿಗಳು
   ಲೋಕರಕ್ಷಕ ನಿಚ್ಚ ನೆಲಸಿಹ
   ನಾವೆ ಚಲಿಸುವ ಗುಡಿಗಳು *(- ಸುಗ್ಗಿಹಾಡು 1.30)*
2. ನಾ ಜಂಗಮ ದೇವಸ್ಥಾನ *(- 2.186)*
3. ಪುಷ್ಪ ಭಗವಾನ್ *(- 2.187)*

ನಾವೆ ಚಲಿಸುವ ಗುಡಿಗಳು, ನಾ ಜಂಗಮ ದೇವಸ್ಥಾನ ಎಂದು ನಂಬಿ ಬದುಕಿದ ಕುವೆಂಪು ಅವರ ನಿಸರ್ಗ ಸಹಜ ಮನೋಧರ್ಮಕ್ಕೆ ಮಳೆ-ಕೋಗಿಲೆಯು ಪಕ್ಷಿದೈವವಾಗಿ, ರೈತನು ನೇಗಿಲಯೋಗಿಯಾಗಿ, ಮಿಂಚುಳ್ಳಿಯು ವಿಪಿನಪ್ರವಾದಿಯಾಗಿ, ಕೋಗಿಲೆಯು ಸ್ವರಯೋಗಿಯಾಗಿ, ಕಾಜಾಣವು ವನಗಾಯಕನಾಗಿ ಕಂಡಿದೆ. ನಿಸರ್ಗ ಮತ್ತು ಸಂಸ್ಕೃತಿಗಳನ್ನು ಬೆಸೆದು ನೋಡುವ ಕುವೆಂಪು ಅವರ ವಿಶಿಷ್ಟ ಕಾಣ್ಕೆಯಿದು.

ಇದೆ ಸಂದರ್ಭದಲ್ಲಿ ಕುವೆಂಪು ಬಳಸಿದ ಧಾರ್ಮಿಕ ಸಂಕೇತಗಳು ಮತ್ತು ಪೌರಾಣಿಕ ಮಾರ್ಗವನ್ನು ಚರ್ಚೆಯ ದೃಷ್ಟಿಯಿಂದ ಪ್ರಸ್ತಾಪಿಸಬಹುದು. ಇದು ಸೃಷ್ಟಿಸುವ ಸಾಮಾಜಿಕ ಸಮಸ್ಯೆಗಳನ್ನು ಡಿ.ಆರ್. ನಾಗರಾಜ ವಿಸ್ತಾರವಾಗಿ ವಿವೇಚಿಸಿದ್ದಾರೆ :

"....ಧಾರ್ಮಿಕ ಸಂಕೇತಗಳು ತೀರಾ ಸೀಮಿತವಾಗುತ್ತಾ ಮಾನವ ವಿರೋಧಿಗಳಾಗಿ ಬಿಡಬಲ್ಲವು. ಧಾರ್ಮಿಕ ಸಂಕೇತಗಳು ತಮ್ಮ ಕ್ಷುಲ್ಲಕತೆಯನ್ನು ಬಿಡಲಾಗದೆ ಜಡವಾಗಬಹುದು. ಗಾಂಧಿಗೆ ತಿಲಕರಿಗೆ ಇರುವ ವ್ಯತ್ಯಾಸ

ಈ ದೃಷ್ಟಿಯಿಂದ ಮಹತ್ವವಾದದ್ದು. ಶಿವಾಜಿಯನ್ನು, ಗಣೇಶನನ್ನು ತಿಲಕರು ಸಂಕೇತಗಳಾಗಿ ಮಾಡಿದರು. ಈ ರೀತಿಯ ಪ್ರಯತ್ನಕ್ಕೆ ಭಾರತೀಯ ಚರಿತ್ರೆಯಲ್ಲಿ ದೊಡ್ಡ ಇತಿಹಾಸವೇ ಇದೆ. ಇದನ್ನೇ ಪೌರಾಣಿಕ ಮಾರ್ಗ ಎನ್ನುವುದು.... ಬಹಳ ಬೇಗ ಈ ಪೌರಾಣಿಕ ಸಂಕೇತಗಳು ತಮ್ಮ ಮೂಲದ ಸಂಕುಚಿತ ಸ್ಥಿತಿಗೆ ವಾಪಸಾಗಿ ಬಿಡುತ್ತವೆ.... ಆದರೆ, ಗಾಂಧಿ ಸಂಕೇತಗಳನ್ನು ಸೃಷ್ಟಿಸಿದ್ದು (ಜನರ ಧಾರ್ಮಿಕ) ಸ್ಮೃತಿಗಳಿಂದಲ್ಲ. ಸ್ಮೃತಿಗಳು ಕೂಡಾ ಕೃತಕ ಚಿಕಿತ್ಸೆಗೆ ಒಳಗಾಗಬಲ್ಲವು ಎಂಬ ಅರಿವಿದ್ದುದರಿಂದಲೇ ಗಾಂಧಿ ಅಷ್ಟಾಗಿ ಸ್ಮೃತಿಗಳ ಬಗ್ಗೆ ಮಾತನಾಡಲಿಲ್ಲ. ಗಾಂಧಿ ಸಂಕೇತಗಳನ್ನು ಸೃಷ್ಟಿಸಿದ್ದು ಸ್ಮೃತಿಗಿಂತ ಭಿನ್ನವಾದ ಸಾಮಾನ್ಯ ಜೀವನದಿಂದ ಆತ ಸೃಷ್ಟಿಸಿದ ಎರಡು ಮಹತ್ವದ ಸಂಕೇತಗಳು ಉಪ್ಪು ಮತ್ತು ಚರಕ ಮತಾತೀತವಾದವು. ಭಾರತದ ಸಮಸ್ತ ಜಾತಿ ಜನಾಂಗಗಳಿಗೂ ಸಮಾನವಾದ ಪ್ರಸ್ತುತತೆ ಇರುವ ಸಂಗತಿಗಳು ಈ ಎರಡು. ದೈನಂದಿನ ಜೀವನದ ಸಾಧಾರಣ ಸಂಗತಿಗಳು ಧಾರ್ಮಿಕ ಸಂಕೇತಗಳ ಮಟ್ಟಕ್ಕೇರಿದಾಗ ಧರ್ಮ ಮತ್ತಷ್ಟು ಉಜ್ವಲವೂ ಶಕ್ತಿಪೂರ್ಣವೂ ಆಗುತ್ತದೆ. ಧರ್ಮ ಎನ್ನುವುದು ಬದುಕಿನ ಕಲ್ಯಾಣಶಕ್ತಿ ಎನ್ನುವುದಾದರೆ ಉಪ್ಪು ಮತ್ತು ಚರಕ ಅದರ ಕ್ರಿಯಾಶೀಲತೆಯ ಅಭಿವ್ಯಕ್ತಿ".... *(ಸಂಸ್ಕೃತಿ ಕಥನ, ಪು. 181)*

ಡಿ.ಆರ್. ನಾಗರಾಜ್ ಅವರ ಮೇಲಿನ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕುವೆಂಪು ಸಾಹಿತ್ಯವನ್ನು ಪರಿಶೀಲಿಸಿದಾಗ ನನಗೆ ಅನ್ನಿಸಿದ್ದು ಹೀಗೆ: ಗಾಂಧಿಯವರಂತೆಯೇ ಮತಾತೀತ ನಿಲುವನ್ನು ತಳೆದಿದ್ದ ಕುವೆಂಪು ಅವರು ಮಲೆನಾಡಿನ ನಿಸರ್ಗದ ಪ್ರತೀಕವೆಂಬಂತಿರುವ 'ಕಾಜಾಣ'ವನ್ನು ತಮ್ಮ ಸಮಸ್ತ ಅಭಿವ್ಯಕ್ತಿಯ ಸಂಕೇತವನ್ನಾಗಿ ಮಾಡಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಕುವೆಂಪು ತಿಲಕರಂತೆ ವಿಶ್ರುತ ನಾಯಕರ ಅಥವಾ ವಿಘ್ನ ವಿನಾಯಕನನ್ನು ಆಯ್ದುಕೊಳ್ಳುವುದಿಲ್ಲ. ಕನ್ನಡ ಸಾಹಿತ್ಯದ ಪರಂಪರೆಯ ಪ್ರಜ್ಞೆಯುಳ್ಳ ಕುವೆಂಪು ಇದಕ್ಕಾಗಿ ಪ್ರತಿ ನಾಯಕರು, ಅಲಕ್ಷಿತರು, ಪತಿತರನ್ನು ಬಳಸಿದ್ದಾರೆ. ಕುವೆಂಪು ಅವರ ಸಮಗ್ರ ಸಾಹಿತ್ಯವನ್ನು ಲಕ್ಷಿಸಿ ಹೇಳುವುದಾದರೆ, ವಿಶ್ವಾಮಿತ್ರ (= ಧನ್ವಂತರಿಯ ಚಿಕಿತ್ಸೆ), ನಂದಿ ಗ್ರಾಮದ ಭರತ (= ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ), ಶಂಭೂಕ (= ಶೂದ್ರ ತಪಸ್ವಿ), ಏಕಲವ್ಯ (= ಬೆರಳ್ಗೆ ಕೊರಳ್), ದುರ್ಯೋಧನ (= ಸ್ಮಶಾನ ಕುರುಕ್ಷೇತ್ರಂ), ರಾವಣ, ಕುಂಭಕರ್ಣ, ವಾಲಿ, ಮಂಥರೆ, ಊರ್ಮಿಳೆ, ಕೈಕೆ (= ಶ್ರೀ ರಾಮಾಯಣ ದರ್ಶನಂ) - ಇಂತಹ ಪಾತ್ರಗಳಿಗೆ ಕುವೆಂಪು ಕೊಟ್ಟಿರುವ 'ಟ್ರೀಟ್‌ಮೆಂಟ್' ಬಹುಮುಖ್ಯವಾಗಿದೆ. ಪಾತ್ರಗಳು ಮಾತ್ರವಲ್ಲ, ಸ್ಥಳಗಳು ಕೂಡ ಕುವೆಂಪು ಅವರ ವಿಕಿರಣ ಚಿಕಿತ್ಸೆಗೊಳಗಾಗಿವೆ. ಈ ದೃಷ್ಟಿಯಿಂದ 'ಅಯೋಧ್ಯೆ' ಮತ್ತು 'ಹಸ್ತಿನಾವತಿ'ಗಳನ್ನು ನೋಡಬೇಕು. ಇವು ಕುವೆಂಪುಗೆ ಗತಕಾಲದ ವಿವರಗಳಲ್ಲ. ಅವರಿಗೆ ಈ ಅಯೋಧ್ಯೆ ಮತ್ತು ಹಸ್ತಿನಾವತಿಗಳು ನಗರಗಳ ಪ್ರತೀಕವಾಗಿದೆ. ಇಲ್ಲಿ ತಳವೂರಿದವರು ಪುರೋಹಿತಶಾಹಿಗಳು. ಅಯೋಧ್ಯೆಯನ್ನು ವಸಿಷ್ಠ, ಹಸ್ತಿನಾವತಿಯನ್ನು ದ್ರೋಣ ಬಿಡದಂತೆ ಅಂಟಿಕೊಂಡಿದ್ದಾರೆ. ನಾವಿಲ್ಲಿ 'ಕ್ಷಾತ್ರ' ಶಕ್ತಿಯೊಂದಿಗೆ ಮೇಳೈಸಿಕೊಂಡಿರುವ 'ಬ್ರಾಹ್ಮ' ತೇಜಸ್ಸಿನ ಸ್ವರೂಪವನ್ನು ಗ್ರಹಿಸಬೇಕಾಗಿದೆ.

ರಾಮನಿಲ್ಲದ ಅಯೋಧ್ಯಾ ನಗರಿಯಲ್ಲಿರಲು ಮನಸ್ಸೊಪ್ಪದೆ, ನಂದಿ ಗ್ರಾಮದಲ್ಲಿದ್ದು ಕೊಂಡೆ ರಾಜ್ಯಭಾರ ನಿರ್ವಹಣೆ ಮಾಡುವ ಭರತನನ್ನು ಕುರಿತು 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' - ಎಂಬ ಭಾಷಣದಲ್ಲಿ ವಿಶೇಷ ಪ್ರಸ್ತಾಪ ಮಾಡಿರುವ ಕುವೆಂಪು ತಮ್ಮ ಕೃತಿಗಳಲ್ಲಿ 'ನಗರೀಯ' ಮತ್ತು 'ಗ್ರಾಮೀಣ' ಸಂಘರ್ಷವೊಂದನ್ನು ಸೃಷ್ಟಿಸಿದ್ದಾರೆ. ಬಡರೈತನೊಬ್ಬನ ಆತ್ಮನಾದಕ್ಕೆ ಕಿವುಡಾಗದೆ, ತೀವ್ರವಾಗಿ ಸ್ಪಂದಿಸುವ ಸಹೃದಯಿ ವಿಶ್ವಾಮಿತ್ರನನ್ನು 'ಧನ್ವಂತರಿಯ

ಚಿಕಿತ್ಸೆ'ಯಲ್ಲಿ ಕಾಣಬಹುದು. ಇಂದಿನ ಮತೀಯ ರಾಜಕಾರಣದ ಬಂಡವಾಳವಾಗಿರುವ ಅಯೋಧ್ಯಾರಾಮನು ಕುವೆಂಪು ಸಾಹಿತ್ಯದಲ್ಲಿ ಕಂಡುಬರುವುದಿಲ್ಲ. ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಇದಕ್ಕೆ ತದ್ವಿರುದ್ಧವಾಗಿರುವ ಗಿರಿವನಪ್ರಿಯರಾದ ರಾಮ-ಸೀತೆಯರನ್ನು ಕುವೆಂಪು ಚಿತ್ರಿಸಿದ್ದಾರೆ. ವನ್ಯಪ್ರೇಮಿಯಾದ ರಾಮ ಮತ್ತು ಕಾಂತಾರ ರಸಕ್ಕೆ ಎಳಸುವ ಸೀತೆಯ ಮೂಲಕ ನವೀನ ಯುಗಕ್ಕೆ ಅಗತ್ಯವಾದ ದರ್ಶನವನ್ನು ಕುವೆಂಪು ನೀಡಿದ್ದಾರೆ. 'ಶ್ರೀ ರಾಮಾಯಣ ದರ್ಶನಂ' ಮಹಾ ಕಾವ್ಯದಲ್ಲಿರುವ ವಿಶ್ವಾಮಿತ್ರ - ರಾಮ ಸಂವಾದವು ಬಹು ವಿಶಿಷ್ಟವಾಗಿದೆ. ರಾಮ ಲಕ್ಷ್ಮಣರು ಅರಮನೆಯ ನಾಲ್ಕು ಗೋಡೆಗಳ ಮಧ್ಯೆ ಬೆಳೆದವರು. ಅವರಿಗೆ ಕಾಡಿನ ಪರಿಚಯವಿಲ್ಲ. ಈ ರಾಜಪುತ್ರರನ್ನು ವಿಶ್ವಾಮಿತ್ರ ಕಾಡಿಗೆ ಕರೆದುಕೊಂಡು ಹೋಗುತ್ತಾನೆ. ಅರಣ್ಯ ದರ್ಶನದಿಂದ ಪುಳಕಿತನಾಗುವ ರಾಮ ವಿಶ್ವಾಮಿತ್ರನೊಂದಿಗೆ ತನ್ನ ಹೃದಯದ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದ್ದಾನೆ :

ರಾಮ : ಗುರುದೇವ! ನಿಮ್ಮ ಕರುಣೆಯಿಂ ಎಮಗೆ ಲಭಿಸಿತೀ ವನಸುಖಂ ದಾರಿದ್ರ್ಯಮಲ್ತೆ ಆ ನಾಗರಿಕ ಜೀವನಂ ಈ ವನ್ಯಸಂಸ್ಕೃತಿಯ ಮುಂದೆ.

ವಿಶ್ವಾಮಿತ್ರ : ದಿಟವೊರೆದೆ, ಹೇ ವತ್ಸ! ಗಿರಿವನ ಪ್ರೀತಿ ತಾಂ ದೈವ ಕೃಪೆದಲ್. ಜಗದೀಶ್ವರನ ಮಹಿಮೆ ಸಂವೇದ್ಯವಹುದಿಲ್ಲಿ; ಭವ್ಯ ಸೌಂದರ್ಯಶೀಲದ ವನ್ಯಶಾಂತಿಯಲಿ ಉಪನಿಷತ್ತಿನ ಮಹಾಮಂತ್ರಾನುಭವಗಳುಂ ಹೃದ್ಗಮ್ಯವಿಲ್ಲಿ.... ಸೃಷ್ಟಿ ಸೌಂದರ್ಯದ ಒಲ್ಮೆಯ ಸೃಷ್ಟಿಕರ್ತಂಗೆ ಪೂಜೆಯಯ್!

ಈ ಗುರು-ಶಿಷ್ಯ ಸಂವಾದದಲ್ಲಿ ಕುವೆಂಪು, ನಗರಜೀವನದ ದಾರಿದ್ರ್ಯ ಮತ್ತು ಅರಣ್ಯ ಜೀವನದ ಪ್ರಶಾಂತತೆಗಳನ್ನು ಅಭಿವ್ಯಕ್ತಗೊಳಿಸುತ್ತಾ ಸೃಷ್ಟಿಕರ್ತನಿಗೆ ನಿಜವಾಗಿಯೂ ಸಲ್ಲಬೇಕಾದ ಒಲುಮೆ ಪೂಜೆಯನ್ನು ಸ್ಪಷ್ಟೀಕರಿಸಿದ್ದಾರೆ. ಇದೇ ಕುವೆಂಪು ಅವರ ಪೌರಾಣಿಕ ಮಾರ್ಗದ ವೈಶಿಷ್ಟ್ಯ. 'ರಾಮಾಯಣ ದರ್ಶನಂ' ಮತ್ತು 'ಧನ್ವಂತರಿ ಚಿಕಿತ್ಸೆ'ಗಳೆರಡನ್ನೂ ಗಮನಿಸಿ ಹೇಳುವುದಾದರೆ ನಿಸರ್ಗಸನ್ನಿಧಿ, ವಿಚಾರ ಕ್ರಾಂತಿ ಮತ್ತು ಸಾಮಾಜಿಕ ಪರಿವರ್ತನೆಯ ಹರಿಕಾರನನ್ನಾಗಿ ವಿಶ್ವಾಮಿತ್ರನನ್ನು ರೂಪಿಸಲಾಗಿದೆ. ಹೀಗೆ ಒಂದೊಂದು ಪಾತ್ರವನ್ನೂ ಕುವೆಂಪು ಅವರು ನವೀನದೃಷ್ಟಿಯಲ್ಲಿ, ಸಾಮಾಜಿಕ ಮುನ್ನೋಟದಿಂದ ಪುನರ್‌ಸೃಷ್ಟಿಸಿದ್ದಾರೆ. ಈ ಪುನರ್‌ಸೃಷ್ಟಿಯನ್ನು ಕುವೆಂಪು ಅನುಲೋಮ ಚಿಂತನೆಗಳಿಗೆ ವಿರುದ್ಧವಾಗಿ, ಪ್ರತಿಲೋಮ ಚಿಂತನೆಗಳಿಗೆ ಪೂರಕವಾಗಿ ತರುತ್ತಾರೆ.

ಆದ್ದರಿಂದಲೇ ಕುವೆಂಪು ಸೃಷ್ಟಿಸುವ ಧಾರ್ಮಿಕ ಸಂಕೇತಗಳು ಅಥವಾ ಪೌರಾಣಿಕ ಮಾರ್ಗವು ಸಂಕುಚಿತ ಪಥಗಾಮಿಯಾಗುವುದಿಲ್ಲ. ಕುವೆಂಪುಗೆ ಪುರಾತನ ಮತ್ತು ನೂತನ ಎಂಬ ಭೇದವಿಲ್ಲ. ಯಾವುದು ಸ್ಥಾವರ? ಯಾವುದು ಜಂಗಮ? ಯಾವುದು ಯಥಾಸ್ಥಿತಿ? ಯಾವುದು ಪರಿವರ್ತನೆ? ಎಂಬುದಷ್ಟೇ ಅವರಿಗೆ ಮುಖ್ಯ.

ಕುವೆಂಪು ಸೃಷ್ಟಿಸಿರುವ ಮತಾತೀತ ಸಂಕೇತಗಳಲ್ಲಿ 'ಕಡಗೋಲುಗಂಬ' ಮತ್ತು 'ಮಸೆಕಲ್ಲು'

ಬಹುಮುಖ್ಯವಾದವು. ಇವನ್ನು ಕ್ರಮವಾಗಿ 'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳಲ್ಲಿ ವಿಸ್ತಾರವಾಗಿ ನಿರೂಪಿಸಲಾಗಿದೆ. ಕಡಗೋಲು ಮಥಿಸಿ, ಮಥಿಸಿ ನವನೀತವನ್ನು ತರುವಂಥದ್ದು. ಕುವೆಂಪು ಕೂಡ ಹಾಗೆ. ಅವರು ಸಂಸ್ಕೃತಿಯನ್ನು ಮಥಿಸಿ, ಮಥಿಸಿ ನವನೀತವನ್ನು ಸಾಧಿಸಿದ್ದಾರೆ. 'ಮಸೆಕಲ್ಲು' - ಶ್ರಮ ಸಂಸ್ಕೃತಿಯ ನಿಕಷವಾಗಿದೆ. ಕುವೆಂಪು ಕೃತಿಗಳೇ ಮಸೆಕಲ್ಲು ಇದ್ದ ಹಾಗೆ. ನಮ್ಮ ಮನಸ್ಸು ಅದರ ಮೇಲೆ ಮಸೆದರೆ ಚೂಪಾಗುತ್ತದೆ; ಹರಿತವಾಗುತ್ತದೆ. ಅನುಲೋಮ ಚಿಂತನೆಗಳನ್ನು ಕತ್ತರಿಸಿ, ಪ್ರತಿಲೋಮ ಚಿಂತನೆಗಳನ್ನು ರೂಢಿಸಿಕೊಳ್ಳಲು ನೆರವಾಗುತ್ತದೆ. ಈ ಸಂದರ್ಭದಲ್ಲಿ 'ಕಾನೂರು ಹೆಗ್ಗಡಿತಿ' ಕಾದಂಬರಿಯ ಒಂದು ಮಾತು ನೆನಪಾಗುತ್ತದೆ: **"ಸಂಸ್ಕೃತಿಯಿಲ್ಲದ ಮತ್ತು ಸಂಸ್ಕೃತಿಗಾಗಿಯಲ್ಲದ ವಿರಾಮ ನರಕಕ್ಕೆ ದಾರಿ"** - (ಪು. 611). ಸುಬ್ಬಮ್ಮನ ನಿರ್ಲಕ್ಷ್ಯದ ಬದುಕು, ಮಾಯಕಾರ್ತಿ ಗಂಗೆಯ ಜೊತೆಗೆ ಅವಳ ಒಡನಾಟ, ಸೇರೆಗಾರ ರಂಗಪ್ಪನ ಸಹವಾಸ ಇತ್ಯಾದಿಗಳಿಂದ ಅಂತಿಮವಾಗಿ ಬಂದೆರಗುವ ದುರಂತವನ್ನು ಗಮನಿಸಿ ಕುವೆಂಪು ಹೇಳುವ ಮಾತಿದು. ಈ ಮಾತಿನಲ್ಲಿರುವ 'ವಿರಾಮ' ವಿಚಾರವನ್ನು ಯಾಕೆ ಒತ್ತಿ ಹೇಳುತ್ತೇನೆಂದರೆ, ಇವತ್ತು ನಾವೆಲ್ಲ ಶ್ರಮಜೀವನದಿಂದ ದೂರ ಬಂದಿದ್ದೇವೆ. ಆಧುನಿಕ ಮಾನವನ ಒಟ್ಟು ಜೀವನಶೈಲಿಯು ವಿಶ್ರಾಮ ಜೀವನ ಅಥವಾ ವಿರಾಮ ಜೀವನವಾಗಿದೆ. ಜಾಗತಿಕ ದೃಷ್ಟಿಯಿಂದ ಹೇಳುವುದಾದರೆ ಇದು ನವ ವಸಾಹತುಶಾಹಿಯ ಯುಗ; ಇಂದು ವಿಶ್ವವನ್ನೇ ಹಳ್ಳಿಯನ್ನಾಗಿ ನೋಡಲಾಗುತ್ತಿದೆ.

ವಿಶ್ವಗ್ರಾಮ ಅಥವಾ ಗ್ಲೋಬಲ್ ವಿಲೇಜಿನ ಕೊಡುಗೆಯೇ ಭೋಗವಾದ. ಇದೇ ನವ ವಸಾಹತುಶಾಹಿಯ ಆತ್ಮ! 'WASPISM'ನ ಗಗನಚುಂಬಿ ಕಟ್ಟಡಕ್ಕೆ ಭೋಗವಾದವೇ ತಳಹದಿ. ನವ ವಸಾಹತುಶಾಹಿಯ ಚಾಲಕ ಶಕ್ತಿಯಾಗಿರುವ White Anglo Saxson Protestant (=ಸಂಕ್ಷೇಪನಾಮ : WASP)ಗಳ ದೃಷ್ಟಿ ಧೋರಣೆಗಳೇ 'WASPISM' ಎಂದು ಹೆಸರಾಗಿದೆ.* ನ್ಯೂಯಾರ್ಕ್, ಲಂಡನ್, ಫ್ರಾನ್ಸ್, ದೆಹಲಿ, ಮುಂಬಯಿ, ಬೆಂಗಳೂರು ಎಲ್ಲೇ ಇರಲಿ ಈ ಭೋಗವಾದಿಗಳೆಲ್ಲರೂ ಒಂದೇ ಜಾತಿ, ಒಂದೇ ಮತ! ಭೋಗವಾದದ ಅಪಾಯವನ್ನು ಕುರಿತು 'ಹಾಳೂರು' (1926) ಎಂಬ ನೀಳ್ಗವಿತೆಯನ್ನೇ ಕುವೆಂಪು ರಚಿಸಿದ್ದಾರೆ. ಇದರಿಂದಾಯ್ದ ಈ ಸಾಲುಗಳನ್ನು ಗಮನಿಸಿ :

---

* WASPISM: ಇದು ಅಮೆರಿಕಾ ದೇಶದ ಮೂಲನಿವಾಸಿಗಳ ನುಡಿಗಟ್ಟಿನಿಂದ ರೂಪಿಸಿಕೊಂಡ ಪರಿಭಾಷೆಯಾಗಿದೆ. WASP ಎಂದರೆ ಕಣಜವೆಂಬ ಅರ್ಥವೂ ಇದೆ. ಕಣಜವು ಕಂಬಳಿಹುಳುವನ್ನು ಕುಟುಕಿ, ನಿಃಚೇಷ್ಟಿತಗೊಳಿಸಿ, ಹೊತ್ತೊಯ್ದು ಗೂಡಿನಲ್ಲಿಡುತ್ತದೆ...ಇದು ಮುಂದೆ ಮೊಟ್ಟೆಯೊಡೆದು ಬರುವ ಮರಿಕಣಜಕ್ಕೆ ಆಹಾರವಾಗುತ್ತದೆ. ಅಲ್ಲಿವರೆಗೆ ಗೂಡಿನಲ್ಲಿ ಸಮಾಧಿಯಾಗಿರುವ ಕಂಬಳಿಹುಳು ಇತ್ತ ಸಾಯದೆ, ಅತ್ತ ಬದುಕದೆ ಕೋಮಾದಲ್ಲಿರುತ್ತದೆ. ಇವತ್ತು ಜಗತ್ತನ್ನು ನಿರ್ವಹಿಸುವ ಧೋರಣೆ ಏನಿದೆ? ಅದು ಕೂಡ WASPISM ಎಂದು ಸಂಸ್ಕೃತಿಯ ಚಿಂತಕರು ಕರೆಯುತ್ತಾರೆ. ತೃತೀಯ ಜಗತ್ತಿನ ದೇಶಗಳ ಸಂಸ್ಕೃತಿಯನ್ನು ಒರೆಸಿಹಾಕಿ, ಬದುಕಿನ ಎಲ್ಲನಡೆ ಮತ್ತು ನುಡಿಗಳಲ್ಲಿರುವ ಬಹುರೂಪತೆಗಳನ್ನು ಅಳಿಸಿಹಾಕುವ ಪ್ರಕ್ರಿಯೆಯನ್ನಾಗಿ 'ಗೋಳೀಕರಣ'ವನ್ನು ವ್ಯಾಖ್ಯಾನಿಸುತ್ತಾರೆ. ಇಲ್ಲಿ, ಒಂದು ದೇಶ - ಒಂದು ಭಾಷೆ - ಒಂದು ಜೀವನಶೈಲಿ ಇಡೀ ಜಗತ್ತಿಗೆ ಮಾದರಿಯಾಗಿ ಪ್ರೊಜೆಕ್ಟ್ ಆಗುತ್ತದೆ. ಇದೇ ನವವಸಾಹತುಶಾಹಿಯ ಲಕ್ಷ್ಯವಾಗಿದೆ.

"ಅತಿ ಭೋಗವದು ರೋಗ ಕೊಲ್ಲುವುದು ಬೇಗ
ಪುರಗಳಿಂದೈತಂದಿಹುದು ಹಳ್ಳಿಗೀಗ
ಸಾಮಾನ್ಯ ಜೀವನವು ಪರಮ ಸುಧೆಯಂತೆ
ಮಿತಿಮೀರಿದತಿ ಭೋಗ ಘೋರ ವಿಷದಂತೆ"

ಕುವೆಂಪು ಅವರ ಪ್ರಸಿದ್ಧ ಕವಿತೆ 'ಹೀರೆಯ ಹೂವು' (1946) ಕೂಡ ಭೋಗವಾದದ ಕಟು ವಿಮರ್ಶೆಯ ಧ್ವನಿಯನ್ನೊಳಗೊಂಡಿದೆ :

"ಅವರಾದರ್ಶವು ಬರಿಯುಪಯೋಗ!
ಹೊಟ್ಟೆಯ ಭೋಗವೆ ಅವರಿಗೆ ಭೋಗ!"

ಮುಡಿಯೇರದ ಮತ್ತು ಗುಡಿ ಸೇರದ 'ಹೀರೆಯ ಹೂವು' - ಒಂದು ಅಲಕ್ಷಿತ ಪುಷ್ಪ. ಆದರೆ, ಇದರಿಂದ ಮೂಡಿಬರುವ ಫಲ ಮಾತ್ರ ಎಲ್ಲರಿಗೂ ಬೇಕು..... ಇದು ಮಾನವ ಜೀವನಕ್ಕೂ ಅನ್ವಯಿಸುತ್ತದೆ. ಶ್ರಮಜೀವಿಗಳಾದ 'ಅಲಕ್ಷಿತ' ಜನಸಮುದಾಯದತ್ತ ಕಣ್ಣೆತ್ತಿಯೂ ನೋಡದ ಭೋಗವಾದಿಗಳು, ಅವರಿಂದ ಮೂಡಿಬರುವ ಫಲವನ್ನಷ್ಟೆ ಸ್ವೀಕರಿಸುತ್ತಾರೆ..... ಇದೊಂದು ರೀತಿಯಲ್ಲಿ ಬಳಸಿ ಬಿಸಾಡುವ ದೃಷ್ಟಿಕೋನವೆಂದೇ ಹೇಳಬೇಕು. ಈ 'ಭೋಗಧರ್ಮ'ವನ್ನು ಕುವೆಂಪು ಒಪ್ಪುವುದಿಲ್ಲ....

ಕುವೆಂಪು ಸಾಹಿತ್ಯದ 'ಗುರಿ' ಏನೆಂಬುದನ್ನು ಅವರೇ ಬರೆದಿರುವ ಕವಿತೆ ಖಚಿತವಾಗಿ ಹೇಳುತ್ತದೆ :

"ಗುರಿ ಯಾವುದೆಂದು ಕೇಳುವರು ಎನ್ನ
ಅರಿಯರೇ ಗುರಿಯು ಸರ್ವಕೆ ನೀನೆ ಎಂದು?
ತಿರೆಯ ಸಿರಿಸುತರೆದುರು ತಲೆವಾಗಿ ನಿಂತು
ಮನದಿ ನಿನ್ನನು ನೆನೆವೆ ನಮ್ರಭಾವದೊಳು
ಜಗದ ಸಿರಿಸುತರೆನ್ನ ಜಡನೆಂದರೇನು?
ಅಗಲದಿರು ಎಲೆ ತಾಯೆ ಮನದಿಂದ ನೀನು" *'ಗುರಿ' (1.13)*

ಇಲ್ಲಿ ನಿರೂಪಿತವಾಗಿರುವ **'ತಿರೆಯ ಸಿರಿಸುತರು'** (=ಮಣ್ಣಿನ ಮಕ್ಕಳು) ಮತ್ತು **'ಜಗದ ಸಿರಿಸುತರು'** (=ಜಾಗತಿಕ ಪ್ರಭುಗಳು) - ಎಂಬ ವೈರುಧ್ಯ ತುಂಬ ಗಮನಾರ್ಹವಾಗಿದೆ... ಕುವೆಂಪು ಅವರನ್ನು ಚೆನ್ನಾಗಿ ಗ್ರಹಿಸಬೇಕೆಂದರೆ ಅವರ ಸಾಹಿತ್ಯದ ವೈರುಧ್ಯಗಳು ಮತ್ತು ಸಂಘರ್ಷಗಳ 'ದ್ವಂದ್ವಾತ್ಮಕ' ಸಂಬಂಧಗಳನ್ನು ಹಿಡಿಯಬೇಕು. ಆಗ ಮಾತ್ರ ಕುವೆಂಪು ಏರುವ ಎತ್ತರಕ್ಕೆ, ಮುಳುಗುವ ಆಳಕ್ಕೆ ನಾವು ಕೂಡ ತಲುಪುತ್ತೇವೆ.

ಕೊನೆಯದಾಗಿ, ಹೇಳುವ ಮಾತೆಂದರೆ ಭಯೋತ್ಪಾದನೆಯೆಂಬ ಫಲ ಕೊಡುವ ಕೋಮುವಾದಕ್ಕೆ ವಿರುದ್ಧವಾಗಿ ವಿಶ್ವಮಾನವ ಕಲ್ಪನೆ ಮತ್ತು WASPISMನ ಕಿರೀಟ ತೊಟ್ಟಿರುವ ವಿಶ್ವಗ್ರಾಮಕ್ಕೆ ವಿರುದ್ಧವಾಗಿ ಸ್ಥಳೀಯ ಭೂಗೋಳದ ಕಲ್ಪನೆಗಳನ್ನು ಬಲವಾಗಿ ಪ್ರತಿಪಾದಿಸಿರುವ ಕುವೆಂಪು ಏಕಕಾಲಕ್ಕೆ ಮತಧರ್ಮ ಮತ್ತು ಭೋಗಧರ್ಮಗಳನ್ನು ಮೆಟ್ಟಿ ನಿಲ್ಲಬೇಕಾದ 'ಅನಿಕೇತನ' ಪ್ರಜ್ಞೆಯ ಹರಿಕಾರನಾಗಿದ್ದಾರೆ... ❑

ಶಿವರಾಮ ಕಾರಂತ ಮತ್ತು ಸಂಸ್ಕೃತಿ

ನಟರಾಜ್ ಹುಳಿಯಾರ್

ಸೃಜನಶೀಲ ಲೇಖಕನಿಗೆ ಒಂದು ವಿಶೇಷ ಸವಲತ್ತಿರುತ್ತದೆ. ಆತ ತನ್ನ ರೂಪಕೇತರ ಬರಹಗಳಲ್ಲಿ ಮಾಡಿರುವ ಹೇಳಿಕೆಗಳನ್ನು ಅಥವಾ ವಿಶ್ಲೇಷಣೆಗಳನ್ನು ತನ್ನ ಕತೆ, ಕಾದಂಬರಿಗಳ ರೂಪಕಗಳಲ್ಲಿ ಮತ್ತೆ ಪರೀಕ್ಷಿಸಬಲ್ಲ. ಈ ಪರೀಕ್ಷೆಯಲ್ಲಿ ತನ್ನ ಹಳೆಯ ನಿಲುವುಗಳನ್ನು ತಿರಸ್ಕರಿಸಬಲ್ಲ ಹಾಗೂ ಹೊಸ ಸತ್ಯಗಳನ್ನು ಕಾಣಬಲ್ಲ. ಆಧುನಿಕೋತ್ತರ ಪಶ್ಚಿಮದ ಚಿಂತನೆ ಹೀಗೆ ಸೃಜನ-ಸೃಜನೇತರ ಎನ್ನುವ ವರ್ಗೀಕರಣವನ್ನೇ ಬದಿಗಿರಿಸಿ, ಒಟ್ಟಾರೆಯಾಗಿ ಒಂದು 'ಬರಹಸಮೂಹ' ಅಥವಾ 'ಬರವಣಿಗೆ' ಇರುತ್ತದೆ, ಅಷ್ಟೆ ಎನ್ನುತ್ತದೆ. ಈ ವಾದದ ಪ್ರಕಾರ, ಲೇಖಕನೊಬ್ಬ ಭಾಷೆ ಹಾಗೂ ಸಂಸ್ಕೃತಿಯ ಬೃಹತ್ ನಿಘಂಟಿನಿಂದ ಪಡೆದದ್ದನ್ನು ಮರುಜೋಡಣೆ ಮಾಡುತ್ತಿರುತ್ತಾನೆ; ಆದ್ದರಿಂದ ಸೃಜನಶೀಲ-ಸೃಜನೇತರ ಎಂಬ ವರ್ಗೀಕರಣವನ್ನು ಬಹುದೂರ ಒಯ್ಯಲಾಗದು. ಆದರೂ ಕಾರಂತರ ಸಾವಿರಾರು ಪುಟಗಳ ಬರವಣಿಗೆಯಲ್ಲಿ ವಾದ, ವಿಶ್ಲೇಷಣೆ ಹಾಗೂ ತರ್ಕವೇ ಪ್ರಧಾನವಾದ ಗದ್ಯ ಬರವಣಿಗೆ, ಭಾಷಣ ರೂಪದ ಬರವಣಿಗೆ ಹಾಗೂ ರೂಪಕ ಪ್ರಧಾನ ಬರವಣಿಗೆ - ಇವುಗಳನ್ನು ವಿಂಗಡಿಸಬಹುದು. ಅವರ ಕೆಲವು ಸಾಂಸ್ಕೃತಿಕ ನಿಲುವುಗಳು ಹಾಗೂ ಗ್ರಹಿಕೆಗಳನ್ನು ಅವರ ವಿಭಿನ್ನ ಬರವಣಿಗೆಗಳಿಂದ ಆಯ್ದ ಭಾಗಗಳ ಮೂಲಕ ನೋಡುವ ಯತ್ನ ಇಲ್ಲಿದೆ.

'ಮೂಕಜ್ಜಿಯ ಕನಸುಗಳು' ಕಾದಂಬರಿಯನ್ನು ಬರೆದ ಹಿನ್ನೆಲೆ ಕುರಿತು ಚರ್ಚಿಸುತ್ತಾ, 'ನಮ್ಮ ಸಂಸ್ಕೃತಿಯ ಹೊಟ್ಟನ್ನು ಕಳಚುವ ಉದ್ದೇಶ' ತಮ್ಮದು ಎಂದು ಕಾರಂತರು ಹೇಳುತ್ತಾರೆ. ಅವರ ಇಡೀ

ಸಂಸ್ಕೃತಿ ಚಿಂತನೆಯ ಮುಖ್ಯ ಧೋರಣೆಯೊಂದನ್ನು ಸೂಚಿಸುವ ಮಾತು ಇದು. ಆದರೂ ಸಂಸ್ಕತಿಯ ಹೊಟ್ಟನ್ನು ಕಳಚುವಲ್ಲಿ ಸರಳ ಮಾನವಶಾಸ್ತ್ರೀಯ ಗ್ರಹಿಕೆಗಳನ್ನು ಮೀರಿ 'ಮೂಕಜ್ಜಿಯ ಕನಸುಗಳು' ಹೋಗಲಾಗಲಿಲ್ಲ ಎಂಬುದು ಬೇರೆ ಮಾತು. ಆದರೆ, ಅವರ ಪ್ರಕಾರ ಮೂಕಜ್ಜಿ ನಮ್ಮಲ್ಲನೇಕರಲ್ಲಿ ಇರುವ 'ಪ್ರಾಮಾಣಿಕ ಸಂದೇಹದ ರೂಪ'. ಈ ಸಂದೇಹವಾದಿ ನಿಲುವಿನ ಮೂಲಕ ನಮ್ಮ ಕೆಲಬಗೆಯ ಸಾಂಸ್ಕೃತಿಕ ನಂಬಿಕೆಗಳ ತಳಹದಿಯನ್ನು ಕಾರಂತರು ಅಲುಗಾಡಿಸುತ್ತಾರೆ. ತಮ್ಮ ಆರಂಭದ ಕಾದಂಬರಿಯ ಬರವಣಿಗೆ ಕುರಿತು ಮಾತನಾಡುತ್ತಾ 'ಜನರ Grass ನಂಬಿಕೆಯನ್ನು ಧ್ವಂಸ ಮಾಡಲು' ತಾವು ಕಾದಂಬರಿ ಬರೆಯಲಾರಂಭಿಸಿದ್ದನ್ನು ನೆನೆಯುವ ಕಾರಂತರು, 1929ರಲ್ಲಿ ತಾವು ಬರೆದ 'ದೇವದೂತರು' ಕಾದಂಬರಿಯಲ್ಲಿ ತಮ್ಮ 'ಗುರಿಯೇ Destruction ಆಗಿತ್ತು' ಎನ್ನುತ್ತಾರೆ. 'ಸರಸಮ್ಮನ ಸಮಾಧಿ'ಯಲ್ಲಿ ಭಾರತೀಯ ಸಾಂಪ್ರದಾಯಿಕ ಲೈಂಗಿಕ ಮೌಲ್ಯಗಳ ಜಗತ್ತಿನ ಬಗೆಗೆ ಆ ಕಾಲಕ್ಕೆ ಮುಖ್ಯವೆನ್ನಬಹುದಾದ ಕೆಲವು ಪ್ರಶ್ನೆಗಳನ್ನು ಅವರು ಎತ್ತುತ್ತಾರೆ. 'ಚೋಮನದುಡಿ'ಯಲ್ಲಿ ಭೂಮಿಯ ಒಡೆತನದ ಬಗ್ಗೆ ಆಳುವ ಜಾತಿಗಳು ರೂಪಿಸಿಕೊಂಡು ಬಂದಿದ್ದ ಸಾಮಾಜಿಕ-ಜಾತೀಯ-ಸಾಂಸ್ಕೃತಿಕ ಫ್ಯೂಡಲ್ ನೋಟವನ್ನು ಒಂದು ಮಟ್ಟದವರೆಗಾದರೂ ಪರೀಕ್ಷಿಸುತ್ತಾರೆ. 'ಮೈಮನಗಳ ಸುಳಿಯಲ್ಲಿ' ಕಾದಂಬರಿಯ ವೇಶ್ಯೆ ಮಂಜುಳೆಯ ಮೂಲಕ ಪತಿವ್ರತಾ ಧರ್ಮದ ನಿರರ್ಥಕತೆಯನ್ನು ಪರೀಕ್ಷಿಸುತ್ತಾ, ಒಂದು ಮುಖ್ಯ ಸಾಂಸ್ಕೃತಿಕ ಪ್ರಶ್ನೆಗೆ ಒತ್ತು ಕೊಡಲೆತ್ನಿಸುತ್ತಾರೆ.

ಇಂಥ ಉದಾಹರಣೆಗಳನ್ನು ಇನ್ನಷ್ಟು ಕೊಡಬಹುದು. ಇವೆಲ್ಲ ಭಾರತದ ನವೋದಯ ಪ್ರಜ್ಞೆಯ ಒಂದು ಮುಖ್ಯ ಧೋರಣೆಯನ್ನು ಕುರಿತು ಹೇಳುತ್ತವೆ. ವಸಾಹತುಘಟ್ಟದ ಈ ಧೋರಣೆ ಪಾರಂಪರಿಕ ಮೌಲ್ಯಗಳ ಪುನರ್‌ಮೌಲ್ಯಮಾಪನವನ್ನು ಆರಂಭಿಸಿತ್ತು. ಭಾರತೀಯ ಲೇಖಕರಲ್ಲಿ 'ರೆನೈಸಾನ್ಸ್ ವ್ಯಕ್ತಿ' ಎನ್ನಬಹುದಾದ ರವೀಂದ್ರನಾಥ ಟ್ಯಾಗೋರ್ ಈ ಕೆಲಸ ಮಾಡಿದ್ದಾರೆ. ಕನ್ನಡ ನವೋದಯ ಕಾಲದಲ್ಲಿ ಕಾರಂತರು ಹಾಗೂ ಕುವೆಂಪು ಈ ಪಾತ್ರ ನಿರ್ವಹಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಕಾರಂತರ ಕಾದಂಬರಿಗಳು ನಿರ್ವಹಿಸಿದ ವಿಭಿನ್ನ ಪಾತ್ರಗಳನ್ನು ಗಮನಿಸಿದರೆ, ವಸಾಹತೀಕರಣ ಘಟ್ಟದಲ್ಲಿ ವಿಕಾಸಗೊಂಡ ಕಾದಂಬರಿಯ ಸಾಂಸ್ಕೃತಿಕ ರಾಜಕಾರಣದ ಭಾಗವಾಗಿಯೇ ಈ ಸಂಸ್ಕೃತಿ ವಿಮರ್ಶೆಯೂ ಆರಂಭಗೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ. ಅಂದರೆ ಕಾರಂತರ ಕಾದಂಬರಿ ತನ್ನದೇ ಆದ ಧಾಟಿಯಲ್ಲಿ ಸಂಸ್ಕೃತಿ ವಿಮರ್ಶಕನ ಕೆಲಸವನ್ನು ನಿರ್ವಹಿಸಿದೆ. ಈ ಪಾತ್ರ ನಿರ್ವಹಣೆಯ ಅಂಗವಾಗಿ ಸಂಸ್ಕೃತಿಯ ಶಿಥಿಲ ಅಂಶಗಳನ್ನು ಕಾರಂತರು ಸರಳ ವಿಜ್ಞಾನದ ಕಣ್ಣಲ್ಲಿಯೂ ನೋಡಿದ್ದಾರೆ. ಆದರೆ ಒಬ್ಬ ಸಾಂಸ್ಕೃತಿಕ ದಾಖಲೆಕಾರನಾಗಿ ತಾವು ನಂಬದ ಧಾರ್ಮಿಕ ಲೋಕವನ್ನೂ ದಾಖಲಿಸಲೆತ್ನಿಸಿದ್ದಾರೆ. ಜೊತೆಗೆ ಇದು 'ಆಧ್ಯಾತ್ಮಿಕ ದೇಶ' ಎಂಬ ಬಲೂನನ್ನೂ ಚುಚ್ಚಿದ್ದಾರೆ. 'ಈ ದೇಶದಲ್ಲೇ ಹೆಚ್ಚು ಆಷಾಢಭೂತಿಗಳಿರುವುದು' ಎಂದು ಮತ್ತೆ ಮತ್ತೆ ಹೇಳಿದ್ದಾರೆ. ಗ್ರಂಥಸ್ಥ-ಪ್ರಾಚೀನ ಭಾರತವನ್ನು ವೈಭವೀಕರಿಸದೆ, ಅದರ ಹಾಲೀ ಸ್ಥಿತಿಯನ್ನು ಪರೀಕ್ಷಿಸಲೆತ್ನಿಸಿದ್ದಾರೆ. ಕಾರಂತ, ಕುವೆಂಪು ಆರಂಭಿಸಿದ ಈ ಸಂಸ್ಕೃತಿ ವಿಮರ್ಶೆಯ ಮಾದರಿ ನವ್ಯ, ದಲಿತ, ಬಂಡಾಯ ಮಾರ್ಗಗಳವರೆಗೂ ಮುಂದುವರಿದಿದೆ.

ಜೊತೆಗೆ, ತಾವು ಭಾರತದ ಊರೂರು ಸುತ್ತಿ ಕಂಡುಕೊಂಡ ಸತ್ಯಗಳನ್ನು 'ಭಾರತೀಯ ಸಂಸ್ಕೃತಿ' ಎಂಬ ಹೋಲ್ಡಾಲ್‌ನಲ್ಲಿ ತುರುಕದೆ, 'ಇಲ್ಲಿ ಒಂದು ಸಂಸ್ಕೃತಿ ಇಲ್ಲ, ಬದಲಿಗೆ ಹಲವು ಸಂಸ್ಕೃತಿಗಳು ಇವೆ' ಎಂಬುದನ್ನು ಹತ್ತಾರು ವರ್ಷಗಳ ಕೆಳಗೆ ಸಂಶೋಧನೆಯ ಮೂಲಕ ಕಾರಂತರು ತೋರಿಸಿದ್ದಾರೆ. ಈಗಾಗಲೇ ಹಲವರು ಗುರುತಿಸಿರುವಂತೆ, ಕಾರಂತರ ಸ್ತ್ರೀಪಾತ್ರಗಳಲ್ಲಿ ಈ ಸಂಸ್ಕೃತಿಯ ತಾಳಿಕೆಯ ಗುಣ ದೊಡ್ಡ ಮೌಲ್ಯವೆಂಬಂತೆ ಮಂಡಿತವಾಗಿದೆ. ಆದರೆ ಇಲ್ಲೇ ಕಾರಂತರ ಸಂಸ್ಕೃತಿ ಪರೀಕ್ಷೆಯ ಕಣ್ಣು ಮಬ್ಬಾಗಿರುವುದು. ಕಾರಂತರಿಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಅವರ ಕಾದಂಬರಿಗಳಲ್ಲಿ ಬರುವ ಸ್ತ್ರೀಯರ ವೈಭವೀಕರಣದಲ್ಲಿ ಸೀತೆಯ ಮಾದರಿ ಮತ್ತೆ ಮತ್ತೆ ಬರುತ್ತದೆ. ಯಾತನೆಯ ಮೂಲಕ ಉದಾತ್ತತೆ ಹುಟ್ಟುತ್ತದೆ ಎನ್ನುವುದು ಒಂದು ಸಾಮಾನ್ಯ ನಿರೀಕ್ಷೆ ಆದರೂ, ಗಂಡುಸಮಾಜ ವಿಧಿಯಂತೆ ಸ್ತ್ರೀಯರ ಮೇಲೆ ಅಮರಿಕೊಂಡು ಸೃಷ್ಟಿಸಿದ ಯಾತನೆಗಾಗಲೀ, ನಿರಂತರ ದಮನಕ್ಕೊಳಗಾಗುವ ವರ್ಗಗಳ ಯಾತನೆಗಾಗಲೀ ಇದನ್ನು ಯಾಂತ್ರಿಕವಾಗಿ ಅನ್ವಯಗೊಳಿಸಲಾಗದು. ಯಾತನೆಯ ಮೂಲಕ ಮನುಷ್ಯ ಮಾಗುತ್ತಾನೆ ಎಂಬ ನೋಟವನ್ನು ತಮ್ಮ ಪಾತ್ರಗಳಲ್ಲಿ ಸಾಕಾರಗೊಳಿಸಲು ಹೊರಟ ಕಾರಂತರು, ಒಂದು ಸಂಸ್ಕೃತಿಯ ದಮನದ ಮೂಲಗಳನ್ನು ಪ್ರಶ್ನಿಸುವ ಹೊಣೆಗಾರಿಕೆಯಿಂದ ಹಿಂದೆ ಸರಿದುಬಿಡುತ್ತಾರೆನ್ನಿಸುತ್ತದೆ.

ಆದರೆ ಇದರ ನಡುವೆ ಕೂಡ, ಸ್ಥೂಲ ಸಾಮಾಜಿಕ ಪ್ರಶ್ನೆಗಳು ಬಂದಾಗ, ಭಾರತದ ಸಾಂಪ್ರದಾಯಿಕ ಅಧಿಕಾರಸ್ಥ ಕಥನ ಯಾವುದನ್ನು ಎತ್ತಿ ಹಿಡಿದಿತ್ತೋ ಅದರಲ್ಲಿ ಅನೇಕವನ್ನು ಕಾರಂತರು ಪ್ರಶ್ನಿಸಿದ್ದಾರೆ. ಈ ದೃಷ್ಟಿಯಿಂದ ಕಾರಂತರು, ಬಿಖುಪರೇಖ್ ಮಾತಿನಲ್ಲೇ ಹೇಳುವುದಾದರೆ, ಒಬ್ಬ 'ವಿಮರ್ಶಾತ್ಮಕ ಆಧುನಿಕತಾವಾದಿ'. ಬಿ. ದಾಮೋದರರಾವ್ ಅವರು 'ಒಂದು ದೃಷ್ಟಿಯಲ್ಲಿ ಕಾರಂತರ ವ್ಯಕ್ತಿತ್ವ ಅವರನ್ನು ನವ್ಯಮಾರ್ಗಕ್ಕೆ ತಿರುಗಿಸಬೇಕಿತ್ತು. ಪರಂಪರಾಗತವಾಗಿ ಬಂದ ದೈವಭಕ್ತಿಯ ಭದ್ರ ತಳಹದಿಯ ಮೇಲೆ ನಿಲ್ಲುವ ಜೀವನವನ್ನಾಗಲೀ ಅಂತಹ ಜೀವನದ ಆನಂದವನ್ನು ಕೀರ್ತಿಸುವ ಸಾಹಿತ್ಯ ಧರ್ಮವನ್ನಾಗಲೀ ಅವರು ಒಪ್ಪಿಕೊಳ್ಳುವುದಿಲ್ಲ' ಎಂದು ಬರೆಯುತ್ತಾರೆ. ಆದರೆ ನವ್ಯ ಮಾರ್ಗಕ್ಕೆ ಬೇಕಾದ ತೀವ್ರ ಸ್ವಪರೀಕ್ಷೆಯ ಗುಣ ಹಾಗೂ ಭಾಷೆಯನ್ನು ಸುಳ್ಳಾಗದಂತೆ ಅಡಕವಾಗಿ ಬಳಸುವ ನೈತಿಕ ಎಚ್ಚರ ಕಾರಂತರಲ್ಲಿ ಸದಾ ಇತ್ತೆಂದು ಹೇಳುವುದು ಕಷ್ಟ.

ಕಾರಂತರ ಗದ್ಯ ಬರವಣಿಗೆಗಳ ಸಾಂಸ್ಕೃತಿಕ ಗ್ರಹಿಕೆಗಳಲ್ಲಿ ಮುಖ್ಯವಾಗಿ ಕಾಣುವುದು ಅವರ ವಿಭಿನ್ನ ಸಾಂಸ್ಕೃತಿಕ ಜಗತ್ತುಗಳನ್ನು ನೋಡುವಾಗ ಭಾರತದ ಜಾತಿಪದ್ಧತಿ ರೂಪಿಸಿರುವ ಧೋರಣೆಗಳನ್ನು ಮೀರುವ ಉದಾರವಾದಿ ನೋಟ. 'ಆಸ್ಟ್ರೇಲಿಯಾದ ಆದಿವಾಸಿಗಳಾಗಲೀ, ಆಫ್ರಿಕಾದ ಜುಲು ಜನಗಳಾಗಲಿ, ಜರ್ಮನರಾಗಲೀ, ನಾವಾಗಲೀ-ಬೇರೆ ಬೇರೆ ಸಂಸ್ಕೃತಿಯವರು ಎನ್ನಬಹುದೇ ಹೊರತು ಒಬ್ಬರು ಸಂಸ್ಕೃತರು ಇನ್ನೊಬ್ಬರು ಅಸಂಸ್ಕೃತರು ಎನ್ನಲು ಬರುವಂತಿಲ್ಲ' ಎನ್ನುತ್ತಾರೆ ಕಾರಂತರು. ಇದು ಸರಳ ಸಮಾಜಶಾಸ್ತ್ರೀಯ ಧೋರಣೆ, ನಿಜ. ಆದರೆ ಸಾಂಸ್ಕೃತಿಕ ಸಂಶ್ಲೇಷಣೆ ಕುರಿತು ಕಾರಂತರು ಸಾಕಷ್ಟು ಮುಕ್ತವಾಗಿ ಯೋಚಿಸಿದವರು ಎಂಬುದನ್ನು

ಮರೆಯಬಾರದು. 'ಮೊಗಲರು, ಹೂಣರು, ಸಿಥಿಯನ್ನರು ನಮ್ಮೊಡನೆ ಬಂದು ನೆಲೆಸಿ, ಸೇರಿ ಒಂದಾದ ಹಾಗೆ ಆಗದೆ ಯುರೋಪಿಯನ್ನರು ದೂರ ಉಳಿದರು' ಎಂದು ಅವರು ಹಿಂದೊಮ್ಮೆ ಬರೆದರು. ಕಾರಂತರು ಈ ಮಾತಾಡುವ ಕಾಲಕ್ಕಾಗಲೇ ತಿಲಕವಾದಿ ಮತೀಯತೆ ಚಾಲ್ತಿಯಲ್ಲಿತ್ತು. ಮತೀಯವಾದಿ ಅಬ್ಬರದ ಈ ಕಾಲದಲ್ಲಂತೂ ಅತ್ಯಂತ ಕುತೂಹಲಕರ ನಿಲುವು ಇದು. ಯಾಕೆಂದರೆ ಯಾವ ಸಂಸ್ಕೃತಿಗಳು ಇಲ್ಲಿ ಬೆರೆತವೋ ಅವುಗಳ ಬಗೆಗೆ ಮೂಲಭೂತವಾದಿಗಳು ಹೆಚ್ಚು ಜಗಳ ತೆಗೆಯುತ್ತಾ ಬಂದಿದ್ದಾರೆ. ಕಾರಂತರು ಕೂಡ 'ಸಂಸ್ಕೃತಿಯ ಪುನರುಜ್ಜೀವನ' 'ನಮ್ಮ ಸಂಸ್ಕೃತಿಯ ಹೆಮ್ಮೆ ಸಾಲದು' ಎಂಬ ಜನಪ್ರಿಯ ವಾದಗಳನ್ನು ಒಂದು ಕಾಲಕ್ಕೆ ತಮ್ಮ ಗದ್ಯದಲ್ಲಿ ಬಳಸಿದ್ದಾರೆ. ಆದರೆ ಅವುಗಳ ಜೊತೆಗೇ ಸಂಸ್ಕೃತಿಯ ಶಿಥಿಲ ಅಂಶಗಳನ್ನು ಕುರಿತೂ ಒತ್ತಿ ಹೇಳುತ್ತಾ ಬಂದಿದ್ದಾರೆ. ಅಲ್ಲದೆ, ಸಂಸ್ಕೃತಿಯ ಪುನರುಜ್ಜೀವನದ ಮಾತನ್ನು ಎಚ್ಚರ ತಪ್ಪಿ ಬಳಸಿದರೆ, ಗ್ರಂಥಸ್ಥ ಅಥವಾ ಕಲ್ಪಿತ ದೇಶೀ ಸಂಸ್ಕೃತಿಯ ವೈಭವೀಕರಣ ಆರಂಭವಾಗುತ್ತದೆ ಎಂಬ ಎಚ್ಚರವಂತೂ ಅವರ ಕಾದಂಬರಿಗಳಲ್ಲಿ ಇದ್ದೇ ಇದೆ.

ಈ ಎಚ್ಚರದ ಭಾಗವಾಗಿಯೇ ಕಾರಂತರಲ್ಲಿ ಸಂಸ್ಕೃತಿ ವಿಮರ್ಶೆಯ ಒಂದು ಮುಖ್ಯ ಮಾದರಿ ಇದೆ : ಬಿಂದು-ಪ್ರತಿಬಿಂದುಗಳ ನಿರ್ಮಾಣದ ಮೂಲಕ ಅವರು ಈ ವಿಮರ್ಶೆಯ ಕೆಲಸವನ್ನು ಮಾಡುತ್ತಾರೆ. ಕಾರಂತರು ತಮ್ಮ 'ಮೈಮನಗಳ ಸುಳಿಯಲ್ಲಿ, ಕಾದಂಬರಿಯಲ್ಲಿ ಪತಿವ್ರತೆಯ ವ್ಯಕ್ತಿತ್ವವನ್ನು ವೇಶ್ಯೆಯ ಮೂಲಕ ಪ್ರಶ್ನಿಸುವ ಬಗೆಯೊಂದನ್ನು ಸಿ.ಎನ್ ರಾಮಚಂದ್ರನ್ ಗುರುತಿಸುತ್ತಾರೆ. ವೇಶ್ಯೆ ಮಂಜುಳೆ ಒಂದೆಡೆ ಕೇಳುತ್ತಾಳೆ: 'ಆ ಗರತಿಯರ ಪಾಲಿಗೆ ಕತ್ತೆ ಚಾಕರಿ ಬಿಟ್ಟರೆ ಏನಿದ್ದೀತು?' ಹಾಗೆಯೇ ದೇಶೀ ಸಂಸ್ಕೃತಿ ಒಂದು ಕಾಲಕ್ಕೆ 'ಉದಾತ್ತ' ಎಂದು ಕರೆದ ಬ್ರಹ್ಮಚರ್ಯ, ಸಂನ್ಯಾಸಗಳ ಕಲ್ಪನೆಯನ್ನು ಕೂಡ ಕಾರಂತರು ಸಂದೇಹದಿಂದಲೇ ನೋಡಿದ್ದಾರೆ. ಹಾಗೆ ನೋಡುತ್ತಲೇ ಹೊಸ ಸಾಂಸ್ಕೃತಿಕ ಸಂಶ್ಲೇಷಣೆಯ ಸಾಧ್ಯತೆಯನ್ನೂ ಅವರು ಪ್ರಯತ್ನಿಸುತ್ತಾರೆ. 'ಮರಳಿ ಮಣ್ಣಿಗೆ'ಯಲ್ಲಿ ಮೂರನೆಯ ತಲೆಮಾರಿನ ರಾಮ ಮೀನುಗಾರ ಚೆನ್ನನಿಗೆ 'ನನಗೆ ಬಲೆ ಬೀಸಲು ಹೇಳಿಕೊಡು, ನಾನು ನಿನಗೆ ಪಿಟೀಲು ಬಾರಿಸಲು ಹೇಳಿಕೊಡುತ್ತೇನೆ' ಎನ್ನುತ್ತಾನೆ; ಶೂದ್ರರ ಬಯಲಾಟದತ್ತ ಆಕರ್ಷಿತನಾಗುತ್ತಾನೆ. ಎಲ್ಲಕ್ಕಿಂತ ಮುಖ್ಯವಾಗಿ ನಾಗವೇಣಿ ಕೃಷಿ ಸಂಸ್ಕೃತಿಗೆ ಮರಳುವ ಘಟ್ಟ ಬ್ರಾಹ್ಮಣ-ಶೂದ್ರ ಜೀವನ ಕ್ರಮಗಳು ಬೆರೆಯುವುದರ ಸೂಚನೆಯಂತಿದೆ. ಇವನ್ನು ಕುರಿತು ಪೋಲಂಕಿ ರಾಮಮೂರ್ತಿಯವರು 'ರಾಮ ಕಡಲಿನ ಶೂದ್ರನಾಗುತ್ತಾನೆ ಹಾಗೂ ನಾಗವೇಣಿ ಮಣ್ಣಿನ ಶೂದ್ರಳಾಗುತ್ತಾಳೆ' ಎಂದು ಬರೆಯುತ್ತಾರೆ. ಈ ಶೂದ್ರೀಕರಣದ ಹಂಬಲ ಬದುಕಿನ ತುಡಿತ ಹಾಗೂ ಅನಿವಾರ್ಯತೆಯಿಂದ ಹುಟ್ಟಿದಂತೆ ಕಾದಂಬರಿಯಲ್ಲಿ ಕಾಣಬರುತ್ತದೆಯೇ ಹೊರತು, ಅದು ಕೇವಲ ತಾತ್ವಿಕ ಆಶಯವಾಗಿ ಪಾತ್ರಗಳ ಮೇಲೆ ಹೇರಲ್ಪಟ್ಟಿವೆ ಎನ್ನಿಸುವುದಿಲ್ಲ.

ಇಂಥ ಕಡೆ ಬ್ರಾಹ್ಮಣ-ಶೂದ್ರ ಸಂಸ್ಕೃತಿಗಳ ಒಂದು ಸಣ್ಣ ಮಟ್ಟದ ಬೆರೆಯುವಿಕೆಯನ್ನೇನೋ ಕಾರಂತರ ಉದಾರವಾದಿ ಪ್ರಜ್ಞೆ ಸ್ವೀಕಾರಾರ್ಹ ಬೆಳವಣಿಗೆಯಂತೆ ನೋಡಿದೆ. ಆದರೆ ಅನ್ಯ ಸಂಸ್ಕೃತಿಯೊಂದಿಗಿನ ಮುಖಾಮುಖಿಯಲ್ಲಿ ಮಾತ್ರ ಕಾರಂತರು ಸ್ವಲ್ಪ ಕಪ್ಪು-ಬಿಳುಪು ಚಿತ್ರಣದಲ್ಲಿ

ತೊಡಗುತ್ತಾರೇನೋ ಎನ್ನುವ ಅನುಮಾನ ಬರುತ್ತದೆ. ಉದಾಹರಣೆಗೆ 'ಚೋಮನದುಡಿ'ಯ ಚೋಮ ಮತಾಂತರ ಆಗಲಾರ. ಈಗಾಗಲೇ ಮುದುಕನಾಗಿರುವ ಅವನ ಧಾರ್ಮಿಕ, ಸಾಂಸ್ಕೃತಿಕ ನಂಟುಗಳು ಅವನನ್ನು ಮತಾಂತರಗೊಳ್ಳಲು ಬಿಡಲಾರವು, ಸರಿ. ಆದರೆ 'ಹಳ್ಳಿಯ ಹತ್ತು ಸಮಸ್ತರು' ಪುಸ್ತಕದಲ್ಲೂ ಮತಾಂತರದ ಕಲ್ಪನೆ ಕುರಿತಂತೆ ಹೆಚ್ಚು ಕಡಿಮೆ ಇದೇ ಮಾದರಿಯ ಧೋರಣೆ ಇದೆ. ಇಲ್ಲಿ ದಲಿತ ಮುಡೂರನಿಗೆ ನರಸಿಂಹಯ್ಯ ಹೇಳುತ್ತಾನೆ: "ಹೊಲೆಯರಿದ್ದವರು ಕ್ರಿಶ್ಚನನಾದರೂ ಅವರನ್ನು ಇನ್ನೂ ಬೇರೆಯೇ ಒಂದು ಜಾತಿಯಾಗಿ ಇರಿಸುತ್ತಿದ್ದಾರೆ. ಉಳಿದವರಿಗೂ ಅವರಿಗೂ ಯಾವ ಗಂಡೂ, ಹೆಣ್ಣು ನಡೆಯುವುದು ಕಾಣುವುದಿಲ್ಲ. ಹೀಗಿರುತ್ತ ನಿನಗೆ ಏಕೆ ಈ ಮರುಳು?"

- ಹೀಗೆ ಮತಾಂತರ ಕುರಿತಂತೆ ಕಾದಂಬರಿಯ ಒಳಗೆ ಹಾಗೂ ಇನ್ನೊಂದು ಗದ್ಯ ಬರವಣಿಗೆಯಲ್ಲಿ ಒಂದೇ ಬಗೆಯ ನಿಲುವು ಕಾಣಿಸುವುದರಿಂದ ಇದನ್ನು ನಾವು ಎಚ್ಚರದಿಂದ ಪರೀಕ್ಷಿಸಬೇಕು. ಹಾಗಾದರೆ 'ಸ್ವಧರ್ಮದಲ್ಲೇ ಸಾಯುವುದು ಶ್ರೇಯಸ್ಕರ' ಎನ್ನುವ ಭಾರತೀಯ ಸಾಂಸ್ಕೃತಿಕ-ಧಾರ್ಮಿಕ ನಂಬಿಕೆ ಕಾರಂತರನ್ನೂ ಪ್ರಭಾವಿಸಿತ್ತೆ? ಒಂದು ಸಂಸ್ಕೃತಿಯ ಪೂರ್ವ ಗ್ರಹಗಳು ಉದಾರವಾದಿ ಎನ್ನಬಹುದಾದ ಲೇಖಕನ ಸುಪ್ತ ಪ್ರಜ್ಞೆಯನ್ನು ನಿಯಂತ್ರಿಸುವ ರೀತಿ ಇದೇ ಇರಬಹುದು. ಅನ್ಯರಿಗೆ ಅಸಹ್ಯ ಪಡುವ ಈ ಧೋರಣೆ ಎಲ್ಲ ಸಂಸ್ಕೃತಿಗಳ ಜನರನ್ನೂ ನಿಯಂತ್ರಿಸಿರುತ್ತದೆ. ಅದು ಕಾರಂತರಲ್ಲೂ ಆಗಿರಬಹುದು. ಯಾಕೆಂದರೆ ಕ್ರಿಶ್ಚಿಯನ್ ಪರ್ಯಾಯ ತೆರೆದ ಬಿಡುಗಡೆಯ ಸಾಧ್ಯತೆಯನ್ನು ಗುರಿತುಸುತ್ತಲೇ, ಕ್ರಿಶ್ಚಿಯನ್ ಸಂಸ್ಕೃತಿ ಪ್ರತಿನಿಧಿಸುವ ಜಗತ್ತನ್ನು ಪತನದ ಮಾದರಿಯನ್ನಾಗಿಯೂ 'ಚೋಮನದುಡಿ' ಕಾದಂಬರಿ ಚಿತ್ರಿಸುತ್ತಿದೆ. ಕಾದಂಬರಿಯ ವಿವರಗಳ ಪ್ರಕಾರ ಈ ಕ್ರಿಶ್ಚಿಯನ್ ಜಗತ್ತು ದುರಾಸೆಯ ಹಾಗೂ ಮಾನವ ಸಂಬಂಧಗಳ ಬಗ್ಗೆ ಕಾಳಜಿಯಿಲ್ಲದ ಒಂದು ಸ್ವಚ್ಛಂದ ಜಗತ್ತು. ಮಿಂಗೇಲ ದೊರೆ, ಮನ್ವೇಲ, ಪಾದ್ರಿ-ಈ ಎಲ್ಲ ಪಾತ್ರಗಳ ಚಿತ್ರಣಗಳನ್ನೂ ಸನಾತನ ದೃಷ್ಟಿಕೋನವೇ ನಿಯಂತ್ರಿಸಿದಂತಿದೆ. 'ಅಳಿದ ಮೇಲೆ'ಯ ಯಶವಂತರ ಪ್ರಿಯತಮೆ ಮೇರಿಯ ಬಗ್ಗೆ ಬರೆಯುವಾಗ ಕೂಡ ಅದು 'ಮಾಂಸದ ಮುದ್ದೆ' - ಎಂಬ ವರ್ಣನೆ ಬರುತ್ತದೆ. ಕನ್ನಡ ಜನಪ್ರಿಯ ಕಾದಂಬರಿಗಳಲ್ಲಿ ಹಾಗೂ ಭಾರತದ ಎಲ್ಲ ಭಾಷೆಗಳ ಜನಪ್ರಿಯ ಸಿನಿಮಾಗಳಲ್ಲಿ ಈ ತರದ ಕ್ರಿಶ್ಚಿಯನ್ ಹೆಣ್ಣಿನ 'ಮಾಂಸದ ಮುದ್ದೆ'ಯ ಸಿದ್ಧ ಮಾದರಿಗಳಿವೆ. ಕ್ಯಾಬರೆ ಡ್ಯಾನ್ಸರ್ ಅಥವಾ ಸ್ವಲ್ಪ ಮುಕ್ತ ಹೆಣ್ಣಿನ ಪಾತ್ರ ಬೇಕೆಂದಾಕ್ಷಣ "ರೀಟಾ", "ಲೂಸಿ" ತರದ ಹೆಸರುಗಳು ತಂತಾನೇ ಕಾದಂಬರಿಕಾರರಿಗೆ, ನಿರ್ದೇಶಕರುಗಳಿಗೆ ಹೊಳೆಯುತ್ತವೆ. ಬೆಂಗಳೂರಿನ ಕ್ಯಾಬರೆ ನರ್ತಕಿಯರಲ್ಲಿ ಹಿಂದೂ ಜಾತಿಗಳ ಹೆಂಗಸರಿಗೆ ಕೂಡ ಕ್ರಿಶ್ಚಿಯನ್ ಹೆಸರು ಕೊಟ್ಟಿರುತ್ತಾರೆ! ಅಂದರೆ ಕ್ರಿಶ್ಚಿಯನ್ ಜಗತ್ತು ಎನ್ನುವುದು ಹೆಚ್ಚು ಆಧುನಿಕವಾದದ್ದು ಹಾಗೂ ಸ್ವಚ್ಛಂದ ಪ್ರವೃತ್ತಿಯುಳ್ಳದ್ದು ಎಂಬ ವಿಚಿತ್ರ ಕಲ್ಪನೆ ಹೇಗೋ ಕನ್ನಡದ ಅಥವಾ ಒಟ್ಟಾರೆಯಾಗಿ ಭಾರತದ ಜನಪ್ರಿಯ ಕಲ್ಪನೆಯನ್ನು ನಿಯಂತ್ರಿಸಿಬಿಟ್ಟಿದೆ. ಈ ಪೂರ್ವಗ್ರಹ ಕಾರಂತರಲ್ಲೂ ನುಸುಳಿದ್ದರೆ ಆಶ್ಚರ್ಯವಲ್ಲ. ತಂತಾನೇ ಒದಗಿಬರುವ ಭಾಷೆಯ ನುಡಿಗಟ್ಟುಗಳಲ್ಲಿ ಹಾಗೂ ತನ್ನ ಪ್ರಜ್ಞೆಯ ಸುಪ್ತ ಸ್ತರಗಳಲ್ಲಿ ಮಸುಳುವ ಈ ಬಗೆಯ

ಪೂರ್ವಗ್ರಹಗಳನ್ನು ಮೀರಲು ಲೇಖಕನೊಬ್ಬ ಅಪಾರ ಪರಿಶ್ರಮ ಪಡಬೇಕಾಗುತ್ತದೆ. ಯಾಕೆಂದರೆ, ಒಂದು ಕಾಲದ ಪೂರ್ವಗ್ರಹಗಳು ಕೂಡ ಲೇಖಕನಿಂದ ಬರೆಸಿಕೊಳ್ಳಲು ಯತ್ನಿಸುತ್ತಿರುತ್ತವೆ.

ಆದರೂ ಈ ಪೂರ್ವಗ್ರಹಗಳು ಕಾರಂತರ ಒಟ್ಟು ಧೋರಣೆಯನ್ನು ನಿಯಂತ್ರಿಸಿಲ್ಲ ವೆಂಬುದನ್ನು ಮರೆಯಬಾರದು. ಕಾರಂತರು ಹೊಸ ಸಂಸ್ಕೃತಿಯ ಆಕರ್ಷಣೆಗಳನ್ನೂ ಹಾಗೂ ಅದು ಬಿಡುಗಡೆಯ ಸಾಧ್ಯತೆಯಾಗಿರುವುದನ್ನೂ ಗಮನಿಸುತ್ತಾ ಬಂದಿದ್ದಾರೆ. ಒಂದು ಸಂಸ್ಕೃತಿ ಇನ್ನೊಂದನ್ನು ನೋಡುವಾಗ ಹೊಸದರ ಬಗೆಗೆ ಆಕರ್ಷಣೆ, ಭಯ, ಬಯಕೆ, ಕಾತರ ಎಲ್ಲವೂ ಇರುತ್ತದೆ. ಮನೋನಿ ಎಂಬ ಮಾನವಶಾಸ್ತ್ರ ಹಾಗೂ ಮನೋಸಾಂಸ್ಕೃತಿಕ ವಿಮರ್ಶಕ ಆಫ್ರಿಕಾದ ಮ್ಯಾಲಗೇಸಿ ಬುಡಕಟ್ಟಿನ ಜನಪದ ಹಾಡುಗಳನ್ನು ಚರ್ಚಿಸುತ್ತಾನೆ. ಆ ಹಾಡುಗಳಲ್ಲಿ ದೂರದ ನಾಡಿನಿಂದ ಬರುವ ಅಪರಿಚಿತ ಅತಿಥಿ ಹಾಗೂ ಅವನು ತರುವ ಉಡುಗೊರೆಗಳನ್ನು ಕುರಿತ ನಿರೀಕ್ಷೆಗಳನ್ನು ಸೂಚಿಸುವ ಪ್ರತಿಮೆಗಳಿವೆ. ಈ ಪ್ರತಿಮೆಗಳನ್ನು ಚರ್ಚಿಸುತ್ತಾ, ವಸಾಹತೀಕರಣದ ಹಾಗೂ ಹೊಸತರ ನಿಯಂತ್ರಣಕ್ಕೊಳಗಾಗುವ ನಿರೀಕ್ಷೆ ಹೇಗೆ ಸಂಸ್ಕೃತಿಗಳ ಸುಪ್ತಪ್ರಜ್ಞೆಯಲ್ಲಿರುತ್ತದೆ ಎಂಬುದನ್ನು ಮನೋನಿ ಗುರುತಿಸುತ್ತಾನೆ. ಈ ಮನೋಸಾಂಸ್ಕೃತಿಕ ವಿಶ್ಲೇಷಣೆಯಲ್ಲಿ ಅರ್ಧ ಸತ್ಯವಿರಬಹುದು. ಆದರೆ ಮಾನವನಲ್ಲಿ ಅನ್ಯದ ಬಗೆಗೆ ಆತಂಕದ ಜೊತೆಗೇ ಗುಪ್ತ ಆಕರ್ಷಣೆಯೂ ಇರುತ್ತದೆ ಎಂಬುದನ್ನು ಈ ವಿಶ್ಲೇಷಣೆ ನೆನಪಿಸುತ್ತದೆ. ಆದ್ದರಿಂದಲೇ ಒಂದು ಸಾಂಸ್ಕೃತಿಕ ಮುಖಾಮುಖಿಯ ಸಂದರ್ಭದಲ್ಲಿ ಅನ್ಯಸಂಸ್ಕೃತಿ ಸ್ಥಳೀಯ ಸಂಸ್ಕೃತಿಯ ಬಗ್ಗೆ ಎತ್ತುವ ಪ್ರಶ್ನೆಗಳಿಗೆ ವಿರೋಧ ಹಾಗೂ ಸ್ವೀಕಾರ-ಹೀಗೆ ಎರಡೂ ಬಗೆಯ ಪ್ರತಿಕ್ರಿಯೆಗಳು ಇರುತ್ತವೆ.

ಈ ಹಿನ್ನೆಲೆಯಲ್ಲಿ ಕ್ರಿಶ್ಚಿಯನ್ ದೃಷ್ಟಿಕೋನ ಹಿಂದೂ ಸಮಾಜ ಕುರಿತು ಎತ್ತಿದ ಅನೇಕ ಪ್ರಶ್ನೆಗಳನ್ನು ಕನ್ನಡ ಕಾದಂಬರಿ ಅಂತರಂಗೀಕರಿಸಿಕೊಂಡಿದೆ. ಕುವೆಂಪು ಅಥವಾ ಕಾರಂತರು ಕ್ರಿಶ್ಚಿಯನ್ ಮಿಷನರಿಗಳು ಹಿಂದೂ ಸಮಾಜದ ಬಗ್ಗೆ ಎತ್ತಿದ ನ್ಯಾಯಬದ್ಧ ಪ್ರಶ್ನೆಗಳ ಸತ್ವವನ್ನು ಸ್ವೀಕರಿಸಿದ್ದಾರೆ. ಈ ದೃಷ್ಟಿಯಿಂದ ಕನ್ನಡ ಕಾದಂಬರಿ ಮಿಷನರಿಗಳು ಎತ್ತಿದ ಪ್ರಶ್ನೆಗಳಲ್ಲಿದ್ದ ಸುಧಾರಣಾವಾದಿ ನೆಲೆಯಲ್ಲಿ ನಿಂತು ತಾನೂ ದೇಶೀ ಧರ್ಮವನ್ನು ಪ್ರಶ್ನಿಸಿದೆಯೆಂಬುದು ಕನ್ನಡದ ಮೊದಲ ಕಾದಂಬರಿ 'ಇಂದಿರಾಬಾಯಿ'ಯಲ್ಲೇ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಕಾರಂತರು ಚೋಮನ ದೃಷ್ಟಿಯಿಂದ ನೋಡಿದ್ದರೆ ಇಡೀ ಅನುಭವ ಭಿನ್ನವಾಗಬಹುದಿತ್ತು. ಅಥವಾ ಇಬ್ಬರ ಅನುಭವವನ್ನೂ ಸಮಾನ ದೂರದಲ್ಲಿ ನಿಂತು ನೋಡಿದ್ದರೂ ಬೇರೆಯದೇ ಆದ ಸತ್ಯ ಹೊಳೆಯುವ ಸಾಧ್ಯತೆಯಿತ್ತು. ಹೊಸ ವಿಚಾರಕ್ಕೆ 'ಮತಾಂತರ'ಗೊಳ್ಳದೆ ಹೊಸತು ಹುಟ್ಟಲಾರದು. ಬುದ್ಧ, ಬಸವರ ತರದವರು 'ಮತಾಂತರ'ವಾಗದಿದ್ದರೆ, ಇಲ್ಲಿ ದೊಡ್ಡ ಧಾರ್ಮಿಕ ಕ್ರಾಂತಿಯೇ ನಡೆಯುತ್ತಿರಲಿಲ್ಲ. ಕಾರಂತರಾಗಲೀ, ಕುವೆಂಪುವಾಗಲೀ ಅಥವಾ ಪ್ರಗತಿಶೀಲ ಅಥವಾ ನವ್ಯ ಲೇಖಕರಾಗಲೀ ಹೊಸ ಹಾದಿಗಳಿಗೆ 'ಮತಾಂತರ'ಗೊಂಡು ಹೊಸ ವ್ಯಕ್ತಿತ್ವ ಹಾಗೂ ಹೊಸ ಗ್ರಹಿಕೆಗಳನ್ನು ಪಡೆದವರೇ ತಾನೆ?

ಕಾರಂತರು ಹೀಗೆ ಹೊಸದನ್ನು ಆಹ್ವಾನಿಸಿದ್ದರಿಂದಲೇ 'ಅನ್ಯ'ಕ್ಕೆ ಸಂಪೂರ್ಣವಾಗಿ ಕಣ್ಣು ಮುಚ್ಚಿಕೊಳ್ಳಲಿಲ್ಲ. ಜೊತೆಗೆ ಇಲ್ಲಿನ 'ತೋಟ'ವನ್ನು ಸರಿಯಾಗಿ ಕಾಯ್ದಿಟ್ಟುಕೊಳ್ಳಬೇಕೆಂಬುದರ ಪ್ರಜ್ಞೆಯೂ ಅವರಿಗಿತ್ತು. ಅವರೇ ಒಂದೆಡೆ ಬರೆಯುತ್ತಾರೆ: "ನಮ್ಮ ತೋಟದಲ್ಲಿ ನಾವು ಸೇವಂತಿಗೆ ನೆಡದೆ ಹೋದರೆ, ಗಾಳಿಯಲ್ಲಿ ಬೀಸಿ ಬರುವ ಲಂಟಾನದ ಬೀಜಗಳು ಅದರಲ್ಲಿ ಮೊಳೆತು ಹುಳುವಾಗುತ್ತದೆ". ತೇಜಸ್ವಿಯವರ 'ಚಿದಂಬರ ರಹಸ್ಯ'ದಲ್ಲಿ ಈ ಲಂಟಾನದ ಸುತ್ತ ಹೆಣೆದ ರೂಪಕ ಬರುತ್ತದೆ. ಆದರೆ ಅಲ್ಲಿ ಲಂಟಾನ ಬಿಕ್ಕಟ್ಟು ತರುವ ಹಾಗೂ ಪೊರೆಯುವ ರೂಪಕವಾಗಿ ಬದಲಾಗುತ್ತದೆ. ಕಾರಂತರಿಗೆ ತಮ್ಮ ತೋಟಕ್ಕೆ ಬೇರೆ ಬೇರೆ ಹೂಗಳು ಬರುವುದು ಅಗತ್ಯ ಎಂಬುದು ಗೊತ್ತಿತ್ತು. ಅವರು ತಮ್ಮ ಸಂಸ್ಕೃತಿಗೆ ಬೇಕಾದದ್ದನ್ನು ಬ್ಯಾಲೆಯಿಂದಲೂ ಪಡೆಯಬಲ್ಲರು. ಯಕ್ಷಗಾನದ ಸಂಪ್ರದಾಯವಾದಿಗಳು ಕಾರಂತರ ಪ್ರಯೋಗಗಳ ಬಗ್ಗೆ ಎಷ್ಟೆ ಅಪಸ್ವರ ಎತ್ತಿದ್ದರೂ, ಕಾರಂತರ 'ಯಕ್ಷರಂಗ ಪ್ರಯೋಗ' ಮಹತ್ವದ್ದು ಎಂದು ನನಗನ್ನಿಸಿದೆ. ಜೊತೆಗೆ ಇಂಗ್ಲಿಷಿನ ಬಗ್ಗೆ ಕಾರಂತರ ನಿಲುವು ಬಹಳ ಸ್ಪಷ್ಟವಾಗಿತ್ತು. "ಜಗತ್ತು ಮುಂದುವರಿಯುತ್ತಿರುವ ಇಂದಿನ ದಿನಗಳಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಅಗತ್ಯ. ನಾನು ಇಷ್ಟೆಲ್ಲ ಜ್ಞಾನ ಸಂಪಾದನೆ ಮಾಡಿದ್ದು ಕೂಡ ಇಂಗ್ಲಿಷ್ ಭಾಷೆಯ ಸಂಪರ್ಕದಿಂದಲೇ" ಎಂದು ಅವರು ಬಹಳ ಹಿಂದೆಯೇ ಬರೆದರು. ಇಂಗ್ಲಿಷ್ ಬಗ್ಗೆ ಕುವೆಂಪು ನಿಲುವು ಕೂಡ ಹೆಚ್ಚು ಕಡಿಮೆ ಇದೇ ಆಗಿತ್ತು. ಇವೆರಡೂ ಮುಖ್ಯವಾದ ಪ್ರಾತಿನಿಧಿಕ ಸಾಂಸ್ಕೃತಿಕ ನಿಲುವುಗಳು. ಆದರೆ ಇಂಗ್ಲಿಷಿನ ಮೂಲಕ ಬಂದ ನವನಾಗರಿಕ ಜಗತ್ತಿನ ಸಂಸ್ಕೃತಿ ಸಹಜವಾಗಿಯೇ ಕಾರಂತರಲ್ಲೂ ಕುವೆಂಪು ಅವರಲ್ಲೂ ಪರೀಕ್ಷೆಗೆ ಒಳಗಾಗುತ್ತಾ ಇರುತ್ತದೆ. ಕಾರಂತರ ಆಧುನಿಕ ಪಾತ್ರಗಳಾದ ಲಚ್ಚ, ಶಂಭು ಇವರನ್ನು ಪರಕೀಯರನ್ನಾಗಿ ಮಾಡುವುದು ಹೊಸ ವಿದ್ಯಾಭ್ಯಾಸ ಎಂಬುದನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಇವು ವ್ಯಕ್ತಿಗತ ಪ್ರಯತ್ನಗಳನ್ನು ಮೀರಿ ಚರಿತ್ರೆಯ ಚಕ್ರ ಉರುಳುತ್ತಿರುತ್ತದೆ ಹಾಗೂ ಹೊಸ ಸಂಸ್ಕೃತಿಗಳ ನಿರ್ಮಾಣವಾಗುತ್ತಿರುತ್ತದೆ ಎಂಬುದನ್ನು ಮತ್ತೆ ಮತ್ತೆ ನೆನಪಿಸುತ್ತವೆ. ಇದನ್ನೇ 'ಬೆಟ್ಟದ ಜೀವ' 'ಮರಳಿಮಣ್ಣಿಗೆ' 'ಚೋಮನ ದುಡಿ'ಗಳ ಸಂಸ್ಕೃತಿ ಪರಿವರ್ತನೆಯ ರೂಪಕಗಳೂ ಹೇಳುತ್ತವೆ. ಜೊತೆಗೆ ಹೊಸ ಸಂಸ್ಕೃತಿಯ ಆಗಮನದೊಂದಿಗೆ ಒಂದು ಸಂಸ್ಕೃತಿಯ ಸ್ವ-ವ್ಯಾಖ್ಯಾನದ ಸ್ವರೂಪ ಬದಲಾಗುತ್ತಿರುತ್ತದೆಂಬುದನ್ನೂ ಈ ಕಾದಂಬರಿಗಳು ಸೂಚಿಸುತ್ತವೆ. ಜೊತೆಗೇ ಸಂಸ್ಕೃತಿಗಳ ಭೇಟಿಯಲ್ಲಿ ತಗಲುವ ರೋಗಗಳ ಬಗೆಗಿನ ಎಚ್ಚರವೂ ಕಾರಂತರಲ್ಲಿದೆ. 'ಮೈಮನಗಳ ಸುಳಿಯಲ್ಲಿ' ಕಾದಂಬರಿಯಲ್ಲಿ ಬರುವ ಒಂದು ವ್ಯಾಖ್ಯಾನ ರೂಪದ ವಿವರ ಹೀಗಿದೆ: 'ಈ ಊರು ಬಿಳಿಯ ಜನರಿಂದ ಆಮದು ಮಾಡಿಕೊಂಡ ಸರಕುಗಳಲ್ಲಿ ಫರಂಗಿ ರೋಗವೂ ಒಂದಾಗಿತ್ತು'. ಅಡಿಗರಲ್ಲಿ 'ಆಮದು ರಫ್ತು ಸಾಗುತ್ತಿರಲಿ ಕೊನೆವರೆಗೆ/ಆದರೂ ಫರಂಗಿರೋಗ ತಗುಲದ ಹಾಗೆ/ಉಳಿಸು ಪೂರ್ವಾರ್ಜಿತದ ರತಿವಿವೇಕದ ಶಿಬಿಯ' ಎಂಬ ಪ್ರಾರ್ಥನೆ ಇದೆ. ಆದರೆ ರತಿ ಮತ್ತು ವಿವೇಕ ಎರಡೂ ಒಟ್ಟಿಗೇ ಹೋಗುವುದಿಲ್ಲವೆಂಬ ಸತ್ಯ ಎಲ್ಲರಿಗೂ ಗೊತ್ತು! ಈ ಮಾತು ಸಂಸ್ಕೃತಿಗಳ 'ರತಿ'ಗೂ ಅನ್ವಯಿಸುತ್ತದೆ.

ನಮ್ಮ ಈ ಕಾಲದ ಎಲ್ಲ ಮುಖ್ಯ ಸಂಸ್ಕೃತಿ ಚಿಂತಕರೂ ರಾಜಕೀಯ ಚಿಂತಕರು. ಎಡ್ವರ್ಡ್

ಸೈದ್, ರೋಲಾ ಬಾರ್ಥ್ ಹಾಗೂ ಕನ್ನಡದ ಲಂಕೇಶ್, ತೇಜಸ್ವಿ, ಅನಂತಮೂರ್ತಿ, ಡಿ.ಆರ್. ನಾಗರಾಜ್ ತರದವರನ್ನು ಗಮನದಲ್ಲಿಕೊಂಡು ಈ ಮಾತು ಹೇಳುತ್ತಿರುವೆ. ಆದರೆ ಕಾರಂತರು ಮಾತ್ರ ಆಧುನಿಕ ಭಾರತದಲ್ಲಿ ನಿರ್ಮಾಣವಾಗುತ್ತಿದ್ದ ರಾಜಕೀಯ ಸಂಸ್ಕೃತಿಯ ಬಗ್ಗೆ ಚರ್ಚಿಸಿದಾಗಲೆಲ್ಲಾ ತೀರಾ ಸರಳ ನೈತಿಕ ಧೋರಣೆಯಲ್ಲೇ ಮುಗಿಸಿಬಿಡುತ್ತಿದ್ದರೆಂಬುದನ್ನು ಅನೇಕರು ಗುರುತಿಸಿದ್ದಾರೆ. ಇದರ ಸ್ಯಾಂಪಲ್ ಅವರ ಆರಂಭಿಕ ಕೃತಿಗಳಲ್ಲೊಂದಾದ 'ಹಳ್ಳಿಯ ಹತ್ತು ಸಮಸ್ತರು' ಕೃತಿಯಲ್ಲೇ ಕಾಣುತ್ತದೆ. ಆ ಹಳ್ಳಿಯ ಪತನಕ್ಕೆ ಕಾಂಗ್ರೆಸ್ ಕಾರಣ ಎನ್ನುವುದು ಈ ಪುಸ್ತಕದ ಒಂದು ಮುಖ್ಯ ಗ್ರಹಿಕೆ. ರಾಜಕೇಂದ್ರಿತ ಜಗತ್ತಿನಿಂದ ಹಾಗೂ ಜಮೀನ್ದಾರಿ ಪದ್ಧತಿಯಿಂದ ಹೊಸ ರಾಜಕೀಯಕ್ಕೆ ಹೊರಳುತ್ತಿದ್ದ ಕಾಲವನ್ನು ಕಾರಂತರು ಅಂದಿನ ಸಂಪ್ರದಾಯವಾದಿ ಕಣ್ಣಲ್ಲಿ ಮಾತ್ರ ನೋಡಿದರೆಂಬುದಕ್ಕೆ ಇದೂ ಒಂದು ಉದಾಹರಣೆ. ನಂತರದ ಕಾದಂಬರಿಗಳು ಕೂಡ ವಿವಿಧ ಕೆಳಜಾತಿಗಳ ಹೊಸ ಸಮೀಕರಣ ಅವರಿಗೆ ಅರ್ಥವಾಗಲಿಲ್ಲ ಎಂಬುದನ್ನು ತೋರಿಸುತ್ತವೆ.

ಸರಿಸುಮಾರು 'ಹಳ್ಳಿಯ ಹತ್ತು ಸಮಸ್ತರು' ಕೃತಿಯ ಕಾಲಘಟ್ಟವನ್ನೇ ಮಂಡಿಸುತ್ತಿರುವ ಅನಂತಮೂರ್ತಿಯವರ 'ಸಂಸ್ಕಾರ'ದಲ್ಲಿ ನಾರಣಪ್ಪ ಪ್ರಾಣೇಶಾಚಾರ್ಯರನ್ನು ಹೆದರಿಸುತ್ತಾನೆ: "ನಿಮ್ಮ ಶಾಸ್ತ್ರ ನನ್ನ ಮುಂದೆ ನಡೆಯೋಲ್ಲ, ಮುಂದೆ ಬರೋದು ಕಾಂಗ್ರೆಸ್ಸು, ಪಂಚಮರನ್ನು ದೇವಸ್ಥಾನದೊಳಕ್ಕೆ ಬಿಟ್ಟುಕೋ ಬೇಕಾಗುತ್ತದೆ" ಅಂದರೆ ಸಂಸ್ಥೆಯಾಗಿ ಕಾಂಗ್ರೆಸ್ ಕಾಲಕ್ರಮೇಣ ಏನೇ ಆಗಿರಲಿ, ಅದು ಒಂದು ನಿರ್ದಿಷ್ಟ ಸಾಂಸ್ಕೃತಿಕ ಪರಿವರ್ತನೆಯ ಸಾಧನವಾಗಿ ಬಂತು ಎಂಬುದನ್ನು ಕಾರಂತರು ಗ್ರಹಿಸಲಾರದೇ ಹೋದರು. ಅನಂತಮೂರ್ತಿಯವರು ಆ ಕಾಲದಿಂದ ದೂರ ನಿಂತು ಕಾದಂಬರಿ ಬರೆದಿದ್ದರಿಂದ ಕಾಂಗ್ರೆಸ್ಸಿನ ಈ ಚಾರಿತ್ರಿಕ ಪಾತ್ರವನ್ನು ಗುರುತಿಸುವುದು ಸಾಧ್ಯವಾಗಿರಬಹುದು, ಹಾಗೂ ಕಾರಂತರು ಆ ಕಾಲಘಟ್ಟದ ಭಾಗವೇ ಆಗಿ ಬರೆದದ್ದರಿಂದ ಈ ಬಗೆಯ ದೂರ ಸಾಧ್ಯವಾಗದೇ ಹೋಗಿರಬಹುದು. ಆದರೆ ಕುವೆಂಪು ಅದೇ ಕಾಲದಲ್ಲಿ ನಿಂತು ಬರೆದಿದ್ದರೂ ಹೊಸ ರಾಜಕೀಯ ಸಂಸ್ಕೃತಿಯ ಬಗ್ಗೆ ಅವರಲ್ಲಿ ಅಪಾರ ನಿರೀಕ್ಷೆಗಳಿದ್ದುದು ಕಾಣುತ್ತದೆ. ಕಾರಂತರಿಗೆ ಅದೇ ಆಗ ರೂಪುಗೊಳ್ಳುತ್ತಿರುವ ಹೊಸ ರಾಜಕೀಯ ಸಂಸ್ಕೃತಿಯ ಜೊತೆಗೇ ಹೊಸ ವ್ಯಕ್ತಿತ್ವಗಳು ನಿರ್ಮಾಣವಾಗುತ್ತಿರುವ ಬಗ್ಗೆ ಅಷ್ಟು ಉತ್ಸಾಹವಾಗಲೀ, ಗಮನವಾಗಲೀ ಇರಲಿಲ್ಲ. ಅಂದರೆ ಒಟ್ಟು ಸಂಸ್ಕೃತಿಯ ನಿರ್ಮಾಣದಲ್ಲಿ ರಾಜಕಾರಣದ ಪಾತ್ರವನ್ನು ಅವರು ಸ್ವಲ್ಪ ಉಪೇಕ್ಷಿಸಿಯೇ ಬಿಡುತ್ತಾರೆ.

ಸ್ವಾತಂತ್ರ್ಯೋತ್ತರ ರಾಜಕಾರಣದಲ್ಲಂತೂ ಅವರ ಕಾದಂಬರಿಗಳಲ್ಲಿ ಕೇವಲ ಪತನದ ಪ್ರತಿಮೆಗಳೇ ಪ್ರಧಾನವೆಂಬುದನ್ನು ಈಗಾಗಲೇ ಡಿ.ಆರ್. ನಾಗರಾಜರಿಂದ ಮೊದಲುಗೊಂಡು ಅನೇಕ ವಿಮರ್ಶಕರು ಚರ್ಚಿಸಿದ್ದಾರೆ. ಹೀಗಾಗಿಯೇ ತಮ್ಮ ಕಾದಂಬರಿಗಳು ಮಂಡಿಸುತ್ತಿರುವ ಪತನಗೊಂಡ ರಾಜಕೀಯ ಸಂಸ್ಕೃತಿಯ ನಡುವೆಯೇ ಹೊಸ ದಲಿತ ಸಂಸ್ಕೃತಿ ಹಾಗೂ ಸ್ತ್ರೀ ವ್ಯಕ್ತಿತ್ವಗಳು ನಿರ್ಮಾಣವಾಗುತ್ತಿರುವುದನ್ನು ಕಾರಂತರು ನೋಡಲೆತ್ನಿಸಲಿಲ್ಲ. ಅಂದರೆ 'ಮುಕ್ತಿ' 'ಚಿದಂಬರ ರಹಸ್ಯ' 'ಕುಸುಮಬಾಲೆ' ತರದ ಕಾದಂಬರಿಗಳು ತೋರಿಸುತ್ತಿರುವ ಹೊಸ ಸಂಸ್ಕೃತಿಯ

ಹಾಗೂ ಜಾತ್ಯತೀತ ಸಂಸ್ಕೃತಿಯ ಸಾಧ್ಯತೆಗಳು ಕಾರಂತರ ನೋಟದಿಂದ ತಪ್ಪಿಸಿಕೊಂಡವು. ಇದಕ್ಕೆ ಪ್ರಾಯಶಃ ಬಹುತೇಕ ಬ್ರಾಹ್ಮಣ ಚಿಂತಕರಂತೆ ಕಾರಂತರಿಗೂ ವ್ಯಕ್ತಿಗತ ಮೋಕ್ಷ ಹಾಗೂ ಪರಿಹಾರದ ಬಗೆಗಷ್ಟೇ ಆಸಕ್ತಿಯಿದ್ದದ್ದು ಹಾಗೂ ಸಾಮೂಹಿಕ ಬಿಡುಗಡೆಯ ಬಗೆಗೆ ಹೆಚ್ಚು ಉತ್ಸಾಹ ಇಲ್ಲದಿದ್ದದ್ದು ಒಂದು ಕಾರಣವಿರಬಹುದು. ಕಮ್ಯುನಿಸಂ ಬಗೆಗೆ ಕಾರಂತರ ಸಿಡಿಮಿಡಿ ಕುರಿತು ಜಿ. ರಾಜಶೇಖರ್ ಬಹಳ ಹಿಂದೆಯೇ ಬರೆದಿದ್ದಾರೆ. ಕಮ್ಯುನಿಸಂ ಎನ್ನುವುದು ಕಾಲಕ್ರಮೇಣ ವ್ಯವಸ್ಥೆಯಾಗಿ ಒಂದು ಸಮಸ್ಯೆಯಾಗಿರಬಹುದು. ಆದರೆ ಅನೇಕ ಬಗೆಯ ಅಸಮಾನತೆಗಳ ಸಮಾಜಕ್ಕೆ ಮಾರ್ಕ್ಸ್‌ವಾದ, ಕಮ್ಯುನಿಸಂಗಳು ಒಂದು ವೈಚಾರಿಕ ನೋಟವಾಗಿ ನೀಡಬಹುದಾದ ಪರಿಹಾರಗಳೇನಿರಬಹುದು ಎಂಬುದರ ಬಗ್ಗೆ ಕಾರಂತರು ಸಹನೆಯಿಂದ ನೋಡಲಿಲ್ಲ. ಹಾಗೆಯೇ ಸಾಮಾಜಿಕ ನ್ಯಾಯ, ಮೀಸಲಾತಿ ತರದ ವಿಚಾರಗಳ ಬಗ್ಗೆ ಕೂಡ ಅವರು ಸರಿಯಾಗಿ ಯೋಚಿಸಲಿಲ್ಲ. ಇದಕ್ಕೆ ಕಾರಂತರ ವ್ಯಕ್ತಿ ವಿಶಿಷ್ಟತಾವಾದೀ ನಿಲುವೇ ಕಾರಣವಿರಬಹುದು.

ಇಷ್ಟಾಗಿಯೂ ಅವರ ಒಟ್ಟು ಸಾಂಸ್ಕೃತಿಕ ಗ್ರಹಿಕೆಗಳಲ್ಲಿ ನಾವು ಇವತ್ತಿಗೂ ಒಪ್ಪಬಲ್ಲ ಕೆಲವು ಮಾದರಿಗಳಿವೆ. ಅವರು ಆ ಕಾಲದಲ್ಲಿ ಸಂಶೋಧನೆ ಮಾಡುವಾಗಲೇ 'ಕ್ಲಾಸಿಕಲ್' 'ಫೋಕ್' ಎಂದು ಬೇರ್ಪಡಿಸದೆ ಇಡಿಯಾಗಿ ನೋಡಲೆತ್ನಿಸಿದರು, ಅಥವಾ ಸಂಸ್ಕೃತಿ-ಪ್ರಕೃತಿ ಎಂಬ ಸರಳ ವರ್ಗೀಕರಣವನ್ನೂ ಅವರು ಮಾಡಲಿಲ್ಲ. ಅದರಲ್ಲೂ ಕಾರಂತರು ಜಾನಪದ ರೂಪಗಳ ಬಗ್ಗೆ ಹೆಚ್ಚು ಉತ್ಸಾಹ ತೋರಿದವರು; ದುಡಿ, ಪಿಟೀಲು-ಎರಡನ್ನೂ ಒಂದೇ ರೀತಿ ನೋಡಿದವರು. ಜೊತೆಗೆ ಅವರಿಗೆ ಒಂದು ಸಂಸ್ಕೃತಿಯ ಆರೋಗ್ಯದಲ್ಲಿ ಅಪಾರ ಕಾಳಜಿಯಿದ್ದಿದ್ದರಿಂದಲೇ ಅವರು ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಸಾವಿರಾರು ಪುಟ ಬರೆದರು, ಹಾಗೂ ಕೆಲಸ ಮಾಡಿದರು. ಕನ್ನಡದಲ್ಲಿ ನವೋದಯ ಘಟ್ಟ ಬಿಟ್ಟರೆ ಉಳಿದ ಸಾಹಿತ್ಯ ಘಟ್ಟಗಳ ಮುಖ್ಯ ಸಾಹಿತಿಗಳೆಲ್ಲ ವಯಸ್ಕರಿಗಾಗಿ ಮಾತ್ರ ಬರೆದರು. ಹೀಗಾಗಿ ಮಕ್ಕಳು ಈ ಸಾಹಿತಿಗಳ ಓದುಗ ಪರಿಧಿಯಿಂದ ಆಚೆಗೇ ಉಳಿದರು. ಕಳೆದ ಹತ್ತು ವರ್ಷಗಳಲ್ಲಿ ತೇಜಸ್ವಿ ಮಾತ್ರ ಸ್ವಲ್ಪಮಟ್ಟಿಗೆ ಆ ಕೆಲಸ ಮಾಡುತ್ತಿದ್ದಾರೆ. ಹಾಗೆಯೇ ಕಾರಂತರು ತಮ್ಮ ಜೀವನದ ಕೊನೆಯಲ್ಲಿ ಹೆಚ್ಚು ಒತ್ತು ಕೊಟ್ಟ ಪರಿಸರವಾದ ಕೂಡ 'ಬೆಟ್ಟದ ಜೀವ'ದ ಅಥವಾ 'ಮರಳಿಮಣ್ಣಿಗೆ'ಯ ಪರಿಸರವಾದ. ಅಂದರೆ ವರ್ಡ್ಸ್‌ವರ್ತನ ಹಾಗೆ ಇದೊಂದು 'ವಾದ' ಎನ್ನುವುದೇ ಗೊತ್ತಿಲ್ಲದ ಪರಿಸರವಾದ.

ಹೀಗೆ ಕಾರಂತರ ಕಾದಂಬರಿಗಳ ಒಳ-ಹೊರಗೆ ಅವರ ಸಾಂಸ್ಕೃತಿಕ ಗ್ರಹಿಕೆ ಹಾಗೂ ವ್ಯಾಖ್ಯಾನಗಳನ್ನು ನೋಡುತ್ತಿದ್ದರೆ, ಅವರು ಕಾದಂಬರಿಯ ಒಳಗೆ ಮಾಡಿರುವ ಸಾಂಸ್ಕೃತಿಕ ವ್ಯಾಖ್ಯಾನಗಳಲ್ಲಿ ಎಷ್ಟೇ ಮಿತಿಗಳಿದ್ದರೂ ಅವೇ ಮುಖ್ಯವಾದವು ಅನಿಸುತ್ತದೆ. ಕಾರಣ, ಅವರ ಗದ್ಯದಲ್ಲಿ ಪ್ರಾಯಶಃ ಅವರ ಉದ್ದೇಶಿತ ಓದುಗರಿಗೆ ಬಹಳ ಪ್ರಾಥಮಿಕ ಅಂಶಗಳಿಂದ ಎಲ್ಲವನ್ನೂ ಹೇಳಬೇಕಾದ ಒತ್ತಡ ಇದ್ದಿದ್ದರಿಂದ ಅವುಗಳಲ್ಲಿ ವಿವರಣೆಗಳು ಹಾಗೂ ಮಾಹಿತಿಗಳೇ ಎದ್ದು ಕಾಣುತ್ತವೆ. ಕಾರಂತರ ಭಾಷಣ ಹಾಗೂ ಗದ್ಯ ಬರವಣಿಗೆಯಲ್ಲಿ ಹೆಚ್ಚು

ವ್ಯತ್ಯಾಸವಿರಲಿಲ್ಲ. ಅಲ್ಲಿ ಲಹರಿ ಹಾಗೂ ಸಾಮಾನ್ಯ ಹೇಳಿಕೆಗಳು ಜಾಸ್ತಿಯಿರುತ್ತಿದ್ದವು. ಜೊತೆಗೆ ಕಾರಂತರು ನಾವು ಸಂಪ್ರದಾಯವಾದಿಯಂತೆ ಮಾತಾಡಿದರೆ ಸಂಪ್ರದಾಯವಾದಿಯಂತೆ ವಾದಿಸಲಾರಂಭಿಸುತ್ತಿದ್ದರು. ರಾಮಜನ್ಮಭೂಮಿ ವಿವಾದದಲ್ಲಿ ಪರ, ವಿರೋಧದ ಎರಡೂ ಗುಂಪುಗಳ ಹೇಳಿಕೆಗಳಿಗೆ ಸಹಿ ಹಾಕಿದ್ದರು!

ಅದೇನೇ ಇದ್ದರೂ ತಮ್ಮ ಗದ್ಯ ಬರಹಗಳಲ್ಲಿ ಪಾರಿಭಾಷಿಕ ಪದಗಳನ್ನು ಹೆಚ್ಚು ಬಳಸದೆ ಒಂದು ಸಂಸ್ಕೃತಿಯ ಬಗ್ಗೆ ಬರೆದದ್ದು ಆ ಸಂಸ್ಕೃತಿಯ ಜನಕ್ಕೆ ಮನದಟ್ಟಾಗುವಂತೆ ಕಾರಂತರು ಬರೆದರು. ಗಾಂಧಿಯಂಥವರಿಂದ ಕಲಿತ ಈ ಜವಾಬ್ದಾರಿ ಹಾಗೂ ಎಚ್ಚರ ಕಾರಂತರಲ್ಲಿ ಕೊನೆಯ ತನಕ ಇತ್ತು.

❑

(ಕರ್ನಾಟಕ ಸಾಹಿತ್ಯ ಅಕಾಡೆಮಿ 13-10-2001ರಂದು ಮಂಗಳೂರಿನಲ್ಲಿ ಕಾರಂತರನ್ನು ಕುರಿತು ನಡೆಸಿದ ವಿಚಾರ ಸಂಕಿರಣದಲ್ಲಿ ಮಾಡಿದ ಭಾಷಣದ ಬರಹ ರೂಪ)

ಓದುಗರ ಕೈಗೆ ಲೇಖನಿ

ಜಿ.ಎನ್. ಮೋಹನ್

ಓದುಗರ ಕೈಗೆ ಲೇಖನಿ-
ಜಿ.ಆರ್. ದೃಢ ಕಂಠದಲ್ಲಿ ಹೇಳಿದ ಮಾತಿದು.

ಮಾಧ್ಯಮಗಳ ಜಗತ್ತಿನಲ್ಲಿ ಈಗ ಹೊಸ ಚಡಪಡಿಕೆ ಆರಂಭವಾಗಿದೆ. ಎಷ್ಟು ಪತ್ರಿಕೆ ತಿರುವಿ ಹಾಕಿದರೂ, ಎಷ್ಟು ಚಾನಲ್‌ಗಳನ್ನು ಮಗುಚಿದರೂ ತಮಗೆ ಬೇಕಾದ ಸುದ್ದಿ ಸಿಗುತ್ತಿಲ್ಲ ಎಂಬ ಚಡಪಡಿಕೆ ಓದುಗನದ್ದು. ಎರಡು ಮಂದಿ ಮಾತ್ರ ಸಾಯುವ ಸಾರ್ಸ್ ರೋಗಕ್ಕಿಂತಲೂ ಸಾವಿರಾರು ಮಂದಿ ಸಾಯುತ್ತಿರುವ ನ್ಯುಮೋನಿಯಾದ ಬಗ್ಗೆ ಓದುಗನಿಗೆ ಮಾಹಿತಿ ಬೇಕು. ಹಿಲರಿ ಕ್ಲಿಂಟನ್ ಬರೆದ ಪುಸ್ತಕಕ್ಕಿಂತಲೂ ಪಿ. ಸಾಯಿನಾಥ್ ಭಾರತದ ಹಳ್ಳಿಗಳನ್ನು ಕದಡುತ್ತಿರುವ ಸಮಸ್ಯೆಗಳ ಬಗ್ಗೆ ಬರೆದ ಪುಸ್ತಕ ಗೊತ್ತಾಗಬೇಕು. ಆಕಾಶದಲ್ಲಿ ತೇಲಿ ಚಂದ್ರನ ಮೇಲೆ ನೀರಿದೆಯೆ ಎಂದು ಪರೀಕ್ಷಿಸುತ್ತಿರುವ ನಾಸಾ ವಿಜ್ಞಾನಿಗಳ ಶೋಧನೆಗಿಂತ ಹಾರೋಗೇರಿಯ ನೆಲದಲ್ಲಿ ಇಷ್ಟು ನೀರು ಹಿಂಗಿದ್ದು ಹೇಗೆ ಎಂಬುದು ಗೊತ್ತಾಗಬೇಕು. ಸಯಾಮಿ ಅವಳಿಗಳ ತಲೆ ಬೇರ್ಪಡಿಸಲು ನಡೆದ ಶಸ್ತ್ರಚಿಕಿತ್ಸೆಗಿಂತ ಆಸ್ಪತ್ರೆಯ ಮೆಟ್ಟಿಲು ಹತ್ತಲಾಗದೆ ಕಣ್ಣುಮುಚ್ಚುತ್ತಿರುವ ಎಳೆಯ ಕಂದಮ್ಮಗಳ ಕಥೆ ಬೇಕು, ಡೇವಿಡ್ ಬೆಕಂ ಫುಟ್‌ಬಾಲ್ ಒದೆಯುವುದನ್ನು ನೋಡಲು ಸಾಗರದಷ್ಟು ಜನ ಸೇರಿದ್ದರ ಬಗ್ಗೆಗಿಂತ ಬಿಹಾರದಲ್ಲಿ ಕೂಲಿ ಕೆಲಸದ ಯುವಕರು ಕನಸನ್ನೇ ಬಂಡವಾಳ ಮಾಡಿಕೊಂಡು ಕಟ್ಟಿದ ತಂಡದ ಆಟ ನೋಡಲು ಜನರೇ ಇಲ್ಲದಿರುವ ನಿಟ್ಟುಸಿರು ಬೇಕು. ಬಾಹ್ಯಾಕಾಶ ತಂತ್ರಜ್ಞಾನ ಬಳಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ದೇಶದಿಂದ ದೇಶಕ್ಕೆ ನಡೆಯುವ ಶಸ್ತ್ರಚಿಕಿತ್ಸೆಗಿಂತ ಉತ್ತರ ಕನ್ನಡದ ಮಂಚಿಕೇರಿಯಲ್ಲಿ ಇದ್ದ

ಕೂಲಿ ಹಣವನ್ನೆಲ್ಲಾ ಕೊಟ್ಟರೂ ನಕಲಿ ಔಷಧಿ ನೀಡುತ್ತಿರುವ ಖೊಟ್ಟಿ ವೈದ್ಯರ ಕರಾಮತ್ತು ಗೊತ್ತಾಗಬೇಕು.

ಮಾಧ್ಯಮ ಒಂದು ವ್ಯಾಪಾರವಾಗಿರುವಾಗ ನಿಟ್ಟುಸಿರುಗಳ ಲೆಕ್ಕ ಹಾಕಲು ಪುರುಸೊತ್ತಾದರೂ ಎಲ್ಲಿ? ದೆಹಲಿಯಿಂದ ಹಿಡಿದು ನಮ್ಮ ಊರ ಅಂಗಳದಲ್ಲಿ ಬೆಡಗಿನಿಂದ ಹೆಜ್ಜೆ ಹಾಕುವ ಮುಗುಳ್ನಗೆಯ ಸುಂದರಿಯರ ಫ್ಯಾಷನ್ ಷೋ ಹಾಗೂ ನಿಟ್ಟುಸಿರುಗಳ ಮಧ್ಯೆ ಆಯ್ಕೆ ಬಂದಾಗ ಐದು ಕಾಲಂ ಫೋಟೋ ಆಗುವ, ದಿನಗಟ್ಟಲೆ ಬರೆದರೂ ಮುಗಿಯದ ಸುದ್ದಿಯ ಅರ್ಹತೆ ಇರುವುದು ಆ ಮುಗುಳ್ನಗೆಯ ಒಡತಿಯರಿಗೇ.

ಹಾಗಾಗಿಯೇ ಜಿ.ಆರ್. ದೃಢವಾಗಿ ಹೇಳಿದ್ದು -

'ಓದುಗರ ಕೈಗೆ ಲೇಖನಿ.'

'ನಮ್ಮೊಡನಿದ್ದೂ ನಮ್ಮಂತಾಗದ' ಮಾಧ್ಯಮಗಳ ಮಧ್ಯೆ ನಮ್ಮನ್ನು ನಾವೇ ಹುಡುಕಿ ಕೊಳ್ಳುವ ಪ್ರಯತ್ನ.'

ಭಾರತದ ಮಾಧ್ಯಮಗಳ ದೃಷ್ಟಿಕೋನದ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನಗಳು ನಡೆಯುತ್ತಲೇ ಬಂದಿವೆ. ಬ್ರಿಟನ್-ಅಮೆರಿಕಾದ ಕಣ್ಣಿನಿಂದ ಸುದ್ದಿಯನ್ನು ನೋಡುವ ದಿನಗಳು ಇನ್ನೂ ಮುಗಿದಿಲ್ಲ. ಈ ಮಧ್ಯೆಯೇ ಬಂದ ಜಾಗತೀಕರಣದ ಅಲೆ ಸುದ್ದಿಯ ಅರ್ಥವನ್ನೇ ಬದಲಿಸಿದೆ. ಮಾತ್ರವಲ್ಲ, ಸುದ್ದಿಗಳನ್ನು ವಿದೇಶೀ ಕಣ್ಣಿನಿಂದ ನೋಡುವ ಪ್ರವೃತ್ತಿಗೆ ಇನ್ನಷ್ಟು ಮಣೆ ಹಾಕಿದೆ. ಆದ್ದರಿಂದಲೇ ಓದುತ್ತಿರುವ ಸುದ್ದಿಗೂ-ಓದಬೇಕಾಗಿದ್ದ ಸುದ್ದಿಗೂ ವಿಪರೀತ ಅಂತರ. ಭಾರತದ ಬಡತನ, ಹಸಿವಿನ ಸಾವುಗಳು, ಇದಕ್ಕೆ ಬೇಕಾದ ಪರಿಹಾರ, ಎಲ್ಲರೂ ಬದುಕಲು ಅವಕಾಶವಿರುವ ದೇಶ ಕಟ್ಟುವ ಚಿಂತನೆಗಳು, ಈಗ ಬದಲಾದ ವ್ಯಾಕರಣದಿಂದಾಗಿ ಮರೆಯಾಗಿ ಹೋಗಿವೆ. ಇಂತಹ ಸಂದರ್ಭದಲ್ಲಿಯೇ ಜಿ.ಆರ್. ಓದುಗರ ಕೈಗೇ ಲೇಖನಿ ನೀಡುವ ಮಾತುಗಳನ್ನು ಮುಂದಿಟ್ಟಿದ್ದಾರೆ.

ಓದುಗನಿಗೆ ಬೇಕಾದದ್ದನ್ನು ಓದುಗನೇ ಬರೆಯುವಂತಾದರೆ ಎಂಬುದು ಈ ಕಲ್ಪನೆಯ ಹಿಂದಿರುವ ಆಶಯ. ಬೇಕಾದ ಸುದ್ದಿಗಳೇ ಇಲ್ಲದಿರುವ ದಿನಗಳಲ್ಲಿ ಬೇಕಾದ ಸುದ್ದಿಗಳನ್ನು ಹುಡುಕುವ ಪ್ರಯತ್ನ. ಪತ್ರಿಕೆ ಎನ್ನುವುದು ಯಾರೋ ರೂಪಿಸಬೇಕಾದದ್ದು, ಸುದ್ದಿ ಎನ್ನುವುದು ಇನ್ನಾರೋ ನಿರ್ಧರಿಸಬೇಕಾದದ್ದು ಎನ್ನುವ ದಿನಗಳಿಗೆ ಕೊನೆ ಹಾಡುವ ನಿರ್ಧಾರ ಇದರ ಹಿಂದಿದೆ.

ಪರ್ಯಾಯ ಮಾಧ್ಯಮಗಳನ್ನು ಸೃಷ್ಟಿಸಿಕೊಳ್ಳಬೇಕಾದ ಅವಶ್ಯಕತೆ ಇದೆಯೇ? ಎಂಬ ಪ್ರಶ್ನೆ ಬೇಕಾದ ಸುದ್ದಿಗಳು ಸಿಗದ ಈ ಚಡಪಡಿಕೆಯ ದಿನಗಳಲ್ಲಿ ಹೆಚ್ಚು ಪ್ರಸ್ತುತವಾಗಿದೆ. ಬಹುಶಃ ಓದುಗನ ಕೈಗೆ ಲೇಖನಿ ನೀಡುವ ಪ್ರಯತ್ನ ಪರ್ಯಾಯ ಮಾಧ್ಯಮವನ್ನು ಹುಡುಕುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ.

ಯಾವುದೇ ಪತ್ರಿಕೆಯ ವಾಚಕರವಾಣಿ ವಿಭಾಗಗಳು ಜನರ ಸಂಪಾದಕೀಯ ಎಂದೇ

ಹೆಸರಾಗಿದೆ. ತಮ್ಮ ಸುತ್ತಲಿನ ವಿದ್ಯಮಾನಗಳಿಗೆ ಸ್ಪಂದಿಸುವ ಓದುಗರು ತೆರೆದಿಡುವ ಕಣ್ಣೋಟ ಪತ್ರಿಕೆಯ ಸುದ್ದಿಗಳನ್ನೂ ಮೀರಿ ನಿಲ್ಲುವ ಗುಣವನ್ನು ಹೊಂದಿರುತ್ತದೆ. ಸುದ್ದಿಗಳ ಅನೇಕ ವೇಳೆ ಮುಚ್ಚಿಡುವ, ಬಿಚ್ಚಿಡುತ್ತಿದ್ದೇವೆ ಎನ್ನುವ ಭ್ರಮೆ ಹುಟ್ಟಿಸುತ್ತಲೇ ಬೇಕಾದ್ದನ್ನು ಮಾತ್ರ ಹೇಳುವ, ಎಷ್ಟೋ ವೇಳೆ ವಶೀಲಿಬಾಜಿ ನಡೆಸುವಾಗ ಈ ಜನತೆಯ ಸಂಪಾದಕೀಯಗಳು ಸಮಾಜದ ಸ್ಪಂದನವನ್ನು ನೀಡುತ್ತವೆ. 'ಸಮುದಾಯ' ಸಂಘಟನೆ ಹೊಸ ಮೌಲ್ಯಗಳತ್ತ ಬೀದಿನಾಟಕಗಳ ಜಾಥಾ ಹಮ್ಮಿಕೊಂಡಾಗ ವಾಚಕರವಾಣಿಗಳು ಯುದ್ಧರಂಗವಾಗಿತ್ತು. ಪರ ವಿರೋಧಗಳ ಸುರಿಮಳೆ ಯಾವುದನ್ನೂ ಮುಚ್ಚಿಡದೆ ಜನರಿಗೆ ದನಿ ನೀಡಿದ್ದವು. ಈ ಕಾರಣಕ್ಕಾಗಿಯೇ ಓದುಗ ತನಗೆ ಬೇಕಾದ ದೃಷ್ಟಿಕೋನವನ್ನು ರೂಪಿಸಿಕೊಳ್ಳುವ, ತನಗೆ ಬೇಕಾದ ಮಾರ್ಗವನ್ನು ಆರಿಸಿಕೊಳ್ಳುವ ಅವಕಾಶ ಸೃಷ್ಟಿಯಾಗುತ್ತಿತ್ತು. ಈಗ ಸುದ್ದಿ ಅತ್ಯುತ್ತಮ ರೀತಿಯಲ್ಲಿ ಪ್ಯಾಕ್ ಮಾಡಲ್ಪಟ್ಟ ಒಂದು ಬಿಕರಿಗಿರುವ ಉತ್ಪನ್ನ ಎನ್ನುವ ದಿನಗಳು ಬಂದಿವೆ. ಆದ್ದರಿಂದಲೇ ಓದುಗ ತನಗೆ ಅನಿಸಿದ್ದೆಲ್ಲವನ್ನೂ ಹೇಳುವ, ತನಗೆ ಅನಿಸಿದ್ದಕ್ಕೆ ನಾಜೂಕಿನ ಯಾವುದೇ ಪ್ಯಾಕ್ ಹೊದಿಸದೆ ಹೇಳುವುದಕ್ಕೆ ಪ್ರಾಮುಖ್ಯತೆ ಬಂದಿದೆ. ಕೊಂಚಾವರಂನಲ್ಲಿ ಲಂಬಾಣಿಗಳು ಮಕ್ಕಳನ್ನು ಮಾರಾಟ ಮಾಡಬೇಕಾಗಿ ಬಂದದ್ದು ಏಕೆ? ಕಲ್ಬುರ್ಗಿಯಲ್ಲಿ ಅಪೌಷ್ಠಿಕತೆಯಿಂದ ಸಾವು ಬರಲು ಕಾರಣರಾದವರು ಯಾರು? ಕೂಲಿಗಾಗಿ ಕಾಳು ನೀಡಬೇಕಾಗಿದ್ದ ಸರ್ಕಾರ ಯಂತ್ರಗಳನ್ನು ಏಕೆ ಕಾಮಗಾರಿಗಳಿಗೆ ಕಳಿಸುತ್ತಿದೆ? ಬರ ಬರಲಿ ಎಂದು ಹಾರೈಸುವವರ ಸಂತಸದ ಕಾರಣ ಏನು? ಜನರು ಲೇಖನಿ ಕೈಗೆತ್ತಿಕೊಂಡಾಗ ಮಾತ್ರ ಒಳ ಸತ್ಯಗಳು ಹೊರಬರಲು ಸಾಧ್ಯ. ಕೆಂಡದ ಮೇಲೆ ನಡೆದವರಿಗೆ ಮಾತ್ರವೇ ಕೆಂಡದ ಅನುಭವವನ್ನು ಬಣ್ಣಿಸಲು ಸಾಧ್ಯ.

ಜಿ.ಆರ್. ಮಂಡಿಸಿದ ಈ ಓದುಗನೆ ಬರಹಗಾರನಾಗುವ ಆಲೋಚನೆ ಪತ್ರಿಕೋದ್ಯಮದ ಅನೇಕ ಸೂತ್ರಗಳನ್ನು ಕದಲಿಸಲು ಸಾಧ್ಯ. ಇದಕ್ಕೆ ಕೃಷಿಕರು ತಮ್ಮ ಕೈಗೆ ಲೇಖನಿ ಎತ್ತಿಕೊಂಡ ಉದಾಹರಣೆಯೂ ನಮ್ಮೊಂದಿಗಿದೆ.

ಅಡಿಕೆಯ ಬೆಲೆ ಕುಸಿಯಲು, ಪಾತಾಳ ಕಾಣಲು ಆರಂಭವಾದಾಗ ತೋಟಗಳಲ್ಲಿ ದಿಕ್ಕು ಕಾಣದೆ ನಿಂತ ಹಲವರು ಕೃಷಿಕರ ಕೈಗೆ ಲೇಖನಿ ನೀಡುವ ಕನಸನ್ನು ಕಂಡಿದ್ದರು. ಬೀಳದ ಮಳೆ, ಏಳದ ಬೆಲೆ, ದಿಕ್ಕೆಟ್ಟ ಬದುಕುಗಳು ಎಲ್ಲ ಕೃಷಿಕರನ್ನೂ ಕದಡುತ್ತಿದ್ದಾಗ ಪತ್ರಿಕೆಗಳು ಎಂದಿನಂತೆ ರಾಸಾಯನಿಕ ಔಷಧಿಗಳನ್ನು ಎಷ್ಟು ಸಿಂಪಡಿಸಬೇಕು, ಡಾಲರ್‌ಗಳ ಮಳೆಯೇ ಸುರಿಯಬೇಕಾದರೆ ಯಾವ ಬೆಳೆ ತೆಗೆಯಬೇಕು, ತಾಳೆ ಬೆಳೆದರೆ ರೈತನ ಬದುಕು ಹೇಗೆ ಬಂಗಾರವಾಗುತ್ತದೆ ಎಂಬುದರ ಪಾಠ ಮಾಡುತ್ತಿದ್ದವು. ಪ್ರಯೋಗಾಲಯದಲ್ಲಿ ಮಾಡಿದ ಸೂತ್ರಗಳು ರೈತನ ಅಂಗಳದಲ್ಲಿ ಹೊರಳಾಡುತ್ತಿದ್ದ ವಾಸ್ತವವೇ ಪತ್ರಿಕೆಗಳಿಗೆ ತಿಳಿದಿರಲಿಲ್ಲ. ಇಂತಹ ಸಂದರ್ಭದಲ್ಲಿ ಮಾಡಿದ ಚಿಂತನೆ ಇಂದು ದೊಡ್ಡ ಆಂದೋಲನ. ನೆಲದಲ್ಲಿ ಕಳೆ ಕಿತ್ತ, ಮಣ್ಣು ಅಗೆದ, ಸಸಿ ನೆಟ್ಟ, ರಾಸಾಯನಿಕ ಸಿಂಪಡಿಸಿ ತಲೆ ಮೇಲೆ ಕೈ ಹೊತ್ತ ಕೃಷಿಕರೇ ಲೇಖನಿ ಕೈಗೆತ್ತಿಕೊಂಡರು. ಒಂದು ಪ್ರಶ್ನೆ, ಹಲವು ಪ್ರಶ್ನೆ, ಹಲಹಲವು ಪ್ರಶ್ನೆಗಳನ್ನು ಕೇಳುತ್ತಾ ಕೇಳಿಕೊಳ್ಳುತ್ತಾ, ಬರೆಯುತ್ತಾ ಹೋದರು.

ಮಾಧ್ಯಮಗಳ ಮನಸ್ಸನ್ನು ಬದಲಿಸುವ, ಮಾಧ್ಯಮಗಳನ್ನು ತಿದ್ದುವ, ಅದರ ವ್ಯಾಕರಣವನ್ನು ಜನಪರವಾಗಿ ರೂಪಿಸುವ ಕೆಲಸ ಓದುಗರೇ ಲೇಖನಿ ಕೈಗೆತ್ತಿಕೊಳ್ಳುವ ಮೂಲಕ ಆರಂಭ ವಾಗುತ್ತದೆ. ಮಾಧ್ಯಮಗಳನ್ನು ವಿಮರ್ಶಿಸುವ ಪರಿಪಾಠ ಇಲ್ಲದ ಕಾರಣದಿಂದಲೆ ಮಾಧ್ಯಮಗಳು ಇಂದು ತಮಗೆ ಬೇಕಾದ್ದನ್ನು ತಿಳಿಸುವ ಹಂತದಲ್ಲಿವೆ. ಇರಾಕ್ ಯುದ್ಧವಾದರೆ ಅಮೆರಿಕಾಗೆ ಬೇಕಾದ ದೃಷ್ಟಿಕೋನ ತಿಳಿಸಲು ಸೇನೆಯ ತುಕಡಿಯೊಂದಿಗೆ ಸಾಗಲು ಮಾಧ್ಯಮಗಳು ಸಿದ್ಧ ವಾಗಿದ್ದು ಮಾಧ್ಯಮವನ್ನು ಪ್ರಶ್ನಿಸುವ ಮನಸ್ಸು ಇಲ್ಲದ ಕಾರಣ. ಕೋಮುವಾದದ ಬೆಂಕಿ ಹರಡುತ್ತಾ ಹೋಗಿದ್ದರಲ್ಲಿ ಸ್ವಲ್ಪ ಪಾಲು ಮಾಧ್ಯಮಗಳನ್ನು ಪ್ರಶ್ನಿಸದ ಮನಸ್ಸಿನಲ್ಲಿಯೂ ಇದೆ. ಪತ್ರಿಕೆಗಳು ಫ್ಯಾಷನ್ ಶೋ ಬೆನ್ನು ಹತ್ತುವುದರಲ್ಲಿ ಜೀವನದ ಬೇಡಿಕೆಗಳನ್ನು ಮುಂದಿಟ್ಟುಕೊಂಡು ನಡೆಸುವ ಮೆರವಣಿಗೆಯನ್ನು ನಿರ್ಲಕ್ಷಿಸುವುದರಲ್ಲಿ, ಐಟಿ ಕಂಪನಿಗಳನ್ನು ವಿಜೃಂಭಿಸುವುದರಲ್ಲಿ, ಸಾರ್ವಜನಿಕ ಉದ್ದಿಮೆಗಳನ್ನು ಮಾರಾಟ ಮಾಡಿಬಿಡಿ ಎಂದು ಭೋದಿಸು ವುದರಲ್ಲಿ, ಗ್ರಾಮೀಣ ಕೃಪಾಂಕ ಮಾರಕ ಎಂದು ಬಿತ್ತುವುದರ ಹಿಂದೆ ಮಾಧ್ಯಮಗಳನ್ನು ಪ್ರಶ್ನಿಸದ ಮನಸ್ಸುಗಳಿವೆ.

ಓದುಗ ಈ ಪ್ರಶ್ನೆಗಳನ್ನು ತಾನೇ ಒಡ್ಡಿಕೊಳ್ಳುತ್ತಾ, ಬರೆಯುತ್ತಾ ಹೋದಂತೆ ದಾರಿಗಳು ಸ್ಪಷ್ಟವಾಗಲಿದೆ. ಕತ್ತಲಿನ ಕೋಣೆಯಿಂದ ಬೆಳಕಿಗೆ ದಾರಿಗಳು ಹುಟ್ಟಿಕೊಳ್ಳಲಿವೆ.

❑

(ಮಂಗಳೂರಿನಲ್ಲಿ 'ಹೊಸತು' ಪತ್ರಿಕೆ ಸಂಘಟಿಸಿದ್ದ 'ಪರ್ಯಾಯ ಮಾಧ್ಯಮ' ವಿಚಾರ ಸಂಕಿರಣದಲ್ಲಿ ಜಿ.ಆರ್. ಆಡಿದ ಮಾತನ್ನು ಮೆಲಕು ಹಾಕುತ್ತಾ)

ಬದುಕು-ಬರಹ

ಜನ್ಮ ದಿನಾಂಕ : 17 ಜೂನ್ 1939

ತಂದೆ : ಶ್ರೀ ಜಿ. ಸುಬ್ರಹ್ಮಣ್ಯಂ

ತಾಯಿ : ಶ್ರೀಮತಿ ನರಸಮ್ಮ

ಶಿಕ್ಷಣ : ಬಿ.ಎ. ಆನರ್ಸ್ (ಸಂಸ್ಕೃತ) - 1958 - ಮೈಸೂರು ವಿಶ್ವವಿದ್ಯಾಲಯ
ಎಂ.ಎ. - 1959 - ಮೈಸೂರು ವಿಶ್ವವಿದ್ಯಾಲಯ
ಪಿಎಚ್.ಡಿ. - 1965 - ಮೈಸೂರು ವಿಶ್ವವಿದ್ಯಾಲಯ
(ವಿಷಯ : Origin And Growth Of The Concept of Rita in Vedic Literature - ಪ್ರೊಫೆಸರ್ ಎಸ್. ರಾಮಚಂದ್ರರಾವ್‌ರವರ ಮಾರ್ಗದರ್ಶನದಲ್ಲಿ)
ಎಂ.ಎ. ಇಂಗ್ಲಿಷ್ - 1965 - ಪೂನಾ ವಿಶ್ವವಿದ್ಯಾಲಯ
ಎಂ.ಎ. ಇಂಗ್ಲಿಷ್ - 1968 - ವೇಲ್ಸ್ ವಿಶ್ವವಿದ್ಯಾಲಯ

ವೃತ್ತಿ ಪ್ರವೇಶ : ಅಕೌಂಟೆಂಟ್ ಜನರಲ್ ಆಫೀಸ್ - 1959
ಯುಜಿಸಿ ರಿಸರ್ಚ್ ಫೆಲೋ, ಮೈಸೂರು - 1960-62
ಸಂಶೋಧನ ಸಹಾಯಕರು, ಉಸ್ಮಾನಿಯಾ ವಿಶ್ವವಿದ್ಯಾಲಯ - 1962 (ಮೇ-ಅಕ್ಟೋಬರ್)
ಸಂಶೋಧನ ಸಹಾಯಕರು, ಕೈವಲ್ಯಧಾಮ ವಿದ್ಯಾಲಯ, ಲೋನಾವಲ - 1962-65
ಇಂಗ್ಲಿಷ್ ವಿಭಾಗದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್
ಡಾ. ಅಂಬೇಡ್ಕರ್ ಕಾಲೇಜು, ಮಹಾಡ್ - 1965-67
ಇಂಗ್ಲಿಷ್ ಪ್ರಾಧ್ಯಾಪಕರು, ನ್ಯಾಷನಲ್ ಕಾಲೇಜು, ಬಸವನಗುಡಿ - 1967-1993
ಸಂದರ್ಶಕ ಪ್ರಾಧ್ಯಾಪಕರು, ಹಂಪಿ ವಿಶ್ವವಿದ್ಯಾಲಯ - 1994-1996
(ಈ ಸಂದರ್ಭದಲ್ಲಿ ರಚಿಸಿದ ಪುಸ್ತಕ 'ಭಾರತೀಯ ವಿಜ್ಞಾನದ ಹಾದಿ')

ಸಂಘ ಸಂಸ್ಥೆಗಳ ಒಡನಾಟ

- ಬೆಂಗಳೂರು ವಿಶ್ವವಿದ್ಯಾಲಯದ ಕಾಲೇಜು ಅಧ್ಯಾಪಕರ ಸಂಘದಲ್ಲಿ ಹಲವಾರು ವರ್ಷಗಳ ಕಾಲ ಅಧ್ಯಕ್ಷರು ಮತ್ತು ಕಾರ್ಯದರ್ಶಿಯಾಗಿ
- ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಅಧ್ಯಾಪಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಮತ್ತು ಮಹಾಕಾರ್ಯದರ್ಶಿಯಾಗಿ ಹಲವಾರು ವರ್ಷಗಳು
- ಅಖಿಲ ಭಾರತ ವಿಶ್ವವಿದ್ಯಾಲಯ ಮತ್ತು ಕಾಲೇಜು ಅಧ್ಯಾಪಕರ ಸಂಘಟನೆಗಳ ಫೆಡರೇಷನ್ನಿನ ಉಪಾಧ್ಯಕ್ಷ, ಕಾರ್ಯದರ್ಶಿ ಮತ್ತು ಖಜಾಂಚಿಯಾಗಿ
- ಭಾರತ ಸೋವಿಯೆತ್ ಸಾಂಸ್ಕೃತಿಕ ಸಂಘದ ಕಾರ್ಯದರ್ಶಿಯಾಗಿ
- ಕರ್ನಾಟಕ ರಾಜ್ಯ ಶಾಂತಿ ಮತ್ತು ಸೌಹಾರ್ದತಾ ಸಂಘಟನೆ

ವಿದೇಶ ಪ್ರವಾಸ

- ಬ್ರಿಟನ್, ಐರ್‌ಲೆಂಡ್ ಗಣರಾಜ್ಯ - 1967-1968
- ಟಿಬೆಟ್ - 1984
- ನೇಪಾಳ - 1987
- ಅಫ್ಘಾನಿಸ್ತಾನ - 1971
- ಸೋವಿಯೆತ್ ರಷ್ಯಾ ಸಂಯುಕ್ತ ಸಂಸ್ಥಾನ - 1971, 1982, 1985

ಚಾರಣ

- ಕೈಲಾಸ ಮಾನಸ ಸರೋವರ - 1985
- ಮೌಂಟ್ ಎವರೆಸ್ಟ್ ಬೇಸ್ ಕ್ಯಾಂಪ್ - 1987
- ಹಿಮಾಚಲ ಪ್ರದೇಶದ ಚಂದ್ರಖನಿ ಪಾಸ್ - 1998
- ಉತ್ತರಾಂಚಲದಲ್ಲಿ ಯಮುನೋತ್ರಿ, ಗಂಗೋತ್ರಿ, ಗೋಮುಖ - 2002

ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸುವಿಕೆ

- 1985ರಲ್ಲಿ ಮಾಸ್ಕೋದ 'Friendship House'ನಲ್ಲಿ 'Victory against fascism' ಕುರಿತು ಭಾಷಣ.
- 1995ರಲ್ಲಿ ಅಮೆರಿಕೆಯ ಫಿಲಡೆಲ್ಫಿಯಾದ Sky Foundationನಲ್ಲಿ 'Yoga and Mind' ಕುರಿತು ಭಾಷಣ.

ಬಹುಮಾನಗಳು

- ಮುನ್ನೋಟ (1980), ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ
- ಆಯತನ (1995) ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ
- ಭಾರತೀಯ ವಿಜ್ಞಾನದ ಹಾದಿ (1998) - ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ
- 2002ರ ಕರ್ನಾಟಕ ರಾಜ್ಯ ಸರ್ಕಾರವು ನೀಡಿದ 'ರಾಜ್ಯೋತ್ಸವ ಪ್ರಶಸ್ತಿ'ಯನ್ನು ವಿನಯಪೂರ್ವಕವಾಗಿ ನಿರಾಕರಿಸಿದರು

ಪ್ರಕಾಶಕರು

- ಮಾಲೆ ಪ್ರಕಾಶನ
- ಜಾಗೃತಿ ಮಹಿಳಾ ಅಧ್ಯಯನ ಕೇಂದ್ರದ ಪರವಾಗಿ ಹದಿನೆಂಟು ವರ್ಷಗಳಿಂದಲೂ ಪ್ರಕಟವಾಗುತ್ತಿರುವ 'ಅಚಲ' ಮಹಿಳಾ ಮಾಸಪತ್ರಿಕೆಯ ಪ್ರಕಾಶಕರು.

ಬರಹಗಾರರಾಗಿ ಜಿ.ಆರ್.

ವಿಚಾರ ಸಾಹಿತ್ಯ

- ಮುನ್ನೋಟ - 1980
- ವೈಚಾರಿಕ ಜಾಗೃತಿ - 1992
- ದೇವಿಪ್ರಸಾದ್ ಮತ್ತು ಲೋಕಾಯತ ದರ್ಶನ - 1994
- ಭಾರತೀಯ ವಿಜ್ಞಾನದ ಹಾದಿ - 1997
- ಫ್ರೆಡರಿಕ್ ಏಂಗಲ್ಸ್ - 2003

ವ್ಯಕ್ತಿ ಚಿತ್ರ

- ಯುಗಪುರುಷ ಲೆನಿನ್ - 1979
- ಭಗತ್ ಸಿಂಗ್ 1984
- ಭೂಪೇಶ್ ಗುಪ್ತ - 1986
- ಚೆಗೆವಾರ - 1994

ಅನುವಾದಗಳು

- ಬಾ ನೊಣವೆ ಬಾ ನೊಣವೆ - 1973 (ಕಾರ್ಲ್ ಮಾರ್ಕ್ಸ್)
- ವಾನರನಿಂದ ಮಾನವನವರೆಗೆ - 1978 (ಏಂಗಲ್ಸ್)
- ಕೂಲಿ ಕೆಲಸ ಮತ್ತು ಬಂಡವಾಳ - 1979 (ವಿಲ್‌ಹೆಲ್ಮ್ ಲೀಬ್‌ನೆಕ್ಟ್)
- ದರ್ಶನ - 1995 (ದೇವಿಪ್ರಸಾದ್ ಚಟ್ಟೋಪಾಧ್ಯಾಯ)

ಕಿರುಹೊತ್ತಿಗೆಗಳು

- ಗೋಲ್ವಾಲ್ಕರ್ ಸಂಸ್ಕೃತಿಯ ವೈಚಿತ್ರ್ಯ - 1971
- ಫ್ಯಾಸಿಸ್ಟ್ ವಿರೋಧಿ ಚಳವಳಿಯ ರೂಪುರೇಷೆ - 1975
- ಸ್ನೇಹ-ಸಂಸ್ಕೃತಿ 1978
- ಆರೆಸ್ಸೆಸ್-ಒಂದು ವಿಷವೃಕ್ಷ - 1979
- ಹಿಂದುತ್ವದ ಹಿಂದೆ-ಮುಂದೆ - 1993

ಇಂಗ್ಲಿಷ್ ಬರಹಗಳು

- Strange Culture of M.S. Golvalkar - 1971
- The Living Marx - 1983

- Chinese Philosophy - 1990 (Translated in to Hindi 1990)
- Gorbachev - A Phenomenon - 1991

ಇಂಗ್ಲಿಷ್‌ನಲ್ಲಿ ಸಂಪಾದಿತ ಕೃತಿಗಳು

- An Encyclopaedia of South Indian Culture - Edited with Debiprasad Chattopadhyaya & N. Gayathri - 1983
- Studies in Indian Culture (A felicitation volume to Prof. Ramachandra Rao) - 1986
- Towards a Redifinition of Educational Policy - 1992
- Some thoughts on Marxism (Edited with Dr. Sanjay Biswas) - 2002
- Musings in Ideology (Edited with Dr. Sanjay Biswas) - 2002
- Vision and Wisdom (Letter of Kuvalayananda) -1995

ಸಂಪಾದನೆ : ಸುವರ್ಣ ಸ್ವಾತಂತ್ರ್ಯ ಮಾಲಿಕೆ - 1998

- ಮಹಿಳಾ ಸ್ವಾತಂತ್ರ್ಯದ ಮಜಲುಗಳು - ಎನ್. ಗಾಯತ್ರಿ
- ಮಾಧ್ಯಮ ಮತ್ತು ಸ್ವಾತಂತ್ರ್ಯ - ಜಿ.ಎನ್. ಮೋಹನ್
- ಶತಮಾನದಂಚಿನಲ್ಲಿ ಶಿಕ್ಷಣ - ಥೇಕೆದತ್
- ಸಾಮಾಜಿಕ ಚಳವಳಿಗಳು - ಆರ್ಕೆ ಮಣಿಪಾಲ್
- ಅಂತರರಾಷ್ಟ್ರೀಯ ನೆಲೆಯಲ್ಲಿ ಭಾರತ - ಸಿ.ಆರ್. ಕೃಷ್ಣರಾವ್
- ಭಾರತಕ್ಕೊಂದು ಬದಲು ದಾರಿ - ಬಿ.ವಿ. ಕಕ್ಕಿಲಾಯ
- ಸ್ವಾತಂತ್ರ್ಯ ಸಂಗ್ರಾಮದ ಹೆಜ್ಜೆಗಳು - ಬಿ.ವಿ. ಕಕ್ಕಿಲಾಯ
- ಜನಾರೋಗ್ಯ - ಸಿ.ಆರ್. ಚಂದ್ರಶೇಖರ್
- ಸ್ವಾತಂತ್ರ್ಯೋತ್ತರ ಕೃಷಿರಂಗ - ವೈ.ವಿ. ಕೃಷ್ಣರಾವ್
- ಆರ್ಥಿಕತೆಯ ಸವಾಲುಗಳು - ಕಮಲನಯನ ಕಾಬ್ರ
- ಸ್ವಾತಂತ್ರ್ಯಕ್ಕೆ ಐವತ್ತು ವರ್ಷ - ವ್ಯಾಸರಾಯ ಬಲ್ಲಾಳ
- ವಿಜ್ಞಾನ ಮತ್ತು ತಂತ್ರಜ್ಞಾನ - ಜೆ.ಆರ್. ಲಕ್ಷ್ಮಣರಾವ್ ಮತ್ತು ಎಂ.ಎ. ಸೇತುರಾವ್
- ಸಂವಿಧಾನ ಮತ್ತು ಕಾನೂನು - ಕೃಷ್ಣಮೂರ್ತಿ ಸಿರ್ಸಿ
- ಇತಿಹಾಸದ ಅಧ್ಯಯನ ಅಂದು-ಇಂದು - ಡಾ. ಎಚ್.ಎಸ್. ಗೋಪಾಲಕೃಷ್ಣರಾವ್

ಸಂಪಾದಕರು

- ನವಕರ್ನಾಟಕ ಪ್ರಕಾಶನದ 'ಹೊಸತು' ಮಾಸಪತ್ರಿಕೆ (ಆಗಸ್ಟ್ 2000 ರಿಂದ ಪ್ರಕಟವಾಗುತ್ತಿದೆ.
- ಸಮುದಾಯ ವಾರ್ತಾಪತ್ರ ಸಂಪಾದಕ ಮಂಡಳಿಯಲ್ಲಿದ್ದರು.

❑

ಲೇಖಕರ ವಿಳಾಸ

1. **ಜೆ. ಶ್ರೀನಿವಾಸಮೂರ್ತಿ**
35, 3ನೇ ಕ್ರಾಸ್
ಕೋದಂಡರಾಮಪುರ
ಬೆಂಗಳೂರು

2. **ಬಿ.ವಿ. ವೀರಭದ್ರಪ್ಪ**
ಬಿ-18, ವಿದ್ಯಾನಗರ
ದಾವಣಗೆರೆ - 577005

3. **ಡಾ. ಸಬೀಹಾ ಭೂಮಿಗೌಡ**
'ಕನಸು' 1-146/5, ಪುಲಿಂಚಡಿ ರಸ್ತೆ
ಕೊಣಾಜೆ - 574199, ದಕ್ಷಿಣ ಕನ್ನಡ

4. **ಸಿ. ಯತಿರಾಜು**
ಪ್ರಿನ್ಸಿಪಾಲ್
ಕಾಳಿದಾಸ ಪದವಿ ಪೂರ್ವ ಕಾಲೇಜು
ತುಮಕೂರು

5. **ಕೆ.ಎಸ್. ಗೋಪಾಲಕೃಷ್ಣಯ್ಯ**
2273, 22ನೇ ತಿರುವು, ಕೆ.ಆರ್. ರಸ್ತೆ
ಬನಶಂಕರಿ 2ನೇ ಹಂತ
ಬೆಂಗಳೂರು - 560070

6. **ರಾಮಲಿಂಗಪ್ಪ ಟಿ. ಬೇಗೂರು**
ನಂ. 47, 4ನೇ ಮುಖ್ಯರಸ್ತೆ
ಬಾಲಾಜಿ ಕಲ್ಯಾಣ ಮಂಟಪದ ಹತ್ತಿರ
ಬನಶಂಕರಿ 3ನೇ ಹಂತ
ಬೆಂಗಳೂರು -560 085

7. **ಅಶೋಕ ರಂಜೇರೆ**
ಕನ್ನಡ ವಿಶ್ವವಿದ್ಯಾಲಯ
ಹಂಪಿ ವಿದ್ಯಾರಣ್ಯ - 583 276

8. **ಹೆಚ್. ಎಸ್. ಗೋಪಾಲರಾವ್**
'ಸ್ವಸ್ತಿ ಶ್ರೀಸ್ಕಂದ', ಅರಿಶಿನಕುಂಟೆ
ನೆಲಮಂಗಲ ತಾಲ್ಲೂಕು
ಬೆಂಗಳೂರು ಜಿಲ್ಲೆ

9. **ಎಸ್. ಸತ್ಯ**
304, ಮೇ ಫ್ಲವರ್
ಬೃಂದಾವನ್ ಅಪಾರ್ಟ್‌ಮೆಂಟ್ಸ್
ಆರ್ಯ ಸಮಾಜ ರಸ್ತೆ
ಮಂಗಳೂರು - 575003

10. **ಎನ್. ಗಾಯತ್ರಿ**
108, ಸ್ಕೈಲೈನ್ ಸುರಭಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ
ಬೆಂಗಳೂರು - 560 085

11. **ಟಿ.ಎಸ್. ವೇಣುಗೋಪಾಲ್**
CH- 73, 7ನೇ ಮೇನ್
ಸರಸ್ವತಿಪುರಂ, ಮೈಸೂರು - 570 009

12. **ಡಾ. ಕೆ. ವೈ. ನಾರಾಯಣಸ್ವಾಮಿ**
ಅಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಕಲಾ ಕಾಲೇಜು
ಬೆಂಗಳೂರು

13. **ಕೆ.ಎಸ್. ಪಾರ್ಥಸಾರಥಿ**
ಸಿ- 001, ನಾಗಾರ್ಜುನ ಎನ್‌ಕ್ಲೇವ್
76/0, 14ನೇ ಕ್ರಾಸ್
ಜೆ.ಪಿ. ನಗರ 1ನೇ ಹಂತ
ಬೆಂಗಳೂರು -560078

14. **ವಸಂತರಾಜ್**
767, 17 'ಎಫ್' 3ನೇ ಮೇನ್
ಕೋರಮಂಗಲ 6ನೇ ಬ್ಲಾಕ್
ಬೆಂಗಳೂರು -560095

15. **ಸಿ.ವಿ. ಜಯತೀರ್ಥ**
ನಂ. 19, ಎಲ್.ಐ.ಸಿ. ಕಾಲೋನಿ
ವೆಸ್ಟ್ ಆಫ್ ಕಾರ್ಡ್ ರಸ್ತೆ
ಬೆಂಗಳೂರು -560079

16. **ಕೆ. ಎಲ್. ಗೋಪಾಲಕೃಷ್ಣರಾವ್**
261, 2ನೇ ಕ್ರಾಸ್, ಸಿ.ಟಿ. ಬೆಡ್
ತ್ಯಾಗರಾಜನಗರ, ಬೆಂಗಳೂರು - 560028

17. **ಎನ್.ಪಿ. ಶಂಕರನಾರಾಯಣರಾವ್**
887, 19ನೇ ಮೇನ್
ಬನಶಂಕರಿ 2ನೇ ಹಂತ
ಬೆಂಗಳೂರು - 560 070

18. **ಡಾ. ವಿ.ಕೆ. ತಿವಾರಿ**
ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಡಿ.ಎ.ವಿ. ಕಾಲೇಜು
ಜಲಂಧರ್, ಪಂಜಾಬ್

19. **ಡಾ. ವಿಜಯಾ**
36, 40 ಅಡಿ ರಸ್ತೆ, ರಾಘವನಗರ
ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು -560 026

20. **ಹೆಚ್.ಕೆ. ರಾಮಚಂದ್ರಮೂರ್ತಿ**
ನಂ. 209, 10ನೇ 'ಬಿ'ಕ್ರಾಸ್
29ನೇ ಮೇನ್, ಕೆ.ಪಿ.ನಗರ 1ನೇ ಹಂತ
ಬೆಂಗಳೂರು - 560 028

21. **ಆರ್. ವಿ. ಭಂಡಾರಿ**
ಕೆರೆಕೋಣ, ಅಂಚೆ : ಅರೆ ಅಂಗಡಿ
ತಾಲ್ಲೂಕು : ಹೊನ್ನಾವರ
ಉ.ಕ. 580430

22. **ವ್ಯಾಸರಾಯ ಬಲ್ಲಾಳ**
'ಉತ್ತರಾಯಣ', 1064
ಕುಮಾರಸ್ವಾಮಿ ಲೇಔಟ್
1ನೇ ಹಂತ, 50 ಅಡಿರಸ್ತೆ
ಬೆಂಗಳೂರು -560078

23. **ಕೆ. ಫಣಿರಾಜ್**
ಬಿ (20) - ಬಿ, ಕೈಲಾಸ್ ಕ್ವಾರ್ಟರ್ಸ್
ಮಣಿಪಾಲ-576119

24. **ಡಾ. ವಿ. ಕೃಷ್ಣ ಅನಂತ್**
ಉಪ ಸಂಪಾದಕರು, ದಿ ಹಿಂದೂ, ಚೆನ್ನೈ

25. **ಬಿ. ಗಂಗಾಧರ ಮೂರ್ತಿ**
ನಂ 50, ಪಲ್ಲವಿ
ಕಾರೇಕಲ್ಲಹಳ್ಳಿ
ಗೌರಿಬಿದನೂರು - 561208

26. **ಚಂದ್ರಶೇಖರ ನಂಗಲಿ**
3284, ಪಿ.ಸಿ. ಬಡಾವಣೆ
ಕೋಲಾರ - 563101

27. **ದೇವನೂರ ಮಹಾದೇವ**
53, 11 ನೇ ಕ್ರಾಸ್
ನವಿಲು ರಸ್ತೆ
ಕುವೆಂಪುನಗರ
ಮೈಸೂರು - 570 023

28. **ರಂಜಾನ್ ದರ್ಗಾ**
ಮುಖ್ಯ ವರದಿಗಾರರು, ಪ್ರಜಾವಾಣಿ
107/51 (ಡಿ) ಮಹಡಿ
ಎನ್.ವಿ. ಕಾಂಪ್ಲೆಕ್ಸ್
ಎಸ್.ಬಿ. ದೇವಾಲಯ ರಸ್ತೆ
ಗುಲಬರ್ಗಾ - 585103

29. **ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ**
ಎಮ್ 1237, 2ನೇ ಮೇನ್
ವಿವೇಕಾನಂದ ನಗರ
ಮೈಸೂರು - 570 003

30. **ಶಿವಸುಂದರ್**
C/o ಬೆಳ್ಳಿಚುಕ್ಕಿ ಟ್ರಸ್ಟ್
ಶೇಷಾದ್ರಿಪುರಂ ಅಂಚೆ ಕಚೇರಿ ಎದುರು
ಬೆಂಗಳೂರು

31. **ಜಿ.ಎನ್. ಮೋಹನ್**
304, ಮೇ ಫ್ಲವರ್
ಬೃಂದಾವನ್ ಅಪಾರ್ಟ್‌ಮೆಂಟ್ಸ್
ಆರ್ಯ ಸಮಾಜ ರಸ್ತೆ
ಮಂಗಳೂರು -575003

32. **ಡಾ. ಕೆ. ಮರಳಸಿದ್ದಪ್ಪ**
ನಂ. 137, 12ನೇ ತಿರುವು,
ಜೆ.ಪಿ.ನಗರ 2ನೇ ಹಂತ
ಬೆಂಗಳೂರು - 560 078

33. **ಕಿ.ರಂ. ನಾಗರಾಜ**
13/85, ರಾಷ್ಟ್ರೀಯ ವಿದ್ಯಾಲಯ ರಸ್ತೆ
ಬಸವನಗುಡಿ, ಬೆಂಗಳೂರು -4

34. **ಜಿ. ರಾಜಶೇಖರ**
ಎಲ್.ಐ.ಸಿ. ಆಫ್ ಇಂಡಿಯಾ
ಡಿವಿಜನಲ್ ಆಫೀಸು
'ಜೀವನ ಕೃಷ್ಣ' ಅಜ್ಜರಕಾಡು
ಉಡುಪಿ -576101

35. **ಡಾ. ಹೆಚ್.ಎಸ್. ರಾಘವೇಂದ್ರರಾವ್**
7, ಶ್ರೀಮಾತಾ, 15ನೇ ಕ್ರಾಸ್
5ನೇ ಫೇಸ್, ಜೆ.ಪಿ. ನಗರ
ಬೆಂಗಳೂರು - 560078

36. **ಪ್ರೊ. ಜಿ.ಕೆ. ಗೋವಿಂದರಾವ್**
161 ಎ, ಮೊದಲ ಮಹಡಿ
36 'ಎ' ಕ್ರಾಸ್
ಜಯನಗರ 7ನೇ ಬ್ಲಾಕ್
ಬೆಂಗಳೂರು - 560082

37. **ಪ್ರೊ. ಬಸವರಾಜ ಕಲ್ಗುಡಿ**
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ

38. **ದಿವಂಗತ ಎಂ.ಎ. ಸೇತುರಾವ್**
4209, ಸುಬ್ರಹ್ಮಣ್ಯ ನಗರ
ಬೆಂಗಳೂರು - 560021

39. **ಸನತ್‌ಕುಮಾರ್ ಬೆಳಗಲಿ**
ಎಲ್-ಎಫ್ -17/6
ಬಿಡಿಎ ಫ್ಲಾಟ್ಸ್
ಬಿ.ಟಿ.ಎಂ. ಲೇಔಟ್
ಬೆಂಗಳೂರು - 560 076

40. **ನಟರಾಜ ಹುಳಿಯಾರ್**
416, I 'ಎ' ಮೇನ್
17ನೇ ಕ್ರಾಸ್
ಜೆ.ಪಿ. ನಗರ 4ನೇ ಹಂತ
ಬೆಂಗಳೂರು -560 078

41. **ರಹಮತ್ ತರೀಕೆರೆ**
ಕನ್ನಡ ವಿಶ್ವವಿದ್ಯಾಲಯ
ಹಂಪಿ
ವಿದ್ಯಾರಣ್ಯ -583276

42. **ರಘುನಂದನ್**
ಲೊಟ್ಟೆಗೊಲ್ಲ ಹಳ್ಳಿ
ಬೆಂಗಳೂರು



ಶ್ರೀ ಎಂ.ವಿ. ಕೃಷ್ಣಸ್ವಾಮಿಯವರೊಂದಿಗೆ



ಖ್ಯಾತ ಅರ್ಥಶಾಸ್ತ್ರಜ್ಞ ಪಿ.ಆರ್. ಬ್ರಹ್ಮಾನಂದರ ಸಂದರ್ಶನದ ಸಂದರ್ಭ



ಶತಾಯುಷಿ ಶ್ರೀ ನಿಟ್ಟೂರು ಶ್ರೀನಿವಾಸರಾಯರ ನೆನಪುಗಳಲ್ಲಿ ಮುಳುಗಿ




ಹೊಸತು ಪೂರ್ವಭಾವಿ ಸಭೆಯಲ್ಲಿ ಜಿ.ಆರ್.



ಪ್ರೊ॥ ಸಿ.ಎನ್. ರಾವ್ ಅವರ ಸಂದರ್ಶನದ ಸಂದರ್ಭ



ಚಲನಚಿತ್ರ ನಿರ್ದೇಶಕ ಶ್ರೀ ಗಿರೀಶ್ ಕಾಸರವಳ್ಳಿ ಅವರೊಂದಿಗೆ



ತಾಯಿ ಶ್ರೀಮತಿ ನರಸಮ್ಮ ಮತ್ತು ತಂದೆ ಶ್ರೀ ಜಿ. ಸುಬ್ರಹ್ಮಣ್ಯಂ



ಗುರುಗಳಾದ ಸಾಹಿತ್ಯ ಶಿರೋಮಣಿ
ಪ್ರೊ|| ಎಸ್. ರಾಮಚಂದ್ರರಾವ್



1967ರಲ್ಲಿ ಬ್ರಿಟನ್‌ಗೆ
ಪ್ರಯಾಣ ಬೆಳೆಸಿದಂದು



ಮೈಸೂರು ಅನಾಥಾಲಯದಲ್ಲಿ ಅಂತಿಮ ಬಿ.ಎ. ಯಲ್ಲಿದ್ದಾಗ - 1959 (ಕುಳಿತಿರುವವರಲ್ಲಿ ಎರಡನೆಯವರು)



ಮಾಸ್ಕೋದಲ್ಲಿ ಮೋಸ್‌ಫಿಲ್ಮ್ ಸ್ಟುಡಿಯೋದಲ್ಲಿ ಜಿ.ಆರ್., ಪ್ರೇಮ್ ಧಾವನ್, ಜಜಿನ್,
ಎಂ.ವಿ. ಕೃಷ್ಣಸ್ವಾಮಿ, ರುಮಾ ಗುಹಾತಕ್ಷುತಾ, ಫ್ಲೋರಾ, ಎಂ.ಬಿ. ಶ್ರೀನಿವಾಸನ್,
ಉಮಾಪತಿ ಮತ್ತು ಕಲ್ಪನಾ



ಡಾ॥ ಹೆಚ್. ನರಸಿಂಹಯ್ಯ (ಉಪಕುಲಪತಿ), ಮಲ್ಲಿಕಾರ್ಜುನಸ್ವಾಮಿ (ಶಿಕ್ಷಣ ಸಚಿವರು)
ಪ್ರೊ॥ ಸತ್ಯನಾರಾಯಣರಾವ್ (ಅಧ್ಯಕ್ಷರು), ಡಾ॥ ಜಿ. ರಾಮಕೃಷ್ಣ (ಪ್ರಧಾನ ಕಾರ್ಯದರ್ಶಿ)



ಲಂಡನ್ ನಗರದಲ್ಲಿ
ಹೆಚ್.ಎನ್. ಮತ್ತು ಜಿ.ಆರ್. (1968)



ಶತಾಯುಷಿ ತಂದೆಯೊಂದಿಗೆ



ಡಾ॥ ದೇವಿಪ್ರಸಾದ್ ಚಟ್ಟೋಪಾಧ್ಯಾಯ ಮತ್ತು
ಎಸ್. ಗಾಯತ್ರಿಯವರೊಂದಿಗೆ



ಫಿಲಡೆಲ್ಫಿಯಾದಲ್ಲಿ ಖ್ಯಾತ ತತ್ವಶಾಸ್ತ್ರಜ್ಞ ಬ್ಯಾರೋಸ್ ವನ್‌ಹ್ಯಾಮ್ ಅವರ ನಿವಾಸದಲ್ಲಿ ಡಾ॥ ವಿಜಯೇಂದ್ರ ಪ್ರತಾಪ್ ರೊಂದಿಗೆ ಜಿ. ಆರ್.



ಗಂಗೋತ್ರಿ, ಗೋಮುಖಕ್ಕೆ ಹೋಗುವ ದಾರಿಯಲ್ಲಿ



ಎ.ಎಂ. ಸುಬ್ಬರಾಮಯ್ಯ, ಜಿ.ಆರ್. ಮತ್ತು ಶತಾಯುಷಿ ದಿವಂಗತ ಎ.ಎನ್. ಮೂರ್ತಿರಾ



ಮಾಲೆ ಪ್ರಕಾಶನದಿಂದ ದೇವಿಪ್ರಸಾದ್ ಸ್ಮಾರಕ ಉಪನ್ಯಾಸ ಮಾಲಿಕೆ
ಪ್ರೊ|| ಜೆ.ಆರ್. ಲಕ್ಷ್ಮಣರಾವ್, ಡಾ|| ಕೆ. ಮರುಳಸಿದ್ದಪ್ಪ ಮತ್ತು ಹೆಚ್.ಎಸ್. ವೇಣುಗೋಪಾ

① 31


3. ಅನೇಕಾಂತವಾದ

[illegible]

ಜಿ.ಆರ್. ಅವರ ಕೈಬರಹ

tadastīti prasiddham loke viparītam ca asat iti. Athaśca (2)
amarthako yogo'nupalabhyamānatvādvā nāstīty upalab-
dhavyam brahmetyetham prāpte idamucyate). The answer of
the Upaniṣad is free from any woolly complexities. True, the
Absolute cannot be grasped by the senses as something
external, but it nevertheless is there as the primordial
substance behind all that is manifest. That is how it has
to be understood. (Kaṭha 2.6.12: Naiva vācā na manasā
prāptum śakyo na cakṣuṣā; Astīti bruvato'nyatra katham
tadupalabhyate.)

Couched in contemporary terminology it means that
for a sceptic and a nihilist, neither the Absolute nor the
path to attain it has any relevance. The method as also the
pre-requisites are more properly meant for the faithful
adherent aspiring for transcendental bliss. For the
motivated person, the Īśāvāsya Upaniṣad prescribes princi-
pally two norms: not to be covetous and not to run away from
the expected duties and responsibilities. (1. Tena tyaktena
bhuñjīthā mā gṛdhaḥ kasya svid dhanam. — Śaṅkara:
kasyasviddhanam kasyacit parasya svasya vā dhanam mā
kāṅkṣīḥ ityarthaḥ AND 2. Kurvanneveha karmāṇi jijīviṣet
śatam samāḥ). Yoga which does not take cognisance of
this is incomplete. For, this is the proto yama-niyama
ordinance verily. Proceeding further, the Īśāvāsya also
states that he who sees the all in himself and himself
in all never comes to grief. (6. Yastu sarvāṇi bhūtāni
ātmanyevānupaśyati; sarvabhūteṣu cātmānam tato na
vijugupsate). This indeed is Yama-niyama par excellence.
Ignoring this and concentrating only on the training of
the mind is to stunt the personality of oneself in the path of
Yoga. To phrase it provocatively, a cruel mystic is a contradiction
in terms. It may appear to be a harsh remark, but there is
some grain of truth in saying that any religious or secular value
that does not touch the conscience of an individual in the
midst of violence and injustice that is prevalent
all around is patently absurd. It is conscience, more than
any system, that is the true repository of human values.
As the saying goes, "the road to hell is paved with good
intentions," meaning that intentions do not suffice. It
certainly does not suffice if one is especially intent on the
path of transcendentalism.



ಹಳ್ಳಿಯ ಪ್ರೈಮರಿ ಶಾಲೆಯ ಮಾಸ್ತರ ಮಗ ಬೆಳೆದು ದೂರದ ಮೈಸೂರಿನಲ್ಲಿ ಸಂಸ್ಕೃತ, ವೇದ, ತತ್ವಶಾಸ್ತ್ರಗಳನ್ನು ಕಲಿತು ಪಂಡಿತನಾದದ್ದು, ಪೂನಾ, ವೇಲ್ಸ್‌ನಲ್ಲಿ ಇಂಗ್ಲಿಷ್ ಓದಿ ಜಗತ್ತಿನ ಜ್ಞಾನಸಾಗರವನ್ನು ಅರಗಿಸಿಕೊಂಡು ಅಪಾರ ಶಿಷ್ಯಕೋಟಿಗೆ ಜ್ಞಾನ ಧಾರೆಯೆರೆದು ಅನೇಕರಿಗೆ ಆದರ್ಶವಾದ ಕತೆ ಇಲ್ಲಿದೆ.

ಬದುಕು ಹಸನಾಗಿಸಬೇಕೆಂದು ತಮ್ಮ ಸುತ್ತಲ ಜನಪರ ಹೋರಾಟಗಳಿಗೆ ತಾತ್ವಿಕ ತಳಹದಿಯ ಆಯತನವನ್ನು ರೂಪಿಸುತ್ತಲೇ ಹೋರಾಟ ಮತ್ತು ಲೇಖನಿಯ ಮೂಲಕ ಮುನ್ನೋಟ ತೋರಿರುವ ಸಾಧನೆ ಮತ್ತು ಚಿಂತನೆಗಳ ಬಹುಮುಖ ಅನಾವರಣ ಇಲ್ಲಿದೆ. ಸದಾ 'ನೆಮ್ಮದಿಯ ನಾಳೆ'ಗಾಗಿ ಕನವರಿಸುತ್ತಾ, ಆ ನಾಳೆಗೆ ಧ್ವನಿಯಾದ ಜಿ.ಆರ್.ಅವರ ಹತ್ತು ಹಲವು ಚಿಂತನೆ, ಹೋರಾಟಗಳಿಗೆ ನಾಡಿನ ನಾನಾ ಮೂಲೆಯ ವಿದ್ವಾಂಸರು ಇಲ್ಲಿ ದನಿಗೂಡಿಸಿದ್ದಾರೆ.

ಡಾ॥ ಜಿ. ರಾಮಕೃಷ್ಣ (ಜಿ.ಆರ್.)
ಅಭಿನಂದನಾ ಸಮಿತಿ
ಬೆಂಗಳೂರು